UNIVERSAL LIBRARY
OU_200515
UNIVERSAL LIBRARY

ಸಂಪುಟ 2 } 1917 { ಸಂಚಿಕೆ 2

ಕರ್ಣಾಟಕ ನಂದಿನೀ



ಭಕ್ತ್ಯಾ ಗುರೌ ಮಯ್ಯನುಕಂಪಯಾ ಚ । ಪ್ರೀತಾಸ್ಮಿ ತೇ ಪುತ್ರ ವರಂ ವೃಣೀಷ್ವ ॥
ನ ಕೇವಲಾನಾಂ ಪಯಸಾಂ ಪ್ರಸೂತಿಂ । ಅವೇಹಿ ಮಾಂ ಕಾಮದುಘಾಂ ಪ್ರಸನ್ನಾಮ್ ॥

ನಂದಿನಿ—[illegible]

ಶ್ರೀರಮಣಿಕರಕಮಲಪೂಜಿತ । ಚಾರುಚರಣಸರೋಜಬ್ರಹ್ಮಸ।
ಮೀರವಾಣಿಫಣೀಂದ್ರ ವೀಂದ್ರಭವೇಂದ್ರ ಮುಖವಿನುತ ॥
ನೀರಜಭವಾಂಡೋದಯಸ್ಥಿತಿ ಕಾರಣನೇಕೈವಲ್ಯದಾಯಕ ನಾರಸಿಹನೆ,
ನಮಿಪೆಕರುಣಪುದೆಮಗೆ ಮಂಗಲವಾ ॥

ಜಗನ್ನಾಥದಾಸ.

॥ ಶ್ರೀ ॥

ವಂದೇತ್ವಾಂ ಭೂದೇವಿ ಆರ್ಯಮಾತರಮ್ ।

ಕರ್ನಾಟಕ ನಂದಿನಿ.

(ಮಾಸಪತ್ರಿಕೆ.)

" ಸಿದ್ಧಿಂ ಸರ್ವಾಣಿ ಭೂತಾನಿ - ಭೂತಾನಾಂ ಚೈವ ಯಃ ಪ್ರಭುಃ ।
ದಾಸ್ಯನ್ತಿ ಮಮ ಯೇ ಚಾಸ್ಯೇಹ್ಯದೃಷ್ಟಾಃ ಪಥಿಗೋಚರಾಃ ॥ "

ಸಂಪುಟ ೨ } ಪಿಂಗಳ ಸಂ॥ ಕಾರ್ತೀಕ ೧೮೩೯ -- ೧೯೧೭ನೆ ನವಂಬರ್ { ಸಂಚಿಕೆ ೨

ಮಾತೃವಂದನೆ.

ರಾಗ— (ವಂದಿಸುವೆನು ನಿನಗೆ)

ವಂದಿಪೆನೆಲೆತಾಯೆ ವಂದಿತಾಮರೆಯೆ । ವಂದಿಪೆ ॥ ಪ ॥
ಶ್ರೀಕಲಶಾಬ್ಧಿ ಕನ್ಯೆ ಸುರಕುಲಮಾನ್ಯೆ ಶ್ರೀಕರಗುಣಪೂರ್ಣೆ । -ಶೋಕಾಪಹರಣೆ ಲೋಕನಾಯಕಿ ಧನ್ಯೆ ॥ ಕಾರುಣ್ಯಸದನೆ॥ ಪಾಕಶಾಸನನುತೆ-ಪವನಜಸೇವಿತೆ। ಸಾಕೇತನಿಲಯೆ-ಸದಾಗದಿ ರಕ್ಷಿಸು ॥ ವಂದಿಪೆನೆಲೆತಾಯೆ ॥ ೧ ॥

ಆನತಸುತಗೀರ್ವಾಣಿ ಅಂಬುಜಪಾಣಿ ಮಾನಿನೀಮಣಿ ಕಲ್ಯಾಣಿ । ಭವಹಾರಿಣಿ ಭಾರ್ಗವೀ, ಭವಜನನಿ । ಭಯವಾರಿಣಿ ॥ ಭಾಗವತಾರಾಧಿತೆ ಭಕ್ತಾಭಯಪ್ರದಾತೆ। ಬಾಗುತೆ ಶಿರವನು ನಿನಗಾವಾಗಲು ಮನಸಾರೆ ॥ ವಂದಿಪೆನೆಲೆತಾಯೆ ॥೨॥

ಅರಿಯೆನು ನಿನಗೆಣೆಯಾರ—ಕಾಣೆನುಮಿತರ— ಚರಣವನಂಬಿದೆ ಮನಸಾರ—ಭಾವಿಸೆಪರರ—ಸ್ಮರಿಪೆ ನಿನ್ನ ನಿರಂತರ ॥- ಪಿಡಿಯೆನ್ನ ಕರವ ॥ ಪರಮಪಾವನ-ಶೇಷಗಿರೀಶನ । ಉರದೊಳ್ಳೆಲಸಿದ ಸರಸಿಜಲೋಚನೆ ॥ ವಂದಿಪೆ ನೆಲೆತಾಯೆ ॥ ೩ ॥

(ನಂದಿಸಿ)

(ಲಕ್ಷ್ಮೀ-ನಾರಾಯಣ ನಿಂದಾಸ್ತುತಿ)

ರಾಗಾ— ಕಾಂಬೋಧಿ

ಒಲಿದೆಯಾಕಮ್ಮ ಲಕುಮೀ ವಾಸುದೇವಗೆ। ಹಲವಂಗದವನ ಹವಣಿ(?) ತಿಳಿದು ತಿಳಿದೂ ತಿಳಿಯದೆ ॥ ಪ ॥

ಕಮಲಗಂಧೀ—ಕೋಮಲಾಂಗೀ—ಸುಂದರಾಬ್ಜವದನೆ ನೀನು । ರಮಣಿ, ಮತ್ಸ್ಯ ಕರಿಣಕಾಯ ಸೂಕರಾಸ್ಯನ ॥ ಕಮನೀಯ ಸ್ವರೂಪೆ ನೀನು । ಅಮಿತಘೋರ ವೇಷಿಯು ವಸು। ನಮಿಸುವಪುಷ್ಪವಾನಿ ನೀನು । ದಾನಬೇಡುವವಗೆ॥ ಒಲಿದೆ॥೧॥

ಜಾಣೆ ರತ್ನಾಕರನ ಮಗಳು ನೀನು। ತಾನು ಶುದ್ಧ ಭೃಗುಜನವನು । ಅಸಂಬಾಬ್ಜವದನೆ ನೀನು । ವನವಾಸಿಯವನು ॥ ಜ್ಞಾನಿ ಪತಿವ್ರತೆಯು ನೀನು। ನಾನಾಸ್ತ್ರೀಷಿತ್ತ್ರಾಮಿಯವನು । ಪಣ್ಣ ಚಿತ್ರವಸನೆ ನೀನು। ಹೀನಚೇಲನಾದವಗೆ॥ ಒ॥ ೨॥

ಲಲಿತ ಚಾರುಶೀಲೆ ನೀನು । ಕಲ್ಕಿ ಕಲಹಪ್ರಿಯನವನು । ಕುಲದ ಕುರುಹು ಇಲ್ಲ। ಗುಣದ ನೆಲೆಯು ಕಂಡಿಲ್ಲ ॥ ಹಲವು ಕುಲದವರು ಬಂಧು-ಬಳಗ ನಿಷ್ಕಿಂಚನ ಜನರು। ಜಲಧಿಯಾಲದೆಲೆಯ ಮೇಲೆ ಮಲಗಿ ಬೆರಳ ಸವಿವವಂಗ ॥ ಒಲಿದೆ ॥ ೩ ॥

ಅವನ ವಾರ್ತೆಯ ಕೇಳಿದವರು ಒಲ್ಲರು ಸಂಸಾರವನ್ನು । ಅವನ ಮೂರ್ತಿಯ ನೋಡಿ ಮನೆಯ ಧನವ ಬಿಡುವರು ॥ ಅವನ ಪುರಕೆ ಪೋದ ಜನರು ತಿರುಗೆಒಮ್ಮೆಯಿತ್ತಲವರು । ಅವನೆ ತಾನೇ ತನಯನ ತನ್ನ ವಯುವದಿಂ ಪಡೆದವಂಗ ॥ ೪ ॥

*ಸುರಿತ ಅನಾವೃಷ್ಟಿ ಕಾಮ ನಿದ್ರಾವಿಹೀನ ನಿರಶನ। ಸ್ಪರ್ಶ ತಬ್ಬು ರೂಪನಾಟ್ಯ-ಅಮಿತ ಭೋಕ್ತನ ॥ ಗುರುಗೋಪಾಲ ವಿಠಲನು ನಿರುತ ತನ್ನ ವಕ್ಷದೊಳು ಅರಮನೆಯ ಮಾಡಿಕೊಟ್ಟು ಮರುಳು ಮಾಡಿದ ಮಾಯಾವಿಗೆ ॥ ಒಲಿದೆ ॥ ೫ ॥

---

* ಈ ನುಡಿಯಲ್ಲಿ ತಪ್ಪು ಬಿದ್ದಿರಬಹುದಾದೀತು. ಆದರೂ ಅದು ನಮ್ಮ ದೋಷವೆಂದೆಣಿಸದೆ ಜನಜನಿತವಾಗಿ ಬಂದುದರಿಂದ ಹೀಗಿರಬಹುದೆಂದು ತಿಳಿದು ತಪ್ಪು ಒಪ್ಪುಗಳನ್ನು ಸೂಚಿಸುವುದು ಗುಣಜ್ಞರ ಕೆಲಸವು.

(ಸಂ. ಪಂ.)

ಸವಿನಯ ನಿವೇದನ

ಸೋದರೀ ಸೋದರರೇ!

ಮೊದಲನೆಯ ಸಂಚಿಕೆಯಲ್ಲಿ ನಂದಿನಿಯನ್ನು ಸದ್ಯಕ್ಕೆ ಮೊದಲಿದ್ದಂತೆಯೇ ಪ್ರಕಟಿಸುವೆವೆಂದು ನಿವೇದಿಸಿದ್ದೆವು. ಅಲ್ಲದೆ ಕೆಲವು ತಿಂಗಳಾದರೂ ನಂದಿನಿಯನ್ನು ತಡೆದಿರಬೇಕೆಂದು ಬಗೆದಿದ್ದೆವು. ಆದರೆ, ತಡೆವುದಾಗಲಿ, ಚಿಕ್ಕ ಆಕಾರದಲ್ಲಿರುವುದೇ ಆಗಲಿ ಭಗವದಿಚ್ಛೆಗೆ ಸರಿಪಡಲಿಲ್ಲವೆಂದು ತಿಳಿಯಬೇಕಾಗಿದೆ. ಇಲ್ಲದಿದ್ದರೆ ಈ ದ್ವಿತೀಯ ವರ್ಷದ ಪ್ರಥಮ ಸಂಚಿಕೆಯನ್ನು ಚಿಕ್ಕದಾಗಿ ಪ್ರಕಟಿಸಿ, ದ್ವಿತೀಯ ಸಂಚಿಕೆಯಿಂದಲೇ ಆಕಾರ ಮತ್ತು ಪುಟಗಳನ್ನು ಹೆಚ್ಚಿಸಿದುದನ್ನು ನೋಡಿ ಮತ್ತೇನೆನ್ನಬಹುದು? ಇಷ್ಟರಿಂದಲೇ ಭಗವದಿಚ್ಛೆಯಲ್ಲಿ ನಂದಿನಿಯು ಅಜ್ಞಾತವಾಸವನ್ನು ಅನುಭವಿಸಬೇಕಾದುದಾಗಲೀ ಅಕಾಲಮೃತ್ಯುವಶವಾಗುವುದಾಗಲೀ ಇಲ್ಲವೆಂಬುದು ಸ್ಥಿರಪಟ್ಟಿತು.

ಆದರೆ, ನಮ್ಮ ನಮ್ರಪ್ರಾರ್ಥನೆಯೊಂದು:— ನಂದಿನಿ ಪ್ರಥಮ ವರ್ಷದಲ್ಲಿ ಚಿತ್ರಪ್ರಕಟನೆಯ ಕಾರ್ಯವನ್ನು ನೆನೆಯದೆ ವಾರ್ಷಿಕ ವರ್ಗಣಿ 1—8—0 ಯಂತೆ ಏರ್ಪಡಿಸಿ, ಆ ಬಳಿಕ ಚಿತ್ರಪ್ರಕಟನೆಯನ್ನು ನಡಸಬೇಕಾಗಿ ಬಂದುದರಿಂದಲೂ ಈ ವರ್ಷದಲ್ಲಿ ಆ ಚಿತ್ರಗಳನ್ನು ಮತ್ತಷ್ಟು ಬೆಳೆಸಬೇಕಾಗಿಬಂದುದರಿಂದಲೂ, ಅದಲ್ಲದೆ ಮೊದಲಿನ್ನದಕ್ಕಿಂತಲೂ ಹೆಚ್ಚಾಗಿ ಒಂದು ಫಾರಮ್ಮನ್ನು ಹೆಚ್ಚಿಸಿರುವುದರಿಂದಲೂ ಕೂಡ, ನಂದಿನಿಯು ವೆಚ್ಚಕ್ಕೆ ತಕ್ಕಂತೆ ವರ್ಗಣಿಯನ್ನು 2-10ಕ್ಕೆ ಏರಿಸಬೇಕಾಯಿತು. ಇಷ್ಟಕ್ಕೆ ಆಗ್ರಹಿಸದೆ ಸಹಜಭಾವದಿಂದ ಕ್ಷಮಿಸಿ, ಆದರಿಸಿ ಪ್ರೋತ್ಸಾಹಿಸುವಿರೆಂದು ಭರವಸೆಯಿದ್ದರೂ ಇದೋ ನಮ್ಮ ಕರ್ತವ್ಯಕ್ಕೊಳಪಟ್ಟು ಕ್ಷಮೆಯನ್ನು ಕೋರಿರುವೆವು.

ನಂದಿನಿಯು ಈಗ ಮಾಡಿರುವ ಈ ಏರ್ಪಾಡಿನಿಂದ ಅನುಕೂಲವೇನಾದರೂ ಕಂಡರೆ ಈ ದ್ವಿತೀಯ ವರ್ಷದಲ್ಲಿ ತಾನು ಉದ್ದೇಶಿಸಿರುವಷ್ಟು ಬಹುಮಾನ ಪುಸ್ತಕಗಳನ್ನು ಪ್ರಕಟಿಸುವುದರಲ್ಲಿ ಹಿಂದೆಗೆಯುವುದಿಲ್ಲ. ಅಲ್ಲದೆ ನಂದಿನಿಗಾಗಿ ಬರುವ ಉತ್ಪನ್ನವೆಲ್ಲ ನಂದಿನಿಯ ಏಳ್ಗೆಗೆ ಮತ್ತು ನಂದಿನಿಯ ಬಹುಮಾನಪುಸ್ತಕಗಳ ಏಳ್ಗೆಗೆ ಮಾತ್ರವೇ ವಿನಿಯೋಗಿಸಲ್ಪಡುವುದಲ್ಲದೆ ಅನ್ಯಥಾ ವಿನಿಯೋಗವಾಗುವುದಿಲ್ಲ. ಇದನ್ನು ತಿಳಿದು, ನಂದಿನಿಯು ಈ ವರ್ಷ ಕೈಕೊಂಡಿರುವ ಸುಧಾರಣೆಗಳನ್ನು ನೋಡಿ ಸಹೃದಯದಿಂದ ಉಚಿತರೀತಿಯಾಗಿ ಆದರಿಸಿ, ಸಹಾನುಭೂತಿಯನ್ನು ಪ್ರದರ್ಶಿಸುವುದು ನಮ್ಮ ಸೋದರೀ ಸೋದರರನ್ನೇ ಸೇರಿರುವುದು,

ಇತಿ ಶ್ರೇಯಃಕಾಂಕ್ಷಿಣಿ, ಸಂ. ನಂದಿನಿ.

(ನಂಜನಗೂಡು)

ಮಾತೃಮಂದಿರದ ವಿದ್ಯಾರ್ಥಿಗಳ ಸಂಘವು.

ಹಿಂದಿನ ಸಂಚಿಕೆಯಲ್ಲಿ ನಿವೇದಿಸಿದ್ದಂತೆ ಈ ವಿದ್ಯಾರ್ಥಿಗಳ ಸಂಘವು ಪಿಂಗಳ ಸಂ॥ ದ ವಿಜಯ ದಶಮಿಯ ದಿನ ಗುರುಜನರ ಆಶೀರ್ವಾದದಿಂದ ಏರ್ಪಟ್ಟು, ಅದರ ಉಪಯೋಗ ಮತ್ತು ವೃದ್ಧ್ಯರ್ಥವಾಗಿ ಪುಸ್ತಕಭಂಡಾರ-ವಾಚನಶಾಲೆಗಳೂ ಏರ್ಪಡಿಸಲ್ಪಟ್ಟುವು.

ಈ ಸಂಘದಲ್ಲಿ ಈ ವರೆಗೆ ಎಂದರೆ ಈ ನವಂಬರ್ ಸಾಲಿನಲ್ಲಿ ೨೦ ಮಂದಿ ವಿದ್ಯಾರ್ಥಿಗಳು ಸೇರಿರುವರು. ಇವರೆಲ್ಲರೂ ಲೋ॥ ಸೆ॥, ಫೋರ್ತ್, ಫಿಫ್ತ್, ಸಿಕ್ಸ್ತ್ ಫಾರಮ್ಮಿನ ವಿದ್ಯಾರ್ಥಿಗಳಾಗಿರುವರು. ಇವರ ಉಪಯೋಗಕ್ಕಾಗಿಯೇ ಪುಸ್ತಕಭಂಡಾರ ವಾಚನಶಾಲೆಗಳಾಗಿರುವುವು.*

ಈ ವಿದ್ಯಾರ್ಥಿಗಳು ಪಾಠಶಾಲೆಯ ರಜಾದಿನಗಳಲ್ಲಿಯೂ ಮತ್ತು ಪ್ರತಿತಿಂಗಳ ಭಾನುವಾರದಲ್ಲಿಯೂ ಎಲ್ಲರೂ ಕಲೆತು ಲೇಖನ-ವಾಚನ-ಸಮಾಲೋಚನಗಳನ್ನು ನಡೆಯಿಸುವರಲ್ಲದೆ, ತಿಂಗಳಿಗೊಂದು ಬಾರಿ ಸಭೆ ಸೇರಿ ತಮ್ಮ ತಮ್ಮ ಬುದ್ಧಿಶಕ್ತ್ಯನುಸಾರವಾಗಿ ಉಪನ್ಯಸಿಸುವರು.

ಇವರಿಗಾಗಿ ಏರ್ಪಟ್ಟಿರುವ ಪುಸ್ತಕಭಂಡಾರದಲ್ಲಿ ಈ ವರೆಗೆ ಇಂಗ್ಲಿಷು ಕನ್ನಡ ಪುಸ್ತಕಗಳು ೩೨೦ರ ಮೇಲೆ ಇರುವುವು.

ಪುಸ್ತಕಭಂಡಾರದಲ್ಲಿರುವ ಪುಸ್ತಕಗಳು ಈ ಮಂದಿರದ ವಿದ್ಯಾರ್ಥಿಸಂಘದವರಿಗೆ ಮಾತ್ರವೇ ಓದಲು ಕೊಡಲ್ಪಡುವುವಲ್ಲದೆ ಇತರರಿಗೆ ದೊರೆಯಲಾರದಿರುವುದು.

ಇಲ್ಲಿಯ ವಿದ್ಯಾರ್ಥಿಗಳು ಪ್ರತಿಭಾನುವಾರ ಬೆಳಿಗ್ಗೆ ೮ರಿಂದ ೧೦ರ ವರೆಗೂ, ಮಧ್ಯಾಹ್ನ ೨ರಿಂದ ೪ರ ವರೆಗೂ ಪುಸ್ತಕಗಳನ್ನು ಪಡೆಯಬಹುದಾಗಿರುವುದು. ಅಲ್ಲದೆ ವಾಚನಶಾಲೆಯಲ್ಲಿ ಸ್ಥಳದ ವಿದ್ಯಾರ್ಥಿಗಳು ದಿನವೂ ತಮ್ಮ ನಿಯಮಿತ ಪಾಠಗಳನ್ನು ಓದಿ ಬರೆಯಲಿಕ್ಕೂ, ವೃತ್ತಪತ್ರಗಳನ್ನು ಓದುವುದಕ್ಕೂ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು.

* ಸದ್ಯಕ್ಕೆ ಈ ಪುಸ್ತಕಭಂಡಾರವು ಈ ವಿದ್ಯಾರ್ಥಿಗಳ ಉಪಯೋಗಕ್ಕೆ ಮಾತ್ರವೇ ಆಗಿರುವುದು. ಇನ್ನು ಸಲ್ಪಕಾಲದಲ್ಲಿಯೇ ನಮ್ಮ ಧರ್ಮಸೋದರಿಯರ ಉಪಯೋಗಕ್ಕೂ ಬರುವಂತೆ ಏರ್ಪಡಿಸುವ ಯೋಚನೆಯಿರುವುದು. ಅವರ ಕಾಲಕ್ಷೇಪಕ್ಕೆ ಅರ್ಹವೂ, ಸ್ತ್ರೀಯರಿಗೆ ಅವಲೋಕನೀಯವೂ ಆದ ಉತ್ತಮ ತರಗತಿಯ ಗದ್ಯಪದ್ಯ ಗ್ರಂಥಗಳನ್ನೇ ಆರಿಸಿ ತೆಗೆದಿಟ್ಟು ಆ ಬಳಿಕ ಆ ನಮ್ಮ ಸೋದರಿಯರಿಗೆ ತಕ್ಕಂತೆ ಅವಕಾಶವನ್ನು ಕಲ್ಪಿಸಿಕೊಡುವ ಸಂಕಲ್ಪದಿಂದ ಪ್ರಯತ್ನ ಮಾಡುತ್ತಿರುವೆವು. ದೈವಾನುಗ್ರಹದಿಂದ ಈ ನಮ್ಮ ಉದ್ದೇಶವು ಫಲಕಾರಿಯಾಗಬೇಕೆಂದು ನಿರೀಕ್ಷಿಸುತ್ತಿರುವೆವು.

ಸಂ. ನಂದಿನಿ.

ಈ ಸಂಘಕ್ಕೂ ಮತ್ತು ಪುಸ್ತಕಭಂಡಾರ ವಾಚನಶಾಲೆಗಳಿಗೂ ಸಂಪಾದಿಕೆಯರ ತೀರ್ಥವಾದರು ಉಪಾಧ್ಯಕ್ಷ (Vice President)ರಾಗಿಯೂ ಆರ್. ಅಳಸಿಂಗ್ರಾಚಾರ್ ಎಂಬ ವಿದ್ಯಾರ್ಥಿ ವ್ಯವಸ್ಥಾಪಕ (Manager)ನಾಗಿಯೂ ಪುಸ್ತಕ ಭಂಡಾರ ವಾಚನಶಾಲೆಗಳಿಗೆ ವಿ. ಕೆ. ಮುಕುಂದನ್ ಎಂಬ ವಿದ್ಯಾರ್ಥಿ, ಪ್ರಧಾನ(Secretary)ನಾಗಿಯೂ ನಿಯಮಿಸಲ್ಪಟ್ಟಿರುವರು.

ಈ ಸಂಘದ ಮೊದಲನೆ ತಿಂಗಳ ಸಭೆಯು ಇದೇ ದಿನ (25—11—1917)ಮಧ್ಯಾಹ್ನೋತ್ತರ ಮೂರುವರೆ ಗಂಟೆಗೆ ಇಲ್ಲಿಯ ಕನ್ನಡ ಹೈಸ್ಕೂಲ್ ಹಾಲಿನಲ್ಲಿ ಇಲ್ಲಿಯ ಮುನಿಸೀಫರು ಶ್ರೀಯುತ ಸಿ. ಬಿ. ನಾಗಭೂಷಣರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ ಹೈಸ್ಕೂಲಿನ ಉಪಾಧ್ಯಾಯರುಗಳಲ್ಲಿ ಮೂವರೂ, ಸಂಘದ ಅಭಿಮಾನಿಗಳಾದವರಲ್ಲಿ ಕೆಲವರೂ ಮತ್ತು ಹೈಸ್ಕೂಲಿನ ೫ ೬-೭ನೆ ವರ್ಗದ ವಿದ್ಯಾರ್ಥಿಗಳೂ ಬಂದಿದ್ದರು.

ಸಭೆಯು ಭಗವತ್ಪ್ರಾರ್ಥನಾಪೂರ್ವಕವಾಗಿ ಪ್ರಾರಂಭಿಸಲ್ಪಟ್ಟಿತು. ಪ್ರಥಮತಃ ಪೋಷಕರು ಸಭಾಧ್ಯಕ್ಷರ ಮತ್ತು ಸಭಿಕರ ಮುಂದೆ ಕಾಲೋಚಿತವಾದ ಭಾಷಣಮಾಡಿದ ಬಳಿಕ ಸಭಾಧ್ಯಕ್ಷರ ಅನುಮತಿಯನ್ನು ಪಡೆದು ಸಂಘದ ವಿದ್ಯಾರ್ಥಿಗಳಲ್ಲಿ ಮೂವರು ಕನ್ನಡದಲ್ಲಿಯೂ ಮೂವರು ಇಂಗ್ಲಿಷಿನಲ್ಲಿಯೂ " ಕಾಲವನ್ನು ಉಪಯೋಗಿಸುವುದು ಹೇಗೆ ? " ಎಂಬ ವಿಚಾರದ ಉಪನ್ಯಾಸಗಳನ್ನು ಕೊಟ್ಟರು. ಉಪನ್ಯಾಸಗಳೆಲ್ಲವೂ ಮುಗಿದ ಬಳಿಕ ಸಂಘದ ಕಾರ್ಯದರ್ಶಿಯು ವರದಿಯನ್ನೊಪ್ಪಿಸಿದನು. ಆ ಬಳಿಕ ಸಭಾಧ್ಯಕ್ಷರು ವಿದ್ಯಾರ್ಥಿಗಳಿಗೆ ಉತ್ಸಾಹವುಂಟಾಗುವಂತೆ ಹಿತಬೋಧೆ ಮಾಡಿದರು. ಅನಂತರ ಶ್ರೀಮನ್ಮಹಾರಾಜರ, ಶ್ರೀ ಸಾರ್ವಭೌಮ ಸರ್ಕಾರದವರ ಶ್ರೇಯಃಪ್ರಾರ್ಥನೆಗಳೊಡನೆ ಇಂದಿನ ಸಭೆಯು ಸಾಯಂಕಾಲ ೫ಕ್ಕೆ ಸಾಂಗವೆನ್ನಿಸಿತು

(ಪೋಷಕರ ಭಾಷಣದ ಸಾರಾಂಶ)

" ಮಹನೀಯರೇ !

ಕಾಲವೆಂಬುದು ಚಕ್ರಾಕಾರವಾಗಿರುವುದೆಂದು ಜ್ಞಾನಿಗಳು ಕಂಡುಹಿಡಿದಿರುವರು. ಆದುದರಿಂದಲೇ ಕಾಲಚಕ್ರವೆಂದು ಹೇಳುತ್ತಿರುವರು. ಚಕ್ರಾಕಾರವಾದುದರಿಂದಲೇ ಆದಿ-ಅಂತ್ಯವೆಂಬ ನಿಯತಸ್ಥಾನವಿಲ್ಲ. ಕಾಲವನ್ನು ತಿಳಿದವನು ಕಾಲಜ್ಞನೆನಿಸಿಕೊಳ್ಳುವನು.

ಕಾಲಜ್ಞನೆಂದರೆ ಜ್ಞಾನಿ-ಕುಕ್ಕುಟವೆಂದು ನಿಘಂಟಕಾರನು ಹೇಳುವನು. ಜ್ಞಾನಿಗೂ ಕುಕ್ಕುಟಕ್ಕೂ (ಕೋಳಿ) ತುಂಬ ವ್ಯತ್ಯಾಸವು ಕಂಡುಬರುತ್ತದೆ. ಜ್ಞಾನಿಯು ಭೂತ, ವರ್ತಮಾನ, ಭವಿಷತ್ ಕಾಲವನ್ನು (ಹಿಂದೆ ಗತಿಸಿ ಹೋದುದನ್ನೂ ಈಗ ನಡೆಯುತ್ತಿರುವುದನ್ನೂ ಮುಂದೆ ನಡೆವುದನ್ನೂ) ತಿಳಿದು, ತಿಳಿಯುವುದರಲ್ಲಿಯೂ ಶಕ್ತನಾಗುತ್ತಾನೆ. ಕುಕ್ಕುಟವು (ಕೋಳಿ) ಹಗಲು ರಾತ್ರಿಗಳಲ್ಲಿ ಗತಿಸಿದ ಕಾಲವನ್ನು ಮಾತ್ರ ತಿಳಿಯುವುದು ಕೋಳಿಗಳು ರಾತ್ರಿಯ ಕಾಲದಲ್ಲಿ ಕಣ್ಣು ಕಾಣದ ಪಕ್ಷಿಜಾತಿಗಳಲ್ಲಿ ಒಂದಾಗಿಯೂ, ಎಲ್ಲಿಯೋ ಒಂದು ಕಡೆ ಅಡಗಿಕೊಳ್ಳುವುದಾಗಿಯೂ ಇದ್ದರೂ ಉಷಃಕಾಲ ಅರ್ಧರಾತ್ರಿ ಮೊದಲಾದ ವೇಳೆಯನ್ನು ತಿಳಿದು ಕೂಗುವದು ಇಷ್ಟು ಮಾತ್ರಕ್ಕೇ ಕಾಲಜ್ಞ ಪ್ರಾಣಿಯೆಂದು ನಿರ್ಧರಿಸಿ ನಿಘಂಟುಕಾರನು ಹೇಳುವನು. ಈ ಉದಾಹರಣೆಯಿಂದ ಕುಕ್ಕುಟ ಮತ್ತು ಜ್ಞಾನಿ ಇಬ್ಬರಲ್ಲದೆ ಇತರರು ಕಾಲವನ್ನು ತಿಳಿಯಲಾರರೆಂದು ಹೇಳಿದಂತೆ ಆಗುವದು "

"ಪ್ರತಿಮಾನವನೂ ಪಶು ಮೊದಲಾದ ಚತುಷ್ಪಾದ (ನಾಲ್ಕು ಕಾಲು) ಜಂತುಗಳೂ, ದ್ವಿಪಾದ (ಎರಡು ಕಾಲ್ಗಳುಳ್ಳ ಪಕ್ಷಿಗಳು)ಗಳೂ ಉದಯ ಕಾಲವನ್ನು ತಿಳಿದು ಎಚ್ಚತ್ತು ತಮ್ಮ ತಮ್ಮ ವ್ಯಾಪಾರದಲ್ಲಿ ಪ್ರವರ್ತಿಸುವುದಿಲ್ಲವೆ ? ಎಂಬ ಆಕ್ಷೇಪವು ಬರಬಹುದು. ಪ್ರತಿಯೊಂದು ಪ್ರಾಣಿಯೂ ತನ್ನ ಆಹಾರ-ವಿಹಾರಗಳಿಗೋಸ್ಕರ ಎಚ್ಚತ್ತಂತೆ ಆಗುವುದಲ್ಲದೆ ಕಾಲವನ್ನೂ ಕಾಲದ ಮಹಿಮೆಯನ್ನೂ ತಿಳಿದುಕೊಂಡು ಕಾಷ್ಠೆ, ಕಲಾ ಪರಿಮಾಣ ಕಾಲವನ್ನು ಸಾರ್ಥಕಪಡಿಸಿಕೊಳ್ಳುವ ಮಹಾಶಕ್ತಿಯು ಮಾನವಜನ್ಮಧಾರಣ ಮಾಡಿದ ಪ್ರಾಣಿಗೆ ಮಾತ್ರ ಸಾಧ್ಯವಾಗಿರಬಹುದು. ಇತರ ಜಂತುಗಳಿಗೆ ಆ ಅದ್ಭುತ ಶಕ್ತಿಯನ್ನು ಭಗವಂತನು ದಯಪಾಲಿಸಿಲ್ಲ."

" ವಿಚಾರ ಮಾಡುತ್ತ ಹೋದರೆ ಪ್ರತಿಯೊಂದು ಕ್ಷಣ ಕಾಲದಲ್ಲಿ ಎಷ್ಟೋ ಪ್ರಾಣಿಗಳು ಪ್ರಪಂಚದಲ್ಲಿ ಹುಟ್ಟುವುದನ್ನೂ ಸಾಯುವುದನ್ನೂ ಧನಿಕರು ಬಡವರಾಗುವುದನ್ನೂ ಬಡವರು ಧನಿಕರಾಗುವುದನ್ನೂ ಮೂಢನು ಪಂಡಿತನಾಗುವುದನ್ನೂ ಪಂಡಿತನು ಸೋಮಾರಿತನದಿಂದ ಅಪ್ರಯೋಜಕನಾಗುವುದನ್ನೂ ತಿಳಿಯಬಹುದು."

" ಈ ಕ್ಷಣದಲ್ಲಿ ಸುಖವು, ಉತ್ತರಕ್ಷಣದಲ್ಲಿ ದುಃಖವು ಮತ್ತೆ ಸುಖವು ಹೀಗೆ ಪರಿವರ್ತನವಾಗುತ್ತಿರುವುದು. ಸುಖ ಪ್ರಾಪ್ತವಾದ ಕಾಲದಲ್ಲಿ ಹಿಂದೆ ಅನುಭವಿಸಿದ ದುಃಖದ ಚಿಂತೆಯು, ದುಃಖ ಪ್ರಾಪ್ತವಾದ ಕಾಲದಲ್ಲಿ ಅದರ ಅನುಭವವು ಸರ್ವಾಂಗದಲ್ಲಿಯೂ ವ್ಯಾಪಿಸಿ ಮನುಷ್ಯನನ್ನು ಜಡಪ್ರಾಯನನ್ನಾಗಿ ಮಾಡುವುದು. ಒಂದು ವೇಳೆ ದುಃಖವೇ ಬರದೆ ಸುಖದಲ್ಲಿಯೇ ಆರಾದರೂ ಇರುವರೆಂದು ಭಾವಿಸಿದರೆ ಇದೇ ಸ್ಥಿರವೆಂಬ ಜಡಭಾವವುಂಟಾಗಬಹುದು. ಈ ರೀತಿ ಜಡ

ಜೀವಿಗಳಾದ ನಾವು ಕಾಲದ ಮಹಿಮೆಯನ್ನು ತಿಳಿಯಲಾರದೆಯೇ ಇರುವೆವು. ಆದುದರಿಂದಲೇ ಸರ್ವದಾ ಎಚ್ಚರದಲ್ಲಿರುವ ಮಹಾತ್ಮರು "ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂಚ ಸಾಧಯೇತ್॥" ಎಂದರೆ ಒಂದು ಕ್ಷಣಕಾಲವನ್ನು ವ್ಯರ್ಥಪಡಿಸದೆ ಜ್ಞಾನಸಾಧಕವಾದ ವಿದ್ಯೆಯನ್ನು ಸಾಧಿಸಬೇಕೆಂದು ಹೇಳುವರು."

"ಅರ್ಥವೆಂದರೆ ದ್ರವ್ಯವೆಂದು ರೂಢಿಯಾದ ಅರ್ಥವಿದೆ ಅಷ್ಟೇ ಅಲ್ಲ. ನಾಲ್ಕು ವಿಧವಾದ ಪುರುಷಾರ್ಥವುಂಟು ಎಂದು ಹೇಳುವರು (ಧರ್ಮ, ಅರ್ಥ, ಕಾಮ, ಮೋಕ್ಷವೆಂಬುದೇ ಅರ್ಥಚತುಷ್ಟಯವು.) ಅವದೇ ಒಂದೂ ಒಟ್ಟಾಗಿ ಅಲ್ಪಕಾಲದಲ್ಲಿ ಪಡೆಯತಕ್ಕವುಗಳಲ್ಲ. ಅಲ್ಪಸ್ವಲ್ಪವಾಗಿ ಸಂಗ್ರಹಿಸಬೇಕೆಂದು ಹೇಳಿದಂತೆ ಆಗುವುದು."

"ಹುಟ್ಟಿದ ಜಂತುವಿಗೆ ಮರಣವು ಸಿದ್ಧವಾಗಿರುವುದು. ಅದಕ್ಕೆ ಕಾಲವಿಶ್ವಾಸವೆಂಬ ನಿಯಮವಿಲ್ಲ. "ಏಕ ಏವ ಸುಹೃದ್ಧರ್ಮ ಗಚ್ಛಂತಮನುಸಗಚ್ಛತಿ॥" ಎಂಬಂತೆ ಹೋಗತಕ್ಕವನನ್ನು ಹಿಂಬಾಲಿಸಿ ಹೋಗತಕ್ಕವನಾರೋ ಅವನೇ ಸುಹೃತ್ ಎನಿಸಿಕೊಳ್ಳುವನು. ಅಂತಹ ಸುಹೃತ್ತೆಂದರೆ ಧರ್ಮವೊಂದೇ ಆಗಿರುವುದೆಂದು ಹೇಳಿರುವರು."

"ನಮ್ಮ ಗತಿಗೆ ತಡೆಯುಂಟು ಮಾಡುವುದನ್ನು ತಿಳಿಸಿ ಅನುಕೂಲಪಡಿಸುವ ಧರ್ಮವನ್ನು ಬೋಧಿಸುವುದೇ ವಿದ್ಯೆಯೆನ್ನಿಸುವುದು. ಅಂತಹ ವಿದ್ಯೆಯನ್ನು ಸಾಧಿಸುವುದರಲ್ಲಿ ಪ್ರತಿಯೊಂದು ಕ್ಷಣವನ್ನೂ ಉಪಯೋಗಿಸಬೇಕು. ಈಗ ನಡೆಯುತ್ತಿರುವ ನಿಮಿಷವು ನಮ್ಮದಾಗಿರುವುದು; ಮುಂದಿನ ಕ್ಷಣದಲ್ಲಿ ಏನಾಗುವುದೋ ತಿಳಿಯಲಾಗುವುದಿಲ್ಲ. ಮೃತ್ಯು ಹೆಡತಲೆಯಲ್ಲಿ ನಿಂತಿರುವುದೆಂಬ ಭಾವನೆಯಿಂದ ಧರ್ಮವನ್ನು ಮಾಡಬೇಕು. ತಾನಿರುವ ವರೆಗೂ ತನಗೂ ತನ್ನನ್ನು ಹಿಂಬಾಲಿಸುವವರಿಗೂ ಇತರರಿಗೂ ಪ್ರಯೋಜನಕರವಾಗಿ ಮನೆ, ತೋಟ, ಭೂಮಿಗಳನ್ನು ನಿರ್ಮಾಣ ಮಾಡುವುದರಲ್ಲಿ ತನಗೆ ಶಾಶ್ವತವೆಂಬ ಭಾವನೆಯಿಂದ ಸ್ಥಿರವಾದ ಕಾರ್ಯವನ್ನು ಮಾಡಬೇಕೆಂದು ಜ್ಞಾನಿಗಳು ಹೇಳುವರು. ಗೃಹಾರಾಮ ಕ್ಷೇತ್ರಗಳು, ಕೆರೆ, ಭಾವಿ, ಕೊಳಗಳು ಆವವರೆಗ ಉತ್ತಮ ಸ್ಥಿತಿಯಲ್ಲಿರುವವೋ ಆ ವರೆಗೆ ಮಾಡಿದವರ ಹೆಸರು ಉಳಿದಿರುವುದು. ಹೆಸರು ಉಳಿದಿರುವ ವರೆಗೂ ಅವರ ಆತ್ಮಕ್ಕೆ ಸುಖವುಂಟೆಂದು ಕೂಡ ಜ್ಞಾನಿಗಳು ಹೇಳುವರು."

"ಯಜ್ಜೀವತಿ ಕ್ಷಣಮಪಿ ಪ್ರಥಿತೈರ್ಮನುಷ್ಯೋ— ವಿಜ್ಞಾನ ಶೌರ್ಯ ವಿಭವಾದಿ ಗುಣಸ್ಸಮೇತಃ॥— ಜ್ಞಾನ ಶೌರ್ಯ, ವಿಭವ ಇವೇ ಮೊದಲಾದ ಗುಣಗಳಿಂದ ಪ್ರಸಿದ್ಧನಾಗಿ ಮನುಷ್ಯನು ಕ್ಷಣಕಾಲ ಜೀವಿಸಿದರೂ ಅವನ ಜೀವನವು ಸಾರ್ಥಕವಾದುದೆನಿಸುವುದು. ಹಾಗಿಲ್ಲದಿದ್ದರೆ, "ಕಾಕೋಪಿ ಜೀವತಿ ಚಿರಾತ್ತು ಬಲಿಂಚ ಭುಂಕ್ತೇ॥" ಎಂಬಂತೆ ಬಲಿಹಾಕಿದ ಅನ್ನವನ್ನು ತಿಂದು ಬಹುಕಾಲ ಜೀವಿಸುವ ಕಾಗೆಯ ಜೀವನಕ್ಕೆ ಸಮಾನವಾದುದೆಂದು ಹೇಳುವರು. ಆದುದರಿಂದ ಅಂತಹ ಉತ್ತಮ ಗುಣವನ್ನು ಸಾಧಿಸುವುದರಲ್ಲಿ ಪ್ರತಿಯೊಂದು ಕ್ಷಣಕಾಲವನ್ನೂ ಉಪಯೋಗಿಸಬೇಕೆಂದು ಸೂಚಿಸಿದಂತಾಗುವುದು. ಹಾಗಿಲ್ಲದಿದ್ದರೆ ನಿದ್ರೆಯಲ್ಲಿಯೂ ಆಲಸ್ಯದಲ್ಲಿಯೂ ದುರಾಚಾರವೇ ಮೊದಲಾದ ದುರ್ವ್ಯಸನದಲ್ಲಿಯೂ ಕಳೆದ ಕಾಲವನ್ನು ಪುನಃ ಪಡೆಯಲಾರದೆ ಉತ್ತರೋತ್ತರ ವ್ಯಥೆ ಪಡಬೇಕಾಗುವುದು.'

"ಪ್ರತಿಯೊಂದು ಕ್ಷಣವನ್ನೂ ಉತ್ತಮ ರೀತಿಯಲ್ಲಿ ಉಪಯೋಗಿಸದೆ ಇರಬೇಕೆಂಬುದಕ್ಕಾಗಿಯೇ ಸೋಮಾರಿತನ ಮೊದಲಾದ ದುರ್ವ್ಯಸನ ರೋಗಗಳು ಅಡ್ಡ ಬರುವುವು ಅವುಗಳನ್ನು ದಾಟುವುದು ಕೇವಲ ಮನುಷ್ಯಪ್ರಯತ್ನ ಮೀರಿದುದಾಗಿರುವುದು. ಕರ್ತವ್ಯನಿರತರಾದ ಮಹನೀಯರ ಸದುಪದೇಶ ಕಾಲೋಚಿತ ಎಚ್ಚರಿಕೆಗಳು ವಿದ್ಯಾರ್ಥಿಗಳಿಗೆ ಅಂತಹ ಶಕ್ತಿಯನ್ನುಂಟುಮಾಡುವುದರಲ್ಲಿ ಸಂಶಯವಿಲ್ಲ."

"ಮಹನೀಯರಾದ ಸಭಾಧ್ಯಕ್ಷರೇ! ಸಭಾಸದರೆ!— ಈಗ ಇಲ್ಲಿ ನೆರೆದಿರುವ ವಿದ್ಯಾರ್ಥಿಗಳು ಮಾತೃಮಂದಿರದಲ್ಲಿ ಒಂದು ನಾಟಕ ಶಾಲೆಯನ್ನು ಏರ್ಪಡಿಸಿಕೊಂಡು ಪದೇಪದೇ ಮಹನೀಯರ ಸನ್ನಿಧಾನದಲ್ಲಿ ತಮಗೆ ತಿಳಿದುದನ್ನು ನಿವೇದಿಸಿ ತಿಳಿಯದ ಅಂಶವನ್ನು ತಿಳಿದು ತಮ್ಮ ಆಚರಣೆಗಳನ್ನು ತಿದ್ದಿಕೊಳ್ಳಬೇಕೆಂದು ಅಪೇಕ್ಷಿಸಿ, ತಮ್ಮೆಲ್ಲರನ್ನೂ ಪ್ರಾರ್ಥಿಸುತ್ತಿರುವರು. ತಾವು ವಿದ್ಯಾರ್ಥಿಗಳ ಮೇಲೆ ಕನಿಕರವಿಟ್ಟು ಈ ಸಂಘದ ಬಿ. ಎಸ್. ನಾರಾಯಣನ್ ಮೊದಲಾದ ವಿದ್ಯಾರ್ಥಿಗಳು ಸನ್ನಿಧಿಯಲ್ಲಿ ನಿವೇದಿಸುವುದಕ್ಕೆ ಅನುಜ್ಞೆಯನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂಬುದೇ ನನ್ನ ಕೋರಿಕೆ.

(ಮಾತೃಮಂದಿರಂ ವಿದ್ಯಾರ್ಥಿಸಂಘದ ಕಾರ್ಯದರ್ಶಿಯು ಒಪ್ಪಿಸಿದ ವರದಿ)

ಪೂಜ್ಯರೆ! ಮತ್ತು ಮಿತ್ರರೆ!

ಈ ನಮ್ಮ ಮಾತೃಮಂದಿರದ ವಿದ್ಯಾರ್ಥಿಗಳ ಸಂಘವು ನಳ ಸಂ॥ ಆಶ್ವಯುಜ ಶುದ್ಧ ದಶಮಿಯಲ್ಲಿ ಏರ್ಪಟ್ಟಿದ್ದಿತು. ಆದರೆ ಆ ವರ್ಷದಲ್ಲಿ ವಿದ್ಯಾರ್ಥಿಗಳು ನಡೆಯಿಸಿರುವ ಕಾರ್ಯವೇನೂ ಅಷ್ಟು ವಿಶೇಷವಾಗಿಲ್ಲವಾದುದರಿಂದ ಅದನ್ನಿಲ್ಲಿ ಪ್ರಸ್ತಾಪಿಸಲಿಲ್ಲ. ಆದರೆ ವಿದ್ಯಾರ್ಥಿಗಳಲ್ಲಿ ಪರಸ್ಪರ ಐಕಮತ್ಯ, ಸ್ನೇಹಭಾವ, ಹಿತೇಚ್ಛೆಗಳುಂಟಾಗಿ, ಅವರು ಮುಂದೆ ಅಭ್ಯುದಯಸ್ಥಿತಿಗೆ ಬರುವುದಕ್ಕೆ ಅವರಿಗೆ ವಿದ್ಯಾವಿಚಾರ ಸಭೆ

ಯೂ ವಿದ್ಯಾರ್ಥಿಗಳ ಸಂಘವೂ ಅತ್ಯಂತ ಸಹಕಾರಿಗಳೆಂದು ತಿಳಿದು ಈ ನಮ್ಮ ವಿದ್ಯಾವಿಚಾರಸಭೆಯನ್ನು ಕ್ರಮನಾಗಿಯೂ ನಿಯಮಾನುಸಾರವಾಗಿಯೂ ನಡೆಯಿಸಿಕೊಂಡು ಬರಬೇಕೆಂದು ಯೋಚಿಸಿ, ಇದೇ ಪಿಂಗಳ ಸಂ॥ ವಿಜಯ ದಶಮಿಯಲ್ಲಿ ಇದನ್ನು ಗುರುಜನರ ಆಜ್ಞಾನುಸಾರ ಸ್ಥಾಪಿಸಿತು. ಅಲ್ಲದೆ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಮಾತ್ರಮಾಡಿರದಲ್ಲಿ ಒಂದು ಪುಸ್ತಕಭಂಡಾರವೂ ವಾಚನಶಾಲೆಯೂ ಏರ್ಪಡಿಸಲ್ಪಟ್ಟಿತು.

ಈ ಸರಸ್ವತೀ ಭಂಡಾರಕ್ಕೆ ಸತೀಹಿತೈಷಿಣೀ ನಂದಿನೀ ಸಂಪಾದಿಕೆಯರಾಗಿರುವ ನಮ್ಮ ಮಾನ್ಯ ಸೋದರಿಯರು ತಮ್ಮಲ್ಲಿದ್ದ ಪುಸ್ತಕಗಳೆಲ್ಲವನ್ನೂ ಕೊಟ್ಟಿರುವರಲ್ಲದೆ ಭಂಡಾರ ಮತ್ತು ವಾಚನಶಾಲೆಗಳ ಅಭಿವೃದ್ಧಿಗೆ ಬೇಕಾದುದೆಲ್ಲವನ್ನೂ ಒದಗಿಸಿಕೊಡಲು ಸಂಕಲ್ಪಿಸಿರುವರು. ಈ ನಮ್ಮ ಸಂಘಕ್ಕೆ ಬೇಕಾದ ಕುರ್ಚಿ, ಮೇಜು, ಬೆಂತು ಪೆಟಿಗೆಗಳನ್ನು ತರಿಸಿಕೊಡಲು ನಮ್ಮ ಪೂಜ್ಯಪಾದರೂ ಮತ್ತು ಮಾನ್ಯಸೋದರಿಯರೂ ಒಪ್ಪಿರುವರು. ಈ ಪುಸ್ತಕಭಂಡಾರಕ್ಕೆ ನಮ್ಮ ಸಂಘದ ವಿದ್ಯಾರ್ಥಿಗಳಲ್ಲಿ ಕೆಲವರು ತಮ್ಮಲ್ಲಿದ್ದ ಉಪಯುಕ್ತ ವಾಚನೀಯ ಪುಸ್ತಕಗಳನ್ನು ತಂದೊಪ್ಪಿಸಿರುವರು.

ಈ ಸಂಘದಲ್ಲಿ ಈ ವರೆಗೆ ೩೦ ಮಂದಿ ವಿದ್ಯಾರ್ಥಿಗಳಿರುವರು. ಇವರಲ್ಲಿ ನಾಲ್ಕೈದು ಮಂದಿವಿನಾ ಉಳಿದವರೆಲ್ಲರೂ ಈ ಸಭೆಗೆ ಬಂದಿರುತ್ತಾರೆ. ಇವರೆಲ್ಲರೂ ಈ ಸಂಘದ ನಿಯಮಗಳನ್ನು ಒಪ್ಪಿ ಅದರಂತೆ ನಡೆಯಲುಳ್ಳವರಾಗಿರುತ್ತಾರೆ.

ಈ ಸಂಘದ ಪುಸ್ತಕದ ಭಂಡಾರದಲ್ಲಿ ಈ ವರೆಗೆ ೩೨೦ರ ಮೇಲೆ ಪುಸ್ತಕಗಳಿವೆ. ಅವುಗಳ ಹೆಸರು, ರಚಿಸಿದವರ ಹೆಸರು, ಸ್ಥಳ, ಮುದ್ರಿತಸ್ಥಳ, ಕ್ರಯ, ಅದರಿಂದಾಗುವ ಉಪಯೋಗಗಳನ್ನು ಸಂಕ್ಷೇಪವಾಗಿ ತಿಳಿಸುವ ಪಟ್ಟಿಯನ್ನು ಇನ್ನೂ ಅವಕಾಶದೊರೆಯದಿರುವುದರಿಂದ ಇಲ್ಲಿ ಪ್ರಸ್ತಾಪಿಸಲಾಗದಿದೆ. ಇರಲಿ.

ಈ ಸಂಘದವರು ಪ್ರತಿತಿಂಗಳ ಕಡೆಯ ಭಾನುವಾರವೂ ಸಭೆ ಸೇರಿಸಿ, ವಿಷಯಗಳನ್ನು ಚರ್ಚಿಸುವರು. ಈ ಸಂಘಕ್ಕೆ ಸಂಬಂಧಪಟ್ಟ ನಾಟಕ ಸಂಘದ ವಿಚಾರಗಳೂ ಪ್ರತಿತಿಂಗಳ ಕಾರ್ಯನಿರ್ವಾಹಕಸಭೆಯಲ್ಲಿ ಚರ್ಚಿಸಲ್ಪಡುವುವು. ಈ ವಿದ್ಯಾರ್ಥಿ ಸಂಘಕ್ಕೆ ಸೇರುವ ವಿದ್ಯಾರ್ಥಿಗಳು ಈ ಸಂಘದ ಎಲ್ಲಾ ಶಾಖೆಗಳಿಗೂ ಸೇರಬೇಕೆಂಬ ನಿಯಮವೊಂದಿರುವುದು.

ನಮ್ಮ ವಿದ್ಯಾರ್ಥಿಗಳ ಈ ಸಂಘವು ಹೀಗೆಯೇ ದಿನೇ ದಿನೇ ಹೆಚ್ಚಾದ ಉತ್ಸಾಹದಿಂದ ಮುಂದೆ ಮುಂದೆ ಬರಬೇಕೆಂದೂ, ಹಾಗೆ ಬರಬೇಕೆಂಬ ಮಹತ್ವಾಕಾಂಕ್ಷೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಇದ್ದು ಅವರು ಸ್ಥಿರಮನಸ್ಸಿಂದ ಕಾರ್ಯವನ್ನು ನೆರವೇರಿಸುತ್ತ ಬರುವರೆಂಬ ನಂಬುಗೆಯುಂಟಾದರೆ ಈ ನಮ್ಮ ವಿದ್ಯಾರ್ಥಿಸಂಘದವರ ಉಪಯೋಗಕ್ಕಾಗಿಯೇ ಪ್ರತ್ಯೇಕವಾದ ಒಂದು ತ್ರೈಮಾಸಿಕ ಪತ್ರಿಕೆಯನ್ನು ಹೊರಡಿಸುವುದಾಗಿಯೂ, ಆ ಪತ್ರಿಕೆಯಲ್ಲಿ ನಮ್ಮ ವಿದ್ಯಾವಿಚಾರಸಭೆಯಲ್ಲಿ ವಿದ್ಯಾರ್ಥಿಗಳು ಕೊಡುವ ಉಪನ್ಯಾಸಗಳೂ ಮತ್ತು ವಿದ್ಯಾರ್ಥಿಗಳಿಗೆ ಮುಖ್ಯವಾದ ವಿಚಾರಗಳೂ ಬರುವಂತೆ ಏರ್ಪಡಿಸುವೆನೆಂದೂ ಈ ಸಂಘದ ಅಧ್ಯಕ್ಷರೂ ಹಿತಚಿಂತಕರೂ ಆದ ನಮ್ಮ ಮಾನ್ಯಸೋದರಿಯರು ಅಭಯವನ್ನು ಕೊಟ್ಟಿರುವರು.[1] ಭಗವದನುಗ್ರಹವೂ ಮಾತಾಪಿತೃಗಳ ಆಶೀರ್ವಾದವೂ ದೊರೆತರೆ ದೊರಕಿದ್ದರೆ ಮೇಲೆ ಹೇಳಿದ ಪತ್ರಿಕೆಯು ಮುಂದಿನ ವರ್ಷದ ಚೈತ್ರದಿಂದಲೇ ಪ್ರಕಾಶವಾಗುವುದೆಂದು ಪೂರಾ ನಂಬಿರುವೆವು.

ಈ ನಮ್ಮ ಸಂಘದಲ್ಲಿ ಇದೇ ಪ್ರಥಮತಃ ಕೂಡಿರುವ ಈ ದಿನದ ಸಭೆಯಲ್ಲಿ ನಡೆಯುವ ವಿಚಾರಗಳು ನ್ಯೂನತೆಗಳುಳ್ಳದಾಗಿದ್ದರೂ ಮಕ್ಕಳ ಅಭ್ಯುದಯವನ್ನೇ ಕೋರುತ್ತಿರುವ ತಾವೆಲ್ಲರೂ ನಮ್ಮನ್ನು ಮನ್ನಿಸಿ, ಮುಂದಿನ ನಮ್ಮ ಕರ್ತವ್ಯಗಳನ್ನು ಸೂಚಿಸುವಿರೆಂದು ನಂಬಿ ತಮ್ಮೆಲ್ಲರ ಕೃಪಾಕಟಾಕ್ಷವನ್ನೂ ನಮ್ಮ ವಿದ್ಯಾರ್ಥಿವರ್ಗದವರ ಸಾನುಭೂತಿಯನ್ನೂ ಕೋರುತ್ತ ಇಂದಿನ ನಮ್ಮ ನಿವೇದನವನ್ನು ಇಷ್ಟಕ್ಕೆ ಪೂರ್ಣಗೊಳಿಸುವೆವು

ಇಂತು ನಿವೇದಿಸುವ—

ಕಾರ್ಯದರ್ಶಿ.

---

[1] ದಕ್ಷಿಣವಿದ್ಯಾರ್ಥಿಯ ತ್ರೈಮಾಸಿಕದಂತೆ ಇದನ್ನು ತ್ರೈಮಾಸಿಕವಾಗಿ ಹೊರಡಿಸಬೇಕೆಂದಿದ್ದಿತು. ಆದರೆ ತ್ರೈಮಾಸಿಕದಿಂದ ಅಷ್ಟೇನೂ ಸಹಾಯವಾಗುವುದಿಲ್ಲವೆಂದುತಿಳಿದು, ಇವರಿಗಾಗಿ ಸ್ವತಂತ್ರ ವಿಚಾರಗಳೊಳಕೊಂಡ "ದಂಡಧಾರಿ" ಎಂಬ ಪಕ್ಷ ಪತ್ರಿಕೆಯನ್ನು ಮುಂದಿನ ಚೈತ್ರದಿಂದಲೇ ಹೊರಡಿಸುವ ಯೋಚನೆಯಲ್ಲಿರುವುದು. ದೈವಾನುಗ್ರಹದಿಂದ ಅದು ಹೊರಡುವಂತಾದರೆ, ವಿದ್ಯಾರ್ಥಿಗಳಲ್ಲಿ ಕೆಲವರು ಸ್ವತಂತ್ರವಾಗಿ ರಚಿಸಿ, ಈಗ ನಂದಿನಿಯಲ್ಲಿ ಪ್ರಕಟವಾಗಬೇಕೆಂದು ಕಳುಹಿರುವ ಕಾದಂಬರಿಗಳನ್ನೂ ಅದರಲ್ಲಿಯೇ ಪ್ರಕಾಶಗೊಳಿಸುವೆವು. ಪ್ರಕೃತದಲ್ಲಿ ಇವರ ಉಪಯೋಗಕ್ಕಾಗಿ ನಂದಿನಿಯಲ್ಲಿ ಒಂದು ಫಾರಮ್ಮನ್ನು ಹೆಚ್ಚಿಸಿರುವುದು.

ಪ್ರೀತಿಯ ಪ್ರಾಧಾನ್ಯ

“ಸಮಸ್ತ ಜನನೀ ವಂದೇ ಚೈತನ್ಯ ಸ್ತನ್ಯದಾಯಿನೀಮ್ |
ಶ್ರೇಯಸಿಂ ಶ್ರೀನಿವಾಸಸ್ಯ ಕರುಣಾಮಿವ ರೂಪಿಣೀಮ್ ||”

“ಪ್ರೀತಿ” ಎಂದರೆ ಏನು? ಹೇಗಿದೆ? ಅದರ ಮಹತ್ವವಾವುದು? ಎಂಬುದೇ ನಮ್ಮ ಪ್ರಥಮ ವಿಚಾರವಾಗಿದೆ:— ಯಾವ ಒಂದು ಗುಣವು ಜಗತ್ತನ್ನೆಲ್ಲಾ ವ್ಯಾಪಿಸಿ, ಪ್ರಪಂಚವನ್ನೇ ತನ್ನಲ್ಲಿ ಅಡಕವಮಾಡಿಕೊಂಡಿರುವುದೋ, ಅಂತಹ ಅದ್ಭುತ ಅಪಾರ, ಮಹಿಮಾನ್ವಿತವಾದ ಗುಣವಾವುದೋ, ಅದೇ, ‘ಪ್ರೀತಿ’ ಎಂಬುದು. ಇದನ್ನೇ ಸೌಹೃದ, ಸ್ನೇಹ ಮೊದಲಾದ ಹೆಸರಿಂದಲೂ ಕರೆಯುವದುಂಟು.

ಈ ‘ಪ್ರೀತಿ’ಯೆಂಬುದು ಇಲ್ಲದ ಪ್ರಾಣಿಯೇ ಇಲ್ಲ. ಆದರೆ ಪ್ರೀತಿಯ ಸ್ವಭಾವವನ್ನೂ ಅದರ ಪರಿಣಾಮವನ್ನೂ ಪರಿವರ್ತನಾಕ್ರಮಗಳನ್ನೂ ಚೆನ್ನಾಗಿ ತಿಳಿದವರು ಮಾತ್ರ ವಿರಳರೆನ್ನಬಹುದು.

ಈ ಪ್ರೀತಿಯೆಂಬ ಗುಣವನ್ನು ಪ್ರಾಣಿಗಳು ಕಣ್ಣನ್ನು ಬಹು ಜಾಗರೂಕತೆಯಿಂದ ಕಾಪಾಡುವ ರೆಪ್ಪೆಯಿಂದಲೂ, ಕಯ್ಗಳಿಂದಲೂ, ಕಾಲ್ಗಳಿಂದಲೂ, ಬಾಲ, ರೆಕ್ಕೆ ಮೊದಲಾದ ಅಂಗಗಳಿಂದಲೂ ಪ್ರಾಣಿಗಳು ಪ್ರಥಮತಃ ಕಲಿಯಬೇಕಾಗಿದೆ.

ಪ್ರೀತಿಗೆ ಮುಖ್ಯವಾದುದು ತನ್ನ ಶರೀರ. ಅದಕ್ಕೂ ಮುಖ್ಯವಾದುದು ಬೇರೊಂದು ಇಲ್ಲವೆಂದೂ ಉಳಿದುದೆಲ್ಲವೂ ಅಂತರಾಂತರವುಳ್ಳವುಗಳೆಂದೂ ಹೇಳಿದರೆ ತಪ್ಪಾಗದು

ಸುಂದರವಾಗಿಯೂ ಇಹಲೋಕದ ಪರಲೋಕದ ಸುಖಸಾಧನಕ್ಕೆ ಮುಖ್ಯವಾದ ಮಾನುಷಜನ್ಮದ ಶರೀರವನ್ನೆಯಾದರೂ ವಿಚಾರವಿಮರ್ಶೆ ಮಾಡುತ್ತ ಹೋದರೆ ಮಜ್ಜೆ, ಮೇದಸ್ಸು, ಮಾಂಸ, ಕರಳು, ನರ, ಮೂಳೆ, ತೊಗಲು ಇವುಗಳಿಂದ ನಿರ್ಮಿತವಾದುದೆಂದೂ ನಾನಾಬಣ್ಣದ ತೊಗಲಿನಿಂದ ಮರೆಯಿಸಲ್ಪಟ್ಟಿರುವುದರಿಂದ ನೇತ್ರಾನಂದಕರವಾಗಿ ಕಾಣುವುದೆಂದೂ ತೊಗಲಿಗೆ ಅಪಾಯವು ಬಂದು ಕೆಟ್ಟರೆ ನೋಡುವುದಕ್ಕೆ ಕೂಡ ಅಸಹ್ಯಕರವಾದುದೆಂದೂ ಹೇಳಬಹುದು. ಇತರ ಕ್ರಿಮಿಕೀಟ ಮೊದಲಾದ ಅಲ್ಪವಾದ ಪ್ರಾಣಿಗಳನ್ನು ಹೇಳಬೇಕಾದುದೇ ಇಲ್ಲ.

ಈ ದೇಹದ ಆಕಾರವೂ ಗಾತ್ರವೂ ದೊಡ್ಡದಾಗಿರಲಿ ಚಿಕ್ಕದಾಗಿರಲಿ ಪುಷ್ಟವಾಗಿರಲಿ ಕಾಷ್ಟಕಡ್ಡಿಯಂತಿರಲಿ ಅದನ್ನೊಳಕೊಂಡಿರುವ ಜೀವಕ್ಕೆ ಆ ದೇಹವೇ ಸ್ವರ್ಗೀಯವಾದುದೆಂದೂ ಅದು ಹೋದರೆ ಸರ್ವನಾಶವಾಗುವುದೆಂಬ ಭಾವೋದಯವಾಗಿರುವುದರಿಂದ ಅತ್ಯಂತ ಪ್ರೀತಿಗೆ ಪಾತ್ರವಾಗಿರುತ್ತದೆ.

ಪೂರ್ವದಲ್ಲಿ ಒಬ್ಬ ಮಹಾತ್ಮನು ಸರ್ವಸಂಗಪರಿತ್ಯಾಗ ಮಾಡಿ ನಿರ್ಜನವಾದ ಅರಣ್ಯದಲ್ಲಿ ಏಕಾಂಗಿಯಾಗಿ ತಪಸ್ಸು ಮಾಡುತ್ತಿದ್ದನು. ಸೂರ್ಯವಂಶದ ರಾಜನೊಬ್ಬನು ಮೃಗಬೇಟೆಗಾಗಿ ರಥವನ್ನು ಹತ್ತಿ ಅತ್ಯಂತ ವೇಗದಿಂದ ಹೋಗುತ್ತಿದ್ದನು. ಮೂಳು ಮೊದಲಾದವುಗಳಿಂದ ಮುಚ್ಚಲ್ಪಟ್ಟಿದ್ದ ಈ ಮಹನೀಯನ ಇರವು ಕಾಣುತ್ತಿರಲಿಲ್ಲ. ರಥದ ವೇಗದಲ್ಲಿ ಅಚ್ಚಿನ ಕೊನೆಯು ಈ ಮಹರ್ಷಿಯ ಮಯ್ಯನ್ನು ಹರೆದುಕೊಂಡು ಹೋಯಿತು. ಆ ಯಾತನೆಯಿಂದ ಮಹರ್ಷಿಯ ಜ್ಞಾನವು ಪರಮಾತ್ಮನ ಪದಧ್ಯಾನವನ್ನು ಬಿಟ್ಟು ತನ್ನ ದೇಹದ ಮೇಲೆ ಬಿದ್ದಿತು. ಮುಂದೆ ನೋಡಿದನು. ರಾಜನು ಹೋಗುತ್ತಿದ್ದನು. ಆಗ ತಾನು ಕಯ್ಕೊಂಡಿದ್ದ ಸಾತ್ವಿಕ ತಪಸ್ಸನ್ನು ಬಿಟ್ಟು, ಪಡೆದರೆ ಈ ರಾಜನಿಗೆ ಸಮಾನವಾದ ರಾಜಭೋಗವನ್ನು ಅನುಭವಿಸುವುದಕ್ಕೆ ಯೋಗ್ಯವಾದ ದೇಹವನ್ನು ಪಡೆಯಬೇಕು. ಇಲ್ಲವೆ, ಈ ದೇಹವು ಹೋಗಬೇಕೆಂದು ರಾಜಸವಾದ ತಪಸ್ಸಿಗೆ ಉಪಕ್ರಮಿಸಿದನು. ಆ ತಪವು ಅತ್ಯಂತ ಕ್ರೂರವಾಗಿದ್ದಿತು. ಇದನ್ನು ಭಂಗಪಡಿಸಬೇಕೆಂದು ಲೋಕಹಿತೇಚ್ಛುವಾದ ಇಂದ್ರನು ಮಯ್ಯಲ್ಲವೂ ಕಚ್ಚೆಯಿಂದಲೂ ನಡುನಡುವೆ ತಲೆಯೆತ್ತುತ್ತಿರುವ ಹುಳುಗಳುಳ್ಳ ಹುಣ್ಣಿನಿಂದ ಕೂಡಿದ ಒಂದು ರೋಮವಾದರೂ ಇಲ್ಲದ ದೇಹವುಳ್ಳ ಒಂದು ನಾಯಿಯ ರೂಪವನ್ನು ತಾಳಿ ಮಹರ್ಷಿಯ ಮುಂದೆ ಬಂದು, ಹುಣ್ಣಿಗೆ ಮುತ್ತುವ ನೊಣದ ಕಡಿತವನ್ನೂ ತಲೆಯೆತ್ತುವ ಹುಳುಗಳ ಬಾಧೆಯನ್ನೂ ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಕ್ಷಣವಿರಾಮವಿಲ್ಲದೆ, ಬಾಯಿಯಿಂದ ಮಯ್ಯನ್ನು ಕಡಿದುಕೊಳ್ಳುತ್ತ ಸಂಭಾಷಣೆಗೆ ಉಪಕ್ರಮಿಸಿತು. ಋಷಿಯ ಅಭಿಪ್ರಾಯವನ್ನು ತಿಳಿದು,—“ನನ್ನ ಈ ದೇಹವನ್ನು ನೋಡು, ಒಂದು ಕ್ಷಣಕಾಲವಾದರೂ ವಿರಾಮಕೊಡದೆ ನೋಡಿಕೊಳ್ಳಬೇಕಾಗಿದೆ. ಸ್ವಜಾತಿಯ ಹೆಣ್ಣಾಗಲಿ ಗಂಡಾಗಲಿ ಮತ್ತೊಂದು ನಾಯಿ ನನ್ನ ಸಮೀಪವನ್ನು ಕೂಡ ಸೇರುವುದಿಲ್ಲ. ನಾನಾಗಿ ಹೋದರೆ ಓಡುವುದೇ

ಹೊರತು ನಿಲ್ಲುವುದಿಲ್ಲ. ಹೀಗಿದ್ದರೂ ಈ ದೇಹವು ನಾಶವಾಗಲೆಂಬ ಮನಸ್ಸು ನನಗಿಲ್ಲ. ಈ ದೇಹದಲ್ಲಿರುವ ಉಪಾಧಿಗಳನ್ನು ನಿವರ್ತಿಸಿಕೊಂಡು ಪರಿಪುಷ್ಟವಮಾಡಿಕೊಂಡು ಇಹಪರಕ್ಕೆ ಸಾಧಕವಮಾಡಿಕೊಳ್ಳಬೇಕೆಂದು ಆಶಿಪಡುತ್ತಿರುವೆನು. ಹೀಗಾದರೋ ನಾನು ಪುರುಷಾರ್ಥಗಳನ್ನು ನಿಗ್ರಹಿಸಿ ಬಹು ಕಾಲ ನಾನಾ ತಪಸ್ಸಿನಲ್ಲಿದ್ದು ಪಾಪವಿಮುಕ್ತನಾಗಿರುವೆ. ಇಂತಹ ನಿನಗೆ ದೇಹತ್ಯಾಗಮಾಡಬೇಕೆಂಬ ಮನಸ್ಸು ಹುಟ್ಟಿ ಲೋಕಕ್ಕೆಲ್ಲಾ ಬಾಧಕವಾಗಿರುವ ರಾಜಸ ತಪಸ್ಸಿಗೆ ಉಪಕ್ರಮಿಸುವುದು ಸರಿಯಲ್ಲವೆಂದು ಅನೇಕವಾದ ತತ್ತ್ವೋಪದೇಶವನ್ನು ಮಾಡಿ ನೀನು ಅಪೇಕ್ಷೆಯುಂತೆ ತನ್ನ ನಿಜದೇಹವನ್ನು ತೋರಿಸಿ ಮನಸ್ಸಂತೆ ಗೊಳಿಸಿ ಸತ್ಪಮಾರ್ಗಪ್ರವರ್ತಕನನ್ನಾಗಿ ಮಾಡಿ ಕಣ್ಮರೆಯಾದನು. ಸರ್ವಸಂಗ ಪರಿತ್ಯಾಗ ಮಾಡಿ ಧರ್ಮದಲ್ಲಿ ನೆಲೆಸಿದವನಲ್ಲಿ ಮುಮುಕ್ಷುವಿಗೆ ಕೂಡ ದೇಹಕ್ಕೆ ಸ್ವಲ್ಪ ಕಾಲ ನಿಲುವ ಮೇಲೆ ಧ್ಯಾನದಲ್ಲಿ ಅಡಗಿದ್ದ ಮನಸ್ಸು ದೇಹದ ಮೇಲೆ ತಿರುಗಿತು.

ದೇಹಸಂಬಂಧದಿಂದ ಹುಟ್ಟಿದ ಮಕ್ಕಳಲ್ಲಿರುವ ಪ್ರೀತಿಯೂ ತನ್ನ ದೇಹದ ಮೇಲಿರುವ ಪ್ರೀತಿಗೆ ಸಮನಾಗಿರುವುದು. ಇದನ್ನು ಸ್ನೇಹ ಅಥವಾ ಅಭಿಮಾನವೆಂದೇ ಹೇಳಬಹುದು. ಆ ಮಕ್ಕಳಿಗೆ ಉಪಾಧಿಯೇನಾದರೂ ಸಂಭವಿಸಿದರೆ ತನ್ನ ದೇಹದ ಸೌಖ್ಯದ ಕಡೆ ಗಮನ ಕೊಡದೆ ಮಕ್ಕಳ ಕ್ಷೇಮಚಿಂತನೆ ಅಧಿಕವಾಗುತ್ತದೆ. ತನ್ನ ಪೋಷಣೆಗೆ ಬಳಪಟ್ಟ ಪ್ರಾಣಿಗಳ ಮೇಲೆ ಪ್ರೀತಿಯಿರುತ್ತದೆ. ತನ್ನ ದೇಹಕ್ಕೆ ಸುಖವನ್ನುಂಟುಮಾಡುವ ವಸ್ತುಗಳಲ್ಲಿ ಪ್ರೀತಿಯಿರುವುದು. ಈ ಪ್ರೀತಿಗೆ ಸೌಹೃದವೆಂದು ಕೂಡ ಹೆಸರಿರುವುದು. ಸೀತಾದೇವಿಯು ರಾಮನಿಂದ ಪ್ರೇಷಿತನಾದ ಹನುಮಂತನಿಗೆ "ದೃತ್ಯವಾನೇ ಭವೇಸ್ನೇಹಃ ಸೌಹೃದಂ ನಾಸ್ತ್ಯಪಶ್ಯತಃ" (ನೋಡುತ್ತಿದ್ದರೆ ಪ್ರೀತಿಯಿರುತ್ತದೆ ನೋಡದಿದ್ದರೆ ಪ್ರೀತಿಯಿಲ್ಲವೆಂದು ಅಭಿಪ್ರಾಯ) ಪ್ರೀತಿಗೆ ವಿಷಯನಾದವನು ಕಣ್ಣಿಗೆ ಮರೆಯಾಗಿದ್ದರೆ ಪ್ರೀತಿಯಿಲ್ಲವೆಂದು ಹೇಳುವಂತಿಲ್ಲ. ಸರ್ವದಾ ಜ್ಞಾಪಕಕ್ಕೆ ಬರುತ್ತಲೇ ಇರುವುದು. ಸೀತಾದೇವಿಯು ಕಣ್ಮರೆಯ ದುಃಖಾತಿರೇಕದಿಂದ ಹೇಳಿದ ಮಾತಾಗಿದೆ.

ಹೆತ್ತ ತಾಯಿತಂದೆಗಳಲ್ಲಿ ಪ್ರೀತಿಯಿರುವುದು ಇದಕ್ಕೆ 'ಭಕ್ತಿ'ಯೆನ್ನುವರು. ಇದು ಕೇವಲ ಗೌರವದಿಂದ ಕೂಡಿದ ಪ್ರೀತಿಯಾಗಿರಬೇಕು. ತಮ್ಮನ್ನು ಜ್ಞಾನವಂತರನ್ನಾಗಿ ಮಾಡಿದ ಗುರುವಿನಲ್ಲಿಯೂ ಗೌರವಯುಕ್ತವಾದ ಪ್ರೀತಿಯೇ ಇರಬೇಕು. ಪ್ರಜೆಗಳನ್ನು ಈತಿಬಾಧೆಗೆ ಗುರಿಯಾಗದಂತೆ ಕಾಪಾಡುವ ಪ್ರಭುವಿನಲ್ಲಿಯೂ ಪ್ರೀತಿಯಿರುವುದು. ಅದಕ್ಕೆ ರಾಜಭಕ್ತಿ ಎಂದು ಹೆಸರುಂಟಾಗುವುದು. ಪ್ರಭುವು ಪ್ರಜೆಗಳಿಗೆ ತಂದೆಯಂತಿರುತ್ತಾನೆ. ಆತನಲ್ಲಿ ಪ್ರಜೆಗಳಿಗೆ ಪಿತೃವಿನಲ್ಲಿರುವ ಪ್ರೀತಿಯಿರಬೇಕು. ರಾಜನು ಪ್ರಜೆಗಳಲ್ಲಿ ಪುತ್ರರಲ್ಲಿರುವ ಪ್ರೀತಿಯುಳ್ಳವನಾಗಿರಬೇಕು. ಜಗದ್ರಕ್ಷಕನಾದ ಭಗವಂತನಲ್ಲಿ ಅದೇ ಪ್ರೀತಿಯಿರಬೇಕು. ಭಗವಂತನು ಪ್ರಪಂಚಕ್ಕೇ ತಂದೆಯಾಗಿಯೂ ತಾಯಿಯಾಗಿಯೂ ಸೋದರನಾಗಿಯೂ ಉತ್ತಮ ಸ್ನೇಹಿತನಾಗಿಯೂ ರಾಜಾಧಿರಾಜನಾಗಿಯೂ ಇರುವನು. ಆತನಲ್ಲಿರುವ ಪ್ರೀತಿಯು ಕೇವಲ ಭಕ್ತಿಯಾಗಿರುವುದು.

ಹಿರಿಯವರಲ್ಲಿ–ಬಡಸಾಧುಗಳಲ್ಲಿಯೂ ಪ್ರೀತಿಯಿದ್ದರೆ ಅದು ಸ್ವಭಾವವಾದ ಮಾನವಕರ್ತವ್ಯವೆಂಬ ಪರೋಪಕಾರಕರ್ತವ್ಯರೂಪವಾಗಿದೆ. ಈ ರೀತಿ ಸರ್ವಕ್ಕೂ ಕಾಲತ್ರಯ, ಅವಸ್ಥಾತ್ರಯದಲ್ಲಿಯೂ ನಿಯತವಾಗಿ ಪ್ರೀತಿಯಿದ್ದರೆ ಅದು ಮಾನವನಿಗೆ ಶ್ರೇಯಸ್ಕರವೇ ಆಗುವುದು, ಹಾಗಿಲ್ಲದೆ ಸಭಾಮುಖದಲ್ಲಿ ಪರೋಪಕಾರ ಮಾಡಬೇಕು ದೇಶಸೇವೆಗೆ ತನ್ನ ಸರ್ವಸ್ವವನ್ನೂ ಉಪಯೋಗಿಸಬೇಕು, ರಾಜಭಕ್ತಿ, ದೈವಭಕ್ತಿ, ಗುರುಭಕ್ತಿಗಳು ವೃಧವಾಗಿರಬೇಕು, ಶುಭಶೋಭನದಿಂದಾಗಲೀ ಉತ್ಸವಕರ್ಮದಿಂದಾಗಲೀ ಕಷ್ಟಾರ್ಜಿತವಾದ ದ್ರವ್ಯವನ್ನು ದುಂದು ವೆಚ್ಚಮಾಡಬಾರದು. ಅವುಗಳನ್ನು ಹಿತವಾಗಿ ದೇಶಸೇವೆಗೂ ಜ್ಞಾನಾಭಿವೃದ್ಧಿಕಾರ್ಯಕ್ಕೂ ಉಪಯೋಗಿಸಬೇಕೆಂದು ತನ್ನ ಅಧಿಕಾರ-ವಿದ್ಯಾ-ಪ್ರಾಬಲ್ಯದಿಂದ ವಾಗ್ವೈಭವವನ್ನು ಪ್ರದರ್ಶಿಸುವುದು ನಿಜವಾದ ಪ್ರೀತಿಯೆನಿಸಲಾರದು.

ಪ್ರಜೆಗಳನ್ನು ವಿದ್ಯಾವಂತರನ್ನಾಗಿಯೂ ಜ್ಞಾನವಂತರನ್ನಾಗಿಯೂ ಮಾಡುವುದು ಕೇವಲ ಮುಖ್ಯ ಕಾರ್ಯವೇ ಸರಿ! ಇದರಲ್ಲಿ ಪ್ರತಿಮಾನವನೂ ಶಕ್ತ್ಯಾನುಸಾರ ಸಹಾಯ ಮಾಡಬೇಕಾದುದು ಅವಶ್ಯಕವೇ ಸರಿ! ಎಂದರೆ, ಅದು ವಿದ್ಯಾಶಾಲೆಯಲ್ಲಿರುವ ಉಪಾಧ್ಯಾಯರಿಗೂ, ಕಾರ್ಯವು ಉಚಿತರೀತಿಯಲ್ಲಿ ನಡೆಯುತ್ತಿರುವುದೇ ಇಲ್ಲವೇ ಎಂಬುದನ್ನು ವಿಚಾರ ತೆಗೆದುಕೊಳ್ಳುವ ಅಧಿಕಾರಿಗಳು ಮೇಲಿನ ನಿಯಮಕ್ಕೆ ವಿನಾಯಿಸಲ್ಪಡಬೇಕೇ? ಹಾಗೆಂಬುದು ಅವನ್ಯಾಯವು?

ಸಾಮಾನ್ಯವಾದ ಇಂಗ್ಲಿಷು ಮತ್ತು ದೇಶಭಾಷೆಯನ್ನು ಕಲಿಸುವ ತಾಲ್ಲೂಕು ಪಾಠಶಾಲೆಗಳಲ್ಲಿ ೧೦—೧೨ ರೂ. ಸಂಬಳ ಪಡೆದು ವಿದ್ಯೆಯನ್ನು ಕಲಿಸುವ ಉಪಾಧ್ಯಾಯರೂ ೧೦೦—೧೫೦ ರೂ. ವರೆಗೂ ಸಂಬಳವನ್ನು ಪಡೆದು ವಿದ್ಯೆಯನ್ನು ಕಲಿಸುವ ಉಪಾಧ್ಯಾಯರೂ ಇರುವರು. ಇದರಂತೆಯೇ ಶಾಲೆಯ ಹೆಸರು ದೊಡ್ಡದಾದಂತಲ್ಲ ಸಂಬಳ

ಗಳೂ ಅಧಿಕವಾಗುತ್ತಲೆ ಇದೆ. ಅಧಿಕ ಸಂಬಳವನ್ನು ತೆಗೆದುಕೊಳ್ಳತಕ್ಕವರು ಆವರೀತಿ ವಿನಿಯೋಗಿಸುತ್ತಿರುವರು? ಅವರವರ ಸಂಸಾರಭಾರಕ್ಕನುಸಾರ ಸಂಬಳವನ್ನು ತೆಗೆದುಕೊಂಡು ಹೆಚ್ಚಿಗೆಗೆ ಕೈಬಿಡತಿದ್ದರೆ ಸರ್ಕಾರದವರು ವಿದ್ಯಾಭ್ಯಾಸಕ್ಕೆಂದು ದಾನ ಮಾಡುವ ದ್ರವ್ಯವೇ ಯಥೇಷ್ಟವಾಗಬಹುದು. ಹಾಗಿಲ್ಲದಿದ್ದರೆ ವಿದ್ಯಾರ್ಥಿಗಳು ರಿಕ್ತರಾಗಿರಲಿ, ಉಪಪನ್ನರಾಗಿರಲಿ ತರಗತಿಗೆ ತಕ್ಕಂತೆ ಫೀಜನ್ನು ಕೊಡಬೇಕೆಂಬ ನಿರ್ಬಂಧವು ಬರುವುದು ಸಹಜವಾಗಿರುತ್ತದೆ. ಉಪಪನ್ನರಲ್ಲದ ವಿದ್ಯಾರ್ಥಿಗಳಿಗೆ ವಿದ್ಯೆಯಲ್ಲಿ ಆಸಕ್ತಿಯಿದ್ದರೆ ಅವರಿಗೆ ನಿರಾಶೆಯನ್ನುಂಟು ಮಾಡುವುದೇ ಹೊರತು ಉತ್ಸಾಹವನ್ನುಂಟು ಮಾಡುವುದಿಲ್ಲ. ಘನಸರ್ಕಾರದವರು ಪ್ರಜೆಗಳಲ್ಲಿ ಪುತ್ರಸಮಪ್ರೀತಿಯಿಂದ ಧಾರಾಳವಾಗಿ ಮಾಡುವ ದಾನರೂಪವಾದ ಪ್ರೀತಿಯ ಪರಿಣಾಮವೇನಾಯಿತೆಂಬುದನ್ನು ಅವರೇ ಯೋಚಿಸಬೇಕು.

ಉಪಪನ್ನರು ತಮ್ಮ ಮಕ್ಕಳ ಮಾತ್ರ ಅನುಕೂಲವಿಲ್ಲದ ಇತರ ಮಕ್ಕಳ ವಿದ್ಯಾಭಿವೃದ್ಧಿಗೆ ಸಹಾಯ ಮಾಡುವುದು ಯುಕ್ತವೇ ಸರಿ. ಅವರ ಉದ್ದೇಶವನ್ನು ಉಪಾಧ್ಯಾಯರು ಅನುಮೋದಿಸಿ, ಅವರು ಕೂಡ ತೃಪ್ತರಾಗುತ್ತ ಬಂದರೆ ಘನಸರ್ಕಾರದ ಪ್ರೀತಿ, ಉಪಪನ್ನರ ಪ್ರೀತಿ ಇವೆರಡಕ್ಕಿಂತಲೂ ಉಪಾಧ್ಯಾಯರ ಪ್ರೀತಿಯೇ ಹೆಚ್ಚಾಗುತ್ತದೆ. ಈ ಶಕ್ತಿತ್ರಯವು ಒಂದಾಗಿ ಸೇರಿದ್ದರೆ ಇಲ್ಲಿ ಕಾರ್ಯಸಾಧನಕ್ಕೆ ಕೊರತೆಯೇನು? ದೃಷ್ಟಾಂತಕ್ಕೆಂದರೆ, ಪೂನಾ ಪಟ್ಟಣದಲ್ಲಿರುವ ಫರ್ಗ್ಯುಸನ್ ಕಾಲೇಜನ್ನು ತೆಗೆದುಕೊಳ್ಳೋಣ! ಅಲ್ಲಿನವರು ಘನಸಂಪತ್ತಿನವರೆಂದು ಹೇಳುವಂತಿಲ್ಲ. ಹಾಗಿದ್ದರೂ ತಮ್ಮ ಜೀವನೋಪಾಯಕ್ಕೆ ಬೇಕಾದುದಕ್ಕಿಂತಲೂ ಹೆಚ್ಚು ವೇತನವನ್ನು ಅಪೇಕ್ಷಿಸುವುದಿಲ್ಲ. ಇದಲ್ಲವೇ ಪ್ರೀತಿ?

ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳ ಉಪಪನ್ನತೆಯನ್ನು ನೋಡಿ ಅವರು ಕೊಡಬೇಕಾದ ಸಂಬಳವನ್ನು (School-fee) ನಿರ್ಣಯ ಮಾಡಿಕೊಳ್ಳುವುದನ್ನು ಪ್ರಧಾನೋಪಾಧ್ಯಾಯರು ಇಟ್ಟುಕೊಂಡು ಜಾತಿ-ಮತ-ಕುಲ-ವ್ಯವಿಡದೆ ಎಲ್ಲರೂ ವಿದ್ಯಾಧಿಕಾರಿಗಳೆಂದು ಭಾವಿಸುವುದೇ ನಿಜವಾದ ಪ್ರೀತಿಯೆನಿಸುವುದು. ಹೆತ್ತತಾಯಿಗೆ ಒಂದು, ಎರಡು, ಮೂರು ಹೊತ್ತು ಆಹಾರ ದೊರೆಕದಿದ್ದರೆ, ತನ್ನ ಪ್ರಾಣಕ್ಕಿಂತಲೂ ದೇಹಕ್ಕಿಂತಲೂ ಅತ್ಯಂತ ಪ್ರೀತಿಪಾತ್ರವಾದ ಶಿಶುವಿನ ರೋದನವನ್ನು ಕೂಡ ಲಕ್ಷಿಸುವವಳಾಗುವುದಿಲ್ಲ. ವಿದ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರೀತಿ ಬರಬೇಕಾದರೆ ಅನ್ನಕ್ಕೆ ಅಭಾವವಿಲ್ಲದೆ ದ್ರವ್ಯಸಂಬಂಧವಾದ ತೊಂದರೆ ಇರಬೇಕು. ಉಪಪನ್ನರ ಮಕ್ಕಳಿಗೆ ಈ ಚಿಂತೆಯಿಲ್ಲ. ಉಪಪನ್ನರಲ್ಲದೆ ಗ್ರಾಮಾಂತರವಾಸಿಗಳೇ ಈ ರೀತಿಯಾದ ತೊಂದರೆಯನ್ನು ಅನುಭವಿಸುತ್ತಾರೆ. ಆದರಲ್ಲಿಯೂ ಜಾತಿ ಮತಭೇದವೇನೂ ಇಲ್ಲ. ಅಂತಹವರಿಗೆ ಉಪಾಧ್ಯಾಯರೇ ತಾಯಿತಂದೆಯರಾಗಬೇಕು. ಅವರಿಗಲ್ಲದೆ ವಿದ್ಯಾರ್ಥಿಯ ಯೋಗ್ಯತೆಯೂ ವಿದ್ಯೆಯಲ್ಲಿ ಆಸಕ್ತಿಯೂ ಮತ್ತಾರಿಗೆ ತಿಳಿಯಬೇಕು? ಅವರು ವಿದ್ಯಾರ್ಥಿಗಳಲ್ಲಿ ಪುತ್ರನಿರ್ವಿಶೇಷ ಪ್ರೀತಿಯುಳ್ಳವರಾದರೆ ಪ್ರೀತಿಯು ಫಲಿಸುವುದು.

ಶ್ರೀಮಂತರೂ ದೇಶಸೇವಾತತ್ಪರರೂ ಆದ ಮಹನೀಯರು ಅನೇಕರು ದೇಶದ ವಿದ್ಯಾಭಿವೃದ್ಧಿಗಾಗಿ ದ್ರವ್ಯವನ್ನು ದಾನ ಮಾಡಿರುವರು ಮಾಡುತ್ತಲಿರುವರು. ಅವರಲ್ಲಿ ಉಪಪನ್ನರ ಮಕ್ಕಳು ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟಿರುವ ವಿದ್ಯಾರ್ಥಿಮಂದಿರದಲ್ಲಿ ತಮ್ಮ ಊಟ ಮೊದಲಾದುದಕ್ಕೆ ತಗಲುವ ವೆಚ್ಚವನ್ನು ಕೊಟ್ಟು ಸುಖದಿಂದ ವಿದ್ಯಾಭ್ಯಾಸ ಮಾಡುತ್ತಾರೆ. ಉಪಪತ್ತಿಯಿಲ್ಲದ ವಿದ್ಯಾರ್ಥಿಗಳು ರಾಜಧಾನಿಯಲ್ಲಿ ಧರ್ಮಾತ್ಮರಾದವರ ಮನೆಯಲ್ಲಿ ವಾರಕ್ಕೊಂದು ಹೊತ್ತೋ, ದಿನವೋ, ವಾರಪೂರ್ತಿಯಾಗಿಯೊ ಊಟಮಾಡಿಕೊಂಡು ವಿದ್ಯಾಭ್ಯಾಸ ಮಾಡುತ್ತಿರುವರು.

ಘನಸರ್ಕಾರದವರು ಪ್ರತಿಯೊಂದು ತರಗತಿಯಲ್ಲಿಯೂ ವಿದ್ಯಾರ್ಥಿಗಳು ಕೊಡಬೇಕಾದ ಸಂಬಳಕ್ಕೆ ಕಾಲವನ್ನು ಗೊತ್ತುಮಾಡಿಯೂ ಇರುವರು. ಉಪಪನ್ನರಾದ ವಿದ್ಯಾರ್ಥಿಗಳು ತಮ್ಮ ಸಂಬಳವನ್ನು ಮುಂದಾಗಿಯೇ ಸಲ್ಲಿಸುವರು. ಸಾಮಾನ್ಯರು ಎಂದರೆ ಶ್ರಮದಿಂದ ಜೀವನೋಪಾಯವನ್ನು ಜರಗಿಸುವ ಕುಟುಂಬದ ವಿದ್ಯಾರ್ಥಿಗಳು ಉಪಾಧ್ಯಾಯರಿಂದ ಕೇಳಿಸಿಕೊಂಡ ಮೇಲೆ ಅವರು ಕೊಡುವ ಅವಧಿಯಲ್ಲಿ ತಂದೊಪ್ಪಿಸುವರು. ಅಷ್ಟಕ್ಕೆ ಚೈತನ್ಯವಿಲ್ಲದ ವಿದ್ಯಾರ್ಥಿಗಳು ಜುಲ್ಮಾನೆ, ಬೆಂಚಿನ ಮೇಲೆ ನಿಲ್ಲುವುದು, ಛಡಿಯೇಟನ್ನು ತಿನ್ನುವುದು ಕಡೆಗೆ ಹೊರಗೆ ತಳ್ಳಲ್ಪಡುವುದು, ಇವೇ ಮೊದಲಾದ ಶಿಕ್ಷೆಯನ್ನು ಅನುಭವಿಸಿ ಅನಂತರ ದುರದೃಷ್ಟವನ್ನು ಹೊಂಗೆಡಹಿ ಯಾತನೆಮಾಡಿ ತಂದು ಉಪಾಧ್ಯಾಯರಲ್ಲಿ ಒಪ್ಪಿಸಿ ಕ್ಷಮೆ ಬೇಡಿ, ಮತ್ತೆ ಶಾಲೆಗೆ ಹೋಗಿ ಸೇರುತ್ತ ಪ್ರತಿತಿಂಗಳೂ ಈ ರೀತಿ ಕಾಲವನ್ನು ಕಳೆಯುವರು. ಸರ್ಕಾರದವರು ದಾನಮಾಡುವ ಅಪಾರ ದ್ರವ್ಯವಾಗಲಿ, ದೇಶಭಕ್ತರು ಮಾಡಿದ ದ್ರವ್ಯದ ವೃದ್ಧ್ಯಂಶವಾಗಲಿ ಇಂತಹ ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೊದಗುವ ಸಂಭವವು ಕಾಣಲಿಲ್ಲ. ನಿಜವಾಗಿಯೂ ಉಪಾಧ್ಯಾಯರುಗಳು ತಮ್ಮ ಶಿಷ್ಯವರ್ಗಕ್ಕೆ ಸೇರಿರುವ ವಿದ್ಯಾರ್ಥಿಗಳಲ್ಲಿ ಪುತ್ರಸದೃಶ ಪ್ರೀತಿಯುಳ್ಳವರಾಗಿಯೇ ಇರುವರು. ಆದರೂ ಮೇಲೆ ಹೇಳಿದ ಬಡವಿದ್ಯಾರ್ಥಿಗಳ ಮೇಲಿನ ಪ್ರೀತಿಯು

ಕಾಲಕ್ಕೆ ಸರಿಯಾಗಿ ಸಂಬಳವನ್ನು ಕೊಡದೆ ತಪ್ಪಿದ ಕ್ಷಣವೇ ವಾಯಿದಾಗಿ ಅವರನ್ನು ನಿರ್ದಯರನ್ನಾಗಿ ಮಾಡುವುದು. ಇದೆಂತಹ ಪ್ರೀತಿಯ ಪರಿಣಾಮವೋ ?

ಪ್ರತಿಯೊಬ್ಬ ವಿದ್ಯಾರ್ಥಿಯ ಉಪಪತ್ತಿಯೂ ವಿದ್ಯಾಭ್ಯಾಸದಲ್ಲಿ ಆಸಕ್ತಿಯೂ ಮುಖ್ಯೋಪಾಧ್ಯಾಯರಿಗೂ ಸಹಾಯೋಪಾಧ್ಯಾಯರಿಗೂ ತಿಳಿದೇತಿಳಿವುದು. ಅವರ ಪ್ರೀತಿಯು ಮಾರ್ಪಡದಿದ್ದರೆ ಉಪಪತ್ತಿಯಿಲ್ಲದ ಬಡವಿದ್ಯಾರ್ಥಿಯೂ ನಿಜವಾದ ವಿದ್ಯಾರ್ಥಿಯಾಗಿ, ವಿದ್ಯಾರ್ಥಿಗಳಲ್ಲಿರಬೇಕಾದ ನೈಜವಾದ ಗುಣಗಳುಳ್ಳವರಾಗಿದ್ದರೆ, ಅಂತಹರಿಗೆ ಮೇಲೆ ಹೇಳಿದ ಉಪಾಧಿಗಳು ತಟ್ಟದಂತೆ ಅವುದಾದರೂ ಒಂದು ವಿಧದಿಂದ ಆ ವಿದ್ಯಾರ್ಥಿಗಳನ್ನು ಕಾಪಾಡುವುದಕ್ಕೆ ಆ ನಿಷ್ಕಲ ಪ್ರೀತಿಯುಳ್ಳ ಉಪಾಧ್ಯಾಯರು ಸಮರ್ಥರೇ ಆಗಿರುವರು.

(ಸಶೇಷ)

—ವೃತ್ತಮಣಿ ವೆಂಕಟ ಕೃಷ್ಣಯ್ಯಂಗಾರ್.

ಕಾಲದ ಉಪಯೋಗ *

"ಮಹನೀಯರುಗಳಿರಾ ಮತ್ತು ಸ್ನೇಹಿತರುಗಳಿರಾ!

ನಾನು ಈ ದಿವಸ ಕಾಲೋಪಯೋಗದ ವಿಷಯವಾಗಿ ಉಪನ್ಯಾಸವನ್ನು ಕೊಡಬೇಕೆಂದು ಹಿರಿಯರಿಂದ ಪ್ರೇರಿತನಾಗಿರುವುದರಿಂದ, ಗುರುಮುಖದಿಂದ ತಿಳಿದುಕೊಂಡಿರವುದನ್ನು ನನ್ನ ಬುದ್ಧಿಗೆ ತಕ್ಕಮಟ್ಟಿಗೆ ನಿವೇದಿಸಲುತ್ಸುಕನಾಗಿರುವೆನು. ತಾವೆಲ್ಲರೂ ಸಾವಧಾನದಿಂದ ಕೇಳಿ ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸುವೆನು.

ಮೊದಲು ನಾವು "ಕಾಲೋಪಯೋಗವೆಂದರೇನು?" ಎಂಬುದನ್ನು ತಿಳಿದುಕೊಳ್ಳಬೇಕು ಕಾಲೋಪಯೋಗವೆಂದರೇನು?— ನಾವು ಕಾಲವನ್ನು ಹೇಗೆ ವೆಚ್ಚ ಮಾಡಬೇಕು? ಎಂಬುದನ್ನು ತಿಳಿದು ಅದರಂತೆ ನಡೆವುದಕ್ಕೆ "ಕಾಲೋಪಯೋಗ"ವೆಂದು ಹೆಸರು. ಕಾಲವೆಂಬುದು, ದೇವರು ನಮಗೆ ಕೊಟ್ಟಿರುವ ವಸ್ತುಗಳಲ್ಲಿ ಅತ್ಯಂತ ಬೆಲೆಯುಳ್ಳದು, ಅಲ್ಲದೆ ಅದು ಬಹು ಜಾಗ್ರತೆಯಾಗಿ ಕಳೆದುಹೋಗತಕ್ಕದು. ಅನೇಕ ಪದಾರ್ಥಗಳು ಹೋಗಿ ಮತ್ತೆ ಹಿಂತಿರುಗಿ ಬರುತ್ತವೆ. ಆದರೆ ಕಳೆದು ಹೋದಂತಹ ಕಾಲವು ತಿರುಗಿ ಹಿಂತಿರುಗಿ ಬರುವುದಿಲ್ಲ. ನಮ್ಮ ವಸ್ತುವು ಯಾವುದಾದರೂ ಹೋದರೆ ಅದಕ್ಕೆ ಬಲು ವೇಚಾಡುತ್ತೇವೆ. ದಿನಗಳು ಒಂದಾದ ಮೇಲೊಂದು ಕಳೆದು ಹೋಗುವುದನ್ನು ನಾವು ಲಕ್ಷ್ಯಮಾಡುವುದೇ ಇಲ್ಲ. ಇದು ಬಲು ತಪ್ಪು. ಕಾಲವೆಂಬುದು ನಿಧಿಗೆ ಸಮಾನವು. ಇದಕ್ಕೆ ಬೆಲೆ ಕಟ್ಟುವುದಕ್ಕೇ ಆಗುವುದಿಲ್ಲ. ಈ ಅಂಶವನ್ನರಿಯದೆ ಅನೇಕರು ಕಾಲವನ್ನು ವ್ಯರ್ಥವಾಗಿ ಕಳೆಯುವರು. ಅದರಿಂದ ತುಂಬಾ ನಷ್ಟ. ಆದುದರಿಂದ ನಾವು ಕಯ್ಯಲ್ಲಾಗುವ ಮಟ್ಟಿಗೂ ಕಾಲವನ್ನು ವ್ಯರ್ಥವಾಗಿ ಕಳೆಯದೆ ಅದರಿಂದ ಉಪಯೋಗವನ್ನು ಪಡೆಯಬೇಕೆಂಬುದೇ ಕಾಲದ ಉದ್ದೇಶವು ಹೀಗೆ ಮಾಡುವುದಕ್ಕೇ ಕಾಲೋಪಯೋಗವೆಂದು ಹೆಸರು ಒಪ್ಪುವುದು.

"ಮುತ್ತಿಗಿಂತಲೂ ಹೊತ್ತು ಉತ್ತಮ" ಎಂದರೆ, ನಾವು ಈಗ ಒಂದು ಮುತ್ತನ್ನು ಇಟ್ಟುಕೊಂಡಿದ್ದು ಅದು ಹಾಳಾಗಿ ಹೋದರೆ ಮತ್ತೊಂದು ದಿವಸ ಇನ್ನೊಂದು ಮುತ್ತನ್ನು ತೆಗೆದುಕೊಳ್ಳುವೆವು ಆದರೆ ಕಾಲವು ಕಳೆದು ಹೋದ ಮೇಲೆ ಪುನಃ ಅದು ಹಿಂತಿರುಗಿ ಬರುವುದಿಲ್ಲ. ಆದುದರಿಂದ ಎಲ್ಲಾ ಪದಾರ್ಥಕ್ಕಿಂತಲೂ ವೇಳೆಯು ಅತ್ಯಂತ ಉತ್ತಮವಾದುದು.

೧. "ವೇಳೆಯ ಲಘುತ್ವವು:— ನಮ್ಮ ಜೀವಮಾನವು ಕಾಲವಲ್ಲದೆ ಬೇರೆಯಲ್ಲ. ನಮಗೆ ರೋಗವು ಸಂಭವಿಸಿದಾಗ ನಾವು ನಡುಗುವೆವು. ಮತ್ತು ರೋಗವು ವಾಸಿಯಾಗುವುದಕ್ಕೆ ಪಡಬಹುದಾದ ಕಷ್ಟಗಳನ್ನೆಲ್ಲ ಪಡುವೆವು. ನಾವು ಜೀವಿಸುವ ಗಂಟೆಗಳು, ದಿನಗಳು ಇವುಗಳೆಲ್ಲಾ ಕೂಡಿದರೆ ನಮ್ಮ ಜೀವಮಾನವಾಗುವುದು. ಇದನ್ನು ಮರೆತು ಒಂದು ನಿಮಿಷವಾಗಲಿ, ಘಂಟೆಯಾಗಲಿ, ದಿನವಾಗಲಿ, ತಿಂಗಳಾಗಲಿ,

* ಈ ಉಪನ್ಯಾಸವು ವಿದ್ಯಾರ್ಥಿಸಂಘದ ಮೊದಲನೆ ಸಭೆಯಲ್ಲಿ ಕೊಡಲ್ಪಟ್ಟ ಉಪನ್ಯಾಸಗಳಲ್ಲಿ ಒಂದಾಗಿರುವುದು. ಈ ದಿನ ಕೊಟ್ಟ ಆರು ಉಪನ್ಯಾಸಗಳಲ್ಲಿ ಕನ್ನಡಭಾಷೆಯಲ್ಲಿ ಇದು ಉಪಯುಕ್ತವೂ ಉತ್ತಮವೂ ಆದುದರಿಂದ ಇದನ್ನು ಮಾತ್ರವೇ ಇಲ್ಲಿ ಕೊಡಲಾಯಿತು ಇಂಗ್ಲಿಷ್ ಭಾಷೆಯ ಉಪನ್ಯಾಸಗಳಲ್ಲಿ ಜಿ. ಎಸ್. ನಾರಾಯಣನ್ ಎಂಬ ವಿದ್ಯಾರ್ಥಿಯ ಉಪನ್ಯಾಸವು ಅತ್ಯಂತ ದೀರ್ಘವಾಗಿರುವುದರಿಂದ ಅದನ್ನಿಲ್ಲಿ ಕೊಡಲಾಗಲಿಲ್ಲ.

ಈಗ ಪ್ರಕಟಿಸಿರುವ ಈ ಉಪನ್ಯಾಸವು ಪ್ರೌಢವಾಗಿಯೂ ಅನೇಕ ಉಪಯುಕ್ತಾಂಶಗಳೊಳಕೊಂಡಿರುವುದಾಗಿಯೂ ಇರುವುದನ್ನು ನೋಡಿ. ಇದನ್ನು ಅನುಭವಶಾಲಿಗಳಾದ ಪಂಡಿತರಾರೋ ಹೇಳಿರುವರೆಂದು ಧಾರಾಳವಾಗಿ ಹೇಳಬಹುದಾಗಿದ್ದರೂ ಅದನ್ನು ಪ್ರಯಾಸಪಟ್ಟು ಶೇಖರಿಸಿ ಅದರಲ್ಲಿ ಸ್ವಬುದ್ಧಿಯನ್ನೂ ತಕ್ಕಂತೆ ವಿನಿಯೋಗಿಸಿ ಓದಿದುದಕ್ಕಾಗಿ ಈ ಉಪನ್ಯಾಸವನ್ನೋದಿದ ವಿದ್ಯಾರ್ಥಿಯನ್ನು ನಾವು ಅಭಿನಂದಿಸುತ್ತೇವೆ.

ಸಂ. ಸಂ.

ವರ್ಷವಾಗಲಿ ಎಷ್ಟು ಸ್ವಲ್ಪ ಕಾಲವನ್ನೂ ವ್ಯರ್ಥವಾಗಿ ಕಳೆದರೆ ಅಷ್ಟು ಭಾಗವು ನಮ್ಮ ಜೀವಮಾನದಿಂದ ನಷ್ಟವಾಗಿ ಹೋದಂತೆ ತಿಳಿಯಬೇಕು. ಆದುದರಿಂದಲೇ ಕಾಲವನ್ನು ವ್ಯರ್ಥವಾಗಿ ಕಳೆಯುವುದೂ ಒಂದು ಬಗೆಯ ಆತ್ಮಹತ್ಯವೆನ್ನಿಸುವುದು. ಇದನ್ನು ತಿಳಿದು ನಾವು ಕಾಲವನ್ನು ಕಳೆಯಬೇಕು. ಮತ್ತು ಆಯುಷ್ಯದ ವೇಳೆಯು ಅತ್ಯಂತ ಅಮೌಲ್ಯವಾದುದು. ಅದನ್ನು ಆದಷ್ಟು ಯೋಗ್ಯರೀತಿಯಲ್ಲಿ ಉಪಯೋಗಿಸತಕ್ಕದ್ದು. ಆದರೆ ವೇಳೆಯು ಬಹಳವಾಗಿರುವುದು, ಎಂದ ಮೇಲೆ ಇಂತಹ ಬಹಳ ವೇಳೆಯಲ್ಲಿ ಆರೇಳು ನಿಮಿಷಗಳು ವ್ಯರ್ಥವಾದರೇನಾಯಿತು? ಹೀಗೆನ್ನುವವರೇ ಬಹಳ! ಇದು ತಪ್ಪು ತಿಳಿವಳಿಕೆಯಲ್ಲವೆ? ಕಾಲವು ಅನಂತವಿದ್ದರೂ ಅದರಲ್ಲಿ ಎಷ್ಟು ಭಾಗವು ನಮ್ಮ ಪಾಲಿಗೆ ಬರುವುದೆಂಬುದನ್ನು ವಿಚಾರಿಸುವ: - ನಮ್ಮ ಜೀವಮಾನವು ಅತ್ಯಲ್ಪವಾದುದು. ಹೇಗೆಂದರೆ, ಸಾಮಾನ್ಯವಾಗಿ, ಮನುಷ್ಯನು ಸುಮಾರು ಅರವತ್ತು ಇಲ್ಲವೆ ಎಪ್ಪತ್ತು ವರ್ಷಗಳಿಗಿಂತ ಹೆಚ್ಚು ಬದುಕಿರುವದು ಅಪರೂಪ! ಈ ಅವಧಿಯಲ್ಲಿ ಅರ್ಧಕ್ಕೆ ಹೆಚ್ಚು ಪಾಲು ನಿದ್ರೆಯಲ್ಲಿ ಹೋಗುವುದು. ಕೆಲವು ಭಾಗವು ಆಹಾರ-ವಿಹಾರಗಳಲ್ಲಿಯೂ ಕೆಲವು ಊಟ-ಉಪಚಾರಗಳಲ್ಲಿಯೂ ಮತ್ತೆ ಕೆಲವು ಉಡಿಗೆತೊಡಿಗೆ ಮುಂತಾದುವುಗಳಲ್ಲಿಯೂ ಕಳೆದು ಹೋಗುವುವು. ಈ ಎಲ್ಲಾ ಭಾಗಗಳನ್ನು ಕಳೆದುಬಿಟ್ಟರೆ ಉಳಿದ ಭಾಗವು ಸುಮಾರು ಹತ್ತಿಪ್ಪತ್ತು ವರ್ಷಗಳಿಗಿಂತ ಹೆಚ್ಚಿಲ್ಲ. ಎಂದ ಮೇಲೆ ನಮ್ಮ ಪಾಲಿಗೆ ಬಂದ ಅತ್ಯಲ್ಪಕಾಲದ ಕಾಲಧನವನ್ನು, ಬಲುಬೆಲೆಯುಳ್ಳದ್ದಾದುದರಿಂದ ಇವುಗಳನ್ನು ನಾವು ಎಂದೂ ವ್ಯರ್ಥವಾಗಿ ಕಳೆದುಕೊಳ್ಳದಂತೆ ಜಾಗರೂಕರಾಗಿರತಕ್ಕದ್ದು.

೨. "ವರ್ತಮಾನಕಾಲದ ಸದ್ವ್ಯಯವು:-- ವೇಳೆಯ ಸದ್ವ್ಯಯವೇ ಸುಖಪ್ರಾಪ್ತಿಯ ಮುಖ್ಯ ಸಾಧನವಾದುದರಿಂದ ಹೋದಂತಹಕಾಲ, ನಡೆಯುವಕಾಲ ಹಾಗೂ ಬರುವ ಕಾಲ—ಎಂದರೆ, ಭೂತ-ವರ್ತಮಾನ-ಭವಿಷ್ಯತ್ಕಾಲಗಳಲ್ಲಿ ನಾವು ಮಾಡತಕ್ಕ ಕಾರ್ಯಗಳು ಆವುವೆಂಬುದನ್ನು ವಿಚಾರ ಮಾಡುವ. ವರ್ತಮಾನಕಾಲದ ಬಗೆಗೆ ಏನಾದರೂ ವ್ಯವಸ್ಥೆ ಮಾಡಬಹುದು. ಆದರೆ, ಭೂತಕಾಲ ಎಂದರೆ ನಮ್ಮ ಕೈಮೀರಿದಂಥ ಕಾಲವು, ಭವಿಷ್ಯತ್ಕಾಲ ಎಂದರೆ ಮುಂದೆ ಏನಾದೀತು ಎಂಬುದನ್ನು ಹೇಳಲಿಕ್ಕೆ ಬರದಂಥ ಕಾಲವು. ಎಂದ ಬಳಿಕ, ಭೂತ-ಭವಿಷ್ಯತ್ಕಾಲಗಳ ವಿಷಯವಾಗಿ ಏನಾದರೂ ವ್ಯವಸ್ಥೆ ಮಾಡಬೇಕೆಂದು ಹೇಳುವುದು ದಡ್ಡತನವಲ್ಲವೇ!—ಎಂಬ ಸಂದೇಹವು ಮನಸ್ಸಿನಲ್ಲಿ ಬರುವುದು ಸ್ವಾಭಾವಿಕವೇ ಸರಿ. ಆದರೆ, ವಿಚಾರ ಮಾಡಲಾಗಿ ಇವುಗಳ ವಿಷಯವಾಗಿ ಯೋಗ್ಯವಾದ ಯೋಜನೆ ಮಾಡಬಹುದೆಂದು ಕಂಡುಬರುವುದು. ವರ್ತಮಾನ ಕಾಲದ ವಿಷಯವಾಗಿ ವಿಚಾರಿಸತಕ್ಕದ್ದೇನೆಂದರೆ, ಮನುಷ್ಯನ ಬುದ್ಧಿ ಹಾಗೂ ಶರೀರ ಸಾಮರ್ಥ್ಯವು ಅಲ್ಪವಾಗಿರುವುದು. ಆಯುಷ್ಯದ ಮರ್ಯಾದೆಯು ತೀರ ಕಡಿಮೆ. ಜ್ಞಾನದ ಮರ್ಯಾದೆಯಂತೂ ಅತಿ ವಿಸ್ತಾರವಾಗಿರುವುದು. ಎಂದ ಮೇಲೆ ಅವನ ಆಯುಷ್ಯದ ಮರ್ಯಾದೆಗೂ ಜ್ಞಾನದ ಮರ್ಯಾದೆಗೂ ಸರಿಬೀಳುವುದೇ ಇಲ್ಲ. ಆದುದರಿಂದ ಅವನು ಸರ್ವಜ್ಞನಾಗಬೇಕೆಂಬ [illegible] ಹೆಚ್ಚಿನದನ್ನು ಬಿಟ್ಟು ತನಗೆ ಉಪಯುಕ್ತವಾದ ಜ್ಞಾನವನ್ನೇ ಸಂಪಾದಿಸುತ್ತಿರಬೇಕು. ಇದಕ್ಕಾಗಿ ಅವನು ತನ್ನ ಕರ್ತವ್ಯಗಳನ್ನು ಬಿಟ್ಟುಬಿಡದೆ ಸಕಾಲದಲ್ಲಿ ಮಾಡಬೇಕು. ಇಂದು ಮಾಡುವುದಕ್ಕೆ ನಾಳೆಯೆನ್ನಬಾರದು. ದೇಶಕಾಲಗಳನ್ನರಿತು ಮಾಡುವುದನ್ನು ಕ್ರಮವಾಗಿಯೂ ವ್ಯವಸ್ಥಿತವಾಗಿಯೂ ಮಾಡತಕ್ಕದ್ದು. ಅವ್ಯವಸ್ಥಿತವಾಗಿ ಮಾಡಿದ ಕೆಲಸವು ಎಂದಿಗೂ ಕೊನೆಗಾಣದೆಂಬುದನ್ನು ನೆನೆಪಿನಲ್ಲಿಡತಕ್ಕದ್ದು; ಕಷ್ಟಕರವಾಗುವ ಕೆಲಸವನ್ನೆಲ್ಲ ಯುಕ್ತಿಸತಕ್ಕದ್ದು. ಅಪ್ರಿಯವಾದ ಸುದ್ದಿಗಳ ಬಗೆಗೆ ಮನಸ್ಸನ್ನು ದಣಿಸಬಾರದು. ಆವಾಗಲೂ ಮನಸ್ಸನ್ನು ಸಮಾಧಾನಗೊಳಿಸುತ್ತಿರಬೇಕು.

೩. "ಭೂತಕಾಲದ ಸದ್ವ್ಯಯವು"-- ಈ ಜಗತ್ತಿನಲ್ಲಿ ಕಳೆದು ಹೋದ ಆಯುಷ್ಯದ ಬಗೆಗೆ ವಿಚಾರಿಸಿದರೆ, ಅದು, ಬಹುತರವಾಗಿ ಸ್ವಲ್ಪಕಾರ್ಯಗಳನ್ನು ಮಾಡುವುದರಲ್ಲಿಯೇ ಹೋಗಿರುವುದಾಗಿಯೂ ಅದರಿಂದ ನಮಗೆ ಯಾವ ಲಾಭವೂ ಆಗದೆ ಹಾನಿಯೇ ಆಗಿರುವುದೆಂದೂ ಕಂಡುಬರುವುದು. ಈ ಅನುಭವದ ಕಡೆಗೆ ನಾವು ಚೆನ್ನಾಗಿ ಗಮನ ಕೊಟ್ಟರೆ ನಮ್ಮಲ್ಲಿರುವ ದುರಭಿಮಾನವು ಇಲ್ಲದಂತಾಗಿ ವಿನಯಾದಿ ಸದ್ಗುಣಗಳು ಹುಟ್ಟುವುವು. ಎರಡನೆಯ ಲಾಭವು ಆವುದೆಂದರೆ, ನಾವು ಕಳೆದ ಆಯುಷ್ಯದಲ್ಲಿ ಆವ ಆವ ತಪ್ಪುಗಳನ್ನು ಮಾಡಿರುವೆವೊ, ಅಂಥವುಗಳನ್ನು ಮಾಡದಿದ್ದರೆ ಕಳೆದ ಕಾಲವನ್ನು (ಭೂತಕಾಲವನ್ನು) ಸರಿಯಾಗಿ ಉಪಯೋಗಿಸಿದಂತಾಗುವುದು. ಹಿಂದೆ ಮಾಡಿದ ತಪ್ಪುಗಳು ಪುನರುಕ್ತಿಯಾಗದಂತೆ ನಾವು ವರ್ತಿಸಿದರೆ ನಮಗೆ ಮುಂದೆ ಸುಖವಾಗಲಿಕ್ಕೇ ಬೇಕು. ಎಂದ ಮೇಲೆ ಮುಂದಾಗುವ ಸುಖಪ್ರಾಪ್ತಿಯು ಹಿಂದೆ ಹೋದ ಕಾಲದ ವಿಚಾರದಿಂದಲೇ ಆದಂತಾಗಲಿಲ್ಲವೇ? ಭೂತದ ಪರ್ಯಾಲೋಚನೆ ಮಾಡುವಾಗ ನೆನಪಿನಲ್ಲಿಡತಕ್ಕ ಮಾತು ಆವುದೆಂದರೆ, ಆ ಕಾಲದಲ್ಲಿ ನಮಗೆ ಒದಗಿದ ದುಃಖಕರವಾದ ಪ್ರಸಂಗಗಳನ್ನು ನಾವು ಮೇಲಿಂದ ಮೇಲೆ ಮನಸ್ಸಿನಲ್ಲಿ ತರಬಾರದು. ಏಕೆಂದರೆ, ಅದರಿಂದ ಆವ ಶಾಂತಿಯೂ ಆಗು

ವುದಿಲ್ಲ. ಅಷ್ಟೇ ಅಲ್ಲ. ಮತ್ತಿಷ್ಟು ದುಃಖದ ರಾಶಿಯನ್ನು ಬೆಳಿಸಿದಂತಾಗುತ್ತದೆ. ಆದಕಾರಣದಿಂದ ಆದಷ್ಟು ಮಟ್ಟಿಗೆ ನಮ್ಮ ಕಳೆದ ಆಯುಷ್ಯದ ಉತ್ತಮ ಭಾಗದ ಕಡೆಗೆ ಗಮನ ಕೊಡತಕ್ಕದು. ಕೆಲವು ಕಾಲದಲ್ಲಿ ನಾವು ಉಪಯುಕ್ತವಾದ ಜ್ಞಾನವನ್ನು ಸಂಪಾದಿಸಿ ನಮ್ಮ ಮನಸ್ಸನ್ನು ವಿಕಸಿತವಾಗಿ ಮಾಡಿರಬಹುದು. ನಮ್ಮ ಸ್ಥಿತಿಗನುಸಾರವಾಗಿ ಪ್ರಾಮಾಣಿಕತನದಿಂದ ನಮ್ಮ ಕರ್ತವ್ಯಕರ್ಮಗಳನ್ನು ಮಾಡಿದುದರ ಬಗೆಗೆ ಸದಾಚಾರಸಂಪನ್ನರಾದ ಜನರು ನಮ್ಮನ್ನು ಹೊಗಳಿರಬಹುದು. ಸಂಕಟದೊಳಗೆ ಸಿಲುಕಿ ಪೇಚಾಡುತ್ತಿದ್ದ ಜನರ ದುಃಖಗಳನ್ನು ನಾವು ದೂರ ಮಾಡಿರಬಹುದು. ಇಂಥ ಸಮಯಗಳು ನಮ್ಮ ಭೂತಕಾಲದ ಉತ್ತಮವಾದ ಭಾಗಗಳೆಂದು ಹೇಳಬಹುದು. ಈ ಭಾಗಗಳ ಸ್ಮರಣೆಯಿಂದ ಮನಸ್ಸಿನ ಉದಾಸೀನತೆಯೂ ಇಲ್ಲದಂತಾಗಿ ನಾವು ಸುಪ್ರಸನ್ನರಾಗುವೆವು."

೫. "ಭವಿಷ್ಯತ್ಕಾಲದ ಸದ್ವ್ಯಯವು — ಮುಂದೆ ಆಗುವುದನ್ನು ತಿಳಿದುಕೊಳ್ಳುವ ಲವಲವಿಕೆ, ಮನುಷ್ಯಪ್ರಾಣಿಯಲ್ಲಿ ಬಹಳವಾಗಿರುವುದು. ಆದರೆ, ಆವ ಸಂಗತಿಗಳು ನಮಗೆ ತಿಳಿಯಬಾರದೆಂದು ದೇವರ ಸಂಕಲ್ಪವಿರುವುದೋ ಆ ಸಂಗತಿಗಳನ್ನು ಕುರಿತು ವಿಶೇಷವಾಗಿ ಯೋಚನೆ ಮಾಡುವುದು ಸರಿಯಲ್ಲ. ಮತ್ತು ಒಂದು ರೀತಿಯಲ್ಲಿ ನಮ್ಮ ಭವಿಷ್ಯವು ನಮಗೆ ತಿಳಿಯದಿರುವುದೇ ಒಳ್ಳೆಯದು. ಭೂತ ಮತ್ತು ವರ್ತಮಾನ ಕಾಲಗಳಿಗೆ ಮೊದಲೇ ದುಃಖಪೀಡಿತನಾದ ಮನುಷ್ಯನಿಗೆ ಮುಂದೆ ಬರುವ ದುಃಖಗಳೂ ತಿಳಿದು ಹೋದರೆ ಕೇಳುವುದೇನು? ಕಾದ ಹಂಚಿನ ಮೇಲೆ ನೀರು ಬಿದ್ದಂತಾಗುವುದು. ಕೇವಲ ದೈವವನ್ನೇ ಅವಲಂಬಿಸಿ ಮಾಡುವ ಕಾರ್ಯಗಳನ್ನು ಮಾಡದಿರುವುದು ಉಚಿತವಲ್ಲ. ಈ ಸಂಸಾರದಲ್ಲಿ ಹಲಕೆಲವು ಸಂಗತಿಗಳನ್ನು ಕುರಿತು ನಾವು ಮುಂದಾಗಿಯೇ ವ್ಯವಸ್ಥೆ ಮಾಡುವುದು ಉತ್ತಮವು. ನಿದರ್ಶನವಾಗಿ ಮುಂದೆ ಬರುವ ಸಂಕಟಗಳು ನಮಗೆ ಮುಂಚಿತವಾಗಿಯೇ ತಿಳಿದುಬಂದರೆ, ಅವುಗಳಿನ್ನು ಪರಿಹರಿಸುವ ಉಪಾಯಗಳನ್ನು ಯೋಚಿಸುವುದು ಅತ್ಯವಶ್ಯವು. ಹಾಗೂ ತಾರತಮ್ಯದಲ್ಲಿದ್ದಂತೆ ವೃದ್ಧಾಪ್ಯಕಾಲದಲ್ಲಿ ದುಡಿದು, ಹೊಟ್ಟೆತುಂಬಿಕೊಳ್ಳುವಷ್ಟು ಶಕ್ತಿಯು ನಮ್ಮಲ್ಲಿರುವುದಿಲ್ಲ. ಆದ ಕಾರಣ ನಾವು ತರುಣರಿರುವಾಗಲೇ ವೃದ್ಧಾಪ್ಯಕಾಲದಲ್ಲಿ ಬೇಕಾಗುವ ಹೊಟ್ಟೆ ಬಟ್ಟೆಗಳ ಸಾಧನಗಳನ್ನು ಮಾಡಿಕೊಳ್ಳತಕ್ಕದು. ಈ ಪ್ರಕಾರ ಭೂತಕಾಲ, ವರ್ತಮಾನಕಾಲ, ಭವಿಷ್ಯತ್ಕಾಲಗಳಲ್ಲಿ ಮಾಡತಕ್ಕ ಕರ್ತವ್ಯಗಳನ್ನು ಮಾಡಿ, ಕಡೆಯಲ್ಲಿ ಸರ್ವಾಂತರ್ಯಾಮಿಯಾದ ಪರಮೇಶ್ವರನ ಮೇಲೆ ಪೂರ್ಣ ವಿಶ್ವಾಸವನ್ನಿಟ್ಟು ಸ್ವಸ್ಥಚಿತ್ತರಾಗಿ ಧೈರ್ಯದಿಂದಲೂ ಸಂತೋಷದಿಂದಲೂ ಕಾಲಹರಣ ಮಾಡಿದರೆ ನಮಗೆ ಸುಖವಾಗದೆ ಎಂದಿಗೂ ಇರಲಾರದು."

೬. "ಇನ್ನು ಕಾಲದ ಸದ್ವ್ಯಯವಾವುದು? ಎಂಬುದನ್ನು ವಿಚಾರಿಸಬೇಕು -- ತನಗೂ ಇತರರಿಗೂ ಫಲವಾಗುವಂತೆ ಕಾಲವನ್ನು ಉಪಯೋಗಿಸುವುದೇ ಅದರ ಸದ್ವ್ಯಯವು; ಹೀಗಲ್ಲದೆ, ಇದಕ್ಕೆ ವ್ಯತಿರಿಕ್ತವಾಗಿ ನಡೆವುದೇ ಕಾಲದ ದುರ್ವ್ಯಯವು. ಕಾಲವನ್ನು ಸರಿಯಾಗಿ ಕಳೆವುದಕ್ಕೆ ಅನೇಕ ಮಾರ್ಗಗಳುಂಟು. ಇವುಗಳಲ್ಲಿ ಉತ್ತಮವಾದುವು ಆವುವೆಂದರೆ— ೧ ಅನಾಥರಿಗೆ ಸಹಾಯ ಮಾಡುವುದು. ೨ ಕೋಪಗೊಂಡವರಿಗೆ ಶಾಂತಪಡಿಸುವುದು. ೩ ದೇವರ ಧ್ಯಾನವೇ ಮೊದಲಾದ ಸತ್ಕಾರ್ಯಗಳನ್ನು ಮಾಡುವುದೇ ಕಾಲದ ಸದ್ವ್ಯಯವು. ಮತ್ತು ಮತ್ತಾವ ಕೆಲಸವೂ ಇಲ್ಲದ ಕಾಲದಲ್ಲಿ ಪರಮಾಪ್ತನೂ ಸುಗುಣಿಯೂ ಆದ ಮಿತ್ರನೊಡನೆ ಮಾತನಾಡುವುದು ಬಹು ಉಪಯೋಗಕಾರಿಯು. ತನಗೆ ಉಪಯುಕ್ತವೂ ಇತರರಿಗೆ ಅಬಾಧಕವೂ ಆಗಿರುವ ಅಂಗಸಾಧನೆಯ ಆಟಗಳಲ್ಲಿ ಕಾಲವನ್ನು ಕಳೆವುದೂ (ವಿರಾಮಕಾಲಮಾತ್ರ) ಸರಿಯು. ಇಂಥವುಗಳೇ ಕಾಲದ ಸದ್ವ್ಯಯವು. ಇನ್ನು ವೇಳೆಯ ದುರ್ವ್ಯಯಗಳು ಆವುವೆಂದರೆ.— ಇಸ್ಪೇಟು ಮುಂತಾದ ಆಟಗಳಲ್ಲಿಯೇ ದಿನಕ್ಕೆ ಹತ್ತು ಹನ್ನೆರಡು ಗಂಟೆಗಳನ್ನು ಕೆಲವರು ಕಳೆವುದುಂಟು. ಇವುಗಳಿಂದ ಇತರರಿಗೆ ಬಾಧೆಯೇನೂ ಆಗುವುದಿಲ್ಲವಾದರೂ ಅವರಿಗೂ ಪ್ರಯೋಜನವೇನೂ ಇಲ್ಲ. ಇಂಥ ಆಟವಾಡುವವರು "ಯಾವ ಕೆಲಸಕ್ಕೂ ವಿರಾಮವಿಲ್ಲ' ಎಂದು ಹೇಳಿದರೆ ತಿಳಿದವರು ಇದನ್ನು ಕೇಳಿ ಹಾಸ್ಯಮಾಡಲಾರರೇ? ನಾಟಕವನ್ನು ನೋಡುವುದೇನೋ ಒಳ್ಳೆಯದೇ! ಆದರೆ ಈಗಿನ ಕಾಲದ ನಾಟಕಗಳು ಉದ್ದೇಶಕ್ಕೆ ಅನುಸಾರವಾಗಿ ನಡೆಯದಿರುವುದರಿಂದ ನಾಟಕ ನಡೆಯುವುದೂ ಈಗ ವ್ಯರ್ಥ ಕಾಲಹರಣಕ್ಕೆ ಸೇರುವುದು.-- ಮತ್ತು ಇನ್ನೂ ಅನೇಕ ದುರ್ವ್ಯಯಗಳುಂಟು. ಅವು ಆವುವೆಂದರೆ,— ಅನಾಥರನ್ನೂ ದುಃಖಿತರನ್ನೂ ಕಾರಣವಿಲ್ಲದೆ ಹಿಂಸೆಪಡಿಸುವುದು, ಜ್ಞಾನಸಂಪಾದನೆ ಮಾಡದಿರುವುದು, ದುಷ್ಟಜನರ ಸಹವಾಸ ಮಾಡುವುದು; ಜೂಜು ಪಗಡೆ ಇಸ್ಪೇಟು ಮುಂತಾದ ಆಟಗಳನ್ನು ಆಡುವುದು ಇವೇ ಮೊದಲಾದ ದುಷ್ಕೃತ್ಯಗಳಲ್ಲಿ ವೃಥಾ ಕಾಲಹರಣ ಮಾಡಿದಂತಾಗುವುದು. ಸೋಮಾರಿತನದಲ್ಲಿ ಎಂದಿಗೂ ಕಾಲಹರಣ ಮಾಡಬಾರದು. ಆವ ಒಳ್ಳೆಯ ಕೆಲಸವನ್ನೂ ಮಾಡದೆ ಸೋಮಾರಿಯಾಗಿ ಸುಮ್ಮನೆ ಕುಳಿತಿದ್ದರೆ ಕೆಟ್ಟಕೆಲಸ ಮಾಡುವುದಕ್ಕೆ ಬುದ್ಧಿಯುಂಟಾಗುವುದು ಮನುಷ್ಯನಿಗೆ ಸ್ವಭಾವಸಿದ್ಧವು. ಆದ್ದು

ದರಿಂದ ಪ್ರತಿದಿನವೂ ತಮ್ಮ ತಮ್ಮ ಕೆಲಸಗಳನ್ನು ತಾವು ಬಿಡದೆ ನೆರವೇರಿಸುತ್ತಿರಬೇಕು. ಮೇಲೆ ಹೇಳಿದ ಎಲ್ಲಾ ವಿಧಗಳಿಗಿಂತ ಜ್ಞಾನವನ್ನು ಸಂಪಾದಿಸಿಕೊಳ್ಳುವುದು ಅತ್ಯುತ್ತಮವು. ಪ್ರಸಿದ್ಧರಾದ ಹಲವು ಕವಿಗಳ ಗ್ರಂಥಗಳನ್ನೋದಿ ಜ್ಞಾನವನ್ನು ಜೀವಮಾನದ ಕೊನೆಯ ವರೆಗೂ ಹೆಚ್ಚಿಸುತ್ತ ಬರಬೇಕು. ಇದು ನಮ್ಮ ಮುಖ್ಯ ಕರ್ತವ್ಯವಾಗಿರುವುದು. ಅನೇಕರು ವೃಥಾ ಯಾವುದಾದರೂ ಕೆಟ್ಟ ಆಟಗಳಲ್ಲಿ ಕುಳಿತುಕೊಂಡು ಕಾಲವನ್ನು ಅನ್ಯಾಯವಾಗಿ ಕಳೆಯುವರು. ಇದು ಬಲು ಕೆಟ್ಟದೆಂದು ಬೇರೆ ಹೇಳಬೇಕಾಗಿಲ್ಲ. ಅದುದರಿಂದ ಮೇಲೆ ಹೇಳಿದ ಕೃತ್ಯಗಳಲ್ಲಿ ನಾವು ವೃಥಾ ಕಾಲಹರಣಮಾಡದೆ ಕಾಲದ ದುರ್ವ್ಯಯಗಳನ್ನು ಮಾಡದೆ ಸತ್ಯವಾಗಿ ನಡೆದುಕೊಳ್ಳುತ್ತಿದ್ದರೆ ನಮಗೆ ಇಹಪರಲೋಕಗಳಲ್ಲಿ ಸುಖವಾಗದೆ ಇರುವುದಿಲ್ಲ."

" ಇಂದಿನ ಈ ನನ್ನ ನಿವೇದನದಲ್ಲಿ ನನ್ನ ಅಜ್ಞಾತ ದೋಷದಿಂದ ಸೇರಿರಬಹುದಾದ ತಪ್ಪುಗಳನ್ನು. ಹಿರಿಯರು ಕೃಪೆಯಿಂದ ಮನ್ನಿಸಿ, ಮುಂದೆ ನನ್ನ ಆಚರಣದಲ್ಲಿ ಇಂತಹ ಪ್ರಮಾದಗಳುಂಟಾಗದಂತೆ ನನ್ನನ್ನು ಎಚ್ಚರಿಸಬೇಕೆಂದು ಪ್ರಾರ್ಥಿಸುತ್ತೇನೆ

—ಇಂತಾಶಿಸುವ ವಿನೀತನಾದ ವಿದ್ಯಾರ್ಥಿ,
ಟಿ. ಕೆ. ರಾಜಗೋಪಾಲನ್."

ತತ್ವಬೋಧೆ.

ರಾಗ|| (ಏನುಫಲರಾಮ)

ದೀನನ ಸೇರಿದರೇನು ಫಲ—ರಾಮು—ಗುಣಹೀನನ ಸೇರಿದರೇನು ಫಲ ||ಪ||
ಅಕ್ಕರೆಯಿಲ್ಲದ ರಕ್ಕಸಿಯುದರದಿ ಮಕ್ಕಳು ಜನಿಸಿದರೇನು ಫಲ ।
ದುಃಖಿಪಜನರನು ಲೆಕ್ಕಿಸದಾತನ ಒಕ್ಕಲತನದಿಂದೇನು ಫಲ || ದೀನನ || ೧ ||
ಜನಿಸಿದ ಮಕ್ಕಳು ಜೀವಿಸದಿದ್ದರೆ ಜನನೀಜನಕರಿಗೇನು ಫಲ||
ಕನಸಿಲಿ ಕಾಣುವ ಧನಕನಕಾದಿಗಳ ನಂಬಿದಮನುಜರಿಗೇನು ಫಲ || ದೀನನ || ೨ ||
ಕರೆಯದ ಪಶುವನು, ನೆರೆಯದ ಸೊಸೆಯನು, ಅರಿಯದೆ ಕೊಂಡವಗೇನು ಫಲ ||
ಹಿರಿಯರ ನಡತೆಯ ನಡೆಯಿಸದಾತನು ಹಿರಿಯವನಾಗಿರಲೇನುಫಲ|| ದೀನನ || ೩ ||
ಗಂಡನ ದೂರುತ ಮಿಂಡನ ಸೇರುವ ಹೆಂಡತಿಯಿರಲವಗೇನು ಫಲ ||
ಹೆಂಡಿರಮಕ್ಕಳ ದಂಡಿಸದಾತನ ಗಂಡಸುತನದಿಂದೇನು ಫಲ || ದೀನನ || ೪ ||
ವರನಿಲ್ಲದ ವರ ತರುಣಿಯು ನಾನಾತೆರದಲಿ ಸಿಂಗರಿಸಿದರೇನುಫಲಾ ||
ವರದ ವಿಠಲ, ಪುಲಿಗಿರಿಪತಿಗಲ್ಲದ ಪರಿಪರಿಪುಣ್ಯದಿಂದೇನು ಫಲಾ || ದೀನನ || ೫ ||

(ದಿವಂಗತ ಸರಗೂರು ವೆಂಕಟವರದಾಚಾರ್ಯ ಕೃತ)

ವಿಜ್ಞಾಪನೆ.

ಪರಮಾತ್ಮನ ಲೀಲಾಕ್ಷೇತ್ರವೆಂದೆನಿಸುವ ಸಸ್ಯಶ್ಯಾಮಲೆಯಾದ ಈ ಭಾರತವರ್ಷದಲ್ಲಿ ಪ್ರಚುರವಾಗಿದ್ದ ಅನಾದಿ ವೇದ ಧರ್ಮಸಂಜೀವಕ "ಶ್ರೀ ಸ್ವಾಮಿ ದಯಾನಂದ ಸರಸ್ವತಿ" ಯವರ ಪವಿತ್ರ ಜೀವನಚರಿತೆಯಿದು. ಧರ್ಮಭೂಮಿಯಾದ ನಮ್ಮ ದೇಶದ ಒಂದು ಭಾಗವಾದ ಈ ಕರ್ಣಾಟಕ ದೇಶದಲ್ಲಿ ಈ ವರೆಗೂ ಶ್ರೀಸ್ವಾಮಿಯವರ ಚರಿತೆಯು ಬರೆಯಲ್ಪಡಲೇ ಇಲ್ಲ.* ಇದೊಂದು ಕೊರತೆಯೇ ಸರಿ. ಈ ಕೊರತೆಯನ್ನು ಹೋಗಲಾಡಿಸಲೋಸುಗ ಈ ಚಿಕ್ಕ ಲೇಖನವು ಬರೆಯಲ್ಪಟ್ಟಿತು.

ಅನೇಕ ಸಲಕರಣಗಳನ್ನು ಸ್ವೇಚ್ಛೆಯಾಗಿ ಉಪಯೋಗಿಸಲು ಸರ್ವ ಸ್ವಾತಂತ್ರ್ಯವನ್ನು ಕೊಟ್ಟಿರುವ "ವೇದಿಕ್ ಮೆಗಸೀನ" ದ ಸಂಪಾದಕವರ್ಯ ಶ್ರೀಯುತ, ಪ್ರೊಫೆಸರ್ ರಾಮದೇವ, ಬಿ.ಎ., ಎಮ್. ಆರ್. ಎ. ಎಸ್.ರವರ ಉಪಕಾರವು ನಮಗೆ ಚಿರಸ್ಮರಣೀಯವಾಗಿರುವುದು. ಮತ್ತು ಇದನ್ನು ಪುಸ್ತಕರೂಪಕ್ಕೆ ತಂದು ನನಗೆ ಆಗಾಗ್ಗೆ ಪ್ರೋತ್ಸಾಹಕ ಪತ್ರವನ್ನು ಬರೆದು ಉತ್ತೇಜನವಿತ್ತ ಶ್ರೀಯುತ ನಂಜನಗೂಡು ಎಮ್. ಶ್ರೀಕಂಠಯ್ಯನವರ ಮಹೋಪಕಾರವನ್ನು ಇಷ್ಟಿಷ್ಟೆಂದು ವರ್ಣಿಸಲಾರೆವು. (ಆರ್ಯಮಹಿಳೆಗಾಗಿ ಕಳುಹಲ್ಪಟ್ಟಿದ್ದ ಈ ಲೇಖನವು, ಆರ್ಯಮಹಿಳೆಯು ಸದ್ಯದಲ್ಲಿ ಹೊರಡುವಂತಿಲ್ಲವೆಂಬುದು ನಿರ್ಧಾರವಾದ ಮೇಲೆ ಈಗ ಮೂರು ನಾಲ್ಕು ವಾರಗಳ ಹಿಂದೆ ಲೇಖಕರ ಪ್ರಾರ್ಥನೆಯಂತೆ ಮೇಲೆ ಉಲ್ಲೇಖಿತವಾಗಿರುವ ಮಹನೀಯರು ಇದನ್ನು ನಮ್ಮೆಡೆಗೆ ಕಳುಹಲು ನಂದಿನಿಯಲ್ಲಿ ಪ್ರಕಟಿಸಲಾಯಿತು. ಸಂ. ನಂ.)

ಮತ್ತೊಂದು— ಈ ಲೇಖನ ಉದ್ದೇಶವು ಸ್ವಾಮಿಯವರ ಜೀವನ ಚರಿತೆ ಮತ್ತು ಅದ್ಭುತಕಾರ್ಯಗಳ ಪರಿಚಯ ಮಾಡಿಕೊಡಬೇಕೆಂಬುದೊಂದೇ ಆದುದರಿಂದ ಅಲ್ಲಲ್ಲಿ ಕಂಡುಬರಬಹುದಾದ ತಪ್ಪುಗಳನ್ನು ತಿಳಿದು ಮನ್ನಿಸುವರೆಂದು ನಂಬಿರುವ—

ಸಜ್ಜನ ವಿಧೇಯ—ಲೇಖಕ.

ಮುನ್ನುಡಿ

(ದಯಾನಂದ ಸರಸ್ವತಿಯವರ ಚರಿತ್ರೆ)

ಆದೇನೋ ಕಾಣೆವು, ಮಹಾತ್ಮರೂ ಸಿದ್ಧಪುರುಷರೂ ಧರ್ಮಸಂಜೀವಿಗಳೂ ಆರ್ಯಾವರ್ತದಲ್ಲಿಯೇ ಜನಿಸುಸುವರು! ಆದುದರಿಂದಲೇ— ನಮ್ಮ ಪೂರ್ವಜರು "ಆರ್ಯಾವರ್ತ: ಪುಣ್ಯಭೂಮಿ:" ಎಂದು ಹೇಳಿರುವರು. ಈ ಪುಣ್ಯಭೂಮಿಯಲ್ಲಿ ಜನಿಸಿರುವ ಒಬ್ಬ ಆರ್ಯ ಧರ್ಮ ಸಂಜೀವಿಯ ಜೀವನ ಚರಿತೆಯೇ ಇದು.

ಈತನಾರು ? ನಮಗಿವನೇನನ್ನು ತಂದನು ? ಎಂದರೆ, ನಮ್ಮಲ್ಲಿರುವುದನ್ನೇ ನಮಗೆ ತೋರಿಸಿ ಕೊಟ್ಟಿರುವನೆಂದು ಹೇಳಬಹುದು. ಅಲ್ಲದೆ, ಇದೇ ಸಮಯದಲ್ಲಿ ನಮ್ಮ ಜ್ಞಾಪಕಕ್ಕೆ ಬಂದಿರುವ ಓರ್ವ ಆಂಗ್ಲಭಾಷಾ ಕವಿಕುಲತಿಲಕನ ಪದ್ಯವನ್ನಿಲ್ಲಿ ಉದಹರಿಸುವೆವು—

---

* ಶ್ರೀ ದಯಾನಂದರ ಆತ್ಮಚರಿತ್ರವು ಇದಕ್ಕೆ ಮೊದಲೇ ಎಂದರೆ ೧೯೧೪ನೆ ಜನವರಿ-ಫೆಬ್ರವರಿ-ಮಾರ್ಚಿ ತಿಂಗಳಲ್ಲಿ, ಸಚಿತ್ರಭಾರತದ ಪ್ರಥಮಸಂಪುಟದ ೪-೫-೬ನೇ ಸಂಚಿಕೆಗಳಲ್ಲಿ ಪ್ರಸಿದ್ಧವಾಗಿರುವುದು. ಇವರ ಆತ್ಮಚರಿತ್ರದೊಡನೆ ಇವರ ಮಹತ್ಕಾರ್ಯ ಫಲರೂಪದ ಗುರುಕುಲದ ವಿಚಾರವು ಕೂಡ ವಿಸ್ತಾರವಾಗಿ ಚಿತ್ರಗಳೊಡನೆ ಪ್ರಕಟೀಕೃತವಾಗಿರುವುದು. ಭಾರತದಲ್ಲಿ ಪ್ರಕಟವಾಗಿದ್ದ ಚಿತ್ರಗಳನ್ನೇ ತೆಗೆದು ಈ ನಂದಿನಿಯಲ್ಲಿಯೂ ಕೊಟ್ಟಿರುವುದಕ್ಕಾಗಿ ಭಾರತಕರ್ತರ ಭ್ರಾತೃಸಹಾಯವು ನಮಗೆ ಚಿರಸ್ಮರಣೀಯವಾಗಿರುವುದು. ಸಂ. ನಂ.

"He brought us wisdom of the highest sort,
Opening the founts of inspiration true,
He gave new ideals to the world at large,
Ush'ring anew the dawn of consciousness;
And larger life he conferr'd on mankind,
By widening prospects of a purer faith,
Destroying sin which tends to stop outright
The rolling wheels of this great universe;
And he has sown the seed which promises
To yield rich harvest and a good fruit,
Uprooting error, bringing righteousness
Back to the paths forsaken long by man."

ಸತ್ಯದ ಅಗಾಧ ನೆಲೆಯಿಂದ ಸವಿಮಾತಾಡುವುದಕ್ಕೂ ಸಲ್ಲಲಿತ ನಡೆಯನ್ನು ನಡೆಯಿಸಲಿಕ್ಕೂ ಸಕಲ ಕಲೆಗಳಲ್ಲಿಯೂ ವಿದ್ಯಾಕಲೆಯೇ ಶ್ರೇಷ್ಠವೆಂಬುದನ್ನೂ ಸಕಲ ಧರ್ಮಗಳಲ್ಲಿಯೂ ಪೂರ್ವಜರ ಧರ್ಮವೇ ಉತ್ತಮವೆಂದೂ ಬೋಧಿಸಿ,ಅತ್ಯುತ್ತಮ ಮತ್ತು ಆದರ್ಶಸ್ವರೂಪದ ವಿದ್ಯಾಲಯಗಳನ್ನೂ ಮಠಾಲಯಗಳನ್ನೂ ಚಿರಶಾಂತಿನೆಲೆಯ ಸುಮಾರ್ಗವನ್ನೂ ದುಷ್ಕರ್ಮದಮನದಾರಿಯನ್ನೂ ಸರಿಪಡಿಸಿ, ನಮಗೆ ಅವುಗಳನ್ನು ತೋರಿಸಿ, ನಮ್ಮ ದೃಷ್ಟಿಪಥದಿಂದ ಮಾಯವಾಗಿರುವ—ಛೀ! ಆತನು ಮಾಯವಾದನೇ? ಮಾಯವಾಗುವಂತೆ ದುಷ್ಟರಾದ ಕೆಲವರು ವಿಷಪ್ರಯೋಗದಿಂದ ಆ ಮಹಾತ್ಮನನ್ನು ಪರಂಧಾಮಕ್ಕೈದಿಸಿದರು!— ಆ ಪುಣ್ಯಪುರುಷನು ನಮ್ಮನ್ನೂ ಈ ಭಾರತಭೂಮಿಯನ್ನೂ ಅಗಲಿ ಹೋಗುವುದಕ್ಕೆ ಮುಂಚಿತವಾಗಿಯೇ ಕೆಲವು ಸಸಿಗಳನ್ನು ನೆಟ್ಟು ಹೋಗಿರುವನು. ಈ ಸಸಿಗಳು ಆಗಾಗಲೇ ಫಲಬಿಡುತ್ತಿವೆಯಂತೆ! ಈ ಫಲಗಳು ಬಲು ರುಚಿಕರವೆಂದು ಕವಿಸಾರ್ವಭೌಮ ರವೀಂದ್ರ ಟಾಕೂರ ಮಹಾಶಯನು ತನ್ನ ದೇಶದಲ್ಲಿ ಬೀಜಗಳನ್ನು ಬಿತ್ತಿಹನಂತೆ!! ಇದನ್ನು ಶ್ರೀಯುತ ಅರವಿಂದ ಘೋಷರವರು ಮೊನ್ನೆ ತಿಳಿದು ಆಶ್ಚರ್ಯದಿಂದ ಬಲು ಚಕಿತರಾದರಂತೆ!!! ಆಗಾಗಲೇ ಲಾಲಾಜಪತರಾಯರು ಈ ಧರ್ಮವನ್ನು ಕೈಕೊಂಡೇ ಬಿಟ್ಟಿರುವರಂತೆ!!!

ಭಾರತವರ್ಷದಲ್ಲಿ ಈಗ ದೇಶೋದ್ಧಾರಕ ಸಕಲ ಪ್ರಯತ್ನಗಳೂ ನಡೆಯುತ್ತಲಿವೆ. ಆದರೆ ಅದೇಕೆ ಮುಂದೆ ಬರುವುದಿಲ್ಲವೆಂದರೆ ಅವೆಲ್ಲವೂ ಸಮಾಜಸಂಸ್ಕರಣೆಯವುಗಳಾಗಿರುವುದರಿಂದ ಧರ್ಮಸಂಜೀವನೆಯನ್ನು ಆದಾರೂ ಇಂದಿನ ವರೆಗೆ ಕೈಗೊಂಡಿರಲಿಲ್ಲ. ಈಗ ಇಪ್ಪತ್ತನೆಯ ಶತಮಾನದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಈ ಸುಪ್ರಯತ್ನಗಳು ನಡೆಯುಹತ್ತಿವೆ. ಈ ಪ್ರಯತ್ನವೇ ಆರ್ಯಸಮಾಜದವರ ಗುರುಕುಲ ಪದ್ಧತಿ!

ಪೂರ್ವದ ಆರ್ಯರ ನಾಗರಿಕತೆಯನ್ನು ಕುರಿತು ಬೋಧಿಸುವಾಗ ಇಂಗ್ಲಂಡ್ ದೇಶದ ರಮಣೀವರ್ಯೆಯೊರ್ವಳು ತನ್ನ ಶಿಷ್ಯರಿಗೆ ಈ ತೆರನಾಗಿ ಉಪದೇಶಿಸಿದಳಂತೆ:—

"All that is clever has been thought before
Seek thou to find the happy
Thought once more."

ನಾಗರಿಕತೆಗೆ ಸಂಬಂಧಪಟ್ಟುದಾವುದೋ ಅವೆಲ್ಲವೂ ಪೂರ್ವಜರಲ್ಲಿದ್ದುವು. ಪ್ರಾಚೀನ ಈಜಿಪ್ತರೂ ಪೂರ್ವದ ಜೈನಿಯರೂ ಹಳೆಯ ಆರ್ಯರೂ ಇದಕ್ಕೆ ಉದಾಹರಣೆಗಳಾಗಿರುವರು. ಆವ ವಿಧದಲ್ಲಿಯೂ ಪ್ರಾಚೀನರು ಈಗಿನವರಿಗೆ ಹಿಂಜರಿವಂತಿದ್ದುದಿಲ್ಲ. ಪ್ರಾಚೀನರ ಚರಿತೆಯೇ ಇದಕ್ಕೆ ಸಾಕ್ಷಿಯಾಗಿದೆ!

ಪೂರ್ವ ಭಾರತೀಯರ ಧರ್ಮವಾದರೋ ಆರ್ಯರ ವೇದಧರ್ಮ ! ವೇದಧರ್ಮವು ಬಲು ಶ್ರೇಷ್ಠವಾದುದು. ಇಪ್ಪತ್ತನೆಯ ಶತಮಾನದಲ್ಲಿ ನವನಾಗರಿಕರಾದ ಪಾಶ್ಚಿಮಾತ್ಯರು ಕೊಚ್ಚಿಕೊಂಡು ಕಂಡುಹಿಡಿದಿರುವ 'ಜಂಗಮಶಕಟ

'ಧೂಮಶಕಟ' ಮುಂತಾದವುಗಳೆಲ್ಲಾ ಪೂರ್ವಜರಲ್ಲಿ ಇದ್ದವು. ಇವೆಲ್ಲವೂ ವೇದಗಳಲ್ಲಿ ಕಾಣಬರುತ್ತಿವೆ ಎಂದರೆ ಎಲ್ಲರಿಗೂ ಅತಿಶಯವಾಗುವುದಲ್ಲವೇ ?

ಇಂತಹ ಸುಧರ್ಮವು ಮೂಲೆಗೆ ಬಿದ್ದಿದ್ದಿತು. ಇದನ್ನು ಪುನರುಜ್ಜೀವಿಸಿದ ಮಹಾಶಯನ ದಿವ್ಯಚರಿತ್ರೆಯಿದು. ಈ ಲೇಖನಾವಲೋಕನದಿಂದ ತಮಗೆ ಅಷ್ಟೇನೂ ಪ್ರಯೋಜನವು ದೊರೆಯಲಾರದು. ಆದರೂ ಈ ಲಘುಗ್ರಂಥದ ಉದ್ದೇಶವು ಪರಿಚಯಮಾಡಿಕೊಡಬೇಕೆಂಬುದೇ. ಅದಾದರೆ ಈ ಲೇಖಕನು ತನ್ನ ಶ್ರಮವು ಸಾರ್ಥಕವಾಯಿತೆನ್ನುವನು.

ನಮ್ಮ ದೇಶವು ಮುಂದೆ ಬರಬೇಕಾದರೆ ಏಕತ್ವವು ಅತ್ಯಾವಶ್ಯಕವು ಏಕತ್ವಕ್ಕೆ ಯಾವತರದ ಪ್ರಯತ್ನಗಳನ್ನು ಈ ವರೆಗೆ ಆರೂ ಮಾಡಿದ ವುದಿಲ್ಲ(?) ಇದೇ ಪ್ರಥಮ ಪ್ರಯತ್ನವು. ಇದೇನೂ ಹೊಸದಾದ ಧರ್ಮವಲ್ಲ. ಅನಾದಿಯಾದ ಆರ್ಯ ವೇದಧರ್ಮ. ಇದರಲ್ಲಿ ಜಾತಿಪದ್ಧತಿಯಾವುದೂ ಇರುವುದಿಲ್ಲ. ವೇದಮತವೇ ಇದು— "ಜಲಬಿಂದು ನಿಪಾತೇನ ಕ್ರಮಶ: ಪೂರ್ಯತೇ ಘಟ: " (ಎಂದರೆ, ನೀರು ಒಂದೊಂದು ಬಿಂದುವಾಗಿ ತೊಟ್ಟಿಕ್ಕುತ್ತ ಹೋದರೆ ಕೂಡ ಎಂತಹ ದೊಡ್ಡ ಪಾತ್ರೆಯಾದರೂ ತುಂಬುವುದು) ಎಂದು ಪೂರ್ವಿಕರ ವಚನವಿರುವುದು. ಅದರಂತೆಯೇ ಈ ಪ್ರಾಚೀನ ಧರ್ಮದ ಉತ್ಕೃಷ್ಟತೆಯನ್ನು ಇನ್ನಾದರೂ ಚೆನ್ನಾಗಿ ಪರಿಶೀಲಿಸಿ, ಎಲ್ಲರೂ ಕೈಕೊಂಡರೆ ಭಾರತವರ್ಷದಲ್ಲಿ ಜನಾಂಗವಾಗುವುದರಲ್ಲಿ ಸಂದೇಹವಿಲ್ಲ. "ಜನಾಂಗ" ವೀಗ ಭಾರತೀಯರಲ್ಲಿದೆಯೇ? ಇಲ್ಲ.

ಹದಿನಾರನೆಯ ಶತಮಾನದ ಇಂಗ್ಲೆಂಡ್‌ದೇಶದ ಸ್ಥಿತಿಯನ್ನು ಆಲೋಚಿಸುವುದಾಗಲಿ! ಧರ್ಮವು ಕೆಟ್ಟಿದ್ದಿತು. ಅನ್ಯಾಯವು ಎಲ್ಲೆಲ್ಲಿಯೂ ವ್ಯಾಪಿಸಿದ್ದಿತು. ಧರ್ಮವು ವ್ಯಾಪಾರದಂತಿದ್ದಿತು. ಆಗ ವೈಕ್ಲಿಫ಼್‌ನೆಂಬವನು ಮುಂದೆ ಬಂದು ಸತ್ಯಧರ್ಮ ಸಂಜೀವನೆಯನ್ನು ಮಾಡಿದನು. ಈತನು ನೆಟ್ಟ ಸಸಿಯು ಜರ್ಮನಿಯಲ್ಲಿ ಫಲಬಿಟ್ಟಿತು. ಲೂತರ್‌ನೆಂಬ ವೈಕ್ಲಿಫನ ಶಿಷ್ಯನು ಧರ್ಮಸಂಜೀವನೆಯ ಸಂಘವನ್ನೇರ್ಪಡಿಸಿದನು. ಇದೇ ಪ್ರಸಿದ್ಧ " Reformation ". ಇದಕ್ಕೆ ಕಾರಣವಾದರೋ ಪೂರ್ವಜರ ಕಲಾಕೌಶಲ್ಯಗಳ ವ್ಯಾಸಂಗವು. (Renaissance) ಇವರಂತೆ ನಾವುಕೂಡ ದೇಶವಿದೇಶೀಯಭಾಷೆಗಳನ್ನು ಕಲಿತು, ನಮ್ಮ ಪೂರ್ವಜರ ನಾಗರಿಕತೆಯನ್ನು ಕಲಿಯತಕ್ಕವರಾಗಿರುವೆವು. ಈ ನಮ್ಮ ಕಥಾನಾಯಕರಾದ ಶ್ರೀಸ್ವಾಮಿ ದಯಾನಂದ ಸರಸ್ವತಿಯವರು ಭಾರತೀಯ ಲೂದರನು. (Indian Luther) ಈತನ ಮಹತ್ಕಾರ್ಯಗಳಾದರೋ ಆರ್ಯಧರ್ಮದ ಪುನರುತ್ಥಾಪನವು ಅಥವಾ ಪುನರ್ಜೀವಿತವು(Renaissance). ನಾವಾದರೋ ಪಾಶ್ಚಿಮಾತ್ಯ ದೇಶದ ಹದಿನಾರನೆಯ ಶತಮಾನದವರು !

ಕಣ್ಣುಬಿಟ್ಟು ಇನ್ನಾದರೂ ನೋಡುವುದಾಗಲಿ, "ಆಲಸ್ಯ ದೋಷಾದಮೃತಂ ವಿಷಾಯತೇ' ಎಂಬುದನ್ನೂ ನೆನೆದು ಏಳಿರಿ ! ಪ್ರತಿಯೊಬ್ಬರೂ ಇಂದ್ರಿಯಪಾಟವಿರುವಾಗಲೇ ಯತ್ನಮಾಡಬೇಕು. ಕಾಲಹರಣವಾಗುವುದಾದರೆ ಕಾಲದೇವನು ಕಾದಿರಲಾರನು! ತ್ವರೆ ಮಾಡಿರಿ!! ಕರ್ತವ್ಯವನ್ನು ತಿಳಿದು ಕಾರ್ಯಕ್ಷೇತ್ರದಲ್ಲಿ ಕೈಹಾಚಿನಿಲ್ಲಿರಿ.

ಮಹದೇವ ಪೇಟೆ
ಮಡಿಕೇರಿ
೧—೧೦—೧೯೧೬

ಇತಿ— ಸಜ್ಜನವಿಧೇಯ

ಬಿ. ಎನ್. ಕೃಷ್ಣಮೂರ್ತಿ

॥ ಶ್ರೀ ॥

ಮಹರ್ಷಿ
ದಯಾನಂದ ಸರಸ್ವತಿ

" ಯೋಗೇಶ್ವರಿ ! ನಮಸ್ತುಭ್ಯಂ ಯೋಗಿ ಯೋಗಾಶ್ರಮಾಶ್ರಯೇ ।
ಅನ್ನದೇ ವರದೇ ದೇವಿ ! ಯೋಗ ಯೋಗಾಂಗ ಸಿದ್ಧಯೆ ॥ "

— ಪೂರ್ವ ಭಾಗ. —

(ಪ್ರಥಮ ತರಂಗ)

ಬಾಲ್ಯ.

ಅಂಬಾಶಂಕರನು ಗುಜರಾತ್‌ದೇಶದ ಒಂದೆಸೆಯ ಆದಾಯಸಂಗ್ರಹಕ ಎಂದರೆ, ರೆವಿನ್ಯ್ಯೂ ಕಲೆಕ್ಟರನೂ ಧನಾಢ್ಯನಾದ ಜಮೀನುದಾರನೂ ಆಗಿದ್ದನು. ವಾಸಸ್ಥಾನವು ಮಚ್ಛುಕ ನದಿಯ ದಡದಲ್ಲಿರುವ "ಮೊರ್ವಿ" ಹಳ್ಳಿಯು. ಈ ಅಂಬಾಶಂಕರನು ಬ್ರಾಹ್ಮಣ; ಶಿವನ ಆರಾಧಕ; ಮತ್ತು ಶೈವಭಕ್ತಾಗ್ರಣಿ! ಶುದ್ಧನಾದ ನಡತೆಯವನೂ ಸುಶೀಲನೂ ಅಹುದು. ಆದರೆ ಆವ ವಸ್ತುವಿನಲ್ಲಿಯೂ ಸಂಪೂರ್ಣತೆಯಿರಲಾರದಷ್ಟೆ! ಅಂಬಾಶಂಕರನಿಗೆ ಸಹನಶಕ್ತಿ ಲವಲೇಶವಾದರೂ ಇರಲಿಲ್ಲ; ಅದಕ್ಕೆ ಬದಲು ಪಿತ್ತಪ್ರಕೃತಿ ತುಂಬಿದ್ದಿತು.

ಈತನ ಪತ್ನಿ, ಪರಮದಯಾಮಯಿ; ಹೃದಯದಲ್ಲಿ ದಯೆ ಉಕ್ಕಿ ಸುರಿಯುತ್ತಲಿತ್ತು. ಈ ಉಕ್ಕಿ ಹರಿಯುತ್ತಿದ್ದ ರಸವೇ ಪ್ರೇಮರೂಪವಾಗಿ ಪರಿಣಮಿಸಿದ್ದಿತು. ಪತಿವ್ರತೆಯರಿಗೆ ಆದರ್ಶಸತಿಯೂ ಮಾತೆಯರಿಗೆ ಮಾದರಿಯ ಮಾನಿನಿಯೂ ಬಾಲಕರಿಗೆ ಪ್ರೇಮದ ಯೋಗಿನಿಯೂ ಆಗಿದ್ದ ಈ ಸಾಧ್ವೀಶಿರೋಮಣಿಯ ಉದರದಲ್ಲಿ ಭಾರತಕುಲೋದ್ಧಾರಕನಾದ ಶ್ರೀ ಸ್ವಾಮಿ ದಯಾನಂದನು ಜನಿಸಿದುದು ಆಶ್ಚರ್ಯವಲ್ಲ. ಸನ್ ಸಾವಿರದ-ಎಂಟನೂರ-ಇಪ್ಪತ್ತನಾಲ್ಕನೆಯ (೧೮೨೪) ವರ್ಷದಲ್ಲಿ " ಮೂಲಶಂಕರ " ನೆಂಬ ಅಭಿದಾನದಿಂದ ನಮ್ಮ " **ದಯಾನಂದ** " ನು ಈ ಪೃಥ್ವಿಯಲ್ಲಿ ಜನ್ಮವೆತ್ತಿದನು.

ಲಾಲನ-ಪಾಲನವನ್ನು ಮೂಲಶಂಕರನ ತಾಯಿಯೂ ಆತನ ಚಿಕ್ಕಪ್ಪನೂ ಅತ್ಯಾದರದಿಂದ ನಡೆಯಿಸಿದರು. ಐದು ವರ್ಷಗಳು ಮುಗಿಯುವುದಕ್ಕೆ ಮೊದಲೇ ಅಂಬಾಶಂಕರನು ಮಗನನ್ನು ವಿದ್ಯಾಭ್ಯಾಸಕ್ಕೆ ಹಾಕಿದನು.

ಈ ವಿದ್ಯಾಭ್ಯಾಸವು ನಮಗೀಗ ಕೊಡಲ್ಪಡುವ ಇಂಗ್ರಜಿ ಶಾಲೆಗಳಲ್ಲಿ ಕೊಡುವಂತಹದಾಗಿರಲಿಲ್ಲ. ಅದು ನಮ್ಮ "ಪೂರ್ವ ಆರ್ಯರ ಗುರುಕುಲ" ಪದ್ಧತಿಯ ಮೇರೆಯಿದ್ದಿತು. ಅಳಿದು ಹೋಗಿರುವ ಅಯ್ಗಳ ಶಾಲೆಯೊಂದರಲ್ಲಿ ಮೂಲಶಂಕರನು ಸಂಸ್ಕೃತ ವಿದ್ಯೆಯ ವ್ಯಾಸಂಗ ಮಾಡಿದನು ಆದರೂ "ಕಕಾ-ಬಳ್ಳಿ"ಯು ತಂದೆಯಿಂದಲೇ ಮನೆಯಲ್ಲಿ ಕೊಡಲ್ಪಟ್ಟದ್ದಿತು. ಈ ವಿದ್ಯಾವ್ಯಾಸಂಗದಲ್ಲಿಯಾದರೋ ಮೂಲಶಂಕರನು ಎಳ್ಳಷ್ಟೂ ಜಿಗುಪ್ಸೆಯನ್ನು ತೋರಿಸಲಿಲ್ಲ. ಅತ್ಯಾತುರದಿಂದ ಓದಿ ಪಾರಂಗತನಾಗುತ್ತ ಬಂದನು. ಎಂಟು ವಸಂತಮಾಸಗಳು **ಪೂರಾ** ಕಳೆದಿರಲಿಲ್ಲ.—ಅಂಬಾಶಂಕರನು ತನ್ನ ಮಗನಿಗೆ ಯಜ್ಞೋಪವೀತಧಾರಣೆಯ ಮಹೋತ್ಸವವನ್ನು ಮಾಡಿಸಿದನು ಇಂದಿನಿಂದ ಮೂಲಶಂಕರನು ದ್ವಿಜನಾದನು. ಇಂದಿನಿಂದಾತನು ದ್ವಿಜನಿಗೆಂದು ನಿಯಮಿಸಲ್ಪಟ್ಟಿರುವ ದಿನಚರ್ಯೆಯ ಪಟ್ಟಿಯ ಪ್ರಕಾರ ನಡೆಯಬೇಕು; ಗುರುಕುಲದಲ್ಲಿ ವಾಸಮಾಡಬೇಕು; ಬ್ರಹ್ಮಚರ್ಯೆಯನ್ನು ಕೈಕೊಳ್ಳಬೇಕು; ಮಾನವನ ಜೀವಮಾನದ ನೂರು ವರ್ಷದ ಆಯುಷ್ಯದಲ್ಲಿ ಅತ್ಯುತ್ತಮವಾದ ಪ್ರಥಮದ ಇಪ್ಪತ್ತೈದು ವರ್ಷಗಳನ್ನು ಆತನು ವಿದ್ಯಾವ್ಯಾಸಂಗದಲ್ಲಿ ಕಳೆಯಬೇಕು; ಮತ್ತೆ ಎಪ್ಪತ್ತೈದು ವರ್ಷಗಳನ್ನು ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಆಶ್ರಮಗಳಲ್ಲಿ ಪ್ರಯೋಗಿಸಬೇಕು. ಆದರೆ ಈಗ ಇಪ್ಪತ್ತು ವರ್ಷದ ಯುವಕರು ಮುದುಕರು! ಹದಿನೈದು ವರ್ಷದ ತರುಣರು ತಂದೆಯರು!! ಹನ್ನೆರಡು ವರ್ಷದ 'ಬಾಲಿಕೆ'ಯು ತಾಯಿ!! ಹೇ ವಿಧಾತ! ಅತ್ಯುತ್ತಮ ಸೂತ್ರವನ್ನು ಬಿಟ್ಟು ಕುಪಥಗಾಮಿಗಳಾಗಿರುವುದು ಕೇವಲ ಮೌಢ್ಯವಲ್ಲವೇ ? ಮೌಢ್ಯವಾದರೊ, ಘಟನಾಚಕ್ರದ ವಶವಾಗಿರುವುದು. ಇದು ಆವುದು ಅತ್ಯುತ್ತಮವೋ ಅದು ನಾಳೆ ಕೆಟ್ಟದು. ಆದರೆ, ನಾಳಿದ್ದು ಮತ್ತೆ ಒಳ್ಳೆಯದು. ಘಟನಾಚಕ್ರದ ಗತಿಯನ್ನು ಪ್ರತಿಬಂಧಿಸಲು ಆದಾರಿಗೆ ಸಾಧ್ಯವು ?

— ವಿದ್ಯಾಭ್ಯಾಸ. —

ಮೂಲಶಂಕರನಿಗೀಗ ಬಲು ಜತನದಿಂದ ವಿದ್ಯಾಭ್ಯಾಸವು ಕೊಡಲ್ಪಡುತ್ತಿರುವುದು. ಅಂಬಾಶಂಕರನು ಆಗಿಂದಾಗ ಗುರು

ಶ್ರೀ ಮಹರ್ಷಿ ದಯಾನಂದ ಸರಸ್ವತಿ.

ವಿನ ಬಳಿಗೆ ಬಂದು ತನ್ನ ಮಗನಿಗೆ ಕೊಡುವ ವಿದ್ಯೆ ಶೈವ ಮತಾನುಸಾರವಾಗಿರಲೆಂದು ಹೇಳಿ ಹೋಗುವನು. ಹಾಗೆಯೇ ಗುರುವು ಶೈವಪುರಾಣಗಳನ್ನು ಹೆಚ್ಚಾಗಿ ಬೋಧಿಸತೊಡಗಿದನು. ಅದು ಅಂತು ಅಲ್ಲಿರಲಿ, ಗುರು-ಶಿಷ್ಯರಿಗೆ ನಡೆಯುತ್ತಿದ್ದ ಮನಕಾನಂದವನ್ನು ಕೊಡುವಂತಹ ವಿಷಯುಗಳನ್ನು ತಿಳಿಸುವೆವು.

ವಿಧೇಯತೆಯೇ ಸರಿ, ಒಪ್ಪಿಕೊಳ್ಳುವೆವು. ಬಾಲಕರಿಗೆ, ಅದರಲ್ಲಿಯೂ ವಿದ್ಯಾರ್ಥಿಗಳಿಗೆ ಇರಬೇಕಾದಗುಣವೇ ಇದು. ಆದರೆ, ಅದು ಈಗ ಇರುವುದೋ? ಇಲ್ಲ, ಸಹನೆಯಿಂದಲೂ ಸಂಯಮದಿಂದಲೂ ಸಹಸ್ರ ಸಂಖ್ಯಾತಗಳು ಕಳೆದುಹೋದುವು. ಕೊನೆಗೆ ಇಪ್ಪತ್ತನೆಯ ಶತಮಾನವೂ ಬಂದಿದೆ. ಕಾಲಚಕ್ರವು ಪರಿವರ್ತಿತವಾಗಿ ಕೀಳು, ಮೇಲಾಗಿದೆ; ಮೇಲು ಕೀಳಾಗಿದೆ. ಪುರುಷರ ಜೀವನ ಲಕ್ಷ್ಯವೂ ವಿದ್ಯಾಭ್ಯಾಸವೂ-- ಸರ್ವವೂ ಪರಿವರ್ತಿತವಾಗಿದೆ! ಹೀಗಿರಲು ಈಗಿನ ಬಾಲಕರನ್ನು ನಾವು ದೂಷಿಸ ಬಹುದೇ ? ಅದು ಅವರ ತಪ್ಪೇನು ? ತಾತನ ನೀತಿವಾಕ್ಯವನ್ನು ಕೇಳುವವರೇ ಇಲ್ಲ; ಗುರುವಿಗೆ ಮಾನ್ಯವನ್ನೀಯುವವರೇ ಇಲ್ಲ; ಅತ್ತಕಡೆ ಗುರುವು ಪಾಠ ಹೇಳುತ್ತಿದ್ದರೆ, ಇತ್ತಕಡೆ ಒಬ್ಬ ತುಂಟನು ಸೀಸದ ಕಡ್ಡಿಯನ್ನು ಆಸನಕ್ಕೆ "ಕುಟಕುಟನೆ" ಬಡಿಯುತ್ತಿರುವನು. ಮತ್ತೊಬ್ಬನು ಮೆಲ್ಲಗೆ ಮಾತನಾಡುತ್ತಿರುವನು, ಇನ್ನೊಬ್ಬನು ಗುರುಗಳಿಗೇ ಪಾಠ ಹೇಳಲು ಹೋಗುವನು. ಇನ್ನೊಬ್ಬ ಬಾಲಕನು ತಾನು "ಅವುಟ್"ಗೆ (ಹೊರಗೆ-Out) ಹೋಗಬೇಕೆನ್ನುವನು. ಇನ್ನೇನನ್ನು ಹೇಳುವ? ಮೂಲ ಶಂಕರನು ಇದನ್ನೇನಾದರೂ ಕಲಿತಿದ್ದನೇನು? ನಮ್ಮ ಮನಸ್ಸಿಗೆ ಹೊಳೆಯುತ್ತಲಿದೆ,— ಕನಸಿನಲ್ಲಿಯೂ ಕಂಡಿರಲಾರನೆಂದು ! ವ್ಯಾಸಂಗ ಕಾಲಮಧ್ಯದಲ್ಲಿ ಉಪವಾಸಾದಿ ವ್ರತಗಳು ಬರುವುವಷ್ಟೇ! ಅವನ್ನೆಲ್ಲಾ ಮೂಲಶಂಕರನು ಆಚರಿಸಲೇ ಬೇಕೆಂದು ತಂದೆಯು ಹಟವಿಡಿದನು; ಗುರುಗಳಿಗೂ ಹೇಳಿದನು; ಮನೆಯುವರೆಲ್ಲರಿಗೂ ಹೇಳಿದನು. ಕಟ್ಟಪ್ಪಣೆ! ಆದರೆ ಮೂಲ ಶಂಕರನ ತಾಯಿ, ನಾರೀಜನಸುಲಭವಾದ ಕೋಪ, ಕ್ರೋಧ— ಲಜ್ಜಾ ಸಮ್ಮಿಶ್ರವಾದ ಕಟಾಕ್ಷದಿಂದ ತಂದೆಯು ಸಿಟ್ಟಿನಿಂದ ಮಗನನ್ನು ಪಾರುಮಾಡುತಲಿದ್ದಳು. ಆದರೂ ಕೆಲವುವೇಳೆ ಮೂಲಶಂಕರನು ಉಪವಾಸವಿರಲೇ ಬೇಕಾಯಿತು. ಈ ಉಪವಾಸಗಳು ಮುಂದೆ ಮೂಲಶಂಕರನಿಗೆ ಬಲು ಸಹಾಯ ಮಾಡಿದುವು. ಕ್ಷುತ್ಪಿಪಾಸೆಗಳನ್ನು ಕ್ಷುಲ್ಲಕವಾಗೆಣಿಸಲು, ಬಾಲ್ಯದಲ್ಲಿ ಕಲೆತ ಇವೇ ಉಪವಾಸಗಳು ಸಹಕಾರಿಗಳೇ ಆದವು ಅಲ್ಲದೆ, ತಾಳ್ಮೆ, ತಕ್ಕ ಸಮಯದಲ್ಲಿ ಕೆಲಸ ಮಾಡುವಿಕೆ, ವಿಧೇಯತೆ, ತುಷ್ಟಿ ಇವೇ ಮುಂತಾದುವುಗಳನ್ನೆಲ್ಲಾ ಕಲಿತು ಅವುಗಳ ಮೇಲೆ ಯಾಜಮಾನ್ಯವನ್ನು ವಹಿಸಿದ್ದನು.

— ಶಿವರಾತ್ರಿ —

ಹದಿಮೂರು ವರ್ಷಗಳಾಗಿ ಹೋದುವು. ವ್ಯಾಕರಣ ಶಾಸ್ತ್ರವನ್ನೂ ವೇದದ ಒಂದು ಭಾಗವನ್ನೂ ನಿಘಂಟಿನ ಕೆಲವಂಶಗಳನ್ನೂ ಆಗಾಗಲೇ ಮೂಲಶಂಕರನು ಕಲಿತು ಪಾರಂಗತನಾಗಿದ್ದನು; ಆದರೂ ಇನ್ನೂ ಕಲಿಯುವುದರಲ್ಲಿಯೇ ಇದ್ದನು. ಆದರೆ ಈ ಮಧ್ಯದಲ್ಲಿ ಫಾಲ್ಗುಣ ಚತುರ್ದಶಿ ಬಂದೊದಗಿತು. ಶೈವರಿಗೆ ಇಂದಿನ ದಿನವು ಬಲು ಪವಿತ್ರವಾದುದು. ಏಕೆಂದರೆ- ಇಂದೇ, ನಂದಿವಾಹನ ಹರನು ಜನ್ಮವೆತ್ತಿದುದು! ಇಂದಿನ ರಾತ್ರಿಯಲ್ಲಿ ನಿದ್ರೆ ಮಾಡಲೇ ಬಾರದು. ಈ ಶಿವರಾತ್ರಿಯು,--- ಅದರಲ್ಲಿಯೂ ಕ್ರಿ. ಶ ೧೮೩೭ನೆಯ ಸಂವತ್ಸರ ಫಾಲ್ಗುಣ ಮಾಸದ (ಚತುರ್ದಶಿ) ಆರ್ಯ ಸಮಾಜದ ಚರಿತ್ರೆಯಲ್ಲಿ ಅತಿ ಪ್ರಸಿದ್ಧವಾದ ದಿನವಾಗಿರುವುದು. ಏಕೆಂದರೆ ಇಂದಿನ ಉಪವಾಸ ಮತ್ತು ಜಾಗರಣೆಗಳೇ ಸಮಾಜದಇರವಿಗೆ ಕಾರಣ ಭೂತವಾಗಿವೆ. ಈ ಶಿವರಾತ್ರಿ ಇರದಿದ್ದರೆ, **ದಯಾನಂದನು** ಮುಂದೆ ಬರುತ್ತಿರಲಿಲ್ಲ, ನಮಗೆ ಪ್ರಾಚೀನಾರ್ಯರ ಕುಲಶೀಲಾದಿಧರ್ಮಗಳ ವಿಷಯವು ತಿಳಿಯುತ್ತಿರಲಿಲ್ಲ;-ಮತ್ತು ಭಾರತ ಕುಲೋದ್ಧಾರವಾಗುತ್ತಲೇ ಇರಲಿಲ್ಲ!!

ಫಾಲ್ಗುಣ ಚತುರ್ದಶಿಯು ಬಂದಿತು. ಅಂಬಾಶಂಕರನು ಆಗಾಗಲೇ ಮಗನನ್ನು ಕರೆದು ಹಗಲು ಉಪವಾಸವಿರಬೇಕೆಂದೂ ರಾತ್ರಿ ನಿದ್ರಿಸಬಾರದೆಂದೂ ಕಟ್ಟಾಜ್ಞೆ ಮಾಡಿರುವನು! ತರುಣ ಬಾಲಕನು ತನ್ನ ಮಾತೆಯ ಬಳಿಗೆ ಓಡಿಹೋಗಿ ಆಕೆಯ ಸೆರಗನ್ನೆಳೆದು, ಆ ಸೆರಗನ್ನು ತಾನು ಹೊದ್ದು--ಮುಖವನ್ನು ಮುಚ್ಚಿ (ಬಾಲಕರನ್ನು ಬೆಕ್ಕಿನಂತೆ ಎನ್ನುವರುಂಟು; ಏಕೆಂದರೆ ಅವರು ತಮ್ಮ ಮುಖವನ್ನು ಮುಚ್ಚಿ ಮಾತನಾಡಿದರೆ ಅದಾರಿಗೂ ಕೇಳಿಸದೆಂದು ತಿಳಿದಿರುವರು. ಬೆಕ್ಕು ಕಣ್ಣುಮುಚ್ಚಿಕೊಂಡೇ ಹಾಲು ಕುಡಿಯುವಂತೆ) ದಯಾಮಯಿಯಾದ ಮಾತೆಯ ಮುಖವನ್ನು ನೋಡಿ, ತನ್ನ ಬಾಲಭಾಷಣಗಳಿಂದ ತಂದೆಯಮೇಲೆ ದೂರುಹೇಳಿದನು; ತಂದೆಯ ಕಟ್ಟಾಜ್ಞೆಯನ್ನು ಅಳುತಳುತ ಹೇಳಿದನು. ಪಾಪ! ಎಷ್ಟಾದರೂ ನಾರೀಹೃದಯವಲ್ಲವೆ? ಪತಿಯನ್ನು ಪ್ರಾರ್ಥಿಸಿಕೊಂಡಳು; ಮಗನು ಇನ್ನೂ ಚಿಕ್ಕವನು. ಇಷ್ಟು ಚಿಕ್ಕಪ್ರಾಯದಲ್ಲಿ ಉಪವಾಸಾದಿ ಕರ್ಮಗಳನ್ನು ಮಾಡತಕ್ಕ ಅವಶ್ಯಕವಿಲ್ಲವೆಂದು ಮೊದಲಾಗಿ ವಿಜ್ಞಾಪಿಸಿ ಕೊಂಡಳು. ಆದರೇನು? ಕಲ್ಲೆದೆಯ ಗಂಡನು ಕೇಳುವನೇ? ಕೇಳಿದನೇ? ಇಲ್ಲ!

ತಂದೆಯು ಮಗನನ್ನು ತನ್ನ ಬಳಿಗೆ ಕರೆದ. ಗಿರಿಜಾರಮಣನನ್ನು ನಿರುತವೂ ಭಜಿಸಬೇಕೆಂದು ಹೇಳಿ, ಹರನ ಅತ್ಯದ್ಭುತ ಪ್ರಭಾವದ ಕಥೆಗಳನ್ನೆಲ್ಲ ವಿವರಿಸಿ ಹೇಳಿದನು. ಎಷ್ಟಾದರೂ ಹದಿಮೂರು ವರ್ಷದ ಬಾಲಕನಲ್ಲವೇ? ಈ ಕಥೆಯನ್ನು

ಕೇಳಿ ಪರಮಾನಂದ ಭರಿತನಾಗಿ ಉಪವಾಸವಿರುವೆನೆಂದನು. ಹಗಲೇನೋ ಹಾಗೂ ಹೀಗೂ ಕಳೆದು ಹೋಯಿತು. ಇನ್ನುಳಿದುದು ರಾತ್ರಿ! ರಾತ್ರಿಯೂ ಬಂದಿತು. ಹಳ್ಳಿಯ ಪಕ್ಕದಲ್ಲಿದ್ದ ಶಿವಾಲಯವೊಂದಕ್ಕೆ ಅಂಬಾಶಂಕರನು ಮಗನೊಡನೆ ಬಂದನು.

ದೇವಾಲಯದಲ್ಲಿ ಆಗಲೇ ಭಕ್ತರು ಬಂದು ನೆರೆದಿದ್ದರು. ಹರಳೆಣ್ಣೆಯ ದೀಪಗಳು ಉರಿಯುತ್ತಿದ್ದುವು. ದೇವಾಲಯದ ಮಧ್ಯಭಾಗದಲ್ಲಿ ಒಂದು ಭಯಂಕರ ವಿಗ್ರಹವು ಇರಿಸಲ್ಪಟ್ಟಿದ್ದಿತು. ವಿಗ್ರಹದ ಆಪಾದ ಮಸ್ತಕವೂ ಕುಂಕುಮಾಚ್ಛಾದಿತವಾಗಿ ರಕ್ತವರ್ಣದಿಂದ ಶೋಭಿಸುತ್ತಿತ್ತು. ಪುಷ್ಪಕೋಟಿಯಿಂದ ವಿಗ್ರಹಕ್ಕೆ ಅರ್ಚನೆ ಮಾಡಿಸಿದ್ದರು. ವಿಗ್ರಹದ ಮುಂದೆ ಫಲ—ಪುಷ್ಪ, ಪತ್ರಾದಿಗಳನ್ನು ಗುಂಪೆಗಳಲ್ಲಿ ತುಂಬಿರಿಸಿದ್ದರು. ಸಾಲದುದಕ್ಕೆ ಲಾಡು, ಕೋಸುಂಬರಿ ಮುಂತಾದ ತಿನ್ನತಕ್ಕ ಸಿಹಿ, ಖಾರ ಪದಾರ್ಥಗಳನ್ನು ನೈವೇದ್ಯಕ್ಕಾಗಿ ಇರಿಸಿದ್ದರು. ನಾನಿರ ಗಟ್ಟಳೆಯಿಂದ ಭೂದೇವರು (ಬ್ರಾಹ್ಮಣರು) ಒಂದು ಅತ್ತಿತ್ತ ತಿರುಗಾಡುತ್ತಿದ್ದರು.

ಘಂಟಾನಾದವಾಯಿತು. ಎಲ್ಲರೂ ಏಕದೃಷ್ಟಿಯಿಂದ—ವಿಗ್ರಹದ ಮೇಲೆಯೂ ಭಟ್ಟಪುರೋಹಿತರ ಮೇಲೆಯೂ ನೈವೇದ್ಯದ ಸಾಮಗ್ರಿಯ ಮೇಲೆಯೂ ನೋಡತೊಡಗಿದರು. ಶಂಖನಾದವೂ ಜಾಗಟೆಯ ರವವೂ ಕಿವಿಗಳನ್ನು ಭೇದಿಸುತ್ತಿದ್ದುವು. ಮಂಗಳಾರುತಿಯೂ ಆಯಿತು. ಎಲ್ಲರಿಗೂ ಆರತಿ ದೊರಕಿತು. ಆ ಬಳಿಕ ಫಲ ಮಂತ್ರಾಕ್ಷತೆಗಳನ್ನೂ ನೈವೇದ್ಯ ಶೇಷವನ್ನೂ ಹಂಚಿದರು. ಇದಾದ ಒಡನೆಯೇ ಅನೇಕರು ಸ್ವಗೃಹಾಭಿಮುಖರಾಗಿ ಹೋದರು. ಅಂಬಾಶಂಕರನಾದರೋ ಹೋಗಲಿಲ್ಲ;—ಅಲ್ಲಿಯೇ ಇದ್ದ ಕೆಲವು ಭಕ್ತರು (ಭಕ್ತರೆಂದು ಕರೆಯಬೇಕಾಗಿದೆ!), ಪುರಾಣ ಪಠನ ಮಾಡುವುದರಲ್ಲಿ ಆಸಕ್ತರಾದರು. (ಈಗಿನವರು "ಪ್ರಭಾವತಿ ದರ್ಬಾರ" ಮುಂತಾದ ನಾಟಕಗಳನ್ನು ನೋಡುವುದಕ್ಕೆ ಹೋಗುತ್ತಾರೆ)

ಮಧ್ಯರಾತ್ರಿಯಾಯಿತು. ವಸುಂಧರೆಯೂ ಕೂಡ ರವಹೀನೆಯಾದಳು. ಶಿವಾಲಯದಲ್ಲಿದ್ದ ಅನೇಕರು ನಿದ್ರಿಸಿದರು. ಮೂಲ ಶಂಕರನು ಇನ್ನೂ ನಿದ್ರಿಸಿರಲಿಲ್ಲ. ಹರಳೆಣ್ಣೆಯ ದೀಪವೊಂದು ಮಿಣಮಿಣನೆ ಉರಿಯುತ್ತಿತ್ತು. ಅದರ ಅಸ್ಪಷ್ಟವಾದ ಬೆಳಕಿನಲ್ಲಿ ವಿಗ್ರಹವು ಮಂಕುಮಂಕಾಗಿ ಕಾಣುತ್ತಿತ್ತು. ಅದೇನೋ ಸರಬರ ಶಬ್ದವಾಯಿತು. ಮೂಲ ಶಂಕರನು ನೋಡಿದನು;—ಒಂದಿಲಿ! ತ್ರಿಪುರಹರನೂ ಉರಗ ಭೂಷಣನೂ ದೇವಾದಿದೇವನೂ ಕೈಲಾಸವಾಸಿಯೂ ನಂದಿ ವಾಹನನೂ ಚಂದ್ರಶೇಖರನೂ ಸುಡುಗಾಡಿಗೊಡೆಯನೂ ಆದ ತ್ರಿಜಗತ್ಪತಿ ಗಿರಿಜಾರಮಣ ಹರನಿಗೆ ಅರ್ಪಿಸಿದ್ದ ಫಲ ಪುಷ್ಪಗಳನ್ನು ಅಪಹರಿಸಲು ಕ್ಷುದ್ರಜೀವಿ, ಅಶುದ್ಧವಾದ ತನ್ನ ಪಾದದಿಂದ ವಿಗ್ರಹದ ಶಿರಸ್ಸಿನ ಮೇಲೆ ಹತ್ತಿ ನಾಲ್ಕಯ್ದು ಬಾರಿ ಮಯ್ಯೆಲ್ಲೆಲ್ಲಾ ಓಡಾಡಿ ಅತ್ಯಾಚಾರ ನಡೆಯಿಸಿದೆ! ವಿಗ್ರಹವನ್ನು ಮುಟ್ಟಬೇಕಾದರೆ ಭೂಸುರರು ಸ್ನಾನಮಾಡಿ ಮಡಿಯನ್ನುಟ್ಟು ಆ ಬಳಿಕ ಮುಟ್ಟಬೇಕಂತೆ! ಇದೇನಿದು? ಅಶುಚಿಯಾದ ಇಲಿ, ಈ ಪವಿತ್ರ ವಿಗ್ರಹದ ಮೇಲೆಲ್ಲಾ ಸಿಕ್ಕಿದ ಹಾಗೆ ಓಡಾಡುತ್ತಿದೆ? ಮೂಲ ಶಂಕರನು ಆಲೋಚಿಸ ತೊಡಗಿದನು. ಜನರಿಂದ ಕರೆಯಲ್ಪಡುತ್ತಿದ್ದ ಸರ್ವಶಕ್ತ—ಶಂಕರನೆಂಬ ಆ ದೇವಾಲಯದ ದೇವರು ಮೂಲಶಂಕರನಿಗೆ ಬರಿಯ ಕಲ್ಲಾಗಿ ಪರಿಣಮಿಸಿತು. ಪ್ರಪಂಚದ ಸೃಷ್ಟಿ, ಸ್ಥಿತಿ ಲಯಗಳಿಗೆ ಅಧೀಶನಾದ ದೇವರು, ಕಲ್ಲೆಂದಿಗೂ ಅಲ್ಲವೆಂದು ನಿರ್ಧರಿಸಿದನು. ಉಪವಾಸಾದಿಗಳನ್ನು ಪ್ರಸ್ತುತದ ಜನರು ಭ್ರಮೆಯಿಂದಲೂ ಮೌಢ್ಯದಿಂದಲೂ ಕಪಟನಟನದಿಂದಲೂ, ಆಚರಿಸುತ್ತಿರುವರೆಂದು ತಿಳಿದುಕೊಂಡನು. ಆದರೂ ಸಂಶಯವನ್ನು ಪೂರ್ಣವಾಗಿ ಹೋಗಲಾಡಿಸಲು ತಂದೆಯನ್ನು ಎಚ್ಚರಿಸಲಿಕ್ಕೆ ಹೋದನು. (ಆತನೂ ಕೂಡ ಕಡೆಗೆ ಮಲಗಿದ್ದನು) ಅರ್ಧ ನಿದ್ರಾವಸ್ಥೆಯಲ್ಲಿ ಮಗ್ನನಾಗಿದ್ದ ಅಂಬಾಶಂಕರನು ಮಗನು ಈ ರೀತಿಯಾಗಿ ಕೇಳಿದ ಅಪವಿತ್ರ ಪ್ರಶ್ನೆಗಳನ್ನು ಕೇಳಿ ಸಿಟ್ಟಿನಿಂದ ಗದರಿಸಿದನು. ಆದರೂ ಮೂಲ ಶಂಕರನು ಕೆಲವು ಪ್ರಶ್ನೆಗಳನ್ನು ಹಾಕಿದನು. ಅದಕ್ಕೆ ಸಿಕ್ಕಿದ ಉತ್ತರದ ಮುಖ್ಯಾಂಶವು:— ಆ ದೇವಾಲಯದ ವಿಗ್ರಹವು ನಿಜವಾದ ದೇವರಲ್ಲವೆಂದೂ ನಿಜವಾದ ದೇವರು ಕೈಲಾಸಗಿರಿಯಲ್ಲಿರುವನೆಂತಲೂ ಈ ವಿಗ್ರಹದಲ್ಲಿ ದೈವತ್ವವನ್ನು ಭೂಸುರರು ತುಂಬಿರುವರೆಂದೂ ಮುಂತಾಗಿ ತಿಳುಹಿದನು. ಅರ್ಧ ಸಂತೃಪ್ತನಾದ ಮೂಲಶಂಕರನು ಮನೆಗೆ ಹೋಗಲು ತಂದೆಯನ್ನು ಕೇಳಿಕೊಂಡನು ಪ್ರಥಮತಃ ತಂದೆಯು ಒಪ್ಪಲಿಲ್ಲ. ಆದರೆ ಮೂಲಶಂಕರನು ಹಟವಿಡಿದುದರಿಂದ ತಂದೆಯು ಕಳುಹಲೊಪ್ಪಿದನು. ಆದರ ತಿಂಡಿಯನ್ನೇನೂ ತಿನ್ನಕೂಡದೆಂದು ಹೇಳಿ ಸೇವಕನೊಬ್ಬನೊಡನೆ ಕಳುಹಿದನು. ಮೂಲ ಶಂಕರನು ಮನೆಗೆ ಬಂದು ಸ್ವಲ್ಪ ಮಿಠಾಯಿಯನ್ನು ತಿಂದು ಸ್ವಸ್ಥವಾಗಿ ಮಲಗಿ ನಿದ್ರಿಸಿದನು.

"ದೈ ವ ಘ ಟ ನೆ"

ವಾಚಕರೇ!

ನೀವೂ ವಿಗ್ರಹವನ್ನು ಪೂಜಿಸುವಿರಿ; ನಾವೂ ಪೂಜಿಸುವೆವು. ಎಲ್ಲಾ ಹಿಂದೂಗಳೂ ಪೂಜಿಸುವರು; ಇಂತಹ ಸಂದರ್ಭಗಳೆಷ್ಟೋ ನಿಮ್ಮ ನಮ್ಮ ಮನೆಗಳಲ್ಲಿ ಸಂಭವಿಸಿವೆ. ಆದರೇನು? ನೀವಾಗಲೀ ನಾವಾಗಲೀ ಅದನ್ನು ಮನಸ್ಸಿಗೆ ತಂದಿರುವೆವೇ? ಕುರುಡರಂತೆ ಪೂಜಿಸುತ್ತಿದ್ದೆವು; ಪೂಜಿಸುತ್ತಿರುವೆವು. ನಮ್ಮ

ನಿಮ್ಮೆಲ್ಲಾರಿಗಾದರೂ ಈ ತರದ ಯೋಚನೆ, ಮನಸ್ಸಿಗೆ ಹೊಳೆಯಿತೇ? ಆಶ್ಚರ್ಯ! ಹದಿಮೂರು ವರ್ಷದ ಬಾಲಕ ಮೂಲಶಂಕರನು ಈ ರೀತಿ ಪ್ರಶ್ನೆಮಾಡಿದುದನ್ನು ನೋಡಿ ರಿರಾ-- ಆತನ ವಿಚಾರಶಕ್ತಿ?

ಶಿವರಾತ್ರಿಯಾದ ತರುವಾಯ ಮೂಲಶಂಕರನು ತಂದೆ ಯೊಡನೆ ಹೇಳಿ,— ಕೆಲವು ಕಾಲ ವಿದ್ಯಾಭ್ಯಾಸಂಗ ಮಾಡು ನೆಂದು ಹೇಳಿ,- ಈ ಮಧ್ಯದಲ್ಲಿ ಉಪವಾಸ ವ್ರತಾಚರಣೆ – ಇತ್ಯಾದಿಗಳಿಂದ ತನ್ನನ್ನು ಮುಕ್ತನನ್ನಾಗಿ ಮಾಡಬೇಕೆಂದು ಬೇಡಿಕೊಂಡನು. ಮೂಲಶಂಕರನಿಗೆ ಅಪ್ಪಣೆ ಸಿಕ್ಕಿತು.

ಆದರೇನು? ದೈವಘಟನ ಸಂಭವಿಸಿತು. ಮೂಲ ಶಂಕ ರನ ಪ್ರಿಯ ಸಹೋದರಿ, ವಾಂತಿಭೇದಿಗ ತುತ್ತಾಗಿ ಮರಣ ವನ್ನು ಹೊಂದಿದಳು. ಮನೆಯವರೆಲ್ಲರೂ ಗೋಳಿಡುತ್ತಿದ್ದ ರು. ಆದರೆ ಮೂಲಶಂಕರನಿಗೆ ಇದಾವುದೂ ಗೊತ್ತಾಗು ವದಿಲ್ಲ. ಏತಕ್ಕೆಳುವರೆಂಬದು ತಿಳಿಯದೆ, ಆತನು ಅತ್ತಿತ್ತ ನೋಡುತ್ತ ಆಲೋಚಿಸುತ್ತಿದ್ದನು. ಆದರೇನು? ನೆರೆಹೊರೆ ಯವರೆಲ್ಲರೂ “ ಕಲ್ಲೆದೆಯವನಪ್ಪಾ ” ಎಂದರು.

ಮೂಲಶಂಕರನು ಒಂದೆಡೆ ಕುಳಿತು ಹೀಗೆ ಯೋಚಿಸಿದ ನು. - ಸಾವು ಎಂದರೇನು ? ಈ ಸಾವಿಂದ ಪಾರಾಗಲು ಸ ನ್ಮಿಂದಾಗದೇ ? ನಾನೂ ಸಾಯಬೇಕೇ? ಎಲ್ಲರೂ ಸತ್ತೇ ಸಾಯುವರು! ಎಷ್ಟುಬಾರಿ ? ಯಾರಿಗೆ ಗೊತ್ತು ? ಇದನ್ನೀಗ ಕಂಡು ಹಿಡಿಯಲೇಬೇಕು!

ಹೀಗೆ ಆಲೋಚಿಸುತ್ತಿರುವಲ್ಲಿ ಮೂರುವರ್ಷಗಳು ಪೂ ರಾ ಕಳೆದಿರಲಿಲ್ಲ; ಅಷ್ಟರಲ್ಲಿಯೇ ಮೂಲಶಂಕರನ ಚಿಕ್ಕಪ್ಪ ನು ಸತ್ತುಹೋದನು! ಈ ಬಾರಿ ದಯಾನಂದನ ಗೋಳೇ ಗೋಳು! ಅಳುವೆ ಅಳು!! ದು:ಖವೇ ದು:ಖ! ಅತ್ತು ಅತ್ತು ಕಣ್ಣುಗಳು ಕೆಂಪಾದವು,-- ಊದಿದವು! ಕೊನೆಗೆ ಮನದಲ್ಲಿ ತಾನು ಮರಣವನ್ನು ಜಯಿಸುವ ಉಪಾಯವನ್ನು ಕಂಡು ಹಿಡಿಯಲೇಬೇಕೆಂದು ನಿರ್ಧರಿಸಿದನು.

ಹೀಗೆಂದು ನಿರ್ಧರಿಸಿ ತನ್ನ ಮಿತ್ರರನ್ನು ಏನುಪಾಯವೆಂದು ಕೇಳಿದನು. ಅವರಲ್ಲಿ ಅನೇಕರುಯೋಗವೇ ತಕ್ಕದಾದ ಉಪಾ ಯವೆಂದರು. ಆ ಯೋಗವನ್ನು ತಾನು ಕಲಿಯಬೇಕೆಂದು ದಯಾನಂದನು ನಿಶ್ಚಯಿಸಿದನು.

— ದ್ವಿತೀಯ ತರಂಗ —

(ಯೋಗಾಭ್ಯಾಸ)

“ ತಮಗೆ ಯೋಗಾಭ್ಯಾಸವೇನಾದರೂ ಗೊತ್ತಿದೆಯೇ ? ಗೊತ್ತಿದ್ದರೆ ನನಗೆ ಕಲಿಸಿಕೊಡುವಿರಾ? ” ಎಂಬುದಾಗಿ ದಾ ರಿಯಲ್ಲಿ ಹೋಗುತಿದ್ದವರನ್ನೆಲ್ಲಾ ಒಬ್ಬ ಹದಿನೆಂಟು-ಹತ್ತೊಂ ಬತ್ತು ವರ್ಷಪ್ರಾಯದ ಯುವಕನು ಕೇಳುತ್ತಲಿದ್ದನು. ಈ ಯುವಕನೇ ಮೂಲಶಂಕರನು! ಇದು ಪ್ರಥಮತ: ಮುದು ಕಿಯರಿಗೆ ತಿಳಿಯಿತು. ಅವರೆಲ್ಲರೂ ಮೂಲಶಂಕರನ ತಾ ಯಿಗೆ ಒಂದಕ್ಕೆರಡಾಗಿ ವರದಿಯನ್ನು ಕೊಟ್ಟರು. ಮಗನು ಸನ್ಯಾಸಿಯಾದರೆ ತನಗೆ ಸೊಸೆಸಿಕ್ಕಲಾರಳೆಂದು ಭಯದಿಂದ ಪೀಡಿತಳಾಗಿ ಗಂಡನಿಗೆ ಸಮಾಚಾರವನ್ನು ಕೊಟ್ಟಳು. ಅಂಬಾ ಶಂಕರನು ಪ್ರಾರಣೆಯ ದಿನದಿಂದ ತನ್ನಮಗನ ವಿವಾಹ ಕಾರ್ಯಕ್ಕೆ ಸಲಕರಣೆಗಳನ್ನು ಸಂಪಾದಿಸಲು ತೊಡಗಿದನು.

ಭಾರತ ವರ್ಷದಲ್ಲಿ ವಿವಾಹದ ವಿಷಯದಲ್ಲಿ ತಂದೆತಾಯಿ ಯರಿಗಲ್ಲದೆ ಮಕ್ಕಳಿಗೆ ಸ್ವಾತಂತ್ರ್ಯವೇ ಇಲ್ಲ. ಮೂಲ ಶಂಕರನಿಗೆ ವರ್ತಮಾನವು ಮುಟ್ಟಿತು;! ದಿಗಿಲು ಉಂಟಾ ಯಿತು. ಸಂಸಾರವೆಂದರೆ ಬಂಧನವೆಂದು ತಿಳಿದನು; ಬಂಧ ನವಿದ್ದರೆ ಯೋಗಾಭ್ಯಾಸಕ್ಕೆ ಸಮಯವೇ ಸಿಕ್ಕುವುದಿಲ್ಲವೆಂದು ತಿಳಿದನು.

ಇಪ್ಪತ್ತುವರ್ಷಗಳಾದವು. ಇಷ್ಟರಲ್ಲಿಯೇ ಅನೇಕಾನೇಕ ಗ್ರಂಥಗಳನ್ನು ಪಠಿಸಿ ಒಳ್ಳೆಯ ಜ್ಞಾನವನ್ನು ಸಂಪಾದಿಸಿದ್ದನು. ಅದರಿನ್ನೂ ವೃದ್ಧಿ ಪಡಿಸಿಕೊಳ್ಳಬೇಕೆಂಬ ಆಶೆ; ಅದಕ್ಕಾಗಿ ಕಾಶಿಗೆ ಹೋಗಲು ತಂದೆಯ ಅನುಮತಿಯನ್ನು ಕೇಳಿದನು. ಆದರೆ ತಂದೆಯು ಒಪ್ಪಲಿಲ್ಲ. ಮನೆಯ ಬಳಿಯಲ್ಲಿಯ ಒಬ್ಬ ಗುರುವಿನಲ್ಲಿಗೆ ಕಳುಹಿದನು.

ಒಂದು ವರ್ಷವು ಕಳೆಯಲಿಲ್ಲ. ಒಂದು ದಿನ ಭೃತ್ಯನೊ ಬ್ಬನು ಮೂಲಶಂಕರನು ಮನೆಗೆ ಬರಬೇಕೆಂದು ಹೇಳಿಕಳು ಹಿಸಿರುವರೆಂದನು.

ಮಹಾಶಯ! ತಾವು ಎಂದಾದರೂ 'ಇಸ್ಪೀಟ'ನ್ನು ಆಡಿರು ವಿರಾ? ಆಡಿರುವುದಾದರೆ ಆಟದ ಮಧ್ಯದಲ್ಲಿ ಒಂದು ವಿಘ್ನ ಬಂತೆಂದರೆ ತಮಗೆಷ್ಟು ಬೇಸರಿಕೆಯುಂಟಾದೀತು ? ಅದರ ನೂರ್ಮಡಿಯಷ್ಟು ಮೂಲಶಂಕರನಿಗುಂಟಾಯಿತು.

ಮನೆಗೆ ಬಂದು ನೋಡಿದನು, ತನ್ನ ಸರ್ವನಾಶಕ್ಕೆ ಎಲ್ಲವೂ ಸಿದ್ಧವಾಗಿದೆ. ಅದೇನೆಂದರೆ ವಿವಾಹಪ್ರಯತ್ನ! ಇದನ್ನು ಜಯಿಸಲೇ ಬೇಕು. ಇಲ್ಲದಿದ್ದರೆ ಉಪಾಯವಿಲ್ಲ. ಜಯಿಸು ವುದು ಹೇಗೆ? ಮನೆಯನ್ನು ಬಿಟ್ಟು ಪಲಾಯನವಾಗುವುದ ರಿಂದ? ಸರಿ! ಅದೇ ಸರಿ!!

ಅಂದೇ, ಎಂದರೆ ಸನ್ ಸಾವಿರದ ಎಂಟನೂರ ನಾಲ್ವತ್ತೆರ ಡನೆಯ ವರ್ಷದ ಒಂದಾನೊಂದು ರಾತ್ರಿ ಸತ್ಯಶೋಧನೆಗಾಗಿ ಮೂಲಶಂಕರನು ಸ್ವಗೃಹ, ಮಾತಾ, ಪಿತೃ, ಬಂಧು, ಮಿತ್ರ ಪರಿವಾರವೆಲ್ಲವನ್ನೂ ಬಿಟ್ಟು ಎಲ್ಲಿಗೋ ಹೊರಟು ಹೋ ದನು.

೨

ಮನೆ ಬಿಟ್ಟು ಹೋದವನು ಎಲ್ಲಿಗೆ ಹೋದನು? ಎತ್ತ ಕಡೆಗೆ ಹೋದರೆ ಮಾತಾಪಿತೃಗಳಿಂದ ತೊಂದರೆ ಬಾರದಿದ್ದೀತು?" ಹೀಗೆ ಆಲೋಚಿಸುತ್ತ ಮೂರು ದಿನಗಳ ವರೆಗೆ ಎಲ್ಲಿಯೂ ನಿಲ್ಲದೆ ನೆಟ್ಟಗೆ ನಡೆದನು.

ನಾಲ್ಕು ಮಾಸಗಳ ವರೆಗೆ ಮೂಲಶಂಕರನು ನಿರ್ಭಯನಾಗಿ ಗಿರಿಯಿಂದ ಗಿರಿಗೂ ವನದಿಂದ ವನಕ್ಕೂ ಆಶ್ರಮದಿಂದ ಆಶ್ರಮಕ್ಕೂ ಹೋಗುತ್ತ ಕಾಲವನ್ನು ಕಳೆದನು. ಅಂಬಾಶಂಕರನು ಮಗನನ್ನು ಹುಡುಕುವ ಪ್ರಯತ್ನದಲ್ಲಿಯೇ ಇದ್ದನು. ಹೇಗೋ ಮೂಲಶಂಕರನು ವಿರಾಗಿಯಾದ ಸಂಗತಿಯನ್ನೂ ಆತನು ಇರುವ ಸ್ಥಳವನ್ನೂ ಪತ್ತೆಮಾಡಿ ತಂದೆಯು ಮಗನನ್ನು ಹಿಡಿಯುವುದರಲ್ಲಿ ಆತುರನಾದನು. ಅಂದೇ ನಾಲ್ಕು ಜನ ಬಲಾಢ್ಯರಾದ ಸೇವಕರೊಡನೆ ಆ ಸ್ಥಳಕ್ಕೆ ಹೋಗಿ ಮಗನನ್ನು ಹಿಡಿದನು. ಮೊದಲೇ ರೇಗಿದ್ದ ತಂದೆಯು ಮಗನು ಈ ರೀತಿಯಾಗಿ ವಿಚಿತ್ರವೇಷಧಾರಿಯಾಗಿ ವರ್ತಿಸುವುದನ್ನು ಕಂಡು ಮತ್ತೂ ಹೆಚ್ಚಾಗಿ ರೇಗಿದನು. ಕೂಡಲೇ ಮಗನು ಧರಿಸಿದ್ದ ಕಾವಿವಸ್ತ್ರವನ್ನು ಕಿತ್ತೆಸೆದು ಬಿಸುಟು, ಕುಲಕ್ಕೆ ಕಲಂಕನೆಂದು ಬಯ್ದು, ಆಡಬಾರದ ಮಾತುಗಳನ್ನಾಡಿ ದೂಷಿಸಿದನು. ಆದರೆ, ಇದಾವುದಕ್ಕೂ ಮೂಲಶಂಕರನು ಕಿವಿಯನ್ನೇ ಕೊಡಲಿಲ್ಲ. ಮೌನವ್ರತವೇ ಶ್ರೇಷ್ಠವೆಂದೆಂದುಕೊಂಡು ಸುಮ್ಮನಿದ್ದನು.

ಮಗನು ಕೈವಶನಾದನೆಂದು ಸಂತೋಷದಿಂದ ಅಂಬಾಶಂಕರನು ಅಂದು ರಾತ್ರಿ ಸುಖವಾಗಿ ನಿದ್ದೆ ಮಾಡಿದನು. ಆದರೆ, ಮಗನು ಮತ್ತೆಲ್ಲಿಗಾದರೂ ಓಡಿ ಹೋದಾನೆಂದು ಭಾವಿಸಿ ಮೊದಲೇ ಆ ನಾಲ್ಕುಜನ ಸೇವಕರಿಗೆ ಕಾವಲಿರುವಂತೆ ಆಜ್ಞಾಪಿಸಿದ್ದನು. ಆದರೇನು? ವಿಧಿಯು ಬೇರೊಂದು ರೀತಿಯನ್ನು ಕಲ್ಪಿಸಿದ್ದಿತು. ಅತ್ಯಂತ ಅಂಧಕಾರದ ಆ ನಿಶೀತ ಸಮಯದಲ್ಲಿ ಅನುಚರರೆಲ್ಲರೂ ನಿದ್ರಾವಶರಾದರು. ನಿದ್ರಿಸುವವನಂತೆ ನಟಿಸುತ್ತಿದ್ದ ಮೂಲಶಂಕರನು ಇದನ್ನು ಕಂಡು ಇದೇ ಸಮಯವೆಂದೂಹಿಸಿ, ಮರಳಿ ಪಲಾಯನವಾಗಲು ಉದ್ಯುಕ್ತನಾದನು. ಮೊದಲು ಸುತ್ತಮುತ್ತಲೂ ನೋಡಿದನು. ಎಲ್ಲರೂ ನಿದ್ರಿಸುತ್ತಿದ್ದರು; ನಿಶ್ಶಬ್ದವಾಗಿದ್ದಿತು; ಅಂಧಕಾರ! ಮೇಲೆ ನೋಡಿದನು. ತಾರಾಗಣಶೂನ್ಯವಾಗಿದ್ದ ಗಗನವು ತಮೋರಾಶಿಯಿಂದ ಕೂಡಿದ್ದಿತು. ಮೊದಲೇ ಅಂಕುರಿಸಿದ್ದ ಆಶೆ! ಈಗ ಪ್ರಬಲವಾಯಿತು. ಮನುಷ್ಯನಿಗೆ ಪ್ರಬಲವಾದ ಆಶೆಯಿದ್ದರೆ ಏನನ್ನು ತಾನೇ ಮಾಡಲಾರನು? ಅದರಲ್ಲಿಯೂ ಪ್ರತಿಫಲದ ಸಮಾಚಾರವು ಕಿವಿಗೆ ಬಿದ್ದುದಾದಿರಂತೂ ಎಂತಹ ದುರ್ಗಮವಾದ ಪರ್ವತವನ್ನಾದರೂ ಹತ್ತಬಲ್ಲನು. ಮೂಲಶಂಕರನ ಸ್ಥಿತಿಯು ಕೂಡ ಹಾಗಾಗಿದ್ದಿತು. ಆತನು ಯೋಗವೇ ತನಗೆ ನಿರ್ದಿಷ್ಟವಾದ ಪ್ರತಿಫಲವೆಂದೂ ಅದಕ್ಕಾಗಿ ಮಾಡಬೇಕಾದ ಪಲಾಯನವೇ ದುರ್ಗಮವಾದ ಗಿರಿಯೆಂದೂ ಭಾವಿಸಿ, ಅದನ್ನು ಹತ್ತುವ ಉಪಾಯವನ್ನು ಆಲೋಚಿಸಿದನು. ರಜನಿಯು ಸಹಾಯಕಳಾದಳು. ಆ ಅಂಧಕಾರದಲ್ಲಿ ಆತನನ್ನು ಗುರುತಿಸುವವರಾರು? ಮತ್ತು ಹಿಂಬಾಲಿಸುವವರಾರು? ಇಷ್ಟೆಲ್ಲವನ್ನೂ ಆಲೋಚಿಸಿ ಮೂಲಶಂಕರನು ಓಡತೊಡಗಿದನು. ಕ್ಷಣಾರ್ಧದಲ್ಲಿ ಮೈಲಿಗಳೆರಡನ್ನು ದಾಟಿ ಅತ್ತ ಪಾರಾದನು. ಆ ಕತ್ತಲೆಯಲ್ಲಿ ಕಲ್ಲುಮುಳ್ಳುಗಳನ್ನೆಣಿಸದೆ ಅಡ್ಡದಾರಿಯನ್ನು ಹಿಡಿದನು. ಹೀಗೆಯೇ ಬೆಳಗಾಗುವ ವರೆಗೂ ಒಂದೇ ರೀತಿಯಾಗಿ ಓಡುತ್ತಿದ್ದು ಆ ಬಳಿಕ ಒಂದು ದೇವಾಲಯದ ಹಿಂದೆ ಅವಿತುಕೊಂಡನು!

ಅರುಣೋದಯವಾಯಿತು. ಮೂಲಶಂಕರನು ಅಡಗಿಕೊಂಡಿದ್ದ ಕುರುಚಲು ಗಿಡಗಳ ಆ ಅರಣ್ಯದ ಪಕ್ಕದಲ್ಲಿಯೇ ಅನೇಕರು ಹುಡುಕುತ್ತಿದ್ದರು. ದೇವಾಲಯದ ಆ ಮೂಲೆ ಈ ಮೂಲೆಗಳನ್ನೆಲ್ಲ ನೋಡಿದರು. ಹೊರಗಿನ ಅಂಗಳವನ್ನು ಹುಡುಕಿದುದಾಯಿತು. ದೇವಸ್ಥಾನದ ವನ ಮಂಟಪಗಳೆಲ್ಲವನ್ನೂ ಚೆನ್ನಾಗಿ ನೋಡಿದರು. ಕಡೆಗೆ 'ಕಮಲಾಶ್ರಿತೆ'ಯನ್ನು ಕಂಡು ಆಕೆಯ ಸೋಪಾನಾವಳಿಗಳ ಮೇಲೆ ಹೆಜ್ಜೆಗುರುತುಗಳೆಲ್ಲವನ್ನೂ ಪತ್ತೆ ಹಚ್ಚಲು ಪ್ರಯತ್ನಿಸಿದುದಾಯಿತು. ಆದರೆ ಅದೆಲ್ಲ ವ್ಯರ್ಥವಾಯಿತು; ಯಾರೂ ಈ ಕುರುಚಲು ಗಿಡದ ಕಾಡಿಗೆ ಬರಲಿಲ್ಲ. ಎಲ್ಲರೂ ಆಲೋಚಿಸಿದರು—ಮಾಯವಾದನೆಂದು ತಿಳಿದು ನಿರಾಶರಾದರು! ಹಾಗಾದರಲ್ಲಿಂದ ಮೂಲಶಂಕರನು ಎತ್ತ ಕಡೆಗೆ ಹೋದನು?

೩

— ದಯಾನಂದ ಸರಸ್ವತಿ. —

ಮಹಾತ್ಮರಿಗೆ ಕ್ಷುತ್ಪಿಪಾಸೆಗಳು ಕ್ಷುಲ್ಲಕವಾದುವು. ಅವರು ಸದಾ ಪರರಿಗೆ ಹಿತವನ್ನಾಚರಿಸುವುದರಲ್ಲಿರುವುದಲ್ಲದೆ ಸ್ವಾರ್ಥವೆನ್ನೆಂದಿಗೂ ಆಶಿಸರು. ಪ್ರಪಂಚದಲ್ಲಿ, ಅದರಲ್ಲಿಯೂ ಭಾರತವರ್ಷದಲ್ಲಿ ಇಷ್ಟೊಂದು ಮುಂದಿಯರೇಕೆ ಸಾಯಬೇಕು? ಏಕೆ, ಲಕ್ಷೋಪಲಕ್ಷಜೀವಿಗಳು ಅಜ್ಞಾನಿಗಳಾಗಿ ಪಾಪಕರ್ಮವನ್ನಾಚರಿಸುವರು? ಅದೇಕೆ, ಅವರು ಎಲ್ಲರನ್ನೂ ಸಹೋದರರನ್ನಾಗಿ ಭಾವಿಸುವುದಿಲ್ಲ? ಅದೇಕೆ, ಒಬ್ಬನು ಮತ್ತೊಬ್ಬನ ಸಹಪಂಕ್ತಿಯಲ್ಲಿ ಕೂಡ ಭೋಜನ ಮಾಡಲಶಕ್ತನು? ಹೀಗಾದರೆ ಸಂಘವು ಚೆನ್ನಾಗಿದ್ದೀತೇ? ಹೀಗಿರುವುದಾದರೆ ಈ ಸಂಘಕ್ಕೆ ಶಕ್ತಿ ಎಲ್ಲಿದೆ? ಹೀಗಾಗಲು ಕಾರಣವೇನು? ಇವೇ ಮೊದಲಾದವುಗಳನ್ನು ಆಲೋಚಿಸುತ್ತಾ ಇದಕ್ಕೆ ತಕ್ಕ ಉಪಾಯಗಳನ್ನು ಕಂಡು ಹಿಡಿಯಬೇಕೆಂದು

ನಿರ್ಧರಿಸಿದನು. ಅದೇ ತನ್ನ ಈ ಜನ್ಮದ ಮುಖ್ಯ ಕರ್ತವ್ಯವೆಂದು ಭಾವಿಸಿದನು. ಅಂದಿನಿಂದಾತನು ಎಲ್ಲಿ ಮುನಿಪೋತ್ತಮರ ಪುಣ್ಯಾಶ್ರಮಗಳಿರುವುವೋ ಅಲ್ಲಿಗೆಲ್ಲಾ ದರ್ಶನವನ್ನಿತ್ತನು. ಅನೇಕಾನೇಕ ಮುನಿಗಳ ಆಶ್ರಮವನ್ನು ಸಂದರ್ಶಿಸಿದನು. ಅವರ ಅತ್ಯುತ್ತಮವಾದ ಮನೋಭಾವಗಳನ್ನರಿತನು. "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬುದು ನಿಜವಾಗಿರಬಹುದೇ ಎಂದು ಅನೇಕ ವರ್ಷಗಳ ಪರಿಶ್ರಮದಿಂದ "ದೇವರೇ ಸರ್ವವೂ" ಎಂಬ ಸದಭಿಪ್ರಾಯಕ್ಕೆ ಬಂದನು.

ಈಗಾತನಿಗೆ ಇಪ್ಪತ್ತನಾಲ್ಕು ವರ್ಷ ಪ್ರಾಯವಾಗಿದ್ದಿತು. ಪ್ರಾಪಂಚಿಕ ಸುಖಭೋಗಕ್ಕೆ ಮನವನ್ನೇ ಕೊಡದೆ, ಹೆಚ್ಚೇಕೆ, ದೇಹಾಧಾರವಾದ ಅನ್ನಪಾನಾದಿಗಳನ್ನು ಕೂಡ ತೃಣಕ್ಕೆ ಸಮವಾಗಿ ಭಾವಿಸಿ, ಲೋಕಹಿತಕಾರ್ಯದಲ್ಲಿ ನಿರತನಾದನು. ಭ್ರಮರವು ಹೇಗೆ ಲಕ್ಷಪುಷ್ಪಗಳಲ್ಲಿರುವ ಮಧುರವನ್ನು ಸಂಗ್ರಹಿಸಿ, ತನ್ನ ಗೃಹವನ್ನು ತುಂಬಿಸುವುದೋ ಹಾಗೆ, ಮೂಲಶಂಕರನು "ದಯಾನಂದ ಸರಸ್ವತಿ" ಎಂಬ ಅಭಿಧಾನದಿಂದ ಅನೇಕಾನೇಕ ಆಶ್ರಮಗಳನ್ನು ಸಂದರ್ಶಿಸಿ ಅಲ್ಲಿಯ ಸತ್ವಗಳನ್ನು ಆರಿಸಿ ತೆಗೆದು ತನ್ನ ಮನೋಭಂಡಾರವನ್ನು ತುಂಬಿಸುತ್ತ ಬಂದನು.

ಈ ಮಧ್ಯದಲ್ಲಿ ಆದಾರೋ ಹೇಳಿದರಂತೆ!—ಏನೆಂದು?—"ಹೀಗೆ ಮಾಡಿದರೆ ಪ್ರಯೋಜನವಿಲ್ಲ. ಪೂರ್ವದಲ್ಲಿ ಋಷಿಗಳು ನಿಶ್ಶಬ್ದವಾಗಿ ಮೆರೆಯುತ್ತಿದ್ದ ಅರಣ್ಯಗಳಲ್ಲಿ ಚಿರಕಾಲ ತಪಸ್ಸನ್ನು ಮಾಡಿ, ಆ ತರುವಾಯ ಸದಾನಂದ ಮುಕ್ತಿಯನ್ನು ಪಡೆಯುತ್ತಿದ್ದರು. ಇದಕ್ಕೆ ಸಾಕ್ಷಿಯಾಗಿ ಈಗಲೂ ಗಿರಿಕಂದರಗಳಲ್ಲಿ ಕೆಲವು ಮಹಾತ್ಮರು ವಾಸಿಸುತ್ತಿರುವರು" ಎಂದು.

ದಯಾನಂದನಿಗೆ ಇದು ನಿಜವೆಂದು ತೋರಿತು. ಅಂದಿನಿಂದ ಉತ್ತರ ಹಿಂದುದೇಶದ ಮುಕ್ಕಾಲುಪಾಲು ಗಿರಿಕಂದರ ಗುಹಾಶ್ರಮಾದಿಗಳನ್ನು ಸಂದರ್ಶಿಸ ತೊಡಗಿದನು. ಹದಿನಾಲ್ಕು ವರ್ಷಗಳು ಕಳೆದವು. ಈ ಮಧ್ಯೇ ಪ್ರಸಿದ್ಧ ಜವಲಾನಂದ ಪುರಿ ಮತ್ತು ಶಿವಾನಂದಗಿರಿ ಇವುಗಳ ಸಂದರ್ಶನವು ಇನ್ನು ಮುಂದಕ್ಕೆ ಬಲು ಸಹಾಯ ಮಾಡಿತು. ಈ ಸ್ಥಳಗಳಲ್ಲಿ ನಡೆದ ತರ್ಕವಿತರ್ಕಗಳಿಂದ ಈತನ ಸಂಶಯಗಳು ಬಹುಮಟ್ಟಿಗೆ ನಿವಾರಣೆಯಾದವು. ಚಿರಶಾಂತಿಯಿಂದಲೂ ಅನುಪಮ ಶೋಭೆಯಿಂದಲೂ ವೃಕ್ಷಲತಾದಿಗಳ ಸಮೂಹದಿಂದಲೂ ಚಿಕ್ಕ ಚಿಕ್ಕ ಕಾಲುಹೊಳೆಗಳಿಂದಲೂ ಕೂಡಿರುವ ಇಂತಹ ಸದಾನಂದ ಸ್ಥಳಕ್ಕಲ್ಲವೇ ದಯಾನಂದನು ಬಲು ಚಿಕ್ಕವನಾಗಿದ್ದಲ್ಲಿಂದ ಸೇರಬೇಕಾಗುತ್ತಿದ್ದುದು? ಸರಿ! ಇನ್ನೇನು? ಅದು ಆತನಿಗೆ ಲಭಿಸಿತು. ಇನ್ನಾದರೂ ಆತನು ಸಂತೋಷದಿಂದಿರಬಹುದಲ್ಲವೆ? ಕೂಡದು! ಆತನಿಗೆ ನಿಯಮಿಸಿದ ಕೆಲಸವು ಬೇರೆಯೇ ಇದೆ. ದಿನವು ಕಳೆಯುತ್ತ ಬಂದಂತೆಲ್ಲ ಆತನಿಗೆ ಶಕ್ತಿಯೂ ಅಭಿವರ್ಧಿಸುತ್ತ ಹೋಯಿತು. ಮಾಸಗಳ ಮೇಲೆ ಮಾಸಗಳು ಕಳೆಯುತ್ತ ಬಂದಂತೆಲ್ಲ ಆತನಿಗೆ ಮನೋನಿರ್ಧರತೆಯು ಹೆಚ್ಚುತ್ತ ಹೋಯಿತಲ್ಲದೆ ಕಡಿಮೆಯಾಗಲಿಲ್ಲ. ಆದರೆ ಅಸಂತುಷ್ಟಿಯೂ ಜತೆಯಲ್ಲಿ ವೃದ್ಧಿಯಾಯಿತು. ಏಕೆ? ಕೆಲಸವಿಲ್ಲ! ತಾನೇನು ಮಾಡಬೇಕು? ಎಂಬ ಆಲೋಚನೆಯು ಸದಾಲೋಚನೆಯಾಗುತ್ತ ಬಂದಿತು. ಒಮ್ಮೆ ದ್ರೋಣಸಾಗರದ ಬಳಿಯಲ್ಲಿರುವಾಗ ಆತನಿಗೆ ಈ ದುಃಖವು ಉಮ್ಮಳಿಸಿ, ಸಹಿಸಲಸಾಧ್ಯವಾಗಿ ಕೊನೆಗೆ ತನ್ನ ಈ ಜೀವನಕ್ಕೆ ಒಮ್ಮೆಯೇ ವಿಸರ್ಜನೆಯನ್ನು ಕೊಡಲೇನೆಂದು ಯೋಚಿಸಿದನು. ಪಾತಕವೃಂದ! ಯೋಚಿಸಿರಿ! ಓರ್ವ ಮಹಾಪುರುಷನು ಸದಾ ಉದ್ಯೋಗಿಯಾಗಿದ್ದು ಮತ್ತೆ ನಿರುದ್ಯೋಗಿಯಾಗುವುದಾದರೆ ಆದೆಷ್ಟು ಕಷ್ಟ?

— ತೃತೀಯ ತರಂಗ. —

(ಶಿಷ್ಯತ್ವ)

" ಆಚಾರ್ಯ "

ಮೂಲಶಂಕರನು ಗೃಹತ್ಯಾಗ ಮಾಡಿ ಹದಿನಾಲ್ಕು ವರ್ಷಗಳಾದುವು. ಇನ್ನೂ ತನ್ನ ಕರ್ತವ್ಯವೇನೆಂಬುದು ತಿಳಿಯಲಿಲ್ಲ. ಗಿರಿಕಂದರಗಳ ಸಂದರ್ಶನವನ್ನು ಈಗಾತನು ತ್ಯಜಿಸಿದನು. ಇನ್ನು ಅತ್ತಕಡೆಗೆ ಹೋಗಿ ಪ್ರಯೋಜನವಿಲ್ಲವೆಂದು ಭಾವಿಸಿದನು. ಹೀಗಿರಲು ಒಂದು ದಿನ ಮಧುರಾ ನಗರದಲ್ಲಿ ಒಬ್ಬ ಯತಿಶ್ರೇಷ್ಠನಿರುವನೆಂದು ತಿಳಿದನು. ಆತನನ್ನು ಸಂದರ್ಶಿಸಬೇಕೆಂದು ಆಲೋಚಿಸಿ ಕೂಡಲೇ ಹೊರಟು ಬಂದನು.

ಈ ಯತಿವರ್ಯನೆಂದರೆ ಬಾಲ್ಯದಿಂದ ಅಂಧನು; ಅದರಲ್ಲಿ ಈಗ ಕೂದಲುನರೆತ ಮುದುಕನು; ಎಪ್ಪತ್ತುವರ್ಷಗಳು ಮೀರಿರಬಹುದು. ಆದರೂ, ಗುಣ-ವಿವೇಚನಾಶಕ್ತಿ ಇನ್ನೂ ಚೆನ್ನಾಗಿದ್ದಿತು. ಶಾಸ್ತ್ರಕ್ಕೆ ಸಂಬಂಧಿಸಿದ ಅನೃತಗಳನ್ನೂ ದೈವಪ್ರೇರಿತ ಅಸತ್ಯಗಳನ್ನೂ (?) (ಕುರಿತ ಆಲಾಪಗಳನ್ನು) ಆತನು ನಂಬನು. ಅಸಂಬದ್ಧ ಪ್ರಲಾಪದ ಪುರಾಣಶತಕಂಥೆಗಳು ಆತನಿಗೆ ಆಗವು. ಅವುಗಳನ್ನು ಕಂಡರೆ ಆತನು ಉರಿದುರಿದು ಬೀಳುತ್ತಿದ್ದನು. "ಆರ್ಷಗ್ರಂಥಗಳು" ಎಂದರೆ ಆತನಿಗೆ ಪ್ರಾಣಪ್ರಿಯವಾದವುಗಳು. ಆತನ ಹೆಸರು "ಸ್ವಾಮಿ ವಿರಜಾನಂದ ಸರಸ್ವತಿ."; "ದಾಂಡಜಿ" ಎಂಬ ಮತ್ತೊಂದು ಅಡ್ಡ ಹೆಸರೂ ಇದ್ದಿತು. ಈ ನೂತನ ಪರಿಚಿತನಾದ ಪಂಡಿ

ತನನ್ನು ಸೋಲಿಸಬೇಕೆಂದು ದಯಾನಂದನು ತನ್ನ ಪೂರ್ಣ ಪಾಂಡಿತ್ಯವನ್ನು ಪ್ರಯೋಗಿಸಿ ತರ್ಕಿಸಿದನು. ಆದರೂ ಆತನ ಪ್ರಯಾಸವು ಈತನಲ್ಲಿ ಫಲಕಾರಿಯಾಗಲಿಲ್ಲ. ಇನ್ನು ಈ ಕಡೆಯು ಪಂಡಿತೋತ್ತಮ ಗುರುವರ್ಯನಲ್ಲಿ ಆರ್ಷಗ್ರಂಥಗಳ ಸಂಪೂರ್ಣ ಪಾಂಡಿತ್ಯವನ್ನು ಸಂಪಾದಿಸಬೇಕೆಂದು ನಿರ್ಧರಿಸಿದನು ಆದರೆ—ಆಶ್ಚರ್ಯ! ನಾವು ಯಾವಾಗಲೂ ಒಳ್ಳೆಯ ಕೆಲಸಗಳನ್ನು ಮಾಡುವಾಗ ಒಂದು ವಿಘ್ನವು ಬಂದೇ ಬರುವುದಲ್ಲವೇ? ಆ ವಿಘ್ನಾಧಿಕಾರಿಯೇ ಈ "ಆದರೆ." ಆದರೆ ಹಣಬೇಕಲ್ಲವೇ? ಆವ ಕೆಲಸವೇ ಆಗಲಿ ಹಣವಿಲ್ಲದೆ ಆದೀತೇ? ಎಣ್ಣೆ ಬೇಕು, ದೀಪಬೇಕು, ಮತ್ತೆ ಗ್ರಂಥಗಳಾಗಬೇಕು. ಇದೆಲ್ಲಕ್ಕೂ ಹಣಬೇಕು. 'ಆಗರೂ (ಪುನಃ ಆ 'ಆದರೂ' ಬಂದೇ ಬರುವುದು!) ಸಹಾಯಕರು ಆರಾದರೂ ಇರಲಾರರೇ? "ತರಿಪಾರಣ್ಯ ಸ್ಪಕ್ತಿಗೊಂಡು ತರು ಗೂಡಸ್ತ್ಕಾದರೆ ಫಲವನ್ನೀಯುವ ಇತರ ವೃಕ್ಷಗಳೇ ಇಲ್ಲವೇ? ಧರಿತ್ರಿಯಲ್ಲಿ ದಾತರು ಇಲ್ಲವೇ ಇಲ್ಲವೇನು?" ಇರಲಿ!

ಭಾರತೀಯರಿಗೆ ಮತವೆಂದರೆ ಪ್ರಾಣ! ಅನ್ನನೀರನ್ನಾದರೂ ಬಿಟ್ಟಾರು, ಮತವನ್ನು ಬಿಡಲಾರರು. ದಯಾನಂದನ ಬುದ್ಧಿವಂತಿಕೆಗೆ ಮೆಚ್ಚಿ ಅದಾವನೋ ಒಬ್ಬ ದಾತನು ಸ್ವಲ್ಪ ಸ್ಥಳವನ್ನು ಕೊಟ್ಟು ಸಹಾಯ ಮಾಡಿದನು ಮತ್ತೊಬ್ಬನು ದೀಪವನ್ನು ಕೊಟ್ಟನು. ಇನ್ನೊಬ್ಬ ದಯಾಳು, ಸ್ವಲ್ಪ ಎಣ್ಣೆಯನ್ನು ಕೊಟ್ಟನು. ಹೀಗೆ ಎಲ್ಲರಿಂದಲೂ ಆದರಿಸಲ್ಪಟ್ಟ ದಯಾನಂದನು ಆರ್ಷಗ್ರಂಥಗಳ ವ್ಯಾಸಂಗಕ್ಕೆ ತನ್ನ ನವೀನ ಗುರುವರ್ಯನ ಪಾದಪ್ರದೇಶದಲ್ಲಿ ಕುಳಿತನು. ಭಲೆ! ದಯಾನಂದ! ನಿರಾಶ್ರಿತ ದಯಾನಂದ, ಭಲೆಭಲೆ!! ಈಗ ಸದಾಶ್ರಿತ ದಯಾನಂದನಾದೆ!! ಸದ್ವಿದ್ಯೆಯನ್ನು ಪಡೆದು ನಿನ್ನ ಸಹೋದರರಾದ-ಬಳಲುವ ಭಾರತೀಯರನ್ನು ಉದ್ಧರಿಸುವೆಯಲ್ಲವೆ? ಭಲೆ!!!

೨

"ಚಿರಬ್ರಹ್ಮಚರ್ಯ ದೀಕ್ಷೆ"

ಗುರುವರ್ಯನು ದಯಾನಂದನಿಗೆ ದೊರೆತನಷ್ಟೆ! ಈತನ ಬಳಿಯಲ್ಲಿ ಈ ಕಾಲದ ಹುಡುಗರಾರಾದರೂ ಒಂದು ಗಂಟೆಯ ಕಾಲ ಸರಿಯಾಗಿ ವ್ಯಾಸಂಗಿಸಲಾರರು! ಏಕೆಂದರೆ, ಸಹನಶಕ್ತಿ ಲೇಶವಾದರೂ ಇರಲಿಲ್ಲ. ಅಭಿನವ ಚಂಡಕೌಶಿಕನೆಂದರಾದೀತೋ ಏನೊ! ಆದರೂ ಆ ಚಂಡಕೌಶಿಕ (ವಿಶ್ವಾಮಿತ್ರ) ನಿಗಿಂತಲೂ ವಿರಜಾನಂದನು ಸ್ವಲ್ಪಮಟ್ಟಿಗೆ ಹೆಚ್ಚಿನವನೆಂದೇ ಹೇಳಬಹುದು. ಜ್ಞಾನದ ಬೆಳಕು ಈತನಲ್ಲಿ ತುಂಬಿದ್ದಿತು. ಸೃಷ್ಟಿವಿಧಾತನು, ಆದೇಕೋ ಕಾಣೆವು, ಈತನಿಗೆ ದೃಷ್ಟಿಯನ್ನು ದಯೆಪಾಲಿಸಿರಲಿಲ್ಲ. ಜನ್ಮಾಂಧನು ಇವನು ಜ್ಞಾನವನ್ನು ಸಂಪಾದಿಸಿದ್ದುದು ಆತ್ಯಾಶ್ಚರ್ಯವೇ ಸರಿ!

ಯಾರಾದರೂ ಸ್ವಲ್ಪಮಾತ್ರ ರೇಗಿಸಿದರೆ ಸಾಕು, ಅವರನ್ನು ವಿರಜಾನಂದನು ಪೂರಾ ಶಿಕ್ಷಿಸುತ್ತಿದ್ದನು. ಒಮ್ಮೆ ದಯಾನಂದನು ಏನೋ ಸಿಟ್ಟು ಬರುವಂತೆ ಮಾಡಿದುದರಿಂದ ಗುರುವು ರೇಗಿ ಶಿಷ್ಯನ ಮಣಿಕಟ್ಟಿನಲ್ಲಿ ಬಲವಾಗಿ ಹೊಡೆದನಂತೆ! ಆ ಕುರುಹನ್ನು ದಯಾನಂದನು ತನ್ನ ಮರಣಪರ್ಯಂತವೂ ನೆನೆಯುತ್ತಿದ್ದನಂತೆ.

ಭಾರತ ವರ್ಷದಲ್ಲಿ ಗುರುಶಿಷ್ಯರ ಸಂಬಂಧವು ಬಲು ಚೆನ್ನಾಗಿದ್ದಿತು. ಶಿಷ್ಯನು ಗುರುವನ್ನು ದೇವರಂತೆ ಗೌರವಿಸುತ್ತಲೂ ತಂದೆಯಂತೆ ಪ್ರೀತಿಸುತ್ತಲೂ ಇದ್ದನು. ಕುಂಬಾರನು ಹೇಗೆ ಗುಡ್ಡಬೆಟ್ಟಗಳಲ್ಲಿ ಬೆಳೆದ ಜೇಡಿಮಣ್ಣನ್ನು ತಂದು ಅದನ್ನು ಹದಮಾಡಿ ಎಂತೆಂತಹ ಅಂದವಾದ ಕುಡಿಕೆ ಮಡಕೆಗಳ ರೂಪಕ್ಕೆ ತರುವನೋ ಹಾಗೆಯೇ ಪ್ರಾಚೀನ ಗುರುಗಳೂ ಕೂಡ ತಮ್ಮ ಶಿಷ್ಯರನ್ನು ಅತ್ಯುತ್ತಮ ರೀತಿಯಲ್ಲಿ ತರಬಿಯತ್ತು ಮಾಡುತ್ತಿದ್ದರು. ಈಗಿನ ಕಾಲದಲ್ಲಿಯಾದರೋ ಪ್ರೊಫೆಸರ್ ಮಹಾಶಯರು ಲೆಕ್ಚರುಗಳನ್ನು ಕೊಡುತ್ತಾರೆ. ಶಿಷ್ಯಮಹಾರಾಯರು ಅವುಗಳ ಮೇಲೆ "ನೋಟ್ಸು" (ಟಿಪ್ಪಣಿ) ಗಳನ್ನು ಬರೆದುಕೊಳ್ಳುವರು. ಅದಷ್ಟೇ ಸಂಬಂಧ; ಮತ್ತೇನೂ ಇಲ್ಲ. ಹಾ! ಪ್ರಾಚೀನ ವ್ಯವಸ್ಥೆಯೇ! ಎಂದು ನೀನಿಲ್ಲಿಗೆ ಬರುವೆ?

ದಯಾನಂದನು ನಾಲ್ಕು ವರ್ಷಗಳ ವರೆಗೆ ಈ ನೂತನ ಗುರುವಿನಲ್ಲಿ ವ್ಯಾಸಂಗ ಮಾಡಿದನು. ದಾಂಡಜಿ ಮಹಾಶಯನು ತನ್ನ ಶಿಷ್ಯನಿಗೆ ಬಲು ಚೆನ್ನಾಗಿ ಕಲಿಸಿದನು. ದಾಂಡಜೀಯು ಒಳ್ಳೆಯ ಪಂಡಿತನಾಗಿದ್ದನು. ಸಂಸ್ಕೃತಭಾಷಾ ಪಂಡಿತನು. ಸಾಧಾರಣ ಎಲ್ಲ ಗ್ರಂಥಗಳೂ ಆತನ ಬಳಿಯಲ್ಲಿಯೇ ಇದ್ದವು. ಆಲೋಚಿಸುವುದಾಗಲಿ,— ವಿರಜಾನಂದನು ತನ್ನ ಅಂಧತ್ವತ ದೆಸೆಯಲ್ಲಿ ಇಷ್ಟರ ಮಟ್ಟಿಗೆ ಪಾಂಡಿತ್ಯವನ್ನು ಸಂಪಾದಿಸುವುದಕ್ಕಾಗಿ ಎಷ್ಟು ಶ್ರಮಪಟ್ಟಿರಬಹುದೆಂದು! ಬಲು ಚಿಕ್ಕಪ್ರಾಯದವನಾಗಿರುವಾಗಲೇ ದಾಂಡಜಿಯು ತನ್ನ ಮಾತಾಪಿತರನ್ನು ಕಳೆದುಕೊಂಡನು. ಅತ್ತಿಗೆಯ ಮಾತನ್ನು ಕೇಳಿ ಅಣ್ಣನು ತಮ್ಮನಾದ ದಾಂಡಜಿಯನ್ನು ಮನೆಯಿಂದ ಹೊರಡಿಸಿದನು. ವಿರಜಾನಂದನಿಗೆ ಏನು ಗತಿ? ಭಿಕ್ಷಾವೃತ್ತಿ! ಇದೇನೋ ಸಾಧ್ಯ. ಆದರೆ ಪಾರಮಾರ್ಥಿಕ ಜ್ಞಾನಸಂಪಾದನೆಗೆ ಇದು ಕಂಟಕಸ್ವರೂಪ! ಸಮಯವೆಲ್ಲವೂ ಉದರಪೋಷಣೆಯಲ್ಲಿಯೇ ಆಯಿತು! ಆದರೂ ಚಿಂತೆಯಿಲ್ಲವೆಂದು ಭಾವಿಸಿ, ಅನ್ನ ನೀರಿನ ಆಶೆಯನ್ನು ತೊರೆದು ವೇದವ್ಯಾಸಂಗವನ್ನು ಮಾಡಲು ತೊಡಗಿದನು. ಪಾಠಕವರ್ಗ! ವಿರಜಾನಂದನು ವೇದಗಳನು ಕಲಿಯಲು ಎಷ್ಟು

ಪ್ರಯಾಸಪಟ್ಟಿರಬಹುದೋ ವಿಚಾರಮಾಡಿರಿ. ಆದರಲ್ಲಿಯೂ ಕೇಳಿ ಕಲಿಯುವುದು! ಹಾಗೆ ಕೇಳಿ ಕಲಿಯುವುದಕ್ಕೆ ಆತನಿಗೆ ಅದೆಂತಹ ಜ್ಞಾಪಕಶಕ್ತಿ ಇರಬಹುದು!

ವಿಗ್ರಹಾರಾಧನೆ ಬರಿಯ ಭ್ರಾಂತಿಯೆಂದು ದಾಂಡಜಿಯು ಹೇಳುತ್ತಿದ್ದನು. 'ಸಿದ್ಧಾಂತಕೌಮುದಿ' ಮತ್ತು 'ಸಾರಸ್ವತ' ಇವೆರಡು ಗ್ರಂಥಗಳನ್ನು ಕೆಟ್ಟವು ಈ ಪ್ರಪಂಚದಲ್ಲಿ ಬೇರಿಲ್ಲವೆನ್ನುತ್ತಿದ್ದನು. ಮತ್ತೆ ಈತನ ಸದಭಿಪ್ರಾಯಗಳನ್ನು ತಿರುಗಿಸಲು ಯಾರಿಂದಲೂ ಆಗುತ್ತಿರಲಿಲ್ಲ. ಬಲು ಹಠವಾದಿ. ಒಮ್ಮೆ ಒಬ್ಬ ರಾಜನು ಈ ಅಂಧನಲ್ಲಿ ಸಂಸ್ಕೃತವಿದ್ಯಾಭ್ಯಾಸಂಗ ಮಾಡಬೇಕೆಂದು ಬಂದನಂತೆ! ಆದರೆ ಮೊದಲೇ ದಾಂಡಜಿಯು ಹೇಳಿದನೇನೆಂದರೆ— ಒಂದು ದಿನ ರಾಜನು ಸರಿಯಾಗಿ ಬಾರದಿದ್ದರೂ ತಾನು ತನ್ನ ಇಷ್ಟ ಬಂದೆಡೆಗೆ ಹೋಗುವೆನೆಂಬ ನಿಯಮದ ಮೇಲೆ ತಾನು ಪಾಠವನ್ನು ಹೇಳುವೆನೆಂದು! ಅದಕ್ಕೊಪ್ಪಿ ರಾಜನು ಎರಡು ವರ್ಷಗಳು ಸರಿಯಾಗಿ ಬಂದನು. ಒಂದು ದಿನವೇನೋ ಸರಿಯಾದ ಸಮಯಕ್ಕೆ ಬಾರದೆ ಸ್ವಲ್ಪ ಹೊತ್ತಾಗಿ ಬಂದನು. ಅದೇ ನೆವ. ವಿರಜಾನಂದನು ಅಂದೇ ಆದೇ ಸಮಯದಲ್ಲಿ ಎಲ್ಲಿಗೋ ಹೋಗಿಬಿಟ್ಟನಂತೆ!

ವ್ಯಾಸಂಗಕಾಲವು ಪೂರ್ಣವಾಗುತ್ತ ಬಂದಿತು ದಯಾನಂದನು ಇನ್ನು ಗುರುವನ್ನು ಸಂತೋಷಪಡಿಸಿ ಅತನಿಂದ ಅಪ್ಪಣೆಯನ್ನು ಪಡೆದು ಹೋಗಬೇಕೆಂದು ಆಲೋಚಿಸುತ್ತಿದ್ದನು. ಒಂದು ದಿನ ಗುರುವು ಶಿಷ್ಯನನ್ನು ಕುರಿತು ಕಸಗುಡಿಸಲು ಅಪ್ಪಣೆಯನ್ನಿತ್ತನು. ದಯಾನಂದನು ವಿಧೇಯನಾಗಿ ಕಸವನ್ನು ಗುಡಿಸಿ ಅದನ್ನೊಂದು ಮೂಲೆಯಲ್ಲಿ ಗುಡ್ಡ ಮಾಡಿಟ್ಟನು. ಅಂಧ ದಾಂಡಜಿಯು ಅತ್ತಿತ್ತ ತಿರುಗಾಡುತಲಿದ್ದವನು ತಪ್ಪಿ ಗುಡ್ಡೆಯನ್ನು ಎಡವಿ ಬಿದ್ದನು. ಮಿತಿಮೀರಿದ ಕೋಪಬಂದಿತು. ಈ ಅನರ್ಥಕ್ಕೆ ಕಾರಣನಾದ ದಯಾನಂದನನ್ನು ಮನೆಯ ಹೊರಗೆ ನೂಕಿ ಬಾಗಿಲನ್ನು ಹಾಕಿಕೊಂಡನು. ಹೇ, ವಿಧಾತ! ಮೂರುದಿನಕ್ಕೆ ಮೊದಲು ಗುರುವಿನ ಅಪ್ಪಣೆಯನ್ನು ಪಡೆದು ಹೋಗಬೇಕೆಂದಿದ್ದ ದಯಾನಂದನು ಗುರುವಿನಿಂದ ಬಹಿಷ್ಕೃತನಾಗಿ ಇಂದು ಹೊರಗೆ ಬಿದ್ದಿರುವನು. ಆಶ್ಚರ್ಯ! ದಯಾನಂದನು ತನ್ನ ಮಿತ್ರರೊಡನೆ ಈ ವಿಷಯವನ್ನೆಲ್ಲಾ ಹೇಳಿ ಗೋಳಾಡಿದನು. ಈ ಗೋಳಾಟವನ್ನು ನೋಡಲಾರದೆ ಅವರೆಲ್ಲರೂ ಹೋಗಿ ವಿರಜಾನಂದನಲ್ಲಿ ಕ್ಷಮಾಪಣೆಯನ್ನೀಯಲು ಬೇಡಿಕೊಂಡರು. ಬುದ್ಧಿವಂತರು ಒಮ್ಮೆ ಕ್ರೋಧದಿಂದ ಉನ್ಮತ್ತರಾದರೂ ಮತ್ತೊಮ್ಮೆ ತಾಳ್ಮೆಯನ್ನು ವಹಿಸದಿರರು. ವಿರಜಾನಂದನು ಮತ್ತೊಮ್ಮೆ ದಯಾನಂದನನ್ನು ತನ್ನ ಶಿಷ್ಯವರ್ಗಕ್ಕೆ ತೆಗೆದುಕೊಂಡನು.

ದಯಾನಂದನು ಬ್ರಹ್ಮಚರ್ಯೆಯಿಂದ ಸನ್ಯಾಸ ದೀಕ್ಷೆಯನ್ನು ತೆಗೆದುಕೊಳ್ಳಲು ತಾನೇ ಒಂದು ಸುದಿನವನ್ನು ನಿಶ್ಚಯಿಸಿಕೊಂಡನು. ದಿನವು ಬಂದೇ ಬಂದಿತು, ಸುತ್ತಲೂ ಮಿತ್ರರೂ ಪರಿಚಿತಿಯುವರೂ ನೆರೆದಿರುವರು. ಹಾ! ಕಡೆಯ ನೋಟ! ಪಾವಕವು! ತಾವು ತಮ್ಮ ಶಾಲೆಯನ್ನು ಬಿಡುವಾಗ ಗುರು ಮತ್ತು ಮಿತ್ರರನ್ನು ಬೀಳ್ಕೊಳ್ಳುವಾಗ ನಿಮಗುಂಟಾಗಿದ್ದ ಹಾವಭಾವಗಳನ್ನು ತಾವು ಜ್ಞಾಪಿಸಿಕೊಳ್ಳುವುದಾಗಲಿ. ದಯಾನಂದನು ಒಂದು ತಟ್ಟೆಯಲ್ಲಿ ತಾಂಬೂಲವನ್ನು ಇರಿಸಿ ಗುರುವಿನ ಪಾದಪ್ರದೇಶದಲ್ಲಿರಿಸಿ ಸಾಷ್ಟಾಂಗ ನಮಸ್ಕಾರ ಮಾಡಿದನು. ಗುರುವು ಆಶೀರ್ವದಿಸಿ ಗುರುದಕ್ಷಿಣೆಯನ್ನು ಅಪೇಕ್ಷಿಸಿದನು. ಏನನ್ನು? ವೇದಮತವನ್ನು ಸರ್ವರಲ್ಲಿಯೂ ಪ್ರಚುರಪಡಿಸುವಂತೆಯೂ ಮೂರ್ಖತ್ವದ ಯಾತನೆಗಳನ್ನು ಹೋಗಲಾಡಿಸುವಂತೆಯೂ ಭಾರತೀಯರ ಸೌಕರ್ಯಕ್ಕಾಗಿ ಕೆಲಸ ಮಾಡುವಂತಹುದೇ ಗುರುದಕ್ಷಿಣೆ! ದಯಾನಂದನು ಅದಕ್ಕೊಪ್ಪಿದನು. ಇದು ಸನ್ ಸಾವಿರದ ಎಂಟನೂರ ಅರವತ್ಮೂರನೆಯ ಏಪ್ರಿಲ್ ತಿಂಗಳಲ್ಲಾಯಿತು! ಹೇ, ವೃದ್ಧ ಗುರುವರ್ಯ! ನೀನು ಅಂಧನೆ? ನಿಜವಾಗಿ ಅಂಧನೆ? ನಿನ್ನೀ ಜ್ಞಾನಪ್ರಕಾಶವು ಜಗತ್ತನ್ನೇ ಬೆಳಕುಮಾಡುತ್ತಿರುವಲ್ಲಿ ನಿನ್ನನ್ನು ಅಂಧನೆಂದಾರು ಹೇಳುವರು? ಮಹಾತ್ಮಾ! ಭಾರತವರ್ಷವು ನಿನ್ನ ಉಪಕಾರವನ್ನು ಸದಾ ಸ್ಮರಿಸುವುದು. ಚರಿತ್ರೆಯಲ್ಲಿ ಪ್ರಸಿದ್ಧಿಯಾಗುವುದು! ಧನ್ಯ! ಧನ್ಯ!! ಮಹಾತ್ಮಾ! ವಿರಜಾನಂದ! ನೀನೇ ಧನ್ಯಧನ್ಯ!!!

(ಸಶೇಷ)

ಮಾತೃಸ್ತವ.

ಆರ್ಯಾವೃತ್ತ|| ಕಾಪಿ ತಫಲೇವದಾನ್ಯಂ—ಕಮಲಾನಾಥಸ್ಯ ಪರಿಣತಂ ಪುಣ್ಯಂ ||
ಕೇಶವ ವಕ್ಷೋಹರ್ಮ್ಯಂ । ವೇದವಿಭಾವ್ಯಮಹಂ ಕಲಯೇ || ೧ ||
ಅಂಬಾಮಂಬುರುಹಾಕ್ಷೀಂ । ಅಂಬುಜನಾಭಸ್ಯ ವತ್ಸಮಧಿರೂಢಾಂ ||
ತನುಕಾಂತ್ಯಾಜಿತ ಚಪಲಾಂ । ಕುಂತಲ ಕುಟಿಲಾಂ ಕದಾಲೋಕೇ || ೨ ||
ಅಧರೇರುಣಾಂ ನಿತಂಬೇ—ವಿಪುಲಾಂ ನಯನೇ ಚ ಮಧ್ಯಮೇಕ್ಷಾಮಾಂ ||
ಈಡೇ ರಮಾಂ ಮಮಾಂಬಾಂ । ನೀಲಾಂತಾಲೇ ಸ್ತನೇ ಸ್ಥೂಲಾಂ || ೩ ||
ಶೀರ್ಷೇ ಕುಂತಲ ಭಾರಃ । ಕುಚಯೋರ್ಭಾರೋ ನಿತಂಬಯುಗಭಾರಃ ||
ಸುಘಟಿತ ಭಾರತ್ರಿತಯಂ । ಮಂಥರಗಮನೇಂಬ ತೇ ಹೇತುಃ || ೪ ||
ಪಿಶುನಯತಿ ಜನ್ಮಗೇಹಂ । ದೃಶಿಶಿಶರತ್ತ್ವಂ ಮನೋ ಜಡಿಮಾ ||
ನಿರತಂ ನೀರಜವಾಸೋ । ನೀರಧಿ ಶಯನೇನ ನಾಥವತ್ತ್ವಂ ತೇ || ೫ ||
ನಿಸ್ತ್ವಮಪಿ ಲಕ್ಷಭೂತಂ । ನಯತಿಹಿ ಲಕ್ಷಾಣಿ ರಿಕ್ಥನಿಚಯಾನಾಂ ||
ಮಾತಃ ಕಟಾಕ್ಷಲೇಶಃ । ಕಿಂ ನುಸದತ್ತೇನ ತೇ ಭ್ಯಸ್ಸಃ || ೬ ||
ಮೂರ್ತಿತ್ರಯ ಮಹಿಳಾನಾಂ । ಮಧ್ಯೇ ಧನ್ಯಾ ಭವಾದೃಶೀ ನಾನ್ಯಾ ||
ದೃಢಯತ್ಯಮುಮೇವಾರ್ಥಂ । ಸ್ಥಾನಂ ಪತ್ಯಾಹಿ ಕೃತ್ಯಭೇದೇನ || ೭ ||
ರಾಜಸಕಾರ್ಯಾಸಕ್ತಂ । ಡಂಭಯುತಂ ಪರುಷವಚನ ಬಹುಧೀರಂ ||
ಸರಳಯಿತುಂ ನಿಜರಮಣಂ । ಜಿಹ್ವಾಂ ಬ್ರಾಹ್ಮೀ ಸಮಧ್ಯಾಸ್ತೇ || ೮ ||
ಅನುಕಂಪಾಮುಪದೇಷ್ಟುಂ । ಲೋಕಲಯಾಧಿಷ್ಠಿತಸ್ಯ ರಮಣಸ್ಯ ||
ಪ್ರಭೋರ್ನಯಂ ವ ಮಂತ್ರೀ—ಪತ್ಯುಃ ಪಾರ್ಶ್ವೇಸ್ತ್ಯುಮಾಸೂನಂ || ೯ ||

ಈ ಶ್ರೀಸ್ತವವನ್ನು ರಚಿಸಿದ ಶ್ರೀಯುತ ಕಂಭಂ ಚೊಕ್ಕಣ್ಣನವರೆಂಬವರು ವಿದ್ವನ್ಮಣಿಗಳೂ, ಧರ್ಮಶಾಸ್ತ್ರವನ್ನು ಚನ್ನಾಗಿ ತಿಳಿದವರೂ, ಸಂಸ್ಕೃತಾಂಗ್ಲ-ದ್ರಾವಿಡ ಭಾಷೆಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆಗಿದ್ದರು. ಇವರು ಶಾಸನ ಇಲಾಖೆಯ ಅಧ್ಯಕ್ಷರ ಬಳಿಯಲ್ಲಿ ಉದ್ಯೋಗ ಮಾಡುತ್ತಿದ್ದರು. ಇವರು, ಕವಿತೆಯಲ್ಲಿ ತಮ್ಮ ಮನಸ್ಸನ್ನು ಕೊಟ್ಟಿದ್ದ ಪಕ್ಷದಲ್ಲಿ ಈವರೆಗೆ ಇವರಿಂದ ಎಷ್ಟೆಷ್ಟೋ ಉತ್ಕೃಷ್ಟ ಕವಿತೆಗಳು ಪ್ರಕಾಶಕ್ಕೆ ಬರುತ್ತಿದ್ದುವು; ಇಲ್ಲ, ಇವರಿಗೆ ಕವಿತೆಯಲ್ಲಿ ಅಷ್ಟಾಗಿ ಪ್ರವರ್ತಿಸಲು ಈವರೆಗೆ ಅವಕಾಶವುಂಟಾಗಲಿಲ್ಲವೆಂದು ಭಾವಿಸಬೇಕಾಗಿದೆ. ಇವರು ಈ ಶ್ರೀಸ್ತವವಲ್ಲದೆ, ಶ್ರೀನಿವಾಸಾಷ್ಟಕವೆಂಬ ಸ್ತೋತ್ರವನ್ನೂ, ಅಹೋಬಲಸ್ವಾಮಿಗಳ ಸ್ತುತಿಪರವಾದ ಶ್ಲೋಕಗಳನ್ನೂ ರಚಿಸಿರುವರು. ನಮ್ಮ ಸೋದರಿಯರ ಉಪಯೋಗಕ್ಕಾಗಿ ಶ್ರೀಸ್ತವವನ್ನು ಈಗ ಪ್ರಕಾಶಪಡಿಸಿರುವುದು. ಉಳಿದವುಗಳನ್ನೂ ಕ್ರಮವಾಗಿ ಪ್ರಕಟಿಸುವೆವು. ಮತ್ತು ಇವರು ಮತ್ತೊಂದು ಪ್ರಹಸನವನ್ನು ಬರೆಯಲುದ್ಯಮಿಸಿದ್ದು, ಅದು ಪೂರ್ಣವಾಗುವುದಕ್ಕೆ ಮೊದಲೇ ದೈವಾಜ್ಞೆಗೆ ಒಳಪಟ್ಟು, ಇದೇ ಪಿಂಗಳ ಸಂವತ್ಸರದ ಶ್ರಾವಣಬಹುಳನವಮಿ, ಶನಿವಾರ (೧೯೧೭ನೆ ಆಗಸ್ಟು ೧೧ರಲ್ಲಿ) ರಾತ್ರಿ ಪರಂಧಾಮನ ಪಾದಾರವಿಂದವನ್ನು ಸೇರಿದುದರಿಂದ, ಸರಲಲಲಿತ ಪದಬಂಧರಂಜಿತವಾದ ಆ ಗ್ರಂಥವು ಅಷ್ಟಕ್ಕೇ ನಿಲ್ಲಬೇಕಾಯಿತೆಂದು ಅತ್ಯಂತ ವಿಷಾದಪಡುತ್ತಿರುವೆವು. ಇವರು ದಿವಂಗತರಾಗುವ ಕಾಲಕ್ಕೆ ಇವರಿಗೆ ಇನ್ನೂ ೫೫ ವರ್ಷಗಳಿಗೆ ಹೆಚ್ಚಾಗಿರಲಿಲ್ಲ. ಇಷ್ಟರಲ್ಲಿಯೇ ಇವರು ಪತ್ನೀ-ಪುತ್ರ-ಪರಿವಾರವನ್ನೂ, ಆಪ್ತೇಷ್ಟರನ್ನೂ ದುಃಖಸಾಗರದಲ್ಲಿ ಮುಳುಗಿಸಿ, ಮುಂದೆ ಇವರಿಂದ ಅತ್ಯಂತ ಉಪಯುಕ್ತ ಮತ್ತು ಶಾಶ್ವತಕೀರ್ತಿಪ್ರದವಾದ ಕೃತಿಗಳಾಗುವುವೆಂದು ನಿರೀಕ್ಷಿಸುತ್ತಿದ್ದ ಮಿತ್ರರ ಆಶಾಪಾಶವನ್ನು ಖಂಡಿಸಿ, ಅಕಾಲಮರಣವನ್ನು ಹೊಂದುವರೆಂದು ಯಾರೂ ತಿಳಿದಿರಲಿಲ್ಲ. ಮಾಡತಕ್ಕುದೇನು? ದೈವೇಚ್ಛೆ! ಕಾಲಪುರುಷನ ಕಟ್ಟಳೆಗೆ ಎಲ್ಲರೂ ಒಳಪಡಲೇಬೇಕು.

ಈ ನಮ್ಮ ದಿವಂಗತ ಭ್ರಾತೃಮಣಿಗಳಿಗೆ ಜ್ಯೇಷ್ಠಪತ್ನಿಯ ಪುತ್ರರು ಇಬ್ಬರೂ, ಪುತ್ರಿಯೊಬ್ಬಾಕೆಯೂ, ದ್ವಿತೀಯ ಪತ್ನಿಗೆ ಪುತ್ರರಿಬ್ಬರೂ ಪುತ್ರಿಯೊಬ್ಬಳೂ ಇರುವರು. ಹಿರಿಯ ಮಕ್ಕಳಲ್ಲಿ ಜ್ಯೇಷ್ಠಪುತ್ರರು ಈಗ ಚಿತ್ರದುರ್ಗದಲ್ಲಿ ಅಸಿಸ್ಟೆಂಟ ಇಂಜನಿಯರಾಗಿರುವ ಶ್ರೀಯುತ ಸಿ. ರಂಗಸ್ವಾಮಿ ಅಯ್ಯಂಗರ್, ಬಿ. ಏ, ಬಿ ಎಲ್. ಅವರು. ದ್ವಿತೀಯಪುತ್ರರು ಬಿ. ಏ. ತರಗತಿಯ ವಿದ್ಯಾರ್ಥಿಗಳಾಗಿರುವರು. ಇವರ ಪತ್ನಿಯಾದ ನಮ್ಮ ಧರ್ಮಭಗಿನಿಯರಿಗೆ ಒದಗಿದ ದುಃಖಕ್ಕಾಗಿ ನಾವು ವ್ಯಥೆಪಡುವೆವಲ್ಲದೆ, ದೃಢಮನಃಸ್ಥೈರ್ಯ ಧೈರ್ಯಯುತೆಯರಾದ ಅವರು ತಮ್ಮ ಸ್ವಾಮಿಯ ಆತ್ಮಕೃತಿಬದ್ಧವಾದ ಕೃತಿಗಳನ್ನು ಪ್ರಕಾಶಕ್ಕೆ ತಂದುದಕ್ಕಾಗಿ ಅಭಿನಂದಿಸುವೆವು.

ಸಂ. ನಂ.

ಶ್ರೀವಿಷ್ಣುಚತುರ್ವಿಂಶತಿ ನಾಮಗಳು.

ರಾಗ— (ಮೂಡಲೊಳಗೆ ಚಂದ್ರ)

ಈಶ ನಿನ್ನ ಚರಣಕಮಲ ಆಶೆಯಿಂದ ಭಜಿಸುತಿಹೆನು
ದೋಷರಾಶಿ ನಾಶಮಾಡು ಶ್ರೀಕೇಶವ ॥ ೧

ಶರಣುಹೊಕ್ಕೆನಯ್ಯ ಮುನ್ನ — ಮರಣಸಮಯದಲ್ಲಿ ನಿನ್ನ
ಚರಣಸ್ಮರಣೆ ಕರುಣಿಸೆನಗೆ ನಾರಾಯಣಾ ॥ ೨

ಶೋಧಿಸೆನ್ನ ಭವದ ಕಲುಷ— ಬೋಧಿಸೆನಗೆ ಜ್ಞಾನವನ್ನು
ಬಾಧಿಸುವಾ ಯಮನಬಾಧೆ ಬಿಡಿಸೊ ಮಾಧವಾ ॥ ೩

ಹಿಂದನೇಕ ಯೋನಿಗಳಲಿ ಬಂದು ಬಂದು ನೊಂದೆನಯ್ಯ
ಮುಂದೆ ಭವದ ಬಾಧೆ ಬಿಡಿಸು ತಂದೆಗೋವಿಂದ ॥ ೪

ಭ್ರಷ್ಟನೆನಿಸಬೇಡ ಕೃಷ್ಣ— ಇಷ್ಟು ಮಾತ್ರ ಬೇಡಿಕೊಂಬೆ
ಶ್ರೇಷ್ಠರೊಳಗೆ ಗಣಿಸಿ, ಕಷ್ಟಬಿಡಿಸೊ ವಿಷ್ಣುವೆ ॥ ೫

ಮೊದಲು ನಿನ್ನ ಪಾದಪೂಜೆ-ಮುದದಿ ಮಾಡ-ವಂತೆಯೆನ್ನ
ಹೃದಯದಲ್ಲಿ ಒದಗಿರಯ್ಯ ಮಧುಸೂದನ ॥ ೬

ಕವಿದು ಕಾಡುತಿರುವಪಾಪ । ಸವೆದು ಹೋಗುವಂತೆಮಾಡು
ಭವನಬಾಧೆಯನ್ನು ಬಿಡಿಸು-ಶ್ರೀ ತ್ರಿವಿಕ್ರಮ ॥ ೭

ಕಾಮಜನಕ ನಿನ್ನ ಗುಣವ ಪ್ರೇಮದಿಂದ ಪಾಡುವಂತೆ
ನಾಮವೆನಗೆ ಪಾಲಿಸಯ್ಯ ದಯದಿ ವಾಮನಾ ೮

ಮದನನಯ್ಯ, ನಿನ್ನ ಮಹಿಮೆ-ವದನದಲ್ಲಿ ವೊದರುವಂತೆ
ಹೃದಯದಲ್ಲಿ ಸದನ ಮಾಡು ಮುದದಿ ಶ್ರೀಧರ ॥ ೯

ಪುಸಿಯುನಾಡಿ ಹೊಟ್ಟೆಹೊರೆವ-ವಿಷಯದಲ್ಲಿ ರಸಿಕನೆಂಬ-
ಕೆಸರಿಯು ತೋರಬೇಡವೆನಗೆ ಹೃಷೀಕೇಶವ ॥ ೧೦

ಅಬ್ಧಿಯೊಳಗೆ ಬಿದ್ದತೆರದಿ-ಒದ್ದುಕೊಂಬೆನಕಟಭವದಿ ।
ಗೆದ್ದುರೂಪ, ಬುದ್ಧಿತೋರು ಪದ್ಮನಾಭನೆ ॥ ೧೧

ಕಾಮಕ್ರೋಧಗಳನು ಬಿಡಿಸು-ನಾಮಜಿಹ್ವೆಯಲ್ಲಿ ನಿಲಿಸು ।
ಶ್ರೀಮಹಾನುಭಾವನಾದ ದಾಮೋದರ ॥ ೧೨

ಜನ್ಮವೆಷ್ಟು ಬಂದರೇನು ನಿನ್ನ ದಾಸನಾಗಲಿಲ್ಲ ।
ಎನ್ನ ಘಾಸಿಮಾಡಬೇಡ ಶ್ರೀನಿವಾಸನೆ ॥ ೧೩

ಬುದ್ಧಿಶೂನ್ಯನಾಗಲೆನಗೆ—ಕದ್ದುಕಳ್ಳನಾದೆ ನಿನಗೆ ।
ತಿದ್ದಿ ಹೃದಯ ಶುದ್ಧಿ ಮಾಡು ಪದ್ಮನಾಭನೆ ॥ ೧೪

ಜನನಿ ಜನಕ ನೀನೆಯೆಂದು—ನೆನೆಪೆನಯ್ಯ ದೀನಬಂಧು ।
ಎನಗೆ ಮುಕ್ತಿ ಪಾಲಿಸಿನ್ನು ಅನಿರುದ್ಧನೆ ॥ ೧೫

ಹರುಷದಿಂದ ನಿನ್ನ ನಾಮ-ಸ್ಮರಿಸುವಂತೆಮಾಡು ಪ್ರೇಮ ।
ಇರಿಸು ನಿನ್ನ ಚರಣದಲ್ಲಿ ಪುರುಷೋತ್ತಮ ॥ ೧೬

ಸಾಧುಸಂಗಕೊಟ್ಟು ನಿನ್ನ — ಪಾದಭಜಕನೆನಿಸು ಯನ್ನ ।
ಭೇದಬುದ್ಧಿ ಬಿಡಿಸು ಮುನ್ನ ಶ್ರೀ ಅಧೋಕ್ಷಜಾ । ೧೭

ಚಾರುಚಕ್ರ, ತೋರಿಸೆನಗೆ-ಭಾರಹೊರಿಸಿರುವೆ ನಿನಗೆ ।
ಪಾರುಗಾಣಿಸಯ್ಯ ಯನ್ನ ನಾರಸಿಂಹನೆ ॥ ೧೮

ಸಂಚಿತಾರ್ಥ ಪಾಪಗಳನು । ಕಿಂಚಿತಾದರಿಲ್ಲದಂತೆ ।
ಮುಂಚಿತಾಗಿ ಕಳೆಯಬೇಕು, ಸ್ವಾಮಿ, ಅಚ್ಯುತಾ ॥ ೧೯

ಜ್ಞಾನಭಕ್ತಿಕೊಟ್ಟು ನಿನ್ನ—ಧ್ಯಾನದಲ್ಲಿ ಇಟ್ಟು ಎನ್ನ ।
ಹೀನಬುದ್ಧಿ ಬಿಡಿಸುಮುನ್ನ—ಶ್ರೀ ಜನಾರ್ದನ ॥ ೨೦

ಜಪತಪಾನುಷ್ಠಾನಗಳನು—ಒಪ್ಪುವಂತೆ ಮಾಡಲಿಲ್ಲ ।
ತಪ್ಪುಕೋಟಿ ಕ್ಷಮಿಸಬೇಕು —ಅಪ್ರಮೇಯನೆ । ೨೧

ಮೊರೆಯನಿಡುವೆನಯ್ಯ ನಿನಗೆ-- ಸೆರೆಯುಬಿಡಿಸು ಭರದಿ ಎನಗೆ
ಇರಿಸು ನಿನ್ನ ಚರಣದೊಳಗೆ ಶ್ರೀಹರಿಯೆ ನೀಂ ॥ ೨೨

ಪುಟ್ಟಿಸುವುದು ಬೇಡ ಮುನ್ನ, ಪುಟ್ಟಿಸಿದೆಯದಕ್ಕೆ ಪಾಲಿಸೆನ್ನ ।
ಇಷ್ಟುಮಾತ್ರ ಬೇಡಿಕೊಂಬೆ ಶ್ರೀಕೃಷ್ಣನೆ ॥ ೨೩

ನಿತ್ಯತೃಪ್ತ ನಿನ್ನ ನಾಮ— ನಿತ್ಯದಲ್ಲಿ ಪಾಡುವರನು ।
ಅರ್ಥಿಯಿಂದ ಪಾಲಿಸಯ್ಯ ಸದಯ ರಾಘವ ॥ ೨೪

ಮರೆಯದಿಂತು ಹರಿಯನಾಮ-ಬರೆಯುತೋದಿ ಕೇಳ್ವವರ್ಗೆ ।
ಕರೆದು ಕೊಡುವ ಭಕ್ತಿ-ಮುಕ್ತಿ ಚೆನ್ನಕೇಶವ ॥ ೨೫

ಇದನ್ನು ರಚಿಸಿದವರಾರೆಂಬುದು ತಿಳಿದುಬಂದಿಲ್ಲ. ನಮ್ಮ ಮಾತಾ-ಭಗಿನಿಯರೇ ಮುಂತಾದ ಮಹಿಳೆಯರು, ಇದು ನಮ್ಮ ಸ್ತ್ರೀಯರ ಪಠನಕ್ಕೆ ಅರ್ಹವಾಗಿರುವುದೆಂದು ಅಭಿಪ್ರಾಯಪಟ್ಟುದರಿಂದ ಬಹುದಿನಗಳ ಹಿಂದೆ ಶೇಖರಿಸಿದ್ದ ಇದನ್ನು ತಕ್ಕಂತೆ ಶೋಧಿಸಿ ಪ್ರಕಟಿಸಲಾಗಿದೆ. ಈ ಸ್ತುತಿಯು ಸ್ತ್ರೀಯರ ಪಾರಾಯಣಕ್ಕೆ ಯೋಗ್ಯವಾಗಿದೆಯೆಂದು ನಂಬಿರುವೆವು.

ಸಂ. ನಂದಿನಿ.

ಭಗಿನಿಯರಲ್ಲಿ ಮತ್ತೆ ಬೇಡುವುದೇನು?

ಭಗಿನಿಯರೇ!

ಮತ್ತೆ ನಿಮ್ಮಲ್ಲಿ ಬೇಡುವದೇನು?-ಕೇಳಲೇ? ಏನೆಂಬಿರಿ? "ಬೇಡ ಬೇಡ! ಬಾರಿಬಾರಿಗೂ ಬೇಡುವದು ಬೇಡ. ಒಂದು ಬಾರಿ ಬೇಡಿದುದೇ ಸಾಕು. ಮೊದಲು ಬೇಡಿದ ಭಿಕ್ಷೆಯೇ ಸಾಕುಬೇಕಾಗಿ ಉಳಿದಿರುವುದು. ಇನ್ನು—ಇನ್ನೂ ಮತ್ತೆ ಮತ್ತೆಯೂ ಬೇಡುವದೇಕೆ? ಎನ್ನುವಿರೇನು?

'ಏನೆಂದಿರಿ? ಇಲ್ಲ, ಇಲ್ಲ ಹಾಗೆಂದಿಗೂ ಹೇಳುವವರು ನಾವಲ್ಲ. ಇಂದು ನೀನು ಬೇಡುವುದನ್ನು ತಂದೊಪ್ಪಿಸಲಾಗದಿದ್ದರೆ, ಮುಂದೆ ಎಂದಾದರೂ ತಂದು ನಿನ್ನ ಮುಂದಿಟ್ಟು, ಕೊಂಕಿಲ್ಲದ ಕಂದನ ಕಳೆಯೇರಿದ ಮುಖವನ್ನು ನೋಡಿ ಆನಂದಿಸುವಂತೆ ಸುಗುಣಿಯಾದ ನಿನ್ನನ್ನು ಅಭಿನಂದಿಸಿ ಆನಂದಪಡುವೆವು." ಹೀಗೆಂದಿರಲ್ಲವೆ? ತಾಯಿಯರೇ! ಹಾಗಿದ್ದರೆ ಇದೋ ಬೇಡುವೆನು. ಆದರೆ, ನೋಡಿರಿ—ಮಾತೆಯರೇ ಮೊದಲೊಂದು ಬಾರಿ ಭಿಕ್ಷೆಯನ್ನು ಬೇಡಿದುದಕ್ಕೆ ನನ್ನ ಬಂಧುಗಳಲ್ಲಿ ಕೆಲವರು "ಭಿಕ್ಷಾಟನೆಯಲ್ಲಿ ತಿರುಗಬೇಡ ಕಂಡೆಯಾ—ನಂದಿನಿ! ನಿನಗೆ ಬೇಡುವಿಕೆಯು ಶೋಭಿಸುವಂತಹುದಲ್ಲ. ಆವ ಮಾತಿದ್ದರೂ ನಿನ್ನ ಸಹೋದ್ಯೋಗಿಗಳೊಡಾಡಿ ತೋರುವುದೊಂದಲ್ಲದೆ ಭಿಕ್ಷೆಯನ್ನೆತ್ತುವ ಭಿಕಾರಿಣಿ (?) ಯಂತೆ ಮಾತ್ರ ನಡೆಯಬೇಡ" ಎಂದು ಎಚ್ಚರಿಸಿದರು. ಅಂದಿನಿಂದ ಬೇಡುವೆನೆಂಬ ಶಬ್ದವೇ ನನ್ನ ಬಾಯಿಂದ ಹೊರಡಲಾರದೆಯಾದುದರಿಂದ ಬೇಡುವುದಕ್ಕೆ ಬದಲು ಕಾಡುವುದಾಗಿ ತಿರುಗುವುದೇನೆಂದು ಹಿಂದುಮುಂದು ನೋಡುತ್ತಿರುವೆನು.

ಅಕ್ಕತಂಗಿಯರೇ! ಹೇಗಾದರೂ ಇನ್ನು ಮುಂದಕ್ಕೆ ಸುಮ್ಮನಿರುವಂತಿಲ್ಲ. ಮುಂದುಮುಂದಕ್ಕಡಿಯಿಟ್ಟು ನಡೆಯಲೇಬೇಕು. ನಡೆನುಡಿಯನ್ನು ಚೆನ್ನಾಗಿ ಕಲಿತು, ನಮ್ಮ ಅಕ್ಕತಂಗಿಯರಲ್ಲಿ ಸಣ್ಣವರು ಬೆನ್ನಹತ್ತುವಂತೆಯೂ, ದೊಡ್ಡವರು ದಯೆತೋರಿ ಕೈನೀಡಿ ಕರೆದಾದರಿಸುವಂತೆಯೂ ನಡೆಯಲೇಬೇಕು. ಆದುದರಿಂದ ಅಕ್ಕಂದಿರೇ! ಅಕ್ಕರೆಯಿಂದೀ ನಿಮ್ಮ ನಂದಿನಿಯು ಹಿಂದೆ ಬೇಡಿದ ಮಾತೃಪ್ರೇಮದ ಹಿಡಿಭಿಕ್ಷೆಯನ್ನು ತಡಮಾಡದೆ ಒಲಿದಿತ್ತು, ಪಿಡಿದಾಡಿಸಿ ಮುಂದಕ್ಕೆ ನಡೆಯಿಸಿರಿ, ನುಡಿಗಲಿಸಿರಿ, ನೋಡಿ ನಲಿಯಿರಿ! ಮತ್ತೆ, ಏನೆಂದಿರಿ?—"ನಾವು ಆದರಿಸುವುದಕ್ಕೆ ಸಿದ್ಧರಾಗಿರುವೆವು; ನಮ್ಮ ಕೈಕೂಸೆಂದೇ ಕಾಪಾಡುವೆವು. ಆದನ್ನು ನೀನು ಕೇಳಿಕೊಳ್ಳಬೇಕಾದುದಿಲ್ಲ; ಆದರೆ ನೋಡು—ನಂದಿನಿ, ನಿನ್ನ ಬಂಧುಗಳಾದ ಪುರುಷರಲ್ಲಿ ನೀನೊಂದಿಷ್ಟು ಗೌರವವನ್ನು ತೋರಿ ಅವರು ನಿನ್ನ ವಿಷಯದಲ್ಲಿ ಕನಿಕರಪಡುವಂತೆ ಮಾಡಿದರೆ ಉತ್ತಮವಾದೀತಲ್ಲವೆ?"

ಹಾಗೆನ್ನುವಿರೇನು? ಕೇಳಿರಿ—ತಾಯಿಯರೇ! ಹೆಣ್ಣು ಹುಡುಗಿಯರು ತಾಯಿಯರಲ್ಲಿ, ಅಕ್ಕಂದಿರಲ್ಲಿ, ಒಡನಾಡಿಯರಲ್ಲಿ ಕೊರಳಾಡುವುದಲ್ಲದೆ, ತಂದೆಯಲ್ಲಿ-ಅಣ್ಣತಮ್ಮಂದಿರಲ್ಲಿ ಅಷ್ಟಾಗಿ ಹೋರಾಡುವುದಿಲ್ಲ; ಅಲ್ಲದೆ ಇತರ ಬಂಧುವರ್ಗದ ಮುಂದೆ ನಿಂದು ನುಡಿವ ಸಾಹಸವನ್ನೂ ತೋರುವುದಿಲ್ಲ; ವಸ್ತುಸ್ಥಿತಿಯು ಹೀಗಿರುವಲ್ಲಿ ನಮ್ಮ ಬಂಧುವರ್ಗದಲ್ಲಿ ನುಡಿಯಲೇಕೆ? ಅವರಲ್ಲಿಯೂ ಬೇಡುವುದೇಕೆ? ಬಂಧುಗಳಲ್ಲಿ ಯಾಚಿಸಿ ಯಾವ ಲಾಭವನ್ನೂ ಹೊಂದಬೇಕೆಂದು ನೆನೆಯಲೊಲ್ಲೆ; ಅಂತಹ ಯಾಚನೆಯು ಸ್ವಪ್ನೇಪಿ ಬಳಿಗಾದರೂ ಬರುವುದಿಲ್ಲವೆಂದು ಮನಸ್ಸಾಕ್ಷಿಯಾಗಿ ಹೇಳುವೆನಿದನ್ನು ಲಾಲಿಸಿರಿ; ಸತ್ಯವೆಂದು ಭಾವನೆಯನ್ನಿಡಿರಿ.

ಅಕ್ಕಂದಿರೇ! ಸಕ್ಕನೆಗೊಳ್ಳಬೇಡಿರಿ, ನಿಮ್ಮ ಮಾತಿಗೆ ಮರುಮಾತಾಡಿದೆನಲ್ಲದೆ ಬಂಧುಗಳನ್ನು ಧಿಕ್ಕರಿಸಿದೆನೆಂದೆಣಿಸಬೇಡಿರಿ. ಬಂಧುಗಳಿಗೆ ದೂರದಲ್ಲೇ ಒಂದೆರಡು ಬಾರಿ ವಂದಿಸುವುದು, ಅಭಿವಂದಿಸುವುದು, ಇಷ್ಟಲ್ಲದೆ ಅವರನ್ನು ಧಿಕ್ಕರಿಸುವುದಕ್ಕಾಗಲೀ ಪ್ರಾರ್ಥಿಸುವುದಕ್ಕಾಗಲೀ ಕಲಿತಿಲ್ಲ, ಕಲಿಯುವಂತೆಯೂ ಇಲ್ಲ. ಇಷ್ಟರಿಂದ ಆ ನಮ್ಮ ಬಂಧುಗಳು ಸಂದೇಹಪಡುವುದಾಗಲೀ ದುಡುಗಗೊಳ್ಳುವುದಾಗಲೀ ಅಗತ್ಯವಿಲ್ಲ; ಇನ್ನಾದರೂ ತಿಳಿದಿರೇ ತಾಯಿಯರೇ!

'ಹಾಗಾದರೆ, ನಮ್ಮನ್ನು ಮಾತ್ರ ಕಾಡುವ-ಬೇಡುವ ಕಾರಣವೇನು?" ಎನ್ನುವಿರೇನು? ನಿಮ್ಮನ್ನು ಕಾಡುವುದೇಕೆಂದರೆ, ಕಾಪಾಡುವ ಕೃಪಾಗುಣವು ತಾಯಿಯರಾದ ನಿಮ್ಮಲ್ಲಿ ದೃಢವಾಗಿರುವುದೆಂದು ತಿಳಿದು, ನಿಮ್ಮ ಕೃಪೆಯನ್ನು ಸಂಪಾದಿಸಿ, ಆರ್ಯಮಾತೆಯರಾದ ನಿಮ್ಮಲ್ಲಿರುವ ಅನುಕರಣಯೋಗ್ಯವಾದ ಸದ್ಗುಣಗಳನ್ನು ಸಂಗ್ರಹಿಸಿ, ನಮ್ಮ ಇತರ ಎಳೆದಂಗೆಯರ ತಿಳಿವಿಗೆ ತರಬೇಕಾದುದು ಕರ್ತವ್ಯವೆಂದರಿತುದರಿಂದಲೇ ನಿಮ್ಮನ್ನು ಕಾಡುವುದು ಬೇಡುವುದು ಕೂಡ, ನಿಮ್ಮ ಸ್ವಭಾವಸಹಜವಾದ ಈ ಕೋಮಲತೆಯನ್ನು ಜಗತ್ತೇ ಕೊಂಡಾಡುವಂತೆ ಮಾಡಬೇಕೆಂಬ ಈ ನಂದಿನಿಯಲ್ಲಿ ಸಂದೇಹಪಡದೆ, ನಿಜನಂದನೆಯೆಂದೇ ತಿಳಿದು, ನಿರ್ಮಲ-ನಿಷ್ಕಪಟ-ಪ್ರೇಮದಿಂ

ದ ಹರಿಸಿ, ಕಾಲಕಾಲಕ್ಕೆ ಕರೆಯಿಸಿಕೊಂಡು, ಅಕೃತ್ರಿಮ ವಿಶ್ವಾಸದಿಂದ ಹಿತವನ್ನು ಹೇಳುತ್ತ ಬರಬೇಕೆಂಬ ಉದ್ದೇಶದಿಂದ ಮಾತ್ರವೇ ನಿಮ್ಮನ್ನು ಅತ್ತಿತ್ತ ಬಿಡದೆ ಬೇಡುತ್ತಿರುವುದು. ಇಷ್ಟನ್ನು ಮಾತ್ರ ನೀವು ಮಾಡಿದಿರಾದರೆ ಧನ್ಯರಾದೇನು!

ತಾಯಿಯರೇ! ಮತ್ತೊಂದು ಮಾತು— ಮುಳಿಯದಿರಿ; ಹಳಿಯದಿರಿ! “ನಂದಿನೀ ಸಂಪಾದಿಕೆಯಂತೆ. ಇದೊಂದೇ ಕೆಲಸದಲ್ಲಿ -ಎಂದರೆ, ಓದುಬರೆಹದ ಕೆಲಸವೊಂದರಲ್ಲಿಯೇ ಇದ್ದರೆ ನಾವೂ ಬರೆಯೋಣ, ಹೇಳಿ-ಕೇಳಬಹುದಾಗಿತ್ತು. ನಮಗೆ ಬೇರೆಯುಳ್ಳಿರುವುದು? ಮನೆಗೆಲಸವೇ ನಮಗೆ ಸಾಕು ಸಾಕೆನ್ನಿಸುತ್ತಿವೆ, ಇನ್ನು ಲೆಕ್ಕಣಿಕೆಯನ್ನು ಹಿಡಿದು ಬೊಕ್ಕಬೆಗಾಲಿನ ಲಿಪಿಗಳಿಂದ ಬಕ್ಕಾಣಿಸ ಪ್ರದಕ್ಕಾಗಲೀ ಅಸ್ವರಸ್ಥರು. ನಾವೇ ಸರಿಯೆಂದು ಕೆ ಇತರೋದಿಪ್ರದಕ್ಕಾಗಲೀ ನಮಗೆ ತಕ್ಕ ಗಳಿಗೆ ಯಾವುದು? ಇಷ್ಟು ಅಲ್ಪಸ್ವಲ್ಪ ಹೊತ್ತಿನಲ್ಲಿ ಮಕ್ಕಳಾಡಿಸುವುದೇ ಬೇಡವೆ?” ಹೀಗೆಂದು ಹೇಳುವ ಅಕ್ಕತಂಗಿಯರು ಕೆಲವರು, ಮತ್ತೆ— “ನಾವೇನು ಮಾಡುವ? ನಾವು ಹಿಡಿದಿರುವ ಸಂಘದ ಕೆಲಸಗಳೇ ನಮಗೆ ಬೆಟ್ಟದಷ್ಟು ಬಿದ್ದಿರುವಾಗ ನಿಮ್ಮಿಂದ ಬಂದ ಪತ್ರಪುಸ್ತಕಗಳಿಗೆ ಪ್ರತ್ಯುತ್ತರವನ್ನು ಕೊಡುವುದಕ್ಕೆ ನಮಗೆ ಬಿಡುವೆಲ್ಲಿಯದು! ನಿಮ್ಮಂತೆ ನಾವು ಬಿಡುಬೀಸಾಗಿದ್ದರೆ ತಡೆಯಿಲ್ಲದೆ ಬಂದ ಬಂದ ಪತ್ರಗಳಿಗೆ ಪಡಿಯುತ್ತರವನ್ನು ಕೊಡುತ್ತಿದ್ದೆವು. ನೀವು ಹೇಳುವಂತೆ ನಮ್ಮ ಸೋದರಿಯರಲ್ಲಿ ಒಬ್ಬರಾದ ನೀವು ಕಳುಹಿದ ಪತ್ರಕ್ಕೆ ಉತ್ತರವನ್ನು ಕೊಡಬೇಕಾದುದು ನಮಗೆ ತಕ್ಕುದಾದರೂ ನಿಮ್ಮ ಒಬ್ಬರಿಗೆ ಉತ್ತರವನ್ನು ಕೊಟ್ಟು ಉಳಿದ ನಮ್ಮ ಬಂಧುವರ್ಗದವರನ್ನು ಗಣಿಸದಿದ್ದರೆ ಹೇಗೆ? ಬರೆಯಲು ನಮಗೆ ಅವಕಾಶವಾದರೂ ಎಲ್ಲಿ!—” ಹೀಗೆ ಪ್ರತ್ಯಕ್ಷದಲ್ಲಿ ಹೇಳಿದ ಘನಮಹಿಳೆಯರೂ ಕೆಲವರು. ಆದರೆ ನಾವು ಆ ನಮ್ಮ ಎಲ್ಲಾ ಅಕ್ಕತಂಗಿಯರಲ್ಲಿಯೂ ಹೇಳುವುದೇನು? ಇಷ್ಟೇ! ತಾಯಿಯರೇ! ಬೇಸರಗೊಳ್ಳಬೇಡಿರಿ, ನೀವು ತಿಳಿದಿರುವಂತೆ ನಮಗೆ ಓದುಬರೆಹದ ಕೆಲಸವೊಂದೇ ಮುಖ್ಯ ವೃತ್ತಿಯೆಂದು ನಾವುಭಾವಿಸಿಲ್ಲ; ಅಲ್ಲದೆ ಅದೊಂದರಲ್ಲಿಯೇ ನಾವು ನಿರತರಾಗಿ ಉಳಿದ ನಮ್ಮ ಧರ್ಮ-ಕರ್ತವ್ಯ-ಧ್ಯೇಯ ವಿಚಾರಗಳಲ್ಲಿ ಉದಾಸೀನರಾಗಿಯೂ ಇಲ್ಲ. ಸ್ತ್ರೀಜನೋಚಿತ ಮತ್ತು ಅತ್ಯಗತ್ಯವಾದ ಗೃಹಕಾರ್ಯಭಾಗವು ಎಷ್ಟಿರುವುವೋ ಅಷ್ಟನ್ನೂ, ಆರ್ಯರ ಉಪದೇಶ, ಹಿರಿಯರ ಆಚರಣೆಗಳನ್ನೂ ಅನುಸರಿಸಿ ಕ್ರಮಪ್ರಕಾರವಾಗಿ ನಡೆಯಿಸುವುದೇ ನಮಗೆ ಪ್ರಧಾನ ಕರ್ತವ್ಯವಾಗಿರುವುದೆಂದೂ ಆ ನಮ್ಮ ಪ್ರಧಾನಕರ್ತವ್ಯವನ್ನು ನಾವು ನೆರವೇರಿಸಿದ ಬಳಿಕ ದೊರೆಯುವ ವಿರಾಮ ಕಾಲದಲ್ಲಿ ಉಳಿದ ನಂದಿನೀ—ಹಿತೈಷಿಣಿಯರ ಉಪಚಾರ ಕಾರ್ಯವನ್ನೂ, ನಮ್ಮ ಇತರ ಕಾಲಕ್ಷೇಪಗಳನ್ನೂ ನಡೆಯಿಸಿಕೊಂಡು ಬರುವುದೇ ನಮ್ಮ ಆಚರಣವಾಗಿರುವುದೆಂದೂ ತಿಳಿಯಿರಿ. ಮತ್ತು ಹೆತ್ತವರಿಗೆ ಗೊತ್ತಾದ ಮಕ್ಕಳಷ್ಟೇ ಇರುವುವು. ಉಳಿದವರಿಗೆ ಅಕ್ಕತಂಗಿಯರ ಒಡನಾಡಿಯರ ಮಕ್ಕಳು ಆಡಿಸಿ ಪಾಡಿಸಲಿಕ್ಕೇನೂ ಕೊರತೆಯಿಲ್ಲವೆಂದು ತಿಳಿದಿರುವಿರಷ್ಟೆ. ಆ ವಿಚಾರದಲ್ಲಿ ಕೂಡ ನೀವು ಮತ್ತೇನೂ ಹೇಳುವಂತಿಲ್ಲ. ಇನ್ನು ಸಂಘದಮಹಿಳೆಯರು ಹೇಳುವಂತೆ ನಾವು ಬಿಡುಬೀಸಾಗಿರುವುದು ಹೇಗೆಂದು ಇಲ್ಲಿ ಬೇರೆ ಹೇಳಬೇಕೆ? ನಮಗುಳಿಯುವ ೩-೪ ಘಂಟೆಗಳಷ್ಟು ವೇಳೆಯಲ್ಲಿ ನಾವು ನಂದಿನೀ, ಹಿತೈಷಿಣಿಯರ ಸಂಕಲನದಿಂದಮೊದಲು ಮುದ್ರಾಲಯದಿಂದ ಅವರು ಬಂದು ಹೊರಹೊರಡುವಂತಾಗುವವರೆಗೆ ಆ ಮಾಸಪತ್ರಿಕೆಯ ಕಾರ್ಯದ ವರೆಗೆ ಎಲ್ಲ ಕೆಲಸಗಳ ವಿಚಾರಗಳ ಭಾರವನ್ನು ಹೊರಬಲ್ಲಿ ತಾಳಿರುವಾಗ ನಮಗೆಷ್ಟು ಬಿಡುವಿರುವದೆಂದು ತಿಳಿಯಲಾರದೆ? ಮಹಿಳಾಮಣಿಯರೇ! ಒಂದೊಂದು ಸಾಮಾನ್ಯ ಸ್ತ್ರೀವ್ಯಕ್ತಿಯ ಕರ್ತೃತ್ವಮೂಲಕವಾಗಿಯೇ ಭಗವತಿಯು ಮೇಲೆ ಹೇಳಿದ ಕಾರ್ಯಗಳಷ್ಟಲ್ಲದೆ ಇನ್ನೂ ಹೆಚ್ಚಿನ ಕಾರ್ಯಭಾಗಗಳನ್ನೂ ನಡೆಯಿಸುವುದರಲ್ಲಿ ಗಮನಿಸಿ ಈ ಹಿಂದಿನ ಸಂಚಿಕೆಯನ್ನು ನೋಡುವುದರಿಂದಲೇ ತಿಳಿದೀತು. ಅದಷ್ಟಲ್ಲದೆ, ಉಳಿದ ಭಾಷಾಭ್ಯಾಸ—ಸಮಾಲೋಚನೆ ಪತ್ರವ್ಯವಹಾರ ಮೊದಲಾದ ಅಧಿಕ ಕಾರ್ಯಗಳೂ ನಡೆಯುತ್ತಿರುವಲ್ಲಿ ನೀವೇನು ಹೇಳುವಿರಿ? ಎಂದರೆ, ಇಲ್ಲಿ ಈ ಮೂಲಕ ಅಪ್ರತ್ಯಕ್ಷೆಯನ್ನು ಮಾಡಿಕೊಂಡು ನಿಮ್ಮನ್ನು ಅಲ್ಲಗಳೆದೆವೆಂದು ಮಾತ್ರ ತಿಳಿಯಬೇಡಿರಿ. ಅಲ್ಲಗಳೆಯಬೇಕೆಂಬ ದುರ್ಬುದ್ಧಿಯು ನಮಗೆ ಕನಸಿನಲ್ಲಾದರೂ ಉಂಟಾಗದು. ಮತ್ತೆ ಏಕೆ ಹೇಳಿದೆವೆಂಬಿರೊ? ನಮ್ಮ ಬಂಧುಗಳು ಸಂದೇಹಪಡುವುದೊಂದು ಕಡೆಗಿರಲಿ, ಭಗಿನಿಯರು ಕೂಡ ಸಂಶಯಕ್ಕೆ ಗುರಿಯಾಗುತ್ತಿರುವುದು; ಇಲ್ಲವೆ ಮೇಲೆ ಹೇಳಿದ ಕಾರಣಗಳನ್ನು ಮುಂದಿಟ್ಟು ತಾವು ಹಿಂದೆಸರಿದು ನಿಲ್ಲುವುದು; ಅಥವಾ ಹಿತೈಷಿಣೀ ನಂದಿನಿಯರಿಗೆ ಅಂತರಂಗ ಸಹಾಯಕರಾರೋ ಪ್ರಬಲವಿದ್ವಾಂಸರಿರುವರು, ಅವರು ಮರೆಯಾಗಿದ್ದು ಹೀಗೆ ಸ್ತ್ರೀಕರ್ತವ್ಯಕ್ಕೊಳಪಟ್ಟಂತೆ ಹೊರಡಿಸುತ್ತಿರುವರು. ಹೀಗಿಲ್ಲದಿದ್ದರೆ ಇದೂ ಸಾಧ್ಯವೇ—ಎಂದಿಗೂ ಹಾಗಿರಲಾರದು—ಎಂಬೀತರದ ಬಹು ದೂರದ ಆಲೋಚನೆಗಳು ಅನೇಕರಲ್ಲಿ ಆಗಿರುವದನ್ನು ಪ್ರತ್ಯಕ್ಷಪ್ರಮಾಣದಿಂದ ನೋಡಿ ತಿಳಿದಿರುವೆವಾದುದರಿಂದ ಅಂತಹ ಭ್ರಾಂತಿ—ಕೌತುಕ—ಸಂದೇಹ— ವಿಪರೀತಾರ್ಥಗಳೊಂದೂ ಇರಬಾರದೆಂದೂ ನಮ್ಮನ್ನು ನಿಮ್ಮಂತೆಯೇ ಕೇವಲ ಆರ್ಯ

ನಾರೀಧರ್ಮದಲ್ಲಿ ನಡೆಯುತ್ತಿರುವಂತೆ ತಿಳಿಯಬೇಕಲ್ಲದೆ, ಅಭ್ಯಾಸಬಲದಿಂದಲೂ ಭಗವದನುಗ್ರಹಲಬ್ಧವಾದ, ಮಾನಸಿಕ ಶಕ್ತಿಯ ಪ್ರಭಾವದಿಂದಲೂ ನಾವು ನಮಗೆ ಅಪೇಕ್ಷಿಸುವಷ್ಟು ಕಾಲಾವಕಾಶವನ್ನು ಪಡೆಯಬಹುದೆಂದು ತಿಳಿದು, ಅದರಂತೆ ನಡೆಯುತ್ತ ಬಂದರೆ ಎಲ್ಲರಿಗೂ ಹೀಗೆ ಓದುಬರೆಹ ವಿಚಾರಗಳಿಗೆ ಅವಕಾಶ ಅನುಕೂಲಗಳು ದೊರೆಯುವವೆಂದು ನಂಬಿ, ಅದರಂತೆ ಪ್ರಯತ್ನಿಸಿ ನೋಡಬೇಕೆಂದೂ ನಿವೇದಿಸುವುದಕ್ಕೆ ಮಾತ್ರವಲ್ಲದೆ, ಇಲ್ಲಿ ಬೇರೆ ದುರಹಂಕಾರದಿಂದೇನೂ ಇದನ್ನು ಬರೆಯಲಿಲ್ಲ! ಭಗಿನಿಯರೇ! ಇನ್ನಾದರೂ ಸಂಶಯವನ್ನು ತ್ಯಜಿಸಿರಿ. ನಿಮ್ಮ ಒಡಹುಟ್ಟಿದವಳೊಬ್ಬಳಿಂದ ಪೋಷಿಸಲ್ಪಡುವ ನಂದಿನೀ ಹಿತೈಷಿಣೀ ಶಿಶುಗಳನ್ನು ನಿಮ್ಮ ಕಂದರನ್ನು ಮುದ್ದಾಡುವಂತೆಯೇ ನಿಮಗೆ ಅವಕಾಶವಾದಂತೆ ಒಂದೆರಡು ಗಳಿಗೆ ಹಿಡಿದಾಡಿಸುತ್ತ, ನಿಮ್ಮ ಅಂತಃಕರಣಪೂರ್ವಕವಾದ ವಿಶ್ವಾಸದ ಒಂದೆರಡುಮಾತುಗಳ ಲೇಖನರೂಪವಾದ ಆಹಾರಪಾನೀಯವನ್ನಿತ್ತು ಪುಷ್ಟಿಗೊಳಿಸಬೇಕೆಂಬುದೊಂದೇ ನಿಮ್ಮನ್ನು ನಾವು ಕಾಡಿ ಬೇಡುವುದರ ಕಾರಣವೆಂದು ತಿಳಿಯಿರಿ.

ಆರ್ಯಮಾತೆಯರೇ! ಭಗಿನಿಯರೇ!

ಭರವಸೆಯನ್ನಿರಿಸಿರಿ! ಹಿತೈಷಿಣಿಯ ಕಾರ್ಯಶಾಲೆಯಲ್ಲಿ ನಮ್ಮ ಪುರುಷರಾರೂ ಇರುವುದಿಲ್ಲ. ಮತ್ತು ಪುರುಷಬಂಧುಗಳ ಪ್ರವೇಶಕ್ಕೂ ಅಲ್ಲಿ ಎಡೆಯಿಲ್ಲ. ಎಂದರೆ ಹಿತೈಷಿಣಿ-ನಂದಿನಿಯ ಪ್ರತಿಕಾರ್ಯಕಲಾಪವೂ ಈ ನಿಮ್ಮ ಧರ್ಮಭಗಿನಿಯರಿಂದಲೇ ನಡೆಯುತ್ತಿರುವುದಲ್ಲದೆ ಈ ಭಗಿನಿಯ ಹಸ್ತದ್ವಾರದಿಂದಲೇ—ಈ ಲೇಖಿನಿಯ ದೆಸೆಯಿಂದಲೇ ಭಗವತಿಯು ಎಲ್ಲವನ್ನೂ ನಡೆಯಿಸಿಕೊಂಡು ಬರುತ್ತಿರುವಳೆಂಬುದನ್ನು ನೀವು ಪ್ರಮಾಣವೆಂದು ನಂಬಿ ನಿರ್ಭಯ-ನಿರಾತಂಕ-ನಿಶ್ಶಂಕೆ-ನಿಸ್ಸಂದೇಹದಿಂದ ನಿಮ್ಮ ನಿಮ್ಮ ತಿಳಿವಿಗೆ ಒಳಪಟ್ಟಷ್ಟು ವಿಚಾರಗಳನ್ನು ಲಿಖಿತಮೂಲಕವಾಗಿಯಾಗಲೀ ಮುಖತಃ ಆಗಲಿ ಸೂಚಿಸುತ್ತ ಬರಬೇಕೆಂಬುದೇ ನಮ್ಮ ಇಂದಿನ ಭಿಕ್ಷೆಯು ಪುನರಾವರ್ತನವಾಗಿದೆ. ಹಾಗೆ ನೀವು ಮಾಡುವಿರಾದರೆ "ನಮ್ಮ ಕರ್ಣಾಟವು ಏಳಿಗೆಗೆ ಬರಬೇಕು, ಕರ್ಣಾಟವು ಏಕರೂಪದಿಂದ ಪ್ರಕಾಶಿಸಬೇಕು; ಕರ್ಣಾಟವು ಎಲ್ಲಕ್ಕೂ ಮುಂದಾಗಿ ನಿಲ್ಲಬೇಕು." ಹೀಗೆಂದು ಅಹೋರಾತ್ರಿ ಶ್ರಮಪಡುತ್ತಿರುವ ನಮ್ಮ ದೇಶೋದ್ಧಾರಕರ ಶ್ರಮ-ವ್ಯಯಗಳಿಗೆ ಸಾಫಲ್ಯವೂ, ನಮ್ಮ ಧರ್ಮಬಾಂಧವರಾದ ಕರ್ಣಾಟಕ ಸಾಹಿತ್ಯಪರಿಷತ್ತಿನವರ ಮತ್ತು ವಿದ್ಯಾವರ್ಧಕ ಸಂಘದವರ ಸದುದ್ಯಮ-ಸಾಹಸ-ಪ್ರಯಾಸಗಳ ಸಾರ್ಥಕ್ಯವೂ, ಸನ್ಮಾನನೀಯ ಭ್ರಾತೃಗಳಾಗಿರುವ ದೇಶಹಿತೇಚ್ಛುಗಳ ಪಾಂಡಿತ್ಯ ವಿಚಾರವಿಮರ್ಶನಾಶಕ್ತಿ, ವ್ಯಾಖ್ಯಾನ-ಕವಿತಾ ಇತ್ಯಾದಿಗಳ ಕೃತಾರ್ಥತೆಯೂ ಆಗುವುವು. ಹಾಗಾಗುವಾಗಲೇ ನಾವು ನಮ್ಮ ನಮ್ಮ ಕರ್ತವ್ಯದಲ್ಲಿ ಕೃತಕೃತ್ಯರೆನ್ನಿಸಿ ಧನ್ಯರಾಗುವೆವು. ಇದು ಚೆನ್ನಾಗಿ ಹೃದಯಂಗಮವಾಗಲಿ! ಮಾತೆಯರೇ! ನಮ್ಮ ಕನ್ನಡ ದೇಶದ ನಾರಿಯರಲ್ಲಿ ಒಕ್ಕಟ್ಟಿರುವುದಿಲ್ಲವೆಂಬ ಅಪವಾದವನ್ನು ಹಿಂದಕ್ಕೆ ಓಡಿಸಬೇಕಾದುದು ನಮ್ಮೆಲ್ಲರಿಗೂ ಕರ್ತವ್ಯವಲ್ಲವೆ? ಹಾಗಿದ್ದರೆ ನಾವಿನ್ನು ಇದಕ್ಕೂ ಹೆಚ್ಚಾಗಿ ಮತ್ತೆ ಬೇಡುವುದೇನಿದೆ? ಮತ್ತೇನೂ ಇಲ್ಲ. ನಮ್ಮ ಮಾತೃದೈವದ ಕೃಪೆಯು ನಿಮ್ಮೆಲ್ಲರಲ್ಲಿಯೂ ಪ್ರಸರಿಸಿ ಆ ಮೂಲಕ ನಮ್ಮ ಕರ್ಣಾಟರಾಷ್ಟ್ರಮಾತೆಯು ತನ್ನ ಮೊದಲಿನ ರೂಪಮಾಧುರ್ಯಕಾಂತಿವಿಶೇಷಗಳನ್ನು ಹೊಂದಿ ಪ್ರಕಾಶಿಸುವಂತಾಗಬೇಕೆಂಬುದೊಂದೇ ನಮ್ಮ ಪ್ರಾರ್ಥನೆಯಾಗಿದೆ

ಇತಿ ಆರ್ಯಮಾತೆಯರ ಚರಣಧೂಳಿ,

ಸಂ. ನಂದಿನೀ—ಸತೀಹಿತೈಷಿಣಿ.

ಆಭರಣಗಳ ಅವಶ್ಯಕತೆ.

ಪಾಶ್ಚಾತ್ಯ ನಾಗರಿಕತೆಯ ಸುಧಾರಣೆಯಿಂದುಂಟಾದ "ಉಳಿಸಲ್ಪಟ್ಟ ಹಣದ ನಿಧಿ" (Savings Bank), "ಮುನ್ನೆಚ್ಚರಿಕೆಯ ಭಂಡವಾಳ" (Provident Fund), "ಜೀವವಿಮೆಯ ಸಂಘ" (Life Assurance Company) ಮೊದಲಾದ ಆಪದ್ಧನ ಸಂಗ್ರಹ ಸಂಸ್ಥೆಗಳು ಇಲ್ಲದಿರುವ ಕಾಲದಲ್ಲಿ ಪ್ರಚಾರದಲ್ಲಿದ್ದ "ಆಭರಣರೂಪ ಆಪದ್ಧನ" ವನ್ನು ಸಂಗ್ರಹಿಸುವ ನಡತೆಯು ಬಹು ಪ್ರಾಚೀನಕಾಲದಿಂದಲೂ ಪ್ರತಿಯೊಂದು ಗೃಹಕೃತ್ಯದಲ್ಲಿ ಅದರ ಯೋಗ್ಯತಾನುಸಾರವಾಗಿ ಈ ವರೆಗೂ ಪಾರಂಪರ್ಯವಾಗಿ ನಡೆದು ಬರುತ್ತಿದೆ.

ಈ ಆಭರಣರೂಪ ಆಪದ್ಧನವು ಈಗಿನ ಸಂಸ್ಥೆಗಳಿಗಿಂತ ಬಹು ಫಲಕಾರಿಯಾಗಿದೆ. ಏಕೆಂದರೆ, ಸೇವಿಂಗ್ಸ್ ಬ್ಯಾಂಕಿನ ಸಂಚಿತ ಧನವು ಉಪಯೋಗದಿಂದ ರಿಕ್ತವಾದರೆ ಅದನ್ನು ತಿರಿಗಿ ಭರತಿ ಮಾಡಬೇಕೆಂಬ ನಿರ್ಬಂಧವಿಲ್ಲವಾದ ಕಾರಣ ಅದು ಕಾಲಕ್ರಮೇಣ ಶೂನ್ಯವಾಗುವುದು. ಪ್ರೋವಿಡೆಂಟ

ಘಂಡಿನ ಸಂಚಿತ ಧನವು ನಿಯಮಿತಕಾಲದಲ್ಲಿ ಅಲ್ಲದೆ ಅನ್ಯಥಾ ಸಿಕ್ಕಲಾರದು. ಜೀವವಿಮೆಯ ಧನವು ವಿಮೋದಾರನ ಉತ್ತರಾಧಿಕಾರಿಗಳಿಗಾಗಿಯೇ ಸಂಚಿತವಾಗಿರುವುದು. ಆದರೆ ಆಭರಣರೂಪ ಆಪದ್ಧನವು ಆಪತ್ಕಾಲದಲ್ಲೊಮ್ಮೆ ಶೂನ್ಯವಾದರೂ ಋಣದಾತೃವಿನ ಒತ್ತಾಸೆಯಿಂದಲೂ ಗೃಹಿಣಿಯರ ನಿರ್ಬಂಧದಿಂದಲೂ ನಾಲ್ಕು ಜನರಲ್ಲಿ ಮಾನವಾಗಿರಬೇಕೆಂಬ ಅಭಿಮಾನದಿಂದಲೂ ಸಮಯಾನುಸಾರ ಭರತಿಯಾಗುವುದರಿಂದ ಯಾವಾಗಲಾದರೂ ಆಪನ್ನಿವಾರಣೆಗೆ ಸಿದ್ಧವಾಗಿರುವುದು.

ಆಭರಣಗಳನ್ನು ಧರಿಸುವುದರಿಂದ ಮಕ್ಕಳಿಗೆ ಪ್ರಾಣಾಪಾಯವುಂಟಾಗಬಹುದೆಂದೂ ಆಭರಣಗಳಿಗೆ ಕಳ್ಳರ ಭೀತಿ ಹೆಚ್ಚೆಂದೂ ಕೆಲವರು ಆಕ್ಷೇಪಿಸುತ್ತಿರುವರು. ಈಗಿನ ಲೌಕಿಕ ವ್ಯವಹಾರಕ್ಕೆ ಅತ್ಯಂತ ಅನುಕೂಲಗಳಾಗಿ ನವನಾಗರಿಕತೆಯನ್ನು ಪ್ರಚುರಗೊಳಿಸುವುದಕ್ಕೆ ಮೂಲಸಾಧನಗಳಾದ 'ಹೊಗೆಹಡಗು' 'ಹೊಗೆಬಂಡಿ' 'ತಂತೀಟಪಾಲು'ಗಳೇ ಅನೇಕ ವೇಳೆ ಅನೇಕಾನೇಕ ಜನರ ಪ್ರಾಣಾಪಾಯಕ್ಕೂ ಅರ್ಥನಾಶಕ್ಕೂ ಕಾರಣಗಳಾದವೆಂದು ಅವುಗಳನ್ನು ಆವನೇ ಒಬ್ಬನೂ ತಿಳಿಯಲಿಲ್ಲ, ಮುಳಿಯಲಿಲ್ಲ; ಹಳಿಯಲಿಲ್ಲ! ಹೀಗಿದ್ದು, ಎಲ್ಲಿಯಾದರೂ ಒಮ್ಮೆ ಆಭರಣದಿಂದ ಮಕ್ಕಳ ಪ್ರಾಣಾಪಾಯವುಂಟಾದರೆ ಅದು ಹೆತ್ತವರ ಅಜಾಗ್ರತೆಯೆಂಬುದನ್ನು ಗೋಪ್ಯವಾಗಿಟ್ಟು ಆಭರಣಗಳನ್ನು ದೂಷಿಸುವುದು ನ್ಯಾಯವಲ್ಲ.

ದೇಹಕ್ಕೆ ಮರಣವು ನಿಶ್ಚಯವೆಂದು ತಿಳಿದಿದ್ದರೂ ರೋಗಕಾಲದಲ್ಲಿ ಚಿಕಿತ್ಸೆ ಮಾಡದಿರುವುದಿಲ್ಲ. ದೇಹಕ್ಕೆ ಮರಣವು ಸಿದ್ಧವಾಗಿರುವಂತೆ ಆಭರಣಗಳಿಗೆ ಚೋರಭೀತಿ ಸಿದ್ಧವಲ್ಲ. ಹೀಗಿರುತ್ತ ಧೃಷ್ಟರಾದ ಪತಿಗಳು ಆಭರಣಗಳಿಗೆ ಚೋರಭೀತಿ ಬರಬಹುದೆಂದು ಮುಗ್ಧೆಯರಾದ ತಮ್ಮ ಸತಿಯರನ್ನು ವಂಚಿಸುವುದು ನ್ಯಾಯವೆನಿಸುವುದಿಲ್ಲ. ಮತ್ತು ಸಾಧುವೂ ಅಲ್ಲ.

ಸ್ತ್ರೀಯರು ಆಭರಣಗಳಿಗೋಸುಗ ಪುರುಷರನ್ನು ಕಾಡುವರೆಂಬ ಅಪವಾದವೊಂದಿರುವುದು. ಶ್ರೀಮಂತ ಸ್ತ್ರೀಯರು ಆಭರಣಗಳನ್ನಪೇಕ್ಷಿಸದಿದ್ದರೂ ಆ ಆಭರಣಗಳೇ ಅವರನ್ನು ಅಪೇಕ್ಷಿಸುತ್ತಿರುವುದರಿಂದ ಅವರು ಕಾಡಬೇಕಾಗಿಲ್ಲ. ಬಡ ಸ್ತ್ರೀಯರು ಕಾಡಿದರೂ ಬೇಡಿದರೂ ಜಗಳವಾಡಿದರೂ ಏನು ಮಾಡಿದರೂ ಆಭರಣಗಳು ಅವರ ಪಾಲಿಗೆ ಸ್ವಪ್ನದ ಮುಂಡಿಗೆಗಳೇ! ಮತ್ತೆ ಮಧ್ಯಮತರಗತಿಯ ಸ್ತ್ರೀಯರು ಹೊಟ್ಟೆ ತುಂಬಾ ಉಣ್ಣದೆ ಕಷ್ಟಪಟ್ಟು ನಗಗಳನ್ನು ಮಾಡಿಸುತ್ತಿರುವರೆಂಬ ಅಪವಾದಕ್ಕೆ ಪ್ರಾಯಶ್ಚಿತ್ತವಿಲ್ಲ. ಆದರೆ ದುಂದುಗಾರಿಕೆಯ ತಮ್ಮ ಪತಿರಾಜರನ್ನು ಮಿತವ್ಯಯಕ್ಕೊಳಪಡಿಸಲಿಕ್ಕೆ ಹೇತುಗಳಾದ ತಮ್ಮ ಪತಿದೇವರು ರೂಪಜೀವಿಯರ (ವೇಶ್ಯೆಯರ ಅಥವಾ ಕುಲಟೆಯರ) ಬಿಡಗಿಗಾಗಿ ಒಳಪಡದಂತೆ ತಮ್ಮ ರೂಪವನ್ನು ಕೂಡಿದ ಮಟ್ಟಿಗೆ ಸಿಂಗರಿಸಿಕೊಳ್ಳುವುದಕ್ಕೆ ಸಾಧನಗಳಾದ— ಮತ್ತು ಆಪತ್ಕಾಲದಲ್ಲಿ ತಮ್ಮಿಂದ ಪತಿದೈವವನ್ನೂ ನಿರ್ಗತಿಕರಾದ ಮಕ್ಕಳನ್ನೂ ಕಂಡವರ ಸೆರಗಿಗೆ ಬೀಳದಂತೆ ಕಾಪಾಡಲಿಕ್ಕೆ ಅನುಕೂಲಗಳಾದ ಆಭರಣರೂಪ ಆಪದ್ಧನವನ್ನು ಸಂಗ್ರಹಿಸಿಡುವ ಶೀಲವು ಅವರಿಗೆ ದೂಷಣವೋ - ಭೂಷಣವೋ? ಸುಜ್ಞರೇ ವಿಚಾರಿಸಲಿ!

ಸ್ತ್ರೀಯರಿಗೆ ಪಾತಿವ್ರತ್ಯವೂ ಸದ್ವರ್ತನವೂ ಅನರ್ಘ್ಯವಾದ ಭೂಷಣಗಳು. ಇತರ ಆಭರಣಗಳಿಂದ ಪ್ರಯೋಜನವೇನು! ಎಂಬದಾಗಿ ಹಲವು ಮಹನೀಯರು ಘಂಟಾಘೋಷದಿಂದ ಹೇಳುತ್ತಿರುವರು. ಅದು ಸರ್ವಸಮ್ಮತವೇ! ಆದರೆ, ಸುಶೀಲೆಯರಾದ ಪತಿವ್ರತೆಯರು ಆಭರಣಧಾರಣದಿಂದ ದುರ್ವೃತ್ತೆಯರಾದ—ಕುಲಟೆಯರಾದ ದೃಷ್ಟಾಂತಗಳೇ ಇಲ್ಲ. ಸದ್ಗುಣವೇ ಸರ್ವಪೂಜ್ಯವು. ಅದು ಸುರೂಪಯುಕ್ತವಾದರೆ ಚಿನ್ನಕ್ಕೆ ಪರಿಮಳ ಹುಟ್ಟಿದಂತೆಯೇ! ಕೆಲವು ವೇಳೆ ನಿರ್ಗುಣವಾದ ಸುರೂಪವೂ ರೂಪವೈಕಲ್ಯವಾದ ಸುಗುಣವೂ ಮಾನನೀಯಗಳಾಗುತ್ತವೆ. ಪಲಾಶಪುಷ್ಪವೂ ಉತ್ತಮಾರಣಿಕುಸುಮವೂ ನಿರ್ಗಂಧ ಹಾಗೂ ಕುರೂಪಗಳಾದುದರಿಂದ ಸರ್ವತ್ರ ಅವಮಾನನೀಯಗಳು. ಸುರಂಜಕ ಪುಷ್ಪವೂ ನಾಗಕುಸುಮವೂ ಕ್ವಚಿತ್ ಪೂಜ್ಯಗಳು. ಮಲ್ಲಿಗೆಯೂ ಜಾಜಿಯೂ ಸರ್ವತ್ರ ಪೂಜ್ಯಗಳು.

ಕವಿರಾಜ ಲೀಲಾಶುಕನು ತನ್ನ ಕೃತಿಯಲ್ಲಿ--

" ರಕ್ತೇವಿರಕ್ತೇ ಭವತಿವಧೂನಾಂ ನಿರರ್ಥಕಃ
ಕುಂಕುಮ ಪತ್ರಭಂಗಃ "............

ಎಂದು ಹೇಳಿರುವನು. ಆದುದರಿಂದ ಮಧ್ಯಮತರಗತಿಯ ಸ್ತ್ರೀಯರಿಗೆ ಅಲಂಕಾರವು ಅಗತ್ಯವು.

ಕಾಪಿಪಾಡಿ

ಇತಿ— "ಪರನಾರೀಸೋದರ"

ಬಹುಮಾನ ಸ್ಪರ್ಧೆ ! ಸೋದರಿಯರಿಗೆ ಮಾತ್ರವೇ !

ಗೃಹಿಣೀ ಕುಲಾದರ್ಶ ರಮಣಿಯು

ಇತಿಹಾಸ

ನಮ್ಮ ಪೂರ್ವ ಇತಿಹಾಸ-ಪುರಾಣಗಳಲ್ಲಿ ಸುಪ್ರಸಿದ್ಧರಾಗಿರುವ ಆರ್ಯನಾರೀಮಣಿಯರಲ್ಲಿ ಈ ಕಾಲದ ನಮ್ಮ ಸ್ತ್ರೀಯರಿಗೆ ಸರ್ವಪ್ರಕಾರದಿಂದಲೂ ಗೃಹಿಣೀಧರ್ಮಕರ್ತವ್ಯವನ್ನು ಬೋಧಿಸುವಂತಹ ಸಚ್ಚರಿತೆಯಾದ ನಾರೀಮಣಿಯಾರು? ಹೇಗೆ? ಎಂಬುದನ್ನು ಅವಳ ಆದರ್ಶಯೋಗ್ಯವಾದ ಆಚರಣಗಳೊಡಗೂಡಿದ ಕಥಾರೂಪವಾದ ಲೇಖನವನ್ನು ಬರೆದು ಕಳುಹುವವರಿಗೆ ಉತ್ತಮತರದ ಮತ್ತು ನಮ್ಮ ಗುರಿಗೆ ತಕ್ಕಂತಹ ಲೇಖನಕ್ಕೆ ೫—೦—೦, ಮಧ್ಯಮವರ್ಗದ ಲೇಖನಕ್ಕೆ ರೂ. ೨—೦—೦ ಬಹುಮಾನವನ್ನು ಕೊಡಲು ನಿಶ್ಚಯಿಸಿರುವೆವಲ್ಲದೆ, ಇತರ ಕಡೆಯಿಂದ ಬರುವ ಸಾಮಾನ್ಯ ಲೇಖನಗಳಲ್ಲಿಯೂ ಸಂಗ್ರಾಹ್ಯವಾದವುಗಳಿಗೆ ಯೋಗ್ಯತಾನುಸಾರ ಪುಸ್ತಕ ಬಹುಮಾನವು ಕೊಡಲ್ಪಡುವುದು. ಬಹುಮಾನಸ್ಪರ್ಧೆಗೆ ಲೇಖನವನ್ನು ಕಳುಹುವವರು ಈ ಕೆಳಗಿನ ನಿಯಮಗಳನ್ನು ಅನುಸರಿಸಬೇಕಾಗಿ ಸೂಚಿಸುವೆವು.

೧. ಲೇಖನವು ಸ್ಫುಟಾಕ್ಷರಗಳಿಂದ ಕಾಗದದ ಒಂದೇ ಕಡೆಯಲ್ಲಿ ಬರೆಯಲ್ಪಟ್ಟಿರಬೇಕಲ್ಲದೆ ಫುಲ್‌ಸ್ಕೇಫ್ ಕಾಗದದ ಕಾಲುಗಜದ ೨೦ ಪುಟಗಳಿಗೆ ಕಡಿಮೆಯಿಲ್ಲದೆಯೂ, ಅಪ್ರಕೃತ ವಿಚಾರಗಳಿಲ್ಲದೆಯೂ, ಉಪಯುಕ್ತ ವಿಚಾರ ಮತ್ತು ಆವಶ್ಯಕ ಉದಾಹರಣಗಳಿಂದ ಕೂಡಿದುದಾಗಿಯೂ ಇರಬೇಕು.

೨. ಲೇಖನವನ್ನು ಕಳುಹುವ ನಮ್ಮ ಸೋದರಿಯರೆಲ್ಲರೂ ನಂದಿನಿಯ ಚಂದಾದಾರರಾಗಿಯೇ ಇರಬೇಕು. (ಅಂತಹರಿಗೆ ಪ್ರತ್ಯೇಕ ರಿಯಾಯತಿ ಚಂದಾ ಎಂದರೆ ಅವರಿಗೆ ಮಾತ್ರ ವಾರ್ಷಿಕ ಚಂದಾ ಹಾಸಲು ಸೇರಿ ೧—೦—೦ ಮಾತ್ರ).

೩. ಬಹುಮಾನಸ್ಪರ್ಧೆಗಾಗಿಬರುವ ಲೇಖನದ ಸುತುವ ಕಾಗದದ ಮೇಲೆ ಸ್ಪಷ್ಟವಾಗಿ ಕಾಣುವಂತೆ "ಬಹುಮಾನ ಸ್ಪರ್ಧೆಗಾಗಿ" ಎಂಬುದನ್ನು ಬರೆದಿರಬೇಕಲ್ಲದೆ, ಲೇಖಿಕೆಯರು ತಮ್ಮ ಹೆಸರು, ವಿಳಾಸ, ಸ್ಥಳ-ಊರು, ಅಂಚೆ, ತಾಲ್ಲೂಕುಗಳನ್ನು ಲೇಖನದ ಮುಖಬಂಧದ ಮೇಲೆ ವಿವರವಾಗಿ ಬರೆದಿರಬೇಕು. ಹೀಗೆ ಬಂದ ಲೇಖಗಳು ಸಕಾಲದಲ್ಲಿಯೇ ನಮ್ಮ ಅವಗಾಹನೆಗೆ ಬರುವವಲ್ಲದೆ ಪಂಡಿತರ ವಿಮರ್ಶೆಗೆ ಕಳುಹಲ್ಪಡಲು ಅನುಕೂಲಿಸುವುದು.

೪. ಲೇಖನವು, ನಿಷ್ಪಕ್ಷಪಾತಿಗಳೂ ಗುಣಗ್ರಾಹಿಗಳೂ ಸಮರ್ಥರೂ ಆದ ಪಂಡಿತರಿಂದ ಪರಿಶೀಲಿಸಲ್ಪಟ್ಟ ಬಳಿಕ ಅವುಗಳ ಯೋಗ್ಯತಾ ನಿರ್ಣಯವಾಗುವುದು.

೫. ಲೇಖನವನ್ನು ಕಳುಹುವ ನಮ್ಮ ಸೋದರಿಯರಿಗೆ ಏಪ್ರಿಲ್ ತಿಂಗಳ ಅಂತ್ಯದ ವರೆಗೂ ಅವಧಿಯನ್ನು ಕೊಟ್ಟಿರುವೆವು. ಅಷ್ಟರಲ್ಲಿಯೇ ನಮ್ಮ ಸೋದರಿಯರು ತಮ್ಮ ಬುದ್ಧಿ, ವಿಚಾರಶಕ್ತಿ, ಕೌಶಲಗಳನ್ನು ಪ್ರದರ್ಶಿಸುವುದರಿಂದ ತಮ್ಮ ದೇಶಬಾಂಧವರ ಅಭಿನಂದನವನ್ನು ಪಡೆಯಬಹುದಾದ ಈ ಸುಸಮಯವನ್ನು ಸಾರ್ಥಕಪಡಿಸಿಕೊಳ್ಳುವವರಾದಾರೆಂದೂ ಈ ಬಾರಿಯಾದರೂ ನಂದಿನಿಯು ತನ್ನ ಸೋದರಿಯರ ಲೇಖನವನ್ನು ಬಹುಮಾನಿಸುವ ಸೌಭಾಗ್ಯವನ್ನು ಪಡೆಯಬಹುದಾದೀತೆಂದೂ ನಂಬಿ ನಿರೀಕ್ಷಿಸುವೆವು.

ಸಂಪಾದಿಕೆ—ನಂದಿನಿ

ಬಾಂಧವರಲ್ಲಿ ವಿನಂತಿ: —

ಮೇಲೆ ಹೇಳಿರುವ ಕ್ರಮವನ್ನು ಅನುಸರಿಸಿ ಲೇಖನವನ್ನು ಬರೆದು ಕಳುಹುವ ವಿಚಾರದಲ್ಲಿ ನಮ್ಮ ಧರ್ಮಭ್ರಾತೃಗಳು ತಮ್ಮ ತಮ್ಮ ಪೋಷ್ಯವರ್ಗದ ಸ್ತ್ರೀಯರನ್ನು ಕಾಲೋಚಿತ ಹಿತಸೂಚನಾದ್ವಾರಾ ಪ್ರೋತ್ಸಾಹಿಸಿ, ಅವರ ಬುದ್ಧಿಶಕ್ತಿಯನ್ನೇ ಉಪಯೋಗಿಸಿ ಬರೆಯುವಂತೆ ಮಾಡಬೇಕಲ್ಲದೆ, ಈ ವರೆಗೆ ತಮ್ಮ ತಮ್ಮ ಪತ್ನಿಯರಿಗಾಗಿ ತಾವು ಪತ್ರವ್ಯವಹಾರವನ್ನು ನಡೆಯಿಸುವಂತೆ ಮತ್ತು ಅವರ ಹೆಸರಿಂದ ತಾವೇ ಬರೆಯುತ್ತಿರುವಂತೆ ಮಾತ್ರ ಮಾಡಬಾರದೆಂದೂ, ಲೇಖನವು ನಮ್ಮ ಸೋದರಿಯರ ಕೋಮಲ ಹೃದಯದಲ್ಲಿ ಹೊಳೆದವುಗಳಾಗಿಯೇ ಇದ್ದು, ಅಂತಹದರಿಂದ ವಾಚಕರ ಮನಸ್ಸು ಆದರ, ಗೌರವ, ಭರವಸೆಗಳನ್ನು ಹೊಂದುವಂತಹದಾಗಬೇಕೆಂದೂ ನಿವೇದಿಸುವೆವು —

ಸಂ. ನಂದಿನಿ.

ಬಹುಮಾನಸ್ಪರ್ಧೆಗಾಗಿ ಸೋದರಿಯರಲ್ಲಿ ಸವಿನಯ ನಿವೇದನೆ.

ಹಿಂದೆ ನಮ್ಮ ನಂದಿನಿಯು ಪ್ರಥಮ ವರ್ಷದ ದ್ವಿತೀಯ ಸಂಚಿಕೆ (ನಲ ಸಂ|| ಕಾರ್ತಿಕ ೧೯೧೬ ನೇ ನವಂಬರ್) ಯಲ್ಲಿ ಪ್ರಕಟಿಸಿದ್ದ "ಸ್ತ್ರೀಶಿಕ್ಷಣದ ಸುಧಾರಣೆ" ಎಂಬ ಬಹುಮಾನಸ್ಪರ್ಧೆಯ ವಿಷಯದಲ್ಲಿ ನಮ್ಮ ಸೋದರಿಯರಲ್ಲಿ ಒಬ್ಬರಾದರೂ ಬರೆಯಲಿಲ್ಲವೆಂದು ತಿಳಿಸಲು ಅತ್ಯಂತ ದುಃಖವಾಗುತ್ತಿದೆ. ಹೀಗಾಗಲು ಕಾರಣವೇನೆಂಬುದನ್ನು ತಿಳಿಯುವ ಉದ್ದೇಶದಿಂದ ಬಹುಮಾನಸ್ಪರ್ಧೆಯ ಅವಧಿಯನ್ನು ಮೊದಲು ಗೊತ್ತುಮಾಡಿದ್ದ ೧೯೧೬ನೇ ಡಿಸೆಂಬರ್ ತಿಂಗಳದ ೧೯೧೭ನೇ ಮಾರ್ಚಿಯ ವರೆಗೆ ಹೆಚ್ಚಿಸಿರುವುದಾಗಿ ೪-೫ ನೇ ಸಂಚಿಕೆಗಳಲ್ಲಿಯೂ, ಆ ಬಳಿಕ ಏಪ್ರಿಲ್ ತಿಂಗಳ ವರೆಗೂ ಹೆಚ್ಚಿಸಿ, ಅಷ್ಟರಲ್ಲಿಯಾದರೂ ಸೋದರಿಯರ ಬಾಯಿ ಕಟ್ಟಿರುವಿಕೆಯು ತೆರೆಯಲ್ಪಡುವುದೆಂದು ನಂಬಿರುವೆವೆಂಬ ಸೂಚನೆಯನ್ನು ೬ನೆ ಸಂಚಿಕೆಯಲ್ಲಿಯೂ ಪ್ರಕಟಿಸಿದ್ದೆವು. ಹಾಗೆ ಮಾಡಿದರೂ ಸ್ಪರ್ಧೆಗಾಗಿ ಒಂದು ಲೇಖನವೂ ಬರಲಿಲ್ಲ. ಕೋಟಿಸಂಖ್ಯಾಕರಾದ ನಮ್ಮ ಕನ್ನಡಿಗರಲ್ಲಿ ಎಷ್ಟೋ ಮಂದಿ ಪ್ರೌಢವಿದ್ಯಾವತಿಯರೂ, ಬಹುಮಂದಿ ಸಾಮಾನ್ಯ ವಿದ್ಯಾವತಿಯರೂ ಇದ್ದರೂ ಒಬ್ಬರಾಗಲಿ ಬರೆಯಲಿಲ್ಲವೆಂಬುದು ನಮ್ಮ ಸ್ತ್ರೀಪ್ರಪಂಚಕ್ಕೇ ಹಾಸ್ಯಾಸ್ಪದವಾದ ಮಾತಲ್ಲದೆ, ಈ ವಿಷಯದಲ್ಲಿ ತಮ್ಮ ಪತ್ನಿ-ಪುತ್ರಿ-ಸೋದರಿಯರನ್ನು ಎಚ್ಚರಿಸದೆ ಉಪೇಕ್ಷಿಸಿದುದರಿಂದ ನಮ್ಮ ಧರ್ಮಬಂಧುವರ ಕರ್ತವ್ಯವಿಚಾರದಲ್ಲಿ ಕೂಡ ನ್ಯೂನತೆಯುಂಟಾಯಿತೆಂದು ನಿವೇದಿಸಲು ನಮಗೆ ಅತ್ಯಂತ ದುಃಖದಿಂದ ಕಣ್ಣೀರು ಸುರಿಯುತ್ತ ಲೇಖನವೇ ಕಾಣದಂತಾಗಿ ಹೋಗಿರುವುದು.

ಇರಲಿ, ಹಿಂದೆ ನಡೆದುಹೋದ ವಿಚಾರದಲ್ಲಿ ನಾವು ವಿಶೇಷ ಪ್ರಸ್ತಾಪಿಸುವುದೂ ಇಲ್ಲ. ಏಕೆಂದರೆ, "ಸ್ತ್ರೀಶಿಕ್ಷಣದ ಸುಧಾರಣೆ" ಎಂಬ ವಿಚಾರದಲ್ಲಿ ನಮ್ಮ ಸೋದರಿಯರು ಪ್ರಸ್ತಾಪಿಸುವಷ್ಟು ಧೈರ್ಯಸ್ಥೈರ್ಯವು ಸದ್ಯಸ್ಥಿತಿಯಲ್ಲಿ ನಮ್ಮವರ ಪಾಲಿಗೆ ಬಂದಿಲ್ಲವೆಂದೂ, ಅಲ್ಲದೆ, ಕೇವಲ ಸುಧಾರಣೆಗೆ ಸಂಬಂಧಪಟ್ಟ ಪ್ರಬಂಧಗಳನ್ನು ಬರೆಯುವುದರಲ್ಲಿ ನಮ್ಮ ಸೋದರಿಯರು ಅಷ್ಟಾಗಿ ಗಮನಿಸಲಾರರೆಂದೂ ನಮ್ಮಲ್ಲಿ ನಾವೇ ಸಮಾಧಾನವನ್ನು ತಂದುಕೊಂಡಿರುವೆವಲ್ಲದೆ, ಇತಿಹಾಸ-ಪುರಾಣಗಳನ್ನೂ ಭಗವದ್ಭಾಗವತಮಹಿಮಾಪ್ರದರ್ಶಕಗಳಾದ ಸತ್ಕಾವ್ಯಗಳನ್ನೂ ಅವಲೋಕಿಸುವುದರಲ್ಲಿಯೂ, ಪಾರಾಯಣಸಮಾಲೋಚನಮಾಡುವುದರಲ್ಲಿಯೂ ನಮ್ಮ ಸೋದರಿಯರು ವಿಶೇಷ ಆಸಕ್ತಿಯುಳ್ಳವರೆಂದು ನಂಬಿ, ಅವರ ಅಭಿಮಾನಗೌರವಕ್ಕೊಳಪಟ್ಟ ಆರ್ಯಮಹಿಳಾಮಣಿಯರ ಚರಿತೆಯನ್ನು ಅವರ ಲಲಿತ-ಸುಮಧುರಭಾಷಣಗಳಿಂದಲೇ ಹೊರಡಿಸುವುದು ಯುಕ್ತವೆಂದೂ ತಿಳಿದು, ಹೀಗೆ ಬಹುಮಾನಸ್ಪರ್ಧೆಯನ್ನು ಏರ್ಪಡಿಸಿರುವೆವು. ಸ್ಪರ್ಧೆಯ ಮೇಲಿಂದಾದರೂ ನಮ್ಮವರು ಎಚ್ಚರಗೊಂಡು ತಮ್ಮ ಕರ್ತವ್ಯ-ದೇಶಧರ್ಮ-ಮತ-ಪೂರ್ವಾಚಾರಗಳನ್ನು ಚೆನ್ನಾಗಿ ವಿಮರ್ಶಿಸಿ ನೋಡುವವರಾದಾರೆಂದು ದೃಢಭರವಸೆಯಿಂದ ನಿರೀಕ್ಷಿಸುವೆವು.

ಇನ್ನು, ನಮ್ಮ ಸೋದರಿಯರಲ್ಲಿ ಕೆಲವರು ನಮ್ಮ ಸಮಕ್ಷಮದಲ್ಲಿಯೇ "ನಮಗೆ ಸ್ವಲ್ಪ ಓದುಬರಹವು ಬರುವುದಲ್ಲದೆ ಹೆಚ್ಚಿನ ಪಾಂಡಿತ್ಯವಿಲ್ಲ; ನಮ್ಮ ಬರವಣಿಗೆಯು ಅಚ್ಚಿಗೆ ಯೋಗ್ಯವೆನ್ನಿಸುವುದು ಹೇಗೆ?" ಎಂದೂ, "ನಮ್ಮ ಅಕ್ಷರಗಳು ನೆಟ್ಟಗಿಲ್ಲ, ನಮಗೆ ಅಷ್ಟಾಗಿ ವ್ಯಾಕರಣ ಜ್ಞಾನವಿಲ್ಲ; ಅಲ್ಲದೆ ಒಂದಕ್ಕೊಂದನ್ನು ಸೇರಿಸಿ ಬರೆಯುವ ಕೌಶಲವೂ ಇಲ್ಲ, ಏನೋ ಕಂಡುಕೇಳಿದ ವಿಚಾರವಾಗಿ ನಮಗೆ ತಿಳಿದಷ್ಟು ಮಟ್ಟಿಗೆ ಮಾತಾಡುವಂತೆ ಹೇಳುತ್ತೇವೆ; ಬೇಕೆಂದರೆ ಅದನ್ನೇ ಬರೆಯುತ್ತೇವೆ. ಆದರೆ, ಅದನ್ನು ನಿಮ್ಮಲ್ಲಿಗೆ ಕಳುಹಲು ಮಾತ್ರ ನಾಚಿಕೊಳ್ಳುತ್ತೇವೆ" ಎಂದೂ ಹೇಳಿರುವಂತೆ ಮುಂದೆಯೂ ಹೇಳುತ್ತ ಸುಮ್ಮನಿರಬಾರದು. ಪ್ರಯತ್ನಪಡದೆ ಆವ ಕೆಲಸವೂ ನೆಟ್ಟಗೆ ಸಾಗುವುದಿಲ್ಲ; ಕಷ್ಟಪಡದೆ ಇಷ್ಟಸಿದ್ಧಿಯಾಗುವುದಿಲ್ಲ. ನಡಿಗೆಯನ್ನು ಕಲಿಯುವಾಗ ಎಡಹದ, ತಡೆವರಿಸದೆ, ಬೀಳದೆ ಆವ ಮಕ್ಕಳೂ ನಡೆಯನ್ನು ಕಲ್ತುದಿಲ್ಲ. ಹಾಗೆಯೇ ನಾವು ಮೊದಮೊದಲು ಪಾಕಕಾರ್ಯವನ್ನು ಅಭ್ಯಾಸಮಾಡುವಾಗ ಕೂಡ ಕೆಲವು ವೇಳೆ ಕೈಸುಟ್ಟುಕೊಂಡೂ, ಕೆಲವು ವೇಳೆ ಪಾಕವನ್ನು ಕೆಡಿಸಿ, ಪದಾರ್ಥಗಳನ್ನು ನಷ್ಟಪಡಿಸಿಕೊಂಡು ಹಾಸ್ಯಕ್ಕೂ ಗುರಿಯಾಗುವುದನ್ನೂ, ಹಾಗೆ ನಾವು ಹಾಸ್ಯಕ್ಕೆ ಗುರಿಯಾದುದರ ಮೇಲೆಯೇ ನಮಗೆ ಅಭಿಮಾನವೂ ಕಾರ್ಯದಲ್ಲಿ ದೃಢಪ್ರಯತ್ನವೂ ಶ್ರಮಸಹಿಷ್ಣುತೆಯೂ ಉಂಟಾಗಿ ಈಗ ನಮ್ಮ ನಮ್ಮ ಅಭ್ಯಾಸಕ್ಕೆ ತಕ್ಕಷ್ಟುಮಟ್ಟಿಗೂ ತೃಪ್ತಿಕರವಾಗಿ ನೆರವೇರಿಸುತ್ತಿರುವೆವೆಂಬ ವಿಚಾರವುಳ್ಳವರಾಗಿದ್ದರೆ,— ಓ ನಮ್ಮ ಪ್ರಿಯ ಸೋದರಿಯರೇ!— ಈಗ ಒಂದು ಬಾರಿ ಪ್ರಯತ್ನಪಟ್ಟು ನೋಡಿರಿ. ಲಜ್ಜಿತರಾಗಬೇಡಿರಿ; ಸಂಕೋಚಪಡಬೇಡಿರಿ. ನಿಮ್ಮ ಲೇಖನವು ಹೇಗಿದ್ದರೂ ಅದನ್ನು ಸಾದರದಿಂದ ನೋಡಿ ಸಮಾಲೋಚಿಸುವವಳು ಈ ನಿಮ್ಮ ಧರ್ಮಸೋದರಿಯೇ ಆಗಿರುವುದರಿಂದ

ನೀವು ಆವ ಭಾಗದಲ್ಲಿಯೂ ಶಂಕಿತರಾಗಬೇಕಾದುದಿಲ್ಲ. ನಮಗೆ ನಿಮ್ಮ ಅಭಿಪ್ರಾಯ (ಮನೋಭಾವ) ಗಳು ಗೊತ್ತಾಗುವುದು ಮುಖ್ಯವಲ್ಲದೆ ನಿಮ್ಮ ಭಾಷಾಪಾಂಡಿತ್ಯವು ಅಷ್ಟಾಗಿ ಅಪೇಕ್ಷಣೀಯವಾಗಿಲ್ಲ. ಅಕ್ಷರಗಳು ಹೇಗಿದ್ದರೂ ಇರಲಿ ಲೇಖನಸರಣಿಯು ಎಷ್ಟು ವ್ಯಾಕರಣಮರ್ಯಾದೆಯನ್ನು ಮೀರಿದ್ದರೂ ಮೀರಿರಲಿ; ಅಭಿಪ್ರಾಯವು ಸ್ಪಷ್ಟವಾಗಿದ್ದರೆ ಸಾಕು. ಅಂತಹವುಗಳನ್ನು ನಾವು ಸೂಕ್ತತೋರಿದಂತೆ ಸರಿಪಡಿಸಿ ಪ್ರಕಾಶಕ್ಕೆ ತರುವೆವು; ತಕ್ಕಂತೆ ನಿಮ್ಮನ್ನು ಬಹುಮಾನಿಸುವೆವು. ಇದಕ್ಕೂ ಹೆಚ್ಚಿನ ಲಾಭವು ನಿಮಗೇನುಬೇಕು ? ಸೋದರಿಯರೇ! ನಿಮ್ಮ ನಿಮ್ಮ ಪಾಲಿಗೆ ಬಿದ್ದಿರುವ ಕರ್ತವ್ಯದ ವಿಚಾರವಾಗಿ ನಾವು ಹೆಚ್ಚು ಹೇಳುವ ಅಗತ್ಯವಿಲ್ಲವಾದುದರಿಂದ ಲೇಖನವನ್ನು ಇಷ್ಟಕ್ಕೆ ವಿರಮಿಸಿ ಈಗಲಾದರೂ ನಿಮ್ಮ ಮನೋಗತವೇನಾಗಿರುವದೆಂಬುದನ್ನೂ ನೋಡಲು ಮಾರ್ಗ ಪ್ರತೀಕ್ಷೆಮಾಡುತ್ತಿರುವೆವು —

ಇಂತು ಬಯಸುತ್ತಿರುವ ನಿಮ್ಮೆಲ್ಲರ ಶ್ರೇಯಃಕಾಂಕ್ಷಿಣೀ ಧರ್ಮಭಗಿನಿ,
ತಿರುಮಲಾಂಬಾ-ಸಂಪಾದಿಕೆ, ಸತೀಹಿತೈಷಿಣೀ ನಂದಿನಿ

ಕೃತಜ್ಞತೆ.

ನಂದಿನೀ-ಹಿತೈಷಿಣಿಯರನ್ನು ನಮ್ಮ ಪ್ರಭುವರೇಣ್ಯರು ಮತ್ತು ಮಾತಾದೇವಿಯರಾದ ನಮ್ಮ ಶ್ರೀಮನ್ಮಹಾರಾಣಿಯವರೂ ಎಷ್ಟು ಮಟ್ಟಿಗೆ ಅನುಗ್ರಹಿಸಿರುವರೆಂಬುದನ್ನು ನಿರಂತರ ಕೃತಜ್ಞರಾಗಿರುವ ನಾವು ಮೊದಲಿಂದಲೂ ನಿವೇದಿಸುತ್ತ ಬಂದಿರುವೆವಷ್ಟೆ! ಇಂದು ನಂದಿನಿಯಲ್ಲಿ ನಿಸರ್ಗವಾತ್ಸಲ್ಯವನ್ನಿರಿಸಿ ಅನುಗ್ರಹಿಸಿ ಬಂದಿರುವ ನಮ್ಮ ಶ್ರೀಮದ್ಯುವರಾಜರವರ ಕೃಪಾಪತ್ರವನ್ನು ನಾವು ಅನೇಕಾನೇಕ ವಂದನೆಗಳೊಡನೆ ಸ್ವೀಕರಿಸಿ, ಅದಕ್ಕಾಗಿ ಚಿರಕೃತಜ್ಞತೆಯಿಂದ ಶ್ರೀಮದ್ಯುವರಾಜರವರ ಶ್ರೀಮದ್ಯುವರಾಣಿಯವರ, ಮತ್ತು ನಮ್ಮ ಪ್ರಭುವರೇಣ್ಯರಾದ ಶ್ರೀಮನ್ಮಹಾರಾಜರವರ—ಶ್ರೀಮನ್ಮಹಾರಾಣಿಯವರ ರಾಜಪರಿವಾರದವರ ನಿರಂತರ ಶ್ರೇಯಃಪ್ರಾರ್ಥನೆ ಮಾಡುತ್ತಿರುವೆವು.

ಸಂ. ನಂದಿನಿ

(ಶ್ರೀಮದ್ಯುವರಾಜರವರಿಂದ ಅನುಗ್ರಹಿಸಲ್ಪಟ್ಟಿರುವ ಪತ್ರವು)

No. 111

Chamundi Vihar
MYSORE,
31st October 1917.

To,

The Editor,
"KARNATAK NANDINI"
Nanjangud.

MADAM,

I am directed to acknowledge, with thanks the receipt of two sets of first nine numbers of the "Karnatak Nandini" forwarded with your application dated 30th July 1917 and to inform you that H. H. THE YUVARAJA will be glad to contribute for a copy of your monthly journal.

Yours faithfully
(sd) M. A. SINGRACHAR,
Personal Assistant.

ಸತೀಹಿತೈಷಿಣೀ ಗ್ರಂಥಮಾಲಾ.

ತ್ರೈಮಾಸಿಕ ಪುಸ್ತಕವು.

ಈ ಗ್ರಂಥಮಾಲೆಯಿಂದ ಸ್ತ್ರೀಜನಾಂಗಕ್ಕೆ ಎಷ್ಟು ಉಪಯೋಗವಾಗುತ್ತಿರುವುದೆಂಬದನ್ನು ಇಲ್ಲಿ ವಿವರಿಸಬೇಕಾಗಿಲ್ಲ. ತಾವೇ ಪರೀಕ್ಷಿಸಿದರೆ ಗೊತ್ತಾಗುವದು. ಮಾಲೆಯ ಪ್ರಥಮ ಪುಸ್ತಕವು ಒಂದು ವರ್ಷದೊಳಗಾಗಿ ಎರಡಾವೃತ್ತಿ ಮುದ್ರಣವಾಗಿರುವದನ್ನು ನೋಡಿದರೆಯೇ ಅದರ ಪ್ರಯೋಜನವು ತಿಳಿವುದು. ಇಷ್ಟರಲ್ಲಿ ದ್ವಿತೀಯ ಪುಸ್ತಕವೂ ಪುನರ್ಮುದ್ರಣವಾಗುವದರಲ್ಲಿದೆ. ಹೆಚ್ಚೇಕೆ, ಸ್ತ್ರೀಯರ ಮೇಲೆ ಬೀಳುತ್ತಿರುವ ವೃಥಾಪವಾದವನ್ನು ತಪ್ಪಿಸಿ, ಅವರಲ್ಲಿ ಗೌರವವನ್ನು ಹೆಚ್ಚಿಸುವದರಿಂದ ದೇಶದ ಅಭಿವೃದ್ಧಿಯು ಹೇಗಾಗಬಹುದೆಂಬದನ್ನು ಸಕಾರಣವಾಗಿ, ಸಮಯೋಚಿತವಾದ ಸ್ವತಂತ್ರ ಲೇಖನಗಳಿಂದ ಅನೇಕ ವಿಚಾರಗಳನ್ನು ಪ್ರತಿಪಾದಿಸುವ ಗ್ರಂಥಗಳೇ ಇದರಲ್ಲಿ ಪ್ರಕಟವಾಗುತ್ತಿರುವವು. ಒಮ್ಮೆ ನೋಡಿದರೆ ಗುಣವು ತಾನಾಗಿ ಪ್ರಕಾಶಕ್ಕೆ ಬರುವದು.

ಈ ವರೆಗೆ ಪ್ರಕಟವಾಗಿರುವ ಗ್ರಂಥಗಳು.

ಸಂಖ್ಯೆ	ಹೆಸರು	ಸಾಮಾನ್ಯ ಕ್ರಯ	ಚಂದಾದಾರರಿಗೆ
೧	ಸುಶೀಲೆ	೦—೬—೦	೦—೪—೦
೨	ಸುಭಾ	೦—೮—೦	೦—೦—೦
೩	ವಿದ್ಯುಲ್ಲತಾ	೦-೧೪—೦	೦-೧೦—೦
೪	ವಿರಾಗಿಣಿ	೧—೦—೦	೦-೧೨—೦
೫	ದಕ್ಷಕನ್ಯಾ	೧—೮—೦	೧—೦—೦
೬	ಮಾತೃನಂದಿನಿ	೧—೪—೦	೧—೦—೦
೭	ರಮಾನಂದ	೦-೧೦—೦	೦—೭—೦
೮	ವಿಕ್ರಮ	೧—೨—೦	೦-೧೪—೦
೯	ಚಂದ್ರವದನಾ	೦-೧೦—೦	೦—೭—೦

ಭದ್ರಗೀತಾವಲಿ ೦—೪—೦; ಸೇವಾವಿಚಾರ, ೦—೧—೦, ಈ ಮೂರೂ ವರ್ಗಣಿದಾರರಿಗೆ ಬಹುಮಾನವಾಗಿ ಕೊಡಲ್ಪಡುವವು. ವಿಶೇಷ ವಿಷಯಗಳು ಪತ್ರದ್ವಾರಾ.

ವಿಳಾಸ—ಕಾರ್ಯದರ್ಶಿ, ಹಿತೈಷಿಣೀ, ಮಾತೃಮಂದಿರಂ,
ನಂಜನಗೂಡು.

ಇದನ್ನು— ಬಿಂದೂ ನಾರಾಯಣ ಮುತಾಲಿಕ-ದೇಸಾಯಿ, ಇವರು ಹುಬ್ಬಳ್ಳಿಯ "ಶ್ರೀಕೃಷ್ಣ ಮುದ್ರಾಲಯ"ದಲ್ಲಿ ಮುದ್ರಿಸಿದರು.
ಹಾಗೂ ಶ್ರೀಮತೀ ತಿರುಮಲಾಂಬಾ ಇವರು 'ನಂಜನಗೂಡಿ, ಕರ್ನಾಟಕ ನಂದಿನಿ ಆಫೀಸಿನಲ್ಲಿ ಪ್ರಸಿದ್ಧಪಡಿಸಿದರು.

ಸಂಪುಟ ೨ ೧೯೧೭ ಸಂಚಿಕೆ ೩.

ಕರ್ಣಾಟಕ ನಂದಿನಿ



ಭಕ್ತ್ಯಾ ಗುರೌ ಮಯ್ಯನುಕಂಪಯಾ ಚ । ಪ್ರೀತಾಸ್ಮಿ ತೇ ಪುತ್ರ ವರಂ ವೃಣೀಷ್ವ ॥
ನ ಕೇವಲಾನಾಂ ಪಯಸಾಂ ಪ್ರಸೂತಿಂ । ಅವೇಹಿ ಮಾಂ ಕಾಮದುಘಾಂ ಪ್ರಸನ್ನಾಮ್ ॥

ನಂದಿನಿ—ರಘುವಂಶ

ದಕ್ಷಿಣೇ ಲಕ್ಷ್ಮಣೋಯಸ್ಯವಾಮೇತು ಜನಕಾತ್ಮಜಾ ॥
ಪುರತೋ ಮಾರುತಿರ್ಯಸ್ಯ ತಂ ವಂದೇ ರಘುನಂದನಂ ॥

॥ ಶ್ರೀ ॥

॥ ವಂದೇತ್ವಾಂ ಭೂದೇವೀ ಆರ್ಯಮಾತರಮ್ ॥

ಕರ್ಣಾಟಕ ನಂದಿನಿ.

(ಮಾಸಪತ್ರಿಕೆ)

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃಪ್ರಭುಃ ॥
ದಾಸ್ಯನ್ತಿ ಮಮಯೇ ಚಾನ್ಯೇಹ್ಯದೃಷ್ಟಾಃ ಪಥಿಗೋಚರಾಃ ॥ "

ಸಂಪುಟ ೨	ಪಿಂಗಳ ಸಂ॥ ಮಾರ್ಗಶಿರ ೧೮೩೯—೦—೧೯೧೭ನೇ ಡಿಶೆಂಬರ್	ಸಂಚಿಕೆ ೩

ಇಷ್ಟದೇವತಾ ಪ್ರಾರ್ಥನೆ.

" ಪರವಿತ್ತಂ ಲೋಷ್ಟಮೆಂದೇಳಿಸಿ ಮರವೆಯೊಳಂ ಕೂರದನ್ಯಾಂಗನಾಸೋ
ದರರಂ ಸಂರಕ್ಷಿಸಲ್ಕಂ ತಿರದದಟರ ನೋರಂತೆ ತನ್ನಾರ್ಪಿನಿಂ ಸಂ ॥
ಹರಿಸಲ್ಕಂ ಸಾಲ್ವನೆಲ್ಲಾ ಜಗದೊಡೆಯನ ಕೂರ್ಪಾಡೆ ಚಂದ್ರಾರ್ಕರಂ ಮಾಂ
ಕರಿಸಲ್ಸಾಲ್ದದ್ದರ್ಪ ಲಕ್ಷ್ಮೀನರಹರಿ ಯಘದೂರೀಕೃತಂ ಮಾಡುಗೆಂದುಂ ॥ "

ರಾಗಾ ॥ ,, (ಬಂದಾ ಮುಚುಕುಂದ ವರದಾನಂದ)

ನಾರಸಿಂಹ ರಕ್ಷಿಸೈ ದಯದಿಂ ॥ ನತಜನಾಶ್ರಯ (ಶ್ರೀ) ನಾರ ॥ ಪ ॥
ಸಾರರಹಿತವಹ—ಘೋರತರ ಸಂ—ಸಾರದಿ ತೊಳಲುತ—ಗಾರುಗೊಂಡಿಹೆಸಂಖ್ಯ ॥ ಅನು ॥
ಚಿಣ್ಣನು ಕಂಭದಿ ಬಣ್ಣಿಸಿ ಕರೆದಂದು—ನನ್ನಿಯೊಳ್ ಕೇಳಿ—ಅನ್ಯ ದೈವಗಳನ್ನು ತೊರೆದು ।
ತನ್ನನೇ ನೆನೆವಾ—ಚಿಣ್ಣನ ಕಾಪಿಡೆ ಕಂಭದಿ ಬಂದು ॥ ಘನತರ ಕೋಪದಿಂ ದೈತ್ಯನ ಸೆಳೆದು ।
ಕುನ್ನಿಯ ಮುಡಿಯನು ಪಿಡಿದೆಳೆಯುತ ಬಡಿದು ॥ ತನ್ನಯ ತೊಡೆಯೊಳಗಿರಿಸುತೆ ದಿತಿ—
ಜನ—ಉರವನು ಬಗೆಯುತ ಕರುಳನು ಕೊರಳೊಳು ಧರಿಸಿದ ॥ ನಾರಸಿಂಹ ॥ ೧ ॥
ಘೋರರೂಪಕೆ ಬೆದರುತ ಜನರು—ಇದಿರಾಗಿ ಬರದೆ—ತರಳನ ನೂಕಲು ಭರದಿಂ ಬಂದು ।
ಕರಗಳ ಜೋಡಿಸಿ ನಿಂದಂ — ಪರಿಪರಿಯಿಂ ನುತಿಸಲ್ ಕರುಣೆಯ ತಂದು ॥
ವರತರಾಭಯ ಹಸ್ತವ ನೀಡಿ, ತರಳನ ಪಿಡಿದು ಮುಡಿನೇವರಿಸಿ ।
ವರಭಕ್ತನೆ ಸಿರಿಸೌಭಾಗ್ಯವಾಳುತಿರೆಂದು, ಹರುಷದಿ ಕಂದನ ಮನ್ನಿಸಿ ಪೊರೆದಾ ॥ ನಾರ ॥ ೨ ॥
ಚಾರು ಚರಿತ ಭಕ್ತನ ಮೊರೆಯ—ಲಾಲಿಸಿ ಮುದದಿಂ—ನಾರೀ ಶ್ರೀ ಲಕ್ಷ್ಮಿಯೊಡಗೊಂಡು ।
ಮಾರಹಳ್ಳಿಯೊಳ್ನಿಂದು—ಸಾರಿ ತನ್ನನು ಬೇಡು ವರನೆಂದೆಂದೂ ॥ ಕೋರಿಕೆಗಳನೀ—
ಡೇರಿಸುವನೆಂದು । ಸಾರಿಬಂದಿಹೆ ನಿನ್ನೆಡೆಯೊಳಗಿಂದು । ಸಾರಸಾಕ್ಷನೆ ನೀಂ ಕೃಪೆಮಾಡೆಂದು ।
ಕೋರಿ ಭಜಿಸುವೆ ಶ್ರೀಶೈಲೇಶ ದಯಾಸಿಂಧು ॥ ನಾರಸಿಂಹ ರಕ್ಷಿಸೈ ದಯದಿಂ ॥ ೩ ॥

ಪ್ರೇಮಪಾಶ

(ಲೇಖಕ— ಎಮ್. ತಿಮ್ಮಪ್ಪಯ್ಯ, ಸಂಪಾದಕ, ಕನ್ನಡಕೋಗಿಲೆ, ಮಂಗಳೂರು.)

ಪ್ರಥಮ ಬಂಧ

ಭಾಮಿನಿ ||

ನಡುಹಗಲೊಳೊಂದಿನದಿ ದಣಿಯುತ |
ಲೊಡನೆ ಮಲಗಿದೆ, ನಾಲ್ಕು ತಣ್ಣನೆ |
ಹೊಡೆಯೆ, ಕೆಳೆಯರು ಬಂದು ಇದೋ ಕಿಟಕಿಯೊಳಗೊಳ ಹೊಕ್ಕು ||
ತಡವರಿಸಿ ತಂಗಾಳಿ 'ನಾನೂ
ಕಡುಬಳಲ್ದಿಹೆನೀಗ ಮೆಲ್ಲನೆ
ನಡೆದು ವಿಹರಿಪ' ಎಂಬುದೆನ್ನುತ ಹೊರಡಿಸಿದರೆನ್ನ || ೧

ಇಂತು ಮಾತಿಗೆ ಮಾತುಗುಟ್ಟುತ
ಸಂತಸದ ಪಂಗಡದಿ ಕೂಡುತ
ಲಂಕೆಹಾದಿಯ ಹಿಡಿದು ಮುಂದಕೆ ನಡೆಯುತಿರುವಾಗ ||
ನಿಂತು ಮನೆಬಾಗಿಲೊಳಗೊಬ್ಬಳು
ಕಾಂತೆ ಹತ್ತೊಂಬತ್ತು ವರುಷದ
ಮುಂತೆ ಕಾಲಿಡದಾಕೆ ಇಹುದನು ಕಂಡೆನೆದುರಲ್ಲಿ || ೨

ಮಾಸಿದಾ ಹಳೆಸೀರೆ ತೊಡವಿನ
ವಾಸನೆಯೆ ತಾನಿಲ್ಲ ಮೂಗುತಿ
ಯ್ಯೆಸೆ ಮಸುಕುತ ಮಿನುಗಿ ನಮ್ಮೀಗಳಿನ ಕನ್ನಡದ ||
ಬಾಸೆಯನು ನೆನೆಯಿಸಿತು ಇದಕೆ ವಿ-
ಶೇಷವಾಗಿಹ ಕಾರಣವು ಅವ
ಳಾಶೆ ಕಲ್ಲಿಲ್ಲದ ಗುಳಿನಂತಲೆದುದಿರಬಹುದು || ೩

ಚೆಲುವಿಕೆಯ ಸಂಪೂರ್ಣತೆಯನನು
ಗೊಳಿಪ ಮೆಯ್ಯನು ಮೆಯ್ಯಕಟ್ಟನು
ಹೊಳೆವ ಲಾವಣ್ಯದ ಮುಖಾಮುಗಳನೆಲ್ಲನುವಬೊಮ್ಮಂ ||
ಜಲಜನೇತ್ರೆಗೆ ತಕ್ಕ ತಕ್ಕಂ—
ತೊಲುಮೆಯಲಿ ಕೊಟ್ಟಿರುವನಾದರೆ
ಬೆಳಗಿಸದೆ ಚಿತ್ರವನು ಚಿತ್ರಕೆ ಮಸಿಯ ಮೆತ್ತಿದನೆ || ೪

ಎರಗಿ ಬಾಗಿಲ ದಾರ ವಂದಕೆ
ತರುಣಿ ಎವೆಯಿಕ್ಕದೆ ನಿರೀಕ್ಷಿಪ—
ಳರಿಯಳಾರೆದುರಿನಲಿ ಹೋದರು ಬಂದರೆಂಬುದನು ||
ಹೊರೆಟು ಮನವಿನ್ನೊಂದು ಕಡೆಯ
ಲ್ಲಿರಲು ಮೈ ಬರಿಬೊಂಬೆ ಆ ಕ—
ಣ್ಣಿರಕ ವಪ್ಪುದು ಹೀಲಿಗಣ್ಣಿನ ಒಟ್ಟಿಗಿಡಲಿಕ್ಕೆ || ೫

ಕೆಲವರಿಗೆ ದುಃಖಗಳ ಮಾತ್ರೆಯು
ಕೆಲವರಿಗೆ ಸುಖ ಪೊಟ್ಟಣಂಗಳ
ಕೆಲವರಿಗೆ ಸಮ್ಮಿಶ್ರವಾದ ಕ್ಷರದ ಗುಳಿಗೆಗಳ
ಕೆಲವರಿಗೆ ಬಂದಿಲ್ಲವೆನ್ನುತವು
ಗಳನು ಪಡೆದೂ ಹಿಗ್ಗಿ ಒಗ್ಗದೆ
ಗಳಿಲ ಸಂಕೆಯು ಆಳು ಒಂದನು ಕಣ್ಣಮಿಂಚಿನಲಿ ||

ಆರೊಳೂ ಕಣ್ಣಿಡದೆ ಜಗವನ
ಸಾರವೆಂದೆಣಿಸಿರುವಳೆನ್ನುತ
ತೋರುವಾ ಮಾನಿನಿಯು ಕಣ್ಣುಗಳವನ ಸಮ್ಮುಖಕೆ ||
ಪಾರಿದುವು ಎತ್ತೆತ್ತಲೋ ಸಂ
ಚಾರಕ್ಕೆದಿದ ಮನವು ಬುದ್ಧಿಯು
ಸೇರಿದುದು, ಕಣ್ಣಿನಲಿ ಜೀವದ ಕಳೆಗ ಮೊಳೆಬಂತು ||

ಕತ್ತಲೆಯ ಕೋಣೆಯಲಿ ದೀಪವ
ಕತ್ತಿಸಲು ಸುಸ್ನೇಹ ಬಲದಿಂ
ಹೊತ್ತಿಹೊಳೆಹೊಳೆವಾಗ ಗಾಳಿಯು ತೀಟದಿಂದಲೆದು ||
ಅತ್ತಲಿತ್ತಲು ನಡುನಡುಗಿ ಬೆದ
ರುತ್ತಲಿಹವೊಲು ಮುಖದ ಹಣತಿಗೆ
ಯೊತ್ತಿನಲಿ ಸಂತಸವು ಭಯದೊಡಗೂಡಿ ತೋರಿದುದು

ಅಂಚೆಯಾಳಾ ನಾಗವೇಣಿಗೆ
ಸಂಚಿಯಿಂ ಕಾಗದವನಿತ್ತನು
ಮುಂಚುವಾತುರದಿಂ ಲಿಪಾಪೆ(?)ಯನೊಡೆದು ನೋಡಿದ
ಹಂಚಿಕೆಯದೇನಿತ್ತೊ ಆದರಲಿ
ಮುಂಚಿ ಅಕ್ಷರಕೊಂದರಂದದಿ
ಸಿಂಚಿಸುವ ಕಂಬನಿಗಳಿಂದುತ್ತರವನುಂ ಬರೆದಳ್ ||

ಕೆಂಜೊಡರು ಬಿರುಗಾಳಿ ತೀಟಕೆ
ಮಾಂಜೆ, ನಾಗರಿಕತೆಯ ನಾಡಲಿ
ಸಂಚಿನಿಸಿದುದು ಕೂಡೆ ವಿದ್ಯುಚ್ಛಕ್ತಿ ದೀಪವೆನೆ ||
ಕಂಜವದನೆಯ ಮೋರೆ ಮುರುಕದ
ಎಂಜಲಿನ ಕೊಳೆಯಳಿದು ಫಳ್ಳನೆ
ರಂಜಿಸಿತ್ತೈ ಧೈರ್ಯನಾಟ್ಯದ ರಂಗಭೂಮಿವೊಲು ||

ಇಷ್ಟು ಸಂಗತಿ ಮೂರು ನಿಮಿಷದಿ
ಮುಟ್ಟಿಹುದು ಕೊನೆಯನ್ನು ಆದರೆ
ಕಟ್ಟಿ ಪದ್ಯವ ನಿಂತು ಬಣ್ಣಿಸುವಾಗ ತಡವಾಯ್ತು ||

ಅಷ್ಟೇಣಿಸಿಯೂ ಪ್ರಕೃತಿಯಂಗವ
ಕಟ್ಟಲೆನ್ನುತ ವಿಕೃತಿ ಹಸ್ತವ
ನೆಷ್ಟು ನೀಡಿದರೇನು ಸಿಕ್ಕುವುದುಂಟೆ ಈ ಕೈಗೆ ॥ ೧೧

ನಡೆಯಬೇಕಾಯಿತಾ ಸ್ನೇಹಿತ
ರೊಡನೆ ಮಾಡುವುದೇನು? ನಿಂತೂ
ಮಡದಿಯಳ ಗುಟ್ಟರಿವುದೆಂತೈ ಬೀದಿಯವನಾನು ॥
ನುಡಿವುದೆಂತು ಪರಾಂಗನೆಯೊಳಡಿ
ಯಿಡಲು ಮುಂದಕೆ ಮನವು ಹಿಂದಕೆ
ಜಡಿದುದೋಡುವ ದನವ ಹಗ್ಗದೊಳೆಳೆದ ತೆರವಾಯ್ತು ॥ ೧೨

ಅಲ್ಲಿಯವರೊಳು ಕೇಳಿದೆನು ತಾ
ವೆಲ್ಲ ಕೈಮುಗುಚಿದರು ಪಟ್ಟಣ
ದಲ್ಲಿರುವ ನಾಗರಿಕತೆಗೆ ಹತ್ತಿರದವರ ಚಿಂತೆ ॥
ಇಲ್ಲವೇ! ಸ್ವಾರ್ಥೈಕದೃಷ್ಟಿಯೆ ।
ಹಳ್ಳಿಯಲಿ ಹರಿದಾರಿ ಸುದ್ದಿಗ
ಳೆಲ್ಲವನ್ನರಿದಪರು ಸಂದಣಿಯಂಥತೆಯ ಮನೆಯ್ಯೆ ॥ ೧೩

ತಾವು ತಾವೇ ತಮ್ಮ ಸುಖದುಃ—
ಖಾವಳಿಗೆ ಭಾಗಿಗಳು ಅದರಿಂ—
ದಾವನೂ ಪಟ್ಟಣದಿ ಪರರಂದವನು ಯೋಚಿಸನು ॥
ತಾವು ದೂರದಿ ಮನೆಯ ಮಾಡುತ
ಭಾವವನು ಹತ್ತಿರಕೆ ತರುವಾ
ಈ ವಿಚಾರವು ಹಳ್ಳಿವಾಸದಿ ತೋರುವುದು ನಮಗೆ ॥ ೧೪

ಮನೆಯ ಪಣ್ಣಲಿ ಅಂಗಡಿಯ । ಹ
ಣ್ಗೊನೆಯ ಸವಿಯನು ಕಾಣದಿಹ ಈ
ಮನುಜರಕಟಾ! ಹತ್ತಿರದ ವರಕಾಮಧೇನುವನು ॥
ಗಣನೆಗೆಯ್ಯದೆ ಡಬ್ಬಿಹಾಲನು
ಮಣದಣಿಯೆ ಕುಡಿಯುವರು ಆ ತೆರ
ವನು ತಿಳಿಯಬಹುದಯ್ಯ, ಪಟ್ಟಣವಾಸದಿಂ ನಾವು ॥ ೧೫

ಎಷ್ಟು ಕವಿಗಳು ಕಳೆದು ಹೋದರು
ಎಷ್ಟು ಗುಣಿಗಳು ಬಂದು ಸಂದರು
ಹುಟ್ಟಿದೂರಲಿ ಗಂಗೆ ಹೆಣಹೇಸಿಕೆಗೆ ನೆಲೆಯಾಯ್ತು ॥
ಎಷ್ಟು ದೂರಕೆ ಹೋದರೋ ತಾ
ವಷ್ಟು ಶಮ್ಯವನೆಂದು ನುಡಿವರು
ಪಟ್ಟಣದ ವಾಸದಲಿ ಮಾಡಿದೆನೀ ವಿಮರ್ಶೆಯನು ॥ ೧೬

ಬೇಡದ ವಿಚಾರಗಳನಿನ್ನುಂ
ಮಾಡಿ ಗಾಳಿಗೆ ಹಿಡಿವುದೇತಕೆ
ಕೂಡೆ ಆ ಕಾಮಿನಿಯ ಗುಟ್ಟನು ತಿಳಿಯಲುಜ್ಜುಗಿಸಿ ॥
ಗಾಢವಾಗಿಹ ಮನಕೆ 'ಸ್ಪೈ' ಯೆಂ—
ದಾಡಿದೆನು ಗೂಟಕ್ಕೆ ಕಟ್ಟುತ
ನಾಡಿನಲಿ ನೀಯಲಿಕೆ ಬಿಟ್ಟಾದನದವೊಲು ನಡೆದೆಂ ॥ ೧೭

ಹಗಲು ಹೆಣ್ಣಿನ ನಲ್ಲನಾದಿನ
ನಿಗೆ ಸಮಯ ಬಂದತ್ತು ಪಶ್ಚಿಮ
ನಗದ ಮೇಲಿಂ ಬಿದ್ದು ಕಡಲಿಗೆ ನೆಲವ ತೊರೆದುದನು ॥
ಮಿಗೆ ತಿಳಿಸುವೆನೆನುತ್ತ ಕಾಲನು
ಬಗೆದು ಕಳುಹಿದ ಪತ್ರವೋ ಎನೆ
ನೆಗೆದನೈ ಹುಣ್ಣಿಮೆಯ ಚಂದ್ರನು ಮೂಡುವೆಟ್ಟದಲಿ ॥ ೧೮

ನೋಡುತಾ ಪತ್ರದಿ ಕಳಂಕವ
ಮಾಡಿದಾ ತಪ್ಪಕ್ಷರಗಳನು
ಕೂಡೆ ಹಗಲೆಂದೆಂಬ ರಾಣಿಯ ಮೋರೆಯಲಿ ಕೆಂಪು ॥
ಮೂಡಿದುದು ತಾರಕೆಯ ಕಂಬನಿ
ಜೋಡುಗೊಂಡುದು ಹಕ್ಕಿ ದನಿಯಿಂ
ದಾಡಿ ಮರುಗುತ್ತಿರುವಳೆಂದೆನೆ ಸಂಜೆಸಮನಿಸಿತು ॥ ೧೯

(ದ್ವಿತೀಯ ಬಂಧ)

ಸಂತಸದ ಭಂಗಾರದೊಟ್ಟಿಗೆ
ಚಿಂತೆಯೆನ್ನುವ ತಾಮ್ರವಿಲ್ಲದೆ
ಎಂತು ಪವನೆನ್ನಿಪುದು, ಲೋಕದೊಳೆಲ್ಲಿ ನಡೆಯುವುದು ॥
ಇಂತು ಯೋಚಿಸಿ ನೋಡಿ ಬರಿದೇ
ಚಿಂತೆಗಂಜಲು ಬಾರದದುವೇ
ಸಂತಸಕೆ ರೂಪವನು ಕೊಡುವುದು ಎತ್ತ ನೋಡಿದರು ॥ ೧

ಎಂದು ತನ್ನನು ಮಿಕ್ಕಿ ಮೀರುವ
ದಂದುಗದ ಗಜಕಂಕುಶವ ಹಿಡಿ
ದಂದಿನಿರುಳಲಿ ತರುಣನೊಬ್ಬನು ಮನದಿ ಯೋಚಿಸುತ ॥
ನೊಂದು ಸಂಸಾರದಲಿ ಸಾರದ
ಬಿಂದುವನ್ನು ಕಾಣದಂದದಿ
ಮುಂದುವರಿದನು ಪೊದರಮೆಳೆಯಲಿ ನಟ್ಟನಡುವಿರುಳು ॥ ೨

ಹಿರಿಯರೀ ಹುಟ್ಟಿಂಬ ಮನೆಯನು
ಹರಕೆ ಹಾಡಿಂ ಕಟ್ಟಿದರೈ, ಹಾ!
ಕಿರಿಯವರು ಸಡಲಿಪರು ಸಂಸಾರಕ್ಕೆ ನೆಲೆಯುಂಟೆ!
ಪರಿಕಿಸಲು ತಂತಮ್ಮ ಮನವೇ
ದೊರಕಿಪುದು ನೆಲೆಯನ್ನು ತಂತವು
ಗಿರುವುದೇ ರುಚಿ ನಮ್ಮ ಬಾಯಿಗೆ ಪರರು ತುತ್ತೀಯೆ ॥ ೩

ಮನಕೆ ಭಯವಂಟದರೆ ಇರುಳೆಂ
ದೆನಿಸುವುದು ಹಗಲಾದರೂ ಧೃಢ
ವನು ಹಿಡಿಯೆ ಇರುಳಾದರೂ ಹಗಲಾಗಿ ತೋರುವುದು ॥
ಮನುಜಪದ್ಧತಿ ಇಷ್ಟೆ, ಆ ತರು
ಣನು ನಡೆದನಡಿಗಡಿಗೆ ಮನವನು
ಕುನಿಸುತಿಹ ಯೋಚನೆಯ ಮುಳ್ಳಿಗೆ ನೊಂದು ಕುಂದುತ್ತ ॥ ೪

ಹಕ್ಕಿಯೊಂದು 'ಚಿರಂಚಿ'ನುತ್ತಲಿ
ರೆಕ್ಕೆ ಬಡಿದುದು ಚಳಿ ಹಿಡಿದರೂ
ವಿಕ್ಕಿದುದು ನಿಂತಲ್ಲಿ ನಿಲ್ಲದೆ ಗಾಳಿ, ಗಿಡುಬಳ್ಳಿ ॥
ಬೆಕ್ಕಸದಿ ನಡುಗಿತ್ತು ಹಾ! ವೋ
ಡಕ್ಕೆ(?) ಚಂದ್ರಮುಖಿದಿ ಮುಗುಳ್ನಗೆ
ಯುಕ್ಕಿತೇ!! ಮೂಢರಿಗೆ ರೂಢಿಯೊಳುಂಟೆ ಸಮದೃಷ್ಟಿ॥ ೫

ನಡೆವನೊಂದಷ್ಟೇನೊ ಯೋಚನೆ
ಹಿಡಿವನೊಂದಿಷ್ಟೇನೊ ಬೆರಳನು
ಸಿಡಿದು ಸನ್ನೆಯುಗೈದು ಗೊಣಗುತ್ತಿರುವ ನೆಷ್ಟೆಷ್ಟೊ ॥
ಬಿಡದೆ ದಾರಿಗೆ ನಡೆವ ಗುಟ್ಟ
ನ್ನೊಡೆದು ತೋರುವನೆಂಬ ತೆರದಲಿ
ಅಡವಿಯೊಳಗೆಡೆಯಾಡಿದನು ಅತ್ತಿತ್ತಲಲ್ಲಲ್ಲಿ ॥ ೬

ಇಲ್ಲಿರುವುದೋ, ಇಲ್ಲ; ಆ ಕಡೆ
ಯುಲ್ಲಿರುವುದೋ, ಇಲ್ಲ; ಛೇ, ಮ
ತ್ತೆಲ್ಲಿ ಅಡಗಿಹುದೆನ್ನ ಪ್ರೇಮದ ಪಾಶವೆಂದೆನುತ॥
ಅಲ್ಲಿಗಲ್ಲಿಗೆ ಅಲೆದು ಕಾಣದೆ
ಮೆಲ್ಲನೊಂದಾಲದ ಮರವ ನಿದಿ
ಕಲ್ಲಿ ಕಂಡನು ಬಂದನಾಕ್ಷಣದಲ್ಲಿ ಅದರಡಿಗೆ ॥ ೭

ಎಲೆಲೆ ಆಲದ ಮರವೆ, ನೀನೇ
ಇಳೆಗೆ ಬೋಧಕನಂತೆ ತೋರುವೆ
ಹಲವುಪರಿ ಶಾಖೋಪಶಾಖಾವಳಿಯ ಸಂಕುಲದಿ ॥
ಹೊಳೆವ ಪತ್ರದ ಮೇಲೆ ಮಗುಚುತ
ಫಲವ ಕಾಣಿಸಿ ಕೊಡುವೆ, ದೈವವ
ತಿಳಿದವನು ನೀನಾದರೆನ್ನನುದ್ಧರಿಸು ದಯೆಯಿಂದ ॥ ೮

ನಿನ್ನ ಪತ್ರವನೋದುತೋದು
ತ್ತುನ್ನತಾನಂದದಲಿ ಮಾರುತ
ನನ್ಯ ಚಿಂತೆಯ ಬಿಸುಟು ಮೈ ಬಿಟ್ಟಿಹನು ಸುಖವಾಗಿ ॥
ಎನ್ನನೂ ಓದಿಸುತ ತಿಳಿವಿನ
ಕನ್ನಡಿಯ ತೋರಯ್ಯ ಕಣ್ಣಿಗೆ
ನಿನ್ನಡಿಗೆ ತಲೆಯಿಡುವೆನುದ್ಧರಿಸೈ ಮಹಾಮಹಿಮ ॥ ೯

ಹಕ್ಕಿಗಳು ಹಾವುಗಳು ಕಪಿಗಳು
ಹೊಕ್ಕು ನಿನ್ನನು ಸೇವಿಸುತ್ತಿರೆ
ಮಕ್ಕಳಂದದಿ ಹೊತ್ತು ಪತ್ರವನವುಗಳಿಗೆ ತೋರಿ ॥
ಅಕ್ಕರೆಯಿಂದೆ ತಿಳಿಸುಯಿವೆ, ಎನ
ಗುಕ್ಕುವಾನಂದವನು ನೀಡೆ—
ನಕ್ಕನಾಣೆಯನಿಡುವೆ, ಮರೆಯನು ಜನ್ಮಜನ್ಮದಲಿ॥ ೧೦

ಜನರು ಸಾರವೆನುತ್ತ ಹೇಳುವ
ಘನತರದ ಸಂಸಾರ ಪುಸ್ತಕ
ವನು ಬಿಡಿಸಲದರೊಳಗೆ ಕಹಿಯೇ ತುಂಬಿತುಳುಕುವುದು ॥
ಮನೆಯ ಬಿಟ್ಟದಕಾಗಿ ನಿನ್ನನೆ
ನೆನೆದು ಹುಡುಕುತ ಬಂದೆ ನೀಡೈ
ಕನಿಕರದ ಪಾಶವನು ಸಂಸೃತಿ ಪಾಶವನು ಹರಿದೆಂ॥ ೧೧

ಈಗ ಕಂಡುದು ಕಣ್ಣು ಮುಚ್ಚಲು
ಹೋಗಿ ಬಿಡುವುದು ತೆರೆಯೆ ಮತ್ತೊಂ
ದಾಗುವುದು ನಾನೋದಿದಾ ಪುಸ್ತಕದೊಳಕ್ಷರವು ॥
ಹೋಗಲದು, ಆ ಇಂದ್ರಜಾಲಕೆ
ಬಾಗುವುದು ಸರಿಯಲ್ಲ, ವಂದಿಪೆ
ಬೇಗ ಕೈಕೊಳು, ಅಲ್ಲದಿರಲಾವಾಯು ಬರಬಹುದು ॥ ೧೨

ನೀನು ಮೇಲಿಹೆ ಕೆಳಗಿನವನಾಂ
ಕಾಣದೊಲು ಕತ್ತಲೆಯ ಅಂಟುವ
ಮೋಣವೆತ್ತುವದೆನ್ನ ಕಣ್ಣಿಗೆ ಸರಿಯೆ! ಗುರುವರನೆ
ಏನು ಹೇಳ್ವೆ 'ಪ್ರೇಮಪಾಶದ
ಬೀಣನಿಳಿಸಿಹೆ' ನೆಂಬೆಯೋ, ಇದು
ಏಣಿಯೋ? ಹತ್ತಲಿಕೆ ಮೆಟ್ಟಲು ಕಾಣಲಿಲ್ಲವಲ ॥ ೧೩

ಅಲ್ಲ, ಪ್ರೇಮವೆನಲು ಜನದ ಕೊರ
ಳಲ್ಲಿಹುದು, ಅದರಿಂದ ಕೊರಳಿಗೆ
ಸಲ್ಲುವುದು ಈ 'ಪ್ರೇಮಪಾಶ'ವೆನುತ್ತ ನೀನೀಗ ॥
ಸೊಲ್ಲಿಸುವೆಯೋ! ಸರಿ, ಅದನು ನಾ
ಬಲ್ಲೆನೆನ್ನುತ ಗೋಳಿ ಬೀಣನು
ಗಲ್ಲದಡಿಯಲಿ ಸುತ್ತಿ ಮೇಲಕೆ ನೋಡಿತಾ ವ್ಯಕ್ತಿ ॥ ೧೪

ಕಲ್ಲಮೇಲೊರಗಿಪುದು ರನ್ನದ
ಪಲ್ಲಕಿಯನೇರಿಪುದು, ಲೋಕದೊ
ಳೆಲ್ಲಿಯೂ ಕುರುಡಾಗಿಪುದು ಕಣ್ದೆರೆಯಿಸುತಲೊಮ್ಮೆ ॥
ಎಲ್ಲವನು ಸರಿಯಾಗಿ ತೋರ್ಪುದು
ಉಳ್ಳುದೆಲ್ಲವು ತನಗೆನಿಪ್ಪುದು
ಅಲ್ಲಗಳೆಯುವುದನಿತನೂ ಹಾ! ಮನದ ಮಾಯಕವೆ॥ ೧೫

ಅಷ್ಟರಲಿ ಹಿಂದೊಬ್ಬ ಪುರುಷನು
ತಟ್ಟಿ ಬೆನ್ನನು ಏನಿದೀಪರಿ
ಕೆಟ್ಟ ಕೆಲಸವು! ಗೈದಪಾಪಕೆ ಬಡ್ಡಿ ಕೂಡಿಹೆಯೊ ॥
ಕುಟ್ಟುತಿನ್ನೊಬ್ಬನನು ಕೊಲ್ಲುವ
ದುಷ್ಟನುಂ ಹಿಂದೆಗೆವನಿದಕೇಂ
ಕಷ್ಟ ಬಂದುದು ಹೇಳು, ನೀನಾರೆನುತ ಬೆಸಗೊಂಡ ॥ ೧೬

ಬಡತನದಿ ನರಳುತ್ತಲೊಬ್ಬನು
ಹಿಡಿದು ಗಸ್ತುವನೊಂದು ಗೋಡೆಯ
ಕಡಿಯಲಸ್ಯನು ಕಂಡು, ಹೊಡೆವರು ಒಳಗಿನವನೆಂದು ॥
ನುಡಿಯುತೆಚ್ಚರಿಸಲ್ಕೆ ಅವನೇ
ಹಿಡಿಯಬಂದವನೆಂದೆಣಿಪವೊಲು ।
ದಡದಿಬಿದ್ದಾ ಮೀನಿನಂದದಿ ನಡುಗಿದನು ನಿಮಿಷ ॥ ೧೭

ಮನವೆ ಮೆಯ್ಯೆಂದೆಂಬ ರಾಜ್ಯಕೆ
ಜನಪನಾಗಿಹುದದರ ಮತವೇ
ಜನದೊಳೊತ್ತಾಯದಲಿ ಜಾರಿಗೆ(?)ಬಂದು ಇಂದ್ರಿಯಗಳ್ ॥
ತನುವನುಂ ಕುರುಡಾಗಿ ತೊಡುವುವು
ಎನಲು, ರಾಜ್ಯದ ಭಾರವೇ ಇದು
ಮನವರಿತು ಬುಧ್ಯಾದಿಮತಗಳ(?)ನರಿಯೆ ಹಿತವಹುದು ॥ ೧೮
ಹರಿಯು ತಾ ಸಂಸಾರಪಾಶವ
ಮರದ ಪಾಶದಿ ಮನವನಿಡುತಲಿ
ಮರದೊಳೈಕ್ಯವನಾಂತನೆಂದೆನೆ ಕಂಬದಂತಾಗಿ ॥
ತರುಣನಿವನಿರಲಾತನಿದಕೋ
ಕರವ ನೀಡುತಲಿನನು ರಾತ್ರಿಯು
ಪರದೆಯನು ಸೆಳೆವುದನು ನೋಡು ಕಳಂಕಕೆಡೆಯಿಲ್ಲ ॥ ೧೯
ಕಸಗುಡಿಸಿ ಗಾಳಿಯಲಿ ಹಕ್ಕಿಯು
ಪಿಸಪಿಸಸ್ವನ ಮಂತ್ರದೊಟ್ಟಿಗೆ
ಪಸೆಹನಿಯ ಸಿಂಚಿಸುತ ಕೋಳಿಯ ಕೂಗಿನಾಮಣಿಯು ॥
ದೆಸೆಗೆ ಕೇಳಿಸಿ ಪ್ರಕೃತಿಭಟ್ಟನು
ವಸುಮತಿಯ ದೇಗುಲದ ಕದವನು
ಪಸರಿಸುವನಾರ್ಯಾಗಮನವಾಗುವುದು ನೋಡಿದಿರು ॥ ೨೦
ಇಂತಿರುವ ಮಂಗಲದ ಕಾಲದೊ
ಳಿಂತು ನೀನವಶಕುನ ಗೆಯ್ಯಲು
ನಿಂತಿರುವೆ! 'ಹುಲಿ, ತಿಂದು ಸವಿಯನ್ನರಿತು ಲೋಕವನೆ ॥
ಮುಂತೆ ತಿನ್ನಲಿ' ಎನುತ ಹೆಗ್ಗವಿ
ಯಂತಿಕದ ಖಲನಂತೆ ಮರುಕವು
ಬಂತೆನುತ ಕೆಡುಹಂತಿ ಬರೆವುದೆ ಲೋಕ ಪುಸ್ತಕದಿ ॥ ೨೧
ಲೋಕದಲಿ ನಾವ್ ಬಂದ ಮೇಲೀ
ಲೋಕದಾಳುಗಳಾದೆವದರಿಂ
ಲೋಕಕ ಹಿತವ ಗೆಯ್ಯಲಿಕ್ಕೆಳ್ಳಷ್ಟು ಹಕ್ಕಿಲ್ಲ ॥
ಲೋಕದೊಳಗೇ ಬಾಳಿ ಸುಖದುಃ
ಖಾಕುಲದ ಕೂಳಿಂದ ಜೀವಿಸಿ
ಲೋಕಸೇವಕರೆಂಬ ಬಿರುದನು ಪಡೆವುದೇ ಧರ್ಮ ॥ ೨೨
ಊರು ಸೂರೆಯ ಪಾಲಿಗಾಗಲು
ಭೂರಿ ಭಯದಿಂದೋಡಿದಾತನು
ಸಾರಿ ಬರಲೊಳ್ಸದ್ದಿ ಅಲ್ಲಿಗೆ ಮೆಲ್ಲನಡಿಯಿಡುವೊಲ್ ॥
ಆರಯಿದು ಕರಣಂಗಳಲಿ ಮನ
ವೂರಿ ಮೆಯ್ಯೊಳಗೆಲ್ಲವೂ ಸಂ
ಚಾರವಮಾಡಿತು, ಕಣ್ಣ ಬಾಗಿಲ ತೆರೆದು ನೋಡಿದನು ॥ ೨೩
ನಡೆದು ಸ್ವರ್ಗಕೆ ಹೀರುವಮೃತದ
ಕುಡಿಕೆಯೋ ಮುಂದಿತ್ತು, ಹುಟಿದೊಗ
ಲುಡಿಸಿದಾದನ ಕಂಚಿ ಕಾಡಿಂಗೋಡಿದಂತಾಯ್ತು ॥
ತಡೆಯಲಾರದ ರಾಗರಸವು
ಕುಡಿಸಿ ಕಾಲುವೆಯಾಯ್ತು ಕಣ್ಣಲಿ
ಒಡನೆ ದವಡೆಗಳೆರಡು ಆ ಹರಿಹೊನಲಿದಡವಾಯ್ತು ॥ ೨೪
ಆದರೇನು ನಿಜಸ್ಥಿತಿಗೆ ಕುರು
ಡಾದ ಮೂಢತೆಯೊಂದು, ಸುಳ್ಳಿನ
ಭೇದ ಬಳೆಸಿದ ದುಷ್ಟಪತ್ರದೊಳಿದ್ದ ಹಗೆಯೊಂದು ॥
ಆದುದೆರಡು ಪಾವಸೆಯುವೊಲು
ಹೇ ದಯಾಳು "ಮನಃಪ್ರಿಯಾ" ಎಂ
ದಾದರದೊಳಾ ವ್ಯಕ್ತಿ ಬಾಗುತಲಪ್ಪಿತೀತನನು ॥ ೨೫
ಕಳವಳದೊಳಾರೆನುತಲೀತನು
ತಿಳಿಯದೇನೋ ಸಂಶಯದಿ ಮೇಲ್
ಬಳಿಗೆ ಪೋರೆಯನೆತ್ತೆ ಸುರಲತೆ ಕೊರಳ ಸುತ್ತಿರಲು ॥
ನಲಿದುದಚ್ಚರಿ ಮರುಕದಲಿ ಅವು
ನಲವಿನಲಿ ಏನಿಂತು ದುಸ್ಥಿತಿ
ಕೊಳೆಯ ನೆಸಗಿತು ನಿನ್ನ ಬುದ್ಧಿಯನೆಂದು ಕೇಳಿದನು ॥ ೨೬
ನಿನ್ನ ಬರವನು ಕಾಣದಾನತಿ
ಖಿನ್ನಳಿರೆ ಸಂದೇಹವೆನ್ನುವ
ಗನ್ನಗತ್ತರಿ ಧೈರ್ಯಕೋಟೆಯ ಕತ್ತರಿಸುತಿತ್ತು ॥
ಅನ್ನೆಗಂ ಯುದ್ಧದಲಿ ನೀನಸು
ವನ್ನುಳಿದೆ ಬಗದಾದಿನೊಳಗಂ
ದೆನ್ನುವಾಕಾಗದವು ಮುರಿದುದು ಚಿತ್ತಭಿತ್ತಿಯನು ॥ ೨೭
ಮನೆಯು ಕಣ್ತಪ್ಪಿಸಿದರೂ ತಳೆ
ಮಣಿಯು (?) ಧರ್ಮದ ಕಣ್ಣಿಗಟ್ಟುವು
ದನುಕಲಿಯಲಾನೊಲ್ಲದೀ ಪುರುಷಾಂಗವನು ಕೂಡಿ ॥ (?)
ಇನಿಯ, ಬಂದೆನು ಹೇಳಲಿನ್ನೇ
ನೆನುತ ಕಂಬನಿ ಸೂಸುತಿಹ ಪೆ
ಣ್ಮಣಿಯ ಕುರುಳನು ನೇವರಿಸುತಿಂತೆಂದನವಳೊಡನೆ ॥ ೨೮
ನೀರು ಕಲ್ಮಣ್ಣುಗಳ ಸಂಟಿಗೆ
ಸೇರಿಸುತ ಬಲಿದೆನ್ನ ಹೃದಯವ
ಗಾರು ಕೆಡುಕರು(?) ಸೂಜಿಯಿಂ ಚುಚ್ಚುತ್ತ ಬಾಯ್ಮಡಿಯೆ ॥
ನೀರೆ, ನಿನ್ನಯ ನಲ್ಮೆನೀರನು
ಬೇರೆ ಕಡೆಗೊಯ್ಯಲಿಕೆ ತೂಬನು
ಚೋರತನದಿಂ ಕಡಿಯಲಾ ಕಾಗದವ ಬರೆದಿಹರು ॥ ೨೯
ಕಷ್ಟಕೊಡ್ಡಲು ಗಂಡು ವೈವೈ
ಗಟ್ಟ ಮಾಡಲು ಮನವು, ಮನವನು
ದಿಟ್ಟತನದಿಂದಿರಿಸೆ ಗೃಹಸುಖವದಕೆ ಹೆಂಡತಿಯ ॥
ನಿಷ್ಠೆಯದು ಸದ್ವಿದ್ಯೆಯಿಂದಲೆ
ಹುಟ್ಟುವುದು ತ್ರಿಪುರಾಂಗನೆಯರಿಂ
ಗುಟ್ಟನರಿತಾಚರಿಸಿ ಬಯಲಿಗೆ ಬಿವರುವುದೆ ನೀನು ॥ ೩೦

ನಿನ್ನ ಮೊಗವನು ನಿನ್ನ ಮೆಯ್ಯನು
ನಿನ್ನ ಅಂಗಾಂಗಗಳನು ಆ
ನಿನ್ನ ಭಾವದ ನೆಲೆಯನುಂ ಪ್ರತಿದೆಗೆದು ತೋರುತ್ತ ॥
ನಿನ್ನ ದಿನದಿನ ಲೇಖನಗಳಲಿ
ನಿನ್ನ ಕೈ ಬಂದವ್ಪ್ರತೆದೆಯನು
ಚೆನ್ನನುಬ್ಬಿಸೆ, ನಾಟುವುದೆ ಹಗೆಗುಂಡು ಗುಂಡಿಗೆಗೆ ॥ ೩೧

ಮಡುಹಿ ವೈರಿಗಳನ್ನು ನೀರನು
ಕುಡಿದರೆಯು ದಣಿವಾರದಿರೆ, ತಿಳಿ
ದೊಡನೆ, ನಿನ್ನ ಮುಗುಳ್ನಗೆಯು ಕರ್ಪೂರಮಿಶ್ರಿತದ ॥
ಹಿಡಿಯ ಗಿಂಡಿಯ ನೀರ್ಗುಡಿದು ನೀ
ರಡಸಿಕೆಯ ಕಳೆಯಲ್ಕೆ ಬಂದೆನು
ಮಡದಿ ಸೆಟ್ಟೆ ಬರಲ್ಕೆ ಪಟ್ಟಣ ಸೂರೆಯಾಯ್ತಲ್ಲ! ॥ ೩೨

ಆದುದಾಗಲಿ, ಕಳೆದ ಕೆಲಸಕೆ
ಖೇದಪಡುವುದಿದೇಕೆ ಖಳರುಂ
ಬೈದು ಬಾಳಲಿ ಹಾವು ಕಚ್ಚಿದ ಬಾಯಿ ಬರಿ ಬಾಯಿ ॥
ಆದುದರಿತಿಹೆ ರಾತ್ರಿ ಬೆನ್ನೊಳೆ
ಹಾದು ಬಾರದೇ ಹಗಲಿಗೇಂ ಮ
ರ್ಯಾದೆ? ನುಡಿವರು 'ಹೊನ್ನಬೆಲೆ ಬರಿಕಲ್ಲಿನೊರೆ'ಯೆಂದು॥
೩೩

ಬಳಿಕ ಮರುಕದ ಮುಳ್ಳ ಮೊನೆಗಳ
ನೆಳೆದು ಕಾಡೊಳೆ ಬಿಸುಟು ಸಂತಸ
ಗಳ ಸವಿಯ ಹಂಪಲಗಳನು ಕೊಂಡತ್ತ ತಿರುಗಿದರು ॥
ನೆಲದೊಳೀ "ಪುಟ್ಟಮ್ಮ ರಾಜರ"
ಬಳಲಿಕೆಯ ಕತೆಗೇಳಿ ಧೈರ್ಯವ
ತಳೆಯುತಲಿ ಕಣ್ಣಾರೆ ಕಂಡು ಪರಾಂಬರಿಸಿ ನೋಡಿ ॥ ೩೪

ಮೇಲೆ ಹೊಳೆವುದು ಗುಳ್ಳೆ ನೋಡಿರಿ
ಆಳದಲಿ ಜಗಜಗಿಪ ರನ್ನಗ
ಳೋಳಿಗೊಂಡಿಹವರಿಯಲೀ ಸಂಸಾರಸಾಗರದಿ ॥
ಮೇಲಿನದೆ ಮಣಿಯೆಂದು ಮೋಸದ
ಜಾಲನೊಂದಿ ನಿರಾಶೆ ಪಡದಿರಿ
ಹೇಳುವರು 'ಮನಕೆಟ್ಟುದೋಮನೆ ಕೆಟ್ಟುದೋ' ಎಂದು ॥
೩೫

ಕಟ್ಟುಕತೆ ತಾನಲ್ಲವಿದು ನೀ
ವೆಷ್ಟಕೂ ನಂಬದೆ ಕವಿಯ ನುಡಿ
ಲೊಟ್ಟೆಯೆನ್ನುವಿರೇನು ಆಗಲಿ, ಲೊಟ್ಟೆಯಿಂ ನಿಜದ ॥
ಗುಟ್ಟನರಿಯಿರಿ ಸಂಸೃತಿಯೆನಲು
ಹುಟ್ಟುಸಾವಾ ಸುಳ್ಳು ಅದರಿಂ
ಶ್ರೇಷ್ಠವಾಗಿಹ ಸತ್ಯರೂಪನ ಕಂಡು ಹಿಡಿವಂತೆ ॥ ೩೬

ನಮ್ಮ ಕನ್ನಡ ದೇವಿಗೂ 'ಪು
ಟ್ಟಮ್ಮ ಸಂತಾಪತ್ತು ಬಂದಿದೆ
ಬಿಮ್ಮನಾ' ಇಂಗ್ರಜಿಯ ಕತ್ತಲೆಯನ್ನು ಕನ್ನಡಕೆ ॥
ಚಿಮ್ಮುವರು ಕಣ್ಣಿಸಲಿ, ನೀವದ
ನೊಮ್ಮೆ ಹುಬ್ಬಿನೊಳಿರಿಸಿ ಪುತ್ತಳಿ
ಯಮ್ಮನನ್ನಾಗಿಸಿರಿ ಕನ್ನಡರಾಗವೆಡೆಗೊಳಲಿ ॥ ೩೭

ಎನ್ನ ಮನಪೆಂದೆನ್ನುಜಾರಡಿ
ಕನ್ನೆಯಳ ಸುದ್ದಿಯ ಸುವಾಸನೆ
ಯನ್ನು ಹಿಡಿದೈದುತ್ತ ಸುಖದುಃಖದ ಪರಾಗಗಳ ॥
ಜಿನ್ನನೊಯ್ದುದು ಬಳಿಕ ಲೇಖನಿ
ಎನ್ನವಾ ರಾಣಿಗೆ ಸಮರ್ಪಿಸಿ
ತನ್ನೆಗಂ ಕೃತಿಯೆಂಬ ಜೇನನು ಕಚ್ಚಿತಾತುಂಬಿ ॥ ೩೮

— ಸ್ವಸ್ತಿ —

ಸತೀಹಿತೈಷಿಣೀ ಗ್ರಂಥಮಾಲಾ

ಈ ಗ್ರಂಥಮಾಲೆಯಲ್ಲಿ ಈ ವರೆಗೆ ೧೦ ಪುಸ್ತಕಗಳು ಪ್ರಕಟವಾಗಿರುವುವು. ೧೧--೧೨ನೆ ಪುಸ್ತಕಗಳು ಜೂನ್-ಜುಲೈ ತಿಂಗಳೊಳಗಾಗಿ ಪ್ರಕಟವಾಗುವುವು. ೧೦ನೆ ಪುಸ್ತಕವಾದ ಪೂರ್ಣಕಲೆಯಿಂದ ಮಾಲೆಯ ಪ್ರತಿಪುಸ್ತಕವೂ ನಾಲಕ್ಕೈರು ಚಿತ್ರಗಳೊಳಕೊಂಡಿರುವುವಲ್ಲದೆ, ಸಂದರ್ಭಕ್ಕೆ ಸರಿಯಾದ ಚಿತ್ರಗಳನ್ನು ಪ್ರಕಟಿಸುತ್ತ ಉತ್ತಮ ಮತ್ತು ಉದಾತ್ತ ವಿಚಾರಗಳನ್ನು ಪ್ರತಿಪಾದಿಸುತ್ತಲಿರುವುದರಿಂದ ಆರ್ಯಮಹಿಳೆಯರಿಗೆ ಅತ್ಯುಪಯುಕ್ತವೆನ್ನಿಸಿರುವುದರಿಂದ ನಮ್ಮ ಸೋದರಿಯರೆಲ್ಲರೂ ಪ್ರೋತ್ಸಾಹಿಸಲು ತಕ್ಕುದಾಗಿರುವುದು. ವಿಶೇಷ ವಿಷಯಗಳು ಪತ್ರದ್ವಾರಾ.

ಕಾರ್ಯದರ್ಶಿ, ಹಿತೈಷಿಣೀ ಮಾತೃಮಂದಿರಂ,
ನಂಜನಗೂಡು.

ದೇಶಾಭ್ಯುದಯ

ಲೇಖಕಿ— ಪ್ರಥಮ ವ್ರತ. ಶ್ರೀ॥ ಸೌ॥ ಸರಸ್ವತಿ ಮಂಗಳೂರು.

ಪರಮಾತ್ಮನು ತನ್ನಿಂದ ಸೃಷ್ಟಿಸಲ್ಪಟ್ಟ ಈ ಪ್ರಪಂಚದಲ್ಲಿ ಕಾರ್ಯವನ್ನು ಕುಂದಿಲ್ಲದೆ ನೆರವೇರಿಸಲೋಸುಗ ಮನುಷ್ಯನನ್ನು ನಿರ್ಮಿಸಿದನು. ಅದಕ್ಕಾಗಿ ಮನುಷ್ಯನಿಗೆ ಬುದ್ಧಿಶಕ್ತಿಯನ್ನು ದಯಪಾಲಿಸಿದನು. ಈ ಶಕ್ತಿ ಭೂಮಿಯಲ್ಲಿರುವ ಇತರ ಪ್ರಾಣಿಗಳಿಗಿಲ್ಲ. ಇದು ಬಹು ಅದ್ಭುತವಾದುದು ಸರಿಯಾಗಿ ಉಪಯೋಗಿಸಿದಲ್ಲಿ ಅಪಾರ ಲಾಭವನ್ನು ಕೊಡುವದು.; ಮತ್ತು ಭಗವಂತನಿಂದ ನಿಯಮಿತವಾದ ಕಾರ್ಯವನ್ನು ನೆರವೇರಿಸಲು ಸಹಾಯವನ್ನೂ ಮಾಡುವದು.

ಮನುಷ್ಯನು ಹುಟ್ಟುವಾಗಲೇ ತನ್ನಲ್ಲಿ ಅಡಗಿರುವ ಬುದ್ಧಿಶಕ್ತಿಯನ್ನು ಸರಿಯಾದ ಮಾರ್ಗದಲ್ಲಿ ವಿನಿಯೋಗಿಸಲು ಕಲಿತುಕೊಂಡಿಲ್ಲ. ಇದನ್ನು ಕಲಿತುಕೊಳ್ಳಬೇಕಾದರೆ, ವಿದ್ಯೆಯನ್ನು ಗಳಿಸಬೇಕು. ಆದುದರಿಂದ ಭಗವಂತನ ಆಜ್ಞಾನುಸಾರವಾಗಿ ನಡೆಯಬೇಕಾದ ಮಾನವರು, ಸ್ತ್ರೀಯರು ಮತ್ತು ಪುರುಷರೆಂಬ ಭೇದವಿಲ್ಲದೆ ವಿದ್ಯಾರ್ಜನೆಯನ್ನು ಮಾಡುವದು ಅತ್ಯವಶ್ಯಕವು. ಇಲ್ಲದಿದ್ದರೆ ಆತನ ಆಜ್ಞೆಯನ್ನು ಮೀರಿದಂತಾಗುವದಲ್ಲದೆ ಘೋರತರ ಶಿಕ್ಷೆಗೂ ಪಾತ್ರರಾಗುವರು

ಆದರೆ ಜ್ಞಾನಾಂಧರಾಗಿ ಜನ್ಮವೆತ್ತಿದ ಮಕ್ಕಳಿಗೆ ವಿದ್ಯೆಯನ್ನು ಕಲಿಯಬೇಕೆಂದು ಹೇಗೆ ತಿಳಿಯುವುದು. ವಿದ್ಯೆಯನ್ನು ಕಲಿಯದಿದ್ದರೆ ತನಗೆ ತಾನೇ ಹಾನಿಯನ್ನು ತಂದುಕೊಳ್ಳುತ್ತೇನೆಂದಾದರೂ ಹೇಗೆ ತಿಳಿಯುವುದು. ಇವೆಲ್ಲಾ ವಿಷಯಗಳಿಗೆ ಅವರ ತಾಯ್ತಂದೆಗಳೇ ಗಮನ ಕೊಡಬೇಕಲ್ಲವೆ? ಆದುದರಿಂದ ಹೆತ್ತವರು ತಮ್ಮ ಕರ್ತವ್ಯವನ್ನು ತಿಳಿದು ತಮ್ಮ ಮಕ್ಕಳಿಗೆ ವಿದ್ಯೆ ಕೊಡಬೇಕು. ಆದರೆ, ಮಕ್ಕಳಂತೆ ಜ್ಞಾನಾಂಧರಾದ ಹೆತ್ತವರು ಈ ಭಾರತಭೂಮಿಯಲ್ಲಿ ಅನೇಕ ಮಂದಿರುವರು. ಮೂಢಪಶುಗಳಂತೆ ಉದರ ಭರಣವೇ ತಮ್ಮ ಕೆಲಸವೆಂದುಕೊಂಡು ಕಾಲಹರಣಮಾಡುವವರು ಈ ಭಾರತಭೂಮಿಯಲ್ಲಿ ಬಹಳ ಹೆಚ್ಚಾಗಿರುವರು. ಆದರೆ ಹಲವು ಮಂದಿಗಳಾದರೂ ವಿದ್ವಜ್ಜನರು ಭರತ ಖಂಡದಲ್ಲಿ ಇರುವರಷ್ಟೆ? ಇವರೇ ಅವಿದ್ಯಾವಂತರಿಗೆ ದಾರಿತೋರಿಸಿಕೊಡಬೇಕಾಗಿದೆ. ಹೀಗೆ ಅವರಿಗೆ ದಾರಿತೋರಿಸಿ ಕೊಡುವವರೇ ಅವರಿಗೆ ಗುರುಗಳಾಗುವರು. ಗುರಗಳು ಮಾತಾಪಿತೃಗಳಿಗೆ ಸಮಾನರು ಆದುದರಿಂದ ಇವರೇ ವಿದ್ಯಾಹೀನರಿಗೆ ತಾಯ್ತಂದೆಗಳು. ಇವರೆಲ್ಲರೂ ಶ್ರದ್ಧೆಯಿಂದ ಕೆಲಸಮಾಡಿದರೆ ಇನ್ನು ಕೆಲವು ವರ್ಷಗಳಲ್ಲೇ ಭಾರತೋನ್ನತಿಯಾಗುವುದರಲ್ಲಿ ಸಂಶಯವಿಲ್ಲ. ಇಲ್ಲದಿದ್ದರೆ, ವಿದ್ಯಾವಿಹೀನರು ಮಾಡಬಹುದಾದ ಪಾಪಗಳಲ್ಲಿ ಇವರೂ ಭಾಗಿಗಳಾಗುವರು.

ಭಾರತಿಯು ದೇಶವಿದೇಶಗಳಿಗೂ ಅನ್ನವನ್ನು ಹಂಚುತ್ತಿರುವಳೆಂದು ಹೆಸರುಗೊಂಡಿರುವಳಲ್ಲವೆ? ಅಂತಾದ ಮೇಲೆ ಅವಳ ಮಕ್ಕಳಿಗೆ ಅನ್ನದ ಕೊರತೆಯಾಗುವುದೆಂತೊ? ಮತ್ತು ಇವರಿಗೆ ಉದರಭರಣಕ್ಕಾಗಿಯೇ ಆಯುಷ್ಯವನ್ನು ಸವೆಯಿಸಬೇಕಾದ ಅವಶ್ಯವು ಎಷ್ಟಿರುವುದೊ? ಹಸಿವು ಬಾಯಾರಿಕೆಯು, ಪೂರ್ವಯುಗದ ಜನರಿಗೂ ಇದ್ದುವಲ್ಲವೇ? ಆದರೂ ಅವರು ದೇಶೋದ್ಧಾರವನ್ನು ಸಾಧಿಸಿ ಸ್ಥಿರವಾದ ಕೀರ್ತಿಯನ್ನು ಹೇಗೆ ಪಡೆದರು? ನಿರತವೂ ಕರ್ಮಯೋಗಿಗಳಾಗಿ ಅಲ್ಲವೇ? ಅವಿಚ್ಛಿನ್ನವಾಗಿ ಕೆಲಸಮಾಡದೆ ಆವ ಕೆಲಸವೂ ಸಾಧ್ಯವಾಗುವುದಿಲ್ಲ. ಶ್ರೀಕೃಷ್ಣಪರಮಾತ್ಮನು, ಪೂಜ್ಯಪುಸ್ತಕವಾದ "ಭಗವದ್ಗೀತೆ"ಯಲ್ಲಿ ಏನು ಹೇಳಿರುವನು?— ಆವಾಗಲೂ ನಿಶ್ಚಲಚಿತ್ತದಿಂದ ಫಲಾಫಲವನ್ನು ಲಕ್ಷಿಸದೆ ಕರ್ತವ್ಯವನ್ನು ಮಾಡುತ್ತಿರಬೇಕೆಂದಲ್ಲವೇ? ನಮ್ಮ ಪೂರ್ವಜರು ಇದನ್ನು ಮಾನಿಸಿ, ಅನುಸರಿಸಿಯಲ್ಲವೇ- ದಿಗಂತವಾದ ಕೀರ್ತಿಯನ್ನು ಪಡೆದುದು?

ಆದುದರಿಂದ ಭಾರತಮಹಿಳೆಯರೇ! ಆರ್ಯಕುಲರಮಣಿಯರೆ!! ಇನ್ನಾದರೂ ಕಣ್‌ತೆರೆಯಿರಿ! ನಿಮ್ಮ ಸುತ್ತುಮುತ್ತಲೂ ಏನಿದೆ!—ಅಜ್ಞಾನವೆಂಬ ಕಸದರಾಶಿಯಲ್ಲವೆ? ಒಮ್ಮೆ ಅದನ್ನು ದೂರಮಾಡಿರಿ; ಅನಂತರ ನಿಮಗೇನೂ ಹಾನಿ ತಟ್ಟುವಂತಿಲ್ಲ! ಈ ದೇಹವು ಮಣ್ಣಿನಿಂದಲೇ ಆದುದಾಗಿದ್ದರೂ ಚಿನ್ನದಂತಹ ಆತ್ಮನು ಇದರಲ್ಲಿರುವವರೆಗೂ ಮಣ್ಣುಬೊಂಬೆಗಳಂತಿರದೆ ಇನ್ನಾದರೂ ಕಣ್ದೆರೆದು ನಿದ್ದೆ ತಿಳಿದು ಏಳಿರಿ!— ಏಳಿರಿ!! ತ್ರಿಕಾಲವೂ ಭಾರತಮಾತೆಯನ್ನು ನೆನೆಸಿ, ಪ್ರಾರ್ಥಿಸಿ, ಅವಳೀಗ ಪಡುತ್ತಿರುವ ಚಿಂತೆಯನ್ನು ನಿವಾರಿಸಿ, ನಿಮ್ಮ ಮುಂದೆ ಬರುವ ಎಳೆಬಾಲಿಕೆಯರಿಗೆ ಆದರ್ಶರಮಣಿಯರಾಗಿರಿ! ಅಂಧಕಾರದಲ್ಲಿ ದಾರಿಗಾಣದೆ ಎಡರುತ್ತಿರುವ ನಿಮ್ಮ ಸಹಜಾತೆಯರಿಗೆ ಬೆಳಕನ್ನು ತೋರಿಸಿರಿ!!

ಬ್ರಹ್ಮಚರ್ಯ

ಕರ್ಣಾಟಕ ನಂದಿನಿ!

ಹಿತೈಷಿಣೀಲತೆಯಲ್ಲಿ ಹುಟ್ಟಿದ ಷೋಡಶದಳಪುಷ್ಪವನ್ನು ಆಘ್ರಾಣಿಸಿ ನೋಡಿದರೆ, ಎಲ್ಲೆಲ್ಲಿಯೂ ನಿಷ್ಕಾಗರಿಷ್ಠತೆ, ಬ್ರಹ್ಮಚರ್ಯ-ಮನೋಗತಿ ನಿರೋಧಾದಿ ವಿಮರ್ಶನ, ಧೀರ ಭಾವ, ಈ ಸುಗಂಧಗಳೇ ಮೂಗಿಗೆ ತೋರಿಬರುತ್ತಿವೆ. ನಾನೇನೂ ತಿಳಿದವಳಲ್ಲ; ಆದರೂ ಪುಷ್ಪವನ್ನು ಮೂಸಿನೋಡಿನೋಡಿ, 'ಬ್ರಹ್ಮಚರ್ಯ'ವೆಂದರೆ ಭ್ರಮೆಯುಂಟಾಯಿತು. ಇಂತಹ ಅಮೂಲ್ಯವಾದ ಸುಗಂಧವು ನನ್ನಲ್ಲಿ ನೆಲೆಗೊಳ್ಳಲು ಅವಕಾಶವಿಲ್ಲವೆಂದು ತೋರಿ(?) ನನಗೆ ಅತೀವ ಜಿಗುಪ್ಸೆಯುಂಟಾಯಿತು. (?) ನಿತ್ಯವೂ ಈ ಷೋಡಶದಳಗಳನ್ನು ನಾನು ಪತಿಸಾನ್ನಿಧ್ಯದಲ್ಲಿ ಮೂಸಿನೋಡುವುದುಂಟು. ನಾನು ಈ ದಳಗತವಾದ ವಿಷಯಗಳನ್ನು ಓದುತ್ತಿದ್ದರೆ ಅವರಿಗೆ ನಿದ್ದೆಹತ್ತದೆ ಉತ್ಸಾಹಪಟ್ಟು ಕೇಳುತ್ತಾರೆ. ಈ ದಳಪರಿಚಯದಿಂದ ಆಗಾಗ ಸ್ವಯಂಬ್ರಹ್ಮಚರ್ಯವೇ ಮೂರ್ತೀಭವಿಸುತ್ತದೆ. ಒಂದೊಂದುಸಲ ನಾನು ಪುಷ್ಪದ ಮೇಲೆ ರೇಗುವುದೂ ಉಂಟು. (??)

ಮನಸ್ಸಿನಲ್ಲಿ ಯಾತನೆಯು ಅತಿಯಾಗಿ ಬ್ರಹ್ಮಚರ್ಯದ ತತ್ತ್ವವನ್ನು ತಿಳಿಯಬೇಕೆಂದು ನಿರ್ಧರಿಸಿ, ಇದನ್ನು ಬಿಡಿಸಿ ಹೇಳಬೇಕೆಂದು ಸಮಯ ನಿರೀಕ್ಷಿಸಿ, ಪತಿಯನ್ನು ಬೇಡಿಕೊಂಡೆನು. ಅದಕ್ಕೆ ಅವರು ಹೀಗೆ ಹೇಳಿದರು.—

“ಕೇಳು ಮುಗ್ಧೆ, ಬ್ರಹ್ಮಚರ್ಯವೆಂದರೆ ಕಪಟನಾಟಕವಲ್ಲ. ಮದುವೆಯಿಲ್ಲದೆ ಗೊಡ್ಡು ತಿರುಗುವುದಲ್ಲ. ನಿಯಮ ಮೀರದೆ ದೃಢಕರ್ತವ್ಯದಲ್ಲಿ ಉತ್ಸಾಹದಿಂದ ಕೈಹಾಕುವುದು(!) ಬ್ರಹ್ಮಚರ್ಯ! ಬ್ರಹ್ಮಚರ್ಯವೆಂದರೆ, ಮನೋವರ್ತನದ ಸ್ಥಾಯೀವಿಶೇಷಕ್ಕೆ ಹೆಸರು. ಮಾಡಬೇಕಾದ ಕರ್ತವ್ಯಗಳಲ್ಲಿ ಅನನ್ಯಚಿಂತನ ಇಂದ್ರಿಯ ಬಲಪೋಷಣೆಯಲ್ಲಿ ಅಸಾಧಾರಣ ಜಾಗರೂಕತೆ, ದೃಢಭಾವ, ಸೌಶೀಲ್ಯ, ಸುಗುಣಗಳಿದ್ದರೆ, ಅನೇಕ ಕಾಮಿನೀಹೃದಯಾವಾಸನಾದ ಮಾನವನು ಕೂಡ ಬ್ರಹ್ಮಚಾರಿಯೇ! ಕೇವಲ ಕರ್ತವ್ಯಪ್ರಾಮುಖ್ಯತೆಯಿಂದ ವಿದ್ಯಾರ್ಜನಾ ಕಾಲದಲ್ಲಿ ಅವಶ್ಯವಾದ ಅವಿವಾಹಿತ ಸ್ಥಿತಿಯು ಆವ ಮರ್ಮಾಂತಿಕ ಕಾರಣದಿಂದ ಬ್ರಹ್ಮಚರ್ಯವೆನಿಸುವುದೋ ಹಾಗೆಯೇ ಪ್ರಪಂಚಧರ್ಮಾನುಸಾರಿಯಾದ ಕರ್ತವ್ಯಸಾಧನೆಗೆ ಅವಶ್ಯಕಳಾದ ನಿನ್ನಂತಹ ಸಹಧರ್ಮಿಣಿಯನ್ನು ಕೈಹಿಡಿದು, ವಿಷಯಾದಿ ಇಂದ್ರಿಯತೋಷಣೆಗೆ ಎಡೆಗೊಡದೆ ಭಗವಂತನ ಘನಸಂಸಾರಚಕ್ರವನ್ನು ನೂಕುವ ಕರ್ಮದಲ್ಲಿ ಬದ್ಧಕಂಕಣನಾಗುವುದೂ ಬ್ರಹ್ಮಚರ್ಯವೇ! ಆದರೆ ಮದುವೆ ಮಾಡಿಕೊಂಡು ಒಬ್ಬರ ಜತೆಗೆ ಇಬ್ಬರು ಸನ್ಯಾಸಿಗಳಾಗಬೇಕೋ—ಎನ್ನುವಿ? ಅದು ಹಾಗಲ್ಲ, ಕೇವಲ ಲೌಕಿಕ ಸಂಗದಿಂದಲೇ ಪ್ರಣಯ ತೃಪ್ತಿಯಾಗಬೇಕೆಂದು ತಿಳಿಯಬೇಡ. ಆತ್ಮಸಂಯೋಗದಿಂದ ನಮ್ಮ ಜೀವವನ್ನೆ ಮರೆವಷ್ಟು ಗುರುತರವಾದ ಆನಂದವುಂಟು. ಹೀಗೆಂದರೆ ವ್ಯಾವಹಾರಿಕ ಕ್ರಿಯೆಗಳನ್ನು ಪೂರ್ಣವಾಗಿ ನಿರೋಧಿಸುವೆನೆಂದು ಹೆದರಬೇಡ. ಅತ್ಯವಶ್ಯಕವಾದಷ್ಟು ಅದೂ ಕರ್ತವ್ಯದಲ್ಲಿಯೇ ಸೇರಿದುದು.” ಹೀಗೆಂದು ಭಯಂಕರವಾಗಿ ಹೇಳಿದರು.

ನನಗೇನೋ ಇದು ವೇದವಾಕ್ಯ! ಏಕೆಂದರೆ, ಅವರು, ತಾನು ಬ್ರಹ್ಮಚಾರಿಯೆಂದೇ ಹೇಳಿಕೊಳ್ಳುವರು. ವ್ಯವಹಾರದಲ್ಲಿ ನೋಡಿದರೆ ಸನ್ಯಾಸವೇನೂ ಕಂಡುಬಂದಿಲ್ಲ. ಅವರಿಗೆ ಎಂದಾದರೂ ಹಿತೈಷಿಣೀ-ಪುಷ್ಪಘ್ರಾಣದ ಮತ್ತು ಏರಿದಾಗ ನೀವೂ “ಬ್ರಹ್ಮಚಾರಿಣಿ” ಎಂದು ಹೇಳಿಬಿಡುವರು. ನನಗೆ ಮನಸ್ಸಿನಲ್ಲಿ ದೃಢವಿದೆಯಂತೆ! ನಾನು ಇಂದ್ರಿಯ ನಿಗ್ರಹಿಯಂತೆ. ಎಷ್ಟು ತಡೆದರೂ ನೀನು ಬ್ರಹ್ಮಚಾರಿಣಿಯೆಂದು ಕೂಗುತ್ತಾರೆ.

ಹಿತೈಷಿಣೀಲತೆಯಿದ್ದರೆ ತಾನೇ ಈ ರಗಳೆಯೆಂದು, ಹಿತ್ತಲಲ್ಲಿ ಹಾಕಿದ್ದ ಲತೆಯನ್ನು ಕಿತ್ತು ಹಾಕಿ ನೋಡಿದೆ,(?) ಹುಚ್ಚು ವಿಪರೀತವಾಯಿತು. (?) ಇದೇನು, ಮನೆಯಲ್ಲಾ ಗಮ್ಮನಿದೆ–ಪುಷ್ಪದವಾಸನೆ! ನನಗೆ ಈ ಸುಗಂಧದಿಂದ ಹೊಟ್ಟೆತುಂಬಿ, ಸರ್ವೇಂದ್ರಿಯವೂ ಸಂತುಷ್ಟವಾಗಿದೆ.” ಎಂದು ರಗಳೆಹಚ್ಚಿದರು.

ಸದ್ಯಃ ಹಿತ್ತಲಲ್ಲಿಡುವುದೇ ವಾಸಿಯಾಗಿತ್ತೆಂದು ಈಗ ಎರಡು ಗಿಡವನ್ನು ಹಾಕಿದ್ದೇನೆ. ಪುಷ್ಪವು ಮನೋಹರವಾಗಿದೆ. ಪತಿಯು ರಸಿಕರೋ ಸನ್ಯಾಸಿಯೋ ಹೇಳಲಿಕ್ಕಿಲ್ಲ; ಎಂತೂ ಅವರು ಬ್ರಹ್ಮಚಾರಿಯಂತೆ!

ಇತಿ— ಪತಿಲೋಕಸಂಚಾರಿಣಿ, (ಅವರ ಅನುಜ್ಞೆಯಿಂದ)

ವಿ.ಸೂ.— ಈ ಲೇಖನವನ್ನು ಕಳುಹಿರುವವರು ನಮ್ಮ ಧರ್ಮಭ್ರಾತೃವರ್ಗಕ್ಕೆ ಸೇರಿದವರಲ್ಲಿ ಒಬ್ಬರು. ಈ ಲೇಖನವನ್ನು ಬರೆದವರು ಇನ್ನೂ ಚಿಕ್ಕವಯಸ್ಸಿನ ಹೆಂಗಸೆಂದೂ

ಲೇಖಿಕೆಯು ನಮ್ಮಲ್ಲಿ ಪತ್ರವ್ಯವಹಾರವನ್ನು ಸ್ವಂತವಾಗಿ ಮಾಡಲು ಹಿಂತೆಗೆಯುತ್ತಿರುವಂತೆಯೂ, ಅದಕ್ಕಾಗಿ ತಾವು ಈ ಲೇಖನವನ್ನು ಕಳುಹಿದಂತೆಯೂ ಆ ನಮ್ಮ ಧರ್ಮಭ್ರಾತೃಗಳು ಬರೆದಿರುವರು. ಲೇಖನವು ಅಲ್ಪವಯಸ್ಸಿನ ಸ್ತ್ರೀಯಿಂದ ಬರೆಯಲ್ಪಟ್ಟಿತೇನೆಂಬುದನ್ನು ನಾವು ಹೇಗೂ ಹೇಳಲಾರೆವು. ಏಕೆಂದರೆ, ಸ್ತ್ರೀಯರಲ್ಲಿ ಪತ್ರವ್ಯವಹಾರ ಮಾಡುವುದಕ್ಕೇ ಹಿಂತೆಗೆಯುತ್ತಿರುವ ಸ್ತ್ರೀಯರು ಇಂತಹ ಲೇಖನವನ್ನು ಬರೆಯುವರೆಂಬುದೂ, ಅದನ್ನು ಪುರುಷರ ಮೂಲಕ ನಮ್ಮಲ್ಲಿಗೆ ಕಳುಹುವರೆಂಬುದೂ ಎಷ್ಟುಮಟ್ಟಿಗೆ ದೃಢಪಡುವುದೋ ಹೇಳಲಾರೆವು. ಈ ವಿಚಾರದಲ್ಲಿ ನಾವು ಹಿಂದಿನ ಸಂಚಿಕೆಯಲ್ಲಿ ನಿವೇದಿಸಿದ್ದುದು ನಿಜವಾಗಿ ತೋರುವುದಕ್ಕಾಗಿ ಈ ಲೇಖನವನ್ನು ಇಲ್ಲಿ ಪ್ರಕಟಿಸಬೇಕಾಯಿತು. ಇನ್ನಾದರೂ ನಮ್ಮ ಆರ್ಯಭಗಿನಿಯರು ತಮ್ಮ ಕೋಮಲಹೃದಯದಿಂದ ಹೊರಟ ವಿಚಾರಗಳನ್ನೇ ಲಲಿತ ಶೈಲಿಯಲ್ಲಿ ಬರೆದು ಕಳುಹಿ, ತಮ್ಮ ಇತರ ಸೋದರಿಯರಿಗೆ ಹಿತವನ್ನಾಚರಿಸುವವರಾದಾರೆಂದು ನಂಬುವೆವು.

(ಸಂ. ನಂದಿನಿ)

(ವಿದೇಶಕ್ಕೆ ತೆರಳುವನೆಂದು ಕಾತರಗೊಂಡ ಸ್ತ್ರೀಯು ತನ್ನ ನಾದಿನಿಗೆ ಬರೆದ ಪತ್ರವು)

ಶ್ರೀಃ ಪಾತು.

ಹ|| ಕು|| ಶೋಭಿತರಾದ ಸೌ|| ನಾದಿನಿಯವರಲ್ಲಿ ವಿಜ್ಞಾಪನೆ ---

ಉಭಯ ಕುಶಲೋಪರಿ ಸಾಂ—

ತಮ್ಮ ಚಿ|| ಅಣ್ಣನವರು ದೂರದೇಶ ಪ್ರಯಾಣ ಮಾಡುವುದರಲ್ಲಿ ನಿಶ್ಚಯಮಾಡಿರುವರೆಂದೂ, ಇಷ್ಟರಲ್ಲಿಯೇ ಪ್ರಯಾಣ ಮಾಡುವರೆಂದೂ ತಿಳಿದು ಗಾಬರಿಗೊಂಡಿರುತ್ತೇನೆ, ಇದು ನಿಜವೆ? ನಿಜವಾಗಿದ್ದರೆ ಯಾವಾಗ ಹೊರಡುವರು? ನನಗೇನೂ ತೋಚುವುದಿಲ್ಲವಾಗಿದೆ. ನಾನು ಎಷ್ಟೋ ಸಲ ಪ್ರಾರ್ಥಿಸಿಕೊಂಡೆ, ನನ್ನ ಪ್ರಾರ್ಥನೆಯು ಹೆಚ್ಚಿದಷ್ಟು ಅವರ ಸಂಕಲ್ಪವೂ ದೃಢಪಡುತ್ತಿರುವುದೆಂದು ತೋರುತ್ತಿದೆ. ನಾನಿಲ್ಲಿ ಮಾಡುವುದೇನು? ಅಷ್ಟು ದೂರ ಪ್ರಯಾಣ ಮಾಡುವಾಗ ಬಳಿಯಲ್ಲಿರುವುದಕ್ಕೂ ಅವಕಾಶವಿಲ್ಲದೆ ಹೋಗಿರುವುದು; ಈ ವಿಚಾರದಲ್ಲಿ ತಾವು ಅನುಭವಶಾಲಿಗಳೇ ಆಗಿರುವುದರಿಂದ ನಾನು ಮುಂದೆ ಮಾಡಬೇಕಾದುದೇನು? ಹೇಗಿದ್ದರೆ ಮನಸ್ಸಮಾಧಾನವಾಗುವುದು.—ಎಂಬುದನ್ನು ತಾವು ನನಗೆ ಆಗಾಗ್ಗೆ ಬರೆದು ತಿಳಿಸುತ್ತಿರಬೇಕೆಂದು ಪ್ರಾರ್ಥಿಸುವೆನು

ಚಿ|| ಮಗುವು ಆರೋಗ್ಯವಾಗಿರುವನು. ಅಲ್ಲಿ ಎಲ್ಲರ ಆರೋಗ್ಯಕ್ಕೂ ಬರೆಯುವಿರೆಂದು ನಂಬಿ, ತಮ್ಮ ಉತ್ತರ ಪರೀಕ್ಷೆಯಲ್ಲಿರುವ—

ತಮ್ಮ ಅತ್ತಿಗೆ ಭಾಗ್ಯಲಕ್ಷ್ಮಿ.

(ಅತ್ತಿಗೆಗೆ ಸಮಾಧಾನವಾಗುವಂತೆ ಬರೆದ ನಾದಿನಿಯ ಉತ್ತರವು.

ಶ್ರೀರಾಮ ಪಾಹಿ.

ಹ|| ಮು|| ಅತ್ತಿಗೆಯವರಲ್ಲಿ ವಿಜ್ಞಾಪನೆಗಳು--

ಉಭಯ ಕುಶಲೋಪರಿ—

ತಮ್ಮ ಕಾಗದವು ನಿನ್ನೆಯೇ ಕೈಸೇರಿತು. ಮನೆಗೆಲಸಗಳಲ್ಲಿ ನಿರತಳಾಗಿದ್ದುದರಿಂದ ನಿನ್ನೆಯೇ ಉತ್ತರವನ್ನು ಕೊಡಲಾಗಲಿಲ್ಲ. ಚಿ|| ರವರಾದ ನಮ್ಮ ಅಣ್ಣನವರು ಈ ದಿನ ಸಾಯಂಕಾಲ ೬ ಗಂಟೆ ೧೦ ನಿಮಿಷಕ್ಕೆ ದೂರದೇಶ ಪ್ರಯಾಣವನ್ನು ಮಾಡುತ್ತಾರೆ. ಈ ವಿಷಯವನ್ನು ಕುರಿತು ತಾವು ಬಹಳವಾಗಿ ಯೋಚಿಸಬಹುದು. ಹುಚ್ಚು ಹಿಡಿದವರಂತೆ ಸುಮ್ಮನೆ ಯೋಚಿಸಿ ಪ್ರಯೋಜನವಿಲ್ಲ ಮನಸ್ಸಿನಲ್ಲಿ ಧೈರ್ಯವನ್ನು ತಾಳಿ ನಿರಂತರವೂ ಅವರಿಗೆ ಕ್ಷೇಮಚಿಂತನೆಯನ್ನು ಮಾಡುವುದು ಒಳ್ಳೆಯದು. ತಮ್ಮ ಧೈರ್ಯ-ದೃಢಮನಸ್ಸ್ಥೈರ್ಯ-ಸದ್ಭಾವನೆಗಳೇ ಅವರಿಗೆ ಪರಸ್ಥಳದಲ್ಲಿ—ದೂರದೇಶದಲ್ಲಿ-ಬೆಂಬಲವಾಗಿದ್ದು ಅವರ ಪ್ರಯತ್ನವನ್ನೂ ಶ್ರಮವನ್ನೂ ಸಾಫಲ್ಯಗೊಳಿಸಲು ಸಹಕಾರಿಯಾಗುವುದು; ಮತ್ತು ಅದರಿಂದ ತಮಗೂ ಶ್ರೇಯಸ್ಸುಂಟಾಗುವದು. ಸಾಧ್ಯವಾದಮಟ್ಟಿಗೂ ಸತ್ಕಾಲಕ್ಷೇಪಮಾಡಿಕೊಂಡು ತಮ್ಮ ಮಗನ ಮುದ್ದುಮುಖವನ್ನು ನೋಡುತ್ತ ಮನಸ್ಸನ್ನು ಉತ್ಸಾಹಪಡಿಸಿಕೊಳ್ಳುತ್ತಿರಬೇಕು. ಮಗನ ಮತ್ತು ನಿಮ್ಮ ಕ್ಷೇಮಲಾಭವನ್ನು ಕೇಳುತ್ತಿದ್ದರೆ ಅಣ್ಣನವರಿಗೆ ದೂರದೇಶದಲ್ಲಿದ್ದರೂ ಅಷ್ಟು ಆಯಾಸವೆನ್ನಿಸದೆ ಉತ್ಸಾಹವು ತೋರುತ್ತಿರುವುದು.

ಆದರೆ ಮೊದಲು ಒಂದೆರಡು ತಿಂಗಳು ಕಳೆಯುವುದು ಕಷ್ಟವಾಗುತ್ತದೆ. ಅನಂತರ ವರ್ಷಗಳನ್ನು ಹೇಗೆ ಕಳೆದೆನೆಂಬುದನ್ನು ತಿಳಿಯಲಸಾಧ್ಯವಾಗುತ್ತದೆ. ನನಗೇನೋ ಹಾಗೆಯೇ ಆಯಿತು ದೂರದೇಶದಿಂದ--- ವಿಜಯೋತ್ಸಾಹದಿಂದ ಬಂದ ನಮ್ಮ ಯಜಮಾನರ ಮುಖವನ್ನು ನೋಡಿದ ತತ್‌ಕ್ಷಣವೇ ನನ್ನ ಮನಸ್ಸು ಮೂರು ವರ್ಷಗಳಿಂದ ಹೇಗೆ ಕಷ್ಟಪಟ್ಟಿತೆಂಬುದು ಸಹ ಮರೆತುಹೋಯಿತು ಆದರೆ ನನ್ನ ಕಾಲವೆಲ್ಲಾ ಒಳ್ಳೆಯ ಮಾರ್ಗದಲ್ಲಿ ಸಂತೋಷವಾಗಿ ಕಳೆಯುವಂತೆ ಮಾಡಿದ ನನ್ನ ತಾಯಿತಂದೆಗಳಿಗೆ ನಾನೆಷ್ಟು ಕೃತಜ್ಞಳಾಗಿದ್ದರೂ ಸಾಲದೆಂದು ತಿಳಿಯುತ್ತಿದ್ದೇನೆ ಈಗಲೂ ಪ್ರತಿನಿಮಿ

ಷವೂ ನನಗೆ ಅವುಗಳ ಜ್ಞಾಪಕವು ಬರುತ್ತಿದೆ. ನಾನು ತಮಗೆ ಈ ರೀತಿಯಾಗಿ ಬರೆದೆನೆಂದು ಅನ್ಯಥಾ ಭಾವಿಸಬೇಡಿರಿ. ತಾವೇನೂ ತಿಳಿಯದವರಲ್ಲ. ವಿದ್ಯಾವತಿಯರೂ ಗುಣವಂತರಾದ ತಾಯ್ತಂದೆಗಳಿಂದ ಸುಶಿಕ್ಷಣೆ ಹೊಂದಿರುವವರೂ ಆಗಿರುವುದರಿಂದ ನೀವು ಸ್ವಯಂಪ್ರಾಜ್ಞರಾಗಿಯೇ ಇರುವಿರಿ ಆದರೂ ಲೋಕಾಚಾರವನ್ನು ಅನುಸರಿಸಿ ನನ್ನ ಮನಸ್ತೃಪ್ತಿಗಾಗಿಯೂ ತಮ್ಮ ಮನಸ್ಸಮಾಧಾನಕ್ಕಾಗಿಯೂ ನನ್ನ ಅನುಭವವನ್ನು ಸ್ವಲ್ಪಮಟ್ಟಿಗೆ ಬರೆದಿರುತ್ತೇನೆ. ಇಷ್ಟರಲ್ಲಿ ತವ. ಗೂ ನಮ್ಮ ಅಣ್ಣನವರು ಪ್ರತ್ಯೇಕವಾಗಿ ವಿವರವಾದ ಕಾಗದವನ್ನು ಬರೆದಿರಬಹುದೆಂದು ನಂಬಿರುತ್ತೇನೆ.

ಈ ಹೊಸವರ್ಷದಲ್ಲಿ ತಮಗೂ ತಮ್ಮ ಪತಿಗೂ ಮತ್ತು ಸುಕುಮಾರನಿಗೂ ದೇವರು ಕಲ್ಯಾಣವನ್ನುಂಟು ಮಾಡಲೆಂದು ಸದಾ ಪ್ರಾರ್ಥಿಸುತ್ತಿರುವ—

ತಮ್ಮ ನಾದಿನಿ, ಸರ್ವಮಂಗಳಾ.

ವಿ. ವಿ. ನಂದಿನಿಯಲ್ಲಿ ಪ್ರಕಟಿಸಬೇಕೆಂದು ಕೆಲವು ಕಡೆಗಳಿಂದ ಕ್ಷೇಮ ಸಮಾಚಾರದ ಮಾದರಿ ಪತ್ರಗಳೂ, ದಿನಚರ್ಯೆಯ (ಡೈರಿ) ಪುಸ್ತಕಗಳೂ ಬಂದಿರುವುವು. ಅವುಗಳನ್ನು ಸಂದರ್ಭಾನುಸಾರವಾಗಿ ಪ್ರಕಟಿಸುವೆವು. ಮತ್ತು ನಮ್ಮ ಸಹಿತೈಷಿಣೀ ಗ್ರಂಥಮಾಲೆಗೆ ಇತ್ತಿತ್ತಲಾಗಿ ದಿನವೂ ಚಂದಾದಾರರು ತಾವಾಗಿ ಬರೆಯುತ್ತಿರುವ ಸಂತೋಷಪ್ರದರ್ಶಕ ಪತ್ರಗಳನ್ನು ನೋಡಿ ಹಿತೈಷಿಣೀ ಗ್ರಂಥಗಳು ನಮ್ಮ ಸೋದರ ಸೋದರಿಯರಿಗೆ ಉಪಯೋಗಕರವಾಗಿರುವುವೆಂಬ ವಿಶ್ವಾಸವು ಉತ್ಸಾಹವನ್ನುಂಟುಮಾಡಿರುವುದು. ಅದರಲ್ಲಿಯೂ "ಪೂರ್ಣಕಲಾ" ಪುಸ್ತಕದ ವಿಷಯದಲ್ಲಿ ನಮ್ಮ ವರ್ಗಣೀದಾರರೂ ಮತ್ತು ಪೋಷಕ, ಪ್ರೋತ್ಸಾಹಕ, ಹಿತಚಿಂತಕರುಗಳೂ ಅಪ್ರಾರ್ಥಿಕರಾಗಿ ಕಳುಹುತ್ತಿರುವ ಅಭಿನಂದನಗಳಿಗಾಗಿ ನಾವು ಅತ್ಯಂತ ಕೃತಜ್ಞರಾಗಿರುವೆವು. ಅದರಲ್ಲಿ ಒಂದೆರಡು ಪತ್ರಗಳನ್ನು ಮಾತ್ರ ಇಲ್ಲಿ ಕೊಟ್ಟಿರುವೆವು.

ಸಂ. — ನಂದಿನಿ— ಹಿತೈಷಿಣಿ.

ಅಗೋರಲಿನ ರಾಣಿ

(ಲೇಖಕ— ಶ್ರೀ|| ಬಿ. ಎನ್. ಕೃಷ್ಣಮೂರ್ತಿ, ಮಹದೇವಪೇಟೆ— ಮಡಕೇರಿ.)

ಪ್ರಸ್ತುತದ ಬಿಹಾರಿನ ಬಳಿ, 'ಬಕ್ಸರ್' ಎಂಬ ಸ್ಥಳವಿದೆಯಷ್ಟೆ. ಈ ಬಳಿ ಹದಿನೇಳನೆ ಶತಮಾನದಲ್ಲಿ "ಅಗೋರಲ್" ಎಂಬ ಚಿಕ್ಕದೊಂದು ಸಂಸ್ಥಾನವಿದ್ದಿತು. ಸಂಸ್ಥಾನವು ಚಿಕ್ಕದಾದರೂ ಶೌರ್ಯವು ಚಿಕ್ಕದಾಗುವುದಿಲ್ಲವಷ್ಟೆ! ರಾಜಾ ಗೌತಮನು ದೆಹಲಿಯಲ್ಲಿ ಆಳುತ್ತಿದ್ದ ಮುಸಲ್ಮಾನ ಸಾರ್ವಭೌಮರಿಗೆ ಮಾಂಡಲೀಕನಾಗಲೊಪ್ಪಲಿಲ್ಲ. ವಾಸ್ತವವಾಗಿ, ಆದಾವ ಭಾರತೀಯನು ಸ್ವಾತಂತ್ರ್ಯವನ್ನು ಪರಮತದ್ವೇಷಿಗಳಿಗೆ ಮಾರಲಿಷ್ಟಪಡುವನು? ಸಮಾಚಾರವು ಬಾದಷಹನ ಕಿವಿಗೆ ಬಿದ್ದಿತು. ಒಡನೆಯೇ ಅಯೋಧ್ಯಾಧಿಪತಿಗೆ ಅಪ್ಪಣೆಯೂ ಕೊಡಲ್ಪಟ್ಟಿತು. ಅಯೋಧ್ಯೆಯಿಂದ ಮುಸಲಮಾನರ ಸೈನ್ಯವೊಂದು ಹೊರಟಿತು.

ಮುಸಲಮಾನರ ಕಿರುಕುಳವನ್ನನುಭವಿಸಿ ಬಳಲಿದ್ದ ಭಾರತೀಯರೆಲ್ಲರೂ ಹಿಂದೂರಾಜ್ಯದಲ್ಲಿ ವಾಸಿಸುತ್ತಿದ್ದರು. ತಮ್ಮ ಸ್ವಾತಂತ್ರ್ಯಕ್ಕೆ ಎಡೆಯನ್ನಿತ್ತಿರುವ ಸ್ವರಾಜ್ಯವು ನಾಶವಾಗುವುದೆಂಬುದನ್ನು ತಿಳಿದೊಡನೆಯೇ ಬ್ರಾಹ್ಮಣನು ತನ್ನ ನಿತ್ಯಕರ್ಮವನ್ನು ಮರೆತನು; ಕ್ಷತ್ರಿಯನು ಮೂಲೆಯಲ್ಲಿದ್ದ ಆಯುಧಗಳನ್ನು ಹೊರತೆಗೆದನು. ವೈಶ್ಯನು ತನ್ನ ವ್ಯಾಪಾರಲಾಭವನ್ನು ಮರೆತನು; ನಿರ್ಮಲಚಿತ್ತದ ಶೂದ್ರನೂ ಕೂಡ ತನ್ನ ಹೆಂಡತಿಮಕ್ಕಳನ್ನು ಅವರ ಪಾಡಿಗೆ ಬಿಟ್ಟು ಸ್ವದೇಶರಕ್ಷಣೆಗೆ ಹೊರಟನು. ಪರಸ್ಪರರು ಜಾತಿಭೇದವನ್ನು ಮರೆತರು, "ಸ್ವರಾಜ್ಯವನ್ನು ರಕ್ಷಿಸಬೇಕು, ಸ್ವದೇಶವನ್ನು ಕಾಪಾಡಬೇಕು, ಭಿನ್ನಭಿನ್ನ ಶಕ್ತಿಗಳನ್ನು ಒಟ್ಟುಗೂಡಿಸಬೇಕು, ಒಕ್ಕಟ್ಟಿನಲ್ಲಿ ಬಲವಿದೆ!

ಯುದ್ಧವಾಯಿತು. ಪರಿಣಾಮದಲ್ಲಿ ಮುಸಲ್ಮಾನರು ಅಪಜಯವನ್ನು ಹೊಂದಿದರು. ಹಿಂದುಗಳು ವಿಜಯಿಗಳಾದರು. ಜಯಲಕ್ಷ್ಮಿಯು ತಮ್ಮನ್ನು ವರಿಸಿದ್ದನ್ನು ಕಂಡು ನಗರದ ದೇವಾಲಯಗಳಲ್ಲೆಲ್ಲಾ ಪೂಜಾಸಮಾರಂಭಕ್ಕೆ ಅಪ್ಪಣೆಯಾಯಿತು. ಪೂರ್ವದ ಭಾರತೀಯರು ಎಂತಹ ವೀರಪುರುಷರು! "ಸಂಕಟಬಂದಾಗ ವೆಂಕಟರಮಣ" ಎಂಬ ಸಂಪ್ರದಾಯದವರಾದೀ ಇಪ್ಪತ್ತನೆಯ ಶತಮಾನದವರಂತಲ್ಲದೆ ಜಯಕಾಲದಲ್ಲಿಯೂ ಕೂಡ ಭಗವಂತನನ್ನು ನೆನೆದು ಎಲ್ಲೆಲ್ಲಿಯೂ ಕಲ್ಯಾಣವು ನೆಲೆಸಲೆಂದು ಪ್ರಾರ್ಥಿಸುತ್ತಿದ್ದರು

ದೇವಾಲಯಗಳಲ್ಲಿ ಪೂಜೆಯಾಯಿತು. ಬ್ರಾಹ್ಮಣರಿಗೆ ಸಂತರ್ಪಣೆಯಾಯಿತು ಕ್ಷತ್ರಿಯಯೋಧರಿಗೆ ಅವರ ಸಾಹ

ಸಕ್ಕಸುಸಾರವಾಗಿ ಪುರಸ್ಕಾರಗಳು ದೊರೆತವು. ವೈಶ್ಯರಿಗೆ ದೊಡ್ಡದೊಂದು ಭೋಜನವಾಯಿತು. ಶೂದ್ರಜನರಿಗೆಲ್ಲಾ ಮನಸ್ಸಣಿಯೆ ಪಾನವಾಯಿತು. ಬಡಬಗ್ಗರಿಗೆ, ಕುಂಟರು ಕುರುಡರಿಗೆ, ಮೂಕರು ಕಿವುಡರಿಗೆ ಎಲ್ಲರಿಗೂ ದಾನಧರ್ಮಗಳಾದುವು.

ಅರಮನೆಯ ಪರಿಚಾರಕರಿಗೂ ಇಂದು ಸಂತೋಷ ಸಮಯ. ಅರಸುಮನೆತನದವರಿಗೂ ಆನಂದಸಮಯ. ಆದರೆ ಪತಿವ್ರತಾಶಿರೋಮಣಿಯಾದ ರಾಣಿಗೆ ಅಂದು ವ್ರತ. ಪ್ರತಿ ಪೂರ್ಣಿಮಾ ರಾತ್ರಿಯೂ ಆಕೆ ಗಂಗಾಸ್ನಾನವನ್ನು ಮುಗಿಸಿ, ಆಹಾರವನ್ನು ತೆಗೆದುಕೊಳ್ಳುವ ಪದ್ಧತಿ. ಆದರೆ, ಇಂದು, ಗಂಗೆಯ ಬದಿಯಲ್ಲಿ ಶತ್ರುಗಳು ಶಿಬಿರವನ್ನು ಸ್ಥಾಪಿಸಿರುತ್ತಾರೆ ಏನೂ ತೋಚದಾಯಿತು. ವ್ರತವನ್ನು ಕೈಕೊಂಡಿದ್ದ ರಾಣಿಗೆ ಪ್ರಾಣವು ಕೂಡ ತೃಣಸಮಾನವಾಯಿತು. ಕೋಳಿಯ ಕೂಗಿನ ಸಮಯದಲ್ಲಿ ಆಕೆ, ಕೆಲವು ಮಂದಿ ಪರಿಚಾರಿಕೆಯರೊಡನೆ ಸಾಧಾರಣಸ್ತ್ರೀಯರಂತೆ ಉಡುಪನ್ನು ತೊಟ್ಟು ಗಂಗಾಸ್ನಾನಕ್ಕೆ ತೆರಳಿದಳು.

(೨)

"ಸರ್ವಪಾಪವನ್ನು ನಾಶಮಾಡುವಂತಹ ಗಂಗೆ! ಸಗರಪುತ್ರರನ್ನು ಸ್ವರ್ಗವಾಸಿಗಳಾಗಿ ಮಾಡಿದ ಪವಿತ್ರಗಂಗೆ! ಸುಡುಗಾಡಿಗೊಡೆಯನ ಜಡೆಯಲ್ಲಿ ವಾಸಿಸುವ ಗಂಗೆ! ಕಾಪಾಡ !" ಎಂದೆನ್ನುತ್ತ ರಾಣಿಯು ತನ್ನ ಕೆಲಸವನ್ನೆಲ್ಲಾ ಜಾಗ್ರತೆಯಾಗಿ ಮುಗಿಸಿ ಹಿಂತಿರುಗಿದಳು

ಪರವಾರಾಗಮನದಲ್ಲಾಸಕ್ತರಾದ ಮುಸಲಮಾನರು ರಾಣಿಯು ಕೋಟೆಯಿಂದ ಹೊರಗೆ ಬಂದ ಸಂಗತಿಯನ್ನು ಹೇಗೋ ತಿಳಿದರು. ಅಯೋಧ್ಯಾಧಿಪನಿಗೆ ಸಮಾಚಾರವು ಮುಟ್ಟಿತು. ಒಡನೆಯೇ ರಾಣಿಯನ್ನು ಪರಿವಾರಸಮೇತವಾಗಿ ಹಿಡಿದುತರಲು ಅಪ್ಪಣೆಯಾಯಿತು. ರಾಣಿಯು ಪೂಜೆಯನ್ನು ತೀರಿಸಿಕೊಂಡು ಹಿಂತಿರುಗಿ ಹೋಗುವಾಗ್ಗೆ ಶತ್ರುಗಳು ಅಡ್ಡಗಟ್ಟಿದರು.

ರಾಣಿಗೆ ಏನೂ ತೋಚದಾಯಿತು. ಆದರೂ ಆಕೆ, ಧೈರ್ಯಗುಂದದೆ ತನ್ನ ಪರಿಚಾರಿಕೆಯರಿಗೆಲ್ಲಾ ಹೇಳಿದಳು—
"ಭಾರತೀಯನಾರಿಯರಿಗೆ ಜೀವನಾಧಾರವಾದುದೇ ಪವಿತ್ರವಾದ ಸತೀತ್ವವು! ಸತೀತ್ವರಕ್ಷಣೆಯೇ ಅವರ ಶ್ರೇಷ್ಠಧರ್ಮ! ಸತೀತ್ವರಕ್ಷಣೆಯಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸಿರುವ ನಮ್ಮ ಹಿರಿಯರಾದ ಪದ್ಮಿನಿ, ಸಂಯುಕ್ತೆ ಮೊದಲಾದವರನ್ನು ಜ್ಞಾಪಿಸಿಕೊಳ್ಳಿರಿ. ಈಗ ನಿಮ್ಮೆಲ್ಲರ ಕೈಯಲ್ಲಿರುವ ಖಡ್ಗಗಳು ನಿಮ್ಮ ಸತೀತ್ವರಕ್ಷಣೆಗಾಗಿಯೇ ಇವೆ. ಸಿದ್ಧರಾಗಿರಿ!"

* * * * * * *

"ಅಬಲೆಯರು, ಏನಾದ್ದರೂ ಅಬಲೆಯರೇ! ಅವರು ಯುದ್ಧವನ್ನು ಮಾಡಬಲ್ಲರೆ?" ಯುದ್ಧ ಮಾಡದೆಯೇ ಶತ್ರುಗಳನ್ನು ಜಯಿಸುವ ಶಕ್ತಿ ಅವರಲ್ಲಿದೆ! ಬಹು ಮಂದಾದರೆ. ಇನ್ನೇನು? ದುರ್ಗವು ಸಮೀಪಿಸಿತು... ಎನ್ನುವಷ್ಟರಲ್ಲಿಯೇ ರಮಣಿಯರಸರಸಲ್ಲಾಪಗಳಿಂದ ಮುಗ್ಧರಾಗಿ ಕರ್ತವ್ಯವನ್ನು ಮರೆತುಹೋಗಿದ್ದ ಯೋಧರು ತಮ್ಮ ತಪ್ಪನ್ನು ತಿಳಿದು ಮತ್ತೊಮ್ಮೆ ಅಡ್ಡಗಟ್ಟಿ ಬಲಪ್ರಕಾಶಮಾಡಿದರು. ಈ ಬಾರಿ ರಮಣಿಯರು ನಿರಾಶರಾದರು. ಆದರೂ ರಾಣಿಯು ಮುಂದೆ ಬಂದು ತನ್ನ ಗಂಭೀರವಾಣಿಯಿಂದ ಕೂಗಿಹೇಳಿದಳು.—
"ಭಾರತೀಯರೆಂದೆನಿಸುವವರಾರಾದರೂ ಇದ್ದರೆ, ಮುಂದೆ ಬರಲಿ! ಅದಾದರೂ ಖಡ್ಗವನ್ನು ಹಿಡಿಯುವುದು ಅಬಲರಾದವರಿಗೆಂದು ತಿಳಿದಿರುವವರಿದ್ದರೆ, ಅವರು ಮುಂದೆ ಬರಲಿ!! ಯಾರ ಧಮನಿಗಳಲ್ಲಿ ಹಿಂದೂವಿನ ರಕ್ತವು ಹರಿಯುವುದೋ ಅವರು ಅನಾಥೆಯರ ರಕ್ಷಣೆಗೆ ಬರಲಿ!"

ಒಡನೆಯೇ ಅಭಯಚಂದ್ರ ಮತ್ತು ನಿರ್ಭಯಚಂದ್ರರೆಂಬ ಈರ್ವರು ಯೋಧರು ಪ್ರಾಣದಾಶೆಯನ್ನು ಬಿಟ್ಟು ದಾರಿ ಬಿಡಿಸ ತೊಡಗಿದರು. ಕೂಡಲೇ ಚಿಕ್ಕದೊಂದು ಕಾಳಗವು ಪ್ರಾರಂಭವಾಯಿತು. ಹಿಂದು ಯೋಧರು ಬಹು ಪರಾಕ್ರಮದಿಂದ ಕಾದಿದರು. ಆದರೆ, ಅವರಿಬ್ಬರೇ, ಎಷ್ಟು ಹೊತ್ತಿನವರೆಗೆ ಅಸಂಖ್ಯಾಕರಾದ ಸೈನಿಕರೊಡನೆ ಹೋರಾಡಬಲ್ಲರು? ಬರುತಬರುತ್ತ ಮುಸಲ್ಮಾನರಲ್ಲಿ ಅನೇಕರು ಮಡಿದು ಬಿದ್ದರು. ರೋಷಾವೇಷದಿಂದ ನಿರ್ಭಯನ ಮೇಲೆ ಏಕಕಾಲದಲ್ಲಿ ಅಸಂಖ್ಯಾಕ ಖಡ್ಗಗಳ ಪೆಟ್ಟುಗಳು ಬಿದ್ದವು; ರಕ್ತವು ಸುರಿದು ಪ್ರಜ್ಞಾಶೂನ್ಯನಾಗಿ ಬಿದ್ದನು. ಅಭಯನು ಇದನ್ನು ಕಂಡು ಸ್ವಲ್ಪಮಟ್ಟಿಗೆ ಹತಾಶನಾದನು; ಆದರೆ, ಅದೇ ಸಮಯದಲ್ಲಿ ಅರಮನೆಯಲ್ಲಿದ್ದ ರಾಣಾ ಗೌತಮನಿಗೆ ಸಮಾಚಾರವು ಮುಟ್ಟಲು, ಸ್ವಯಂ ರಾಣಾನೇ ಶೂರರಾದ ೨೫೦ ಮಂದಿ ರಾಜಪುತ್ರರೊಡನೆ ಬಂದನು. ಇವರನ್ನು ಕಂಡು ಮುಸಲಮಾನರು ಹಿಂದೆ ಬಿದ್ದರು. ಅವರ ಸಂಖ್ಯೆಯು ಕಡಿಮೆಯಾಗಿದ್ದುದಲ್ಲದೆ ಸರಿಯಾದ ಸೈನ್ಯವನ್ನು ಅವರು ತಂದಿರಲಿಲ್ಲವಾದುದರಿಂದ ರಾಜಪುತ್ರರು ನಿರಾಯಾಸವಾಗಿ ಅವರನ್ನು ಓಡಿಸಿ, ರಾಣಿಯನ್ನು ದುರ್ಗದೊಳಗೆ ಕರೆದುಕೊಂಡು ಹೋದರು.

ರಾಣಿಯು ಅಭಯಚಂದ್ರ ಮತ್ತು ನಿರ್ಭಯಚಂದ್ರರ ಶೌರ್ಯವನ್ನು ಕೊಂಡಾಡಿದಳು. ಮಹಾರಾಜನು ನಿರ್ಭಯನನ್ನು ವಿಚಾರಿಸಿದನು. ಆದರೆ ಆತನು ವೀರಸ್ವರ್ಗವನ್ನು ಹೊಂದಿದ್ದನು. ಸ್ವಯಂ ಮಹಾರಾಜನೇ ಆತನ ಶವವನ್ನು ಹೊತ್ತು ತಂದು ಕ್ರಮಪ್ರಕಾರವಾಗಿ ದಹನಸಂಸ್ಕಾರಾದಿ

ಗಳನ್ನು ನೆರವೇರಿಸಿದನು. ಸ್ವದೇಶಪ್ರೇಮವನ್ನು ಆತ್ಮಪ್ರೇಮಕ್ಕಿಂತಲೂ ಮಿಗಿಲಾಗಿರಿಸಿ ಪ್ರಾಣವನ್ನು ಅರ್ಪಿಸಿದ ವೀರಾದಿವೀರನ ಸ್ಮರಣಾರ್ಥವಾಗಿ ಒಂದು ಗೋರಿಯು (?) ಕಟ್ಟಲ್ಪಟ್ಟಿತು,

ಅಭಯಚಂದ್ರನನ್ನು ಸನ್ಮಾನದಿಂದ ಅರಮನೆಗೆ ಕರೆಯಿಸಿ ತನ್ನ ಪ್ರೇಮಪುತ್ರಿಯನ್ನು ಮದುವೆ ಮಾಡಿಕೊಟ್ಟನು.

ವೀರತ್ವಕ್ಕೆ ತಕ್ಕ ಪುರಸ್ಕಾರ!

ರೂಪಲತಾ

(ಲೇಖಕ— ಕೆ. ಆರ್. ರಾಘವಾಚಾರ್, ವಿದ್ಯಾರ್ಥಿ, ಬೆಂಗಳೂರು-ಸಿಟಿ.)

ಇಂದು ಜಯಪುರದಲ್ಲೆಲ್ಲೆಲ್ಲಿಯೂ ವಿಶೇಷ ಸಂಭ್ರಮವು. ಪ್ರತಿಯೊಬ್ಬರ ಮನೆಯೂ ಚೊಕ್ಕಟವಾಗಿ ಗುಡಿಸಿ, ಸಾರಿಸಿ, ಅಂದವಾದ ರಂಗವಲ್ಲಿಯಿಂದ ಅಲಂಕೃತವಾಗಿದೆ. ನಮ್ಮ ಆರ್ಯರ ಗೃಹಗಳಿಗೆ ಮಂಗಳಸೂತ್ರಗಳಾದ ತಳಿರುತೋರಣಗಳು ಪ್ರತಿಯೊಂದು ಮನೆಯ ಕವಾಟದಲ್ಲಿಯೂ ಕಣ್ಗೊಳಿಸುತ್ತಲಿವೆ. ಪುರುಷರೆಲ್ಲರೂ ಉಚಿತವಾದ ಬಹುಬೆಲೆಬಾಳುವ ವಸ್ತ್ರಗಳನ್ನು ಧರಿಸಿರುವರು. ಮಹಿಳೆಯರ ಸಂಭ್ರಮವನ್ನು ಕೇಳಬೇಕೆ? ಎಲ್ಲೆಲ್ಲಿಯೂ ಜನಗಳು ಗುಂಪುಕೂಡಿಕೊಂಡು ಸಂತೋಷದಿಂದ ಚರಿಸುತ್ತಿರುವರು. ಹೆಚ್ಚೇಕೆ? ಜಯಪುರದಲ್ಲೆಲ್ಲರಿಗೂ ಹರ್ಷೋತ್ಸಾಹಗಳು ತುಂಬಿ, ಜನರ ಕಲಕಲವು ತುಂಬಿರುವುವು. ಇನ್ನು ಅರಮನೆಯ ಸಂಭ್ರಮವನ್ನು ವಿವರಿಸಲು ನಮಗೆ ಶಕ್ಯವೆ?

ಬಾಂಧವರೇ! ಇಂದಿನ ಇಷ್ಟರ ಸಂಭ್ರಮವೆಲ್ಲಕ್ಕೂ ಕಾರಣವೇನೆಂಬಿರೊ? ಇಂದು ಜಯಪುರದ ರಾಣಾ ಅಮೀರಸಿಂಹನಪುತ್ರಿಯಾದ ರೂಪಲತೆಯ ವಿವಾಹವು! ವೀರಗ್ರಾಮದ ರಾಣಾ- ಅಜಯಸಿಂಹನೇ ವರನು!! ಇನ್ನೇನು? ನಿಮ್ಮ ರೊಟ್ಟಿಯು ತುಪ್ಪಕ್ಕೆ ಜಾರಿ ಬಿತ್ತಷ್ಟೆ! ಈ ಹೊತ್ತು ಅರಮನೆಯಲ್ಲೆಲ್ಲರಿಗೂ ಭೋಜನವು ದೊರೆವುದು. ಭೋಜನದ ಮಾತೆತ್ತಿದ್ದರೆ ನಿಮ್ಮ ನಾಲಿಗೆಯಲ್ಲಿ ನೀರುಕ್ಕುವುದಲ್ಲವೆ! ಅದರಲ್ಲಿಯೂ ಅರಮನೆಯ ಔತನವು! ಬನ್ನಿರಿ, ನಾವೂ ಔತನಕ್ಕೆ ಹೋಗಿ, ಅರಮನೆಯ ಸಂಭ್ರಮವನ್ನು ಕಣ್ದಣಿಯೆ ನೋಡಿ ಕೃತಾರ್ಥರಾಗುವ.

"ಇದೇನಿದು! ಅರಮನೆಯಲ್ಲಿ ಎಲ್ಲರ ಮುಖವೂ ಬಾಡಿರುವುದು? ಕಾರಣವೇನು?" ತಾಳ್ಮೆಯಿಂದ ಪರಾಮರ್ಶಿಸಿರಿ, ಅದೋ, ಅಲ್ಲಿರುವ ಸಿಪಾಯಿಗಳಿಬ್ಬರು ಮಾತನಾಡುತ್ತಿರುವುದೇನಿರಬಹುದೆಂದು ತಿಳಿಯಿರಿ; ಸಾವಧಾನವಾಗಿ ಕೇಳಿರಿ—

"ರಣಸಿಂಹ! ನಮ್ಮ ರಾಜ್ಯಕ್ಕೇನೋ ವಿಪತ್ತು ಬರುವಂತಿದೆಯಲ್ಲಪ್ಪಾ! ರೂಪಲತಾದೇವಿಯರನ್ನು ಅಜಯಸಿಂಹನಿಗೆ ಕೊಡುವಂತೆ ಗೊತ್ತಾಗಿತ್ತಷ್ಟೇ? ನಿನ್ನೆ, ಅಹಮ್ಮದನಗರದ ಮಹಮ್ಮದಾಲಿಯಿಂದ ಒಂದು ಪತ್ರವು ಬಂತಂತೆ? ನಮ್ಮ ರಾಜಕುಮಾರಿಯನ್ನು ಆ ಯವನನಿಗೆ—ಆ ಕರಾಳ ಮುಖದವನಿಗೆ—ಆ ಮುದುಕನಾದ ಮಹಮ್ಮದನಿಗೆ ಕೊಟ್ಟು ಮದುವೆ ಮಾಡಬೇಕಂತೆ! ನೋಡಪ್ಪ! ಎಷ್ಟು ಕಷ್ಟ ಬಂದಿತು! ಹಾಗೆ ಕೊಡದಿದ್ದರೆ ಯುದ್ಧಮಾಡಿ ಬಲಾತ್ಕಾರವಾಗಿ ವಿವಾಹವಾಗುವೆನೆಂದು ಹೆದರಿಸಿರುವನು. ನಮ್ಮ ಕಡೆಯ ಸೈನಿಕರಸಂಖ್ಯೆ ಸ್ವಲ್ಪವೇ! ನಮ್ಮ ರಾಣಾರು ಏನನ್ನು ಮಾಡುವುದಕ್ಕೂ ಅರಿಯದೆ ವಿಚಾರಪಡುತ್ತಿರುವರು."

"ಅಣ್ಣಾ! ಭಯವೇನು? ನಾವೇನು, ರಜಪೂತರಲ್ಲವೆ? ರಣಭೂಮಿಯು ನಮ್ಮ ಆಟದ ರಂಗವೆಂದು ತಿಳಿ! ಯವನರೆಷ್ಟು ಮಂದಿಯಿದ್ದರೇನು? ನಾವೆಲ್ಲರೂ ನಮ್ಮ ಮಾತೃಋಣವನ್ನು ತೀರಿಸಿಕೊಳ್ಳಲು ರಣರಂಗದಲ್ಲಿ ನಮ್ಮ ನಮ್ಮ ದೇಹಗಳನ್ನೊಪ್ಪಿಸುವ. ನಮ್ಮ ಮಹಿಳೆಯರಿಗೆ ಆಗ ಆಗುವ ಗತಿ ಗೊತ್ತೇ ಇದೆ: ಜೋಹರನ್ನು ಇನ್ನೂ ಮರೆತಿಲ್ಲವಷ್ಟೆ! ಮಹಾರಾಣಿ ಪದ್ಮಿನಿಗೆ ವಿಪತ್ತು ಬಂದಾಗ ನಮ್ಮ ಮಹಿಳಾಮಣಿಯರು ಯಜ್ಞೇಶ್ವರನಿಗೆ ಬಲಿಯಾಗಲಿಲ್ಲವೆ? ಅವರ್ಲೆಂಥರೆಂದಿಗೂ ನಮ್ಮ ಸ್ತ್ರೀಯರ ಮಾನಭಂಗ ಮಾಡಲು ಆಗಲಾರದು. ಭಯವೇಕೆ? ರಾಜಕುಮಾರಿಗಾಗಿ ನಾವು ಮೃತ್ಯುಮುಖದಲ್ಲಿ ಬೀಳುವ ವರೆಗೂ ಕಾದುವ."

ಓರ್ವ ಕುಮಾರಿಗಾಗಿ ಎಷ್ಟು ಕಷ್ಟಗಳು ಪ್ರಾಪ್ತವಾಗುವುವು! ಸೃಷ್ಟಿಕರ್ತನಾದ ಬ್ರಹ್ಮನು ಅಂಗನೆಯರಲ್ಲಿ ಆ ರೂಪವನ್ನಿಡದಿದ್ದರೆ ಈ ಲೋಕದಲ್ಲಿ ಇಷ್ಟು ತೊಂದರೆಗಳೇಕೆ ಒದಗುತ್ತಲಿದ್ದವು?

ರಾಣಾ ಅಮರಸಿಂಹನಿಗೆ ಅವಮಾನವು ಅಶಕ್ಯವೆನಿಸಿತು; ಹೇಳಿದನು.—"ಏಕೆ? ನಮ್ಮ ಕೈಕೆಳಗೆ ಐನೂರು ರಣಾಗ್ರೇಸರರಾದ ಯೋಧರುಗಳಿಲ್ಲವೇ? ಕಷ್ಟಕಾಲವೆಂದರೆ ನಮ್ಮ ಪ್ರಜೆಗಳಾದ ಎರಡುಸಾವಿರ ಜನರು ಸಮರಾಂಗಣವನ್ನು ಪ್ರವೇಶಿಸಲೊಲ್ಲರೆ? ಯವನರ ದಂಡು ಅಧಿಕವೆನ್ನುವಿರೋ? ಒಂದು ವೇಳೆ, ನಾವು ಸೋಲುವ ಕಾಲಬಂದರೆ ನಮ್ಮ ಅಂಗ

ನೆಯರಿಗೆ ಯಜ್ಞೇಶ್ವರನ ಆಶ್ರಯವಿದ್ದೇ ಇರುವುದು. ನಮಗೆ ಸಮರಭೂಮಿಯೇ ಸುಖಶಯ್ಯೆ! ನಾನೆಂದಿಗೂ ತುರುಷ್ಕರಿಗೆ ತಲೆಬಾಗಲಾರೆನು. ಲಗ್ನವು ನೆರವೇರಲಿ!"

ಲಗ್ನವೇನೋ ನೆರವೇರಿಬಿಟ್ಟಿತು. ಅಜಯಸಿಂಹನು ಮಂಗಳಸೂತ್ರವನ್ನು ಕುಮಾರಿ-ರೂಪಲತೆಯ ಕೊರಳಿಗೆ ಕಟ್ಟಿದನು. ಇಂದಿನಿಂದ ಇವರಿಬ್ಬರೂ ದಂಪತಿಗಳಾದರು. ಆದರೂ ಲಗ್ನಕಾಲದಲ್ಲಿ ಮೊದಲಿದ್ದ ಉತ್ಸಾಹವಿರಲಿಲ್ಲ.

(II)

ಅಹಮ್ಮದ್ ನಗರದ ಮಹಮ್ಮದಾಲಿಗೆ ಲಗ್ನವಾದ ಸಮಾಚಾರವು ಮುಟ್ಟಿತು. ತುರುಷ್ಕರೇನು ಸಾಮಾನ್ಯ ಪ್ರತಿಜ್ಞೆಯವರೇ? ಮಹಮ್ಮದಾಲಿ, ಭಾವಚಿತ್ರದಲ್ಲಿ ರೂಪಲತೆಯ ರೂಪವನ್ನು ನೋಡಿ ಮೋಹಾಂಧನಾಗಿದ್ದನು. ರೂಪಲತೆಯನ್ನು ಪಡೆಯಲು ಏನುಬೇಕಾದರೂ ಮಾಡಿಬಿಡುವನು. ಅದಗಲ್ಲಿಯೂ ಅಮರಸಿಂಹನ ವಾಕ್ಯಗಳು, ಅವನ ಕ್ರೋಧಾಗ್ನಿಗೆ ಆಜ್ಯಾಹುತಿ ಮಾಡಿದಂತಾದುವು. ಅವನೀ ರೀತಿಯಾಗಿ ನುಡಿದನು:—

"ಹತ್ತುಸಹಸ್ರ ಅತ್ಯುತ್ತಮರಾದ ಸೈನಿಕರು ಸಮರಾಂಗಣವನ್ನು ಪ್ರವೇಶಿಸಲಿ! ಎಲ್ಲರೂ ಹೋಗಿ ಜಯಪುರವನ್ನು ಮುತ್ತುವ. ತುರುಷ್ಕರ ಧಮನಿಗಳಲ್ಲಿ ವೀರ್ಯರಕ್ತವು ಪ್ರವಹಿಸಿ, ಅವರ ಬಾಹುಗಳಲ್ಲಿ ಬಲವಿರುವ ವರೆಗೂ ಕಾಫರನಿಂದಾದ ಅಪಮಾನವನ್ನು ಯಾವ ಯವನ ಸಮ್ರಾಟನೂ ಸಹಿಸಲಾರನು! ಜಯಪುರವಿರುವುದು ಒಂದು ಸಣ್ಣ ಹಳ್ಳಿ. ಆ ಕ್ಷುದ್ರಳನು ನನ್ನ ಮಾತನ್ನು ಮೀರಿಜನಲ್ಲವೆ! ಇರಲಿ; ಇಂದು, ಅಲ್ಲಾಗೆ ಸಂತೋಷದ ದಿನ! ಅನೇಕ ಕಾಫರರ ರಕ್ತವನ್ನು ಕುಡಿಯಲು ಸಮರದೇವತೆಯು ದಾಹದಿಂದ ಪೀಡಿತೆಯಾಗಿ ಆತುರಗೊಂಡಿರುವಳು. ಯಾರು, ರೂಪಲತೆಯನ್ನು ತಂದು, ಯುದ್ಧದಲ್ಲಿ ಜಯಪುರದ ರಾಣಾ ಅಮರಸಿಂಹನನ್ನು ಸೋಲಿಸಿ ಹಿಡಿದು ತಂದು ನನ್ನ ಕಾಲ್ಗಳಿಗೆ ಕೆಡಹುವರೋ ಅವರಿಗೆ ಹತ್ತುಸಹಸ್ರ ವರಹಗಳ ಬಹುಮಾನವು."

ಯವನ ಸೇನೆಯು ಬಲು ಬೇಗ ಕೂಡಿತು. ಇವರಿಗೆ ಇಂದು ಯುದ್ಧಮಾಡುವುದೊಂದೇ ಆಶೆಯಲ್ಲ. ಕೆಲವರು ಅಲ್ಲಿ ಬೇಕಾದಷ್ಟು ಲೂಟಿ ಮಾಡಬಹುದೆಂದೂ, ಇಷ್ಟಬಂದಂತೆ ಧನರಾಶಿಯನ್ನು ಸೂರೆಗೊಳ್ಳಬಹುದೆಂದೂ ಹೊರಟರು; ಮತ್ತೆ ಕೆಲವರು ರಜಪೂತ ರಾಜ್ಯದಲ್ಲಿ ರೂಪವತಿಯರಾದ ಅನೇಕ ಯುವತಿಯರಿರುವರೆಂದೂ ಬೇಕಾದವರೊಡನೆ ಭೋಗಿಸಬಹುದೆಂದೂ ಸಮರಭೂಮಿಯನ್ನು ಹೊಕ್ಕರು.

(III)

ಲಗ್ನವು ನಡೆದು ಎರಡು ದಿನಗಳಾಗಿವೆ. ಅವಾಗ ಕರೆದರೂ ಸಿದ್ಧರಾಗಿರಬೇಕೆಂದು ಜಯಪುರದ ಯೋಧ್ಯಗಳೆಲ್ಲರಿಗೂ ಅಪ್ಪಣೆಯಾಯಿತು. ತಾವು ಸೋಲುವ ಪಕ್ಷಕ್ಕೆ ಅಬಲೆಯರಾದ ಸ್ತ್ರೀಯರೆಲ್ಲರೂ ಯಜ್ಞೇಶ್ವರನ ಆಶ್ರಯವನ್ನು ಹೊಂದಬೇಕೆಂದು ರಾಣಾನ ಆಜ್ಞೆಯಾಯಿತು. ಅಗ್ನಿಕುಂಡಗಳು ಸಿದ್ಧವಾದವು. ಬಾಲಕರು ಕೂಡ ತಾವು ಮಾತೃಭೂಮಿಯ ಸೇವೆಗಾಗಿ ಸಮರಾಂಗಣವನ್ನು ಹೊಕ್ಕು ಯುದ್ಧಮಾಡುವೆವೆಂದು ಆನಂದಪಡುತ್ತಿದ್ದರು.

ಆದರೆ, ಕೋಮಲ ಬಾಲೆಯಾದ ರೂಪಲತೆಯನ್ನು ಇಷ್ಟು ಚಿಕ್ಕವಯಸ್ಸಿನಲ್ಲಿ ಅಗ್ನಿಗೆ ಆಹುತಿ ಕೊಡಲು ಯಾರೂ ಇಷ್ಟಪಡಲಿಲ್ಲ. ರಂಗಪುರದ ರಾಜನಾದ ಅಚಲಸಿಂಹನು ಕುಮಾರಿಯನ್ನು ಗುಪ್ತವಾಗಿ ಸಂರಕ್ಷಿಸುವೆನೆಂದು ಮಾತುಕೊಟ್ಟನು. ಕುಮಾರಿಯು ರಂಗಪುರಕ್ಕೆ ಸುರಕ್ಷಿತವಾಗಿ ಒಯ್ಯಲ್ಪಟ್ಟಳು.

ಮಹಮ್ಮದಾಲಿಯು ಸೈನ್ಯದೊಡನೆ ಬಂದಿರುವ ವರ್ತಮಾನವು ಬಂದಿತು. ಎಲ್ಲ ಪುರುಷರೂ ಆನಂದದಿಂದ ಸಮರಭೂಮಿಯನ್ನು ಪ್ರವೇಶಿಸಿದರು. ಬಿಡ್ಡಿಯ ಬಾಗಿಲನ್ನು ತೆಗೆದು, ರಜಪೂತರು ಹೊರಗೆ ಕಾಲಿಟ್ಟರೋ ಇಲ್ಲವೋ— ಯುದ್ಧಕ್ಕೆ ಮೊದಲಾಯಿತು.

ಇತ್ತ ಹೆಂಗಸರೆಲ್ಲರೂ ಏಕಮನಸ್ಸಿನಿಂದ—"ಜಯ, ಭವಾನಿ! ಭಾರತಮಾತೆ! ಸರ್ವಮಂಗಳಪ್ರದಾಯಿನಿ! ನಿಮ್ಮ ಧರ್ಮವನ್ನು ಸಂರಕ್ಷಿಸಲು ನಾವೆಲ್ಲರೂ ಯಜ್ಞೇಶ್ವರನಿಗೆ ಆಹುತಿಯಾಗುವೆವು. ನಮ್ಮ ಪತಿಗಳಿಗೆ ಜಯವನ್ನು ಅನುಗ್ರಹಿಸು. ಅವರು ಯುದ್ಧಮಾಡಲು ಶಕ್ಯವಷ್ಟು ಬಾಹುಬಲವನ್ನು ಕೊಡು. ಭಗವಂತನ ಪಾದಾರವಿಂದವನ್ನು ಸೇರಲು ನಾವು ಬಂದಿರುವೆವು. ಅಮ್ಮಾ! ಭವಾನಿ! ರಕ್ಷಿಸು!" ಎಂದು ಹೇಳುತ್ತ ಅಗ್ನಿಕುಂಡದಲ್ಲಿ ಬಿದ್ದರು. ಕ್ಷಣದಲ್ಲಿ ಎಲ್ಲರ ದೇಹಗಳೂ ಅಗ್ನಿದೇವನಿಂದ ದಹಿಸಲ್ಪಟ್ಟವು. ಜಯಪುರದಲ್ಲಿ ನರಪಿಳ್ಳೆಯೂ ಇಲ್ಲದಾಯಿತು.

ಯುದ್ಧವು ಬಹುದಿನಗಳ ವರೆಗೆ ನಡೆಯಿತು. ರಜಪೂತರಲ್ಲಿ ಒಬರೂ ಹಿಂದೆಗೆಯಲಿಲ್ಲ. ಏನ್ಮಾಡಿದರೇನು? ರಜಪೂತರು ಅತ್ಯಲ್ಪಸಂಖ್ಯೆಯವರು. ವಿಜಯಲಕ್ಷ್ಮಿ ಯವನರನ್ನೇ ಆಶ್ರಯಿಸಿದಳು. ವಿಜಯದಿಂದ ಆನಂದಭರಿತರಾಗಿ, ಯವನಸೇನೆಯು ಜಯಪುರವನ್ನು ಹೊಕ್ಕಿತು.

ಜಯಪುರದಲ್ಲಿ ಒಂದು ನರಪಿಳ್ಳೆಯಾದರೂ (?) ಇಲ್ಲ. ಎಲ್ಲೆಲ್ಲಿಯೂ ಅಗ್ನಿಕುಂಡಗಳೇ! ತುರುಷ್ಕರು ಏನು ನಡೆಯಿತೆಂಬುದನ್ನು ಊಹಿಸಿದರು. ಮಹಮ್ಮದಾಲಿಯು ಹೇಳಿದನು— "ಎಷ್ಟಾದರೂ ಕಾಫರರು ಗಟ್ಟಿಗರು! ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳುವರು. ಹೋಗಲಿ, ಸಿಕ್ಕಿದಷ್ಟು ಕೊಳ್ಳೆಹೊಡೆದುಕೊಂಡು ಹೋಗುವ."

(IV)

ಕುಮಾರಿಯೆನಾದಳೆಂಬುದು ಗೊತ್ತಾಗಲಿಲ್ಲ. ಆದರೂ ಯವನರು ಸಾಮಾನ್ಯರಲ್ಲ! ರೂಪಲತೆಯು ಬದುಕಿರುವಳೆಂಬುದನ್ನು ಹೇಗೋ ತಿಳಿದರು. ಅವಳು ರಂಗಪುರದಲ್ಲಿ ಗುಪ್ತವಾಗಿ ವಾಸಮಾಡುತ್ತಿರುವಳೆಂಬುದೂ ಅವರಿಗೆ ತಿಳಿಯಿತು. ಯವನ ಸೇನೆಯು ರಂಗಪುರದ ಬಾಗಿಲಲ್ಲಿ ಬಂದು ನಿಂತಿತು.

ರಂಗಪುರದ ರಾಜನಾದ ಅಚಲಸಿಂಹನು ಸೈನ್ಯವನ್ನು ಒಟ್ಟುಗೂಡಿಸುತ್ತಿದ್ದನು. ಆದರೆ, ರೂಪಲತೆಯು ಆತನನ್ನು ತಡೆದಳು. ತಾನು ವಿವಾಹವಾಗಲೊಪ್ಪಿರುವಂತೆ ಯವನ ರಾಜನಿಗೆ ಹೇಳಿಕಳುಹಿದಳು. ಜನರು ಬಹುಬಗೆಯಾಗಿ ತಿಳಿಯ ಹೇಳಿದರೂ ಕೇಳಲಿಲ್ಲ. ಅಚಲಸಿಂಹನು ತನ್ನ ಮನಸ್ಸಿನಲ್ಲಿ—"ಅನ್ಯಾಯವಾಗಿ ಧರ್ಮವನ್ನು ತ್ಯಜಿಸುವಳಲ್ಲ!" ಎಂದು ಕೊರಗಿದನು.

ವಿವಾಹವೂ ನಿಶ್ಚಯಿಸಲ್ಪಟ್ಟಿತು. ಆರ್ಯಸಂಪ್ರದಾಯದಂತೆಯೇ ವಿವಾಹವು ನಡೆಯಬಹುದೆಂದು ಮಹಮ್ಮದನು ಒಪ್ಪಿದನು. ಜನಗಳೆಲ್ಲರೂ ರೂಪಲತೆಯನ್ನು ಶಪಿಸಿದರು. ಕೆಲವರು ಮಾತ್ರ, ಅವಳು ಏನೋ ಅಂತರಂಗದಲ್ಲಿ ಯೋಚಿಸಿಕೊಂಡಿರುವಳೆಂದು ಸಂದೇಹಪಟ್ಟರು.

* * * * *

ಅಹಮ್ಮದ್ ನಗರದ ಅರಮನೆಯಲ್ಲಿ ಇಂದು ವಿವಾಹ ಮಂಟಪವು ಶೋಭಾಯಮಾನವಾಗಿತ್ತು. ಏನು ನಡೆಯುವುದೋ ನೋಡಬೇಕೆಂದು ಲಕ್ಷಾಂತರ ಪ್ರಜೆಗಳು ಕೌತುಕದಿಂದ ನೆರೆದಿದ್ದರು. ವಿವಾಹ ಮಂಟಪದ ಮುಂದೆ ಸ್ವಲ್ಪ ದೂರದಲ್ಲಿಯೇ ಆಳವಾದ ಕೊಳವಿದ್ದಿತು.

ರೂಪಲತೆಯು ತಾನು ಕಳುಹುವ ಅಂಗಿಯನ್ನು ತೊಟ್ಟುಕೊಂಡೇ ವಿವಾಹ ಮಂಟಪವನ್ನು ಪ್ರವೇಶಿಸಬೇಕೆಂದು ಕೋರಿದ್ದಳು. ಅದೇ ಪ್ರಕಾರ ಅವನೂ ಒಪ್ಪಿದನು. ರೂಪಲತೆಯು ವಿವಾಹವಾಗುವುದಕ್ಕೆ ಮೊದಲು ಇಂತೆಂದಳು:—

ಪ್ರಿಯತಮ! ಹೊರಗಡೆ ಲಕ್ಷಾಂತರ ಪ್ರಜೆಗಳು ನೆರೆದಿರುವರು. ಮೊದಲು ಅವರಿಗೆ ದರ್ಶನವನ್ನಿತ್ತು ಆ ಬಳಿಕ ಲಗ್ನವಾಗಬಹುದು."

ಮಹಮ್ಮದನು ಅದಕ್ಕೂ ಒಪ್ಪಿದನು. ಹೊರಗೆ ಬಿಸಿಲು ಕಾಯುತ್ತಿದ್ದಿತು. ಇಬ್ಬರೂ ಅಲ್ಲಿಗೆ ಹೋಗಿ ನಿಂತರು. ನಿಂತ ಸ್ವಲ್ಪ ಹೊತ್ತಿನಲ್ಲಿ ಮಹಮ್ಮದನಿಗೆ ಚೇಳು ಕುಟುಕಿದಂತೆ ಬಾಧೆಯಾಯಿತು. ಬಾಧೆಯೂ ಹೆಚ್ಚಿತು. ಅಂಗಿಯು ಉರಿಯುವುದಕ್ಕೆ ಮೊದಲಾಯಿತು. ರೂಪಲತೆಯು ಕೊಳವನ್ನು ಸೇರುವ ನೆವದಿಂದ ಅಲ್ಲಿಗೆ ಹೋಗಿ ಮಹಮ್ಮದನನ್ನು ಕುರಿತು—'ಯವನ ಸಮ್ರಾಟನೆ! ನನ್ನ ಸೇಡನ್ನು ತೀರಿಸಿಕೊಂಡೆನು. ನನ್ನ ಪವಿತ್ರಪತಿಯನ್ನು ಸಮರಾಂಗಣದಲ್ಲಿ ಸಂಹರಿಸಿ, ನೀನು ನನ್ನ ಏಕಮಾತ್ರ ಆಭರಣವಾಗಿರುವ ಪತಿಭಕ್ತಿಯನ್ನು ಅಪಹರಿಸಲು ಯತ್ನಿಸಿದೆ. ಆ ಪತಿಯು ಪರಮಾನುಗ್ರಹದಿಂದ ನನ್ನ ಕರ್ತವ್ಯವನ್ನು ನಡೆಯಿಸಿದನು." ಎಂದು ಹೇಳುತ್ತ ತಲೆಕೆಳಗಾಗಿ ಕೊಳದೊಳಗೆ ಬಿದ್ದಳು. ಇತ್ತ ಮಹಮ್ಮದನ ಅಂಗಿಯು ಉರಿಯುವದು ಅಧಿಕವಾಯಿತು. ಆ ಉರಿಯನ್ನು ಆರಿಸಲು ಆರೂ ಶಕ್ತರಾಗಲಿಲ್ಲ. ಕಡೆಗೆ ಅವನು ಸತ್ತು ನೆಲದ ಮೇಲೆ ಒರಗಿದನು.

ಧನ್ಯೆ! ಧನ್ಯೆ! ರಜಪೂತಕನ್ಯೆ!! ಆರ್ಯನಾರೀಶಿರೋಮಣಿಯೇ!!! ನಿನ್ನಂತಹ ಪವಿತ್ರಜೀವಿಗಳು ಈಗಲೂ ಈ ಭಾರತವರ್ಷದಲ್ಲಿರುವರೆ! ಎಲ್ಲಿ?

ದಯಾನಂದ ಸರಸ್ವತಿ

ದ್ವಿತೀಯ ಭಾಗ.

“ ಆರ್ಯಸಮಾಜ ”

ಅದೆಷ್ಟೋ ಸಂವತ್ಸರಗಳಾದುವು. ಮೂಲಶಂಕರನು ಈಗ ''ದಯಾನಂದ"ನಾಗಿರುವನು. ಸ್ಥಳದಿಂದ ಸ್ಥಳಕ್ಕೆ ಜ್ಞಾನದ ಬೆಳಕನ್ನು ತೆಗೆದುಕೊಂಡು ಹೋಗುವನು. ಸಂದರ್ಶಿಸಿದೆಡೆಗಳಲ್ಲೆಲ್ಲಾ ತರ್ಕಗಳನ್ನು ಮಾಡುವನು. ಹೋದೆಡೆಯಲ್ಲೆಲ್ಲಾ ಜ್ಞಾನದ ಬೆಳಕಿನ ಬೀಜಗಳನ್ನು ಬಿತ್ತುವನು. ತನ್ನ ವಿರಾಮಕಾಲವನ್ನು ಪ್ರಾಪಂಚಿಕ ಧರ್ಮಗಳನ್ನು ಒಂದೊಂದಾಗಿ ಕಲಿಯುವದರಲ್ಲಿ ವ್ಯಾಸಂಗಿಸಿ ಸಂಪೂರ್ಣಪಾಂಡಿತ್ಯವನ್ನು ಹೊಂದಿದನು ಈ ನವೀನ ಪಾಂಡಿತ್ಯದಿಂದಲೂ ತನ್ನ ಗುರುವಿನ ಆಶೀರ್ವಾದ ಬಲದಿಂದಲೂ ದಯಾನಂದನು ಊರುಕೇರಿಗಳಲ್ಲಿರುವ ಪಂಡಿತರೊಡನೆ ತರ್ಕಿಸಿ, ಅವರ ಮೌಢ್ಯತೆಯನ್ನು ಅವರಿಗೇ ತೋರಿಸುತ್ತ ಬಂದನು. ಹೀಗೆ ಆಗ್ರಾ-ಗ್ವಾಲಿಯರ್, ಜಯಪೂರ, ಪುಷ್ಕರ, ಅಜ್ಮೀರ, ಮತ್ತು ಹರಿದ್ವಾರ ಇವೇ ಮೊದಲಾದ ಪ್ರಸಿದ್ಧ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದನು. ಆದರೆ ಇವುಗಳನ್ನೆಲ್ಲಾ ಸಂಕ್ಷೇಪವಾಗಿ ಬರೆಯಲಾಗುವದಿಲ್ಲ. “ ದಯಾನಂದ ದಿಗ್ವಿಜಯ”ವೆಂಬ ಮತ್ತೊಂದ ಪುಸ್ತಕದಲ್ಲಿ ಈ ವಿಷಯವನ್ನು ನೋಡಬಹುದು. ಮುಖ್ಯ ಮುಖ್ಯವಾದ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಬರೆಯುತ್ತೇವೆ.

''ಕುಂಭಮೇಳ"ವನ್ನು ಅನೇಕರು ಕೇಳಿರಬಹುದು. ಹರಿದ್ವಾರ ಕ್ಷೇತ್ರದಲ್ಲಿ ಈ ದೊಡ್ಡ ಸಂತೆಯು ಹನ್ನೆರಡು ವರ್ಷಗಳಿಗೊನ್ಮೆ ಕೂಡಿ ಬರುತ್ತದೆ. ಹರಿದ್ವಾರದ ಪವಿತ್ರತೆಯುಂತೂ ಜಗದ್ವಿಖ್ಯಾತವಾಗಿದೆ. ಗಂಗಾನದಿಯು ಈ ಹರಿದ್ವಾರಕ್ಕಾಗಿ ಹರಿದುಬರುತ್ತದೆ. ಲಕ್ಷೋಪಲಕ್ಷ ಜನರು ಇಲ್ಲಿಗೆ ಪ್ರತಿವರ್ಷವೂ ಬರುತ್ತಿರುವರು. ಅದರಲ್ಲಿಯೂ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಈ ದೊಡ್ಡ ಸಂತೆಗೆ ಎಷ್ಟು ಜನರು ಬಂದಾರೆಂಬುದನ್ನು ವಾಚಕರೇ ಊಹಿಸಬೇಕಾಗಿದೆ. ಪಾಪವನ್ನು“ ತೊಳೆಯಲು” ಎಷ್ಟು ಜನರು ಬರುತ್ತಿದ್ದರು. ಇದನ್ನು ಕುರಿತು ಏನೆಂದು ಹೇಳುವಾ? ಜನರ ಮೌಢ್ಯವು ಹೆಚ್ಚಾಗಿದೆಯೆಂದೇ ಭಾವಿಸಬೇಕಾಗಿದೆ. ಏಕೆಂದರೆ, ಎಷ್ಟೋ ವರ್ಷಗಳ ಹಿಂದೆ ಸೋಮೇಶ್ವರ ಶತಕದ ಕರ್ತನು ಹೀಗೆ ಹೇಳಿಲ್ಲವೇ—

ವೃತ್ತ॥ ಪೊದೆಯೊಳ್ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇ ನಪ್ಪನೇಂ ।
ಕಡುಪಾಪಂ ಜಲ ಮೀಯಲಾತ ಶುಚಿಯೇ ಕಾಕಾಳಿಗಳ್ ಮೀಯವೇ ॥
ಗುಡಪಾನಂಗಳೊಳಿರ್ದ ಬೇವಿನಫಲಂ ಸ್ವಾದಪ್ಪುದೇ ಬಾಹ್ಯದೊಳ್ ।
ಮಡಿಯೇ ನಿರ್ಮಲ ಚಿತ್ತವು! ಹರಹರಾ! ಶ್ರೀಚನ್ನಸೋಮೇಶ್ವರಾ! ॥—

ಇದರಿಂದ ನಾವು ತಿಳಿಯಬೇಕಾದುದೇನಂದರೆ, ನಮ್ಮ ಜನರು ಇನ್ನೂ ಅಜ್ಞಾನಾಂಧಕಾರದಿಂದ ಜ್ಞಾನದ ಬೆಳಕಿಗೆ ಬರಲಿಲ್ಲವೆಂಬುದೇ! ಇದಕ್ಕೆ ಕಾರಣವೇನು? ನಮ್ಮವರನ್ನು ನಾವು ಸರಿಯಾಗಿ ಶಿಕ್ಷಿಸಿ ತಿದ್ದದಿರುವುದರಿಂದ, ಮತ್ತು ವಿದ್ಯಾಭ್ಯಾಸವು ಕೊಡಲ್ಪಡದಿರುವುದರಿಂದ. ಎಲೈ ಆರ್ಯಕುಲೋತ್ಪನ್ನರೇ! ಜಗದೀಶನ ಸೃಷ್ಟಿನಿಯಮ ಪುಸ್ತಕದ ಪಾನೊಂದನ್ನು ಸದುಪಯೋಗ ಮಾಡಿಸಲು ಕಲಿಸುವರಾಗಿರಿ! ನಿಮ್ಮ ಕರ್ತವ್ಯವನ್ನು ನೋಡಿರಿ! ಹಿರಿಯರಲ್ಲಿ ಸದ್ಭಾವನೆಯನ್ನಿರಿಸಿರಿ! ಏಕೆಂದರೆ, ಅವರು ನಿಮಗೆ ಆವ ವಿಷಯದಲ್ಲಿಯೂ ಹಿಂದಿರಲಿಲ್ಲ. ಹಾಗಾದರೆ ಮತ್ತೆ ಅದೇತಕ್ಕೆ ದೂರುವಿರಿ? ಏಕೆ, ಮನದಲ್ಲೊಂದು ಹೊರಗೊಂದು ಮಾಡುವಿರಿ? ಭ್ರಾಂತಿಯೆಂದು ನಂಬಿಯೂ ಏಕೆ ಮೂರ್ಖತ್ವದ ಯಾತನೆಗಳನ್ನು ಅನುಭವಿಸುವಿರಿ? ಅದು ನಿಮ್ಮ ತಪ್ಪಲ್ಲವೇನು? ಇದನ್ನು ದಯಾನಂದನು ಕಂಡನು. ಬಲು ವ್ಯಥೆ ಪಟ್ಟು ಮತ್ತೊಮ್ಮೆ ಅರಣ್ಯವಾಸಿಯಾಗಲೇ-ಏನು? ಎಂದು ಯೋಚಿಸಿದನು. ಒಡನೆಯೆ ಗುರುವಿಗಿತ್ತ ಭಾಷೆಯು ಜ್ಞಾಪಕಕ್ಕೆ ಬಂದಿತು. ಹೇಡಿಯಾಗಲು ಉದ್ದೇಶಿಸಿದ್ದೆನಲ್ಲಾ! ಎಂದು ಆಲೋಚಿಸಿ, ಪುನಃ ಧೈರ್ಯಗೊಂಡು ಮುಂದೆ ತೆರಳಿದನು.

(II)

ಮಹಾಭಾರತದ ಯುದ್ಧವಾಗಿ ಎಷ್ಟೋ ವರ್ಷಗಳಾದವು. ಅದಾಗಿ ನಮ್ಮಿಂದ ಎಣಿಸಲಾಗದಷ್ಟು ವರ್ಷಗಳಾಗಿವೆ. ಆದರೆ ಇಂದಿನ ನಮ್ಮ ಕರ್ತವ್ಯವೇನಂದರೆ, ಅಂದಿನ ಆರ್ಯರ ಆರ್ಯಾವರ್ತವನ್ನು ಇಂದಿನ ಈ ''ನವನಾಗರಿಕರ'' “ಇಂಡಿಯನ್ನರ ” ಆರ್ಯಾವರ್ತವನ್ನು ಸರಿತೂಗಿಸಬೇಕಾಗಿದೆ. ಮೂರ್ಖತ್ವವು ಮೊದಲಿನಂತೆ(?)ಯೇ ಇದೆ. ಲಾಲಾಲಜಪತರಾಯರು ತಮ್ಮ ಪುಸ್ತಕದಲ್ಲಿ ಹೀಗೆ ಹೇಳಿರುವರು. “ ಏಳನೆಯ ಶತಮಾನದಲ್ಲಿ ಭಾರತವರ್ಷವನ್ನು ಸಂದರ್ಶಿಸಿದ ಹುಯಾನತ್ಸಂಗನು ಕುಂಭಮೇಳವನ್ನು ನೋಡಿದ್ದನೆಂದು!—

'ಹೇ ಮೂರ್ಖತ್ವವೇ! ಬಹುಶಃ ಮಾನವನನ್ನು ಸೃಷ್ಟಿಸುವಾಗಲೇ ನಿನ್ನನ್ನೂ ಸೃಷ್ಟಿಸಿರಬಹುದೆಂದು ನಂಬಬೇಕಾಗಿದೆ. ಆದುದರಿಂದ ನೀನೇ ಈಗಿನವರ ತೊಟ್ಟಿಲಾಗಿರುವೆ. ನಿನ್ನನ್ನು ಒಡನೆಯೇ ತ್ಯಜಿಸಲಾದೀತೇ? ಆದಾಗದು. ಬಹುಶಃ ಅನೇಕ ವರ್ಷಗಳು ಬೇಕಾಗಬಹುದು. ಮೂವತ್ತು ಕೋಟಿ ಭಾರತೀಯರಲ್ಲಿ ಹದಿನೇಳು ಕೋಟಿ ಜನರು "ನೀಚ" ಅಥವಾ 'ಶೂದ್ರ' ಜಾತಿಯವರು! ಇವರು ಕೂಡ ವಿದ್ಯಾವಿಹೀನರು, ಮತಿಗೆಟ್ಟವರು, ವಿದ್ಯಾವಿಶಾರದರಾದ ವಿಪ್ರರೆಂದುದೇ ವೇದವಾಕ್ಯ! ಚಿಃ! ದೇವವಾಕ್ಯ! ಇದೆಲ್ಲವೂ ಬುದ್ಧನ ಕಾಲದಿಂದ ಈಚೆಗೆ ಮೊದಲಾಯಿತು. ಬುದ್ಧನು ಜನ್ಮವೆತ್ತಿ ಅನೇಕ ಅಬ್ದಗಳಾದವು ಈ ಮಧ್ಯೇ ಮೂರ್ಖತ್ವವು ವೃದ್ಧಿಗೊಂಡಿತು. ಮೂರ್ಖತ್ವದ ಆಧಾರಕ್ಕಾಗಿ ವಿಪ್ರರು ತಮ್ಮನ್ನು ದೈವೀಕರಿಸಿ ಪುರಾಣ ಶತಕಂಥೆಗಳನ್ನು ಬರೆದಿಟ್ಟರು. ಅನಾದಿಯಾಗಿ ಬಂದ ಆರ್ಯಗ್ರಂಥಗಳಲೆಲ್ಲಾ ವಿಪ್ರವಿರಚಿತ ಶ್ಲೋಕಗಳು ಸೇರಿಸಲ್ಪಟ್ಟವು. ಅದು ಈಗ ನಮಗೆ ಬಂದು ನಿಜವಾವುದು- ಸುಳ್ಳಾವುದು- ಎಂಬುದನ್ನು ತಿಳಿಯದೆ ಈ ಗತಿಗೆ ಬಂದಿರುವೆವು. ನಮ್ಮ ಧಾರ್ಮಿಕ, ಪಾರಮಾರ್ಥಿಕ ಸೋಪಾನಗಳಿಂದ ಸ್ವದೇಶವು ಇಳಿದುಹೋಗುವ ಸಂದರ್ಭವು ಒದಗಿದ್ದಿತು ಭಾರತಪುತ್ರ-ಪುತ್ರಿಯರೆಲ್ಲರೂ ಬರಿಯ ಐಹಿಕ, ಸಾಂಪತ್ತಿಕ, ಇಂದ್ರಿಯಸುಖಗಳಲ್ಲಿ ಮಗ್ನರಾಗಿ ತಮ್ಮ ಪೂರ್ವಜರ ಪವಿತ್ರವಾದ ಧರ್ಮಗಳನ್ನು ಮೂಲೆಗೆ ಒತ್ತಿ ನೂತನ ಪಾರದೇಶಿಕ ಧರ್ಮಗಳನ್ನೂ ಪದ್ಧತಿಗಳನ್ನೂ ಕೈಕೊಳ್ಳಲುಜ್ಜುಗಿಸಿದ್ದಾರೆ. ನಮ್ಮ ಮಾತೃಭೂಮಿಯಲ್ಲಿ ಅನೇಕ ಜಾತಿ ಮತಗಳು ತುಂಬಿ, ಅವಳ ಮಕ್ಕಳೆಲ್ಲಾ ಭಿನ್ನಾಭಿಪ್ರಾಯವುಳ್ಳವರಾಗಿರುವರು ಇಂತಹ ದುರ್ಘಟಿತಸಮಯದಲ್ಲಿ "ಶ್ರೀಸ್ವಾಮಿ ದಯಾನಂದ ಸರಸ್ವತಿ"ಯವರು ಮುಂದೆ ಬಂದು ಎಲ್ಲರೂ ತಮ್ಮ ಪೂರ್ವಧರ್ಮವನ್ನೊಪ್ಪಿ ಸಂಜೀವನೆಯನ್ನು ಮಾಡಲೆಂದು ಬೋಧಿಸಿ, ನಮಗೆ ಮಹೋಪಕಾರಗಳನ್ನು ಮಾಡಿದರು ತನ್ಮಧ್ಯೇ ಒಬ್ಬ ದುಷ್ಟನು ವಿಷಪ್ರಯೋಗದಿಂದ ಆತನನ್ನು ಪರಂಧಾಮಕ್ಕೈದಿಸಿದನು! ಭಾರತೀಯರಿಗೆ ಇದೊಂದು ದೊಡ್ಡ ಕಲಂಕವೇ ಸರಿ!!

ಸ್ವಾಮಿಯ ದಿಗ್ವಿಜಯದ ಸಾರಾಂಶವು.

ಕರ್ಣವಾಸ - ಇಲ್ಲಿಗೆ ಬಂದೊಡನೆಯೇ "ಹೀರವಲ್ಲಭ ಪಾರ್ವತಿಶಾಸ್ತ್ರಿ" ಎಂಬ ಪಂಡಿತವರ್ಯನು ಮುಂದೆ ಬಂದು ವಸಿಷ್ಠಸಂಧನನ್ನು ಹಾಕಿ ಸ್ವಾಮಿಯನ್ನು ಕೆಣಕಿದನು. ಇಬ್ಬರಿಗೂ ಒಂಭತ್ತು ಗಂಟೆಗಳ ವರೆಗೆ ತರ್ಕ ನಡೆಯಿತು. ಕಡೆಗೆ ದಯಾನಂದನ ಅಭಿಮತವನ್ನು ಸ್ವೀಕರಿಸಿ, ತನ್ನ ವಿಗ್ರಹಗಳನ್ನು ಗಂಗಾಜಲದಲ್ಲಿ ಬಿಸುಟು ಸ್ವಾಮಿಯ ಶಿಷ್ಯನಾದನು.

ಹೀಗೆಯೇ ಸೂರೋನ್ ಮಿರ್ಸಾಪುರ ಮುಂತಾದ ಅನೇಕ ನಗರಗಳಲ್ಲಿ ಜನಗಳ ಸೋಲನ್ನು ದಯಾನಂದನ ಪಾಂಡಿತ್ಯವು ಕಂಡಿತು.

ಕಾನಪುರ--ಇಲ್ಲಿಯ ಸಹಾಯಕ ಆದಾಯಸಂಗ್ರಹಕ ಸಂಸ್ಕೃತ ಭಾಷಾಭಿಜ್ಞರೂ ಪದವೀಧರರೂ ಆದ ಮಿ॥ ಡಬ್ಲ್ಯೂ. ಥೈರ ಎಂಬವರ ಅಧ್ಯಕ್ಷತೆಯಲ್ಲಿ ಸಾಧಾರಣ ಇಪ್ಪತ್ತು ಸಾವಿರ ಜನಗಳ ವರೆಗಿನ ಸಭೆ ಕೂಡಿತು. ಚರ್ಚೆಯು "ವೇದದೊಳಗಿನ ವಿಗ್ರಹಾರಾಧನೆ"ಯೇ ಆಗಿದಿತು. ಮಿತಭಾಷಿಯಾದ ದಯಾನಂದನು ತನ್ನ ಹೇಳುವಿಕೆಯನ್ನು ಹೇಳಿ ಎದುರಿಸುವವರಿದ್ದರೆ ಮುಂದೆ ಬರುವಂತೆ ಹೇಳಿದನು. 'ಹಾಲ್ದಾರ ಔಜ' ಎಂಬವನು ಮುಂದ ಬಂದು ಏನೇನನ್ನೋ ಹೇಳಿದನು; ವೇದಗಳಲ್ಲಿ ವಿಗ್ರಹಾರಾಧನೆಗೆ ಅವಕಾಶವಿದೆಯೆಂದನು 'ಸ್ವಾಮಿಜೀಯವರು ತೋರಿಸಿರಿ ಎಂದು ಕೇಳಿದುದಕ್ಕೆ ಇದೆಯೆಂದರೆ ಸಾಲದೇ' ಎಂದು ಹಟ ಹಿಡಿದನು. ನಮ್ಮ ವೇದಗಳಲ್ಲಿ ವಿಗ್ರಹಗಳ ಸಮಾಚಾರವೇ ಇಲ್ಲ. ಆಗಿನವರು ವಿಗ್ರಹಾರಾಧಕರಾಗಿರಲಿಲ್ಲ; ಎಂದು ಮುಂತಾಗಿ ಹೇಳಿದರು. ಸಭಾಧ್ಯಕ್ಷರು ಇದನ್ನೆಲ್ಲಾ ಆಲೈಸುತ್ತ ಸ್ವಾಮಿಯವರ ನಿಜವಾದ ಚತುರತೆಯನ್ನೂ, ವೇದಗಳ ವಿಷಯವಾಗಿ ಅವರಿಗಿರುವ ಪಾಂಡಿತ್ಯವನ್ನೂ ನೋಡಿ ಅವರಲ್ಲಿ ಒಂದು ತರದ ಭಕ್ತಿಭಾವವನ್ನಿರಿಸಿದರು. ಇದು ಈಚೆಗೆ ಅವರು ಬರೆದಿರುವ ಪತ್ರಗಳಿಂದ ತಿಳಿದುಬರುತ್ತಿದೆ. ಅದಿರಲಿ, ಸಭಾಧ್ಯಕ್ಷರು ಅತ್ತಕಡೆಗೆ ಎದ್ದು ಹೋದೊಡನೆಯೇ ಹಾಲ್ದಾರ ಔಜನು ಕ ತರ್ಕಕ್ಕೆ ಪೊದಲುಮಾಡಿದನು. ... ಕೆಲವು ಕುಂಟರು ಸೇರಿ . ಜಯ! ವಿಗ್ರಹಾರಾಧಕರಿಗೆ ಜಯ'!" ಎಂದು ಜಯಘೋಷವನ್ನು ಮಾಡುತ್ತ ಬೀದಿಗಳಲ್ಲಿ ನಡೆದರು. ಮತ್ತೆ ಕೆಲವು ದಿನಗಳ ಮೇಲೆ ಒಂದು 'ಜಾಹೀರಾತನ್ನು' (ಪ್ರಸಿದ್ಧಪತ್ರಿಕೆ) ಪ್ರಕಟಿಸಿದನು ಮುಖ್ಯಾಂಶವೇನಂದರೆ, "ದಯಾನಂದ ಸರಸ್ವತಿ'ಯೆಂಬ ಕುಮತಿಯೊಬ್ಬನ ಶಿಷ್ಯರು ಸನಾತನ ಧರ್ಮವನ್ನು ತುಚ್ಛೀಕರಿಸುತ್ತಿರುವರು; ಮತ್ತು ತಮ್ಮ ಕುಲದೇವತೆಗಳನ್ನು ಗಂಗಾಜಲದಲ್ಲಿ ಬಿಸುಡುತ್ತಿರುವರು; ಇದು ಸರಿಯಲ್ಲ, ಹೀಗೆ ಬಿಸುಡುವುದಕ್ಕಿಂತಲೂ ದಯೆಯಿಟ್ಟು ರಾಜಶ್ರೀ............ಗಾಗಲೀ ಶ್ರೀಯುತ............ಗಾಗಲೀ ಅಥವಾ ನನಗಾಗಲೀ ಮೊದಲೇ ತಿಳಿಸಿದರೆ ಆ ವಿಗ್ರಹಗಳನ್ನು ನಾನು ತಂದು ಪೂಜಿಸುವೆನು. ಮತ್ತು ಅವರು ಆಚರಿಸುವಂತಹ ಆಚರಣೆಯು ಪಾಪವು ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ" ಎಂದು! ಭಲೆ! ಹಲ್ದಾರ್ ಔಜ! ಭಲೆ!! ನಿನ್ನ ಸಾಹಸವೇ ಸಾಹಸ! ನಿನ್ನ ಹೃದಯದಲ್ಲಿ ದಯಾರಸವು ಸ್ವಲ್ಪ ಹೆಚ್ಚಾಗಿದೆಯೆಂದು ತೋರುತ್ತಿದೆಯಲ್ಲವೇ? ಇರಲಿ.

ದಿಗ್ವಿಜಯ ಸಾರಾಂಶ

ii

ದಯಾನಂದಸ್ವಾಮಿಯು ಇದನ್ನೇನಾದರೂ ಲಕ್ಷಿಸುವನೇ? ಎಂದಿಗೂ ಇಲ್ಲ. ತನ್ನ ಕರ್ತವ್ಯವನ್ನು ಲೆಕ್ಕಿಸಿ ಮುಂದೆ ನಡೆದನು. ಮುಂದೆ ಕಾಶೀಧಾಮಕ್ಕೆ ಬಂದನು

ಮೊದಲು "ಪಂಡಿತ ರಾಜಾರಾಮನು" ಪ್ರತಿಭಟಿಸಿದನು. "ಆತನು(ದಯಾನಂದನು)ಶಾಸ್ತ್ರಾರ್ಥದಲ್ಲಿ ಸೋತರೆ ಆತನ ನಾಸಿಕವನ್ನೇ ಕುಯ್ದು ಮಾನಭಂಗವನ್ನು ಮಾಡುವೆನು. ಜತೆಯಲ್ಲಿ ಒಂದು ಚೂರಿಯನ್ನು ತಂದೇತರುವೆನು." ಎಂದು ಹೇಳಿ ಕಳುಹಿದನು. ಆದರೆ ಸ್ವಾಮಿ, ಹೇಳಿದುದೇನಂದರೆ, ಶಾಸ್ತ್ರಾರ್ಥವಿಲ್ಲದಿದ್ದರೆ ಶಸ್ತ್ರಾರ್ಥವಯ್ಯಾ! ಎರಡು ಚೂರಿಗಳನ್ನು ತರುವವರಾಗಿರಿ! ಎಂದು! " ಆದರೆ, ಆ ಪಂಡಿತವರ್ಯನು ಇದುವರೆಗೂ ತರ್ಕಕ್ಕೇ ಬರಲೇ ಇಲ್ಲ. ಏತಕ್ಕೋ ಆ ಜಗದೀಶ್ವರನೇ ಬಲ್ಲ!

ಕಡೆಗೆ ದಯಾನಂದನ ಆಗಮನವು ಮಹಾರಾಜರಿಗೂ ಮುಟ್ಟಿತು. ಮಹಾರಾಜರು ಒಡನೆಯೇ ಪಂಡಿತವರ್ಯರಿಗೆಲ್ಲಾ ಆಮಂತ್ರಣವನ್ನು ಕೊಟ್ಟು ಕಳುಹಿದರು. ಸನ್ ಸಾವಿರದ ಎಂಟನೂರ ಅರವತ್ತೊಂಭತ್ತನೆಯ ನವಂಬರ್ ತಿಂಗಳ ಹದಿನಾರನೆಯ ದಿವಸ ಸಭೆಯು ಕೂಡಿತು. ಪ್ರಮುಖ ಪಂಡಿತವರ್ಯರೆಲ್ಲರೂ ಬಂದರು. ಆದರೆ, ರಾಜಾರಾಮ ಮಹಾಶಯನು ಮಾತ್ರ ಬರಲೇ ಇಲ್ಲ; ಚೂರಿಯನ್ನು ಕೈಯಲ್ಲಿ ಹಿಡಿದು ಶಾಸ್ತ್ರಾರ್ಥವನ್ನು ಮಾಡುತ್ತೇನೆಂದ ರಾಜಾರಾಮನ ಸುದ್ದಿಯೇ ಇಲ್ಲ! ಆದರೆ, ಆತನ ಶಿಷ್ಯನಾದ ಬಾಲಶಾಸ್ತ್ರಿಯು ದಯೆಮಾಡಿಸಿದ್ದನು. ಶಾಸ್ತ್ರಾರ್ಥವಿಚಾರಕ್ಕೆ ಪ್ರಾರಂಭವಾಯಿತು. ಮೊದಲೇ ಸ್ವಾಮಿಗಳು, ವೇದವಲ್ಲದೆ ಪುರಾಣಪ್ರಮಾಣಗಳನ್ನು ತಾನು ಸ್ವೀಕರಿಸಲಾರೆನೆಂದು ಹೇಳಿದರು; ಮತ್ತು ವೇದಗಳಲ್ಲಿ ಎಲ್ಲ ನಿದರ್ಶನವಿದೆಯೋ? ತೋರಿಸಿರೆಂದೂ ಹೇಳಿದರು. ನಿರುತ್ತರ! ಯಾರೂ ಏನನ್ನೂ ಹೇಳಲಾರದೆ ಹೋದರು. ಆದರೂ, ಪುರಾಣಗಳಿಂದ ಕೆಲವು ದರ್ಶನಗಳನ್ನು ತೆಗೆದುಹಾಕಿದರು. ಸ್ವಾಮಿಯವರು ಮೊದಲಿಂದ ಮಾತನ್ನು ಮತ್ತೊಮ್ಮೆ ಹೇಳಬೇಕಾಯಿತು. ಆಗ ಮಾಧವಾಚಾರ್ಯನೆಂಬ ಪಂಡಿತನು ತನ್ನ ಬಳಿಯಲ್ಲಿದ್ದ ಹಸ್ತಲಿಖಿತ ವೇದಪುಸ್ತಕದಿಂದ ಒಂದು ವಾಕ್ಯವನ್ನು ಹೇಳಿದನು.— "ಯೋಗ್ಯವಾದ ಹತ್ತು ದಿವಸಗಳ ನಂತರ ಈ ಪುರಾಣಗಳನ್ನು ಕೇಳುವವರಾಗಿರಿ!" ಇದಕ್ಕೆ ಅರ್ಥವೇನೆಂದು ಕೇಳಿದರು. ದಯಾನಂದನು ಸ್ವಲ್ಪ ಹೊತ್ತು ಆಲೋಚಿಸುತ್ತಿದ್ದನು. ಅಷ್ಟರಲ್ಲಿಯೇ ಕಿರುಕಳಿಗಳಾದ ಬ್ರಾಹ್ಮಣರಿಗೆ ಮೊದಲೇ ಸಿಟ್ಟಿನಿಂದ ಪ್ರಜ್ಞೆ ತಪ್ಪಿದ್ದುದರಿಂದ ಅವರು ಗುಣದೋಷ, ಸತ್ಯಾಸತ್ಯ ವಿವೇಚನಾಶಕ್ತಿ ಕುಂದಿದವರಾದಂತೆ ಕಾಣುತ್ತದೆ; ಎಲ್ಲರೂ "ಸೋತ! ಸೋತ!" ಎಂದು ಬೊಬ್ಬಿರಿದರು

ಪ್ರಿಯ ಪಾಠಕರೇ! ತಾವೇ ಆಲೋಚಿಸಿರಿ! ಪುರಾಣಗಳಿಂದ ಪ್ರಮಾಣಗಳನ್ನು ತೋರಿಸಬಾರದೆಂದು ದಯಾನಂದನು ಹೇಳಿದ್ದರೂ ಪುರಾಣದ ಮಾತನ್ನು ತೆಗೆದ ಪಂಡಿತರು ಶುದ್ಧ ಮೂರ್ಖರಲ್ಲವೆ? ಮತ್ತೆ ಪುರಾಣಗಳ ವಿಷಯದಲ್ಲಿ ಒಂದು ಮಾತು! ಪಾಠಕರಾದ ತಾವು ಬ್ರಾಹ್ಮಣರೇ ಆಗಿರಬಹುದು, ಆದರೂ ಯತ್ನವಿಲ್ಲ, ಕೋಪಿಸಬೇಡಿರಿ; ಕಂಡುದನ್ನೂ ತಿಳಿದುದನ್ನೂ ಕೇಳಿದುದನ್ನೂ ಹೇಳುವೆವು. ಸಾವಧಾನದಿಂದ ವಿಮರ್ಶಿಸಿರಿ!

ನಮ್ಮೀ ವಾಸಸ್ಥಳವಾದ ಭಾರತವರ್ಷದಲ್ಲಿ "ವೇದಗಳು ಅನಾದಿಕಾಲದವು" ಎಂಬುದನ್ನು ತಾವು ತಿಳಿದಿರುವರಷ್ಟೆ! ಆರ್ಯರು ಇಲ್ಲಿಯ ಅನಾರ್ಯರ ಸಂಪರ್ಕವನ್ನು ಮಾಡಿದರೆಂದು ತಾವು ಚರಿತ್ರೆಯಲ್ಲಿ ಓದಿರಬಹುದು! ಮತ್ತು ಈ ಸಂಪರ್ಕದಿಂದ ಆರ್ಯರ ನಡೆನುಡಿಯು ಕೊಂಚಮಟ್ಟಿಗೆ ಬದಲಾಯಿಸಿತು ಆಗ ಈ ಅನಾರ್ಯರ ಕೆಲವು ದುರ್ಗುಣಗಳನ್ನು ಆರ್ಯರೂ ಕಲಿಯುವವರಾದರು. ಕೆಲವು ಶತಮಾನಗಳ ತರುವಾಯ ವೇದಧರ್ಮಕ್ಕೆ ಕುಂದುಂಟು ಬಂದಿತು. ಪ್ರಾಣಿಹಿಂಸೆ, ಮೃಗಬಲಿ, ಇವೇ ಮೊದಲಾದ ಅತ್ಯಾಚಾರಗಳು ಮುಂದೆ ಬಂದುವು. ಇದೇ ಸಮಯದಲ್ಲಿ ದೇಶೋದ್ಧಾರಕರಾದ ಬುದ್ಧಮಹಾನುಭಾವನೂ, ವರ್ಧಮಾನಸ್ವಾಮಿಯೂ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಸನ್ಮಾರ್ಗವನ್ನು ಬೋಧಿಸುವವರಾದರು! ಈ ಈರ್ವರ ಬೋಧನೆಯೂ ಸ್ವಲ್ಪಮಟ್ಟಿಗೆ ಒಂದೇ ಎನ್ನುವ ಹಾಗೆ ತೋರುತ್ತಿದ್ದಿತು ಹೀಗೆ ಏಕಪ್ರಕಾರನೆಂದು ತೋರುವ ಮತಗಳು ಕಾಡ್ಗಿಚ್ಚಿನಂತೆ ಪ್ರಸರಿಸಿದವು. ಮತಪ್ರಚಾರವು ಕೂಡಲೇ ಪ್ರಾಬಲ್ಯಕ್ಕೆ ಬಂದಿತು. ಜೈನರೂ ಬುದ್ಧರೂ ಕಾರ್ಯನಿರ್ವಾಹದಕ್ಷರಾಗಿದ್ದರು. ಬ್ರಾಹ್ಮಣರೋ ಟಾಕುಟೀಕಿನಿಂದ (?) ಹೊಟ್ಟೆಕುಂಬ ಉಂಡು, ತಿಂದು, ಬೆಚ್ಚಗೆ ಮನೆಯಲ್ಲಿ ಕುಳಿತುಕೊಂಡಲ್ಲಿಯೇ ಡವಾಡೋಲು ಕೊಚ್ಚುವುದರಲ್ಲಿ ಮಾತ್ರ ಮಜಬೂತಲ್ಲದೆ(?) ಖಡಾಖಡಿ ಹೆಣಗಾಟದಲ್ಲಿ ಅಮ್ಮಣಿಗರೇ ಸೈ! ತಮ್ಮ ಮತವು ಕ್ಷೀಣತೆ ಹೊಂದುವುದನ್ನು ನೋಡಿ, ಸಿಟ್ಟಿನಿಂದ ಪರವಶರಾಗಿ ಸತ್ಯಾಸತ್ಯ, ಗುಣ-ದೋಷ ವಿವೇಚನಾಶಕ್ತಿ ಕುಂದಿ ವಿಚಾರಹೀನರಾದಾಗ ಮಾತ್ರ ಕೋಪೋಪಶಮನದ ಸರಿಯಾದ ಮಾರ್ಗವನ್ನು ಕಾಣಲಾರದೆ ಕಂಡುದೆಲ್ಲವೂ ಬೌದ್ಧಮತವೆಂದು ನಂಬಿ, ಪುರಾಣಗಳೇ ಮುಂತಾದುವುಗಳಲ್ಲಿ ಮನಸ್ಸಿಗೆ ಬಂದಂತೆ ಬೌದ್ಧಮತವನ್ನು—ಮತ್ತಿತರ ಮತಗಳನ್ನು ಖಂಡಿಸುವ ವಿಷಯಗಳನ್ನು ಕುರಿತು ಬೇಕಾದ ಶತಕಂಥೆ

ಗಳನ್ನು ಬರೆದಿಟ್ಟರು. ಬೇರೆ ಮೂಲಗ್ರಂಥಗಳಲ್ಲಿಯೂ ಮನಸ್ಸಿಗೆ ಬಂದ ಸಂಗತಿಗಳನ್ನು ಬರೆದಿಟ್ಟರು. ಇವುಗಳನ್ನು ಜನರು ನಂಬಲಾರರೆಂದು ಪುರಾಣಗಳ ಉತ್ಕೃಷ್ಟತೆಯನ್ನು ಕುರಿತು ತಮಗೆ ಮನಬಂದಂತೆ ಅನಾದಿ ಗ್ರಂಥಗಳಾದ ವೇದಗಳಲ್ಲಿ ಕೂಡ ಅಸಂಬದ್ಧ ಪ್ರಲಾಪಗಳನ್ನು ಬರೆದಿಟ್ಟಿರುವರು. ಆದುದರಿಂದಲೇ ಶ್ರೇಷ್ಠವಾದ ವೇದಗಳಲ್ಲಿಯೂ ಕೆಲವು ಕೃಷ್ಣವರ್ಣದ ಭಾಗಗಳಿವೆ ! ಉದಾಹರಣೆಗೋಸುಗ ಇಲ್ಲಿ ಒಂದನ್ನು ವಿವರಿಸುವೆವು. ಸರ್ವರೂ ಓದಿರಬಹುದಾದ ರಾಮಾಯಣವನ್ನೇ ತೆಗೆದುಕೊಳ್ಳುವ— ಶ್ರೀರಾಮಚಂದ್ರನ ಸದ್ಗುಣಗಳನ್ನು ಓದಿರುವವರು ಎಂದಾದರೂ ಅದೇ ಶ್ರೀರಾಮಚಂದ್ರನು ಕಲ್ಲೆದೆಯವನೂ ಕ್ರೂರನೂ ಒಮ್ಮಿಂದೊಮ್ಮೆಯೇ ಆಗುವನೆಂದು ಹೇಳಲಾಪರೇ? ಸೀತಾವನವಾಸವು ಕೇವಲ ಕವಿಯ ಕಲ್ಪನಾಕಥೆ! (?) ಏಕೆಂದರೆ, ವಾಲ್ಮೀಕಿ ವಿರಚಿತ ರಾಮಾಯಣದ ಪ್ರಥಮಭಾಗವನ್ನೂ (ಷಟ್‌ಕಾಂಡ) ಮತ್ತೆ ದ್ವಿತೀಯ ಭಾಗ ಉತ್ತರಕಾಂಡವನ್ನೂ ಓದುವುದಾಗಲಿ ! ಅದರಿಂದ ಕಂಡುಬರುವುದೇನು ? ಭಾಷಾವ್ಯತ್ಯಾಸ, ಶೈಲಿಯವ್ಯತ್ಯಾಸ, ವ್ಯಾಕರಣವ್ಯತ್ಯಾಸ! ಕಾರಣ? ಪೂರ್ವಕಾಂಡವು ವಾಲ್ಮೀಕಿಯಿಂದಲೇ ಬರೆಯಲ್ಪಟ್ಟಿರಬಹುದು ! ಉತ್ತರಕಾಂಡವು ಮತ್ತಾರಿಂದಲೋ ಈಚೆಗೆ ಬರೆಯಲ್ಪಟ್ಟಿರುವುದೆಂಬುದರಲ್ಲಿ ಸಂದೇಹವೇ ಇಲ್ಲ. (?) ಇನ್ನೊಂದು! ಅದೇ ರಾಮಾಯಣದ ಈ ಕೆಳಗಿನ ಶ್ಲೋಕವೊಂದನ್ನು ಓದುವವರಾಗಿರಿ ?—

> "ಯಥಾಹಿ ಚೋರ: ಸ ತಥಾ ಹಿ ಬುದ್ಧ:— ತಥಾಗತಂ
> ನಾಸ್ತಿಕಮತ್ರವಿದ್ಧಿ || ತಸ್ಮಾತ್ ಧಿಯ: ಶಕ್ಯಮತ:
> ಪ್ರಜಾನಾಂ–ನ ನಾಸ್ತಿಕೇ ನಾಭಿಮುಖೋ ಬುಧಸ್ಯಾತ್ ||"
>
> (ಅಯೋಧ್ಯಾಕಾಂಡ ೧೦೯.೩೪)

ಬೌದ್ಧಾವತಾರವಾವಾಗ? ರಾಮಾವತಾರವಾವಾಗ? ರಾಮಾವತಾರವಾದ ಮೇಲಲ್ಲವೇ ಬುದ್ಧನು ಬಂದುದು? ಹಾಗಾದರೆ ಇನ್ನು ಮುಂದೆ ಬರತಕ್ಕ ಬುದ್ಧನ ಶಿಷ್ಯರ ನಡವಳಿಕೆಯನ್ನು ಕುರಿತು ಆಗ ಅರಸನಾಗಿದ್ದ ರಾಮನಿಗೆ ಮುನಿಯು ಹೇಳಲು ಕಾರಣವೇನು? ಏನಾದರೂ ಅರ್ಥವಿದೆಯೇ? ಎಂದೆಂದಿಗೂ ಇಲ್ಲ! ಇದೇ ಪುರಾಣದ ಔತ್ಕೃಷ್ಟ್ಯ!!!

ದಯಾನಂದನಾದರೋ ಅಂದಿನಿಂದ ಇನ್ನೂ ಉತ್ತೇಜಿತನಾಗಿ ಅಧಿಕ ಶ್ರದ್ಧೆಯನ್ನು ವಹಿಸಿ ಕೆಲಸಮಾಡತೊಡಗಿದನು. ಇನ್ನೂ ವಿಶೇಷ ಜಯವೇ ಪ್ರಾಪ್ತವಾದುದರಿಂದ ಆ ವಿಷಯವನ್ನಿಲ್ಲಿ ವಿಶೇಷವಾಗಿ ಬರೆಯಲಾರೆವು. ಮುಖ್ಯ ಸಂಗತಿಗಳನ್ನು ಮಾತ್ರ ಅದೂ ಒಂದೆರಡನ್ನು ಇಲ್ಲಿ ಹೇಳುವೆವು.

ಕಲಿಕತ್ತೆಗೆ ಸ್ವಾಮಿಯು ಹೋಗಿ ಅಲ್ಲಿಯ ಜನರಿಗೆ ವೇದಗಳಲ್ಲಿ ಶ್ರದ್ಧೆಯನ್ನು ಉಂಟುಮಾಡುವ ಹಾಗೆ ಬೋಧಿಸಿದನು. ಅನೇಕ ಭಾಷಣಗಳನ್ನು ಕೊಟ್ಟನು. ಜನರು ಬಿಟ್ಟೊಬ್ಬರಾಗಿ ಕಣ್ಣು ಬಿಡತೊಡಗಿದರು. ಸನ್ ಸಾವಿರದ ಎಂಟನೂರ ಎಪ್ಪತ್ತನಾಲ್ಕನೆಯ ಸಂವತ್ಸರದಲ್ಲಿ ಶ್ರೀಯುತ ರಂಜಾಜಯಕಿಶನ್‌ದಾಸ್. ಸಿ. ಐ ಈ. ಅವರು ಸ್ವಾಮಿಯವರಿಂದ ವಿರಚಿತವಾದ "ಸತ್ಯಾರ್ಥ ಪ್ರಕಾಶ" ವನ್ನು ಪ್ರಕಾಶಪಡಿಸಿದರು. ಇನ್ನೆರಡು ವರ್ಷಗಳಲ್ಲಿ ವೇದಗಳ ಪರಿವರ್ತನವೂ ಸ್ವಲ್ಪಮಟ್ಟಿಗಾಯಿತು. ಇನ್ನೆರಡು ವರ್ಷಗಳಲ್ಲಿ ಉತ್ತರ ಹಿಂದುಸ್ತಾನದ ಮುಖ್ಯ ಮುಖ್ಯ ಸ್ಥಳಗಳಲ್ಲೆಲ್ಲಾ "ಆರ್ಯಸಮಾಜ"ವೆಂಬ ಸಂಘದ ಶಾಖೆಗಳನ್ನು ನಿರ್ಮಿಸಿದನು. ಸಂಸ್ಕೃತಭಾಷಾಸಂಜೀವನೆಗೋಸುಗ ಅನೇಕ ಮಹನೀಯರನ್ನು ಪಾಠಶಾಲೆಗಳನ್ನಿರಿಸಲು ಬೇಡಿಕೊಂಡನು.

ಈ ಮಧ್ಯೇ ಅನೇಕ ತಡವೆ ದಯಾನಂದನನ್ನು ವಿಷಪ್ರಯೋಗದಿಂದ ಕೊಲ್ಲುವ ಒಳಸಂಚುಗಳು ನಡೆದವು. ಆದರೆ ಭಾರತ ಮಾತೆಯ ಪುಣ್ಯಬಲದಿಂದಲೋ ಮತ್ತೇತರಿಂದಲೋ ಕಾಣೆವು. ಅವೆಲ್ಲ ನಿಷ್ಫಲವಾದುವು.

ಬೊಂಬಾಯಿ ನಗರದಲ್ಲಿ "ಆರ್ಯಸಮಾಜಸ್ಥಾಪನೆ"ಯಾಯಿತು. ಪೂನಾ ನಗರದಲ್ಲಿ ಬೀಜಗಳನ್ನು ಬಿತ್ತಿದುದಾಯಿತು. ಕಡೆಗೆ ಪಂಚನದಿಗಳ ದೇಶಕ್ಕೂ ಬಂದುದಾಯಿತು. ಅಲ್ಲೆಲ್ಲಾ ಆರ್ಯಸಮಾಜದ ಶಾಖೆಗಳ ಸ್ಥಾಪನವೂ ಆಯಿತು. ಕೊನೆಗೆ ಭಾರತೋದ್ಧಾರಕ್ಕೆ ತಕ್ಕ ವಿದ್ಯಾಭ್ಯಾಸವು ಅವಶ್ಯಕವೆಂದು ತೋರಿತು. ವಿದ್ಯಾಭ್ಯಾಸಕ್ಕಾಗಿ ಮುಂದೆ ತರುವ ಉಪಾಯಗಳನ್ನು ಕಂಡುಹಿಡಿದನು. ಇವೇ ಪ್ರಸಿದ್ಧ ಗುರುಕುಲಗಳು.

ಇಷ್ಟಾಗುವುದರೊಳಗಾಗಿ ಸ್ವಾಮಿಯವರು ಬೇನೆಬಿದ್ದರು. ಆರೋಗ್ಯವು ಪೂರ್ಣವಾಗಿ ಕೆಟ್ಟಿತು. ಆದರೂ ತಮ್ಮ ಕೆಲಸವನ್ನು ಮಾಡುತ್ತಲೇ ಇದ್ದರು. ಒಬ್ಬ ಪಾಶ್ಚಿಮಾತ್ಯ ವೈದ್ಯನಿಂದ ಪುನರಾರೋಗ್ಯ ಭಾಗ್ಯವನ್ನು ಪಡೆದರು. ಆದರೆ ಬಹುಕಾಲದ ವರೆಗಲ್ಲ ಸನ್ ಸಾವಿರದ ಎಂಟನೂರ ಎಂಭತ್ತಮೂರನೆಯ ವರ್ಷದಲ್ಲಿ ಜೋದ್‌ಪುರಕ್ಕೆ ಬಂದು ಅಲ್ಲಿಯ ಮಹಾರಾಜರ (ಇವರ ಗುಣಾವಳಿ ಜನಜನಿತವಾಗಿಯೇ ಇದೆ.[?]) ಅತಿಥಿಯಾಗಿ ನಿಂತು ಕೊನೆಗೆ ವಿಷಪ್ರಯೋಗದಿಂದ ಬಳಲಿ ಬಳಲಿ ಪ್ರಾಣವನ್ನು ತೊರೆದರು. ಮಾರಣೆಯದಿನ ಶವಸಂಸ್ಕಾರವೂ ಯಥಾವಿಧಿಯಾಗಿ ನೆರವೇರಿಸಲ್ಪಟ್ಟಿತು. ಕಡೆಗೂ ಒಳಸಂಚಿನವರ ಕೃತ್ರಿಮ ಸಂಧಾನವೇ ಜಯಿಸಿತಲ್ಲವೆ? ಕಾಲಪುರುಷ! ನಿನ್ನ ಬಲವೇ ಬಲವು. ನಿನ್ನ ಬಲದ ಮುಂದೆ ಕೆಲವು ಸಂದರ್ಭದಲ್ಲಿ ದೈವಬಲವು ಕೂಡ ವಂಚಿಸುವದೆಂಬುದು ಈಗಲೀಗ ನಿರ್ಧಾರವಾಯಿತು.!!!

ಆರ್ಯ ಸಮಾಜ.

(ಸಮಾಜದ ಉದ್ದೇಶ ಮತ್ತು ಕರ್ತವ್ಯಗಳು)

೧ ಪರಮಾತ್ಮನು ಸರ್ವಕ್ಕೂ ಮೂಲನು. ತಿಳುವಳಿಕೆಗೂ ಇದರಿಂದ ತಿಳಿಯಲ್ಪಡುವ ಬೆಳಕಿಗೂ ಆತನೇ ಮೂಲನು!

೨ ಇಂತಹ ಆತನೇ ಪೂಜಾರ್ಹನು, ಸತ್‌ಚಿತ್ ಆನಂದ ಮಯನು, ನಿರುಪಮನು, ನಿರಂಜನನು, ನಿರಹಂಕಾರಿ, ದೇವಾ ದಿದೇವನು, ನಿತ್ಯನು, ಸತ್ಯಮೂರ್ತಿ, ಆದ್ಯಂತವಿಲ್ಲದವನು ಸಮಸ್ತಕ್ಕೂ ಆಧಾರನಾದವನು ಆ ಪರಮಾತ್ಮನೊಬ್ಬನೇ!

೩ ವೇದಗಳೇ ಸಕಲ ಜ್ಞಾನಕ್ಕೂ ಮೂಲವು! ಅವನ್ನೇ ಮೊದಲು ಓದಬೇಕು. ಇದು ಪ್ರತಿಯೊಬ್ಬ ಆರ್ಯನ ಧರ್ಮ ವಾಗಿದೆ.

೪ ಅನೃತವನ್ನು ಒಡನೆಯೇ ತ್ಯಜಿಸುವುದಕ್ಕೂ ಸತ್ಯವ ನ್ನು ಸ್ವೀಕರಿಸುವುದಕ್ಕೂ ನಾವು ಸಿದ್ಧರಾಗಿರಬೇಕು.

೫ ಪ್ರತಿಯೊಂದು ಕ್ರಿಯೆಯನ್ನೂ ಧರ್ಮಕ್ಕೆ ಅನುಸಾರ ವಾಗಿ ಮಾಡಬೇಕು. ಎಂದರೆ ಸತ್ಯಾಸತ್ಯ ವಿವೇಚನೆ ಮಾಡಿ ಮತ್ತೆ ಕ್ರಿಯೆಯನ್ನು ಮಾಡಬೇಕು.

೬ ಆರ್ಯ ಸಮಾಜದ ಮುಖ್ಯೋದ್ದೇಶವೇನಂದರೆ, ಪ್ರಪಂಚಕ್ಕೆ ಒಳ್ಳೆಯದನ್ನು ಮಾಡಬೇಕೆಂಬುದು; ಇದು ಹೇ ಗೆ ಸಾಧ್ಯವು! ಪ್ರಕೃತ್ಯರ್ಥ ಮೂಲಕ ಮತ್ತೆ? ಪಾರಮಾರ್ಥಿ ಕ ಮತ್ತು ಸಾಂಸರ್ಗಿಕ ಪ್ರೇಮದ ಮೂಲಕ.

೭ ನಮ್ಮ ಪ್ರತಿಯೊಂದು ಕೆಲಸವೂ ನ್ಯಾಯವಾದುದೂ ಪ್ರೇಮದ ಅಂಕುರವುಳ್ಳದೂ ಆಗಿರಬೇಕು.

೮ ಜ್ಞಾನದ ಬೆಳಕನ್ನು ಸರ್ವರಲಿಯೂ ಹಂಚಬೇಕು. ಅಜ್ಞಾನವನ್ನು ಕಂಡೆಡೆಯಲ್ಲೆಲ್ಲಾ ಅದನ್ನು ಮೂಲೆಗೊತ್ತಿ ನಾಶಪಡಿಸಬೇಕು.

೯ ಸ್ವಾರ್ಥತ್ಯಾಗಿ (?) ಗಳಾಗಿ ಎಲ್ಲರೂ ಬಾಳಬೇಕು.

೧೦ ಪ್ರತಿಯೊಬ್ಬನೂ ಸಮಾಜದ ಇರವಿಕೆಗೆ ತನ್ನಿಂದಾ ದಷ್ಟು ಮಟ್ಟಿಗೆ ಸಮಯ ಸಿಕ್ಕಿದಾಗಲೆಲ್ಲ ಸಹಾಯ ಮಾಡ ಬೇಕು.

"ಆರ್ಯಸಮಾಜ" ವು ವೇದಧರ್ಮವೆಂದೆನಿಸಿಗೆ. ಇದ ಕ್ಕೂ ವೇದಾಂತಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಆದರೂ ವೇದಾಂತವನ್ನು ನಂಬುವುದಿಲ್ಲ. ದೇವರು ಆತ್ಮ ಮತ್ತು ಪ್ರ ಕೃತಿ ಇವುಗಳಲ್ಲಿ "ಆರ್ಯಸಮಾಜ" ವು ಪೂರ್ಣ ಭರವಸೆ ಯನ್ನಿಟ್ಟಿರುತ್ತದೆ. ಪುನರ್ಜನ್ಮದ ವಿಷಯವನ್ನು ಕೂಡ ಸಮಾ ಜದವರು ನಂಬಿರುತ್ತಾರೆ. ಭಾರತ ವರ್ಷದಲ್ಲಿ ಏಳುನೂರು ಆರ್ಯಸಮಾಜ ಶಾಖೆಗಳಿವೆ.

ಭಾರತವರ್ಷದಲ್ಲಿ ಆದರ್ಶದ ವಿದ್ಯಾಭ್ಯಾಸವೆಂದೆನಿಸಲ್ಪ ಡುವ ಗುರುಕುಲವಿದ್ಯಾಭ್ಯಾಸವು ಸಮಾಜದವರಿಂದ ಕೊಡ ಲ್ಪಡುತ್ತಿದೆ

ಪ್ರಿಯವಾಚಕರೇ?

ನಾವಿನ್ನು ಬೀಳ್ಕೊಳ್ಳುವೆವು. ಸಮಯವು ದೊರೆತಾಗ ತಮ್ಮನ್ನು ಮತ್ತೆ ಕಾಣುವೆವು. ಮುಖ್ಯ ಪರಿಚಿತಿಯನ್ನು ತಮ ಗೆ ಸ್ವಲ್ಪ ಮಟ್ಟಿಗೆ ಉಂಟುಮಾಡಿಕೊಟ್ಟಿರುವೆವು. ಇನ್ನು ಮುಂದೆ ಮಹತ್ವವನ್ನು ಕುರಿತು ಒಂದೆರಡು ಮಾತನ್ನು ಹೇ ಳಬೇಕಾಗಿದೆ. ಅದನ್ನು ಅವಕಾಶವಾದಾಗ ವಿಜ್ಞಾಪಿಸಿಕೊ ಳ್ಳುವೆವು. ಪ್ರಕೃತದಲ್ಲಿ ಇಲ್ಲಿಯವರೆಗೆ ಆದರಿಸಿ ನಮ್ಮ ನಿವೇ ದನವನ್ನು ಆದರಿಸಿ ಅವಧರಿಸಿದುದಕ್ಕಾಗಿ ಚಿರಕೃತಜ್ಞರಾಗಿ ರುವೆವು. ನಮಸ್ತೇ!

ಕೃತಜ್ಞತಾಪೂರ್ವಕ ಸ್ವೀಕಾರ ಮತ್ತು ಅಭಿಪ್ರಾಯವು.

"Philosophy & Religion" ಇದೊಂದು ವಾರಪತ್ರಿಕೆ. ಕೊಲ್ಹಾಪುರದ ಕರವೀರಮಠದ ಶ್ರೀಜಗದ್ಗುರುಗಳ ಪ್ರೈವೇಟಸೆಕ್ರೆಟರಿಯಾದ ಪಂಡಿತರು ಶ್ರೀಯುಕ್ತ ಎಮ್. ಚಕ್ರವರ್ತಿ ಎಮ್. ಎ ಅವರು ಇದನ್ನು ಹೊರಡಿಸುತ್ತಿರುವರು. ಇದರ ವಾರ್ಷಿಕ ಚಂದಾ ಸ್ಥಳದವರಿಗೆ ೩-೦-೦ ಪರಸ್ಥಳದವರಿಗೆ ವಿ. ಪಿ. ಹಾಸೇ ಸೇರಿ ೪-೦-೦.

ಧರ್ಮವೂ ಮತವೂ ಎಲ್ಲರಿಂದಲೂ ಮಾನ್ಯವೆನಿಸುವದಲ್ಲದೆ, ಇವೆರಡೂ ಯಾವಾಗಲೂ ನಿರ್ವಿಕಾರವಾಗಿರುವದೆಂದ ಬಳಿಕ ಧರ್ಮ ಮತ್ತು ಮತದ ನಿಜವಾದ ಸ್ವರೂಪವನ್ನು ಸ್ಪಷ್ಟಪಡಿಸುವ ಉದ್ದೇಶದಿಂದ ಸಮರ್ಥರಾದ ದೇಶಭಕ್ತರು ಪ್ರಕಾಶಪಡಿಸುತ್ತಿರುವ ಈ ಪತ್ರಿಕೆಯ ವಿಚಾರವಾಗಿ ನಾವು ಹೆಚ್ಚು ಹೇಳುವದೇನಿದೆ? ಮುಖ್ಯವಾಗಿ, ಅವಲೋಕನೀಯ ಮತ್ತು ಅನುಕರಣೀಯವಾದ ಈ ಪತ್ರಿಕೆಯನ್ನು ಕಳುಹುತ್ತಿರುವದಕ್ಕಾಗಿ ನಮ್ಮ ಸನ್ಮಾನ್ಯಭ್ರಾತೃಗಳಾದ ಶ್ರೀಯುತ ಚಕ್ರವರ್ತಿಯವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನೊಪ್ಪಿಸುವೆವಲ್ಲದೆ, ನಮ್ಮ ಮಾತೃಮಂದಿರದ ವಿದ್ಯಾರ್ಥಿಸಂಘದವರು ಈ ಪತ್ರಿಕೆಯಿಂದ ತಮಗಾಗುತ್ತಿರುವ ಪ್ರಯೋಜನಕ್ಕಾಗಿ ನಮ್ಮ ಭ್ರಾತೃಗಳ ಉಪಕಾರವನ್ನು ಸ್ಮರಿಸುತ್ತಿರುವರು.

"ಪ್ರಿಯಂವದಾ" (ಶಾರದಾಗ್ರಂಥಮಾಲಾ ಪ್ರಥಮ ಕುಸುಮ), ಡೆಮ್ಮಿ ಅಷ್ಟಪತ್ರದ ಆಕಾರ , ಪುಟಸಂಖ್ಯೆ ೪೬ ಬೆಲೆ ೦—೪—೦.

ಈ ಪುಸ್ತಕವನ್ನು ರಚಿಸಿದವರು ನಮ್ಮ ಧರ್ಮಭಗಿನಿಯರಾದ ಶ್ರೀಮತಿ ಕಲ್ಯಾಣಮ್ಮನವರು. ಗ್ರಂಥಕರ್ತ್ರಿಯರು ವಿದ್ಯಾವತಿಯರೂ ಲೋಕಾನುಭವಜ್ಞರೂ ವ್ಯವಹಾರ ತತ್ವಜ್ಞರೂ ಆಗಿರುವುದರಿಂದ ಬಾಲ-ಬಾಲೆಯರಿಗೂ ಓದಲನುಕೂಲಿಸುವಷ್ಟು ಸುಲಭಶೈಲಿಯಲ್ಲಿ ಇದನ್ನು ರಚಿಸಿರುವರಲ್ಲದೆ ಸ್ವಲ್ಪಮಟ್ಟಿಗೆ ಓದುಕಲಿತ ಮಹಿಳೆಯರೂ ಓದಲಾಗುವಂತೆ ವಿರಳವಿರಳವಾಗಿಯೂ ಸ್ಪಷ್ಟವಾಗಿಯೂ ದಪ್ಪ ಅಕ್ಷರಗಳಲ್ಲಿ ಮುದ್ರಿಸಿರುವರು. ಈ ಕಥಾಭಾಗವು ಬಾಲ್ಯವಿವಾಹ-ವರದಕ್ಷಿಣೆಗಳೇ ಮೊದಲಾದ ಪದ್ಧತಿಗಳನ್ನು ತಪ್ಪಿಸಿ, ಸಮಾಜದಲ್ಲಿ ಸುಖಶಾಂತಿಗಳು ನೆಲೆಗೊಳ್ಳುವಂತೆ ಸುಧಾರಣೆಗೆ ತರಬೇಕೆಂಬ ಉದ್ದೇಶದಿಂದ ಕೂಡಿದುದಾಗಿ ತಿಳಿಯುತ್ತಿದೆಯಾದುದರಿಂದ ಸುಧಾರಕರೆಲ್ಲರೂ ಇದನ್ನು ಓದಬಹುದಾಗಿದೆ.

ಮುಖ್ಯವಾಗಿ ನಮ್ಮ ಕರ್ಣಾಟಕಸ್ತ್ರೀಪ್ರಪಂಚದಲ್ಲಿ ಸ್ತ್ರೀಕರ್ತೃತ್ವದಿಂದ ಅಲ್ಲಿಗಿಲ್ಲಿಗೆ ಲೇಖನಕಾರ್ಯಗಳು ನಡೆಯುತ್ತಿದ್ದರೂ ಅದನ್ನು ಸ್ವಪ್ರಯಾಸ, ಸ್ವಾತಂತ್ರ್ಯ, ನಿಷ್ಕಾಮಬುದ್ಧಿ, ಸ್ಥಿರಪ್ರಯತ್ನಗಳಿಂದ ಪ್ರಕಾಶಕ್ಕೆ ತಂದು ಪತ್ರಿಕಾಪ್ರಕಟನಕಾರ್ಯವನ್ನು ಹಿಡಿಯುವ ಸಾಹಸವು ಅವರಲ್ಲಿ ಉಂಟಾಗಿಲ್ಲವೆಂಬವೇ ಮೊದಲಾದ ಆಕ್ಷೇಪಗಳು ನಮ್ಮ ಭ್ರಾತೃಮುಖದ್ವಾರಾ ಹೊರಬೀಳುತ್ತಿದ್ದುವು. ಈ ಸಂದರ್ಭದಲ್ಲಿ ನಮ್ಮ ಹಿತೈಷಿಣಿಯು ಹುಟ್ಟಿದಳಾದರೂ, ಮೊದಲು ಕಾಲೆತ್ತಿ ಮುಂದೆ ಒಂದುದರ ಫಲವಾಗಿ ಬಂಧುಗಳಲ್ಲಿ ಸಂದೇಹಗೊಂಡು ಹಿಂದೆಮುಂದೆಯಾಡಿಕೊಳ್ಳುವವರು ಹಲವು ಮಂದಿಯಾದರು. ಅದು ಹೇಗೂ ಇರಲಿ, ಈಗದರ ಚಿಂತೆ ನಮಗಿಲ್ಲ. ಮಂದಿಯ ಬಾಯಿಕಟ್ಟಲು ನಮ್ಮ ಧರ್ಮಭಗಿನಿಯರಿನ್ನಾರಾದರೂ ಮುಂದೆ ಬಂದಾರೆಂದು ನೋಡುತ್ತಿದ್ದ ನಮಗೆ " ಭಾಗ್ಯೋದಯವು " ಒಂದು ಬಾರಿ ತಲೆದೋರಿ ಆಶೆಯುಂಟುಮಾಡಿ, ಮತ್ತೆರಡನೆಯ ಬಾರಿ ತಲೆದೋರದೆ ಮರೆಯಾಗಿ ಆಶಾಭೇದನ ಮಾಡಿಬಿಟ್ಟಿತು. ದೈವಾನುಗ್ರಹದಿಂದ ಈಗ ನಮ್ಮ ಧರ್ಮಭಗಿನಿ ಕಲ್ಯಾಣಮ್ಮನವರು ಪ್ರಯಾಸಪಟ್ಟು, ಧೈರ್ಯವನ್ನವಲಂಬಿಸಿ, " ಸರಸ್ವತೀ" ಪಕ್ಷಪತ್ರಿಕೆಯನ್ನೂ, ಪ್ರಕಟನೆಯನ್ನೂ 'ಶಾರದಾಗ್ರಂಥಮಾಲಾ' ಹೆಸರಿಂದ ಪುಸ್ತಕ ಪ್ರಕಟನೆಯನ್ನೂ ಕೈಕೊಂಡು ಸಮಾಜದ ಉದ್ಧಾರಕ್ಕಾಗಿ ಮುಂದೆ ನಿಂದಿರುವುದನ್ನು ನೋಡಿ ನಾವು ಇವರನ್ನು ಮನಃಪೂರ್ವಕವಾಗಿ ಅಭಿನಂದಿಸುವೆವು.

ಈ ಗ್ರಂಥಮಾಲೆಯೂ, ಪಕ್ಷಪತ್ರಿಕೆಯೂ ವಿಶೇಷವಾಗಿ ಸಂಘದಸಹಾಯದ್ರವ್ಯದ ಆಧಾರದಿಂದಲೇ ಪ್ರಕಾಶವಾಗುತ್ತಿರುವುದಲ್ಲದೆ ಸಂಘದವರೆಲ್ಲರ ಅಭಿಮಾನಕ್ಕೂ ಪಾತ್ರವಾಗಿರುವುದರಿಂದ ಅಕಾಲದಲ್ಲಿ ನಿಂತುಹೋಗುವವೆಂಬ ಭೀತಿಗೆ ಕಾರಣವಿಲ್ಲವೆಂಬುದು ನಮ್ಮ ನಂಬಿಕೆ.

ಈ ಪುಸ್ತಕದ ವಿಚಾರವಾಗಿ ನಾವು ಹೆಚ್ಚು ಹೇಳುವವರಾಗಿಲ್ಲವಾದರೂ, ನಮ್ಮ ಸೋದರಿಯರೆಲ್ಲರೂ ಸಹಜಸೌಜನ್ಯಭಾವದಿಂದ ಇದನ್ನು ತರಿಸಿಕೊಂಡು ಓದುವುದರಿಂದ ಗ್ರಂಥಕರ್ತ್ರಿಯರ ಪ್ರಯತ್ನಕ್ಕೆ ಪ್ರೋತ್ಸಾಹವನ್ನುಂಟುಮಾಡುವದು ಅಗತ್ಯವೆಂದು ಸೂಚಿಸುವೆವಲ್ಲದೆ. ಇವನ್ನಾದರೂ ನಮ್ಮ ಬಂಧುಗಳು ಸ್ತ್ರೀಕರ್ತೃತ್ವದಿಂದಲೇ ಹೊರಡುವ ಪತ್ರಿಕೆಗಳೆಂದು ದೃಢವಾಗಿ ನಂಬಿ, ನಿಷ್ಕಲ್ಮಷಹೃದಯದ ಭ್ರಾತೃಸಹಾಯವನ್ನು ಮಾಡುವವರಾದಾರೆಂದು ಭಾವಿಸಿ ವಿರಮಿಸುವೆವು.

ಸಂ. ನಂದಿನಿ.

ಉಪಾಧ್ಯಾಯರ ಘನತೆ ಮತ್ತು ಉತ್ತರವಾದಿತ್ವವು*

" ವಿದಲಯತಿ ಕುಬೋಧಂ ಬೋಧಯತ್ಯಾಗಮಾರ್ಥಂ
ಸುಗತಿ ಕುಗತಿ ಮಾರ್ಗೌ ಪುಣ್ಯಪಾಪೇ ವ್ಯನಕ್ತಿ ||--
ಅವಗಮಯತಿ ಕೃತ್ಯಾಕೃತ್ಯಭೇದಂ ಗುರುರ್ಯೋ
ಭವಜಲನಿಧಿ ಪೋತಸ್ತಂ ವಿನಾನಾಸ್ತಿ ಕಶ್ಚಿತ್ || "

ಮಹನೀಯರಾದ ಸಭಾಸದರೆ! ಸಭಾಧ್ಯಕ್ಷರೆ!!

ಈ ಸಭೆಯಲ್ಲಿ ಬಾಯಿತೆರೆಯುವ ಯೋಗ್ಯತೆ ಸ್ವಲ್ಪವೂ ಇಲ್ಲದ ನಾನು, ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಕುತೂಹಲವುಳ್ಳವನಾಗಿರುವೆನು. ಇದು ಮೌಢ್ಯವೆಂದೇ ನನ್ನ ಭಾವನೆ. ಆದರೂ,—

" ಶ್ಲೋಕಸ್ಸು ಶ್ಲೋಕತಾಂ ಯಾತಿ ಶ್ರೋತರಿ ಜ್ಞಾತರಿ ಸತಿ ||
ಶ್ರೋತರ್‍ಯಜ್ಞಾತರಿ, ಪ್ರಾಪ್ತೇ ಲಕಾರಸ್ತತ್ರಲುಪ್ಯತೆ || "

ಎಂಬ ಆರ್ಯೋಕ್ತಿಯನ್ನು ನಂಬಿ, ಮೌಢ್ಯದೋಷದಿಂದ ಹೊರಬೀಳುವ ತಪ್ಪುಗಳನ್ನು ಮನ್ನಿಸಬೇಕೆಂಬುದೇ ನನ್ನ ಪ್ರಥಮ ಪ್ರಾರ್ಥನೆಯಾಗಿದೆ.

ಪ್ರಥಮದಲ್ಲಿ ಹೇಳಿರುವ ಶ್ಲೋಕದಿಂದ ಉಪಾಧ್ಯಾಯರ (ಗುರುಗಳ) ಘನತೆ ಅಥವಾ ಉತ್ತರವಾದಿತ್ವವು ಚೆನ್ನಾಗಿ ವ್ಯಕ್ತಪಡುತ್ತದೆ. ಈ ಸಂಘದ ಪ್ರತಿಯೊಬ್ಬರೂ ಉಪಾಧ್ಯಾಯರಾಗಿಯೇ ಇರುವರು. ಈ ಪದವಿಯು ಅತಿ ಘನವಾದುದು. ಪೂರ್ವಕಾಲದಿಂದ ಈ ಪದವೀಧರರಿಗೆ ಕೇವಲ ಮರ್ಯಾದೆಯೇ ನಡೆದುಬರುತ್ತಿದೆ. ಈ ಪದವಿಯು ಘನತೆಗೂ ಮರ್ಯಾದೆಗೂ ಮೀರಿದಷ್ಟು ಉತ್ತರವಾದಿತ್ವವೂ ಇದ್ದೇ ಇರುವುದೆಂಬುದನ್ನು ಯಾರೂ ಮರೆಯುವಂತಿಲ್ಲ.

ಹೆತ್ತ ತಾಯಿತಂದೆಗಳು ಅತಿ ಪ್ರೀತಿಯಿಂದ ಸಾಕಿ ಸಲಹಿದ ಬಾಲಕ-ಬಾಲಿಕೆಯರನ್ನು ನಿಶ್ಶಂಕೆಯಿಂದ ಉಪಾಧ್ಯಾಯರಿಗೆ ಸಂಪೂರ್ಣವಾಗಿ ಒಪ್ಪಿಸಿ, ಅವರ ಉತ್ತಮ ಶಿಕ್ಷಣದಿಂದ ತಮ್ಮ ಮಕ್ಕಳು ಸನ್ಮಾರ್ಗಪ್ರವರ್ತಕರೂ, ವಿದ್ಯಾವಂತರೂ ಮತ್ತು ಹಿತೈಷಿಗಳೂ ಆಗುವರೆಂದು ದೃಢವಾಗಿ ನಂಬಿ ಪ್ರತಿಕ್ಷಣಕಾಲವನ್ನೂ ನಿರೀಕ್ಷಿಸುತ್ತಿರುವರು. ಇದರಿಂದಲೇ ಉಪಾಧ್ಯಾಯರ ಉತ್ತರವಾದಿತ್ವವು ಗೊತ್ತಾಗುವುದು.

ಮೇಲೆ ಹೇಳಿದ ಉತ್ತರವಾದಿತ್ವವನ್ನು ಕಾರ್ಯಕಾರಿಯಾಗಿ ಮಾಡಿಕೊಳ್ಳಬೇಕಾದರೆ ಉಪಾಧ್ಯಾಯರಲ್ಲಿ ಈ ಮುಂದೆ ಹೇಳುವಷ್ಟು ಮುಖ್ಯ ಗುಣಗಳೂ ಅವರಲ್ಲಿರಬೇಕಾದುದು ಅಗತ್ಯವು. ಅವಾವುವೆಂದರೆ—

೧ ವಿದ್ಯಾಭ್ಯಾಸಕ್ಕಾಗಿ ತಮ್ಮಲ್ಲಿಗೆ ಬಂದ ವಿದ್ಯಾರ್ಥಿಗಳೆಲ್ಲರಲ್ಲಿಯೂ ಸರ್ವಸಮ್ಮತವಾದ ಪ್ರೀತಿ.—

೨ ವಿದ್ಯಾರ್ಥಿಗಳನ್ನು ಅವರ ಶಕ್ತಿಗೆ ಮೀರಿದಷ್ಟು-ಅತಿಯಾದ ಕ್ಲೇಶಕ್ಕೆ ಗುರಿಪಡಿಸಬಾರದೆಂಬ ದಯೆ.—

೩ ತಾಯಿತಂದೆಗಳ ನಿರೀಕ್ಷೆಗೆ ತಕ್ಕಂತೆ ಸನ್ಮಾಗಪ್ರವರ್ತಕರೂ ವಿದ್ಯಾವಂತರೂ ಮತ್ತು ಹಿತೈಷಿಗಳೂ ಆಗುವಂತೆ ಪ್ರತಿಯೊಬ್ಬರಿಗೂ ಉತ್ತಮ ಶಿಕ್ಷಣವನ್ನು ಕೊಡುವಂತಹ ದಕ್ಷತೆ.—

೪ ಪ್ರತಿಯೊಬ್ಬರ ಬುದ್ಧಿ-ಪ್ರತಿಭಾಶಕ್ತಿಯನ್ನು ಕಂಡು ಹಿಡಿಯುವಂತಹ ಅಭಿಪ್ರಾಯ ತತ್ವಜ್ಞತೆ.—

ಈ ಮೇಲೆ ಹೇಳಿದ ನಾಲ್ಕು ಮುಖ್ಯ ಗುಣಗಳಲ್ಲದೆ ಪ್ರತಿಯೊಬ್ಬರ ಮನಸ್ಸನ್ನೂ ಆಕರ್ಷಣಮಾಡಿ ವಶಪಡಿಸಿಕೊಳ್ಳುವ ಅದ್ಭುತವಾದ ಕಲಾಭಿಜ್ಞರಂತೆ ವಿದ್ಯಾರ್ಥಿಗಳ ಚಿತ್ತವನ್ನು ಸ್ವಾಧೀನಪಡಿಸಿಕೊಳ್ಳುವ ಅದ್ಭುತಶಕ್ತಿಯು ಉಪಾಧ್ಯಾಯರಲ್ಲಿ ಇದ್ದೇ ಇರಬೇಕು.

ಆ ಶಕ್ತಿಯುಳ್ಳ ಉಪಾಧ್ಯಾಯರು---

" ಅವದ್ಯ ಮುಕ್ತೇ ಪಥಿಯಃ ಪ್ರವರ್ತತೇ—ಪ್ರವರ್ತಯತ್ಯನ್ಯಜನಂ ಚ ನಿಸ್ಪೃಹಃ || ಸ ಏವ ಸೇವ್ಯಸ್ಸ್ವಹಿತೈಷಿಣಾಗುರುಃ ಸ್ವಯಂ ತರನ್ ತಾರಯಿತುಂ ಕ್ಷಮಃ ಪರಂ || "

ಎಂಬ ಶ್ಲೋಕೋಕ್ತಿಯಂತೆ, ವಿದ್ಯಾರ್ಥಿಗಳಲ್ಲಿ ಕೆಲಕೆಲವರಿ

---

* ಈ ಲೇಖನವು, ಈಗ ಸುಮಾರು ೨ ವರ್ಷದಲ್ಲಿ ನಮ್ಮ ಶ್ರೀರ್ಥಪಾದರು ಇಲ್ಲಿಯ 'ಕನ್ನಡ ಹೈಸ್ಕೂಲ್ ಹಾಲಿನಲ್ಲಿ' ನಡೆಯಿಸಿದ ಉಪಾಧ್ಯಾಯರ ಸಭೆಯಲ್ಲಿ ಮಾಡಿದ ಭಾಷಣವು. ಅದನ್ನು ಇಂದು ಇಲ್ಲಿ ಪ್ರಕಾಶಗೊಳಿಸಬೇಕೆಂದು ಕೋರಿದುದರಿಂದ ಇಲ್ಲಿ ಪ್ರಕಟಿಸಿದೆ.

ಇತಿ— ಸಂಪಾದಿಕೆ, ನಂದಿನಿ.

ಗೆ, ಕೆಲಕೆಲವು ಭಾಗಗಳಲ್ಲಿ ಅಭಿರುಚಿ ಭಿನ್ನಭಿನ್ನವಾಗಿರುವುದರಿಂದ, ಯಾರು ಯಾರಿಗೆ ಯಾವ ಯಾವ ಭಾಗಗಳಲ್ಲಿ ಅಭಿರುಚಿಯೂ ಆಸಕ್ತಿಯೂ ಇರುವುವೆಂಬುದನ್ನು ತಮ್ಮ ಶಕ್ತಿಯಿಂದ ಕಂಡುಹಿಡಿದು, ಅದರಂತೆ ಅವರವರಿಗೆ ಅಭಿಮತವಾದ ಆ ಆ ಭಾಗಗಳನ್ನು ಬೋಧಿಸುತ್ತ ಬಂದಲ್ಲದೆ ವಿದ್ಯಾರ್ಥಿಗಳ ಚಿತ್ತವೃತ್ತಿಯು ಉಪಾಧ್ಯಾಯರ ವಶವಾಗುವುದಿಲ್ಲ. ತಮ್ಮ ದರ್ಪದಿಂದಲೂ ದಂಡನೆಯಿಂದಲೂ ವಿದ್ಯಾರ್ಥಿಗಳೆಲ್ಲರನ್ನೂ ಒಂದೇ ಭಾಗದಲ್ಲಿ ಆಸಕ್ತರಾಗುವಂತೆ ಮಾಡುವೆವೆಂದರೆ ಸಾಧ್ಯವಾಗುವ ಮಾತಲ್ಲ. ದರ್ಪವೆಂಬುದು ಇದಿರಿಗಿರುವವರೆಗೂ, ದಂಡನೆಯೆಂಬುದು ಯಾತನೆಯಿರುವ ಪರ್ಯಂತವೂ ಮಾತ್ರವೇ ಇರುವುವು. ಆದುದರಿಂದ ಭಯವನ್ನು ಪ್ರದರ್ಶಿಸಿಯಾಗಲೀ ದಂಡನೆಯನ್ನು ಮಾಡಿಯಾಗಲೀ ವಿದ್ಯಾರ್ಥಿಗಳನ್ನು ವಿದ್ಯಾವಂತರಾಗಿ ಮಾಡುತ್ತೇವೆಂಬುದು ವ್ಯಥಾಭಿಮಾನವು.

ಬಾಲ-ಬಾಲೆಯರು ತಂದೆತಾಯಿಯರ ಮತ್ತು ಸೋದರ ಸೋದರಿಯರ ನಡೆನುಡಿಗಳನ್ನು ನೋಡಿ ಕಲಿತುಕೊಳ್ಳುವಂತೆ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉಪಾಧ್ಯಾಯರ ಆಚಾರ ವಿಚಾರಗಳನ್ನು ನೋಡಿ ಅದನ್ನು ಅತಿ ಸುಲಭವಾಗಿ ಕಲಿಯುವುದರಿಂದ ಉಪಾಧ್ಯಾಯರ ಆಚಾರ ವಿಚಾರಗಳು ನಿಷ್ಕಪಟವಾಗಿಯೂ ನಿರ್ದುಷ್ಟವಾಗಿಯೂ ಇರಬೇಕು.

ವಿದ್ಯಾರ್ಥಿಗಳು ಯಾವಾಗಲೂ ವಿಧೇಯರಾಗಿರಬೇಕೆಂದು ಎಲ್ಲಾ ನೀತಿಜ್ಞರು ಹೇಳುವರು. ಹಾಗಿರಬೇಕಾದರೆ ಉಪಾಧ್ಯಾಯರು ಪ್ರಸನ್ನರಾಗಿರಬೇಕು. ಉಪಾಧ್ಯಾಯರು ಸರ್ವಸಮರಾಗಿಯೂ ಭೇದಭಾವವಿಲ್ಲದ ನಿಸರ್ಗವಾದ ಪ್ರೀತಿಯನ್ನೂ ದಯೆಯನ್ನೂ ತೋರಿಸುತ್ತ ವಿದ್ಯಾರ್ಥಿಗಳಿಗೆ ಉತ್ಸಾಹವನ್ನುಂಟುಮಾಡುತ್ತಿದ್ದರೆ ವಿದ್ಯಾರ್ಥಿಗಳು ವಿಧೇಯರಾಗಿಯೇ ಇರುವರು.

ಪುಸ್ತಕಪಠನರೂಪವಾದ ವಿದ್ಯಾಭ್ಯಾಸಕ್ಕಿಂತಲೂ ವಸ್ತುನಿದರ್ಶನಪೂರ್ವಕ ವಿದ್ಯಾಭ್ಯಾಸವೇ ಉತ್ತಮವೆಂದು ಈಗಿನ ಉದ್ದಾಮಪಂಡಿತರು ಭಾವಿಸುವರು. ಈ ಕ್ರಮವು ಕೇವಲ ಪ್ರಯೋಜನವೇ ಸರಿ! ಆದರೆ, ಇದು ಸುಲಭಸಾಧ್ಯವಲ್ಲ. ಅದಕ್ಕಾಗಿ ಪ್ರಾರಂಭದಿಂದಲೂ ವಿದ್ಯಾರ್ಥಿಗಳಿಗೆ ಊಹಾಶಕ್ತಿಯನ್ನು ವೃದ್ಧಿಪಡಿಸಬೇಕು. ಹಾಗಾದರೆ ಒಂದು ವಸ್ತುವಿಗೆ ಮತ್ತೊಂದರ ದೃಷ್ಟಾಂತವನ್ನು ಹೇಳಿದ ಕೂಡಲೆ ಸ್ವಭಾವವನ್ನೂ ಗುಣವನ್ನೂ ಊಹಿಸಿ ಹೇಳುವರು. ಅಷ್ಟಾದರೆ,ಹೆಚ್ಚು ಸ್ವಭಾವವನ್ನೂ ಗುಣವನ್ನೂ ಮಾತ್ರ, ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ತಿಳಿಯಿಸಿ ಪೂರ್ಣಪರಿಚಯವನ್ನುಂಟುಮಾಡಬಹುದು. ಊಹಾಶಕ್ತಿಯಿಲ್ಲದ ವಿದ್ಯಾರ್ಥಿಗಳಿಗೆ ವಸ್ತುನಿದರ್ಶನಜ್ಞಾನಪೂರ್ವಕ ವಿದ್ಯಾಭ್ಯಾಸವು ಫಲಕಾರಿಯಾಗಲಾರದು. ಹೇಗಾದರೂ ಪುಸ್ತಕಪಠನರೂಪವಾದ ವಿದ್ಯಾಭ್ಯಾಸಕ್ಕಿಂತಲೂ ವಸ್ತುನಿದರ್ಶನಪೂರ್ವಕ ವಿದ್ಯಾಭ್ಯಾಸವು ಜ್ಞಾಪಕಶಕ್ತಿಯನ್ನು ಹೆಚ್ಚಿಸುವುದೆಂಬುದರಲ್ಲಿ ಸಂದೇಹವಿಲ್ಲ.

ಈ ಅಭ್ಯಾಸವು ನೂತನವಾದುದೆಂದು ಭಾವಿಸುವಂತಿಲ್ಲ. ಸಮುದ್ರವು ಅಗಾಧವೂ ಭಯಂಕರವೂ ಆದುದೆಂದು ಸ್ವಭಾವವನ್ನೂ ಗುಣವನ್ನೂ ವಿವರಿಸಿ, ಪ್ರತ್ಯಕ್ಷದಲ್ಲಿ ತೋರಿಸಿ ಅದರಂತೆ ಸಂಸಾರವು ಅಗಾಧ ಸಮುದ್ರವಾಗಿರುವುದೆಂದು ತತ್ವಶಾಸ್ತ್ರಜ್ಞರು ಹೇಳಿರುವರು. ಅವೆರಡಕ್ಕೂ ಸಮಾನಾಧಿಕರಣವನ್ನು ಕಲ್ಪಿಸಿಯೂ ಹೀಗೆ ಹೇಳಿರುವರು—

"ತೃಷ್ಣಾತೋಯೇ ಮದನಪವನೋದ್ಧೂತ ಮೋಹೋರ್ಮಿಮಾಲೇ | ದಾರಾವರ್ತೇ ತನಯ ಸಹಜಗ್ರಾಹಸಂಘಾಕುಲೇಚ | ಸಂಸಾರಾಖ್ಯೇ ಮಹತಿಜಲಧೌ ಮಜ್ಜತಾಮಸ್ತ್ರಿಧಾಮನ್ | ಪಾದಾಂಭೋಜೇ ವರದ ಭವತೋ ಭಕ್ತಿನಾವಂ ಪ್ರಯಚ್ಛ ||"

ಪಾಠಕಮಹನೀಯರೇ !

ಭಾರತೀಯರಲ್ಲಿ ಗುರುಕುಲವಾಸವೆಂದೂ ವಿದ್ಯಾಭ್ಯಾಸವೆಂದೂ ನೆಲೆಗೊಂಡಿತ್ತಷ್ಟೆ! ಆ ಕಾಲದಲ್ಲಿ ಗುರುಕುಲವಾಸಕ್ಕೆ ಬಂದ ವಿದ್ಯಾರ್ಥಿಯನ್ನು ಸ್ವಲ್ಪಕಾಲವಾದರೂ ಪರೀಕ್ಷಿಸಿ ನಂತರ ಅವನಿಗೆ ಯುಕ್ತವಾದ ವಿದ್ಯಾಭ್ಯಾಸವನ್ನು ನಿಯಮಿಸಿ, ಅವನಿಗೆ ಸರಿಯಾದವರನ್ನೇ ಸಹಾಧ್ಯಾಯಿಗಳನ್ನಾಗಿ ಏರ್ಪಡಿಸುತ್ತಿದ್ದರು. ಆಗಿನ ವಿದ್ಯಾಭ್ಯಾಸದಲ್ಲಿ ಮುಂದೆ ಮುಂದಕ್ಕೆ ನಡೆಯುವ ಪಾಠವು ಸ್ವಲ್ಪವಾದರೂ ಹಿಂದಿನ ಪಾಠವು ಯಾವಾಗಲೂ ನೆನಪಿರುವಂತೆ ಬಹುಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು. ಹಿಂದಿನ ಪಾಠಗಳ ನೆನಪಿಗೋಸ್ಕರ ಪ್ರತಿಪಕ್ಷದಲ್ಲಿಯೂ ಅನಧ್ಯಯನವೆಂದು ನಾಲ್ಕಾರು ದಿನಗಳನ್ನು ಏರ್ಪಡಿಸಿಕೊಂಡಿದ್ದರು. ಆ ದಿನಗಳಲ್ಲಿ ಮುಂದಿನ ಪಾಠವಿಲ್ಲದಿದ್ದರೂ ಹಿಂದಿನ ಪಾಠವನ್ನು ಪರೀಕ್ಷಿಸುತ್ತಿದ್ದರು. ಆ ಅನಧ್ಯಯನ ದಿನಗಳಲ್ಲಿ ವೇದಗಳನ್ನು ಮಾತ್ರ ಹೇಳುತ್ತಿರಲಿಲ್ಲ, ಪ್ರತಿಪಕ್ಷದ ಪ್ರಥಮೆಯಲ್ಲಿಯೂ ಎಲ್ಲಾ ಪಾಠಗಳನ್ನೂ ನಿಲ್ಲಿಸುತ್ತಿದ್ದರು. ಹಿಂದಿನ ಪಾಠಗಳನ್ನು ಪರೀಕ್ಷಿಸುವಾಗ ಆ-ಆ ತರಗತಿ ಅಥವಾ ಸ್ವಲ್ಪ ಮೇಲಿನ ತರಗತಿಯ ವಿದ್ಯಾರ್ಥಿಗಳನ್ನು ಪರಸ್ಪರ ಪ್ರಶ್ನೋತ್ತರಗಳಿಗೆ ಬಿಟ್ಟು ಗುರುಗಳು ನೋಡಿಕೊಳ್ಳುತ್ತಿದ್ದರು; ನ್ಯೂನಾತಿರೇಕಗಳನ್ನು ಅಲ್ಲಲ್ಲಿ ತಿದ್ದಿ ಕ್ರಮಪಡಿಸುತ್ತಲೂ ವಿದ್ಯಾರ್ಥಿಗಳಿಗೆ ಬೋಧಿಸುತ್ತಲೂ ಇದ್ದರು. ಈ ಕ್ರಮವು ಆಗಿನ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನಕರವಾಗಿಯೂ ದೇಹಾಂತದವರೆಗೆ ಜ್ಞಾಪಕದಲ್ಲಿ ನಿಲ್ಲತಕ್ಕುದಾಗಿಯೂ ಇತ್ತು. ಈಗಿನ

ಕ್ರಮದಲ್ಲಿ ಆ ಪದ್ಧತಿಯಿಲ್ಲವೆಂದು ಹೇಳುವಂತಿಲ್ಲವಾದರೂ ಅದು ಕ್ರಮದಲ್ಲಿಲ್ಲವೆನ್ನಬಹುದು.

ಈಗ ಪ್ರತಿಯೊಂದು ಪಾಠಕ್ಕೂ ಕಾಲವನ್ನು ಕ್ಲೃಪ್ತಪಡಿಸಿ ಪ್ರತಿದಿನವೂ ಇಷ್ಟೇ ಪಾಠವು ನಡೆಯಬೇಕೆಂದು ಆಚರಣೆಯಲ್ಲಿಟ್ಟಿರುವರು. ಕ್ಲೃಪ್ತಕಾಲವು ಆ-ಆ ವಿಷಯದ ಮುಂದಿನ ಪಾಠಕ್ಕೆ ಸಾಕು—ಸಾಲದಂತಿರುವುದು. ಇದ್ದಷ್ಟು ಕಾಲದಲ್ಲಿಯೇ ಆ—ಆ ಸಂಗತಿಯಲ್ಲಿ ವಿದ್ಯಾರ್ಥಿಗಳ ಪರಸ್ಪರ ಪ್ರಶ್ನೋತ್ತರಕ್ಕೆ ಸ್ವಲ್ಪ ಭಾಗವನ್ನು ವಿನಿಯೋಗಿಸಿ, ಉಳಿದ ಕಾಲದಲ್ಲಿ ಮುಂದಿನ ಪಾಠವನ್ನು ಬೋಧಿಸುವುದು ಉತ್ತಮವೆಂದು ತೋರುತ್ತದೆ. ಈ ಕ್ರಮವು ಬಾಲ್ಯವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಇದು, ಅವರಿಗೆ ಜ್ಞಾಪಕಶಕ್ತಿಯನ್ನೂ ಹಿಂದೆ ಅಭ್ಯಾಸಮಾಡಿದ್ದುದನ್ನು ಭದ್ರಪಡಿಸಿಕೊಂಡಿರಬೇಕೆಂಬ ಜಾಗರೂಕತೆಯನ್ನೂ ಹುಟ್ಟಿಸುವುದು. ಹೀಗಾದರೆ, ಈಗಿನ ಕ್ರಮದಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆಗಿಂತಲೂ ಹೆಚ್ಚು ಸಂಖ್ಯೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು. ವಿದ್ಯಾಭ್ಯಾಸದಲ್ಲಿರುವ ವಿದ್ಯಾರ್ಥಿಗಳಿಗೆ ನಿಯಮಿಸಿರುವ ಪಠ್ಯಪುಸ್ತಗಳನ್ನು ಒಂದು ಬಾರಿ ಮುಗಿಸಿದ ನಂತರ ಮತ್ತೆ ಪ್ರಾರಂಭಿಸುವ ಆಗತ್ಯವಿರುವುದಿಲ್ಲ. ಈ ಕ್ರಮವು ಪ್ರಾರಂಭದಲ್ಲಿ ಸ್ವಲ್ಪ ತೊಡಕಾಗಿಯೂ ಉಪಾಧ್ಯಾಯರಿಗೆ ಅಸಹ್ಯವಾಗಿಯೂ ಇದ್ದರೂ ದಿನಕ್ರಮದಲ್ಲಿ ತೃಪ್ತಿಕರವಾಗುವುದು.

ಉಪಾಧ್ಯಾಯರು ಈ ಕ್ರಮವನ್ನು ಶಾಲೆಯಲ್ಲಿಡದಿದ್ದರೂ ಕೆಲವು ವಿದ್ಯಾರ್ಥಿಗಳು ತಮ್ಮ ತಮ್ಮಲ್ಲಿ ಈ ಕ್ರಮವನ್ನು ಆಚರಣೆಯಲ್ಲಿಟ್ಟುಕೊಂಡು ಶಾಲೆಯಿಲ್ಲದ ದಿನಗಳನ್ನು ಉಪಯೋಗಿಸುತ್ತಿರುವರು. ಅವರು ವಿದ್ಯಾಭ್ಯಾಸದ ಪ್ರಯೋಜನವನ್ನು ಆಯಾಸವಿಲ್ಲದೆಯೇ ಹೊಂದುವರು. ಈ ಕ್ರಮವನ್ನು ಆಚರಣೆಯಲ್ಲಿಟ್ಟಿರುವ ವಿದ್ಯಾರ್ಥಿಗಳು ಅಲ್ಪ ಭಾಗದವರೇ ಆಗಿರುವರು. ಉಳಿದವರೂ ಇದೇ ರೀತಿ ಅಭ್ಯಾಸವನ್ನು ಆಚರಣೆಯಲ್ಲಿಡಬೇಕಾದರೆ ಉಪಾಧ್ಯಾಯರ ಪ್ರಯತ್ನವೇ ಆವಶ್ಯಕವಾಗಿರುವುದು.

ಪಾಠಕಮಹನೀಯರಲ್ಲಿ, ತಮಗೆ ಬರುವ ವೇತನಕ್ಕಾಗಿಯೇ ಪಾಠಹೇಳುತ್ತಿರುವೆವೆಂಬವರು ಕೇವಲ ವಿರಳರಾಗಿಯೇ ಇರುವರು. ವೇತನದಲ್ಲಿ ದೃಷ್ಟಿಯನ್ನಿಡದೆ ಇಹದಲ್ಲಿಯ ಯಶಸ್ಸಿಗೂ, ಉತ್ತರೋತ್ತರ ಪುಣ್ಯಸಂಪಾದನೆಗೂ ದೃಷ್ಟಿಯನ್ನಿಟ್ಟು ಪಾಠಹೇಳುತ್ತಿರುವವರು ಅಧಿಕಸಂಖ್ಯೆಯವರಾಗಿಯೇ ಇರುವರು. ಪಾಠಕಮಹನೀಯರು ತಮ್ಮ ನಡೆನುಡಿಗಳನ್ನು ಉತ್ತಮ ರೀತಿಯಲ್ಲಿರಿಸಿಕೊಂಡು ತಮ್ಮ ಕರ್ತವ್ಯವನ್ನು ಮನಃಪೂರ್ವಕವಾಗಿ ನಡೆಯಿಸುತ್ತ ಬಂದರೆ ತಾವೂ ಉತ್ತೀರ್ಣರಾಗುವುದಲ್ಲದೆ ತಮ್ಮನ್ನು ಆಶ್ರಯಿಸಿದವರನ್ನೂ ಉತ್ತೀರ್ಣರನ್ನಾಗಿ ಮಾಡುವುದಕ್ಕೆ ಸಮರ್ಥರಾದ ಗುರುಗಳೆನ್ನಿಸುವರು; ಮತ್ತು ಹಿತೈಷಿಗಳಾದ ಮಹನೀಯರಿಂದ ಪೂಜಿಸಲ್ಪಡುವರು.

ಉಪಾಧ್ಯಾಯರು ವಿದ್ಯಾರ್ಥಿಗಳೆಲ್ಲರಲ್ಲಿಯೂ ಪುತ್ರವಾತ್ಸಲ್ಯವಿಟ್ಟು ಸನ್ಮಾರ್ಗಪ್ರವರ್ತಕರೂ ವಿದ್ಯಾವಂತರೂ ಮತ್ತು ಹಿತೈಷಿಗಳೂ ಆಗುವಂತೆ ಉತ್ತಮ ಶಿಕ್ಷಣವನ್ನು ವೃದ್ಧಿಪಡಿಸಿದರೆ ಆ ಮಹನೀಯರ ಯಶಸ್ಸು ಬಹುಕಾಲ ನಿಲ್ಲುವುದರಲ್ಲಿಯೂ ಅವರಿಗೆ ಉತ್ತರೋತ್ತರ ಸುಖಪ್ರದನಾದ ಭಗವಂತನ ಅನುಗ್ರಹವು ಲಭಿಸುವುದರಲ್ಲಿ ಸಂಶಯವಿಲ್ಲೆಂದು ದೃಢವಾಗಿ ಹೇಳಬಲ್ಲೆನು.

ಈ ರೀತಿಯಿಂದ ಲೋಕೋಪಕಾರದಲ್ಲಿ ಬದ್ಧಾದರರಾಗಿ ನಿಂತಿರುವ ಮಹನೀಯರಿಗೆ ಸಮಸ್ತ ಸನ್ಮಂಗಳಂಗಳೂ ಉಂಟಾಗಲೆಂದು ಸರ್ವಶಕ್ತನೂ ಕಾಮಿತಾರ್ಥಪ್ರದನೂ ಆದ ಭಗವಂತನನ್ನು ಪ್ರಾರ್ಥಿಸುವೆನು.

೩೦-೧ ೧೯೧೬. } ವೆಂಕಟಕೃಷ್ಣಯ್ಯಂಗಾರ್.

ಹಿತೈಷಿಣೀ-ನಂದಿನಿಯರಿಗೆ ದೇಶೀಯರ ಆಶ್ವಾಸನವು.

I

"…ನಿಮ್ಮ ವ್ಹಿ. ಪಿ. ಪೂರ್ಣಕಲಾ ಸ್ವೀಕರಿಸಿ ಓದಿದೆನು. ಪುಸ್ತಕವು ಚನ್ನಾಗಿದೆ ಪುಸ್ತಕವು ನೀತಿಬೋಧಕವಾಗಿ ಪ್ರೌಢವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾಗಿರುತ್ತದೆ. ಈಗಿನ ಕಾಲಕ್ಕೆ ಈ ತರದ ಪುಸ್ತಕಗಳ ಕೊರತೆ ಇರುತ್ತದೆ. ಇಂಥ ಪುಸ್ತಕಗಳು ಹೊರಟಷ್ಟು ನಮ್ಮ ಸಮಾಜದ ಸುಧಾರಣೆಯಾಗಬಹುದು. ನಮ್ಮ ಪ್ರಾಚೀನ ಪದ್ಧತಿಯು ಚನ್ನಾಗಿ ಮಂಡಿಸಲ್ಪಟ್ಟಿದೆ. ಈ ಪುಸ್ತಕದಲ್ಲಿ ೧೨, ೧೩, ೧೪ನೆಯ ಪರಿಚ್ಛೇದಗಳು ವಿಶೇಷತ: ಬಹಳ ಮನೋಹರವಾಗಿ ಸಾಧಿಸಲ್ಪಟ್ಟಿವೆ.

ವಿ. ವಿ. ದಾಸೋ ಮಹೀಪತ ಕುಲಕರ್ಣಿ,
ಅ|| ಮಾ|| ಐಗಳಿ (ಬೆಳಗಾವ)"

II

"… ..ತಾವು ಆದರದಿಂದ ಕಳುಹಿದ "ದ್ರೌಪದೀ ವಸ್ತ್ರಾಪಹರಣ" "ಪ್ರಾ. ನಂದಿನಿ" ಯೂ ತಲಪಿದುವು. ಅದಕ್ಕೋಸುಗ ವಂದನೆ. ನಂದಿನಿಗೆ ನಿಜವಾಗಿಯೂ ಆಶೀರ್ವಚನ ಬೇಕೇ ಬೇಕು. ನಮ್ಮೂರಲ್ಲಿ ಹತ್ತಿಪ್ಪತ್ತು ಚಂದಾದಾರರನ್ನು ಮಾಡಿಕೊಡಲು ದೀಕ್ಷಾಬದ್ಧನಾಗಿರುವೆನು. ಈ ತಿಂಗಳಂತ್ಯದಲ್ಲಿ ಅವರ ವಿಳಾಸಗಳನ್ನೆಲ್ಲಾ ಕಳುಹಿಸಿಕೊಡುವೆನು.

ನಂದಿನಿಯ ವಿಷಯದಲ್ಲಿ ಹೊಟ್ಟೆಕಿಚ್ಚುಪಡುತ್ತಿರುವುದನ್ನು ನೋಡಿ ನನಗಾಶ್ಚರ್ಯವಾಗಿದೆ. ದೊಡ್ಡ ರಾಜಕೀಯ ವಿಷಯಗಳನ್ನು ಚರ್ಚಿಸುವರೆಂದು ಬಹಿರಂಗಪಡಿಸಿ, ಸೋದರಿಯೋರ್ವಳು ಮುಂದರಿವುದನ್ನು ನೋಡಿದರೆ ಮಾತ್ಸರ್ಯವೆ! ಅಂತಹರು ಇನ್ನೇತಕ್ಕೆ ಜನಿಸುವರೋ?

'ವಸ್ತ್ರಾಪಹರಣವು ನಿಜವಾಗಿಯೂ ಓದಲರ್ಹವಾದುದು. ಪ್ರತಿಯೊಬ್ಬ ಸ್ತ್ರೀಯೂ ಒಂದು ಪ್ರತಿಯನ್ನು ಇರಿಸಿಕೊಳ್ಳುವುದುತ್ತಮ. ದ್ರೌಪದಿಯ ವೀರವಾಕ್ಯ ಎಂತಹ ಹೇಡಿಯನ್ನಾದರೂ ಧೈರ್ಯಶಾಲಿಯನ್ನಾಗಿ ಮಾಡುವುದು. ಪ್ರಥಮದಲ್ಲಿರುವ ದೇವತಾಪ್ರಾರ್ಥನೆಯು ಬಲು ಸೊಗಸಾಗಿದೆ. ಇದನ್ನು ನಮ್ಮ ನಾರಿಯರು ಶುಭದಿವಸಗಳಲ್ಲಿ ಹಾಡಬಹುದಾಗಿದೆ. ಸಹೋದರಿಯೋರ್ವಳು ಇಷ್ಟೊಂದನ್ನು ಮಾಡುತ್ತಿರುವಾಗ ಕನ್ನಡಿಗರು ತಕ್ಕ ಉತ್ತೇಜನವನ್ನು ಕೊಡತಕ್ಕದ್ದು ಉಚಿತವೇ ಸರಿ.

ಇತಿ ವಿಧೇಯ,
ಬಿ. ಎನ್ ಕೃಷ್ಣಮೂರ್ತಿ."

III

ಅವ್ವಾ! ದೇಶಮಾತೆಯ ಪ್ರಿಯ ಪುತ್ರಿಯೇ!

ನಿಮ್ಮ ಉದ್ಯಮಕ್ಕೂ ನಿಮ್ಮ ಉದ್ಗ್ರಂಥ ರಚಿಸತಕ್ಕ ಉನ್ನತ ಪ್ರತಿಭೆಗೂ ಶತಶ: ವಂದನೆಗಳು. ಈ ಪತ್ರ ಬರೆಯಲಿಕ್ಕೆ ಬಹಳೇ ಉತ್ಸಾಹ ತಲೆದೋರಿದುದರಿಂದ ಕಾಗದ ಲೆಕ್ಕಣಿಕೆಗಳನ್ನು ಸಜ್ಜುಗೊಳಿಸಿದೆನು. ಆದರೆ ಆ ತಕ್ಕ ಆಲೋಚನೆಗಳನ್ನು ಬರೆಯಲಿಕ್ಕೆ ಅಲ್ಪಜ್ಞನಲ್ಲಿ ಶಬ್ದಸಂಗ್ರಹವಿಲ್ಲದ್ದರಿಂದಲೂ ತಮ್ಮಂಥವರಿಗೆ ನನ್ನ ಮನಸ್ಸಿನ ಭಾಷಾಸೇವೆಯ ಉತ್ಸುಕತೆಯನ್ನು ತಿಳಿಸುವುದು ಅಗೌರವವಾದುದರಿಂದಲೂ ಇಷ್ಟಕ್ಕೆ ಕುಂಠಿತವಾಗುತ್ತ ನಡೆಯಿತು. ಆದರೂ ಮೂಕನು ಅಪರೂಪವಾಗಿ ತಿಂದ ಬೆಲ್ಲದ ಸವಿಯನ್ನು ಅನ್ಯರಿಗೆ ಹೇಳಲು ಹವಣಿಸಿದಂತೆ ನನಗೆ ನಿಮ್ಮ " 'ಮಾತೃ ನಂದಿನಿ'—ಸತೀಹಿತೈಷಿಣೀ—" ಗ್ರಂಥಗಳನ್ನು ಈ ದೇವಗಿರಿ ಸ್ಟೂಡೆಂಟ್ಸ್ ಲಾಯಬ್ರರಿಯಲ್ಲಿ ಓದಿದ್ದರಿಂದ ಆಯಿತು. ನಿಮ್ಮ ಯಾವತ್ತೂ ಉದ್ಗ್ರಂಥಗಳು ಸರ್ವೋತ್ತಮವಾಗಿವೆ. ಅಂತೇ ಸರಕಾರದವರಿಂದಲೂ ವಿದ್ವಾಂಸರಿಂದಲೂ ಮಾನಿತಗಳಾಗಿವೆ. ಅಂದಮೇಲೆ ನನ್ನಂಥ ಪಾಮರನು ಒಪ್ಪುವದೇನು? ಇರಲಿ. ೯-೧೦ ಪುಸ್ತಕಗಳಲ್ಲಿಯೂ ನಂದಿನಿಯಲ್ಲಿಯೂ ಒಟ್ಟು ವಿಚಾರಮಾಡಿದರೆ, ಕೆಲವು ಗುಪ್ತಪೋಲೀಸರ ಚಾತುರ್ಯದರ್ಶಕವಾಗಿಯೂ ಕೆಲವು ವಿದ್ಯಾರ್ಥಿಗಳ ನಡಾವಳಿ ಸುಧಾರಿಸತಕ್ಕವುಗಳಾಗಿಯೂ ಕೆಲವು ರಾಷ್ಟ್ರಸುಧಾರಕರಾದ ಮಹನೀಯರ ಅಬಲಾಮಣಿಯರ ಹಾಗೂ ದಂಪತಿಗಳ ಚರಿತ್ರಗಳಾಗಿಯೂ ರಚಿತವಾಗಿವೆ.

ಈಗ ಒಂದು ಎಡದಂಡೆಯಲ್ಲಿ ನಿಂತು, ಇಡೀ ನದೀಪ್ರವಾಹವನ್ನು ಬಲದಂಡೆಯನ್ನು ವರ್ಣಿಸಿದಂತಾಗಿದೆ. ಇನ್ನು ಒಂದಾದರೂ ಉದ್ಗ್ರಂಥವನ್ನು ಬಲದಂಡೆಯಲ್ಲಿ ನಿಂತು, ಇಡೀ ಪ್ರಪಂಚವೆಂಬ ನದೀಪ್ರವಾಹವನ್ನು ಎಡದಂಡೆಯನ್ನು ವರ್ಣಿಸಿ, ನೀತಿಗೊಯ್ಯುವಂಥದನ್ನು ರಚಿಸೋಣವಾಗಬೇಕು.

ಈ ವರೆಗೆ ತಾವು ಮುಖ್ಯವಾಗಿ ಹೆಣ್ಣುಮಕ್ಕಳ ನೀತಿಮಾರ್ಗದ ಕಡೆಗೆ, ಒಲಿದಂತಾಗಿದೆ ಅದರಂತೆ ಪುರುಷವರ್ಗದ ಕಡೆಗೆ ಒಂದು ಉದ್ಗ್ರಂಥದ್ವಾರವಾಗಿಯಾದರೂ ಒಲಿದು ನೀತಿಯ (ಈಗಿನ ಪದ್ಧತಿಯ ತಿದ್ದುವ) ಲೇಖವನ್ನು ಪ್ರಕಟಿಸಬೇಕಾಗಿ ಪ್ರಾರ್ಥನೆ.

ಯಾಕೆಂದರೆ ಕತ್ತಲೆಯ ಮಹತ್ವವು ಬೆಳಕಿನಿಂದಲೂ ಬೆಳಕಿನ ಮಹತ್ವವು ಕತ್ತಲೆಯಿಂದಲೂ ಪ್ರಕಟವಾಗುತ್ತಿರುತ್ತದೆ

ಅದರಂತೆ ಈಗ್ಗೆ ವಿದ್ಯಾಭ್ಯಾಸದ ವಹಿವಾಟವು ಹೆಣ್ಣುಮಕ್ಕಳ ಕಯ್ಯಲ್ಲಿ ಚಂಚು ಪ್ರವೇಶಮಾತ್ರವಾಗಿದೆ. ಆದರೆ ಮೊದಲಿನಿಂದಲೂ ಪ್ರಬಲವಾಗಿಯೇ ಪುರುಷವರ್ಗವನ್ನೇ ಮಯ್ಯಕೊಂಡಿರುವುದು. ಇಂಥವರು ಕೂಡ, ಈ ತರದ ಉದ್ಗ್ರಂಥಗಳಿಲ್ಲದ್ದರಿಂದಲೊ?— ಅನಾಥೆಯರನ್ನು - ಅಬಲೆಯರನ್ನು ಅತ್ಯಾಚಾರಕ್ಕೊಳದೊಯ್ಯುತ್ತಿರುವುದನ್ನು ಧ್ಯಾನಕ್ಕೆ ತಂದುಕೊಂಡರೆ ಜ್ಞಾನಿಗಳ ಹೃದಯವು ಕಂಪಿಸದೇ ಇರಲಾರದು! ಎಲ್ಲರೂ ಹಾಗೇಕೆ ದುರ್ನಡೆಯುವರಾದಾರು? ಇರಲಿ, ಬಹುತರ ನಿಮ್ಮ ಮನಸ್ಸಿನಲ್ಲಿಯಾದರೂ ಈ ಬರಹದ ಅಭಿಪ್ರಾಯವು ವಿದಿತವಾಗಿದ್ದದ್ದೇ ಇರುತ್ತದೆ. ಆದಕೂ ನನ್ನ ಮನಸ್ಸಿನ ಬಲವಿನಂತೆ ನಾನು ಈ ದೀರ್ಘಪ್ರಯತ್ನಕ್ಕೆ ಕೈ ಹಾಕಿದೆನು. ಈ ಅಧಿಕಪ್ರಸಂಗತನಕ್ಕೆ ಕ್ಷಮೆಯಿರಲಿ, ಇತಿ ವಿನಂತಿ—

ಸಾರಾಂಶ,— ವಿತಂತುಗಳನ್ನುದ್ಧರಿಸಿದಂತೆ ವಿಧುರರನ್ನು ಉದ್ಧರಿಸುವದು ಸುಧಾರಕರ ಕರ್ತವ್ಯವೇ ಆಗಿದೆಂದು ನಂಬಿದ್ದೇನೆ. ಇತಿ ನತಯು,—

ತಮ್ಮ ಸಹೋದರ,

ಕನ್ನಡಿಗ ಮುರಾರಿ ರಾಮಚಂದ್ರ ಶಿವಪೂಜ, ದೇವಗಿರಿ.

ಮಕ್ಕಳ ವಿದ್ಯಾಭ್ಯಾಸ.

(ಉಪೋದ್ಘಾತ.)

ಈ ಚಿಕ್ಕ ಲೇಖನವು ಉತ್ತರದೇಶದಲ್ಲಿ ಪ್ರಚುರಿತವಾದ ಒಂದಾನೊಂದು ಆಂಗ್ಲಭಾಷೆಯ ಮಾಸಪತ್ರಿಕೆಯಲ್ಲಿದ್ದಿತು. ಪ್ರತಿಯೋರ್ವ ನಾರಿಯೂ ಓದಲರ್ಹವಾದುದೆಂದು ತಿಳಿದು ಇದನ್ನು ಕನ್ನಡಕ್ಕೆ ಭಾಷಾಂತರಿಸಿ ಬರೆದಿರುವೆನು. ಕರ್ಣಾಟಕ ಮಹಿಳಾ-ಸಮಾಜಕ್ಕೆಂದು ಬರೆದಿರುವ ಲೇಖನಗಳಲ್ಲಿ ಇದು ನನ್ನ ಪ್ರಥಮ ಪ್ರಯತ್ನವಾದುದರಿಂದ ಅಲ್ಲಲ್ಲಿ ಕುಂದುಕಗಳಿರಬಹುದು. ಅದನ್ನು ಸಹೃದಯವಾಠಕರು ಮನಸ್ಸಿಗೆ ತಾರರೆಂದು ನಂಬಿರುವೆನು.

ಲೇಖನಪ್ರಕಾಶಕ್ಕೆ ಎಡೆಯಿತ್ತಿರುವ "ನಂದಿನಿ"ಯ ಸಂಪಾದಕಿಯರಿಗೆ ಕೃತಜ್ಞನಾಗಿರುವೆನು. ಇತಿ--

ಪಿ. ಎನ್. ಕೃಷ್ಣಮೂರ್ತಿ.

ನಮ್ಮ ಮನೆಯ ಮುಂದೆ ತೆಂಗಿನ ಮರಗಳನ್ನು ಸಾಲಾಗಿ ನೆಟ್ಟಿರುವರು. ಕೆಲವು ಹಕ್ಕಿಗಳು ಚಿಕ್ಕ ಚಿಕ್ಕ ಮರಗಳ ಮೇಲೆ ಗೂಡುಗಳನ್ನು ಮಾಡಿಕೊಂಡಿರುವುವು. ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಮನೆಯ ಜಗಲಿಯಲ್ಲಿ ಕುಳಿತು ತಾಂಬೂಲಸೇವನೆಯನ್ನು ಮಾಡುತ್ತಿದ್ದ ಸಮಯದಲ್ಲಿ ಒಂದು ಮರದಿಂದ "ಚಿಯ್ ಚಿಯ್" ಎಂಬ ಶಬ್ದವು ಕೇಳಿಬಂದಿತು. ಯಾವ ಹಕ್ಕಿಯ ಕೂಗಾಗಿರಬಹುದೆಂದು ಅತ್ತ ಕಡೆ ದೃಷ್ಟಿಸಿ ನೋಡಲು, ತಾಯಿ-ಕಾಗೆಯು ಏನೋ ಆಹಾರವನ್ನು ತಂದು ತನ್ನ ಮರಿಗಳ ಬಾಯಿಯಲ್ಲಿ ಹಾಕುತ್ತಿದ್ದಿತು. ಎಂತಹ ಆನಂದ ದೃಶ್ಯ! ಮಧ್ಯೇ ಮಧ್ಯೇ " ಕಾ! ಕಾ!! " ಎನ್ನುತ್ತ ಅತ್ತಿತ್ತ ಚೋರದೃಷ್ಟಿಯನ್ನು ಬೀರುತ್ತಾ ತನ್ನ ಕೆಲಸವನ್ನು ಎಷ್ಟು ಮುದ್ದು ಮುದ್ದಾಗಿ ನೆರವೇರಿಸುತ್ತಿದೆ! ಸಂತೋಷವು ಎಲ್ಲಿಯೂ ಚಿರವಾಗಿ ನೆಲಸುವುದಿಲ್ಲ. ಸುಖದ ನಂತರ ದುಃಖವೂ ದುಃಖದ ನಂತರ ಸುಖವೂ ಬರುವುದು ವಾಡಿಕೆಯಾಗಿದೆಯಷ್ಟೆ. ಮಾಂಸಾಹಾರಿಯಾದೊಂದು ದೊಡ್ಡ ಪಕ್ಷಿಯು ಹಾರಿಬಂದು ಮರಿಯೊಂದನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿತು. ಅಹಾ! ತಾಯಿಪಕ್ಷಿಯು ಎಷ್ಟು ಧೈರ್ಯದಿಂದ ಕಾಯಲು ಸಿದ್ಧವಾಗಿದೆ! ಆ ದೃಶ್ಯವನ್ನು ನೋಡಲಾರದೆ ನಾವು ದೊಡ್ಡಸ್ವರದಿಂದ ಕೂಗಿ ಪ್ರತ್ಯಕ್ಷ ಯಮನೋಪಾದಿಯಲ್ಲಿದ್ದ ಆ ಪಕ್ಷಿಯನ್ನು ಓಡಿಸಿದೆವು. ಅಹಾ ! ಆ ಪಕ್ಷಿಗೆ ಆಗೆಷ್ಟು ಆನಂದ ಉಂಟಾಗಿರಬಹುದು! ತಾಯಿಹಕ್ಕಿಯೆ! ನಿನ್ನ ಶೌರ್ಯವನ್ನು ಮೆಚ್ಚಿದೆವು. 'ಶಹಬಾಸ್!' ಪಕ್ಷಿಜಾತಿಯಲ್ಲಿ ಉದ್ಭವಿಸಿದರೂ ಕೂಡ ಇಷ್ಟು ಚೆನ್ನಾಗಿ ಕಾದಾಡಿದೆಯಲ್ಲವೆ?

ನಮ್ಮ ಮನೆಯು, ಮೇಲೆ ಹೇಳಿದ ಗೂಡಿನಂತಿರುವುದು. ಗೃಹರಾಣಿಯಾದ ಹೆಣ್ಣು ಹಕ್ಕಿಯು ಹೇಗೆ ತಮ್ಮ ಮರಿಗಳನ್ನು ಅಕ್ಕರೆಯಿಂದ ಸಲಹಿ, ಪಕ್ಷಿಜಾತಿಗರ್ಹವಾದ ವಿದ್ಯಾಬುದ್ಧಿಯನ್ನು ಕಲಿಸಿ ಕಷ್ಟಕಾಲದಲ್ಲಿ ನೆರವಾಗಿ ಫಿಂತು ಹೇಗೆ ಇಂದು ಚಿಕ್ಕವರೆನಿಸಿದವರನ್ನು ಮುಂದಿನ ದಿವಸಗಳ ದೊಡ್ಡವರನ್ನಾಗಿ ಮಾಡುವುದ್ಧೋ ಹಾಗೆಯೇ ನಮ್ಮ ಮಾನವ

ಮಾನಿನಿಯರು ಮಾಡಬೇಕಾಗಿದೆ. ಮಾನವ ಲಲನೆಯರ ವಿಷಯದಲ್ಲಿ ಒಂದು ಮಾತು:— ಅವರಿಗೆ ಜ್ಞಾನವಿದೆ; ಒಳ್ಳೆಯದನ್ನು ಕೆಟ್ಟುದ್ದರಿಂದ ಪ್ರತ್ಯೇಕಿಸಿ ತೆಗೆಯುವ ಶಕ್ತಿಯಿದೆ. ಇಂತಹ ಶಕ್ತಿಯನ್ನು ವ್ಯರ್ಥವಾಗಿ ಕಳೆಯುತ್ತಿರುವುದರಿಂದಲೇ ನಮ್ಮ ಬಾಲಕರು ಬುದ್ಧಿ, ಚಾತುರ್ಯಹೀನರಾಗಿ ದಾಸರಾಗಿರುವುದು ನಿಜ. ಮಾನವಮಾತೆಯು ಮಕ್ಕಳನ್ನು ಮುದ್ದುಮಾಡಿ ಮಾತಾಡಲಿಕ್ಕೆ ಕಲಿಸುತ್ತಾಳೆ. ರುಚಿಕರವಾದ ಭೋಜ್ಯಪದಾರ್ಥಗಳನ್ನು ಕೊಟ್ಟು ಬಾಲಕರನ್ನು ಸಾಕುವಳು. ಇದನ್ನು ಆರೂ ಅಲ್ಲಗಳೆಯುವುದಿಲ್ಲ. ಆದರೆ, ಇವುಗಳನ್ನೆಲ್ಲಾ ಸರಿಯಾಗಿ ಉಪಯೋಗಿಸಿದರೆ— ಅಹಾ! ಅದರಿಂದುಂಟಾಗಬಹುದಾದ ಆನಂದವನ್ನು ಆರು ತಾನೆ ಬಣ್ಣಿಸಲಾಪರು! ಸಮಾಜವೇ ಬದಲಾಗುವುದು. ನಾಟಕದ ಒಂದು ಅಂಕವು ಮುಗಿದು ಹೊಸ ಪರದೆಯು ಬೀಳಬಹುದು......! ಹಾಗೆ ಮಾಡದಿದ್ದರೆ ಮಾನವ ಮಾತೆಯು ಪೂರ್ವಪರಿಚಿತಕಾಗೆಗಿಂತಲೂ ಕಡೆಯಾಗಿ ಭಾವಿಸಲ್ಪಡುವಳಲ್ಲವೆ?

ಪಕ್ಷಿಯು ಮರಿಯಾಗಿರುವಾಗ ಗೂಡಿನಲ್ಲಿಯೇ ಇರುವುದು. ಬಾಹ್ಯ ಪ್ರಪಂಚದ ವಿಷಯವು ಅದಕ್ಕೆ ಏನೇನೂ ತಿಳಿದಿರುವುದಿಲ್ಲ. ಪಾಪ! ಅದಕ್ಕೆ ಆಹಾರ ತಿನ್ನುವುದಕ್ಕೆ ಕೂಡ ಬರುವುದಿಲ್ಲ. ಆಗ ತಾಯಿಯು ಶಕ್ತಿ ಬರುವ ತನಕ ಬಹು ಅಕ್ಕರೆಯಿಂದ ಪೋಷಿಸುವುದು. ಅಷ್ಟೇ ಅಲ್ಲ, ತನಗೆ ತಿಳಿದಿರುವುದನ್ನೆಲ್ಲಾ ಪ್ರತ್ಯಕ್ಷ ತೋರಿಸಿ ಮರಿಯು ಕೂಡ ತನ್ನಂತೆಯೇ ಆಗಬೇಕೆಂದು ಕೋರುವಳು; ಕೋರುವುದು ಮಾತ್ರವಲ್ಲದೆ ತನ್ನ ಆಶೆಯನ್ನು ನೆರವೇರಿಸುವಳು. ಈ ರೀತಿಯಲ್ಲಿ ಪಕ್ಷಿಗಳು ಏನೇನು ಮಾಡಬೇಕಾಗಿದೆಯೊ ಅದನ್ನೆಲ್ಲ ಹೇಳಿಕೊಟ್ಟು ಬಾಹ್ಯಪ್ರಪಂಚಕ್ಕೆ ಇತರ ಪಕ್ಷಿಗಳು ಸಂಸಾರ ಮಾಡಿಕೊಂಡಿರುವಂತೆ ಇರಲು ಕಳುಹಿಸುವಳು. ಪ್ರಸ್ತುತದ ಮಾನವರ ಮಾತೆಯರು ಇದನ್ನೆಲ್ಲಾ ಮಾಡುವರೇನು!

ಮನೆಯು ಕೇವಲ ಎರಡಕ್ಷರದ ಶಬ್ದವಾದರೂ ಮುಂದಿನ ಜನಾಂಗವಾಗಿ ಬದುಕುವವರ ತರಬಿಯತ್ತಿನ ಮೂಲಸ್ಥಾನವಾಗಿದೆ. ಯಾರು ಈ ಆನಂದಸೂಚಕ ಎರಡಕ್ಷರದ 'ಮನೆ'ಯಲ್ಲಿ ಪಾಲಿತರಾಗಲ್ಪಡುತ್ತಿರುವರೊ ಅವರು ನಾಳೆಯ ಯುವಕರಾಗಿಯೂ ನಾಡಿದ್ದಿನ ವಯೋವೃದ್ಧರಾಗಿಯೂ ಬಾಳತಕ್ಕವರಾಗಿರುತ್ತಾರೆ. ಇವರೇ ನಮ್ಮ ಮಾತೃಭೂಮಿಯ ಉದ್ಧಾರಕರು. ಇವರೇ ನಮ್ಮ ದೇಶದ ಕವಿಗಳು. ಇವರೇ ನಮ್ಮೂರಿನ ಮಣಿಗಳು.—ಇತ್ಯಾದಿ. ಇವರು ಮನೆಯಲ್ಲಿ ಕಲಿತುದನ್ನೇ ಹೊರಗೂ ತೋರುವರು. ಮನೆಯಲ್ಲಿ ಮಾತೆಯು ಮೂಕಿಯಾಗಿದ್ದಲ್ಲಿ ಮಕ್ಕಳೇನು ಮಾಡಲಾಪರು? ನಮ್ಮ ದೇಶವು ಉದ್ಧಾರವಾಗಬೇಕಾದರೆ, ನಮ್ಮ ಸಮಾಜವು — ಮುಂದೆ ಬರಬೇಕಾದರೆ, ನಮ್ಮ ಜನರು ಇತರ ದೇಶದ ಜನರಿಂದ ಸನ್ಮಾನಿಸಲ್ಪಡಬೇಕಾದರೆ, ನಮ್ಮ ನಾರಿಯರು ಪ್ರಸ್ತುತದ ಅಂಧಕಾರದಿಂದ ಹೊರಬರಬೇಕು. ಇದು ಅಸಾಧ್ಯವಲ್ಲ. ಇಲ್ಲದಿದ್ದರೆ "ಮಾಡಿದುದನ್ನುಣ್ಣೊ ಮಹರಾಯ!" ಎಂಬ ಸಾಮತಿಯಂತಾಗುವುದು. ನಾವು ಬಿತ್ತಿದಂತೆಯೇ ಕೊಯ್ಯುವೆವು. ಗುಲಾಬಪುಷ್ಪದ ಗಿಡವನ್ನು ಎಲ್ಲರೂ ನೆಡುವರು. ಎಲ್ಲರೂ ಗುಲಾಬಪುಷ್ಪವನ್ನು ಕೊಯ್ಯುವರು. ಆದರೆ "ಅಗ್ರಿಕಲ್ಚರಲ್"ಶಾಲೆಯ ತೋಟದವರ ಪುಷ್ಪವು ಬಹು ದೊಡ್ಡದಾಗಿಯೂ! ಪರಿಮಳವುಳ್ಳದ್ದಾಗಿಯೂ ಇದೆ! ಕಾರಣವೇನು?

ನಮ್ಮ ಮನೆಯು ಈ ಗುಲಾಬಪುಷ್ಪದ ಗಿಡದಂತಿದೆ. ಬೇರೇ ತಂದೆಯು; ತಾಯಿಯೇ ದಂಟು. ಪುಷ್ಪಗಳೇ ಮಕ್ಕಳು! ತಂದೆಯಾದ ಬೇರು, ಸಂಸಾರವನ್ನು ಕಾಪಾಡಲೋಸುಗ ಸುತ್ತಮುತ್ತಲಿನ ಮಣ್ಣಿನಿಂದ ಬೇಕಾದ ಪದಾರ್ಥಗಳನ್ನು ಸಂಗ್ರಹಿಸುವುದು. ಮಾನವ ತಂದೆಯೂ ಕೂಡ ಸರಕಾರದ ಚಾಕರನಾಗಿ ಕತ್ತೆಯಂತೆ ಕಷ್ಟಪಟ್ಟು ಕೊಂಚವನ್ನು ಸಂಪಾದಿಸಿ ತನ್ನ ಸಂಸಾರವನ್ನು ಕಾಪಾಡುವನು. ಬೇರು, ತನಗೆ ಅವಶ್ಯವಾಗಿ ಬೇಕಾದ ವಸ್ತುಗಳ ವಿನಹ ಉಳಿದವುಗಳನೆಲ್ಲ ದಂಟಿಗೂ ಅಲ್ಲಿಂದ ಕೊಂಬೆ ಮುಂತಾದವುಗಳಿಗೆಲ್ಲಾ ಕಳುಹಿಸುವುದು. ಆದರೆ ಮಾನವ ತಂದೆಯು, ಹಣರೂಪದಲ್ಲಿರುವುದನ್ನೆಲ್ಲಾ ಸಂಸಾರಕ್ಕೆ ಕೊಡುವನು. ಜ್ಞಾನವನ್ನು ದಂಟೆಂತಿರುವ ಮಾತೆಗೆ ಕೊಡದೆ, ರೆಂಬೆಗಳ ಅಂತ್ಯದಲ್ಲಿರುವ ಪುಷ್ಪಗಳಿಗೆ ಎರಕ ಹೊಯಿದು ಕೊಟ್ಟಂತೆ ಕೊಡುವನು. ದಂಟೇಕೆ ಕೊಡುವುದಿಲ್ಲ? ದಂಟಿಗೆ ಕೊಡುವವರಾರು?

ಗಂಡಸರಿಗೆ ಜ್ಞಾನಾರ್ಜನೆಗೆ ತಕ್ಕ ಸಲಕರಣೆಗಳಿವೆ. ನಾರಿಯರಿಗಾದರೊ—ಆರು ಕೇಳಿರುತ್ತಾರೆ?

ಅನೇಕರು ಹೇಳುವುದನ್ನು ನಮ್ಮ ಪ್ರಿಯಪಾಠಕರು ಕೇಳಿರಬಹುದು.—"ವೇಳೆ ಇಲ್ಲ" ಎನ್ನುವುದು. ನಾವು ಒಬ್ಬಾನೊಬ್ಬ ಮಹಾಶಯರನ್ನು ಕೇಳಿದೆವು— "ವೇಳೆಯು ಹೇಗೆ ಹೋಗುವುದೆ"ಂದು! ಅದಕ್ಕವರು ಕೊಟ್ಟ ಉತ್ತರವೇನಂದರೆ,— ಅಯ್ಯಾ! ಪ್ರಾತಃಕಾಲ, ಏಳು ಗಂಟೆಗೆ ಕಚೇರಿಗೆ ಹೋದರೆ, ಸಾಯಂಕಾಲ ಆರಕ್ಕೆ ಬರುವುದು. ಹೀಗಿರುವಲ್ಲಿ ನಾನು ಸಂಸಾರವನ್ನು ಸಾಕಲೆ? ಅಥವಾ ಮಕ್ಕಳಿಗೆ ಪಾಠ ಹೇಳಿ ಕೊಡಲೆ?—ಎಂದು ಮುಂತಾಗಿ ಹೇಳುವರು. ಹೀಗೆನ್ನುವ ಮಹನೀಯರು ದಯವಿಟ್ಟು ಅರ್ಧಗಂಟೆಗೆ ಮುಂಚಿತವಾಗಿ ಎದ್ದು ಅರ್ಧಗಂಟೆ, ಹೊತ್ತಾಗಿ ಮಲಗಿದರೆ, ದಿನಕ್ಕೊಂದು ಗಂಟೆಯು ಸಿಕ್ಕಿದಂತಾಗುವುದಿಲ್ಲವೆ? ಆ ಸಮಯವನ್ನು ವಿದ್ಯಾವಿಹೀನಳಾದ ತನ್ನ ಅರ್ಧಾಂಗಿಗೆ ಪಾಠ ಹೇಳು

ವುದರಲ್ಲಿ ವಿನಿಯೋಗಿಸಿದರೆ ಮುಂದೆ ಎಷ್ಟೊಂದು ಉಪಕಾರ ವಾದೀತು ?

ಪುರುಷ-ಉಪಾಧ್ಯಾಯರಿಗಿಂತ ಸ್ತ್ರೀಬೋಧಕರೇ ಎಳೆಯ ಮಕ್ಕಳಿಗೆ ತಕ್ಕವರು. ಬಹುಪೂರ್ವದಲ್ಲಿ ನಮ್ಮ ಗೃಹಗಳಲ್ಲಿಯೂ ಕೂಡ ಅಜ್ಜಿಯರು ಸೊಸೆಯರನ್ನೂ ಮೊಮ್ಮಕ್ಕಳನ್ನೂ ತರಬಿಯತ್ತು ಮಾಡುತ್ತಿದ್ದ ಸಂಗತಿ ಅನೇಕರಿಗೆ ವಿದಿತವಾಗಿರಬಹುದು. ಆದುದರಿಂದ ನಮ್ಮ ನಾರೀಮಾತೆಯು ಸುಶಿಕ್ಷಿತಳಾಗಿದ್ದರೆ ಎಷ್ಟೊಂದು ಉಪಯೋಗವಾಗುವುದು!

ಬೊಂಬಾಯಿ ಗವ್ಹರ್ನರ್ ಆಗಿದ್ದ ಸರ್ ಜಾರ್ಜ ಸಿಡೆನ್ ಹ್ಯಾಮ್ ಕ್ಲಾರ್ಕ್‌ರವರು * ತಮ್ಮ ಒಂದಾನೊಂದು ಭಾಷಣದಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನು ಎರಡು ಭಾಗವಾಗಿ ವಿಂಗಡಿಸಿರುವರು.—(೧) ಪ್ರತ್ಯಕ್ಷ, ಮತ್ತು (೨) ಅಪ್ರತ್ಯಕ್ಷ. ಈ ಮೂಲಕವೇ ಮಗುವು ಶಿಕ್ಷಿತವಾಗಿ ಬೆಳೆಯುವುದು. ಒಮ್ಮೆ ನೆಪೋಲಿಯನ್ ಚಕ್ರವರ್ತಿಯು ಹೇಳಿದನಂತೆ— "ಮಕ್ಕಳ ವಿದ್ಯಾಭ್ಯಾಸವು ಶಾಲೆಗೆ ಹೋದ ಮೇಲೆ ಪ್ರಾರಂಭಿಸುವುದಲ್ಲ, ಆದರೆ ಪ್ರಪಂಚಕ್ಕೆ ಬಂದ ತತ್‌ಕ್ಷಣವೇ ಮೊದಲಾಗುತ್ತದೆ" ಎಂದು. ಪ್ರತಿಯೊಂದು ಮಗುವಿಗೂ ಅಪ್ರಕಟಿತವಾದ ಗುಪ್ತಬುದ್ಧಿಯಿದೆ. ಈ ಸೂಕ್ಷ್ಮಬುದ್ಧಿಯಿಂದಲೇ ಅದು ಜ್ಞಾನವನ್ನು ಸಂಪಾದಿಸುವುದು. ಈ ಜ್ಞಾನವು ನಾವು ಸುತ್ತುಮುತ್ತು ಇಟ್ಟಿರುವ ಸಾಮುಗ್ರಿಗಳಿಂದ ತಿಳಿಯಬೇಕಾಗಿದೆ. ಈ ರೀತಿ ಮಕ್ಕಳ ಮುಂದಿನ ಅಭಿವೃದ್ಧಿಯು ನಮ್ಮ ಕೈಯಲ್ಲಿರುವುದು; ಮುಖ್ಯವಾಗಿ ಮಾತೆಯಲ್ಲಿದೆ. ಸುಶಿಕ್ಷಿತಳಾದ ಮಾತೆಯು ಏನು ಮಾಡಬಹುದು ಎಂಬುದಕ್ಕೆ ನೆಪೋಲಿಯನ್ ಮಹಾಶಯನೇ ಉದಾಹರಣೆಯು. ಶಿವಾಜಿಗೆ ಆಗಾಗ ಉತ್ತೇಜನವನ್ನೀಯುತ್ತಿದ್ದವರಾರು?—ಮಾತೆಯಲ್ಲವೇನು!

'ಲೂತರ್ ಬರ್ ಬೇಂಕ್' ಎಂಬ ಮಹಾಶಯನು ಮಗುವು ತೊಟ್ಟಿಲಲ್ಲಿರುವಾಗಲೇ ವಿದ್ಯಾಭ್ಯಾಸವು ಪ್ರಾರಂಭಿಸುವುದೆಂದು ಹೇಳಿರುವನು. 'ಮನೆಯ ರಾಣಿಯೇ ಶಿಕ್ಷಕಳು. ಮನೆಯ ರಾಜನೇ ಮೇಲ್ವಿಚಾರಕನು. ಒಬ್ಬಾಕೆ ಕೇಳಬಹುದು— ಅದೇಕೆ ವಿದ್ಯಾಭ್ಯಾಸವನ್ನು ಮಗುವು ತೊಟ್ಟಿಲಲ್ಲಿರುವಾಗಲೇ ಕೊಡಬೇಕೆಂದು? ಇದಕ್ಕೆ ಲೂತರ್‌ಬರ್‌ಬೇಂಕ್‌ರು ಹೇಳಿರುವುದೇ ನಮ್ಮ ಪ್ರತ್ಯುತ್ತರವು. ಇವರು ಹೇಳುವುದರ ಸಾರಾಂಶವೇನಂದರೆ:— ಸುತ್ತುಮುತ್ತಲಿನ ಪ್ರದೇಶಗಳಿಂದ ಮೃಗ-ಪಕ್ಷಿಗಳು ತಮಗೆ ಬೇಕಾದ ಜ್ಞಾನವನ್ನು ಪಡೆಯುತ್ತವೆ. ಜೀವಿತವಸ್ತುಗಳಲ್ಲಿ ಮಗುವು ಮೃಗಪಕ್ಷಿಗಳಂತೆ ಅಪೇಕ್ಷಿತ ಪ್ರದೇಶದಿಂದ ತಿಳುವಳಿಕೆಯನ್ನು ಪಡೆಯುತ್ತದೆ. ಯಾವ ರೀತಿಯಲ್ಲಿ 'ಕೆಮರ' (ಭಾವಚಿತ್ರ ತೆಗೆಯುವ ಯಂತ್ರ)ದೊಳಗಿರುವ ಚಿತ್ರತಟ್ಟೆಯಲ್ಲಿಯೂ ಸುತ್ತುಮುತ್ತಲಿನ ಪ್ರದೇಶವು ಸಂಬಂಧಿಸಿರುವುದೋ ಅದೇ ರೀತಿಯಲ್ಲಿ ಮಗುವಿನ ಮನಸ್ಸೂ ಬಾಹ್ಯಪ್ರಪಂಚದ ವಸ್ತುಗಳನ್ನು ಸಂಬಂಧಿಸಿವೆ...........ಮಗುವು ಕೆತ್ತನೆಯ ಕೆಲಸದ ವಜ್ರದಂತಿದ್ದು, ಹೊರಗೆ ನಡೆಯುವ ಪ್ರತಿಯೊಂದು ವಿಷಯವೂ ಮಗುವಿನ ತಿಳುವಳಿಕೆಯ ಶಕ್ತಿಯಲ್ಲಿ ಭೇದವನ್ನು ತರುತ್ತದೆ. ವಜ್ರವು ಕೆತ್ತಿದಂತೆ ಆಕಾರವು ಬದಲಾಯಿಸುವಂತೆ ಮಗುವು ತಿಳುವಳಿಕೆ ದೊರೆದಂತೆ ಬೆಳೆದು ದೊಡ್ಡದಾದ ಮೇಲೆ ತನ್ನ ಚಿಕ್ಕಂದಿನ ಆಲೋಚನೆಗಳನ್ನು ಸಂಪೂರ್ಣವಾಗಿ ನಂಬಿರುತ್ತದೆ. ಕಬ್ಬಿಣವನ್ನು ಕರಗಿಸಿದ ಅವಸ್ಥೆಯಲ್ಲಿ ಹೇಗೆ ನಾನಾ ರೂಪಕ್ಕೆ ತರಬಹುದೋ ಹಾಗೆ ಮಗುವಿನ ಎಳೆಮಿದುಳಿನಲ್ಲಿ ಜ್ಞಾನವನ್ನು ತುಂಬಿಸಬಹುದು. ಒಮ್ಮೆ ಮನಸ್ಸಿನಲ್ಲಿ ಬೇರೂರಿದ ಜ್ಞಾನವನ್ನು ಸಾಧಾರಣವಾಗಿ ಹೊರಗೆ ತಳ್ಳಿ ಹಾಕಲಾಗುವುದಿಲ್ಲ. ಆದುದರಿಂದ, ಮಗುವಾಗಿರುವಾಗಲೇ ಗೃಹರಾಣಿಯು ನಿಜವಿದ್ಯಾಭ್ಯಾಸವನ್ನು ಪ್ರಾರಂಭಿಸಬೇಕು.

ಈ ನಿಜವಿದ್ಯಾಭ್ಯಾಸದ ಪ್ರಥಮಪಾಠವಾವುದೆಂದು ವಿಚಾರಿಸುವ.

I

"ಜೋಗುಳ ಹಾಡು"

ಪ್ರಥಮ ಪಾಠವು ತಾಯಿಯಾಗಲಿ ದಾದಿಯಾಗಲಿ ಹಾಡುವ "ಜೋ! ಕಂದ! ಜೋ!" ಹಾಡಿನಲ್ಲಿದೆ! ಅಜ್ಜಿಯರನ್ನು ಕೇಳಿದರೆ, ಜೋಗುಳಪದವು ಮಗುವನ್ನು ಮಲಗಿಸಲಿಕ್ಕೆ ಹಾಡುವುದೆಂದು ಹೇಳುವರು. ಆದರೆ, ನಿಜವಾಗಿಯೂ ಮಗುವಿನ ಮಿದುಳಿನಲ್ಲಿ ಆಗುವ ಬದಲಾವಣೆಗಳನ್ನು ಹೇಳಿದರೆ, ಆ ಅಜ್ಜಿಯರು ಆಶ್ಚರ್ಯಪಡಬಹುದು. ಹಾಡುಹಾಡುತ್ತಾ ಹೋದಂತೆಯೇ ಮಿದುಳಿನಲ್ಲಿ ಸೆಲ್ಸ್ (ಚಿಕ್ಕ ಅಂಕಣ) ಗಳು ಸೇರುತ್ತವೆ. ಹೀಗೆ ವಿಭಾಗಿಸಲ್ಪಟ್ಟು ನೂತನವಾಗಿ ಒಟ್ಟುಗೂಡುವ "ಸೆಲ್ಸ್"ಗಳೇ ಮಾನವನ ತಿಳುವಳಿಕೆಯ ಮೂಲಸ್ಥಾನ. ಈ ವಿಷಯದಲ್ಲಿ "ಫ್ರಿನಾಲಜಿ" (ಕಪಾಲಲಕ್ಷಣವಿದ್ಯೆ) ಯೂ ಕೂಡ ನಮ್ಮ ಮೇಲಣ ಅಭಿಪ್ರಾಯವನ್ನು ಪುಷ್ಟೀಕರಿಸುವುದು. ಈ ವಿದ್ಯೆಯ ಪ್ರಕಾರ ಮಗುವಿನ ತಲೆಯನ್ನು ಪರೀಕ್ಷಿಸಿ ಗುಣ ನಡತೆಯನ್ನು ತಿಳಿಯುವುದು ಕಷ್ಟ; ಏಕೆಂದರೆ, ಮಗುವಿನ ಎಳೆ ಮಿದುಳು ಪ್ರತಿಕ್ಷಣದಲ್ಲಿಯೂ ಬದಲಾವಣೆಯನ್ನು ಹೊಂದುತ್ತಲೇ ಇರುವುದು.

---

*"Every child is born with latent possibilities which may lie dormant through life or may wholly or partially be educed by training of two kinds–direct or indirect"

— H. E. Sir George Sydenham Clarke, in his Convocation Address of 1908.

ಜೋಗುಳಹಾಡು, ಸರಿಯಾದ ಪದ್ಯವಾಗಿರಬಹುದು. ಕೆಲವು ವೇಳೆ ಮನಸ್ಸಿಗೆ ತೋಚಿದ ಸ್ವಕಪೋಲಕಲ್ಪಿತ ಪದ್ಯವಾಗಿರಲೂಬಹುದು. ಅತಏವ, ಹಾಡಲ್ಪಟ್ಟ ಹಾಡು ಮಗುವಿನ ಕಿವಿಗೆ ರಮ್ಯವಾಗಿ ಕೇಳಿ ನಿದ್ರೆಯೇನೋ ಬರುವುದು. ಆದರೆ, ಅದೇ ಹಾಡು, ಮಗುವನ್ನು ಆಲೋಚಿಸಲು ಪ್ರಯತ್ನಿಸುತ್ತದೆ. ನಾವು ಮಾತಾಡುವುದಕ್ಕೆ ಆಲೋಚನೆಯೇ ಮೂಲಸ್ಥಾನವು. ಆಲೋಚನೆಯಿಲ್ಲದೆ ಮಾತನಾಡುವುದು ಕಷ್ಟವಷ್ಟೆ! ಆಲೋಚಿಸಿದ ಹಾಗೆಯೇ ಮೊದಲು ನವೀನವಾಗಿ ಸೇರಿಸಲ್ಪಟ್ಟ ಪ್ರಾಥಮಿಕ ಮತ್ತು ಮೂಲಜ್ಞಾನದ ಸೋಪಾನವು ಹಾಕಲ್ಪಡುವುದು.

ಜೋಗಳ ಹಾಡು ಎರಡು ವಿಧವಾಗಿ ವಿಭಾಗಿಸಲ್ಪಟ್ಟಿದೆ. ಕರ್ಣಾನಂದವಾದ ಮಧುರ ಕಂಠದಿಂದ ಹಾಡುವುದೂ ಮತ್ತು ಕರ್ಣಕಠೋರವಾಗಿ ಬೆದರಿಕೆಯುಂಟಿರುವ ಹಾಡನ್ನು ಹಾಡುವುದೂ ಎಲ್ಲರಿಗೂ ತಿಳಿದಿದೆ. ಇದರಲ್ಲಿ ಮೊದಲನೆಯದು ಯಾವತ್ತೂ ಉತ್ತಮವು. ಎಳೆಮೆದಳು ನಿಶ್ಶಕ್ತವಾಗಿರುವುದರಿಂದ ನಿಧಾನವಾಗಿ ಮಧುರ ಕಂಠದಿಂದ ಹಾಡನ್ನು ಹಾಡಬೇಕು. ಹಾಗೆ ಹಾಡಿದರೆ ಮಗುವಿನ ಯಾವ ಅಂಗಕ್ಕೂ ಬಾಧೆ ಇರುವದಿಲ್ಲ.

ಈ ವಿಷಯವಾಗಿ ಪ್ರಸಿದ್ಧ ಡಾಕ್ಟರರೊಬ್ಬರು (ಆಂಗ್ಲೇಯ ವೈದ್ಯರು) ಹೇಳುವುದನ್ನು ಈ ಕೆಳಗೆ ಬರೆದಿರುವೆವು.

ಒಮ್ಮೆ ಬಹು ಚಿಕ್ಕಮಗುವನ್ನು ನಮ್ಮ ಮನೆಗೆ ಕರಸಿ ಮಗುವಿನ ತಾಯಿಯಿಂದ ಕರ್ಣಕಠೋರವಾದ ಜೋಗಳ ಹಾಡನ್ನು ಹೇಳಿಸಿದೆನು. ತಾಯಿಯು ನಾನು ಹೇಳಿದಂತೆ ಮಾಡತೊಡಗಿದಳು. ಮಗುವಿನ ಮುಖವನ್ನೇ ಪರೀಕ್ಷಿಸುತ್ತಿದ್ದ ನನಗೆ ಆಶ್ಚರ್ಯವಾಯಿತು. ಮಗುವು ತುಟಿಯನ್ನು ಮುದುಡಿಕೊಂಡಿತು. ಕಣ್ಣು ಮುಚ್ಚಿಕೊಂಡಿತು. ನಾಡಿಯು ಒಂದೇ ಸವನೆ ಬಡಿದುಕೊಳ್ಳುತ್ತಿದ್ದಿತು. ರಕ್ತಸಂಚಾರವು ಮಿತಿಮೀರಿದ್ದಿತು. ಹೃದಯವೂ ಧಡಧಡನೆ ಬಡೆದುಕೊಳ್ಳುತ್ತಿದ್ದಿತು. ದೇಹಪ್ರಕೃತಿಯೂ ಮಿತಿಮೀರಿದ್ದಿತು. ಕಟ್ಟಕಡೆಗೆ ಮಗುವೂ ಅಳಲಾರಂಭಿಸಿತು. ನಿದ್ರಾವಸ್ಥೆಯಲ್ಲಿಯೂ ಮಗುವು ಬೆಚ್ಚಿಬೀಳುತ್ತಿದ್ದುದನ್ನು ಕಂಡೆನು.

* * * * *

ಮರುದಿನ ಅದೇ ಮಗುವನ್ನು ತರಿಸಿ ತಾಯಿಯಿಂದ ಸೊಗಸಾದ ಹಾಡನ್ನು ಹಾಡಿಸಿದೆನು. ಈ ಬಾರಿ ಮಗುವು ಅಳಲಿಲ್ಲ. ಅಳುವಿನ ಬದಲು ನಗುವು ಮುಖದಲ್ಲಿದ್ದಿತು. ಗುಲಾಬಪುಷ್ಪವನ್ನು ಧಿಕ್ಕರಿಸುವಂತಿದ್ದ ಆ ಅಧರೋಷ್ಠವನ್ನು ಕಂಡು ಮೋಹಿತನಾಗಿ ಬಾರಿಬಾರಿಗೂ ಮುದ್ದಿಡಲೊ ಎಂದು ನನ್ನನ್ನು ಪ್ರೇರೇಪಿಸುತ್ತಿದ್ದ ಮೋಹಶಕ್ತಿಯು ನಿನ್ನೆಯಲ್ಲಿದ್ದಿತು? ಹೃದಯವು ಸರಿಯಾದ ವ್ಯವಸ್ಥೆಯಲ್ಲಿದ್ದಿತು. ನರಗಳಲ್ಲಿ ರಕ್ತಸಂಚಾಲನವು ಸರಿಯಾದ ವ್ಯವಸ್ಥೆಯಲ್ಲಿದ್ದಿತು. ಮಗುವು ನಿದ್ರಾವಸ್ಥೆಯಲ್ಲಿಯೂ ನಗುತ್ತಿದ್ದುದನ್ನು ಕಂಡೆನು.

ಪ್ರಥಮಾವಸ್ಥೆಯಲ್ಲಿ ಮಗುವು ಭೀಕರ ಹಾಡನ್ನು ಕೇಳಿ ಬೆದರಿ ಭೀಕರ ಆಕಾರವನ್ನು ನೆನಸುವುದು. ಆ ಆಕಾರವನ್ನು ನೆನೆನೆನೆದು ಅಳುವುದು. ಕರ್ಣಾನಂದವಾದ ಹಾಡನ್ನು ಕೇಳಿ ಸುಂದರ ದೃಶ್ಯವನ್ನು ನೆನೆಯುವುದು. ಸುಂದರ ದೃಶ್ಯವನ್ನು ನೆನೆದೊಡನೆಯೇ ಆನಂದವು ಉಕ್ಕಿಬಂದು ಸಂತೋಷದಲ್ಲಿ ತೀರುತ್ತದೆ. ಮಗುವು ಸಂತೋಷವಾಗಿದ್ದರೆ ಬೆಳವಣಿಕೆಗೆ ಒಳ್ಳೆಯದು. ದೃಢಕಾಯದ ಸುಂದರ ಮಗುವನ್ನು ಪಡೆಯಲು ಯಾವ ನಾರಿಯು ತಾನೆ ವಾಂಛಿಸಲೊಲ್ಲಳು? ಪಡೆಯಲು ಸಾಧ್ಯವಾದರೂ ಮುಂದಿನ ಬೆಳವಣಿಗೆಯು ಆಕೆಯ ಹಸ್ತದಲ್ಲಿದೆ. ಮಗುವು ಕಂಠಾಳಿಯಾಗಿದ್ದರೆ ವ್ಯರ್ಥವಾಗಿ, ದೆವ್ವ, ಪಿಶಾಚಗಳನ್ನು ದೂರುವುದು ವಾಡಿಕೆ. ಇದರಿಂದ ದ್ರವ್ಯನಾಶ, ಸಮಯನಾಶ, ಎಲ್ಲವೂ ನಾಶ. ಆದುದರಿಂದ ನಾರಿಯರು ಬಹು ಮಧುರವಾದ ಗಾನವನ್ನು ಸುಮಧುರವಾಗಿ (ನಿಧಾನವಾಗಿ) ಹಾಡಿ ಮಕ್ಕಳನ್ನು ಮಲಗಿಸಲು ಪ್ರಯತ್ನಿಸುವುದು ಉತ್ತಮ.

ಕೆಲವರು ಉಪಶಮನಕರವಾದ ಕೆಲವು ಔಷಧಿಗಳನ್ನು ಪ್ರಯೋಗಿಸುವರು. ಇದು ಬಹಳ ಕೆಟ್ಟದು. ನಮ್ಮೂರಿನ ಒಬ್ಬಾಕೆ ಅಫೀಮು ಮಿಶ್ರಿತವಾದ ಒಂದಾನೊಂದು ಔಷಧಿಯನ್ನು ಉಪಯೋಗಿಸಿದುದನ್ನು ನಾನು ಕಂಡಿರುವೆನು. ಎಳೆಯ ಅಂಗಗಳಿಗೆ ಇದರಿಂದ ಬಾಧಕವಲ್ಲದೆ ಪ್ರಯೋಜನವಿಲ್ಲ. ದೊಡ್ಡವರಿಗೇ ಅಫೀಮು ಕೆಡಕಾದುದರಿಂದ ಮೇಲೆ ಮಕ್ಕಳಿಗೆ ಒಳ್ಳೆಯದೆ?

ಜೋಗಳ ಹಾಡುಗಳಲ್ಲಿ ನಮ್ಮ ನಾರಿಯರು ಯಾವತ್ತೂ ಪಾರಮಾರ್ಥಿಕ ವರ್ಣನ, ಸ್ವದೇಶಾಭಿಮಾನ, ಇತ್ಯಾದಿಗಳಿಗೆ ಸಂಬಂಧಪಟ್ಟ ಹಾಡನ್ನು ಹಾಡುವುದು ಉತ್ತಮ. ಬಂಡ ಹಾಡುಗಳನ್ನು ಹಾಡಲೇ ಬಾರದು.

ii

ಆ ಹಾ ರ.

ಎಳೇಮಗುವಿನ ಪ್ರತಿಯೊಂದು ಅಂಗವೂ ಸಂಪೂರ್ಣವಾಗಿ ಬೆಳೆದಿರುವುದಿಲ್ಲವೆಂಬ ಸಂಗತಿಯು ನಿಮ್ಮಲ್ಲಿ ಅನೇಕರಿಗೆ ವೇದ್ಯವಾಗಿರಬಹುದು. ಮಾನವನ ಶರೀರ ರಚನೆಯು ಒಂದು ಮೆಶೀನ್ (ಯಂತ್ರ)ನಂತೆ ಇರುವುದು. ಈ ಯಂತ್ರವು ಸರಿಯಾಗಿ ನಡೆದರೆಯೇ ಮಾನವನು ಸಜೀವನಾಗಿದ್ದು ಸಕಲ ಕಾರ್ಯಗಳನ್ನೂ ಮಾಡುವನು. ಸರಿಯಾಗಿ ನಡೆಯಲು ಸರಿಯಾದ ಆಹಾರವನ್ನೀಯಬೇಕಾಗಿದೆ. ಆಹಾರದ ಸತ್ವವೇ ನಮ್ಮ ದೇಹದ ಶಕ್ತಿ. ಮಗುವಿಗೂ ಆಹಾರವನ್ನೀಯಬೇಕಾ

ಗಿದೆ. ಯಾವುದನ್ನು ಕಷ್ಟವಿಲ್ಲದೆ ಜೀರ್ಣಮಾಡಬಹುದೊ ಅಂತಹ ಆಹಾರವನ್ನು ಕೊಡಬೇಕು. ನಾವು ಕಂಡಮಟ್ಟಿಗೆ ಅನೇಕ ಮಾತೆಯರು ಹೀಗೆ ಮಾಡುವದಿಲ್ಲ. ಒಬ್ಬಾಕೆಯು ಗಂಟೆಗೊಂದು ಬಾರಿ ಆಹಾರವನ್ನೀಯುತ್ತಿದ್ದುದನ್ನು ಪ್ರತ್ಯಕ್ಷವಾಗಿ ನೋಡಿರುವೆವು. ಆ ಮಗುವಿಗಾದರೋ, ಅತಿಕ್ಷೀಣ ಕಾಯ! ಧರಿತ್ರಿಯಲ್ಲಿ ಇನ್ನಾವ ಮಗುವು ತಾನೆ ಈ ತರದ ಪೋಷಣೆಯಲ್ಲಿ ಪುಷ್ಟಿಹೊಂದಿ ಬೆಳದೀತು? ಮೊದಲು ಹೋದ ಆಹಾರವು, ಇನ್ನೂ ಹೊಟ್ಟೆಯಲ್ಲಿಯೇ ಇದೆ. ಮತ್ತೆಯೂ ಸ್ವಲ್ಪ ಕಳುಹಿದರೆ ಒಳಗಿರುವುದು ಮಿತಿಮೀರಿ, ದೃಢಕಾಯವಾಗಿ ಮಗುವು ವರ್ಧಿಸುವ ಬದಲು, ಅನೇಕ ರೋಗಾದಿಗಳಿಗೆ ತುತ್ತಾಗಿ--ಹೆಚ್ಚೇಕೆ—ಮರಣವೂ ಸಂಭವಿಸಬಹುದು!

ಮಗುವಿಗೆ ಸ್ವಜ್ಞಾನವಿದೆ. ತನಗಾನಂದವಾದಾಗ ಅದು ನಗುವುದು. ದುಃಖ ಬಂದಾಗ ಅಳುವುದು. ಹೊಟ್ಟೆ ಹಸಿವು ಆದಾಗ ಅಳುವುದು! ನಮ್ಮ ಗಡಿಯಾರಗಳು ಈ ವಿಷಯದಲ್ಲಿ ನಿಷ್ಪ್ರಯೋಜನ. ಕ್ಲಪ್ತಸಮಯದಲ್ಲಿ ಮಗುವು ಆಹಾರ ಬೇಕೆಂದು ಅಳುವುದು. ಆ ಸಮಯದಲ್ಲಿ ಮಾತ್ರ ಆಹಾರವನ್ನೀಯಬೇಕು. ನಮ್ಮ ನಾರಿಯರು ಅವರ ಅಡಿಗೆಯಾದಾಗ ಮಗುವಿಗೆ ಆಹಾರವನ್ನೀಯುವುದು ಪದ್ಧತಿಯಾಗಿದೆ. ಯಾವಾಗ ಮಗುವಿಗೆ ಸಾಕಾದಷ್ಟು ಆಹಾರ ದೊರಕಿತೋ ಆ ತರುವಾಯ, ಅದು ತೆಗೆಯಲೊಲ್ಲದೆ ಅಸಮ್ಮತಿಯನ್ನು ಸೂಚಿಸುವುದು. ಇದನ್ನು ಲಕ್ಷಕ್ಕೆ ತಾರದೆ ಮಾತೆಯರಾಗಲಿ ದಾದಿಯರಾಗಲಿ ಮತ್ತೆ ಮತ್ತೆ ಆಹಾರವನ್ನು ಮಗುವಿನ ಪುಟ್ಟದಾದ ಬಾಯಲ್ಲಿ ತುರುಕುವರು! ಭಾರತ ವರ್ಷದಲ್ಲಿ ನೂರಕ್ಕೆ ತೊಂಬಂತೊಂಬತ್ತು, ಮುಕ್ಕಾಲುಮೂರು ವೀಸ ಜನರು ಮಿತಿಮೀರಿಕೆಂದು ಸತ್ತುಹೋಗುವರೆಂದು, ಒಬ್ಬ ಪ್ರಸಿದ್ಧ 'ಡಾಕ್ಟರು' (ವೈದ್ಯರು) ಹೇಳಿರುವರು.

ಇದರಿಂದುಂಟಾಗುವ ಫಲಿತಾಂಶವಾದರೋ ಮರಣಪರ್ಯಂತರವೂ ಇರುವುದು. ಶರೀರದಲ್ಲಿ ಮಾತ್ರವಲ್ಲದೆ ಮಗುವಿನ ಗುಣನಡತೆಯಲ್ಲಿಯೇ ಮಾರ್ಪಾಟು ಆಗುವುದು. ಮಕ್ಕಳು ಮೊಂಡಾಟವನ್ನು ಇಲ್ಲಿ ಕಲಿಯುವರು.

ಇನ್ನು ವಸ್ತ್ರಾಭರಣದ ವಿಷಯವನ್ನು ನೋಡುವ—

iii

ಉಡಿಗೆ ತೊಡಿಗೆ.

ನಮ್ಮಲ್ಲಿ ಅನೇಕ ಮಕ್ಕಳಿಗೆ ಕುಲಾವಿಯನ್ನು ಹೊಲಿಸುವುದು ವಾಡಿಕೆಯಾಗಿದೆ. ಇದನ್ನು ತಲೆಗೆ ಕಟ್ಟಿ ಹೊರಗಣ ಗಾಳಿ ಸೋಕದಂತೆ 'ಪ್ಲಾನಲ್' ಬಟ್ಟೆಯಿಂದಮಾಡಿದ ಅಂಗಿಯನ್ನು ತೊಟ್ಟುಕೊಂಡು ಬರುವ ಎಷ್ಟೋ ಮಕ್ಕಳನ್ನು ನೋಡಿರುವೆವು. ಇದು ಒಳ್ಳೆಯದಲ್ಲ. ಯಾವತ್ತೂ ತಲೆಗೆ ಯಾವುದೊಂದು ವಸ್ತ್ರವನ್ನೂ ಇರಿಸಬಾರದು. ಅಂಗಿಯು ಸಡಿಲವಾಗಿರಬೇಕು. ಅಪೂರ್ಣವಾಗಿ ಬೆಳೆದಿರುವ ಮಗುವಿನ ಸರ್ವಾಂಗವೂ ಯಾವ ತೊಡಕೂ ಇಲ್ಲದೆ ಅತ್ತಿತ್ತ ಚಲಿಸುವಂತೆ ಇರಬೇಕು. ಬಿಗಿಯಾದ ಅಂಗಿಯನ್ನು ತೊಡಿಸಿದರೆ ಕೈಕಾಲು ಕಟ್ಟಿದಂತಾಗಿ ಅಂಗಗಳ ಬೆಳವಣಿಗೆಯೇ ನಿಂತುಹೋದೀತು.

ರಾತ್ರಿ ಮಕ್ಕಳನ್ನು ಮಲಗಿಸುವಾಗ ತಲೆತುಂಬ ದುಪ್ಪಟಿಯನ್ನು ಹೊದಿಸುವದು ಅನೇಕರಲ್ಲಿ ವಾಡಿಕೆಯಾಗಿದೆ. ಇಂತಹರಿಗೆ ವಾಯುವಿನ ಪ್ರಯೋಜನವು ತಿಳಿದಿರುವುದಿಲ್ಲವೆಂದೆನ್ನಬೇಕು. ನಾವು ವಿದ್ಯಾರ್ಥಿಯಾಗಿದ್ದಾಗ ಪ್ರಸಿದ್ಧ ಒಬ್ಬ "ಅಯ್ಯ" ಮನೆಯಲ್ಲಿದ್ದೆವು. ಅವರಿಗೆ ನಾಲ್ಕೈದು ಮಕ್ಕಳಿದ್ದುವು. ಎಂಟುಮಾಸದ ಮಗುವನ್ನು ತಲೆಗೆ ಏನೊಂದನ್ನೂ ಹಾಕದೆ ಗಾಳಿಸವಾರಿಗೆ "ರಾಜಾಸ್ ಸೀಟ್" ಎಂಬ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದೆವು. ಅದು ಮಗುವಿಗೆ ಆನಂದಕರವಾಗಿದ್ದಿತೇ ಹೊರತು, ದುಃಖಕರವಾಗಿರಲಿಲ್ಲ. ಎಂಟುದಿವಸಗಳ ಮಗುವನ್ನು ಸಮುದ್ರಕರೆಗೆ ತೆಗೆದುಕೊಂಡು ಹೋಗಿರುತ್ತಾರೆ. ಇದರಿಂದೇನೂ ಬಾಧಕವಿಲ್ಲ.

ಮಕ್ಕಳನ್ನು ಯಾವತ್ತೂ ಹೊರಗೆ ಕರೆದುಕೊಂಡು ಹೋಗಲೇಬೇಕು. ಇದರಿಂದ ಮಹತ್ಪ್ರಯೋಜನಗಳಿವೆ. ಮಗುವಿನ ಮನಸ್ಸಿನಲ್ಲಿ ಆನಂದಸೂಚಕ ದೃಶ್ಯಗಳು ತುಂಬಿ ಅದು ಸದಾಉಲ್ಲಾಸಚಿತ್ತದಲ್ಲಿದ್ದು ಮುಂದೆ ದೊಡ್ಡದಾದಾಗ ಪ್ರಸಿದ್ಧ ಪುರುಷನಾಗುವುದರಲ್ಲಿ ಸಂಶಯವಿಲ್ಲ. ಪ್ರಾಕೃತಿಕ ಸೌಂದರ್ಯವು ಅನೇಕರನ್ನು ಮಹಾಪುರುಷರಾಗಿ ಮಾಡಿದೆ. ನಿಮಗೆ ಮಕ್ಕಳಿದ್ದರೆ ನೀವೂ ಹಾಗೆಯೇ ಮಾಡುವಿರಲ್ಲವೇನು?

ಎರಡನೆಯ ಭಾಗ.

ಅಭ್ಯಾಸಗಳು.

ಮಕ್ಕಳಿಗೆ ಮಾತೆಯರೆಂದರೆ ಅಷ್ಟು ಪ್ರೀತಿ. ಆ ಪ್ರೀತಿಯನ್ನು ವಿವರಿಸಲಸದಳವು. ಮಾತೆಯನ್ನಗಲಿರುವುದೆಂದರೆ ಅವರಿಗೆ ಪ್ರಾಣಕ್ಕೆ ಬರುವುದು. ಒಂದೊಂದು ಸಾರಿ ತಾಯಿಗೆ ಹೊರಗೆ ಕೆಲಸವಿರುವುದು. ಮಕ್ಕಳನ್ನು ಇತರರ ವಶಕ್ಕೆ ಬಿಟ್ಟು ತಾನು ಹೊರಗೆ ಹೋಗುವುದು ವಾಡಿಕೆಯಷ್ಟೆ. ತಾಯಿಯನ್ನು ಸೇರಬೇಕೆಂದು ಅಳತೊಡಗುವುದು. ಅತ್ತಿತ್ತ ಹುಡುಕಾಡುವುದು. ಕೊನೆಗೆ ಎಲ್ಲಿಯೂ ಕಾಣದೆ ಸುಮ್ಮನಾ

ಗುವುದು. ಈ ರೀತಿ ಮಗುವು ಆಶಾಭಂಗವೆಂದರೇನೆಂದು ತಿಳಿಯುವುದು.

ಇನ್ನೊಂದು ವಿಷಯವಿದೆ:—ನಾವಾಗಿ ಕಲಿಸಿಕೊಡುವುದೇನೆಂದರೆ ಅನೃತವಾಡುವುದು! ಮಗು ತಾಯಿಯನ್ನು ಹುಡುಕಾಡುತ್ತ ಅತ್ತಿತ್ತ ಇದ್ದವರನ್ನು ವಿಚಾರಿಸುವುದು; ಅವರು ಮನಬಂದಂತೆ ಹೇಳುವರು. ಮಗುವು ಅವುದನ್ನೂ ನಂಬಲಾರದೆ ಅಳುವುದು. ಇದಕ್ಕಿಂತಲೂ ಮಾತೆಯರು ತಾವಾಗಿಯೇ ಎಲ್ಲಿಗೆ ಹೋಗುವೆವೆಂಬುದನ್ನು ತಿಳಿಯಿಸುವುದು ಉತ್ತಮವೆಂಬುದು ತಿಳಿಯಬಂದಿರುತ್ತದೆ. ಯಾವತ್ತು ತಾಯಿಯರು ಸ್ಪಷ್ಟವಾಗಿ ಹೇಳಿಬಿಡಬೇಕು. ಈ ರೀತಿ ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟರೆ ಮಗುವು ಧೈರ್ಯದಿಂದ ತಾಯಿಯು ಇಲ್ಲದ ಸಮಯವನ್ನು ಕಳೆಯಲು ಕಲಿಯುವುದು. ಸತ್ಯವನ್ನೇ ನುಡಿಯಬೇಕೆಂಬುದು ಅದಕ್ಕೆ ತಿಳಿಯುವುದು.

ಆತ್ಮಗೌರವವು ಪ್ರತಿಯೊಬ್ಬನಲ್ಲಿಯೂ ಇರಬೇಕಾದುದೇ ಸರಿ. ಪ್ರತಿ ಒಂದು ಮಗುವೂ ಇದನ್ನು ತಿಳಿಯಬೇಕಾಗಿದೆ. ಏನು? ಮಗುವಿಗೆ ಆತ್ಮಗೌರವವೇ? ಎಂದು ಕೆಲವರು ಕೇಳಬಹುದು--ಹಾಸ್ಯ ಮಾಡಲೂಬಹುದು. ಆದರೆ ಆತ್ಮಗೌರವವನ್ನು ತಿಳಿಯದ ಮಗುವು, ಒಳ್ಳೆಯದನ್ನು ಮಾಡುವಬದಲು ಕೆಟ್ಟದ್ದನ್ನೇ, ಮಾಡುವುದರಲ್ಲಿ ಸಂಶಯವಿಲ್ಲ. ನಿಮ್ಮ ಮಗುವಿಗೆ ಸ್ವಗೌರವವೇನೆಂದು ಕಲಿಸಿಕೊಡಿರಿ. ಆ ಮಗುವು ನಿಮ್ಮನ್ನು ಮರ್ಯಾದೆಪೂರ್ವಕವಾಗಿ ಕಾಣುವುದು. ಈ ವಿಷಯದಲ್ಲಿ ಪ್ರತಿಯೊಬ್ಬ ಮಗುವೂ ಗರ್ವಪಡಬೇಕು. ಗರ್ವವು ಒಂದುವಿಧದಲ್ಲಿ ಒಳ್ಳೆಯದು. ಒಮ್ಮೆ ಡಾಕ್ಟರ್‌ರೇಳೆಯವರು ಒಬ್ಬಾನೊಬ್ಬನನ್ನು ಕೇಳಿದರಂತೆ-"ಅಯ್ಯಾ, ನಿನ್ನಲ್ಲಿ ಗರ್ವವಿದೆಯೇ?" ಎಂದು. ಪ್ರತ್ಯುತ್ತರವಾಗಿ ಅವನು "ಇದೆ. ನಾನು ಪೂರಾ ಗರ್ವಿಷ್ಠನು. ನನ್ನಲ್ಲಿಯೇ ಸದ್ಗುಣವಿದೆಯೆಂದು ಗರ್ವಪಡುವೆನು ಗರ್ವಪಡದಿದ್ದರೆ ಸದ್ಗುಣವು ನಾಶವಾದೀತೆಂದು ಬೆದರುವೆನು" ಎಂದನು. ಗರ್ವವು ಹತೋಟಿಯಲ್ಲಿಡಲ್ಪಟ್ಟರೆ ಸದ್ಗುಣವಾಗಿ ಪರಿಣಮಿಸುವುದು

ಮೇಲೆ ವಿವರಿಸಿದ ವೈದ್ಯ(ಪಂಡಿತ)ರಾದ ರೇಳೆಮಹಾಶಯರು ಒಂದು ಸಂಗತಿಯನ್ನು ವಿವರಿಸಿರುವರು. ಒಂದು ಮಗುವಿಗೆ ಆತ್ಮಗೌರವವನ್ನು ಕಲಿಸಿದರು. ಮಿಕ್ಕ ಮಕ್ಕಳೆಲ್ಲರೂ ತನಗೆ ಸಮಾನರಾದವರೆಂದೂ ಎಲ್ಲರೂ ಮರ್ಯಾದೆಗೆ ಅರ್ಹರೆಂದೂ ಮುಂಚಾಗಿ ಹೇಳಿಕೊಟ್ಟಿದ್ದರು. ಅದರ ತಂದೆಯು ಒಮ್ಮೆ ಒಂದು ದ್ರಾಕ್ಷೆ ಹಣ್ಣಿನ ಬುಟ್ಟಿಯನ್ನು ತಂದರು. ತಂದು ಈ ಚಿಕ್ಕಮಗುವಿನ ಹಸ್ತದಲ್ಲಿತ್ತರು. ಮಗುವು ತನ್ನ ಅಣ್ಣ ಅಕ್ಕಂದಿರನ್ನೆಲ್ಲಾ ಕರೆದು ಎಲ್ಲರಿಗೂ ಸಮಾನವಾಗಿ ಹಂಚಿದುದಲ್ಲದೆ ತನ್ನ ತಾಯಿಗೂ ತಂದೆಗೂ ವೈದ್ಯಮಹಾಶಯನಿಗೂ ಕೊಟ್ಟಿತಂತೆ! ತರುವಾಯ ತನ್ನ ಈ ನಿರ್ದಾಕ್ಷಿಣ್ಯವ್ಯಾಪಾರದ ವಿಷಯದಲ್ಲಿ ಗರ್ವಪಡುತ್ತಿದ್ದಿತಂತೆ!

ಮಡಿಯಾಗಿರುವುದು ಒಂದು ಸದ್ಗುಣ. ಮಾತಾಪಿತರು ಚೊಕ್ಕಟವಾಗಿದ್ದರೆ ಮಗುವೂ ಮಡಿಯಾಗಿರಲು ಪ್ರಯತ್ನಿಸುತ್ತದೆ. ಹೊಸ ಅಂಗಿಯನ್ನು ಒಂದು ಮಗುವಿಗೆ ತೊಡಿಸಿ ಹೊಸ ಅಂಗಿ ಹಾಕಿದರೆ ಎಷ್ಟು ಅಂದವಾಗಿ ಕಾಣುವುದೆಂಬುದನ್ನೂ ಮೈಲಿಗೆಯಾದ ಅಂಗಿಯನ್ನು ತೊಟ್ಟರೆ ಅದೆಷ್ಟು ಅಸಹ್ಯವಾಗಿ ಕಾಣುತ್ತದೆಂಬುದನ್ನೂ ಪ್ರತಿಯೊಬ್ಬ ಮಗುವಿಗೂ ತಿಳಿಸಬೇಕು. ರಾತ್ರಿ ಮಲಗುವಾಗ ಅಂಗಿಯನ್ನು ಬಿಚ್ಚಿ ರಾತ್ರಿಯ ಉಡುಪನ್ನು ಧರಿಸಿ ಕೈಕಾಲನ್ನು ತೊಳೆದುಕೊಂಡು ದೇವರನ್ನು ಪ್ರಾರ್ಥಿಸಿ ಊಟವನ್ನು ಮಾಡಿ ಮಲಗುವಂತೆ ಪ್ರೇರೇಪಿಸಬೇಕು. ಕ್ರಮಪ್ರಕಾರ ಕೆಲಸಮಾಡಲು ಚಿಕ್ಕಂದಿನಿಂದಲೂ ಕಲಿಸಬೇಕು. ಹೀಗೆ ಮಾಡಿದರೆ ಮಡಿವಾಳನ "ಬಿಲ್ಲು" ಕೊಂಚ ಕಡಿಮೆಯಾಗುವುದು! ದರ್ಜಿಗೆ ಹೋಗುವ ಹಣವೂ ಕಡಿಮೆಯಾಗುವುದು.!! ಮಗುವೂ ಮಡಿ ಎಂದರೇನೆಂಬುದನ್ನೂ ತಿಳಿಯುವುದು!!!

ನಮ್ಮ ಮಿತ್ರರೊಬ್ಬರು ಚಿಕ್ಕವರಾಗಿದ್ದಾಗ ಮಣ್ಣಿನಲ್ಲಿ ಆಡುತ್ತಿದ್ದರಂತೆ! ಇದನ್ನು ಬಿಡಿಸಲು ಅವರ ಮಾತಾಪಿತರು ಹೊಡೆದರಂತೆ! ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ಒಂದು ದಿನ ಬಹುಸೊಗಸಾದ ಒಂದು ಉಡುಪನ್ನು ತಂದು ತೊಡಿಸಿ ದೊಡ್ಡದಾದ ಕನ್ನಡಿಯ ಎದುರಿಗೆ ನಿಲ್ಲಿಸಿದುದಲ್ಲದೆ ಎಲ್ಲರೂ "ಅಂಗಿ ಬಹಳ ಚನ್ನಾಗಿದೆ!" ಎಂದು ಹೇಳತೊಡಗಿದರಂತೆ! ಅಂಗಿಯನ್ನು ಹಾಳುಮಾಡದೆ ಹಾಗೆಯೇ ಇಟ್ಟರೆ, ಬರುವ ಮಾಸದಲ್ಲಿ ಇನ್ನೊಂದನ್ನು ಕೊಡುವೆನೆಂದು ತಂದೆಯು ಹೇಳಿದ ಮೇಲೆ ನಮ್ಮ ಮಿತ್ರರು ಮಣ್ಣಿನಲ್ಲಿ ಆಡುವುದನ್ನು ಬಿಟ್ಟರಂತೆ. ಪ್ರಸ್ತುತದಲ್ಲಿ ಅವರು ಉಡುವ ಬಟ್ಟೆ ಅವರಿಂದಲೇ ಮಡಿಯಾಗಬೇಕಾಗಿದೆ. ಬೇರೆಯವರು ಒಗೆದರೆ ಅದು ಅವರಿಗೆ ಸಮರ್ಪಕವಾಗುವುದಿಲ್ಲ.

ಮಕ್ಕಳು ದೃಷ್ಟಿಗೆ ಬಿದ್ದುದನ್ನೆಲ್ಲಾ ತಿಳಿಯಬೇಕೆಂದು ಪ್ರಯತ್ನಿಸುವರು. ತಮ್ಮ ದೃಷ್ಟಿಗೆ ಗೋಚರವಾದ ವಸ್ತುಗಳ ವಿಷಯವನ್ನು ಮಾತಾಪಿತೃಗಳಿಗೆ ತೋರಿಸಿ ತಿಳಿದುಕೊಳ್ಳುವುದು ವಾಡಿಕೆ. ಅನೇಕರು ಸುಳ್ಳು ಸುಳ್ಳು ಸಂಗತಿಗಳನ್ನು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವರು. ಇದು ಒಳ್ಳೆಯದಲ್ಲ. ತಮಗೆ ತಿಳಿದಿರುವ ಮಟ್ಟಿಗೆ ನಿಜಾಂಶವನ್ನು ಮಕ್ಕಳಿಗೆ ಹೇಳಬೇಕು. ಉದಾಹರಣೆಗಾಗಿ ಮಕ್ಕಳು ಪೂರ್ಣಿಮಾಚಂದ್ರನನ್ನು ನೋಡಿ ಆನಂದಪಡುವರಲ್ಲದೆ ಅದರ ವಿಷಯವನ್ನು ಹೇಳಿ ಕೊಡೆಂದು ಮಾತಾಪಿತೃರನ್ನು ಪೀಡಿಸುವರು. ಈ ವಿಷಯವನ್ನು ಅವರಿಗೆ ಹೇಳಿಕೊಟ್ಟು. ಅದನ್ನು ತಿಳಿದು

ಕೊಳ್ಳುವುದರಲ್ಲಿ ಆಸಕ್ತಿಯನ್ನು ಹುಟ್ಟಿಸುವಂತೆ ಪ್ರೇರೇಪಿಸಬೇಕು. ಹೀಗೆ ಮಾಡಿದರೆ ಮುಂದಕ್ಕೆ ಅನೇಕ ಪ್ರಯೋಜನವಿದೆ.

ಅನೇಕ ಮಕ್ಕಳು ನೊಣಗಳನ್ನೂ ಇರುವೆಗಳನ್ನೂ ಕೊಲ್ಲುವುದನ್ನು ನಾವು ನೋಡಿರುವೆವು. ಇದು ಬಹಳ ಕೆಟ್ಟದು. "ಅಹಿಂಸಾ ಪರಮೋ ಧರ್ಮಃ," ಎಂಬುದನ್ನು ಚನ್ನಾಗಿ ಬೋಧಿಸಬೇಕು ಕೇಳದಿದ್ದರೆ ಮಗುವಿನ ಕೆನ್ನೆಯ ಮೇಲೆ ಬಲವಾಗಿ ಹೊಡೆದು ನೋವು ಹೇಗಿದೆಯೆಂದು ಕೇಳಬೇಕು. ಕೆನ್ನೆಯು ಕೆಂಪೇರಿದ್ದರೆ ಕನ್ನಡಿಯನ್ನು ತರಿಸಿ ಅದರಲ್ಲಿ ಮುಖವನ್ನು ತೋರಿರಿ "ನಿನಗೆಷ್ಟು ನೋವಾಗಿದೆಯೋ ಅಷ್ಟೇ ನೊಣಕ್ಕೂ ಆಗಿದೆ, ಎಂಬುದನ್ನು ತಿಳಿ," ಎಂದು ಹೇಳಬೇಕು. ಇಲ್ಲದಿದ್ದರೆ ಮಗುವು ದೊಡ್ಡದಾದ ಮೇಲೆ ಕ್ರೂರಿಯಾಗಬಹುದು. ನೆರೆಹೊರೆಯವರಿಗೆ ಕಂಟಕನಾಗಿ ಪರಿಣಮಿಸಬಹುದು.

ಮೂರನೆಯ ಭಾಗ.

ಮಾತಾಪಿತೃಗಳ ಕರ್ತವ್ಯ.

ಮಾತಾ ಪಿತೃಗಳಿಗೊಂದು ವಿಜ್ಞಾಪನೆ. ನಮ್ಮಲ್ಲಿ ಅನೇಕ ಸಂಸಾರಗಳು ಸ್ವರ್ಗಸುಖ ಪ್ರತಿಷ್ಠೆಮಾಡುವ ಬದಲು ನರಕಯಾತನೆಯನ್ನು ಪ್ರತಿಷ್ಠೆಮಾಡಿವೆ. ಸುಖಶಾಂತಿಗಳು ಮಾಯವಾಗಿವೆ. ಹೀಗಿರುವುದರಿಂದ ಬರೆಯಲು ಬೆದರಿಕೆಯಾಗುತ್ತದೆ. ಕ್ಷಮಾಪಣೆಯನ್ನು ಕೇಳಿ ಬರೆಯುವೆವು. ಕ್ಷಮಿಸಿ, ನಿಮ್ಮ ಸೇವಕರನ್ನು ನೀವು ಸರಿಯಾಗಿ ನೋಡುವುದಿಲ್ಲ! ಗುಲಾಮನಿಗಿಂತ ಕಡೆಯಾಗಿ ನೋಡುವುದು ತರವೆ? ಹಾಗೆ ನೋಡುವುದಾದರೂ ಮಕ್ಕಳಿಗೆ ಆ ಆದರ್ಶವನ್ನು ಹಾಕಿಕೊಡಬೇಡಿರಿ. ಸೇವಕರು ಮಕ್ಕಳ ಮುಂದೆ ಕೆಟ್ಟಮಾತನ್ನು ಆಡಬಾರದೆಂದು ಕಟ್ಟಾಜ್ಞತಿ ಮಾಡಿರಿ. ಅನೇಕ ಮಕ್ಕಳು ಹೀಗೆ ಸೇವಕರಿಂದ ಕೆಟ್ಟಿರುತ್ತಾರೆ.

ನಿಮ್ಮ ಮನೆಯಲ್ಲಿ ಗಂಡಹೆಂಡಿರು ಜಗಳವಾಡುವರೇನು? ಆಡುವ ಹಾಗಿದ್ದರೆ ಅಲ್ಲಿಂದ ಮಕ್ಕಳನ್ನು ಬೇರೆ ಕಡೆಗೆ ಸಾಗಿಸಿರಿ. ಯಾವುದು ದುಃಖಕರವೋ ಯಾವುದು ಒಳ್ಳೆಯದಲ್ಲವೋ ಅದನ್ನು ಮಕ್ಕಳ ದೃಷ್ಟಿಗೆ ಬೀಳಗೊಡದಿರಿ.

ಈ ಚಿಕ್ಕ ಲೇಖನದಲ್ಲಿ ಬರೆದ ಕೆಲವು ಅಂಶಗಳನ್ನು ಪ್ರತ್ಯಕ್ಷವಾಗಿ ತೋರಿಸಿರಿ. ಪ್ರಾರ್ಥನೆಯನ್ನು ನೀವೇ ಮಾಡಬೇಕು. ನಿಮ್ಮ ಜೊತೆಗೆ ಮಕ್ಕಳನ್ನು ತೆಗೆದುಕೊಳ್ಳಿರಿ. ದೇವರನ್ನು ಪ್ರೀತಿಸಬೇಕೆಂಬ ಅಂಶವನ್ನು ಚೆನ್ನಾಗಿ ಹೇಳಿಕೊಡಿರಿ.

ಮಗುವು ಶಾಲೆಯೆಂಬುದೇನೆಂದು ತಿಳಿದ ಮೇಲೆ ಅದನ್ನು ಶಾಲೆಗೆ ಕಳುಹಿಸಿರಿ. ಅಷ್ಟರ ವರೆಗೆ ತಮ್ಮ ಪತ್ನಿಯನ್ನೇ ಉಪಾಧ್ಯಾಯಿನಿಯಾಗಿ ಗೊತ್ತುಮಾಡಿರಿ.

ನಿಮ್ಮ ಮನೆಯಲ್ಲಿ ಸರ್ವದಾ ಶಾಂತಿಯು ನೆಲಸಿರಲಿ. ಶಾಂತಿಯೇ ಸರ್ವವಿಧವಾದ ಸುಖಕ್ಕೆ ಮೂಲಸ್ಥಾನವು. ಮಾತಾಪಿತೃಗಳು ಸದಾ ಉಲ್ಲಾಸಚಿತ್ತದವರಾಗಿದ್ದರೆ ಮಕ್ಕಳೂ ಉಲ್ಲಾಸಚಿತ್ತದವರಾಗುತ್ತಾರೆ.

ಜ್ಞಾಪಕವಿರಲಿ! ನಿಮ್ಮ ಮಕ್ಕಳ ಒಳ್ಳೆಯದು ಕೆಟ್ಟದು ನಿಮ್ಮ ಕೈಯಲ್ಲಿದೆ. ನಿಮ್ಮಂತೆಯೇ ಮಕ್ಕಳು!

॥ ಸರ್ವೇಜನಾಸ್ಸುಖಿನೋಭವಂತು ॥

ಸಂಪೂರ್ಣಂ.

'ಕಂದನಾಡುವ ಬಾಲಲೀಲೆಯಂ ನೋಡಿ ತೊದ ।
ಲೊಂದಿದಿನಿವಾತನುರೆಕೇಳ್ವ ಮುದ್ದಿನ ಮುದ್ದ ।
ಯಂದ ದಂಗವನೆತ್ತಿಕೊಂಡು ನಳಿತೋಳ್ಗಳಿಂದಪ್ಪಿ ಕೆಂಗುರ
ಳ್ಗಳೊಲೆವ ॥
ಮುಂದಲೆಯ ಕಂಪನಾಘ್ರಾಣಿಸಿ ತೊರೆದ ಜೊಲ್ಲ ।
ಚೆಂದುಟಿಯ ಬಾಯ್ದೆರೆಯನ್ನೆದೆ ಚುಂಬಿಸಿಸೊಗಸು ।
ಗುಂದದಾಯೆಂದು ಪಂಚೇಂದ್ರಿಯ ಪ್ರೀತಿಯಂಪಡೆವರಿನ್ನಾವ
ಕೃತರೊ!! "

ಶೀಘ್ರದಲ್ಲಿಯೇ ಹೊರಬರುವುದು.

"ಸ್ವರಾಜ್ಯದಲ್ಲಿ ಮಹಿಳೆಯರ ಸ್ಥಾನ." ಎಂಬ ಲೇಖನ, "ಇಪ್ಪತ್ತನೆಯ ಶತಮಾನದ ಮಹಿಳಾಮಣಿಯರು" ಎಂಬ ಉಪನ್ಯಾಸ, "ಸ್ತ್ರೀ ಸ್ವಾತಂತ್ರ್ಯ ಅಥವಾ ಉಮಾಸುಂದರಿ" ಎಂಬ ಹೊಸ "ನಾವಿಲ್!" ಸ್ತ್ರೀಯರಿಗೆಂದು ಬರೆಯಲ್ಪಟ್ಟವೆ. ನಂದಿನಿಯಲ್ಲಿ ಪ್ರಕಟಿಸಲ್ಪಡುವುವು.

ಸತೀಹಿತೈಷಿಣೀ ಗ್ರಂಥಮಾಲಾ.

ತ್ರೈಮಾಸಿಕ ಪುಸ್ತಕವು.

ಈ ಗ್ರಂಥಮಾಲೆಯಿಂದ ಸ್ತ್ರೀಜನಾಂಗಕ್ಕೆ ಎಷ್ಟು ಉಪಯೋಗವಾಗುತ್ತಿರುವುದೆಂಬುದನ್ನು ಇಲ್ಲಿ ವಿವರಿಸಬೇಕಾಗಿಲ್ಲ, ತಾವೇ ಪರೀಕ್ಷಿಸಿದರೆ ಗೊತ್ತಾಗುವುದು. ಮಾಲೆಯ ಪ್ರಥಮ ಪುಸ್ತಕವು ಒಂದು ವರ್ಷದೊಳಗಾಗಿ ಎರಡಾವೃತ್ತಿ ಮುದ್ರಣವಾಗಿರುವದನ್ನು ನೋಡಿದರೆಯೇ ಅದರ ಪ್ರಯೋಜನವು ತಿಳಿವುದು. ಇಷ್ಟರಲ್ಲಿ ದ್ವಿತೀಯ ಪುಸ್ತಕವೂ ಪುನರ್ಮುದ್ರಣವಾಗುವುದರಲ್ಲಿದೆ. ಹೆಚ್ಚಾಗಿ ಸ್ತ್ರೀಯರ ಮೇಲೆ ಬೀಳುತ್ತಿರುವ ವ್ಯಸನವಾದವನ್ನು ತಪ್ಪಿಸಿ, ಅವರಲ್ಲಿ ಗೌರವವನ್ನು ಹೆಚ್ಚಿಸುವದರಿಂದ ದೇಶದ ಅಭಿವೃದ್ಧಿಯು ಬೇಗಾಗಬಹುದೆಂಬುದನ್ನು ಸಕಾರಣವಾಗಿ ಸಮಯೋಚಿತವಾದ ಸ್ವತಂತ್ರಲೇಖನಗಳಿಂದ ಅನೇಕ ವಿಚಾರಗಳನ್ನು ಪ್ರತಿಪಾದಿಸುವ ಗ್ರಂಥಗಳೇ ಇದರಲ್ಲಿ ಪ್ರಕಟವಾಗುತ್ತಿರುವುವು. ಒಮ್ಮೆ ನೋಡಿದರೆ, ಗುಣವು ತಾನಾಗಿ ಪ್ರಕಾಶಕ್ಕೆ ಬರುವದು.

ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು —

ಸಂಖ್ಯೆ	ಹೆಸರು.	ಪುಟಸಂಖ್ಯೆಯು.	ಚಂದಾದಾರರಿಗೆ
೧	ಮಾತೃನಂದಿನಿ	೧ ೪ ೦	೧ ೦ ೦
೨	ಸುಶೀಲೆ	೧—೬ ೦	೦—೪—೦
೩	ಸರಳಾ	೦—[illegible] ೦	೦ [illegible] ೦
೪	ವಿದ್ಯುಲ್ಲತಾ	೦—೧೪ ೦	೦ ೧೦ ೦
೫	ವಿರಾಗಿಣಿ	೧—೦ ೦	೦ ೧೨—೦
೬	ದಕ್ಷಕನ್ಯಾ	೧—೮ ೦	೧—೦ ೦
೭	ರಮಾನಂದ	೦ ೧೦—೦	೦ ೬—೦
೮	ವಿಕ್ರಮ	೧—೨—೦	೦ ೧೪—೦
೯	ಚಂದ್ರವದನಾ	೦ ೧೦—೦	೦—೭ ೦

ಶಿವಗೀತಾವಳಿ ೦ ೪ ೦. ಸೇವಾವಿಚಾರ ೦ ೨-೦ ಇವೆರಡೂ [illegible] ಸಾರ್ವಜನಿಕರಿಗೆ ಬಹುಮಾನವಾಗಿ ಕೊಡಲ್ಪಡುವವು. ವಿಶೇಷ ವಿಷಯಗಳು ಪತ್ರದ್ವಾರಾ.

ವಿಳಾಸ: ಕಾರ್ಯದರ್ಶಿ, ಹಿತೈಷಿಣೀ ಮಾಲೆ (ಬಂಗಡೆ).
ನಂಜನಗೂಡ

ಇದನ್ನು [illegible] ಮುತಾಲಿಕ ದೇಸಾಯಿ, ಇವರು [illegible] ಮುದ್ರಾಲಯದಲ್ಲಿ ಮುದ್ರಿಸಿದರು
ಹಾಗೂ ಶ್ರೀಮತಿ [illegible] ಇವರು ನಂಜನಗೂಡು, ಕರ್ನಾಟಕ ನಂದಿನಿ [illegible] ಪ್ರಸಿದ್ಧಪಡಿಸಿದರು.

ಶ್ರೀ

ಸಂಪುಟ ೧ ಸಂಚಿಕೆ ೪

ಕರ್ಣಾಟಕ ನಂದಿನೀ



ಭಕ್ತ್ಯಾಗುರೌಮಯ್ಯನುಕಂಪಯಾಚ । ಪ್ರೀತಾಸ್ಮಿತೇ ಪುತ್ರವರಂ ವೃಣೀಷ್ವ ॥
ನ ಕೇವಲಾನಾಂ ಪಯಸಾಂ ಪ್ರಸೂತಿಂ । ಅವೇಹಿಮಾಂಕಾಮದುಘಾಂ ಪ್ರಸನ್ನಾಮ್ ॥

ವಾರ್ಷಿಕ ಚಂದಾ ೨—೮—೦ (೧೯೧೮) ಬಿಡಿಸಂಚಿಕೆಗೆ ೦—೩—೦

॥ ಶ್ರೀ ॥



ತವ ಕಥಾಮೃತಂ ತಪ್ತಜೀವನಂ ಕವಿಭಿರೀಡಿತಂ ಕಲ್ಮಷಾಪಹಮ್ ।
ಶ್ರವಣಮಂಗಲಂ ಶ್ರೀಮದಾತತಂ ಭುವಿ ಗೃಣಂತಿ ತೇ ಭೂರಿದಾ ಜನಾಃ ।

(ಗೋಪೀಗೀತಾ)

|| ಶ್ರೀ ||

|| ವಂದೇತ್ವಾಂ ಭೂದೇವೀಂ ಆರ್ಯಮಾತರಮ್ ||

ಕರ್ಣಾಟಕ ನಂದಿನಿ.

(ಮಾಸಪತ್ರಿಕೆ)

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃಪ್ರಭುಃ ||
ದಾಸ್ಯನ್ತಿ ಮಮಯೇ ಚಾನ್ಯೇಹ್ಯದೃಷ್ಟಾಃ ಪಥಿಗೋಚರಾಃ || "

ಸಂಪುಟ ೨ | ಪಿಂಗಳ ಸಂ|| ಪುಷ್ಯಮಾಸ ೧೮೩೯ — ೧೯೧೮ನೇ ಜನವರಿ | ಸಂಚಿಕೆ ೪

ಸೂರ್ಯೋದಯ.

" ಭಾಸ್ವದ್ರತ್ನಾಢ್ಯಮೌಲಿಃ ಸ್ಫುರದಧರ ರುಚಾ ರಂಜಿತಶ್ಚಾರು ಕೇಶೋ ಭಾ |
ಭಾಸ್ವಾನ್‌ಯೋ ದಿವ್ಯತೇಜಾಃ ಕರಕಮಲಯುತಃ ಸ್ವರ್ಣವರ್ಣಪ್ರಭಾಭಿಃ ||
ವಿಶ್ವಾಕಾಶಾವಕಾಶ ಗ್ರಹಪತಿಶಿಖರೇ ಭಾತಿಯಶ್ಚೋದಯಾದ್ರೌ |
ಸರ್ವಾನಂದಪ್ರದಾತಾ ಹರಿಹರನಮಿತಃ ಪಾತುಮಾಂ ವಿಶ್ವಚಕ್ಷುಃ || "

ಉದಯರಾಗ.

* ನಾರಾಯಣಂ—ಶ್ರೀ ಸೂರ್ಯನಾರಾಯಣಂ || ಪ ||
ಸಕಲಮುನಿಜನಸೇವಿತಂ ಸಾಧುಜನಪಾಲಕಂ । ವಿನತಾಸುತರಕ್ಷಕಂ ಕನಕವರ್ಣಂ
ಘನಸ್ತೋಮತೋಷಣಂ ಜನಮನೋರಂಜನಂ । ದಿವಕರಂ ಶ್ರೀಸೂರ್ಯಭಾನುಕಿರಣಂ ಭಜೆ || ೧ ||
ಅಷ್ಟದಳ ಪದ್ಮಯುಗ—ಇಷ್ಟಫಲದಾಯಕಂ । ದುಷ್ಟದನುಜಾಂತಕಂ ನಷ್ಟತಿಮಿರಂ ||
ಕುಷ್ಠರೋಗಾದಿ ಕಲ್ಮಷಪಾಪಭಂಜನಂ । ಸಾಷ್ಟಾಂಗ ನಮಸ್ಕಾರ ಪ್ರಿಯಂ ಭಜೇ || ೨ ||
ಪರಬ್ರಹ್ಮಕೃಪಾಳು ಪರಿಪೂರ್ಣಲೋಚನಂ । ಕರುಣಾಕರಂ ದೇವಲೋಕಸಾಕ್ಷಿಣಂ ||
ಸರಸಿಜೋದ್ಬಾಂಧವಂ ಛಾಯಾಮನೋಹರಂ ದಿವಕರಂ (ಶ್ರೀಸೂರ್ಯ) ಸಹಸ್ರಕಿರಣಂಭಜೆ ||
ನಾರಾಯಣಂ—ಶ್ರೀ—ಸೂರ್ಯ ನಾರಾಯಣಂ

ರಾಗ ಸೋಟು (ಶ್ರೀರಾಮದೂತನೇ ನಮೋ ನಮೋ)

ದ್ವಾದಶಾತ್ಮನೇ ನಮೋ ನಮೋ । ವೇದವಿದಿತ—ಭೇದರಹಿತ—ಸಾಧುಪೂಜಿತ ||
ಆದಿತ್ಯಾನಂದರೂಪನೇ ನಮೋ || ಪ ||
ಮೋಹಪಾಶವಿಮೋಚನ ನಮೋ ನಮೋ । ತುಹಿನ ಹರಣ—ಮಿಹಿರ ಕಿರಣ । ಪರಮ
ಪಾವನ || (ಜಯ) ಸಂಜ್ಞಾನಾಥ, ಜಯ ಸುರೋತ್ತಮ || ದ್ವಾದಶಾತ್ಮ || ೧ ||

(ತಪತೀಕಲ್ಯಾಣ ನಾಟಕದಿಂದ ತೆಗೆದುದು)

---

* ಇದರ ಕರ್ತರಾರೆಂಬುದು ತಿಳಿಯಲಿಲ್ಲ. ಹೇಗೂ ನಮ್ಮ ಪೂಜ್ಯ-ಗುರುಜನವರ್ಗಕ್ಕೆ ಸೇರಿದ ಮಹಿಳೆಯರೊಬ್ಬರು— ನಮ್ಮ ಸ್ತ್ರೀಯರಿಗೆ ನಿತ್ಯವೂ ಪಾರಾಯಣಕ್ಕೆ ಯೋಗ್ಯವಾಗಿದೆಯೆಂದೂ, ತಮಗೆ ತಮ್ಮ ಹಿರಿಯರು ಹೇಳಿಕೊಟ್ಟುದೆಂದೂ ತಿಳಿಸಿ, ಮುದ್ರಿಸಬೇಕೆಂದು ಹೇಳಿದುದರಿಂದ ಪ್ರಕಟಿಸಿರುವೆವು. ದೋಷವಿದ್ದರೆ ಅಭಿಜ್ಞರು ತಿದ್ದಲು ಕೋರಿಕೆ.

ರಾಸಕ್ರೀಡೆ

ರಾಗ ("ತಂಗಮೇ" ಹಾಡಿನಮಟ್ಟು)

ಶ್ರೀಗಣಪತಿ ನಿಮ್ಮ ಚರಣಕ್ಕೆ ಶರಣೆಂಬೆ, ಸರಸ್ವತಿ ಪಾರ್ವತಿಗೆ ವ್ಯಾಸರಿಗೆ ಸಾಷ್ಟಾಂಗ ನಮಸ್ಕಾರವು ॥೧॥ ಹಿರಿಯರಿಗೆ, ನಮಿಸುವ, ಗುರುಗಳನ್ನು ಸ್ಮರಿಸುವೆ, ವರಶುಕಮುನಿಗಳಿಗೆ ವಂದಿಸುವ ದೃಢಭಕ್ತಿ ಕೊಡಿಸೆನ್ನುವೆ ॥೨॥ ಶ್ರೀಕೃಷ್ಣನೊಂದುದಿನ ಗೋಕುಲಬೃಂದಾವನ ಸ್ತ್ರೀಯರೆಲ್ಲ ಬರಬೇಕೆಂದು, ಯೋಚಿಸಿದ ಮುರಳಿಂದ ಸೂಚಿಸಿದ ॥೩॥ ಕರದಲ್ಲಿ ವೇಣು ಪಿಡಿದು ದರಹಾಸವದನದಿಂದ ಸರಿಗಮಪಧನೀಸೆಂದು, ಸಪ್ತಸ್ವರದ, ಮುರಳಿಂದ ವೂದೈಸಿದ ॥೪॥ ಮುರಳಿಯನಾದಕೇಳಿ ಗಿರಿಗಳೆಲ್ಲ ಕರಗಿದವು ತರುವಿಂದ ಪುಷ್ಪಗಳು, ತಮಗೆ ತಾವೇ ಧರೆ ಮೇಲುದುರಿದವು ॥೫॥ ಮುರಳಿಯನಾದಕೇಳಿ ಬೆಂಗಾದವು ಮೃಗಂಗಳು ತರುಣಿಯರು ಮೈಮರೆತರು, ತಮ್ಮ ತಮ್ಮ ಕೆಲಸಕ್ಕೆ ಕೈಮರೆತರು ॥೬॥ ಒಂದು ಕಣ್ಣಿಗೆ ಕಪ್ಪು ಹಚ್ಚಿ, ಒಂದು ಭುಜಕೆ ಕುಪ್ಪಸ ತೊಟ್ಟು ಒಂದು ಸೆರಗು ಮಾತ್ರ ವುಟ್ಟು ಹೊರಟಳು, ಕೃಷ್ಣನಲ್ಲಿ ಮನವನಿಟ್ಟು ॥೭॥ ಮೂಗಿನಲ್ಲಿ ಮುರುವನಿಟ್ಟು ಮುಕುರವ ಕಿವಿಯಲ್ಲಿಟ್ಟು ನಗೆಮುಖಿ ಪೃಥುಪಂಬಿಟ್ಟು, ನಡೆದಳು, ನಾಚಿಕೆ ಕಳೆದುಬಿಟ್ಟು ॥೮॥ ಕುಚಭಾರತಡೆಯದೆ ಕಾಂತೆಯರ ನಡುಗಳು ಬಳುಕುತ್ತ, ಕನ್ನಡಿ ಮುಖ ಹೊಳೆಯುತ್ತ ॥೯॥ ವನಜಾಕ್ಷಿಯರೆಲ್ಲರು ಮನೆಬಿಟ್ಟು ಹೊರಟರು ವನದಲ್ಲಿ ಶ್ರೀಕೃಷ್ಣನಂ ಕಾಣುತ್ತಲೆ, ಮನದಲ್ಲಿ ಹಿಗ್ಗಿದರು ॥೧೦॥ ಎಲೆಎಲೆ ಸುದತಿಯರೆ, ಮನೆಗೆಲಸವಂ ಬಿಟ್ಟು ನೀವೆಲ್ಲ ಪತಿಪುತ್ರರಂ ಮರೆತುಬಿಟ್ಟು ಇಲ್ಲಿಗೇಕೆ ಬಂದಿರೆಂದ ॥೧೧॥ ಮನೆಯಲ್ಲಿ ಕೆಲಸವಿಲ್ಲ ಮತ್ತೊಂದ ತೋರಲಿಲ್ಲ ಮನವೆಲ್ಲ ನಿನ್ನಲ್ಲಿದೆ, ಸ್ವಾಮಿ ನಿನ್ನ ತನುಸಂಗ ಕೋರಿದೆವು ॥೧೨॥ ಕೋಟಿಮನ್ಮಥರೂಪ ನಾಟಿಯಸಾರು ನಿನಗೆ ದೇವ ಬೇಟೆಗೆ ಬಂದಿದ್ದೆವೊ, ಕಂದರ್ಪನಾಟವ ತೋರಿಸೆಲೊ ॥೧೩॥ ಅಧರಾಮೃತವನಿತ್ತು ಆದರಿಸೆಲೋ ಎಮ್ಮನು ಮದನಗೋಪಾಲ ಕೃಷ್ಣಾ, ನಾವು ನಿನ್ನ ಪದಸೇವಾದಾಸಿಯರೊ ॥೧೪॥ ಗೋಕುಲಾನಂದನೆ ಗೋಪಿಯ ಕಂದನೆ ರಾಕೇಂದುಬಿಂಬಾಸ್ಯನೆ, ದಯೆಮಾಡಿ ವ್ಯಾಕುಲವ ಬಿಡಿಸೆಂದರು ॥೧೫॥ ಪ್ರಮದಾಮಣಿಯರ ನೇತ್ರಕುಮುದಂಗಳಿಗೆ ಕೃಷ್ಣ ವಿವ ಲೇದವಾಗಿಪ್ಪ-ಯೋ, ಸುಖಕರ ಶರದಿಂದುವಾಗಿರ್ಪೆಯೋ ॥೧೬॥ ಇಂದುವದನೆಯರ ಮಧ್ಯೆಯೊಂದೊಂದು ಕೃಷ್ಣನಾಗಿ ಚಂದದಿಂ ಕುಣಿದರಲ್ಲಿ, ರಾಸಕ್ರೀಡೆ, ಧಿಮಿಧಿಮಿಧಿಮಿಕೆನ್ನುತಾ ॥೧೭॥ ರಂಭೆಯೂರ್ವಶಿಯರು ಅಂಬರದೊಳ್ ಬಂದು ನಿಂತು ಸಂಭ್ರಮವಂ ನೋಡಿದರು, ಲಜ್ಜಿತರಾಗಿ ಸಾಷ್ಟಾಂಗವಂದಿಸಿದರು ॥೧೮॥ ಮೂವತ್ತುಮೂರುಕೋಟಿ ದೇವಾದಿದೇವರ್ಕಳೆಲ್ಲ ಪೂಮಳೆ ಕರೆದರಲ್ಲಿ, ಶ್ರೀಕೃಷ್ಣನ ಲೀಲಾವಿನೋದನೋಡಿ ॥೧೯॥ ಒಬ್ಬರಿಗೂ ತಿಳಿಯದಂತೆ ಒಂದು ಮಾಯಾಮಾಡಿದನು ಒಬ್ಬಳನ್ನು ಎತ್ತಿಕೊಂಡು, ವನದಲ್ಲಿ ಇಬ್ಬರಾಗಿ ಹೊರಟರಂದು ॥೨೦॥ ಮಡದಿಯು ಗರ್ವಿಸಿ, ನುಡಿದಳು ಒಂದು ಮಾತು ನಡೆಯಲಾರೆ ನೆತ್ತಿಕೊಳ್ಳೊ, ಎನ್ನಲು ಹುಡುಗಿಯನೆತ್ತಿಗೊಂಡ ॥೨೧॥ ತರುಣಿಯ ಕೆಳಗಿಳಿಸಿ ತಲೆತುಂಬ ಹೂವುಮುಡಿಸಿ ಸರಸದಿಂದುಪಚರಿಸ್ಸಿ ವನದ, ಶೃಂಗಾರವನ್ನು ತೋರಿಸಿ ॥೨೨॥ ಸೊಗಸಾಗಿ ವನದಲ್ಲಿ ಕೈಕೆಲೆತು ಆಡುವಾಗ ಸೊಕ್ಕಿ ಮೈಮರೆತಳು ಮಧುರವಾಣಿ ಶ್ರುತಿಕಂಡು ಹಿಗ್ಗಿದಳು ॥೨೩॥ ರತಿದೇವಿನಾನೆಯೆ ರತಿಪತಿ ನೀನೆಯೆ, ಪತಿತಪಾವನ ಕೃಷ್ಣಾ, ನಮಗಿನ್ನು ಪತಿಗತಿ ನೀನೇ ಕೇಳೊ ॥೨೪॥ ಗಜಗಮನೆ ನಡೆಯಲಾರೆ ಭುಜದಮೇಲೇರೆಂದ ಗರುಡಗಮನ ನೆತ್ತಿಕೊಂಡ, ಮರದಲ್ಲಿದ್ದ ಸಂಪಿಗಿ ಹೂವ ಕೊಯ್ಯೆಂದ ॥೨೫॥ ಒಂದು ಕಯ್ಯಲಿ ಕೊನೆಯ ಪಿಡಿದು, ಒಂದು ಕಯ್ಯಲಿ ಪೂವ ಕುಯ್ಯುವಂದು ಮೋಸಮಾಡಿಬಿಟ್ಟು, ವನದಲ್ಲಿ ಒಂಟಿಯಾಗಿ ಬಿಟ್ಟೋಡಿದ ॥೨೬॥ ಕೃಷ್ಣಕೃಷ್ಣಯೆಂದು ಗೋಪಿ ಗಟ್ಟಿಯಾಗಿ ಕೂಗಿದಳು ಕಷ್ಟವನ್ನು ಬಿಡಿಸೆಂದಳು, ಯನ್ನನು ಮರಬಿಟ್ಟು ಇಳಿಸೆಂದಳು ॥೨೭॥ ನಾರೀಪತಿ ಸೇರಿದ ಮಾಯಾರಸ್ಸ ಗಲಿಸಿದೆನೋ ಜಾರಚೋರಶಿಖಾಮಣೀ, ಬಾರದೇ ಇರುವುದು ನ್ಯಾಯವೇನೋ ॥೨೮॥ ಏನು ತಪ್ಪುಮಾಡಿದ್ದರು ನೀನೀಗ ಕ್ಷಮಿಸಬೇಕು ಅನಾಥನಾಥಾ ಬಾರೋ, ಜಗನ್ನಾಥಾ ಶ್ರೀನಾಥಾ ಬಾರೋ ॥೨೯॥ ಕರಿಧ್ರುವಪ್ರಹ್ಲಾದರ ಕಾಯ್ದವನಲ್ಲವೇನೊ ಕರುಣಾಸಮುದ್ರಾ ಬಾರೋ, ಕಾಲಿಗೆ ಬಿದ್ದೆ, ಅರುಣಾಬ್ಜಚರಣಾ ಬಾರೋ ॥೩೦॥ ವರಮತ್ಸ್ಯಕೂರ್ಮವರಾಹ ನಾರಸಿಂಹ ವಾಮನನೇ ಭೃಗುರಾಮ ರಘುರಾಮನೇ, ಕೃಷ್ಣ ಬುದ್ಧ ಕಲ್ಕ್ಯವತಾರಾ ಬಾರೋ ॥೩೧॥ ಲಕ್ಷ್ಮೀಶ ನಿನಗಿದೊ ಲಕ್ಷಕೋಟಿ ನಮಸ್ಕಾರ ರಕ್ಷಿಸೋ ದೀನಬಂಧು, ಪಾಂಡವ ಪಕ್ಷನೀನೇಯೆಂದೂ ॥೩೨॥ ಇದ್ದಂತೆ ಇದ್ದು ಕೃಷ್ಣ ಎಲ್ಲಿ ಹೋದೆ ಮಾಯವಾಗಿ ಮುದ್ದು ಶ್ರೀಕೃಷ್ಣಾ ಬಾರೆಲೋ, ಹುಡುಕಿದರು ಮುಗ್ಧೆಯರೂ ಪ್ರೌಢೆಯರೂ ॥೩೩॥ ಚಿಕ್ಕವಯಸ್ಸಿನ ಹುಡುಗಿಯರು ಸೊಕ್ಕುತ್ತ ಸೊರಗುತ್ತ ಚಕ್ರಿಯ ಹುಡುಕಿದರು, ವಿರಹದಿಂದ ಬಿಕ್ಕಿಬಿಕ್ಕಿ ರೋದಿಸಿದರು ॥೩೪॥ ವೇಣುಗಾನ ರಾಸಕ್ರೀಡೆ ಕಾನನದಿ ಮಾಡಿದವನೆ ಪ್ರಾಣನಾಥ

ಕೃಷ್ಣಾ-ಬಾರೊ, ಎನ್ನುತಲಿ ಜಾಣೆಯರುಹುಡುಕಿದರು ||೩೫||
ನಗಧರಸರ್ವದಾಹೆಗಲಮೇಲಿರುವನಷ್ಟೆ ಖಗಪತಿ ಕಾಣೆಯೇ-
ನೋ ನಮಗೊಂದು ಬಗೆಹೇಳಬಾರದೇನೊ ||೩೬|| ಗಂಡಭೇ
ರುಂಡಗಳಿರಾ ಕೋಕಿಲೆಕುರಂಗಗಳಿರಾ ಹಿಂಡುನವಿಲುಗಿಣಿ
ಗಳಿರಾ ಕಂಡುದುಂಟೆ ಅಂಡಜವಾಹನನ ||೩೭|| ಭಾವಜಾಕಾ
ರನ್ನ ಭಕ್ತಮಂದಾರನ್ನ ದೇವಕೀಸುಕುಮಾರನ್ನ, ನಾವೆಲ್ಲ
ಆವಾಗಕಾಂಬೆವೆಲ್ಲಿ ||೩೮|| ನಂದಕುಮಾರನ ನವನೀತಚೋ
ರನ ಬೃಂದಾವನವಿಹಾರನ, ನಾವೆಲ್ಲ ಎಂದಿಗೆ ಕಾಂಬೆವೋ-
ಕಾಣೆ ||೩೯|| ವಜ್ರಪಾದಸ್ವಸ್ತಿರೇಖೆ, ಹೆಜ್ಜೆಯಿದುಗುರುತು-
ನೋಡೆ, ಸಜ್ಜನರಕ್ಷಕನ ಹೆಜ್ಜೆಯಿದು, ಸಂದೇಹವಿಲ್ಲವಲೆ||೪೦||
ಮುದ್ದುಮುದ್ದಾಗಿರುವಹೆಜ್ಜೆ ಪದ್ಮನಾಭನಹೆಜ್ಜೆಯಿದು ಸರಿ
ಮುದ್ದು, ಮುದ್ದಾಗಿಹಾ ಹೆಜ್ಜೆ ಯಿದಾವಳೋಬಜಾರಿಯಾ
ಹೆಜ್ಜೆ ||೪೧|| ಮೂಜಗದೊಡೆಯನ ಹೆಜ್ಜೆಮಾತ್ರಕಂಡರು
ಮುಂದಕ್ಕೆಹುಡುಕಿದರು ವನದೊಳಗೆ ಮದಗಜಗಮನೆಯ-
ರು ||೪೨|| ಬಿಸಜಾಕ್ಷನಮುಖವನ್ನು ಬಿಡದೆನಾವ್‍ನೋಡಿದರೆ
ಹಸಿವುದಾಹವೊಂದೂ ತೋರಲಿಲ್ಲ ಹರುಷವಮರೆತೆವಲ್ಲಾ||೪೩||
ಆದರಲ್ಲಿ ಒಬ್ಬಳನ್ನು ಬದಿಯಲ್ಲಿ ಎತ್ತಿಕೊಂಡು, ಹೃದಯೇಶ
ನಡೆದಿರ್ಪನೆ ಹೂವಿನ ಪೊದೆಯಲ್ಲಿ ಇಳಿಸಿದ್ದನೆ||೪೪|| ಮಲ್ಲಿ
ಸಂಪಿಗೆಸುರಗಿ ಮಲ್ಲಿಗೆಮೊದಲಾದ ಒಳ್ಳೆಯೊಳ್ಳೆ ಕುಸುಮಂ
ಗಳು, ಜಾಜಿಪವನ, ಮುಡಿಯೊಳುಮುಡಿಸಿದನೆ ||೪೫|| ಬಳೆ
ವೊಡೆದುಬಿದ್ದಿದೆನೋಡಿ ಪುಣದಿಯೆಲ್ಲ ಚೆಲ್ಲಿದೆನೋಡಿ ನಳಿ
ನಾಕ್ಷಿಯರೆಲ್ಲಾನೋಡೀ ತಾಂಬೂಲವು ಕೆಳಗೆಲ್ಲಬಿದ್ದಿದೆ
ನೋಡಿ ||೪೬|| ಚಂಚಲಾಕ್ಷಿಯರೆಲ್ಲರು ಧವಳಕಂಚುಕವಾ
ನೋಡಿ ವಂಚನೆಮಾಡಿರ್ಪನೆನಮ್ಮಬಿಟ್ಟು ವನಿತೆಯಕೂಡಿ
ರ್ಪನೆ ||೪೭|| ಇನ್ನುಹೆಜ್ಜೆಯಮುಂದಿಡೀ ಚೆನ್ನಾಗಿಕಾಣು
ತ್ತಿದೆ ಕಣ್ಣಿಂದನೋಡಿರಮ್ಮ, ಹೆಣ್ಣಿನಹೆಜ್ಜೆ ಮಣ್ಣೊಳಗಿಲ್ಲ
ವಮ್ಮ ||೪೮|| ನಾರಿಯನೆತ್ತಿಕೊಂಡು ಭಾರದಿಂದನಡೆದಿಹನೆ
ಊರಿಬಿದ್ದಿದಹೆಜ್ಜೆ ನೀವ್‍ನೋಡಿ ಚೋರನನಂಬುವರೆ ||೪೯||
ಏನುಪುಣ್ಯಮಾಡಿದ್ದಳೋ ಎಂಥತಪವಮಾಡಿದ್ದಳೋ ಮಾನಿ
ನಿಗೆವಶವಾದನೆ, ಆನಾರಿಯ ಪುಣ್ಯವೇಪುಣ್ಯವಮ್ಮ ||೫೦||
ಕಂದರ್ಪನಶರಂಗಳು ಚಂದ್ರನಕಿರಣಂಗಳು ಮಂದಮಾರುತ
ನೊಡನೆ, ಅವಳಿಗೆ ಒಂದಾಗಿ ಸೇರಿತಲ್ಲೆ ||೫೧|| ಮಂದಹಾಸ
ವದನನ್ನ ಕುಂದಕುಸುಮರದನನ್ನ ಮಂದಾರವೃಕ್ಷಂಗಳಿರಾ,
ಕಂಡುದುಂಟೆ ಚಂದನವೃಕ್ಷಂಗಳಿರಾ ||೫೨|| ಸಾವಿರನಾಮನ
ಸದ್ಗುಣಧಾಮನ ಮಾವಿನಮರಗಳಿರಾ — ಕಂಡುದುಂಟೆ
ಮಾವಿನಫಲಗಳಿರಾ||೫೩|| ನಿಂಬೆದಾಳಿಂಬಗಳಿರಾ ಜಂಬುನೇರು
ಳಿಗಳಿರಾ ಜಂಬೀರಫಲಗಳಿರಾಕಂಡುದುಂಟೆ ಜಂಬೀರಮರಗ
ಳಿರಾ||೫೪|| ಸಜ್ಜನರಕ್ಷಕನ ದುರ್ಜನಶಿಕ್ಷಕನ ಅರ್ಜುನಮರಗ
ಳಿರಾ || ಕಂಡುದುಂಟೆ ಖರ್ಜೂರಮರಗಳಿರಾ ||೫೫|| ಅಡವಿ

ಯೆಲ್ಲ ಹುಡುಕುತ್ತ ಮಡದಿಯರುಬರುವಾಗ ಹುಡುಗಿಯ
ಕಂಡರಲ್ಲಿ. ಸಂಪಿಗೆ ಮರದಮೇಲಿದ್ದಳಲ್ಲಿ || ೫೬ || ಬೆರ
ಗಾಗಿನೋಡಿಯವಳ ಮರದಿಂದಕೆಳಗಿಳಿಸಿ ಕರೆತಂದುಬೆಸ
ಗೊಂದರು, ಕೃಷ್ಣನೆಲ್ಲಿ ಹೇಳೆಂದು ಬೆಸಗೊಂಡರು ||೫೭||
ಕರಪಿಡಿದುಕರತಂದು ಕರುಣಿಸಿಯೆತ್ತಿಕೊಂಡು, ಭರದಿಂದ
ಇಳಿಸಿದನೆ,ಸರಸದಿಂದ ಮುಖದಬೆವರೊರಸಿದನೆ||೫೮|| ಇಲ್ಲಿರ
ಬಾರದಿನ್ನು ಎಲ್ಲರುಬರುವರು ಫುಲ್ಲವದನೆ ಬಾರೆಂದು ಭುಜ
ಕೆಕೃಷ್ಣ,ನೆಲ್ಲನೆಎತ್ತಿಕೊಂಡ ೫೯| ದೆಸೆಗಳಿರಾ,ನೋಡಿದಿರಾ
ಶಶಾಂಕವದನನ್ನಉಸುಬಿಸಮೆಟ್ಟಹತ್ತಿ ಭುಜಕೆ ಕೃಷ್ಣಮೆಲ್ಲನೆ
ಯೆತ್ತಿಕೊಂಡ||೬೦|| ಹಂಸಗಳೆ ನೋಡಿದ್ದಿರಾ ವಂಶವರ್ಧನ
ನೆನಿಸಿದಾ ಕಂಸವೈರಿ ಕೃಷ್ಣನನ್ನು ಎನ್ನುತಾ, ಹಂಸಗಮನೆ
ಯರ್‍ಕೇಳಿದರು ||೬೧|| ಕಮಲಸಾರಸಗಳಿರೆ ಕಮಲದಳಾ
ಕ್ಷನ ನಮಗೀಗತೋರಿಸಿರೇ, ನಿಮಗೀಗನಮಸ್ಕಾರಮಾಡು
ವೆವೆ ||೬೨|| ಅಪರಾಧವಿಲ್ಲದ ಅಬಲೆಯರಾವೆಲ್ಲ ಉಪಕಾರ
ಮಾಡೋಸ್ವಾಮೀ,ನಮ್ಮನುಉದ್ಧಾರಮಾಡೋಸ್ವಾಮಿ||೬೩||
ನಾವೇನು ಕೊಟ್ಟೇವು ನಮ್ಮಿಂದ ನಿನಗೇನು ಪ್ರೇಮದಿಂಸಲ
ಹೋಸ್ವಾಮಿ,ನಮ್ಮಮೇಲೆ ಕೋಪವಿಷ್ಟೇಕೋಸ್ವಾಮಿ||೬೪||
ಪ್ರಾಣಕಾಂತ ನಾವು ನಿನ್ನ ಕಾಣದೆ ನಿಲ್ಲಲಾರೆವು, ಪ್ರಾಣ
ವನುಳಿಸೋದೇವಾ ಶೀಘ್ರದಿಂದ,ಏಣಾಂಕಮುಖವಂತೋ-
ರೊ ||೬೫|| ಇಂದಿರಾರಮಣ ನಿನ್ನನೆಂದಿಗೆಕಾಂಬೆವು ಮಂ-
ದರಗಿರಿಧಾರನೆ ಮನ್ನಿಸೆಮ್ಮ ಬೃಂದಾವನವಿಹಾರನೆ ||೬೬||
ಮಾನಿನೀಚಿತ್ತಚೋರ ದಾನವಸಂಹಾರ ಮಾಧವಮಧುಸೂ-
ದನ ಗೋವಿಂದ ಶ್ರೀಧರಬೇಗಬಾರೋ ||೬೭|| ನಿನ್ನಲ್ಲಿ
ಹೋದಮನಸು ಇನ್ನೂಬಂದುಸೇರಲಿಲ್ಲ ಕಣ್ಣಿಗೆತೋರೋ
ಸ್ವಾಮಿ, ಕೃಷ್ಣಕೃಷ್ಣಾ ಪುಣ್ಯವುಂಟುಬಾರೊಸ್ವಾಮಿ ||೬೮||
ಕಮಲಮುಖಿಕಾಂತೆಯರು ಕಾನನದಿಹುಡುಕುವಾಗ ಕಮಲಾ
ಕ್ಷಕೃಷ್ಣಬಂದ, ಗೋಪಿಯರ್ಗೆ ಸುಖವಾಗುವಂತೆಬಂದ||೬೯||
ಚಕೋರನೇತ್ರೆಯರ ರತಿಹಾಸವದನನೋಡಿ ಚಂದ್ರಬಿಂಬ
ವದನಬಂದ ಗೋಪಿಯರ್ಗೆ,ಕುಂದಕುಸುಮರದನಬಂದ||೭೦||
ಗೋಪಾಂಗನೆಯರಮಧ್ಯೆ ಗೋಪಾಲಕೃಷ್ಣಬಂದುಕೃಪೆ
ಯಿಂದಲವರನ್ನೋಡಿ ಅವರ, ತಾಪವಂತೀರಿಸಿದ ||೭೧|| ವರ
ತರುಣಿಯರಮಧ್ಯೆ ಶರದಿಂದುವೊಪ್ಪಿದನೆ ವಾರಿಜನಾಭನಿಗೇ,
ಒಪ್ಪಿದ ಕ್ರೀಡೆಯೋಳ್ ಮನವಿರಿಸಿದ ||೭೨|| ಕಾಮನ್ನಬಾ
ಣವಿ ಕಾಯುವಿದುನೊಂದುದು ಸ್ವಾಮಿ ನಿನ್ನಸಂಗಕೊಟ್ಟು
ಸಲಹೋ, ತಾಮಸಮಾಡಬೇಡ ||೭೩|| ಆನಂದವನದಲ್ಲಿ
ನಂದಕಂದನಸೇರಿ ಆನಂದಬಾಷ್ಪವನುಸುರಿದರು ಆನಂದಭರಿ
ತರಾಗಿ ||೭೪|| ಅಪ್ರಮೇಯನಿನ್ನಮಹಿಮೆ ಆದಿಶೇಷನುಬಲ್ಲ
ನೇನೋ ತಪ್ಪೇನುಮಾಡಿದ್ದರೂ ಸ್ವಾಮಿನೀನು,ಒಪ್ಪದಿಂಕ್ಷಮಿ
ಸಬೇಕೊ ||೭೫|| ಸ್ವಾಮಿಯಪ್ಪಣೆಹೊಂದಿಯಾಗ ಕಾಮಿನೀ

ಮಣಿಗಳೆಲ್ಲ ಯಾರೊಬ್ಬರರಿಯದಂತೆ ತಮ್ಮತಮ್ಮ ಮನೆಗಳೆಗೈತಂದರು ||೭೬|| ನೃತ್ಯಗೀತವಾದ್ಯಗಳಿಂದ ನಿತ್ಯವಿದನು ಪೇಳಿದರೆ ಭಕ್ತಿಮುಕ್ತಿಯನ್ನೀಕೊಟ್ಟುಶ್ರೀಕೃಷ್ಣ ಭಕ್ತರನ್ನು ಸಲಹುವನು ||೭೭|| ವರ್ಣವೆಲ್ಲಮಂಜುಳವು ವಾಕ್ಯವೆಲ್ಲ ಮುತ್ತುರಕ್ಷ ಶರಣೆಂಬ ಸರಪೋಣಿಸಿ ಈ ಹಾರವಂ ಕೃಷ್ಣನಿಗೆ ಸಮರ್ಪಿಸಿ ||೭೮|| ಮಾನಮಧುರಿಪುರಿವಾಸ ವೆಂಕಟೇಶನಿನ್ನ ಪಾದ ಸರಸಿಜಕೆವಂದಿಸುವೆ ಸ್ವಾಮಿನೀನು, ಮರೆಯದೆಪೊರೆಯೆಂಬುವೆ ||೭೯|| ಮಂಗಳಮಹಿಮಗೆ ಶೃಂಗಾರಲೋಲಗೆ ಮಂಗಳಂ ಜಯಮಂಗಳಂ ಕೃಷ್ಣನಿಗೆ ನಿತ್ಯವು ಶುಭಮಂಗಳಂ ||೮೦||

ಶ್ರೀರಾಮಚಂದ್ರ ಪರಬ್ರಹ್ಮಣೇನಮಃ

ನಾಟಕಲಕ್ಷಣ ಪ್ರಬಂಧವು.

[ಲೇ:— ಶ್ರೀ|| ಎಮ್. ಹೇಮಸ್ವಾಮಯಂಗಾರ್, ಸಾಹಿತ್ಯ ವಿದ್ವಾನ್, ಸಂಸ್ಕೃತ ಬೋಧಕರು ಗವರ್ನಮೆಂಟು ಕನ್ನಡ ಹೈಸ್ಕೂಲ ನಂಜನಗೂಡು.]

ಕಾವ್ಯಗಳಲ್ಲಿ, ಶ್ರಾವ್ಯಪ್ರಬಂಧ (ಕೇಳಿ ತಿಳಿದುಕೊಳ್ಳುವುದು), ದ್ರಶ್ಯಪ್ರಬಂಧ (ನೋಡಿ ತಿಳಿದುಕೊಳ್ಳುವುದು), ಎಂದು ಎರಡು ವಿಧಗಳುಂಟು. ಶ್ರಾವ್ಯಪ್ರಬಂಧದಲ್ಲಿ ದ್ರಾಕ್ಷಾಪಾಕ, ನಾರಿಕೇಳಪಾಕ, ಶಿಲಾಪಾಕಗಳೆಂಬದಾಗಿ ಮೂರು ವಿಧಗಳುಂಟು. ಅವುಗಳ ಸ್ವರೂಪವೇನೆಂದರೆ,—

೧. ದ್ರಾಕ್ಷಾಪಾಕವೆಂದರೆ:— ದ್ರಾಕ್ಷಿಯನ್ನು ಸೇವಿಸಿದ ಕೂಡಲೆ ರುಚಿಯು ಆವರೀತಿ ಅನುಭವಕ್ಕೆ ಗೋಚರವಾಗುವುದೊ, ಹಾಗೆಯೇ ಆವ ಕಾವ್ಯವನ್ನು ಕೇಳಿದ ಉತ್ತರಕ್ಷಣದಲ್ಲಿಯೇ ಅದರಲ್ಲಿರತಕ್ಕ (ತದ್ರಸಾಸ್ವಾದದಿಂದ) ರಸ, ಅಲಂಕಾರ, ಭಾವ ಇವುಗಳಿಂದ ಮನಸ್ಸಿಗೆ ಅತ್ಯಂತ ಆನಂದವನ್ನುಂಟು ಮಾಡುವುದೋ— ಅದು ದ್ರಾಕ್ಷಾಪಾಕವೆನಿಸುವುದು. ಉದಾಹರಣೆ:— ರಾಮಾಯಣ, ರಘುವಂಶ ಇವೇ ಮೊದಲಾದ ಗ್ರಂಥಗಳು ದ್ರಾಕ್ಷಾಪಾಕಕ್ಕೆ ಸೇರಿದುವುಗಳು.

೨. ನಾರಿಕೇಳಪಾಕವೆಂದರೆ:—ತೆಂಗಿನಕಾಯನ್ನು ನೋಡಿದ ಮಾತ್ರದಿಂದಲೇ ಅದರಲ್ಲಿರುವ ರುಚಿಯು ಗೊತ್ತಾಗುವದಿಲ್ಲ. ಅದನ್ನು ಒಡೆದು ಒಳಗಿರತಕ್ಕ ಪದಾರ್ಥವನ್ನು ಸೇವನೆ ಮಾಡಿದರೆ ಆವರೀತಿಯಾಗಿ ರುಚಿಯು ಅನುಭವಕ್ಕೆ ಗೋಚರವಾಗುವುದೊ, ಆ ರೀತಿಯಾಗಿ ಆವ ಗ್ರಂಥವನ್ನು ಕೇಳಿದ ಕ್ಷಣದಲ್ಲಿಯೇ ರಸ, ಭಾವಾದಿಗಳು ತಿಳಿಯದೆ, ಚೆನ್ನಾಗಿ ವಿವರಿಸಿ ಹೇಳಿದ ಮೇಲೆ ರಸ-ಭಾವಾದಿಗಳು ಗೋಚರವಾಗಿ ಮನಸ್ಸಿಗೆ ಆನಂದವನ್ನುಂಟು ಮಾಡುವುದೋ ಅದು ನಾರಿಕೇಳಪಾಕವೆಂದು ತಿಳಿಯತಕ್ಕದು. ಉದಾಹರಣೆ:— “ ಭಾರವಿ ” ಮುಂತಾದವು ನಾರಿಕೇಳಪಾಕಕ್ಕೆ ಸೇರಿದ ಗ್ರಂಥಗಳು.

೩. ಶಿಲಾಪಾಕವೆಂದರೆ:— ಶಿಲೆಯು ಆವರೀತಿ ದುರ್ಭೇದ್ಯವಾಗಿಯೂ ಕಠಿಣವಾಗಿಯೂ ಇರುವುದೋ, ಅದನ್ನು ತಿಳಿದವರಿಗೆ ಆವರೀತಿಯಾಗಿ ಸುಂದರವಾದ ಆಕಾರಗಳುಳ್ಳದಾಗಿರುವುದೋ ಅದೇ ರೀತಿಯಾಗಿ ಆವ ಕಾವ್ಯವು ಕೇಳಿದ ಕ್ಷಣದಲ್ಲಿಯೇ ಮಾನ್ಯರಿಗೆ ಅರ್ಥವಾಗದಂತಿದ್ದು, ಪಂಡಿತರಿಗೆ ಮಾತ್ರ ರಸ, ಭಾವ ಇವುಗಳು ಅನುಭವಕ್ಕೆ ವೇದ್ಯವಾಗಿ ಮನಸ್ಸಿಗೆ ಸುಖವನ್ನುಂಟುಮಾಡುವುದೋ ಅದು ಶಿಲಾಪಾಕವೆನ್ನಿಸುವುದು. ಉದಾ:— ನೈಷಧ ಮುಂತಾದವು ಶಿಲಾಪಾಕಕ್ಕೆ ಸೇರಿದ ಗ್ರಂಥಗಳು.

ದೃಶ್ಯಪ್ರಬಂಧವೆಂದರೆ, ನಾಟ್ಯಪುರಸ್ಸರವಾಗಿಯೂ, ರಸ-ಭಾವಾದಿಗಳನ್ನು ಅಭಿನಯಪೂರ್ವಕವಾಗಿಯೂ ಸಭ್ಯರಿಗೆ ತೋರಿಸತಕ್ಕ ಪ್ರಬಂಧಕ್ಕೆ ದೃಶ್ಯಪ್ರಬಂಧವೆಂದು ಹೆಸರು.

ಈ ದೃಶ್ಯಪ್ರಬಂಧವೆಲ್ಲವೂ ನಾಟ್ಯವನ್ನೇ ಮುಖ್ಯವಾದ ಆಶ್ರಯವಾಗಿ ಉಳ್ಳವುಗಳು. ನಾಟ್ಯವೆಂದರೆ, ಸಾತ್ವಿಕ, ಆಂಗಿಕವೇ ಮೊದಲಾದ ನಾಲ್ಕು ವಿಧವಾದ ಅಭಿನಯಗಳಿಂದ ನಾಯಕರ ಅವಸ್ಥೆಯನ್ನು ಅನುಕರಣಮಾಡಿ ತೋರಿಸುವುದೇ ನಾಟ್ಯವೆನ್ನಿಸಿಕೊಳ್ಳುವುದು.

ಅಭಿನಯವೆಂದರೆ, ಅಭಿಲಾಪಕ ಶಬ್ದೋಚ್ಚಾರಣಪೂರ್ವಕವಾಗಿ ಪದಾರ್ಥದ ಸ್ವರೂಪವನ್ನು ಚೆನ್ನಾಗಿ ಪ್ರಕಾಶಪಡಿಸೋಣವು.—

“ ಅಭಿಪೂರ್ವಸ್ತು ಣೀಜ್‌ಧಾತು: ಅಭಿಮುಖ್ಯಾರ್ಥ ನಿರ್ಣಯೇ ||
ಯಸ್ಮಾತ್ಪದಾರ್ಥಾನ್ನಯತಿ ತಸ್ಮಾತ್ ಅಭಿನಯಸ್ಮೃತ: ”

(ಅಭಿಪೂರ್ವಕವಾಗಿರುವ ಣೀಜ್ ಧಾತು, ಅಭಿಮುಖ್ಯಾರ್ಥದಲ್ಲಿಯೂ ನಿಶ್ಚಯದಲ್ಲಿಯೂ ವರ್ತಿಸುತ್ತದೆ. ಆವ ಕಾರಣದಿಂದ ಶಬ್ದಾರ್ಥಗಳನ್ನು ಮತ್ತೊಬ್ಬರಿಗೆ ಸ್ಪಷ್ಟವಾಗಿ ತಿಳಿಯುವಂತೆ ಮಾಡುವುದೊ—ಅದರಿಂದಲೇ ಅಭಿನಯವೆಂಬು

ದಾಗಿ ಪ್ರಸಿದ್ಧಿಯನ್ನು ಹೊಂದಿರುವುದು.)

ಈ ಅಭಿನಯದಲ್ಲಿ ನಾಲ್ಕು ವಿಧಗಳು. ೧ ಸಾತ್ವಿಕಾಭಿನಯ, ೨ ಆಂಗಿಕಾಭಿನಯ, ೩ ವಾಚನಿಕಾಭಿನಯ, ೪ ಆಹಾರ್ಯಾಭಿನಯ.

೧. ಸತ್ವದಿಂದುಂಟಾದುದು ಸಾತ್ವಿಕವೆನ್ನಿಸುವುದು.—

"ಸ್ತಂಭಪ್ರಳಯ ರೋಮಾಂಚ ಸ್ವೇದ ವೈವರ್ಣ್ಯವೇ ಪಥು |
ಅಶ್ರುವೈ ಶ್ವರ್ಯಮಿತ್ಯಷ್ಟೌ ಸಾತ್ವಿಕಾಃ ಪರಿಕೀರ್ತಿತಾಃ||"

ಈ ಸಾತ್ವಿಕ ಭಾವಗಳನ್ನು ಸರ್ವರಿಗೂ ವ್ಯಕ್ತವಾಗುವಂತೆ ತೋರ್ಪಡಿಸುವುದು ಸಾತ್ವಿಕಾಭಿನಯವೆನ್ನಿಸುವುದು.

೨. ಅಂಗದಿಂದುಂಟಾದುದು ಆಂಗಿಕವೆನ್ನಿಸುವುದು.— ಎಂದರೆ, ಕಣ್ಣಿನಿಂದಲೂ ಮತ್ತು ಕರ ಚರಣಾದಿಗಳಿಂದಲೂ ಮಾಡತಕ್ಕ ಪತಾಕಾದಿ ವ್ಯಾಪಾರಗಳೇ ಆಂಗಿಕಾಭಿನಯವೆನ್ನಿಸುವುದು.

೩. ಕಾವ್ಯನಾಟಕರೂಪವಾದ ಪದಸಮುದಾಯದಿಂದುಂಟಾದ ವಾಕ್ಯಗಳನ್ನು ಉಚ್ಚರಿಸುವ ವ್ಯಾಪಾರವು ವಾಚಿಕಾಭಿನಯವೆನ್ನಿಸುವುದು.

೪. ನಾಟ್ಯಕ್ಕೆ ಉಚಿತವಾದ ಆಭರಣಗಳನ್ನು ಧರಿಸಿಕೊಂಡು ಮಾಡತಕ್ಕ ವ್ಯಾಪಾರವು ಆಹಾರ್ಯಾಭಿನಯವೆನ್ನಿಸಿಕೊಳ್ಳುವದು

ಇದರಿಂದ ಅಂಗವ್ಯಾಪಾರವು ಆಂಗಿಕವೆಂಬದಾಗಿಯೂ ನಾಟ್ಯದಲ್ಲಿ ರಾಗಾದಿಗಳಿಂದ (ಕಲ್ಯಾಣಿ, ಆನಂದ, ಭೈರವಿ, ಶ್ರೀರಾಗಗಳೇ ಮೊದಲಾದುವು) ಸಂಬಂಧಿಸಿಕೊಂಡಿರುವ ವಾಚಕ ವ್ಯಾಪಾರವು ವಾಚಕಾಭಿನಯವೆಂಬುದಾಗಿಯೂ ಸ್ತಂಭಪ್ರಳಯಾದಿ ವ್ಯಾಪಾರವನ್ನು ತೋರ್ಪಡಿಸುವುದು ಸಾತ್ವಿಕಾಭಿನಯವೆಂಬದಾಗಿಯೂ ಭೂಷಣಾದಿಗಳನ್ನು ಧರಿಸಿಕೊಂಡು ನಡೆಯಿಸತಕ್ಕ ವ್ಯಾಪಾರವು ಆಹಾರ್ಯಾಭಿನಯವೆಂಬದಾಗಿಯೂ ಪರ್ಯವಸಿತವಾಯಿತು.

ನಾಟ್ಯದಲ್ಲಿ ನೃತ್ತ, ನೃತ್ಯವೆಂಬದಾಗಿಯೂ ಎರಡು ವಿಧವು. ತಾಳ ಮತ್ತು ಕಾಲಗಳನ್ನು ಅನುಸರಿಸುವ ಆಂಗಿಕ ವ್ಯಾಪಾರಕ್ಕೆ ನೃತ್ತವೆಂದು ಹೆಸರು. ಅಭಿಪ್ರಾಯವನ್ನು ಆಶ್ರಯಿಸಿ ನಡೆಯಿಸತಕ್ಕವ್ಯಾಪಾರಕ್ಕೆ ನೃತ್ಯವೆಂದು ಹೆಸರು. ನಾಟ್ಯವೂ ಸಂಗೀತವೂ ಭರತಾಚಾರ್ಯರಿಂದಲೇ ಪ್ರಣೀತವಾದುವು. ಅವರಿಗೆ ಆ ಹೆಸರು ಬರಲು ಕಾರಣವೇನಂದರೆ,— ಭಾವ, ರಾಗ, ತಾಳಗಳಲ್ಲಿ ಅತ್ಯಂತ ಪರಾಕಾಷ್ಠದಶೆಯನ್ನು ಹೊಂದಿದ್ದುದರಿಂದಲೇ ಆಹೆಸರು ಬಂತು. ಸಂಗೀತವೆಂದರೆ, ಗೀತ, ನೃತ್ತ, ವೀಣೆ ಮೊದಲಾದ ವಾದ್ಯಗಳಿಂದ ಸೇರಿರುವ ವ್ಯಾಪಾರಕ್ಕೆ ಸಂಗೀತವೆಂದು ಹೆಸರು. ಉದಾ:—"ಗೀತಂ ನೃತ್ತಂಚ ವಾದ್ಯಂಚ ತ್ರಯಂ ಸಂಗೀತಮುಚ್ಯತೆ"

ಈ ನೃತ್ತ ನೃತ್ಯಗಳು ನಾಟಕಕ್ಕೆ ಸಹಾಯಭೂತಗಳಾದುದರಿಂದ ಇಲ್ಲಿ ಅದರ ಸ್ವರೂಪವು ಹೇಳಲ್ಪಟ್ಟಿತು. ಈ ನೃತ್ತ ನೃತ್ಯಗಳು ಮಧುರ ಮತ್ತು ಉದ್ಧತಗಳೆಂಬದಾಗಿಯೂ ಬೇರೆ ಬೇರೆ ಭಾಗವನ್ನು ಹೊಂದುತ್ತವೆ. ಅವೆರಡು ಲಾಸ್ಯ ತಾಂಡವ— ಎಂಬ ಭೇದಗಳನ್ನು ಹೊಂದಿ ನಾಟಕಾದಿ ದೃಶ್ಯಪ್ರಬಂಧಗಳಿಗೆ ಸಹಾಯಭೂತವಾಗುತ್ತವೆ. ಈ ನಾಟ್ಯದಿಂದಲೇ ನಾಟಕಾದಿ ದಶರೂಪಕಗಳು ಉಂಟಾಗುತ್ತವೆ.

ದಶರೂಪಕಗಳು ಅವುವೆಂದರೆ,— ೧ ನಾಟಕ, ೨ ಪ್ರಕರಣ, ೩ ಭಾಣ, ೪ ಪ್ರಹಸನ, ೫ ಡಿಮ, ೬ ವ್ಯಾಯೋಗ, ೭ ಸಮವಾಕಾರ, ೮ ವೀಧಿ, ೯ ಅಂಕ, ೧೦ ಈಹಾಮೃಗ

ಉದಾ:— ನಾಟಕಂ ಸಪ್ರಕರಣಂ ಭಾಣ ಪ್ರಹಸನಂ ಡಿಮಃ||
ವ್ಯಾಯೋಗ ಸಮವಾಕಾರ ವೀಥ್ಯಂಕೇಹಾಮೃಗಾದಶ||

ಈ ದೃಶ್ಯಪ್ರಬಂಧಗಳು ನಾಟ್ಯವನ್ನೇ ಆಶ್ರಯಿಸಿದ್ದರೂ, ಒಂದೇ ವಿಧವೆಂದು ಎಣಿಸಕೂಡದು, ಭೇದವನ್ನು ಎಣಿಸುವ ವಸ್ತು, ನಾಯಕ, ರಸ, ಇವುಗಳಿಂದ ಒಂದಕ್ಕೊಂದಕ್ಕೆ ಭೇದವುಂಟೆಂದು ತಿಳಿಯಬೇಕು.

ವಸ್ತುಗಳಲ್ಲಿ ಮೂರು ವಿಧವು. ಅವಾವುವೆಂದರೆ— ೧ ಪ್ರಖ್ಯಾತ, ೨ ಮಿಶ್ರ, ೩ ಉತ್ಪಾದ್ಯ. ವಸ್ತುವೆಂದರೆ, ಕಥಾಸ್ವರೂಪವು. ಇದಕ್ಕೆ ಇತಿವೃತ್ತವೆಂದು ಮತ್ತೊಂದು ಹೆಸರು. ಈ ಇತಿವೃತ್ತದಲ್ಲಿ ಮೇಲೆ ಹೇಳಿದ ಮೂರು ಭೇದಗಳಲ್ಲದೆ ಆಧಿಕಾರಿಕ, ಪ್ರಾಸಂಗಿಕವೆಂದು ಮತ್ತೆರಡು ಭೇದವುಂಟು. ಮುಖ್ಯಾಧಿಕಾರಿಯನ್ನು ಉದ್ದೇಶಿಸಿ ನಡೆದಿರುವ ಕಥಾವೃತ್ತಕ್ಕೆ ಆಧಿಕಾರಿಕವೆಂದು ಹೆಸರು. ಇದರಲ್ಲಿಯೇ ಸಹಾಯಭೂತವಾದ ಕಥಾ ಸಂದರ್ಭವು ಪ್ರಾಸಂಗಿಕವೆನ್ನಿಸುವುದು. ಆಧಿಕಾರಿಕಕ್ಕೆ ಉದಾ:—ರಾಮಾಯಣದಲ್ಲಿ ಸೀತಾರಾಮವೃತ್ತಾಂತವು. ಪ್ರಾಸಂಗಿಕದಲ್ಲಿ ಪತಾಕಾ, ಪ್ರಕರೀ— ಎಂದು ಎರಡು ವಿಧವು. ಬಹುದೂರ ಅನುಸರಿಸತಕ್ಕ ಕಥೆಯು ಪತಾಕವೆನ್ನಿಸುವುದು. ಉದಾ:— ರಾಮಾಯಣದಲ್ಲಿ ಸುಗ್ರೀವಾದಿ ವೃತ್ತಾಂತವು ಪತಾಕಕ್ಕೆ ಸೇರಿದುದು. ಜಟಾಯು ಮತ್ತು ಶಬರೀ—ಮುಂತಾದವರ ಕಥೆಯು ಪ್ರಕರಿಗೆ ಸೇರಿದುದು. ಸತ್ಕುಲಪ್ರಸೂತನಾಗಿಯೂ, ದಾತೃವಾಗಿಯೂ ಉದಾರಶೀಲನಾಗಿಯೂ ಭಾಗ್ಯಶಾಲಿಯಾಗಿಯೂ ಪ್ರತಿಭಾಸಂಪನ್ನನಾಗಿಯೂ ಧರ್ಮಾರ್ಥಕಾಮಗಳಲ್ಲಿ ಆಸಕ್ತಿಯುಳ್ಳವನಾಗಿಯೂ ಇರುವ ಪುರುಷನೇ ನಾಯಕನೆನ್ನಿಸಿಕೊಳ್ಳುವನು. ನಾಯಕರಲ್ಲಿ ನಾಲ್ಕು ವಿಧವು. ಅವುವೆಂದರೆ, ೧ ಧೀರೋದಾತ್ತ, ೨ ಧೀರೋದ್ಧತ, ೩ ಧೀರಲಲಿತ, ೪ ಧೀರಶಾಂತ.

೧. ಗಾಂಭೀರ್ಯವುಳ್ಳವನಾಗಿಯೂ ಪರಾಕ್ರಮವುಳ್ಳವನಾಗಿಯೂ ದಯಾಶಾಲಿಯಾಗಿಯೂ ಆತ್ಮಸ್ತುತಿವಿಮುಖನಾ

ಗಿಯೂ ಶತ್ರುಗಳನ್ನು ನಿಗ್ರಹಿಸತಕ್ಕವನಾಗಿಯೂ ಇರುವವನು "**ಧೀರೋದಾತ್ತ**"ನೆನ್ನಿಸಿಕೊಳ್ಳುವನು.

೨. ಧೀರನಾಗಿಯೂ ಇಂದ್ರಜಾಲ ಮಹೇಂದ್ರಜಾಲಗಳನ್ನು ತಿಳಿದವನಾಗಿಯೂ ಪರಾಕ್ರಮಿಯಾಗಿಯೂ ಅಸಮಾನ ಬುದ್ಧಿಯುಳ್ಳವನಾಗಿಯೂ ಇರುವವನು "**ಧೀರೋದ್ಧತ**" ನೆನ್ನಿಸಿಕೊಳ್ಳುವನು.

೩. ಗುಣಾಢ್ಯನಾಗಿಯೂ ಶರೀರಪರಾಕ್ರಮುವುಳ್ಳವನಾಗಿಯೂ ಆವ ಚಿಂತೆಯೂ ಇಲ್ಲದವನಾಗಿಯೂ ವಿಷಯಾಸಕ್ತಿಯುಳ್ಳವನಾಗಿಯೂ ಇರುವವನು "**ಧೀರಲಲಿತ**"ನೆನ್ನಿಸಿಕೊಳ್ಳುವನು.

೪. ಶಾಂತಿಯಿಂದಲೂ ಧೈರ್ಯದಿಂದಲೂ ಕೂಡಿದ ಬ್ರಾಹ್ಮಣನು "**ಧೀರಶಾಂತ**"ನೆನ್ನಿಸುವನು.

(**ಇದಲ್ಲದೆ ಶೃಂಗಾರನಾಯಕರೂ ಅನೇಕರಿರುವರು. ಗ್ರಂಥವಿಸ್ತಾರ ಭಯದಿಂದ ಹೇಳಲಿಲ್ಲ.**)

ನಾಯಕರಿಂದ ನಾಯಕಿಯರಿಗೂ ಗ್ರಹಣವು ಬರುವುದು. ಇದರಲ್ಲಿ ಎಂಟು ವಿಧವು. ಅವುವೆಂದರೆ,— ೧ ಸ್ವಾಧೀನಪತಿಕಾ, ೨ ವಾಸಕಸಜ್ಜಿಕಾ, ೩ ವಿರಹೋತ್ಕಂಠಿತಾ, ೪ ವಿಪ್ರಲಬ್ಧಾ, ೫ ಖಂಡಿತಾ, ೬ ಕಲಹಾಂತರಿಕಾ, ೭ ಪ್ರೋಷಿತ ಭರ್ತೃಕಾ, ೮ ಅಭಿಸಾರಿಕಾ. ನಾಯಕರಿಂದ ನಾಯಕಿಯರಿಗೆ ಗ್ರಹಣವು ಬರುವುದು ಹೇಗಂದರೆ,— "ವಸ್ತುನಾಯಕರಸಾ:" ಎಂಬಲ್ಲಿ '**ನಾಯಕ**'ಶಬ್ದಕ್ಕೆ 'ನಾಯಕಾಚ ನಾಯಕಶ್ಚ ನಾಯಕಾ" ಏಕಶೇಷಸಮಾಸ ವಿರುವುದರಿಂದ ನಾಯಕಶಬ್ದದಿಂದ ನಾಯಕಾ ಶಬ್ದಕ್ಕೂ ಗ್ರಹಣವು ಬಂತು, (ಆದುದರಿಂದಲೇ ನಾಯಿಕೆಯರಲ್ಲಿ ಎಂಟು ವಿಧವೆಂದು ಹೇಳಲ್ಪಟ್ಟಿತು.

೧. ಸರ್ವಕಾಲದಲ್ಲಿಯೂ ಗಂಡನಿಂದ ಪ್ರೀತಿಸಲ್ಪಡುವ ಸ್ತ್ರೀ, "**ಸ್ವಾಧೀನಪತಿಕಾ**" ಎನ್ನಿಸಿಕೊಳ್ಳುವಳು.

೨. ಶಯ್ಯಾಗೃಹವನ್ನೂ ತನ್ನನ್ನೂ ಅಲಂಕರಿಸಿಕೊಂಡು ಕಾಮಪೀಡಿತೆಯಾಗಿ ಗಂಡನ ಆಗಮನವನ್ನೇ ನಿರೀಕ್ಷಿಸುವ ಸ್ತ್ರೀ "**ವಾಸಕಸಜ್ಜಿಕಾ**" ಎನ್ನಿಸಿಕೊಳ್ಳುವಳು.

ಗಂಡನ ಬರುವಿಕೆಯು ಸಾವಕಾಶದಿಂದ—ತಪ್ಪಿತಸ್ಥನಲ್ಲದಿದ್ದರೂ— ಉನ್ಮತ್ತಳಾಗಿರುವವಳು "**ವಿರಹೋತ್ಕಂಠಿತಾ**" ಎನ್ನಿಸಿಕೊಳ್ಳುವಳು.

೪. ವಿಟನಿಂದ ಸಂಕೇತಸ್ಥಳವನ್ನು ಗೊತ್ತುಮಾಡಿ ವಂಚಿಸಲ್ಪಟ್ಟ ಕಾಮಪೀಡಿತೆಯಾದ ಸ್ತ್ರೀ, ಕಲಾಶಾಸ್ತ್ರಜ್ಞರಿಂದ "**ವಿಪ್ರಲಬ್ಧಾ**" ಎನ್ನಿಸಿಕೊಳ್ಳುವಳು.

೫. ಗಂಡನು ರಾತ್ರಿಯನ್ನು ಯಾರ ಮನೆಯಲ್ಲಿಯೋ ಕಳೆದು ಬಂದು ಪ್ರಾತಃಕಾಲವಾದಕೂಡಲೆ, ಪರಸ್ತ್ರೀಸಂಭೋಗ ಚಿನ್ಹಗಳಿಂದ ಕೋಪಿಸಿಕೊಂಡ ಸ್ತ್ರೀಯು "**ಖಂಡಿತಾ**" ಎನ್ನಿಸುವಳು.

೬. ಕೋಪದಿಂದ ಗಂಡನನ್ನು ನಿರಾಕರಿಸಿ, ಅನಂತರದಲ್ಲಿ ಪಶ್ಚಾತ್ತಾಪವನ್ನು ಹೊಂದಿದಂತಹ ಸ್ತ್ರೀ, "**ಕಲಹಾಂತರಿಕಾ**" ಎನಿಸಿಕೊಳ್ಳುವಳು.

೭. ಗಂಡನು ದೇಶಾಂತರಕ್ಕೆ ಹೋದರೆ ಬಹುವಾಗಿ ದುಃಖಿಸುವ ಸ್ತ್ರೀಯು, '**ಪ್ರೋಷಿತಭರ್ತೃಕಾ**" ಎನಿಸಿಕೊಳ್ಳುವಳು.

೮. ಅನುರಾಗವುಳ್ಳವಳಾಗಿ ತಾನೇ ಪ್ರಿಯನನ್ನು ಹುಡುಕಿಕೊಂಡು ಹೊರಡುವ ಸ್ತ್ರೀಯು, "**ಅಭಿಸಾರಿಕಾ**" ಎನ್ನಿಸಿಕೊಳ್ಳುವಳು.

ರಸಗಳೆಂದರೆ ಒಂಭತ್ತು ವಿಧಗಳು. ನಾಟಕದಲ್ಲಿ ಮಾತ್ರ ಎಂಟುವಿಧವು;—೧ಶೃಂಗಾರ, ೨ವೀರ, ೩ಕರುಣ, ೪ಅದ್ಭುತ ೫ಹಾಸ್ಯ, ೬ಭಯಾನಕ, ೭ಬೀಭತ್ಸ, ೮ರೌದ್ರ.

ವಿಭಾವಾನುಭಾವ, ವ್ಯಭಿಚಾರಿಭಾವ, ಸಾತ್ವಿಕಭಾವಗಳಿಂದ ಚೆನ್ನಾಗಿ ತೋರುವ ಸ್ಥಾಯೀ ಭಾವವು ರಸವೆನಿಸುವುದು.

ವಸ್ತು ಅಥವಾ ಇತಿವೃತ್ತವು ಮೂರುವಿಧವಾಗಿದೆಯೆಂದು ಹಿಂದೆ ಹೇಳಿರುವದಷ್ಟೆ; ಅವುಗಳ ಸ್ವರೂಪವೆಂದರೆ:— ರಾಮಾಯಣ, ಭಾರತ ಇತ್ಯಾದಿಯಾದ ಇತಿಹಾಸ ವಿಷಯಕವಾದ ಕಥೆಗಳು ಪ್ರಖ್ಯಾತವೆಂಬುದಾಗಿಯೂ, ಕವಿಕಲ್ಪಿತವಾದ ಕಥೆಯು ಉತ್ಪಾದ್ಯವೆಂಬುದಾಗಿಯೂ ತಿಳಿಯತಕ್ಕದು. ದಶರೂಪಕಗಳು ನಾಟ್ಯವನ್ನೇ ಆಶ್ರಯಿಸಿದ್ದರೂ ವಸ್ತು, ನಾಯಕ, ರಸಗಳಿಂದ ಭೇದವಾಗುವುದೇ ಹೊರತು, ಎಲ್ಲವೂ ಒಂದೇ ಆಗಲಾರದೆಂದು ಮೊದಲೇ ಹೇಳಿರುವುದಷ್ಟೇ; ಅವುಗಳ ಭೇದಗಳನ್ನು ಇನ್ನುಮುಂದೆ ಹೇಳುವದು.

೧. ಇತಿಹಾಸ ಸಂಬಂಧವಾದ ಕಥೆಗಳೂ, ಧೀರೋದಾತ್ತನೆಂಬ ನಾಯಕನೂ, ಶೃಂಗಾರರಸಕ್ಕಾಗಲಿ, ವೀರರಸಕ್ಕಾಗಲಿ ಪ್ರಾಧಾನ್ಯ. ಉಳಿದರಸಗಳಿಗೆ ಸಹಾಯ ಭೂತವಾಗಿ ಮಾತ್ರ ಪ್ರವೇಶ. ಹೀಗಿದ್ದರೆ "**ನಾಟಕ**"ವೆನಿಸುವುದು.

೨. ಕವಿಯಿಂದ ರಚಿತವಾದಕಥೆಯೂ, ಧೀರಶಾಂತನೆಂಬ ನಾಯಕನೂ, ಶೃಗಾರರಸಕ್ಕೆ ಪ್ರಾಧಾನ್ಯ. ಇತರ ರಸಗಳು ಸಹಾಯಭೂತವಾಗಿದ್ದರೆ, ಅದು "**ಪ್ರಕರಣ**"ವೆನಿಸುವುದು.

೩. ಕವಿಯಿಂದ ರಚಿತವಾದ ಕಥೆಯೂ, ಧೂರ್ತವಿಟನೆಂಬ ನಾಯಕನೂ, ಶೃಂಗಾರ ವೀರರಸಗಳಿಗೆ ಸೂಚನೆ ಮಾತ್ರವೇ ತೋರುವದು "**ಭಾಣ**"ವೆನಿಸುವುದು.

೪. "**ಪ್ರಹಸನ**"ದಲ್ಲಿ ಕಥೆ, ಇಂತಹದೆಂದು ನಿಯಮುವಿಲ್ಲ. ಪಾಷಂಡರೇ ಮೊದಲಾದವರು ನಾಯಕರು. ಹಾಸ್ಯರಸಕ್ಕೆ ಪ್ರಾಧಾನ್ಯವು.

೫. "**ಡಿಮ**"ದಲ್ಲಿ ಇತಿಹಾಸ ನಿಬದ್ಧವಾದ ಕಥೆಗಳೂ

ದೇವಗಂಧರ್ವರೇ ಮೊದಲಾದ ಹದಿನಾರು ಧೀರೋದ್ಧತ ನಾಯಕರೂ, ರೌದ್ರರಸಕ್ಕೆ ಪ್ರಾಧಾನ್ಯ. ಶೃಂಗಾರ ವೀರರಸ ಗಳಿಗೆ ಪ್ರವೇಶವುಂಟು.

೬. **ವ್ಯಾಯೋಗದಲ್ಲಿ**:— ಇತಿಹಾಸ ನಿಬದ್ಧವಾದ ಕಥೆಯೂ ಧೀರೋದ್ಧತನಾಯಕನೂ, ವೀರರಸಕ್ಕೆ ಪ್ರಾಧಾನ್ಯ.

೭. **ಸಮವಾಕಾರದಲ್ಲಿ**:— ದೇವಾಸುರರೇ ಮೊದಲಾದ ೧೨ಜನ ನಾಯಕರೂ, ವೀರರಸಪ್ರಧಾನವೂ, ಇತಿವೃತ್ತವು.— ಕವಿಕಲ್ಪಿತವಾಗಿದ್ದರೂ ಇರಬಹುದು.

೮. **ವೀಥಿಯಲ್ಲಿ**:— ಕವಿಕಲ್ಪಿತವಾದ ಕಥೆ, ಧೀರೋದ್ಧತನೆಂಬ ನಾಯಕನೂ, ಶೃಂಗಾರರಸಕ್ಕೆ ಸೂಚನೆಮಾತ್ರ.

೯. **ಅಂಕದಲ್ಲಿ**:— ಇತಿಹಾಸ ನಿಬದ್ಧವಾದ ಕಥೆ. ಪ್ರಾಕೃತ ಜನರೇ ನಾಯಕರು. ಕರುಣಾರಸಕ್ಕೆ ಪ್ರಧಾನ್ಯ.

೧೦. **ಈಹಾಮೃಗದಲ್ಲಿ**:—ಮಿಶ್ರವಾದ ಕಥೆ, ಧೀರೋದಾತ್ತನೆಂಬ ನಾಯಕನು. ಶೃಂಗಾರರಸವು ಸ್ವಲ್ಪವಾಗಿ ತೋರತಕ್ಕದ್ದು. **(ಮುಂದೆಸಾಗುವದು)**

ಕನ್ನಡ ರನ್ನಗನ್ನಡಿ

ಮಣಿ.೬

ಶ್ರೀನಿವಾಸರಾವ್ ಸವದಿ

(ದಿವಂಗತ)

ಜಗತ್ತಿನಲ್ಲಿ ಅವಾಗಲೂ ಎಲ್ಲರೊಡನೆ ಆನಂದದಿಂದಲೂ ಪ್ರೀತಿಯಿಂದಲೂ ನಡೆದುಕೊಂಡು ಕರ್ತವ್ಯಕರ್ಮವನ್ನು ಒಳ್ಳೆಯ ರೀತಿಯಿಂದ ಬರಗಿಸಿ, ಅಜಾತಶತ್ರುವೆಂದು ಹೊಗಳಿಸಿಕೊಳ್ಳುವ ಜನರು ಸಾಂಪ್ರತಕ್ಕೆ (ವರ್ತಮಾನಕಾಲಕ್ಕೆ) ಕಡಿಮೆ. ಹೀಗಿದ್ದರೂ ಧಾರವಾಡದ ಟ್ರೇನಿಂಗ್‌ಕಾಲೇಜಿನ ವ್ಹಾಯಿಸ್ ಪ್ರಿನ್ಸಿಪಾಲರಾಗಿದ್ದ ಶ್ರೀ. **ಶ್ರೀನಿವಾಸರಾವ ಸವದಿ**ಯವರು ಆ ಜನರೊಳಗೆ ಒಬ್ಬರೆಂದು ಹೇಳಬಹುದು. ಅವರ ಸಂಕ್ಷಿಪ್ತ ಚರಿತ್ರವನ್ನು ನಮ್ಮ ಕನ್ನಡಿಗರ ಅವಗಾಹನೆಗೆ ತರಲಿಕ್ಕಾಗಿ ಇಲ್ಲಿ ಬರೆಯುವೆವು.

ಇವರು ೧೮೪೬ನೇ ಇಸವಿ ಅಕ್ಟೋಬರ್ ೨೬ರಲ್ಲಿ ಬೆಳಗಾಂವಿಯಲ್ಲಿ ಹುಟ್ಟಿದರು. ಇವರ ಮಾತುಶ್ರೀಯವರ ಹೆಸರು ಸೀತಾಬಾಯಿ. ಇವರ ತೀರ್ಥರೂಪರಾದ ಶ್ರೀ. ರಾಮಚಂದ್ರರಾಯರು ಬೆಳಗಾಂವಿಯಲ್ಲಿ ಕಾರಕೂನರಾಗಿದ್ದರು. ಆದುದರಿಂದ ಇವರ (ಶ್ರೀನಿವಾಸರಾಯರ) ವಿದ್ಯಾಭ್ಯಾಸವು ಅಲ್ಲಿಯೇ ಆಯಿತು. ಇವರು, ಮೊದಲು ಮರಾಠೀ ಭಾಷೆಯನ್ನು ಮುಗಿಸಿ, ಇಂಗ್ರಜಿ ಭಾಷೆಯ ಅಭ್ಯಾಸಕ್ಕೆ ಸರದಾರ್ಸ ಹಾಯ್‌ಸ್ಕೂಲಿಗೆ ಸೇರಿದರು. ಅಲ್ಲಿ ಚೆನ್ನಾಗಿ ಅಭ್ಯಾಸ ಮಾಡಿ ೨೦ ವರ್ಷ ವಯಸ್ಸಿನಲ್ಲಿಯೇ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಇದಲ್ಲದೆ ಇವರು ಮನೆಯಲ್ಲಿ ಒಬ್ಬ ಪಂಡಿತನ ಹತ್ತಿರ ಸ್ವಭಾಷೆಯಾದ ಕನ್ನಡವನ್ನು ತಕ್ಕಮಟ್ಟಿಗೆ ಅಭ್ಯಾಸ ಮಾಡಿದ್ದರು. ಮತ್ತು ಇವರು ಅಲ್ಪಸ್ವಲ್ಪ ಗುಜರಾಥಿಯನ್ನೂ ಹಿಂದುಸ್ಥಾನಿಯನ್ನೂ ತಿಳಿದಿದ್ದರು. ಆ ಕಾಲದಲ್ಲಿ ಅಲ್ಪಸ್ವಲ್ಪ ಇಂಗ್ರಜಿ ಬಲ್ಲವರು ಕೂಡ ಬಹಳ ಮರ್ಯಾದೆಯನ್ನು ಹೊಂದುತ್ತಿದ್ದರು. ಅದರಂತೆ ಶ್ರೀನಿವಾಸರಾಯರೂ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದುದರಿಂದ ಜನರಲ್ಲಿ ಇವರು ತುಂಬ ಮಾನವನ್ನು ಪಡೆದರು. ಅಭ್ಯಾಸಮಾಡುವ ಕಾಲದಲ್ಲಿ ಇವರಿಗೆ ಸ್ಕಾಲರ್‌ಸಿಪ್ಪಗಳೆಂಬ ವಿದ್ಯಾರ್ಥಿವೇತನಗಳು ದೊರೆಯುತ್ತಿದ್ದವು. ಈ ಮೇರೆಗೆ ಇಂಗ್ರಜಿ ಪರೀಕ್ಷೆಯು ತೀರಿದ ಕೂಡಲೆ ಶ್ರೀನಿವಾಸರಾಯರು ಬೆಳಗಾಂವಿಯ ಹೈಸ್ಕೂಲಿನಲ್ಲಿ ೩ನೇ ಅಸಿಸ್ಟೆಂಟ್‌ರಾಗಿ ನೇಮಿಸಲ್ಪಟ್ಟರು. ತಾವು ಅಭ್ಯಾಸ ಮಾಡಿದ ಶಾಲೆಯಲ್ಲಿ ಉಪಾಧ್ಯಾಯರಾದ ಕೂಡಲೆ ಇವರಿಗೆ ಕಲಿಸಲಿಕ್ಕೆ ಒಳ್ಳೆ ಹುರುಪು (ಉತ್ಸಾಹ) ಉಂಟಾಯಿತು. ಆ ಶಾಲೆಯಲ್ಲಿ ೨ ವರ್ಷಗಳ ವರೆಗೆ ಚನ್ನಾಗಿ ಕೆಲಸ ಮಾಡಿದ ಮೇಲೆ ಮೇಲಿನ ಅಧಿಕಾರಿಗಳು ಇವರ ದಕ್ಷತೆ, ನಿಯಮಿತತನ, ಚಟುವಟಿಕೆ, ಜಾಣತನ, ಸೌಜನ್ಯ ಮುಂತಾದ ಸದ್ಗುಣಗಳನ್ನು ತಿಳಿದುಕೊಂಡು ಇವರನ್ನು ಸಿರಸಿಯ ಅಂಗ್ಲೋ-ವ್ಹರ್ನಾಕ್ಯುಲರ್ ಸ್ಕೂಲಿಗೆ ಸ್ವತಂತ್ರ ಉಪಾಧ್ಯಾಯರನ್ನಾಗಿ ನೇಮಿಸಿದರು. ಅಲ್ಲಿ ಎರಡೂವರೆ ವರ್ಷ ಕೆಲಸ ಮಾಡಿದ ಬಳಿಕ ಸನ್ ೧೮೭೩ರಲ್ಲಿ ೧೦೦ ರುಪಾಯಿ ಸಂಬಳದ ಮೇಲೆ ಟ್ರೇನಿಂಗ್‌ಕಾಲೇಜಿನ ವ್ಹಾಯಿಸ್‌ಪ್ರಿನ್ಸಿಪಾಲರನ್ನಾಗಿ ಮಾಡಿದರು. ಅವರು ಅಂದಿನಿಂದ ಕಡೆಯ ವರೆಗೆ— ನಡುವೆ ಕೆಲವು

ವರ್ಷಗಳು ಹೊರತಾಗಿ— ಎಂದರೆ ೨೭ ವರ್ಷಗಳ ವರೆಗೆ ಕಾಲೇಜಿನಲ್ಲಿಯೇ ಇದ್ದರು. ಆಗ ಟ್ರೇನಿಂಗ ಕಾಲೇಜು ಬೆಳಗಾಂವಿಯಲ್ಲಿತ್ತು. ಆ ಮೇಲೆ ಈಗಿರುವ ಧಾರವಾಡದ ಕಾಲೇಜು ಕಟ್ಟಲ್ಪಟ್ಟಿತು. ಇಲ್ಲಿರುವ ಈಗಿನ ಬೋರ್ಡಿಂಗ ಹೌಸ್ ಎಂಬ ವಿದ್ಯಾರ್ಥಿ ನಿಲಯವನ್ನು ಆಗಿನ ಇಂಜನಿಯುರ್ ಸಾಹೇಬರವರು ಯುರೋಪಿಯನ್ ಜನರಿಗೆ ಉಪಯೋಗ ವಾಗುವಂತೆ ಕಟ್ಟಿಸಿದ್ದರು. ಆಗಿನ ಎಜ್ಯುಕೇಶನಲ್ ಇನ್ ಸ್ಪೆಕ್ಟರ್‌ರಾದ ಮೆ॥ ರಸೆಲ್ ಸಾಹೇಬರು ಹೊಸ ಕಾಲೇಜಿನ ಕಟ್ಟಡದಲ್ಲಿ ಆವಶ್ಯಕವಾದ ಸುಧಾರಣೆ (ತಿದ್ದುಪಾಟು) ಗಳನ್ನು ಮಾಡಿಸಿಕೊಳ್ಳಿರೆಂದು ಹೇಳಿ ಶ್ರೀನಿವಾಸರಾಯರನ್ನು ಇಲ್ಲಿಗೆ ಕಳುಹಲು, ಆ ಪ್ರಕಾರ ಅವರು ಬಂದು, ನಮ್ಮ ಜನ ರಿಗೆ ಅನುಕೂಲವಾಗುವಂತೆ ಅನೇಕ ಮಾರ್ಪಾಟುಗಳನ್ನು ಮಾಡಿಸಿದರು. ಸನ್ ೧೮೭೯ನೆಯ ಇಸವಿಯಲ್ಲಿ ಇವರು ಮುಂಬಯಿ ಹೈಕೋರ್ಟಿನ ಟ್ರಾನ್ಸ್‌ಲೇಟರ ಕೆಲಸವನ್ನು ೬ ತಿಂಗಳು ಮಾಡಿದರು. ಮತ್ತು ೧೮೮೩ರಲ್ಲಿ ಕೆಲವು ದಿವಸ ಕಲಾದಗಿ ಡಿಸ್ಟ್ರಿಕ್ಟ್ ಇನಸ್ಪೆಕ್ಟರರೂ, ೧೮೮೪ರಲ್ಲಿ ಕೆಲವು ತಿಂಗಳು ಕಾರವಾರ ಡಿಸ್ಟ್ರಿಕ್ಟ್ ಇನಸ್ಪೆಕ್ಟರರೂ, ೧೮೮೫ರಲ್ಲಿ ಕೆಲವು ದಿವಸ ಸೊಲ್ಲಾಪುರ ಡಿ॥ ಇನಸ್ಪೆಕ್ಟರರೂ ಆಗಿದ್ದರು. ಮುಂದೆ ಕೆಲವು ದಿವಸಗಳೊಳಗಾಗಿ ಇವರನ್ನು ವಿಜಾಪುರ ಜಿಲ್ಲೆಯ ಕಾಯಂ ಡಿ॥ ಇನಸ್ಪೆಕ್ಟರರನ್ನಾಗಿ ೧೬೫ ರೂಪಾಯಿ ಸಂಬಳಕ್ಕೆ ನೇಮಿಸಿದರು. ಅಲ್ಲದ್ದಾಗ ಸರಕಾರದವರು ಇವ ರನ್ನು ಬಹುವಾಗಿ ಸ್ತೋತ್ರ ಮಾಡಿದರು ಏಕೆಂದರೆ, ಇವರು ಹೋದ ಹೋದಲ್ಲಿ ವ್ಯಾಖ್ಯಾನಗಳನ್ನು ಕೊಟ್ಟು ಶಾಸ್ತ್ರೀಯ ಪ್ರಯೋಗಗಳನ್ನು ಮಾಡಿತೋರಿಸಿ ಶಾಲೆಯ ಕೆಲಸಕ್ಕೆ ಉಪಾ ಧ್ಯಾಯರಿಗೂ ಊರವರಿಗೂ ಬಹಳ ಉತ್ತೇಜನವನ್ನು ಕೊಡು ತ್ತಿದ್ದರು. ಆದರೆ, ಈ ಸೌಖ್ಯವು ಬಹಳ ದಿವಸ ನಿಲ್ಲಲಿಲ್ಲ. "ಸುಖದ ಪರಮಾವಧಿಯಲ್ಲಿ ದುಃಖವು" ಎಂಬಂತೆ, ನಮ್ಮ ಚರಿತ್ರನಾಯಕರು ದುರ್ದೈವದಿಂದ ೧೦೦ ರುಪಾಯಿ ಸಂಬ ಳದ ಮೇಲೆ ಪುನಃ ಟ್ರೇನಿಂಗ್‌ಕಾಲೇಜಿಗೆ ೧ನೆ ಅಸಿಸ್ಟೆಂಟರ ಸ್ಥಾನಕ್ಕೆ ನೇಮಿಸಲ್ಪಟ್ಟರು. ಆದರೆ, ಪರಮಾತ್ಮನ ದಯೆ ಯಿಂದ ಇತ್ತಲಾಗಿ ಅವರನ್ನು ೫೦ ರೂಪಾಯಿ ಸಂಬಳ ಹೆಚ್ಚು ಮಾಡಿ, ವ್ಹಾಯಿಸ್ ಪ್ರಿನ್ಸಿಪಾಲರ ಕೆಲಸಕ್ಕೆ ನೇಮಿಸಿ ದ್ದರು. ಈ ಉತ್ಕರ್ಷದಿಂದ ಅವರಿಗೆ ಬಹಳ ಆನಂದವಾಗಿ ದ್ದಿತು. ಆದರೆ ಆ ಆನಂದವು ಕೆಲವು ತಿಂಗಳುಗಳ ವರೆಗೆ ಸಹ ಅವರಲ್ಲಿ ಉಳಿಯಲಿಲ್ಲ. ದೇವರು ತಮ್ಮ ಮೇಲೆ ಕರುಣಾ ಕಟಾಕ್ಷವನ್ನು ಬೀರಿದನೆನ್ನುವಷ್ಟರಲ್ಲಿ ಅವರಿಗೆ ಭಯಂಕರ ವಾದುದೂ ಪ್ರಾಣಾಂತ್ಯಸಮಯವನ್ನು ತರತಕ್ಕುದೂ ಇಹ ಲೋಕದಜೀವನವನ್ನು ಅಸಹ್ಯಕರವಾಗಿ ಮಾಡುವಂತಹದೂ ಆದ ಒಂದು ದೊಡ್ಡ ಆಘಾತವು ತಗಲಿತು. ಅದಾವುದೆಂದರೆ ಅವರಿಗೆ ಪ್ರಿಯಕರನೂ ಸುಸ್ವಭಾವದವನೂ ಪಿತೃಭಕ್ತಿಪರಾ ಯಣನೂ ಚಿಕ್ಕವನೂ ಆದ ಪಾಂಡುರಂಗರಾಯನೆಂಬ ಅವರ ಮಗನು ಅಕಾಲಿಕ ಮರಣಹೊಂದಿದ ಸಂಗತಿಯು! ಈ ಮಗ ನನ್ನು ಶ್ರೀನಿವಾಸರಾಯರೂ ಅವರ ಪತ್ನಿಯಾದ ಅಂಬಾ ಬಾಯಿಯವರೂ ಅಂಗೈಯೊಳಗಿನ ಅರಗಿಳಿಯಂತೆ ಪಾಲನೆ ಮಾಡುತ್ತಿದ್ದರು. ಅವರಿಗೆ ಪಾಂಡುರಂಗರಾಯನೊಬ್ಬನೇ ಮಗನಾಗಿದ್ದನು. ಇವನ ಮರಣದಿಂದ ಶ್ರೀನಿವಾಸರಾಯರ ಕುಟುಂಬಕ್ಕೆ ಬಹಳ ಕೇಡು ಸಂಭವಿಸಿತೆಂಬಲ್ಲಿ ಸಂದೇಹ ವಿಲ್ಲ.

ಮೊದಲೇ ವಾರ್ಧಿಕ್ಯದಿಂದ ಇವರು ಬಹಳ ಅಶಕ್ತರಾಗಿ ದ್ದರು. ಇದರ ಮೇಲೆ ಭಯಂಕರವಾದ ಪುತ್ರವಿಯೋಗವು ಬೇರೆ ಸಂಭವಿಸಿತು. ಪುತ್ರನನ್ನು ಅಗಲಿ ಅರಗಳಿಗೆಯಾದರೂ ಇರಲಾರದಿದ್ದ ಶ್ರೀನಿವಾಸರಾಯರು ಪುತ್ರಶೋಕವನ್ನು ಸಹಿಸ ಲಾರದೆ ಕುಟುಂಬವನ್ನೂ ಇಷ್ಟಮಿತ್ರರನ್ನೂ ಬಾಲ್ಯಾವಸ್ಥೆಯ ಲ್ಲಿರುವ ಕನ್ನಡ ಭಾಷೆಯನ್ನೂ ಶೋಕಸಾಗರದಲ್ಲಿ ನೂಕಿ, ಪುತ್ರವಿಯೋಗವಾದ ಎಂಟು ತಿಂಗಳೊಳಗಾಗಿ ತಾವೂ ಮಗ ನನ್ನು ಹಿಂಬಾಲಿಸಿ ಹೊರಟುಹೋದರು. ಅವರ ಕುಟುಂಬಕ್ಕೆ ಉಂಟಾದ ಕಷ್ಟವನ್ನು ವಿವರಿಸಿ ತೀರದು! ಮನೆತನದ ವ್ಯವ ಸ್ಥೆಯನ್ನು ನೋಡಲು ಒಬ್ಬರೂ ಇಲ್ಲವಾಯಿತು! ಮಾಡುವು ದೇನು? ದೈವಗತಿಗೆ ಉಪಾಯವಿಲ್ಲ. ಸುಜ್ಞರು ಈ ಪ್ರಕಾರ ಶೋಕಿಸುವುದು ಒಳ್ಳಿತಲ್ಲ. "**जातस्य मरणं ध्रुवं**" ಎಂಬಂತೆ ಮರಣವು ಆರಿಗೂ ತಪ್ಪಿದುದಲ್ಲ. ಹೀಗೆ ತಿಳಿದು ಅವರ ಕುಟುಂಬದವರೂ ಇಷ್ಟಮಿತ್ರರೂ ಛಾತ್ರವರ್ಗದವರೂ ಸಮಾಧಾನವನ್ನು ತಂದುಕೊಳ್ಳಬೇಕು.

ಇವರ ಸದ್ಗುಣಗಳನ್ನು ಸ್ವಲ್ಪದರಲ್ಲಿ ವರ್ಣಿಸಲಾಗದು. ಇವರು ಶಾಂತರೂ ದಯಾವಂತರೂ ವಿದ್ಯಾರ್ಥಿಗಳಲ್ಲಿ ಪುತ್ರ ವಾತ್ಸಲ್ಯವುಳ್ಳವರೂ ಪ್ರಸಿದ್ಧರಾದ ವಾಗ್ಮಿಗಳೂ ಆಗಿದ್ದರು. ಇವರ ಭಾಷಣದಲ್ಲಿ ಯಮಕವೂ ಹಾಸ್ಯರಸವೂ ಪ್ರಪೂರಿತ ವಾಗಿದ್ದುವೆಂಬುದು ಅವರ ಭಾಷಣಗಳನ್ನು ಕೇಳಿರುವ ಪ್ರತಿ ಯೊಬ್ಬರಿಗೂ ಗೊತ್ತಾದ ಸಂಗತಿಯು. ಪುಣೆಯಲ್ಲಿ ನೆರೆದ ೧೧ನೆಯ ಸಾಮಾಜಿಕ ಪರಿಷತ್ತಿನಲ್ಲಿ ಇವರು "**ಮದ್ಯಪಾನ ನಿಷೇಧ**"ವೆಂಬ ವಿಷಯವಾಗಿ ಇಂಗ್ರೇಜಿ(English)ಭಾಷೆ ಯಲ್ಲಿ ಬಹು ಸರಸವಾದ ಭಾಷಣವನ್ನು ಮಾಡಿದರು. ಮತ್ತು ಇವರಿಗೆ ಬೇಕಾದ ವಿಷಯದಲ್ಲಿ ಕನ್ನಡ, ಇಂಗ್ರೇಜಿ, ಮರಾಟಿ, ಹಿಂದುಸ್ಥಾನಿ, ಭಾಷೆಗಳಲ್ಲಿ ಜನಮನೋರಂಜನ ವಾಗುವಂತೆ ನಗಿಸುತ್ತ ಮಾತಾಡುವ ಶೈಲಿಯು ಚೆನ್ನಾಗಿ ಸಾಧಿಸಿತ್ತು. ಮತ್ತು ಅಂತಹ ಪ್ರಸಂಗಗಳನ್ನು ಅವರು ಎಂದೂ ಕಳೆಯುತ್ತಿರಲಿಲ್ಲ. ಧಾರವಾಡದಲ್ಲಿ ಆದ ಸಭೆಗಳಲ್ಲಿ ರಾ.ಸಾ. ಸವದಿಯವರ ವ್ಯಾಖ್ಯಾನವಾಗದ ಸಭೆಯೇ ಆಗಿಲ್ಲವೆಂದು

ಹೇಳಬಹುದು. ಇವರ ವ್ಯಾಖ್ಯಾನಗಳು ವಿಶೇಷವಾಗಿ ಆರೋಗ್ಯಶಾಸ್ತ್ರ ವಿಷಯವಾಗಿಯೇ ಆಗ್ತಿದ್ದವು. ಇವರು ತಮ್ಮ ಹಿರಿಯರಿಂದ ಹರಿಕೀರ್ತನೆ ಮಾಡುವ ಬುದ್ಧಿಪಂತಿಕೆಯನ್ನು ಕಲಿತಿದ್ದರು. ಮತ್ತು ಹರಿಕೀರ್ತನವನ್ನು ಚೆನ್ನಾಗಿ ಮಾಡುತ್ತಿದ್ದರು. ಇವರು ಗಾಯನಕಲೆಯನ್ನೂ ತಕ್ಕಮಟ್ಟಿಗೆ ಅರಿತಿದ್ದರು. ಇವರಿಗೆ ಗಾಯನದಲ್ಲಿ ಬಲವಾದ ಅಭಿರುಚಿಯಿದ್ದಿತು. ಪ್ರಸಂಗವನ್ನು ಅನುಸರಿಸಿ ತಾತ್ಕಾಲಿಕವಾದ ಕವಿತ್ವಮಾಡುವ ಶಕ್ತಿಯೂ ಇವರಲ್ಲಿ ಚೆನ್ನಾಗಿ ನೆಲಸಿತ್ತು.

ಇವರಲ್ಲಿ ಲೇಖನ ಚಾತುರ್ಯವೂ ಇತ್ತೆಂದು ಹೇಳಬಹುದು. ಇವರು ಬರೆದ "ವಿದ್ಯಾಶಾಲಾ ಗುರುಮಿತ್ರ" ಎಂಬ ಪುಸ್ತಕದ ವಿಷಯವಾಗಿ ನ್ಯಾಯಮೂರ್ತಿ ರಾನಡೆಯವರೇ ಮೊದಲಾದ ದೊಡ್ಡ ದೊಡ್ಡ ಪಂಡಿತರು ಉತ್ತಮವಾದ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಅದರಂತೆ ವಾಗ್ಭೂಷಣದಲ್ಲಿ ಪ್ರಸಿದ್ಧವಾದ "ದೀರ್ಘಾಯುಷ್ಯದ ಗುಟ್ಟು" ಎಂಬ ಪುಸ್ತಕವೂ ಉತ್ತಮವಾಗಿಯೇ ಇರುವುದು. ಇದಲ್ಲದೆ, ಇವರು "ವಿನೋದತರಂಗಿಣಿ", "ಮಕರಸಂಕ್ರಮಣ" ಎಂಬ ರಂಜನೀಯವಾದ ಸಣ್ಣ ಪುಸ್ತಕಗಳನ್ನು ಮಾಡಿರುವರು.

ಧಾರವಾಡದಲ್ಲಿ ಪ್ಲೇಗಿನ ಹಾವಳಿಯು ಬಹಳವಾದಾಗ ಜನರು ಈ ರೋಗದಿಂದ ತಮ್ಮನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ಬಗ್ಗೆ ಇವರು [illegible] ವ್ಯಾಖ್ಯಾನಗಳನ್ನು ಕೊಡುತ್ತಿದ್ದರು. ಇದಲ್ಲದೆ ಅಶಿಕ್ಷಿತರಿಗೆ [illegible] ತಿಳಿಯುವಂತೆ ಆರೋಗ್ಯಮಾರ್ಗದರ್ಶಕವಾದ [illegible]ನ್ನು ಮಾಡಿ, ಪ್ಲೇಗಿನ ಹಾವಳಿಯಿಂದ ಜನರನ್ನು [illegible] ಸ್ವಲ್ಪಮಟ್ಟಿಗೆ ಉಳಿಸಿದರೆಂದರೆ ಅದು ಅತಿಶಯೋಕ್ತಿಯಾಗಲಾರದು.

ಈ ಪುಸ್ತಕಗಳ ಬೆಲೆಯು ಬಹು ಅಲ್ಪವೆಂದು [illegible] ಬಾರದು. [illegible] ಬೀಳುವುದಿಲ್ಲವೆಂದು [illegible] ವುದೇ? ಈ ಪ್ರಕಾರ [illegible] ವಶ್ಯವಾಗಿರುವುವು.

ಇವರಿಗೆ ಶಾಸ್ತ್ರೀಯ ವಿಷಯಗಳ ಮೇಲೆ ಬಹು ಪ್ರೇಮವಿತ್ತು. ಇವರು ವ್ಯವಹಾರದಲ್ಲಿ ಆಗಾಗ್ಗೆ ಕಂಡುಬರುವ ಸೃಷ್ಟಿಕಾರ್ಯಗಳಿಗೂ ತಮ್ಮ ದೃಷ್ಟಿಗೆ ಬೀಳುವ ಸಂಗತಿಗಳಿಗೂ ಶಾಸ್ತ್ರೀಯ ಕಾರಣಗಳನ್ನು ಶೋಧಿಸಿ ತಮ್ಮ ವಿದ್ಯಾರ್ಥಿಗಳಿಗೆ ತಪ್ಪದೆ ಹೇಳುತ್ತಿದ್ದರು. ಮತ್ತು ಎಷ್ಟು ಸಾರೆ ಕೇಳಿದರೂ ಹೇಳಿದ ಸಂಗತಿಯನ್ನು ಪುನಃ ಪುನಃ ಹೇಳಲಿಕ್ಕೆ ಇವರಿಗೆ ಬೇಸರಿಕೆಯೇ ಬರುತ್ತಿರಲಿಲ್ಲ. ಮೊದಲೇ ಇವರಿಗೆ ಶಾಸ್ತ್ರೀಯ ವಿಷಯದಲ್ಲಿ ಅಭಿರುಚಿಯಿತ್ತು. ಶಿಕ್ಷಕ ಶಿಕ್ಷಣಾಲಯದಲ್ಲಿ ಅದೇ ವಿಷಯದ ಅಧ್ಯಾಪಕರನ್ನಾಗಿ ನೇಮಿಸಿದರು. ಅದರಿಂದ ತಮಗೆ ಪ್ರಿಯಕರವಾದ ವಿಷಯವನ್ನು ಮನಮುಟ್ಟಿ ಸಪ್ರಯೋಗವಾಗಿ ಅಭ್ಯಾಸಿಸಿದರು. ಇದರಿಂದ ವಿದ್ಯಾರ್ಥಿಗಳಿಗೆ ಬೇಕಾದ ಪ್ರಯೋಗಗಳನ್ನು ಸುಲಭವಾಗಿ ಮಾಡುತ್ತಿದ್ದರು.

೧೮೯೭ರಲ್ಲಿ ಆದ ಜ್ಯುಬಿಲಿಯ ಸಮಾರಂಭದಲ್ಲಿ ಕಾಲೇಜಿನಲ್ಲಿ ಶಾಸ್ತ್ರೀಯಪ್ರದರ್ಶನವನ್ನು ಮಾಡಿಸಿದಾಗ ಕಾಲೇಜಿನ ವಿದ್ಯಾರ್ಥಿಗಳೇ ಎಲ್ಲಾ ಪ್ರಯೋಗಗಳನ್ನೂ ಮಾಡಿತೋರಿಸಿದರೆಂಬ ಸಂಗತಿಯೇ ಇದಕ್ಕೆ ಪ್ರಮಾಣವು.

ಈ ಮೇರೆಗೆ ಇವರಲ್ಲಿ ಅನೇಕ ಸದ್ಗುಣಗಳಿದ್ದುವು. ಮನುಷ್ಯನಲ್ಲಿ ಒಂದಿಲ್ಲ—ಒಂದು ನ್ಯೂನತೆಯಿರುವುದು ಸ್ವಾಭಾವಿಕವು. ಆ ಪ್ರಕಾರ ಶ್ರೀನಿವಾಸರಾಯರೂ ಈ ಸರ್ವಸಾಧಾರಣ ನಿಯಮಕ್ಕೆ ಹೊರಗಾಗಿರಲಿಲ್ಲ. ಇವರು ಒಂದೊಂದು ಬಾರಿ ಅಕಾರಣವಾಗಿ ಸಿಟ್ಟುಗೊಳ್ಳುತ್ತಿದ್ದರು. ಆಗ ಅವರಿಗೆ ಮೈಮೇಲೆ ಸ್ಮೃತಿಕೂಡ ಉಳಿಯುತ್ತಿರಲಿಲ್ಲ. ಮತ್ತು 'ಹೊಗೆಸೊಪ್ಪನ್ನು ತಿನ್ನುತ್ತಿರುವುದರಿಂದ ಅನೇಕ ಕೇಡುಗಳು ಸಂಭವಿಸುವುವೆಂಬದನ್ನು ತರುಣಜನರಿಗೆ ಉಪದೇಶ ಮಾಡುವುದರ ಸಲುವಾಗಿಯೇ ತಾವು ಅದರ ಅನುಭವವನ್ನು ತೆಗೆದುಕೊಳ್ಳುತ್ತಿರುವರೋ' ಎಂಬಂತೆ ಇವರು ಹೊಗೆಸೊಪ್ಪನ್ನು ತಿನ್ನುತ್ತಿದ್ದರು. ಮತ್ತು ಆಗಾಗ್ಗೆ ತಮ್ಮ ವ್ಯಾಖ್ಯಾನಗಳಲ್ಲಿ ಈ ವಿಷಯವಾಗಿ ಹೇಳುತ್ತಿದ್ದರು. ಈ ದೋಷಗಳು ಕ್ಷುಲ್ಲಕವಾಗಿದ್ದರೂ ಚಿತ್ರಲೇಖಕನು ಒಬ್ಬ ಗುಣವಾನನಾದವನನ್ನೇ ಮಾಡಿದನೆಂಬ ಆಕ್ಷೇಪಕ್ಕೆ ಹೆದರಿ, ಬಹು ಕಷ್ಟದಿಂದ ಅವುಗಳನ್ನು ಬಚ್ಚಿಡದೆ ಉಲ್ಲೇಖಿಸಿರುವೆನು. ಹೀಗೆ ಒಟ್ಟಿಗೆ ನಮ್ಮ ಚರಿತ್ರನಾಯಕರು ಒಳ್ಳೆ ಮನುಷ್ಯರಾಗಿದ್ದರೆಂಬುದನ್ನು ಪ್ರತ್ಯೇಕವಾಗಿ ಹೇಳುವುದು ಬೇಡ.

ಸಾಂಪ್ರತಕ್ಕೆ ಧಾರವಾಡ, ವಿಜಾಪೂರ, ಬೆಳಗಾಂವ, ಕಾರವಾರ ಜಿಲ್ಲೆಯೊಳಗಿನ ಎಲ್ಲಾ ಶಿಕ್ಷಕರೂ ಇವರ ಶಿಷ್ಯರಾಗಿರುವರೆನ್ನಲಿಕ್ಕೆ ಸಂದೇಹವಿಲ್ಲ. ವಿದ್ಯಾದಾನವೆಂಬ ಮಹತ್ಪುಣ್ಯದ ಕೆಲಸವನ್ನು ಮಾಡತೊಡಗಿದ ಇಷ್ಟು ದೊಡ್ಡ ಛಾತ್ರವರ್ಗವುಳ್ಳ ಸತ್ಪುರುಷನ ಪುಣ್ಯವನ್ನು ವರ್ಣಿಸುವುದು ಅಶಕ್ಯವಾದುದು. ಒಂದೇ ಮಾತಿನಲ್ಲಿ ಹೇಳುವುದೆಂದರೆ, ಶ್ರೀನಿವಾಸರಾಯರು ನಮ್ಮ ಕರ್ನಾಟಕ ದೇಶಭಕ್ತರಲ್ಲಿ ಗಣ್ಯರೂ, ಉತ್ತರ ಕನ್ನಡ ದೇಶೀಯರಿಗೆ ಚಿರಸ್ಮರಣೀಯರೂ ಆಗಿರುವರೆಂದರೆ ಸಾಕು.

ಇತಿ— ಕನ್ನಡಿಗ.

ಹಿಂ|| ಆಶ್ವಯುಜ ಸಂಚಿಕೆಯಿಂದ
ಮುಂದೆ ಸಾಗಿದುದು

ಆಳ್ವಾರರ ವೈಭವವು.

ಲೇಖಕಿ:—
ಶ್ರೀ. ಸೌ. ರಂಗನಾಯಕಮ್ಮ,
ನಂಜನಗೂಡು.

(ರಾಮಾನುಜಾಚಾರ್ಯರು)

ಅನಂತರ ತಿರುಮಲೆ ನಂಬಿಯು ಗೋವಿಂದಭಟ್ಟರಿಗೆ ಪಂಚಸಂಸ್ಕಾರಾದಿಗಳನ್ನು ಮಾಡಿಸಿ, "ಪೆರಿಯಾಳ್ವಾರ್ ತಿರುವಾಯ ಮೊಳಿ"ಯೇ ಮೊದಲಾದ ದ್ರಾವಿಡ ಪ್ರಬಂಧಗಳನ್ನು ಉಪದೇಶಿಸಿ ಕಾಡಿಗೆ ಹೋದ ಪ್ರಿಯಪುತ್ರನು ಹಿಂದಿರುಗಿ ಬಂದಂತೆ ಸಂತೋಷಗೊಂಡರೆಂದು ಬಿನ್ನವಿಸಿದರು

ಒಂದು ದಿವಸ ಪೆರಿಯನಂಬಿಯು ರಾಮಾನುಜರನ್ನು ನೋಡಿ, ತಿರುಕೋಟ್ಯೂರು ನಂಬಿಯಿಂದ ತಿರುಮಂತ್ರಾರ್ಥವನ್ನೂ ಚರಮಶ್ಲೋಕಾರ್ಥವನ್ನೂ ತಿಳಿದುಕೊಳ್ಳುವಂತೆ ಆಜ್ಞಾಪಿಸಲು ಒಡೆಯವರು ತಿರುಕೋಟ್ಯೂರನ್ನು ಸೇರಿ ನಂಬಿಗಳಲ್ಲಿ ತಾವು ಬಂದ ಸಂಗತಿಯನ್ನು ತಿಳಿಸಲು ಅವರು ಈ ಮಂತ್ರಾರ್ಥ ಗೌರವವನ್ನು ಎಲ್ಲರಿಗೂ ತಿಳಿಸಬೇಕೆಂದು ಇನ್ನೊಂದಾವರ್ತಿ ಆಗಲಿ ಎಂದು ರಾಮಾನುಜರನ್ನು ಹಿಂತಿರುಗಿ ಕಳುಹಿದರು. ಪುನಃ ರಾಮಾನುಜರು ತಿರುಕೋಟ್ಯೂರಿಗೆ ಅನೇಕಾವರ್ತಿ ಹೋದರೂ ಅವರ ಇಷ್ಟಾರ್ಥವು ಸಿದ್ಧಿಸದಿರಲು ವ್ಯಾಕುಲಚಿತ್ತರಾಗಿದ್ದರು. ಒಂದು ದಿವಸ ತಿರುಕೋಟ್ಯೂರು ನಂಬಿಯು ಶ್ರೀರಂಗನಾಥನನ್ನು ಸೇವಿಸಿ ಮಂಗಳಾಶಾಸನವನ್ನು ಮಾಡುತ್ತಿರಲು ಅಲ್ಲಿರುವವರು ಅವರನ್ನು ಕುರಿತು,—"ನಮ್ಮ ಒಡೆಯರನ್ನು ಹೀಗೆ ಉಪೇಕ್ಷೆ ಮಾಡಬಹುದೇ? ಅವರ ಮನಸ್ಸನ್ನು ಕೂಡ, ಪರೀಕ್ಷಿಸಬೇಕೆ?' ಎಂದರು. ಆಗ ತಿರುಕೋಟ್ಯೂರು ನಂಬಿಯು ಮನಸ್ಸು ಕರಗಿ ತಮ್ಮೂರಿಗೆ ಹೋಗಿ ರಾಮಾನುಜರನ್ನು ಕರೆತರುವಂತೆ ಹೇಳಿ ಕಳುಹಿದರು ರಾಮಾನುಜರು ತತ್‌ಕ್ಷಣವೇ ಕೂರತ್ತಾಳ್ವಾನ್ ಮುದಲಿಯಾಂಡಾನ್-ಎಂಬ ಶಿಷ್ಯರನ್ನೊಡಗೊಂಡು ತಿರುಕೋಟ್ಯೂರನ್ನು ಸೇರಿ ಮುದಲಿಯಾಂಡಾನ್-ಎಂಬ ಶಿಷ್ಯರನ್ನೊಡಗೊಂಡು ತಿರುಕೋಟ್ಯೂರನ್ನು ಸೇರಿ ಮುಂದೆ ಅವರನ್ನೂ ಹಿಂದೆ ಬಿಟ್ಟು ತಾವು ಮಾತ್ರ ನಂಬಿಯ ಸಮೀಪಕ್ಕೆ ಸೇರಿ ಅವರ ಪಾದಗಳಿಗೆ ದಂಡವತ್ಪ್ರಣಾಮಗಳನ್ನು ಮಾಡಿ ಅಂಜಲಿಬದ್ಧರಾಗಿ ನಿಂತಿದ್ದರು. ನಂಬಿಯು ಯತಿರಾಜನನ್ನು ನೋಡಿ ನಾನು ನಿಮಗೆ ಉಪದೇಶಿಸುವ ರಹಸ್ಯವನ್ನು ಮತ್ತಾರಿಗೂ ಉಪದೇಶಿಸಕೂಡದೆಂದು ಆಜ್ಞಾಪಿಸಿ, ತಿರುಮಂತ್ರಾರ್ಥವನ್ನೂ ಚರಮಶ್ಲೋಕಾರ್ಥವನ್ನೂ ಉಪದೇಶಿಸಿದರು. ಒಡೆಯವರು ಕೃತಕೃತ್ಯರಾಗಿ ಮರುದಿವಸ ಆ ಊರಿನ ಸ್ವಾಮಿಯ ಉತ್ಸವಕ್ಕಾಗಿ ಬಂದಿದ್ದ ಅನೇಕ ವೈಷ್ಣವರಿಗೆ ತಾವು ಅರಿತ ರಹಸ್ಯವನ್ನೂ ಉಪದೇಶಿಸಿದರು ಆ ಸಂಗತಿಯು ನಂಬಿಗೆ ತಿಳಿಯಲು, ಒಡೆಯವರನ್ನು ಕರೆಯಿಸಿ ಒಬ್ಬರಿಗೂ ತಿಳಿಯಿಸಕೂಡದೆಂದು ಹೇಳಿದ ಅರ್ಥವನ್ನು ನನ್ನ ಆಜ್ಞೆಯನ್ನು ಉಲ್ಲಂಘಿಸಿ, ಎಲ್ಲರಿಗೂ ತಿಳಿಯಿಸಿದಿರಿ. ಇದಕ್ಕೆ ಫಲವೇನು ? ಎನಲು, ರಾಮಾನುಜರು, ಆಚಾರ್ಯರ ನಿಯಮವನ್ನು ಉಲ್ಲಂಘಿಸಿದವರಿಗೆ ನರಕವೇ ಫಲವೆಂದು ಉತ್ತರವಿತ್ತರು. ಅದಕ್ಕೆ ನಂಬಿಯು, ಇದನ್ನರಿತೂ ನೀವು ಹೀಗೆ ಮಾಡಬಹುದೇನೆಂದು ಕೇಳಲು, 'ತಾನು ಸತ್ತರೂ ತನ್ನ ವಂಶವು ನಾಶವಾಗಬಾರದು-ಎಂಬ ರೀತಿಯಾಗಿ ನಾನೊಬ್ಬನು ಈ ಗುರುದ್ರೋಹಕ್ಕೆ ಪಾತ್ರನಾಗಿ ನರಕದೊಳ್ಬಿದ್ದೇನು ಈ ಸಮಸ್ತ ವೈಷ್ಣವರೂ ತಮ್ಮ ಕೃಪೆಯಿಂದ ಉಜ್ಜೀವಿಸುವರೆಂದು ಹೇಳಿದ ಮಾತನ್ನು ಕೇಳಿ ನಂಬಿಯು ಪಶ್ಚಾತ್ತಾಪಯುಕ್ತರಾಗಿ ನಿಷ್ಕಾರುಣ್ಯವಾದ ತಮ್ಮ ಹೃದಯವನ್ನು ದೂಷಿಸುತ್ತ ರಾಮಾನುಜರನ್ನು ಕುರಿತು ಇಂದು ಮೊದಲು ವೈಷ್ಣವ ಸಿದ್ಧಾಂತವು ರಾಮಾನುಜ ಸಿದ್ಧಾಂತವೆಂದು ಪ್ರಸಿದ್ಧಿಯಾಗಲಿ. ನಿಮಗೆ ಆಜ್ಞಾತಿಲಂಘನ ದೋಷವಿಲ್ಲವೆಂದು ಹೇಳಿದರು. ಅಲ್ಲಿ ನೆರೆದಿದ್ದ ವೈಷ್ಣವರೆಲ್ಲರೂ ತಮ್ಮೆಲ್ಲರಿಗೂ ಮಂತ್ರರಹಸ್ಯವನ್ನುಪದೇಶಿಸಿ ಚೇತನರನ್ನಾಗಿ ಮಾಡಿದ ಇವರನ್ನು 'ಎಂಬೆರು ಮಾನಾರೆಂಬ' ಹೆಸರಿನಿಂದ ಕರೆದರು ನಂಬಿಯು ಕೂಡ ಅವರನ್ನು ಎಂಬೆರುಮಾನಾರೆಂದು ಕರೆದರು.

ಅನಂತರ ರಾಮಾನುಜರು ನಂಬಿಗಳಿಗೆ ನಮಸ್ಕಾರ ಮಾಡಿ ಅವರ ಅಪ್ಪಣೆಯನ್ನು ಪಡೆದು ಶಿಷ್ಯಸಮೇತರಾಗಿ ಹೊರಟು ಪೆರಿಯನಂಬಿಯ ಸಮೀಪವನ್ನು ಸೇರಿ ನಮಸ್ಕರಿಸಿ ನಿಲ್ಲಲು, ಅವರು, ರಾಮಾನುಜರನ್ನು ನೋಡಿ ಸಂತುಷ್ಟರಾಗಿ ತಿರುವರಂಗ ಪೆರುಮಾಳರಯರಿಂದ ತಿರುವಾಯಿ ಮೊಳಿಯೇ ಮುಂತಾದ ವಿಶೇಷಾರ್ಥಗಳನ್ನು ತಿಳಿದುಕೊಳ್ಳುವಂತೆ ಆಜ್ಞಾಪಿಸಿದರು. ರಾಮಾನುಜರು ಅಂದಿನಿಂದ ತಿರುವರಂಗಪ್ಪೆರುಮಾಳರೆಯರಿಗೆ ಸರ್ವವಿಧ ಕೈಂಕರ್ಯಗಳನ್ನು ಮಾಡಿ, ಅವರಿಂದ ಆ ವಿಶೇಷಾರ್ಥಗಳನ್ನು ಗ್ರಹಿಸಿದರು. ಮತ್ತು ಪೆರಿಯನಂಬಿಯ ಅಪ್ಪಣೆಯಿಂದ ತಿರುಮಾಲೆಯಾಂಡಾನವರಲ್ಲಿ ತಿರುವಾಯಿಮೊಳಿ ಅರ್ಥವನ್ನು ಕೇಳುತ್ತಿರುವಾಗ ಆಂಡಾನು ಹೇಳಿದ ಅರ್ಥವು ರಾಮಾನುಜರಿಗೆ ಸರಿಬರದ ಕಾರಣ ತಾವು ಬಂದು ವಿಧವಾಗಿ ಅರ್ಥವನ್ನು ಹೇಳಿದರು. ಅದಕ್ಕೆ ತಿರುಮಾಲೆಯಾಂಡಾನು ರಾಮಾನುಜರನ್ನು ಕುರಿತು ನೀವು ಹೇಳಿದ

ಅರ್ಥವು, ಸರಿಯಾಗಿಲ್ಲ ಹೊಸಸೃಷ್ಟಿಯಾಗಿದೆ, ಎಂದು ಹೇಳಿ ಸಿಟ್ಟುಮಾಡಿಕೊಂಡು ಹೊರಟು ಹೋದರು. ಪೆರಿಯನಂಬಿಯು ತಿರುಮಾಲೆಯಾಂಡಾನಲ್ಲಿಗೆ ಬಂದು ನಡೆದ ಸಂಗತಿಯನ್ನು ಅರಿತು ರಾಮಾನುಜರು ಹೇಳಿದ ಅರ್ಥವನ್ನು ನಾನು ಯಾಮುನಾಚಾರ್ಯರಲ್ಲಿ ಕೇಳಿದ್ದೆನೆಂದು ಹೇಳಲು, ಆಂಡಾನು, ತಿರುವಾಯಿಮೊಳಿಯ ಅರ್ಥವನ್ನು ರಾಮಾನುಜರು ತನ್ನಲ್ಲಿ ಕೇಳಿದುದು ಸಾಂದೀಪನನಲ್ಲಿ ಶ್ರೀಕೃಷ್ಣನು ವಿದ್ಯಾಭ್ಯಾಸ ಮಾಡಿದಂತಾಯಿತೆಂದು ಹೇಳಿ ತನಗೆ ತಿಳಿದ ಅರ್ಥವನ್ನು ಅವರಿಗೆ ಉಪದೇಶಿಸಿದರು. ರಾಮಾನುಜರು ಈ ಪ್ರಕಾರ ಪಂಚಾಚಾರ್ಯರುಗಳಿಂದ ಉಪದೇಶಿಸಲ್ಪಟ್ಟವರಾಗಿ ಶ್ರೀರಂಗನಾಥನ ಕೈಂಕರ್ಯವನ್ನು ಮಾಡುತ್ತಾ ಶ್ರೀಯಃಪತಿಯಾದ ನಾರಾಯಣನೇ ಪರಮಾತ್ಮನೂ ಆದಿಪುರುಷನೂ ಪರಬ್ರಹ್ಮನೂ ಅಹುದೆಂದು ಪ್ರತಿಪಾದಿಸುತ್ತ ಸಮಸ್ತರನ್ನೂ ಶ್ರೀ ವೈಷ್ಣವ ದರ್ಶಕರನ್ನಾಗಿ ಮಾಡುತಲಿದ್ದರು.

ಹೀಗಿರಲು ನಿತ್ಯವೂ ಭಗವದ್ವ್ಯಾಪಾರಗಳ ದ ಅರ್ಚಕರಿಗೆ ಇದು ಸರಿಬೀಳದೆ ಯತಿರಾಜರಿಗೆ ನಿತ್ಯವೂ ಭಿಕ್ಷೆಯನ್ನು ನೀಡುತಲಿದ್ದ ಒಬ್ಬ ಬಡಬ್ರಾಹ್ಮಣನನ್ನು ದ್ರವ್ಯದಿಂದ ವಶಪಡಿಸಿಕೊಂಡು ಭಿಕ್ಷಾನ್ನದಲ್ಲಿ ವಿಷವನ್ನು ಸೇರಿಸಿ ಕೊಡುವಂತೆ ಏರ್ಪಡಿಸಿದರು. ಆ ಸಂಗತಿಯು ರಾಮಾನುಜರಿಗೆ ತಿಳಿದು ಭಿಕ್ಷಾನ್ನವನ್ನು ಬಿಟ್ಟು ಉಪವಾಸದಲ್ಲಿದ್ದರು. ತಿರುಕೋಟ್ಟೂರಿಗೆ ಹೋಗಿದ್ದ ಪೆರಿಯನಂಬಿಗಳಿಗೆ ರಾಮಾನುಜರು ಉಪವಾಸವಿರುವುದು ತಿಳಿದು, ತಿರುಕೋಟ್ಟೂರು ನಂಬಿಯನ್ನೂ ಕರೆದುಕೊಂಡು ಮಧ್ಯಾಹ್ನ ಕಾಲಕ್ಕೆ ಕಾವೇರೀತೀರದಲ್ಲಿಳಿದರು. ಸ್ವಾಚಾರ್ಯಾಗಮನವನ್ನರಿತು ಒಡೆಯವರು ಶಿಷ್ಯ ಸಮೇತರಾಗಿ ಕಾವೇರೀತೀರಕ್ಕೆ ಬಂದು ಆಚಾರ್ಯರಿಬ್ಬರಿಗೂ ನಮಸ್ಕರಿಸಿದರು. ಪೆರಿಯನಂಬಿಯು ರಾಮಾನುಜರನ್ನು ತಲೆದಡಹಿ ಸತ್ಕರಿಸಿದರು. ತಿರುಕೋಟ್ಟೂರು ನಂಬಿಯು ಮಾತ್ರ ಕಾದ ಮರಳಿನಲ್ಲಿ ಎಷ್ಟು ಬಾರಿ ನಮಸ್ಕರಿಸಿದರೂ ಸಾಕೆನ್ನದೆ ಸುಮ್ಮನಿರಲು ಕಡಂಬಿಯಾಚ್ಚಾನೆಂಬುವ ರಾಮಾನುಜರ ಶಿಷ್ಯನು ನೋಡಿ,-''ಇದೇನು, ಆಚಾರ್ಯ-ಶಿಷ್ಯಪದ್ಧತಿ ಹೊಸದಾಗಿದೆ; ಬಿಸಿಯ ಮರಳಿನಮೇಲೆ ಎಷ್ಟಾವರ್ತಿ ನಮಸ್ಕರಿಸಿದರೂ ಸಾಕೆನ್ನಬೇಡವೆ ?" ಎಂದು ಹೇಳುತ್ತ ರಾಮಾನುಜರಿಗೆ ಶೈತ್ಯೋಪಚಾರವನ್ನು ಮಾಡತೊಡಗಿದನು. ತಿರುಕೋಟ್ಟೂರು ನಂಬಿಯು, ಕಡಂಬಿಯಾಚ್ಚಾನನ್ನು ಕುರಿತು, "ನಿನ್ನನ್ನೇ ನಾನು ಅರಸುತಲಿದ್ದುದು. ಇದು ಮೊದಲು ನೀನೇ ಅಂತರಂಗ ಶಿಷ್ಯನಾಗಿ ಮಾಧೂಕರವನ್ನು ಪರೀಕ್ಷಿಸಿ ಅವರಿಗೆ ಕೊಡಬೇಕು, ಎಂದು ಅವರಿಗೆ ಕಟ್ಟುಮಾಡಿ, ರಾಮಾನುಜರನ್ನು ಕುರಿತು, ಕಡಂಬಿಯಾಚ್ಚಾನಿಂದಲೇ ನೀವು ಅಡಿಗೆ ಮಾಡಿಸಬೇಕೆಂದು ಆಜ್ಞಾಪಿಸಲು ಅವರು ಹಾಗೆಯೇ ಆಗಲೆಂದರು.

ಹೀಗಿರಲು ಅಲ್ಲಿಗೆ ಯಜ್ಞಮೂರ್ತಿಯೆಂಬುವ ಏಕದಂಡ ಸನ್ಯಾಸಿಯು ದಿಗ್ವಿಜಯ ಮಾಡಿಕೊಂಡು ಬರುತ್ತಾ ರಾಮಾನುಜರ ಪ್ರಖ್ಯಾತಿಯನ್ನು ಕೇಳಿ ಸಹಿಸಲಾರದೆ ಶ್ರೀರಂಗಕ್ಕೆ ಬಂದು ಯತಿರಾಜರನ್ನು ನೋಡಿ, 'ವಾದದಲ್ಲಿ ನೀವು ಜಯಿಸಿದರೆ ನಾನು ನಿಮ್ಮ ಶಿಷ್ಯನಾಗುತ್ತೇನೆ. ನಾನು ಜಯಿಸಿದರೆ ನೀವು ನನ್ನ ಶಿಷ್ಯರಾಗಬೇಕೆಂದು' ನಿಷ್ಕರ್ಷೆ ಮಾಡಿಕೊಂಡನು. ಯಜ್ಞಮೂರ್ತಿಯು ಹದಿನೇಳು ದಿವಸದವರೆಗೂ ಯುಕ್ತಿಚಮತ್ಕಾರಗಳಿಂದ ರಾಮಾನುಜರನ್ನು ಜೈಸಿದನು. ಹದಿನೆಂಟನೆಯ ದಿವಸ ರಾಮಾನುಜರು ಭಗವದಾಜ್ಞೆಯಿಂದ ಯಾಮುನಾಚಾರ್ಯವಿರಚಿತವಾದ " ಮಾಯಾವಾದ ಖಂಡನ "ವೆಂಬ ಗ್ರಂಥದ ಸಹಾಯದಿಂದ ಯಜ್ಞಮೂರ್ತಿಯನ್ನು ಜಯಿಸಿದರು. ಅನಂತರ ಅವನು ಯತಿರಾಜರಿಂದ ಪ್ರಾಯಶ್ಚಿತ್ತಹೊಂದಿ ಶಿಖಾಯಜ್ಞೋಪವೀತ ತ್ರಿದಂಡ ಕಾಷಾಯಗಳನ್ನು ಧರಿಸಿಕೊಂಡು ಅರುಳಾಳಪ್ಪೆರುಮಾಳೆಂಬೆರುಮಾನಾರೆಂಬ ಹೆಸರಿನಿಂದ ರಾಮಾನುಜರಿಗೆ ಶಿಷ್ಯನಾಗಿ, "ಗುರುವೇ ಪರದೈವವು, ಗುರುವಿಗೆ ಕೈಂಕರ್ಯವೇ ಪ್ರಾಪ್ಯವು; ಆಚಾರ್ಯನೇ ಭಗವದವತಾರನು' ಎಂದು ತಿಳಿಸುವ ಜ್ಞಾನಸಾರವೆಂಬ ಒಂದು ಗ್ರಂಥವನ್ನು ಮಾಡಿದನು.

ಒಂದು ದಿನ ಒಡೆಯವರು 'ಒಳಿವಿಲ್‌ಕಾಲಮೆಲ್ಲಾಂ' ಎಂಬ ತಿರುವಾಯಿಮೊಳಿಯಲ್ಲಿ ಆಳವಂದಾರರ ಅಭಿಪ್ರಾಯವನ್ನು ತಿಳಿಸಲು ಅನಂತಾಳ್ವಾನ್ ಎಂಬ ಶಿಷ್ಯನು ತಾನು ಆ ಕೆಲಸವನ್ನು ಮಾಡುವೆನೆಂದು ಅವರಿಂದ ಅಪ್ಪಣೆ ಪಡೆದು ತಿರುಪದಿಗೆ ಬಂದು ರಾಮಾನುಜರ ಹೆಸರಿನಲ್ಲಿ ಒಂದು ಹೂದೋಟವನ್ನು ಮಾಡಿ ವೆಂಕಟೇಶನಿಗೆ ಪುಷ್ಪ ಕೈಂಕರ್ಯವನ್ನು ಮಾಡುತ್ತಿದ್ದನು.

ಅನಂತರ ಒಡೆಯವರು ವೆಂಕಟಾಚಲಪತಿಯನ್ನು ಸೇವಿಸಬೇಕೆಂದು ಶ್ರೀರಂಗದಿಂದ ಹೊರಟು ಕಾಂಚೀಪುರಿಯನ್ನು ಸೇರಿ ಅಲ್ಲಿ ಕೆಲವು ವೈಷ್ಣವರು ಶಿಷ್ಯರಾಗಲು ಅವರನ್ನು ಕರೆದುಕೊಂಡು ದಿಗು ತಿರುಪತಿಯನ್ನು ಸೇರಿ ಅಲ್ಲಿಯೂ ಆಶ್ರಯಿಸಿದ ಮೂವತ್ತು ಮಂದಿಯನ್ನು ಶಿಷ್ಯರನ್ನಾಗಿ ಮಾಡಿಕೊಂಡರು. ಕೆಳಗಿನ ತಿರುಪದಿಗೆ ರಾಮಾನುಜರು ಬಂದಿರುವುದನ್ನು ಅನಂದಾಳ್ವಾರು ತಿಳಿದು ಪರ್ವತದಿಂದಿಳಿದುಬಂದು ಅವರನ್ನೊಡಗೊಂಡು ಬರುತ್ತಿರಲು ತಿರುಮಲೆ ನಂಬಿಯು ಸ್ವಾಮಿಯ ತೀರ್ಥಪ್ರಸಾದ ಮುಂತಾದುವುಗಳನ್ನು ತೆಗೆಯಿಸಿಕೊಂಡು ಬಂದು ಮರ್ಯಾದೆಯನ್ನು ಮಾಡಿದರು. ರಾಮಾನುಜರು ತಮ್ಮ ಆಚಾರ್ಯರಿಗೆ ನಮಸ್ಕರಿಸುತ್ತ ಆಳವಂದಾರರ ಅಪ್ಪಣೆಯಂತೆ ಶಂಖ ಚಕ್ರಾಂಕಿತವನ್ನೂ ಭಗವತ್ಪ್ರಪತ್ತಿಯನ್ನೂ ಮಾಡಿ ಈ ವಿಧವಾದ ಅಭಿವೃದ್ಧಿಗೆ ತಂದ ತಮ್ಮ ಪಾದ

ವನ್ನು ಈದಿನ ಕಂಡೆನೆಂದು ಹೇಳಲು ನಂಬಿಯು ಅವರ ಮು ಡಿದಡಹಿ ಹಿಡಿದೆತ್ತಿ ದೇವಸ್ಥಾನದ ಮರ್ಯಾದೆಗಳನ್ನು ನಡಿಸಿದರು.

ಅನಂತರ ಯತಿರಾಜರು ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನಾದ್ಯನುಷ್ಠಾನಗಳನ್ನು ತೀರಿಸಿಕೊಂಡು ತಿರುಬೀದಿಯಲ್ಲಿ ಪ್ರದಕ್ಷಿಣೆಯಾಗಿ ಬಂದು ಅನೇಕ ದಿವ್ಯಗೋಪುರಗಳನ್ನು ಸೇವಿಸಿ ಅನಂದಾಳ್ವಾರಿಂದ ನಿರ್ಮಿಸಲ್ಪಟ್ಟದ್ದು "ರಾಮಾನುಜ ತಿರುನಂದನ"ವೆಂಬ ಹೂವಿನ ತೋಟವನ್ನೂ "ರಾಮಾನುಜ ಪುತ್ರೇರಿ"-ಎಂಬ ಸರಸ್ಸನ್ನು ನೋಡಿ ಸಂತೋಷಿಸಿ ಕುಲಶೇಖರಾಳ್ವಾರ ಸೋಪಾನವನ್ನೇರಿ ಬಂಗಾರವನ್ನು ವಂದಿಸಿ, ಆಳವಂದಾರ್ ತಿರುಮಂಟಪವನ್ನು ಬಲವಂದು ತಿರುಮಡಪಳ್ಳಿ-ಯಾಗಶಾಲೆ, ತಿರುಮಾಮಣಿ ಮಂಟಪವನ್ನು ಪ್ರವೇಶಿಸಿ ಶ್ರೀನಿವಾಸನೂ ದೇವದೇವನೂ ಅಮೃತಪ್ರದನೂ ಆದ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಪಾದಾದಿ ಮೌಳಿಪರ್ಯಂತ ಸೇವಿಸಿ, ಬದ್ಧಾಂಜಲಿ ಪುಟರಾಗಿ ಭಕ್ತಿಯಿಂದ ತೀರ್ಥ ಶಠಗೋಪಾದಿಗಳನ್ನು ಸ್ವೀಕರಿಸಿ ಅಲ್ಲಿ ಮೂರು ದಿವಸವಿದ್ದು ಬಂದು ತಿರುವೀಧಿಯನ್ನು ಕಲ್ಪಿಸಿ, ಪರ್ವತಾರೋಹಣವನ್ನು ಮಾಡಿ ಪೆರಿಯನಂಬಿ ತಿರುಮಲೆನಂಬಿಗಳಲ್ಲಿ ಶ್ರೀಮದ್ರಾಮಾಯಣವನ್ನು ಕೇಳುತ್ತಾ ಒಂದು ವರ್ಷಪರ್ಯಂತ ಅವರ ಗೃಹದಲ್ಲಿಯೇ ವಾಸವಾಗಿದ್ದರು. ನಂಬಿಯು ರಾಮಾಯಣವನ್ನು ಹೇಳಿ ತಮ್ಮ ಕುಮಾರರಿಬ್ಬರನ್ನೂ ಶಿಷ್ಯರನ್ನಾಗಿ ಮಾಡಿ ದ್ವಿತೀಯ ಕುಮಾರನಾದ "ಪಿಳ್ಳಾನ್" ಎಂಬವನ ಆಚಾರಸಿದ್ಧವಾದ ಸದ್ವೃತ್ತಾಂತವನ್ನು ತಿಳಿಸಿ, ವಿಶೇಷವಾಗಿ ನಿಮ್ಮ ಕಟಾಕ್ಷಕ್ಕೆ ಪಾತ್ರನಾಗತಕ್ಕವನೆಂದು ಹೇಳಿದರು. ಅನಂತರ ಎಂಬಿರುಮಾನಾರು ಶ್ರೀರಂಗಕ್ಕೆ ಪ್ರಯಾಣೋನ್ಮುಖರಾಗಿ ನಂಬಿಯಲ್ಲಿ ಅಪ್ಪಣೆಯನ್ನು ಪಡೆದು ಅವರಿಂದ ಗೋವಿಂದಪ್ಪೆರುಮಾಳನ್ನು ಉದಕಧಾರಾ ಪೂರ್ವಕವಾಗಿ ತೆಗೆದುಕೊಂಡು ಹೊರಟು, ಘಟಿಕಾಚಲವೆಂಬುವ ಸ್ಥಳದಲ್ಲಿ ಶ್ರೀನೃಸಿಂಹಸ್ವಾಮಿಯನ್ನು ಸೇವಿಸಿ ಗೃಧ್ರಪುಷ್ಕರಣಿಯ ತೀರದಲ್ಲಿ ವಿಜಯರಾಘವನಂ ನಮಿಸಿ, ಸತ್ಯವ್ರತಕ್ಷೇತ್ರವೆಂಬ ಕಾಂಚೀಪುರವನ್ನು ಸೇರಿ, ವರದರಾಜನನ್ನು ಸೇವಿಸಿದರು ಗೋವಿಂದಪ್ಪೆರುಮಾಳು ತಮ್ಮ ಆಚಾರ್ಯರನ್ನು ಬಿಟ್ಟು ಬಂದುದಕ್ಕೆ ಮನಸ್ಸಂತಾಪವುಳ್ಳವರಾಗಿರುವುದನ್ನು ತಿಳಿದು, ತಿರುಮಲೆನಂಬಿಯವರನ್ನು ನೋಡಿ ಬರುವುದೆಂದು ಹಿಂದಿರುಗಿ ಕಳುಹಿದರು. ಗೋವಿಂದಪ್ಪೆರುಮಾಳು ಹಾಗೆಯೇ ಮಾಡಲು ನಂಬಿಯು ಅವರಿಗೆ ಮುಖಕೊಟ್ಟು ಮಾತನಾಡದೆ ಹಿಂತಿರುಗಿ ಕಳುಹಿಸಿದರು. ಗೋವಿಂದಪ್ಪೆರುಮಾಳು ನಿರಾಶರಾಗಿ ಬಂದು ರಾಮಾನುಜರನ್ನೆ ಆಶ್ರಯಿಸಿದರು. ಸ್ವಲ್ಪ ದಿವಸದಲ್ಲಿಯೇ ಗೋವಿಂದಪ್ಪೆರುಮಾಳಿನ ವಿಷಯ ವಿರಕ್ತಿಯನ್ನು ನೋಡಿ ರಾಮಾನುಜರು ಅವರಿಗೆ ತುರ್ಯಾಶ್ರಮವನ್ನು ಕೊಟ್ಟು ತಮ್ಮ ಹೆಸರಿನ ಆದ್ಯಂತ ಗ್ರಹಣಮಾಡಿ, " ಎಂಬಾರೆಂದು " ಕರೆದರು.

ಅನಂತರ ಎಂಬೆರುಮಾನಾರು ಕೂರತ್ತಾಳ್ವಾನ್ ನಡದೂರಾಳ್ವಾನ್ ಮುದಲಿಯಾಂಡಾನ್ ಮುಂತಾದ ಮೊದಲಾದ ಶಿಷ್ಯರೊಡನೆ ಕೂಡಿ, ಸ್ವರೂಪೋಪಾಯ ಪುರುಷಾರ್ಥಗಳನ್ನು ಸ್ಥಾಪಿಸಿ ಪರಪಕ್ಷ ಪ್ರತಿಪಕ್ಷ ಪುರಸ್ಸರವಾಗಿ ಸಿದ್ಧಾಂತ ಸ್ಥಾಪನೆಯು ಮಾಡುವಂತೆ ನಿಲ್ಲುತ್ತಿದ್ದ ಸ್ಥಿತನವಾಗಿ ವೇದವ್ಯಾಸರು ರಚಿಸಿದ ಸೂತ್ರಕ್ಕೆ ವಿರೋಧಾರ್ಥಗಳಿಲ್ಲದೆ ಸುಲಭದ ಅರ್ಥಗಳನ್ನು ಎಲ್ಲರೂ ತಿಳಿದು ಉಜ್ಜೀವಿಸುವಂತೆ ಗ್ರಂಥಗಳನ್ನು ಮಾಡಬೇಕೆಂದು ನಿಶ್ಚಯಿಸಿ ವೇದಾರ್ಥಸಂಗ್ರಹಂ, ವೇದಾಂತಸಾರಂ ವೇದಾಂತದೀಪಂ, ಎಂಬ ಗ್ರಂಥಗಳನ್ನೂ ಶ್ರೀಭಾಷ್ಯವನ್ನೂ ಮಾಡಿ ಆಳವಂದಾರ್ರವರ ಪ್ರಥಮ ಮನೋರಥವನ್ನು ಪೂರ್ಣಗೊಳಿಸಿದರು. ಮತ್ತು ಸ್ವಾಮಿಯಲ್ಲಿ ಭರಸಮರ್ಪಣೆಯನ್ನು ಮಾಡಿದ ಕಾಲದಲ್ಲಿ ದಿವ್ಯದಂಪತಿಗಳು ಅಭಯ ಪ್ರದಾನವಮಾಡಿದ ವಿಷಯವನ್ನು ಸಕಲರಿಗೂ ತಿಳಿಸಬೇಕೆಂದು ಗದ್ಯತ್ರಯವನ್ನು ಮಾಡಿದರು. ಅನಂತರ ಶಿಷ್ಯಸಮೇತರಾಗಿ ಪರಮತವನ್ನು ಜಯಿಸುತ್ತ ಕುಂಭಕೋಣ, ಅಳಹರ್ ತಿರುಮಲೆ, ತಿರುಪ್ಪಲ್ಲಾಣಿ ಈ ಸ್ಥಳಗಳಲ್ಲಿ ಸ್ವಾಮಿಯನ್ನು ಸೇವಿಸಿ, ಸೇತುಸ್ನಾನವನ್ನು ಮಾಡಿ ಕುರುಕಾಪುರಿಯನ್ನು ಸೇರಿ ಅಲ್ಲಿ ನಮ್ಮಾಳ್ವಾರನ್ನು ಸೇವಿಸಿ ತಿರುಕ್ಕುರುಂಗುಡಿಗೆ ಬಂದು ಬಹುಮಂದಿ ಶಿಷ್ಯವರ್ಗಸಹಿತ ಸ್ನಾನವನ್ನು ಮಾಡುತ್ತಿರಲು ಆ ಊರಿನ ಸ್ವಾಮಿಯಾದ ತಿರುಕ್ಕುರುಂಗುಡಿ ನಂಬಿಯು ಶ್ರೀವೈಷ್ಣವರೂಪವನ್ನು ತಾಳ್ದು ರಾಮಾನುಜರಲ್ಲಿಗೆ ಬಂದು ಅವರನ್ನು ಕುರಿತು ಸ್ವಾಮಿಯು ಲೋಕರಕ್ಷಣಾರ್ಥವಾಗಿ, ರಾಮಕೃಷ್ಣಾದಿ ಅವತಾರಗಳನ್ನೆತ್ತಿದರೂ ಜನರನ್ನು ಉಜ್ಜೀವಿಸುವಂತೆ ಮಾಡಲಾಗಲಿಲ್ಲ. ನೀವು ಹಾಗೆ ಮಾಡಲು ಅರಿತಿರುವಿರಿ. ಅದನ್ನು ತನಗೆ ಉಪದೇಶಿಸಬೇಕೆಂದು ಕೇಳಲು ರಾಮಾನುಜರು ಪಂಚಸಂಸ್ಕಾರ ಪುರಸ್ಸರವಾಗಿ ದ್ವಯಮಂತ್ರವನ್ನು ಉಪದೇಶಿಸಿ ದ್ವಾದಶ ಪುಂಡ್ರವನ್ನಿಟ್ಟು "ರಾಮಾನುಜನಂಬಿ" ಎಂದು ಹೆಸರಿಟ್ಟರು ಶ್ರೀವೈಷ್ಣವನು ಅದನ್ನೆಲ್ಲಾ ಪರಿಗ್ರಹಿಸಿ ಅಲ್ಲಿಯೇ ಅಂತರ್ಧಾನವಾಗಲು ಯತಿರಾಜರು ಆಶ್ಚರ್ಯಯುಕ್ತರಾಗಿ ತಿರುಕ್ಕುರಂಗುಡಿ ಸ್ವಾಮಿಯನ್ನು ಆಪಾದಮಸ್ತಕ ಪರ್ಯಂತ ನೋಡಿ ತಾವಿಟ್ಟ ತಿರುಮಣ್ಕಾಪ್ ಸ್ವಾಮಿಯ ಮುಖದಲ್ಲಿರುವುದನ್ನು ನೋಡಿ ಶರಣಾಗತಿ ಗದ್ಯದಿಂದ ಕ್ಷಮಾಪಣೆಯನ್ನು ಬೇಡಿದರು.

(ಮುಂದೆಸಾಗುವದು)

ಮಾತ್ಸರ್ಯ ಮಹಿಮಾ.

ಹೇ, ಮಾತ್ಸರ್ಯ ಮಹಾಪುರುಷ!

ನಿನ್ನ ಮಹಿಮೆಯನ್ನು ಅತ್ಯಂತವಾಗಿ ತಿಳಿಯುವುದಕ್ಕಾಗಲಿ ವಿವರಿಸುವುದಕ್ಕಾಗಲಿ ಯಾರು ಸಮರ್ಥರು? ನೀನು ಅರಲ್ಲಿ ನೆಲಸುವೆಯೊ ಅವರ ಪ್ರಭಾವನೇ ಅಗಾಧನೆನಿಸುವುದು ಕ್ರೋಧನೇ ಸಮರ್ಥನೆಂದು ಹೇಳುವರು; ಕ್ರುದ್ಧನಾದವನು ಮಾಡಬಾರದ ಪಾಪಕೃತ್ಯವಾವುದೂ ಇಲ್ಲವೆಂದೂ ಗುರುವನ್ನಾದರೂ ಕೊಲ್ಲುವನೆಂದೂ ಅಂತಹನಿಗೆ ಹೇಳಬಹುದಾದ ಅಥವಾ ಹೇಳಬಾರದ ಮಾತೆಂಬ ವಿವೇಚನೆಯುಲ್ಲನೆಂದೂ— ಇತ್ಯಾದಿ ಶ್ರೀಮದಾಂಜನೇಯನೇ ಹೇಳಿರುವನು. ಅದರೂ ಕೋಪಾವಿಷ್ಟನಾದವನು ಇದಿರಾದರೆ ಅವನ ಆಕಾರದಿಂದ ಇತರರು ಎಚ್ಚೆತ್ತುಕೊಳ್ಳುವರು. ನಿನ್ನ ಉಪಾಸಕರನ್ನು ಆಕಾರದಿಂದಲಾಗಲಿ ನಟನೆಯಿಂದಲಾಗಲಿ ತಿಳಿದು ಎಚ್ಚೆತ್ತುಕೊಳ್ಳುವುದಕ್ಕೆ ಆರೊಬ್ಬರೂ ಸಮರ್ಥರಾಗುವುದಿಲ್ಲ.

ಎಲೈ, ಮಾತ್ಸರ್ಯಪುರುಷ! ಅನ್ಯರ ವೃದ್ಧಿಯು ನಿನಗೆ ಶೂಲಪ್ರಾಯವಾಗುವುದು. ಅನ್ಯರ ಗುಣಗಳಲ್ಲಿ ಕೂಡ ಕುಂದುಕೊರತೆಗಳೇ ನಿನಗೆ ಕಾಣುವುವು. ನೀನೊಬ್ಬನೆ ನಿನ್ನ ತಂದೆಗೆ ಸಮನಾದ ಮಗನೆಂದೂ "ಪಿತೃನಂದನ" ಎಂದರೆ ತಂದೆಗೆ ಸಂತೋಷವನ್ನುಂಟು ಮಾಡುವವನೆಂದೂ ಮೆರೆಯವೆ! ನಿನ್ನ ದೃಷ್ಟಿಗೆ ಗೋಚರರಾದವರು, ತ್ರಿಮೂರ್ತಿಗಳಲ್ಲೊಬ್ಬರಾಗಿರಲಿ, ಚಕ್ರವರ್ತಿಗಳಲ್ಲೊಬ್ಬರಾಗಲಿ ಅಗಾಧವಾದ ತೊಂದರೆಗೆ ಎಡೆಯಾಗುವರು

ಇಂತಹದರಲ್ಲಿ ಸಾಮಾನ್ಯ ಬಾಲಕ-ಬಾಲಿಕೆಯರ, ಪತ್ರಕರ್ತರ, ಪದವೀಧರರ, ವಿದ್ಯಾವಂತರ ಮಾತೇನು? ಉನ್ನತಿ ಪಡೆದ ಅಥವಾ ಪಡೆಯುತ್ತಿರುವರನ್ನು ನೋಡಿದರೆ ನಿನಗೆ ಚೇಳು ಕುಟುಕಿದಂತಾಗುವುದಲ್ಲವೆ? ಆಗಲೆ, ಅವರು ನಿರ್ಮೂಲರಾಗಬೇಕೆಂದೂ ಅಥವಾ ಅಧಃಪತನರಾಗಬೇಕೆಂದೂ ಯೋಚಿಸುವೆ! ನಿನ್ನ ಶಕ್ತಿಗೆ ಒಳಪಟ್ಟರೆ ಹಾಗೆಯೇ ಮಾಡಿ, ನಲಿದಾಡುವೆ. ದ್ರೋಹಬುದ್ಧಿಗೆ ನೀನು—ನಿನ್ನ ಸಹಧರ್ಮಿಣಿಯರೇ ಜನ್ಮಭೂಮಿಯೆನಿಸುವಿರಿ. ದ್ರೋಹಬುದ್ಧಿಯುಂಟಾದರೆ,— "ದ್ರೋಗ್ಧುರ್ಭೃರ್ಯ ಪರತೋಭಯಂ" (ದ್ರೋಹಬುದ್ಧಿಯುಳ್ಳವನಿಗೆ ಪರತಃ—ಅನ್ಯರ ದೆಸೆಯಿಂದ, ಪರತಃ—ಶತ್ರುಗಳ ದೆಸೆಯಿಂದ, ಪರತಃ— ಪರಲೋಕದ ದೆಸೆಯಿಂದ ಭಯವು ಸಿದ್ಧವೆಂಬ ಆರ್ಯರ ಹಿತೋಕ್ತಿಯನ್ನು ನೀನು ತಿಳಿಯಲಾರೆ! ಹಾಗಿದ್ದರೂ ಒಂದು ದಿನ ಭಯವು ಬಂದೇ ಬರುವುದು.—ಮತ್ತು ಮಾತ್ಸರ್ಯನೆ! ಏಳಿಗೆಯುಲ್ಲಿರುವವರನ್ನು ಕಂಡರೆ ಸಹಿಸಲಾರದೆ ಅವರನ್ನು ನಿರ್ಮೂಲಮಾಡುವುದಕ್ಕೆ ಎಷ್ಟೆಷ್ಟೋ ಬಲವತ್ಪ್ರಯತ್ನಗಳನ್ನು ಮಾಡುವೆ. ನಿನ್ನ ಉದ್ದೇಶ ಮತ್ತು ಪ್ರಯತ್ನಗಳಂತೆಯೇ ನಡೆಯದಿದ್ದರೂ ಅಷ್ಟಿಷ್ಟಾದರೂ ತೊಂದರೆಯುಂಟಾಗಬಹುದು. ಅಷ್ಟು ಮಾತ್ರಕ್ಕೇ ನಿನ್ನ ಭುಜವನ್ನು ನೋಡಿಕೊಂಡು ಹಿಗ್ಗುವೆ. ಈರ್ಷ್ಯೆ, ಅಸೂಯಾ ಎಂಬವರು ನಿನ್ನ ಸಹಧರ್ಮಿಣಿಯರು. ನೀವು ಮೂವರೂ ವಿಜಿತರಾದರೆ ನಿಮಗೆ ಶಾಂತಿಯ ಸ್ಮರಣೆಯು ಕೂಡ ಬರುವುದಿಲ್ಲ.

ಮಾತ್ಸರ್ಯ!

ನಿಮಗೆ ಇಷ್ಟು ಪ್ರಾಶಸ್ತ್ಯವೂ ಶಕ್ತಿಯೂ ಈ ವರ್ತಮಾನ ಕಲಿಯುಗದಲ್ಲಿ ಉಂಟಾಯಿತೆಂದು ಕೆಲವರು ಹೇಳುವರು. ಅವರು ತತ್ತ್ವವನ್ನು ತಿಳಿಯದವರೇ ಸರಿ. ಜಗತ್ಸೃಷ್ಟಿಯಾಗಿ ಜಗದ್ವ್ಯಾಪಾರಕ್ಕಾಗಿ ನಿನ್ನ ಸೃಷ್ಟಿಯಾವಾಗಲಾಯಿತೊ, ಆಗಲೆ, ನಿನ ಜನ್ಮದೊಡನೆಯೇ ಈ ಪ್ರಭಾವವೂ ಶಕ್ತಿಯೂ ಉಂಟಾಯಿತು. ಹಾಗಿಲ್ಲದಿದ್ದರೆ, ಆದಿ ಮನುವಾದ ಸ್ವಾಯಂಭುವ ಮನುವಿನ ಪುತ್ರನಾದ ಉತ್ತಾನಪಾದರಾಯನ ಹೆಂಡಿರಿಬ್ಬರಲ್ಲಿ ಕಿರಿಯಳಾದ ಸುರುಚಿಯು ನಿನ್ನ ಉಪಾಸನೆ ಮಾಡಿ ನಿನ್ನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದಳು, ಅದರಿಂದಲೇ ಸವತಿಯಲ್ಲಿಯೂ ಸವತಿಯ ಮಗನಾದ ಧ್ರುವಕುಮಾರನಲ್ಲಿಯೂ ತನ್ನ ಶಕ್ತಿಯನ್ನು ಪ್ರಯೋಗಿಸುತ್ತಿದ್ದಳು; ಪತಿಯನ್ನು ವಶಮಾಡಿಕೊಂಡಿದ್ದಳು. ಉತ್ತಾನಪಾದನು ಜ್ಯೇಷ್ಠ ಪತ್ನಿಯ ಮುಖವನ್ನು ಕೂಡ ನೋಡದಂತೆಯೂ, ಉತ್ತರೋತ್ತರ ತನ್ನ ಅಧಿಕಾರಕ್ಕೆ ಅರ್ಹನಾದ ಧ್ರುವಕುಮಾರನನ್ನು ಕಿರಿಯ ಹೆಂಡಿತಿಯು ನಿಷ್ಠೂರ ವಾಗ್ಬಾಣದಿಂದ ನೋಯಿಸಿ ಎಳೆದುಬಿಡುತ್ತಿದ್ದರೂ ಪ್ರತಿಯಾಡದೆ ನೋಡುತ್ತಿರುವಂತೆಯೂ ಆಗಿದ್ದುದು ಕೂಡ ನಿನ್ನ ಪ್ರಭಾವದಿಂದಲೇ ಅಲ್ಲವೆ? ಆಗಲೇ ನೀನು ಅಷ್ಟು ಪ್ರಬಲನಾಗಿದ್ದೆ,—ಈಗ ಕೇಳುವುದೇನು?

ಎಲೈ, ಮಾತ್ಸರ್ಯಮಹಾಶಯ! ನಿನ್ನ ಮಹಿಮೆಯು ಮಾನವವರ್ಗದಲ್ಲಿ ಮಾತ್ರ ಪ್ರಕಾಶಿಸುವುದೆಂದು ಕೆಲವರು ಭಾವಿಸುವರು ಅದು ಶುದ್ಧ ತಪ್ಪು. ಕೃತಯುಗದಲ್ಲಿ ದಮಯಂತೀ ಸ್ವಯಂವರವೆಂದು ಏರ್ಪಟ್ಟು, ರಾಜರೂ, ರಾಜಾಧಿರಾಜರೂ ನೆರೆದರು. ಪರೇಂಗಿತಜ್ಞರಾದ ಇಂದ್ರಾದಿ ದಿಕ

ಲಕರೂ ಬಂದರು; ನಳಮಹಾರಾಜನನ್ನೇ ದೂತನನ್ನಾಗಿ ದಮಯಂತಿಯ ಬಳಿಗೆ ಅಟ್ಟಿದರು, ನಳ, ದಮಯಂತಿಯರ ಸತ್ವವನ್ನು ಪ್ರತ್ಯಕ್ಷ ಪರೋಕ್ಷಗಳಲ್ಲಿ ಪರೀಕ್ಷಿಸಿ ಸಂತುಷ್ಟರಾಗಿಯೇ ತೆರಳಿದರು. ಕಲಿಸ್ವರೂಪನಾದ ಶನೈಶ್ಚರ ಮಹಾರಾಜನು ನಡುದಾರಿಯಲ್ಲಿಯೇ ದಿಕ್ಪಾಲಕರನ್ನು ಸಂಧಿಸಿ, ಅವರಿಂದ, ದಮಯಂತಿಯು ಇಂದ್ರಾದಿಗಳನ್ನು ತಿರಸ್ಕರಿಸಿ, ಮನುಷ್ಯಮಾತ್ರನಾದ ನಳನನ್ನು ವರಿಸಿದಳೆಂಬುದನ್ನು ತಿಳಿದನು; ಆಶ್ಚರ್ಯಪಟ್ಟನು, ಮತ್ತು ಆಗಲೇ ನಿನ್ನ ಅನುಗ್ರಹಕ್ಕೆ ಪಾತ್ರನಾದನಲ್ಲದೆ ನಳನಿಗೆ ನಿನ್ನ ಪ್ರಭಾವವನ್ನು ತೋರಿಸಲು ಸಂಕಲ್ಪಿಸಿ, ಪ್ರಚ್ಛನ್ನನಾಗಿ ಕಾಲನಿರೀಕ್ಷೆಯಲ್ಲಿದ್ದನು. ಕಾಲಬಲದಿಂದ ಸಮಯವೂ ಅನುಕೂಲವಾಯಿತು; ಶನೈಶ್ಚರನು ನಳನನ್ನೂ ಆಕ್ರಮಿಸಿದನು. ನಳಮಹಾರಾಜನು ದ್ಯೂತಮುಖದಲ್ಲಿ ರಾಜ್ಯಕೋಶಗಳನ್ನು ಸೋತು, ಪತ್ನಿಯೊಡನೆ ಅರಣ್ಯಕ್ಕೆ ತೆರಳಿದನು. ಅಷ್ಟೇ ಅಲ್ಲ, ಧರಿಸಿದ್ದ ವಸ್ತ್ರಗಳನ್ನು ಕಳೆದುಕೊಂಡು, ಪತ್ನಿಯ ವಸ್ತ್ರಾರ್ಧವನ್ನು ಧರಿಸಿದನು; ತನ್ನನ್ನೇ ನೆರೆನಂಬಿ ಬಂದಿದ್ದ ಧರ್ಮಪತ್ನಿಯಲ್ಲಿ ಕೃಪಾಶೂನ್ಯನಾಗಿ ಅವಳನ್ನು ವಂಚಿಸಿ ಹೋದನು. ಮತ್ತು ಸಾಮಾನ್ಯ ರಾಜನ ಬಳಿಯಲ್ಲಿ ರೂಪಾಂತರದಿಂದ ದೂತನಾಗಿ ನಿಂತನು. ಇದೆಲ್ಲವೂ ನಿನ್ನ ಮಹಿಮೆಯಲ್ಲವೇನು?

ತ್ರೇತಾಯುಗದಲ್ಲಿ ಚಕ್ರವರ್ತಿ ಕುಲದಲ್ಲಿ ಹುಟ್ಟಿ ಪ್ರಖ್ಯಾತಿಯನ್ನು ಪಡೆದಿದ್ದ ದಶರಥಮಹಾರಾಜನಿಗೆ ಕೌಸಲ್ಯಾ, ಸುಮಿತ್ರಾ, ಕೈಕೇಯೀ ಮೊದಲಾದ ೩೫೦ ಮಂದಿ ಪತ್ನಿಯರಿದ್ದರು. ಕೌಸಲ್ಯಾ ಗರ್ಭದಲ್ಲಿ ರಾಮನು, ಸುಮಿತ್ರಾ ಗರ್ಭದಲ್ಲಿ ಲಕ್ಷ್ಮಣ ಶತ್ರುಘ್ನರು, ಕೈಕೇಯೀ ಗರ್ಭದಲ್ಲಿ ಭರತನು—ಈ ರೀತಿ ನಾಲ್ವರು ಕುಮಾರರು ಜನಿಸಿದರು. ಇವರು ನಾಲ್ವರಿಗೂ ಸೀತಾ ಊರ್ಮಿಳಾ, ಶ್ರುತಿಕೀರ್ತಿ, ಮಾಂಡವೀ ಎಂಬವರು ಪತ್ನಿಯರಾದರು. ಇವರೆಲ್ಲರೂ ಪ್ರಬುದ್ಧರಾಗಿದ್ದರು. ದಶರಥಮಹಾರಾಜನು ಜನಪದ, ಪೌರಪದಪ್ರಮುಖರ, ಮಂತ್ರಿಗಳ, ಸಭಾಸದರ ಒಪ್ಪಿಗೆಯನ್ನು ಪಡೆದು ಜ್ಯೇಷ್ಠನಾದ ರಾಮನಿಗೆ ಪಟ್ಟಾಭಿಷೇಕ ಮಾಡುವುದಕ್ಕೆ ಸಿದ್ಧನಾದನು. ಆ ಕಾಲದಲ್ಲಿ ಕೈಕೇಯಿಯ ಪರಿಚರ್ಯದಲ್ಲಿದ್ದವಳೊಲ್ಲೊಬ್ಬಳಾದ ಮಂಥರೆಯು ಪರಮ ಸಾತ್ವಿಕಳಾದ ಕೈಕೇಯಿಯನ್ನು ನಿನ್ನ ಆವೇಶಬಲದಿಂದ ತನ್ನ ವಶಪಡಿಸಿಕೊಂಡಳು. ಕೈಕೇಯಿಯು ಉಪಾಯದಿಂದ ತನ್ನ ಪತಿಯನ್ನು ವಶಮಾಡಿಕೊಂಡು ವಾಗ್ದಾನದಿಂದವನನ್ನು ಕಟ್ಟಿಹಾಕಿ, ರಾಮನಿಗೆ ಪಟ್ಟಾಭಿಷೇಕವು ತಪ್ಪುವಂತೆಯೂ, ರಾಮನು ೧೪ ವರ್ಷಗಳು ಅರಣ್ಯದಲ್ಲಿ ವಾಸಮಾಡುವಂತೆಯೂ, ತನ್ನ ಮಗನಾದ ಭರತನಿಗೆ ಪಟ್ಟಾಭಿಷೇಕವಾಗುವಂತೆಯೂ ವರವನ್ನು ಕೇಳಿಕೊಂಡಳು; ಅದೇ ರೀತಿಯಿಂದ ಕಾರ್ಯವನ್ನೂ ಸಾಧಿಸಿದಳು. ಇದು ಕೂಡ ನಿನ್ನ ಮಹಿಮೆಯಿಂದಾದುದೇ ಅಲ್ಲವೆ?

ಮಾತ್ಸರ್ಯಮಹಾಶಯ! ದ್ವಾಪರಯುಗದಲ್ಲಿ ಸೋದರಮಾವನೂ ಮತ್ತು ದೇಶಾಧಿಪತಿಯೂ ಆದ ಶಕುನಿಯು ೧೦೦ ಜನ ಸೋದರರುಳ್ಳವನಾಗಿಯೂ ಪ್ರಬಲನಾಗಿಯೂ ಇದ್ದನು. ಇವರ ಪ್ರಾಬಲ್ಯವೂ ತನ್ನ ಪ್ರಾಬಲ್ಯಕ್ಕೆ ವಿಘ್ನಕಾರಿಯಾಗಬಹುದೆಂದು ಕೌರವನು ಉಪಾಯದಿಂದ ಅವರನ್ನು ಬರಮಾಡಿಕೊಂಡು ಸೆರೆಮನೆಯಲ್ಲಿ ಕೂಡಿದನು. ಅವರಲ್ಲಿ ಶಕುನಿಯೊಬ್ಬನು ಮಾತ್ರ ಪ್ರತೀಕಾರಬುದ್ಧಿಯಿಂದ ಜೀವಿಸಿಕೊಂಡನು. ಹಗೆಯನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಕೌರವನನ್ನೇ ಅನುವರ್ತಿಸಿಕೊಂಡು ನಿಂತನು. ಇದೂ ನಿನ್ನ ಪ್ರಭಾವವೇ ಅಹುದಷ್ಟೆ! ನಿನ್ನ ಉಪಾಸನೆಯನ್ನು ಮಾಡಿ, ನಿನ್ನ ಪೂರ್ಣಾನುಗ್ರಹಕ್ಕೂ ಪಾತ್ರನಾದ ಶಕುನಿಯು ನಿರ್ವಹಿಸಿದ ಕಾರ್ಯಗಳೆಂದರೆ, ಇದಕ್ಕೂ ಅತಿಶಯವಾಗಿವೆಯಲ್ಲವೆ?

ಮಹಾಶಯ! ಅನುಜರೊಡಗೂಡಿದ ಕೌರವನು ಮೊದಲೇ ನಿನ್ನ ಭೃತ್ಯನಾಗಿದ್ದನು. ಇದರ ಮೇಲೆ ಶಕುನಿಯ ಸಹಾಯವು ದೊರೆತುದು. ಪ್ರಬಲರಾದ ಪಾಂಡವರು ತಮ್ಮ ತಾಯಿಯೊಡನೆ ನಿರ್ಮೂಲರಾಗಬೇಕೆಂಬ ಯೋಚನೆಯುಂಟಾಯಿತು. ಶಕುನಿಯ ಸಲಹೆಯಂತೆ ಅರಗು, ಮೇಣ, ಸಜ್ಜರಸ ಮೊದಲಾದವುಗಳ ಸಮ್ಮಿಶ್ರಣದಿಂದಲೇ ಒಂದು ದಿವ್ಯ ಭವನವನ್ನು ನಿರ್ಮಾಣಮಾಡಿ, ಅಲ್ಲಿ ಪಾಂಡವರು ವಾಸಮಾಡುವಂತೆ ಮಾಡಿದನು. ಆ ವಿಪತ್ತಿನಿಂದ ಪಾರಾಗಿ ಪಾಂಡವರು ದ್ರೌಪದೀ ಸ್ವಯಂವರ ಮಂಟಪಕ್ಕೆ ಬ್ರಾಹ್ಮಣವೇಷದಲ್ಲಿ ಬಂದು ಸಭೆಯಲ್ಲಿದ್ದರು. ಕೌರವ, ಶಿಶುಪಾಲ ಮೊದಲಾದ ಕ್ಷತ್ರಿಯೋತ್ತಮರು ಮತ್ಸ್ಯಯಂತ್ರವನ್ನು ಭೇದಿಸಲಾರದೆ ವಿಮುಖರಾದರು ಮಂತ್ರಿ-ಪುರೋಹಿತರು ಬ್ರಾಹ್ಮಣ ಸಮೂಹದಲ್ಲಿ ಮತ್ಸ್ಯಯಂತ್ರವನ್ನು ಭೇದಿಸುವ ಸಮರ್ಥರಿದ್ದರೆ ಬರಬಹುದೆಂದು ತಿಳಿಸಿದರು. ಬ್ರಾಹ್ಮಣರ ಸಭೆಯಿಂದ ಒಬ್ಬ ಬ್ರಾಹ್ಮಣ ವೇಷಧಾರಿಯು ಬಂದು ಮತ್ಸ್ಯಯಂತ್ರವನ್ನು ಭೇದಿಸಿದನು. ರಾಜಾಧಿರಾಜರಿಗೂ ಲಭಿಸಲಾರದ ದ್ರೌಪದಿಯು ಒಬ್ಬ ಬಡಬ್ರಾಹ್ಮಣನಿಗೆ ಲಭಿಸಿದರೆ ಹೇಗೆ ತಾನೇ ಸಹಿಸಲಾದೀತು? ಕೌರವಾದಿಗಳು ಧರ್ಮದ ಕಡೆ ತಿರುಗದೆ ಪಾಂಚಾಲ ರಾಜಧಾನಿಗೆ ಮುತ್ತಿಗೆಯನ್ನು ಹಾಕಿ, ಯುದ್ಧಕ್ಕೆ ಉಪಕ್ರಮಿಸಿದರು.

ಪಾಂಡವರು ಅರಗಿನಮನೆಯಲ್ಲಿ ಮೃತರಾಗಲಿಲ್ಲವೆಂದೂ ಪಾಂಚಾಲರಾಜಧಾನಿಯಲ್ಲಿ ರಾಜಸಮೂಹವನ್ನೆಲ್ಲಾ ಜಯಿಸಿ

ದ್ರೌಲಥಿಯನ್ನು ಪಡೆದರೆಂದೂ ವದಂತಿಯು ಧೃತರಾಷ್ಟ್ರನಿಗೆ ಮುಟ್ಟಿತು. ಧೃತರಾಷ್ಟ್ರನು ಪಾಂಡವರನ್ನು ಕರೆಯಿಸಿಕೊಂಡು ಅರ್ಧರಾಜ್ಯವನ್ನು ಹಂಚಿಕೊಟ್ಟನು. ಅವರಿಗೋಸ್ಕರ ವಿಶ್ವಕರ್ಮನು ದಿವ್ಯಸಭೆಯನ್ನು ನಿರ್ಮಾಣಮಾಡಿಕೊಟ್ಟನು. ಈ ಸಭಾಪ್ರವೇಶದಲ್ಲಿ ಕೌರವನು ಅವಹೇಳನಕ್ಕೆ ಗುರಿಯಾದನು. ಇಷ್ಟಾದರೂ ನಿನ್ನ ಪ್ರಯತ್ನಕ್ಕೆ ಮಾತ್ರ ಕೊರತೆ ತಟ್ಟಲಿಲ್ಲ!

ಕೌರವನು ಶಕುನಿಯ ಮಂತ್ರಾಲೋಚನೆಯಂತೆ ಧರ್ಮರಾಜನನ್ನು ದ್ಯೂತಕ್ಕೆ ಬರಮಾಡಿಕೊಂಡನು. ಧರ್ಮರಾಯನು ರಾಜ್ಯಕೋಶಗಳೊಡನೆ ತಮ್ಮಂದಿರನ್ನೂ ತನ್ನನ್ನೂ ಮತ್ತು ದ್ರೌಪದಿಯನ್ನೂ ಸೋತನು. ಕೌರವನು ತನ್ನ ಬುದ್ಧಿಚಮತ್ಕಾರಕ್ಕೆ ಸಂತೋಷಪಟ್ಟು ಶಕುನಿಯನ್ನು ಶ್ಲಾಘನೆಮಾಡಿ, ಸಭಾಮಂಟಪಕ್ಕೆ ಪಾಂಚಾಲಿಯನ್ನು ಬರಮಾಡಿಕೊಂಡು, ಅಯ್ವರು ಪತಿಗಳಿದುರಿಗೆ ಸ್ವೇಚ್ಛಾಲಾಪಗಳಿಂದ ತನ್ನ ಮನಸ್ತೃಪ್ತಿಯಾಗುವವರೆಗೂ ಅವಮಾನಪಡಿಸಿದನು.

ಭೀಷ್ಮ-ಧೃತರಾಷ್ಟ್ರಾದಿಗಳ ಸಾಂತ್ವವಚನದಂತೆ ಪಾಂಡವರು ತಮ್ಮ ರಾಜ್ಯವನ್ನು ಸೇರಿದರು. ಮತ್ತೆ ಶಕುನಿ ಕೌರವರು ಕಲೆತು ತಮ್ಮ ತಪ್ಪನ್ನು ಚಿಂತಿಸಿಕೊಂಡು ಎರಡನೆಯ ಸಾರಿ ಧರ್ಮರಾಜನನ್ನು ದ್ಯೂತಕ್ಕೆ ಕರೆಯಿಸಿದರು. ಸೋತವನು ೧೨ ವರ್ಷ ಅರಣ್ಯವಾಸಮಾಡಿ, ೧ ವರ್ಷ ಅಜ್ಞಾತವಾಸದಲ್ಲಿರಬೇಕು. ಅಜ್ಞಾತವಾಸ ಕಾಲದಲ್ಲಿ ಅವರನ್ನು ಕಂಡುಹಿಡಿದರೆ ಪುನಃ ಅರಣ್ಯವಾಸಕ್ಕೆ ಹೋಗಬೇಕೆಂದು ಪಂಥ್ಯವನ್ನು ಹೂಡಿ, ದ್ಯೂತಕ್ಕೆ ಉಪಕ್ರಮಿಸಿದರು. ಧರ್ಮರಾಯನು ಸೋತನು. ಅನುಜರೊಂದಿಗೂ ದ್ರೌಪದಿಯೊಂದಿಗೂ ಅರಣ್ಯವಾಸಕ್ಕೆ ಹೋದನು. ಮಹಾಶಯ! ಇದಿಷ್ಟೂ ಅದ್ಭುತಪ್ರಭಾವಶಾಲಿಯಾದ ನಿನ್ನ ಸಾಮರ್ಥ್ಯವಲ್ಲದೆ ಬೇರಿಲ್ಲವಷ್ಟೆ!

ಇಷ್ಟೇ ಅಲ್ಲ, ಮಾತ್ಸರ್ಯಮಹಾರಾಜ! ಅರಣ್ಯವಾಸದಲ್ಲಿದ್ದರೂ ಪಾಂಡವರು ಸೂರ್ಯನಿಂದ ಅನುಗ್ರಹಿಸಲ್ಪಟ್ಟ ಅಕ್ಷಯ ಪಾತ್ರೆಯೊಂದರ ಬಲದಿಂದಲೇ ತೃಪ್ತರಾಗಿ ಅನೇಕ ಋಷಿಸಮೂಹದಿಂದ ಕೂಡಿ, ಕಾಮ್ಯಕವನದಲ್ಲಿ ಋಷಿಗಳಂತೆ ವಾಸಮಾಡುತ್ತಿದ್ದರು. ಈ ರೀತಿ ಪ್ರತಿಜ್ಞಾಪರಿಪಾಲನೆಯಲ್ಲಿ ನಿಷ್ಠರಾಗಿ ದ್ರೌಪದಿಯೊಡನೆ ಅರಣ್ಯವಾಸವನ್ನನುಭವಿಸುತ್ತಿದ್ದ ಪಾಂಡವರಿದುರಿಗೆ ತಮ್ಮ ಐಶ್ವರ್ಯ ವಿಭವಾದಿಗಳನ್ನು ತೋರಿಸಬೇಕೆಂಬ ಶಕುನಿಯ ಉಪದೇಶದಂತೆ ಕೌರವನು ತಮ್ಮಂದಿರ ಮತ್ತು ಅವರವರ ಮಹಿಳಾಮಂಡಲಿಯ, ಮಂತ್ರಿ ಸೇನಾಪತಿಗಳ, ದಾಸ ದಾಸೀ ಜನರೇ ಮೊದಲಾದ ಪರಿವಾರಗಳೊಡನೆ ಕೌರವನು ಘೋಷಯಾತ್ರೆಗೆ ಹೊರಟನು. ಅವನು ವಿಫಲಮನೋರಥನಾಗಿ ದುಃಖಿತನಾದರೂ ಅದು ನಮ್ಮ ಈಗಿನ ಪ್ರಸ್ತಾಪಕ್ಕೆ ಮುಖ್ಯವಲ್ಲದುದರಿಂದ ಈಗದರ ಲೆಕ್ಕವಿಲ್ಲ. ಇರಲಿ, ಹಾಗೆ ದುಃಖಿತನಾದ ಕೌರವನನ್ನು ಸಮಾಧಾನಪಡಿಸಿ, ರಾಜಧಾನಿಗೆ ಕಳುಹಿ, ಅಕಾರ್ಯದಲ್ಲಿ ಪ್ರವರ್ತಿಸಿದ ಸೈಂಧವನು, ಪಾಂಡವರಿಲ್ಲದ ಸಮಯವನ್ನು ನೋಡಿ, ನಿರೀಕ್ಷಿಸಿ, ದ್ರೌಪದಿಯನ್ನು ಅಪಹರಿಸಿಕೊಂಡು ಹೋಗುತ್ತಿದ್ದನು. ಇದು ಕೂಡ ನಿನ್ನ ಶಕ್ತಿಪ್ರಭಾವವೇ ಅಲ್ಲವೆ?

ಎಲೈ ಮಾತ್ಸರ್ಯನೇ! ಇಷ್ಟಕ್ಕೇ ನೀನು ತೃಪ್ತನಾದೆಯೇನು? ಇಲ್ಲ. ದೂರ್ವಾಸಮುನಿಯು ಬರುತ್ತಿರುವರೆಂಬ ವರ್ತಮಾನವನ್ನು ಕೇಳಿದ ಕೌರವನು ಮಾರ್ಗದಲ್ಲಿ ಕಾದಿದ್ದು, ಬಹು ವಿಧವಾದ ಸೇವೆಗಳು ನಡೆಯುವಂತೆ ಮಾಡಿ, ತನ್ನ ಭವನಕ್ಕೆ ಬರಮಾಡಿಕೊಂಡು ಸಂತೋಷಪಡಿಸಿದನು. ಸಂತುಷ್ಟರಾದ ಋಷಿಗಳಿಂದ ಇಹಪರಕ್ಕೆ ಸಾಧಕಗಳಾದ ವರವನ್ನು ಪಡೆಯದೆ, ದ್ರೌಪದಿಯ ಭೋಜನಾನಂತರ ಶಿಷ್ಯವರ್ಗದೊಡನೆ ಪಾಂಡವರ ಆಶ್ರಮವನ್ನು ಪ್ರವೇಶಿಸಿ ಭೋಜನವನ್ನು ಕೇಳಬೇಕೆಂದು ಪ್ರಾರ್ಥಿಸಿದನು. ಅದರಂತೆ ದೂರ್ವಾಸರೂ, ದ್ವಾದಶಿಯ ದಿನದಲ್ಲಿ ದ್ರೌಪದಿಗೆ ಪಾರಣೆಯಾದ ಬಳಿಕ ಹತ್ತುಸಹಸ್ರ ಶಿಷ್ಯರೊಡನೆ ಧರ್ಮರಾಯನ ಆಶ್ರಮವನ್ನು ಪ್ರವೇಶಿಸಿ ಪಾರಣೆಯಾಗಬೇಕೆಂದು ಕೇಳಿದನು. ಈ ರೀತಿ ದೂರ್ವಾಸ ಮಹರ್ಷಿಗೆ ವಿಜ್ಞಾಪಿಸಿಕೊಂಡ ಕಾಲದಲ್ಲಿ ಕೌರವನು ಭಾವಿಸಿದ್ದೇನೆಂದರೆ, ಪಾಂಡವರಿಗೆ ತಮ್ಮಂತೆ ಧನಧಾನ್ಯ ಸಮೃದ್ಧಿಯಿಲ್ಲ, ಅಡಿಗೆಯವರು—ಪರಿಚಾರಕರೂ ಇಲ್ಲ, ದ್ರೌಪದಿಗೆ ಭೋಜನವಾದೊಡನೆಯೇ ಅಕ್ಷಯಪಾತ್ರದ ಅಂದಿನ ಕಾರ್ಯವು ಪೂರ್ತಿಯಾಗುವುದು; ೧೦ ಸಹಸ್ರ ಶಿಷ್ಯರೊಡಗೂಡಿ ಹೋಗುವ ದೂರ್ವಾಸರಿಗೆ ಪಾರಣೆಯನ್ನು ಮಾಡಿಸುವುದಕ್ಕೆ ಧರ್ಮರಾಜನು ಶಕ್ತನಾಗಲಾರನು; ಮಹರ್ಷಿಯ ಶಾಪದಿಂದ ಅವರೆಲ್ಲರೂ ದಗ್ಧರೇ ಆಗುವರು; ಇಂದು ತಮ್ಮ ಶತ್ರುಗಳು ನಿರ್ಮೂಲರಾದರೆಂದೇ ತಿಳಿದು ಹಿಗ್ಗುತ್ತಿದ್ದನು. ಪಾಪ! ಅದರ ಪರಿಣಾಮವೇನಾಗುವುದೆಂಬುದು ಅವನಿಗೆ ಹೇಗೆ ತಿಳಿಯಬೇಕು? ಹೋಗಲಿ, ಈಗ ನಿನ್ನ ಪ್ರತಾಪದ ವರ್ಣನೆ ಮಾಡುವುದು ನಮ್ಮ ಮೊದಲ ಗುರಿಯಾಗಿರುವುದಲ್ಲದೆ, ಪರಿಣಾಮವನ್ನು ಹೇಳುವುದಲ್ಲ. ಸದ್ಯಕ್ಕೆ ಅದು ಹಾಗಿರಲಿ, ಹೇಗೂ ಈ ಕಾರ್ಯಗಳಿಂದ ನಿನ್ನ ಅದ್ಭುತ ಸಾಹಸವು ಪ್ರದರ್ಶನಕ್ಕೆ ಬಂದುದೊಂದೇ ಸಾಕು.

ಕೌರವಾದಿಗಳು ಶತ್ರುಗಳನ್ನು ಅರಣ್ಯಕ್ಕೆ ಅಟ್ಟಿ, ರಾಜಭೋಗವನ್ನು ಅನುಭವಿಸುತ್ತಿದ್ದರೂ, ಕಾಲವು ಕಳೆದಂತೆಲ್ಲ ಸಂಕೇತದಂತೆ “ಪಾಂಡವರ ಅರಣ್ಯವಾಸ ಕಾಲವು ಕಳೆ

ಯಿತು; ಅಜ್ಞಾತವಾಸಕಾಲವು ಪ್ರಾಪ್ತವಾಯಿತು. ಅದು ಕೂಡ ಕಳೆಯುತ್ತಿರುವುದು, ಅದೂ ಮುಗಿದರೆ ಪಾಂಡವರು ಪ್ರಬಲ ಶತ್ರುಗಳೇ ಆಗುವರು." ಎಂಬ ಆತಂಕವುಳ್ಳವರಾಗಿಯೇ ಇದ್ದರು. ಶತ್ರು ನಿರ್ಮೂಲಕ್ಕೆ ಒಂದು ವರ್ಷಾವಧಿಯಲ್ಲಿ ಪಾಂಡವರ ನೆಲೆಯನ್ನು ಕಂಡುಹಿಡಿಯುವುದು ಮಾತ್ರವೇ ಮುಖ್ಯ ಸಾಧಕವೆಂದು ಭಾವಿಸಿ ಕೌರವನು, ಅನೇಕ ಬ್ರಾಹ್ಮಣರನ್ನೂ ಕ್ಷತ್ರಿಯಕುಮಾರರನ್ನೂ ವ್ಯಾಪಾರಿಗಳನ್ನೂ ಮಲ್ಲಯುದ್ಧವಿಶಾರದರನ್ನೂ ದೇಶದೇಶಕ್ಕೂ ವನವನಕ್ಕೂ ಅಟ್ಟಿದ್ದನು. ಪಾಂಡವರ ೧೨ ವರ್ಷಕಾಲ ಅರಣ್ಯವಾಸದಲ್ಲಿ ಒಂದು ದಿನವಾದರೂ ಋಷಿಮಂಡಲಿಯು ಪಾಂಡವರನ್ನು ಬಿಟ್ಟಿರಲಿಲ್ಲ. ಆದುದರಿಂದ ಅರಣ್ಯದಲ್ಲಿ ಅಜ್ಞಾತವಾಸವನ್ನು ಮಾಡಲಾರದೆ, ಋಷಿಗಳ ಅಪ್ಪಣೆಯನ್ನು ಪಡೆದು, ದ್ರೌಪದಿಯೊಡನೆ ಪಾಂಡವರು ಐವ್ವರು ಮಾತ್ರವೇ ಎಲ್ಲಿಯೋ ಹೋದರೆಂಬ ವರ್ತಮಾನವನ್ನು ಗ್ರಹಿಸಿ ಬ್ರಾಹ್ಮಣರು ಬಂದು ಕೌರವನಿಗೆ ತಿಳಿಸಿದರು. ಕ್ಷತ್ರಿಯಕುಮಾರರಾಗಲಿ, ವರ್ತಕರಾಗಲಿ ಆ ವರ್ತಮಾನವನ್ನು ತರಲಿಲ್ಲ. ಭರತಖಂಡದಲ್ಲಿ ಕೌರವನು ಪ್ರಧಾನರಾಜನಾಗಿದ್ದನು. ದೇಶವಿದೇಶಗಳಲ್ಲಿಯೂ, ರಾಜಾಂಗಗಳಲ್ಲಿಯೂ, ಪಟ್ಟಣ-ಗ್ರಾಮಗಳಲ್ಲಿಯೂ ಮುಖ್ಯ ಮುಖ್ಯರಾಗಿರತಕ್ಕವರನ್ನು ಸಾಮ, ದಾನ, ಭೇದಗಳೆಂಬ ಉಪಾಯತ್ರಯಗಳಿಂದ ಸ್ವಾಧೀನಪಡಿಸಿಕೊಂಡನು. ಅವರಿಂದಲೂ ಆ ವರ್ತಮಾನಗಳೂ ಬರಲಿಲ್ಲ. ಚಟ್ಟಗಳು ನಿಯತಕಾಲದಲ್ಲಿ ಬರಲಿಲ್ಲವಾದುದರಿಂದ ಅಕಾಲಮರಣಕ್ಕೆ ಗುರಿಯಾದರೆಂಬ ಶಂಕೆ ಹುಟ್ಟಿತು. ಶೋಕಾಗ್ನಿಯು ಕೌರವನನ್ನು ಕ್ಷಣಕ್ಷಣಗಲ್ಲಿಯೂ ಸುಡತೊಡಗಿತು.

ಹೇ, ಮಾತ್ಸರ್ಯಮಹಾಶಯ! ಸ್ವಲ್ಪ ನಿಲ್ಲು, ಕುಲಕ್ಕೆಲ್ಲಾ ನೀನೊಬ್ಬನೇ ಪುತ್ರನಲ್ಲ. ನಿನ್ನ ಕುಲದಲ್ಲಿ ನಿನ್ನನ್ನು ಮೀರಿಸುವ ಶಕ್ತರು ಎಷ್ಟೋ ಮಂದಿ ಅವತರಿಸಿರುವರು. ನಿಮ್ಮಲ್ಲಿ ಜ್ಯೇಷ್ಠನಾದ ಕಾಮನು ವಿರಾಟರಾಯನ ಮೈದುನನಾದ ಕೀಚಕನಲ್ಲಿ ಬೇರೂರಿದನು. ವಿರಾಟರಾಯನ ಮನೆಯಲ್ಲಿ ರಾಜಪತ್ನಿಯ ಸೇವೆಗೆಂದು ಹೊಸದಾಗಿ ಬಂದಿದ್ದ ಸ್ತ್ರೀಯನ್ನು ಕೀಚಕನ ದೃಷ್ಟಿಪಥಕ್ಕೆ ತಂದನು. ಕಾಮಮೋಹಿತನಾದ ಕೀಚಕನು ತನ್ನ ಬುದ್ಧಿ, ಸಾಮರ್ಥ್ಯಕ್ಕೆ ತಕ್ಕಂತೆ ಎಲ್ಲಾ ಸಾಹಸವನ್ನೂ ಮಾಡಿದನು. ಕಡೆಗೆ ಸಂಕೇತಸ್ಥಳದಲ್ಲಿ ಸ್ತ್ರೀವೇಷಧಾರಿಯಾದ ಒಬ್ಬ ಪುರುಷನಿಂದ ಅವನು ಸತ್ತು, ಅವನ ಅನುಜರೂ ಮತ್ತು ಅನುಚರರೂ ಸತ್ತ ಮಾತೂ ಈಗ ನಮ್ಮ ಪ್ರಸ್ತಾವನೆಗೆ ಬೇಕಾಗಿಲ್ಲ. ಮುಖ್ಯವಾಗಿ ಪ್ರಸ್ತುತದ ನಮ್ಮ ಗುರಿಯೆಂದರೆ, ನಿನ್ನ ಮತ್ತು ನಿನ್ನ ಸಹಜಾಗ್ರಜರ, ಸಹಚಾರಿಣಿಯರ ಪ್ರತಾಪವರ್ಣನವು ಮಾತ್ರವೇ ಆಗಿರುವುದು.

ವಾಚಕಮಹೋದಯರೇ!

ಕೀಚಕನು ಸಾಮಾನ್ಯ ಬಲವುಳ್ಳವನೆಂದು ಭಾವಿಸಬಾರದು. ೬ ಮಂದಿಗಳು ಸಮಬಲರು. ಇವರಲ್ಲಿ ಆವನೊಬ್ಬನಿಂದ ಮೊದಲು ಒಬ್ಬನು ಹತನಾದರೆ ಉಳಿದ ನಾಲ್ವರೂ ಮೊದಲಿನವನಿಂದಲೇ ಹತರಾಗಬೇಕೆಂಬ ದೈವನಿಯಾಮಕವಿತ್ತು. ಅವರು ಆರು ಮಂದಿ ಆರಾರೆಂದರೆ, ೧ ಹಿಡಂಬ, ೨ ಬಕಾಸುರ, ೩ ಜರಾಸಂಧ, ೪ ಕೀಚಕ, ೫ ಕೌರವ ಮತ್ತು ೬ ಭೀಮ. ಈ ಆರು ಮಂದಿಯಲ್ಲಿ ಭೀಮನ ಮೇಲೆ ಬಿದ್ದ ಹಿಡಂಬನು ಅವನಿಂದ ಮೊದಲು ಹತನಾದನು. ಏಕಚಕ್ರಪುರದಲ್ಲಿ ಬಕಾಸುರನು ಎರಡನೆಯವನಾಗಿ ಮೃತನಾದನು. ರಾಜಸೂಯಯಾಗಾರಂಭದಲ್ಲಿ ಜರಾಸಂಧನು ಮೂರನೆಯವನಾಗಿ ಮೃತನಾದನು. ಇದೆಲ್ಲವೂ ಕೌರವನ ಸ್ಮರಣೆಯಲ್ಲಿದ್ದವು. ಕೀಚಕನು ಅನುಜರೊಡನೆ ಒಂದೇ ರಾತ್ರಿಯಲ್ಲಿ ಮೃತನಾದನೆಂಬುದು ಜನಜನಿತವಾಗಿ ಕೌರವನಿಗೆ ತಿಳಿಯಿತು. ಇದರಿಂದ ಪಾಂಡವರೆಲ್ಲರೂ ಅಥವಾ ಭೀಮನಾದರೂ ವಿರಾಟನ ಪಟ್ಟಣದಲ್ಲಿರುವುದು ನಿಜವೆಂದು ಊಹಿಸಿ, ಕೌರವನು ತನ್ನ ಸಮಸ್ತ ಬಲದೊಡನೆ ಹೊರಟು ಬಂದು, ತನ್ನ ಕಡೆಯವರಿಂದ ದಕ್ಷಿಣಭಾಗದ ಗೋಗ್ರಹಣ ಮಾಡಿಸಿದನು; ಮತ್ತು ತಾನು ಸಕಲ ಬಲದೊಡನೆ ಉತ್ತರ ಗೋಗ್ರಹಣ ಮಾಡಿದನು. ಇದರಲ್ಲಿ ಕೃತಕೃತ್ಯರಾದಂತೆಯೇ ಕೌರವನೂ ಅವನ ಕಡೆಯವರೂ ಆನಂದದಲ್ಲಿ ಮಗ್ನರಾದರು. ಮಾತ್ಸರ್ಯಪುರುಷ! ಇದೂ ಕೂಡ ನನ್ನಿ ಪ್ರಭಾವವೇ ಅಹುದಲ್ಲವೇ? ಅಡ್ಡಿಯೇನು?

ವಾಚಕ ಮಹಾಶಯರೇ! ನಲ್ಪತಾಳಿರಿ, ಮಾತ್ಸರ್ಯಪ ಮಹಿಮಾವರ್ಣನವನ್ನೋದಿ ಬೇಸರ ಪಡುವದಾಗಲಿ, ಭಯಪಡುವದಾಗಲಿ, ಕೂಡದು; ಭಯಕ್ಕೆ ಕಾರಣವಿಲ್ಲ. ತನ್ನ ಉಪಾಸನೆಯನ್ನು ಮಾಡಿದಲ್ಲದೆ, ತನ್ನ ಪ್ರಸನ್ನತೆಗೆ ಅರ್ಹನೆಂದು ತಿಳಿದಲ್ಲದೆ, ಮಾನಾವಮಾನವನ್ನು ನಿರ್ಲಕ್ಷ್ಯವಾಗಿ ಕಾಣುವನೆಂದು ನಿರ್ಧರವಾದಲ್ಲದೆ ಮಾತ್ಸರ್ಯವು ಅಲ್ಲಿಯೂ ಬೇರೂರುವದಿಲ್ಲ. ಮಿಥ್ಯಾಪವಾದ ಬೀರುಗಳಿಗೂ ಪಾಪಭೀತರಿಗೂ ದೇಶಭಕ್ತರಿಗೂ ಪರಸಮೃದ್ಧಿಯುಳ್ಳವರಿಗೂ ಮಾತ್ಸರ್ಯನು ಪ್ರಸನ್ನನಾಗುವುದಿಲ್ಲ. ಅಂಥವರಿಗೆ ವಿರೋಧಿಯಾಗಿದ್ದು ಅಷ್ಟಿಷ್ಟು ಕೇಡನ್ನೇ ಹಾರೈಸುವನು. ಆತನ ಕಿರುಕುಳದಿಂದ ಸಜ್ಜನರಲ್ಲಿರುವ ಸದ್ಗುಣಗಳು ಮತ್ತಷ್ಟು ವೃದ್ಧಿಯನ್ನೇ ಹೊಂದುವುದಲ್ಲದೆ ನಷ್ಟವಾಗುವುದಿಲ್ಲ. ಅಲ್ಲದೆ ಪುಣ್ಯಶ್ಲೋಕನಾದ ನಳಮಹಾರಾಜನ ಚರಿತ್ರೆಯನ್ನು ಕೇಳಿದವರಲ್ಲಿ ಕೂಡ ತನ್ನ ಪ್ರವರ್ತನವಿಲ್ಲವೆಂದು ಪ್ರತಿಜ್ಞೆಯನ್ನೂ ಮಾಡಿರುವುದರಿಂದ ಭೀತಿಗೆ ಕಾರಣವಿರುವುದಿಲ್ಲ.

ಮತ್ತೊಂದು ಮಾತನ್ನು ಮಾತ್ಸರ್ಯನಿಗಾಗಿ ಹೇಳುವುದು ಉಳಿದಿದೆ,- ಅಯ್ಯಾ, ಮಾತ್ಸರ್ಯ ಮಹಾಶಯ, ನಿನ್ನ ಪ್ರತಾಪ ವರ್ಣನವು ಇಷ್ಟಕ್ಕೇ ಪೂರೈಸಿತೆನ್ನಬೇಡ. ಕೃತ, ತ್ರೇತಾ, ದ್ವಾಪರಯುಗಗಳಲ್ಲಿ ಪ್ರದರ್ಶಿಸಲ್ಪಟ್ಟಿರುವ ನಿನ್ನ ಅದ್ಭುತ ಪ್ರಭಾವದ ಸಂಕ್ಷಿಪ್ತ ವರ್ಣನವನ್ನು ಮಾತ್ರವೇ ಇಲ್ಲಿ ಪ್ರಸ್ತಾಪಿಸಲಾಯಿತು. ಇನ್ನು ಈ ವರ್ತಮಾನ ಕಲಿಯುಗದಲ್ಲಿ ಮನೆಮನೆಯಲ್ಲಿಯೂ ನಿನ್ನ ಪ್ರಾಬಲ್ಯವಿದ್ದೇ ಇದೆ. ವರ್ತಮಾನಕಾಲದ ನಿನ್ನ ಮಹಿಮಾ ವರ್ಣನವನ್ನು ಮಾಡಬೇಕೆಂದರೆ ಬಹು ದೀರ್ಘಕಾಲವು ಬೇಕಾಗುವುದು. ಅದನ್ನು ಬರೆಯಬೇಕಾದರೆ ಲೇಖಿನಿಗೆ ಮತ್ತಷ್ಟು ಶಕ್ತಿಯನ್ನು ತುಂಬಿಸಬೇಕು; ಇನ್ನೂ ಹೆಚ್ಚು ವಸ್ತುಸಂಗ್ರಹವನ್ನು ಮಾಡಬೇಕು; ಅಷ್ಟೂ ಆಗಬೇಕಾದರೆ ಸ್ವಲ್ಪ ಕಾಲವಿರಾಮವೂ ಬೇಕು. ಆದುದರಿಂದ ಇದೊ ಬೀಳ್ಕೊಳ್ಳುವೆನು; ಮತ್ತೆ ಮುಂದೆ ಆದಷ್ಟು ಶೀಘ್ರದಲ್ಲಿಯೇ ಲೇಖನಿಯನ್ನು ಸಜ್ಜುಗೊಳಿಸಿಕೊಂಡು ಬರುವೆನು.

ಸದ್ಯಕ್ಕೆ ನಿನಗೆ ಇದೊ ವಂದನೆ.

ವೃತ್ತಮಣಿ ವೆಂಕಟಕೃಷ್ಣಯಂಗಾರ್.

ವಂದನಾಪೂರ್ವಕ ಸ್ವೀಕಾರ.

(ಈ ಮುಂದೆ ವಿವರಿಸಿರುವ ಪುಸ್ತಕಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುವೆವಲ್ಲದೆ ವಿಮರ್ಶೆಗಾಗಿ ಕಳುಹಿಕೊಟ್ಟ ಆ ನಮ್ಮ ಸನ್ಮಾನ್ಯ ಸೋದರೀ ಸೋದರರ ಸೌಜನ್ಯಕ್ಕಾಗಿ ಚಿರಕೃತಜ್ಞರಾಗಿರುವೆವು. ಸಂ. ನಂ.)

೧ ಅಡುಗೂಲಜ್ಜಿಯ ಕಥೆಗಳು ಭಾಗ ೨. (ಶ್ರೀ|| ಸೌ|| ರಂಗನಾಯಕಮ್ಮನವರಿಂದ) ಫುಲ್‌ಸ್ಕೇಪ್ ಕಾಗದದ ಅರ ಆಕಾರ; ಪುಟ ಸಂಖ್ಯೆ ೧೩೪. ಕ್ರಯ ೦-೪-೦

ಇದರಲ್ಲಿ ೧. ಮಿಣಿಚಂಭಟ್ಟನ ಕಥೆ, ೨ ಕರುಣೆಯು ಮತ್ತು ರಾಜಕುಮಾರನು. ೩ ರಾಮನೆಂಬ ಕ್ಷೌರಕನ ಕಥೆ, ೪ ಸಾವಿರದೆಂಟುಗಿಳಿಗಳ ಕಥೆ, ೫ ಕಳಿಂಗನ ಕಥೆ, ೬ ವಿಷ್ಣುಶರ್ಮನೆಂಬ ಬ್ರಾಹ್ಮಣನ ಕಥೆ, ೭ ಕಮಲಿನಿಯ ಕಥೆ ೮ ಗಂಧದಮರದ ಕಥೆ- ಎಂಬ ಎಂಟು ಕಥೆಗಳು ಸುಲಭ ಶೈಲಿಯಲ್ಲಿ, ಬಾಲ-ಬಾಲೆಯರಿಗೂ ಅರ್ಥವಾಗುವಂತೆ ಬರೆಯಲ್ಪಟ್ಟಿರುವವು. ಕಥೆಗಳು ಕಟ್ಟು ಕಥೆಗಳಾಗಿದ್ದರೂ ನೀತಿಬೋಧಕವಾಗಿಗಿವೆಯೆನ್ನಬಹುದು. ಅಪೇಕ್ಷಕರು ಮಾತೃಮಂದಿರ ಸಂಘದವರಮೂಲಕವಾಗಿ ತರಿಸಿಕೊಳ್ಳಬಹುದು.

೨ ಶ್ರೀಮಂತೋದ್ಯಾನ ವರ್ಣನಂ (ಶ್ರೀ ವೆಂಕಟಾದ್ರಿ ಪಂಡಿತ ವಿರಚಿತವಾದುದು.) ಕ್ರೌನ್ ಅರ ಆಕಾರ ೧೬ ಪುಟಗಳು. ಮೈಸೂರು ಜಿ. ಟಿ. ಎ. ಪ್ರೆಸ್ಸಿನ ಮುದ್ದಾದ ಮುದ್ರಣ, ಹಸನಾದ ಕಾಗದ. ಬೆಲೆ. ೦—೨—೦ ಮಾತ್ರ.

ಈ ಪುಸ್ತಕದಲ್ಲಿ ೭೦ ಕಂದಗಳೂ ಅಲ್ಲಲ್ಲಿಗೆ ಸಂದರ್ಭಾನುಸಾರವಾಗಿ ಮಾತುಗಳೂ ಸೇರಿಸಲ್ಪಟ್ಟಿವೆ. ಕಂದಗಳು ಸರಳವಾಗಿವೆ. ವರ್ಣನಾ ಭಾಗವು ತಕ್ಕಮಟ್ಟಿಗೆ ತೃಪ್ತಿಕರವಾಗಿದೆ, ಮುಖ್ಯವಾಗಿ ಭಾಷಾಭಿಮಾನಿಗಳ ಪ್ರೋತ್ಸಾಹಕ್ಕೆ ಅರ್ಹವಾಗಿದೆಯೆಂದರೆ ಸಾಕು.

ವಿಳಾಸ:— ವೆಂಕಟಾದ್ರಿಪಂಡಿತ
ಶ್ರೀಕಂಠವಿಲಾಸ ಲಾಜ, ಕಾಲೇಜ್‌ರೋಡ್, ಮೈಸೂರು.

೩ ಸಮಾಜರಹಸ್ಯ:— ಶ್ರೀ ಬಲಭೀಮ ವಾಚನಾಲಯ ದ್ವಿತೀಯ ಪುಷ್ಪ. ಕ್ರೌನ್ ಅರ ಆಕಾರದ ೬೪ + ೮ = ಪುಟಗಳು. ಬೆಲೆ ೦—೫—೦

ಇದನ್ನು ರಚಿಸಿದವರು ಶ್ರೀಯುತ ದಾಮೋದರ ಸದಾಶಿವ ದೇಶಪಾಂಡೆಯವರು, ಇವರ ಲೇಖನ ಶೈಲಿಯು ಮಾರ್ಮಿಕವಾದುದಲ್ಲದೆ ನೀತಿಬೋಧಕವೂ ಆಹುದು. ಇದರಲ್ಲಿರುವ ದೇಶಾಭಿಮಾನ, ಸಮಾಜಸೇವಾ ತತ್ಪರತೆ, ಭಾಷಾಭಿಮಾನಗಳಿಗಾಗಿ ನಾವು ಇವರ ಅಭಿನಂದಿಸುವೆವಲ್ಲದೆ, ಈ ಸಮಾಜ ರಹಸ್ಯವನ್ನು ಅಗತ್ಯವಾಗಿ ಪ್ರೋತ್ಸಾಹಿಸಬೇಕೆಂದು ದೇಶೀಯರಲ್ಲಿ ಕೋರುತ್ತೇವೆ.

ವಿಳಾಸ:— ಸೆಕ್ರೆಟರಿ, ಶ್ರೀಬಲಭೀಮ ವಾಚನಾಯಲ,
ಮುದವಾಲ (ಪೋಸ್ಟ—ಅಂಕಲಗಿ)

೪-೫ ಆಯುರ್ಔಷಧಿಗುಣಾದರ್ಶ, ಹಳ್ಳಿಯವೈದ್ಯ (ಭಾರತ ವನೌಷಧಿ ಸಂಗ್ರಹಾಲಯ+ಗ್ರಂಥಮಾಲಾ.) ಕಿತ್ತೂರು, ಬೆಳಗಾಂವ ಜಿಲ್ಲಾ.) ಬೆಲೆಯಿಲ್ಲ. ಮೇಲ್ಕಂಡ ಔಷಧಾಲಯದಲ್ಲಿ ದೊರೆಯುವ ಔಷಧಿಗಳ ಗುಣ-ಹೆಸರು-ಕ್ರಿಯೆಗಳನ್ನು ಕ್ರಮವಾಗಿ ತಿಳಿಸುತ್ತಿದೆ.

ವಂದೇಮಾತರಂ ಕ್ಯಾಲೆಂಡರು ಭಾರತಮಾತೆಯ ಚಿತ್ರ ಸಹಿತವಾದ ಪಂಚವರ್ಣದ ಅಕ್ಷರಗಳಿಂದ ಮುದ್ದಾಗಿ ಪ್ರಕಟವಾಗಿದೆ. ಇದೂ ಮೇಲ್ಕಂಡ ಭಾರತ ವನೌಷಧಿ ಗ್ರಂಥಾಲಯದಲ್ಲಿಯೇ ದೊರೆಯುತ್ತದೆ. ಒಂದಾಣೆ ಸ್ಟಾಂಪನ್ನು ಕಳುಹಿ ಅಂಚೆಯ ಮೂಲಕ ಬೇಕಾದವರು ಪಡೆಯಬಹುದು.

ಸಂ. ನಂ.

ಶ್ರೀನಿವಾಸ ಮಂದಿರಂ, ಬೆಂಗಳೂರು.

ಶ್ರೀನಿವಾಸ ಮಂದಿರದ ೩೪ನೆ ವಾರ್ಷಿಕ ವರದಿಯನ್ನು (1916-1917) ವಂದನಾಪೂರ್ವಕವಾಗಿ ಸ್ವೀಕರಿಸಿರುವೆವು. ಈ ವರದಿಯು ಇಂಗ್ಲಿಷು-ಕನ್ನಡ ಭಾಷೆಗಳೆರಡರಲ್ಲಿಯೂ ಪ್ರಕಟವಾಗಿರುವುದರಿಂದ ಎಲ್ಲರಿಗೂ ನೋಡುವಂತಿರುವುದು.

ಈ ಮಂದಿರದ ಸ್ತ್ರೀಶಾಖೆಯನ್ನೂ ಲೈಬ್ರರಿ, ಅನಾಥಾಲಯಗಳನ್ನೂ ನಾವು ಪ್ರತ್ಯಕ್ಷವಾಗಿ ನೋಡಿ ಬಂದಿರುವೆವು. ಈ ಅನಾಥಾಲಯದಲ್ಲಿ ನಾವು 1917ನೆ ಏಪ್ರಿಲ್‌ನಲ್ಲಿ ನೋಡಿದಾಗ ೨೫ ಮಂದಿ ಅನಾಥ ಬಾಲಕರೂ, ೩ ಮಂದಿ ಬಾಲಿಕೆಯರೂ ಇದ್ದರು. ಇವರಲ್ಲಿ, ಓನಾಮದಿಂದ ಮೊದಲು ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯ ವರೆಗೂ ಓದತಕ್ಕವರಿರುವರು. ಅವರಿಗೆಲ್ಲಾ ಕ್ರಮವಾಗಿ ಪಾಠಪ್ರವಚನಗಳನ್ನು ಹೇಳಿಕೊಡಲು ಶಕ್ತರಾದ ಬೋಧಕರೂ ಇರುವರು. ಈ ಅನಾಥಾಲಯದ ಮತ್ತು ಸ್ತ್ರೀಶಾಖೆಯ ಕಾರ್ಯದರ್ಶಿನಿಯರೂ, ಮಂದಿರಸ್ಥಾಪಕರಾದ ದಿವಂಗತ ಶ್ರೀ ರಂಗಾಚಾರ್ಲುಯವರ ಪತ್ನಿಯವರೂ ಆದ ಶ್ರೀಮತಿ ಸಿಂಗಮ್ಮನವರು ಈ ಅನಾಥಾಲಯದ ಅಭಿವೃದ್ಧಿಗಾಗಿ ಪಡುತ್ತಿರುವ ಶ್ರಮವೂ ಅನಾಥ ಬಾಲಕ—ಬಾಲಿಕೆಯರಲ್ಲಿ ಇವರಿಗಿರುವ ನಿಸರ್ಗ ವಾತ್ಸಲ್ಯವೂ ಅತ್ಯಂತ ಸ್ತೋತ್ರಾರ್ಹವಾಗಿರುವುವು. ಆದರೆ, ಅವರ ಉದ್ದೇಶ ಸಾಫಲ್ಯಕ್ಕೆ ಸಾಕಷ್ಟು ದ್ರವ್ಯಾನುಕೂಲತೆಯಿಲ್ಲವೆಂದು ತಿಳಿಸಲು ವಿಷಾದಿಸುವೆವು. ಧರ್ಮಕ್ರಿಯಾಭಿನಿವೇಶನದಲ್ಲಿ ಆಸಕ್ತರಾದ ಮಹನೀಯರು ಪ್ರೋತ್ಸಾಹಿಸಬಹುದಾಗಿದೆ. ಇನ್ನು ನಮ್ಮ ಸೋದರಿಯರಲ್ಲಿ ನಾವು ಕೋರುವುದೊಂದು, ಇಲ್ಲಿಯ ಸ್ತ್ರೀ ಶಾಖೆಯ ಸಭೆಯು ಅಷ್ಟಾಗಿ ತೃಪ್ತಿಕರವಾಗಿಲ್ಲವೆಂದೂ ಸಭೆಗೆ ಬರತಕ್ಕ ಸೋದರಿಯರು ಕೇವಲ ಆಡಂಬರ ಪಡದೆ, ಮಿತವೂ ಹಿತಕರವೂ ಆದ ನಿತ್ಯವಾದ ಅಲಂಕಾರಗಳಿಂದ ಮಾತ್ರ ಬಂದು ತಮ್ಮ ಸೇವಾಕಾರ್ಯವನ್ನೂ ಶ್ರೀ ಶ್ರೀನಿವಾಸದೇವರ ಸಂದರ್ಶನ—ಸಂಕೀರ್ತನಗಳನ್ನೂ ಯಥೋಚಿತವಾಗಿ ನಡೆಯಿಸುವುದರಿಂದ, ಮಂದಿರವು ಯಶೋಭಾಗಿಯಾಗುವಂತೆ ಮಾಡಬೇಕೆಂದು ಕೋರುವೆವು.

ಸಂ. ನಂ.

ವರ್ಗಣೀದಾರರಲ್ಲಿ ವಿನಂತಿ

ಸುಹೃದರೇ!

ಈ ವೇಳೆಗೆ ನಂದಿನಿಯು ದ್ವಿತೀಯ ವರ್ಷದ ೭ನೆ ಸಂಚಿಕೆಯನ್ನು ಹೊರಡಿಸಿರಬೇಕಾಗಿತ್ತು; ಆದರೆ ಇನ್ನೂ ೪—ನೆ ಸಂಚಿಕೆಯೇ ಇಷ್ಟು ವಿಳಂಬ ಮಾಡಿದುದಕ್ಕಾಗಿ ಆಗಹಿಸುವುದು ಅಥವಾ ಆಕ್ಷೇಪಿಸುವುದು ಸ್ವಭಾವವೇ ಸರಿ! ಆದರೂ ಪೂರ್ವಾಪರ ವಿಚಾರಮಾಡಿ ನಂದಿನಿಯ ಸವಿನಯ ನಿವೇದನದಿಂದ ನಿಜಸ್ಥಿತಿಯನ್ನು ತಿಳಿದು ಸಮಾಧಾನಗೊಳ್ಳುವಿರೆಂದು ನಂಬಿರುವೆವು. ಇದೇ ೧೯೧೮ನೆ ಇಸವಿ ಜನವರಿ ತಿಂಗಳು ಮೊದಲು, ಉಂಟಾದ ಪ್ರವಾಸವೇ ಮೊದಲಾದ ಹಲವು ಕಾರ್ಯಗೌರವಗಳಿಂದಲೂ ನಂದಿನಿಯು ತನ್ನ ಸೋದರೀವರ್ಗಕ್ಕೆ ಹಿತವನ್ನಾಚರಿಸಲು ಮಾಡಬೇಕಾದ ಉಪಾಯ ಸಾಧನಗಳನ್ನು ಕಂಡುಹಿಡಿಯುವುದರಲ್ಲಿರುವುದರಿಂದಲೂ, ಈ ೪-ನೇ ಸಂಚಿಕೆಯು ಇಷ್ಟು ವಿಳಂಬವಾದುದಲ್ಲದ, ಮುಂದೆ ಕೂಡ, ಅನೇಕ ಉಪಯುಕ್ತ ವಿಚಾರ ಸಂಗ್ರಹಕ್ಕಾಗಿ ೫-೬-೭-೮ನೆ ಸಂಚಿಕೆಗಳೂ ಸ್ವಲ್ಪ ವಿಳಂಬದಿಂದ ಹೊರಡಬೇಕಾಗಿರುವುದು. ಎಂದರೆ ಜೂನ್-ಜೂಲೈ ತಿಂಗಳೊಳಗಾಗಿ ಇನ್ನು ೪ ಸಂಚಿಕೆಗಳೂ ಬಹುಮಾನ ಪುಸ್ತಕವೂ ನಿಮ್ಮ ಕೈಸೇರುವಂತಾದೀತೆಂದು ಹೇಳಬಹುದಾಗಿದೆ. ಅಷ್ಟರಲ್ಲಿ ನಿಮ್ಮೊಳಗೆ ಆರೂ ಆವ ವಿಧವಾಗಿಯೂ ಸಂದೇಹಕ್ಕೆಡೆಗುಡದೆ, ಆಕ್ಷೇಪಿಸದೆ, ಅಂತಃಕರಣ ಪೂರ್ವಕವಾಗಿ ಆಶೀರ್ವದಿಸುತ್ತಿದ್ದು, ಅಷ್ಟುಮಟ್ಟಿಗೆ ಅವಕಾಶವನ್ನು ಕೊಡಬೇಕೆಂದು ಮಾತ್ರ ನಿವೇದಿಸುವೆವು.

ಸಂ. ನಂ.

ಕಲ್ಕತ್ತಾಪಟ್ಟಣದ ವಿದ್ಯಮಾನಗಳು.

ಇದೇ ಜನವರಿ ೧೯ನೇ ತಾರೀಖು ಶನಿವಾರ ಸಾಯಂಕಾಲ ಮಹಿಳಾಸೇವಾಸಮಾಜದ ಅಧ್ಯಕ್ಷರಾದ ಶ್ರೀಮತಿ **ಪಾರ್ವತಿ ಅಮ್ಮನವರು** ಕಳೆದ ಡಿಶಂಬರಿನಲ್ಲಿ ಕ್ರಿಸ್‌ಮಸ್ ಕಾಲದಲ್ಲಿ ಕಲ್ಕತ್ತಾಪಟ್ಟಣಕ್ಕೆ ಹೋಗಿದ್ದವೇಳೆ ತವಗೆ ತೋರಿದ ಅಲ್ಲಿನ ವಿದ್ಯಮಾನಗಳ ವಿಷಯವಾಗಿ, ಬೆಂಗಳೂರು ಕೋಟೆಯಲ್ಲಿರುವ ಸಂಸ್ಕೃತ ಕಾಲೇಜ ಹಾಲ್‌ನಲ್ಲಿ ಕನ್ನಡದಲ್ಲಿ ಉಪನ್ಯಾಸವನ್ನು ಕೊಟ್ಟರು. ಅಗ್ಗೆ ಅನೇಕ ಹಿಂದೂ ಸ್ತ್ರೀಯರು ಸಭೆಗೆ ಬಂದಿದ್ದರು. ಆ ಪಟ್ಟಣದ ಮುಖ್ಯವಾದ ಸ್ಥಿತಿಗಳನ್ನೂ, ಪ್ರಾಸಾದಪಟ್ಟಣವೆಂಬ ಅತಿ ಗಂಭೀರವಾದ ಬಿರುದನ್ನು ಅದಕ್ಕೆ ಉಂಟುಮಾಡಿಕೊಟ್ಟಿರುವ ಬಹು ಅಂದವಾದ ಮತ್ತು ಅದ್ಭುತವಾದ ಕಟ್ಟಡಗಳನ್ನೂ, ಮನೆಗಳನ್ನೂ, ಜನಸಾಮಾನ್ಯವು ವಿಹರಿಸತಕ್ಕ ತೋಟಗಳನ್ನೂ, ದೊಡ್ಡ ಮನುಷ್ಯರ ಭಾವಪ್ರತಿಮೆಗಳನ್ನೂ, ದೇವಸ್ಥಾನಗಳನ್ನೂ, ಇನ್ನೂ ಇತರ ಮನೋಹರವಾದ ಪದಾರ್ಥಗಳನ್ನೂ ವಿವರಿಸಿ, ಸಾಧಾರಣ ಹಿಂದೂ ಕುಟುಂಬದ ದಿನಚರಿ ಜೀವಮಾನದಲ್ಲಿ ಕಂಡುಬರುವಂತೆ ಅಲ್ಲಿನ ಸಾಂಘಿಕ ಸ್ಥಿತಿಯನ್ನೂ ಜನಗಳ ನಡೆವಳಿಕೆಗಳನ್ನೂ ವಿವರಿಸಿದರು. ಜನಸಾಂದ್ರತೆಯಿಂದ ಸ್ಥಳವಸತಿಯು ಕಮ್ಮಿಯಾಗಿರುವ ಪ್ರಯುಕ್ತ ಅನೇಕ ಕುಟುಂಬಗಳು ಒಂದೇ ವರಾರದಲ್ಲಿ ವಾಸಮಾಡುತ್ತಿರುವರು. ಇದು ದೇಹಕ್ಕೆ ಅಷ್ಟು ಆರೋಗ್ಯಕರವಲ್ಲದಿದ್ದರೂ ಅದರಿಂದ ಸ್ವಲ್ಪ ಮಟ್ಟಿಗೆ ಅನುಕೂಲಗಳೂ ಉಂಟು. ಆ ಪಟ್ಟಣದಲ್ಲಿ ಅಲ್ಲಲ್ಲಿರುವ ಚೌಕಗಳಲ್ಲಿ ಜನಗಳಿಗೆ ವ್ಯಾಯಾಮವೂ ಮತ್ತು ಶುಭ್ರವಾದ ಗಾಳಿಯೂ ದೊರೆಯುವಂತೆ ಏರ್ಪಡಿಸಿರುತ್ತೆ. ಒಂದು ಕಡೆಯಿಂದ ಇನ್ನೊಂದುಕಡೆ ಹೋಗಬೇಕಾದರೆ, ಟ್ರಾಂಗಾಡಿಗಳ ಮೂಲಕ ಬಹಳ ಅನುಕೂಲವಾಗಿ ಪ್ರಯಾಣಮಾಡಬಹುದು. ಧನಿಕರೂ ಸಹ ಈ ಆನುಕೂಲ್ಯವನ್ನೇ ಉಪಯೋಗಿಸಿಕೊಳ್ಳುತ್ತಿರುವರು. ಹೆಂಗಸರು ಗೋಷಾ ಪದ್ಧತಿಯನ್ನು ಬಹಳ ವಿಶೇಷವಾಗಿ ಅನುಸರಿಸುತ್ತಿರುವುದು ಶೋಚನೀಯವಾದದ್ದೇ ಸರಿ. ೫—೬ ವರ್ಷದ ಹುಡುಗಿಯರೂ ಸಹ ತಮ್ಮ ಮನೆ ಬಿಟ್ಟು ಹೊರಗ ಬರುವುದಿಲ್ಲ. ಪ್ರಾಯೇಣ ತುಂಬಾ ಬಡವರಾದ ಹೆಂಗಸರು ಮಟ್ಟಿಗೆ ತಮ್ಮ ಜೀವನೋಪಾಯವನ್ನು ಸಂಪಾದಿಸುವುದಕ್ಕಾಗಿ ಬೀದಿಗಳಲ್ಲಿ ಬರುತ್ತಿರುವರು. ಉಪನ್ಯಾಸಕರು ಕಲ್ಕತ್ತೆಯಲ್ಲಿದ್ದ ಕಾಲದಲ್ಲೆಲ್ಲಾ ಬ್ರಹ್ಮೊ ಅಥವಾ ಕ್ರೈಸ್ತ ಹೆಂಗಸರು ಹೊರತು ಮನೆತನದವರಾದ ಬಂಗಾಳಿ ಹೆಂಗಸರಾರೂ ಹೊರಗೆ ಬಂದುದನ್ನು ತಾವು ನೋಡಲೇ ಇಲ್ಲವೆಂದು ತಿಳಿಸಿದರು. ಗಂಡಸರು ಸ್ವದೇಶವತ್ಸಲರು. ಅವರು ಸ್ವದೇಶದ ಉಡುಪುಗಳನ್ನೇ ಅಂದರೆ ಧೋತರ, ಶಾಲು ಮುಂತಾದುವುಗಳನ್ನೇ ಧರಿಸುವರು. ಪಾಶ್ಚಾತ್ಯರ ನೊಗಸುಗಳನ್ನು ಅನುಸರಿಸುವುದಿಲ್ಲ. ಸಾಧಾರಣವಾಗಿ ಒಬ್ಬರ ಸಂಗಡ ಒಬ್ಬರು ಮಾತನಾಡುವಾಗಲೂ ತಮ್ಮ ಅಂಗಡಿಗಳ ಹೆಸರು ವಿವರಣೆ ಮುಂತಾದುವುಗಳಲ್ಲಿಯೂ ಇಂಗ್ಲಿಷ್ ಭಾಷೆಯನ್ನು ಬಿಟ್ಟು ತಮ್ಮ ಭಾಷೆಯನ್ನೇ ಉಪಯೋಗಿಸುತ್ತಿರುವರು. ಸಾಧಾರಣವಾಗಿ ಅವರು ದಿನದ ಜೀವನಕ್ರಮದಲ್ಲಿಯೂ ಸಹ ಸ್ವದೇಶವಾತ್ಸಲ್ಯವನ್ನೇ ತೋರ್ಪಡಿಸುವರು. ಲಾರ್ಡ ಕರ್ಜನ್‌ರವರು ಬಂಗಾಳ ಪ್ರಾಂತವನ್ನು ವಿಭಾಗ ಮಾಡಿದುದು ಮುಂತಾದ ಇನ್ನೂ ಇತರ ರಾಜಕೀಯ ಆಡಳಿತಗಳಿಂದ ಜನಗಳಿಗೆ ತುಂಬಾ ವಿಷಾದವುಂಟಾಗಿ ಇಂಥ ಉದ್ದಾಮವಾದ ಸ್ವದೇಶಾಭಿಮಾನವು ಹುಟ್ಟಿ ಸ್ವದೇಶೀ ಏರ್ಪಾಡುಗಳಿಗೆ ಅವಕಾಶವಾಗಿರುತ್ತದೆ.

ಕಳೆದ ಕ್ರಿಸ್‌ಮಸ್‌ವಾರದಲ್ಲಿ ಎಲ್ಲಾ ವಿಧವಾದ ಸ್ವದೇಶೀ ಸಂಬಂಧವಾದ ಕಾರ್ಯಗಳೂ ಸಭೆಗಳೂ ನಡೆದುವು. ಆದುದರಿಂದ ಇಂಡಿಯಾ ರಾಜ್ಯದ ಎಲ್ಲಾ ಕಡೆಗಳಿಂದಲೂ ಜನಗಳು ಅಲ್ಲಿಗೆ ಬಂದಿದ್ದರು. ಡಿಶಂಬರು ತಿಂಗಳಲ್ಲಿ ಆಯಾ ಪ್ರಾಂತ್ಯಕ್ಕೆ ಸಂಬಂಧ ಪಡದೆ ಇಂಡಿಯಾ ದೇಶಕ್ಕೆಲ್ಲಾ ಅನ್ವಯಿಸುವ ಸುಮಾರು ೪೦ ಸಮಾಜಗಳ ಪೈಕಿ ಅನೇಕವು ಕಲಕತ್ತೆಯಲ್ಲಿಯೇ ನಡೆದುವು. ಉಪನ್ಯಾಸಕರು ವರ್ಷ ವರ್ಷ ನಡೆಯುವ ಬ್ರಹ್ಮವಿದ್ಯಾ ಮಹಾಸಭೆಗಾಗಿ ಅಲ್ಲಿಗೆ ಹೋಗಿದ್ದರು. ಅಲ್ಲಿ ಅನೇಕ ಜನಗಳ ಮನಸ್ಸಿಗೊಪ್ಪುವ ಇನ್ನೂ ಇತರ ಸಭೆಗಳೂ ಕಾರ್ಯಗಳೂ ನಡೆದುವು. ಅವು ಯಾವುವೆಂದರೆ,— ಸ್ವದೇಶೀಯ ವಿದ್ಯಾಸಮಾಜ, ಮಹಮ್ಮದೀಯ ವಿದ್ಯಾಸಮಾಜ, ಸಂಘಪರಿಷ್ಕರಣ ಮತ್ತು ಸಾಂಘಿಕ ಸೇವಾ ಸಮಾಜಗಳು, ಕೈಗಾರಿಕೆ ಸಭೆ, ಏಕಭಾಷಾಪ್ರಚಾರಕಸಭೆ, ಗೋರಕ್ಷಣ ಸಭೆ, ಹಿಂದೂ ಮಹಿಳಾಸಮಾಜ, ಮಹಮ್ಮದೀಯ ಮಹಾಸಭೆ ಮತ್ತು ಇಂಡಿಯಾ ರಾಷ್ಟ್ರೀಯ ಮಹಾಸಭೆ. ಇವುಗಳೆಲ್ಲವನ್ನೂ ಮತ್ತು ಇವುಗಳ ಉದ್ದೇಶಗಳನ್ನೂ ಸಂಕ್ಷೇಪವಾಗಿ ತಿಳಿಸಿದರು. ಇಂಡಿಯಾ ರಾಷ್ಟ್ರೀಯ ಮಹಾಸಭೆಯೇ ಸ್ವಾಭಾವಿಕವಾಗಿ ಎಲ್ಲಾ ಜನಗಳ ಮನಸ್ಸನ್ನು ಎಳೆದು, ಎಲ್ಲರಲ್ಲಿಯೂ ತುಂಬಾ ಆದರವನ್ನುಂಟು

ಮಾಡಿರುವುದು. ಆ ಸಭೆಗೆ ಬರಬೇಕೆಂದು ಉಪನ್ಯಾಸಕರಿಗೆ ಆಹ್ವಾನ ಪತ್ರಿಕೆಯು ಬಂದುದರಿಂದ ಅವರು ನಿತ್ಯವೂ ಅಲ್ಲಿಗೆ ಹೋಗಿದ್ದರು. ಇಂಡಿಯಾ ದೇಶದ ಮೇಲಿಗಾಗಿ ಆತ್ಮಾರ್ಪಣವನ್ನು ಮಾಡುತ್ತಿರುವ ಸುಪ್ರಸಿದ್ಧರಾದ ಅನಿಬಿಸೆಂಟ್-ಅಮ್ಮನವರು ಈ ಭರತಖಂಡದ ಎಲ್ಲಾ ಪ್ರಾಂತಗಳಿಂದಲೂ ಈ ಮಹಾಸಭೆಯ ಅಧ್ಯಕ್ಷಪದವಿಗೆ ಚುನಾಯಿಸಲ್ಪಟ್ಟಿರುವುದು ಎಲ್ಲರಿಗೂ ತಿಳಿದೇ ಇದೆ. ಕಳೆದ ಡಿಶಂಬರು ೨೪ನೇ ದಿವಸ ಅವರು ಕಲ್ಕತ್ತೆಗೆ ಬಂದ ಕಾಲದಲ್ಲಿ ಅವರನ್ನು ಅಲ್ಲಿಯ ಜನರು ಅಪಾರವಾದ ಉತ್ಸಾಹದೊಡನೆ ಬರಮಾಡಿಕೊಂಡರು. ಮತ್ತು ರೈಲ್ವೆಸ್ಟೇಷನ್‌ನಿಂದ ಅವರು ಇಳಿದುಕೊಳ್ಳಲು ಸಿದ್ಧಪಡಿಸಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗುವಲ್ಲಿ ಬಹು ವಿಜೃಂಭಣೆಯಾದ ಮೆರವಣಿಗೆಯನ್ನು ಉಪನ್ಯಾಸಕರು ವಿವರಿಸಿದರು.

ಆ ನಂತರ ಆ ಮಹಾಸಭೆಯ ವಿವರಣೆಯನ್ನು ಬಹಳ ಸ್ಪಷ್ಟವಾಗಿ ಕೊಟ್ಟರು. ಆ ದೊಡ್ಡ ಹಳದಿ ಡೇರೆ (ಪಟಗೃಹ) ಅದು ಅಷ್ಟು ದೊಡ್ಡದಾಗಿದ್ದರೂ ಮೊದಲನೆಯ ದಿವಸ ಒಳಕ್ಕೆ ಬರಲು ಅಪೇಕ್ಷಿಸಿದ ಜನಗಳೆಲ್ಲರನ್ನೂ ಹಿಡಿಯದೆ ಇದ್ದುದರಿಂದ ಸಾವಿರಾರು ಜನರು ಹೊರಗನಿಂತು ನೋಡಬೇಕಾಗಿ ಬಂತು. ಡೇರೆಯೊಳಗೆ ಅತ್ಯಾತುರದಿಂದ ಕೇಳುತ್ತಿದ್ದ ಜನಸಮೂಹವು ಇವರುಗಳ ಪೈಕಿ ೪೬೦೦ ಜನರು ಇಂಡಿಯ ದೇಶದ ಎಲ್ಲಾ ಭಾಗಗಳಿಂದಲೂ ಬಂದ ಪ್ರತಿನಿಧಿಗಳಾಗಿದ್ದರು. ಅಧ್ಯಕ್ಷರವರ ಆಗಮನವು ಅವರು ಮತ್ತು ಜನಾಭಿಮಾನಕ್ಕೆ ಪಾತ್ರರಾದ ಇತರ ಮುಖ್ಯ ಮುಖ್ಯ ಜನರೂ ಅಲ್ಲಿಗೆ ಬಂದೊಡನೆಯೇ ಉಂಟಾದ ಸಂತೋಷಸೂಚಕವಾದ ಗದ್ದಲವು, ಸಭಾಕೆಲಸವು ಪ್ರಾರಂಭವಾಗುವುದಕ್ಕೆ ಮುಂಚೆ ಹೆಣ್ಣು ಮಕ್ಕಳು ಬಂಗಾಳಿಭಾಷೆಯಲ್ಲಿ ಸ್ವದೇಶೀ ಕೀರ್ತನೆಗಳನ್ನು ಮಾಡಿದುದೂ ಅನಂತರ ಋಷಿಯಂತಿರುವ ರಬೀಂದ್ರನಾಥ ಟಾಗೋರ್ ಎಂಬ ಕವಿಶ್ರೇಷ್ಠನು ಈ ಸಂದರ್ಭಕ್ಕಾಗಿ ಕವನ ಮಾಡಿದ ಇಂಗ್ಲಿಷ್ ಕೀರ್ತನೆಯನ್ನು ಬಹು ಮನೋಹರವಾಗಿ ಹಾಡಿದುದೂ ಆಹ್ವಾನಸಮಾಜದ ಅಧ್ಯಕ್ಷರವರ ಉಪನ್ಯಾಸವೂ, ಶ್ರೀಮತಿ ಬೆಸಂಟ್-ಅಮ್ಮನವರನ್ನು ಶ್ರೀ ಸುರೇಂದ್ರನಾಥ ಬೆನರ್ಜಿಯವರ ಸಲಹೆಯ ಮೇಲೆ ಕಾರ‍್ಯತಹ ಅಧ್ಯಕ್ಷರನ್ನಾಗಿ ನೇಮಿಸಿದುದನ್ನು ಅಲ್ಲಿ ನೆರೆದಿದ್ದವರೆಲ್ಲರೂ ಬಲು ಸಂತೋಷದಿಂದ ಅನುಮೋದಿಸಿದುದೂ ಅಧ್ಯಕ್ಷರವರು ಉಪನ್ಯಾಸವನ್ನು ಕೊಟ್ಟುದೂ (ಈ ಉಪನ್ಯಾಸವನ್ನು ಈಚೆಗೆ ಎಲ್ಲಾ ದೇಶದ ಭಾಷೆಗಳಲ್ಲಿಯೂ ಭಾಷಾಂತರ ಪಡಿಸಿರುತ್ತಾರೆ.) ಇವುಗಳೆಲ್ಲವನ್ನೂ ಉಪನ್ಯಾಸಕರು ಸಭೆಯಲ್ಲಿ ನೆರೆದಿದ್ದವರಿಗೆಲ್ಲಾ ಮನಸ್ಸಿಗೆ ಚೆನ್ನಾಗಿ ನಾಟುವಂತೆ ವಿವರಿಸಿದರು. ಡಿಶಂಬರು ೨೮ನೇ ತಾರೀಖಿನ ದಿವಸ ಮಹಮ್ಮದಲ್ಲಿ ಮತ್ತು ಶೌಕತ್ತಲ್ಲಿ ಎಂಬ ಮಹಮ್ಮದೀಯ ಮುಖಂಡರನ್ನು ಸೆರೆಯಿಂದ ಬಿಡಿಸಬೇಕೆಂದು ತೀರ್ಮಾನ ಮಾಡಿದುದೇ ಮುಖ್ಯ ಕೆಲಸವು. ಇವರ ವೃದ್ಧ ಮಾತೆಯು ಮುಖದ ಮೇಲೆ ಮುಸುಕನ್ನು ಹಾಕಿಕೊಂಡು ವೇದಿಕೆಯಮೇಲೆ ಕೂತಿದ್ದುದರಿಂದ ಈ ವಿಷಯವಾಗಿ ನಡೆದ ಚರ್ಚೆಯು ಅಲ್ಲಿದ್ದವರೆಲ್ಲರ ಮನಸ್ಸು ಕರಗುವಂತಾಯಿತು. ೨೯ನೇ ತಾರೀಖಿನಲ್ಲಿ ಭರತ ಖಂಡದಲ್ಲಿ ಜನಗಳಿಗೆ ಶೀಘ್ರದಲ್ಲಿಯೇ ಸ್ವರಾಜ್ಯವನ್ನು ಕೊಡಬೇಕೆಂದು ತೀರ್ಪುಗಳನ್ನು ಮಾಡಿದರು. ಈ ವಿಷಯವಾಗಿ ಸರೋಜಿನೀ ದೇವಿಯವರೇ ಮುಂತಾದ ಅನೇಕ ಜನಗಳು ಮಾತನಾಡಿದರು ಮತ್ತು ಅವರ, ಏಕನಾಮ ಶೂದ್ರರಾದವರೊಬ್ಬರು ದೇವರ ಮುಂದೆ ಒಬ್ಬ ಭಕ್ತನು ಭಕ್ತಿಯಿಂದ ಪರವಶನಾಗಿ ಕುಣಿಯುವಂತೆ ನಲಿದಾಡುವುದಕ್ಕೆ ಪ್ರಾರಂಭಿಸಿದನು.

ಉಪನ್ಯಾಸಕರಿಗೆ ರಾಜ್ಯಾಡಳಿತ ವಿಚಾರಗಳು ಅಷ್ಟು ತಿಳಿಯದು; ಅವು ಅವರ ಕೆಲಸ ಮತ್ತು ಉದ್ದೇಶಗಳಿಗೆ ಸಂಬಂಧಪಟ್ಟವಲ್ಲ. ಅಲ್ಲಿಯ ಜನಗಳನ್ನೂ ಮತ್ತು ಅದರ ರೀತಿಯನ್ನೂ ತಿಳಿದುಕೊಳ್ಳುವದಕ್ಕೋಸ್ಕರವಾಗಿ ಅವರು ಸಭೆಗಳಿಗೆ ಹೋಗಿದ್ದರು ಮತ್ತು ಮಹಿಳಾ ಸೇವಾಸಮಾಜದ ಕಟ್ಟಡಕ್ಕಾಗಿ ಹಣವನ್ನೂ (ಕಾಸುಗಳಿಂದ ಕರೆನ್ಸಿ ನೋಟುಗಳವರೆಗೂ) ಜತೆಗೂಡಿಸುವುದರಲ್ಲಿ ಸ್ವಲ್ಪ ಸಮಯದೊರಕಿತು. ಆದರೆ, ಅಂಥರಲ್ಲದವರಾರೂ ಅಲ್ಲಿ ಎಲ್ಲಾ ಕಡೆಗಳಲ್ಲಿಯೂ ಕಂಡುಬಂದ ಅಪಾರವಾದ ಆಸಕ್ತಿಯನ್ನೂ ತಿಳಿದುಕೊಳ್ಳದೆ ಇರಲಾರರು. ಮತ್ತು ಅಲ್ಲದ್ದವರಲ್ಲಿ ಪ್ರತಿಯೊಬ್ಬರನ್ನೂ ಆವರಿಸಿದ್ದ ಪರಸ್ಪರ ಮೈತ್ರೀಭಾವ ಮತ್ತು ಕಾರ‍್ಯಾಸಕ್ತಿ ಇವುಗಳಿಂದ ತುಂಬಿತುಳುಕದವರಾರೂ ಇರಲಿಲ್ಲ.

ಭಾರತಭೂಮಿಗೆ ಈಗ ಬಹು ನಾಜೂಕು ಕಾಲವು ಒದಗಿರುವುದು. ಭಾರತೀಯರು ಎಲ್ಲಾ ವಿಷಯಗಳಲ್ಲಿಯೂ ಹೊಸ ಹೊಸ ಅಭಿವೃದ್ಧಿಯನ್ನು ಹೊಂದುತಲಿರುವರು; ಮತ್ತು ತಮ್ಮ ಜೀವಮಾನದ ಬಹುಕಾಲದವರೆಗೆ ನಿಲ್ಲುವಂತಹ ಬದಲಾವಣೆಗಳು ಉಂಟಾಗುವ ಸಂಭವವಿದೆ. ರಾಜಕೀಯ ಕಾರ‍್ಯಕ್ಕಾಗಿ ಇಂಡಿಯಾದೇಶದ ಸೆಕ್ರೆಟರಿ ಆಫ್ ಸ್ಟೇಟ್ ಎಂಬಮಂತ್ರಿವರ‍್ಯರು ಈ ದೇಶಕ್ಕೆ ಬಂದುದು ಇದೇ ಮೊದಲು. ಬ್ರಿಟಿಷ ಸರಕಾರದವರು ಇಂಡಿಯಾ ದೇಶಕ್ಕೆ ಸ್ವರಾಜ್ಯವನ್ನು ಕೊಡಬೇಕೆಂದು ಮೊದಲಿನಿಂದಲೂ ಪ್ರಚಾರ ಪಡಿಸಿರುವ ತಮ್ಮ ಉದ್ದೇಶವನ್ನು ಯಾವರೀತಿಯಲ್ಲಿ ನೆರವೇರಿಸಬೇಕೆಂದು ಖಂಡಿತವಾಗಿ ಗೊತ್ತುಮಾಡುವದಕ್ಕಾಗಿ ಅವರು ಇಂಗ್ಲಂಡದೇಶದಿಂದ ಇಷ್ಟುದೂರ ಪ್ರಯಾಣ ಮಾಡಿದರು. ನಮ್ಮ ಶ್ರೀಮನ್ ಚಕ್ರವರ್ತಿಗಳ ಪ್ರತಿನಿಧಿಯಾದ ನಮ್ಮ ವೈಸ್‌ರಾಯಿಯವರ ಜತೆಯಲ್ಲಿ ಈ ರಾಜ್ಯದ ಜನಗಳ ಅಭಿಲಾಷೆಗ

ಳನ್ನು ಯಾವಯಾವ ಪಂಗಡದ ಜನಗಳು ಎಷ್ಟು ಮಟ್ಟಿಗೆ ತಮ್ಮ ಸ್ವಾತಂತ್ರ್ಯಾಭಿಲಾಷೆಯನ್ನು ಸೂಚಿಸುವರೆಂಬುದನ್ನು ತಾವಾಗಿಯೇ ಸ್ವತಃ ತಿಳಿಯಬೇಕೆಂದು ಒಂದೊಂದು ಪಟ್ಟಣಕ್ಕೂ ಹೋಗಿಬರುತ್ತಿರುವರು. ಇಂಥಾ ಕಾಲದಲ್ಲಿ ಯುದ್ಧಾನಂತರ ಯಾವ ಯಾವ ತಿದ್ದುಪಾಟುಗಳು ಅವಶ್ಯಕವೆಂದು ಊಹಿಸಿ ಮಾಂಟಗ್ಯೂಯವರು ಮತ್ತು ಚೇಲ್ಮ್ಸ್‌ಫರ್ಡ್ ಪ್ರಭುಗಳೂ ಮದರಾಸು ಪಟ್ಟಣಕ್ಕೆ ಬಂದಿದ್ದ ಕಾಲದಲ್ಲಿ ಶ್ರೀಮತಿ ಸರೋಜಿನಿ ದೇವಿಯವರ ಅಧ್ಯಕ್ಷತೆಯಲ್ಲಿ ಸ್ತ್ರೀಪ್ರತಿನಿಧಿ ಸಮಾಜದವರಿಂದ ವಿಜ್ಞಾಪನಾಪತ್ರಿಕೆಯನ್ನೂ ಅಂಗೀಕರಿಸಲು ಒಪ್ಪಿಕೊಂಡರು. ಈ ಸಮಾಜದವರಲ್ಲಿ ಉಪನ್ಯಾಸಕರು ಮತ್ತು ಶ್ರೀಮತಿ ಶ್ರೀರಂಗಮ್ಮ ಬಿ. ಎ. ಯವರು ಸಂಸ್ಥಾನಕ್ಕೆ ಸೇರಿದವರು. ಸ್ತ್ರೀಪ್ರತಿನಿಧಿ ಸಮಾಜದವರು ಆ ಮಂತ್ರಿವರ್ಯರನ್ನೂ ಹೋಗಿ ನೋಡುವುದಕ್ಕೆ ಮಾಡಿದ ಏರ್ಪಾಟುಗಳನ್ನೂ ಮತ್ತು ವಿಜ್ಞಾಪನಾ ಪತ್ರಿಕೆಯಲ್ಲಿ ಬರೆದಿದ್ದ ಅಂಶಗಳನ್ನೂ ವಿವರಿಸಿದರು. ಇವು ಯಾವವೆಂದರೆ, ಭಾರತ ಮಹಿಳೆಯರು ಬ್ರಿಟಿಶ್ ರಾಷ್ಟ್ರದಲ್ಲಿ ನಮ್ಮ ಜನಗಳು ರಾಜಕೀಯ ವಿಚಾರದಲ್ಲಿ ಸ್ವಾತಂತ್ರ್ಯವನ್ನು ಕೊಡಬೇಕೆಂದು ಮೊದಲೇ ಕೇಳಿಕೊಂಡಿರುವದನ್ನು ಅನುಮೋದಿಸಿದರು. ತಾವು ಹೆಂಗಸರೆಂಬ ಕಾರಣದ ಮೇಲೆ ಎಲ್ಲರಿಗೂ ಇರುವ ಸ್ವಾತಂತ್ರ್ಯವನ್ನೂ ಮತ್ತು ರಾಜಕೀಯ ಕೆಲಸ ಕಾರ್ಯಗಳನ್ನು ಹೊಂದಕೂಡದೆಂಬ ನಿರ್ಬಂಧವನ್ನು ನಿವಾರಿಸಿ ಕೊಡಬೇಕು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಾಗಿ ಅನುಕೂಲ್ಯಗಳನ್ನು ಕಲ್ಪಿಸಿಕೊಡಬೇಕು. ಗಂಡುಹುಡುಗರಿಗೂ ಹೆಣ್ಣುಮಕ್ಕಳಿಗೂ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿಸಲೇಬೇಕೆಂದು ಕಟ್ಟುಮಾಡಬೇಕು. ಹೆಂಗಸು ಉಪಾಧ್ಯಾಯರನ್ನು ಇನ್ನೂ ಹೆಚ್ಚಿಸಬೇಕು. ಇದಕ್ಕಾಗಿ ಸರಿಯಾದ ಪಾಠಶಾಲೆಗಳನ್ನು ಏರ್ಪಡಿಸಬೇಕು. ವಿಧವೆಯರು ಶಿಕ್ಷಣ ಹೊಂದುವುದಕ್ಕಾಗಿ ವಿಧವಾ ವಿದ್ಯಾಲಯಗಳನ್ನೂ ಅವರಿಗೆ ವಿದ್ಯಾರ್ಥಿ ವೇತನಗಳನ್ನೂ ಏರ್ಪಡಿಸಬೇಕು. ಸಂಸಾರಮಾಡಿಕೊಂಡಿರುವ ಹೆಂಗಸರಿಗೆ ವಿದ್ಯಾಬುದ್ಧಿಗಳನ್ನು ಕಲಿಸುವದಕ್ಕಾಗಿ ಸ್ಥಾಪಿಸುವ ಸಮಾಜಗಳಿಗೆ ದ್ರವ್ಯಸಹಾಯ ಮುಂತಾದ ಪ್ರೋತ್ಸಾಹಗಳನ್ನು ಕೊಡಬೇಕು. ಮಕ್ಕಳೂ ಮತ್ತ ಪ್ರಸವಕಾಲದಲ್ಲಿ ಹೆಂಗಸರೂ ಈಗ ವಿಶೇಷವಾಗಿ ಮೃತಿ ಹೊಂದುತ್ತಲಿರುವರು. ಇವರುಗಳ ಮರಣ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗಿ ಸುಲಭವಾದ ಶಿಶು ಸಂರಕ್ಷಣ ಮಾಡುವ ಕ್ರಮವನ್ನು ಇನ್ನು ಕಳಿಯುವರಿಗೆ ವಿದ್ಯಾರ್ಥಿವೇತ ಬಗಳನ್ನು ಏರ್ಪಡಿಸ ಬೇಕು ಅದನ್ನು ಕಲಿತುಕೊಂಡವರಿಗೆ ಯೋಗ್ಯತ ಪತ್ರಿಕೆಗಳನ್ನು ಕೊಡಬೇಕುಎಂಬಅಂಶಗಳನ್ನೆಲ್ಲ ವಿಶದ ಪಡಿಸಿದರು

ಇದರಿಂದೆಲ್ಲಾ ತಿಳಿದುಕೊಳ್ಳಬೇಕಾದ ಅಂಶವು ಸ್ಪಷ್ಟವಾಗಿಯೇ ಇದೆ. ನಾವುಗಳೆಲ್ಲರೂ ಖಂಡಿತವಾಗಿಯೂ ಸಾಹಸದಿಂದ ಕೆಲಸಮಾಡಬೇಕು. ಎಷ್ಟುಜನ ಕೆಲಸಮಾಡಿದರೂ ಸಾಲದು. ಒಂದು ಜನಾಂಗಕ್ಕೆ ಪುರುಷರು ಮಟ್ಟಿಗೆ ಇದ್ದರೆ ಸಾಲದು. ಜನಾಂಗದ ಒಂದು ಭಾಗವು ಕೆಲಸಮಾಡಿ ಇನ್ನೊಂದು ಬಾಗವು ಸುಮ್ಮನೆ ಕುಳಿತಿದ್ದರೆ, ಅದಕ್ಕೆ ಕ್ಷೇಮವುಂಟಾಗಲಾರದು. ಆದುದರಿಂದ ಪುರುಷರಂತೆಯೇ ಸ್ತ್ರೀಯರೂ ಸಹ, ಸಾಹಸದಿಂದ ಕೆಲಸಮಾಡಬೇಕು. ಅವರ ಕೆಲಸಕ್ಕೂ ಪ್ರಯಾಸಕ್ಕೂ ಸರಿಯಾದ ಫಲವುಂಟಾಗಬೇಕಾದರೆ, ಮಹಿಳಾಸೇವಾ ಸಮಾಜದ ಕೆಲಸ ಕಾರ್ಯಗಳಂತೆ ಅವುಗಳನ್ನೂ ಕ್ರಮಪಡಿಸಿಕೊಳ್ಳಬೇಕು. ಸಮಾಜದಲ್ಲಿಯೂ ಸಹ ಹೆಣ್ಣುಮಕ್ಕಳಂತೆ ಬೊಂಬೆಗಳೊಡನೆ ಆಟವಾಡತಕ್ಕ ಕಾಲವು ಕಳೆದು ಹೋಗಿರುವುದು. ಆದರಲ್ಲಿ ಉದ್ದೇಶ ಪೂರ್ವಕವಾಗಿಯೂ ಕ್ರಮಪ್ರಕಾರವಾಗಿಯೂ ಕೆಲಸ ಕಾರ್ಯಗಳನ್ನೂ ನೆರವೇರಿಸುತ್ತಲಿದೆ. ಶ್ರೀಮನ್ಮಹಾರಾಜರವರ ಸರಕಾರದವರು ಕೊಟ್ಟಿರುವ ಸಹಾಯಕ್ಕಾಗಿ ತುಂಬಾ ಕೃತಜ್ಞರಾಗಿರಬೇಕು. ಸಮಾಜದ ಕಾರ್ಯಗಳನ್ನು ಇನ್ನೂವಿಸ್ತಾರಪಡಿಸುವದಕ್ಕಾಗಿ ಮೆಂಬರುಗಳ ಆಸಕ್ತಿಯೂ ಸಹಾಯವೂ ಬೇಕಾಗಿರವುದು. ಹಾಲಿಗೋಸ್ಕರ ಹಾಲಿನ ಮಡಿಕೆಯನ್ನು ಕಾಪಾಡಬೇಕೆಂಬ ಗಾಥೆಯಂತೆ ಸಮಾಜದಲ್ಲಿ ನಡೆಯಬೇಕಾದ ಕೆಲಸವನ್ನೇ ಮುಖ್ಯವಾಗಿ ಎಣಿಸಿ ಒಬ್ಬರಲ್ಲಿರುವ ತಪ್ಪುಗಳನ್ನು ಮತ್ತೊಬ್ಬರು ಲಕ್ಷ್ಯಕ್ಕೆತಾರದೆ ಒಬ್ಬೊಬ್ಬರೂ ಸಮಾಜವು ಸ್ಥಿರವಾಗಿ ನಿಂತು ಅದರ ಕೆಲಸವು ಸರಿಯಾಗಿ ನಡೆಯುವಂತೆ ಜವಾಬ್ದಾರಿಯನ್ನು ವಹಿಸಿ ತಮ್ಮ ಕೈಲಾದ ಮಟ್ಟಿಗೆ ಪ್ರೋತ್ಸಾಹವನ್ನೂ ಸಹಾಯವನ್ನೂ ಕೊಡಬೇಕೆಂದು ಸೂಚಿಸಿ ಉಪನ್ಯಾಸನ್ನೂ ಮುಕ್ತಾಯ ಮಾಡಿದನು.

ಶ್ರೀಮತಿ ಪಾರ್ವತಿ ಅಮ್ಮನವರು ಕಲ್ಕತ್ತೆಯಲ್ಲಿ ನಡೆದವೃತ್ತಾಂತವನ್ನು ಮತ್ತು ಆದರಿಂದ ತಿಳಿಯಬೇಕಾದ ಅಂಶಗಳನ್ನು ಅಲ್ಲಿಗೆ ಹೋಗಲು ಅವಕಾಶವಿಲ್ಲದವರ ಉಪಯೋಗಾರ್ಥವಾಗಿ ಬಹಳ ಮನೋಹರವಾಗಿಯೂ ಎಲ್ಲರ ಮನಸ್ಸಿಗೂ ಚನ್ನಾಗಿ ನಾಟುವಂತೆಯೂ ವಿಶದಪಡಿಸಿ ಉಪಕಾರ ಮಾಡಿದುದಕ್ಕಾಗಿ ಅಲ್ಲಿದ್ದವರ ಸಲುವಾಗಿ ಶ್ರೀಮತಿ ವೆಂಗಡಮ್ಮನವರು ಉಪನ್ಯಾಸಕರಿಗೆ ತಮ್ಮ ಕೃತಜ್ಞತೆಯನ್ನು ತಿಳಿಸಿದುದಲ್ಲದೆ ಸಮಾಜದ ಮೂಲಕ ಅವರು ನಡೆಯಿಸುತ್ತಿರುವ ಬಹು ಅಮೂಲ್ಯವಾದ ವಿದ್ಯಾಕಾರ್ಯವನ್ನು ಸೂಚಿಸಿದರು ಮಿ॥ ತ್ಯಾಗರಾಜ ಅಯ್ಯರವರ ಪತ್ನಿಯವರು ಉಪನ್ಯಾಸವನ್ನು ಬಹಳ ಕೊಂಡಾಡಿ, ಅದು ಪ್ರಹ್ಲಾದನು ತನ್ನ ಜನಗಳಿಗೆ ಕೊಟ್ಟ ಬುದ್ಧಿವಾದದಂತೆ ಇರುವುದೆಂದೂ ಮತ್ತು ಉಪನ್ಯಾಸ

ಕರು ಕಲ್ಕತ್ತೆಯಿಂದ ತಂದ ಅಮೂಲ್ಯವಾದ ಈ ಸಂಗತಿಗಳು ತಂದೆ ತಾಯಿಗಳು ಹೇಗೆ ಹಣ್ಣು ಸಕ್ಕರೆಗಳನ್ನು ತಂದು ಮಕ್ಕಳಿಗೆ ಕೊಟ್ಟು ಸಂತೋಷ ಪಡಿಸುವರೋ ಅದರಂತೆ ತಮ್ಮ ಮನಸ್ಸನ್ನು ಬಹು ಸಂತೋಷ ಪಡಿಸುತ್ತವೆಂದೂ ತಿಳಿಸಿದರು. ಆನಂತರ ಸಭೆಯು ಮುಕ್ತಾಯವಾಯಿತು.

ದೇವಿಲೆ.

॥ಕಂದ॥ ಪಲಸೂಳ್ ಕೇಳ್ದವನೆಂ ದೇ
ವಿಲೆಯ ತೆರನನೊರ್ಪರ್ ಕಳದುರ್ ಕಾಡೊಳಗಾಟಂ ।
ದಲೆಯಲ್ ವಿಧಿವಶದಿಂ ಕಾ
ಣಲಾದ ಳೇಕಾಂಗಿ ಯಣುಗೆ ಪೊತ್ತರೆಯೊಳವಳ್ ।೧।
ಕೆಳೆಯರಿಯಳ್ ಪೈತ್ರಿಯುಮಂ
ತಿಳಿಯಳ್ ಮಾನವರ ಮನೆಗಳಿನ್ನಪೆ ಪೇಳೆಂ ।
ಬಳತೆಗೆ ವಂದೊಂದೆಡೆಯೊಳ
ಗೆಳೆಯಳ್ ಬಿತ್ತರದ ದೊಣೆಯ ಸೀಮೆಯೊಳಿರ್ದ್ದಳ್ ॥೨॥
ಪಿರಿದಿಂದಿನಿರುಳ್ ಹಿಮತಮ
ವಿರುಳಕ್ಕುಂ ನೀಂ ಪೊಳಲ್ಗೆ ಪೋಗಲೆವೇಳ್ಕುಂ ।
ಕರದೊಳ್ ದೀವಿಗೆ ವಿಡಿದಂ
ತಿರೆ ನಿಮ್ಮಮ್ಮಂಗೊಡರ್ಚ್ಚೆ ಬೆಳಕಂ ಬಿಮದೊಳ್ ।೩।
ಎನೆ ಪಿತನಾಂ ನಲವಿಂ ಮಾ
ಳ್ಪೆನದಂ ಬಯ್ಗಿನ್ನು ಮಿಲ್ಲ ವಿದೆಕೊಳ್ ಸೂ ।
ರ್ಯನದತ್ತ ಕಂದಿದಾಚಂ
ದ್ರನಿತ್ತ ವಿನಿತೆಂದು ತೋರಿ ಮಗಳೊರೆಯಲೊಡಂ ।೪।
ತೆಗೆದೆತ್ತಿ ದೋಟಿಯಂ-ಪು
ಳ್ಳಿಗಳಂ ತಾಂಕಟ್ಟುಗಟ್ಟಿ ನಡೆದಂ ತನ್ನ ।
ಜ್ಜುಗ ಕತ್ತ ತಂದೆಯುಂ ದೀ
ವಿಗೆಯಂ ದೇವಿಲೆಯು ಮಿರದೆ ಕೈಯ್ಯೊಳೆ ಪಿಡಿದಳ್ ।೫।
ನಡೆನಡೆ ಗೊರ್ಮ್ಮಂಗೆಳ್ಬಿಸ
ಲಡಿಯಿಂದಂ ಮಂಜುವುಡಿಯುನಾಗಸದತ್ತಂ ।
ಬಿಡದುರ್ಮ್ಮೆ ಬೆದರೆ ನಡೆದಳ್
ನಡೆಗೆಟ್ಟರೆ ಬೆಟದೆರಲೆಗಳ್ ಪಲವಾಗಳ್ ॥ ೬ ॥
ಹಿಮ ಮುರ್ಮ್ಮತೆ ಕಾಲಕೆಮು
ನ್ನಮೆ ಬರೆಯುಂ ಪಯಣವಾದಳಿವಳುಂ ಪಲವೆ ।
ಟ್ಟಮನೇರಿದಳಿಳಿತಂದಳ್
ಕೊಮರಿ ಪೊಳಲ್ಗೆಯ್ದಲಿಲ್ಲ ಕಡೆಯೊಳಗೆಂಬರ್ ॥೭॥
ಜನನೀ ಜನಕರ್ ಜೇಯೆನೆ
ಘನಶೋಕದಿನಂದಿನಿರುಳನೆಲ್ಲಂ ಪಲುಬು ।
ತ್ತೆ ನಡೆಯೆ ಬಟ್ಟೆಯ ನರಿಪಲ್
ದನಿಯಿಲ್ಲಂ ಕಣ್ಗೆ ವಂದು ವಿಲ್ಲವದೊಂದುಂ ॥೮॥
ಬೆಳಗಪ್ಪುದರೊಳ್ ತಮ್ಮಯ
ನಿಳಯದ ದೊಣೆಯತ್ತಲಿರ್ದ್ದ ಗುಡ್ಡವನಡರ್ದ್ದ ।
ಗಳೆ ದೊಣೆದಾಂಟುವ ಮರ ನೊಂ
ದಳತೆಗೆ ಪತ್ತೆಯೊಳೆ ಕಾಣಲಾದತ್ತಾದಂ ॥೯॥
ಮನೆಯತ್ತ ತಿರುಗೆ ತಾಂ ಕ
ಣ್ಬನಿಯುಗುತರೆ ಸಗ್ಗಗಲ್ಲಿಯಿಂ ಕೂಡುವೋ ಮೆಂ ।
ದೆನುತುಂ ದಿಟ್ಟಿಸೆ ತಾಯ್ ಮಂ
ಜಿನಲ್ಲಿ ದೇವಿಲೆಯ ಪಜ್ಜೆ ಕಾಣಲಾದತ್ತಾಗಳ್ ॥೧೦॥
ಒಡನಿಳಿದು ಬೆಟ್ಟದಿಂದಂ
ನಡೆತರೆ ಮುಳ್ವೇಲಿವಾಯ್ದ ಕಿರುವಜ್ಜೆಗಳಂ ॥
ಪಿಡಿದಾ ಜನನೀ ಜನಕರ್
ನಡೆತಂದರ್ ನೀಳ್ದ ಕಲ್ಲ ಗೋಡೆಯವರೆಗಂ ॥೧೧॥
ಪೊಲನಂ ಬಳಿಕಂ ಪಿಂದಿ
ಕ್ಕಲೊಡಂ ಮುನ್ನಂತೆ ಪಜ್ಜೆಯಿರ್ದ್ದುವು ಬಿಡದಂ ।
ತೊಲವಿಂ ಪಜ್ಜೆಯ ಬಳಿವಿಡಿ
ಯಲೊಡಂ ತಾಂ ಸೇತುವಲ್ಲಿ ಗೊಡನೆಯ್ತಂದರ್ ।೧೨।
ಅನುವಿಂದಡಿಗಡಿಯಿಪೆ ಮಂ
ಜಿನ ದಡದಿಂ ಪಜ್ಜೆವಜ್ಜೆಯೇರೊಂದು ಮನಂ ।
ತನಿತುಂ ನಡುವಲಗೆ ವರಂ
ಕೊನೆಗಂಡುವು ಬಳಿಕಮತ್ತಲಿಲ್ಲಾಯ್ತೊಂದುಂ ॥೧೩॥
ಕೆಲರಾದೊಡ ಮಿನ್ನುಂ ದೇ
ವಿಲೆ ಜೀವದಿನಿರ್ಪ ಬಾಲೆಯೆಂದುಸಿರ್ವರ್ ಮಂ ।
ಜುಲವನ ದೆಡೆಯೊಳಗಾ ಕೋ
ಮಲೆಯಂ ತಾಂಕಾಣಲಕ್ಕು ಮೆಂಬರ್ ಪಿರಿದುಂ ।೧೪।
ಮೃದುವಕ್ಕೆ ಬೆಟತಕ್ಕಾ
ಪದದೊಳಗಡಿಯಿಡುವಳಾರು ಮರಿಯದವೊಲ್ ಪಾ
ಡಿದಪಳ್ ಸಂಗೀತವನಂ
ತದನನಿಲಂ ಪರ್ಬ್ಬಿಪಂ ಪ್ರತಿಸ್ವರದಿಂದಂ ॥ ೧೫ ॥

ಅತ್ತಾರ್

ವಂಧ್ಯೆಯಾದ ವಿಮಲೆ

"ಹೆಚ್ಚಿಗೆ ವಾದಿಸಬೇಡ! ನಾನು ಸುಖಿಯಾಗಬೇಕೆಂದು ನಿನ್ನ ಇಚ್ಛೆಯಾಗಿದ್ದರೆ, ನೀನು ನನ್ನ ಮಾತನ್ನು ಮನ್ನಿಸಲೇ ಬೇಕು."

(ಆಶ್ಚರ್ಯಚಕಿತನಾಗಿ) "ಅಮ್ಮಾ, ಇದೇನು ಹೇಳುವೆ! ನಿನ್ನ ಸುಖ ಸರ್ವಸ್ವವೆಲ್ಲ ಇದರಲ್ಲಿಯೇ ಇರುವದೊ?"

"ಅಹುದು! ನನ್ನ ಸುಖಸರ್ವಸ್ವವೆಲ್ಲ ಇದರಲ್ಲಿಯೇ ಇರುವದು."

ವಸಂತರಾಯನು ಇಪ್ಪತ್ತೈದು ಇಪ್ಪತ್ತಾರು ವರ್ಷವಯಸ್ಸಿನ ಯುವಕನಾಗಿದ್ದು, ಅವನು ಸುಂದರನೆಂದು ಹೇಳಲು ಪ್ರತ್ಯವಾಯವಿಲ್ಲ. ಪ್ರಚಲಿತವಾದ ಶಿಕ್ಷಣವನ್ನಾದರೂ ಅವನು ಚನ್ನಾಗಿ ಸಂಪಾದಿಸಿದ್ದನು. ಚನ್ನಾಗಿಯೆಂದರೆ, ಅವನು ಮುಂಬಯಿ ವಿಶ್ವವಿದ್ಯಾಲಯದ ಬಿ. ಏ., ಎಲ್. ಎಲ್. ಬಿ. ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿದ್ದನು. ಶಿಷ್ಟ ಸಾಂಪ್ರದಾಯಕ್ಕೆ ಅನುಸರಿಸಿ, ಅವನು ಲೋಕಹಿತದ ಕೆಲವು ಕೆಲಸಗಳನ್ನು ಮಾಡಲು ಪ್ರಸಂಗಾನುಸಾರವಾಗಿ ಮುಂದೆ ಬರುತ್ತಿದ್ದನು. ಕರ್ನಾಟಕ ಭಾಷಾಭಿಮಾನವು ಉಕ್ಕಿ ಹರಿಯುತ್ತಿರುವ ಕಾಲವು ಇದಾಗಿರುವದರಿಂದ, ಸದ್ಯಕ್ಕೆ ನಮ್ಮ ವಸಂತರಾಯನು, ಭಾಷಾಸಾಹಿತ್ಯದ ಸೇವೆಯಲ್ಲಿ ಆದರವನ್ನು ಪ್ರಕಟಗೊಳಿಸಲು ಪ್ರಯತ್ನಿಸುತ್ತಿರುವನು.

ವಸಂತರಾಯನ ಪರಿವಾರವೆಂದರೆ, ವಿಧವೆಯಾದ ಅವನ ಮಾತೆ, ಸಾಧ್ವಿಯಾದ ಅವನ ಪತ್ನಿ, ಹಾಗೂ ಒಬ್ಬ ತಮ್ಮ.

"ನನ್ನ ಸುಖಸರ್ವಸ್ವವೆಲ್ಲ ಇವರಲ್ಲಿಯೇ ಇರುವದು" ಎಂದು, ತಾಯಿಯ ಮುಖದಿಂದ ಹೊರ ಹೊರಟ ವಚನವನ್ನು ಕೇಳಿ, ವಸಂತರಾಯನ ಮುಖವು ವಿವರ್ಣವಾಗಿ, ಅದರ ಮೇಲೆ ಅಪ್ರಸನ್ನತೆಯ ಭಾವವು ಚನ್ನಾಗಿ ಒಡೆದು ತೋರಹತ್ತಿತು. ಆದರೆ, ಅದನ್ನು ವಸಂತರಾಯನು ತತ್ಕ್ಷಣದಲ್ಲಿಯೇ ಮೃದುಹಾಸದಿಂದ ಮರೆಮಾಡಿ, "ಅಮ್ಮಾ, ಇಂತಹ ವಿಚಾರವು ನಿನಗೆ ಉಚಿತವಾದದ್ದಲ್ಲ. ನಿರರ್ಥಕವಾದ ಈ ಸಂಗತಿಯು ನಿನಗೆ ಹೇಗೆ ಸುಖಕರವಾಗಿ ಪರಿಣಮಿಸುವದೋ ನಾನು ಕಾಣೆನು."

"ಇದು, ನಿರರ್ಥಕವಾದ ಸಂಗತಿಯೇ? ನನ್ನ ಸುಖಕ್ಕೂ ನಿನ್ನ ತಂದೆಯ ವಂಶಾಭಿವೃದ್ಧಿಗೂ ಹೆಸರಿಗೂ ಕಾರಣವಾಗಿರುವ ಈ ಮಾತು ನಿರರ್ಥಕವಾದುದಾದ ಮೇಲೆ ಸಾರ್ಥಕವಾದ ಸಂಗತಿಯಾದರೂ ಆವದು?"

ವಸಂತರಾಯ:— (ಹಠಾತ್ತಾಗಿ ನಕ್ಕು) "ಹೆಸರು ! ಮನುಷ್ಯನ ಹೆಸರು, ಈ ಜಗತ್ತಿನಲ್ಲಿ ಚಿರವಾಗಿ ಬಾಳಬೇಕಾದರೆ, ಬೇರೊಂದು ಸಾಧನವಿಲ್ಲವೆ? ಜಗತ್ತಿನಲ್ಲಿ ಇಂದಿಗೆ ಹೆಸರುವಾಸಿಗಳಾದ ಜನರು ಇಂತಹ ಮಾರ್ಗವನ್ನೇ ಅವಲಂಬಿಸಿ, ತಮ್ಮ ಪದವಿಯನ್ನೈದಿರುವರೊ?"

ತಾಯಿ:— "ಅದೇನಾದರೂ ಇರಲಿ; ನಾನು ಸುಖಿಯಾಗಬೇಕೆಂದು ನಿನ್ನ ಇಚ್ಛೆಯಾಗಿದ್ದರೆ, ನೀನು ನನ್ನ ಮಾತನ್ನು ಮನ್ನಿಸಲೇಬೇಕು."

ವಸಂತ:— "ಮನ್ನಿಸಲೇ ಬೇಕಾಗುವದೊ ?"

ತಾಯಿ:— "ಅಹುದು, ಮನ್ನಿಸಲೇ ಬೇಕಾಗುವದು!"

ವಸಂತ:— "ಕದಾಚಿತ್ ಮನ್ನಿಸದೆ ಹೋದರೆ" ?

ತಾಯಿ:— "ನೀನು ನನ್ನ ಹೊಟ್ಟೆಯಿಂದ ಹುಟ್ಟಿದವನಾಗಿದ್ದರೂ, ನೀನು ನನ್ನ ಮಗನಲ್ಲವೆಂದು ಭಾವಿಸುವೆನು."

ವಸಂತ:— "ಅಮ್ಮಾ, ಇಂಥ ಮಾತುಗಳನ್ನಾಡುವ ಸಮಯದಲ್ಲಿ ಅವಳ ವಿಚಾರವೇನಾದರೂ ನಿನ್ನ ತಲೆಯಲ್ಲಿ ಬರುವದೊ!"

ತಾಯಿ:— "ಅವಳು" ಎಂದರೆ ಯಾರು ?

ವಸಂತ:— "ಈಗಿನ ನಿನ್ನ ಸೊಸೆ!"

ತಾಯಿ:— "ಅವಳ ವಿಚಾರವನ್ನು ನಾನು ಮಾಡಿದ್ದೇನೆ, ಹಾಗೂ ಮುಂದೆಯಾದರೂ ಮಾಡುತ್ತಿರುವೆನು. ಮೇಲಾಗಿ ನನ್ನ ನಿಶ್ಚಯದಲ್ಲಿ ಅವಳು ಅಡ್ಡ ಬರಲಾರಳು."

ವಸಂತ:— ಅಮ್ಮಾ, ನಾನು ಸಪತ್ನೀಕನಾಗಿರುವೆನು. ಉಳಿದ ಸಂಗತಿಗಳಲ್ಲಿ ನನ್ನ ಮೇಲೆ ನಿನ್ನ ಅಧಿಕಾರವು ಎಷ್ಟೇ ಪ್ರಬಲವಾಗಿ ನಡೆಯುತ್ತಿದ್ದರೂ, ಈ ಸಂಗತಿಯಲ್ಲಿ ನನ್ನ ಪತ್ನಿಯ ಅಧಿಕಾರವು ಅಬಾಧಿತವಾಗಿದೆ. ಅವಳ ಅಧಿಕಾರವನ್ನು-ನ್ಯಾಯ ನೀತಿ ದೇವತೆಗಳಿಂದ ಪಡೆದ ಅಧಿಕಾರವನ್ನು-ನಾನು ಮುರಿದು ಹಾಕಬೇಕೆ? ಅವಳ ಘಾತವನ್ನು ಮಾಡಲು ನಾನು ಉದ್ಯುಕ್ತನಾಗಬೇಕೆ? ಅಮ್ಮಾ, ಇದನ್ನು ಯೋಚಿಸಿ, ವಿಚಾರಿಸಿ, ನ್ಯಾಯವಾದದ್ದನ್ನು ಆಚರಿಸಲು ನನಗೆ ಅಪ್ಪಣೆಯನ್ನು ಮಾಡು."

ತಾಯಿ:— ನಾನು ಯೋಚಿಸಿದ್ದೇನೆ; ವಿಚಾರಿಸಿದ್ದೇನೆ; ಎಲ್ಲವನ್ನೂ ಮಾಡಿದ್ದೇನೆ. ನನ್ನ ಅಪ್ಪಣೆಯು ನಿನಗೆ ಅನುಲ್ಲಂಘನೀಯವಾಗಿರುವದು.

ವಸಂತ:— "ಅಮ್ಮಾ, ನೀನು ನಿನ್ನ ಮಾತೃತ್ವದ ಹಾಗೂ ನನ್ನ ಪುತ್ರತ್ವದ ಸಂಗತಿಗಳ ಮೂಲಕವಾಗಿ ಅನುಚಿತವಾದ ಲಾಭವನ್ನು ಪಡೆಯಲು ಇಚ್ಛಿಸುತ್ತಿರುವೆ!"

ತಾಯಿ:— "ನನ್ನ ಆಜ್ಞೆಯು ನ್ಯಾಯವಾಗಿರುವದು. ನನ್ನ ಶಬ್ದವನ್ನು ನೀನು ಪಾಲಿಸಲೇ ಬೇಕು."

ವಸಂತ:— (ಕೋಪದಿಂದ) "ನಿನ್ನ ಅಭದ್ರವಾದ ನುಡಿಗಳನ್ನು ಕೇಳಲು ನಾನು ಇಲ್ಲಿ ನಿಲ್ಲುವದೇ ಇಲ್ಲ."!!

× × × × ×

ವಸಂತರಾಯನಿಗೆ ಆಕಾಶ ಪಾತಾಳಗಳು ಒಂದಾದಂತಾದವು. ಅವನ ಮನಸ್ಸು ದ್ವಿವಿಧವಾಯಿತು. ಮಾತೆಯ ಆಜ್ಞೆಯನ್ನು ಪರಿಪಾಲಿಸುವದು ನ್ಯಾಯವಾದದ್ದೆಂದು ಒಮ್ಮೆ ಅವನಿಗೆ ತೋಚಿದರೆ, ಬೇರೊಂದು ಸಮಯದಲ್ಲಿ, ಸರಲೆಯೂ, ಸಹೃದಯಳೂ ಆದ ಅವನ ಪತ್ನಿಯು ಅವನ ಮನೋದೃಷ್ಟಿಯ ಮುಂದೆ ಬಂದು ನಿಲ್ಲುತ್ತಿದ್ದಳು. ವೃದ್ಧಳಾದ ತಾಯಿಯ ಮನಸ್ಸನ್ನು ದು:ಖಿಸುವದು ಪಾಪಕರವಾದದ್ದೆಂಬ ಕಲ್ಪನೆಯು ಅವನ ಮನಸ್ಸಿಗೆ ಗೋಚರವಾದ ಸಮಯದಲ್ಲಿಯೇ ವಿಷಾದಪೂರ್ಣವಾದ ಸ್ತ್ರೀವಿಗ್ರಹವೊಂದು, ಅವನ ದೃಷ್ಟಿಪಥದಲ್ಲಿ ಬಂದು, ಕರುಣಾವ್ಯಂಜಕವಾದ ದೃಷ್ಟಿಯಿಂದ ಅವನನ್ನು ನೋಡಿ, ಒಂದು ಪಾಪದಿಂದ ಮುಕ್ತನಾಗುವದಕ್ಕಾಗಿ, ಬೇರೊಂದು ಪಾಪವನ್ನು ಮಾಡುವದು ಮಹಾ ಪಾಪಕರ' ಎಂಬ ಶಬ್ದಗಳನ್ನು ಅನಾಣೆಯಿಂದ ನುಡಿಯುತ್ತಿತ್ತು. ಇದನ್ನು ನೋಡುವವನಾದ ವಸಂತ ರಾಯನು ರೋಮಾಂಚಿತನಾಗಿ, ಉಚ್ಚಸ್ವರದಿಂದ, "ಕ್ಷಮಿಸು, ವಿಮಲೆ, ಕ್ಷಮಿಸು, ನೀನು ಜೀವಿತಳಾಗಿರುವಾಗಲೇ ನನ್ನಿಂದ ಇಂಥ ಅನ್ಯಾಯವು-ಅಲ್ಲ, ಅಲ್ಲ, ಘೋರತರವಾದ ಪಾಪವು-ಎಂದಿಗೂ ಘಟಿಸಲಿಕ್ಕಿಲ್ಲ.

ವಿರುದ್ಧವಾದ ಕಲ್ಪನೆಗಳ ಹೊಡತದಲ್ಲಿ ಸಿಕ್ಕಿದ ವಸಂತರಾಯನ ಮುಖದಿಂದ ಈ ಮೇಲಿನ ಶಬ್ದಗಳು ಹೊರ ಹೊರಟು ಬಹಳ ಹೊತ್ತು ಆಗಿರಲ್ಲಿ, ಅಷ್ಟರಲ್ಲಿಯೇ, ಅವನು ಕುಳಿತಿದ್ದ, ಕಿರುಮನೆಯ ಬಾಗಿಲು ಮೆಲ್ಲನೆ ತೆರೆಯಲ್ಪಟ್ಟು, ಒಂದು ಸ್ತ್ರೀಮೂರ್ತಿಯು ಅಲ್ಲಿ ಪ್ರವೇಶಮಾಡಿತು.

ಎಂತಹ ಮನೋಹರವಾದ ಸೌಂದರ್ಯವು! ಎಂತಹ ಸರಲವಾದ ವೇಷವು! ಇಂತಹ ಮೂರ್ತಿಯನ್ನು ನೋಡಿದವನಾದ ವಸಂತರಾಯನ ಹೃದಯವು ಆ ಮೂರ್ತಿಯಲ್ಲಿಯೇ ತಲ್ಲೀನವಾಯಿತು. "ಇದನ್ನು, ಈ ಸುಂದರವಾದ ಪುಷ್ಪವನ್ನು, ಇನ್ನೂ ಸಂಪೂರ್ಣವಾಗಿ ವಿಕಾಸವನ್ನು ಹೊಂದದಿರುವ ಈ ಕುಸುಮ-ಕುಡ್ಮಲವನ್ನು ಅಪಮಾನ, ಉಪೇಕ್ಷೆ, ಉದಾಸೀನಗಳಿಂದ ಬಳಲಿಸಿ, ಬಾಡಿಸುವದಕ್ಕೆ ಬೇಕಾಗುವ ಪಾಷಾಣ ಹೃದಯವು ನನ್ನಲ್ಲಿ ನಿಜವಾಗಿ ಇಲ್ಲ.

ಮಂದವಾದ ಹೆಜ್ಜೆಗಳನ್ನಿಡುತ್ತ ವಿಮಲೆಯು ಪತಿಯ ಬಳಿಯಲ್ಲಿ ಬಂದು ಮೃದುಹಾಸದೊಡನೆ, "ಏಕೆ, ಇಂದು ಬಳ್ಳೆ ಧ್ಯಾನಸ್ಥರಾಗಿ ಕುಳಿತಿರುವಿರಿ!"

ವಸಂತರಾಯನು ದೀರ್ಘವಾದ ನಿಶ್ವಾಸವನ್ನು ಬಿಟ್ಟು, "ಧ್ಯಾನವೇತರದು! ವಿಮಲೆ, ನಿಜವಾಗಿ ಹೇಳಬೇಕೆಂದರೆ, ಇಂದು ನನ್ನ ಮನಸ್ಸಿಗೆ ಸಮಾಧಾನವಿಲ್ಲ.,,

ಉದ್ವಿಗ್ನವಾದ ಮನಸ್ಸಿನಿಂದ ಮಾತಾಡುತ್ತಿದ್ದ ಪತಿಯ ಮುಖವನ್ನವಲೋಕಿಸಿ, ವಿಮಲೆಯ ಸಹಾಸ್ಯ ಮುಖವು ಜರ್ರನೆ ಬಾಡಿ ಬತ್ತಿತು. ಕಂಪಿತ ಸ್ವರದಿಂದ, "ಸಮಾಧಾನವಿಲ್ಲದಿರಲು ಕಾರಣವೇನು? ಅಂಥ ಪ್ರಸಂಗ ವಾದರೂ ಅವದು? ನನ್ನನ್ನು ನೋಡಿದ ಹಾಗೆಲ್ಲ ನಿಮ್ಮ ದುಃಖವು ಹೆಚ್ಚಾಗುತ್ತಿರುವದಲ್ಲ!

ವಸಂತ:— ದುಃಖವಂತೂ ನನ್ನ ಹಣೆಯ ಬರಹವಾಗಿದೆ."

ವಿಮಲೆ:— (ಗಾಬರಿಗೊಂಡು) "ಹೀಗೆ ಅಸಂದಿಗ್ಧವಾಗಿ ಮಾತಾಡುವದೇಕೆ? ಇದ್ದದ್ದನ್ನು ನಿವೇದಿಸಲು ಸಂಕೋಚವೆ?"

ವಸಂತ:— ನಿನಗೆ ನಿವೇದಿಸಲು ಸಂಕೋಚವೇತರದು? ಆದರೆ, ನಾನು ಹೇಳಹೋದರೆ, ಅದನ್ನು ಕೇಳಿಕೊಂಡು, ಸಹಿಸುವಷ್ಟುಶಕ್ತಿಯು ನಿನ್ನ ಕೋಮಲವಾದ ಹೃದಯದಲ್ಲಿರುವದೇ?"

ವಿಮಲೆ:— ನನ್ನ ಹೃದಯದೇವನು ನನ್ನ ಸಮೀಪದಲ್ಲಿರಲು, ಎಂಥದೇ ದುರ್ಧರ ಪ್ರಸಂಗವನ್ನಾದರೂ ಸಹಿಸಲು ಈ ಹೃದಯವು ಸಮರ್ಥವಾಗಿದೆ.'

ಈ ಶಬ್ದಗಳು ವಸಂತರಾಯನ ಮರ್ಮಸ್ಥಳವನ್ನು ಗಾಸಿಮಾಡಿದವು. ಅವನು ನಿಟ್ಟುಸಿರುಬಿಟ್ಟು —

ವಸಂತ:— 'ನಿನ್ನ ಪ್ರೇಮವು, ವಿಮಲೆ, ಈ ಮೊದಲು ಅಮೃತದಂತೆ ನಿಷ್ಕಲಂಕವಾಗಿದ್ದ ನಿನ್ನ ಪ್ರೇಮವು......

ವಿಮಲೆ:— (ಚಕಿತಳಾಗಿ) ಏನು? ಏನೆನ್ನುವಿರಿ? 'ಈ ಮೊದಲು ಅಮೃತದಂತೆ ನಿಷ್ಕಲಂಕವಾಗಿದ್ದ ನಿನ್ನ ಪ್ರೇಮವು'... ಈ ವಾಕ್ಯದ ಮುಂದಿನ ಶಬ್ದಗಳು ಸ್ಪಷ್ಟವಾಗಿವೆ. ನಿಷ್ಕಲಂಕವಾಗಿದ್ದ ಪ್ರೇಮವು ದೂಷಿತವಾಗಬೇಕಾದರೆ, ನನ್ನಲ್ಲಿ ಅವದೋಷವು ಸೇರಿರುವದು? ಅಂಥ ದೋಷವನ್ನಾದರೂ ನೀವು ಎಲ್ಲಿ ಕಂಡು ಹಿಡಿದಿರುವಿರಿ? ಆ ದೋಷವು ಈ ಶರೀರದಲ್ಲಿದ್ದರೆ, ಶರೀರವನ್ನೇ ತ್ಯಾಗ ಮಾಡುವೆನು. ಕಣ್ಣುಗಳಲ್ಲಿ ಕಂಡು ಬಂದಿದ್ದರೆ, ಅವುಗಳನ್ನು ಕಿತ್ತಿಹಾಕುವೆನು; ಹೃದಯದಲ್ಲಿ ಗೋಚರವಾಗಿದ್ದರೆ, ಅದನ್ನು ಛಿಂದಿಭಿಂದಿಯಾಗಿ ಮಾಡುವೆನು. ಮಾತಾಡು, ನನ್ನ ಹೃದಯಾಧಾರನೆ, ಮಾ—ತಾಡು !

ವಿಮಲೆಯು ಬಹು ಅಧೀರಳಾದಳು. ಇದನ್ನು ನೋಡಿದವನಾದ ವಸಂತರಾಯನು ಗಾಬರಿಗೊಂಡು, ಅವಿಚಾರದಿಂದ ಮಾತಾಡಿದ್ದಕ್ಕಾಗಿ ಪಶ್ಚಾತ್ತಾಪಗೊಂಡು,—'ವಿಮಲೆ, ಈಶ್ವರಸಾಕ್ಷಿಯಾಗಿ ನಿನ್ನಲ್ಲಿ ಯಾವ ದೋಷವೂ ಇಲ್ಲ."

ವಿಮಲೆ:— ನಿಮ್ಮ ದೃಷ್ಟಿಯಿಂದ ನಾನು ದೋಷರಹಿತಳಾಗಿದ್ದರೆ, ತಮ್ಮ ಮನಸ್ಸು ಉದ್ವಿಗ್ನವಾಗಲು ಕಾರಣವೇನು!

ವಸಂತ:— ವಿಮಲೆ, ನಿಜವಾಗಿ ಹೇಳಬೇಕೆಂದರೆ, ನನ್ನ ಪ್ರೇಮದಲ್ಲಿಯೇ ಭಂಗವುಂಟಾಗಹತ್ತಿದೆ. ಪ್ರೇಮವಿಘಾತಕವಾದ ಬೀಜಗಳು ನನ್ನ ಹೃದಯದಲ್ಲಿ ಅಂಕುರಿಸಹತ್ತಿರುವವು!

ಈ ಶಬ್ದಗಳನ್ನು ಕೇಳಿದವಳಾದ ವಿಮಲೆಯ ಮತಿಯು ಕುಂಠಿತವಾಯಿತು; ಜಗತ್ತೆಲ್ಲ ಶೂನ್ಯವಾದಂತೆ ಅವಳಿಗೆ ಭಾಸವಾಗಹತ್ತಿತು. ಆದರೂ ತನ್ನ ಸ್ವಭಾವಸಿದ್ಧವಾದ ಧೈರ್ಯವನ್ನೆಲ್ಲ ಏಕೀಕರಿಸಿಕೊಂಡು, “ಪ್ರಾಣಾಧಿಕರೆ, ನಿಮ್ಮ ಪ್ರೇಮದಲ್ಲಿ ನಾನು ಇಂದಿನವರೆಗೆ ಯಾವ ದೋಷವನ್ನೂ ನೋಡಿಲ್ಲ. ನಿಮ್ಮ ಪ್ರೇಮವು ಕಲಂಕಯುತವಾಗಿರುವದೊ ಕಲಂಕರಹಿತವಾಗಿರುವದೊ ಎಂಬದನ್ನು ನೋಡುವದು ನನ್ನ ಕಾರ್ಯವಾಗಿದೆ. ಆದರೂ ನನ್ನ ವಿಷಯಕವಾಗಿ ನಿಮ್ಮ ಹೃದಯದಲ್ಲಿ ಯಾವಬಗೆಯ ಪ್ರೇಮವು ವಾಸಿಸಿರುತ್ತದೆಂಬದನ್ನು ಪರೀಕ್ಷಿಸುವದಾಗಿದ್ದರೆ, ಅದನ್ನು ನನ್ನ ಕಣ್ಣುಗಳಿಂದ ನೋಡಿರಿ; ನನ್ನ ಹೃದಯದಿಂದ ಪರೀಕ್ಷಿಸಿರಿ! ಅದಿರಲಿ, ಈ ವಿಚಾರವೆಲ್ಲ ಇಂದೇಕೆ?

ವಸಂತ:— ನಿಜವಾಗಿ ಹೇಳಲಿಯಾ?

ವಿಮಲೆ:— ತಮ್ಮ ಇಚ್ಛೆ!

ವಸಂತ:— ಹಾಗಾದರೆ ವಿಮಲೆ, ನಿನ್ನ ಕೋಮಲವಾದ ಹೃದಯವನ್ನು ಶಿಲೆಯಂತೆ ಗಟ್ಟಿಯಾಗಿ ಮಾಡು! ನಾನು ಇನ್ನೊಂದು ವಿವಾಹವನ್ನು ಮಾಡಿಕೊಳ್ಳಬೇಕೆಂದು ತಾಯಿಯು ನನ್ನನ್ನು ಬಲಪಡಿಸಹತ್ತಿರುವಳು!

ಈ ಶಬ್ದಗಳು ವಿಮಲೆಯ ಹೃದಯವನ್ನು ಭೇದಿಸಲು ಸಮರ್ಥವಾಗಿ, ಅದರ ಛಾಯೆಯು ಅವಳ ಮುಖದಮೇಲೆ ಪ್ರತಿಬಿಂಬಿಸುವದೆಂದು ವಸಂತರಾಯನು ಕಲ್ಪಿಸಿ, ಅವಳ ಮೋರೆಯನ್ನು ನೋಡಹತ್ತಿದನು. ಆದರೆ, ಅವಳ ಮುಖದಲ್ಲಿ ಯಾವ ವಿವರ್ಣವೂ ಕಂಡುಬರಲಿಲ್ಲ. ವಿಮಲೆಯ ಚಿತ್ತವು ಪರ್ವತದಂತೆ ಅಚಲವಾಗಿಯೂ ಸಮುದ್ರದಂತೆ ಗಂಭೀರವಾಗಿಯೂ ಇದ್ದಿತು.

ವಿಮಲೆ:— ಇನ್ನೊಂದು ವಿವಾಹವನ್ನು ಮಾಡಿಕೊಳ್ಳಲು ಕಾರಣವೇನು?

ವಸಂತ:— ನೀನು ವಂಧ್ಯೆಯಾಗಿರುವೆ; ನಿನ್ನಲ್ಲಿ ಸಂತಾನೋತ್ಪತ್ತಿಯು ಅಸಂಭವವಾಗಿರುವದೆಂದು ತಾಯಿಯ ಕಲ್ಪನೆಯಾಗಿರುವದು.

ಈಗ್ಗೆ ಮಾತ್ರ ವಿಮಲೆಯ ಮುಖವು ಬಾಡಿ ಬತ್ತಿಯಾಯಿತು. ಕಾಲುಗಳಲ್ಲಿ ಅಸ್ಥಿರತೆಯುಂಟಾಯಿತು. ಸಮೀಪದಲ್ಲಿಯೇ ಇದ್ದ ಮೇಜಿನ (ಟೇಬಲ್) ಆಶ್ರಯವನ್ನು ಹೊಂದಿ, ಬಿಚ್ಚಿ ಸೀಳುವದೋ ಎಂಬಂತೆ ಹಾರುತ್ತಿರುವ ಎದೆಯ ಮೇಲೆ ಕೈಯಿಟ್ಟುಕೊಂಡು— “ಇಂತಹ ಕ್ಷುಲ್ಲಕವಾದ ಮಾತಿಗಾಗಿ ಇಷ್ಟು ದುಃಖಿಸುವದೇಕೆ? ನಿಮ್ಮ ತಾಯಿಯನ್ನು ಸಂತೋಷಪಡಿಸುವದಕ್ಕಾಗಿ ಇನ್ನೊಂದು ವಿವಾಹವನ್ನೇ ಮಾಡಿಕೊಳ್ಳುವದು ಅವಶ್ಯವಾಗಿದ್ದರೆ, ನನ್ನ ವಿಷಯಕವಾಗಿ ಸಂಕೋಚಪಡದೆ ನಿರ್ಭೀತಿಯಿಂದ ಮಾಡಿಕೊಳ್ಳಬಹುದು. ನನ್ನಲ್ಲಿ ಸಂತಾನೋತ್ಪತ್ತಿಯಾಗುವದು ಅಸಂಭವನಾಗದಿದ್ದರೂ ಕಠಿಣವಾಗಿದೆಂಬದನ್ನು ನಾನು ಬಲ್ಲೆನು. ಆದರೂ ಪರಮಾತ್ಮನು ದಯಾಸಾಗರನಾಗಿರುವನು; ಅವನು ಕರುಣಾಪೂರ್ಣವಾದ ದೃಷ್ಟಿಯಿಂದ ನೋಡಿದರೆ, ಆವಮಾತಿಗೆ ವಿಲಂಬವಾಗುವದು! ಮೇಲಾಗಿ ನಮ್ಮ ಉಭಯತರ ವಯಸ್ಸಾದರೂ ಎಷ್ಟಾಗಿರುವದು? ನಾನು ಇಪ್ಪತ್ತುವರ್ಷದವಳು; ನೀವು ಇಪ್ಪತ್ತೈದು ವರ್ಷದವರು! ಇದರಮೇಲೂ ನಿಮ್ಮ ತಾಯಿಯ ಇಚ್ಛೆಯಾಗಿದ್ದರೆ, ನಿಮ್ಮ ದ್ವಿತೀಯ ವಿವಾಹವೇ ಅವರ ಸುಖಕ್ಕೆ ಕಾರಣವಾಗಿದ್ದರೆ, ತಾವು ಇನ್ನೊಂದು ಮದುವೆಯನ್ನು ಮಾಡಿಕೊಳ್ಳಬೇಕೆಂದು ನಾನು ಅಂತಃಕರುಣಪೂರ್ವಕವಾಗಿ ಹೇಳುವೆನು.

ವಿಮಲೆಯು ಈ ರೀತಿಯಾಗಿ ಮಾತಾಡುತ್ತಿದ್ದರೂ ಅವಳ ಹೃದಯದ ಅಂತಃಸ್ಥಿತಿಯು ಯಾವಬಗೆಯಾಗಿತ್ತೆಂಬದನ್ನು ದೇವರೇ ಬಲ್ಲ! ಅವಳ ಮುಖವು ಕೆಂಪೇರಿ, ಕಣ್ಣುಗಳಿಂದ ಕಂಬನಿಗಳು ಸುರಿಯಹತ್ತಿದವು. ಕಿರುಮನೆಯಲ್ಲಿ ಪ್ರಕಾಶವು ಅಂಧಕವಾಗಿರುವದರಿಂದ ವಿಮಲೆಯ ಮುಖದ ಮೇಲಿನ ದೈನ್ಯಾವಸ್ಥೆಯು ವಸಂತರಾಯನ ಕಣ್ಣಿಗೆ ಗೋಚರವಾಗಲಿಲ್ಲ.

ವಸಂತ:— ನಾನು ಪುನಶ್ಚ ವಿವಾಹಿತನಾಗದೆ ಹೋದರೆ?

ವಿಮಲೆ:— ನಿಮ್ಮ ಸುಖಶಾಂತಿಗಳ ಜೊತೆಯಲ್ಲಿ ನನ್ನ ಸುಖಶಾಂತಿಗಳ ನಷ್ಟತೆಗಾದರೂ ನೀವೇ ಕಾರಣವಾಗುವಿರೆಂದು ನಾನು ಭಾವಿಸುವೆನು.

ವಸಂತ:— ವಿಮಲೆ ನೀನು ಏನು ಮಾತಾಡುತ್ತಿರುವೆ ಎಂಬದನ್ನು ಚೆನ್ನಾಗಿ ವಿಚಾರಿಸು! ಸರಲವಾದ ನಿನ್ನ ಹೃದಯವು ಇಂತಹ ಆಪತ್ತಿಯನ್ನು ಸಹಿಸುವದೆಂತು ?

ವಿಮಲೆ:— ಜೀವಾಧಾರರಾದ ತಾವು ನನ್ನ ಕಣ್ಣು ಮುಂದೆ ಇರಲು, ನಾನು ಯಾವದೇ ಸಂಕಟವನ್ನು ಸಹಿಸಲು ಸಮರ್ಥಳಾಗಿರುವೆನೆಂಬದನ್ನು ನಾನು ಈ ಮೊದಲೇ ಹೇಳಿಲ್ಲವೆ!

ವಸಂತ:— ಅಂತಹ ಮನೋಬಲವು ನಿನ್ನಲ್ಲಿ ಉಂಟಾಗದೆ ಹೋದರೆ?

ವಿಮಲೆ:— ತಮ್ಮ ಮುಖ ಚಂದ್ರಪ್ರಕಾಶದ ಸುಖಕರವಾದ ಛಾಯೆಯಲ್ಲಿ ಕೂಡ ಸಂಕಟಗಳ ತಾಪವನ್ನು ಸಹಿಸು

ಪದು ಅಸಾಧ್ಯವಾದರೆ, ನಾನು ಈ ಹೇಯವಾದ ಶರೀರವನ್ನೇ ತ್ಯಾಗಮಾಡುವೆನು! ಅಥವಾ ನಾನು ಈ ರೀತಿಯಾಗಿ ಮರಣ ಹೊಂದಲು ಇಚ್ಛಿಸುವದಿಲ್ಲ! ನಾನು ಈ ಸಮಯದಲ್ಲಿ ಸಂಕಲ್ಪಿಸಿದ ವ್ರತವು— ತೊಟ್ಟಿರುವ ಪ್ರತಿಜ್ಞೆಯು— ಕೊನೆಗಾಣುವ ವರೆಗೆ ನಾನು ನನ್ನ ದೇಹವನ್ನು ಬಿಡಲಾರೆನು!

ವಸಂತ:— ವಿಮಲೆ, ಅದಾವ ವ್ರತವು?

ವಿಮಲೆ:— ಅದನ್ನು ನಿವೇದಿಸಲು ಈಗ್ಗೆ ಅವಶ್ಯಕತೆಯು ತೋರುವದಿಲ್ಲ. ಪ್ರಸಂಗಾನುಸಾರವಾಗಿ ಅದು ತಮಗೆ ವಿದಿತವಾಗುವದು.

ವಸಂತ:— (ಉತ್ತೇಜಿತನಾಗಿ) ವಿಮಲೆ, ನೀನು ಇರಲು, ಬೇರೊಂದು ವಿವಾಹವನ್ನು ಮಾಡಿಕೊಳ್ಳುವ ಪಾಪವು ನನ್ನಿಂದ ಘಟಿಸದು!

ವಿಮಲೆ:— ಅದು ಪಾಪವಾಗಿದ್ದರಲ್ಲವೇ ಈ ಮಾತು?

ವಸಂತ:— ಅದು ಹೇಗೆ ಪಾಪವಲ್ಲ!

ವಿಮಲೆ:— ನಾನು ಅನುಮತಿಸುತ್ತಿರಲು, ನಿಮ್ಮ ತಾಯಿಯವರು ಇಚ್ಛಿಸುತ್ತಿರಲು, ಹಾಗೂ ನಿಮ್ಮ ಮನೋದಯವಾಗಿರಲು, ಪಾಪವೆಂತು?

ವಸಂತ:— ನಾನು ಬೇರೆಯವಳ ಕೈ ಹಿಡಿಯಬೇಕೆಂದು ನಿನ್ನ ಇಚ್ಛೆಯಾಗಿರುವದೋ?

ವಿಮಲೆ:— ಅವಶ್ಯವಾಗಿ.

ವಸಂತ:— ನಿನ್ನ ಮಾತಿನಲ್ಲಿ ನನಗೆ ವಿಶ್ವಾಸವಿಲ್ಲ.

ವಿಮಲೆ:— ಅವಿಶ್ವಾಸಕ್ಕೆ ಕಾರಣವಾವದು?

ವಸಂತ:— ನೀನು ಹೇಳುತ್ತಿರುವದು, ನಿನ್ನ ಸೌಜನ್ಯವಲ್ಲದೆ, ಪತಿಯ ವಿಷಯಕವಾಗಿ ಸ್ತ್ರೀಯರಲ್ಲಿ ಕಂಡು ಬರುವ ಸಹಜಜನ್ಯವಾದ ಅತ್ಯಾಗ್ರಹವಲ್ಲದೆ, ನಿನ್ನ ಸ್ವಸಂತೋಷದ ಮಾತಾಗಿಲ್ಲ. ಇರಲಿ; ಪುನಶ್ಚ ವಿವಾಹಿತನಾಗುವದು ನನ್ನ ಇಚ್ಛೆಯೇ ಆಗಿಲ್ಲ!

ವಿಮಲೆ:— (ಮೃದುಹಾಸದಿಂದ) ಕ್ರಮೇಣ ನಿಮ್ಮ ಇಚ್ಛೆಯಾಗುವದು.

ವಸಂತ:— (ಈರ್ಷೆಯಿಂದ) ನಾನು ಪ್ರತಿಜ್ಞೆಯನ್ನು ಮಾಡುವೆನು!

ವಿಮಲೆ:— ಅಂತಹ ಸಾಹಸವನ್ನು ಮಾಡಬಾರದು!

ವಸಂತ:— ನಾನು ಮೂಢನೆಂದು ನಿನ್ನ ಭಾವವೋ? ನೀನು ನನ್ನನ್ನು ಸಾಹಸಹೀನನನ್ನಾಗಿ ಮಾಡಲು ಪ್ರಯತ್ನಿಸುತ್ತಿರುವೆ!

ವಿಮಲೆ:— ನಾನು ನಿಮ್ಮನ್ನು ಸಾಹಸಹೀನರನ್ನಾಗಿ ಮಾಡಲು ಇಚ್ಛಿಸುವದಿಲ್ಲ. ಆದರೆ—

ವಸಂತ:— ಆದರೆ, ಏನು?

ವಿಮಲೆ:— ಈ ಜಗತ್ತಿನಲ್ಲಿ ಯಾವನೂ ಸಾಹಸಹೀನನಾಗಿಲ್ಲ, ಅಥವಾ ಸಾಹಸಿಯಾಗಿಲ್ಲ. ಯಾವನಾದರೂ ಸಾಹಸಿಯಾಗಬೇಕಾದರೆ, ಅಥವಾ ಸಾಹಸಹೀನನಾಗಬೇಕಾದರೆ, ಪ್ರಸಂಗವಿಶೇಷವು ಕಾರಣವಾಗಿದೆ. ಮನುಷ್ಯನನ್ನು ನೋಡಿದ ಕೂಡಲೆ ಓಡಿ ಹೋಗುವ ಬೆಕ್ಕು ದುರ್ಗಮವಾದ ಸ್ಥಾನದಲ್ಲಿ ಮನುಷ್ಯನಿಗೆ ಎದಿರಾಗಿ ನಿಲ್ಲುತ್ತದೆ. ಸಾಹಸಪೂರ್ಣವಾದ ಸಿಂಹವು ಮನುಷ್ಯನ ಕೈಯಲ್ಲಿ ಸಿಕ್ಕಿತೆಂದರೆ, ಸಾಹಸಹೀನವಾಗುತ್ತದೆ!

ವಸಂತ:— ಇದರಲ್ಲಿ ನಿನ್ನ ವಾಕ್‌ಪಟುತೆಯೇ ಕಂಡು ಬರುತ್ತದಲ್ಲದೆ, ಸಾರವೇನೂ ಕಂಡು ಬರುವದಿಲ್ಲ.

ವಿಮಲೆ:— ಸಾಕು; ಹೆಚ್ಚಿನ ವಿಚಾರವು ಬೇಡ. ಕಾಲವು ಎಲ್ಲವನ್ನೂ ನಿರ್ಣಯಿಸುವದು.

ವಸಂತರಾಯನು ಸುಶಿಕ್ಷಿತನಾಗಿದ್ದರೂ ಜ್ಞಾನಿಯಾಗಿದ್ದರೂ ದುಃಖ, ಚಿಂತೆ, ಕರ್ತವ್ಯ-ಮೂಢತೆ ಇವುಗಳ ಮೂಲಕವಾಗಿ ಈ ಸಮಯದಲ್ಲಿ ಅವನ ಅವಸ್ಥೆಯು ಅಜ್ಞಾನಾದ ಬಾಲಕನಂತಾಗಿತ್ತು. ಇದಕ್ಕೆ ಪ್ರತಿಕೂಲವಾಗಿ ವಿಮಲೆಯ ಚಿತ್ತವು ಶಾಂತವೂ ಕರ್ತವ್ಯಾಭಿಮುಖವೂ ಆಗಿತ್ತು. ವಿಮಲೆಗೆ ಅವಳ ಭವಿಷ್ಯವು ತಿಳಿದು ಹೋಗಿತ್ತು. ಅದನ್ನು ಸ್ವಾಗತಿಸಲು ತನ್ನ ಮನಸ್ಸನ್ನಾದರೂ ಅವಳು ದೃಢಪಡಿಸಿದ್ದಳು.

ವಿಮಲೆ:— "ಚಿತ್ತದಲ್ಲಿ ವ್ಯಾಕುಲತೆಯನ್ನು ಉಂಟು ಮಾಡಿಕೊಳ್ಳಬೇಡಿರಿ. ನನ್ನ ವಿಷಯಕವಾಗಿ ನಿಮ್ಮ ಮನಸ್ಸಿನಲ್ಲಿ ಪ್ರೇಮದ ಬಿಂದು ಮಾತ್ರ ಇರುವದಾಗಿದ್ದರೆ, ನಿಮಗೂ ನಿಮ್ಮ ಮಾತೆಗೂ ಸುಖಶಾಂತಿಗಳು ದೊರೆಯುವಹಾಗೆ ಆಚರಿಸಬೇಕು." ಹೀಗೆ ಹೇಳುತ್ತ ವಿಮಲೆಯು ಅಲ್ಲಿಂದ ಹೊರಬಿದ್ದು ನಡೆದಳು.

× × × × ×

ಈ ಮೇಲೆ ಹೇಳಿದ ಸಂಗತಿಗಳು ಸಂಭವಿಸಿ ಇಂದಿಗೆ ಒಂದು ತಿಂಗಳು ಆಗಿರಬಹುದು. ವಸಂತರಾಯನು ಎರಡನೆಯ ವಿವಾಹವನ್ನು ಮಾಡಿಕೊಂಡಿರುವನು. ಹೊಸ ಸೊಸೆಯನ್ನು ಸಂಪಾದಿಸಿದವಳಾದ ವಸಂತರಾಯನ ಮಾತೆಯ ಆನಂದಕ್ಕೆ ಮರ್ಯಾದೆಯಿಲ್ಲ. ಹಗಲಿರುಳು ಸೊಸೆಯ ಸೇವೆಯಲ್ಲಿಯೇ ಅತ್ತೆಯು ಮಗ್ನಳಾಗಿರುವಳು. ವಸಂತರಾಯನು ಮಾತ್ರ ಪ್ರಥಮದಲ್ಲಿ ಉದಾಸೀನನೂ ಅನ್ಯಮನಸ್ಕನೂ ಆಗಿದ್ದರೂ ನವಯೌವನೆಯಾದ ನೂತನ ಪತ್ನಿಯ ಪ್ರೇಮಪಾಶದ ಬಂಧನವು ಬಿಗಿಯಾಗಹತ್ತಿದಂತೆ, ಅವನಾದರೂ ಕ್ರಮೇಣ ಅವಳ ಅಧೀನನಾಗಹತ್ತಿದನು.

ವಿಮಲೆಯ ಸ್ಥಿತಿಯು ಯಾವ ಬಗೆಯದಾಗಿರುವದೆಂದು ವಾಚಕರು ಕೇಳಬಹುದು! ಅದನ್ನು ವರ್ಣಿಸುವದು ಮಾತ್ರ ನಮ್ಮ ಈ ಲೇಖಿನಿಗೆ ಅಶಕ್ಯವಾಗಿದೆ. ಅವಳು ತ್ಯಾಗದ ಪ್ರತ್ಯಕ್ಷವಾದ ಮೂರ್ತಿಯೇ ಆಗಿದ್ದಳು. ಪತಿಸಪತ್ನಿಯರ ಸೇವೆಯನ್ನು ಮಾಡುವದೇ ಅವಳ ಮುಖ್ಯವಾದ ಕರ್ತವ್ಯವಾಗಿತ್ತು. ಇದನ್ನು ನೆರವೇರಿಸಿ ಮಿಕ್ಕಿದವೇಳೆಯಲ್ಲಿ ಅವಳು ಒಂದು ಕಿರುಮನೆಯಲ್ಲಿ ಕುಳಿತುಕೊಂಡು, ತನ್ನ ಹತದೈವವನ್ನು ಕುರಿತು ಆಕಾಶ ಪಾತಾಳವೊಂದಾಗುವಂತೆ ಶೋಚಿಸುತ್ತಿದ್ದಳು. ಒಮ್ಮೊಮ್ಮೆ ಅವಳ ಮುಖದಿಂದ ಹೊರಬೀಳುತ್ತಿದ್ದ ಶಬ್ದಗಳೆಂದರೆ, "ದೇವರೆ, ಸ್ತ್ರೀಧರ್ಮವನ್ನು ಆಚರಿಸಿ, ನಾನು ನಿನ್ನ ಪ್ರೀತಿಗೆ ಪಾತ್ರಳಾಗಿದ್ದರೆ ಹಾಗೂ ನೀನು ಭಕ್ತಪರಾಧೀನನಾಗಿದ್ದರೆ, ನನ್ನ ಪ್ರತಿಜ್ಞೆಯನ್ನು, ನನ್ನ ವ್ರತವನ್ನು, ಕೊನೆಗಾಣಿಸು"!

ದಿನಗಳು ಗತಿಸಿ ಹೋದಹಾಗೆಲ್ಲ, ವಿಮಲೆಯ ಪ್ರಕೃತಿಯು ಅಸ್ವಸ್ಥವಾಗಿ, ಅವಳ ಶರೀರವು ಕೃಶವಾಗಹತ್ತಿತು. ಸುವರ್ಣದಂತೆ ಗೌರವರ್ಣದಿಂದ ಪ್ರಕಾಶಿಸುತ್ತಿದ್ದ ಅವಳ ದೇಹಕಾಂತಿಯು ಪಾಂಡುರತೆಯನ್ನೈದಿತು.

ವಿಮಲೆಯ ಕೂಡ ಒಂದೆರಡು ಔಪಚಾರಿಕ ಮಾತುಗಳನ್ನಾದರೂ ಆಡಲು ವಸಂತರಾಯನಿಗೆ ಬೇಸರ ಉಂಟಾಗಹತ್ತಿತು. ಕ್ವಚಿತ್ ಪ್ರಸಂಗಗಳಲ್ಲಿ ಉಭಯತರ ಸಂದರ್ಶನವಾದರೆ, "ವಿಮಲೆ, ಸುಖಿಯಾಗಿರುವಿಯಾ!" ಎಂದು ಮಾತ್ರ ಕೇಳಿದ ವಸಂತರಾಯನ ಪ್ರಶ್ನಕ್ಕೆ "ತಾವು ಸುಖಿಯಾಗಿರುವದನ್ನು ನೋಡಿ, ನಾನಾದರೂ ಸುಖಿಯಾಗಿಯೇ ಇರುವೆನು" ಎಂದಿಷ್ಟೇ ಅವಳು ಉತ್ತರವನ್ನು ಕೊಡುವಳು.

ಇಂತಹಸ್ಥಿತಿಯಲ್ಲಿ ಮತ್ತೆ ಒಂದು ತಿಂಗಳು ಗತಿಸಿ ಹೋಯಿತು. ಒಂದುದಿನ ವಿಮಲೆಯು ಅತ್ತೆಯ ಬಳಿಗೆ ಹೋಗಿ, "ಮಾತೆಯವರೆ, ನನ್ನ ತಾಯಿಯನ್ನು ಕಾಣಲು ನನ್ನ ಮನಸ್ಸು ಎಳೆಯಹತ್ತಿದೆ."

"ಹೋಗಬಹುದು! ನೀನು ಹೋಗಬೇಕೆಂದರೆ, ನಾನೇನು ಅಡ್ಡ ಬರುವೆನೆ? ನಿನ್ನ ಅಣ್ಣನಿಗೆ ಪತ್ರವನ್ನು ಬರೆದು ಅವನನ್ನು ಬರಮಾಡಿಕೊಳ್ಳು; ಅವನು ನಿನ್ನನ್ನು ಕರೆದುಕೊಂಡು ಹೋಗುವನು."

ಪ್ರೇಮರಹಿತವಾದ ಈ ವಚನವನ್ನು ಕೇಳಿ ವಿಮಲೆಯ ಹೃದಯದಲ್ಲಿ ತಣ್ಣೀರು ಸುರುವಿದಂತಾಯಿತು. ಇನ್ನು ಪತಿಯ ಆಜ್ಞೆಯೊಂದನ್ನು ಕೇಳಬೇಕೆಂದು ಅವಳು ಯೋಚಿಸಿದಳು. ಆದರೆ, ಪತಿಯ ದರ್ಶನವು ಅಷ್ಟು ಸುಲಭಸಾಧ್ಯವಾಗಿದ್ದಿಲ್ಲ. ಒಂದು ವಾರದವರೆಗೆ ಪ್ರಯತ್ನಪಟ್ಟ ಬಳಿಕ ಒಂದು ದಿನ ಪತಿಪತ್ನಿಯರ ಸಂದರ್ಶನವಾಯಿತು. ವಾಡಿಕೆಯಂತೆ ವಸಂತರಾಯನು, "ವಿಮಲೆ, ಕ್ಷೇಮವಷ್ಟೇ" ಎಂದು ಕೇಳಿದ್ದಕ್ಕೆ ವಿಮಲೆಯು—"ಕ್ಷೇಮ; ತಮ್ಮಿಂದ ಒಂದು ಅನುಗ್ರಹವನ್ನು ಪಡೆಯಲು ಇಚ್ಛಿಸುತ್ತಿರುವೆನು"

ವಸಂತ:— ಶೀಘ್ರವಾಗಿ ನಿವೇದಿಸು. ಅತ್ಯವಶ್ಯಕವಾದ ಒಂದು ಕೆಲಸಕ್ಕಾಗಿ ನನಗೆ ಹೊರಗೆ ಹೋಗಬೇಕಾಗಿದೆ.

ವಿಮಲೆ:— ತಮ್ಮ ಆಜ್ಞೆಯಾದರೆ, ತಾಯಿಯಮನೆಗೆ ಹೋಗಲು ಇಚ್ಛಿಸುತ್ತೇನೆ.

ವಸಂತರಾಯನಿಗೆ ವಿಮಲೆಯು ದೂರಾಗುವದೇ ಬೇಕಾಗಿತ್ತು. ಅನಾಯಾಸವಾಗಿ ದೊರೆತ ಸುಸಂಧಿಯನ್ನು ನೋಡಿ, "ಒಳ್ಳೆ ಯೋಚನೆ. ಕೆಲವು ದಿವಸಗಳವರೆಗೆ ಹೋಗಿ ಬರಬಹುದು! ಸದ್ಯಕ್ಕೆ ನಿನ್ನ ಪ್ರಕೃತಿಯಾದರೂ ಅಸ್ವಸ್ಥವಾಗಿರುವದು. ತವರಮನೆಗೆ ಹೋಗುವದರಿಂದ ನಿನಗೆ ಸ್ವಲ್ಪ ವಿರಾಮ ದೊರೆದಂತಾಗುವದು" ಇಷ್ಟು ಮಾತಾಡಿ ವಸಂತರಾಯನು ಹೊರಟಿದ್ದು ಹೋದನು.

ವಿಮಲೆಯು ತನ್ನ ಪತಿಯ ಭಾವವನ್ನು ಕಂಡುಹಿಡಿದಳು. ಅವಳ ಅಂತಃಕರಣದಿಂದ ಒಂದು ಹೃದಯವಿದಾರಕವಾದ ಕರುಣಾಪೂರ್ಣಧ್ವನಿಯೂ ಕಣ್ಣುಗಳಿಂದ ಉಷ್ಣವಾದ ಅಶ್ರುಧಾರೆಗಳೂ ಹೊರಬಿದ್ದವು.

× × × × ×

ವಿಮಲೆಯು ತವರ್ಮನೆಯಲ್ಲಿ ಇರಹತ್ತಿ ಇಂದಿಗೆ ಆರು ತಿಂಗಳಗಳಾದವು. ವಸಂತರಾಯನಿಗಾಗಲಿ, ಅವನ ತಾಯಿಗಾಗಲಿ ಅವಳ ನೆನವು ಇಲ್ಲದಂತಾಗಹತ್ತಿತು.

ನೂತನಪತ್ನಿಯ ಸಮಾಗಮದಲ್ಲಿ ವಸಂತರಾಯನು ಒಳ್ಳೆ ಆನಂದದಿಂದ ಕಾಲಕ್ಷೇಪವನ್ನು ಮಾಡುತ್ತಿರಲು, ಅವಳು ರೋಗದಿಂದ ಗ್ರಸ್ತಳಾದ ಚಿಹ್ನಗಳು ತೋರಹತ್ತಿದವು. ರೋಗವೇನು ಅಂತಹ ಅಸಾಧ್ಯವಾದದ್ದಾಗಲಿ, ಅಥವಾ ಕಷ್ಟಕರವಾದದ್ದಾಗಲಿ, ಆಗಿದ್ದಿಲ್ಲ. ಹೊಟ್ಟೆಯಲ್ಲಿ ಶೂಲೆ ಹಾಗೂ ಅನ್ನಪಚನವಾಗದಿರೋಣ, ಇವೇ ರೋಗದ ಮುಖ್ಯವಾದ ಭಾವನೆಗಳಾಗಿದ್ದವು. ಇದರಿಂದ ವಸಂತರಾಯನೂ ಅವನ ತಾಯಿಯೂ ಬಹುದುಃಖಿತರಾದರು. ವೈದ್ಯನ ಔಷಧೋಪಚಾರಗಳು ನಡೆದವು. ಆದರೂ ಗುಣವೇನೂ ಕಂಡುಬರಲಿಲ್ಲ.

ಕೊನೆಯಲ್ಲಿ ವಸಂತರಾಯನು ಪ್ರಖ್ಯಾತನಾದ ಒರ್ವ ಡಾಕ್ಟರನ ಉಪಚಾರದಲ್ಲಿ ನವಪತ್ನಿಯನ್ನು ಇಟ್ಟನು. ರೋಗಿಣಿಯನ್ನು ನೋಡಿ ಡಾಕ್ಟರನು ಚಿಕಿತ್ಸೆಯನ್ನಾದರೂ ಆರಂಭಿಸಿದನು. ಕೆಲವು ದಿವಸಗಳಲ್ಲಿ ಅವಳಿಗೆ ಗುಣಮುಖವಾದರೂ ಆಗಹತ್ತಿತು. ಒಂದುದಿವಸ ಡಾಕ್ಟರನೂ ವಸಂತರಾಯನೂ ಮಾತಾಡುತ್ತ ಕುಳಿತಿರಲು, 'ಇವಳು ನನ್ನ

ದ್ವಿತೀಯ ಪತ್ನಿ'ಯೆಂದು ವಸಂತರಾಯನು ಡಾಕ್ಟರನಿಗೆ ಹೇಳಿದನು. ಓರ್ವಸ್ತ್ರೀಯಿರಲು ಅವಳಮೇಲೆ ಬೇರೊಬ್ಬಳನ್ನು ಮದುವೆಯಾಗುವ ಕಾರಣವನ್ನಾದರೂ ಅವನು ನಿವೇದಿಸಿದನು. ಕೇವಲ ಸಂತಾನೋತ್ಪಾದನಕ್ಕಾಗಿ ದ್ವಿತೀಯ ವಿವಾಹವನ್ನು ಮಾಡಿಕೊಂಡಿರುವೆನೆಂದು ವಸಂತರಾಯನು ಹೇಳಲು, ಡಾಕ್ಟರನು ದೀರ್ಘವಾದುದೊಂದು ನಿಃಶ್ವಾಸವನ್ನು ಬಿಟ್ಟು, "ಮಹಾಶಯನೆ, ಮಾನವಹೃದಯವು ಬಹು ನಿರ್ಬಲವಾದುದು. ಸ್ವಾರ್ಥದಮುಂದೆ ಅದಕ್ಕೆ ಸಾರಾಸಾರ ವಿಚಾರವಾದರೂ ಇಲ್ಲದಂತಾಗುತ್ತದೆ. ಸ್ವಂತದ ಹಾನಿಲಾಭಗಳ ವಿಚಾರವಾದರೂ ಅದಕ್ಕೆ ಉಳಿಯುವದಿಲ್ಲ.

ಇದನ್ನು ಕೇಳಿದವನಾದ ವಸಂತರಾಯನು ವಿಸ್ಮಿತನಾಗಿ, "ನಿಮ್ಮ ಮಾತಿನ ಇತ್ಯರ್ಥವು ನನಗೆ ಹೊಳೆಯಲೊಲ್ಲದು." ಡಾಕ್ಟರನು ಗಂಭೀರನಾಗಿ—"ಮಹಾಶಯನೆ, ನೀನು ಬಹು ಅವಿಚಾರದ ಕೆಲಸವನ್ನು ಮಾಡಿರುವೆ. ನಿನ್ನ ಈ ದ್ವಿತೀಯ ಪತ್ನಿಯು ವಂಧ್ಯೆಯಾಗಿರುವಳು. ಮೃತನು ಸಜೀವನಾಗುವದು ಅಸಂಭವವಾಗಿರುವಂತೆ, ಇವಳಿಗೆ ಸಂತಾನವಾಗುವದು ಅಸಂಭವವಾಗಿದೆ.

ಇದನ್ನು ಕೇಳಿದ ವಸಂತರಾಯನು ಸಿಡಿಲು ಬಡಿದಂತೆ ಭೂಮಿಗೆ ಬಿದ್ದನು.

× × × × ×

"ರಾಯರೆ, ಈಪತ್ರವನ್ನು ತೆಗದು ಕೊಳ್ಳಬೇಕು" ಎಂದು ಸೇವಕನೋರ್ವನು ವಸಂತರಾಯನ ಕೈಯಲ್ಲಿ ಒಂದು ಪತ್ರವನ್ನು ತಂದು ಕೊಟ್ಟನು. ವಸಂತರಾಯನಿಗೆ ಅದರಿಂದ ಕೆಳಗಿನ ಅಭಿಪ್ರಾಯವು ವಿದಿತವಾಯಿತು. '

"ಮಹಾಶಯ,

ನನ್ನ ಭಗಿನಿಯು ತೊಟ್ಟಿದ್ದ ಪ್ರತಿಜ್ಞೆಯು- ಸಂಕಲ್ಪಿಸಿದ ವ್ರತವು- ಈ ದಿನ ಫಲಿಸಿತು! ವಂಧ್ಯೆ ಎಂಬ ಕಲಂಕವು ತನಗೆ ತಗಲಬಾರದೆಂಬದೇ ಅವಳ ವ್ರತವಾಗಿತ್ತು. ಪರಮಾತ್ಮನು ಅವಳ ಕಲಂಕವನ್ನು ದೂರಮಾಡಿರುವನು. ಈ ದಿವಸ ಪ್ರಾತಃಕಾಲದಲ್ಲಿ ಅವಳು ಪುತ್ರವತಿಯಾದಳು. ಮಗು ಕ್ಷೇಮವಾಗಿರುವದು. ಆದರೆ, ಅದರ ತಾಯಿಯಾದ ವಿಮಲೆಯು ಪ್ರಸೂತೆಯಾದ ನಂತರ ಒಂದು ಪ್ರಹರದಲ್ಲಿಯೇ ಈ ನಿಸ್ಸಾರವಾದ ಸಂಸಾರವನ್ನು ಬಿಟ್ಟು ಅಮರಲೋಕಕ್ಕೆ ತೆರಳಿದಳೆಂಬದನ್ನು ತಿಳಿಸಲು ನನಗೆ ಅತ್ಯಂತ ಶೋಕವಾಗುತ್ತದೆ. ಪರಮಾತ್ಮನು ಅವಳ ಆತ್ಮೆಗೆ ಶಾಂತಿಯನ್ನು ನೀಡಲಿ."

ವಸಂತರಾಯನ ಕೈಯಲ್ಲಿದ್ದ ಪತ್ರವು ನೆಲಕ್ಕೆ ಬಿದ್ದಿತು. "ವಿಮಲೆ, ನನ್ನ ನಿರ್ದಯವೇ ನಿನ್ನ ಮರಣಕ್ಕೆ ಕಾರಣವಾಯಿತಲ್ಲ!" ಎಂಬ ಅಕ್ಷರಗಳು ಮಾತ್ರ ಅವನ ಬಾಯಿಂದ ಹೊರ ಹೊರಟವು. ಉತ್ತರಕ್ಷಣದಲ್ಲಿಯೇ ಅವನು ಮೂರ್ಛಿತನಾಗಿ ಬಿದ್ದನು.

ಶ್ರೀಮಾನ್ ಬಂಕಿಮಚಂದ್ರ ಚತರ್ಜಿ, ಸಿ. ಆಯ್. ಈ.

ಬಂಗಾಲದಲ್ಲಿ, ತನ್ನ ಪವಿತ್ರವಾದ ಉದಕದಿಂದ ಭಾವಿಕರಾದ ಅಸಂಖ್ಯಾತ ಜನರನ್ನು ಉದ್ಧರಿಸಲು ಭೂಮಿಗೆ ಇಳಿದು ಬಂದಿರುವ ಜಾಹ್ನವೀನದಿಯ ತೀರದಲ್ಲಿ ಕಾಟೌಲಪಾಡಾ ಎಂಬದೊಂದು ಗ್ರಾಮವಿರುವದು. ಈ ಸ್ಥಳದಲ್ಲಿ ೧೮೩೮ನೆ ಇಸ್ವಿಯ ಜೂನ ತಿಂಗಳಿನ ೨೭ನೆಯ ತಾರೀಖಿನ ದಿವಸ ಆದರ್ಶ ಸಾಹಿತ್ಯಸೇವಕನೂ, ದುರ್ಗೇಶನಂದಿನಿ, ಚಂದ್ರಶೇಖರ ಮೊದಲಾದ ಗ್ರಂಥರತ್ನಗಳ ಲೇಖಕನೂ ಆದ ಬಂಕಿಮಚಂದ್ರನು ಜನ್ಮವನ್ನೆತ್ತಿದನು. ಬಂಕಿಮಚಂದ್ರನ ತಂದೆಯಾದ ಯಾದವಚಂದ್ರ ಚಟ್ಟೋಪಾಧ್ಯಾಯ ಎಂಬವನು, ಪ್ರತಿಭಾಶಾಲಿಯೂ ತೇಜಸ್ವಿಯೂ ಉದಾರನೂ ಆದ ಪುರುಷನಾಗಿದ್ದನು. ಇವನು ಬಹು ದಿನಗಳವರೆಗೆ ಡೆಪ್ಯುಟಿ ಕಲೆಕ್ಟರನಾಗಿದ್ದು, ಕೊನೆಯಲ್ಲಿ ಪೆನಸೆನ್ ಪಡೆದು ಸುಖದಿಂದ ಕಾಲಕ್ರಮಣವನ್ನು ಮಾಡುತ್ತಿದ್ದನು.

ಬಾಲ್ಯದಲ್ಲಿ ಬಂಕಿಮಚಂದ್ರನ ಶರೀರ ಪ್ರಕೃತಿಯು ಅಶಕ್ತವಾಗಿದ್ದರೂ ಇವನ ಬುದ್ಧಿಯು ಬಹುತೀಕ್ಷ್ಣವಾಗಿದ್ದಿತು. ಬಂಕಿಮನು ತನ್ನ ವಯಸ್ಸಿನ ಐದನೆಯ ವರ್ಷದಿಂದ ಮೇದಿನಿಪುರಜಿಲ್ಲಾ ಶಾಲೆಯಲ್ಲಿ ತನ್ನ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿದನು. ಬಾಲಕ ಬಂಕಿಮನು ಒಂದೇ ಒಂದು ದಿವಸದಲ್ಲಿ ವರ್ಣಮಾಲೆಯನ್ನೆಲ್ಲ ಕಲಿತುಕೊಂಡನು. ಶಾಲೆಯಲ್ಲಿ ಇವನ ಅಸಾಧಾರಣವಾದ ಪ್ರತಿಭೆಯನ್ನೂ ವಿದ್ಯಾನುಶೀಲನಪ್ರವೃತ್ತಿಯನ್ನೂ ನೋಡಿ ಶಿಕ್ಷಕರು ಬಹು ಆಶ್ಚರ್ಯಪಡುತ್ತಿದ್ದರು.

ಬಂಕಿಮನಿಗೆ ಹನ್ನೆರಡು ವರ್ಷಗಳಾಗಲು, ಅವನು ಹುಗಲೀ ಕಾಲೇಜವನ್ನು ಪ್ರವೇಶಿಸಿದನು. ವರ್ಗದಲ್ಲಿ ಇವನು ಯಾವಾಗಲೂ ಮೊದಲನೆಯ ಸ್ಥಾನವನ್ನೇ ಸಂಪಾದಿಸಿಕೊಂಡಿರುತ್ತಿದ್ದನು. ಛಾತ್ರಾವಸ್ಥೆಯಲ್ಲಿರುವಾಗ ಕೂಡ ಬಂಕಿಮನಿಗೆ ಜ್ಞಾನಪಿಪಾಸೆಯು ಅತಿ ಬಲವತ್ತರವಾಗಿದ್ದರಿಂದ ಅವನಿಗೆ ವಿದ್ಯಾಲಯದಲ್ಲಿಯ ಪಾಠ್ಯ ಪುಸ್ತಕಗಳಿಂದ ತೃಪ್ತಿಯಾಗುತ್ತಿದ್ದಿಲ್ಲ. ವಿದ್ಯಾಲಯಕ್ಕೆ ಸೇರಿದ ಗ್ರಂಥಸಂಗ್ರಹಾಲಯದಿಂದ ಭಿನ್ನ ಭಿನ್ನ ವಿಷಯಗಳನ್ನು ಪ್ರತಿಪಾದಿಸುವ ಪುಸ್ತಕಗಳನ್ನು ತಂದು ಅವುಗಳನ್ನು ಮನನಪೂರ್ವಕವಾಗಿ ಓದುವದು ಬಂಕಿಮನ ನಿತ್ಯಕ್ರಮವಾಗಿತ್ತು. ಪರೀಕ್ಷೆಯ ದಿವಸಗಳು ಸಮೀಪಿಸಿದವೆಂದರೆ ಮಾತ್ರ, ಪರೀಕ್ಷೆಗೆ ನಿಯಮಿತವಾದ ಪುಸ್ತಕಗಳನ್ನು ಅವನು ಓದುತ್ತಿದ್ದನು. ಕಾಲೇಜಿನ ಸೀನಿಯರ್ ಸ್ಕಾಲರಶಿಪ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಬಳಿಕ, ಬಂಕಿಮನು ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕಾಯದೆಯ (Law) ಅಭ್ಯಾಸವನ್ನು ಮಾಡಲು ಪ್ರಾರಂಭಿಸಿದನು. ಆದರೆ, ಇದೇ ಸಮಯದಲ್ಲಿ ಅಂದರೆ, ೧೮೫೮ನೆಯ ಇಸ್ವಿಯಲ್ಲಿ ಬಿ. ಎ ಪರೀಕ್ಷೆಯ ಪ್ರತಿಷ್ಠಾಪನೆಯಾದದರಿಂದ ಬಂಕಿಮನು ಆ ಪರೀಕ್ಷೆಗಾಗಿ ಸಿದ್ಧತೆಯನ್ನು ನಡಿಸಿದನು ಎರಡು ತಿಂಗಳುಗಳ ಪರಿಶ್ರಮದಿಂದ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ, ಯಶಸ್ವಿಗಳಾದ ವಿದ್ಯಾರ್ಥಿಗಳಲ್ಲಿ ಅವನು ಪ್ರಥಮ ಸ್ಥಾನವನ್ನು ಸಂಪಾದಿಸಿದನು. ಬಂಕಿಮಚಂದ್ರನ ಬುದ್ಧಿಸಂಪನ್ನತೆಯನ್ನೂ ಶೀಲವನ್ನೂ ನೋಡಿ ಆಗಿನಕಾಲಕ್ಕೆ ಬಂಗಾಲದಲ್ಲಿ ಲೆಫ್ಟಿನೆಂಟ್ ಗವ್ಹರನರರಾಗಿದ್ದ ಮಿ. ಹಾಲಿಡೇ ಎಂಬವರು ಅವನನ್ನು ಡೆಪ್ಯುಟಿ ಕಲೆಕ್ಟರ ಪದಕ್ಕೆ ನಿಯುಕ್ತಮಾಡಿದರು.

ಬಂಕಿಮಚಂದ್ರನು ವಿದ್ಯಾರ್ಥಿಯಾಗಿರುವಾಗಿನಿಂದಲೇ ಅವನ ಹೃದಯದಲ್ಲಿ ಸಾಹಿತ್ಯ ಸೇವೆಯ ಪವಿತ್ರಭಾವವು ಅಂಕುರಿತವಾಗಿತ್ತು. ಈ ಭಾವನೆಯಿಂದಲೇ ಪ್ರೇರಿತನಾಗಿ ಅವನು ಆ ಕಾಲಕ್ಕೆ ಬಂಗಾಲದಲ್ಲಿ ಸುಪ್ರಸಿದ್ಧವಾಗಿದ್ದ "ಸಂವಾದ ಪ್ರಭಾಕರ" ಹಾಗೂ "ಸಾಧುರಂಜನ" ಎಂಬ ಪತ್ರಿಕೆಗಳಲ್ಲಿ ತನ್ನ ಕವಿತೆಗಳನ್ನೂ ಲೇಖಗಳನ್ನೂ ಪ್ರಸಿದ್ಧಪಡಿಸುತ್ತಿದ್ದನು. ಲೋಕೋಪಕಾರಕವೂ ಪವಿತ್ರವೂ ಆದ ಸಂಪಾದಕೀಯ ಕಾರ್ಯವನ್ನು ವಹಿಸುವದು ಬಂಕಿಮನ ಉತ್ಕಟವಾದ ಇಚ್ಛೆಯಾಗಿತ್ತು. ಆದರೆ, ಅನಾಯಾಸವಾಗಿ ತನಗೆ ಪ್ರಾಪ್ತವಾಗಿದ್ದ ಸರಕಾರೀ ಅಧಿಕಾರದ ಉಚ್ಚಪದವಿಯನ್ನು ಬಿಟ್ಟುಕೊಡುವದು ಅವನಿಗೆ ರುಚಿಸಲಿಲ್ಲ. ಬಂಕಿಮನು ಕೇವಲ ಇಪ್ಪತ್ತು ವರ್ಷದವನಾಗಿರುವಾಗಲೇ ಕರ್ಮಕ್ಷೇತ್ರದಲ್ಲಿ ಕಾಲವನ್ನೂರಿದನು. ಈಗಿನ ಕಾಲದಲ್ಲಿ ಪರೀಕ್ಷೆಯ ಉಪಾಧಿಯು ಬೆನ್ನು ಬಿಟ್ಟಿತೆಂದರೆ, ವಿದ್ಯಾರ್ಥಿಗಳ ಕೈಯೊಳಗಿನ ಪುಸ್ತಕಗಳು ಕಳಚಿ ಬೀಳುವಂತೆ, ಬಂಕಿಮನ ಕೈಯೊಳಗಿನ ಪುಸ್ತಕಗಳು ಗಲಿತವಾಗಲಿಲ್ಲ. ಬಂಕಿಮನು ರಾಜಸೇವೆಯನ್ನು ವಹಿಸಿದ್ದರೂ ಜ್ಞಾನವನ್ನು ಸಂಪಾದಿಸುವ ಅವನ ನಿತ್ಯದ ಕ್ರಮವು ಅಭಂಗವಾಗಿದ್ದಿತು. ಜ್ಞಾನ ಜಿಜ್ಞಾಸೆಯು ಅವನಲ್ಲಿ ದಿನದಿನಕ್ಕೆ ಬೆಳೆಯುತ್ತಲೇ ಹೋಯಿತು. ಸರಕಾರೀ ಕೆಲಸವನ್ನು ಮಾಡಿ, ಉಳಿದ ಸಮಯವನ್ನೆಲ್ಲ ಅವನು ಸಾಹಿತ್ಯಸೇವೆಯಲ್ಲಿಯೇ ಕಳೆಯುತ್ತಿದ್ದನು. ಬಂಕಿ

ಮನ ಶಿಕ್ಷಣವು ಇಂಗ್ರೇಜಿ ವಿದ್ಯಾಲಯಗಳಲ್ಲಿ ಇಂಗ್ರೇಜೀ ಪದ್ಧತಿಯಿಂದಲೇ ಆಗಿದ್ದರೂ ಅವನಿಗೆ ಸಂಸ್ಕೃತವಾಙ್ಮಯದಲ್ಲಿ ಪ್ರೇಮಪೂರ್ವಕವಾದ ಅಭಿರುಚಿಯಿದ್ದಿತು.

ಯಶೋಹರ ಎಂಬ ಪಟ್ಟಣದಲ್ಲಿ ಇವನು ಮ್ಯಾಜಿಸ್ಟ್ರೇಟನಾಗಿರುವಾಗ ಇವನಿಗೆ ಬಂಗಾಲದ ಪ್ರಸಿದ್ಧ ನಾಟಕಕಾರನಾದ ಬಾಬೂ ದೀನಬಂಧು ಎಂಬವನ ಪರಿಚಯವಾಯಿತು. ಕ್ರಮೇಣ ಸಜ್ಜನರಾದ ಈ ಉಭಯತರಲ್ಲಿ ದೃಢವಾದ ಸ್ನೇಹವು ಉಂಟಾಗಿ, ಈ ಸ್ನೇಹವು ಅಮರಣದವರೆಗೆ ನ್ಯೂನರಹಿತವಾಗಿ ಇದ್ದಿತು. ಬಂಕಿಮಚಂದ್ರನು ತನ್ನ ಮೃಣಾಲಿನಿ ಎಂಬ ಗ್ರಂಥವನ್ನು ದೀನಬಂಧು ಬಾಬುಗಳವರಿಗೆ ಪ್ರೇಮೋಪಹಾರನೆಂದು ಸಮರ್ಪಿಸಿರುವನು.

ಬಂಕಿಮನು ಹನ್ನೆರಡು ವರ್ಷದವನಿರುವಾಗಲೇ ಇವನ ಪ್ರಥಮ ವಿವಾಹವಾಯಿತು. ಆದರೆ, ಮುಂದೆ ಐದಾರು ವರ್ಷಗಳಲ್ಲಿಯೇ ಇವನ ಪತ್ನಿಯ ದೇಹಾಂತವಾದುದರಿಂದ, ಇವನು ತನ್ನ ವಯಸ್ಸಿನ ೨೧ನೆಯ ವರ್ಷದಲ್ಲಿ ರೂಪಲಾವಣ್ಯಗಳಿಂದ ಯುಕ್ತಳಾದ ಓರ್ವ ವಿದುಷಿಯನ್ನು ಮದುವೆಯಾದನು. ಈ ದಂಪತಿಗಳಲ್ಲಿ ಪ್ರೇಮವು ದೃಢವಾಗಿ ನೆಲೆಗೊಂಡಿತ್ತು. ಈ ದ್ವಿತೀಯ ಪತ್ನಿಯು ತನ್ನ ಪತಿಯನ್ನು ನೀತಿಗುರು- ಧರ್ಮಗುರು ಎಂದು ಭಾವಿಸುತ್ತಿದ್ದಳು. ಸುಶಿಕ್ಷಿತೆಯಾದ ಈ ಪತ್ನಿಯ ಸಹವಾಸದಿಂದ ಬಂಕಿಮಚಂದ್ರನು ಸ್ತ್ರೀಜಾತಿಯ ಭಕ್ತನಾದನೆಂಬದು ಅವನ ಗ್ರಂಥಗಳ ಅವಲೋಕನದಿಂದ ಕಂಡುಬರುತ್ತದೆ. ಒಂದು ಎಡೆಯಲ್ಲಿ ಬಂಕಿಮಚಂದ್ರನು ಸ್ತ್ರೀಯರನ್ನುದ್ದೇಶಿಸಿ ಬರೆದಿರುವದೇನಂದರೆ— ಸ್ತ್ರೀಯು ಕ್ಷಮಾಮಯಿಯೂ ದಯಾಮಯಿಯೂ, ಸ್ನೇಹಮಯಿಯೂ ಸಾಕ್ಷಾತ್ ದೇವೀಸ್ವರೂಪಿಣಿಯೂ ಆಗಿರುವಳು.

ಬಂಕಿಮಚಂದ್ರನು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿ, ಗ್ರಂಥಗಳನ್ನು ಬರೆಯುವ ಕಾರ್ಯವನ್ನು ಆರಂಭಿಸಿದ ಸಮಯವು ಅವನ ಕಾರ್ಯಕ್ಕೆ ಅತ್ಯಂತ ಪ್ರತಿಕೂಲವಾಗಿದಿತ್ತು. ಪಾಶ್ಚಾತ್ಯ ಶಿಕ್ಷಣವೇ ಉತ್ತಮವಾದ ಶಿಕ್ಷಣ, ಪಾಶ್ಚಾತ್ಯ ಆಚಾರವಿಚಾರಗಳೇ ಸುಸಂಸ್ಕೃತವಾದ ಆಚಾರ ವಿಚಾರಗಳು, ಪಾಶ್ಚಾತ್ಯಭಾಷೆಯೇ ಮನೋಭಾವ ವಿಚಾರಗಳನ್ನು ಸಂಪೂರ್ಣವಾಗಿ ವ್ಯಕ್ತ ಪಡಿಸಲು ಸಮರ್ಥವಾದ ಭಾಷೆ, ಹೀಗೆ ಜನರ ಭಾವನೆಯಾಗಿ, ಸರ್ವ ಕ್ರಿಯೆಗಳಲ್ಲಿ ಪಾಶ್ಚಾತ್ಯರನ್ನು ಅಂಧಶ್ರದ್ಧೆಯಿಂದ ಅನುಕರಿಸುವದೇ ಶಿಷ್ಟ ಸಾಂಪ್ರದಾಯವಾಗಿತ್ತು. ಕಲಕತ್ತೆಯಲ್ಲಿ ನೂತನವಾಗಿ ವಿಶ್ವವಿದ್ಯಾಲಯದ ಸ್ಥಾಪನೆಯಾಗಿತ್ತು. ಪಟ್ಟಣ ಪಟ್ಟಣಗಳಲ್ಲಿ ಇಂಗ್ಲಿಶ್ ಶಾಲೆಗಳು ಸ್ಥಾಪಿತವಾಗಿದ್ದವು. ಯೇನ ಕೇನ ಪ್ರಕಾರೇಣ ಧನೋಪಾರ್ಜನೆಯನ್ನು ಮಾಡುವದು, ರಾಜಕೀಯಸನ್ಮಾನವನ್ನು ಪ್ರಾಪ್ತಮಾಡಿಕೊಳ್ಳುವದು, ಸಮಾಜದಲ್ಲಿ ಪ್ರತಿಷ್ಠೆಯನ್ನು ಪ್ರಾಪ್ತಮಾಡಿಕೊಳ್ಳುವ ಆಕಾಂಕ್ಷೆಯಿಂದಲೇ ವಿದ್ಯೆಯನ್ನು ಸಂಪಾದಿಸುವದು, ಸರಕಾರೀ ಅಧಿಕಾರಿಗಳನ್ನು ಪ್ರಸನ್ನಗೊಳಿಸಿ ಅವರಿಂದ ಗೌರವವನ್ನು ಹೊಂದುವದು ಇವೇ ಮುಂತಾದವು ಸಾಮಾನ್ಯವಾಗಿ ಜನರ ಉಚ್ಚ ಧ್ಯೇಯಗಳಾಗಿದ್ದವು. ಈ ರೀತಿಯಾಗಿ ತತ್ಕಾಲೀನ ವಂಗೀಯ ಸಮಾಜವು ಸಾರಾಸಾರ ವಿಚಾರವಿಲ್ಲದೆ, ವಿವೇಕರಹಿತವಾಗಿ ಪಾಶ್ಚಾತ್ಯ ಆಚಾರ ವಿಚಾರ ಕಲ್ಪನೆಗಳಿಂದ ಆಕ್ರಾಂತವಾಗಿತ್ತು. ಷಟ್‌ಶಾಸ್ತ್ರ ಪಂಡಿತನಾಗಿದ್ದರೂ, ಅವನಿಗೆ ಇಂಗ್ರಜೀ ಭಾಷೆಯು ಅವಿದಿತವಾಗಿದ್ದರೆ, ಅವನು ಅಶಿಕ್ಷಿತನೆಂದು ಗಣಿಸಲ್ಪಡುತ್ತಿದ್ದನು. ಸಾರಾಂಶ ಇಂಗ್ರಜೀ ಭಾಷೆಯ ಪ್ರಾಬಲ್ಯದಿಂದ ಜನರ ಕಣ್ಣುಗಳೆಲ್ಲ ಉದ್ದೀಪಿತವಾಗಿದ್ದವು. ಇಂಗ್ರಜೀ ಭಾಷೆಯ ಪ್ರಭಾವದ ಆವರಣದಿಂದ ಮಾತೃ ಭಾಷೆಯ ತೇಜ ಶಕ್ತಿಗಳು ಆಚ್ಛಾದಿತವಾಗಿ ಹೋಗಿದ್ದವು. ಪ ಡಿತರೆಂಬವರು— ಸುಶಿಕ್ಷಿತರೆನಿಸಿಕೊಳ್ಳುವವರು—ಇಂಗ್ರಜೀಭಾಷೆಯ ಸಿರಿಯಿಂದ ಮೋಹಿತರಾಗಿ, ಮಾತೃಭಾಷೆಯ [illegible] ದುಃಖಿತರಾಗದೆ, ಅದರ ಅಪಹಾಸ್ಯವ [illegible] ಗುತ್ತಿದ್ದರು. ಇಂತಹ ದುರವಸ್ಥೆ [illegible] ಮಹತ್ವವನ್ನು ಸ್ವಕೀಯ [illegible] ಲೋಕ ಪ್ರದರ್ಶನಕ್ಕೆ ತಂದು, [illegible] ಆಂದರಾವ ಜನರ ನೇತ್ರಗಳಲ್ಲಿ [illegible] ಅಂಜನವನ್ನು ಹಾಕುವ ಕಾರ್ಯಭಾರವನ್ನು ಬಂಕಿಮನು ವಹಿಸಿದನು.

ಮಾತೃಭಾಷೆಯ ಸೇವೆಗಾಗಿಯೇ ಬಂಕಿಮನು ಜನ್ಮವನ್ನು ತಾಳಿದ್ದನೆಂದು ಹೇಳಿದರೆ, ಅದು ಅತಿಶಯೋಕ್ತಿಯಾಗದ್ದೆ ವಸ್ತುಸ್ಥಿತಿಯನ್ನೇ ಹೇಳಿದಂತಾಗುವದು. ಆಮರಣದ ವರೆಗೆ ಬಂಕಿಮನು ನಿಸ್ಸೀಮವಾದ ಭಕ್ತಿಯಿಂದ ಮಾತೃಭಾಷೆಯ ಸೇವೆಯನ್ನು ಮಾಡಿದನು. ಅವನ ಅಸಾಧಾರಣವಾದ ಶಕ್ತಿಯಿಂದ ವಂಗಭಾಷೆಯು ಅತ್ಯುಚ್ಚವಾದ ಉನ್ನತಿಯನ್ನು ಹೊಂದಿತು. ಮಾತೃಭಾಷೆಯ ದ್ವಾರದಿಂದ ಸಾಮಾನ್ಯಜನರಲ್ಲಿ ಕೂಡ ಜ್ಞಾನ ವಿಸ್ತಾರವಾಗದ ಹೊರತು, ಯಾವದೇ ಸಮಾಜವು ಉನ್ನತಿಯ ಮಾರ್ಗವನ್ನು ಹೊಂದಲಾರದೆಂತಲೂ, ಮಾನವೀ ಸದ್ಭಾವನೆಗಳು ವಿಕಾಸ ಹೊಂದಲಾರವೆಂತಲೂ, ಬಂಕಿಮನ ಮೂಲ ಮಂತ್ರವಾಗಿತ್ತು. ಈ ಮಂತ್ರವನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು, ಮಾತೃಭಾಷೆಯ ಭಾಂಡಾರವನ್ನು ಪೂರ್ತತೆಯನ್ನಾಗಿ ಮಾಡಲು ಅವನು ತನ್ನ ಬುದ್ಧಿ ಸಾಮರ್ಥ್ಯವನ್ನೆಲ್ಲ ವೆಚ್ಚಮಾಡಿದನು. ಅವನ ಅಸಾಧಾರಣವಾದ ಪಾಂಡಿತ್ಯವೂ ವ್ಯಯರಹಿತವಾದ ಉತ್ಸಾಹವೂ ವಂ

ಗ ದೇಶದಲ್ಲಿ ಹೊಸಯುಗವನ್ನು ನಿರ್ಮಾಣಮಾಡಿದವು. ಬಂಕಿಮನಲ್ಲಿ ಸ್ವಜಾತಿಯ ಪ್ರೇಮವೂ ಸ್ವದೇಶಭಕ್ತಿಯೂ ಅಪರಿಮಿತವಾಗಿದ್ದವು. ಈ ಗುಣಗಳ ಮೂಲಕವಾಗಿಯೇ ಇಂದಿಗೂ ಲಕ್ಷಾವಧಿ ನರನಾರಿಯರು ಅವನಲ್ಲಿ ಶ್ರದ್ಧೆ ಭಕ್ತಿಗಳನ್ನು ವಹಿಸಿರುವರು. ಸ್ವದೇಶದ ಬಂಧು ಭಗಿನಿಗಳನ್ನು ಸುಸಂಸ್ಕೃತರನ್ನಾಗಿ ಮಾಡುವದೇ ಪುಸ್ತಕ ಲೇಖನದ ಮೂಲ ಉದ್ದೇಶವಾಗಿರಬೇಕೆಂತಲೂ ಯಾವ ಲೇಖನವು ದೇಶವಾಸಿಯರ ಹೃದಯವನ್ನು ಸ್ಪರ್ಶಮಾಡುವದಿಲ್ಲವೋ ಅಥವಾ ದೇಶೋಪಕಾರಕವಾಗುವದಿಲ್ಲವೋ ಆ ಲೇಖನವು ನಿರರ್ಥಕವಾದುದೆಂತಲೂ ಬಂಕಿಮನ ಅಭಿಪ್ರಾಯವಾಗಿದ್ದರಿಂದ, ದೇಶಬಾಂಧವರನ್ನು ಸುಶಿಕ್ಷಿತರನ್ನಾಗಿ ಮಾಡುವ ಸದುದ್ದೇಶದಿಂದಲೇ ಬಂಕಿಮನು ಪುಸ್ತಕಗಳನ್ನು ಬರೆಯುತ್ತಿದ್ದನು. ಸ್ವದೇಶ ಪ್ರೀತಿಯಂತೂ ಬಂಕಿಮನ ರೋಮರಂಧ್ರಗಳಲ್ಲಿ ತುಂಬಿಕೊಂಡಿತ್ತು.

ಬಂಕಿಮಚಂದ್ರನು ಲೇಖನಕಾರ್ಯವನ್ನು ವಹಿಸುವದಕ್ಕೆ ಮುಂಚಿತವಾಗಿ, ವಂಗ ಭಾಷೆಯು ಬಹು ಹೀನ ಸ್ಥಿತಿಯಲ್ಲಿದ್ದಿತು. ಬಂಕಿಮನ ಉತ್ಸಾಹ ಪ್ರಯತ್ನಗಳಿಂದಲೇ ಸಮಸ್ತವಾದ ಭಾರತೀಯ ಭಾಷೆಗಳಲ್ಲಿ ವಂಗ ಭಾಷೆಗೆ ಅಗ್ರಮಾನವು ದೊರೆಯುವ ಸೌಭಾಗ್ಯವು ಪ್ರಾಪ್ತವಾಗಿದೆ. ಬಂಕಿಮನ ಗ್ರಂಥಗಳಲ್ಲಿಯ ಭಾಷೆಯು ಸರಲವಾಗಿಯೂ, ಸರಸವಾಗಿಯೂ, ಮರ್ಮಸ್ಪರ್ಶಿನಿಯಾಗಿಯೂ ಆಗಿದೆ. ಇವನ ಲೇಖಗಳಲ್ಲಾಗಲಿ, ಕವಿತೆಗಳಲ್ಲಾಗಲಿ, ಅಥವಾ ಅನ್ಯವಾದ ಯಾವದೇ ಗ್ರಂಥಗಳಲ್ಲಾಗಲಿ, ಹೊಸ ಹೊಸ ಕಲ್ಪನೆಗಳ ವೈಚಿತ್ರ್ಯವು ಕಂಡು ಬರುತ್ತದೆ. ಬಂಕಿಮನು ಸೌಂದರ್ಯೋಪಾಸಕನು. ಇವನ ಗ್ರಂಥಗಳಲ್ಲಿ ಭಾಷೆಯ ಸೌಂದರ್ಯ, ಭಾವಗಳ ಸೌಂದರ್ಯ ಹಾಗೂ ಪಾತ್ರಗಳ ಸ್ವಭಾವಸೌಂದರ್ಯ ಹೀಗೆ ಸೌಂದರ್ಯಪ್ರವಾಹಗಳ ಸಂಗಮವಾಗಿದೆ.

೧೮೬೪ನೇ ಇಸ್ವಿಯಲ್ಲಿ ಬಂಕಿಮನ ಮೊದಲನೆಯ ಗ್ರಂಥವಾದ "ದುರ್ಗೇಶನಂದಿನಿ" ಎಂಬದು ಪ್ರಕಾಶಿತವಾಯಿತು. ಇದೊಂದೇ ಗ್ರಂಥದಿಂದ ಅವನ ಲೇಖನಯೋಗ್ಯತೆ ವಿಚಾರಶೀಲತೆಗಳ ಪರಿಚಯವು ವಾಚಕರಿಗೆ ಚನ್ನಾಗಿ ಆಗುತ್ತದೆ. ಈ ಪೂರ್ವದಲ್ಲಿ ವಂಗ ಭಾಷೆಯಲ್ಲಿ ಇಂತಹ ಅತ್ಯುತ್ತಮವಾದ ಪುಸ್ತಕವು ಪ್ರಕಟವಾಗಿದ್ದಿಲ್ಲ. ಹೀಗಿದ್ದರೂ ಆ ಕಾಲಕ್ಕೆ ಅದು ಪಂಡಿತರೆಂದೆನಿಸಿಕೊಳ್ಳುವ ಇಂಗ್ಲಿಶ್ ಭಾಷಾಲೋಲುಪರ ಆದರಕ್ಕೆ ಪಾತ್ರವಾಗಲಿಲ್ಲ. ಇದಕ್ಕೆ ಮುಖ್ಯಕಾರಣವು, ಸಮಾಜದಲ್ಲಿಯ ಗುಣ ಗ್ರಹಣ ಶಕ್ತಿಯು ಹ್ರಾಸವಾಗಿತ್ತಲ್ಲದೆ, ಪುಸ್ತಕದ ದೋಷವಲ್ಲ. ದುರ್ಗೇಶನಂದಿನಿಯು ಪ್ರಾಪ್ತಮಾಡಿಕೊಂಡಿರುವ ಲೋಕಪ್ರಿಯತೆಯನ್ನು ಸಂಪಾದಿಸುವ ಸೌಭಾಗ್ಯವು ಈ ವರೆಗೂ ಯಾವ ಭಾಷೆಯೊಳಗಿನ ಪುಸ್ತಕಕ್ಕೂ ಲಭಿಸಿಲ್ಲ.

ಸಾಹಿತ್ಯೋದ್ಯಾನದ ಸುಚತುರ ಮಾಲಾಕಾರನಾಗುವ ಭಾಗ್ಯಶಾಲಿಗೆ, ಸಾಹಿತ್ಯ ಸರೋವರದಲ್ಲಿಯ ಪಂಕಜದ ಸುಮಧುರವಾದ ಸುಗಂಧಸೇವನದಿಂದ ಉನ್ಮತ್ತನಾದವನಿಗೆ, ಸ್ವರ್ಗಸುಖವು ಕೂಡ ಹೇಯವೆನಿಸುತ್ತದೆ. ಈ ನಿಯಮಕ್ಕೆ ಅನುಸಾರವಾಗಿ, ಬಂಕಿಮನಿಗೆ ಸರಕಾರೀ ಸೇವೆಯಲ್ಲಿ ಅನಾದರ ಉಂಟಾಗಹತ್ತಿದ್ದರಿಂದ ಅದನ್ನು ಬಿಟ್ಟುಕೊಟ್ಟು ಅವನು ಪೆನಶನ್ ತೆಗೆದುಕೊಂಡನು.

೧೮೭೨ನೆಯ ಇಸ್ವಿಯಲ್ಲಿ ಬಂಗಾಲದ ಜೀವನ ಸರ್ವಸ್ವವಾದ ವಂಗದರ್ಶನವು ಪ್ರಕಾಶಿತವಾಯಿತು. ಇದರ ಪ್ರಕಾಶದಿಂದ ಬಂಗಾಲದ ಮೋಹನಿದ್ರೆಯು ಅಳಿದು ಹೋಯಿತು. ಇಂದಿನ ವರೆಗೆ ಮಾತೃಭಾಷೆಯ ಉಪೇಕ್ಷೆಯನ್ನು ಮಾಡುತ್ತಿದ್ದವರೂ ವಂಗಭಾಷೆಯಲ್ಲಿ ಚಿತ್ತವಿನೋದಕರವಾದ ಸಾಹಿತ್ಯವಿಲ್ಲೆಂದು ಪ್ರತಿಪಾದಿಸುತ್ತಿದ್ದವರೂ ಇದರ ಸರಸವೂ ಮನೋಮುಗ್ಧಕರವೂ ಆದ ರೂಪವನ್ನು ನೋಡಿ ಪರಮಾಶ್ಚರ್ಯಭರಿತರಾದರು. ತಮ್ಮ ಅಜ್ಞಾನ, ಮಿಥ್ಯಾಭಿಮಾನಗಳಿಗಾಗಿ ಈ ಜನರು ಪರಿತಾಪಿತರಾದರು. ವಂಗದರ್ಶನದಲ್ಲಿ, ವೇದಾಂತ, ವಿಜ್ಞಾನ, ಇತಿಹಾಸ, ವಾಙ್ಮಯ, ಮುಂತಾದ ವಿಷಯಗಳನ್ನು ಚರ್ಚಿಸುವ ಉತ್ತಮೋತ್ತಮವಾದ ಪ್ರಬಂಧಗಳು ಪ್ರಕಟವಾಗಹತ್ತಿದವು. ವಂಗದರ್ಶನದ ಪ್ರಭಾವದಿಂದ, ಮಾರ್ಗಭ್ರಷ್ಟರಾದ ಎಷ್ಟೋ ಜನರು ಸನ್ಮಾರ್ಗವನ್ನು ಹಿಡಿದು, ಮಾತೃಭಾಷೆಯ ದಾಸರಾದರು.

ಬಂಕಿಮಚಂದ್ರನು ಬರೆದಿರುವ ಲೇಖಗಳೆಲ್ಲ ಪ್ರಾಯಃ ವಂಗ ದರ್ಶನದಲ್ಲಿ ಪ್ರಕಾಶಿತವಾಗಿವೆ. ಬಂಕಿಮನ ಲೇಖಗಳು ಬಹುತರವಾಗಿ ಐತಿಹಾಸಿಕ ಆಧಾರದಿಂದಲೇ ಬರೆಯಲ್ಪಟ್ಟಿದ್ದರೂ ಅವುಗಳಲ್ಲಿ ಕಲ್ಪನಾ ಶಕ್ತಿಯು ವಿಶೇಷವಾಗಿ ಕಂಡುಬರುತ್ತದೆ. ಚತುರನಾದ ಚಿತ್ರಕಾರನು ತನ್ನ ಕೌಶಲ್ಯದಿಂದ ನಿರ್ಜೀವವಾದ ಚಿತ್ರದಲ್ಲಿ ಜೀವ ಕಳೆಯು ತುಂಬಿದ ಹಾಗೆ ತೋರಿಸುತ್ತಿರುವಂತೆ, ಉತ್ತಮನಾದ ಲೇಖಕನು, ಕಾಲ್ಪನಿಕವಾದ ಮಾನವ ಚರಿತವನ್ನು ನಿಜವಾಗಿ ಸಂಭವಿಸುತ್ತಿರುವಂತೆ ತೋರಿಸುತ್ತಾನೆ. ಇಂತಹ ಗುಣವು ಬಂಕಿಮನ ಲೇಖಗಳಲ್ಲಿ ಪದೇ ಪದೇ ಕಂಡುಬರುತ್ತದೆ. ಬಂಕಿಮನ ಲೇಖಗಳಲ್ಲಿ ಸ್ವಾಭಾವಿಕತೆಯೂ ಪವಿತ್ರತೆಯೂ ವಿಶೇಷವಾಗಿವೆ. ಈ ಗುಣಗಳಿಂದ ರಹಿತವಾದ ಲೇಖಗಳು ಸಮಾಜಹಿತಕ್ಕೆ ನಿಷ್ಪ್ರಯೋಜಕವಾಗುತ್ತವೆ. ಉಚ್ಚತಮವಾದ ಪವಿತ್ರ ಕಲ್ಪನೆಗಳ ಭಾವವನ್ನು ವಾಚಕರ ಮನಸ್ಸಿನಲ್ಲಿ ಬಿಂಬಿಸಿ, ಅವರನ್ನು ಕರ್ತವ್ಯಾಭಿಮುಖರನ್ನಾಗಿ ಮಾಡುವದೇ ಲೇಖನದ ಉದ್ದೇಶವಾಗಿರಬೇಕು. ಇದರಿಂದಲೇ ಲೇಖನ ಪರಿಶ್ರಮದ ಸಾರ್ಥಕತೆ ಉಂಟಾಗುತ್ತದೆ. ಬಂಕಿಮನ ಲೇ

ಖಗಳಲ್ಲಿ ಈ ತತ್ವವು ಸಂಪೂರ್ಣವಾಗಿ ನಿದರ್ಶನಕ್ಕೆ ಬರುತ್ತದೆ.

ಬಂಕಿಮಚಂದ್ರನು ನಿಷ್ಕಪಟ— ನಿಷ್ಕಾಮಭಾವನೆಗಳಿಂದ ಸಾಹಿತ್ಯಸೇವೆಯನ್ನು ಮಾಡಿದನು. ಇವನು ಸಾಹಿತ್ಯವಾಟಿಕೆಯ ಸಹೃದಯನಾದ ಮಾಲಾಕಾರನಾಗಿದ್ದನು. ಪ್ರತಿನಿತ್ಯ ನೂತನವಾದ ಪುಷ್ಪಗಳ ಮಾಲೆಗಳನ್ನು ರಚಿಸಿ, ಅವುಗಳನ್ನು ಮಾತೃ ಭೂದೇವಿಗೆ ಭಕ್ತಿಪೂರ್ವಕವಾಗಿ ಸಮರ್ಪಿಸುತ್ತಿದ್ದನು. ಬಂಕಿಮನು ಜನ್ಮಭೂಮಿಯ ದಾಸನಾಗಿದ್ದನು. ಸತ್ಯಾಚರಣೆ, ತೇಜಸ್ವಿತೆ, ಸಹೃದಯತೆ, ನಿರ್ಭಯತೆ, ಮುಂತಾದ ಸದ್ಗುಣಗಳಿಗೆ ಇವನ ಹೃದಯವು ಆಧಾರಸ್ಥಾನವಾಗಿದ್ದರಿಂದ, ಇವನ ಉಪದೇಶವು ಪರಿಣಾಮಕರವಾಗಿದೆ. ಸಾಹಿತ್ಯ ಸೇವೆಯನ್ನು ಮಾಡಲು ಇವನು ಯಾವಾಗಲೂ ಪರರನ್ನು ಪ್ರೋತ್ಸಾಹಿಸುತ್ತಿದ್ದನು. ಇವನ ಪ್ರೋತ್ಸಾಹನದಿಂದಲೇ ಇಂಗ್ರಜೀಭಾಷೆಯಲ್ಲಿ ಮಾತ್ರ ತಮ್ಮ ಗ್ರಂಥಗಳನ್ನು ಬರೆಯುತ್ತಿದ್ದ ರಮೇಶಚಂದ್ರ ದತ್ತರವರು ವಂಗ ಭಾಷೆಯಲ್ಲಿ ಪುಸ್ತಕಗಳನ್ನು ಬರೆಯಹತ್ತಿದರು. “ಭಾಷಾಶೈಲಿಯು ನನ್ನಲ್ಲಿಲ್ಲ: ಹೀಗಿರಲು ನಾನು ವಂಗ ಭಾಷೆಯಲ್ಲಿ ಪುಸ್ತಕಗಳನ್ನು ಬರೆಯುವದೆಂತು;” ಎಂದು ರಮೇಶ ಚಂದ್ರದತ್ತರವರು ಕೇಳಿದ ಪ್ರಶ್ನೆಕ್ಕೆ ”ತಮ್ಮಂತಹ ವಿದ್ವಾಂಸರು ಬರೆದದ್ದೇ ಭಾಷೆಯ ಶೈಲಿಯಾಗುವದು” ಎಂದು ಬಂಕಿಮನು ಉತ್ತರವನ್ನು ಕೊಟ್ಟನು. ಈ ಉತ್ತರದಿಂದಲೇ ಉತ್ತೇಜಿತರಾಗಿ ದತ್ತರು, ಮಹಾರಾಷ್ಟ್ರ ಜೀವನ ಪ್ರಭಾತ, ರಾಜಪೂತ ಜೀವನಸಂಧ್ಯಾ, ಮುಂತಾದ ಅನುಪಮೇಯವಾದ ಗ್ರಂಥಗಳನ್ನು ಬರೆದರು.

ಬಂಕಿಮನಿಗೆ ಹಿಂದೂ ಧರ್ಮದಲ್ಲಿ ಸಂಪೂರ್ಣವಾದ ವಿಶ್ವಾಸವಿತ್ತು. ಭಗವಾನ್ ಶ್ರೀಕೃಷ್ಣನು ಈಶ್ವರೀ ಅವತಾರನೆಂದು ಇವನು ಒಪ್ಪದಿದ್ದರೂ ಯಾದವಪತಿಯಾದ ಯೋಗೇಶ್ವರ ಶ್ರೀಕೃಷ್ಣನಲ್ಲಿ ಇವನಿಗೆ ಪರಮ ವಿಶ್ವಾಸ ಭಕ್ತಿಗಳಿದ್ದವು ಗೋಪಿಯರ ಪ್ರೇಮಕಥೆಗಳಿಗೆ ಇವನು ಕವಿಕಲ್ಪನೆಯೆಂದು ಪ್ರತಿಪಾದಿಸುತ್ತಿದ್ದನು. ಈ ವಿಚಾರಗಳನ್ನು ಅವನು ತನ್ನ ಕೃಷ್ಣಚರಿತ ಎಂಬ ಪುಸ್ತಕದಲ್ಲಿ ವಿಶದವಾಗಿ ಚರ್ಚಿಸಿದ್ದಾನೆ.

ಬಂಕಿಮನು ಕೋಮಲ ಹೃದಯವುಳ್ಳವನಾಗಿದ್ದನು. ಇವನ ವದನದಲ್ಲಿ ಯಾವಾಗಲೂ ಪ್ರಸನ್ನತೆಯ ಚಿನ್ಹಗಳೇ ತೋರುತ್ತಿದ್ದವು. ಕೋಪವೆಂಬುದು ಇವನಿಗೆ ಗೊತ್ತೇ ಇದ್ದಿಲ್ಲ. ಇವನು ನಿಃಸ್ವಾರ್ಥ ಪ್ರೇಮಿಯಾಗಿದ್ದನು. ಈ ಗುಣಗಳಿಗಾಗಿ ಇವನು ಸರ್ವರಿಗೂ ಪ್ರಿಯನಾಗಿದ್ದನು. ಪರರ ಆನಂದದಿಂದ ಆನಂದಿತನೂ ದುಃಖದಿಂದ ದುಃಖಿತನೂ ಆಗುವದು ಇವನ ಸ್ವಭಾವವಾಗಿದ್ದರಿಂದ, ದೀನರೂ ದುಃಖಿಗಳೂ ಆದ ಅನೇಕ ಜನರು ತಮ್ಮ ಕರ್ಮ-ಕಥೆಗಳನ್ನು ಇವನಿಗೆ ನಿವೇದಿಸಿ ಸಮಾಧಾನ ಹೊಂದುತ್ತಿದ್ದರು.

ಇವನಿಂದ ರಚಿತವಾದ ಕೃಷ್ಣಚರಿತ, ದುರ್ಗೇಶನಂದಿನಿ, ಚಂದ್ರಶೇಖರ, ಆನಂದಮಠ, ಕಪಾಲಕುಂಡಲಾ, ಸೀತಾರಾಮ, ದೇವಿಚೌಧರಾಣಿ, ಇಂದಿರಾ, ವಿಷವೃಕ್ಷ, ಮುಂತಾದ ಪುಸ್ತಕಗಳನ್ನು ಬಂಗಾಲದೊಳಗಿನ ಪ್ರತಿಯೊಂದು ಮನೆಯಲ್ಲಿ ನೋಡಬಹುದು. ಉಳಿದ ಭಾಷೆಗಳಲ್ಲಿ ಈ ಪುಸ್ತಕಗಳ ಭಾಷಾಂತರವಾಗಿರುವಂತೆ, ಕನ್ನಡ ಭಾಷೆಯಲ್ಲಾದರೂ ಹಲಕೆಲವು ಪುಸ್ತಕಗಳು ಭಾಷಾಂತರಿಸಲ್ಪಟ್ಟವೆ.

ನಮ್ಮ ಚರಿತ್ರನಾಯಕನ ಗುಣವನ್ನು ನೋಡಿ, ಸರಕಾರದವರಾದರೂ ರಾಯಬಹಾದ್ದೂರ, ಸಿ. ಆಯ್. ಈ ಮುಂತಾದ ಪದವಿಗಳಿಂದ ಇವನನ್ನು ಸನ್ಮಾನಿಸಿದರು.

ಈ ರೀತಿಯಾಗಿ ಮಾತೃಭಾಷಾ, ಮಾತೃಭೂಮಿಗಳ ಸೇವೆಯನ್ನು ನಿಸ್ಸೀಮವಾಗಿ ಮಾಡಿ, ೧೮೯೪ನೆಯ ಇಸ್ವಿಯಲ್ಲಿ ವಂಗೀಯ ಸಾಹಿತ್ಯ ಸೇವಕ ರತ್ನನಾದ ಶ್ರೀ ಬಂಕಿಮಚಂದ್ರ ಚಟರ್ಜಿಯು ಇಹಲೋಕದ ಯಾತ್ರೆಯನ್ನು ಮುಗಿಸಿದನು. ಕಾಲಿದಾಸನ ರಘುವಂಶ, ಶಾಕುಂತಲಗಳಂತೆ ಬಂಕಿಮನ ಪುಸ್ತಕಗಳಾದರೂ ಶಾಶ್ವತರಭಾವಗಳನ್ನು ವಿಕಾಸಗೊಳಿಸುತ್ತ ಚಿರಕಾಲದ ವರೆಗೆ ಬಾಳುವವೆಂಬಲ್ಲಿ ಸಂದೇಹವಿಲ್ಲ.

ಸತೀಹಿತೈಷಿಣೀ ಗ್ರಂಥಮಾಲಾ.

ತ್ರೈಮಾಸಿಕ ಪುಸ್ತಕವು.

ಈ ಗ್ರಂಥಮಾಲೆಯಿಂದ ಸ್ತ್ರೀಜನಾಂಗಕ್ಕೆ ಎಷ್ಟು ಉಪಯೋಗವಾಗುತ್ತಿರುವದೆಂಬುದನ್ನು ಇಲ್ಲಿ ವಿವರಿಸಬೇಕಾಗಿಲ್ಲ; ತಾವೇ ಪರೀಕ್ಷಿಸಿದರೆ ಗೊತ್ತಾಗುವದು. ಮಾಲೆಯ ಪ್ರಥಮ ಪುಸ್ತಕವು ಒಂದು ವರ್ಷದೊಳಗಾಗಿ ಎರಡಾವೃತ್ತಿ ಮುದ್ರಣವಾಗಿರುವದನ್ನು ನೋಡಿದರೆಯೇ ಅದರ ಪ್ರಯೋಜನವು ತಿಳಿವುದು. ಇಷ್ಟರಲ್ಲಿ ದ್ವಿತೀಯ ಪುಸ್ತಕವೂ ಪುನರ್ಮುದ್ರಣವಾಗುವುದರಲ್ಲಿದೆ ಹೆಚ್ಚೇಕೆ. ಸ್ತ್ರೀಯರ ಮೇಲೆ ಬೀಳುತ್ತಿರುವ ವೃಥಾಪವಾದವನ್ನು ತಪ್ಪಿಸಿ, ಅವರಲ್ಲಿ ಗೌರವವನ್ನು ಹೆಚ್ಚಿಸುವದರಿಂದ ದೇಶದ ಅಭಿವೃದ್ಧಿಯು ಬೇಗನಾಗಬಹುದೆಂಬುದನ್ನು ಸಕಾರಣವಾಗಿ ಸಮಯೋಚಿತವಾದ ಸ್ವತಂತ್ರಲೇಖನಗಳಿಂದ ಅನೇಕ ವಿಚಾರಗಳನ್ನು ಪ್ರತಿಪಾದಿಸುವ ಗ್ರಂಥಗಳೇ ಇದರಲ್ಲಿ ಪ್ರಕಟವಾಗುತ್ತಿರುವವು. ಒಮ್ಮೆ ನೋಡಿದರೆ, ಗುಣವು ತಾನಾಗಿ ಪ್ರಕಾಶಕ್ಕೆ ಬರುವದು

ಈವರೆಗೆ ಪ್ರಕಟವಾಗಿರುವ ಗ್ರಂಥಗಳು:—

ಸಂಖ್ಯೆ.	ಹೆಸರು.	ಸಾಮಾನ್ಯ ಕ್ರಯ.	ಚಂದಾದಾರರಿಗೆ
೧	ಮಾತೃನಂದಿನಿ	೧-೪-೦	೧-೦-೦
೨	ಸುಶೀಲೆ	೦-೬-೦	೧-೪-೦
೩	ಸಭಾ	೦-೭-೦	೦-೬-೦
೪	ವಿದ್ಯುಲ್ಲತಾ	೦-೧೪-೦	೦-೧೦-೦
೫	ವಿರಾಗಿಣಿ	೧-೦-೦	೦-೧೨-೦
೬	ದಕ್ಷಕನ್ಯಾ	೧-೮-೦	೧-೦-೦
೭	ರಮಾನಂದ	೦-೧೦-೦	೦-೭-೦
೮	ವಿಕ್ರಮ	೧-೨-೦	೦-೧೪-೦
೯	ಚಂದ್ರವದನಾ	೦-೧೦-೦	೦-೭-೦
೧೦	ಪೂರ್ಣಕಲೆ	೧-೪-೦	೧-೪-೦

ಭವಗೀತಾವಲಿ ೦-೪-೦: ಸೇವಾವಿಚಾರ ೦-೧-೦: ಇವೆರಡೂ ವರ್ಗಣಿದಾರರಿಗೆ ಬಹುಮಾನವಾಗಿ ಕೊಡಲ್ಪಡುವವು. ವಿಶೇಷ ವಿಷಯಗಳು ಪತ್ರದ್ವಾರಾ.

ವಿಳಾಸ — ಕಾರ್ಯದರ್ಶಿ, ಹಿತೈಷಿಣೀ, ಮಾತೃಮಂದಿರಂ.
ನಂಜನಗೂಡು.

ಇದನ್ನು — ಬಿಂದೂ ನಾರಾಯಣ ಮುತಾಲಿಕ ದೇಸಾಯಿ, ಇವರು ಹುಬ್ಬಳ್ಳಿಯ "ಶ್ರೀಕೃಷ್ಣ ಮುದ್ರಾಲಯ"ದಲ್ಲಿ ಮುದ್ರಿಸಿದರು,
ಹಾಗೂ ಶ್ರೀಮತೀ ತಿರುಮಲಾಂಬಾ ಇವರು 'ನಂಜನಗೂಡು, 'ಕರ್ನಾಟಕ ನಂದಿನಿ ಆಫೀಸಿನಲ್ಲಿ' ಪ್ರಸಿದ್ಧಪಡಿಸಿದರು.

॥ ಶ್ರೀ ॥

॥ ವಂದೇತ್ವಾಂ ಭೂದೇವಿ ಆರ್ಯಮಾತರಮ್ ॥

ಕರ್ನಾಟಕ ನಂದಿನಿ.

(ಮಾಸಪತ್ರಿಕೆ)

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃ ಪ್ರಭುಃ ॥
ದಾಸ್ಯನ್ತಿ ಮಮಯೇ ಚಾಸ್ಯೇಹ್ಯದೃಷ್ಟಾಃ ಪಥಿಗೋಚರಾಃ ॥ "

ಸಂಪುಟ ೨	ಪಿಂಗಳ ಸಂ॥ ಮಾಘಮಾಸ ೧೮೩೯—೧೯೧೮ನೇ ಫೆಬ್ರವರಿ	ಸಂಚಿಕೆ ೫

ಪರಮಾತ್ಮಸ್ತುತಿ.

ಜಯಕೃಷ್ಣ ಜಗದೀಶ—ಜಯವ್ಯಾಘ್ರಗಿರಿವಾಸ ॥ ಜಯ ಕೋಟಿರವಿಭಾಸ, ಜಯವೆಂಕಟೇಶ ॥ ಜಯಜಯ ॥ ಪ ॥

ಏಕರೂಪನು ನೀನೆ, ಅನೇಕ ರೂಪನು ನೀನೆ । ಲೋಕಕೊಡೆಯನು ನೀನೆ ಲೋಕಧೂರಿ ನೀನೆ ॥ ನಾಕಾರವಿಗ್ರಹನು ನೀನೆ ಸರ್ವಾಧ್ಯಕ್ಷನು ನೀನೆ । ಶ್ರೀಕಾಂತ ನೀನಿಲ್ಲದಿಲ್ಲವೀ ಜಗದಿ ॥ ಜಯ ಜಯ ॥ ೧ ॥ ಸೂಕ್ಷ್ಮರೂಪನು ನೀನೆ ಸ್ಥೂಲರೂಪನುನೀನೆ, ಸಾಕ್ಷಿಯಾಗಿರುತಿರುವ ಸಾರತರನೀನೆ॥ ಅಕ್ಷಯಾತ್ಮಕನೀನೆ, ಕುಕ್ಷಿಲೌಕಿಕನೀನೆ, ಲಕ್ಷ್ಮೀಶನಾದ ಶ್ರೀ ಪಕ್ಷಿವಾಹನನೇ ॥ ಜಯ ॥ ೨ ॥ ಧರೆಯೊಳಗುರುತರದಿ ಮೆರೆವ ವ್ಯಾಘ್ರಗಿರಿಯೊಳಗೆ । ಹರುಷದಲಿ ನೆಲಸಿರುವ ಶ್ರೀನಿವಾಸ ಹರಿಯೆ ॥ ಕರುಣದಲಿ ಭಕ್ತರನು ಪರಿಪಾಲಿಸುವ ನಮ್ಮ ವರದ ರಾಮಾನುಜವಿಠಲ ವೆಂಕಟನೇ ॥ ಜಯಜಯ ॥ ೩ ॥

(ದಿವಂಗತ ಒ॥ನಗರ ರಾಮಾನುಜಾಚಾರ್ಯರವರಿಂದ ರಚಿತವಾದದ್ದು)

ರಾಗ॥ ವರ್ಣನೆ—

ಇಂಥಾಪ್ರಭುವಕಾಣೆನೊ—ಈ ಜಗದೊಳ—ಇಂಥಾ
ಪ್ರಭುವ ಕಾಣೆನೊ ॥ ಪ ॥

ಇಂಥಾ ಪ್ರಭುವಕಾಣೆ। ಶಾಂತಮೂರುತಿ ಜಗದಂತರಂಗನು ಲಕ್ಷ್ಮೀಕಾಂತ ಸರ್ವಾಂತರ್ಯಾಮಿ ಇಂಥಾ—॥ಅನು॥

ಬೇಡಿದಿಷ್ಟವ ಕೊಡುವ—ಭಕ್ತರತಪ್ಪ—ನೋಡದೆ ಬಂದು ಪೊರೆವ । ಗಾಡಿಕಾರನು ಗರುಡಾರೂಢ, ಗುಣವಂತ ಮಹಾಪ್ರೌಢಪ್ರತಾಪ ಜಗದಿ-ಗೂಢದಿಂ ಸಂಚರಿಪ ॥ ಪಾಡಿಪೊಗಳಿ ಕೊಂಡಾಡುವವರ— ಮುಂದಾಡುತಲಿರ್ಪನು— ನಾಡಿನೊಳಿರ್ದರು ಕೇಡಿಗನೇ ನಾದಾಳಿಗರಂದದಿ । ಜೋಡುಂಟೇ ನೋಡಿ ವೆಂಕಟನಿಗೆ ॥ ಇಂಥಾ ಪ್ರಭುವ ಕಾಣೆನೊ ॥ ೧ ॥

ನಿಗಮಾತತಿಗಳುಯದ—ನೀರಜಭವಾ-ದ್ಯಗಣಿತಸುರರು ಕಾಣದ । ಜಗದೊಡೆಯನು ಭಕ್ತಾದಿಗಳಿಗೊಲಿದು ತ್ರಸ್ತ—ನೆಗಳ ಭೇದಿಸೆ ಕಲಿ ಯುಗದಿ ಭೂಮಿಗೆ ಬಂದ ಅಗಣಿತಸುಗುಣಾಭರಣನು ಪನ್ನಗ-ನಗದೊಳು ನೇಮಾದಿಗಳನು ಕೈಕೊಳುತ ॥ ಅಗಣಿತ ಮೋಕ್ಷಾದಿಗಳನು ಕೊಡುತಿಹ ನಗೆಮೊಗದ ಚೆನ್ನಿಗ ನಿಂತಿಹನಮ್ಮ ॥ ಇಂಥಾಪ್ರಭುವ ॥ ೨ ॥

ಭಾರ್ಗವ ಭೂಮೀವಲ್ಲಭ, ಭವದೂರ ಭಕ್ತ—ವರ್ಗಕೆ ಇವ -ಸುಲಭ ॥ ನಿರ್ಗುಣ ನಿರ್ವಿಕಾರ, ಸ್ವರ್ಗದೈಶ್ವರ್ಯಕ್ಕಿಂತ ಅನರ್ಘ್ಯ ಸಂಪದವೀವ -ದೀರ್ಘಾಯುಷ್ಯವಂತನಾದ । ಭಾರ್ಗವ ರಾಮಾ-ನೃಪವರ್ಗಗಳೆಲ್ಲವ ರಣಾಗ್ರದಿ ಜಯಿಸಿದ ಉಗ್ರಪ್ರತಾಪಾ ॥ ಸುರಾಗ್ರಗಣ್ಯ ಸದ್ವಿಗ್ರಹ ಶ್ರೀಮದನುಗ್ರಹವಾಗಿಹ ದುರ್ಗವಕಡಿವ ॥ ಇಂಥಾಪ್ರಭುವ ॥ ೩ ॥

ನಿರ್ದುಃಖಾನಂದಭರಿತ, ನಿರವಧಿಕಸುಖ ಆರ್ದ್ರಹೃದಯವ ನೋಡಿ ತಾ ॥ ನಿದ್ರೆಯೊಳಗಿದ್ದವಗುಪದ್ರವಪಡಿಸಿ ದೈತ್ಯ—ಕ್ಷುದ್ರನ ಕೊಲಿಸಿ, ಸು—ಭದ್ರವ ಜಗಕೀ ಇತ್ತ ॥ ನಿರ್ದಯನಲ್ಲ ಸಮುದ್ರಶಯನ ಗೋವರ್ಧನ, ಖಳಕುಲಮರ್ದನ, ಯದುಕುಲವರ್ಧನ ॥ ಅರಿಕುಲಮರ್ದನ, ಲಕ್ಷ್ಮೀ ಜನಾರ್ದನ ವರ ಶೇಷಾದ್ರಿನಿವಾಸ ॥ ಇಂಥಾ ॥ ೪ ॥

ಸರಸಿಜೋದ್ಭವ—ಮನಸಿಜ—ಈರ್ವರು ಸುತರು -ಸುರತರಂಗಿಣೀ ತನುಜೆ—॥ ಪುರವೇ ವೈಕುಂಠ. ಇಂದ್ರಾದ್ಯಮರರೇ ಕಿಂಕರರು । ಗರುಡನೆ ತುರಗವು, ಪರ್ಯಂಕ ನಿಸ್ಸಳಂಕ ॥ ಸರಿದೊರೆಗಳ ನಾನರಿಯೆನು ವೆಂಕಟ ಗಿರಿಯೊಳು ಮೆರೆಯುವ ಕರುಣಿಗಳರಸನೆ, ಮರೆಯದೆ ಶರಣಾಗತರನು ಪೊರೆಯುವ ಮರುತಾಂತರ್ಗತಶಿರಿಜಯವಿಠಲ ॥ ಇಂಥಾ ॥ ೫ ॥

ಶ್ರೀ ಕೃಷ್ಣ ಪರಬ್ರಹ್ಮಣೇ ನಮಃ

ಜಲಕ್ರೀಡೆ.

ಇಂತಹ ದೊಡ್ಡ ದೊಡ್ಡ ಹಾಡುಗಳು, ನಮ್ಮ ಹಿರಿಯರ ಎಂದರೆ—ವೃದ್ಧಸ್ತ್ರೀಯರ ಬಾಯಲ್ಲಿ ಮಾತ್ರವೇ ಇದ್ದು ಕೇವಲ ಈಗಿನ ಮಹಿಳೆಯರಲ್ಲಿ ಒಬ್ಬಿಬ್ಬರು ಮಾತ್ರ ಅಸ್ಪಷ್ಟವಾಗಿ ಕಂಠಪಾಠಮಾಡಿಕೊಂಡಿದ್ದರೂ ಬೀದಿಯಲ್ಲಿ ಮಾಡಿದ ಹೋಮದಂತೆ, ಇವುಗಳನ್ನು ಪ್ರಚಾರಕ್ಕೆ ತರುವ ಉಪಾಯಗಾಣದೆ ಕೃಪಣರ ನಿಕ್ಷೇಪದಂತೆ ಮಾಡಿರುವುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಇಂತಹ ಪರಮಾತ್ಮನ ಲೀಲಾವರ್ಣನಪರವಾದ ಮತ್ತು ಭಕ್ತಿರಸಪ್ರಧಾನವಾದ ಹಾಡುಗಳನ್ನು ಪ್ರಯಾಸದಿಂದ ಸಂಗ್ರಹಿಸಿ, ಯುದ್ಧಸಂಬಂಧವಾದ ಕ್ಷಾಮದದೆಸೆಯಿಂದ ಪ್ರತ್ಯೇಕವಾಗಿ ಪ್ರಕಟಿಸಲಾಗದಿರುವುದರಿಂದಲೂ ನಮ್ಮ ಮಹಿಳೆಯರ ಅವಗಾಹನೆಗೆ ಆದಷ್ಟು ಬೇಗ ತರಬೇಕಾದುದು ಆವಶ್ಯಕವೆಂಬ ಭಾವನೆಯಿಂದಲೂ ನಂದಿನಿಯಲ್ಲಿ ಪ್ರತಿತಿಂಗಳೂ ಒಂದೊಂದು ಫಾರಮ್ಮಿನಲ್ಲಿ ಇದನ್ನು ಪ್ರಕಟಿಸುವವರಾಗಿದ್ದೇವೆ. ಇದಕ್ಕನುಸಾರವಾಗಿ ಹಿಂದಿನ ಸಂಚಿಕೆಯಲ್ಲಿ ರಾಸಕ್ರೀಡೆಯನ್ನು ಪ್ರಕಟಿಸಿರುವೆವು.

ರಾಗ ॥ (ರೈಲುಬಂಡಿ ಹಾಡಿನ ಮಟ್ಟು)

ಶ್ರೀಪತಿ ಕಥೆಯೊಂದು ಸ್ತ್ರೀಯರೆಲ್ಲರು ಕೇಳಿ । ಕಾಪಾಡುವ ಕೃಷ್ಣ ಕರುಣಾನಿಧೆ॥ ಪಾಪಪರಿಹಾರ—ತಾಪತ್ರಯ ವಿದೂರ। ಪರಮ ಸುಖವ ಕೊಡು ಭಾಗ್ಯನಿಧೆ ॥ ೧ ॥ ಶ್ರೀಗಣನಾಯಕ ಶರಣೆಂಬೆನಯ್ಯ—ಭಾಗದಲಿದ್ದು ನೀ ಪಾಲಿಸಯ್ಯ । ಬೇಗದಿ ಕರುಣಿಸು ಭಕ್ತಜನಪ್ರಿಯ—ನಾಗಶಯನನ ಕಥೆ ನಡೆಸಯ್ಯ ॥ ೨ ॥ ಪಾರ್ವತೀಪತಿ ನಿಮ್ಮ ಪಾದಕ್ಕೆರಗುವೆ । ಗೀರ್ವಾಣವಂದಿತ ಗಂಗಾಧರ ॥ ಸರ್ವದಾ ನಂಬಿದೆ ಸಾಯುಜ್ಯಕೊಡಿಸುವ ಭಾರವು ನಿನ್ನದು ಭಾಗ್ಯನಿಧೆ ॥ ೩ ॥ ಮೂಲೋಕದಾಯಕ ಮುಕ್ತಿಪ್ರದಾಯಕ । ಒಳ್ಳೆ ಮತಿಯ ಕೊಡು ವಂದಿಸುವೆ ॥ ಪಲ್ಲವಮೃದುಪಾಣಿ ಪನ್ನಗನಿಭವೇಣಿ । ಕಲ್ಯಾಣಿ ಕರುಣಿಸೆ ರುದ್ರಾಣಿ ॥ ೪ ॥ ಮಾರುತಿಯಾರಾಣಿ ಮಾನಿನೀಗುಣಶ್ರೇಣಿ । ಭಾರತಿ ನಿನ್ನನು ಭಜಿಸುವೆನು॥ ಘೋರದುರಿತವ ದೂರಮಾಡಿ ಶಾಸ್ತ್ರದ ಸಾರವ ತಿಳಿಸೆನ್ನಿಂ ಸರಸದಿಂ ॥ ೫ ॥ ವರಾಹನದೀತೀರವಾಸ ಉಲ್ಲಾಸನೆ। ಶರಬಾಣೋದ್ಭವ ನಿಮ್ಮ ಶರಣೆಂಬೆ ॥ ಸುರಸೈನ್ಯಾಪತಿಯಾಗಿ ಶೂರನ್ನ ಕೊಂಡಾಡಿ। ಸುಬ್ರಹ್ಮಣ್ಯ ಶೂರಾಗ್ರಗಣ್ಯ ॥ ೬ ॥ ಅಂಜನಾವರಪುತ್ರ ಅಕಳಂಕಚರಿತ್ರ । ಮಂಜುಳವಾಗಿದೆ ಮನಸಿಗೆ ದೇವ ॥ ಸಂಜೀವಗಿರಿಧಾರ ಸಾಧುಪರಿವಾರ । ಸದಯ ನೀನೆನ್ನ ಭಾಗದೊಳಿರು ॥ ೭ ॥ ಲಂಡಕೀಚಕರನ್ನು ಘುಂಡಕೌರವರನ್ನು ಮಂಡೆಗಳೊಡೆದ ಉದ್ದಂಡಭೀಮ । ಚಂಡಾಶೋದ್ಧಾರಿತ ಖಂಡಿತ ರಿಪುಜನ—ಪಂಡಿತ ರಕ್ಷಿಸು ಪಾಹಿಯೆಂಬೆ ॥ ೮ ॥ ಶರಣಾರವೃಂದಕ್ಕೆ ಶರಣೆಂದು ಮರೆಹೊಕ್ಕೆ ಹರಿಭಕ್ತಿ ಕೊಡಿಸೆನಗೊಲಿದು ॥ ಗುರುರಾಯ ಮರೆಯದೆ ಕರುಣಿಸು ಸುಜ್ಞಾನದ ಮಾಧ್ವಮತದ ಶುಭಕಾರ್ಯವನು ॥ ೯ ॥ ವ್ಯಾಸರನ್ನು ಬೇಡಿ ವರಸುತರ ಕೊಂಡಾಡಿ । ವಾಸುದೇವನ ಲೀಲೆ ವರ್ಣಿಸುವೆ ॥ ದಾಶರಥೀರಾಮಚಂದ್ರನ ಪೊಗಳುವೆ ಶೇಷಗಿರೀಶಗೆ ಶರಣೆಂಬೆ ॥ ೧೦ ॥ ವಾಣಿ ಹರಿದ ಸೇಗದಿ ವಾಣಿಲಂಬಿನಿ ಶ್ರೀಮಾನಿನೀ ಮನ್ನಿಸು ವಾಕ್ಯವಂ । ಏಣಲೋಚನೆ ವೀಣಾಪಾಣಿ ಪುಸ್ತಕಧಾರಿಣಿ ಕಲ್ಯಾಣಿ ಕರುಣಿಸು ಗೀರ್ವಾಣಿ ॥ ೧೧ ॥ ಶ್ರೀಕರಸಂಪತ್ತು ಬೇಕಾದ ವರವಿತ್ತು ನೀ ಕಾಯಬೇಕಮ್ಮ ಲೋಕಮಾತೆ ॥ ಗೋಕುಲಾನಂದನ ಗೋವಿಂದನರಸಿಯೆ ವ್ಯಾಕುಲವ ಬಿಡಿಸಮ್ಮ ವನಜಾಕ್ಷಿ ॥ ೧೨ ॥ ಕಮಲಾಕ್ಷಿಯರೆಲ್ಲ ಯಮುನೆಯತೀರದಿ ಕಾತ್ಯಾಯಿನೀವ್ರತವನಾಚರಿಸೆ ॥ ಅಮರೇಶವಂದಿತ ಸಮಯವ ನೋಡುತ ಅಲ್ಲಿಗೆ ಬಂದನೆ ಕಳ್ಳಕೃಷ್ಣ ॥ ೧೩ ॥ ಕಾಳಿಂದೀಮಡುವಿನ ಆಳ ಕಂಡವರಿಲ್ಲ। ಕಂಬುಕಂಧರೆ ನೋಡೆ ಸಂಭ್ರಮವ ॥ ನಾಳೆಯಿಂದೀವರ ನದಿಯಲ್ಲಿ ವಿಹರಿಸೆ । ಬಾಳವಿಚಿತ್ರವೆ ಭಾಮಾಮಣಿ ॥ ೧೪ ॥ ಅಮೃತಕೆ ಸಮವಾದ ಯಮುನಾನದೀನೀರು । ಆನಂದ ಈ ವಾಸ—ವಾಸಗಳು ॥ ವಿಮಲದ ಉಸುಬಿನ ವಿಸ್ತಾರ ನೋಡೆಲೆ । ನಮ್ಮ ಪುಣ್ಯಕ್ಕಿನ್ನು ಸರಿಕಾಣೆ ॥ ೧೫ ॥ ಚಕ್ರವಾಕವು ಬಾಕುಬಲದ ಕುಕ್ಕುಟ ಹಂಸೆ, ಅಕ್ಕೊ ಮತ್ಸ್ಯಂಗಳು ಅದರೊಳಗೆ ॥ ಪಕ್ಷಿಜಾತಿಗಳೆಲ್ಲ ಸಾಲುಸಾಲಾಗಿವೆ ಅಕ್ಕ ನೀನೋಡೆಲೆ ಅದರ ಚೆಂದ ॥ ೧೬ ॥ ತಾಳೆ ಹಿಂತಾಳ ತಮಾಲ ಕಹೋಲವು, ಯೇಲಲವಂಗದ ತೋಪುಗಳು ॥ ಸಾಲ ರಸಾಲವು ಸಾಲುಸಾಲಾಗಿದೆ ಬಾಳ ವಿಚಿತ್ರವು ಬಾಲಾಮಣಿ ॥ ೧೭ ॥ ಕದಲಿ ಕಪಿತ್ಥವು ಬಿಜಪೂರ ದ್ರಾಕ್ಷಿ ಬದರಿ ಕಿತ್ತಳೆ ಪನಸಗಳು ॥ ಮಧುರದ ವನದಲ್ಲಿ ಮಧುರದಾಳಿಂಬವು ವಿಧವಿಧ ಫಲವೃಕ್ಷ ವಿಪರೀತವೆ ॥ ೧೮ ॥ ನಾಗಪುನ್ನಾಗವು ನಾರೀ ನೀಂ ಪೇಳಲೆ, ಹೇಗಿದೆ ಮನಸಿಗೆ ಹರುಷವಾಗಿ ॥ ಕೂಗುವ ನವಿಲುಗಿಣಿ ಕೂಗುವ ಪಕ್ಷಿಗಳ್, ರಾಗವ ಪಾಡಲು ರಮ್ಯವಾಗಿ ॥ ೧೯ ॥ ಮಲ್ಹಾರ ಜವ್ವಾಜಿ ಘುಡಿವಾಳ

ಸಂಪಿಗೆ, ಮಲ್ಲಿಗೆ ಕೇತಕಿ ಮಾಲತಿಯು । ಮಲ್ಲೆ ಶಾವಂತಿಗೆ ಮುಳ್ಳುಶಾವಂತಿಗೆ ಮಲ್ಲಿ ಸಂಪಿಗೆ ಜಾಜಿ ಅಲ್ಲಿಹುದೆ॥ ೨೦ ॥ ಶಿಂಗ ವಿಹಂಗ, ಕುರಂಗ ತುರಂಗವು, ಸಿಂಘದಿಂದೊಪ್ಪುವಾ ಶೂಕರವು । ಶಿಂಗಾಳಿಗೀತ ಸಂಗೀತಶೃಂಗಾರವು ಚೆಂಗಿ ಕುಣಿವೊ ಚಮರಿಗಳು ॥ ೨೧ ॥ ಒಂದು ದಿವಸ ನಾರಿಯರೊಂದಾಗಿ ನೆರೆದರು— ಇಂದುವದನೆಯರು ಯಮುನೆಯಲ್ಲಿ। ಸಿಂಧುರಗಮನೆಯರ್ ಸೀರೆಗಳನು ಬಿಚ್ಚಿ, ಮಿಂದರು ತನುಕಾಂತಿ ಮಿಣುಕುತಲಿ ॥ ೨೨ ॥ ಕರಕಂಕಣಧ್ವನಿ ಘಲುಘಲು ಘಲಿರೆನೆ, ಪರಸ್ಪರ ಉದಕವ ನೆರಚಿದರು ॥ ಕರಿಕುಂಭಗಳ ಪೋಲ್ವ ಗುರುಕುಚಭಾರಕ್ಕೆ ಕಾಂತೆಯರ ನಡುವುಗಳ್ ಬಳುಕುವುವು ॥ ೨೩ ॥ ಸ್ವರ್ಣವರ್ಣದದೇಹ-ಸೊಗಸಾದ ಅಭಯವು, ವರ್ಣಿಸಿಪೇಳ್ವುದಕಿನ್ನೊಂದುಂಟೇ॥ ಕಿನ್ನರನಾರಿಯರು ಪನ್ನಗಯುವತಿಯರು—ಇನ್ನಿವಳ್ಗೆ ರಂಭೆಯರಿವರಿಗೀಡೆ॥ ೨೪ ॥ ನೂರಾರು ಗೋಪಿಕಾ ನಾರಿಯರೊಂದಾಗಿ ನೀರೊಳಗೀಜಿದರು ನಿರ್ವಾಣದಲಿ ॥ ಹಾರಪದಕಂಗಳು ಥೋರ್ಯಕಂಕಣವಂಕಿ, ಕೀಲುಕಂಕಣಬಳೆ ಹೊಳೆಯುತಲಿ ॥ ೨೫ ॥ ಮಾರಜನಕನು ನಾರಿಯರ್ ತೆಗೆದಿಟ್ಟ ಸೀರೆಕುಪ್ಪಸಗಳಶೀಘ್ರದಿಂದ ॥ ಯಾರಿಗೂ ತಿಳಿಯದೆ ಚೋರತನವಮಾಡಿ, ಏರಿದ ಮರವನ್ನು ಜಾರಕೃಷ್ಣ ॥ ೨೬ ॥ ಜಲಕ್ರೀಡೆ ಸಂಭ್ರಮವ ಜಲಜಾಕ್ಷ ನೋಡುತ್ತ, ತಲೆಮರೆಮಾಡಿದ್ದ ತರುವಿನಲ್ಲಿ ॥ ತಲೆಯೊರೆಸಬೇಕೆಂದು ಲಲನೆಯರ್ ಬಂದರೆ, ತಂತಮ್ಮ ಸೀರೆಗಳ್ ದಡದಲ್ಲಿಲ್ಲ॥ ೨೭ ॥ ಮೈನೀರು ಸುರಿಸುತ್ತ ಕೈಕಾಲ್ಯ ಮುರಿಯುತ್ತ ಲಲನೆಯರ್ ವಸ್ತ್ರವ ಹುಡುಕಿದರು ॥ ಪೊಯ್ಯುವನಾರೆಲೆ ವನಿತೆ ನೀ ಪೇಳಲೆ, ಬಯ್ಯುವನಲ್ಲೇ ಬಲು ಮೂರ್ಖನಾವ ॥ ೨೮ ॥ ಕಡುಕೋಪಗಾರನು ಕೈಪಿಡಿದ ಗಂಡನು, ಹಿಡಿದು ಕಂಬಕ್ಕೆಕಟ್ಟಿ ಬಡಿವನಲ್ಲೆ । ಹುಡುಗಾಟವಾಗಿದೆ ದಿಗಿಲಾಗುತಿದೆ ಯೆನಗೆ, ಉಡುರಾಜಮುಖಿಯೊಂದುಪಾಯ ಪೇಳೆ ॥ ೨೯ ॥ ಅನಘೊಪ್ಪಳಿಸೀರೆ ಅರಣಿಕುಪ್ಪಸ, ಏನೆಂಬೆನಾಶ್ಚರ್ಯ ಎಲ್ಲಿಹೋಯ್ತೊ ॥ ನಾಯೇನ ಮಾಡಲಿ ನಮ್ಮತ್ತೆ ಬಯ್ವಳು । ಏನು ಉತ್ತರ ಪೇಳ್ವೆ ಏಣಾಕ್ಷಿ ॥ ೩೦ ॥ ಪಂಚವರ್ಣದಸೀರೆ ಪತಿವಶವಾಗುವುದು ಚಂಚಲಾಕ್ಷಿ ಅದರ ಚೆಂದ ಕೇಳೆ ॥ ಅಂಚಿನಮೇಲ್ ನವಿಲು ಗಿಣಿ, ಅಂಚುಮೇಲೊಪ್ಪುವ ಮಿಂಚಿನಕಾಂತಿಗೆ ಮಿಣುಕುವುದೆ ॥ ೩೧ ॥ ಜಲಬಿಲಿಸೀರೆಗೆ ಬೆಲೆಹೆಚ್ಚು ಬಾಳುವುದು, ಜಲಜಾಕ್ಷಿ ಸೆರಗೆಲ್ಲ ಹೊಳೆವುದಲ್ಲೆ ॥ ಎಳೆಗೆ ಸಾಸಿರಹೊನ್ನು ಬೆಲೆಕೊಟ್ಟು ತಂದುದು, ಎಲ್ಲರು ಬಲ್ಲರೆ ಫುಲ್ಲಾಕ್ಷಿ ॥ ೩೨ ॥ ಜಗನ್ಮೋಹಿನಿಸೀರೆ ಜರತಾರಿಕುಪ್ಪಸ, ಜಗವೆಲ್ಲ ತಗಲುವ ಅಮುದಾರಿ ॥ ನಗೆಯಾಟವಾಗಿದೆ ಹಗರಣಕ್ಕೊಳಗಾದೆ, ದಗಲ್ಬಾಜಿ ಅತ್ತಿಗೆ ದಂಡಿಪಳೇ ॥ ೩೩ ॥ ಉಟ್ಟ ಸೀರೆಯಬಿಚ್ಚಿ ಇಟ್ಟೆವಲ್ಲೇ ನಾವು ಊರೊಳು ಹೋದರೆ ಪೂರುವರೆ ॥ ಪಟ್ಟೆಸೀರೆಯು ನನ್ನದು, ಪತ್ತಲವೆ ನಿನ್ನದು,* ಇಟ್ಟುದು ಮಾಯವಾಗಿದೆಯಲ್ಲೆ ॥ ೩೪ ॥ ವಾರಿಜಮುಖಿಯರು ಸೀರೆಗಳು ಸಿಕ್ಕದೆ, ವರ್ಣಿಸಿ ವರ್ಣಿಸಿ ಖಿನ್ನರಾಗಿ ॥ ಮೀರಿದ ಕೆಲಸಕ್ಕೆ ದೈವವೇ ಗತಿಯೆಂದು, ತಿರುಗಿ ನೋಡಲು ಕೃಷ್ಣ ಮರದಲ್ಲಿದ್ದ ॥ ೩೫ ॥ ನಾರಿಯರೇ ಬನ್ನಿರಿ, ಆರಿವನು ನೋಡಿರಿ, ಸೀರೆಕದ್ದ ಕಳ್ಳ ಸಿಕ್ಕಿದನೆ ॥ ಬಾಡಿಲೆ ಭಾಮಿನಿ, ಏರಲೆ ಮರವನ್ನು, ಸೇರಿ ನಾವ್ ಪಿಡಿದಿವನ ಶಿಕ್ಷಿಸುವ ॥ ೩೬ ॥ ಅಕ್ಕಕ್ಕ ಇವನಿಗೆ ತಕ್ಕ ಶಿಕ್ಷೆಯ ಮಾಡಿ ಸೊಕ್ಕಡಗಿಪುದು ಉಚಿತವು॥ ಕಕ್ಕಸಬಡಿಸದೆ ಸಿಕ್ಕಿದ ನಮ್ಮ ಕಯ್ಗೆ ರಕ್ಕಸಾಂತಕ ಇವ ಚಿಕ್ಕವನೆ ॥ ೩೭ ॥ ತರುಣಿಯರ ವಸ್ತ್ರವ ಮರದಲ್ಲಿ ತಗುಲಿಸಿ, ಪರಿಹಾಸ ಮಾಡುವುದು ಸರಿಯೇನೊ ॥ ದೊರೆಮಗನಾದರೆ ಅರಮನೆ ಮಟ್ಟಿಗೆ ದುರುಳತನವೆಮ್ಮಲ್ಲಿ ನಡೆವುದೇನೊ ॥ ೩೮ ॥ ಒಳ್ಳೆ ಮಾತುಗಳಿಂದ ವಸ್ತ್ರಗಳ ಬೇಡುವ, ಗುಲ್ಲುಮಾಡದೆ ಬನ್ನಿ ಗೋಪಿಯರೆ ॥ ಎಲ್ಲರೂ ಒಟ್ಟಾಗಿ ಯದುಪನ ಬಳಿಸಾರಿ, ಫುಲ್ಲಾಕ್ಷ ಕೃಷ್ಣನ ಪೊಗಳಿದರೆ ॥ ೩೯ ॥ ನಂದಕುಮಾರನೆ ನವನೀತಚೋರನೆ ಮಂದರೋದ್ಧಾರನೆ ಮಾಧವನೇ ॥ ಇಂದ್ರಾದಿವಂದ್ಯ ಗೋವಿಂದ ಮುಕುಂದನೆ, ಚಂದವಾಗಿದೆ ನಿನಗೆ ಸರ್ವೇಶನೆ ॥ ೪೦ ॥ ಮಾನಾಭಿಮಾನವು ನಿನ್ನ ಅಧೀನವು, ಮಾನವ ಕಾಪಾಡಿ ಮನ್ನಿಸಯ್ಯ ॥ ಆನೆಯ ಮೊರೆಕೇಳಿಯಾಕ್ಷಣ ಸಲಹಿದೆ, ಶ್ರೀನಿವಾಸನೆ ನಮ್ಮ ಸೀರೆ ಕೊಡೊ ॥ ೪೧ ॥ ವರಮತ್ಸ್ಯಕೂರ್ಮನೆ ವರಾಹನಾರಸಿಂಹನೆ, ವರವಟುವಾಮನ ಸೀರೆ ಕೊಡೊ ॥ ಧರಣಿಪಾಲರಕೊಂದ ತರುಣೀಯ ಕರೆತಂದ ಕೃಷ್ಣ ಬೌದ್ಧ್ಯ ಕಲ್ಕ್ಯ ಕೃಪೆ ಮಾಡೊ ॥ ೪೨ ॥ ಕರವೆತ್ತಿ ಮುಗಿದರೆ ಕೊಡುವೆನು ಸೀರೆಯ, ಕರುಣಿಸುವೆನೆ ರಾಜತರುಣಿಯರೆ ॥ ಮರವೇರಿ ಬರಲಿಕ್ಕೆ ತರವಲ್ಲ ನಿಮ್ಮಿಂದ, ಮರಬಿಟ್ಟು ವರವಸ್ತ್ರ ಬರಲಾರದು ॥ ೪೩ ॥ ಮಂದಗಮನೆಯರು ಕುಂದರದನೆಯರು, ಹಿಂದುಮುಂದಾಗಿ ನಿಂದವರು ॥ ಒಂದೊಂದು ಕೈಯೆತ್ತಿ ವಂದನೆಯೆಂದರು ನಂದನಂದನನಿಗೆಂದು ॥ ೪೪ ॥ ಸಿಂಧುರಗಮನೆಯರೆ ಒಂದುಕೈಯಿಂದಲೇ ವಂದಿಸಿದರೆ ಸೀರೆ ಕೊಡುವನಲ್ಲ ॥ ಅಂದದಿಂದೆರಡು ಕೈಯ್ಗಳ ಜೋಡಿಸಿ, ವಂದನೆಮಾಡಿರಿ ಕೊಡುವೆ ಸೀರೆಗಳ ॥ ೪೫ ॥ ಲಲನೆಯರೆಲ್ಲರು ಲಜ್ಜೆಯೆಲ್ಲವ ತೊರೆದು, ತಲೆಯಮೇಲ್ ತಂತಮ್ಮ ಕೈಜೋಡಿಸಿ॥ ನಳಿನಾಕ್ಷ ನಿಮಗಿದು ನಮಸ್ಕಾರವೆಂದರೆ—ಪೊಲಿದನು ಶ್ರೀಕೃಷ್ಣ ವನಿತೆಯರ್ಗೆ ॥ ೪೬ ॥ ಒಂದೊಂದು ಯುವತಿಗೊಂದೊಂದು ಕೃಷ್ಣನು—ಇಂದುವದನೆಯರ ಮಧ್ಯದಲ್ಲಿ ॥ ಚಂಗಿಯ ಪಾಡುತ ಚಪ್ಪಾಳೆ ತಟ್ಟುತ, ಧಿಮಿಧಿಮಿಕೆಂದು

ಕುಣಿದರಾಗ ॥ ೪೭ ॥ ರಂಗನ್ನ ಕೂಡಿ ಸಿಂಗರವನೆಮಾಡಿ, ಅಂಗನೆಯರೆಲ್ಲ ನೋಡಿದರು ॥ ಮಂಗಳಮಹಿಮನ ಗಂಗೆಯ ಜನಕನ್ನ ಮಂಗಳಂ ಪಾಡಿ ಕೊಂಡಾಡಿದರು ॥ ೪೮ ॥ ಪೆರಿಯಕೊಳ್ಳಿವಾಸ (?) ವರದರಾಜನದಾಸ, ಹೇಳುವೆ ಈ ಕಥೆಯ ಕೇಳಿರೆಲ್ಲ ॥ ಮಂಗಳಂ ಶ್ರೀಸತ್ಯರಂಗನಿಗೆ, ಜಯ ಮಂಗಳಂ ಗೋಪಾಲಕೃಷ್ಣನಿಗೆ ॥ ೪೯ ॥

— : ಸಂಪೂರ್ಣವು : —

ಸಂಪಾದಿಕೆಯವರ ಹಸ್ತದಲ್ಲಿ.

ಈ ಮುಂದೆ ನಿರ್ದೇಶಿಸಲ್ಪಡುವ ಯಕ್ಷಗಾನ ಕಥೆಗಳ ಹಸ್ತಪ್ರತಿಗಳು ಮುದ್ರಣ ಮತ್ತು ಪ್ರಕಟನೆಗಳಿಗಾಗಿ ನಮ್ಮಲ್ಲಿಗೆ ಕರ್ತರಿಂದಲೂ ಸಂಗ್ರಾಹಕರಿಂದಲೂ ಕಳುಹಲ್ಪಟ್ಟಿರುವವು. ಅವುಗಳಲ್ಲಿ ಅತ್ಯಗತ್ಯವಾಗಿಯೂ ಜಾಗ್ರತೆಯಾಗಿಯೂ ಪ್ರಕಾಶಕ್ಕೆ ಬರಬೇಕಾದುದನ್ನು ಮಾತ್ರ, ನಂದಿನಿಯಲ್ಲಿ ಮುದ್ರಿಸಲು ಕಲ್ಪಿಸಿರುವೆವಲ್ಲದೆ, ಉಳಿದವನ್ನು ಸಾಧ್ಯವಾದಂತೆಲ್ಲ ಪ್ರತ್ಯೇಕ ಪುಸ್ತಕವಾಗಿ ಪ್ರಚಾರಕ್ಕೆ ತರುವೆವು.

ಸಂ—ನಂದಿನಿ, ಹಿತೈಷಿಣಿ

ಸಂಖ್ಯೆ.	ಪುಸ್ತಕಗಳ ಹೆಸರು.	ರಚಿಸಿದವರು.	ಕಳುಹಿದವರು.
೧ †	ಕನ್ನಡ ಭಾಗವತ (ಶ್ರೀಕೃಷ್ಣನ ಬಾಲಲೀಲೆ)	ದಿವಂಗತ, ರಾಮಾನುಜಾಚಾರ್ಯರು	ಚಿ॥ ನಗರದ, ತಿರುವೆಂಗಡಮ್ಮ ಮತ್ತು ಮಳೂರಿನ ಶ್ರೀರಂಗಮ್ಮ. ಶ್ರೀರಂಗಮ್ಮನವರು ಬೆಂಗಳೂರು.
೨	ಬಾಣಾಸುರನ ಕಥೆ (ಉಷಾಹರಣ)	ದಿವಂಗತ, ತಿಮ್ಮಪ್ಪದಾಸರು:- ದ್ರೌಪದೀವಸ್ತ್ರಾಪಹರಣ, ಸುಭದ್ರಾಪರಿಣಯ ಮೊದಲಾದಗ್ರಂಥಗಳನ್ನು ರಚಿಸಿದವರು.	
೩	ಪಕಪಿಡಂಬರ ಕಥೆ		
೪	ಉತ್ತರ ಗೋಗ್ರಹಣ		
೫	ವಿರಾಟಪರ್ವ		
೬	ಅಜಮಿಳೋಪಾಖ್ಯಾನ (ಹರಿಭಜನ ಗ್ರಂಥ)	ಅಜ್ಞಾತವಾಸಿಗಳು.	ಸ್ವಪ್ರಯಾಸದಿಂದ ತರಿಸಿದ್ದು.
೭	ಸಾವಿತ್ರೀಚರಿತ್ರೆ (ಮೊದಲಿನಿಂದ)	———	

† ಇದನ್ನು ಮಾತ್ರ, ನಂದಿನಿಯಲ್ಲಿಯೇ ಪ್ರಕಟಿಸುವ ಸಂಕಲ್ಪವಿದೆ.

೨. ೪ ಈ ಎರಡು ಪುಸ್ತಕಗಳನ್ನು ಸತೀಹಿತೈಷಿಣಿಯ ೧೧. ೧೨ ನೇ ಗ್ರಂಥಗಳ ಬಹುಮಾನ ಪುಸ್ತಕವಾಗಿ ಪ್ರಕಟಿಸುವೆವು.

೩. ಸೂ. ಇವುಗಳಲ್ಲಿ. ಧ್ರುವಚರಿತ್ರೆ- ನಳಚರಿತ್ರೆಗಳು ಬರುವ ಸೂಚನೆಯಿದೆ. ಸಂ.

ಸಂ.—ನಂ.

—: ಶ್ರೀ :—

ಸ್ತ್ರೀಯರ ಕರ್ತವ್ಯವಿಚಾರ.

" ವಿಸರ್ಗಬಿಂದು ಮಾತ್ರಾಸು ಯದಧಿಷ್ಠಾನಮೇವಚ |
ತದಧಿಷ್ಠಾತ್ರೀಯಾ ದೇವೀ ತಸ್ಯೈವಾಣ್ಯೈ ನಮೋನಮಃ ||
" ಗ್ರಂಥಕರ್ತೃತ್ವ ಶಕ್ತಿಂಚ ಸಚ್ಛಿಷ್ಯಂ ಸುಪ್ರತಿಷ್ಠಿತಮ್ |
ಪ್ರತಿಭಾಂಸತ್ಸಭಾಯಾಂಚ ವಿಚಾರ ಕ್ಷಮತಾಂ ಶುಭಮ್ ||
" ಜ್ಞಾನಂ ದೇಹಿ ಸ್ಮೃತಿಂ ದೇಹಿ ವಿದ್ಯಾಂ ವಿದ್ಯಾಧಿದೇವತೆ |
ಪ್ರತಿಷ್ಠಾಂ ಕವಿತಾಂ ದೇಹಿ ಶಕ್ತಿಂ ಶಿಷ್ಯಪ್ರಬೋಧಿಕಾಮ್ ||"

ಆರ್ಯಭಗಿನಿಯರೇ!

ಈಗ ನಾನು ಪ್ರವೇಶಮಾಡಿರುವ ಸ್ಥಾನವು ಸಮಾಜಸೇವಾನಿರತೆಯರಾಗಿರುವ ಮಹಿಳಾಸಮಾಜದವರ ಆತ್ಮವಿಚಾರವಿಮರ್ಶನಾಸ್ಥಾನವು! ಇಲ್ಲಿ, ಸೇವಾವೃತ್ತಿಯಲ್ಲಿರುವ ತಾವೆಲ್ಲರೂ ಕರ್ತವ್ಯಜಾಗ್ರತರಾಗಿರುವ ಮಹಿಳಾಮಣಿಯರು. ಇಂತಿರುವ ತಮ್ಮ ಸಮ್ಮುಖದಲ್ಲಿ ನಾನು ತಮ್ಮಿಂದ ನಿಯೋಜಿಸಲ್ಪಟ್ಟು ಬಂದು, ಈಗ ಮಾಡಬೇಕಾಗಿರುವ ಕಾರ್ಯಭಾಗವೆಂದರೆ,-ಸ್ತ್ರೀಯರ ಕರ್ತವ್ಯವಿಚಾರವಾಗಿ ಭಾಷಣಮಾಡುವುದು! ಇದು ನನ್ನಿಂದ ಎಷ್ಟುಮಟ್ಟಿಗೆ ಸಾಧ್ಯವೋ ಹೇಳಲಾರೆನು. ಆದರೂ ಸತ್ಪುರುಷರ ಸಂದರ್ಶನ, ಸಂಭಾಷಣ, ಸಹವಾಸಗಳು ವ್ಯರ್ಥವೆನ್ನಿಸಲಾರವು. ಆದುದರಿಂದ ಲೋಕಸೇವಾಧುರೀಣರಾದ ಮಹನೀಯರ ಶಾಸನಬಲದಿಂದಲೂ ಭಗವತಿಯ ಆಶ್ವಾಸನದಿಂದಲೂ ಸೋದರೀ ಪ್ರೇಮಾರ್ದ್ರಹೃದಯೆಯರಾಗಿರುವ ತಮ್ಮೆಲ್ಲರ ಪ್ರೋತ್ಸಾಹಬಲದಿಂದಲೂ ನಾನೇನೋ ಈ ನನ್ನ ಪಾಲಿಗೆಬಂದಿರುವ ಕೆಲಸವನ್ನು ನೆರವೇರಿಸಲು ಮುಂದೆಬಂದು ನಿಂತಿರುವೆನು. ಸೋದರೀ ಪ್ರೇಮಭರದಿಂದ ನಾನಾಡುವ ವಾಕ್ಯಗಳಲ್ಲಿ ನ್ಯೂನತೆಗಳೇನಾದರೂ ಕಂಡುಬಂದರೂ ಕ್ಷಮಿಸುವುದು ತಮ್ಮ ನಿಸರ್ಗಗುಣವೇ ಆಗಿದೆ.

ಸ್ತ್ರೀಯರ ಕರ್ತವ್ಯವಿಚಾರ --

ಸ್ತ್ರೀಯರ ಕರ್ತವ್ಯವೆಂದರೆ ಬಾಯಿಮಾತಿಂದ ಮುಗಿದು ಹೋಗುವುದಾಗಲಿ ಅಥವಾ ಒಂದೆರಡು ವಾಕ್ಯಗಳಲ್ಲಿ ಅಡಕಮಾಡಿ ಹೇಳುವಂತಹದಾಗಲಿ ಅಲ್ಲ. ಲೋಕಯಾತ್ರೆಯಲ್ಲಿ ಸ್ತ್ರೀಯರ ಕರ್ತವ್ಯವು ಬಲು ಬಲವತ್ತರವಾದುದು. ಎಂದರೆ ಅದು ಆಚರಣೆಗೆ ಅಸಾಧ್ಯವೆಂದು ಹೇಳಿದಂತೆ ಭಾವಿಸಬಾರದು. ಸ್ತ್ರೀಯರ ಕರ್ತವ್ಯವೆಂಬಲ್ಲಿ ಅಂಗನೆಯರ ಆಚಾರ, ಅಥವಾ ನಾರಿಯರ ನಡವಳಿಕೆಗಳೆಂದು ಹೇಳಿ ಬಿಡುವುದು ಸುಲಭಸಾಧ್ಯವು. ಆದರೆ ಅವುಗಳ ಸಮರ್ಥನವನ್ನು ಮಾಡಿಕೊಂಡು ಅದರಂತೆ ನಡೆಯುವುದು ಪ್ರಯಾಸವು. ಎಂದರೆ ಅದನ್ನು ಯಾರೂ ಆಚರಿಸಲಾರರೆಂದು ಹೇಳಲಿಲ್ಲ. ಪ್ರಯತ್ನಪರರಾದ ಸಹನಶೀಲರಿಗೆ ಅದಾವುದೂ ಅಸಾಧ್ಯವಾದುದಲ್ಲ.

ಸ್ತ್ರೀಯರ ಕರ್ತವ್ಯವೇನು?:— ಎಂದರೆ, ಕೆಲವರು "ಮಕ್ಕಳನ್ನು ಪಡೆಯುವುದು, ಅಡಿಗೆಮಾಡಿ, ಗಂಡ ಮಕ್ಕಳು ಅಪ್ತೇಷ್ಟರುಗಳ ಹೊಟ್ಟೆಯನ್ನು ತುಂಬಿಸುವುದು" ಎಂದು ಹೇಳುವವರಾಗಿದ್ದಾರೆ. ಆದರೆ ಅಂತಹ ಉತ್ತರವು ವಿಚಾರಪರರಾದ ಆರ್ಯಜನಾಂಗಕ್ಕೆ ವಿಷಾದವನ್ನುಂಟುಮಾಡದೆ ಬಿಡದು. ಏಕೆಂದರೆ, ಸ್ತ್ರೀಜನ್ಮಧಾರಣವು ಕೇವಲ ಮೇಲೆ ಹೇಳಿದ ಆ ಎರಡು ಕೆಲಸಗಳಿಂದಲೇ ಕೃತಾರ್ಥತೆಯನ್ನು ಹೊಂದುವಂತಿಲ್ಲ. ಅವರ ಕರ್ತವ್ಯವು ಮಹತ್ತರವಾದ ಅಧಿಕಾರಪೂರ್ಣವಾದುದು. ಆ ಅಧಿಕಾರದಲ್ಲಿ ಅವರು ಉತ್ತರವಾದಿಗಳಾಗಿ ನಿಲ್ಲಲು ಬಹುಜಾಗರೂಕರಾಗಿರಬೇಕು. ಹೇಗೆಂದರೆ, ನಮ್ಮ ಸ್ತ್ರೀಯರು ಆರ್ಯರಮಣಿಯರಾಗಬೇಕು, ಆರ್ಯಮಾತೆಯರೆನ್ನಿಸಬೇಕು. ಆರ್ಯಮಾತೃಸೇವಾನಿರತೆಯರಾಗಬೇಕು. ಹಾಗಾಗಬೇಕಾದರೆ ಅವರಲ್ಲಿ ನಿಷ್ಕಲಂಕಪ್ರೇಮ, ದೃಢಭರವಸೆ, ವಿಚಾರವಿಮರ್ಶೆ, ಸಾಧನಶಕ್ತಿ, ಶ್ರಮಸಹಿಷ್ಣುತೆಗಳೇ ಮೊದಲಾದ ಪ್ರಜಾಸೃಷ್ಟಿ, ಸಂರಕ್ಷಣೆ, ಸುಶಿಕ್ಷಣೆ, ಸದ್ಬೋಧನೆ, ಶಾಂತಿಸ್ಥಾಪನೆಗಳನ್ನುಂಟುಮಾಡುವ ದೈವಿಕ ಗುಣಗಳು ಅವರಲ್ಲಿ ಚೆನ್ನಾಗಿ ಬೇರೂರಿರಬೇಕು. ಅಂತಹ

● ಈ ಲೇಖನವು, ಕಳೆದ ೧೯೧೬ನೆ ಮೇ ತಿಂಗಳು ತಾ|| ೧೮ರಲ್ಲಿ ಬೆಂಗಳೂರು ಮಹಿಳಾಸೇವಾಸಮಾಜದ ಸೋದರಿಯರಿಗಾಗಿ ಕೊಟ್ಟ ಉಪನ್ಯಾಸದ ಸಾರಾಂಶವಾಗಿದೆ. ಇದನ್ನು ಇಂದಿನ ವರೆಗೂ ಕಾರಣಾಂತರಗಳಿಂದ ಅಡಗಿಸಿದ್ದು, ಇಷ್ಟುಕಾಲಾನಂತರದ ಮೇಲೆ ಹೊರಗೆಡಹಿದುದಕ್ಕಾಗಿ ನಾವು ನಮ್ಮ ಸೋದರೀವರ್ಗದವರೆಲ್ಲರಲ್ಲಿಯೂ ಕ್ಷಮೆಯನ್ನು ಕೋರುತ್ತಿರುವೆವು. ಸಂ.—ನಂದಿನಿ.

ಸದ್ಗುಣ ಪಂಚಕಗಳು ಅವರಲ್ಲಿ ರೂಢಮೂಲವಾಗಿ ತೋರಿದಮೇಲೆಯೇ ಅವರು ಕರ್ತವ್ಯವನ್ನು ತಿಳಿದ ಕುಲವಧೂಮಣಿಯರೆನ್ನಿಸುವರು; ಮತ್ತು ಆರ್ಯಮಾತೆಯರಾಗಿ ಪ್ರಕಾಶಿಸುವುದಕ್ಕೂ ಅರ್ಹರಾಗುವರು. ಅದಕ್ಕೆ ಮೊದಲು, ಅವರ ಕರ್ತವ್ಯವು ಪೂರ್ಣವಾಗುವುದಿಲ್ಲ.

ಸಾಮಾನ್ಯವಾಗಿ ನೋಡುವುದರಲ್ಲಿ, ನಮ್ಮ ಸ್ತ್ರೀಯರ ಪಾಲಿಗೆ ಬಿದ್ದಿರುವ ಕಾರ್ಯಭಾಗಗಳಲ್ಲಿ ಗೃಹರಾಜ್ಯಪರಿಪಾಲನೆಯೇ ಪ್ರಾಮುಖ್ಯವಾಗಿರುವುದರಿಂದ ಮೊದಲು ಅದೊಂದೇ ವಿಚಾರವಾಗಿ ಪ್ರಸ್ತಾಪಿಸುವುದು ಸದ್ಯಕ್ಕೆ ಸಾಕೆಂದು ತೋರುವುದು. ಈ ಗೃಹರಾಜ್ಯಪರಿಪಾಲನೆಯಲ್ಲಿ ಗೃಹಕಾರ್ಯದಕ್ಷತೆಯೂ, ಬಾಲಸುಶಿಕ್ಷಣವಿಚಕ್ಷಣೆಯೂ ಪತಿಮನೋಭಿಪ್ರಾಯತತ್ವಜ್ಞತೆಯೂ, ನ್ಯಾಯವಿಚಾರಜ್ಞಾನವೂ ಅವರಲ್ಲಿ ಬಲವಾಗಿರಬೇಕು.

ಗೃಹಸ್ವಾಮಿನಿಯಲ್ಲಿ ದಕ್ಷತೆಗೆ— ಎಂದರೆ, ಕಾರ್ಯಗಳ ಮರ್ಮವನ್ನು ತಿಳಿದು ಬಾಧಕಗಳುಂಟಾಗದಂತೆ ನೋಡಿಕೊಳ್ಳುವ ಸಾಮರ್ಥ್ಯಕ್ಕೆ,— ಕೊರತೆಯಾಗಿದ್ದರೆ, ಆ ಗೃಹದಲ್ಲಿ ನಡೆಯುವ ಕಾರ್ಯಗಳು ಕ್ರಮದಲ್ಲಿರುವುದಿಲ್ಲ; ಮತ್ತು ಆ ಗೃಹಕ್ಕೆ ಅಡಿಗಡಿಗೆ ಬಾಧೆಗಳೂ ತಪ್ಪದೆ ಬಿಡುವುದಿಲ್ಲ. ಅಲ್ಲದೆ, ದಕ್ಷಳಲ್ಲದುದರಿಂದ ಅಂತಹ ಗೃಹಿಣಿಗೂ ಆ ಗೃಹರಾಜ್ಯಕ್ಕೂ ಅನುಕೂಲಕ ಗೃಹಸ್ವಾಮಿಗೂ ಸಂದರ್ಭವಶದಿಂದ ಅಪಾಯ, ಆಪದ, ಸಂತಾಪಗಳೂ ಉಂಟಾಗಬಹುದಾಗಿವೆ. ಗೃಹಿಣಿಯರು ಸಮರ್ಥೆಯರಾಗಿದ್ದರೆ ಮುಂದೆ ಉಂಟಾಗಬಹುದಾದ ಅಪಾಯಗಳಾವುವೆಂಬುದನ್ನು ಮುಂದಾಗಿ ತಿಳಿದು ಅದಕ್ಕೆ ತಕ್ಕಂತೆ ಜಾಗರೂಕತೆಯಿಂದ ತಕ್ಕ ಪ್ರತೀಕಾರವನ್ನು ಮಾಡಿ, ತನ್ನನ್ನೂ ತನ್ನ ಗೃಹ-ಪರಿವಾರಗಳನ್ನೂ ಅಮೂಲಕ ತನ್ನ ಸ್ವಾಮಿಯನ್ನೂ ಆಪತ್ತಿನಿಂದ ಉದ್ಧಾರಮಾಡಬಲ್ಲವಳಾಗುವಳು. ಇದಕ್ಕೆ ದೃಷ್ಟಾಂತವೆಂದರೆ, ನಮ್ಮ ಆರ್ಯಮಹಿಳಾ ಮಾರ್ಗದರ್ಶಿನಿಯರಲ್ಲಿ ಅಗ್ರಗಣ್ಯಳಾದ ದಮಯಂತೀದೇವಿಯ ಚರಿತೆಯೇ ಸಾಕಷ್ಟು ಸಮಾಧಾನವನ್ನು ಕೊಡಬಲ್ಲುದಾಗಿದೆ. ದಮಯಂತೀದೇವಿಯು, ತನ್ನ ಪತಿಯಾದ ನಳಮಹಾರಾಯನು ಕಲಿಪ್ರೇರಿತನಾಗಿ ಪುಷ್ಕರನೊಡನೆ ಜೂಜಾಡಿ ಸಮಸ್ತ ರಾಜ್ಯ-ಕೋಶ-ಭಂಡಾರಗಳನ್ನೂ ಸೋಲುತ್ತಿದ್ದುದನ್ನು ನೋಡಿ, ಮುಂದೆ ಬರಬಹುದಾದ ಆಪತ್ತನ್ನು ತಿಳಿದು, ಒಡನೆಯೇ ತನ್ನ ಮಕ್ಕಳನ್ನು ರಥದಲ್ಲಿ ಕುಳ್ಳಿರಿಸಿ, ಅವರನ್ನು ತನ್ನ ತಂದೆಯ ಬಳಿಯಲ್ಲಿ ಬಿಟ್ಟುಬರುವಂತೆ ಸಾರಥಿಗೆ ಕಟ್ಟುಮಾಡಿ ಕಳುಹಿದುದಲ್ಲದೆ, ಪತಿಯು ರಾಜ್ಯಕೋಶಗಳನ್ನು ಕಳೆದುಕೊಂಡರೂ ಸ್ವಾತಂತ್ರ್ಯವನ್ನು ಕಳೆದುಕೊಳ್ಳದಂತೆ ಎಚ್ಚರಿಸಿದುದೇ ಆಕೆಯ ದೀರ್ಘಾಲೋಚನೆಯನ್ನೂ ದಕ್ಷತೆಯನ್ನೂ ತೋರಿಸುವುದು.

ಇನ್ನು ಸ್ತ್ರೀಯರ ಕರ್ತವ್ಯದಲ್ಲಿ ಎರಡನೆಯದಾದ ಬಾಲಸುಶಿಕ್ಷಣದ ವಿಚಾರದಲ್ಲಿಯೂ ಹಾಗೆಯೇ ಅವರು ವಿಚಕ್ಷಣೆಯರಾಗಿರಬೇಕು. ಬಾಲ-ಬಾಲೆಯರ ಶೀಲಸ್ವಭಾವಗಳು ತಾಯಿಯರಾದವರಿಗೆ ತಿಳಿಯುವಂತೆ ಇತರರಿಗೆ ತಿಳಿಯುವುದು ಸುಲಭವಲ್ಲ. ಏಕೆಂದರೆ, ಮಕ್ಕಳನ್ನು ಚಿಕ್ಕಂದಿನಲ್ಲಿ ಆಡಿಸುವುದೂ ಉಣಿಸುವುದೂ ಮುದ್ದಿಸುವುದೂ ತಣಿಯಿಸಿ, ನುಡಿಯಿಸಿ, ನಲಿವೇರಿ ನಲಿದಾಡಿಸುವುದೂ ಸ್ತ್ರೀಯರ ಕೆಲಸವಾಗಿರುವುದು. ಸ್ತ್ರೀಯರು ಮಕ್ಕಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ಪುರುಷರು ನೋಡಿಕೊಳ್ಳಲಾರರು. ಏಕೆಂದರೆ, ಸ್ತ್ರೀಜಾತಿಸಹಜವಾಗಿರುವ ಪ್ರೇಮ, ಆದರ, ಸಹನೆಗಳ ಕೋಮಲಭಾವವು ಪುರುಷರಲ್ಲಿರುವುದಿಲ್ಲ. ಮಕ್ಕಳ ಲಾಲನಪಾಲನಗಳಲ್ಲಿ ಸ್ತ್ರೀಯರು ತೋರುವ ನೈಪುಣ್ಯವನ್ನು ಪುರುಷರು ತೋರಲಾರರು. ಮಕ್ಕಳ ಆಟ-ಪಾಟಗಳು ಕೂಡ ಹಾಗೆಯೇ ಇರುವವು.

ಸ್ತ್ರೀಯರಿಗೆ ಪ್ರೇಮ, ಆದರ, ಸಹನೆಗಳೇನೋ ಅವರ ಸ್ವಭಾವಸಹಜಗುಣಗಳಾಗಿರುವುದರಿಂದ, ಅವರು ತಮ್ಮ ಮನಃಪೂರ್ವಕವಾಗಿಯೇ ಮಕ್ಕಳ ಲಾಲನ-ಪಾಲನಗಳಲ್ಲಿ ನಿರತೆಯರಾಗಿರುವರು. ಮಕ್ಕಳನ್ನು ಆಡಿಸುವುದೆಂದರೆ ಅವರಿಗೆ ಅದೊಂದು ಉತ್ಸಾಹಜನಕವಾದ ವಿಶ್ರಾಂತಿಯೇ ಆಗಿ ತೋರುತ್ತಿದೆ. ಗೃಹಕಾರ್ಯಗಳ ಕೋಟಲೆಗಳಿಂದ ಬೇಸತ್ತು ಬಂದ ಭಾಮಿನಿಯರಿಗೆ, ತಮ್ಮ ಕಾರ್ಯಕಲಾಪಗಳು ಒಂದು ಸದಕ್ಕೆ ಬಂದು, ಸಮಯವು ದೊರೆಯಿತೆಂದರೆ ಆಗ ಮಕ್ಕಳ ಮುದ್ದುಮುದ್ದಾದ ಆಟಪಾಟಗಳೂ ಆ ನಡೆನುಡಿಗಳೂ ಅವರ ಆಯಾಸವನ್ನೆಲ್ಲಾ ಕ್ಷಣಮಾತ್ರದಲ್ಲಿಯೇ ಮರೆಯಿಸಿ, ಹೊಸಹುರುಪನ್ನು (ನೂತನೋತ್ಸಾಹ) ಉಂಟುಮಾಡುವುವು. "ಪುರುಷರಿಗೆ ಅಷ್ಟು ಸೌಲಭ್ಯವಾಗಲೀ ಅಷ್ಟಕ್ಕೆ ಅವಕಾಶವಾಗಲೀ ದೊರೆಯಬೇಕೆಂದರೆ ಕಷ್ಟ.

ಇಷ್ಟು ಸ್ವಭಾವಸಿದ್ಧವಾದ ಗುಣಗಳಿದ್ದರೂ ಸ್ತ್ರೀಯರಲ್ಲಿ ಕಾಲೋಚಿತ ಕ್ರಿಯಾಭಿಜ್ಞತೆಯಿಲ್ಲದಿದ್ದರೆ, ಮಕ್ಕಳ ಆರೋಗ್ಯರಕ್ಷಣ, ಅಭ್ಯಾಸಕ್ರಮಗಳು ಕೆಟ್ಟು, ಅವರು ಆಲಸ (ಸೋಮಾರಿ) ರಾಗಿಯಾಗಲಿ, ಕರ್ತವ್ಯವಿಮೂಢರಾದ ಮೂರ್ಖರಾಗಿಯಾಗಲಿ, ಇಲ್ಲವೆ ಅನಾರೋಗ್ಯವುಳ್ಳವರಾಗಿಯಾಗಲಿ ತಾವೂ ಸುಖಬಾಹಿರರೆನಿಸಿ, ತಮ್ಮನ್ನು ಹೆತ್ತವರ ಮತ್ತು ಆಪ್ತೇಷ್ಟರ ದುಃಖಕ್ಕೂ ಕಾರಣರಾಗುತ್ತಾರೆ. ತಾಯಿಯಲ್ಲಿ ಬಾಲಸುಶಿಕ್ಷಣವಿಚಕ್ಷಣೆಯೂ ಕಾರ್ಯದಕ್ಷತೆಯೂ ಚೆನ್ನಾಗಿ ಇದ್ದರೆ, ಮಕ್ಕಳು ಎಷ್ಟು ದುರ್ಬಲರಾಗಿರಲಿ ಮೂಢರಾಗಿರಲಿ ಅವರನ್ನು ಸರ್ವಪ್ರಯತ್ನದಿಂದಲೂ ಕರ್ತವ್ಯನಿಷ್ಠರನ್ನಾಗಿ ಮಾಡುವರು. ಇದಕ್ಕೆ ಉದಾಹರಣೆಯೆಂದರೆ,— ವಿದುಲಾ, ಕುಂತೀ, ದೇವಲದೇವಿಯರೇ ಮೊದಲಾದ ಪುರಾ

ಸೇತಿಹಾಸ ಪ್ರಸಿದ್ಧರಾದ ನಮ್ಮ ಆರ್ಯಮಹಿಳೆಯರ ಉದಾರಚರಿತೆಗಳೇ ಸಾಕಾಗಿವೆ. ವಿದುಲಾದೇವಿಯು ದುರ್ಬಲನಾಗಿದ್ದ ತನ್ನ ಮಗನಾದ ಸಂಜಯನು ತನ್ನ ಕಾಲೋಚಿತವಾದ ಹಿತಬೋಧೆಗಳಿಂದ ನೂತನೋತ್ಸಾಹವನ್ನು ಹೊಂದಿ, ಶತ್ರುನಿಗ್ರಹಮಾಡಿ ಸುಖಿಸುವಂತೆ ಮಾಡಿದಳು. ಕುಂತೀದೇವಿಯು ತನ್ನ ಪುತ್ರರು ಸ್ವಧರ್ಮಕ್ಕೆ ಲೋಪವನ್ನು ತರಬಾರದೆಂದು ಭಾವಿಸಿ, ಮಕ್ಕಳಲ್ಲಿ ಕರ್ತವ್ಯನಿಷ್ಠೆ, ಧೈರ್ಯೋತ್ಸಾಹಗಳು ಹೆಚ್ಚಿ, ಶತ್ರುನಿಗ್ರಹಕಾರ್ಯದಲ್ಲಿ ಕೃತನಿಶ್ಚಯರಾಗುವಂತೆ ಮಾಡಿದಳು. ಹಾಗೆಯೇ ವೀರಮಾತೆಯಾದ ರಜಪೂತರಮಣಿ ದೇವಲದೇವಿಯು ತನ್ನ ಪುತ್ರರೀರ್ವರನ್ನೂ ಕಾಲೋಚಿತ ಬೋಧೆಗಳಿಂದ ಸ್ವಧರ್ಮಪರಿಪಾಲಕರೂ ರಾಜಭಕ್ತಿಯುತರೂ ಸ್ವದೇಶಾಭಿಮಾನಪರಿಪೂರ್ಣರೂ ಆದ ಧನ್ಯರನ್ನಾಗಿ ಮಾಡಿದಳು. ಇಂತಹ ಉದಾತ್ತಚರಿತೆಯರು ಹಿಂದೆ ನಮ್ಮ ಆರ್ಯಭೂಮಿಯಲ್ಲಿ ಎಷ್ಟೋ ಮಂದಿ ಆಗಿಹೋಗಿರುವರು. ಇದಕ್ಕಾಗಿಯೇ ಸ್ತ್ರೀಯರಲ್ಲಿ ಬಾಲಸುಶಿಕ್ಷಣವಿಚಕ್ಷಣೆಯು ಬಲವಾಗಿ ಬೇಕೆಂದು ಹೇಳಿದುದು

ಇನ್ನು ಗೃಹರಾಜ್ಯಭಾರದಲ್ಲಿ ಬಲವತ್ತರವೂ, ಸತೀಕರ್ತವ್ಯದಲ್ಲಿ ಪ್ರಧಾನವೂ ಆದ ಪತಿಮನೋಭಿಪ್ರಾಯತತ್ತ್ವಜ್ಞತೆಯ ವಿಷಯದಲ್ಲಿ ಹೇಳುವುದೇನಿದೆ? ಪತಿಯ ಸುಖಸಾರಸರ್ವಸ್ವವೇ ಪತ್ನಿಯೆಂದರೆ ಅತಿಶಯೋಕ್ತಿಯಲ್ಲ. ಪತಿಯ ಐಹಿಕ, ಪಾರತ್ರಿಕಸಂಬಂಧವಾದ ಸುಖ-ದುಃಖ, ಸಂಪದ-ಆಪದ, ವೈಭವ-ಪರಿಭವಗಳೇ ಮೊದಲಾದ ಸಮಸ್ತ ವಿಷಯಗಳಿಗೂ ಪತ್ನಿಯೇ ಕಾರಣಳಾಗಿರುವಳು.

ಪತಿಯ ಇಂಗಿತವರಿತು ನಡೆಯಬೇಕಾದ ಅಭಿಜ್ಞತೆಯು ಪತ್ನಿಯಲ್ಲಿದ್ದರೆ, ಆತನ ಪುರುಷಾರ್ಥಚತುಷ್ಟಯ (ಧರ್ಮ-ಅರ್ಥ-ಕಾಮ-ಮೋಕ್ಷ) ಗಳಿಗೂ ಅವಳು ಸಹಕಾರಪಾತ್ರವೆನ್ನಿಸುವಳು. ಅಂತಹ ಸಹಧರ್ಮಿಣಿ-ಸಹಚಾರಿಣಿ-ಯಾದ ಪತ್ನಿಯನ್ನು ಪಡೆದಾತನಿಗ ಕೊರತೆಯೆಂಬುದೇ ಇರುವುದಿಲ್ಲ ಏಕೆಂದರೆ, ಗೃಹಛಿದ್ರದ ತಾಪವು ಅವನನ್ನು ಸೋಂಕುವದಿಲ್ಲ. ಶಿಶುಸಂರಕ್ಷಣ, ಬಾಲಸುಶಿಕ್ಷಣೆ, ಅತಿಥಿ-ಅಭ್ಯಾಗತ ಪೂಜಾ, ಗುರು-ದೇವತಾರಾಧನಗಳ ಬಲವತ್ತರವಾದ ಭಾರವು ಇವನ ಬೆನ್ನ ಹತ್ತಿಬರುವುದಿಲ್ಲ; ಮನಸ್ಸಿನ ತಾಪಕ್ಕಂತೂ ಬೇಕೆಂದರೂ ಅವಕಾಶವಿರುವುದಿಲ್ಲ. ಹೀಗಾದ ಬಳಿಕ ಅವನಿಗಿನ್ನಾವ ಕೊರತೆ ತಟ್ಟಬಹುದು? ಕಾಲವರಿತು ಉಚಿತ ರೀತಿಯಿಂದ ತನ್ನ ಧರ್ಮ--ಅರ್ಥ—ಕಾಮಗಳನ್ನು ಕಾಪಾಡಿಕೊಂಡು ಬರುವ ಸಹಧರ್ಮಿಣಿಯಿಂದ ಅವನಿಗೆ ಇಹಸಂಸಾರವು ಸುಖಮಯವಾಗಿಯೂ ಶಾಂತಿನಿಲಯವಾಗಿಯೂ ತೋರಿ, ಅವನು ಇಲ್ಲಿಯೇ ಆತ್ಮಾನಂದದ ಆನಂದಾನುಭವವನ್ನು ಮಾಡುತ್ತ ನಿತ್ಯಮುಕ್ತನಾದ ಮಹಾತ್ಮನೇ ತಾನೆಂದು ಭಾವಿಸುವವನಾಗುವನು. ಇದಕ್ಕೆ ಉದಾಹರಣೆಯೆಂದರೆ, ಚಂದ್ರಮತಿ, ಸೀತಾ, ದ್ರೌಪದೀದೇವಿಯರ ಚರಿತೆಗಳೇ ಸಾಕಾಗಿವೆ. ಚಂದ್ರಮತೀದೇವಿಯು ಸತ್ಯವಾಕ್ಪರಿಪಾಲನೆಗಾಗಿ ಸಮಸ್ತ ಸುಖಸಂಪದವನ್ನೂ ಕೌಶಿಕನಿಗೆ ಧಾರೆಯೆರೆದು, ದೇಶಭ್ರಷ್ಟನಾಗಿ ಹೊರಟ ಪತಿಯಾದ ಹರಿಶ್ಚಂದ್ರಮಹಾರಾಜನ ಅಭಿಮತವನ್ನು ಅನುಮೋದಿಸಿ, ಸಂತೋಷದಿಂದ ಪತಿಯ ಧರ್ಮವನ್ನು ತಾನೇ ಪೋಷಿಸಲು ಪುತ್ರನೊಡನೆ ಪತಿಯನ್ನು ಹಿಂಬಾಲಿಸಿ ಹೊರಟು, ಪತಿಯ ಋಣವಿಮೋಚನಕ್ಕಾಗಿ ಆತನ ಅಭಿಪ್ರಾಯದಂತೆ ಬ್ರಾಹ್ಮಣನ ಮನೆಯ ತೊತ್ತಾಗಿದ್ದು, ಅನೇಕ ವಿಧವಾದ ದುಸ್ಸಹವಾದ ಕಷ್ಟಗಳನ್ನೂ ಸಹಿಸಿಕೊಂಡು, ತನ್ನ ಪತಿಯ ಮನಸ್ಸಂತೋಷವೇ ತನ್ನ ಸಕಲಸೌಭಾಗ್ಯವೆಂದರಿತಿದ್ದಳು ಅವಳ ಆ ಮನೋಯೋಗದ ಬಲದಿಂದಲೇ ಹರಿಶ್ಚಂದ್ರಮಹಾರಾಜನು ಜಾಗ್ರತೆಯಾಗಿ ಕಷ್ಟಗಳೆಲ್ಲವನ್ನೂ ದಾಟಿ, ಆಚಂದ್ರಾರ್ಕವಾದ ಕೀರ್ತಿಗೆ ಭಾಜನನಾಗಿ ಸುಖಿಸುವಂತಾದನು. ಸೀತಾದೇವಿಯು ತನ್ನ ಪತಿಯ ಅಭಿಪ್ರಾಯದಂತೆ ನಡೆಯುತ್ತಿದ್ದುದರಿಂದ ರಾಮನು ವನವಾಸಕ್ಲೇಶವನ್ನು ಕೂಡ ಗಣಿಸುವಂತಿರಲಿಲ್ಲ. ಕಡೆಗೆ ಆ ದೇವಿಯು ರಾವಣನಿಂದ ಅಪಹೃತೆಯಾಗಿ, ಅನೇಕ ವಿಧವಾಗಿ ಹಿಂಸಿಸಲ್ಪಟ್ಟರೂ ಪತಿಯ ಇಂಗಿತಕ್ಕೆ ವಿರೋಧವಾಗಿ ನಡೆಯಲೊಲ್ಲದೆ ತನ್ನನ್ನು ಹಿಂಸಿಸುವವರಲ್ಲಿ ಕೂಡ ವಿರೋಧವನ್ನೆಣಿಸದೆ ತಾಳ್ಮೆಯನ್ನೇ ವಹಿಸಿದ್ದಳು. ಅವಳಾ ಕ್ಷಮಾಪ್ರಭಾವವೇ ಶ್ರೀರಾಮನಿಗೆ ಆನಂದೋತ್ಸಾಹಗಳನ್ನುಂಟುಮಾಡುವುದಾಯಿತು. ದ್ರೌಪದೀದೇವಿಯೆಂದರೆ, ರಾಜ್ಯಭ್ರಷ್ಟರಾದ ತನ್ನ ಪತಿಗಳೈವರಿಗೂ ಪ್ರಾಣಾಧಿಕಳಾಗಿದ್ದು, ಅವರ ಇಂಗಿತವರಿತು ನಡೆಯುತ್ತಿದ್ದುದರಿಂದಲ್ಲವೇ ಪಾಂಡವರು ವನವಾಸವನ್ನು ಕೂಡ ಕಷ್ಟವೆಂದೆಣಿಸದೆ ಶಾಂತತೆಯಿಂದಲೂ ಸಂತೋಷದಿಂದಲೂ ತಮ್ಮ ಹನ್ನೆರಡು ವರ್ಷದ ವನವಾಸವನ್ನು ಕಳೆಯುವಂತಾದುದು? ಪತಿಯ ಸುಖದುಃಖಗಳೇ ತನ್ನ ಸುಖದುಃಖವೆಂದು ಭಾವಿಸುವ ಸತಿಯುಳ್ಳವರಿಗೆ ಕಷ್ಟವು ಕೂಡ ಸುಖವಾಗಿಯೇ ಪರಿಣಮಿಸುವುದೆಂಬುದಕ್ಕೆ ಮೇಲೆ ಹೇಳಿದವರಲ್ಲದೆ ಇನ್ನೂ ನಮ್ಮ ಆರ್ಯಮಹಿಳೆಯರೆಷ್ಟೋ ಮಂದಿಯರ ಪವಿತ್ರಚರಿತೆಗಳೇ ಸಾಕ್ಷ್ಯಗಳಾಗಿವೆ. ಪತ್ನಿಯು ವೃಥಾಭಿಮಾನಪೂರ್ಣವಾದ ವಿರಕ್ತವಚನಗಳಿಂದಲೂ ಶೋಚನೀಯವಾದ ಹಟ—ಶಠಭಾವಗಳಿಂದಲೂ ತನ್ನ ಪತಿಯ ಮನಸ್ಸಿಗೆ ತಕ್ಕಂತಿರದೆ ಅವನ ಮನಸ್ಸನ್ನು ನೋಯಿಸುವುದಾದರೆ ಆಗಲೇ ಅವರು, ತಮ್ಮ ಮೂರ್ಖತೆಗಾಗಿ ತಮ್ಮ ಪತಿಯು ಖತಿಗೊಂಡು ಶರೀರಾಭಿಮಾನ್ಯಶೂನ್ಯರಾಗುವುದನ್ನು, ಇಲ್ಲವೆ ಅಕ್ರಮಮಾರ್ಗದಲ್ಲಿ ಪ್ರವರ್ತಿಸಿ ದುಃಖ--ದ್ವೇಷ--ಅಂತರ್ದಾಹಗಳ ದುಷ್ಪರಿಣಾಮ

ಗಳಿಗೆ ಭಾಜನರಾಗಿ ನರಳುವುದನ್ನು ತಾವೇ ನೋಡುವುದಲ್ಲದೆ, ಅಷ್ಟಕ್ಕೂ ಕಾರಣವಾದ ತಮ್ಮ ಸ್ವಭಾವದ ದುಷ್ಫಲವಾಗಿ ನಿರಂತರ ಶೋಕಕ್ಕೂ ಗುರಿಯಾಗಬೇಕಾಗುವುದು. ಇಂತಹರಿಂದ ಸಂಸಾರವೇ ಸ್ಮಶಾನವೆಂದು ಹೇಳಿಸಿಕೊಳ್ಳುವುದು. ಪತ್ನಿಯು ಇತಿಕರ್ತವ್ಯತಾಜ್ಞಾನವುಳ್ಳವಳಾಗಿದ್ದರೆ, ಅವಳ ಕೈಹಿಡಿದ ಪತಿಗೆ ಅಸಾಧ್ಯವಾದುದೇ ಇಲ್ಲವೆಂಬುದಕ್ಕೆ, ಯಮನೊಡನೆ ವಾದಿಸಿ, ಮೃತನಾದ ತನ್ನ ಪತಿಯನ್ನು ಪೂರ್ಣಾಯುವಾಗಿಯೂ, ಶತಪುತ್ರರಿಗೆ ಪಿತನಾಗಿಯೂ, ರಾಜ್ಯಶ್ರೀಯುತನಾಗಿಯೂ ಮಾಡಿಕೊಂಡ ನಮ್ಮ ಆದರ್ಶನಾರೀಮಣಿಯಾದ ಸಾವಿತ್ರೀದೇವಿಯ ಅದ್ಭುತಚರಿತೆಯೊಂದೇ ಸಾಕಾಗಿರುವುದು.

ಸೋದರಿಯರೇ !

ಇಲ್ಲಿಯ ವರೆಗೆ ನಮ್ಮ ಸ್ತ್ರೀಯರ ಕರ್ತವ್ಯವನ್ನು ಸಂಗ್ರಹವಾಗಿ ನಿವೇದಿಸಲಾಯಿತು. ಇನ್ನು ಆ ಕರ್ತವ್ಯಸಿದ್ಧಿಗೆ ಸಾಧನೋಪಾಯಗಳನ್ನು ಕುರಿತ ವಿಚಾರವು ಮುಂದಿರುವದಷ್ಟೆ. ಹೇಗೆಂದರೆ— ನಮ್ಮ ಸ್ತ್ರೀಯರು ಶ್ರಮಸಹಿಷ್ಣುತೆಯಿಂದಲೂ, ಸೂಚಿಕಾಗ್ರಬುದ್ಧಿಯಿಂದಲೂ, ಜಾಗರೂಕತೆಯಿಂದಲೂ, ನಿಶ್ಚಲ—ನಿರ್ಮಲ—ಪ್ರೇಮದಿಂದಲೂ ಗೃಹರಾಜ್ಯಭಾರವನ್ನು ನಿರ್ವಹಿಸಿಕೊಂಡು ಬರಬೇಕಾದರೆ, ಅವರಲ್ಲಿ ಸೌಶೀಲ್ಯ—ಸತ್ಯಸಂಧತೆಗಳು ಬಲವಾಗಿದ್ದು, ತಮ್ಮ ಆರ್ಯನೀತಿಯಲ್ಲಿ ಪೂರ್ಣಭರವಸೆಯುಳ್ಳವರಾಗಿರಬೇಕು. ಶೀಲವೇ ತಮ್ಮ ಮುಖ್ಯಾಭರಣವೆಂಬುದನ್ನು ಮರೆಯಬಾರದು. ಶೀಲವನ್ನು ಬಿಟ್ಟು, ಉಳಿದ ಉಡುವು ತೊಡವುಗಳಿಂದ ಎಷ್ಟೇ ಬಾಹ್ಯಾಡಂಬರಗಳನ್ನು ತೋರಿಸಿ ಅಟ್ಟಹಾಸ ಮಾಡಿದರೂ ಅವರಿಗೆ ಸರ್ವತೋಮುಖವಾದ ಸನ್ಮಾನವುಂಟಾಗುವುದಿಲ್ಲ. ಬಾಹ್ಯಾಡಂಬರದಲ್ಲಿ ಬೆರೆದು, ಗೃಹರಾಜ್ಯಭಾರನೀತಿಯನ್ನು ಮರೆತು ನಡೆಯುವ ಮಹಿಳೆಯರ ಆಗ್ರಹವಾಗಲಿ, ಅನುಗ್ರಹವಾಗಲಿ, ಅಟ್ಟಹಾಸ—ಅಪಹಾಸ್ಯಗಳಾಗಲಿ, ಗಣನೆಗೆ ಬಾರದವುಗಳೇ (ಅಪ್ರಯೋಜಕ) ಆಗುವವು.

ಆಸ್ಥೆಯಿಂದ ತಮ್ಮ ಪ್ರಕೃತಿಧರ್ಮಕ್ಕೆ ತಕ್ಕ ಕಾರ್ಯಗಳನ್ನು ನಡೆಯಿಸುತ್ತ ವಿಶ್ರಾಂತಿಕಾಲಗಳಲ್ಲಿ ಪ್ರಾಪಂಚಿಕತತ್ವಗಳನ್ನು ತಿಳಿಯುವುದಕ್ಕೂ, ಸಮಾಜಸೇವೆ—ಸಂತಸೇವೆ—ನೈತಿಕಶಿಕ್ಷಣಪ್ರಸಾರಗಳೇ ಮೊದಲಾದ ಲೋಕಹಿತಕಾರ್ಯಗಳಲ್ಲಿ ಪ್ರಯತ್ನಿಸುವುದಕ್ಕೂ ಸಂಕಲ್ಪಿಸಿ, ನಿರ್ವಂಚನೆಯಿಂದ ಶ್ರಮಪಡುವ ಮಹಿಳೆಯರನ್ನು ಜಗತ್ತೇ ಅಭಿನಂದಿಸುವುದು.

ಇನ್ನು ಸ್ತ್ರೀಯರ ಕರ್ತವ್ಯವನ್ನು ಕೆಡಿಸುವುದಕ್ಕೆ ಹೊಂಚಿಕಾದಿದ್ದು, ಛಿದ್ರವು ಸಿಕ್ಕಿತೆಂದು ತಿಳಿದ ಕೂಡಲೆ, ಸ್ತ್ರೀಹೃದಯದಲ್ಲಿ ಪ್ರವೇಶಿಸಿ, ಅಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸುವ ದುರ್ಗುಣಗಳು ಸಾಮಾನ್ಯವಾಗಿ ಸ್ತ್ರೀಯರೆಲ್ಲರಲ್ಲಿಯೂ ಇರುವಂತೆ ಅಪವಾದವೊಂದು ಹುಟ್ಟಿರುವದಷ್ಟೆ! ಅಪವಾದಾತ್ಮಕಗಳಾದ ಆ ದುರ್ಗುಣಗಳಲ್ಲಿ ಒಂದೊಂದೇ ಸರ್ವನಾಶಕ್ಕೆ ಸಾಕು. ಸಂಶಯವೆಂಬುದು ಸರ್ವನಾಶವನ್ನುಂಟುಮಾಡುವುದೆಂದು ಅನುಭವಜ್ಞರಾದ ಪಂಡಿತರು "ಸಂಶಯಾತ್ಮಾ ವಿನಶ್ಯತಿ" ಎಂಬ ಸೂತ್ರದಿಂದ ಎಚ್ಚರಿಸಿರುವರು. ಹಾಗಿದ್ದರೂ ಈ ಸಂಶಯವೇನೋ ನಮ್ಮನ್ನು ಬಿಟ್ಟುಹೋಗಲಾರದಿದೆ. ಈ ಸಂಶಯವು ಅಂಕುರವಾಯ್ತೆಂದರೆ, ನಮ್ಮ ಮನಸ್ಸಿನ ಶಾಂತಿಯೇ ಹೋಗುವುದು. ಪ್ರತಿಯೊಂದು ಕಾರ್ಯದಲ್ಲಿಯೂ ನಮಗೆ ಸಂಶಯವೇ ಮುಂದೆ ನಿಂತು, ಮೊದಲು ನಮಗೆ ಸಾಕಾದಷ್ಟು ಪ್ರಮಾಣಗಳಾಗಿದ್ದ ವಿಚಾರಗಳನ್ನೆ ಸಂಶಯಗ್ರಸ್ತಗಳಾಗಿ, ದೋಷಪೂರ್ಣಗಳಾಗಿರುವಂತೆ ತಿಳಿಯಿಸುವು

ನಮ್ಮ ಭಾವನೆಯು ಹೇಗೋ ಹಾಗೆಯೇ ಫಲಪ್ರಾಪ್ತಿಯಾಗುವುದೆಂಬ ನೀತಿಯಂತೆ, ಪ್ರತಿಯೊಂದು ವಿಷಯಗಳಲ್ಲಿಯೂ ನಮಗೆ ವಿರೋಧಾಭಿಪ್ರಾಯವೇ ತೋರುವುದು. ವಿರೋಧಭಾವವುಂಟಾಯಿತೆಂದರೆ, ಅಲ್ಲಿಗೆ ನಮ್ಮವರ ಅಭ್ಯುದಯದ ಆಶೆಯು ಕಡಿಯಲ್ಪಟ್ಟಿತೆಂದೇ ಹೇಳಬೇಕು. ಏಕೆಂದರೆ, ಆಗ ನಾವು ನಮ್ಮ ನಮ್ಮ ಗುರುಗಳಲ್ಲಿಯೂ ಹಿರಿಯರಲ್ಲಿಯೂ ಆಪ್ತೇಷ್ಟರಲ್ಲಿಯೂ—ಕಡೆಗೆ— ನಮ್ಮ ಸ್ವಾಮಿಯಲ್ಲಿಯೂ ನಾವು ಕೆಟ್ಟಸಂಶಯವನ್ನೇ ಬೆಳೆಯಿಸಿ ಅವರ ಅಂತಸ್ತಾಪಕ್ಕೂ ಎಡೆಗೊಡುವವರಾಗುವೆವು. ಹಾಗಾಯಿತೆಂದ ಬಳಿಕ ಮೇಲೆ ಹೇಳಿದವರ ಮೇಲೆ ನಾವು ಶಂಕಾಪವಾದವನ್ನು ಆರೋಪಿಸುವುದಕ್ಕೂ ದುರ್ವಾಕ್ಯಗಳಿಂದ ಅವರ ಮನಸ್ಸನ್ನು ಚುಚಿಗೊಳಿಸುವುದಕ್ಕೂ ನಮ್ಮ ಮನಸ್ಸು ಹಿಂತೆಗೆಯುವದಿಲ್ಲ. "ಇಷ್ಟಾದ ಮೇಲೆ ನಮಗೆ ಇನ್ನು ಉಳಿದಿರುವ ದೌರ್ಜನ್ಯವಾವುದು? ಇದಕ್ಕಾಗಿಯೇ ಬಲ್ಲವರು "ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು" ಎಂದೂ "ತಾಳಿದವ ಬಾಳಿಯಾನು" ಎಂದೂ ಹೇಳಿ ಎಚ್ಚರಿಸುತ್ತಿರುವರು. ನಾವು ಅದನ್ನು ನೆನಪಿನಲ್ಲಿಟ್ಟು, ನಮ್ಮಲ್ಲಿ ಆ ಕೆಟ್ಟಸಂಶಯವು ಬೇರೂರದಂತೆ ಅದನ್ನು ಸರ್ವಪ್ರಕಾರದಿಂದಲೂ ದೂರಕ್ಕಟ್ಟಿ, ನಿರ್ಮಲ ಮತ್ತು ನಿಶ್ಚಯ ಭಾವನೆಗಳಿಂದ ನಡೆಯುತ್ತ ಬಂದರೆ, ನಮ್ಮವರ ಮೇಲೆ ಹೇಳಲು ಬರುತ್ತಿರುವ ಅಪವಾದವು ಕ್ರಮಕ್ರಮವಾಗಿ ಪರಿಭವಹೊಂದಿ ಕಡೆಗೆ ನಮ್ಮ ಆರ್ಯನಾರೀಮಣಿಯರ ಕೀರ್ತಿಚಂದ್ರಿಕೆಯನ್ನು ನಾವು ಪ್ರಸಾರಮಾಡಿದೆವೆಂಬ ಕೀರ್ತಿಗೆ ಭಾಜನರಾಗಿ ಸುಖಿಸುವೆವು.

ಪ್ರಿಯಭಗಿನಿಯರೇ !

ಇಷ್ಟು ಹೇಳಿದ ಮೇಲೆ ಇನ್ನೂ ನಮ್ಮ ವಿಷಯವಾಗಿ, ಇಲ್ಲಿ, ಸೋದರೀಸೋದರರು ಪಡುತ್ತಿರುವ ಆಗ್ರಹ, ಆಕ್ಷೇಪ, ಸಂಶಯಗಳನ್ನು ಕುರಿತು ಒಂದೆರಡು ಸಮಾಧಾನವನ್ನು

ಹೇಳುವದು ನನ್ನ ಕರ್ತವ್ಯವಾಗಿರುವದರಿಂದ ಇದನ್ನು ಅಪ್ರಸ್ತುತವೆಂದು ಉಪೇಕ್ಷಿಸಬಾರದಾಗಿ ಕೋರುವೆನು. ಸ್ತ್ರೀಯರ ಕರ್ತವ್ಯವನ್ನು ಕುರಿತು ಮಾತನಾಡುವ ನನ್ನ ಮೇಲೆ ನಮ್ಮ ಸೋದರಿಯರು ಅಗ್ರಹಯುಕ್ತರಾಗಬಹುದು. ಏಕೆಂದರೆ, ಸ್ತ್ರೀಯರ ಮುಂದೆ, ಸ್ತ್ರೀಯರ ಕರ್ತವ್ಯವನ್ನು ಕುರಿತು ಹೇಳುವುದು ಅಧಿಕಪ್ರಸಂಗವೆಂದು.—ಎಂದರೆ, ಇಲ್ಲಿ ನಾನು ಮಾಡುವ ಭಾಷಣವು ಅಧಿಕಪ್ರಸಂಗವೆಂದಾಗಲಿ, ಅಪ್ರಸ್ತುತವೆಂದಾಗಲಿ ಭಾವಿಸಬಾರದು.

ಇದೇ ಆಕ್ಷೇಪವನ್ನು. ಹೋದವರ್ಷ ನಾನು ಇಲ್ಲಿಗೆ ಬಂದಿದ್ದ ವೇಳೆಯಲ್ಲಿ ಇದೇ ಊರಿನಲ್ಲಿರುವ ವಿದ್ಯಾವತಿಯರೆನ್ನಿಸಿದ ಪ್ರೌಢೆಯರಲ್ಲಿ ಕೆಲವರು ತೆಗೆದಿದ್ದರಲ್ಲದೆ, "ಮನೆಗೆಲಸ ಮಾಡುವುದು, ಪತಿ—ಪುತ್ರರನ್ನು ಪ್ರೀತಿಸುವುದು" ಇವುಗಳು ಸ್ತ್ರೀಯರಿಗೆ ಸ್ವಭಾವಸಹಜಗುಣಗಳೇ ಆಗಿವೆ. ಆ ವಿಷಯದಲ್ಲಿ ಯಾರೂ ಹೇಳಿಕೊಡಬೇಕಾದುದೇ ಇಲ್ಲ. 'ಪತಿಯ ವಿಷಯದಲ್ಲಿ ಹೀಗೆ ನಡೆಯಬೇಕು; ಮಕ್ಕಳ ವಿಷಯದಲ್ಲಿ ಹಾಗೆ ನಡೆಯಬೇಕು. ಅತ್ತೆ-ಮಾವರ ವಿಷಯದಲ್ಲಿ ಹೀಗೆ ನಡೆಯಬೇಕು. ಮನೆಗೆಲಸಗಳನ್ನು ಹಾಗೆ ಮಾಡಬೇಕು." ಎಂದು ಬರೆಯುವುದೂ ಓದಿ ಹೇಳುವುದೂ ಹುಚ್ಚುತನವೇ ಸರಿ. ಇವು ಯಾರಿಂದಲೂ ಹೇಳಿಸಿಕೊಳ್ಳದೆಯೇ ನಡೆಯುವುವು ಎಂದೂ, ಹೊತ್ತು ಹೋಗುವುದಕ್ಕಾಗಿಯೇ ಮೇಲೆ ಹೇಳಿದುದನ್ನು ಬರೆದಿರಬೇಕೆಂದೂ ಇನ್ನೂ ಅನೇಕವಾಗಿ ಆಕ್ಷೇಪಿಸಿದ್ದರು. ಅವರಂತೆ ಇಲ್ಲಿ ಯಾರೂ ಆಕ್ಷೇಪಿಸುವವರಿಲ್ಲವಾದರೂ ಈ ಆಕ್ಷೇಪಕ್ಕೆ ಮುಂದೆ ಅವಕಾಶವಿಲ್ಲದಿರಲಿಕ್ಕಾಗಿ ನನಗೆ ತೋರಿದ ಸಮಾಧಾನವನ್ನು ಕೊಡುವುದು ಅವಶ್ಯಕವಾಗಿದೆ.

ಸೋದರಿಯರೇ !

ಮೇಲೆ ಹೇಳಿದ ಗುಣಗಳು ಸ್ತ್ರೀಯರಿಗೆ ಸ್ವಭಾವಗುಣಗಳಾಗಿರುವುದೇನೋ ನಿಜ. ಇದನ್ನು ನಾನು ಮೊದಲೇ ಹೇಳಿರುವೆನು. ಆದರೆ, "ಇದನ್ನು ಯಾರೂ ಹೇಳಿಕೊಡಬೇಕಾಗಿಲ್ಲ; ಹೇಳುವವರು ಹುಚ್ಚರು" ಎಂಬುದು ಮಾತ್ರ ಸಾಧುವಲ್ಲ. ಏಕೆಂದರೆ, ಬೀಜವು ಒಳ್ಳೆಯದಾಗಿದ್ದರೂ ಸಸಿಗಳಿಗೆ ಕಳೆ—ಮುಳ್ಳು—ಮಾರಿಹುಳುಗಳೇ ಮೊದಲಾದುವುಗಳು ತಗಲದಂತೆ ಅಡಿಗಡಿಗೆ ನಾವು ನೋಡಿಕೊಳ್ಳದೆ ಹೋದರೆ ಬೆಳೆಯು ಸರಿಯಾಗಿ ಬರುವುದಿಲ್ಲ. ಬೀಜದಿಂದಾದ ಸಸಿಗಳನ್ನು ನಾವು ಜಾಗರೂಕತೆಯಿಂದ ಕಾಲಕಾಲಕ್ಕೆ ಬೇಕಾದ ನೀರು ಆಹಾರಗಳಿಂದ ಪೋಷಿಸುತ್ತ ಬಂದೆವಾದರೆ, ಅದರ ಸ್ವಭಾವಸಹಜಗುಣಗಳು ಅಧಿಕ ಪ್ರಕಾಶ ಹೊಂದಿ ನಮಗೆ ಇಮ್ಮಡಿಯಾದಷ್ಟು ಫಲಗಳನ್ನು ಕೊಡುವವು. ಇದನ್ನು ತಿಳಿದೇ, ಫಲಪುಷ್ಪಗಳ ಗಿಡಗಳಿಗೆ ಕಸಿಕಟ್ಟುವುದರಿಂದ ಅದರ ಗುಣಗಳನ್ನು ವೃದ್ಧಿಗೊಳಿಸುವರು. ಹಾಗೆಯೇ ನಮ್ಮ ಜನ್ಮಸಹಜಗುಣಗಳೆಂದು ನಮ್ಮನ್ನು ಹಾಗೆಯೇ ಬಿಟ್ಟರೆ, ಅವು ಕ್ರಮೇಣ, ನಮ್ಮ ಆಟಪಾಟಗಳಲ್ಲಿಯೋ—ನಮ್ಮ ಸಹವಾಸ ಸಂಸರ್ಗಗಳ ದೆಸೆಯಿಂದಲೋ ಸಹಜಗುಣಗಳು ರೂಪಾಂತರಹೊಂದಿ, ತುಕ್ಕುಹಿಡಿದ ಸೂಜಿಯಂತೆ ಸ್ತ್ರೀಸಹಜ ಕೋಮಲಭಾವವನ್ನಳಿದು ನಿಸ್ಸಾರವಾಗಬಹುದು. ಹಾಗೆ ಮಾಡದೆ ಹಿರಿಯರೂ ಇತರ ಹಿತಚಿಂತಕರೂ ಆದವರು, ನಮ್ಮನ್ನು ಅಡಿಗಡಿಗೆಹಿತಸೂಚನೆಗಳಿಂದ ಎಚ್ಚರಿಸುತ್ತಿದ್ದರೆ, ನಮ್ಮ ಜನ್ಮಸಹಜಗುಣಗಳು ಕೃಪೆಯಿಂದ ಮತ್ತಷ್ಟು ಹೊರವಾಗಿ ಬೆಳೆದು, ನಾವು ನಮ್ಮ ತಲೆಯ ಮೇಲೆ ಹೊತ್ತಿರುವ ಕರ್ತವ್ಯದ ದೊಡ್ಡ ಭಾರವನ್ನು ನಿರ್ವಹಿಸಲು ತಕ್ಕ ಸಾಮರ್ಥ್ಯವನ್ನು ಹೊಂದುವೆವು. ಈ ಸದಿಚ್ಛೆಯಿಂದಲೇ ನಮ್ಮ ಗುರುಹಿರಿಯರು ತಮ್ಮ ಹೆಣ್ಣುಮಕ್ಕಳಿಗೆ ದಿನಂಪ್ರತಿಯೂ ಹಿತಬೋಧೆ ಮಾಡುತ್ತಿರುವರಲ್ಲದೆ, ಹೆಣ್ಣುಮಕ್ಕಳನ್ನು ಅತ್ತೆಯ ಮನೆಗೆ ಕಳುಹುವಾಗ ಅವರು ಅತ್ತೆಯಮನೆಯಲ್ಲಿ ನಡೆಯಬೇಕಾದ ನಡವಳಿಕೆಗಳನ್ನೇ ಬಳುವಳಿಯಾಗಿಯೂ ಬುತ್ತಿಯಾಗಿಯೂ ಅವರಿಗೆ ಹೇಳಿಕೊಟ್ಟು ಕಳುಹುವರು. ಅಷ್ಟೇ ಅಲ್ಲ. ಅವರು ಅತ್ತೆಯ ಮನೆಯಿಂದ ಬಂದಾಗಲೆಲ್ಲಾ ಕುಶಲಪ್ರಶ್ನೆಯನ್ನು ಮಾಡುವಾಗಲೆ, ತಾವು ಹಿಂದೆ ಹೇಳಿಕೊಟ್ಟಿದ್ದ ಹಿತಬೋಧೆಗಳನ್ನು ಸರಿಯಾಗಿ ನೆನಪಿನಲ್ಲಿಟ್ಟು ಅದರಂತೆ ನಡೆಯುತ್ತಿರುವರೋ— ಹೇಗೆಂಬುದನ್ನು ತಿಳಿಯಲು ಪ್ರಶ್ನೆ ಮಾಡುವರು. ಮತ್ತೆ ನ್ಯೂನತೆಯುಂಟಾಗದಂತೆ ಹಿತವನ್ನು ಹೇಳುವರು. ಹೀಗೆ ಮಾಡುವದು ಕೇವಲ ನಮ್ಮ ಈಗಿನವರ ಪದ್ಧತಿಯೆಂದು ಹೇಳುವಂತಿಲ್ಲ. ಈ ಪದ್ಧತಿಯು ಪೂರ್ವದಿಂದಲೂ ನಡೆದು ಬಂದಿರುವುದು.

'ಜನ್ಮಸಹಜಗುಣವನ್ನು ಯಾರೂ ಹೇಳಿಕೊಡಬೇಕಾಗಿಲ್ಲ" ಎಂಬುದು ಸಾಧುವೆನ್ನಬಹುದಾದರೆ, ನೋಡಿರಿ, ಸೋದರಿಯರೇ ! ನಾರೀಕುಲಕ್ಕೇ ತಿಲಕಪ್ರಾಯಳಾಗಿ ಇವ ಸಾವಿತ್ರೀದೇವಿಯು—ದೇವರ್ಷಿಯಾದ ನಾರದರು, ಸತ್ಯವಾನನು ಅಲ್ಪಾಯುವೆಂದು ಹೇಳಿದರೂ ಕೇಳದೆ—ಅಲ್ಪಾಯುವಾಗಲಿ, ದೀರ್ಘಾಯುವಾಗಲಿ, ಮನಸಾ ವರಿಸಿದಾತನೇ ತನಗೆ ಪತಿಯೆಂದು ಉತ್ತರವಿತ್ತು, ಅಂಧರಾದ--ರಾಜ್ಯಚ್ಯುತರಾದ ಮಾತಾಪಿತೃಗಳ ಸೇವಕನಾಗಿದ್ದ ಸತ್ಯವಾನನನ್ನು ಮದುವೆಯಾದಂಥ ನಿಶ್ಚಲಮನಸ್ಕಳಾದ ಸಾಧ್ವೀಮಣಿ ಸಾವಿತ್ರೀದೇವಿಯನ್ನು—ಅತ್ತೆಮಾವರಬಳಿಯಲ್ಲಿ ಬಿಟ್ಟುಹೋಗುವ ಕಾಲದಲ್ಲಿ ಅವಳ ತಾಯಿತಂದೆಯರಾದ ಮಾಳವೀ-ಅಶ್ವಪತಿರಾಯರು ಪುತ್ರಿಗೆ ಗೃಹಿಣೀಧರ್ಮ, ಪಾತಿವ್ರತ್ಯಪ್ರಭಾವ

ಗಳನ್ನು ಬೋಧಿಸಿದರೇಕೆ ? ಮಗಳಲ್ಲಿ ಇತಿಕರ್ತವ್ಯತಾ ಜ್ಞಾನಕ್ಕೆ ನ್ಯೂನತೆಯಾಗಿದ್ದಿತೆಂದೊ ? ಅಥವಾ ಅವಳಲ್ಲಿ ಆ ಗುಣಗಳು ಜನ್ಮಸಹಜವಾಗಿರಲಿಲ್ಲವೆಂದೋ ? ಆ ಎರಡು ವಿಧವಾದ ಸಂಶಯಕ್ಕೂ ಅವಳಲ್ಲಿ ಅವಕಾಶವಿರಲಿಲ್ಲವಷ್ಟೆ! ಅದೂ ಇರಲಿ, ಜನಕಮಹಾರಾಯನು ಜ್ಞಾನಿಗಳಗೆಲ್ಲಾ ಅಗ್ರಗಣ್ಯನೆನ್ನಿಸಿದವನು. ಅವನ ಮಗಳಾದ ಜಾನಕೀದೇವಿಯೆಂದರೆ ಸಾಧಾರಣ ಸ್ತ್ರೀಯಲ್ಲ. ಹಾಗಿದ್ದೂ ಜನಕರಾಯನು ಮಗಳನ್ನು ಅತ್ತೆಯ ಮನೆಗೆ ಬೀಳ್ಕೊಡುವಾಗ ಮಗಳಿಗೆ ಬುದ್ಧಿಹೇಳಿಕಳುಹಿದುದೂ, ಅಲ್ಲಿಂದ ಅಯೋಧ್ಯೆಗೆ ಬಂದ ಮೇಲೆ, ಪಿತೃವಾಕ್ಯಪರಿಪಾಲನೆಗಾಗಿ ಜಟಾವಲ್ಕಲಗಳನ್ನು ಧರಿಸಿ ಅರಣ್ಯಕ್ಕೆ ಹೊರಟ ಪತಿಯಾದ ಶ್ರೀರಾಮನ ಮಾರ್ಗವನ್ನೇ ಅನುಸರಿಸಿ, ಪತಿಯ ನೆಳಲಂತೆ ಅತನೊಡನೆ ಅರಣ್ಯಕ್ಕೆ ಹೊರಟ ಸತೀಮಣಿಯಾದ ಜಾನಕೀದೇವಿಗೆ ಅತ್ತೆಯಾದ ಕೌಸಲ್ಯಾದೇವಿಯು ಸತೀಧರ್ಮವನ್ನೂ ಅವಳು ಅರಣ್ಯದಲ್ಲಿ ಪತಿಯನ್ನು ಹೇಗೆ ಅನುಸರಿಸುತ್ತಿರಬೇಕೆಂಬುದನ್ನೂ ಹೇಳಿಕಳುಹಿದುದೇಕೆ ? ಮಗಳು ತಂದೆಯ ಮನೆಯ ಉನ್ನತಿಯನ್ನು ನೆನೆದು ಹೆಣ್ಣಿಗೊಂಡು ಕರ್ತವ್ಯವನ್ನು ದುರ್ಲಕ್ಷಿಸಬಾರದು—ಎಂಬ ಉದ್ದೇಶದಿಂದ ಜನಕರಾಯನೂ, ತಾನು ರಾಜಪುತ್ರಿಯೆಂದೂ ರಾಜಾಧಿರಾಜನ ಸೊಸೆಯಾದವಳೆಂದೂ ಭಾವಿಸಿ, ಅರಣ್ಯವಾಸದಲ್ಲಿ ಕ್ಲೇಶ-ರೋಷಗಳಿಂದ ತನ್ನ ಪತಿಯ ಮನಸ್ಸನ್ನು ವ್ಯಥೆಗೊಳ್ಳುವಂತೆ ಮಾಡಬಾರದೆಂಬ ಸದಿಚ್ಛೆಯಿಂದ ಕೌಸಲ್ಯಾದೇವಿಯೂ ಹಿತವನ್ನು ಹೇಳಿ ಆದರದಿಂದ ಕಳುಹಿಕೊಟ್ಟರಲ್ಲದೆ, ಅವಳಲ್ಲಿ ಆ ಗುಣಕ್ಕೆ ನ್ಯೂನತೆಯಿತ್ತೆಂದು ಹೇಳಲಿಲ್ಲ. ಅಷ್ಟೇ ಅಲ್ಲ. ವನವಾಸಕ್ಕೆ ಹೊರಟು, ಮರದ ಕೆಳಗೆ ಹುಲ್ಲಿನ ಹಾಸಿಗೆಯ ಮೇಲೆ ಮಲಗುತ್ತ, ಕಂದಮೂಲಫಲಗಳನ್ನು ಮೆಲ್ಲುತ್ತ, ಮುನಿವೃತ್ತಿಯನ್ನು ಹಿಡಿದಿದ್ದ ದೃಢವ್ರತಳಾದ ಜಾನಕೀದೇವಿಗೆ ಅತ್ರಿಮಹರ್ಷಿಯ ಪತ್ನಿಯಾದ ಅನಸೂಯಾದೇವಿಯು ಮಾಡಿದ ಆತಿಥ್ಯದಲ್ಲಿ ಕೂಡ ಪಾತಿವ್ರತ್ಯಪ್ರಭಾವ, ಪತಿವ್ರತೆಯರ ಮಹಿಮೆಗಳನ್ನೂ ತಿಳಿಸಿದುದೇ ಮುಖ್ಯವಾಗಿರುವುದು. ಹೀಗೆ ಇನ್ನೂ ಎಷ್ಟೋ ಉದಾಹರಣೆಗಳನ್ನು ಹೇಳಬಹುದಾದರೂ ಕಾಲಾತೀತವಾಗುವುದೆಂದು ಇಷ್ಟಕ್ಕೆ ನಿಲ್ಲಿಸುವೆನು.

ಮತ್ತೆ ಹೇಳುವುದೆಂದರೆ, ನನ್ನ ಸೋದರಿಯರೇ !

ಪಾತ್ರಾಪಾತ್ರ ಪೂರ್ವಾಪರ ವಿಚಾರ ಮಾಡದೆ, ನಮ್ಮ ದೇಶೀಯರು ಮಾಡುವ ಆಕ್ಷೇಪಗಳೂ—ಅವರ ಸಂಶಯ ವಿಚಾರಗಳೂ ಆಗಿವೆ. ಅವುಗಳಲ್ಲಿ ಆಕ್ಷೇಪಗಳು ಅಷ್ಟಾಗಿ ಗಣನೀಯವಲ್ಲ. ಆಕ್ಷೇಪಕರು ಬೇಕಾದಷ್ಟು ಆಕ್ಷೇಪಿಸಲಿ, ಅದರಿಂದ ನಮಗೆ ಕೊರತೆ ತಟ್ಟುವದಿಲ್ಲ. ಸಂಶಯವನ್ನು ಕುರಿತು ಮಾತ್ರ ಒಂದೆರಡು ಮಾತನ್ನು ಹೇಳಬೇಕೆಂಬುದು ನನ್ನ ಅಭಿಮತವು. ಇಲ್ಲಿ ಪುರುಷರು ಪಡುವ ಸಂಶಯವು ಕೂಡ ನಮಗೆ ವಿಚಾರಕ್ಕೆ ಕಾರಣವಲ್ಲ. ನಮ್ಮ ಸೋದರಿಯರಲ್ಲಿಯೇ ಅನೇಕರು ಈ ಸಂಶಯಕ್ಕೆ ತುತ್ತಾಗಿ ಪುರುಷರ ಸಂಶಯವನ್ನು ಮತ್ತೂ ಬೆಳೆಯಿಸಿ, ನಮ್ಮನಮ್ಮಲ್ಲಿ ಪರಸ್ಪರ ಅನ್ಯೋನ್ಯವಾದ ಸೋದರೀವಿಶ್ವಾಸವು ಬೆಳೆಯುವದಕ್ಕೆ ಪ್ರತಿಬಂಧಕರಾಗುತ್ತಿರುವುದು ಮಾತ್ರ ನಮ್ಮ ಇಂದಿನ ಇಷ್ಟು ವಿಚಾರಕ್ಕೂ ಕಾರಣವಾಗಿದೆ. ಏನೆನ್ನುವಿರಿ ? "ಸ್ತ್ರೀಯರಲ್ಲಿ ಲೇಖನಾಕೌಶಲವೆಲ್ಲಿ ಬರುವುದು? ಪುಸ್ತಕಪ್ರಕಟನದ ಸಾಹಸವು ಸ್ತ್ರೀಯಲ್ಲಿ ಹೇಗೆತಾನೇ ಉಂಟಾಗುವುದು ? ......!" ಮತ್ತು ಸ್ತ್ರೀಹೃದಯಸ್ಫುರಣವಿಲ್ಲದ ಪರುಷಭಾವಗಳಿಂದಲೂ ಕ್ಲಿಷ್ಟತೆಯಿಂದಲೂ ಕೂಡಿದ ಈ ಗ್ರಂಥವಿಲೇಖನಕಾರ್ಯವು ಸ್ತ್ರೀಕರ್ತೃತ್ವಕ್ಕೊಳಪಟ್ಟುದೆಂದು ಹೇಳುವುದಾದರೂ ಹೇಗೆ ....!" ಇನ್ನೂ ಎಷ್ಟೆಷ್ಟೋ ವಿಧವಾಗಿ ಹೇಳುತ್ತಿರುವ ಪುರುಷರ ಆಕ್ಷೇಪಗಳಿಗೆ ಸ್ತ್ರೀಯರು "ಕೆಲವು ವೇಳೆ ತಾವು ಪ್ರತ್ಯಕ್ಷದಲ್ಲಿ ನೋಡಿದವರಾಗಿದ್ದರೂ ಕೂಡ" ಸಂಶಯಪಡುತ್ತ ಹಾಗೆಯೇ ಇರಬೇಕು. ಇದು ಅಸಾಧ್ಯ........ಎಂದು ಮೇಲಿನ ವಾಕ್ಯವನ್ನು ಪುಷ್ಟೀಕರಿಸಿ, ತಮ್ಮ ತಮ್ಮಲ್ಲಿಯೇ ಇದಕ್ಕೆ ಸಂಬಂಧಪಟ್ಟಂತೆ ಅನೇಕ ವಿಷಯಗಳಿಗೆ ವಿಕಲ್ಪಾರ್ಥಗಳನ್ನೇ ಕಲ್ಪಿಸಿಕೊಳ್ಳುತ್ತಿರುವರು.

ಸ್ತ್ರೀಯರಲ್ಲಿ ಕಾವ್ಯಲೇಖನಕೌಶಲವಿಲ್ಲವೆಂದು ಹೇಳುವವರು ಸಾಹಸಿಗಳೇ ಸರಿ! ಏಕೆಂದರೆ, ಸ್ತ್ರೀಯರಲ್ಲಿ ಕೌಶಲವಿಲ್ಲವೆಂದು ಹೇಳುವವರು ಋಕ್ಕು, ಸ್ಮೃತಿ, ಕಾವ್ಯಗಣಿತಶಾಸ್ತ್ರರಚನೆಗಳಲ್ಲಿ ಕೂಡ ಸ್ತ್ರೀಯರು ಪರಿಶ್ರಮವುಳ್ಳವರಾಗಿ ಅತಂದ್ರಾರ್ಕವಾಗಿ ಪ್ರಕಾಶಿಸುವಷ್ಟು ಪ್ರತಿಭಾಕೌಶಲವನ್ನು ಪ್ರದರ್ಶಿಸಿರುವದನ್ನು ನೋಡಿ ಸಮಾಧಾನಗೊಳ್ಳಬೇಕಾಗಿದೆ. ಪುಸ್ತಕಪ್ರಕಟನಕಾರ್ಯವು ಸಾಹಸಿಕವೆಂದೂ ಸ್ತ್ರೀಯರಿಂದ ಸಾಧ್ಯವಲ್ಲವೆಂದೂ ಹೇಳುವವರಿಗೆ, ಪುರುಷರಿಗೂ ಕೌತುಕವನ್ನುಂಟುಮಾಡುವ ಅಂಗಸಾಧನೆ, ಪ್ರೌಢವಿದ್ಯಾಭ್ಯಾಸ, ಉದ್ಯೋಗಗಳನ್ನು ಮಾಡುವ ಸ್ತ್ರೀಯರನ್ನು ನೆನಪಿಗೆ ತಂದುಕೊಳ್ಳುವಂತೆ ಹೇಳುವುದಲ್ಲದೆ, ಸ್ತ್ರೀಯರು, ರಾಜ್ಯಕಾರಣದಲ್ಲಿಯೂ ವ್ಯೂಹರಚನೆಯಲ್ಲಿಯೂ ನಿಸ್ಸೀಮಪಾಂಡಿತ್ಯವನ್ನು ತೋರಿಸಿ-ತೋರಿಸುತ್ತಿರುವಾಗ ಕೇವಲ ಪುಸ್ತಕಪ್ರಕಟನಕಾರ್ಯವು ಸಾಹಸವೆಂದು ಹೇಳುವುದು ಹೇಗೆ !

ಸುತ್ತಮುತ್ತಲೂ ಸುತ್ತಿಕಾಡುತ್ತಿರುವ ವಿಘ್ನಗಳ ದೆಸೆಯಿಂದ ಸ್ಪಷ್ಟೋಕ್ತಿಯನ್ನಾಡಲು ಅವಕಾಶವಿಲ್ಲದ ಕಡೆಯಲ್ಲಿ—ಮನಸ್ಸು ಕಠಿನಭಾವವನ್ನು ಹೊಂದಿದ ಕಾಲದಲ್ಲಿ— ಸರಳತೆಯಾಗಲಿ, ಮಾರ್ದವವಾಗಲಿ ಎಲ್ಲಿಂದ ಬರಬೇಕು ?......................"

ಇಷ್ಟಕ್ಕೆ ಸಾಕು. ಬೆಳಸುತ್ತಹೋದಂತೆಲ್ಲಾ ಈ ವಿಚಾರವು ಬೆಳೆಯುತ್ತ ಹೋಗುವುದು. ಆದುದರಿಂದ ಇಷ್ಟಕ್ಕೇ ಸಾಕುಮಾಡುವ

ಇರಲಿ, ಸೋದರಿಯರೇ!

ಇಷ್ಟು ನಿವೇದಿಸಿದ ಮೇಲೆ, ಇನ್ನು ನಮ್ಮ ಮುಂದಿನ ಕರ್ತವ್ಯವನ್ನು ಕುರಿತು ನಿವೇದಿಸುವುದೊಂದು,— ನಮ್ಮಲ್ಲಿ ಐಕಮತ್ಯವಿಲ್ಲವೆಂದೂ, ಒಬ್ಬರು ಮಾಡುವ ಸತ್ಕಾರ್ಯಕ್ಕೆ ಮತ್ತೊಬ್ಬರು ಸಹಾಯಮಾಡಬೇಕೆಂಬ ಸಾನುಭೂತಿಯು ನಮ್ಮಲ್ಲಿಲ್ಲವೆಂದೂ ನಮ್ಮ ಸೋದರರು ಹೇಳುತ್ತಿರುವರು. ವಿಚಾರಮಾಡುವುದರಲ್ಲಿ ಅದು ಅನುಭವಕ್ಕೇ ಬಂದಿದೆಯೆಂದು ತಿಳಿಸಲು ಹಿಂದೆಗೆಯುತ್ತಿರುವೆನು. ಏಕೆಂದರೆ, ಈಗ ನಾನು ನಮ್ಮ ಸೋದರಿಯರೆಲ್ಲರಲ್ಲಿಯೂ ಅನ್ಯೋನ್ಯಭಾವನೆಯುಂಟಾಗಿ, ಅವರ ಭಿನ್ನ ಭಿನ್ನಾಭಿಪ್ರಾಯಗಳೆಲ್ಲವೂ ಏಕೀಭವಿಸಿ, ದೇಶದೇಳ್ಗೆಗೆ ತಕ್ಕಮಟ್ಟಿಗೆ ಸಹಕಾರಿಯಾಗಲೆಂದು ಭಾವಿಸಿ, "ಕರ್ಣಾಟಕ-ನಂದಿನಿ" ಎಂಬ ಮಾಸಪತ್ರಿಕೆಯನ್ನು ಹೊರಡಿಸಿದೆನು. ಮೊದಲು ಭಗಿನಿಯರಲ್ಲಿ ಭಿಕ್ಷೆಯೆಂಬ ಲೇಖನ ದ್ವಾರಾ ನಮ್ಮ ಸೋದರಿಯರನ್ನು ಬಹುವಾಗಿ ಪ್ರಾರ್ಥಿಸಿದೆನು; ಆ ಬಳಿಕ, ಬಹುಮಾನಸ್ಪರ್ಧೆಯನ್ನು ಗೊತ್ತುಮಾಡಿ ಆ ಮೂಲಕ ಪ್ರಾರ್ಥಿಸಿದೆನು. ಆದರೂ ನಮ್ಮ ಸೋದರಿಯರ ಕೃಪೆಯು ನಮ್ಮ ಕಡೆಗೆ ಬರಲಿಲ್ಲ. ಅದಾದ ಬಳಿಕ ಸುಪ್ರಭಾತವನ್ನು ಕೋರಿ. ಆಗಲಾದರೂ ಎಚ್ಚರಗೊಂಡು ಕಟಾಕ್ಷಿಸಿರೆಂದು ಬೇಡಿಕೊಂಡೆನು ಆದರೂ ಅವರ ಕಟಾಕ್ಷವು ದುರ್ಲಭವಾಯಿತು! ಇಂದಿನವರೆಗೆ ನಿರೀಕ್ಷಿಸಿದರೂ ನಮ್ಮ ಆಶೆಯು ಫಲಕಾರಿಯಾಗುವುದೆಂದು ಮಾತ್ರ ಹೇಳುವಂತಿಲ್ಲ ಸೋದರಿಯರಲ್ಲಿ ಅನ್ಯೋನ್ಯ ಸಹಕಾರಿತ್ವವಿಲ್ಲವೆಂಬುದಕ್ಕೆ ಇನ್ನೂ ಎಷ್ಟು ಹೇಳಬೇಕು? ನಮ್ಮ ಕರ್ಣಾಟಕದಲ್ಲಿ ಅಸಂಖ್ಯಾತರಾದ ವಿದ್ಯಾವತಿಯರೂ, ಪ್ರತಿಭಾಸಂಪನ್ನರಾದ ಆರ್ಯರಮಣಿಯರೂ ಇರುವರೆಂದೂ, ಅವರೆಲ್ಲರ ಸಾನುಭೂತಿಪ್ರದರ್ಶಕಗಳಾದ ಲೇಖನಗಳೂ ನಂದಿನಿಗೆ ಲಭಿಸುವವೆಂದೂ ಹೆಮ್ಮೆಗೊಂಡಿದ್ದ ನಮಗೆ ಅದು ದುರ್ಲಭವಾದುದಕ್ಕಾಗಿ ಎಷ್ಟು ದುಃಖವಾಗುತ್ತಿರುವುದೋ ನೀವೇ ಯೋಚಿಸಿರಿ!

ಆದರೆ, ಇದ್ದುದರಲ್ಲಿ ನಮಗೆ ಸಮಾಧಾನವೆಂದರೆ, ನಮ್ಮ ಪ್ರಿಯಭಗಿನಿ ಶ್ರೀ|| ಸೌ|| ಪಾರ್ವತಾಂಬಾಯವರು ನಮ್ಮಲ್ಲಿ ಅಕೃತ್ರಿಮ ಸೋದರೀವಿಶ್ವಾಸವಿರಿಸಿ, ನಮಗೆ ಅಡಿಗಡಿಗೆ ಲೇಖನದ್ವಾರವಾಗಿಯೂ, ಪ್ರತ್ಯಕ್ಷ ಪ್ರೋತ್ಸಾಹಜನಕವಾಕ್ಯದಿಂದಲೂ ತಮ್ಮ ಸಾನುಭೂತಿಯನ್ನು ಪ್ರದರ್ಶಿಸುತ್ತಿರುವರೆಲ್ಲದೆ, ಇಂದಿನ ಈ ಸಭೆಯಲ್ಲಿ ನೂರಾರುಮಂದಿ ಸೋದರಿಯರ ಸಂದರ್ಶನದ ಅಲಭ್ಯಲಾಭವನ್ನು ಮಾಡಿಕೊಟ್ಟುದೂ ಇದೇ ನಮ್ಮ ನಿಮ್ಮಲ್ಲಿ ಪರಸ್ಪರ ಸೋದರೀವಿಶ್ವಾಸವು ಬೆಳೆದು ಬರುವಂತಾದೀತೆಂಬ ಆಶೆಯನ್ನೂ ಉಂಟುಮಾಡಿರುವುದು. ಈ ಆಶೆಯನ್ನು ಛೇದಿಸದೆ ಸಫಲವಾಗಿ ಮಾಡುವುದು ನಮ್ಮ ಸನ್ಮಾನ್ಯಭಗಿನಿ, ಶ್ರೀ| ಸೌ| ಪಾರ್ವತಾಂಬಾಯವರ ಮಾತ್ರ ತಮ್ಮೆಲ್ಲರ ಮೇಲೆಯೂ ಬಿದ್ದ ಭಾರವಾಗಿರುವುದು. ಎಂದರೆ ತಮ್ಮಲ್ಲಿ ನಾನು ಕೋರುವ ಸಹಾಯವು ಮತ್ತಾವುದೂ ಅಲ್ಲ: ಹಿಂದೆ ನಿವೇದಿಸಿರುವಂತೆ ಸ್ತ್ರೀಯರ ಕರ್ತವ್ಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ, ಎಂದರೆ ಗೃಹಕಾರ್ಯವಿಚಾರ ಶಿಶುಸಂರಕ್ಷಣ, ಸಮಾಜಸೇವಾವಿಚಾರ, ನಮ್ಮ ಆಚಾರವಿಚಾರಗಳು, ಸ್ತ್ರೀಯರ ಸತ್ಕಾಲಕ್ಷೇಪವಿಚಾರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನಿಮ್ಮ ನಿಮ್ಮ ಅನುಭವಕ್ಕೊಳಪಟ್ಟವುಗಳನ್ನು ಅವಕಾಶಾನುಸಾರ ಸಂಕ್ಷೇಪವಾಗಿಯೋ ವಿಸ್ತಾರವಾಗಿಯೋ ಬರೆದುಕಳುಹುತ್ತ ಬರುವುದರಿಂದ ನಂದಿನಿಯ ಅಂತರ್ಬಾಹ್ಯಸ್ವರೂಪವು ಮನೋಹರವೂ, ಲೋಕಾದರಣೀಯವೂ ಆಗುವಂತೆ ಮಾಡುವುದಲ್ಲದೆ ಮತ್ತಾವ ಸಹಾಯವನ್ನೂ ಪ್ರಾರ್ಥಿಸಿಲ್ಲ. ಈ ಸಹಾಯವು ತಮ್ಮಿಂದ ದೊರೆಯುವದೆಂಬ ಭರವಸೆಯನ್ನು ಕೊಡುವಿರಾದರೆ, ನನ್ನ ಈ ವರೆಗಿನ ನಿರೀಕ್ಷೆಗೆ ಸತ್ಫಲವು ದೊರೆಯಿತೆಂದು ಭಾವಿಸಿ, ನೂತನೋತ್ಸಾಹದಿಂದ ನನ್ನ ಸೇವಾಕಾರ್ಯದಲ್ಲಿ ನಿರತೆಯಾಗುವೆನು.

ದಯಾಮಯಿಯಾದ ಜಗನ್ಮಾತೆಯು ಇಂದಿನ ನನ್ನೀ ನಿವೇದನವನ್ನು ನಡೆಯಿಸಿಕೊಡಬೇಕೆಂದೂ, ಇಂದಿನ ನಮ್ಮ ಸಮ್ಮೇಲನದ ಸುಯೋಗವು ಪದೇ ಪದೇ ತಮ್ಮ ಸಂದರ್ಶನದ ಅಲಭ್ಯಲಾಭವನ್ನು ಅನುಗ್ರಹಿಸುತ್ತಬರಲೆಂದೂ, ನಮ್ಮ ಈ ಸೇವಾಸಮಾಜವು ಉತ್ತರೋತ್ತರಾಭಿವೃದ್ಧಿಯಿಂದ, ತನ್ನ ನಿರ್ದಿಷ್ಟಕಾರ್ಯಗಳನ್ನು ನಿರ್ವಹಿಸಿ, ಲೋಕೋಪಕಾರಿಯಾಗಿ ಪರಿಣಮಿಸಲೆಂದೂ ಪ್ರಾರ್ಥಿಸಿ, ನನ್ನೀ ದೀರ್ಘಭಾಷಣವನ್ನು ಇಲ್ಲಿಗೆ ಪೂರ್ಣಗೊಳಿಸುವೆನು.

" ಈ ಭಾಷಣವಾದ ಬಳಿಕ, ಮಹಿಳಾಸೇವಾಸಮಾಜದ ಪ್ರೆಸಿಡೆಂಟರಾದ ಶ್ರೀ| ಸೌ| ಪಾರ್ವತಮ್ಮನವರು ಇದರಲ್ಲಿಯ ಮುಖ್ಯಮುಖ್ಯ ವಿಷಯಗಳನ್ನು ತೆಗೆದು, ಸೋದರಿಯರಿಗೆ ಹೃದಯಂಗಮವಾಗುವಂತೆ ಬಿಡಿಸಿ ಬಿಡಿಸಿ ಹೇಳಿದರಲ್ಲದೆ, ಸ್ತ್ರೀಯರ ಸಾಹಸಪ್ರದರ್ಶನವಿಚಾರದಲ್ಲಿ, ಸುಭದ್ರಾದೇವಿಯು ಅರ್ಜುನನಿಗೆ ಸಾರಥ್ಯವನ್ನು ಮಾಡಿದುದನ್ನೂ, ಸತ್ಯಭಾಮಾದೇವಿಯು ನರಕಾಸುರವಧೆಯಲ್ಲಿ ಉದ್ಯುಕ್ತಳಾಗಿ ಯುದ್ಧ ಮಾಡಿದುದನ್ನು, ಕೈಕೇಯೀದೇವಿಯು ದಶರಥಮಹಾರಾಜನು ರಾಕ್ಷಸರೊಡನೆ ಯುದ್ಧ ಮಾಡುತ್ತಿದ್ದ ಕಾಲದಲ್ಲಿ ಆತನ ರಥದ ಚಕ್ರವು ಮುರಿಯಲು, ಚಕ್ರಕ್ಕೆ ಪ್ರತಿಯಾಗಿ

ತಾನೇ ಭುಜವನ್ನು ಕೊಟ್ಟು, ಗಂಡನ ಪ್ರಾಣವನ್ನು ಕಾಪಾಡಿದುದನ್ನೂ, ಮತ್ತು ನಮ್ಮ ಭಾರತಮಹಿಳೆಯರಲ್ಲಿ ಅನೇಕರು ರಾಜ್ಯಭಾರ ಮಾಡಿದುದನ್ನೂ, ಈಚೀಚೆಗೆ ಕೂಡ ವಿಕ್ಟೋರಿಯಾ ಮಹಾರಾಣಿ, ಪ್ಪೆರೂರು ಮಹಾರಾಣಿ ರೀಜೆಂಟ್'ರವರುಗಳು ರಾಜ್ಯಭಾರವಮಾಡಿದರೆಂಬುದನ್ನೂ ತಿಳಿಸಿದುದಲ್ಲದೆ, ಶ್ರೀಮತಿ ಅನಿಬೆಸಂಟ್'ಮ್ಮನವರು ಎಷ್ಟೆಷ್ಟು ಅಸಾಧ್ಯ ಮತ್ತು ಅದ್ಭುತಕಾರ್ಯಗಳನ್ನು ಮಾಡಿ ಎಷ್ಟು ಮಟ್ಟಿಗೆ ಲೋಕಮಾನ್ಯರಾಗಿರುವರೆಂಬುದನ್ನು ತಿಳಿದು, ನಮ್ಮ ಸೋದರಿಯವರಲ್ಲಿ ಕೂಡ ಹಾಗೆಯೇ ಎಲ್ಲರೂ ವಿಶ್ವಾಸವನ್ನೂ ನಂಬಿಕೆಯನ್ನೂ ಇರಿಸಿ, ಅವರ ಪ್ರಾರ್ಥನೆಯಂತೆ ಲೇಖನದ್ವಾರದಿಂದಲೂ ಶಕ್ತ್ಯುಚಿತ ದ್ರವ್ಯಸಹಾಯದಿಂದಲೂ ನಂದಿನಿಯನ್ನು ಅಭ್ಯುದಯಕ್ಕೆ ತರಬೇಕೆಂಬುದನ್ನೂ ತಿಳಿಸಿದರು. ಅವರ ಮುಖೋಲ್ಲಾಸಕ್ಕಾಗಿ ಅಲ್ಲಿಯೇ ಅನೇಕ ಮಹಿಳೆಯರು ಲೇಖನವನ್ನು ಕಳುಹುವೆವೆಂದು ವಾಗ್ದಾನ ಮಾಡಿದರು. ಆದರೆ, ಅದ್ಯಾಪಿ ಅವರ ಲೇಖನವಾವುದೂ ನಮ್ಮೆಡೆಗೆ ಬಂದಿಲ್ಲವಾದುದರಿಂದ ಅವರ ವಾಗ್ದಾನವನ್ನು ಮತ್ತೊಮ್ಮೆ ನೆನಪಿಗೆ ತಂದು ವಿರಮಿಸಿರುವೆವು.

ಸಂಪಾದಿಕೆ—ನಂದಿನಿ.

ಆಳ್ವಾರರ ವೈಭವವು.

ಲೇಖಕಿ:—
ಶ್ರೀ|| ಸ|| ರಂಗನಾಯಕಮ್ಮ,
ನಂಜನಗೂಡು.

ಹಿನಿಯ ಸಂಚಿಕೆಯಿಂದ ಮುಂದೆ ಸಾಗಿದುದು.

(ರಾಮಾನುಜಾಚಾರ್ಯರು)

ಅನಂತರ ರಾಮಾನುಜರು ಕೇರಳದೇಶವನ್ನು ಹೊಕ್ಕು ಅಲ್ಲಲ್ಲಿ ದುರ್ವಾದಿಗಳನ್ನು ಜಯಿಸಿ ಹದಿನೆಂಟು ತಿರುಪದಿಗಳಲ್ಲಿಯೂ ದೇವರನ್ನು ಸೇವಿಸಿ, ಪಶ್ಚಿಮ ಮಾರ್ಗವಾಗಿ ದ್ವಾರಕೆ, ಅಯೋಧ್ಯೆ, ಬದರಿಕಾಶ್ರಮ, ನೈಮಿಷಾರಣ್ಯ, ಪುಷ್ಕರಕ್ಷೇತ್ರ, ಬೃಂದಾವನವೇ ಮೊದಲಾದ ದಿವ್ಯದೇಶಗಳನ್ನು ಸೇವಿಸುತ್ತ ಅಲ್ಲಲ್ಲಿರುವ ದುರ್ವಾದಿಗಳನ್ನು ಜಯಿಸಿ, ಶಾರದಾಪೀಠವಾದ ಭಟ್ಟ ಮಂಟಪವನ್ನು ಪ್ರವೇಶಿಸುತ್ತಿರೆ, ಸರಸ್ವತಿಯು ಇದಿರ್ವಂದು ಸನ್ಮಾನವನ್ನು ಮಾಡಿ, ವೇದಶ್ರುತಿಗೆ ಅರ್ಥವನ್ನು ಕೇಳಲು, ರಾಮಾನುಜರು ಆ ದೇವಿಯ ಮನ ಒಪ್ಪುವಂತೆ ಅರ್ಥವನ್ನು ಹೇಳಿದರು. ಶಾರದಾದೇವಿಯು ಸಂತುಷ್ಟಳಾಗಿ “ಶ್ರೀಭಾಷ್ಯಕಾರ”ರೆಂಬ ಹೆಸರಿನಿಂದ ಕರೆದು ಅವರು ಬರೆದುಕೊಟ್ಟ ಶ್ರೀಭಾಷ್ಯವನ್ನು ಶಿರಸಾವಹಿಸಿ, ಅದನ್ನೂ, ತನಗೆ ಆರಾಧನ ವಿಗ್ರಹವಾದ ಶ್ರೀಲಕ್ಷ್ಮೀ ಹಯಗ್ರೀವ ಸ್ವಾಮಿಯನ್ನೂ ಒಡೆಯವರ ಕಯ್ಯಲ್ಲಿ ಕೊಡಲು, ಅವರು, ಅತುಲೈಶ್ವರ್ಯವನ್ನು ಪಡೆದವರಂತೆ ಸಂತೋಷಿಸಿ, ತಮ್ಮ ಮಠವು ಬೀಡು ಬಿಟ್ಟ ಸ್ಥಳಕ್ಕೆ ಬಂದರು. ಆದೇಶದ ಅರಸು ನಡೆದ ವೃತ್ತಾಂತವನ್ನು ಕೇಳಿ ರಾಮಾನುಜರಿಗೆ ಶಿಷ್ಯನಾದನು. ಯತಿರಾಜರು ಅಲ್ಲಿಂದ ಮಥುರಾ ಮೊದಲಾದ ದಿವ್ಯದೇಶಗಳಲ್ಲಿ ದೇವರನ್ನು ಸೇವಿಸಿ, ಗಂಗಾಸ್ನಾನವನ್ನು ಮಾಡಿ ಪುರುಷೋತ್ತಮ, ಶ್ರೀಕೂರ್ಮ, ಸಿಂಹಾದ್ರಿ, ಅಹೋಬಲವೇ ಮೊದಲಾದ ಸ್ಥಳಗಳಲ್ಲಿ ಸ್ವಾಮಿಯಂ ಸೇವಿಸಿ, ಅಲ್ಲಲ್ಲಿ ತೊಡರುವ ದುರ್ವಾದಿಗಳನ್ನು ಜಯಿಸಿ, ತಿರುಪದಿಯನ್ನು ಸೇರಿದರು. ಅಲ್ಲಿರುವ ಶೈವರು ತಿರುಪದಿಸ್ವಾಮಿಯನ್ನು ತಮ್ಮ ಸ್ವಾಮಿಯೆಂದು ತಿರುಮಲೆನಂಬಿಗಳೊಡನೆ ಜಗಳವಾಡುತ್ತಿರುವ ವೇಳೆಗೆ ಸರಿಯಾಗಿ ಯತಿರಾಜರು ಬಹುಮಂದಿ ಶಿಷ್ಯವರ್ಗರಸಿ ಆ ಸ್ಥಳವನ್ನು ಸೇರಿ ಸಂಗತಿಯನ್ನು ಅರಿತು ಅಲ್ಲಿರುವ ದೇವತಾವಿಗ್ರಹಕ್ಕೆ ಶೈವ-ವೈಷ್ಣವ ಚಿಹ್ನಗಳಿರುವಂತೆಯೂ ಇಲ್ಲದಿರುವಂತೆಯೂ ಕಾಣಬಂದುದರಿಂದ ಅದನ್ನು ಪರೀಕ್ಷಿಸಿ ನಿಷ್ಕರ್ಷೆ ಮಾಡಿಕೊಳ್ಳಬೇಕೆಂದು ಆಲೋಚಿಸಿ, ಶಂಖ ಚಕ್ರ ಗದಾ ಪದ್ಮವೇ ಮೊದಲಾದ ವೈಷ್ಣವಚಿಹ್ನಗಳನ್ನೂ ತ್ರಿಶೂಲ ಡಮರುಗಗಳೇ ಮೊದಲಾದ ಶೈವ ಚಿಹ್ನಗಳನ್ನೂ ಸ್ವಾಮಿಯ ಮುಂದಿರಿಸಿ ಬಾಗಿಲನ್ನು ಹಾಕಿ ಭದ್ರಪಡಿಸಿ, ಕಾವಲಿರಿಸಿ, ಮರುದಿವಸ ಪ್ರಾತಃಕಾಲ ಉಭಯ ಪಕ್ಷದವರೂ ಸೇರಿ ಬಂದು, ಬಾಗಿಲನ್ನು ತೆಗೆದು, ಶಂಖಚಕ್ರ ಗದಾಪಾಣಿಯಾದ ಸ್ವಾಮಿಯನ್ನು ಕಂಡು ಶೈವರು ಹಿಂದೆಗೆದರು. ಯತಿರಾಜರು ಸಂತೋಷದಿಂದ ಪಾಷಂಡಿಗಳನ್ನು ಓಡಿಸಿ* ಮೊದಲಿನಂತೆಯೆ

---

* ಇಲ್ಲಿ ಮತಭೇದವು ಕಂಡು ಬರುವುದೆಂದು ನಮ್ಮ ಇತರ ಮತದ ಬಂಧುಗಳು ಆಕ್ಷೇಪಿಸುವ ಕಾರಣವಿಲ್ಲ. ಏಕೆಂದರೆ ಆವ ಮತಸ್ಥಾಪನಾಚಾರ್ಯರಾಗಲಿ ಸ್ವೀಕೃತಮತಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುವುದು ಸಹಜವಾಗಿರುವುದು. ಈ ಮೂಲಕ ಮತವೈಷಮ್ಯಕ್ಕೆಡೆಗೊಡಬೇಕೆಂಬುದು ನಮ್ಮ ಅಭಿಮತವೆಂದು ಆಗೂ ತಿಳಿಯಬಾರದು. ಪ್ರತಿಯೊಂದು ಮತ ಧರ್ಮ ಸಂಸ್ಥಾಪನಾಚಾರ್ಯರ ಜೀವಿತಗಳನ್ನೂ ಅವರು ಮತ್ತು ಅವರ ಅನುಯಾಯಿಗಳಾದವರು ಮಾಡಿರುವ ಲೋಕೋಪಕಾರಗಳನ್ನೂ ಪ್ರಸಿದ್ಧಿಗೆ ತರುವುದೇ ನಮ್ಮ ಉದ್ದೇಶವಾಗಿದೆಯಾದುದರಿಂದ ಈ ಆಳ್ವಾರರ ವೈಭವದ ಲೇಖನಪ್ರಚಾರದಂತೆಯೇ ಇತರ ಮತಸ್ಥಾಪನಾಚಾರ್ಯರ ಚರಿತ್ರೆಗಳನ್ನೂ ಕ್ರಮವಾಗಿ ಪ್ರಕಾಶಗೊಳಿಸಲು ಸಂಕಲ್ಪಿಸಿರುವೆವು. ಸಂ. ನಂ.

ಭಗವತ್ಕೈಂಕರ್ಯವನ್ನು ಏರ್ಪಡಿಸಿ, ಅಲ್ಲಿಂದ ಹೊರಟು ಕಾಂಚೀ ಪಟ್ಟಣವನ್ನು ಸೇರಿ ವರದರಾಜನನ್ನು ಸೇವಿಸಿ ಮಧುರಾಂತಕಾಗ್ರಹಾರದಲ್ಲಿ ಏರಿಕಾತ್ತ ಪೆರುಮಾಳನ್ನು ತಿರುವಹೀಂದ್ರಪುರದಲ್ಲಿ ದೇವನಾಯಕನನ್ನೂ ಸೇವಿಸಿ ತೊಂಡಮಂಡಲದಲ್ಲಿ ದುರ್ವಾದಿಗಳನ್ನು ಜಯಿಸಿ, ವೀರನಾರಾಯಣಪುರದಲ್ಲಿ ಮನ್ನಾರುಸ್ವಾಮಿಯನ್ನು ಸ್ತುತಿಸಿ ಅಲ್ಲಿ ನಾಥಮುನಿಗಳ ಯೋಗಾಭ್ಯಾಸವನ್ನು ನೋಡಿ, ಶ್ರೀರಂಗಕ್ಕೆ ಬಂದು ಶ್ರೀರಂಗನಾಥನನ್ನು ಸೇವಿಸಿ, ಯಾವದ್ವೃತ್ತಾಂತವನ್ನು ಸ್ವಾಮಿಗೆ ಬಿನ್ನವಿಸಿ, ತೀರ್ಥಪ್ರಸಾದ ಶ್ರೀಶಠಗೋಪಾದಿಗಳನ್ನು ಸ್ವೀಕರಿಸಿ ಮಠದಲ್ಲಿ ಸುಖವಾಗಿದ್ದರು.

ಕಾಂಚೀಪುರಕ್ಕೆ ಸ್ವಲ್ಪ ದೂರದಲ್ಲಿ "ಕೂರ"ವೆಂಬುದೊಂದು ಅಗ್ರಹಾರವಿರುವುದು. ಅಲ್ಲಿ ಪ್ರಸಿದ್ಧನಾದ ಕೂರೇಶನೆಂಬುವನು ಮಹಾ ಧನಿಕನಾಗಿ ಪ್ರತಿ ದಿನವೂ ತಪ್ಪದೆ ಅನ್ನದಾನವನ್ನು ಮಾಡುತ್ತಿದ್ದನು ಒಂದು ದಿವಸ ರಾತ್ರಿ ಪಾಕಶಾಲೆಯ ಕಂಚಿನ ಕವಾಟವನ್ನು ಮುಚ್ಚುವುದರಿಂದುಂಟಾದ ಶಬ್ದವನ್ನು ಪೆರುಂದೇವಿಯಮ್ಮನು ಕೇಳಿ, ಆತನನ್ನು ನೋಡಬೇಕೆಂದು ತಿರುಕಚ್ಚಿನಂಬಿಗಳ ಮುಖದಿಂದ ಹೇಳಿ ಕಳುಹಲು, ಕೂರೇಶನು ಅದನ್ನು ಕೇಳಿ ವಿಸ್ಮಿತನಾಗಿ "ಜಗಜ್ಜನನಿಯೆತ್ತ'—ಪಾಮರನಾದ ನಾನೆತ್ತ!' ಎಂದು ಬಗೆದು ಸಕಲವನ್ನೂ ತ್ಯಜಿಸಿ ಪತ್ನೀಸಮೇತರಾಗಿ ಶ್ರೀರಂಗಕ್ಕೆ ಪ್ರಯಾಣವಾದರು; ಬರುತ್ತಾ ದಾರಿಯಲ್ಲಿ "ಅಂಡಾಳೆಂಬುವ" ಕೂರೇಶಪತ್ನಿಯು, ಪತಿಯನ್ನು ನೋಡಿ "ಸ್ವಾಮಿನ್! ದಾರಿಯಲ್ಲಿ ಭಯವುಂಟೇ" ಎಂದು ಕೇಳಲು, "ನಿನ್ನಲ್ಲಿ ದ್ರವ್ಯವಿದ್ದರೆ ಭಯವುಂಟು; ಏನಿದೆಯೋ ಅದನ್ನು ಕೊಡು— ಎಂದರು, ಆಕೆ, "ತಾವು ಹಾಲು ಕುಡಿವ ಸ್ವರ್ಣಪಾತ್ರೆಯನ್ನು ಮಾತ್ರ ತಂದಿರುವೆ"ನೆಂದು ಹೇಳಿ, ಅದನ್ನು ಅವರ ಕೈಯ್ಯಲ್ಲಿ ಕೊಡಲು, ಅವರು ಅದನ್ನು ಅಲ್ಲಿಯೇ ಬಿಸುಟು, ನಿರ್ಭಯವಾಗಿ ಶ್ರೀರಂಗವನ್ನು ಸೇರಿ ಭಾಷ್ಯಕಾರರಿಗೆ ಶರಣಾಗತರಾಗಿ ಉಂಛವೃತ್ತಿಯಿಂದ ಸೇವಿಸುತ್ತಲಿದ್ದರು

ಒಂದುದಿವಸ ಮಳೆಯ ಬಾಧೆಯಿಂದ ಕೂರೇಶರು ಉಪಾದಾನಕ್ಕೆ ಹೋಗಲಾಗದೆ ಉಪವಾಸವಿರಲು ಶ್ರೀರಂಗನಾಥನ ನೈವೇದ್ಯಸಮಯದಲ್ಲಿ ಉಂಟಾದ ಕಹಳಾನಾದವನ್ನು ಅವರ ಪತ್ನಿಯು ಕೇಳಿ "ಭಕ್ತರು ಉಪವಾಸವಿರುವಲ್ಲಿ ನೀನು ಮಾತ್ರ ಆರೋಗಣೆ ಮಾಡಬಹುದೆ ?—" ಎಂದಳು. ಆಗ ಶ್ರೀರಂಗನಾಥನು ಕೂರೇಶರಿಗೆ ಪ್ರಸಾದವನ್ನು ಕೊಡುವಂತೆ ಉತ್ತಮನಂಬಿಯ ಸ್ವಪ್ನದಲ್ಲಿ ಹೇಳಲು ಅವರು ಹಾಗೆಯೇ ಮಾಡಿದರು. ಕೂರೇಶರು ಆ ದಿವ್ಯಪ್ರಸಾದವನ್ನು ಸ್ವೀಕರಿಸಿ ತಮ್ಮ ಪತ್ನಿಗೂ ಕೊಟ್ಟರು. ಆ ದಿವ್ಯಪ್ರಸಾದದ ಮಹತ್ವದಿಂದ ನವಮಾಸಗಳಿಗೆ ಸರಿಯಾಗಿ ಕೂರೇಶ ಪತ್ನಿಗೆ ಅವಳಿ ಮಕ್ಕಳು ಉದಿಸಿದರು ಒಡೆಯವರು ಆ ಯಮಲರಲ್ಲಿ ಜ್ಯೇಷ್ಠನಿಗೆ ಪರಾಶರಭಟ್ಟರೆಂದೂ ದ್ವಿತೀಯರಿಗೆ ವ್ಯಾಸಭಟ್ಟರೆಂದೂ ನಾಮಕರಣವನ್ನು ಮಾಡಿ ಆಳವಂದಾರ್ರವರ ದ್ವಿತೀಯ ಮನೋರಥವನ್ನು ಪೂರ್ಣಮಾಡಿದರು.

ಒಂದು ದಿವಸ ಯತಿರಾಜರು ಮಠದಲ್ಲಿ ದಿವ್ಯ ಪ್ರಬಂಧಾರ್ಥವನ್ನು ಮನನ ಮಾಡುತ್ತ ಸತಪಥವನ್ನು ತಿರುಗುತ್ತಿರಲು ಪೆರಿಯ ತಿರುಮಲೆ ನಂಬಿಗಳ ಪುತ್ರರಾದ ಪಿಳ್ಳಾನು ಹೊರಗೆ ಕೇಳಿ ಅದರ ಅಭಿಪ್ರಾಯವನ್ನು ಸೂಚಿಸಿದರು. ಒಡೆಯವರು ಪ್ರೀತರಾಗಿ ಹೊರಗೆ ಬಂದು ಪಿಳ್ಳಾನನ್ನು ನೋಡಿ ಸಂತುಷ್ಟರಾಗಿ ಜನ್ಮಪ್ರಭೃತಿ ಅವರ ಜ್ಞಾನವನ್ನು ಸಕಲರಿಗೂ ತಿಳುಹಿಸಿ, ಅವರನ್ನು ನೋಡಿ ಆಚಾರ್ಯಕಟಾಕ್ಷದಿಂದ ಸಕಲವೂ ತಿಳಿದುದಾಯಿತು ನಾಲ್ಕು ಸಾವಿರ ತಿರುವಾಯಿಮೊಳಿಯಲ್ಲಿ ಮುಖ್ಯವಾದ ಈ ತಿರುವಾಯಿಮೊಳಿಗೆ ಆರಾಯಿರಪ್ಪಡಿ ವ್ಯಾಖ್ಯಾನವನ್ನು ಮಾಡಬೇಕೆಂದು ಅಜ್ಞಾಪಿಸಿದರು. ಪರಾಶರಭಟ್ಟರು ಅದೇ ಪ್ರಕಾರ ಮಾಡಿ ಯತಿರಾಜರಿಗೆ ಸಮರ್ಪಿಸಲು ಅವರು ಅದಕ್ಕೆ ಭಗವದ್ವಿಷಯವೆಂದು ಹೆಸರನ್ನಿತ್ತು ಸೂತ್ರಭಾಷ್ಯದಂತೆ ಕಾಲಕ್ಷೇಪಯೋಗ್ಯವನ್ನಾಗಿ ಮಾಡಿದರು.

ಆ ನಂತರ ರಾಮಾನುಜರು ವೇಶ್ಯಾಲಂಪಟನಾದ ಧನುರ್ದಾಸನೆಂಬ ಒಬ್ಬ ಜಟ್ಟಿಯನ್ನು ತಮ್ಮ ಸದ್ಬೋಧನೆಯಿಂದ ಆಚಾರ್ಯಭಕ್ತನನ್ನಾಗಿ ಮಾಡಲು, ಅವನೂ ಅವನನೊಳೆಯೂ ಮದಮಾತ್ಸರ್ಯರಹಿತರಾಗಿ ಸರ್ವಸ್ವವನ್ನೂ ಸ್ವಾಮಿಗೆ ಸಮರ್ಪಿಸಿ ಸಕಲವೂ ಆಚಾರ್ಯನೆಂದರಿತು ಶಿಷ್ಯಾಗ್ರೇಸರರಾಗಿದ್ದರು. ಈ ಪ್ರಕಾರವಾಗಿ ಲಕ್ಷ್ಮಣದೇಶಿಕರು (ರಾಮಾನುಜರು) ಸಕಲರನ್ನೂ ವೈಷ್ಣವರನ್ನಾಗಿ ಮಾಡುತ್ತಿರಲು, ಮತಾಂತರದವರು ಇವರ ವೈಭವವನ್ನು ನೋಡಿ ಸಹಿಸಲಾರದೆಯೂ ಇವರನ್ನು ಜಯಿಸಲಶಕ್ತರಾಗಿಯೂ ಆ ದೇಶದ ಅರಸನಾದ ಚೋಳನಿಗೆ ದುರ್ಬೋಧನೆಯನ್ನು ಮಾಡಿದರು.

ಒಂದು ದಿವಸ ರಾಮಾನುಜರು ಶಿಷ್ಯರೊಡನೆ ಮಠದಲ್ಲಿ ಕಾಲಕ್ಷೇಪ ಮಾಡುತ್ತಿರಲು ಚೋಳಪ್ರಭುವು ವೈಷ್ಣವ ವಿದ್ವಾಂಸರನ್ನು ಕರೆಯಿಸಿ ಶಿವಾತ್ಪರತರೋನಾಸ್ತಿ ಎಂದು ಬರೆಯುವಂತೆ ಹೇಳಲು, ಹಣದಾಸೆಗೆ ಕೆಲವರೂ ರಾಜಭಯದಿಂದ ಕೆಲವರೂ ಬರೆಯುತಲಿದ್ದರು. ಆಗ "ನಾಲೂರಾನೆಂ" ಬುವ ಯತಿರಾಜರಶಿಷ್ಯನು ಅರಸನನ್ನು ನೋಡಿ, "ನಮ್ಮ ಸ್ವಾಮಿಯಾದ ಎಂಬೆರುಮಾನಾರು ಬರೆದರಲ್ಲವೇ ಪ್ರಯೋಜನವು? ಸಾಮಾನ್ಯರಾದ ಈ ಜನರಿಂದ ಬರೆಯಿಸಿ ಪ್ರಯೋಜನವೇನು?" ಎಂದು ಹೇಳಲು ದೊರೆಯು ರಾಮಾನುಜನರನ್ನೂ ಕೂರೇಶನನ್ನೂ ಕರೆತರಲು ದೂತರನ್ನಟ್ಟಿ

ದನು. ಆಗ ರಾಮಾನುಜರ ಮಾಧ್ಯಾಹ್ನಿಕಸ್ನಾನಕ್ಕೆ ಒದಗಿಸಿ ಕೊಡುತಲಿದ್ದ ಕೂರೇಶರು ರಾಜದೂತಾಗಮನವನ್ನು ಕೇಳಿ, ಒಡೆಯುವರ ತ್ರಿದಂಡಕಾಷಾಯಗಳನ್ನು ಧರಿಸಿ ತಾನೇ ರಾಮಾನುಜರೆಂದು ಹೇಳಿ ಹೊರಡಲು ಪೆರಿಯನಂಬಿಯು ಅವರ ಜತೆಯಲ್ಲಿ ಹೊರಟರು.

ಅನಂತರ ಮುದಲಿಯಾಂಡಾನ್ ಮೊದಲಾದ ಶಿಷ್ಯರು ಒಡೆಯುವರಿಗೆ ಇನ್ನು ಇಲ್ಲಿದ್ದರೆ ಕೇಡುಂಟಾದೀತೆಂದು ತಿಳುಹಲು ಅವರು ಬಿಳಿಯ ವಸ್ತ್ರವನ್ನುಟ್ಟು ಶಿಷ್ಯರೊಡನೆ ಪಶ್ಚಿಮ ದಿಕ್ಕನ್ನು ಕುರಿತು ಹೊರಟರು. ನಾಲ್ಕು ದಿವಸಗಳವರೆಗೂ ಸ್ನಾನ ಪಾನಾದಿಗಳಿಲ್ಲದೆ ಐದನೆಯ ದಿವಸ ವೇಳೆಯಲ್ಲಿ ನೆನೆಯುತ್ತ ಒಂದು ಪರ್ವತ ಪ್ರಾಂತದಲ್ಲಿ ನಲ್ಲಾನ್‌ಚಕ್ರವರ್ತಿ ಶಿಷ್ಯರಾದ ಕೆಲವು ಮಂದಿ ಬೇಡರು ಬೆಂಕಿಯನ್ನು ಕಾಯಿಸಿ ಕೊಳ್ಳುತ್ತಿರುವಲ್ಲಿಗೆ ಬಂದು ಸೇರಿದರು. ಶಿಷ್ಯಸಮೇತರಾದ ಭಾಷ್ಯಕಾರರೆಂದರಿತು ತತ್‌ಕ್ಷಣವೇ ಶೈತ್ಯನಿವಾರಣಾರ್ಥವಾಗಿ, ಸೌದೆಬೆಂಕಿಯನ್ನು ತಂದೊಡ್ಡಿ, "ನಮ್ಮ ಗುರುವಾದ ನಲ್ಲಾನ್‌ಚಕ್ರವರ್ತಿಯು 'ಎಂಬೆರು ಮಾನಾರ್ ತಿರುವಡಿಗಳೇ ಶರಣು" ಎಂದು ನಮಗೆ ಉಪದೇಶಿಸಿರುವುದರಿಂದ ತಾವು ನಮ್ಮನ್ನು ಅನುಗ್ರಹಿಸಿ, ದಯಮಾಡಬೇಕೆಂದು ಪ್ರಾರ್ಥಿಸಿ, ನೂತನ ವಸ್ತ್ರಗಳನ್ನೂ ನವಣೆಅಕ್ಕಿ, ಜೇನುತುಪ್ಪವನ್ನೂ ತಂದುಕೊಟ್ಟರು. ಅವರು ಅದನ್ನು ಪರಿಗ್ರಹಿಸಿ ಅಕ್ಕಿಯನ್ನು ಹುರಿದು ಕುಟ್ಟಿ ಜೇನುತುಪ್ಪದಲ್ಲಿ ಕಲಿಸಿ, ಸ್ವಾಮಿಗೆ ನಿವೇದನವನ್ನು ಮಾಡಿ,ತಾವೂ ಉಂಡು, ಬೇಡರಿಗೂ ಕೊಟ್ಟು, "ನಲ್ಲಾಂ ಚಕ್ರವರ್ತಿ ಎಂಬ ಕಾಲಮೇಘವು ನಡುಕಾಡಿನಲ್ಲಿ ವರ್ಷಿಸಿತೆಂದು ಹೇಳಿ, ಆರಾತ್ರಿ ಅಲ್ಲಿದ್ದು ಶ್ರಮನಿವಾರಣೆ ಮಾಡಿಕೊಂಡರು. ಮರುದಿವಸ ಬೇಡರು ಯತಿರಾಜರನ್ನು ಒಂದು ಗ್ರಾಮಕ್ಕೆ ಕರೆದುಕೊಂಡು ಹೋಗಿ ಒಬ್ಬ ಶ್ರೀವೈಷ್ಣವನ ಮನೆಯಲ್ಲಿ ಬಿಟ್ಟು ಬೇಕಾದ ಪದಾರ್ಥಗಳಿಗೆ ಹಣವಿತ್ತು ಹೊರಟುಹೋದರು. ರಾಮಾನುಜರು ತ್ರಿದಂಡಕಾಷಾಯಗಳನ್ನು ಧರಿಸಿ, ಅಲ್ಲಿ ಕೆಲವು ಮಂದಿಗೆ ಪಂಚಸಂಸ್ಕಾರಗಳನ್ನು ಮಾಡಿದರು. ಅಲ್ಲಿಂದಮುಂದೆ ಮೇಲ್ನಾಡಿನಲ್ಲಿರುವ ಕಾವೇರೀತೀರದಲ್ಲಿ ಸಾಲಿಗ್ರಾಮವೆಂಬುವ ಊರನ್ನು ಸೇರಿ ಅಲ್ಲಿ ಆಶ್ರಯಿಸಿದವರನ್ನು ವೈಷ್ಣವರನ್ನಾಗಿಮಾಡಿ, ದುರ್ವಾದಿಗಳನ್ನು ಜಯಿಸಿ, ಪಡುಗನಂಬಿ ಎಂಬಶಿಷ್ಯನಿಗೆ ದರ್ಶನಾರ್ಥಗಳನ್ನು ಹೇಳುತ್ತ ಶ್ರೀನೃಸಿಂಹ ಸ್ವಾಮಿಯ ಸನ್ನಿಧಿಯಲ್ಲಿ ಚೋಳನನ್ನು ನಾಶಮಾಡಬೇಕೆಂದು ಪ್ರಾರ್ಥಿಸಿ, ಅಲ್ಲಿ ಕೆಲವು ದಿವಸವಿದ್ದರು. ಪಡುಗನಂಬಿಯು ಭಾಷ್ಯಕಾರರ ಶ್ರೀಪಾದತೀರ್ಥವನ್ನು ಒಂದು ಕಮಂಡಲದಲ್ಲಿ ನಿಕ್ಷೇಪಮಾಡಿದರು.

ಅಲ್ಲಿಂದ ರಾಮಾನುಜರು ತೊಂಡನೂರಿಗೆ ಬರಲು, ತೊಂಡನೂರು ನಂಬಿಯು ಸ್ವಾಚಾರ್ಯಾಗಮನವನ್ನರಿತು ಇದಿರ್ಗೊಂಡು ಸತ್ಕರಿಸಿ ಶ್ರೀನೃಸಿಂಹಸ್ವಾಮಿಯ ಸನ್ನಿಧಿಯಲ್ಲಿ ಇಳಿಸಿದರು. ಆಗ ಆದೇಶದ ದೊರೆಯಾದ ವಿಠಲದೇವರಾಯನ ಮಗಳು ಪಿಶಾಚಗ್ರಸ್ತಳಾಗಿ ಯಾರಿಂದಲೂ ನಿವರ್ತಿಸಲು ಅಶಕ್ಯವಾಗಿ ಏನನ್ನೂ ಮಾಡುವುದಕ್ಕೂ ತೋರದೆ ದೊರೆಯು ಚಿಂತಾಕ್ರಾಂತನಾಗಿರಲು ತೊಂಡನೂರು ನಂಬಿಯು ಹಿಂದೆ ರಾಮಾನುಜರು ಬ್ರಹ್ಮರಾಕ್ಷಸನನ್ನು ಅಡಗಿಸಿದಸಂಗತಿಯನ್ನು ತಿಳುಹಿ ಅವರ ಶ್ರೀಪಾದತೀರ್ಥದ ಮಹಿಮೆಯಿಂದ ಸಕಲವೂ ನಿವಾರಣೆಯಾಗುವುದೆಂದು ದೊರೆಗೆ ಹೇಳಿದರು. ಮತ್ತು ಶ್ರೀವೈಷ್ಣವ ಕಾರ್ಯನಿರ್ವಾಹಕ್ಕಾಗಿ ರಾಮಾನುಜರನ್ನು ಅವನ ಮನೆಗೆ ಕರೆದುಕೊಂಡು ಒಂದು ರಾಜಪುತ್ರಿಗೆ ಶ್ರೀಭಾಷ್ಯಕಾರರ ಶ್ರೀಪಾದತೀರ್ಥವನ್ನು ಪ್ರೋಕ್ಷಿಸಿ, ಪಾನಮಾಡಿಸಲು ತತ್‌ಕ್ಷಣವೇ ಪಿಶಾಚದಿಂದ ಮುಕ್ತಳಾದ ರಾಜಪುತ್ರಿಯು ರಾಮಾನುಜರಿಗೆ ನಮಸ್ಕರಿಸಿದಳು. ವಿಠಲದೇವನು ಆಶ್ಚರ್ಯದಿಂದ ರಾಮಾನುಜರನ್ನು ಆಶ್ರಯಿಸಲು ಅವರು ಅವನಿಗೆ ಪಂಚಸಂಸ್ಕಾರವನ್ನು ಮಾಡಿ, ವಿಷ್ಣುವರ್ಧನರಾಯನೆಂಬ ನಾಮಕರಣವನ್ನು ಮಾಡಿದರು.

ಆ ದೊರೆಯ ಗುರುಗಳಾದ ಬೌದ್ಧ ಸನ್ಯಾಸಿಗಳು ಹನ್ನೆರಡು ಸಾವಿರಮಂದಿಯೂ ವಾದಕ್ಕೆ ಬರಲು ಅವರೆಲ್ಲರನ್ನೂ ವಾದದಲ್ಲಿ ಜಯಿಸಿ. ಶರಣಾಗತರಾದವರನ್ನು ವೈಷ್ಣವರನ್ನಾಗಿ ಮಾಡಿ, ಉಳಿದವರನ್ನು ಕಲ್ಲುಗಾಣದಲ್ಲಿ ಅರೆಯಿಸಿದರು. (?)

ಅನಂತರ ರಾಮಾನುಜರು ಶ್ರೀರಂಗದಿಂದ ತಂದ ಶ್ವೇತಮೃತ್ತಿಕೆಯು ಮುಗಿಯಲು, ಧರಿಸುವುದಕ್ಕೆ ತಿರುಮಣ್ಣಿಲ್ಲವೆಂದು ವ್ಯಾಕುಲಚಿತ್ತರಾಗಿ ಉಪವಾಸದಿಂದ ಮಲಗಿರಲು, ಸ್ವಪ್ನದಲ್ಲಿ ತಿರುನಾರಾಯಣ ಸ್ವಾಮಿಯು ಪ್ರತ್ಯಕ್ಷನಾಗಿ ರಾಮಾನುಜರನ್ನು ಕುರಿತು —'ಯಾದವಾದ್ರಿಯಲ್ಲಿ ಕಲ್ಯಾಣೀ ಸರಸ್ಸಿಗೆ ನೈಋತ್ಯದಲ್ಲಿ ವಕುಳವೃಕ್ಷದ ಪಕ್ಕದಲ್ಲಿ, ತುಳಸೀವೃಕ್ಷದ ಕೆಳಗೆ ಇರುವ ದೊಡ್ಡಹುತ್ತದಲ್ಲಿ ನಾನಿರುವೆನು. ಪೂರ್ವದಲ್ಲಿ ಗರುಡನು ಶ್ವೇತದ್ವೀಪದಿಂದತಂದು ಕಲ್ಯಾಣೀ ಸರಸ್ಸಿನ ಪಶ್ಚಿಮದಿಗ್ಭಾಗದಲ್ಲಿ ನಿಕ್ಷೇಪಿಸಿರುವನು. ಇಲ್ಲಿಂದ ನಾನಿರುವ ಹುತ್ತದವರೆಗೂ ತಲೆ ಚಿವುಟಿದ ತುಳಸೀಗಿಡಗಳೇ ನಿಮಗೆ ಗುರುತಾಗಿರುವುದು." ಎಂದುಹೇಳಿ ಕಣ್ಮರೆಯಾದನು.

ರಾಮಾನುಜರು ಕಣ್ದೆರೆದು ಆಶ್ಚರ್ಯಯುಕ್ತರಾಗಿ ಸ್ವಪ್ನಸಂಗತಿಯನ್ನು ವಿಷ್ಣುವರ್ಧನರಾಯನಿಗೆ ತಿಳುಹಲು, ಅವನು ಕಾಡನ್ನು ಕತ್ತರಿಸಿ, ಯದುಗಿರಿಗೆ ಮಾರ್ಗವನ್ನು ಮಾಡಿಸಲು, ಯತಿರಾಜರು ಪರ್ವತಾರೋಹಣವನ್ನುಮಾಡಿ, ವೇದಪುಷ್ಕರಿಣಿಯಲ್ಲಿ ಮಿಂದು, ಅಲ್ಲಿಂದ ಮುರಿದ ತುಳಸೀಗಿಡಗಳ ಗುರು

ತನ್ನು ಹಿಡಿದು ಕಲ್ಯಾಣೀಸರಸ್ಸಿನ ಮಾರ್ಗವಾಗಿ ಹೊರಟು ತುಳಸೀ ವೃಕ್ಷದಡಿಯಲ್ಲಿದ್ದ ಹುತ್ತವನ್ನು ಅಗೆಯಿಸಿ, ಶ್ರೀ – ತಿರುನಾರಾಯಣಸ್ವಾಮಿಯನ್ನು ಕಂಡರು !

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೦೨೦ ಸಂದವರ್ತಮಾನ ಬಹುಧಾನ್ಯ ಸಂವತ್ಸರ ಪುಷ್ಯಶುದ್ಧ ಚತುರ್ದಶೀ ಗುರುವಾರ ಪುನರ್ವಸು ನಕ್ಷತ್ರದಲ್ಲಿ ತಿರುನಾರಾಯಣಸ್ವಾಮಿಯು ಪ್ರತ್ಯಕ್ಷನಾದನು. ರಾಮಾನುಜರು ಸ್ವಾಮಿಗೆ ನಮಸ್ಕರಿಸಿ, ಧೊರೆಯನ್ನು ಕರೆಯಿಸಿ ಸಕಲ ಮಂಗಳವಾದ್ಯಗಳಿಂದ, ಸ್ವಾಮಿಗೆ ಕ್ಷೀರಾಭಿಷೇಕವನ್ನು ಮಾಡಿದರು. ಮತ್ತು ಕಲ್ಯಾಣಿಯ ಪಶ್ಚಿಮ ದಿಕ್ಕಿನಲ್ಲಿರುವ ಶ್ವೇತಮೃತ್ತಿಕೆಯನ್ನು ತಂದು ಧರಿಸಿ, ವಿಷ್ಣುವರ್ಧನರಾಯನ ಸಹಾಯದಿಂದ ಗೋಪುರ ಪ್ರಾಕಾರ, ತಿರುವೀಧಿಗಳನ್ನು ನಿರ್ಮಿಸಿದರು. ಸಮೀಪದಲ್ಲಿದ್ದ ಬೌದ್ಧರ ದೇವಾಲಯಗಳನ್ನು ಕೆಡಹಿಸಿದರು. ಬೌದ್ಧರನೇಕರು ತಮ್ಮ ಧೊರೆಯನ್ನು ತೆಗೆದುದಲ್ಲದೆ ತಮ್ಮ ದೇವಾಲಯಗಳನ್ನೂ ಕೆಡಹಿದರೆಂಬ ಕೋಪದಿಂದ ತಮ್ಮ ಪ್ರಭುವನ್ನು ಲಕ್ಷಿಸದೆ ರಾಮಾನುಜರನ್ನು ಕೊಲ್ಲಬರಲು, ಅಲ್ಲಿನ ಚಂಪಾಲರು ಒಕ್ಕಟ್ಟಾಗಿ ಬಂದು ಅವರೆಲ್ಲರನ್ನೂ ಓಡಿಸಿದರು.

(ಮುಂದೆಸಾಗುವದು—)

ಪತ್ರವ್ಯವಹಾರ

ORMANIA UNIVERSI..
COLLEGE LIBRARY.

ಅತ್ತೆಯ ಮನೆಗೆ ಮೊದಲನೆಯಬಾರಿ ಕಳುಹಲ್ಪಟ್ಟ ಮಗಳು ತನ್ನ ತಾಯಿಗೆ ಬರೆದ ಪತ್ರವು.

|| ಶ್ರೀಶಾರದಾಸಹಾಯ

ಮಾತುಶ್ರೀಯವರ ಚರಣಸನ್ನಿಧಿಯಲ್ಲಿ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು—

ತಾವು ನನ್ನನ್ನು ಇಲ್ಲಿ ಬಿಟ್ಟು ಹೊರಟುಹೋದ ದಿವಸ ನನಗೆ ತುಂಬಾ ದುಃಖವೂ ಭಯವೂ ಬೇಸರಿಕೆಯೂ ಉಂಟಾಗಿದ್ದವು ಕ್ಷಣಕ್ಷಣಕ್ಕೂ ನನಗೆ ತಮ್ಮ ಪ್ರೀತಿ –ಆದರದ ಮಾತುಗಳೇ ನೆನಪಿಗೆ ಬರುತ್ತಿದ್ದವು ತಾವು ಹೊರಟುಹೋದ ಒಂದು ವಾರದ ವರೆಗೂ ನನಗೆ ಇಲ್ಲಿರುವುದು ಬಹುಕಷ್ಟವಾಗಿ ಕಂಡುಬರುತ್ತಿದ್ದಿತು ಈಗ, ನಾನು ತಮ್ಮನ್ನು ಸರ್ವದಾ ಸ್ಮರಿಸಿಕೊಳ್ಳುತ್ತಿರುವೆನಾದರೂ ತಮ್ಮನ್ನು ಬಿಟ್ಟು ಇಲ್ಲಿ ಇರುವುದು ಕಷ್ಟವೆಂದು ಭಾವಿಸುವಂತಿಲ್ಲ, ಮತ್ತು ತಾವು ನನ್ನ ಕ್ಷೇಮಸಮಾಚಾರವನ್ನು ಕೇಳಲು ಆತುರಗೊಂಡು ಬರೆದ ಪತ್ರವೂ ಅದರಲ್ಲಿದ್ದ ಬುದ್ಧಿಯ ಮಾತುಗಳೂ ನನಗೆ ಮತ್ತೂ ಹೆಚ್ಚಾದ ಸಂತೋಷವನ್ನೂ ಸಮಾಧಾನವನ್ನೂ ಉಂಟುಮಾಡಿದವು.

ಅಮ್ಮಾ! ತಾವು ನನ್ನ ವಿಷಯವಾಗಿ ಏನೂ ಚಿಂತಿಸಬೇಕಾಗಿಲ್ಲ. ಇಲ್ಲಿ ನಾನು ಆವ ಕೆಲಸಗಳನ್ನೂ ಮಾಡುವುದಿಲ್ಲ. ನನ್ನ ಅತ್ತೆಮಾವಂದಿರು ನನ್ನನ್ನು ಆವ ಕೆಲಸ ಮಾಡುವುದಕ್ಕೂ ಬಿಡದೆ, “ದೊಡ್ಡಮನೆತನದವರ ಮಗಳು, ಪಾಪ— ಈವರೆಗೂ ಸುಖವಾಗಿ ಬೆಳೆದವಳು— ಇಲ್ಲಿ ಏಕೆ ಕಷ್ಟಪಡಬೇಕು; ಮಗು, ನೀನು ಆವ ಕೆಲಸವನ್ನೂ ಮಾಡಬೇಕಾಗಿಲ್ಲ; ವಿದ್ಯಾವತಿಯೂ ಭಾಗ್ಯವಂತರ ಮಗಳೂ ಆದ ನೀನು ನಮ್ಮ ಮನೆಗೆ ಬಂದುದೇ ನಮ್ಮ ಸೌಭಾಗ್ಯ, ನೀನು ನಿನ್ನ ಓದುಬರೆಹಗಳಲ್ಲಿ ಮತ್ತು ಇತರ ಕುಶಲಕಾರ್ಯಗಳಲ್ಲಿ ಗಮನವಿಡು; ಹೇಗೂ ನೀನು ಇಲ್ಲಿ ಸಂತೋಷದಿಂದಿರುವುದೇ ನಮಗೆ ಬೇಕಾದುದು; ಮನೆಗೆಲಸಗಳನ್ನು ನಾವು ನೋಡಿಕೊಳ್ಳುವೆವು.” ಎಂದು ಹೇಳುತ್ತ ಅತ್ಯಂತ ವಿಶ್ವಾಸವಾಗಿ ನೋಡುತ್ತಿರುವರು ಮನೆಯಲ್ಲಿ ಅತ್ತಿಗೆ ನಾದಿನಿ ಮೊದಲಾದವರು ಕೂಡ ನನ್ನನ್ನು ಬಹಳ ಗೌರವದಿಂದ ನೋಡುತ್ತಿರುವರು. ತಮ್ಮ ಅಳಿಯಂದಿರಂತೂ ನನ್ನನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿಯೇ ನೋಡಿಕೊಳ್ಳುತ್ತಿರುವರು ನಾನು ಖಿನ್ನಳಾಗಿ ಕುಳಿತಿದ್ದುದನ್ನು ಕಂಡರೆ ಅವರ ಉತ್ಸಾಹವೇ ಹೋದಂತಾಗುವುದೆಂದೂ, ನಾನು ಹಸನ್ಮುಖಿಯಾಗಿದ್ದುದನ್ನು ನೋಡಿದರೆ ಬಲವೂ ಉತ್ಸಾಹವೂ ದ್ವಿಗುಣವಾಗುವುದೆಂದೂ ಮೊದಲಾಗಿ ಹೇಳುತ್ತಿರುವರು. ಅಷ್ಟೇ ಅಲ್ಲ; ಅಮ್ಮಾ! ನಾನು ಈಗ ಕೆಲವು ದಿನಗಳ ಕೆಳಗೆ ತಮ್ಮನ್ನೂ ಅಪ್ಪನನ್ನೂ ಮತ್ತು ತಮ್ಮಿಬ್ಬರ ಪ್ರೇಮ-ಆದರ ಮೊದಲಾದವುಗಳನ್ನೂ ಜ್ಞಾಪಿಸಿಕೊಂಡು ತಮ್ಮನ್ನು ಬಿಟ್ಟಿರಲಾರದೆ ಅಳುತ್ತ ಕುಳಿತಿದ್ದೆನು. ಆ ಸಂಗತಿಯನ್ನು ತಿಳಿದು, ನನ್ನ ಅತ್ತಿಗೆ, ನಾದಿನಿ ಮತ್ತು ಓರಗಿತ್ತಿಯರು ಒಬ್ಬೊಬ್ಬರಾಗಿ ಬಂದು, ‘ತಮ್ಮಿಂದೇನಾದರೂ ತಪ್ಪು ನಡೆಯಿತೇನು’ ಎಂದು ಮೊದಲಾಗಿ ಕೇಳಿದರು. ಆ ಮೇಲೆ ಅತ್ತೆಯವರೂ ಬಂದು ಹಾಗೆಯೇ ಕೇಳಿದರು ನಾನು ಎಷ್ಟೋ ಕಷ್ಟದಿಂದ ಸಮಾಧಾನವನ್ನು ತೆಗೆದುಕೊಂಡು, ನನ್ನ ಅಳುವಿಗೆ ಯಾರೂ ಕಾರಣರಲ್ಲವೆಂದೂ, ಹಿಂದಿನ ಬಾಲ್ಯದ ಆಟದ ನೆನಪಾಗಿ ಹಾಗೆಯೇ ಅಳು ಬಂದಿತೆಂದೂ ಹೇಳಿದೆನು ಆದರೆ ಅಷ್ಟಕ್ಕೇ ಮುಗಿಯಲಿಲ್ಲ. ಮಾವಂದಿರೂ ಬಂದು ಹಾಗೆಯೇ ಪ್ರಶ್ನೆ ಮಾಡಿದುದಲ್ಲದೆ, “ತಾಯಿ! ವಿದ್ಯಾವತಿಯೂ ಬುದ್ಧಿಮತಿಯೂ ಆದ ನೀನೇ ಹೀಗೆ ಅಜ್ಞರಂತೆ ಅಧೈರ್ಯದಿಂದ ಅಳ

ಬಹುದೆ? ಹಾಗೆ ಮಾಡಬಾರದು; ನಿನಗೆ ತಾಯಿತಂದೆಗಳನ್ನು ಬಿಟ್ಟಿರುವುದು ಕಷ್ಟವೆಂದು ತೋರಿದಾಗ, 'ನಮ್ಮನ್ನು ಬೇರೆ, ಅವರು ಬೇರೆ'ಯೆಂದು ತಿಳಿಯದೆ, ನಮ್ಮಲ್ಲಿ ಅವರಂತೆಯೇ ವಿಶ್ವಾಸವಿಟ್ಟು, ನಿನ್ನ ಅಭಿಮತವನ್ನು ತಿಳಿಸಿದರೆ, ನಾವು ಅಗತ್ಯವಾಗಿ ಅದನ್ನು ನಡೆಯಿಸಿಕೊಡುವೆವು." ಹೀಗೆ ಹೇಳಿದರು. ಅದನ್ನು ಕೇಳಿ ನನಗೆ ತುಂಬಾ ಲಜ್ಜೆಯೂ ಪಶ್ಚಾತ್ತಾಪವೂ ಆಯಿತು. ಆಮೇಲೆ ತವರಿನವರು ನಾನು ಅತ್ತ ಸಂಗತಿಯನ್ನು ತಿಳಿದು ಅತ್ಯಂತ ವ್ಯಾಕುಲಪಟ್ಟರಲ್ಲದೆ ನನ್ನ ಮನೋಲ್ಲಾಸಕ್ಕಾಗಿ "ನನ್ನನ್ನು ತವರ್ಮನೆಗೆ ಬಿಟ್ಟು ಬರುವೆನು." ಎಂದು ತಮ್ಮ ತಾಯಿಯ ಮುಂದೆ ಹೇಳುತ್ತಿದ್ದ ಮಾತನ್ನು ಕೇಳಿದ ಮೇಲಂತೂ ನನಗೆ ಆದ ದುಃಖವನ್ನು ಹೇಳಲಾರೆನು. ದುಃಖವೆಂದರೆ, ಅವರನ್ನೂ ಮನೆಯವರೆಲ್ಲರನ್ನೂ ಬಿಟ್ಟು ಹೊರಡಬೇಕಾಯ್ತೇನೆಂಬುದು; ನಾನೇಕೆ ಹೀಗೆ ಅತ್ತು ಇವರಿಗೆಲ್ಲ ಇಷ್ಟು ಕಷ್ಟವನ್ನೂ ದುಃಖವನ್ನೂ ಉಂಟುಮಾಡಿದೆನು. ನನಗಿಂತಲೂ ಚಿಕ್ಕವಯಸ್ಸಿನ ಹುಡುಗಿಯರೆಲ್ಲ ಅತ್ತೆಯಮನೆಯಲ್ಲಿ ನಗುತ್ತಿರುವುದನ್ನು ಎಷ್ಟೋ ಬಾರಿ ನೋಡಿರುವೆನು. ನನಗೇಕೆ ಹೀಗಾಯಿತು!" ಎಂಬೀ ವಿಧವಾದ ಚಿಂತೆಯು ನನ್ನನ್ನು ಈ ವರೆಗೂ ಬಿಟ್ಟುಹೋಗದಂತಾಗಿದೆ. ಇದಕ್ಕಾಗಿ ನಾನು ಅವರಲ್ಲಿ ಬಹಳ ಅಪರಾಧಕ್ಷಮೆಯನ್ನು ಬೇಡಿಕೊಳ್ಳುತ್ತಿರುವೆನು.

ತಾಯೀ! ಎಷ್ಟು ಬರೆದರೂ ಮುಗಿಯದಂತಿರುವ ಈ ವಿಚಾರಸರಣಿಯನ್ನು ಇಷ್ಟಕ್ಕೆ ನಿಲ್ಲಿಸುವೆನು. ಮಗಳು ಹೇಗಿರಬೇಕು, ಹೇಗೆ ನಡೆಯಬೇಕು, ಹೇಗಿದ್ದರೆ ಸರಿಯಾದ ಗೃಹಿಣಿಯೆನ್ನಿಸಿಕೊಳ್ಳುವಳು – ಎಂಬಿವುಗಳನ್ನು ತಾವು ಅವಕಾಶವಾದಾಗಲೆಲ್ಲಾ ತಮ್ಮ ಅನುಭವಪೂರ್ವಕವಾದ ವಾಕ್ಯಗಳನ್ನು ಲಿಖಿತಮೂಲಕವಾಗಿ ಅನುಗ್ರಹಿಸುತ್ತಿರಬೇಕೆಂದೂ, ಅನೇಕಾನೇಕ ವಂದನಾಪೂರ್ವಕ ವಿಜ್ಞಾಪನೆಗಳನ್ನು ಶ್ರೀ|| ತೀರ್ಥರೂಪರಿಗೆ ತಿಳುಹಬೇಕೆಂದೂ, ಮತ್ತು ಚಿ|| ಸೌ|| ಗಳಿಗೆಲ್ಲ ನನ್ನ ಜ್ಞಾಪಕವನ್ನು ಕೊಡಬೇಕೆಂದೂ ಪ್ರಾರ್ಥಿಸಿ, ತಮ್ಮ ಬುದ್ಧಿಪತ್ರಿಕೆಯನ್ನು ನಿರೀಕ್ಷಿಸುತ್ತಿರುವ –

"ಕಲ್ಯಾಣಮಂದಿರ" ಪಾವನಕ್ಷೇತ್ರ, } ತಮ್ಮ ವಿಧೇಯಳಾದ ಪುತ್ರಿ,
ಪಿಂ|| ಸಂ|| ಮಾಘ ಶು|| ತೃತೀಯೆ. } ಕನಕಾಂಬೆ.

ಮಗಳಿಗೆ, ಸುಶಿಕ್ಷಿತೆಯಾದ ತಾಯಿಯು ಕಳುಹಿದ ಪ್ರತ್ಯುತ್ತರವು.

ಸೌ|| ಕನಕಾಂಬೆಗೆ ಆಶೀರ್ವಾದಗಳು. ಅದಾಗಿ ಉಭಯ ಕುಶಲೋಪರಿ—

ನಿನ್ನ ಕಾಗದವು ಮೊನ್ನೆಯೇ ಕೈಸೇರಿ ನಿಮ್ಮೆಲ್ಲರ ಕ್ಷೇಮಸಮಾಚಾರಗಳನ್ನೂ ತಿಳಿದು ನಮಗೆ ತುಂಬಾ ಸಂತೋಷವಾಯಿತು; ಮತ್ತು ನಿನ್ನ ವಿಷಯವಾಗಿ ನಿನ್ನ ಅತ್ತೆಮಾವಂದಿರೇ ಮೊದಲಾದವರು ಅತ್ಯಂತ ಪ್ರೀತಿಯುಳ್ಳವರಾಗಿರುವರೆಂಬುದನ್ನು ಕೇಳಿ ಮನಸ್ಸಿಗೆ ಸಮಾಧಾನವಾಯಿತು. ಆದರೆ, ಮಗು, ಅವರ ಪ್ರೀತಿಯನ್ನು ನೀನು ಕಾಪಾಡಿಕೊಳ್ಳಬೇಕಾದುದು ನಿನಗೆ ಮುಖ್ಯವಾದ ಕರ್ತವ್ಯವೆಂಬುದನ್ನು ತಿಳಿದು, ಸರ್ವಪ್ರಕಾರದಿಂದಲೂ ಅವರ ಮನಸ್ಸಿಗೆ ಸಮಾಧಾನವಾಗುವಂತೆ ವರ್ತಿಸುತ್ತಿರಬೇಕು. ನಮ್ಮ ವಿಷಯದಲ್ಲಿರಿಸಿರುವ ಪ್ರೀತಿಯನ್ನೇ ಅವರ ವಿಷಯದಲ್ಲಿಯೂ ದೃಢವಾಗಿರಿಸಿ, ಅವರ ನಿತ್ಯಕರ್ಮಾನುಷ್ಠಾನಕಾರ್ಯಗಳನ್ನು ನಿನ್ನ ಶಕ್ತ್ಯಾನುಚಿತವಾದಂತೆ ಮಾಡುತ್ತ ಅವರ ಪ್ರೀತಿಯೂ ಆಶೀರ್ವಾದವೂ ನಿನಗೆ ನಿರಂತರವಾಗಿ ಲಭಿಸುವಂತೆ ಮಾಡಿಕೊಳ್ಳುವುದು ನಿನ್ನ ಕರ್ತವ್ಯದಲ್ಲಿ ಮೊದಲನೆಯ ಕರ್ಮವಾಗಿರುವುದು. ಮಗಳೆ! ಹೆಣ್ಣುಮಕ್ಕಳಿಗೆ ತವರ್ಮನೆಯು ಸ್ಥಿರವಲ್ಲ; ಮಾವನಮನೆಯೇ ಸ್ಥಿರವಾದುದು. ಅಲ್ಲಿ ಮಾಡುವ ಸೇವೆಯೇ ಇಹಪರಗಳಿಗೆ ಸಾಧನವಾದ ಸೇವೆಯು. ನೀನು ವಿದ್ಯಾವತಿಯೆಂಬ ಅಹಂಕಾರವನ್ನಾಗಲೀ, ಶ್ರೀಮಂತರ ಮಗಳೆಂಬ ಹೆಮ್ಮೆಯನ್ನಾಗಲೀ ಒಳಗೂ ಒರಗೊಡಬೇಡ "ಮನೆಯಲ್ಲಿ ಯಾರಾದರೂ ನೀನು ವಿದ್ಯಾವತಿ, ಶ್ರೀಮಂತರ ಮನೆಯ ಮಗಳು—ಕೆಲಸಮಾಡಬೇಕಾದುದಿಲ್ಲ, ನಾವೇ ನೋಡಿಕೊಳ್ಳುವೆವು; ನೀನು ಕುಳಿತಿರೆಂದು" ಹೇಳುವವರಾಗಿದ್ದರೆಕೂಡ, ನೀನು ಅಷ್ಟಕ್ಕೇ ಹಿಗ್ಗಿ ಬೀಗಿಕುಳಿತುಕೊಳ್ಳಬಾರದು. ವಿನಯ-ಶ್ರದ್ಧೆ, ನಿರಲಸತೆಗಳಿಂದ ಕಾರ್ಯತತ್ಪರೆಯಾಗಿರುವುದು ಕುಲಸ್ತ್ರೀಯರ ಲಕ್ಷಣವೆಂದರಿತು, ನಿನ್ನ ಪಾಲಿನ ಸೇವೆಯನ್ನು ನೀನು ಮಾಡಬೇಕು. ಈ ಬಗೆಯ ಸಚ್ಚಾರಿತ್ರ್ಯವೇ ನಿನ್ನ ವಿದ್ಯೆಯನ್ನು ಪ್ರಕಾಶಕ್ಕೆ ತರಬೇಕೇ ಹೊರತು, ಶ್ರೀಮಂತಿಕೆಯ ಆಟ್ಟಹಾಸವನ್ನು ತೋರುವುದರಿಂದಾಗಲಿ, ನಿರುದ್ಯೋಗವಾಗಿದ್ದು ಬರಿಯ ವಾಗಾಡಂಬರದ ವಿದ್ಯಾಪ್ರೌಢಿಮೆಯನ್ನು ತೋರಿಸುವುದರಿಂದಾಗಲೀ ವಿದ್ಯಾವತಿಯೆನ್ನಿಸಿಕೊಳ್ಳಲಾರೆ. ಅಷ್ಟೇ ಅಲ್ಲ. ಈಗ ನಾವು ಅಲ್ಲಿಗಲ್ಲಿಗೆ ನೋಡಿ ಕೇಳುತ್ತಿರುವಂತೆ, ಅತ್ತೆ, ಅತ್ತಿಗೆ, ನಾದಿನಿ, ಓರಗಿತ್ತಿಯರೊಡನೆ ಜಗಳವಾಡಬಾರದು ಅತ್ತಿಗೆ, ನಾದಿನಿಯರಲ್ಲಿ ಆದರದಿಂದಲೂ, ಓರಗಿತ್ತಿಯರಲ್ಲಿ ಸಲಿಗೆಯಿಂದಲೂ, ಭಾವಮೈದುನರಲ್ಲಿ ಮರ್ಯಾದೆಯಿಂದಲೂ ವರ್ತಿಸುತ್ತಿರಬೇಕು. ಮನೆಗೆಲಸಗಳನ್ನು ಮಾಡುವಾಗ ಓರಗಿತ್ತಿಯರಿಗೆ ಸರಿಯಾಗಿ ಕೆಲಸದಲ್ಲಿ ಸಹಾಯಕಳಾಗುತ್ತಲೂ, ವಿರಾಮಕಾಲದಲ್ಲಿ ಸತ್ಕಥಾಪ್ರಸಂಗ, ಕುಶಲಕೈಗಾರಿಕೆ, ಗಾನ, ಹೆರಳು ಹಾಕುವುದು, ರಂಗವಲ್ಲಿಗಳನ್ನು ಬರೆಯುವುದು ಮೊದಲಾದ ಕಾರ್ಯ

ಗಳಲ್ಲಿ ನಾದಿನಿಯರನ್ನೂ ಓರಗಿತ್ತಿಯರನ್ನೂ ಆದರದಿಂದ ಜತೆಗೊಂಡು ಅವರೊಡನೆ ಮಾತಾಡುತ್ತಲೂ ಬಂದರೆ, ನಿನ್ನಲ್ಲಿ ಅವರಿಗೆ ಅಕೃತ್ರಿಮವೂ ಅಚ್ಛೇದ್ಯವೂ ಆದ ಪ್ರೀತಿಯು ಉಂಟಾಗುವುದು

ಮಗಳೇ! ಇಷ್ಟೆಲ್ಲವೂ ಒಂದು ಪಾಲಿಗಾದರೆ ಇನ್ನು ಪತಿಯ ವಿಷಯದಲ್ಲಿರಬೇಕಾದ ಪಿತಾರನೇ ಒಂದು ಪಾಲಿಗೆ ನಿಂತಿರುವುದು ಹೇಗೆಂಬುದನ್ನು ನಿನಗೆ ಬಿಡಿಸಿ ಹೇಳಬೇಕಾಗಿಲ್ಲವಾದರೂ ನಿನ್ನ ಪ್ರಾರ್ಥನೆಯನ್ನು ನಡೆಸುವುದಕ್ಕಾಗಿಯೂ, ಮತ್ತೆ ಮತ್ತೆ ಒತ್ತಿಯೊತ್ತಿ ಹೇಳಬೇಕಾದುದು ತಾಯ್ತಂದೆಯರ ಕರ್ತವ್ಯಕ್ಕೆ ಸೇರಿರುವುದೆಂಬುದಕ್ಕಾಗಿಯೂ ಇಲ್ಲಿ ಒಂದೆರಡು ಮಾತುಗಳನ್ನು ಹೇಳುವೆನು. ಹೆಚ್ಚು ಗಮನವಿರಿಸು. ಪತ್ನಿಯು ಪತಿಯ ಮನಸ್ಸಿಗೆ ವಿರೋಧವಾಗಿ ತೋರುವ ಆವ ಕೆಲಸವನ್ನೂ ಮಾಡಬಾರದು. ಆವಾಗಲೂ ಆತನ ಮನೋಭಾವವನ್ನರಿತು ನಡೆಯುವುದನ್ನು ಅಭ್ಯಸಿಸಬೇಕು. ಆತನ ಪ್ರಸನ್ನತೆಯನ್ನೇ ಸರ್ವದಾ ಹಾರೈಸುತ್ತಿರಬೇಕು. ಮನೆಗಳಲ್ಲಿ ಸಾಧಾರಣವಾಗಿ ನಡೆಯಬಹುದಾದ ಅಲ್ಪಸ್ವಲ್ಪ ವಿಷಯಗಳನ್ನು ಹಿಗ್ಗಿಸಿ ಕಲಹಕಾರಣವಾಗುವಂತೆ ಮಾಡಿ, ಅದನ್ನು ಪತಿಯ ಕಿವಿಗೆ ಹಾಕುವುದರಿಂದ ಆತನ ಚಿತ್ತ ಕ್ಷೋಭೆಗೊಳ್ಳುವುದಲ್ಲದೆ ಇನ್ನೂ ಕಲಹವು ಹೆಚ್ಚಲು ಕಾರಣವಾದೀತು. ವಿವೇಕಶಾಲಿನಿಯರು ಅಷ್ಟರ ಅನರ್ಥಕ್ಕೆಡೆಗೊಡಬಾರದು. ಮತ್ತು ತವರ್ಮನೆಯ ಸಂಪತ್ತನ್ನು ಅತ್ತೆಯ ಮನೆಯವರ ಮುಂದೆ ಹೇಳಬಾರದು. ಅದರಲ್ಲಿಯೂ ಪತಿಯ ಮುಂದೆ ಪಿತೃಗೃಹದ ಸೌಖ್ಯವನ್ನೂ ಹೊಗಳುವುದಂತೂ ತುಂಬಾ ಕೆಟ್ಟನಡತೆ. ಅದರಿಂದ ಒಂದು ಬಗೆಯಾಗಿ ಪತಿಯ ತೇಜೋವಧೆ ಮಾಡಿದಂತೆಯೇ ಆಗುವುದರಿಂದ, ಅದು ಆತನಲ್ಲಿ ಉತ್ಸಾಹಭಂಗವನ್ನುಂಟುಮಾಡಿ ಅಂತಸ್ತಾಪಕ್ಕೆಡೆಮಾಡಿಕೊಡುವುದು. ಆದುದರಿಂದ ಪಿತೃಗೃಹದ ಸೌಖ್ಯದ ಸ್ತುತಿಯನ್ನು ಅತ್ತೆಯ ಮನೆಯಲ್ಲಿ ಎತ್ತಲೇಬಾರದು. ಪತಿಗೃಹದಲ್ಲಿ ಪಿತೃಗೃಹದಷ್ಟು ಸಂಪತ್ತಿಲ್ಲದಿದ್ದರೂ ಪತಿಯ ಪ್ರೀತಿಯೆಂಬ ಅತ್ಯಮೌಲ್ಯವಾದ ಸಂಪತ್ತಿರುವುದರಿಂದ ಯಾವಾಗಲೂ ಹಸನ್ಮುಖಿಯಾಗಿಯೂ ಸಂತೋಷಚಿತ್ತಳಾಗಿಯೂ ಯಾರು ಏನು ಹೇಳಿದರೂ ಅಸಮಾಧಾನಗೊಳ್ಳದೆ ಸಹನೆಯುಳ್ಳವಳಾಗಿಯೂ ಇರಬೇಕು. ಸಹನೆಯೇ ಸಂಪತ್ತನ್ನುಂಟುಮಾಡುವುದೆಂಬುದನ್ನು ಮರೆಯಬಾರದು.

ಮಗಳೇ! ಆಶ್ರಮನಾಲ್ಕರೊಳಗೆ ಗೃಹಸ್ಥಾಶ್ರಮವೇ ಶ್ರೇಷ್ಠವು. ಸಕಲ ಧರ್ಮಕರ್ಮಗಳೂ ಈ ಗೃಹಸ್ಥಾಶ್ರಮವನ್ನೇ ಅವಲಂಬಿಸಿರುವವು. ಸತಿ-ಪತಿಯರು ಅನ್ಯೋನ್ಯಪ್ರೇಮದಿಂದಲೂ ಸದ್ಭಾವದಿಂದಲೂ ಸಂಸಾರಚಕ್ರವನ್ನು ನಡೆಸುತ್ತಲಿದ್ದರೆ ಅದೇ ಸ್ವರ್ಗಸುಖವೆನ್ನಿಸುವುದು. ಪತಿಯ ಮನಸ್ಸಿಗೆ ಸತಿಯು ಅನುಕೂಲಳಲ್ಲದಿದ್ದರೆ, ಆ ಗೃಹಕ್ಕಿಂತಲೂ ಹೇಯವಾದ ನರಕವು ಬೇರೊಂದಿಲ್ಲ. ಆದುದರಿಂದ ನೀನು ವಿನಯಾದಿ ಸದ್ಗುಣಗಳಿಂದ ಕೂಡಿ, ಸರಿಯಾದ ರೀತಿ—ಎಂದರೆ, ನಮ್ಮ ಆರ್ಯರಿಂದ ಅನುವರ್ತಿಸಲ್ಪಟ್ಟು ಬಂದಿರುವ ರೀತಿ,-- ಗೃಹಿಣೀಧರ್ಮವನ್ನು ನಡೆಯಿಸುತ್ತ ಬರಬೇಕೆಂಬುದೇ ನನ್ನಿಬ್ಬರ ಆಶಂಸೆಯೂ ಆಗಿದೆ. ಸದ್ಯಕ್ಕೆ ಇಷ್ಟು ಬರೆದುದು ಸಾಕಾಗಿರಲಿ. ಮುಂದೆ ಅವಕಾಶವಾದಾಗ ಹೆಚ್ಚಿನ ವಿವರಗಳನ್ನು ಬರೆಯುವೆನು.

ಅಲ್ಲಿ ಎಲ್ಲರಿಗೂ ನನ್ನ ವಿಜ್ಞಾಪನಾಶೀರ್ವಾದಗಳನ್ನು ತಿಳುಹಿಸಮ್ಮ! ದೇವರು ನಿನಗೆ ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತಿರುವ—

'ಶ್ರೀನಿಲಯ'—ತ್ರಿನಯನಕ್ಷೇತ್ರ,
ಓಂ.ಶಂ ಮಾ ಶು.ಸಪ್ತಮಿ(ರಥಸಪ್ತಮಿ)

ನಿನ್ನ ತಾಯಿ—
ವರಮಾತಾ.

ತಾಜಾಕಲಂ:— ನಿನಗೆ ಗಾನಮಾಡಲು ಅನುಕೂಲವಾಗಿಯೂ, ಹೆಣ್ಣುಮಕ್ಕಳಿಗೆ ಒಳ್ನಡೆಯನ್ನು ಕಲಿಯಿಸುವುದಾಗಿಯೂ, ಮಗಳಿಗೆ ತಾಯಿಯು ಪ್ರೇಮಪೂರ್ವಕವಾಗಿ ಹೇಳುವ ಬುದ್ಧಿವಾದವಾಗಿಯೂ ಇರುವ ಒಂದು ಹಾಡನ್ನು ನಿನ್ನ ಅಣ್ಣನು ಪ್ರಯಾಸಪಟ್ಟು ಸಂಗ್ರಹಿಸಿದುದನ್ನು ಇದರಲ್ಲಿರಿಸಿ ಕಳುಹಿರುವೆನು. ಅದರಲ್ಲಿರುವ ಒಕ್ಕಣೆಗಳನ್ನು ಅಕ್ಕರೆಯಿಂದ ಗ್ರಹಿಸುವೆಯೆಂದು ನಂಬಿರುವೆನು ಇತಿ —

ನಿನ್ನ ತಾಯಿ.

(ಬುದ್ಧಿವಾದದ ಹಾಡು)

ಬುದ್ಧಿಮಾತುಹೇಳಿದರೆ ಕೇಳಬೇಕಮ್ಮ ಮಗಳೆ— ಮನಃಶುದ್ಧವಾಗಿ ಮನೆಗೆಲಸಗಳ ಮಾಡಬೇಕಮ್ಮ ॥ ಪ ॥ ಅತ್ತೆಮಾವಗಂಜಿಕೊಂಡು ನಡೆಯಬೇಕಮ್ಮ—ಮಗಳೆ-ಹೆತ್ತವರ ಮನಸು ಒಪ್ಪುವಹಾಗೆ ಮಾಡಬೇಕಮ್ಮ ॥ ೧ ॥ ಹೊತ್ತುಹೊತ್ತಿಗೆ ನಿನ್ನರಸನ ಕೆಲಸವ ಮಾಡಬೇಕಮ್ಮ—ಮಗಳೆ— (ನಿನ್ನ) ಚಿತ್ತದವಲ್ಲಭನ ಮನವನೊಲಿಸಬೇಕಮ್ಮ ॥ ೨ ॥ ಅಟ್ಟುಂಬುವ ಕಾಲದಲ್ಲಿ ಆಡಬೇಡಮ್ಮ - ಮಗಳೆ ತೊಟ್ಟು ಬಾಗಿಲದಾಟಿ ಹೊರಗೆ ನಿಲ್ಲಬೇಡಮ್ಮ ॥ ೩ ॥ ಕೊಟ್ಟು

ಕೊಂಬಜನಗಳೊಡನೆ ಕೋಪಬೇಡವ್ಮ್ಮ—ಮಗಳೆ—ನಿಷ್ಠುರದ ಮಾತುಗಳನ್ನು ನುಡಿಯಬೇಡವ್ಮ್ಮ ॥ ೪ ॥ ಹುಟ್ಟದ ಮನೆಗೆ ಕೀರ್ತಿಯನ್ನು ತರಬೇಕವ್ಮ್ಮ—ಮಗಳೆ -ಪಟ್ಟದರಸ ಗುತ್ತರವನ್ನು ಕೊಡಬೇಡವ್ಮ್ಮ ॥ ೫ ॥ ಪತಿಯೇ ದೇವರೆಂದು ತಿಳಿಯಬೇಕವ್ಮ್ಮ—ಮಗಳೆ—ಪತಿವ್ರತಾಧರ್ಮದಿಂದ ಬಾಳಬೇಕವ್ಮ್ಮ ॥ ೬ ॥ ಸ್ನೇಹಪಾಶದಿಂದ ಕೃಪಣಳಾಗಬೇಡವ್ಮ್ಮ— ಮಗಳೆ— ಶ್ರೀಹರಿಕೊಟ್ಟಕಾಲವರಿತು ದಾನ ಮಾಡವ್ಮ್ಮ ॥ ೭ ॥ ಪಂಕ್ತಿಭೇದಮಾಡಬೇಡ ಕಂದ ಕೇಳವ್ಮ್ಮ— ವಂಚನೆಬುದ್ಧಿಯ ಮನದಲ್ಲೆಣಿಸಬೇಡವ್ಮ್ಮ ॥ ೮ ॥ ಸಿರಿಸಂಪತ್ತಿನ ಗರ್ವದಿಂದ ಮೆರೆಯಬೇಡವ್ಮ್ಮ—ಮಗಳೆ— ದುರುಳ ದುರ್ಜನರ ಸಂಗ ಮಾಡಬೇಡವ್ಮ್ಮ ॥ ೯ ॥ ಪರಪುರುಷರ ತಲೆಯೆತ್ತಿ ನೋಡಬೇಡವ್ಮ್ಮ—ಮಗಳೆ-ಅವರ ಅನುಜ-ಅಗ್ರಜರೆಂದು ಮನದಲ್ಲೆಣಿಸಬೇಡವ್ಮ್ಮ ॥ ೧೦ ॥ ನೆರೆಹೊರೆಯವರಿಗೆ ನ್ಯಾಯನೀತಿ ಹೇಳಬೇಡವ್ಮ್ಮ - ಮಗಳೆ- (ನಮ್ಮ)—ಪುರಂದರ ವಿಠಲನ ಧ್ಯಾನವ ಮರೆಯಬೇಡವ್ಮ್ಮ ॥ ೧೧ ॥

ಪರಮಾತ್ಮ—ಪ್ರಾರ್ಥನೆ

ನೀನುಪೇಕ್ಷೆಯ ಮಾಡೆ, ಬೇರೆಗತಿಯಾರೆನಗೆ—ನಿಗಮಗೋಚರಮುಕುಂದ ॥ ಗಾನರಸಲೋಲ ಆಗಮಶೀಲ ಭಕ್ತಪರಿಪಾಲ ಗೋಪಾಲ ಬಾಲಾ ॥ ಅನುಪಲ್ಲವಿ ॥ ಜಪತಪಾನುಷ್ಠಾನ ತಪಸ್ಸ್ವಾಧ್ಯಾಯವೆನ್ನುವ ಜಾಣತನವೆನ್ನೊಳಿಲ್ಲ—ಅಪರಿಮಿತ ಕರ್ಮವನು ಅನುಸರಿಸಿ ನಡೆಯುವಾ ನಿಪುಣತ್ವವನ್ನೊಳಿಲ್ಲ ॥ ರಿಪುಗಳಂ ಜಯಿಸಲರಿಯದಿಹ ಜಡರಿಗೆ—ಸುಪವಿತ್ರ ನೀನೆಯಲ್ಲದಿಲ್ಲ॥ ನೀನು ॥ ೧ ॥ ಆನೆ ಮೊಸಲೆಗೆ ಸಿಲುಕಿ ಅರೆಬಾಯಿ ಬಿಡುತಿರಲು, ಅನುನಯದಿ ಬಂದು ಕಾಯ್ದೆ । ಏನೆಂಬೆನಜಮಿಳಗೆ ಸಾಯುಜ್ಯಪದವಿಯನು ನೀನೊಲಿದು ಕೃಪೆಮಾಡಿದೆ ॥ ದಾನವಾಂತಕ ಸಕಲ ದಿವಿಜ ಮುನಿವಂದಿತನೆ, ದೀನನಂ ಸಲಹೊ ಕೃಷ್ಣಾ ॥ ನೀನು ॥ ೨ ॥ ಈ ಕ್ಷಣತ್ರಯದ ಬಯಲಾಸೆಯೊಳು ಭ್ರಮೆಗೊಂಡು-ಭಾಸುರದಿ(?) ಮನದಿನೊಂದು । ಹೇಸಿಗೆಯ ಸಂಸಾರಸಾಗರದಿ ಮುಳುಗಿನಾ ಘಾಸಿಪಡಲಾರೆನೆಂದು॥ ದಾಸನೆಂದೆನಿಸಿ ಡಂಗುರವ ಹೊಡಯಿಸಿದೆಯಾದ-ಕಾಗಿನಿಲಯಾದಿಕೇಶವನೆ ಬಂದು ನಿಂದು ॥ ನೀನುಪೇಕ್ಷೆಯ ॥ ೩ ॥

ಕನ್ನಡದ ರನ್ನಗನ್ನಡಿ.

(ಮಣಿ ೨)

ದಿವಂಗತ
ಶ್ರೀಮಾನ್ ವೆಂಕಟ ರಂಗೋ ಕಟ್ಟಿಯವರು *

ಹಲವು ಶತಮಾನಗಳಿಗೆ ಹಿಂದೆ ಕರ್ಣಾಟಸರಸ್ವತಿಗೆ ತವರ್ಮನೆಯೆನಿಸುತ್ತಿದ್ದ— ಈಗ ಉತ್ತರಕರ್ಣಾಟವೆನ್ನಿಸುವ ಧಾರವಾಡ ಪ್ರಾಂತ್ಯವು ಕಾಲಾಂತರದಲ್ಲಿ ಮರಾಟರ ಪ್ರಾಬಲ್ಯಕ್ಕೆ ಒಳಬಿದ್ದು ತನ್ನ ಹೆಸರನ್ನೇ ಕಳೆದುಕೊಂಡು, ದಕ್ಷಿಣಮಹಾರಾಷ್ಟ್ರವೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದುದನ್ನೂ ಮುಂದೆ ಆ ಸೀಮೆಯು ಇಂಗ್ಲಿಷರ ಆಡಳಿತಕ್ಕೊಳಪಟ್ಟರೂ ಬಹುಕಾಲ ಅದೇ ಹೆಸರಿನಿಂದ ಕರೆಯಲ್ಪಟ್ಟು ಮರಾಟಿಯೇ ಅದರ ದೇಶಭಾಷೆಯೆಂಬಂತೆ ನಿಂತಿದ್ದುದನ್ನೂ, ಕ್ರಮಕ್ರಮವಾಗಿ ಅಲ್ಲಿಯೂ ನಮ್ಮ ದೇಶಬಾಂಧವರು ಜಾತಿಸ್ಮರರಾಗಿ ತಮ್ಮ ಭಾಷೆಯನ್ನು ಮತ್ತು ದೇಶವನ್ನು ಮರಾಟಿಯ ಅಧಿಕಾರದಿಂದ ತಪ್ಪಿಸಲು ಪ್ರಯತ್ನಿಸಿದುದನ್ನೂ, ಈ ವಿಷಯದಲ್ಲಿ ಪಂಡಿತರಾದ ಅನೇಕಜನ ಬ್ರಾಹ್ಮಣ ಮತ್ತು ಲಿಂಗಾಯತ ಮಹನೀಯರುಗಳು ಸತತ ಪ್ರಯತ್ನಗಳನ್ನು ನಡೆಯಿಸಿದುದನ್ನೂ, ಅದರ ಫಲವಾಗಿ ಮೆಲ್ಲಮೆಲ್ಲನೆ ಉತ್ತರ ಕರ್ಣಾಟಕದಲ್ಲಿ ಕನ್ನಡವು ಅಭಿವರ್ಧಿಸತೊಡಗಿ ಧಾರವಾಡದ "ಕರ್ಣಾಟಕ ವಿದ್ಯಾವರ್ಧಕ ಸಂಘ"§ದಂಥ ಸಂಸ್ಥೆಗಳು ಹೊರಟು ಅಂದಿನಿಂದೀಚೆಗೆ ಆ ಪ್ರಾಂತವು ಕನ್ನಡದ ಕೇಂದ್ರಸ್ಥಾನವಾಗುವಂತಿರುವ ಸುಚಿಹ್ನಗಳು ತೋರಿಬರುತ್ತಿರುವದನ್ನೂ ಕನ್ನಡದ ಮತ್ತು ಕನ್ನಡಿಗರ ಇತಿಹಾಸದಲ್ಲಿ ತತ್ಪರರಾದ ಸಮಸ್ತರೂ ತಿಳಿದೇ ಇರಬೇಕು! ಇಂಥ ಫಲಪ್ರಾಪ್ತಿಯಾಗುವ ಮಹತ್ಕಾರ್ಯದಲ್ಲಿ ಸಹಕಾರಿಗಳಾಗಿ ಪ್ರವರ್ತಿಸಿ ಪ್ರಕಾಶಿಸಿದ ನರರತ್ನಗಳೊಳಗೆ ದೇದೀಪ್ಯಮಾನವಾಗಿ ಬೆಳಗುವ ಒಂದು ರತ್ನವಾದ ಶ್ರೀಯುತ ವೆಂಕಟರಾವ್ ಕಟ್ಟಿಯವರ ಸಂಕ್ಷಿಪ್ತಚರಿತ್ರೆಯನ್ನು ಕೊಡುವುದು ಈ ಲೇಖನದ ಉದ್ದೇಶವಾಗಿದೆ.

ಶ್ರೀಯುತ ವೆಂಕಟರಾಯರು ಕ್ರಿ.ಶ ೧೮೩೩ನೆ ಸಂವತ್ಸರದಲ್ಲಿ, ಈಗ ಮರಾಟರ ಸಂಸ್ಥಾನವಾಗಿರುವ,— ಪರಂತು— ಪೂರ್ವಕಾಲದಲ್ಲಿ ರನ್ನ ಮಹಾಕವಿಯ ಜನ್ಮಸ್ಥಾನವಾಗಿ ಮುದುವೊಳಲೆಂಬ ಹೆಸರಿಂದ ಕರ್ಣಾಟಚರಿತೆಯಲ್ಲಿ ಬಹು ಪ್ರಸಿದ್ಧವಾದ— ಮುಧೋಳ†ವೆಂಬ ಗ್ರಾಮದಲ್ಲಿ ಹುಟ್ಟಿದರು. ಇವರ ಮನೆತನವು ಪುರಾಣಪ್ರಿಯವಾದ ಶುದ್ಧ ವೈದಿಕ ಸಂಪ್ರದಾಯದುದಾಗಿದ್ದುದರಿಂದ, ವೆಂಕಟರಾಯರ ಬಾಲ್ಯದ ವಿದ್ಯಾಭ್ಯಾಸವು ಅದಕ್ಕೆ ಅನುರೂಪವಾಗಿ ಮುಧೋಳದಲ್ಲಿಯೂ ಅವರ ಸೋದರಮಾವಂದಿರ "ಬಟಕುರಕಿ"ಎಂಬ ಗ್ರಾಮದಲ್ಲಿಯೂ ಆಯಿತು‡. ಇವರ ಬಾಲ್ಯದ ವಿಷಯವಾಗಿ ನಮಗೆ ತಕ್ಕಷ್ಟು ಸಮಾಚಾರವು ದೊರೆವುದಿಲ್ಲವಾದರೂ ಸ್ವಪ್ರಯತ್ನದಿಂದಲೇ ಇವರು ತಮ್ಮ ಕುಲವೃತ್ತಿಯನ್ನು ಬಿಟ್ಟು ನೂತನ ವಿದ್ಯಾಭ್ಯಾಸದಲ್ಲಿ ಪ್ರಯತ್ನಿಸಿದುದನ್ನು ನೋಡಲಾಗಿ ಕೇವಲ ಚಿಕ್ಕವಯಸ್ಸಿನಿಂದಲೂ ಇವರು ತೀವ್ರಮೇಧಾವಿಗಳೂ ವಿದ್ಯಾಭಿಲಾಷಿಗಳೂ ಆಗಿದ್ದರೆಂದು ನಿಸ್ಸಂದೇಹವಾಗಿ ಹೇಳಬಹುದು.

---

* ಈ ದೇಶಭಕ್ತರ ವಿಷಯದಲ್ಲಿ ನಮ್ಮ ಸನ್ಮಾನನೀಯಬಂಧುಗಳಾಗಿರುವ ಧಾರವಾಡ ಪ್ರಾಂತದವರಿಗಿರುವ ಅಭಿಮಾನವೂ ಉಪಕಾರಸ್ಮರಣೆಯೂ ಎಷ್ಟುಮಟ್ಟಿಗಿರುವದೆಂಬದನ್ನು ವಿವರಿಸಲು ನಮ್ಮಿಂದ ಅಳವಲ್ಲವಾದರೂ ಆ ನಮ್ಮ ಬಂಧುಗಳು 'ಈ ದೇಶಭಕ್ತರ ಹೆಸರು ಚಿರಸ್ಮಾರಕವಾಗಿರುವಂತೆ ಇವರ ಹೆಸರಿಂದ ಪುಸ್ತಕವೊಂದನ್ನಾದರೂ ಪ್ರಕಟಿಸಬೇಕೆಂದು" ನಮಗೆ ಸಾಕ್ಷಾತ್ತಾಗಿ ಸೂಚಿಸಿರುವರೆಂಬ ಇದೊಂದರಿಂದಲೇ ಇವರು ಆ ಪ್ರಾಂತದವರಿಗೆ ಚಿರಸ್ಮರಣೀಯರಾಗಿದ್ದಾರೆಂಬುದನ್ನು ಸ್ಥಿರಪಡಿಸಲು ಸಾಕಾಗಿದೆ. ನಾವುಕೂಡ ನಮ್ಮ ಧಾರವಾಡ ಬಂಧುಗಳ ಅಭಿಮತವನ್ನು ಬಹುಮಾನಿಸಿ, ಇಷ್ಟರಲ್ಲಿ ದಿವಂಗತ ಕಟ್ಟಿಯವರ ಹೆಸರಿನಲ್ಲೇ ಒಂದೆರಡು ನೀತಿಬೋಧಕ ಗ್ರಂಥಗಳನ್ನು ಪ್ರಕಾಶಪಡಿಸಲು ಸಂಕಲ್ಪಿಸಿದ್ದೇವೆ

ನಾವು ಇವರ ಭಾವಚಿತ್ರವನ್ನು ಸಂಪಾದಿಸಿದ್ದು, ಅಚ್ಚಿಗೆ ಉಪಯುಕ್ತವಾಗುವಂತೆ ಅದರ ಬ್ಲಾಕ್ ಮಾಡಲು ಕಳುಹಿದ್ದೇವೆ ಬ್ಲಾಕ ಬಂದ ಕೂಡಲೆ ಇವರ ಭಾವಚಿತ್ರವು ನಂದಿನಿಯಲ್ಲಿ ಪ್ರಕಟವಾಗುವದು. ಸಂ. ನಂ.

§ ಈ ಸಂಘದ ಸಾದ್ಯಂತಚರಿತ್ರವು ನಮ್ಮ ಮಾತೃಮಂದಿರದ ವಾರ್ಷಿಕವೃತ್ತದಲ್ಲಿ ೨-೩ ತಿಂಗಳೊಳಗಾಗಿ ಪ್ರಚುರವಾಗುವುದು. ಸ.ಸಂ.

† ಇವರು ೧೮೩೦ನೇ ಇಸವಿ ಸೆಪ್ಟೆಂಬರಿನಲ್ಲಿ ಮುಧೋಳ ದೇಶಗತಿಯ 'ಕುಳಲಿ' ಎಂಬ ಗ್ರಾಮದಲ್ಲಿ ಹುಟ್ಟಿದರೆಂದು "ಲೋಕಬಂಧು" (೧೬–೫–೧೯೦೯) ವೆಂಬ ಪತ್ರಿಕೆಯಲ್ಲಿ ಹೇಳಿದೆ

‡ ಉಪನಯನಾನಂತರದಲ್ಲಿ ಇವರು ತಮ್ಮ ಪಿತೃವ್ಯರಾದ ವೇ|| ರಾಘವೇಂದ್ರಾಚಾರ್ಯರಲ್ಲಿ ೮-೧೦ ವರ್ಷ ಸಂಸ್ಕೃತ ವ್ಯಾಕರಣ, ಕಾವ್ಯ ಜ್ಯೋತಿಷಗಳನ್ನೋದಿದಂತೆಯೂ ಮುಂದೆ ಧೋಂಡೋಪಂತ ಶಿರೋಳಕರ—ಎಂಬ ಉಪಾಧ್ಯಾಯರ ಬಳಿ ಮರಾಟಿ-ಕನ್ನಡಗಳನ್ನು ಕಲಿತಂತೆಯೂ ಲೋಕಬಂಧುವಿನಲ್ಲಿ ಹೇಳಿದೆ,

ವೈದಿಕ ವಿದ್ಯಾಭ್ಯಾಸವನ್ನು ಮುಗಿಯಿಸಿ ವೆಂಕಟರಾಯರು ತಮ್ಮ ೧೮ನೇ ವರ್ಷದ ಸುಮಾರಿಗೆ ಲೌಕಿಕ ವಿದ್ಯಾಭ್ಯಾಸವನ್ನು ಪಡೆವುದಕ್ಕಾಗಿ ಹಿರಿಯರಿಂದ ಪಾಲುಪಡೆದು ಕೇವಲ ತಮ್ಮ ಮೇಲೆಯೇ ನಂಬಿಗೆಯಿಟ್ಟು ಪುಣೆಗೆ ಹೊರಟುಹೋದರು. ಅಲ್ಲಿ ಅರ್ವಾಚೀನ 'ಮಹಾರಾಷ್ಟ್ರ-ಗದ್ಯ ಲೇಖನ ಚಕ್ರವರ್ತಿ'ಯೆಂದು ತಿಳಿಯಲ್ಪಡುವ ಕೃಷ್ಣಶಾಸ್ತ್ರಿ ಚಿಪಳೂಣಕರ, ಗಂಗಾಧರಶಾಸ್ತ್ರಿ ಜಾಂಭೇಕರ ಮುಂತಾದವರ ಪರಿಚಯಲಾಭವು ಇವರಿಗೆ ದೊರೆತು ತನ್ಮೂಲಕ ಇವರಲ್ಲಿ ಪ್ರಾಚೀನಾರ್ವಾಚೀನ ವಿಚಾರಗಳು ವಿಚಿತ್ರವಾದ ರೀತಿಯಿಂದ ಕಲೆತು ಇವರ ಮುಂದಿನ ಜೀವನಕ್ರಮಕ್ಕೆ ನೂತನವಾದ ಸ್ವರೂಪವುಂಟಾಗಲು ಮಾರ್ಗವಾಯಿತು.* ಪುಣೆಯಲ್ಲಿ ೪-೫ ವರ್ಷಕಾಲ ಲೌಕಿಕವಿದ್ಯಾಭ್ಯಾಸಮಾಡಿದ ತರುವಾಯ ವೆಂಕಟರಾಯರಿಗೆ ಪುಣೆಯ ಟ್ರೇನಿಂಗ್ ಕಾಲೇಜಿನಲ್ಲಿ ಸಹಾಯೋಪಾಧ್ಯಾಯರ ಉದ್ಯೋಗವು ದೊರೆದಿತು.§ ಇಲ್ಲಿ ಸುಮಾರು ೧೦ ವರ್ಷ ಕೆಲಸ ಮಾಡಿದ ಬಳಿಕ ಅವರು ಬೆಳಗಾಂವಿಯ ನಾರ್ಮಲ್ ಸ್ಕೂಲಿಗೆ ವರ್ಗಹೊಂದಿ ಪುನಃ ಸ್ವದೇಶಕ್ಕೆ ಬಂದರು.

ಸುಮಾರು ೧೮೬೮ರಲ್ಲಿ ಶ್ರೀ. ವೆಂಕಟರಾಯರಿಗೆ ವಿದ್ಯಾಭ್ಯಾಸದ ಇಲಾಖೆಯ ಕನ್ನಡ ಟ್ರಾನ್ಸ್‌ಲೇಟರ ಉದ್ಯೋಗವು ದೊರಕಿತು. ಮತ್ತು, ೧೮೭೨ರಲ್ಲಿ ಅವರು ಧಾರವಾಡಕ್ಕೆ ಸ್ಥಳಾಂತರ ಹೊಂದಿ ಬಂದರು. ಇದೇ ಸುಮಾರಿಗೆ ಬೆಳಗಾಂವಿಯ ನಾರ್ಮಲ್ ಸ್ಕೂಲು, ಟ್ರೇನಿಂಗ್ ಕಾಲೇಜು ಎಂಬ ಹೆಸರು ಹೊಂದಿ, ಧಾರವಾಡಕ್ಕೆ ಬಂದಿತು.† ಆಗ ಶ್ರೀ. ಭುಜಂಗರಾವ್ ಹುಯಿಲಗೋಳರೆಂಬವರು ಈ ಕಾಲೇಜಿಗೆ ಮುಖ್ಯಾಧ್ಯಾಪಕ (ಪ್ರಿನ್ಸಿಪಾಲ) ರಾಗಿದ್ದರು. ಅವರು ಪೆನಶನ್ ಪಡೆದ ತರುವಾಯ ಆ ಕೆಲಸಕ್ಕೆ ವೆಂಕಟರಾಯರು ನೇಮಕ ಹೊಂದಿ, ೧೮೭೬ರಿಂದ ಸುಮಾರು ೧೫ ವರ್ಷಗಳ ಕಾಲ ಆ ಕೆಲಸವನ್ನು ಉತ್ಕೃಷ್ಟವಾಗಿ ನೆರವೇರಿಸಿ, ೧೮೯೧ನೆಯ ಜನೆವರಿ ತಾ|| ೧ರಲ್ಲಿ ಉದ್ಯೋಗದಿಂದ ನಿವೃತ್ತರಾದರು. ಅಂದಿನಿಂದ ಕೇವಲ ಭಾಷಾಸೇವೆಯಲ್ಲಿಯೂ ನಿರತರಾಗಿದ್ದು ಸುಮಾರು ೧೯ ವರ್ಷಗಳ ವರೆಗೆ ಪೆನಶನ್ ಪಡೆದು ೭-೧೦ ದಿನ ಜ್ವರಬಾಧೆಪಟ್ಟು ಅದರಿಂದಲೇ ೧೯೦೯ನೆಯ ಮೇ ೧೨ನೇ ತಾರೀಖಿನ ಬುಧವಾರ ರಾತ್ರಿಯ ೨-೩ ಗಂಟೆಗೆ ತಮ್ಮ ೭೬ನೆ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿ ಯಶಶ್ಶರೀರಿಗಳಾದರು.

ಇಂಗ್ಲೀಷು ಭಾಷಾಭ್ಯಾಸದ ವಿಷಯದಲ್ಲಿ ತಿರಸ್ಕಾರವಿರುತ್ತಿದ್ದ ಆ ಕಾಲದಲ್ಲಿ ಸ್ವಪ್ರಯಾಸದಿಂದ ಅದನ್ನು ಪಡೆದು ಆ ದಿನಗಳಲ್ಲಿ ಭಾರತೀಯರಿಗೆ ದೊರೆಯಬಹುದಾಗಿದ್ದ ವಿದ್ಯಾ ಇಲಾಖೆಯ (೪೦೧ ರೂ. ಸಂಬಳದ) ಉಚ್ಚವಾದ ಒಂದು ಉದ್ಯೋಗವನ್ನು ಪಡೆದ ಇಷ್ಟಕ್ಕಾಗಿಯೇ ಅಲ್ಲದೆ, ಶ್ರೀ|| ವೆಂಕಟರಾಯರ ಚರಿತ್ರವು ಅನೇಕ ಕಾರಣಗಳಿಂದ ಕನ್ನಡಿಗರಿಗೆ ಬೋಧಪ್ರದವೂ ಅನುಕರಣೀಯವೂ ಆಗಿರುವದೆಂದು ಧಾರಾಳವಾಗಿ ಹೇಳಬಹುದಾಗಿದೆ. ಟ್ರಾನ್ಸ್‌ಲೇಟರಾಗಿಯೂ ಪ್ರಿನ್ಸಿಪಾಲರಾಗಿಯೂ ಇದ್ದಾಗ ಇವರು ವಿದ್ಯಾ ಇಲಾಖೆಯವರಿಗೋಸ್ಕರ ಬರೆದ ಕನ್ನಡ ಕ್ರಮಿಕಪುಸ್ತಕಗಳ ಮತ್ತು "ಪ್ರಾಕೃತಿಕ ಭೂಗೋಲ, ಜ್ಯೋತಿಶ್ಶಾಸ್ತ್ರ, ಲಘು ವ್ಯಾಕರಣ" ಮೊದಲಾದ ಪುಸ್ತಕಗಳ ಮೂಲವಾಗಿ ಕನ್ನಡ ವಿದ್ಯಾಭ್ಯಾಸದ ಪದ್ಧತಿಯಲ್ಲಿ ವಿಶೇಷವಾದ ಮಾರ್ಪಾಟುಂಟಾದುದಲ್ಲದೆ ಹೊಸಗನ್ನಡದ ಲೇಖನಪದ್ಧತಿಯಲ್ಲಿಯೂ ಶೈಲಿಯಲ್ಲಿಯೂ ಕೂಡ ದೊಡ್ಡ ಕ್ರಾಂತಿಯುಂಟಾಯಿತೆಂದೂ—ಹೆಚ್ಚೇಕೆ- ಉತ್ತರಕರ್ಣಾಟಕದ ಅರ್ವಾಚೀನ ಲೇಖಕವರ್ಗಕ್ಕೆಲ್ಲ ಇವರೇ ಪಿತಾಮಹಸ್ಥಾನದಲ್ಲಿರುವರೆಂದೂ ಬಲ್ಲವರು ಹೇಳುತ್ತಿರುವರು.‡ ಮ|| ವೆಂಕಟರಾಯರು ಬರೆದ ಶಾಲಾಪುಸ್ತಕಗಳೊಳಗೆ ಕರ್ಣಾಟಕದ "ವರ್ಣನೆಯೂ-ಇತಿಹಾಸವೂ" ಎಂಬ ಚಿಕ್ಕಪುಸ್ತಕವು ಆ ವಿಷಯದಲ್ಲಿ ಮೊದಲನೆಯದೆಂಬ ಕಾರಣಮಾತ್ರವೆ ಅಲ್ಲದೆ ಅವರ ಯೋಗ್ಯತೆಯನ್ನು ಎಣಿಸಿ ನೋಡಿದರೂ ಅಪೂರ್ವವಾದುದಾಗಿದೆ. ಈ ಪುಸ್ತಕವು ಹುಟ್ಟುವುದಕ್ಕೆ ಮೊದಲು ಕನ್ನಡಶಾಲೆಯ ವಿದ್ಯಾರ್ಥಿಗಳಿಗೆ ಸಹ ಮೊದಲನೆಯ ತರಗತಿಯಲ್ಲಿ ಮಹಾರಾಷ್ಟ್ರದ ಇತಿಹಾಸವನ್ನೇ ಕಲಿಯಿಸುವುದು ವಾಡಿಕೆಯಾಗಿದ್ದಿತು. ಹೀಗಾ

* ಇವರು ಅಭ್ಯಾಸಕ್ಕೆ ಹೋದಾಗ ಪುಣೆಯಲ್ಲಿ ಸುಪ್ರಸಿದ್ಧ ದಿವಾಣರಾದ ರಾಮರಾವ್ ತಾಡಪತ್ರಿ ಎಂಬವರಲ್ಲಿದ್ದಂತೆಯೂ ಇವರು ಹೊಣ ವಿದ್ಯಾಭ್ಯಾಸ ಮಾಡುತ್ತಿರುವುದು ತಿಳಿದೊಡನೆ ದಿವಾಣರು ಅವರನ್ನು ಮನೆಯಿಂದ ಕಳುಹಿಬಿಟ್ಟರೆಂದೂ ಲೋಕಬಂಧುವಿನಲ್ಲಿ ಹೇಳಿದೆ.

§ ಲೌಕಿಕ ವಿದ್ಯಾಭ್ಯಾಸ ಮಾಡಿದ ತರುವಾಯ ವಿದ್ಯಾಧಿಕಾರಿಗಳನ್ನು ಹೋಗಿಕಾಣಲಾಗಿ ಕನ್ನಡಿಗರೆಂಬುದರಿಂದ ಹೊನ್ನಾವರದ ಶಾಲೆಯಲ್ಲಿ ೨೦ ರೂ ಸಂಬಳದ ಉಪಾಧ್ಯಾಯರ ಕೆಲಸವು ದೊರೆಯಿತೆಂದೂ ಇಲ್ಲಿಯೇ ಕನ್ನಡವನ್ನು ಇನ್ನಷ್ಟು ಅಭ್ಯಸಿಸಿ ೩೦ ರೂ.ಗಳ ವರೆಗೂ ಸಂಬಳವನ್ನು ಪಡೆದರೆಂದೂ ಅಲ್ಲಿಂದ ೮೦ ರೂ. ಸಂಬಳದ ಮೇಲೆ ಬೆಳಗಾಂವಿಗೆ ಹೋದರೆಂದೂ 'ಲೋಕಬಂಧು'ವಿನಲ್ಲಿ ಹೇಳಿದೆ.

† ಮಧ್ಯ ೩-೪ ವರ್ಷಗಳ ವರೆಗೆ ಮ|| ಕಟ್ಟಿಯವರು ಮುಂಬಾಯಿ ಹೈಕೋರ್ಟ ಟ್ರಾನ್ಸ್‌ಲೇಟರಾಗಿದ್ದಂತೆಯೂ ಅಲ್ಲಿ ಆರೋಗ್ಯಕ್ಕೆ ಸರಿಬೀಳದೆ ಪುನ. ಹೊರಟುಬಂದಂತೆಯೂ ಹುಯಿಲಗೋಳರಿಗೂ ಇವರಿಗೂ ನಡುವೆ ಶ್ರೀಯುತ ರಾವಜೀ ಬಾಳಾಜೀ ಕರಂದೀಕರರವರು ೯ ತಿಂಗಳ ಕಾಲ ಆಕ್ಟಿಂಗ್ ಪ್ರಿನ್ಸಿಪಾಲರಾಗಿದ್ದಂತೆಯೂ ತಿಳಿಯಬರುತ್ತದೆ.

‡ 'ಕನ್ನಡ ಶಾಲಾಪತ್ರಿಕ'ವನ್ನು ಕೂಡ ಮ|| ವೆಂಕಟರಾಯರೇ ಮೊದಲು ಹೊರಡಿಸಿದರೆಂದು ತಿಳಿಯಬರುತ್ತದೆ.

ದುದರಿಂದ ಮ॥ ವೆಂಕಟರಾಯರು ಈ ಪುಸ್ತಕವನ್ನು ಬರೆದು ಕನ್ನಡಿಗರಲ್ಲಿ ದೇಶಾಭಿಮಾನದ ಬೀಜವನ್ನೇ ಬಿತ್ತಿದರೆಂದು ಹೇಳಬೇಕಾಗಿರುವುದು. ಬಹು ವರ್ಷಗಳ ಹಿಂದೆ ಬರೆದ ಉತ್ತಮೋತ್ತಮ (ಮಾರ್ಗಪ್ರದರ್ಶಕ)ವಾದ ಈ ಪುಸ್ತಕವು ಇಂದಿಗೆ ಅಸಮರ್ಪಕವಾಗಿ ತೋರಬಹುದಾದುದರಿಂದ ಭಾಷಾಭಿಮಾನಿಗಳಾದ ಲೇಖಕರು ಯಾರಾದರೂ ಇದನ್ನು ವಿಸ್ತಾರಪಡಿಸಿ ಇತ್ತಲಾಗಿನ ಯಾವದ್ವೃತ್ತಾಂತಗಳನ್ನೂ ಸೇರಿಸಿ ಬರೆದು ಪ್ರಚುರಗೊಳಿಸಿದರೆ ಕನ್ನಡಿಗರಿಗೆ ಮಹೋಪಕಾರ ಮಾಡಿದಂತಾಗುವುದೆಂದು ನಿಸ್ಸಂದೇಹವಾಗಿ ಹೇಳಬಹುದು.

ಮೇಲೆ ಹೇಳಿದ ಶಾಲಾಪುಸ್ತಕಗಳನ್ನಷ್ಟೇ ಅಲ್ಲದೆ, ಶ್ರೀ॥ ವೆಂಕಟರಾಯರು ಮರಾಠಿಯಲ್ಲಿಯೂ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸ್ವತಂತ್ರವಾಗಿ ಹಲವು ಪುಸ್ತಕಗಳನ್ನು ಬರೆದಿರುವರು. ಇವುಗಳೊಳಗೆ— “ಸವಾಯಿ ಮಾಧವರಾವ್ ನಾಟಕ”, “ನರತನು”ವೆಂಬ ಶಾರೀರಶಾಸ್ತ್ರ, “ವಿಧವಾವಪನ ಅನಾಚಾರ”ವೆಂಬ ಮರಾಠೀ ಪುಸ್ತಕಗಳೂ, “ಬರ್ಥೊಲ್ಡನ ಚರಿತ್ರೆ”, “ಆರುಬೆರಳಿನ ಕುರುಡ”, “ಕರ್ಣಾಟಕದ ಗೆಝೆಟಿಯರ್”, “ಉಪನ್ಯಾಸವಿದ್ಯೆ” “ಗರ್ಭಿಣೀಶಿಶುಸಂಗೋಪನ” ಎಂಬ ಕನ್ನಡ ಪುಸ್ತಕಗಳೂ ಪ್ರಸಿದ್ಧವಾಗಿವೆ. ಅವುಗಳ ಹೆಸರಿಂದಲೇ ಆ—ಆ—ಪುಸ್ತಕದ ವಿಷಯವೂ ತಿಳಿದುಬರುವಂತಿರುವುದರಿಂದ ಪ್ರತ್ಯೇಕವಾಗಿ ವಿವರಿಸಿ ಹೇಳಬೇಕಾದುದಿಲ್ಲ. ಇವಲ್ಲದೆ “ರಸ್ಸೆಲ್ ಸಾಹೇಬರ ಆಡಳಿತ”ವೆಂಬದಾಗಿ ಇವರು ಬರೆದ ಇಂಗ್ಲಿಷ್ ಪುಸ್ತಕದಲ್ಲಿ* ರಸ್ಸೆಲ್ ಸಾಹೇಬರ ಕಾಲದ ಉತ್ತರಕರ್ಣಾಟಕದ ವಾಙ್ಮಯಾತ್ಮಕ ಇತಿಹಾಸವೇ ಸಂಕ್ಷಿಪ್ತವಾಗಿ ತುಂಬಿಕೊಂಡಿರುವುದು

ಶ್ರೀಯುತ ವೆಂಕಟರಾಯರ ಪ್ರಸಿದ್ಧಿಯು ಕೇವಲ ಗ್ರಂಥಕರ್ತೃವೆಂಬಿಷ್ಟರ ಮೇಲೆಯೇ ಹೊಂದಿರುವುದಿಲ್ಲ. ಕರ್ಣಾಟಭಾಷೆಯ ಮತ್ತು ದೇಶದ ಸೇವೆಯನ್ನು ಮನಮುಟ್ಟಿ ಮಾಡಿ, ಜನರಲ್ಲಿ ದೇಶಾಭಿಮಾನವನ್ನು ಹೆಚ್ಚಿಸಬೇಕೆಂಬ ಕುತೂಹಲದಿಂದ ಇವರು ‘ಕರ್ಣಾಟಕಪತ್ರ ಮತ್ತು ಚಂದ್ರೋದಯ’ ಎಂಬ ವಾರಪತ್ರಿಕೆಯನ್ನು† ಅದರ ಮೊದಲಿನ ಚಾಲಕರಾದ ಶಿವನಪ್ಪ ಶಿವಮೂರ್ತಪ್ಪ ದೇಸಾಯಿ’ ಎಂಬವರು ತೀರಿಕೊಳ್ಳಲಾಗಿ, ತಾವೇ ತೆಗೆದುಕೊಂಡು ಹಲವು ವರ್ಷಗಳ ತನಕ ನಡೆಯಿಸಿದರು. ಆ ಕಾಲದಲ್ಲಿ ವೃತ್ತಪತ್ರಗಳ ನಿಬಂಧನೆಯು ಅಷ್ಟೊಂದು ತೀವ್ರವಾಗಿರದಿದ್ದರೂ, ಲಾಭದೃಷ್ಟಿಯಿಂದ ನೋಡಲಾಗಿ ಕನ್ನಡ ಪತ್ರಿಕೆಗಳ ಸಂಪಾದಕತ್ವವು ಕಿಂಚಿತ್ತಾದರೂ ಪ್ರಯೋಜನಕಾರಿಯಾಗಿರಲಿಲ್ಲವೆಂಬದನ್ನು ಈ ಹೊತ್ತಿನ ವರೆಗೆ ಅದೇ ದುರವಸ್ಥೆಯು ಉಳಿದಿರುವುದರ ಮೇಲಿಂದಲೇ ಗ್ರಹಿಸಿಕೊಳ್ಳಬಹುದಾಗಿದೆ. ತಥಾಪಿ, ಶ್ರೀ॥ ವೆಂಕಟರಾಯರು ಆ ಕೆಲಸವನ್ನು ಕೇವಲ ವೃದ್ಧಾಪ್ಯದಿಂದ ಅಸಾಧ್ಯವಾಗುವವರೆಗೂ ಸಾಯುವುದಕ್ಕೆ ಸುಮಾರು ಎರಡು ವರ್ಷಗಳ ಕಾಲವಿರುವ ಪರ್ಯಂತ, ಬಿಡದೆ ಏಕೋಭಾವದಿಂದ ನಡೆಯಿಸಿದರು. ಆ ಪತ್ರಿಕೆಯಲ್ಲಿ ಬರುತ್ತಿದ್ದ ಅಮೋಘವಾದ ಮರಾಠಿ ಮತ್ತು ಕನ್ನಡ ಲೇಖನಗಳ ಧೋರಣೆಯೂ ಶೈಲಿಯೂ ಇಂದಿನಪರ್ಯಂತ ಆ ಪ್ರಾಂತದ ಸಂಪಾದಕಮಂಡಲಿಗೆ ಮೇಲ್ಪಂಕ್ತಿಯಾಗಿ ನಿಂತಿರುವುದು. ಇವರ ತರುವಾಯ ಈ ಪತ್ರಿಕೆಯು ಮ॥ ಕೃಷ್ಣರಾವ್ ಅಂಕಲಗಿ ಎಂಬ ವಕೀಲರಿಂದ ಕೆಲವುಕಾಲ ನಡೆಯಿಸಲ್ಪಟ್ಟು ಪ್ರಕೃತದಲ್ಲಿ ಮ॥ ಗದಿಗೆಯ್ಯ ಹುಚ್ಚಯ್ಯ ಹೊಸ್ಮಾಪುರಮಠ ಎಂಬ ಸುಪ್ರಸಿದ್ಧ ಲಿಂಗಾಯತ ವಕೀಲರಿಂದ “ಚಂದ್ರೋದಯ”ವೆಂಬ ಒಂದೇ ಹೆಸರಿಂದ ನಡೆಯಿಸಲ್ಪಡುತ್ತಿದೆ. ಶ್ರೀ॥ ವೆಂಕಟರಾಯರಿಗೆ ಮೊದಲಿಂದಲೂ ಆಯುರ್ವೇದದಲ್ಲಿ ಒಳ್ಳೆಯ ಅನುಭವವಿದ್ದಿತು. ಇದರ ಜ್ಞಾನವು ಅವರಿಗೆ ಅವರ ಹಿರಿಯರಿಂದಲೇ ತಕ್ಕಮಟ್ಟಿಗೆ ಬಂದಿತ್ತಾದರೂ ಉದ್ಯೋಗದಿಂದ ವಿಶ್ರಾಂತಿಹೊಂದಿದ ಬಳಿಕ ಇವರು ತಾವೇ ವಾಗ್ಭಟ, ಸುಶ್ರುತಾದಿ ಆಧಾರಭೂತವಾದ ಸಂಸ್ಕೃತ ವೈದ್ಯಕ ಗ್ರಂಥಗಳನ್ನು ಆಸ್ಥೆಯಿಂದ ಓದಿ, ಆ ಶಾಸ್ತ್ರದಲ್ಲಿ ನೂತನವಾದ ಅನೇಕ ಶೋಧಗಳನ್ನು ಮಾಡಲು ಪ್ರಯತ್ನಪಟ್ಟರು. ಔದ್ಯೋಗಿಕ ವಿಷಯಗಳಲ್ಲಿಯೂ ಇವರು ಗಮನಕೊಡುತ್ತಿದ್ದರು. ಹಿಂದೆ ಸ್ವದೇಶೀಯ ಆಂದೋಳನವು ಪ್ರಾರಂಭವಾದಾಗ ಇವರು ವಿದೇಶೀಯ ಸಾಬೂನಿನ ಉಪಯೋಗವು ಕಡಿಮೆಯಾಗುವಂತೆ ಸೀಗೆಯಕಾಯಿಯಿಂದ ಉತ್ತಮವಾದ ಒಡೆಗಳನ್ನು ಬಹುಪ್ರಯೋಗಮಾಡಿನೋಡಿ ತುಂಬ ಕಾಲ ಮತ್ತು ಧನವ್ಯಯದಿಂದ ಸಿದ್ಧಪಡಿಸಿ ಮಾರಾಟಕ್ಕಿಡಿಸಿದರು. ಇವು ಜನಪ್ರಿಯವಾಗಿದ್ದವೆಂದು ತಿಳಿಯಬರುತ್ತದೆ. ಇನ್ನು ಉತ್ತರಕರ್ಣಾಟಕದಲ್ಲಿಯೇ ಕನ್ನಡ ಅಚ್ಚಿನ ಮೊಳೆಗಳನ್ನು ಪ್ರಥಮತಃ ಮಾಡಿಸಲು ಪ್ರಯತ್ನಿಸಿದವರು ಕೂಡ ಇವರೇ

* ಮಹನೀಯರಾದ ಈ ಸಾಹೇಬರು ಆ ಕಾಲದಲ್ಲಿ ಶಾಲೆಗಳ ಇನ್ಸ್‌ಪೆಕ್ಟರರಾಗಿದ್ದಂತೆಯೂ ಕರ್ಣಾಟಕಕ್ಕೂ ಕನ್ನಡಿಗರಿಗೂ ಶಾಶ್ವತವಾದ ಮಹೋಪಕಾರವನ್ನು ಮಾಡಿದ್ದರೆಂಬುದೂ ತಿಳಿಯಬರುತ್ತದೆ.

† ‘ಶಾಲಾಪತ್ರಕ’ಕ್ಕೂ ಪೂರ್ವದಿಂದಲೇ ಇವರು ‘ಶೋಧಕ’ ಮಾಸಪತ್ರಿಕೆಯನ್ನೂ ‘ಕರ್ಣಾಟಕ ವಾರ್ತಿಕ’ವೆಂಬ ವಾರಪತ್ರಿಕೆಯನ್ನೂ ನಡೆಯಿಸುತ್ತಿದ್ದರೆಂದೂ ಆ ತರುವಾಯ ಸರ್ಕಾರದ ನವುಕರಿಯಲ್ಲಿರುವಾಗಲೇ ಲಾಭವಿಲ್ಲದಿದ್ದರೂ ಇತರರನ್ನು ಸಂಬಳಕ್ಕಿಟ್ಟು ಅವರ ಮೂಲಕ ‘ಕರ್ಣಾಟಕ ಪತ್ರ’ವನ್ನು ನಡೆಯಿಸುತ್ತಿದ್ದರೆಂದೂ ತಿಳಿಯಬರುತ್ತದೆ.

ಆಗಿರುವರು. ೧೮೭೦ರ ಸುಮಾರಿಗೆ ಇವರು ಬೆಳಗಾಂವಿಯಲ್ಲಿದ್ದಾಗ ಒಬ್ಬ ಕೆತ್ತಿಗೆಯ ಕೆಲಸವನ್ನು ಬಲ್ಲವನಿಂದ ಪಂಚುಗಳನ್ನು ಮಾಡಿಸಿ ಅಕ್ಷರಗಳನ್ನು ಹೊಯಿಸಿದರು. ಇದಲ್ಲದೆ, ಅನೇಕ ಧಾತುಗಳ ಮಿಶ್ರಣದಿಂದ ಬೆಳ್ಳಿಯಂಥ (ಜರ್ಮನ್‌ಸಿಲ್ವರಿನಂತಿರುವ) ಬಿಳೇ ಧಾತುವನ್ನು ಕಂಡು ಹಿಡಿದು ಅದರಿಂದ ಕತ್ತಿ, ಕತ್ತರಿ ಮುಂತಾದುವುಗಳನ್ನು ಮಾಡಿಸಿದರು. ಹಾಗೆಯೇ ಇವರು ಮಾಡಿಸಿದ ಮಂಗಳೂರು ಮಾದರಿಯ ಹೆಂಚುಗಳೂ ಸೀಮೆಯ ಭರಣಿಯಂತೆ ಮಿರುಗುವ ಮಣ್ಣಿನ ಹೂಜಿ ಮುಂತಾದುವುಗಳೂ ಇಂದಿಗೂ ಅವರ ಮನೆಯಲ್ಲಿ ನೋಡದೊರೆಯುತ್ತವೆ.

ಹೀಗೆ ಶ್ರೀ. ವೆಂಕಟರಾಯರು ಗ್ರಂಥಕರ್ತರಾಗಿಯೂ, ಪತ್ರಿಕಾಸಂಪಾದಕರಾಗಿಯೂ, ವೈದ್ಯರಾಗಿಯೂ, ಉದ್ಯೋಗಿಕವ್ಯವಸಾಯಗಳ ಪ್ರೋತ್ಸಾಹಕರಾಗಿಯೂ, ಸಮಾಜ ಸಂಸ್ಕರಣಪ್ರಿಯರಿಗೆಲ್ಲ ಮುಂದಾಳಾಗಿಯೂ ನಿಂತು, ಬಹು ಕಾಲ ಕನ್ನಡಿಗರಿಗೆ ಮಾರ್ಗದರ್ಶಿಗಳಾಗಿಯೂ, ಆಧಾರ ಸ್ತಂಭರಾಗಿಯೂ ಮೆರೆದರು. "ಈ ರೀತಿಯಾಗಿ ಅನೇಕ ಸದ್ಗುಣಗಳಿಂದ ಕೂಡಿದ ಒಂದೇ ಒಂದು ವ್ಯಕ್ತಿಯು ಇಡೀ ಕರ್ಣಾಟಕದಲ್ಲಿ ದೊರೆಯುವುದೇ ದುರ್ಮಿಳವೆಂದು ಮಾತ್ರ ವೆಂಕಟರಾಯರ ಮರಣವು ಶೋಚನೀಯವಾಗಿರುವುದೆಂಬಂತಿಲ್ಲ; ಇವರ ಬೇರೆ ಬೇರೆ ಗುಣಗಳಿಂದ ಯುಕ್ತವಾದ ಬೇರೆ ಬೇರೆ ವ್ಯಕ್ತಿಗಳು ದೊರೆಯುವುದು ಕೂಡ ದುರ್ಮಿಳವೆಂದೇ ಇವರ ಮರಣವು ವಿಶೇಷವಾಗಿ ದುಃಖಕ್ಕೆ ಕಾರಣವಾಗಿದೆ" ಎಂದು ಇವರ ನಿಧನಾನಂತರದಲ್ಲಿ "ಕರ್ಣಾಟಕವೃತ್ತ" ಸಂಪಾದಕರು ಬರೆದ ದುಃಖೋದ್ಗಾರಗಳಲ್ಲಿ ಈಷತ್ತಾದರೂ ಅತ್ಯುಕ್ತಿಯಿಲ್ಲವೆಂದು ನಿಚ್ಚಿಕೆಯಾಗಿ ಹೇಳಬಹುದು.

೧೮೯೦ನೇ ಇಸವಿಯ ಜೂನ್ ತಿಂಗಳಲ್ಲಿ ಧಾರವಾಡದಲ್ಲಿ 'ಕರ್ಣಾಟಕ ವಿದ್ಯಾವರ್ಧಕ ಸಂಘ'ವನ್ನು ಹೂಡಿಸಿದ ಭಾಷಾಭಿಮಾನಿಗಳೊಳಗೆ ಶ್ರೀಯುತ ವೆಂಕಟರಾಯರೂ ಪ್ರಮುಖರಾದ ಒಬ್ಬರಾಗಿದ್ದರು. ಇವರು ಮೊದಲಿಂದಲೂ ಸಂಘದ ಆಜೀವಸಭಾಸದರಾಗಿದ್ದುದಲ್ಲದೆ ಮುಂದೆ ಕೆಲವು ಕಾಲ ಉಪಾಧ್ಯಕ್ಷರಾಗಿಯೂ ಅಧ್ಯಕ್ಷರಾಗಿಯೂ ಇದ್ದರು "ಸಂಘದ ಬಾಲ್ಯಾವಸ್ಥೆಯಲ್ಲಿ ಕರ್ಣಾಟಕಭಾಷಾಕೋವಿದರೂ ಅತ್ಯಂತ ಅಭಿಮಾನಿಗಳೂ ಆದ ಮ|| ರಾ|| ಕಟ್ಟಿ ವೆಂಕಟರಾಯರಂಥವರ ನೇತೃತ್ವವು ಇದಕ್ಕೆ ದೊರೆತುದರಿಂದಲೇ ಸದ್ಯದ ದೃಶ್ಯಸ್ವರೂಪವು ಇದಕ್ಕೆ ಪ್ರಾಪ್ತವಾಗಿರುವುದೆಂದು ಹೇಳಬಹುದು.

ಇಂತಹದೊಂದು ಮಹಾದಾಶ್ರಯಸ್ತಂಭಕ್ಕೆ ಸಂಘವು ಎರವಾದುದು ಶೋಚನೀಯಸಂಗತಿಯಾಗಿದೆ— ಎಂದು ಆ ಸಂಘದ ಹದಿನೆಂಟನೆಯವರ್ಷದ ವರದಿಯಲ್ಲಿ ಬರೆದಿರುವುದನ್ನು ನೋಡಲಾಗಿ, ಇವರಿಂದ ಸಂಘವು ಎಷ್ಟು ದೂರದವರೆಗೆ ಉಪಕೃತವಾಗಿರುವುದೆಂಬುದು ಚೆನ್ನಾಗಿ ತಿಳಿದುಬಾರದಿರದು.

ಮ|| ವೆಂಕಟರಾಯರಲ್ಲಿ ಯಾವ ದುರ್ವ್ಯಸನವೂ ಇರಲಿಲ್ಲ. ಇವರು ಸದಾಚಾರಸಂಪನ್ನರೂ ಸದಯಾಂತಃಕರಣರೂ ಬಹುಶ್ರುತರೂ ಆಗಿದ್ದರು. ತಮ್ಮ ಕೈಕೆಳಗಿನವರನ್ನು ಸರ್ವದಾ ಮಕ್ಕಳಿಗೂ ಹೆಚ್ಚಾಗಿ ಪ್ರೀತಿಯಿಂದ ಕಾಣುತ್ತಿದ್ದರು. ಹೀಗಿದ್ದುದರಿಂದ ಮಹನೀಯರಾದ ಇವರ ನಿಧನ ವೃತ್ತಾಂತವನ್ನು ಕೇಳಿದೊಡನೆ ಮರುದಿನ ಟ್ರೇನಿಂಗ್‌ಕಾಲೇಜಿನ ವಿದ್ಯಾರ್ಥಿಗಳು ಸಭೆಸೇರಿ ತಮ್ಮ ದುಃಖವನ್ನು ಪ್ರದರ್ಶಿಸಿದರು. ಹಾಗೆಯೇ ಧಾರವಾಡದ ಮಿತ್ರಸಮಾಜದಲ್ಲಿಯೂ ಪುರಪ್ರಮುಖರು ಸಾರ್ವಜನಿಕರೀತಿಯಾಗಿ ತಮಗುಂಟಾಗಿರುವ ಅನುತಾಪವನ್ನು ಅವರ ಕುಟುಂಬಕ್ಕೆ ತಿಳುಹಿದರು. ಇದರಿಂದ ಮ|| ವೆಂಕಟರಾಯರು ಅಧಿಕಾರಿಗಳಾಗಿಯೂ ಗೃಹಸ್ಥರಾಗಿಯೂ ಧಾರವಾಡಪ್ರಾಂತ್ಯದ ತರುಣರಿಗೂ ಪೌರಜನರಿಗೂ ಎಷ್ಟು ಪ್ರಿಯರಾಗಿದ್ದರೆಂಬುದು ತಾನಾಗಿಯೇ ವ್ಯಕ್ತವಾಗುತ್ತಿದೆ

ಮ|| ವೆಂಕಟರಾಯರಿಗೆ ವಿಧವಾಪುತ್ರಿಯೊಬ್ಬರೂ ಪುತ್ರರಿಬ್ಬರೂ ಇರುವುದಾಗಿಯೂ ಈ ಪುತ್ರರಲ್ಲಿ ಮ|| ಶ್ರೀನಿವಾಸರಾಯರೆಂಬುವರು ಗ್ರಂಥಲೇಖನ, ಶೋಧಕಬುದ್ಧಿ, ಉದ್ಯೋಗಪ್ರಿಯತೆ ಮುಂತಾದ ಸರ್ವವಿಷಯಗಳಲ್ಲಿ ತಮ್ಮ ಹಿರಿಯರನ್ನೇ ಹೋಲುವವರೂ ಅನುಸರಿಸುವವರೂ ಆಗಿರುವಂತೆ ತಿಳಿಯಬರುತ್ತಿದೆ ಕಾಲಗತಿಯಿಂದ ನಿಂತುಹೋಗಿರುವ ಮ|| ವೆಂಕಟರಾಯರ ಉದ್ಯೋಗವು ಇವರ ಮೂಲಕವಾಗಿಯಾದರೂ ಏಕರೂಪವಾಗಿ ನಡೆಯಲೆಂದೂ, ಕೇವಲ ಅಪೂರ್ಣ ಮತ್ತು ಅಸಮರ್ಪಕವಾಗಿ ಲಿಖಿತವಾಗಿರುವ ಮ|| ವೆಂಕಟರಾಯರ ಈ ಚರಿತ್ರೆಯು ವಿಸ್ತಾರವಾಗಿ ಲೋಕಕ್ಕೆಲ್ಲ ಪ್ರಕಟವಾಗಲೆಂದೂ ಆಶಿಸುವೆನು

— ಭಾರದ್ವಾಜ —

ಹದಿಬದೆಯ ಧರ್ಮ

(ಲೇಖಕ— ವಿದ್ಯಾರ್ಥಿ, ಶಂಕರಭಟ್ಟ ಬಿ ಎಮ್., ಹೈಸ್ಕೂಲ. ಮಂಗಳೂರು.

(ಈ ಕೆಳಗಿನ ಲೇಖದಲ್ಲಿ, ಈಗಿನ ಸ್ತ್ರೀಯರ ಶೀಲವಿಷಯಕವಾಗಿ ಲೇಖಕರು ಮಾಡಿರುವ ಸಾಮಾನ್ಯ ವಿಧಾನಗಳು ನಮಗೆ ಅಸಂಮತವಾಗಿವೆ. ಪೂರ್ವಕಾಲದಲ್ಲಿ ಉತ್ತಮೋತ್ತಮರಾದ ಸ್ತ್ರೀಯರು ಇದ್ದಂತೆ ಈಗಲಾದರೂ ಇರುವರೆಂದು ನಮ್ಮ ವಿಶ್ವಾಸವು.)

ಹೆಂಗಸರಿಗೆ ಪತಿಭಕ್ತಿಯಷ್ಟು ಉತ್ಕೃಷ್ಟವಾದ ಭಕ್ತಿಯು ಇನ್ನೊಂದಿಲ್ಲ. ತಮ್ಮ ತಮ್ಮ ಪತಿಗಳು ಹೇಳಿದಂತೆ ನಡೆದು ಕೊಂಡು ಅವರ ದುಃಖದಲ್ಲಿಯೂ ಸುಖದಲ್ಲಿಯೂ ಸಮ ಭಾಗಿನಿಯರಾಗಿರುವುದು ಪತ್ನಿಯರ ಕರ್ತವ್ಯವು. ಸ್ತ್ರೀಯರು ಮಾಡತಕ್ಕ ಕರ್ತವ್ಯಗಳನ್ನು ಮಾಡದೆ, ಸೋಮಾರಿಗಳಾಗಿರ ತಕ್ಕ ನಾರಿಯರು ಈಗ ಅನೇಕರಿದ್ದಾರೆಂದು ಹೇಳಲು ವಿಷಾದವಾಗುತ್ತಿದೆ. ಇದಕ್ಕೆ ಕಾರಣವೇನೆಂದು ಯೋಚಿಸಿದರೆ, ಹೆಂಗಸರಿಗೆ ಶಿಕ್ಷಣೆಯ ಅಭಾವ, ಅತಿಬಾಲ್ಯವಿವಾಹ, (?) ಸ್ತ್ರೀವಿದ್ಯಾಭ್ಯಾಸವು ನಿಷೇಧವೆಂಬ ಅಜ್ಞಾನಗಳೇ ಕಾರಣ ಗಳೆಂದು ತೋರುವುದು. ಮತ್ತು, ಇದರಿಂದ ಅವರಲ್ಲಿ ಚಂಚಲತೆಯುಂಟಾಗುವದೆಂದೂ(?) ನನಗೆ ತಿಳಿಯುತ್ತಿರುವುದು. ನನ್ನ ತಿಳುವಳಿಕೆಯು ಒಂದು ವೇಳೆ ತಪ್ಪಾಗಿದ್ದರೂ ಅಭಿಜ್ಞರು ತಿದ್ದಿಕೊಟ್ಟರೆ ಉಪಕಾರವೆಂದು ಸ್ಮರಿಸುವೆನು.

ಪೂರ್ವದಲ್ಲಿ ನಮ್ಮ ಭರತವರ್ಷದಲ್ಲಿದ್ದ ನಮ್ಮ ಆರ್ಯ ಮಹಿಳೆಯರ ಸ್ಥಿತಿ ಹೇಗಿದ್ದಿತೆಂದೂ ಈಗಿನವರ ಸ್ಥಿತಿಯು ಹೇಗಿರುವದೆಂದೂ ತುಲನಾತ್ಮಕದೃಷ್ಟಿಯಿಂದ ನೋಡಿದರೆ ನಿಜವಾಗಿಯೂ ಕಣ್ಣಿನಲ್ಲಿ ನೀರು ತುಂಬಿಹರಿಯದಿರಲಾರದು! ಸೀತಾ, ದಮಯಂತಿ, ಚಂದ್ರಮತಿ ಸಾವಿತ್ರಿ, ಸುಕನ್ಯಾ ಮೊದಲಾದವರಲ್ಲಿ ಪತಿಭಕ್ತಿಯು ಹೇಗಿತ್ತೆಂಬದರ ವರ್ಣನೆಯನ್ನು ಕೇಳಿದೊಡನೆಯೇ ಆವ ಧೀರನಿಗಾದರೂ "ಝಿಗ್ಗೆ" ನ್ನದಿರದು. ಇಂತಹ ಸ್ತ್ರೀಯರ ಮಹಿಮೆಯು ಈಗಿನವರಲ್ಲಿ ಅಜ್ಞಾತವಾಗಿರುವುದೇಕೆ? ಹೋಗಲಿ, ನಾವು ಹಿಂದಿನ ಪೌರಾಣಿಕ ಕಥೆಗಳನ್ನು ಬಿಟ್ಟು, ಈಚೆಗೆ ಎಂದರೆ ಈಗ ಕೆಲವು ಶತಮಾನಗಳ ಹಿಂದಿನ ಸ್ತ್ರೀಯರ ಮಹತ್ತ್ವನ್ನು ನೋಡಬೇಕೆಂದರೆ, ಅವರು ತಮ್ಮ ಪವಿತ್ರತೆಯು ಕೆಡುವ ಸಮಯ ಬಂದೊಡನೆಯೇ ತಮ್ಮ ಅಸುವನ್ನು ಅಗ್ನಿದೇವನಿಗೆ ಆಹುತಿಯಾಗಿ ಅರ್ಪಿಸುತ್ತಿದ್ದರೆಂಬುದೂ, ತಮ್ಮ ಪತಿಗಳನ್ನು ವಿಪತ್ತುಗಳಿಂದ ರಕ್ಷಿಸಲು ಎಷ್ಟು ಕಷ್ಟಗಳನ್ನು ಸಹಿಸುತ್ತಿದ್ದರೆಂಬುದೂ ನಮಗೆ ಎಷ್ಟು ಅಭಿಮಾನವನ್ನುಂಟುಮಾಡುವುದು! ಇದಕ್ಕೆ ಪದ್ಮಿನಿದೇವಿಯೇ ನಿದರ್ಶನಳಾಗಿರುವಳು. ಈ ದೇವಿಯು ತನ್ನ ಪತಿಯಾದ ಭೀಮಸಿಂಗನನ್ನು ಪಠಾಣರು ಸೆರೆಹಿಡಿದಾಗ ಎಂತಹ ಚಮತ್ಕಾರದಿಂದ ಅತನನ್ನು ಬಿಡಿಸಿಕೊಂಡಳು. ತನ್ನ ಸತೀತ್ವರಕ್ಷಣೆಗೂ ತನ್ನ ದೇಶದ ಪವಿತ್ರತೆಯನ್ನು ಪರಿಪಾಲಿಸುವದಕ್ಕೂ ತನ್ನ ದೇಶದ ವೀರಕ್ಷತ್ರಿಯರ ಉಜ್ವಲದೇಶಭಕ್ತಿ, ಧರ್ಮಶ್ರದ್ಧೆ, ಪರಾಕ್ರಮಗಳು ಪ್ರಕಾಶಕ್ಕೆ ಬರುವಂತೆ ಮಾಡುವದಕ್ಕೂ, ತನ್ನ ಮಾರ್ಗಾನುಸಾರಿಣಿಯರಾಗಿದ್ದ ಸ್ತ್ರೀಯರನ್ನು ಜತೆಗೊಂಡು ಯಜ್ಞೇಶ್ವರನನ್ನೇ ಮರೆಹೊಕ್ಕು 'ಚಿತ್ತೂರಿನ ಜೋಹರು" ಎಂಬುದನ್ನು ಪ್ರಸಿದ್ಧಪಡಿಸುವದರಲ್ಲಿ ಅವಳ ಮನೋಬಲವೆಷ್ಟಿದ್ದಿತು? ಎಂಬಿವನ್ನು ಕುರಿತು ವಿಚಾರ ಮಾಡುತ್ತ ಹೋದರೆ ಆ ನಮ್ಮ ಭಾರತನಾರೀಮಣಿಯರಲ್ಲಿ ನಮಗೆ ಭಕ್ತಿಭಾವವು ಉತ್ಪನ್ನವಾಗುವುದರಲ್ಲಿ ಆಶ್ಚರ್ಯವೇನು?

ಈಗಿನ ಸ್ಥಿತಿಯೋ-ಎಂದರೆ, ಹೇಳುವದೇನು? ಬಹುಶಃ— ಪತಿಯ ಮಾತಿಗೆ ಅಡ್ಡಮಾತೆತ್ತುವದೇ ಇವರ ಪ್ರತಿಷ್ಠೆ, ಪತಿಯನ್ನು ವಂಚಿಸುವದೇ ಆಚಾರ, ಪತಿಯ ಶುಶ್ರೂಷೆಯನ್ನು ಮಾಡುವುದು ಅಗೌರವವೆಂಬ ಹೀನಭಾವನೆಯಿಂದ ಉದಾಸೀನರಾಗಿರುವುದೇ ಈಗಿನ ಪಾತಿವ್ರತ್ಯ—ಇವೇ ಈಗಿನ ಸ್ತ್ರೀಯರ ಧರ್ಮವಾಗಿರಬಹುದೆಂದು ತೋರುತ್ತಿರುವುದು. ಅದು ಹೇಗೂ ಇರಲಿ, ಇಂತಹ ನಾರಿಯರೂ ಹುಟ್ಟಿರಬಹುದು, ಅಥವಾ ಹುಟ್ಟಬಹುದೆಂಬ ಭಾವದಿಂದ ಇಂಥವರ ಉದ್ಧಾರಕ್ಕಾಗಿ ಸ್ವರ್ಗವಾಸಿನೀ ಹೊನ್ನಮ್ಮನು ಹೇಳಿರುವ ನೀತಿವಾಕ್ಯಗಳನ್ನೇ ಮುಂದಿಟ್ಟರೆ ನಮ್ಮ ಕೆಲಸವು ನೆರವೇರಿದಂತಾಯಿತು. —

ಈ ಹೆಸರಿನಿಂದ ಸಾಂಗತ್ಯರೂಪವಾದ ಸರಸ ಕಾವ್ಯವನ್ನು ಬರೆದು ಕನ್ನಡಿಗೆಯರೆಲ್ಲರಿಗೂ ಚಿರಸ್ಮರಣೀಯೆಯಾಗಿರುವ ಸಂಚಿಯ 'ಹೊನ್ನಮ್ಮ'ನ ಚರಿತ್ರದೊಡನೆ ಈ ಹದಿಬದೆಯ ಕಾವ್ಯವನ್ನೂ ಸುಲಭಗ್ರಾಹ್ಯವಾಗುವಂತೆ ಪ್ರಬಂಧರೂಪವಾಗಿ (ವಚನ ಕಾವ್ಯವಾಗಿ) ಮುಂದೆ ಪ್ರಕಟಿಸುವ ಸಂಕಲ್ಪವಿದೆ. ಸದ್ಯದಲ್ಲಿ ಈಕೆಯ ಕಾವ್ಯದಿಂದ ಕೆಲವಂಶಗಳನ್ನು ಉದ್ಧರಿಸಿ ಬರೆದು ಕಳುಹಿರುವ ಈ ವಿದ್ಯಾರ್ಥಿಯ ಲೇಖನಕ್ಕೆ ಸ್ಥಳವನ್ನು ಕೊಡುವುದು ಯೋಗ್ಯವೆಂದು ಕಂಡುದರಿಂದ ಈ ಲೇಖನವನ್ನಿಲ್ಲಿ ಪ್ರಕಟಿಸಲಾಗಿದೆ.

ಸಾಂಗತ್ಯ|| ಪತಿಯೆ ಪರಮಗುರು, ಪತಿಯೇ ದೇವತೆ, ಪತಿಯೇ
ಸದ್ಗತಿಯೆಂದು ।
ಪತಿಯ ಪಾದಾಂಬುಜದೊಳು ಭಕ್ತಿಗೆಯ್ವುದು ಸತಿ—
ಯರ ಧರ್ಮದಸಾರ ||

ಹದಿಬದೆಯರಿಗೆ ಪತಿಯೇ ದೇವರು, ಸದ್ಗತಿಯನ್ನು ಕೊಡುವವನು ಪತಿಯೇ. ಆತನಲ್ಲಿ ಅನವರತವೂ ಅತೀಲಭಕ್ತಿಯನ್ನಿಡುವುದು ಸತಿಯರ ಧರ್ಮದ ತಿರುಳಾಗಿರುವುದು — ಎಂದರೆ, ಪತಿಯನ್ನು ದೈವೀಭಾವನೆಯಿಂದ ಕಾಣಬೇಕೆಂಬಾಯಿತು ಇನ್ನು ಆತನನ್ನು ಆರಾಧಿಸುವ ಕ್ರಮವೇ ಎಂದರೆ,—

"ಹಿತವಿದು ಶಾಸ್ತ್ರವಿಹಿತವಿದು ಮನಕೆ ಸಂ—
ತಸವಿದೆಂದೆಂಬ ಮರ್ಮವನು ।
ಮತಿಯೊಳೆಣಿಸಿ ಮನ ದನ್ನನ ಸೇವೆಗು—
ಚಿತ ವಸ್ತುಗಳನೆ ಚಿಂತಿಪುದು || "

ಪತಿಗೆ ಅವುದು ಹಿತವು, ಅವುದು ಅಹಿತವು ಎಂಬದನ್ನು ತಿಳಿದು, ಆತನಿಗೆ ಸಂತೋಷವಾಗುವದಾವುದೋ ಅದನ್ನರಿತು ಆತನ ಮನಸ್ಸಿಗೊಪ್ಪುವ ವಸ್ತುಗಳನ್ನೊದಗಿಸಿಕೊಟ್ಟು ಸೇವಿಸಬೇಕು ಮತ್ತು—

"ಅತಿಭೀತಿಯೆಂದನುಗೆಟ್ಟು ಹಿಂತೆಗೆಯದೆ
ಮಿತಿಮೀರಿ ಮೇಲುವರಿಯದೆ ||
ಇತರ ಜನರು ತನ್ನನೇಳಿಸಿ ನಗದಂತೆ
ಪತಿಸೇವೆಗೈದು ಬಾಳುವುದು || "

ಪತಿಯು ತನ್ನನ್ನು ಭೀತಿಪಡಿಸಿದರೂ ಅದು ತನ್ನ ಬುದ್ಧಿಗೆಂದು ನೆನಸಿ, ಆತನ ಸೇವೆಗಳನ್ನು ಮಾಡಲು ಹಿಂಜರಿಯಬಾರದು; ಸಲಿಗೆಹೆಚ್ಚೆಂದು ಮೇರೆಮೀರಿ ನಡೆಯಲೂ ಬಾರದು. ಹಾಗೆಯೇ ಪತಿಯು ಹೆದರಿಸಿದನೆಂದು ಕೇಳಿ ಇತರರು ನೋಡಿ ನಗುವಂತೆಮಾಡದೆ ಪತಿಸೇವೆಯನ್ನು ಕ್ರಮವಾಗಿ ನಡೆಯಿಸುತ್ತಿರಬೇಕು. ಇಷ್ಟೇ ಅಲ್ಲ.—

"ಹಿರಿಯರ ಮಗಳೆಂದು, ಹಿಚ್ಚಿಗಳಿವೆನೆಂದು,
ವರರೂಪವತಿ ತಾನೆಂದು ||
ಪರಮಪಾವನೆಯೆಂದು ಬರಿದೆ ಬೆರೆಯದನು—
ಸರಿಸುವದಾತ್ಮವಲ್ಲಭನ || "

ಪತಿಯು ಒಂದುವೇಳೆ ಬಡವನಾಗಿದ್ದರೆ, ಸತಿಯು ತಾನು ಅವನಿದಿರಿನಲ್ಲಿ ದೊಡ್ಡವಳೆಂದು ತೋರಿಸಿಕೊಳ್ಳಬಾರದು. ಅದಲ್ಲದೆ ತಾನು ರೂಪವತಿಯೆಂದೂ ಪಾವನೆಯೆಂದೂ ತೋರಿಸದ ಅನುನಯ (ವಿನೀತಭಾವ) ದಿಂದ ಅವನ ಪರಿಚರ್ಯೆಗಳನ್ನು ಮಾಡಬೇಕು. ಮೇಲೆ ಹೇಳಿದಂತೆ ಆವ ನಾರಿಯರು ತಮ್ಮ ತಮ್ಮ ಇನಿಯರನ್ನು ಸೇವಿಸುವರೋ ಅವರು ನಿಜವಾಗಿಯೂ ಹದಿಬದೆಯರೆನ್ನುವುದಕ್ಕೆ ಸಂದೇಹವಿಲ್ಲ.

ಹದಿಬದೆಯರು ಮಾಡುವ ಕರ್ತವ್ಯಗಳನ್ನು ಕುರಿತು ಒಂದೆರಡು ಮಾತುಗಳಿಂದಲೇ ಇಲ್ಲಿ ಸಂಗ್ರಹವಾಗಿ ನಿವೇದಿಸಲಾಯಿತು. ಅವರ ಕಾರ್ಯಭಾಗಗಳು ಅಪಾರವಾಗಿದ್ದು, ಅವುಗಳ ಫಲಗಳೂ ಅನಂತವಾಗಿರುವವು. ಅವರ ಅಭಿಮತಕ್ಕೆ ಆದಿಮೂಲವಾದ ಪರಬ್ರಹ್ಮನುಕೂಡ ಪ್ರತಿಕೂಲನಾಗಲಾರನೆಂದು ನಮ್ಮ ಶಾಸ್ತ್ರ, ಪುರಾಣ, ಇತಿಹಾಸಗಳು ನಮಗೆ ಹೇಳುತ್ತಿವೆ. ಆದುದರಿಂದ ಅಂತಹ ಅದ್ಭುತ ಮಹಿಮಾನ್ವಿತೆಯರಾದ ಆರ್ಯಮಾತೆಯರನ್ನು ಸ್ಮರಿಸಿ, ಅವರ ಆಶೀರ್ವಾದದಿಂದ ನಮ್ಮ ಈಗಿನ ಸೋದರಿಯರೆಲ್ಲರೂ ಅವರ ಪವಿತ್ರಮಾರ್ಗವನ್ನು ಕಾಪಾಡಿಕೊಂಡು ಬರುವವರಾದಾರೆಂದು ನಿರೀಕ್ಷಿಸುತ್ತ, ಬಾಲಕನ ತೊದಲ್ನುಡಿಗಳಲ್ಲಿ ತಪ್ಪಿರುವುದು ಸಹಜವಾದರೂ ಮಾತೃವಾತ್ಸಲ್ಯದಿಂದ ಕ್ಷಮಿಸಬೇಕೆಂದು ನಾರೀವರ್ಗದ ಮುಂದೆ ನನ್ನೀ ಮಾತೃಭಕ್ತಿಪೂರ್ವಕವಾದ ಪ್ರಾರ್ಥನೆಯನ್ನು ಸಲ್ಲಿಸಿ, ಇಲ್ಲಿಗೆ ವಿರಮಿಸುವೆನು. ಇಂತು—

ಆರ್ಯಮಾತೆಯರ ನಿರಂತರ ವಿಧೇಯನಾದ

ಬಾ ಲ ಕ .

॥ ಶ್ರೀರಾಮಶ್ಶರಣಮ್ ॥

ಅಬಲಾದೌರ್ಜನ್ಯಂ *

"ಶ್ರೀರಂಗೇಶ ಯಯಾ ಕರೋಷಿ ಜಗತಾಂ ಸೃಷ್ಟಿಪ್ರತಿಷ್ಠಾಕ್ಷಯಾ ।
ಯತ್ರಾಮುತ್ರ ಚ ಭೋಗಮೋಕ್ಷಮಖಿಲಂ ಯೋಕ್ಷ್ಯಂತಿ ತತ್ರತ್ಯಕೃಪಾ ॥
ತ್ವತ್ತಸ್ವಾತಂತ್ರ್ಯಮಪಾಸ್ಯ ಕಲ್ಪಿತ ಜಗತ್ಕ್ಷೇಮಾತಿ ಹೃದ್ಯಾಸ್ತತಃ ।
ಕ್ಷಾಂತಿಸ್ತೇ ಕರುಣಾಸಖೀ ವಿಜಯತಾಂ ಕ್ಷೇಮಾಯ ಸರ್ವಾತ್ಮನಾಂ ॥೧॥"

(ಕ್ಷಮಾಪಣೆ)

ಕ್ಷಮಿಯಿರಲಿ, ನನ್ನ ಪ್ರಿಯಭಗಿನಿಯರೇ! ಕ್ಷಮೆಯಿರಲಿ --

"ಅಬಲಾದೌರ್ಜನ್ಯಂ" ಎಂಬ ಹೆಸರನ್ನು ಕೇಳಿದ ಮಾತ್ರದಿಂದಲೇ ಉಗ್ರರೂಪವನ್ನು ತಾಳಿ, ಹಿತೈಷಿಣಿ, ನಂದಿನಿಯರನ್ನು ಒಗೆದೆಸೆದು ಬಿಡಬೇಡಿರಿ, ತಾಯಿಯರೇ! ಕೈಮುಗಿದು ಕೇಳುತ್ತಿರುವೆನು ತಾಳ್ಮೆಯನ್ನು ತೆಗೆದುಕೊಳ್ಳಿರಿ, ಹೆಸರೆತ್ತಿದುದೇ ನಾಕೆಂದು ಮುಳಿದು ಮೂದಲಿಸಬೇಡಿರಿ ಇಷ್ಟು ಮಾತ್ರಕ್ಕೇ ಈ ಬಗೆಯ ದೌರ್ಜನ್ಯಾರೋಪದ ವ್ಯಾಜಾಲಾಪದಿಂದ ಸ್ತ್ರೀಸಮೂಹವನ್ನೇ ತೆಗಳಾಡಿರುವೆನೆಂದು ಅಲ್ಲದ ಸಲ್ಲದ ಭಾವನೆಯನ್ನು ತೆಗೆದುಕೊಂಡು, ಅರ್ಥವಿಲ್ಲದ ಅನರ್ಥ ಕೋಪಕ್ಕೆ ನಿಮ್ಮ ಕೋಮಲ ಹೃದಯವನ್ನು ಮಾತ್ರ ತೆರಬೇಡಿರಿ.

ನನ್ನ ಉದ್ದೇಶವು ಅಷ್ಟು ನಿಂದ್ಯವಾದುದಲ್ಲ; ಸ್ತ್ರೀಜಗತ್ತನ್ನು ನಿಂದಿಸುವುದೇ ನನ್ನ ಉದ್ದೇಶವೆಂದು ನೀವು ಭಾವಿಸುವ ಹಾಗಿಲ್ಲ. ಹಾಗೂ ಒಂದುವೇಳೆ ಭಾವಿಸುವುದಾದರೆ ವಿಚಾರ ಮಾಡಿ ನೋಡಿರಿ! ಸ್ತ್ರೀಯರವರ್ಗದಲ್ಲಿ ನಾನೂ ಒಬ್ಬಳಾಗಿದ್ದು, ಆ ನಮ್ಮ ಸ್ತ್ರೀವರ್ಗವನ್ನು ದೂರಿಗೆಳೆದಾಡುವೆನೆಂದರೆ ನಂಬಬಹುದಾದ ಮಾತೇ? ಅಂತಹ ಸ್ವರೂಪನಾಶನದ, ಆತ್ಮಘಾತದ, ವಿಚಾರದಲ್ಲಿ ಪ್ರವರ್ತಿಸುವುದು ನನ್ನ ಶೀಲವಲ್ಲ. ಆ ಪರಮಪೂಜ್ಯಳಾದ—ಆರ್ಯಮಾತೆಯೇ ನನ್ನ ಪ್ರಿಯಮಾತೆಯೂ ಮತ್ತು ನನ್ನ ಧ್ಯೇಯವಸ್ತುವೂ ಆಗಿರುವಲ್ಲಿ, ಆವಳ ಅಂಶರೂಪಿಣಿಯರಾದ ಮಹಿಳಾವರ್ಗವನ್ನು ದೂರಿದರೆ ಅದು, ನನ್ನ ತಾಯಿಗೂ ಸೇರಿದಂತಾದೀತೆಂದು ತಿಳಿದಿರುವ ನಾನು ನನ್ನ ಭಗಿನಿಯರನ್ನು ದೂರಿಗೆಳೆದು ಅದರಿಂದ ಅವರ ಪ್ರಾಶಸ್ತ್ಯವನ್ನು ಕೆಡಿಸಿ, ಅನರ್ಥವನ್ನುಂಟು ಮಾಡಬೇಕೆಂದು ಮನಸ್ಸಿನಿಂದಾದರೂ ನೆನೆದಿರುವದಿಲ್ಲ.

ಚೆನ್ನಾಗಿ ನಂಬಿರಿ ಹಾಗಿದ್ದರೆ ಆದೇಕೆ ದೌರ್ಜನ್ಯವನ್ನೇ ಹುಡುಕುತ್ತಿರುವುದು? ನಮ್ಮವರಲ್ಲಿ ಸೌಜನ್ಯವೆಳ್ಳಷ್ಟೂ ಇಲ್ಲವೋ?" ಎಂದು ಕೇಳುವಿರೇನು? ಭಗಿನಿಯರೇ! ಅದಕ್ಕೆ ನೀವೇ ಉತ್ತರವಾದಿಗಳಾಗಿರುವಿರೆನ್ನುವೆನು. ನೋಡಿರಿ, ಆವದೇ ಒಂದು ವಸ್ತುವಿಷಯವಾಗಿ, ಒಂದು ವ್ಯಕ್ತಿವಿಷಯವಾಗಿ, ನಾವು ನೋಡ ಹೋದರೂ, ನಮ್ಮದೃಷ್ಟಿಗೆ ಗುಣಭಾಗಗಳು ಹಲವು ತಿಳಿದು ಬಂದು, ಒಂದೆರಡು ದೋಷಗಳು ಕಂಡುಬಂತೆಂದರೂ ಸಾಕು, ನಾವು ಆದರ ದೋಷವನ್ನೇ ಉದ್ಘಾಟನ ಮಾಡುವೆವು ಆದೇಕೆ? ಅದು ಗುಣಸಮೂಹದಿಂದ ಸುತ್ತುವರಿದಿದ್ದರೂ, ಅಲ್ಪಸ್ವಲ್ಪ ದೋಷಗಳಿಂದ ಕೂಡಿ ನಿರ್ದುಷ್ಟವಸ್ತುವೆನಿಸಿ ನಲಿದಾಡದೆಂದಲ್ಲವೇ? ಅದನ್ನು ದೋಷನಿರ್ಮುಕ್ತವಾಗಿ ಮಾಡಲು, ಹಾಗೆ ಉದ್ಘಾಟನ ಮಾಡಲೆಳಸುವೆವು ಹಾಗೆಂದ ಬಳಿಕ ಸಿಟ್ಟೇಕೆ?

ನಮ್ಮ ನಾರೀ-ವರ್ಗದಲ್ಲಿರುವ ಸೌಜನ್ಯರೂಪದ ಕೋಮಲತೆಯು, ಪವಿತ್ರವಾದ ಪ್ರೇಮ, ಪರಾನುಕಂಪನ, ಸೌಶೀಲ್ಯಗಳೇ ಮೊದಲಾದ ಗುಣಗಳನ್ನು ಆಶ್ರಯಿಸಿಯೇ ಸಮಾಜವು ತನ್ನ ಮರ್ಯಾದೆಯನ್ನುಳಿಸಿಕೊಂಡು. ಒಂದಿದೆಯೆಂದ ಮೇಲೆ, ಆ ನಮ್ಮ ಆರ್ಯಮಹಿಳೆಯರ ವಿಷಯದಲ್ಲಿ ನನ್ನ ಭಾವನೆಯು ಆದೆಂತಹ ಉತ್ಕೃಷ್ಟಭಾವದಲ್ಲಿರಬೇಕೋ ನೀವೇ ಯೋಚಿಸಿರಿ

ಓಹೋ! ಇದೇನಿದು? ನನ್ನ ಧರ್ಮಬಾಂಧವರೇ! ಹೀಗೇಕೆ ವ್ಯಂಗ್ಯಭಾವದಿಂದ ನಗುತ್ತಿರುವಿರಿ? 'ಅಬಲಾದೌರ್ಜನ್ಯ,

* ಈ ಪ್ರಬಂಧವನ್ನು ನಂದಿನಿಯ ಸಂಪುಟ ೧ ಸಂಚಿಕೆ ೧೨ರಿಂದ ಕ್ರಮವಾಗಿ ಪ್ರಕಟಿಸಲು ಸಂಕಲ್ಪಿಸಿದ್ದೆವು. ಆದರೆ, ಸ್ಥಳಾವಕಾಶವು ದೊರೆಯದೆ ಈವರೆಗೆ ನಿಲ್ಲಿಸಬೇಕಾಯಿತು ಇನ್ನು ಮುಂದೆ ಕ್ರಮವಾಗಿ ಪ್ರಕಟಿಸುತ್ತ ಬರಬೇಕೆಂದಿರುವೆವು. ಸಂ.--ನಂದಿನಿ.

ವನ್ನು ಹೊರಗೆಡಹುವೆನೆಂದೋ? ತಡೆಯಿರಿ ಒಂದೆರಡುಗಳಿಗೆ ತಡೆದು ಕೇಳಿರಿ. ದೌರ್ಜನ್ಯವೃಕ್ಷಕ್ಕೆ ಅಂಕುರಾರ್ಪಣ ಮಾಡಿದವರು ನೀವಾದುದರಿಂದ, ಅದರ ಬಹುಮಾನದ ಫಲಾನುಭವವು ನಿಮ್ಮನ್ನೇ ಸೇರಲೆಂಬ ಉತ್ತರ ಕೊಡುವದು. ಆದುದರಿಂದ ದುಡುಕದೆ ಮುಂದಕ್ಕೆ ಬಿಡಿರಿ.

ಪ್ರಕೃತದಲ್ಲಿ ನಮ್ಮ ಲೇಖನದ ಗುರಿಯೇನೆಂದರೆ, ನಮ್ಮ ಆರ್ಯಮಹಿಳಾವರ್ಗಕ್ಕೆ ಕೂಡಲೇ - ಸ್ವಾತಂತ್ರ್ಯ ಸನ್ಮಾನವನ್ನು ಪರಾಧೀನಗೊಳಿಸಿ, ಆ ಸ್ಥಾನದಲ್ಲಿ ತಾನೇ ತಾನಾಗಿ ನಿಂತು ಕಾರ್ಯಭಾರವನ್ನು ವಹಿಸಿ ನಡೆಯುತ್ತಿರುವ ಆ ಪ್ರಬಲ ದೌರ್ಜನ್ಯಸಂಬಂಧವಾದ ಅಪವಾದವನ್ನು ಸರ್ವ-ಪ್ರಯತ್ನದಿಂದಲೂ ಬಿಡಿಸಿ, ನಮ್ಮ ನಿರ್ಮಲ ಕೀರ್ತಿಚಂದ್ರಿಕೆಯು ಮತ್ತೆ ನಿಷ್ಕಲಂಕವಾಗಿ ಜಗತ್ತನ್ನೇ ಬೆಳಗುವಂತೆ ಮಾಡಲು ನಮ್ಮ ಮಹಿಳಾಗುಣದ ಸಹಾನುಭೂತಿಯನ್ನು ತೋರುವದೇ ಆಗಿರುವದರಿಂದ ಇದರಲ್ಲಿ ತೋರಿಬರುವ ಸ್ಖಾಲಿತ್ಯಗಳಿಗೆ ರುಷ್ಟರಾಗದೆ, ಸಹನೆಯಿಂದ ಸಮಾಧಾನಚಿತ್ತರು ಓದಬೇಕೆಂದು ಮೊದಲು ಕ್ಷಮೆಯನ್ನು ಕೋರಿ ಮುಂದರಿಯುವೆನು -

[I]

(ದೌರ್ಜನ್ಯಕ್ಕೆ ಮೂಲಕಾರಣಗಳಾದ ಆಲಸ್ಯಾದಿಗಳ ಅಸಂಖ್ಯ ಫಲಗಳು).

*

'ದೌರ್ಜನ್ಯ' ಎಂದರೆ ದುಷ್ಟತನವೆಂದು. (ದಯಾದಾಕ್ಷಿಣ್ಯ ಧರ್ಮಶ್ರದ್ಧೆಗಳಿಲ್ಲದ ಪರುಷವೃತ್ತಿಯೆಂದು ಅಭಿಪ್ರಾಯವು.) 'ಅಬಲಾ ದೌರ್ಜನ್ಯ' ವೆಂದರೆ ಅಬಲೆಯರ ದುಷ್ಟತನವೆಂದಾಗುವದು; ಇದನ್ನೇ ಸ್ತ್ರೀಯರ ಅಧೋಗತಿ ಮತ್ತು ಸಮಾಜದ ಸಂಪದಭಿವೃದ್ಧಿಗಳಿಗೆ ಆತಂಕವನ್ನುಂಟುಮಾಡುವ ದೌರ್ಭಾಗ್ಯವೆಂದೂ ಹೇಳಬಹುದು. ಹೇಗೆ? ಯಾವಯಾವ ಬಗೆಯಿಂದ ಎಲ್ಲೆಲ್ಲಿ, ಎಂದರೆ, -- ವರ್ತಮಾನ ಸ್ಥಿತಿವಿಚಾರದಿಂದ ಅಬಲೆಯರಲ್ಲಿ, ವಿಶೇಷವಾಗಿ ಆಲಸ್ಯ, ಉದಾಸೀನ, ಆತ್ಮಸ್ತುತಿ, ಅಸೂಯೆ, ಆಗ್ರಹ, ಹಟ, ಇತ್ಯಾದಿ ಅವಗುಣಗಳಾದ ಹಲವು ಮಹಾ ಗುಣಗಳು ತುಂಬಿಹೋಗಿರುವವೆಂದೂ, ಎಲ್ಲರಲ್ಲಿ, ಸ್ವಶಂಸೆ, ನಿಷ್ಕರುಣತೆ, ಪರಾನುಸರಣ, ಪರಪೀಡನಾದಿ ಕಾರ್ಯಗಳು ತೋರಿಬರುವದರಿಂದಲೇ ಅವುಗಳೇ ಸ್ತ್ರೀಯರ ದೌರ್ಜನ್ಯಕ್ಕೇ ಕಾರಣವೆಂದೂ, ಇನ್ನೂ ಎಷ್ಟೆಷ್ಟೋ ಬಗೆಯಿಂದ ಸ್ತ್ರೀಯರಲ್ಲಿ, ಇದ್ದುದನ್ನೂ ಇಲ್ಲದುದನ್ನೂ ಸೇರಿಸಿ, ದೌರ್ಜನ್ಯಾಪವಾದದ ದೊಡ್ಡ ಹೊರೆಯನ್ನು ಅವರ ಮೇಲೆ ಹೊರೆಯಿಸಿ ತಾವದನ್ನು ನೋಡಿ ನಲಿಯಬೇಕೆಂದಿರುವ ಮಹನೀಯರು ಬಹುಮಂದಿಯುಂಟೆಂದು ಹೇಳಬಹುದಾಗಿದೆ. ಮಾಡತಕ್ಕುದೇನು?

ಆಲಸ್ಯಾದಿಗಳಲ್ಲಿ ಒಂದೊಂದೇ ಮಾನವರ ಸ್ವರೂಪನಾಶಕ್ಕೆ ಸಾಕಾಗಿರುವವು. ಅಂತಹದರಲ್ಲಿ ಎಲ್ಲವೂ ಒಂದೆಡೆಯಲ್ಲಿಯೇ ಇರುವದೆಂದು ಕಲ್ಪಿಸಿ ಹೇಳುವ ಕರ್ಣಕಠೋರವಾದ, ಹೃದಯವಿದ್ರಾವಕವಾದ, ಮರ್ಮಾಂತಿಕ ಯಾತನೆಯನ್ನುಂಟುಮಾಡುವ ವೃಥಾಪವಾದವನ್ನು ಕೇಳಿಯೂ, ಅದನ್ನು ನಿವಾರಣೆಮಾಡಿಕೊಳ್ಳಲು ಪ್ರಯತ್ನಶೀಲರಾಗದೆ "ಕುಣಿವ ಕಾಲಿಗ ಕೊಣಮಿಣಿ ಗೆಜ್ಜೆ" "ತೂಕಡಿಸುವವರನ್ನು ತಟ್ಟಿ ಮಲಗಿಸಿದಂತೆ"ಎಂಬ ಗಾದೆಗಳಿಗನುಸಾರವಾಗಿ ನಮ್ಮವರು ಇನ್ನೂ ದುರ್ಲಕ್ಷದಿಂದಿರುವುದು, ಸೋಲದೆ ಹೇಳುತ್ತಿರುವ ದೂಷಕರ ನಾಲಿಗೆಗೆ ಸವಿತೋರುವಂತೆಯೇ ಆಗಿದೆಯೆಂದು ತಿಳಿದು ವಿಷಾದಿಸಬೇಕಾಗಿದೆ.

ಹಾಗಿದ್ದರೆ 'ಆಲಸ್ಯವೇ ಆದಿಯಾದ ದುರ್ಗುಣದಿಂದ ಉಂಟಾಗುವ ಫಲವೇನು ?' ಎಂದು ಕೇಳುವಿರಲ್ಲವೇ? ನನ್ನ ಭಗಿನಿಯವರೇ, ಕೇಳಿರಿ —

ಆಲಸ್ಯ — ಆಲಸ್ಯವೆಂಬುವದೇ ಸೋಮಾರಿತನವು ಸೋಮಾರಿತನವೇ ಈಗಿನ ನಮ್ಮವರಲ್ಲಿ ಪ್ರಬಲವಾದ ದೋಷವು. ಈ ದೋಷವೇ ನಮ್ಮ ಇಂದಿನ ವಿಷಮಸ್ಥಿತಿಗೆ ಅಂಕುರಪ್ರಾಯವು. ಇದೇ ನಮ್ಮನ್ನು ಆಕ್ರಮಿಸಿರುವ ಅಪವಾದಕ್ಕೆ ಕಾರಣವು. ಈ ಆಲಸ್ಯವೆಂಬುದು ನಮ್ಮನ್ನು ಸಮೀಪಿಸದಂತೆ ನಾವು ಎಚ್ಚತ್ತಿರಬೇಕು. ಒಂದುವೇಳೆ ತಲೆಹಾಕಿದಕೂಡಲೇ ಅದನ್ನು ಹೊರಡಿಸುವದಕ್ಕಾದರೂ ನಾವು ಮರೆಯದೆ ಸರ್ವಪ್ರಕಾರದಿಂದಲೂ ಪ್ರಯತ್ನಿಸಬೇಕು. ಇಲ್ಲವಾದರೆ ಇದು ನಮ್ಮ ಅಂತರ್ಬಹಿರಿಂದ್ರಿಯಗಳಲ್ಲಿಯೂ ವ್ಯಾಪಿಸಿ, ತನ್ನ ಅದ್ಭುತ ಶಕ್ತಿಯಿಂದ, ಭಯಂಕರವಾದ ಸನ್ನಿಪಾತ ರೋಗದಂತೆ ಪರಿಣಮಿಸುವುದು. ದೌರ್ಭಾಗ್ಯಕ್ಕೆ ತವರ್ಮನೆಯಾದ ಆಲಸ್ಯವಿದ್ದೆಡೆಯಲ್ಲಿ ನಿಂದೆಯೇ ಮೊದಲಾದ ದುರಾಚಾರದ ದುಷ್ಟಕಣಗಳೂ ಹುಟ್ಟುವವು.

ಆಲಸ್ಯವುಂಟಾಯಿತೆಂದರೆ, ಅದರಿಂದ ಉದಾಸೀನ, ಅದರಿಂದ ಅವಿಚಾರ. ಅದರಿಂದ ಅಹಂಕಾರ, ಆಬಳಿಕ ಆತ್ಮಸ್ತುತಿ, ಅದಾದ ಬಳಿಕ ಪರನಿಂದೆ, ಪರನಿಂದೆಯನ್ನೂ ದಾಟಿದರೆ ಅಸೂಯೆ, ಆಗ್ರಹ, ಉನ್ಮಾದ ಇವುಗಳು ಕ್ರಮವಾಗಿ ಒಂದರಿಂದ ಮತ್ತೊಂದು ಹೀಗೆ ಶಾಖೋಪಶಾಖೆಗಳಾಗಿ ಹುಟ್ಟುವವು.

ಹೀಗೆ ಆಲಸ್ಯೋದಾಸೀನಗಳಿಂದುಂಟಾದ ಅವಿಚಾರವು ಧರ್ಮದಲ್ಲಿ ಅಶ್ರದ್ಧೆ, ಗುರುದೈವಗಳಲ್ಲಿ ಅವಿಧೇಯತೆ, ಸ್ವಕರ್ತವ್ಯದಲ್ಲಿ ಪರಾಙ್ಮುಖತೆಗಳನ್ನುಂಟು ಮಾಡಿಬಿಡುವುದು. ಈ ಅವಿಚಾರವೆಂಬುದು ಯುಕ್ತಾಯುಕ್ತ, ಸಾರಾಸಾರ, ನ್ಯಾಯಾನ್ಯಾಯ ವಿಚಾರಜ್ಞಾನವಿಲ್ಲದ ಮೂರ್ಖಭಾ

ವನೆಯೆಂದಾಗುವುದು. ಇದರಿಂದ ಕರ್ತವ್ಯವೇನೆಂದಾಗಲಿ, 'ತಾನಾರು ಹೇಗಾದೆ, ಏಕೆ ಹುಟ್ಟಿದೆ, ಏನು ಮಾಡಬೇಕಾಗಿದೆ' ಎಂಬ ಆತ್ಮಸಮಾಧಾನದ ಮಾತನ್ನಾಗಲಿ, ಗಮನಿಸಲಾರದೆ, ಕೇವಲ ಆಶಾಪೂರಣದಲ್ಲಿ ಮಾತ್ರವೇ ಗುರಿಯಿಟ್ಟು, ನಡೆಯುವಂತೆ ಮಾಡುವುದು. ಈ ಆಶೋತ್ತರವು ಇತಿಕರ್ತವ್ಯದ ಶಿಕ್ಷಣೆಗೊಳಪಡದೆ ಸ್ವೇಚ್ಛೆಯಲ್ಲಿರುವದರಿಂದ ಆವ ವೇಳೆಯಲ್ಲಿ, ಆವ ವಿಷಯಗಳಲ್ಲಿ, ಅವುದರ ಕಡೆಗೆ ಮನಸ್ಸು ಹೋಗುವದೋ ಅದನ್ನು 'ಸಾಧಿಸಬಹುದೇ, ಕೂಡದೇ? ಅದು ನನಗೆ ಪ್ರಾಪ್ತವಸ್ತುವೇ, ದುರ್ಲಭವೇ?' ಎಂಬೀ ಪೂರ್ವಾಪರ ವಿಚಾರದ ಸದಸದ್ವಿವೇಕವನ್ನೇ ಹಾಳುಮಾಡಿ, ಹೇಗಾದರೂ, ಹೇಗಿದ್ದರೂ, ಅದನ್ನು ಸಾಧಿಸಿಯೇ ತೀರಬೇಕೆಂಬ ಹಟಮಾರಿತನವನ್ನುಂಟು ಮಾಡುವದು.

ಈ ಹಟವು ಮನದಲ್ಲಿ ನೆಟ್ಟಿತೆಂದರೆ ಸಾಕು, ಅದರ ಸಾಧನೆಗಾಗಿ ಅಗ್ರಹ ನಿರ್ದಯೆ, ಪರಸ್ವಾಪಹರಣ, ಪರಪೀಡನೆಗಳೇ ಮುಖ್ಯ ಮುಖ್ಯವಾದ ಆಯುಧಗಳಾಗಿ ಪ್ರಯೋಗಿಸಲ್ಪಡುವವು. ಹಾಗಾದ ಬಳಿಕ ಲಜ್ಜೆಯೂ ಸಾಧುಭಾವನೆಯೂ ದೂರವಾಗುವವು ಅವುಗಳಿದ್ದೆಡೆಯಲ್ಲಿ ಅನೃತ, ಕುತಂತ್ರಗಳೂ ಬಂದು ಪ್ರಭುತ್ವವನ್ನು ವಹಿಸುವವು. ಇಂತಹ ಹಟವೆಂಬ ಪ್ರಬಲವಾದ ಬ್ರಹ್ಮದಂಡದಿಂದಲೇ ಅಬಲೆಯರು ಪ್ರಬಲವಾದ ಕಾರ್ಯಗಳನ್ನು ಸಾಧಿಸಬಲ್ಲವರಾಗಿ, ಜಗತ್ತಿಗೆ ಕೆಲವು ವೇಳೆಗಳಲ್ಲಿ ಕೌತುಕವನ್ನೂ, ಮತ್ತೆ ಕೆಲವು ವೇಳೆಗಳಲ್ಲಿ ಭೀತಿ, ಶಂಕೆ,ವಿಷಾದ, ಬೇಸರಗಳನ್ನೂ ಉಂಟು ಮಾಡುತ್ತ 'ಅಬಲಾ' ಎಂಬ ಶಬ್ದಕ್ಕೆ 'ಅತಿಬಲಾ' ಅಥವಾ 'ಬಲಾಪೇಕ್ಷೆಯಿಲ್ಲದವಳು' ಎಂಬ ವಿಪರೀತಾರ್ಥ ಕಲ್ಪನೆಗೂ ಅವಕಾಶವನ್ನು ಕಲ್ಪಿಸಿಕೊಡುತ್ತಿರುವರು.

ಈ ಹಟವೆಂಬುದು ಸ್ತ್ರೀಸಾಮಾನ್ಯದಲ್ಲೆಲ್ಲಾ ತೋರಿಬರುತ್ತಿರುವುದಾದರೂ, ಕೆಲವು ಕಡೆ ಇದು ಸ್ತ್ರೀಯರ ಸದ್ವರ್ತನೆ, ಕರ್ತವ್ಯಸಾರ್ಥಕ್ಯತೆಗಳಿಗೆ ಸಹಕಾರಿಯಾಗಿಯೂ, ಮತ್ತೆ ಕೆಲವು ಕಡೆ, ಅವರ ದುರಾಚಾರದ ಅನರ್ಥವ್ಯಾಪಾರಕ್ಕೆ ಸಹಕಾರಿಯಾಗಿಯೂ ಪರಿಣಮಿಸುತ್ತಿರುವುದು. ಅದುದರಿಂದ, ಈ ಹಟವೆಂಬುದನ್ನು (೧) ವಿಮರ್ಶಾಪೂರ್ವಕವಾದ ಹಟ, (೨) ಅವಿಚಾರದ ಆಶಾಂಧತೆಯ ಹಟವೆಂದು ಎರಡು ಬಗೆಯಾಗಿ ವಿಭಾಗಿಸಬಹುದು ಹೇಗೆಂದರೆ,— ಆರ್ಯಮಹಿಳೆಯರಾದ ನಮ್ಮ ಪ್ರಿಯಭಗಿನಿಯರಲ್ಲಿ ಹಲವರು, ತಮ್ಮ ದೇಹಪೋಷಣೆಯ ವಿಚಾರವಾಗಿ ತೋರುವ ಅನಾದರಣೆಯ ಫಲದಿಂದಲೋ, ಅಥವಾ ವಾಯುಗುಣ, ಕಾಲಗುಣಗಳ ವ್ಯತಿರಿಕ್ತದೋಷದಿಂದಲೋ ಹೇಗೋ, ರೋಗಾದ್ಯುಪದ್ರವಗಳಿಂದ ಅಶಕ್ತೆಯರಾಗಿ ನರಳುತ್ತಿದ್ದರೂ, ತಮ್ಮ ತಮ್ಮ ಗೃಹಕಾರ್ಯಗಳನ್ನು ಹೇಗಾದರೂ ಎಷ್ಟು ಶ್ರಮವಾದರೂ ಸಹಿಸಿಕೊಂಡು, ಹಿಡಿದಕೆಲಸಗಳನ್ನು ಕೊನೆಮುಟ್ಟುವವರೆಗೂ ಮಾಡದೆ ಬಿಡರು. ಇದನ್ನು ಅವರು ಯಾವ ಶಕ್ತಿಪ್ರಭಾವದಿಂದ ಮಾಡುವರೆಂದು ವಿಚಾರಮಾಡುವೆವಾದರೆ, ಅವರ ಪತಿವ್ರತಾಂತಃಕರಣದಲ್ಲಿ ಒಳವಾಗಿ ನಾಟಿರುವ ಹಟದ ಅದ್ಭುತಶಕ್ತಿಯಿಂದಾದುದೆಂದು ಚೆನ್ನಾಗಿ ತಿಳಿದುಬರುವುದು. ಏಕೆಂದರೆ, ವಿಮರ್ಶಾಪೂರ್ವಕವಾಗಿ ಉಂಟಾದ ಈ ಹಟವು "ಈ ಕೆಲಸವು ನನ್ನ ಪಾಲಿಗೆ ಬಂದಿರುವುದು; ಇದನ್ನು ನಾನು ಮಾಡದೆ ಬಿಟ್ಟರೆ ಕರ್ತವ್ಯಕ್ಕೆ ಲೋಪವುಂಟಾಗುವದು, ನನ್ನ ಅಶಕ್ತತೆಗಾಗಿ ಇದನ್ನು ಇತರರ ಪಾಲಿಗೆ ಬಿಟ್ಟರೆ, ನನ್ನ ಸುಖಕ್ಕಾಗಿ ಪರರಿಗೆ ತೊಂದರೆಯನ್ನು ಕೊಟ್ಟ ದೋಷವುಂಟಾಗುವದು; ಅಲ್ಲದೆ ಈ ನನ್ನದಾಗಿರುವ ಕೆಲಸಗಳನ್ನು ಇನ್ನೊಬ್ಬರಿಂದ ಮಾಡಿಸಿದರೆ ನಾನು ಸಾಧಿಸಿದಂತಾಗುವದಿಲ್ಲ. ಆದುದರಿಂದ ಇದನ್ನು ಎಷ್ಟು ಕಷ್ಟಪಟ್ಟಾದರೂ ಮಾಡಿಯೇ ತೀರಬೇಕು" ಹೀಗೆಂಬ ದೃಢಸಂಕಲ್ಪದ ಸ್ವಾಭಿಮಾನವನ್ನುಂಟುಮಾಡುವದು. ಈ ಅಭಿಮಾನವೇ ಕೆಲಸಗಳಲ್ಲಿ ಆಸಕ್ತಿಯನ್ನೂ ಆತುರವನ್ನೂ ಹುಟ್ಟಿಸುವುದು. ಇನ್ನೂ ಹಿಡಿದ ಕೆಲಸವ ಪೂರೈಸುವವರೆಗೆ ದೇಹಾಯಾಸದ ಕಡೆಗಾಗಲಿ, ರೋಗಾದ್ಯುಪದ್ರವಗಳ ಕಡೆಗಾಗಲಿ ಗಮನಿಸದೆ, [illegible] ಚಿತ್ತೈಕಾಗ್ರತೆಯಿಂದ ಉದ್ಯೋಗಿಸುವಂತೆ ಮಾಡುವದು. ಈ ವಿಧವಾದ ವಿಮರ್ಶಾಪೂರ್ವಕ ಹಟವು ಸದ್ವರ್ತನವು ಸುಖಸಮಾಧಾನಗಳಿಗೆ ಆಕರವಾದ [illegible] ಬೆಳೆಸುವುದು. ಆದರೆ, ಈ ವಿಧದ ಚಿತ್ತೈಕಾಗ್ರತೆಗೆ ಅವರು ಬಾಲ್ಯದಿಂದಲೂ ಸುಶಿಕ್ಷಿತೆಯರಾಗಿ ಅಭ್ಯಾಸಬಲದಿಂದಾದ ಸಂಪನ್ನರಾಗಿರಬೇಕು.

ಇನ್ನು ಎರಡನೆಯದಾದ ಅವಿಚಾರದ ಆಶಾಂಧತೆಯ ಹಟದ ಸ್ವರೂಪವೇನೆಂದರೆ ಹೇಳಲಸಾಧ್ಯವು. ಏಕೆಂದರೆ, ಈ ಹಟವು ನಾನಾಬಗೆಯಾಗಿ ರೂಪಾಂತರ ಹೊಂದಿ, ತಮ್ಮ ಗುರಿಗೊಳಪಟ್ಟವಿಷಯಗಳು ಹೇಗೇ ಇರಲಿ, ಎಷ್ಟು ಕ್ಷುದ್ರತನವಾಗಿರಲಿ, ಎಂಥ ಹೇಯ ಅಥವಾ ಅನರ್ಥಕಾರಿಯಾಗಿರಲಿ, ಅದನ್ನು ಸಾಧಿಸಿಯೇ ತೀರಬೇಕೆಂಬುದು ಇದರ ಗುಣವು. ಇಂತಹ ಅವಿಚಾರದ ಹಟವು ಸ್ವರೂಪನಾಶಕ್ಕೇ ಕಾರಣವಾಗುವುದು. ಹೇಗೆಂಬುದನ್ನು ಹಿಂದೆಯೇ ಸಂಕ್ಷೇಪವಾಗಿ ಸೂಚಿಸಿರುವೆವು. ಇನ್ನು ಈ ದುರಾಗ್ರಹದ ಹಟದಿಂದ ಶಾಶ್ವತವಾದ ಅಪಕೀರ್ತಿಗೂ ನಿರಂತರ ಶೋಕಕ್ಕೂ ಕಾರಣರಾದವರಲ್ಲಿ ಒಬ್ಬಿಬ್ಬರ ಉದಾಹರಣೆಯನ್ನು ಕೊಡುವುದು ಇಲ್ಲಿ ಪ್ರಕೃತವಾಗಿದೆ.

೧ ದಶರಥಪತ್ನಿಯಾದ ಕೈಕೇಯೀದೇವಿಯು 'ರಾಮನಿಗೆ ವನವಾಸವೂ, ತನ್ನ ಮಗನಾದ ಭರತನಿಗೆ ಯುವರಾಜ್ಯ

ಪಟ್ಟಾಭಿಷೇಕವೂ" ಆಗಬೇಕೆಂದು ಹಟವನ್ನು ತೊಟ್ಟು, ಆ ತನ್ನ ಉದ್ದೇಶವನ್ನು ಪೂರ್ಣಗೊಳಿಸಿಕೊಂಡಳಾದರೂ ತನ್ನ ಅವಿಚಾರದ ಆಶಾಂಧತೆಗೆ ಫಲವಾಗಿ ಪತಿಯ ತಿರಸ್ಕಾರ, ವೈಧವ್ಯಾನುಭವಗಳಿಗೆ ಪಾತ್ರಳಾದಳಲ್ಲದೆ, ಪುತ್ರನ ಆಗ್ರಹ, ಪುರಜನರ ನಿಂದೆಗಳಿಗೂ ಭಾಜನೆಯಾದಳು.

೨ ರಾಜೇಂದ್ರರಾಯನ ದ್ವಿತೀಯ ಪತ್ನಿಯಾದ ಚಿತ್ರಾಂಗಿಯು, ಸಪತ್ನೀಪುತ್ರನಾದ ಸಾರಂಗಧರನನ್ನು ಮೋಹಿಸಿ, ಅನೇಕ ವಿಧವಾಗಿ ಪ್ರಾರ್ಥಿಸಿದರೂ, ಜಿತೇಂದ್ರಿಯನೂ ಪೂರ್ಣಪ್ರಜ್ಞನೂ ಆದ ಆತನು ನಿರಾಕರಿಸಲು, ಕಡೆಗೆ ಆತನ ಪ್ರಾಣಹರಣದಲ್ಲಿ ನಿಶ್ಚಿತಳಾಗಿ,—ತನ್ನ ಹಟಸಾಧನೆಗಾಗಿ, ಅನೇಕ ಕಪಟ ನಟನೆಗಳನ್ನು ತೋರಿಸಿ, ನಿರ್ದೋಷಿಯಾದ ಮಗನಮೇಲೆ ಅಕ್ರಮಪ್ರವೇಶದ ಆರೋಪವಿಟ್ಟು, ಆತನನ್ನು ಕೊಲ್ಲಿಸಲು ಪ್ರಯತ್ನಿಸಿದಳು. ಆದರೇನು? ಸತ್ಯಕ್ಕೂ ಧರ್ಮಕ್ಕೂ ಜಯವು ಸಿದ್ಧವೆಂಬಂತೆ, ಸತ್ಯಾತ್ಮನಾದ ಸಾರಂಗಧರನು ಸಾಯಲಿಲ್ಲ! ದೈವಾನುಗ್ರಹದಿಂದ ಆಪತ್ತನ್ನು ದಾಟಿ ಅಭ್ಯುದಯವನ್ನು ಹೊಂದಿದನು. ಚಿತ್ರಾಂಗಿಯ ಹಟಕ್ಕೆ ಫಲವೆಂದರೆ, ಪತಿಯ ಆಗ್ರಹಕ್ಕೂ, ಅತ್ಯಂತ ಕ್ರೂರತರದ ಪ್ರಾಣಾಂತಶಿಕ್ಷೆಗೂ ಗುರಿಯಾಗಿ, ನಿರಂತರ ಅಪಕೀರ್ತಿಗೆ ಭಾಜನಳಾದುದೇ. ಹೀಗೆ ಇನ್ನೂ ಎಷ್ಟೋ ಮಂದಿಯು ಹಟದಿಂದ ಕೆಟ್ಟುಹೋಗಿರುವರಾದರೂ, ಲೇಖನವಿಸ್ತಾರಕ್ಕೆ ಭಯಪಟ್ಟು ಅದನ್ನು ಹೇಳಲಾಗದೆ ಇಷ್ಟಕ್ಕೇ ನಿಲ್ಲಿಸಬೇಕಾಗಿದೆ.

ಅಬಲೆಯರ ಈ ವಿಧವಾದ ಅವಿಚಾರಾಂಧತೆಗೆ ಕಾರಣವೆಂದರೆ, ಸುಶಿಕ್ಷಾರಹಿತವಾದ ಅವಿದ್ಯೆಯೇ ಕಾರಣವೆನ್ನಬೇಕಾಗಿದೆ.

[II]

(ಆತ್ಮೋನ್ನತಿ-ಮಾನಸಿಕೋನ್ನತಿಗಳಿಗೆ ಆಧಾರವಾದ ವಿದ್ಯಾಸ್ವರೂಪವನ್ನು ತಿಳಿಯಬೇಕಾದುದರ ಆವಶ್ಯಕತೆ).

ಮಾನವಜನ್ಮಧಾರಣದಲ್ಲಿ ಮುಖ್ಯವಾಗಿರಬೇಕಾದುದೇ ಪ್ರಜ್ಞೆ! ಮನಸ್ಸನ್ನೂ ಇಂದ್ರಿಯಗಳನ್ನೂ ಸ್ವಾಧೀನದಲ್ಲಿಟ್ಟು, ಉಚಿತಾನುಚಿತಗಳನ್ನು ತಿಳಿದು, ಭಗವತ್ಸ್ವರೂಪ ಸಂಬಂಧಗಳ ವಿಚಾರಗಳನ್ನು ಅನುಭವಮಾಡಿಕೊಡಲುಳ್ಳ ಬುದ್ಧಿಶಕ್ತಿಯೇ ಪ್ರಜ್ಞೆಯೆನ್ನಿಸುವುದು. ಇದರ ಪೂರ್ಣ ಪ್ರಕಾಶವೇ ವಿದ್ಯೆಯೆನ್ನಿಸುವುದು.

ಈ ವಿದ್ಯೆಯು, ಕೇವಲ ನೈತಿಕ (ನೀತಿಬೋಧಕ) ಶಿಕ್ಷಾರೂಪದ ಅಭ್ಯಾಸದಿಂದಲೇ ಲಭಿಸಬೇಕಲ್ಲದೆ ಸ್ವೇಚ್ಛೆಯಿಂದ ದೊರೆಯದು. ಪ್ರಜ್ಞೆಯು ಮಾನವರಿಗೆ ಜನ್ಮಸಹಜಗುಣವಾಗಿದ್ದರೂ ಅದು, ಕೇವಲ ಸೂಕ್ಷ್ಮರೀತಿಯಿಂದ ಭೂಮಿಯಲ್ಲಿರುವ ನಿಕ್ಷೇಪದಂತೆ ಅಂತಃಕರಣದಲ್ಲಿ ಅಜ್ಞಾತವಾಗಿರುವುದು. ಇದನ್ನು ಪ್ರಕಾಶಕ್ಕೆ ತರಬೇಕಾದರೆ, ಬೋಧನೆ—ಶಿಕ್ಷಣೆ—ಅಭ್ಯಾಸಗಳ ಸಾಧನಗಳು ಅವಶ್ಯಕವು. ಈ ಸಾಧನಗಳಿಗಾದರೊ ಕೇವಲ ಧರ್ಮಶಾಸ್ತ್ರಗಳೇ ಆಧಾರವು. ಈ ಶಾಸ್ತ್ರಗಳೆಂದರೆ, ನಮ್ಮ ಶಾರೀರಕ ಮತ್ತು ಮಾನಸಿಕರಚನಾ ಪ್ರಮಾಣಗಳಿಗೆ ತಕ್ಕಂತೆ ವರ್ತಿಸಬೇಕಾದ ರೀತಿಗಳನ್ನೂ, ಅವುಗಳು ಕ್ರಮಕ್ರಮವಾಗಿಬೆಳೆದು ಬಲಿಯುವಾಗಿ ಜನ್ಮೋದ್ದೇಶ ಸಾಫಲ್ಯಗೊಳಿಸುವಂತೆ ಮಾಡುವ ಅಭ್ಯಾಸಕ್ರಮಗಳನ್ನೂ, ಸ್ವಾನುಭವಪೂರ್ವಕವಾಗಿಬೋಧಿಸುವ ಮಹನೀಯರ ಆಪ್ತೋಪವಾಕ್ಯಗಳಾಗಿ—ಅಥವಾ—ಶಾಸನಗಳಾಗಿರುವವು. ಈ ವಾಕ್ಯಗಳು ನಮಗೆ ಕಲ್ಪಾಂತದ ವರೆಗೂ ಲಭಿಸುತ್ತಿರಬೇಕಾದುದು ಅವಶ್ಯಕವೆಂಬ ಉದ್ದೇಶದಿಂದ ಆ ಮಹನೀಯರು ತಮ್ಮ ಆಪ್ತೋಪಶಾಸನಗಳನ್ನು ಸ್ವಂತವಾಗಿಯೂ ಶಿಷ್ಯಪ್ರಶಿಷ್ಯರುಗಳಿಂದಲೂ ಲಿಖಿತರೂಪದಲ್ಲಿ ನಮಗಾಗಿ ಅನುಗ್ರಹಿಸಿರುವರು. ಇವನ್ನೇ ಶಾಸ್ತ್ರಗಳೆಂದೂ, ನೀತಿಗಳೆಂದೂ, ಸೂತ್ರಗಳೆಂದೂ ಹೇಳುವರು. ಇವುಗಳ ಅನುಭವವನ್ನು ಪಡೆಯಬೇಕಾದರೆ ನಮಗೆ ಗುರುಜನರ ಸಹಾಯವೂ ಭಾಷಾಭ್ಯಾಸವೂ ಅವಶ್ಯಕವಾಗಿರುವುವು. ಏಕೆಂದರೆ, ಲಿಖಿತರೂಪದಲ್ಲಿರುವುದನ್ನು ಅನುಭವಕ್ಕೆ ತಂದುಕೊಡಲು, ಎಂದರೆ, ಕಾಲ-ದೇಶ-ವರ್ತಮಾನ ಸ್ಥಿತಿಗಳಿಗೆ ಅನುಗುಣವಾಗಿ ತಕ್ಕ ಉದಾಹರಣೆಗಳೊಡನೆ ಅವುಗಳನ್ನು ವಿವರವಾಗಿ ಹೇಳಿ—ತೋರಿಸಿ, ಮತ್ತು ಹೃದಯಂಗಮವಾಗುವಂತೆ ಮಾಡಲು, ಗುರುಜನರ—ಎಂದರೆ ಅನುಭವಶಾಲಿಗಳೂ, ಕ್ಷಮಾಗುಣಸಂಪನ್ನರೂ, ವಿದ್ವಾಂಸರೂ ಆದ ಸಮರ್ಥರ ಆಶ್ರಯವನ್ನು ನಾವು ಮೊದಲು ಸಂಪಾದಿಸಬೇಕು. ಆ ಬಳಿಕ, ಲಿಪಿಗಳಿಗೆ ಮೂಲವಾದ ಅಕ್ಷರಜ್ಞಾನ—ಭಾಷಾಪರಿಶ್ರಮಗಳನ್ನು ಪಡೆಯಬೇಕು. ಒಟ್ಟಿನಲ್ಲಿ, ಮೇಲೆ ಹೇಳಿದ ವಿದ್ಯಾ (ದಿಕ್ಪ್ರಕಾಶತ್ವವನ್ನು ಹೊಂದಿದ ಪ್ರಜ್ಞೆ) ಲಾಭಕ್ಕೆ ಭಾಷಾಭ್ಯಾಸ—ಶಾಸ್ತ್ರಪರಿಜ್ಞಾನವೇ ಮೂಲವೆಂದು ಹೇಳಿದಂತಾಯಿತು. ಇದನ್ನೇ ವಿದ್ಯೆಯೆಂದು ಈಗ ರೂಢಿಯಾಗಿ ಹೇಳುವರು. ಸೂಕ್ಷ್ಮರೀತಿಯಿಂದ ನೋಡಿದರೆ, ನಿಜವಾದ ವಿದ್ಯೆಯೆನ್ನಿಸಬೇಕಾದರೆ, ಸಾರಾಸಾರ ವಿಚಾರಪೂರ್ವಕವಾದಪ್ರಜ್ಞೆಯೇ ಆಗಿರುವುದಲ್ಲದೆ, ಬರಿಯ ವಾಗಾಡಂಬರದ ಭಾಷಾಪ್ರೌಢಿಮೆಯು ವಿದ್ಯೆಯಾಗುವುದಿಲ್ಲ.

ಇರಲಿ, ಮೇಲೆ ಹೇಳಿದಂತೆ ಭಾಷಾಭ್ಯಾಸದಿಂದ ಶಾಸ್ತ್ರಪರಿಜ್ಞಾನವನ್ನು ಸಂಪಾದಿಸಬೇಕೆಂದರೆ, ಮೊದಲು ಸ್ವದೇಶ

ಭಾಷೆ—ಎಂದರೆ—ತಮ್ಮ ಜನ್ಮಧಾರಣವಾದ ಮತ್ತು ತಾವಿರುವ ದೇಶದಲ್ಲಿ ಪ್ರಚುರವಾಗಿರುವ ಭಾಷೆ—ಯನ್ನು ಕಲಿಯಬೇಕಾದುದೇ ಪ್ರಥಮಕಾರ್ಯವು. ಇದನ್ನೇ ಬಾಲ್ಯವಿದ್ಯಾಭ್ಯಾಸವೆಂದು ಹೇಳಬಹುದು. ಈ ಬಾಲ್ಯವಿದ್ಯಾಭ್ಯಾಸವು ಎಂದರೆ, ದೇಶಭಾಷಾಪರಿಜ್ಞಾನವು ತೃಪ್ತಿಕರವಾಗಿ ಅಭ್ಯಾಸ ಮಾಡಲ್ಪಟ್ಟ ಬಳಿಕ ಜ್ಞಾನಾನಂದಪ್ರದವಾದ ಗೀರ್ವಾಣಭಾಷೆಯನ್ನೂ ಮತ್ತು ಇತರ ಪ್ರಾಕೃತಿಕಭಾಷೆಗಳನ್ನೂ ತಮ್ಮ ಅವಕಾಶ-ಅನುಕೂಲಗಳಿಗೆ ತಕ್ಕಂತೆ ಅಭ್ಯಾಸಮಾಡಬಹುದು.

ಈಗ ನಮಗೆಂದರೆ, ದೇಶವು ಕನ್ನಡನಾಡು. ನಮ್ಮ ದೇಶಭಾಷೆ(ನಾಡನುಡಿ)ಯೆಂದರೆ, ಕನ್ನಡವು. ಆದುದರಿಂದ ನಮಗೆ ಈ ಕನ್ನಡನುಡಿಯೇ ತಾಯ್ನುಡಿ ಮಾತೃಭಾಷೆಯೆಂದು ಹೇಳಬಹುದು. ಆದುದರಿಂದ, ನಾವು ಮೊದಲು ನಮ್ಮ ತಾಯನುಡಿಯ ಪರಿಚಯವನ್ನು ಚೆನ್ನಾಗಿ ಪಡೆದು, ಆ ಬಳಿಕ ಅದರ ಸಹಾಯದಿಂದ, ಇತರಭಾಷೆಗಳ ಪರಿಚಯಲಾಭವನ್ನು ಹೊಂದಿ, ತಮ್ಮ ದೇಶದ ಧರ್ಮ-ನೀತಿಗಳನ್ನು ಪ್ರಚುರಗೊಳಿಸಲು ಬೇಕಾದ ಅಂಶಗಳನ್ನು ತಿಳಿದುಕೊಳ್ಳಬೇಕಾದುದು ಪ್ರತಿಕನ್ನಡಿಗನ—ವಿಶೇಷವಾಗಿ-ಕನ್ನಡಿತಿಯರಿಗೂ ಅವಶ್ಯಕವಾಗಿರುವುದು.

ಈ ದೇಶಭಾಷೆಯನ್ನು ಅಲ್ಪವೆಂಬ ಹೀನಭಾವನೆಯಿಂದ ನಿರಾಕರಿಸಿ, ಪರಾನುಕರಣಮಂತ್ರದಿಂದ ಮುಗ್ಧರಾಗಿ ಮಾಡುವ ವಿದೇಶೀಭಾಷೆಯ ಪರಿಶ್ರಮವೇ ಪ್ರೌಢವಿದ್ಯೆಯೆಂದು ಹಿಗ್ಗಿದೆವಾದರೆ, ಪ್ರೌಢವಿದ್ಯೆಯನ್ನು ಕಲಿತವರೆಂಬ ಪ್ರತಿಷ್ಠೆಯನ್ನು ಪಡೆಯಬೇಕೆನ್ನುವ ದುರಭಿಮಾನದ ಹಟವು ನಮ್ಮಲ್ಲಿ ನೆಲೆಗೊಂಡು ಅದರ ಮತ್ತು ತಲೆಗೇರುವುದರಿಂದ, ನಮ್ಮ ದೇಶೀಯರ ಆಚಾರ-ವಿಚಾರಗಳನ್ನೂ, ನಮ್ಮವರ ಕರ್ತವ್ಯ-ಧರ್ಮ-ಧ್ಯೇಯಗಳ ನಿಜಸ್ವರೂಪಗಳನ್ನೂ ತಿಳಿಯಲರಿಯದೆ ಹೋಗಿ, ನಮ್ಮ ಜನ್ಮಸಹಜವಾದ ಪ್ರಜ್ಞೆಯ ಬೆಳವಣಿಗೆಯನ್ನು ನಾವೇ ಮುರಿದವರಾಗುವೆವಾದುದರಿಂದ, ನಮಗೆ ಮೂರ್ಖತೆಯು (ಅವಿದ್ಯೆಯು) ಪ್ರಥಮಸ್ಥಾನವೇ ಲಭಿಸುವುದಲ್ಲದೆ ವಿದ್ಯಾವತಿಯರೆನ್ನಿಸಿಕೊಳ್ಳಲಾರೆವು.

ಮೇಲೆ ಹೇಳಿದ ದುರಭಿಮಾನವು ಎದುವರೆಗೆ ನಮ್ಮಲ್ಲಿ ಇರುವುದೋ ಅದುವರೆಗೂ ಸ್ವಯಂಪ್ರಭುತ್ವಸ್ಥಾಪನೆಯ ದುರಾಶೆಯೂ ಅದನ್ನೇ ಆಶ್ರಯಿಸಿರುವ ಆತ್ಮಸ್ತುತಿ, ಪರನಿಂದೆ, ಪರದೋಷಾನ್ವೇಷಣೆ ಮತ್ತಿತರೆಗಳೂ ನಮ್ಮಲ್ಲಿ ಬೇರುಗೊಂಡಿರುವುವು. ಈ ಕಾರಣದಿಂದಲೇ ಈ ನಮ್ಮ ನಾಡಿನಲ್ಲಿ ನಿಜವಾದ ವಿದ್ಯೆಯು ಪ್ರಸಾರಕ್ಕೆ ಬರಲಾಗದೆ, ಬಯಲಾಡಂಬರದ ವ್ಯಾಪಾರಕ್ಕೇ ನಮ್ಮ ನಾಡು ಹೆಚ್ಚು ಭಾಗವನ್ನು ತೆತ್ತಿರುವುದು.

ಈ ಅವಿದ್ಯೆಯ ಪ್ರಭಾವದಿಂದುಂಟಾಗುವ ಸ್ವಯಂಪ್ರಭುತ್ವಸ್ಥಾಪನೆಯ ಪ್ರತಿಷ್ಠಾಕಾಮನೆಗೆ ಮುಖ್ಯವಾಗಿ ಅಹಂಭಾವವು ಬೇಕು. ಆ ಅಹಂಬುದ್ಧಿತ್ವದಿಂದ "ನಾನೇ ದೊಡ್ಡವನು", "ಎಲ್ಲವೂ ನನ್ನ ಅಧಿಕಾರಕ್ಕೊಳಪಟ್ಟವು", "ಎಲ್ಲಕ್ಕೂ ನಾನೇ ಅಧಿಕಾರಿಯಾಗಿರುವವನು" ಎಂಬೀ ಆಶೋತ್ತರವುಂಟಾಗಿ, ಆ ಆಶಾಪೂರಣಕ್ಕೆಂದು ತಾನು ಮಾಡುವ—ಹೇಳುವ— ತನ್ನ ಕೃತಿಗೆ ಸಂಬಂಧಪಡುವ ಪ್ರತಿಯೊಂದು ಅಂಶಗಳಲ್ಲಿಯೂ ಸ್ತುತಿ, ಪ್ರಾಶಸ್ತ್ಯ-ವಿಧಗಳೂ, ಅವುಗಳ ಸ್ಥಾಪನೆಗಾಗಿ ಪರದೂಷಣೆಯೂ ಅನಾಚಾರಣಗಳಾಗುವುವು. ಹೀಗೆ ಪ್ರಕಾಶಿಸಲ್ಪಡುವ ಪರನಿಂದೆಯಲ್ಲಿ ನಡುವೆ, ತನಗೆ ಪ್ರತಿಕೂಲವಾಗಿ ಹೇಳುವವರ ವಿಚಾರವಾಗಿ ಆಗ್ರಹ, ಅವಮಾನ, ಉದಾಸೀನಗಳೂ ಆ ಬಳಿಕ ಧಿಕ್ಕಾರವೂ ಪ್ರಯೋಗವಾಗುವುವು. ಆ ನಂತರ ಇಚ್ಛಾಪೂರ್ಣತೆಯ ಸಲುವಾಗಿ ಮಾಡಲ್ಪಡುವ ಕಾರ್ಯಕ್ಕೆ ಪ್ರತಿಬಂಧಕರಾದವರಲ್ಲಿ ಮಾತ್ಸರ್ಯವುಂಟಾಗುವುದು. ಈ ಮಾತ್ಸರ್ಯದ ಸ್ವಭಾವವು ಮಹಾಭಯಂಕರವಾದುದು. ಈ ಮಾತ್ಸರ್ಯವು ಪರೋತ್ಕರ್ಷತೆಯನ್ನು ಸಹಿಸುವುದಿಲ್ಲ. ಯಾವಾಗಲೂ ಪರರ ಮೇಲೆ ಕಲಂಕ-ಆರೋಪಗಳನ್ನು ಕಲ್ಪಿಸುವುದೂ, ಉತ್ಕರ್ಷತೆಯುಳ್ಳವರನ್ನು ನೂಕಿ ಪಾತಾಳಕ್ಕೆ ತುಳಿದುಹಾಕಬೇಕೆನ್ನುವುದೂ ಇದರ ಸಹಜಗುಣವು. ಪರಹಿಂಸೆ, ತೇಜೋವಧಗಳಿಗೆ ಇದು ಕನಸಿನಲ್ಲಿ ಕೂಡ ಹಿಂತೆಗೆಯುವಂತೆ ತೋರುವುದಿಲ್ಲ. ಈ ಮಾತ್ಸರ್ಯದ ಆವೇಶದಿಂದ ಹಿಂದೆ ಎಷ್ಟೋ ಮಂದಿ ಸ್ತ್ರೀಪುರುಷರು ನಾನಾವಿಧಗಳಾದ ಲೋಕಕಂಟಕಕಾರ್ಯಗಳನ್ನು ಮಾಡಿ, ತತ್ಫಲಾನುಭವದ ಘೋರನರಕಕ್ಕೆ ಭಾಜನರಾಗಿರುವರು.

ಈ ಮಾತ್ಸರ್ಯವು ಸಾಧಾರಣವಾಗಿ ಹೃದಯದಲ್ಲಿಯೇ ಹುಟ್ಟಿರಬೇಕೆಂದು ಅನುಭವಜ್ಞರಾದ ಪಂಡಿತರು ಹೇಳಿರುವರು. ವಿಚಾರಮಾಡುವೆವಾದರೆ, ಅದು ನಿಜವಾಗಿಯೇ ಕಾಣುವುದು. ಹೇಗೆಂದರೆ, ಒಂದೇ ಗೃಹರಾಜ್ಯದಲ್ಲಿ ಪುರುಷರು ಅನೇಕರಿದ್ದರೂ ಅವರಲ್ಲಿ ಗಲಭೆಯುಂಟಾಗುವುದಿಲ್ಲ. ಅವರೆಲ್ಲರೂ ಪರಸ್ಪರ ಸ್ನೇಹಭಾವದಿಂದಲೇ ಇರುವರು. ಆದರೆ, ಒಂದು ಮನೆಯಲ್ಲಿ ಇಬ್ಬರು ಹೆಂಗಸರಿದ್ದರೂ ಗಲಭೆ ತಪ್ಪಲಾರದು.—ಎಂದರೆ, ಒಬ್ಬರ ಮೇಲೆ ಇನ್ನೊಬ್ಬರ ವಕ್ರದೃಷ್ಟಿಯು ತಪ್ಪುವುದಿಲ್ಲ. ಹೀಗಾಗಲು ಕಾರಣವೇನು?—ಎಂದರೆ, ಹಿಂದೆ ಹೇಳಿದಂತೆ, ಸ್ವಪ್ರತಿಷ್ಠೆ-ಸ್ವಯಂಪ್ರಭುತ್ವಸ್ಥಾಪನೆಯ ದುರಭಿಮಾನವೇ ಕಾರಣವೆನ್ನಬೇಕಾಗುವುದು.

ಈ ಪ್ರಬಲಕಾರಣದಿಂದಲೇ ನಮ್ಮವರಲ್ಲಿ ಆರೂ ತಗ್ಗಿ ನಡೆಯದೆ, ಶಠತೆಯಿಂದ ಒಬ್ಬರಲ್ಲಿನ್ನೊಬ್ಬರು ಹೀನಭಾವನೆ

ಯಿಂದಿರುವರು. ಕೆಲವು ಕಡೆಗಳಲ್ಲಂತೂ ದುರಭಿಮಾನದ ಅತಿರೇಕದಿಂದ ಹುಟ್ಟುವ ಮಾತ್ಸರ್ಯ-ಕ್ರೋಧಗಳ ಆವೇಶಗಳಿಂದ ಬೀಗಿ, ಅವಿಚಾರದ ಮದಾಂಧತೆಯಿಂದ ತಮ್ಮ ವಾಸಸ್ಥಳವನ್ನು ಮಾತ್ರವಲ್ಲದೆ, ನೆರೆಹೊರೆಯವರಲ್ಲಿ ಕೂಡ ಅನರ್ಥಕಾರಿಗಳಾದ ಗೃಹಛಿದ್ರಗಳಿಗೆ ಎಡೆಮಾಡಿ, ಶಾಂತಿ-ಸಂತೋಷಗಳಿಗೆ ನೆಲೆಯಾಗಿರಬೇಕಾದ ಗೃಹರಾಜ್ಯವನ್ನು ಕಲಹ-ಪೀಡಾ-ಹತ್ಯೆಗಳೇ ಮೊದಲಾದವುಗಳಿಗೆ ಗುರಿಯಾಗಿಸಿ, ಸ್ಮಶಾನವನ್ನಾಗಿ ಮಾಡಿ-ಮಾಡುತ್ತಿರುವರೆಂದರೆ ತಪ್ಪಾಗದು. ಇಂತಹ ಭಯಂಕರ ಸ್ಮಶಾನಸದೃಶವಾದ ಕಲಹ ಕಲುಷಿತ ಸಂಸಾರಗಳು ದಿನಂಪ್ರತಿಯೂ ಅನೇಕರ ದೃಷ್ಟಿ ಪಥಕ್ಕೆ ಬೀಳುತ್ತಿರುವದೆಂಬುದು ಎಷ್ಟುಮಾತ್ರಕ್ಕೂ ಅತ್ಯುಕ್ತಿಯಲ್ಲ.

ಆದರೆ, ಮೇಲೆ ಹೇಳಿದ ಅನರ್ಥಕಾರಿಣಿಯರು, ಬಾಲ್ಯದಿಂದಲೂ ಅಶಿಕ್ಷಿತೆಯರಾಗಿ—ಎಂದರೆ, ತಮ್ಮ ಕುಲ-ಮತ-ಸ್ವರೂಪ-ಧರ್ಮಗಳಿಗನುಗುಣವಾದ ನೈತಿಕಶಿಕ್ಷಣೆಗೆ ಒಳಪಡದೆ, ಬಾಲ್ಯದಿಂದ ಸ್ವೇಚ್ಛೆಯಾಗಿ ಬೆಳೆದುದರಿಂದ, ಅವಿವೇಕಾಂಧತೆಯಿಂದ ಉನ್ಮತ್ತೆಯರೆನಿಸಿದವರು ಮಾತ್ರವೇ ಅಲ್ಲದೆ, ಬಾಲ್ಯದಿಂದಲೂ ಗುರುಜನರ ನೈತಿಕ ಮತ್ತು ಉದಾತ್ತವಿಚಾರಗಳಿಂದ ಸುಶಿಕ್ಷಿತೆಯರೂ ಪ್ರಜ್ಞಾವತಿಯರೂ ಆದ ಕುಲವಧೂಮಣಿಯರು, ಮೇಲಿನ ದೌರ್ಜನ್ಯ-ದೌರ್ಭಾಗ್ಯಗಳಿಗೆ ಎಷ್ಟುಮಾತ್ರಕ್ಕೂ ಕಾರಣರಾಗುವವರಾಗಿಲ್ಲ. ಇವರು, ತಮ್ಮ ಕುಲ, ಧರ್ಮ, ಸ್ವರೂಪ, ಕರ್ತವ್ಯ, ಮಾನಧನಗಳನ್ನು ಸ್ವಲ್ಪಮಾತ್ರವೂ ಹಾನಿತಟ್ಟದಂತೆ ಜಾಗ್ರತ-ಸ್ವಪ್ನ ಸುಷುಪ್ತಿಗಳಲ್ಲಿಯೂ ಎಚ್ಚರಿಕೆಯುಳ್ಳವರಾಗಿದ್ದು, ತಮ್ಮ ಸೌಶೀಲ್ಯ-ಗಾಂಭೀರ್ಯ, ಮಾಧುರ್ಯ, ಸತ್ಯಸಂಧತೆ, ವಿವೇಚನೆಗಳೇ ಮೊದಲಾದ ಉತ್ತಮೋತ್ತಮ ಗುಣಗಳಿಂದ ಜಗತ್ಪೂಜಿತರಾಗಿರುವರು. ಮೇಲಿನ ಅನರ್ಥಕಲಹಗಳನ್ನು ಶಮನಗೊಳಿಸುವುದರಲ್ಲಿ ಕೂಡ ಈ ನಮ್ಮ ಆರ್ಯಮಹಿಳಾಮಣಿಯರು ಸಂದರ್ಭಾನುಸಾರ ದಕ್ಷತೆಯನ್ನು ಪ್ರದರ್ಶಿಸುತ್ತಿರುವರು. ಇಂತಹ ಸಾಧ್ವೀಮಣಿಯರೇ ನಮ್ಮ ದೇಶಕ್ಕೆ ಅಲಂಕಾರಸ್ವರೂಪರು. ಇವರೇ ನಮ್ಮ ದೇಶದ ಸಂಪದ-ವೈಭವಗಳ ಉನ್ನತಿಗೆ ಆಧಾರಪಾತ್ರರು. ಇವರೇ ನಿಜವಾದ ನಾರೀಶಬ್ದಧಾರಣಕ್ಕೆ ಅರ್ಹರಾದವರು! ಇಂತಹ ಸಾರ್ಥಕ್ಯನಾಮಸಂಶೋಭಿತೆಯರಾಗಿ ಜಗತ್ಕಲ್ಯಾಣಕರ್ತ್ರಿಯರಾಗಿರುವ ನಾರೀಮಣಿಯರೆಲ್ಲರಿಗೂ ನಮ್ಮ ನಿರಂತರ ಕೃತಜ್ಞತಾಪೂರ್ವಕವಾದ ಧನ್ಯವಾದಗಳು.

ಅವಿವೇಕದಿಂದ ಮದಿಸಿದ ಹೆಂಗಸರಲ್ಲಿ, ಲಜ್ಜಾ, ಮಾನ, ಭಯ, ವಿನಯಗಳಲ್ಲಿ ಒಂದೂ ಇರುವುದಿಲ್ಲ. ಸ್ತ್ರೀಜಾತಿಗೆ ಆವುದು ಮುಖ್ಯ ಆಧಾರವೋ, ಆವುದು ಪರದೈವಸ್ವರೂಪವೋ, ಅಂತಹ ಪತಿಯವಿಷಯದಲ್ಲಿ ಕೂಡ ಮೇಲಿನ ಮದೋನ್ಮತ್ತತೆಯು, ಹೀನ ಮತ್ತು ಉದಾಸೀನ ಭಾವನೆಗಳನ್ನೇ ಹುಟ್ಟಿಸುವುದರಿಂದ ಪತಿಯ ಸಹಚರ್ಯೆಯಲ್ಲಿಯಾಗಲಿ, ಮರ್ಯಾದಾ ವಿಷಯದಲ್ಲಿಯಾಗಲಿ ಪರಾಙ್ಮುಖಿಯರನ್ನಾಗಿಯೇ ಮಾಡುವುದು. ಇವರು ಮನಃಪೂರ್ವಕವಾಗಿಯೇ ಹೀಗೆ ನಡೆಯುವರೆಂದು ನಾವು ಹೇಳಲಾರೆವಾದರೂ ಉಚಿತಾನುಚಿತ ಪ್ರಜ್ಞೆಯನ್ನು ಕಳೆದುಕೊಂಡು ಇಂದ್ರಿಯಗಳ ವೇಗಕ್ಕೆ ವಶೀಭೂತರಾಗಿ ಹೀಗೆ ನಡೆಯುವರೆಂದು ಹೇಳದಿರಲಾರೆವು.

ಏಕೆಂದರೆ, ಮನಸ್ಸು ಇಂದ್ರಿಯಗಳೆಂಬ ಅಶ್ವಗಳಿಂದ ಸಜ್ಜೀಕೃತವಾಗಿರುವ ಒಂದು ರಥವಾಗಿರುವುದು ಈ ರಥವನ್ನೂ ಅಶ್ವಗಳನ್ನೂ ನಡೆಯಿಸುವಾತನೇ "ಬುದ್ಧಿ"ಯೆಂಬ ಸೂತನು. ಈ ಸೂತನ ವಿಚಾರಣೆಗೆ ಒಳಪಟ್ಟಿರಬೇಕಾದುದೇ ರಥ ಮತ್ತು ಇಂದ್ರಿಯಗಳಿಗೆ ಶ್ರೇಯಸ್ಕರವೂ ಆವಶ್ಯಕವೂ ಆದ ಕರ್ತವ್ಯವು. ಈ ಸೂತನಿಗೂ ರಥ-ಅಶ್ವಗಳಿಗೂ ಅಧಿಕಾರಿಯಾದವನೇ ಸದಸದ್ವಿವೇಕಸಂಪನ್ನನಾದ ಜ್ಞಾನದೇವನು. ಈ ರಥಿಕನಿಲ್ಲದಿದ್ದರೆ ಸೂತನು ರಥವನ್ನು ಎಲ್ಲಿಗೆ ನಡೆಯಿಸಬೇಕು? ಎಲ್ಲಿ ಹೋಗಬೇಕು? ರಥವನ್ನು ನಡೆಯಿಸುವ ಉದ್ದೇಶ ಮತ್ತು ಪ್ರಯೋಜನಗಳೇನು?—ಎಂಬಿವನ್ನು ತಿಳಿಯಲಸಮರ್ಥನಾಗಿ ಜಡಭಾವವನ್ನು ಹೊಂದುವನು. ಆದುದರಿಂದಲೇ "ಬುದ್ಧಿ" ಯೆಂಬ ಸೂತನಿಗೆ "ಜ್ಞಾನ" ವೆಂಬ ರಥಿಕನ ಆಶ್ರಯವಿರಬೇಕಾಯಿತು. ಈ ಸೂತನು ಈ ರಥಿಕನ ಆಶ್ರಯದಿಂದ ಉತ್ಸಾಹಿತನಾಗಿ ಯಜಮಾನನ ಆಜ್ಞಾಬಲದಿಂದ ರಥ ಮತ್ತು ತುರಗಗಳ ಸ್ವಾಮಿತ್ವವನ್ನು ತನ್ನ ಅಧೀನಮಾಡಿಕೊಂಡನಾದರೆ, ನಿರ್ದಿಷ್ಟ ಸ್ಥಾನವನ್ನು ಸುಖರೂಪದಿಂದ ಹೊಂದಬಹುದು. ಹಾಗಿಲ್ಲದೆ ರಥಿಕನು ದುರ್ಬಲನಾಗಿ ಆಳಿದರೆ, ಸಾರಥಿಯು ಬಲಿಷ್ಠನಾಗಿದ್ದು ಕೂಡ ಸುಖಿಯಾಗಲಾರನು, ರಥಿಕನು ನಷ್ಟನಾದುದನ್ನು ನೋಡಿ, ದುರ್ವಿಷಯಗಳೆಂಬ ಶತ್ರುಗಳು ಸಾರಥಿಯನ್ನೂ ನಾಶಗೊಳಿಸಿಬಿಡುವವು ಹಾಗೆ ಸೂತನೂ ನಾಶವಾದ ಬಳಿಕ ಸ್ವೇಚ್ಛೆಯಾಗಿ ತಿರುಗುವ ಅಶ್ವಗಳು ಹಳ್ಳಕೊಳ್ಳಗಳೆನ್ನದೆ, ಏರುತಿಟ್ಟುಗಳೆನ್ನದೆ, ಗುಡ್ಡ-ಕಾಡುಗಳೆನ್ನದೆ ಕಂಡಕಂಡಲ್ಲಿಗೆಲ್ಲಾ ಈ ರಥವನ್ನು ಎಳೆದೊಯ್ಯುತ್ತ, ತಮ್ಮ ವೇಗಕ್ಕೆ ರಥವು ಸಿಕ್ಕಿ ನುಚ್ಚುನೂರಾಗಿಹೋಗುವಂತೆಮಾಡಿ ಕಡೆಗೆ ತಾವೂ ಅನೇಕ ಉಪಹತಿಗೆ ಸಿಕ್ಕಿ ನಾಶವಾಗುವುವು. ಎಂದರೆ, ಇಲ್ಲಿ ನಾವು ತಿಳಿಯಬೇಕಾದ ವಿಚಾರವಿಷ್ಟು;—ಕರ್ಮೇಂದ್ರಿಯಗಳೆಂಬ ಅಶ್ವಗಳಿಂದ ಸಜ್ಜೀಕೃತವಾದ ಮನ

ಸ್ನೆಂಬ ರಥವನ್ನು, ಸೂತಕಾರ್ಯಕುಶಲನಾದ ಬುದ್ಧಿಯು ಸಾರಥ್ಯಕ್ಕೊಳಪಡಿಸಿ ಆಮೂಲಕ ಸದಸದ್ವಿವೇಕಜ್ಞಾನವನ್ನು ಹೊಂದುವದೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ದೈವನಿಯಾಮಕವಾಗಿರುವುದು. ಹಾಗೆ ಮಾಡುವ ಮಹನೀಯರೇ ಪಂಡಿತರು ಅಥವಾ ವಿದ್ವಾಂಸರು ಇಂತಹ ಆತ್ಮವಿಚಾರಪರರಲ್ಲಿಯೇ ನಿರ್ಮಲವಾದ ಆನಂದವು ನೆಲೆಗೊಂಡಿರುವುದು ಈ ಆನಂದಕ್ಕೆ ಸ್ತ್ರೀಪುರುಷರೆಲ್ಲರೂ ಅಧಿಕಾರಿಗಳು !

ಸದ್ಯಸ್ಥಿತಿಯಲ್ಲಿ ಈ ಆನಂದವು ನಮ್ಮ ಮಹಿಳೆಯರಲ್ಲಿ ಬಹುಮಂದಿಗಳ ಪಾಲಿಗೆ ಸ್ವಪ್ನೇಪಿ ದುರ್ಲಭವಾಗಿರುವುದು. ಅವರು, ಆಲಸ್ಯಾದಿ ದುಷ್ಟರೋಗಗಳಿಗೆ ಎಡೆಗೊಟ್ಟು, ಅಮೋಘವಾದ ತಮ್ಮ ಕಾಲಧನವೆಲ್ಲವನ್ನೂ ಲೀಲಾವಿನೋದಾದಿ ಕೇವಲ ಕ್ಷುಲ್ಲಕವ್ಯಾಪಾರದಲ್ಲಿಯೇ ಕಳೆದುಕೊಳ್ಳುತ್ತ ತಮ್ಮ ಮನಶ್ಶಾಂತಿಗೆ ಭಂಗತಂದುಕೊಳ್ಳುವುದಲ್ಲದೆ, ದೇಶಕ್ಕೂ, ದೇಶೋದ್ಧಾರಕವ್ರತದಲ್ಲಿ ಬದ್ಧದೀಕ್ಷರಾಗಿರುವ ಮಹನೀಯರ ಉತ್ಸಾಹಕ್ಕೂ ಹಲವು ವಿಧದ ವಿಘ್ನಗಳನ್ನುಂಟುಮಾಡುತ್ತಿರುವರೆಂದರೆ, ಎಷ್ಟು ಸಂಕಟವಾಗಬಹುದೋ ವಿಚಾರಪರರಾದ ನಮ್ಮ ಸೋದರಿಯರೇ ವಿಮರ್ಶಿಸಬೇಕು.

ಇವರು ಈ ಬಗೆಯ ವ್ಯರ್ಥಾಲಾಪದಲ್ಲಿಯೇ ಎಂದರೆ, ಆವ ಕೆಲಸಕ್ಕೂ ಬಾರದೆ, ಬರಿಯ ಮನೋವಿಕಲ್ಪಕ್ಕೆಮಾತ್ರ ಕಾರಣಗಳಾಗುವ,—ಕಾಡುಹರಟೆಗಳಲ್ಲಿಯೇ ಮನಸ್ಸಿಟ್ಟು, “ಹಾಡಿಗಿಂತಲೂ ಹರಟೆಲೇಸು” ಎಂಬ ಗಾದೆಯನ್ನು ಹೇಳುತ್ತ, ಈ ಹರಟೆಯಲ್ಲಿಯೇ ಒಬ್ಬರನ್ನು ಇನ್ನೊಬ್ಬರು ಸೋಲಿಸಬೇಕೆಂಬ ಹುರುಡುಳ್ಳವರಾಗಿರುವರು. ಇವರಿಗೆ ಅದರಿಂದುಂಟಾಗುವ ಕಷ್ಟ--ನಷ್ಟ—ನಿಷ್ಠುರಗಳಾವವೆಂಬುದನ್ನು ತಿಳಿಯುವಷ್ಟು ವಿವೇಚನೆಯಿರುವುದಿಲ್ಲ ಕಷ್ಟಬಂದು ಸಂಕಟಪಡುವ ಕಾಲದಲ್ಲಿಕೂಡ ಕಂಡಕಂಡವರ ಮೇಲೆ ತಪ್ಪುಗಳನ್ನು ಹೊರಿಸುವುದು, ತಮ್ಮ ಅದೃಷ್ಟವೇ ಸರಿಯಾಗಿಲ್ಲವೆಂದೂ ನಿರ್ಭಾಗ್ಯರಾದ ತಮಗೆ ದೈವವೂ ನಿಷ್ಠುರನಾಗಿ ತಿರುಗಿದನೆಂದೂ ತಮ್ಮನ್ನೂ ದೈವವನ್ನೂ ಕೂಡಿಸಿ ಬಯ್ಯುವುದು— ಇಷ್ಟು ಮಾತ್ರವೇ ಗೊತ್ತಾಗುವುದಲ್ಲದೆ, ತಮ್ಮ ಕರ್ಮಕ್ಕೆ ಇದು ತಪ್ಪದ ಫಲಾನುಭವವೆಂದು ತೋರುವುದು ದುರ್ಘಟವು ಇದಕ್ಕೆ ದೃಷ್ಟಾಂತಗಳನ್ನು ಕೇಳುವವರು ಬಹುದೂರ ಹೋಗಬೇಕಾಗಿಲ್ಲ. ಸಾಧಾರಣವಾಗಿ ಇಂತಹ ಹರಟೆಮಲ್ಲಿಯರ ಗುಂಪು ಅನೇಕರ ಮನೆಬಾಗಿಲ ಮುಂದೆಯೇ ಸೇರುತ್ತಿರುವುದನ್ನು ನಮ್ಮ ವಾಚಕರಲ್ಲಿ ಅನೇಕರು ನೋಡಿರಬಹುದು(ಒಂದೆರಡುವೇಳೆ ತಾವೂ ಸೇರಿದ್ದರೂ ಇರಬಹುದು)· ಹೀಗೆ ಸೇರುವ ಸಂಘದಲ್ಲಿ ಅವರು ಚರ್ಚಿಸುವ ವಿಷಯಗಳೇನೆಂಬುದುಕೂಡ ತಿಳಿದ ವಿಚಾರವೇ ಆಗಿರುವುದು. ಸಾಮಾನ್ಯವಾದ ಹಳ್ಳಿಗ್ರಾಮಗಳಲ್ಲಿ ಶ್ರೀಮದ್ಗಂಭೀರಸಂಪನ್ನರಾದ ಪುರುಷಬಂಧುಗಳುಕೂಡ ಈ ಮಹಿಳಾಮಂಡಲಿಗೆ ಉಪಶಾಖೆಯನ್ನೇರ್ಪಡಿಸಿಕೊಂಡು ಮೇಲಿನ ಸ್ತ್ರೀಸಂಘದಲ್ಲಿ ನಡೆಯುವ ವಿಚಾರಗಳ ವಿಮರ್ಶೆಯನ್ನು ಮಾಡುವುದು, ವಿಶೇಷವಾಗಿ ನೆತ್ತ, ನೃತ್ಯ, ಗೀತ, ದ್ಯೂತ ಪ್ರಸಂಗ(?)ಗಳೇ ಮೊದಲಾದ ಮಹಾಕಾರ್ಯಗಳನ್ನು ನಡೆಯಿಸುವುದನ್ನು ಕೂಡ ಅನೇಕತಡವೆ ನಾವು ನೋಡಿ—ನೋಡಬಹುದಾಗಿದೆ. ಇಲ್ಲಿ ನಮಗೆ ಪುರುಷರ ವಿಚಾರವು ಅಷ್ಟು ಅಗತ್ಯವಾಗಿಲ್ಲ. ಮೊದಲು ನಮಗೆ ಬೇಕಾದುದು ನಮ್ಮ ಸ್ತ್ರೀಯರನ್ನು ನುಂಗುತ್ತಿರುವ ದೌರ್ಜನ್ಯವನ್ನು ಹೊರದೂಡುವುದು ಮಾತ್ರವೇ ನಮ್ಮ ಗುರಿಯಾಗಿರುವುದರಿಂದ ಮೊದಲು ಈ ಸ್ತ್ರೀಸಮಾಜದ ವಿಚಾರವನ್ನೇ ಪ್ರಸ್ತಾಪಿಸುವೆವು.

ಕುತ್ಸಿತಪ್ರಸಂಗಪ್ರಿಯರಾದ ಮೇಲಿನ ಸಂಘದ ಯುವತಿಯರು, ಮೊದಲು ಪ್ರಸ್ತಾಪಿಸುವ ವಿಷಯಗಳೆಂದರೆ, ಬಹುವಾಗಿ ಜನರ ರೂಪ, ವಯಸ್ಸು, ಸುಕುಮಾರತೆಗಳು,— ಆ ಬಳಿಕ, ಅವರ ಆಕಾರ-ವಿಕಾರ, ಆಚಾರ-ವ್ಯವಹಾರಗಳು.— ಇವುಗಳಿಗೆ ಸಂಬಂಧಪಟ್ಟ ವಿಚಾರವು. ಈಗ ನಾವು ಆವ ವಸ್ತುವಿನಲ್ಲಿಯಾಗಲಿ ದೋಷಗಳನ್ನೇ ಹುಡುಕುತ್ತ ಹೋದರೆ, ಅಪ್ಪುದಾದರೂ ದೋಷವು ನಮಗೆ ಸಿಕ್ಕಿಯೇ ಸಿಕ್ಕುವುದು. ಒಂದು ವೇಳೆ ಸಿಕ್ಕಲಿಲ್ಲವೆಂದರೂ ಉದ್ದೇಶಸಾಫಲ್ಯಕ್ಕಾಗಿ ಪ್ರಯತ್ನಪಟ್ಟಾದರೂ ಇಲ್ಲದ-ಸಲ್ಲದ ಸುಳ್ಳನ್ನು ಕಲ್ಪಿಸಿ ಹೇಳುವುದು ಸ್ವಪ್ರತಿಷ್ಠಾಕಾಮಿಗಳ ಸ್ವಭಾವವಾಗಿರುವುದು ಹೀಗಿರುವುದರಿಂದ. ಇಂತಹ ಪ್ರತಿಷ್ಠಾಕಾಮಿಗಳ ಮಾತ್ಸರ್ಯ-ಕ್ರೋಧಗಳಿಗೆ ಗುರಿಯಾಗುವ ನಮ್ಮ ಇತರ ಸೋದರೀಮಣಿಯರು ನಿರ್ದೋಷಿಗಳಾಗಿದ್ದು, ತಮ್ಮ ಕರ್ತವ್ಯ-ಧರ್ಮ, ಮಾನ-ಕೀರ್ತಿಗಳಿಗೆ ಕುಂದಕವನ್ನುಂಟುಮಾಡುವ ಇಂತಹ ಅಧಿಕಪ್ರಸಂಗದಲ್ಲಿ ಸೇರದಿರುವುದೊಂದೇ ದೋಷ—ಅಥವಾ—ಮಹಾಪರಾಧಕ್ಕಾಗಿ ಮೇಲ್ಕಂಡವರ ಆಗ್ರಹರೂಪದಿಂದ ಹುಟ್ಟಿದ ಮಿಥ್ಯಾಪವಾದಾಗ್ನಿಗೆ ಸಿಕ್ಕಿ ಕಂದಿಕುಂದಿ ಹೋಗುತ್ತಿರುವ ವಿಚಾರವು ಎಷ್ಟುಮಟ್ಟಿಗೆ ಸಮಾಧಾನಕರವಾಗಿರುವುದೊ, ಕೋಮಲಹೃದಯೆಯರೆನಿಸಿದ ಮಹಿಳೆಯರ ಹೆಂಗರುಳೇ ಊಹಿಸಿ ತಿಳಿದು ತಕ್ಕ ಪ್ರತೀಕಾರೋಪಾಯವನ್ನು ಚಿಂತಿಸಲಿ!

[III]

ಪ್ರತಿಷ್ಠಾಕಾಮಿಗಳಿಗೆ ಸ್ವಜನರಲ್ಲಿ ಉಂಟಾಗುವ ಈರ್ಷ್ಯಾಸೂಯೆಗಳೂ ಮತ್ತು ಅವುಗಳ ಪರಿಣಾಮಗಳೂ.

ಹಿಂದೆ ಹೇಳಿದಂತೆ ಪ್ರತಿಷ್ಠಾಕಾಮಿಗಳಾಗಿರುವ ಅಂಗನೆಯರಿಗೆ, ತಮ್ಮ ಸ್ವಪ್ರತಿಷ್ಠಾಸಾಧನೆಗೆ ಆತಂಕವನ್ನುಂಟು ಮಾಡುವರೆಂಬ ದುರ್ಭಾವನೆಯು ಮೊದಲು ಸ್ವಜನರಲ್ಲಿ ಉಂಟಾಗುವುದು. ಇದೇ ಬರಬರುತ್ತ ಈರ್ಷ್ಯೆ-ಅಸೂಯಾ ದ್ವೇಷರೂಪಗಳನ್ನು ಹೊಂದಿ, ಈ ಮೂರೂ ಗುಣಗಳ ಸಮಾವೇಶದಿಂದ ಕೂಡಿದ ಮಹತ್ತರವಾದ ಮಾತ್ಸರ್ಯದ ರೂಪಕ್ಕೆ ಬರುವುದು. ಈ ಮಾತ್ಸರ್ಯದ ಮಹಿಮೆಯು ಹಿಂದೆ ಸಂಗ್ರಹವಾಗಿ ಹೇಳಲ್ಪಟ್ಟಿರುವುದಷ್ಟೆ. ಇರಲಿ; ಮೊದಲು ಸ್ವಜನರಲ್ಲಿ ಅಸೂಯಾದಿಗಳುಂಟಾಗುವ ಬಗೆ ಹೇಗೆಂಬುದನ್ನು ಮೊದಲು ಉದಾಹರಣೆಯೊಡನೆ ಮುಂದಿಟ್ಟು, ಆಬಳಿಕ ಮುಂದಕ್ಕಡಿಯಿಡುವ —

ಈಗ, ಒಂದು ಮನೆಯಲ್ಲಿ ನಾಲ್ಕಾರುಮಂದಿ ಗಂಡಸರೂ ಎಂಟು-ಹತ್ತುಮಂದಿ ಹೆಂಗಸರೂ ಇರಬಹುದು. ಆದರೆ, ಇವರೆಲ್ಲರ ಚಿತ್ತವೃತ್ತಿಯೂ ಒಂದೇ ವಿಧವಾಗಿರಲಾರದು. ಎಂದರೆ, ಕೆಲವರು ವಿದ್ಯಾಭ್ಯಾಸವನ್ನು ದ್ವೇಷಿಸುವರು; ಮತ್ತೆ ಕೆಲವರು ವಿದ್ಯಾಭ್ಯಾಸವನ್ನು ಆಶಿಸುವರು; ಇನ್ನು ಕೆಲವರು ತಟಸ್ಥವೃತ್ತಿಯಲ್ಲಿರುವರು; ಮತ್ತೆ ಒಬ್ಬಿಬ್ಬರು ಕೆಲಸಗಳಲ್ಲಿಯೇ ಆಸಕ್ತರು; ಉಳಿದವರು ಕೇವಲ ಅಧಿಕಪ್ರಸಂಗದ ಕಾಲಹರಣದಲ್ಲಿಯೇ ತತ್ಪರರಾಗಿರುವುದರಿಂದ ಇವರೆಲ್ಲರ ಅಭಿಮತಗಳು ಐಕ್ಯವಾಗಿರುವುದೆಂತು? ಐಕ್ಯವಿಲ್ಲದ ಮೇಲೆ ಸಾಮರಸ್ಯ— ಅಥವಾ— ಸಮಾಧಾನದ ಮಾತೆಲ್ಲಿ?—ಎರಡೂ ಇಲ್ಲವಾಯಿತಷ್ಟೆ!

ಇಲ್ಲಿ ಪ್ರಸಂಗಪ್ರಿಯರಾದ ಮಹಿಳೆಯರಲ್ಲಿ ಬಹುಶಃ ಸ್ವಪ್ರತಿಷ್ಠೆ-ಸ್ವಯಂಪ್ರಭುತ್ವಗಳ ಗರ್ವವೇ ತುಂಬಿರುವುದರಿಂದ, ಅವರು ಮತ್ತಾವ ಕಾರ್ಯಕಲಾಪಗಳಲ್ಲಿಯಾಗಲಿ ಅಷ್ಟು ಗಮನವಿರಿಸುವಂತಿಲ್ಲ. ಅವರು ಸಮಯಸಿಕ್ಕಿದಾಗಲೆಲ್ಲ ಆತ್ಮಪ್ರಶಂಸಾಪೂರ್ವಕವಾಗಿ ಹರಟೆಯಲ್ಲಿಯೇ ಕಾಲ ಕಳೆಯಬೇಕೆಂದಿರುವುದರಿಂದ, ತಮ್ಮನ್ನು ಗೃಹಕಾರ್ಯಗಳಲ್ಲಿ ನಿಯೋಜಿಸುವವರಲ್ಲಿಯಾಗಲಿ, ಇಲ್ಲವೆ, ಇಂತಹ ಕಾಡುಹರಟೆಯು ಕೂಡದೆಂದು ನಿಷೇಧಿಸುವವರಲ್ಲಿಯಾಗಲಿ, ಮತ್ತೆ ಪ್ರಾಪಂಚಿಕ-ಪಾರಮಾರ್ಥಿಕ ತತ್ವಗಳನ್ನು ತಿಳಿದು, ಸಾಧ್ಯವಾದಷ್ಟುಮಟ್ಟಿಗೂ ಸ್ತ್ರೀಜನ್ಮಧಾರಣೆಯು ಸಾರ್ಥಕ್ಯತೆಯಾಗಲು, ಸ್ತ್ರೀಯರ ಪಾಲಿಗೆ ಬಿದ್ದಿರುವ ಮಹತ್ತರವಾದ ಕರ್ತವ್ಯವನ್ನು ಪಾಲಿಸಿ,-ತನ್ನ ಮುಂದಿನ ಹೆಣ್ಣುಮಕ್ಕಳಿಗೂ ಬುದ್ಧಿಗಲಿಸುವಂತಹವರಾಗಬೇಕೆಂದು ಬೋಧಿಸುತ್ತ-ಕಿವಿಗೆ ಉಪದ್ರವವನ್ನುಂಟು ಮಾಡುವವರಲ್ಲಿಯಾಗಲಿ, ಇನ್ನೂ ಇದೇ ಬಗೆಯಾಗಿ, ಇಲ್ಲವೆ ಬೇರೆಬಗೆಯಾಗಿ ತಮ್ಮ ಹರಟೆಗೆ ಅಡ್ಡಿಯಾಗಿ ಬರುವ ಅಣ್ಣ-ತಮ್ಮ, ಅಕ್ಕ-ತಂಗಿ, ಕಡೆಗೆ ತಾಯಿ-ತಂದೆ, (ಮತ್ತೂ ಮುಂದೆ ಬಂದರೆ, ಅತ್ತೆ-ಅತ್ತಿಗೆ-ನಾದಿನಿ ಮೊದಲಾದವರ ಮಾತಂತೂ ಹಾಗಿರಲಿ, ಮಾವ—ಗಂಡ ಇವರ ವಿಷಯದಲ್ಲಿ ಕೂಡ ಪ್ರತ್ಯಕ್ಷ ಪರೋಕ್ಷಗಳಲ್ಲಿ ತಿರಸ್ಕರಿಸಿ ನಿಷ್ಠುರವಾಡುವುದು, ಹೆರವರಲ್ಲಿ ದೂರಿ ಮೇಲ್ಕಂಡವರ ಮಾನಹಾನಿ ಮಾಡುವುದು— ಎಷ್ಟೋ ಕಡೆಗಳಲ್ಲಿ ಕಂಡು ಬರುವುದು) ಮೊದಲಾದ ತಮ್ಮ ಸ್ವಜನರಲ್ಲಿ ಇವರಿಗೆ ಆಗ್ರಹವುಂಟಾಗುವುದೂ, ಈ ಆಗ್ರಹದಿಂದ ಅವರು ಮರ್ಯಾದೆ ಮೀರಿ ಮೇಲ್ಕಂಡವರಿಗೆ ಪ್ರತಿಯಾಗಿ ನುಡಿದು ನಡೆಯುವುದೂ ಅನೇಕಮಂದಿ ನಮ್ಮ ಸೋದರೀ-ಸೋದರರ ಅನುಭವವೇದ್ಯ ವಿಷಯವಾಗಿದೆಯಷ್ಟೆ.

ಪ್ರಾರಂಭದಲ್ಲಿ ತೋರುವ ಈ ಆಗ್ರಹವೂ, ಆಗ್ರಹವನ್ನೇ ಆಶ್ರಯಿಸಿಕೊಂಡಿರುವ ಅಸಮಾಧಾನವೂ ಮುಂದುಮುಂದಕ್ಕಡಿಯಿಟ್ಟಂತೆಲ್ಲ ಇವರಿಬ್ಬರ ಮಾರ್ಗಾನುಯಾಯಿಗಳಾಗಿರುವ ಈರ್ಷ್ಯಾಸೂಯೆಗಳು ಇವರಲ್ಲಿ ತಮ್ಮ ಪ್ರಾಬಲ್ಯವನ್ನು ತೋರ್ಪಡಿಸುವುವು. ಇವುಗಳ ಪ್ರಾಬಲ್ಯದಿಂದ ಪರವಶರಾದವರು, ಮೇಲೆಯವರಲ್ಲಿ ಮೊದಲೆ ಹೇಳಿದಂತೆ, ಅನ್ಯಥಾ ಭಾವನೆಯನ್ನೆ ಹೊಂದಿ ನಿರ್ದಾಕ್ಷಿಣ್ಯವಾಗಿಯೂ, ನಿರ್ಘೃಣತೆಯಿಂದಲೂ, ನಿರ್ಲಜ್ಜೆಯಿಂದಲೂ, ಮರ್ಯಾದೆ ಮೀರಿದ ಕೋಪತಾಪಗಳಿಂದಲೂ ಇಲ್ಲದೊಂದು ಕಾರಣವನ್ನು ಕಲ್ಪಿಸಿ ಕಲಹ, ಪೀಡೆ, ರೋದನಗಳಿಂದ ಸಂಸಾರವನ್ನು ಭಯಂಕರವಾಗುವಂತೆ ಮಾಡುವರು. ಇದಕ್ಕೆ ಉದಾಹರಣೆಯಾಗಿ ಹೇಳಬೇಕೆಂದು ನಾವು ಯೋಚಿಸುತ್ತಿರುವಾಗಲೇ ನಮ್ಮ ದೃಶ್ಯಕ್ಕೆ ಒಳಪಟ್ಟ ಒಂದೆರಡು ವಿಷಯಗಳನ್ನು ಮುಂದಿಟ್ಟರೆ ಸಾಕಷ್ಟೆ?

ಒಬ್ಬ ವೃದ್ಧಸ್ತ್ರೀಯು, ಚಾಡಿಕಾರರ ಮಾತನ್ನು ನಂಬಿ, ಮಗಳ ಮನೆಗೆ ಬಂದು, ಆವೇಶದಿಂದ ಸ್ಮೃತಿ ಕೂಡ ಇಲ್ಲವೆಂಬ ರೀತಿ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನೂ ಮಗಳ ಮಕ್ಕಳನ್ನೂ ನಿಷ್ಕಾರಣವಾಗಿ ಬಯ್ದು—(ಬಯ್ಗಳೆಂದರೆ ಸಾಮಾನ್ಯವಲ್ಲ. ಮಗಳು ಸತ್ತು ನಾನು ಹಾಯಾಗಿರುವೆನೆಂಬ ವರೆಗೆ) ಪ್ರತ್ಯಕ್ಷ ಸ್ಮಶಾನರೋದನದಂತೆ ಗಲಭೆಯನ್ನೆಬ್ಬಿಸಿ—ಶಪಿಸಿ ಹೊರಟುಹೋದಳು. ಪಾಪ, ಆ ಮಗಳು ಆವ ಅಪರಾಧವನ್ನೂ ಕಂಡವಳಲ್ಲ, ಮನೆಗೆಲಸಗಳಲ್ಲಿ ನಿರತೆಯಾಗಿ ಗೃಹಕೃತ್ಯದ ಕಷ್ಟಸುಖಗಳನ್ನು ಹೊರಗೆಡಹದೆ,

(ಮುಂದೆಸಾಗುವುದು.)

॥ ಶ್ರೀ ॥

॥ ವಂದೇತ್ವಾಂ ಭೂದೇವಿ ಆರ್ಯಮಾತರಮ್ ॥

ಕರ್ನಾಟಕ ನಂದಿನಿ.

(ಮಾಸಪತ್ರಿಕೆ)

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ತ್ವಂ ಯತಃ ಪ್ರಭುಃ ॥
ಯಾಸ್ಯನ್ತಿ ಮಮ ಯೇ ಚಾಸ್ಯೇಽಪ್ಯದೃಷ್ಟಾಃ ಪಥಗೋಚರಾಃ ॥ "

ಸಂಪುಟ ೨ | ಪಿಂಗಳ ಸಂ॥ ಫಾಲ್ಗುನಮಾಸ ೧೮೩೯ — ೧೯೧೮ನೇ ಮಾರ್ಚ | ಸಂಚಿಕೆ ೬

—: ಶಾರದಾ ಪ್ರಾರ್ಥನೆ. :—

ರಾಗ ॥ ಜಂಗಲ — (ಅರಳಿದ ಮಲ್ಲಿಗೆ)

ಸರಸಿಜಭವನಸತಿ ಕರುಣಿಸು ಸನ್ಮತಿ — ಹಂಸ್ಮರಣಾಭಿರತೆ ॥ ಪ ॥
ಪರಮಕೃಪಾಕರೆ ವರದಾಭಯಕರ ನೀರಸರುಹೆ ಸುಕರೆ ॥ ಅ ॥
ಸತ್ಯದ ನೆನಗಿದು — ಉತ್ತಮಾಂಗವು ಭಕ್ತಿಯೆ ಫಾಲಸ್ಥಲವು ।
ಉತ್ತಮೋತ್ತಮವೆನಿಸುವ ವಿನಯವು ನಾಸಿಕವದು ನಿಜವು ॥ ೧ ॥
ಜ್ಞಾನವಿವೇಕ ಸುಲೋಚನವಾಗಿರೆ ಆನನ ವದರೂಪ
ತಾನಾಗಿರ ವೇದದ ವದನವು ಮಾನಸಕತಿ ಸುಮನು ॥ ೨ ॥
ಜಗಗೊಳ್ಳುವ ನಿನ್ನೀ ಜಗಜಗರೂಪದ ಜಗಜಗದಾಸೆರವ ॥
ಸೊಗಸಿತೆ ನಿನ್ನೀ ಜಗೆ ಸೇವಗೆ ನಿನ್ನಣುಗರ ವಂಚಿಸಿವೆ । ೩ ॥
ದೇಶಸೇವೆಯೊಳಾಶಿಸುವವು — ಗಾತ್ರಯುತರು ನೀನೇ ॥
ಭಾಷಾಮಾನಿನಿ ಒಲಗೊಂಡಿವು ನಿನ್ನನು ಕೇಷರವರನಾಗ ॥ ೪ ॥

ಮಾತೃಮಂದಿರಂ ಭಜನಾಸಮಾಜದ ವಿದ್ಯಾರ್ಥಿಗಳ ಶಾರದಾಪೂಜಾ.

ಈ ಸಮಾಜವು ಮಂದಿರದ ವಿದ್ಯಾರ್ಥಿಗಳ ಜ್ಞಾನಭಕ್ತ್ಯಭಿವೃದ್ಧ್ಯರ್ಥವಾಗಿ ಇದೇ ೧೯೧೭ನೇ ಇಸವಿ ಜನವರಿಯಿಂದ ವಿದ್ಯಾರ್ಥಿಸಂಘದ ಶಾಖೆಯಾಗಿ ಏರ್ಪಡಿಸಲ್ಪಟ್ಟಿದೆ. ಈ ಸಮಾಜವು ಪ್ರತಿಭಾನುವಾರವೂ ಸಾಯಂಕಾಲ ಭಜನೆಯನ್ನು ನಡೆಯಿಸುತ್ತಿರುವದಲ್ಲದೆ, ಆಗಾಗಿಗೆ ಭಜನೆಯು ಅತ್ಯಂತ ಉತ್ಸಾಹರೂಪವಾಗಿ ನಡೆಯುತ್ತಿದ್ದು ಗುರುಜನರ ಸದುಪದೇಶವನ್ನೂ ಪಡೆಯುತ್ತಲಿದೆ. ಈ ಸಮಾಜದವರು ಇಂದಿನ ಈ ಶುಭದಿವಸ (ಫಾಲ್ಗುನ ಬ॥ ಏಕಾದಶಿ ಭಾನುವಾರ ತಾ॥ ೭—೪—೧೮) ಸಾಯಂಕಾಲ, ನಂದಿನಿಯ ಮತ್ತು ತಮ್ಮ ಸಂಘದ ವಾರ್ಷಿಕೋತ್ಸವವನ್ನು ನೆರವೇರಿಸುವ ಉದ್ದೇಶದಿಂದ ವಿದ್ಯಾರ್ಥಿಗಳಾದ ತಮಗೆ ಪ್ರಥಮತಃ ವಿದ್ಯಾಭಿಮಾನಿನೀದೇವಿಯು ಪ್ರಾರ್ಥನೀಯಳಾಗಿರುವದರಿಂದ, ಗುರುಜನರ ಅನುಗ್ರಹದೊಂದಿ ಶಾರದಾಪೂಜೆಯನ್ನು ನಡೆಯಿಸಿದರು. ಉತ್ಸವಕ್ಕೆ ಇಲ್ಲಿಯ ಪಾಠಶಾಲೆಗಳ ಉಪಾಧ್ಯಾಯರೂ, ವಿದ್ಯಾರ್ಥಿಗಳಲ್ಲಿ ಕೆಲವರೂ ಮತ್ತು ಇಲ್ಲಿಯ ಪ್ರಮುಖ ಗೃಹಸ್ಥರೂ, ಸುವಾಸಿನಿಯರೂ ಸಹ ಬಂದಿದ್ದರು. ಇಲ್ಲಿಯ ಮುನಿಸೀಫರು ಶ್ರೀಯುತ ಸಿ ಬಿ. ನಾಗಭೂಷಣರಾಯರವರು ಬಂದು ಪ್ರಧಾನಸ್ಥಾನವನ್ನಲಂಕರಿಸಿ, ವಿದ್ಯಾ

ರ್ಥಿಗಳ ಸೇವಾಕಾರ್ಯವನ್ನು ಸಾಂಗವಾಗಿ ನಡೆಯಿಸಿದರು.

ಮಂಗಳನೀರಾಜನವಾದ ಬಳಿಕ ಸಂಘದ ಕಾರ್ಯದರ್ಶಿಯು ಸದಸ್ಯರನ್ನು ವಂದಿಸಿ, ವಿದ್ಯಾರ್ಥಿದೆಶೆಯಲ್ಲಿರುವ ತಮ್ಮ ಕರ್ತವ್ಯಕ್ಕೆ ಒಳಪಟ್ಟ ವಿಚಾರವಾದ ಒಂದೆರಡು ಮಾತುಗಳನ್ನಾಡಿ ಸಭಿಕರಿಗೆ ಸಂಘದಪರವಾಗಿ ಕೃತಜ್ಞತೆಯನ್ನು ಪ್ರದರ್ಶಿಸಿದನು. ಅನಂತರ ಅಧ್ಯಕ್ಷರು, ಮಾತೃಮಂದಿರದ ವಿದ್ಯಾರ್ಥಿಸಂಘದ ವಿದ್ಯಾರ್ಥಿಗಳ ಪ್ರಯತ್ನ ಉದ್ದೇಶಗಳನ್ನು ಶ್ಲಾಘಿಸಿ, ವಿದ್ಯಾರ್ಥಿಗಳ ಈ ಪ್ರಯತ್ನವು ಉತ್ತರೋತ್ತರಾಭಿವೃದ್ಧಿ ಹೊಂದುತ್ತ ಬರುವಂತೆ ಭಗವಂತನಲ್ಲಿ ಕೋರುತ್ತಿರುವೆವೆಂದು ನಿರೂಪಿಸಿದರು. ಆ ಬಳಿಕ ಅವರ ಅಭಿಪ್ರಾಯದಂತೆ, ಶ್ರೀಮಾನ್ ಪ್ಲೀಡರ್, ಲಕ್ಷ್ಮಣಯ್ಯಂಗಾರ್ರವರು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೂ ಉತ್ತಮವೂ ಆದ ವಿಷಯಗಳನ್ನು ಸ್ವಾರಸ್ಯವಾಗಿ ವಿವೇಚಿಸಿದರು. ಅದಾದ ಬಳಿಕ, ದಯಾಸಾಗರ 'ಭೀಷ್ಮಸ್ವಾಮಿ' ರೆಂಬ ವಿರಕ್ತ ಮಹಾಶಯರೊಬ್ಬರು ವಿದ್ಯಾರ್ಥಿಗಳು ಯಾವರೀತಿಯಲ್ಲಿ ಶಾರದಾಪೂಜೆಯನ್ನು ನಡೆಯಿಸುವರೋ ನೋಡಬೇಕೆಂದೂ ತಪ್ಪು ನಡೆದರೆ ನಾಲ್ಕಾರುಮಾತುಗಳನ್ನಾಡಬೇಕೆಂದೂ ತಾವು ನಿರೀಕ್ಷಿಸುತ್ತಿದ್ದಂತೆಯೂ, ಆದರೆ ವಿದ್ಯಾರ್ಥಿಗಳು ಕ್ರಮವನ್ನು ತಪ್ಪದೆ, ಹಿರಿಯರ ಸಾಂಪ್ರದಾಯಕ್ಕೆ ವಿರೋಧವಾಗದೆ ಗುರುಜನರ ಆಜ್ಞಾನುಸಾರವಾಗಿಯೇ ನಡೆಯಿಸಿದುದನ್ನು ನೋಡಿ ತಾವು ತೃಪ್ತರಾದೆವೆಂದೂ ತಿಳಿಯಪಡಿಸಿದುದಲ್ಲದೆ ವಿದ್ಯಾರ್ಥಿಗಳು ಹೀಗೆಯೇ ವಾರಕ್ಕೊಂದು ಬಾರಿ ತಪ್ಪದೆ ಪಂಡಿತರಾದ ಗುರುಜನರನ್ನು ಸಭೆಸೇರಿಸಿ, ಅವರು ತಮಗೆ ಬೇಕಾದ ವಿಷಯಗಳನ್ನು ಉಪನ್ಯಾಸರೂಪವಾಗಿ ಉಪದೇಶಿಸುವಂತೆ ಮಾಡಿ, ಆಮೂಲಕ ತಮ್ಮ ಜ್ಞಾನಭಂಡಾರವನ್ನು ಬೆಳೆಯಿಸಿಕೊಳ್ಳಬೇಕೆಂದು ಮುಂತಾಗಿ ನಿರೂಪಿಸಿದರು. ಅದಕ್ಕೆ ಉತ್ತರವಾಗಿ, ಸಂಘದ ಪ್ರಧಾನ ಪೋಷಕರು ಕಾಲೋಚಿತವಾದ ಮಾತುಗಳನ್ನಾಡಿದ ಮೇಲೆ ವಿದ್ಯಾರ್ಥಿಗಳ ಅಭ್ಯುದಯೇಚ್ಛುಗಳಾದ ಪಂಡಿತರು ಸ್ವಸಂತೋಷದಿಂದ ತಾವಾಗಿ ವಿದ್ಯಾರ್ಥಿಗಳಿಗೆ ಅವಶ್ಯಗಳಾದ ಸಲಹೆಗಳನ್ನು ಕೊಡಬೇಕಲ್ಲದೆ, "ವಿದ್ಯಾರ್ಥಿಗಳು ತಮಗೆ ಅವಶ್ಯ ವಿಷಯವಾವಾವುದೆಂಬುದನ್ನು ತಿಳಿಯುವುದು ಕಷ್ಟ,—ಅಲ್ಲದೆ ಅವರು ಒಂದುವೇಳೆ ತಿಳಿದು ಪ್ರಾರ್ಥಿಸಿ, ಪಂಡಿತರು ಕದಾಚಿತ್ ವಿಮುಖರಾದರೆ ಇವರಿಗೆ ಮೊದಲಿದ್ದ ಉತ್ಸಾಹವು ಹೋಗಬಹುದಾದ ಸಂಭವವುಂಟು. ಅದುದರಿಂದ ಹಿತಚಿಂತಕರು ಸ್ವಸಂತೋಷದಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಅಗತ್ಯವೆಂದು ನಿವೇದಿಸಿ, ಸಭಿಕರೆಲ್ಲರಿಗೂ ಮಾತೃಮಂದಿರಂ ವಿದಾರ್ಥಿಗಳ ಪರವಾಗಿ ಕೃತಜ್ಞತೆ, ಧನ್ಯವಾದಗಳನ್ನೊಪ್ಪಿಸಿದರು. ಆ ಬಳಿಕ ಸದಸ್ಯರಿಗೆ ಫಲಪುಷ್ಪಗಳ ವಿನಿಯೋಗವಾಗಿ ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಕರತಾಡನ, ಜಯಧ್ವನಿ, ಪುರಸ್ಸರವಾಗಿ ಶಾರದಾ ಪೂಜೆಯು ಸಾಂಗವೆನಿಸಿತು.

ಮಾತೃಮಂದಿರಂ ಪುಸ್ತಕಭಂಡಾರ-ವಾಚನಶಾಲೆ.

ಈ ಪುಸ್ತಕಭಾಂಡಾರ—ವಾಚನ ಶಾಲೆಗಳ ವಿಚಾರವಾಗಿ ಹಿಂದೆ ಸಂಗ್ರಹವಾಗಿ ಸೂಚಿಸಿದ್ದೆವಷ್ಟೆ. ಈಚೆಗೆ ಪುಸ್ತಕಸಂಖ್ಯೆಯು ಅಷ್ಟೇನೂ ಹೆಚ್ಚಾಗಿ ಬೆಳೆದಿಲ್ಲವಾದರೂ ಮೆಂಬರರ ಸಂಖ್ಯೆ ಮೂವತ್ತಕ್ಕೇರಿದೆ. ವಾರ್ತಾಪತ್ರಗಳನ್ನೂ ಮಾಸಪುಸ್ತಕಗಳನ್ನೂ ಶಾಲೋಪಯೋಗೀ ಪುಸ್ತಕಗಳನ್ನು ತೆಗೆದುಕೊಂಡು ಓದುವವರ ಸಂಖ್ಯೆ, ದಿನದಿನಕ್ಕೆ ಹೆಚ್ಚುತ್ತಿದೆ. ವಿದ್ಯಾರ್ಥಿಗಳಲ್ಲಿ ಕೆಲವರು ರಜಾ ಕಾಲವಾದುದರಿಂದ ಸ್ವಕೀಯ ಬಂಧುಗಳನ್ನು ನೋಡಿ ಬರಲು ಮತ್ತು-ಉಪನಯನ-ವಿವಾಹ ಮಹೋತ್ಸವಗಳನ್ನು ಕುರಿತು ತಮ್ಮ ತಮ್ಮ ಊರುಗಳಿಗೆ ಹೋಗಿರುವವರಾದರೂ ಇಲ್ಲಿರತಕ್ಕ ವಿದ್ಯಾರ್ಥಿಗಳಲ್ಲಿ ಒಬ್ಬಿಬ್ಬರು ವಿನಾ ಉಳಿದವರು ತಮ್ಮ ಸಂಘವನ್ನು ಊರ್ಜಿತಸ್ಥಿತಿಗೆ ತರಲು ಮನಃಪೂರ್ವಕವಾಗಿ ಮಾಡುತ್ತಿರುವ ಪ್ರಯತ್ನವು ಸಂತೋಷಪ್ರದವಾಗಿರುವುದು.

ಈ ಸಂಘದ ವಿದ್ಯಾರ್ಥಿಗಳಲ್ಲಿ ಸ್ವದೇಶಾಭಿಮಾನ, ಭಾಷಾಭಿಮಾನ, ಸ್ವಕರ್ತವ್ಯನಿಷ್ಠೆ, ಪರಸ್ಪರ ಸೌಹಾರ್ದ್ರಭಾವಗಳು ವೃದ್ಧಿಯಾಗುವಂತೆಯೂ, ಮತ್ತು ಅವರಲ್ಲಿ ವಾಕ್ಶಕ್ತಿ, ಧೈರ್ಯ, ಸ್ಥೈರ್ಯ- ಉದ್ಯಮ ಶೀಲತೆಗಳು ಹೆಚ್ಚುತ್ತ ಬರುವಂತೆಯೂ ಮಾಡಲು ಅವರಿಗೆ ಸ್ವತಂತ್ರವಾದ ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದಿರುವುದನ್ನು ಹಿಂದೆಯೇ ನಿವೇದಿಸಿದ್ದೆವಷ್ಟೆ. ಈಗಾಗಲೇ ಆ ಪತ್ರಿಕೆಯನ್ನು ಹೊರಡಿಸಬೇಕೆಂದು ಪ್ರಯತ್ನವು ನಡೆದದ್ದು, ಪತ್ರಿಕೆಯು ಕ್ರಮವಾಗಿ ನಡೆಯಬೇಕೆಂಬ ಸದಿಚ್ಛೆಯಿಂದ ಸಂಘಕ್ಕೆ ಕೆಲವು ಮಂದಿ, ಪೋಷಣಾ ದ್ರವ್ಯವನ್ನು ಕೊಟ್ಟಿರುವರು. ಪತ್ರಿಕೆಯನ್ನು "ಸನ್ಮಾರ್ಗದರ್ಶಿ" ಎಂಬ ಹೆಸರಿನಿಂದ ಪಕ್ಷ ಪತ್ರಿಕೆಯಾಗಿ ಡೆಮ್ಮಿ ಅಷ್ಟಪತ್ರದ ಆಕಾರದಲ್ಲಿ ಪುಸ್ತಕರೂಪವಾಗಿ ಹೊರಡಿಸುವ ಉದ್ದೇಶದಲ್ಲಿರುವುದು. ಆದರೆ ಅನೇಕ ಪ್ರತಿಬಂಧಕಗಳಿಂದಲೂ, ಯುದ್ಧಸಂಬಂಧವಾದ ಕಾಗದಗಳ ದುರ್ಭಿಕ್ಷ ಕಾರಣದಿಂದಲೂ ಇನ್ನೂ ಪತ್ರಿಕೆಯು ಹೊರಹೊರಟಿಲ್ಲ. ಸಾಹಿತ್ಯಗಳನ್ನು ಸಿದ್ಧಪಡಿಸಿಕೊಂಡು, ಬಳಿಕ ಹೊರಡಿಸಬೇಕಾಗಿರುವುದು. ಎಂದರೆ ಪತ್ರಿಕೆಯನ್ನು ಜುಲೈ ತಿಂಗಳಲ್ಲಿ

ಯಾದರೂ ಹೊರಡಿಸಬೇಕೆಂದಿರುವುದು. ದೈವೇಚ್ಛೆ! ಪ್ರಕೃತದಲ್ಲಿ ಈ ಸಂಘದವರ ಕಾರ್ಯಕ್ರಮದ ವಿಚಾರವಾಗಿ ಇಲ್ಲಿಗೆ ಬಂದು ನೋಡಿ ಪುಸ್ತಕ ಭಂಡಾರದ ಪುರೋಭಿವೃದ್ಧಿಯನ್ನು ಬಯಸಿ, ತಾವು ಕೆಲವು ಪುಸ್ತಕಗಳನ್ನು ಅನುಗ್ರಹಿಸುವದಾಗಿ ವಾಗ್ದಾನವಿತ್ತು ತೆರಳಿರುವ-ರಾಜಧಾನಿಯ ಸುಪ್ರಸಿದ್ಧ ಗೃಹಸ್ಥರ ಅಭಿಪ್ರಾಯಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ದಿಗ್ದರ್ಶನಕ್ಕಾಗಿ ಪ್ರಸಿದ್ಧಪಡಿಸಿರುವುದು:

"We visited this institution this evening and we are very glad to find that the young men who are the members of this association are very enthusiastic and are working with the proper altitude which Young India should possess. We hope and pray that this institution should have long life and pure use to all the young men of this Place.

7th April, 1918

NANJANGUD

(Sd.) M. A. Narayana Iyengar M.A., B.L.,
Lecturer Maharanies College Mysore

(Sd.) M. A. Shrinivasa Iyengar,
Asst Teacher, Wesleyan H. School Mysore.

(Sd.) B. S. Krishna Iyengar. *Mysore*

ಉದಯರಾಗ*

(ಅಜಮಿಳನ ಹಾಡು.)

ಶ್ರೀಮನ್ನಾರಾಯಣಾಯ ನಮೋ ನಮಃ ॥ ಪಲ್ಲ ॥
ನಾರಾಯಣನೆಂಬ ನಾಮವನು ನೆನೆದರೆ ಹಾಹೋಯಿತು
ಜನ್ಮಜನ್ಮದಾ ಪಾತಕವು ॥ ಶ್ರೀರಮಣ ನಿನ್ನ ಸ್ಮರಿಸುವಾ
ಮಹಾತ್ಮರಿಗೆ ದಾರಿತೋರಿಸು ಮುರಹರೀ-ಶೌರೀ ಶ್ರೀ ॥೧॥
ಅಖಿಲವೇದ ಪುರಾಣ ಶಾಸ್ತ್ರವನು ತಿಳಿದೋದಿ । ಭಕುತಿ
ಯಿಂ ತಂದೆ ತಾಯಿಯರ ಚಿತ್ತವೊಲಿವಂತೆ ॥ ರಕ್ಷಣೆಯ ಮಾಡಿ
ಜಗದೊಳಗೆ ಕೀರ್ತಿಯನು ಪಡೆದು । ಸುಕುಮಾರನೆನಿಸಿ
ಕೊಂಡ. ॥ ಶ್ರೀಮನ್ನಾರಾಯಣಾಯ ನಮೋ ॥ ೨ ॥

ಭಕ್ತಿಯಿಂ ಹೋಮಕೋಸುಗ ಸಮಿತ್ತ ತರೆಪೋಗಿ ।
ದುಷ್ಕೃತ್ಯಫಲದಿಂದ ಚಾಂಡಾಲಿಯನೆ ಕಂಡು । ಆತುರ
ಗೊಂಡು ಪ್ರೇಮರೆತು ಅಜಮಿಳನು । ಪಾತಕವೆಂಬಗುರು
ತರಿಯದೆ॥ ಶ್ರೀಮನ್ನಾರಾಯಣಾಯ ನಮೋ ॥ ೩ ॥
ನಿಲ್ಲು ನಿಲ್ಲೆಲೆ ಕಾಂತೆ, ನಿನಗೊಲಿದೆ ನೀನಾರು ? । ನೊಲ್ಲಿ
ನೆನ್ನೊಡನೆ ಸತಿಯರ ಕುಲಕೆ ಕಟ್ಟಾಣಿ ॥ ತಳ್ಳಿನ್ನು ಮೋಹ
ಕರುಣವನು ಕೋಮಲೆ ನಿಲ್ಲೆಂದು ಶರಗಪಿಡಿದ ಶ್ರೀ ॥ ೪ ॥
ನೊಲ್ಲಿನು ಮೃದುಗಾತ್ರೆ ನೊಕ್ಕಾನೆ ಮೆಲ್ಲಡಿಯವಳೆ। ಮ
ಲ್ಲಿಗೆಗಂಧಿ ಮದನನ ಮುಂಗೈಯಂಗಿಣಿ॥ ಇಲ್ಲಿ ಬಾ ಅಂಜಬೇ
ಡವೆ ಮುಗುದೆ ಮುದ್ದಿನ ಪೆಣ್ಣೆ । ಹುಲ್ಲೆಕಂಗಳಭಾಮಿನಿ ॥೫॥

ಎಲೆ ವಿಪ್ರಕೇಳೆಲೋ ಕುಲಹೀನ ಮನೆತನವು । ಹೊಲೆ
ಶಬ್ದಮಾಂಸ ಗೋಚರ್ಮದ ಹಾಸುಗೆಯು । ಎಲವುಗಳರಾಶಿ
ಒರಲುವ ನಾಯಿಹಿಂಡುಗಳು। ಬಲುಘೋರವಾಗಿರ್ಪುದೈ॥೬॥
ಬಲೆಗೆ ಸಿಕ್ಕಿದಪಕ್ಷಿ ಬೇಟೆಗಾರನದಲ್ಲದೆ-ಕುಲವ ಕೂಡು
ವುದೆ ಮಾನಿನಿರನ್ನೆ ನಿನ್ನೊಡನೆ । ಒಲವಿಂದ ಬರುವೆನಾ ಸುಖ
ದೊಳಿರುವೆನು ಇನ್ನು । ಛಲವು ತನಗಿದೊಂದೆಯೆಂದ ॥ ೭ ॥
ಮತ್ತೆ ಎನ್ನೊಡನೆ ಮಾತೇಕೆ ಎಲೆಹಾರುವಾ। ಚಿತ್ತವೆನ್ನೊ
ಳಗಿರಲು । ನೀನಿನ್ನು! ಹೆತ್ತತಂದೆಯ ಕೇಳಿ ಸಮ್ಮತಿಯ ನಿತ್ತ
ರೆ । ಮತ್ತೆ ನಿನಗೊಲಿವೆ ನೆಂದಳು ಶ್ರೀಮನ್ನಾರಾಯಣ ॥ ೮ ॥
ಮತ್ತ ಗಾಮಿನಿಯೊಡಗೊಂಡವಳ ಪಿತನ । ಹತ್ತಿರಕೆ
ಪೋಗಿಕೇಳಲಿಂತೆಂದ ॥ ಉತ್ತಮಕುಲವ ನೀಡಾಡಿ ಈ ಪಾತ
ಕಕೆ. ಮತ್ತೆ ನೀನೊಳಗಾಗದಿರೆಲೈ॥ ಶ್ರೀಮನ್ನಾರಾಯಣ॥ ೯ ॥
ಆಗದಾಗದು ನಿನ್ನ ಕುಲಬಂಧು ಬಳಗಗಳ-ನೀಗಿ ನಿನ್ನೊ
ಡನೆ ಕೂಡುವೆನೆಂಬ ಮತವೆನಗೆ ॥ ನಾಗಭೂಷಣನ ಫಣೆಗ
ಣ್ಣಾಣೆ ಲಿದೆದನಬಾಣ । ಶಾಗಿತೆನ್ನೆದೆಯೊಳೆಂದು ಶ್ರೀ ॥ ೧೦ ॥
ಕೂಗಿ ಹೇಳಲೊ ನಿನ್ನ ಕುಲಬಂಧು ಬಳಗಗಳಿಗೆ। ಹೋ
ಗಿನೇರಿಕೊ ನಿನ್ನ ಹೆತ್ತತಾಯ್ತಂದೆಯರ ॥ ಕೂಡದಿದ್ದರೆ
ನಿನ್ನ ಸುತೆಯೊಡನೆ ಊರಾಚೆಮನೆಯೊಳಗೆ ನಾನಿರುವೆ
ನೆಂದನು ಶ್ರೀಮನ್ನಾರಾಯಣಾಯ ನಮೋನಮಃ ॥ ೧೧ ॥

* ಈ ಹಾಡನ್ನು ರಚಿಸಿದವರಾರೆಂಬುದು ನಮಗೆ ತಿಳಿಯಲಿಲ್ಲ. ನಮ್ಮ ಹಿರಿಯರು ಉದಯಕಾಲದಲ್ಲಿ ಹೇಳುತ್ತಿರುವುದನ್ನು ಕೇಳಿ, ನಮ್ಮ ಸೋದರಿಯರಿಗೆ ಉಪಯೋಗವಾದೀತೆಂದು ಇದನ್ನಿಲ್ಲಿ ಸಂಗ್ರಹಿಸಿ ಸಚಿತ್ರವಾಗಿ ಪ್ರಕಟಿಸಿರುವೆವು ಅಜ್ಞಾತ ದೋಷಗಳೇನಾದರೂ ಇದ್ದರೂ ಅಭಿಜ್ಞರು ಸಹಜಭಾವದಿಂದ ಸೂಚಿಸಿದರೆ ಕೃತಜ್ಞರಾಗುವೆವು. ಸಂ. ನಂದಿನಿ.

ಹಾಲಂಪದಾ ಕುಲವನೀರೊಳಗದ್ದಿ ಪೂರ್ವದಾ । ಶೀಲವನು ಬಿಟ್ಟು ಪೊಲಸತಿಯುಕೊಡಿ ಚಂಡಾಲತಿಯಿಂ ॥ ಬಾಲಕರ ಪಡೆದು ತಾನವಳೊಡನೆ ಮಕ್ಕಳ— ಲೀಲೆಗಳ ನೋಡಿ ಹಿಗ್ಗಿ ಶ್ರೀಮನ್ನಾರಾಯಣಾಯ ನಮೋನಮಃ ॥ ೧೨ ॥

ಆಲಂಬದಿರಲು ಅಜಮಿಳನಿಗಂತ್ಯ । ಕಾಲ ಬಂದೊದಗೆ ಸೆಳೆತನ್ನಿರೊಪಾತಕಿಯ ಎನಲು ॥ ಜೋಲು ತುಟಿಯುಬ್ಬುರದ ಮೋರೆ ಯಮನಾಳುಗಳು ಸಾರಿಬ ದರಾಗ ಶ್ರೀ ॥ ೧೩ ॥

ಎಡಗಯ್ಯ ಪಾಶಗಳು—ಹಿಡಿಗಯ್ಯ ಚಿಮ್ಮಟಿಗೆಯು । ಒಡನೆ ಜಾವಳನಾಯಿ ವಜ್ರಮೂತಿಯುಕಾಗೆ ॥ ತುಡುಕಿ ಹಿಡಿದು, ಕೆಡಹಿ ಕಟ್ಟಿರಿ ಪಾತಕನನೆಂದು । ಗುಡುಗುಡಿಸುತ್ತ ಬಂದರು ಶ್ರೀಮನ್ನಾರಾಯಣಾಯ ನಮೋ ನಮಃ ॥ ೧೪ ॥

ಕಡುಹಸುಳೆ ಕಂದನಿನ್ನೆಷ್ಟುಂಜುವನೊ ಎಂದು, ಗಡಗಡನೆ ನಡುಗಿ ಕಂಗೆಟ್ಟು ತಾನು । ಪಡೆದ ಬಾಲಕನ ನಾರಗಾ, ಎಂದೆನಲು ನುಡಿಯನಾಲಿಸಿದಸ್ವಾಮಿ ॥ ಶ್ರೀ ॥ ೧೫ ॥

ಪುಂಡರೀಕಾಕ್ಷನ ಭಕ್ತರನು ಬಾಧಿಸುವ । ಲಂಡರಾದಿವರ ನೂಕುನೂಕಿರೊ ಎನುತ ॥ ದಂಡಧರನಾಳುಗಳು ಅಂಡಲೆಮಾತೆ ಝ್ಯುಂಬಿಸುತ— ಬಂದರಾ ಹರಿಕಿಂಕರರು ॥ ೧೬ ॥

ಉರದಲ್ಲಿ ಒಪ್ಪುವಾ ತುಳಸಿ, ಪೀತಾಂಬರ— ಗದೆ ಶಂಖ ಚಕ್ರ ದ್ವಾದಶ ನಾಮವನಿಟ್ಟು ಕರವ ನಿತ್ತಂಜಬೇಡಂಜಬೇಡೆಂದು । ಹರಿದಾಸರು ಬಂದರಾಗ ॥ ಶ್ರೀ ನಮೋ ॥ ೧೭ ॥

ಬಂದಹರಿದಾಸರಿಗೆ ನಿಂದು ಯಮನಾಳುಗಳು—ಭೂಮಂಡಲದೊಳಗೆನ್ನೊಡೆಯ ಯಮಧರ್ಮನ । ದಂಡವನು ಸರಿದವರಾರು ಕಾಣೆ ನೀನೇ ಉದ್ದಂಡರೆಂದರು ॥ ಶ್ರೀ ॥ ೧೮ ॥

ಬಂದ ನಿಮ್ಮನು ನೋಡಿದೊಡನೆ ತನ್ನಾತ್ಮಜನ—ಕಂದ ನಾರಗಾ ಬಾರೆಂದು ಕರೆಯಲು ॥ ಇಂದಿರೇಶನ ಕೃಪೆಯಾಯ್ತಿವನಮೇಲೆ ಯಾಕ್ಷಣಪೆ ಕುಂದಿದವು ಇವನಪಾಪ ॥ ೧೯ ॥

ಹಂದಿ ಕುರಿಗಳಿರ ನಿಮಗಿಷ್ಟು ಮಾತುಗಳೇಕೆ-ನಿಂದಿರದೆ ಹೋಗಿರೆಂದುನೂಕಿ ಯಮನಾಳುಗಳ ॥ ತಂದಿದ್ದ ಪುಷ್ಪಕದಿ ಅಜಮಿಳನ ಕುಳ್ಳಿರಿಸಿ ಕರೆತಂದರಾ ವೈಕುಂಠಕೇ ॥ ೨೦ ॥

ಎದ್ದು ತಾನಜಮಿಳನು ಮೂರ್ಛೆಯನು ತಿಳಿದು ನೋಡಿ । ಈ ಬಿದ್ದಕಾಯವನು ಬಾಧಿಸಿದವರಾರು ॥ ಉಪದ್ರವನು ಬಿಡಿಸಿದಾ ದಿವ್ಯಸ್ವರೂಪದಾ ಸಿದ್ಧಾತ್ಮರಿವರಾರೆಂನುತ ॥ ೨೧ ॥

ಮದ್ಯಪಾನವ ಮಾಳ್ಪ ಹೆಂಗಳೊಡನಾಡಿ । ಅದ್ದಿದೆನು ನೂರೊಂದು ಕುಲವ ನರಕದೊಳೆಂದು । ಹದ್ದಿನಾಬಾಯೊಳಗಿದ್ದ ಉರಗನಂತಜಮಿಳನು । ಇದ್ದನತಿ ಮರುಗುತ ॥ ೨೨ ॥

ವಿಪ್ರಕುಲದಲಿ ಜನಿಸಿ, ವೇದಶಾಸ್ತ್ರವನೋದಿ--ಮುಪ್ಪಿನಾತಾಯ್ತಂದೆರ ಬಿಟ್ಟು ಬುಧಜನರು । ಒಪ್ಪಿಧಾರೆಯ ನೆರೆದಕುಲಸ್ತ್ರೀಯನುಳಿದು—ಕಂದರ್ಪನ ಬಲೆಗೆ ಸಿಕ್ಕಿ ॥ ೨೩ ॥

ಇಷ್ಟು ಅವಗುಣಗಳನು ಎಣಿಸಲಿಲ್ಲವೆಸ್ವಾಮಿ ಎಷ್ಟುಕರುಣಾಕರನೆನ್ನುತ ತಾಪತ್ರಯವ । ಬಿಟ್ಟು ಸುಜ್ಞಾನತೀರ್ಥದಲಿಮಿಂದು ಶ್ರೀಹರಿಯ-ದಿವ್ಯದೃಷ್ಟಿಯಲಿ ನೋಡಿದ ॥ ೨೪ ॥

ತನ್ನ ನಾಮವನೆನೆವ ಭಕ್ತರಾದವರನು । ಧನ್ಯರಹುದಹುದೆಂದು ಜಗವರಿಯಬೇಕೆಂದು । ಮನ್ನಿಸಿಸಾಯುಜ್ಯ ಪದವಿಯನುಕೊಟ್ಟನು ಪನ್ನಗಾರಿಯವಾಹನ ॥ ಶ್ರೀ ॥ ೨೫ ॥

ಒಲವಿಂದ ಹೇಳವನ ಕಟ್ಟೆಶ್ರೀವೆಂಕಟನ-ನೆಲೆಯರಿತುನೆನೆವರಿಗೆ ಯಮನಬಾಧೆಗಳಿಲ್ಲ ॥ ಕಲಿಕಲುಷವಿನ್ನವರಬಳಿಸೇರುವಂತಿಲ್ಲ—ಸಲಹುವನುಶಿರಿನಲ್ಲ ॥ ಶ್ರೀ ನಮೋ ॥ ೨೬ ॥

ಅಜಮಿಳನ ಶರಣಾಗತಿ.

ರಾಗಾ-- (ತರಣಿ ವಂಶಾಬ್ಧಿಚಂದ್ರ)

ಕೈಪಿಡಿದು ಸಲಹೆನ್ನ-ಕಾರುಣ್ಯಪೂರ್ಣ ।ಪ। ಕೈಪಿಡಿದು ಸಲಹೆನ್ನ ಕೋಪಮಾಡದೆನ್ನನ್ನ ॥ ಕಾಪುರುಷನಾದೆನ್ನ ಬಹುವಿಧ ಪಾಪಲೇಪವ ಲೋಪಗೈಯುತೆ ॥ ಕೈಪಿಡಿದು ।ಅ।

ದ್ವಿಜಜನ್ಮವನೆಧರಿಸಿ--ಮತಿಹೀನನಾಗಿ--ನಿಜಕರ್ಮವನುತ್ಯಜಿಸಿ । ಭಜಕರಕ್ಷಕನಿಮ್ಮ ಭಜನೆಯ ಗೈಯದೆ ॥ ಕುಜನಮಾರ್ಗದಿ ಚರಿಸಿ ನೋಹದಿ, ತ್ರಿಜಗದೊಳಗತಿ ಪಾಪಿಯೆನಿಸಿದೆ ॥ ಕೈಪಿಡಿದು ಸಲಹೆನ್ನ ಕಾರುಣ್ಯ ॥ ೧ ॥

ಕುಲಶೀಲಗಳನುಳಿದು— ಧರ್ಮವ ತೊರೆದು— ಪೊಲತಿಯೊಳಗೆ ಬೆರೆದು ॥ ಜಲಜಾಸ್ತ್ರಕೇಳಿಯೊಳ್ ಕಳೆದ ಕಾಲವಬರಿದೆ । ನಳಿನನಾಭನೆ ನಿನ್ನ ನಾಮಾವಳಿಯ ಪೊಗಳಿಕೆಯ ಮರೆದೆ ಮನದೊಳು ॥ ಕೈಪಿಡಿದು ಸಲಹೆನ್ನ ॥ ೨ ॥

ಭೂಸುರ ವರನೆನಿಸಿ, ಸಲ್ಲದಮಾರ್ಗ—ದೊಳಾಸೆಯ ನಾನಿರಿಸಿ । ಹೇಸಿಕೆಯನು ಬಿಟ್ಟು ದೋಷಿಯಾದೆನು ಕೇಳ್ಳೈ ॥ ಶೇಷಗಿರಿ ವಾಸನಿನ್ನಯ— ಭಾಸುರಾಂಘ್ರಿಯ— ದಾಸ್ಯವೀಯುತೆ ॥ ಕೈಪಿಡಿದು ಸಲಹೆನ್ನ ಕಾರುಣ್ಯ ॥ ೩ ॥

(ಅಜಮಿಳೋಪಾಖ್ಯಾನ-ಹರಿಭಜನಗ್ರಂಥದಿಂದ ತೆಗೆದುದು)

ಯಮನು ಭೃತ್ಯರಿಗೆ ಕಟ್ಟುಮಾಡಿದುದು.

ರಾಗ-- (ಹರಿಯಧಿಕ ಹರನಧಿಕವೆಂದು)

ಮುಟ್ಟಬೇಡಿ ಮುಟ್ಟಬೇಡಿ—ಮುರಹರನ ಭಕ್ತರನು ॥
ಭ್ರಷ್ಟರಾಗದಿರಿಯೆಂದು ಕಟ್ಟುಮಾಡಿದ ಯಮನು ।ಅ।

ಹರಿನಾಮಪಾರಾಯಣವ ನಿರುತಮಾಡುತಲಿಹರ । ಹರಿದಿನವ್ರತವನಾಚರಿಸುತಿಹರಾ ॥ ಹರಿದಾಸರಾ ದಾಸ್ಯಭಾವದೊಳಿರುತಿಹರ । ಹರಿಮಹಿಮೆಯನು ಕೊಂಡಾಡಿ ಪಾಡುತಿಹರ ॥ ಮುಟ್ಟಬೇಡಿ ॥ ೧ ॥ ಗುರುಹಿರಿಯರಾಣತಿಗೆ ಶಿರಬಾಗಿ ನಡೆಯುವರ । ಪರನಾರಿಯಂ ಸೋದರಿಯಂತೆ ಕಾಣ್ಬರ ॥ ಪರಮಾರ್ಥತತ್ವಜ್ಞಾನಿಗಳಾಗಿಹರ । ವರಸತ್ವಸಂಧರ—ಹರಿಶರಣರಾದವರ ॥ ಮುಟ್ಟ ॥ ೨ ॥ ಪತಿಪಾದಸೇವಾನಿರತೆಯಾಗಿಹ ಸತಿಯು । ಪತಿಗತಿಯನನುಸರಿಸುವ ಸುಗುಣ ಸುವ್ರತೆಯು ॥ ಪತಿಹಿತೆಯಾಗಿ ಪರಪತಿಯ ಭಾವಿಸದಿಹಳಾ । ರತಿಪತೀಪಿತಸಂಘ ಭಕ್ತರಾದವರ ॥ ಮುಟ್ಟ ॥ ೩ ॥ ನಾಗನಾರ್ಚಿತ ಶ್ರೀ ಶೇಷಗಿರಿವಾಸನ— ದಾಸ್ಯಭಾವದೊಳಿರುವ ಶರಣರನ್ನು ॥ ಸೋಕತನದಿಂ ನೀವ್ ಪೋಗಿ ಸೆಣಸಿದರೆ ಅವರಿಂದ—ಘಾಸಿಯಾಗುವಿರೆಂದ ಯಮರಾಯ ॥ ಮುಟ್ಟಬೇಡಿ ॥ ೪ ॥

(ಅಜಮಿಳೋಪಾಖ್ಯಾನದಿಂದ ತೆಗೆದುದು)

ಕಳೆದ ವರ್ಷದ
೯ನೆ ಸಂಚಿಕೆಯಿಂದ ಮುಂದೆ ಸಾಗಿದುದು.

ವಿಮಲಾದೇವಿ.

ಎಂಟನೆಯ ಪ್ರಕರಣ.

ಅನುರಾಗಾಂಕುರವು.

ಅರೆ, ಭಾಯಿ! ಹತ್ತು ದಿನಗಳಾದರೂ ನಮಗೆ ಒಬ್ಬರೂ ಸಿಕ್ಕಲಿಲ್ಲ... ಅದೇನು ಕಾರಣವು ?

ಕಾರಣವೇನು.. ...ನಮ್ಮ ಕಣ್ಣಿಗೆ ಬಿದ್ದರೆ ಪ್ರಾಣವುಳಿಯುವುದಿಲ್ಲವೆಂಬ ಭಯದಿಂದ ತಪ್ಪಿಸಿಕೊಂಡು ತಿರುಗುತ್ತಿರುವರು.

ಹೇಗಾದರೂ ಇರಲಿ, ಈ ವಿಷಯವನ್ನು ಬಾದಷಹರು ತಿಳಿದುದೇ ಆದರೆ ನಮಗೆ ಶಿಕ್ಷೆ ತಪ್ಪುವುದಿಲ್ಲ. ಆದುದರಿಂದ ಈ ದಿನ ಜಾಗರೂಕರಾಗಿದ್ದು, ಬೇಟೆಗಾಗಿ ಬಂದ ಯಾವ ರಾಜಪುತ್ರನನ್ನಾದರೂ ಸರಿಯೆ ಹಿಡಿಯಲೇಬೇಕು,

ನಿಜ, ಹಾಗೆಯೇ ಮಾಡಬೇಕು, ನಾವೆಲ್ಲರೂ ಒಂದೇ ಕಡೆಯಿದ್ದರೆ ಪ್ರಯೋಜನವಿಲ್ಲ. ನಾಲ್ಕು ದಿಕ್ಕುಗಳಲ್ಲಿಯೂ ಸುತ್ತುತ್ತಿರಬೇಕು. ಹಾಗಾದರೆ ಕಡೆಗೆ ಒಬ್ಬನಾದರೂ ಸಿಕ್ಕದಿರಲಾರನು.”

‘ಅರಾವಲಿ’ ಪರ್ವತಪ್ರಾಂತ್ಯದ ಕಾಡಿನಲ್ಲಿ ಭಯಂಕರಾಕಾರಿಗಳಾಗಿದ್ದ ಮಹಮ್ಮದೀಯ ಭಟರಿಬ್ಬರು ಖಡ್ಗಪಾಣಿಗಳಾಗಿ ಅಶ್ವಾರೂಢರಾಗಿ ಸಹಚರರಾದ ಮತ್ತೆ ಇಪ್ಪತ್ತು ಭಟರೊಡನೆ ಬರುತ್ತ ಮೇಲೆ ಹೇಳಿದಂತೆ ಪರಸ್ಪರ ಮಾತನಾಡಿಕೊಳ್ಳುತ್ತ ತಿರುಗುತ್ತಿದ್ದರು. ಆ ಅರಣ್ಯಪ್ರಾಂತ್ಯವು ಕ್ರೂರಮೃಗಸಂಕೀರ್ಣವಾಗಿ ನೋಡುವುದಕ್ಕೆ ಬಹು ಭಯಂಕರವಾಗಿದ್ದಿತು. ರಾಜಪುತ್ರಸ್ಥಾನದಲ್ಲಿದ್ದ ಅನೇಕ ರಾಜರು ಆ ಅರಣ್ಯವನ್ನು ತಮ್ಮ ಸ್ವಾಧೀನ ಮಾಡಿಕೊಳ್ಳಬೇಕೆಂದು ಪರಸ್ಪರ ಜಗಳವಾಡುತ್ತಿದ್ದರೂ ಆ ಕಾನನವು ಜೋಧಪುರ ರಾಜ್ಯದಲ್ಲಿ ಸೇರಿದ್ದುದರಿಂದ ತತ್ಪುರಾಧಿಪನು ಆ ಅರಣ್ಯವು ತನಗೇ ಸೇರತಕ್ಕದೆಂದು ವಾದಿಸುತ್ತಿದ್ದನು. ಕಟ್ಟಕಡೆಗೆ ಆ ಅಡವಿಯಲ್ಲಿ ಪ್ರತಿಯೊಬ್ಬ ರಾಜನೂ ತಮ್ಮ ಇಷ್ಟಬಂದಾಗ ಬೇಟೆಯಾಡಬಹುದೆಂದೂ, ಆದರೆ ಅಲ್ಲಿರುವ ವೃಕ್ಷ ಪೊದಲಾದುವುಗಳು ಜೋಧಪುರ ರಾಜನಿಗೇ ಸೇರತಕ್ಕವೆಂದೂ ಅವರೇ ನಿರ್ಧಾರ ಮಾಡಿಕೊಂಡರು. ಅಂದಿನಿಂದ ರಾಜಪುತ್ರರು ಪ್ರತಿವರ್ಷವೂ ಮೃಗಯಾವಿನೋದಾರ್ಥವಾಗಿ ಆ ಅರಣ್ಯಕ್ಕೆ ಬರುತ್ತಿದ್ದರು. ಈ ಸಮಾಚಾರವನ್ನು ತಿಳಿದಿದ್ದ ಬಾದಷಹನು ರಾಜಪುತ್ರರನ್ನು ಹಿಡಿಯುವುದಕ್ಕೆ ತನಗೆ ಅನುಕೂಲವಾಯಿತೆಂದು ಯೋಚಿಸಿ, ಯಾವ ರಾಜಪುತ್ರನೇ ಆಗಲಿ ಒಂಟಿಯಾಗಿ ಅರಣ್ಯದಲ್ಲಿ ಸುತ್ತುತ್ತಿರುವಾಗ ಹಿಡಿದು ತರಬೇಕೆಂದು ತನ್ನ ಭಟರಲ್ಲಿ ಕೆಲವರನ್ನು ರಹಸ್ಯವಾಗಿ ಕಾವಲಿರಿಸಿದ್ದನು.

ಆ ದಿನ ಮಹಮ್ಮದೀಯ ಭಟರು ಅಶ್ವಾರೂಢರಾಗಿ ಅಡವಿಯಲ್ಲಿ ತಿರುಗುತ್ತಿರುವಾಗ ಕುರಂಗದೋಪಾದಿಯಲ್ಲಿ ತನ್ನ ಕಿವಿಗಳನ್ನು ಮುಂದಕ್ಕೆ ಚಾಚಿ ಅತಿ ಚಮತ್ಕಾರದಿಂದ ಓಡಿಬರುತ್ತಿರುವ “ಪಂಚಕಲ್ಯಾಣಿ” ಎಂಬ ತನ್ನ ಕುದುರೆಯನ್ನೇರಿ ಒಬ್ಬ ನವಯೌವನಸಂಪನ್ನನಾದ ರಾಜಕುಮಾರನು ಆ ದಾರಿಯಲ್ಲಿಯೇ ಬರುತ್ತಿದ್ದನು. ಆತನ ಬಲಗೈಯಲ್ಲಿದ್ದ ಮಹಾದೇವನ ತ್ರಿಶೂಲಸದೃಶವಾದ ಭಲ್ಲೆಯವೂ ಎಡಗಡೆಯ ಸೊಂಟಕ್ಕೆ ಕಟ್ಟಿದ್ದ ಭಯಂಕರವಾದ ಖಡ್ಗವೂ ಆತನ ಮುಖಕಾಂತಿಯೂ ಆತನನ್ನು ಒಬ್ಬ ವೀರಪುರುಷನೆಂದೇ ತಿಳಿಸುತ್ತಿದ್ದಿತು. ಅಷ್ಟೇ ಅಲ್ಲ— ಆಜಾನುಬಾಹುಮಾತ್ರವಲ್ಲದೆ— ಗಂಭೀರಮುದ್ರೆಯನ್ನು ತಳೆದಿದ್ದ ಆತನ ಮುಖದರ್ಶನಮಾತ್ರದಿಂದ ಎಂತಹ ಶತ್ರುವೀರರಿಗೂ ಭಯವುಂಟಾಗುವಂತಿದ್ದುದರಿಂದ ಆತನನ್ನು ಜಗದೇಕವೀರನೆಂದೇ ಹೇಳ

ಬಹುದು. ಹೀಗೆ ಆ ರಾಜಕುಮಾರ ಕಂಠೀರವನು ತನ್ನ ಅಶ್ವಾರೋಹಣಕೌಶಲವನ್ನು ಪ್ರಕಾಶಪಡಿಸುತ್ತ ಆ ಅರಣ್ಯ ಮಾರ್ಗದಲ್ಲಿ ಬರುತ್ತಿದ್ದನು. ಬಾಣಸಹಸ ಅಕ್ಷಿಯಂತೆ ಗುಹೆಗಳಲ್ಲಿ ಅಡಗಿ ಹೊಂಚಿನೋಡುತ್ತಿದ್ದ ಮಹಮ್ಮದೀಯ ಭಟರು ತಮ್ಮ ಕುದುರೆಗಳನ್ನು ಹತ್ತಿ ಕ್ಷಣಮಾತ್ರದಲ್ಲಿ ರಾಜಪುತ್ರನನ್ನು ನಾಲ್ಕು ಕಡೆಯಿಂದಲೂ ಮುತ್ತಿದರು. ಮುಂದಾಳಾಗಿದ್ದ ಮಹಮ್ಮದೀಯಭಟನೊಬ್ಬನು ರಾಜಪುತ್ರನ ಇದಿರಾಗಿ ಬಂದು—"ಅರೆ, ಬಚ್ಚಾ! ಮದುವೆಗಂಡನಂತಿರುವೆ? ಕುದುರೆಯಿಂದಿಳಿ—ಬೇಗ ಇಳಿ!!" ಎಂದು ಗದರಿಸಿದನು. ಆಗ ಕ್ಷತ್ರಿಯವೀರನು ಒಂದು ಬಾರಿ ಶತ್ರುಪಕ್ಷದವರನ್ನು ನೋಡಿ ಕ್ಷಣಮಾತ್ರದಲ್ಲಿ ಒರೆಯಲ್ಲಿದ್ದ ಖಡ್ಗವನ್ನೆತ್ತಿ ಅದನ್ನು ಬಂದು ಕಯ್ಯಲ್ಲಿಯೂ ಭಲ್ಲೆಯವನ್ನು ಮತ್ತೊಂದು ಕಯ್ಯಲ್ಲಿಯೂ ಹಿಡಿದು, ಗಿರಗಿರನೆ ತಿರುಗಿಸುತ್ತಾ ರೋಷಾವೇಷದಿಂದ ಭೀಷಣಾಕಾರನಾದ ಕಾಲಾಂತಕನಂತೆ ಅಟ್ಟಹಾಸದಿಂದ ಮೆರೆದನು. ಮಹಮ್ಮದೀಯಭಟರು ಆತನ ಸಾಹಸಕ್ಕೆ ಭಯಪಟ್ಟರೂ ಹಿಂತೆಗೆಯದೆ ಆತನಮೇಲೆ ಖಡ್ಗಗಳನ್ನೂ ಬಾಣಗಳನ್ನೂ ಪ್ರಯೋಗಿಸಲಾರಂಭಿಸಿದರು. ವೀರಕುಮಾರನು ನಿಜಕರವಾಳವನ್ನು ತಿರುಗಿಸುತ್ತ ತನ್ನ ಮೇಲೆ ಪ್ರಯೋಗಿಸಿದ ಶತ್ರುಗಳ ಬಾಣಗಳನ್ನೂ ಖಡ್ಗಪ್ರಹಾರಗಳನ್ನೂ ನಿವಾರಿಸಿ ತನ್ನ ತುರಂಗವನ್ನು ಅವರ ಮೇಲೆ ಬಿಡಿಸುತ್ತ ಒಬ್ಬೊಬ್ಬನನ್ನಾಗಿ ಭೂದೇವಿಗೆ ಬಲಿಕೊಡುತ್ತ ಬಂದನು.

ಹೀಗೆ ಆ ಭಟರಲ್ಲಿ ಹತ್ತುಮಂದಿ ಮೃತ್ಯುದೇವತೆಗೆ ಬಲಿಯಾಗಲು ಉಳಿದವರು ರೋಷಕಷಾಯಿತನೇತ್ರರಾಗಿ ತಮ್ಮ ಪ್ರಾಣದ ಮೇಲಿನ ಆಶೆಯನ್ನು ಬಿಟ್ಟು ಒಟ್ಟಿಗೆ ರಾಜಪುತ್ರನ ಮೇಲೆ ಬಿದ್ದರು. ರಾಜಕುಮಾರನು ಬಿಸಲಿನ ತಾಪದಿಂದಲೂ ಈ ವರೆಗೆ ಮಾಡಿದ ಯುದ್ಧದಿಂದಲೂ ಆತನು ಸಫವರ್ಣಶರೀರನಾಗಿ ಮಿತಿಮೀರಿದ ಆಯಾಸದಿಂದ ಕೂಡಿ ಉಳಿದವರನ್ನೂ ಉಪಾಯದಿಂದ ಕೊಲ್ಲಬೇಕೆಂದು ಯೋಚಿಸುತ್ತಿರುವಲ್ಲಿ ತರುಣವಯಸ್ಕನಾದ ರಾಜಕುಮಾರನೊಬ್ಬನು ತನ್ನ ಮಿತ್ರನೊಡನೆ ಕುದುರೆಗಳನ್ನೇರಿ ವಾಯುವೇಗದಿಂದ ರಾಜಪುತ್ರನ ಸಹಾಯಾರ್ಥವಾಗಿಬಂದು ಕ್ಷಣಮಾತ್ರದಲ್ಲಿ ಮಹಮ್ಮದೀಯಭಟರನ್ನು ಭೂದೇವಿಗೆ ಬಲಿಯಾಗಿ ಒಪ್ಪಿಸಿದನು. ಉಳಿದ ಮಹಮ್ಮದೀಯಭಟರು ಆ ರಾಜಪುತ್ರರ ಕತ್ತಿಯ ಏಟುಗಳನ್ನು ತಡೆಯಲಾರದೆ ಚೆದರಿಹೋದರು. ನಮ್ಮ ಕ್ಷತ್ರಿಯವೀರನು ತನ್ನ ಸಹಾಯಕ್ಕಾಗಿ ಬಂದ ಆ ಆಗಂತುಕರಿಬ್ಬರ ಸಾಹಸಕ್ಕೂ ಶೌರ್ಯಾತಿಶಯಕ್ಕೂ ಆಶ್ಚರ್ಯಪಟ್ಟು ಅವರ ಸಮಾಚಾರವನ್ನು ತಿಳಿಯುವ ಕುತೂಹಲದಿಂದ ಹೀಗೆ ಪ್ರಸಂಗಮಾಡತೊಡಗಿದನು.—

ಕ್ಷತ್ರಿಯವೀರ — "ಅಯ್ಯಾ! ನೀವು ಯಾರು? ನಿಮ್ಮ ವಾಸನೆಲ್ಲಿ?

ರಾಜಕುಮಾರ — ನಮ್ಮ ಪುರವು 'ಜಯಪುರ'.

ಕ್ಷತ್ರಿಯವೀರ — ಜಯಪುರದಲ್ಲಿ ನಿಮ್ಮ ಉದ್ಯೋಗವೇನು?

ರಾಜಕುಮಾರ — ಉದ್ಯೋಗವು ಮತ್ತೇನೂ ಇಲ್ಲ. ಜಯಪುರದ ರಾಜನ ಸೈನ್ಯದಲ್ಲಿ ನಾವಿಬ್ಬರೂ ರಣವಿದ್ಯೆಯನ್ನು ಕಲಿಯುತ್ತಿದ್ದೇವೆ.

ಕ್ಷತ್ರಿಯವೀರ — ಆಹಾ! ನನ್ನ ಪ್ರಾಣಗಳನ್ನುಳುಹಿದ ನಿಮ್ಮಿಬ್ಬರನ್ನೂ ನಾನೆಷ್ಟು ಹೊಗಳಲಿ? ಈಗಲೇ ನಿಮ್ಮ ಪರಾಕ್ರಮವು ವರ್ಣನಾತೀತವಾಗಿರುವುದು! ನಿಮ್ಮಿಬ್ಬರನ್ನೂ ನಮ್ಮ ನಗರಕ್ಕೆ ಕರೆದೊಯ್ದು ಸತ್ಕರಿಸಬೇಕೆಂದು ಮನಸ್ಸು ಆಶಿಸುತ್ತಿರುವುದು.

ರಾಜಪುತ್ರ — ನಿಮ್ಮ ನಗರವಾವುದು?

ಕ್ಷತ್ರಿಯಕುಮಾರ — ಉದಯಪುರ

ರಾಜಕುಮಾರನು ಒಂದು ಬಾರಿ ಕುತೂಹಲದಿಂದ ಕ್ಷತ್ರಿಯವೀರನನ್ನು ಆಪಾದಮಸ್ತಕಪರ್ಯಂತ ನೋಡತೊಡಗಿದನು. ನೋಡುತ್ತಿದ್ದಂತೆಯೇ ರಾಜಕುಮಾರನ ಮುಖಲಕ್ಷಣವು ಬದಲಾಯಿಸಿತು. ಕ್ಷತ್ರಿಯವೀರನು ತನ್ನ ಕಡೆಗೆ ನೋಡಿದಾಗಲೆಲ್ಲಾ ರಾಜಕುಮಾರನು ಮುಖವನ್ನು ತಗ್ಗಿಸಿಕೊಂಡು ಕಿರುನಗೆಯಿಂದ ಮಾತನಾಡುತ್ತ ತನ್ನ ಮಿತ್ರನ ಹಿಂದಕ್ಕೆ ಹೋಗಿ ನಿಲ್ಲುತ್ತಿದ್ದನು. ಆತನ ಮಿತ್ರನು ಕುಮಾರನ ಲಕ್ಷಣಗಳನ್ನು ನೋಡಿನೋಡಿ ಕಿರುನಗೆಯಿಂದ ಏನೋ ಸಂಜ್ಞೆ ಮಾಡಿದನು. ಹೀಗೆ ಅವರಿಬ್ಬರೂ ತಮ್ಮೊಳಗೇ ಪರಸ್ಪರ ಸಂಜ್ಞಾಪ್ರಕರಣದಿಂದ ಮಾತನಾಡಿಕೊಳ್ಳುತ್ತಿದ್ದರೂ ಕ್ಷತ್ರಿಯವೀರನು ಇದೊಂದನ್ನೂ ತಿಳಿಯದವನಾಗಿ ಸುಮ್ಮನೆ ನಿಂತಿದ್ದನು. ಆಗ ಮಿತ್ರನು ಕ್ಷತ್ರಿಯವೀರನನ್ನು ನೋಡಿ ಹೇಳಿದನು "ಅಯ್ಯಾ! ಹೊತ್ತಾಯಿತು. ಈ ದಿನ ನಿಮ್ಮ ನಗರಕ್ಕೆ ಬರಲಾಗುವುದಿಲ್ಲ; ಕ್ಷಮಿಸಬೇಕು!"

ಕ್ಷತ್ರಿಯ:— ಅಯ್ಯಾ! ನೀವು ಬರಲಾಗದಿದ್ದರೂ ನಿಮ್ಮನ್ನು ನಾನೆಂದಿಗೂ ಮರೆಯಲಾರೆನು.

ಮಿತ್ರ:— ನಿಮ್ಮ ಸ್ನೇಹವನ್ನು ನಾವೂ ಮರೆಯಲಾರೆವು. ನಮಗೂ ನಿಮಗೂ ನಿಜವಾದ—ಅಭೇದ್ಯವಾದ—ಮೈತ್ರಿಯೇ ಬೆಳೆದಿರುವುದು, ಇದರಲ್ಲಿ ಸಂದೇಹವಿಲ್ಲ.

ಕ್ಷತ್ರಿಯವೀರ — ಅಯ್ಯಾ! ನಿಮ್ಮ ಮಿತ್ರನಾದ ಈ ಕುಮಾರನ ಪರಾಕ್ರಮವು ನನಗೆ ಅತ್ಯಂತ ಕೌತುಕವನ್ನುಂಟುಮಾಡಿತು. ಈಗಲೇ ಇಷ್ಟು ಪರಾಕ್ರಮಿಯಾಗಿರುವ ಈತನನ್ನು ನೋಡಿ ನನಗೆ ಈತನಲ್ಲಿ ಅತ್ಯಂತ ಆದರಭಾವವುಂಟಾಗಿರು-

ವುದು. ಆದುದರಿಂದ ಈತನಿಗೆ ಈ ನನ್ನ ಕೃತಜ್ಞತೆಯ ಕುರುಹೆಂದು ನನ್ನ ಉಂಗುರವನ್ನಿತ್ತು ಬಹುಮಾನಿಸಲು ನನ್ನ ಮನಸ್ಸು ಆಶಿಸುತ್ತಿರುವುದು; ತಿರಸ್ಕರಿಸಬಾರದು " ಎಂದು ಹೇಳಿ, ಕೂಡಲೆ ಕೈಯಲ್ಲಿದ್ದ ಉಂಗುರವನ್ನು ತೆಗೆದು ರಾಜಕುಮಾರನ ಕೈಯ್ಗೆ ಕೊಟ್ಟನು. ಕುಮಾರನು ಲಜ್ಜಾವನತ ಭಾವದಿಂದ ಉಂಗುರವನ್ನು ತೆಗೆದು ಬೆರಳಿನಲ್ಲಿಟ್ಟುಕೊಂಡು ಕ್ಷತ್ರಿಯವೀರನ ಅಪ್ಪಣೆಯನ್ನು ಪಡೆದು, ಮಿತ್ರನೊಡನೆ ಮುಂದೆ ಹೊರಟನು.

ತರುಣರಿಬ್ಬರೂ ಎಂದಿನಂತೆ ಖಡ್ಗಗಳನ್ನು ಒರೆಯೊಳಗಿಟ್ಟು, ಸಂತೋಷಚಿತ್ತರಾಗಿ ಕುದುರೆಗಳನ್ನು ಓಡಿಸುತ್ತಾ ಹೋಗುತ್ತಿದ್ದರು. ಮಿತ್ರನು ನಡುವೆ ಕುಮಾರನನ್ನು ನೋಡಿ ನೋಡಿ ಪರಿಹಾಸದಿಂದ ನಗುತ್ತಿದ್ದನು. ಆದರೂ ಕುಮಾರನು ಮಿತ್ರನ ಪರಿಹಾಸದ ಕಡೆಗೆ ಗಮನವಿಲ್ಲದೆ ತನ್ನ ಬೆರಳಿನಲ್ಲಿದ್ದ ಉಂಗುರವನ್ನು ಬಾರಿಬಾರಿಗೂ ನೋಡುತ್ತ ಆನಂದಿಸುತ್ತಿದ್ದನು. ಮಿತ್ರನು ಅವನ ವ್ಯಾಪಾರವನ್ನು ನೋಡಿ ಪರಿಹಾಸದಿಂದ ಹೀಗೆ ಕೇಳಿದನು —

ಮಿತ್ರ:— ಸಖಿ! ನಿನ್ನಲ್ಲಿಯೇ ಅದೇನನ್ನು ಹೇಳಿ ನಗುತ್ತಿರುವೆ? ನನಗೂ ಹೇಳಿದರಾಗದೇ?

ಉತ್ತರ:—"ನಾನಾವಾಗ ನಗುತ್ತಿದ್ದೆ? ಏನು ಹೇಳುತ್ತಿದ್ದೆ?"

"ಅಬ್ಬ! ಎಷ್ಟೊಂದು ಕೌಶಲ? ನನ್ನಲ್ಲಿಯೂ ರಹಸ್ಯವನ್ನು ಬಚ್ಚಿಡಬೇಕೆನ್ನುವೆಯಾ? ಆಗಲಿ-ಆಗಲಿ!"

"ಹುಚ್ಚ! ರಹಸ್ಯವೇನು ಬಂತು? ಅತನು ಕೊಟ್ಟ ಉಂಗುರವನ್ನು ನೋಡಿ ನಗುತ್ತಿದ್ದೆನು. ಅಷ್ಟೆ! ಇದಕ್ಕಿಷ್ಟೊಂದು ಆಕ್ಷೇಪವೇಕೆ?"

"ನನಗೆಲ್ಲಾ ಗೊತ್ತಿದೆ, ವಿಮಲಾ! ಇನ್ನೂ ರಹಸ್ಯವನ್ನೇಕೆ ಬಚ್ಚಿಡುವೆ? ನೀನು ಹೇಳದಿದ್ದರೂ ನಾನು ತಿಳಿಯಬಲ್ಲೆನು. ಆ ರಾಜಕುಮಾರನಿದ್ದಾಗ ನಿನ್ನ ಮುಖಲಕ್ಷಣಗಳನ್ನು ಚೆನ್ನಾಗಿ ಕಂಡುಹಿಡಿದೆನು. ಇನ್ನೇಕೆ ....."

"ಸಾಕು, ಪದ್ಮಾ! ಇನ್ನು ಹೆಚ್ಚು ಪರಿಹಾಸವು ಬೇಡ ಆ ರಾಜಪುತ್ರನು ಯಾರೆಂಬುದನ್ನು ನೀನು ಬಲ್ಲೆಯಾ?"

"ನನಗೆ ಗೊತ್ತೇ? ಅತನೇ ಹೇಳಿದನಷ್ಟೆ—ಉದಯಪುರದವನೆಂದು! ನನಗೆಬೇರೆ ಅತನನ್ನು ಹಿಂದೆ ನೋಡಿದ್ದು ನೆನಪಿಲ್ಲ.'

"ಪದ್ಮಾ! ನಾವು ನೋಡದಿದ್ದಮಾತ್ರಕ್ಕೆ ಅತನೇನೂ ಹೊಸಬನಲ್ಲ. ಈವರೆಗೆ ನಾವು ಯಾವ ವೀರನ ನಾಮಸ್ಮರಣೆ ಮಾಡುತ್ತಿದ್ದೆವೋ ಯಾವ ಶೂರನ ಕೀರ್ತಿಯನ್ನು ಕೇಳಿ ಸಂತೋಷಪಡುತ್ತಿದ್ದೆವೋ ಆ ಅಸಹಾಯಶೂರನಾದ 'ರಾಜಸಿಂಹನೇ' ಅತನು!"

"ಏನು—ಏನು! ವಿಮಲಾ! ಅತನೇ ರಾಜಸಿಂಹನೇ? ನೀನು ಹೇಗೆ ಗುರುತಿಸಿದೆ? ನನಗೆ ಆಗಲೇ ಏಕೆಹೇಳಲಿಲ್ಲ?"

"ನನಗೆ ಈ ಉಂಗುರದಲ್ಲಿರುವ ಹೆಸರನ್ನು ನೋಡಿದ ಮೇಲೆ ತಿಳಿದುಬಂದಿತು."

"ಹಾಗಿದ್ದರೆ ನೀನು ಭಾಗ್ಯವತಿಯೇ ಸರಿ! ಇದಕ್ಕಾಗಿ ನಾನು ತುಂಬಾಸಂತೋಷಪಡುವೆನು ಇರಲಿ; ನಿಮ್ಮ ತಂದೆ ನಿನ್ನನ್ನು ಒಬ್ಬ ರಾಜಕುಮಾರನಿಗೆ ಕೊಟ್ಟು ಮದುವೆಮಾಡಿ ಆಳಿಯನನ್ನು ಮನೆಯಲ್ಲಿಯೇ ಇರಿಸಕೊಳ್ಳುವನಂತೆ! ನಿನಗೀ ವಿಷಯವು ತಿಳಿದಿದೆಯೆ?"

"ಅದೆಲ್ಲಾ ಮಾತು ಪದ್ಮಾ! ನನ್ನ ಹೃದಯದಲ್ಲಿ ನಿಶ್ಚಿತನಾಗಿರುವ ಪುರುಷನನ್ನು ಬಿಟ್ಟು ಮತ್ತೊಬ್ಬನನ್ನು ಮದುವೆಯಾಗುವೆನೆ? ಎಂದೆಂದಿಗೂ ಆಗದು. ಇನ್ನು ಮುಂದೆ ರೂಪನಗರಕ್ಕೆ ರಾಣಿಯು ನೀನಲ್ಲದ ನಾನಾಗುವೆನೆಂಬ ಭಾವನೆಯನ್ನು ಬಿಟ್ಟುಬಿಡು!"

"ಅಸಾಧ್ಯವಾದ ಮಾತನ್ನೇಕೆ ಹೇಳುವೆ ವಿಮಲಾ!"

"ಪದ್ಮಾ! ಇದು ಸುಸಾಧ್ಯವಲ್ಲದೆ ಅಸಾಧ್ಯವೇನೂ ಇಲ್ಲ. ನಮ್ಮ ತಂದೆಯು ಕೋಪದಿಂದ 'ಮಗನು ಈ ವಿಧವಾದ ಶಿಕ್ಷೆಯಿಂದಲಾದರೂ ಬುದ್ಧಿಕಲಿತುಕೊಳ್ಳಲಿ'ಎಂದು ನಮ್ಮ ಅಣ್ಣನನ್ನು ರಾಜಧಾನಿಯಿಂದ ಹೊರಡಿಸಿರುವನೇ ಹೊರತು ಮನಃಪೂರ್ವಕವಾಗಿ ಅತನನ್ನು ಬಿಟ್ಟಿರುವುದಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಮತ್ತೆ ಅತನನ್ನು ಕರೆಯಿಸಿ ನಿನ್ನನ್ನೇ ಅತನಿಗೆ ಕೊಟ್ಟು ಮದುವೆಮಾಡುವನೆಂದು ಖಂಡಿತವಾಗಿ ತಿಳಿ. ಇದು ಸುಳ್ಳಲ್ಲ."

ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಾ ಆ ಈರ್ವರೂ ತಮ್ಮ ನಗರವನ್ನು ಕುರಿತು ಹೊರಟುಹೋದರು.

ಒಂಭತ್ತನೆಯ ಪ್ರಕರಣ.

(ಪದ್ಮೆಯ ಸಾಹಸ)

ಭಯಂಕರಾಕಾರಿಗಳಾದ ಭಿಲ್ಲರು ಒಂದು ಪಲ್ಲಕ್ಕಿಯನ್ನು ಹೊತ್ತುಕೊಂಡು ಅದರ ಸುತ್ತಲೂ ಸುತ್ತಿಬರುತ್ತಿರಲು ಮಿತಪರಿವಾರದೊಡನೆ ಪಲ್ಲಕ್ಕಿಯ ಮುಂದೆ ಒಬ್ಬ ರಜಪುತ್ರವೀರನು ಮಹಾರಣ್ಯ ಮಧ್ಯದಲ್ಲಿ ಬರುತ್ತಿದ್ದನು. ಪಲ್ಲಕ್ಕಿಯಲ್ಲಿ ಓರ್ವ ಸ್ತ್ರೀಯು ತನ್ನ ಕುಮಾರನೊಡನೆ ಕುಳಿತುಕೊಂಡಿದ್ದಳು. ರಾಜಪುತ್ರನಾರೋ—ಎಲ್ಲಿಗೆ ಹೋಗುತ್ತಿದ್ದನೋ—ಹೇಳಲಾರೆವು. ಕರದಲ್ಲಿ ಖಡ್ಗವನ್ನು ಧರಿಸಿ, ತನ್ನ ಪರಿವಾರವನ್ನೂ ಭಿಲ್ಲರನ್ನೂ "ಜಾಗ್ರತೆಯಾಗಿ ನಡೆಯಿರಿ, ಜಾಗ್ರತೆಯಾಗಿ ನಡೆಯಿರಿ" ಎಂದು ತ್ವರೆಗೊಳಿಸುತ್ತ ಅತಿ ತ್ವರಿತಗಮನದಿಂದ ಹೋಗುತ್ತಿದ್ದನು. ಎತ್ತಿದ ನವಾ

ರಿಯುನ್ನಿಳುಹದೆ ಆ ಭಿಲ್ಲರೂ ಏಕರೀತಿಯಾಗಿ ಓಡಲಾರಂಭಿಸಿದರು. ಸರಿಯಾದ ಮಾರ್ಗವಿದ್ದರೂ ಬಿಟ್ಟು, ಬೆಟ್ಟಗುಡ್ಡಗಳ ಮಾರ್ಗವಾಗಿಯೂ ಅರಣ್ಯಮಾರ್ಗದಲ್ಲಿಯೂ ಹೋಗುತ್ತಿದ್ದರು. ಅಂತಹ ಬೆಟ್ಟಗುಡ್ಡಗಳಲ್ಲಿಯೂ ಪರ್ವತ-ಗುಹೆಗಳ ಕಂಟಕಪ್ರದೇಶಗಳಲ್ಲಿಯೂ ನಡೆಯಲು ಭಿಲ್ಲರಿಗೆ ಸಾಧ್ಯವೆನಿಸಿತ್ತೇ ವಿನಾ ಮತ್ತಾರಿಗೂ ಸಾಧ್ಯವಲ್ಲ. ಅವರು ಹೋಗುತ್ತಿದ್ದ ಗಹನಮಾರ್ಗವನ್ನೂ ಅವಸರವನ್ನೂ ನೋಡಿದರೆ ಯಾವುದೋ ಮಹಾಕಷ್ಟದಿಂದ ತಪ್ಪಿಸಿಕೊಂಡು ಬಂದವರಂತೆಯೇ ಕಾಣುತ್ತಿದ್ದರು. ರಜಪೂತವೀರನು ಆಗಾಗ ಪಲ್ಲಕ್ಕಿಯನ್ನು ಸಮೀಪಿಸಿ, ಒಳಗಿದ್ದ ಸ್ತ್ರೀಯನ್ನು ಕುರಿತು "ಇನ್ನು ನಮಗೆ ಭಯವಿಲ್ಲ. ಭಿಲ್ಲರು ತ್ವರೆಯಾಗಿ ನಡೆಯುತ್ತಿರುವರು; ಕೈಬರ ಕಣಿವೆ ಹಿಂದೆ ನಿಂತಿತು. ಅಟಕ ನದಿಯನ್ನೂ ದಾಟಿದೆವು; ಆರಾವಳೀಪರ್ವತಗಳು ಸಮೀಪದಲ್ಲಿರುವುವು: ಗಂಡವು ಕಳೆದುಹೋಯಿತು; ದೈವಾನುಗ್ರಹದಿಂದ ಸ್ವಲ್ಪದಿನಗಳಲ್ಲಿಯೇ ರಾಜಧಾನಿಯನ್ನು ಸೇರಬಹುದು: ನಮ್ಮ ಭಿಲ್ಲರು ರಹಸ್ಯಮಾರ್ಗದಲ್ಲಿಯೇ ಹೋಗುತ್ತಿರುವುದರಿಂದ ಯಾರೂ ನಮ್ಮನ್ನು ಗುರ್ತಿಸಲಾರರು;" ಎಂದು ಹೇಳುತ್ತಾ ಮುಂದೆ ಹೋಗುತ್ತಿದ್ದನು. ಭಿಲ್ಲರು ಅಷ್ಟು ವೇಗವಾಗಿ ಹೋಗುತ್ತಿದ್ದರೂ ರಾಜಪುತ್ರವೀರನು 'ಜಾಗ್ರತೆ! ಜಾಗ್ರತೆ!!" ಎಂದು ಹೇಳುತ್ತ ಸ್ವಲ್ಪವೂ ವಿಶ್ರಾಂತಿಯನ್ನು ಕೊಡದೆ ಇದ್ದನು.

ಹೀಗೆ ಅವರು ಹೋಗುತ್ತಿದ್ದ ಅರಣ್ಯಮಾರ್ಗವು ನೋಡುವುದಕ್ಕೆ ಅತಿ ಭಯಂಕರವಾಗಿದ್ದಿತು. ಎತ್ತ ನೋಡಿದರೂ ಗಗನವನ್ನು ಸಮೀಪಿಸಿದ ತಾಳೆಯಗಿಡಗಳೇ! ಎತ್ತನೋಡಿದರೂ ಭಯಂಕರವಾದ ಹುತ್ತಗಳೇ! ಯಾವಕಡೆ ನೋಡಿದರೂ ಭೀಕರವಾದ ಮರಗಳೇ! ಎತ್ತ ನೋಡಿದರೂ ಕಾಲಿಡಲು ಸಾಧ್ಯವಲ್ಲದ ಕಂಟಕಮಯವಾದ ಪೊದರುಗಳೇ !!! ಇಷ್ಟೇ ಅಲ್ಲ. ಇಕ್ಕೆಡೆಗಳಲ್ಲಿಯೂ ಇದ್ದ ಪರ್ವತಶ್ರೇಣಿಗಳೂ ಪರ್ವತಗುಹೆಗಳೂ ಮತ್ತಷ್ಟು ಭಯಂಕರವಾಗಿದ್ದುವು.

ಇಂತಹ ಅರಣ್ಯಮಾರ್ಗದಲ್ಲಿ ನರಹತ್ಯೆಗೆ ಗಣನೆಯುಂಟೆ? ರಾಜಪುತ್ರನು ನಿಜಪರಿವಾರದೊಡನೆ ಹೋಗುತ್ತಿರುವಲ್ಲಿ ಒಂದು ಕಡೆಯಿಂದ—

"ಹಾ—ರಕ್ಷಿಸು! ರಕ್ಷಿಸು!!' ಎಂದು ಒಂದು ಸ್ತ್ರೀಕಂಠಧ್ವನಿ ಕೇಳಿಸಿತು. ರಜಪುತ್ರವೀರನು ಆ ಆರ್ತಧ್ವನಿಯನ್ನು ಕೇಳಿದರೂ ಅತ್ತ ಗಮನಿಸದೆ ಮುಂದೆ ಹೊರಟನು. ಆದರೆ ಪಾಲ್ಕಿಯಲ್ಲಿದ್ದ ಸ್ತ್ರೀಯು ಆ ಧ್ವನಿಯನ್ನು ಕೇಳಿದ ಕೂಡಲೆ "ನಿಲ್ಲಿರಿ, ಭಿಲ್ಲರೆ! ಸ್ವಲ್ಪ ನಿಲ್ಲಿರಿ; ಅವಳೋ ಹೆಂಗಸು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಿರುವಳು." ಎಂದು ಆಜ್ಞಾಪಿಸಿದಳು. ರಜಪುತ್ರವೀರನು ಪಲ್ಲಕ್ಕಿಯ ಬಳಿಗೆ ಬಂದು ಹೇಳಿದನು -

"ತಾಯೀ! ಯಾರಾದರೇನು? ಇಲ್ಲಿ ನಾವು ಕಾಲವನ್ನು ಕಳೆದರೆ ಶತ್ರುಗಳ ಕಯ್ಗೆ ಖಂಡಿತವಾಗಿ ಸಿಕ್ಕುವೆವು.'

'ಅಯ್ಯಾ! ದೀನರನ್ನು ಕಾಪಾಡುವುದೇ ಕ್ಷತ್ರಿಯ ಧರ್ಮವು. ನನಗೆಷ್ಟು ಕಷ್ಟಬಂದರೂ 'ಶರಣು' ಎಂದವರನ್ನು ಬಿಡಲಾರೆನು. ಪರರ ಕಷ್ಟಗಳು ತನ್ನವೆಂದು ಭಾವಿಸಿ ಅದನ್ನು ನಿವಾರಿಸಲು ಯತ್ನಿಸುವವನೇ ಕ್ಷತ್ರಿಯನು. ಆದುದರಿಂದ ಸ್ವಲ್ಪಹೊತ್ತು ಇಲ್ಲಿ ನಿಂತು ದೀನಳನ್ನು ರಕ್ಷಿಸೋಣ."

"ಎಲ್ಲವನ್ನೂ ತಿಳಿದಿರುವ ನಿನಗೆ ನಾನೇನನ್ನು ಹೇಳಲಿ? ನಮ್ಮ ಪ್ರಾಣಗಳನ್ನೇ ನಾವು ಕಾಪಾಡಿಕೊಳ್ಳಲು ಕಷ್ಟವಾಗಿರುವಲ್ಲಿ ಪರರನ್ನು ರಕ್ಷಿಸಲಾಗುವುದೆ? ನಾನು ಮಾತ್ರ ಕ್ಷತ್ರಿಯನಲ್ಲವೆ? ಕ್ಷತ್ರಿಯಧರ್ಮವು ನನಗೆ ತಿಳಿಯದೆ? ಸಮಯವರಿತು ನಡೆಯಬೇಕೆಂಬುದನ್ನು ತಿಳಿಯಬೇಡವೆ? ತಾಯೀ' ಅಸಮಾಧಾನಗೊಳ್ಳಬೇಡ, ನಾನೇ ಹೋಗಿ ಆಕೆಯನ್ನು ಬಿಡಿಸುವೆನು. ನೀವು ಇಲ್ಲಿ ನಿಲ್ಲದೆ ಮುಂದೆ ಹೊರಟು ಹೋಗಿರಿ" ಹೀಗೆ ಹೇಳಿ ರಜಪುತ್ರವೀರನು ಭಿಲ್ಲರನ್ನೂ ಪಲ್ಲಕ್ಕಿಯಲ್ಲಿದ್ದ ಸ್ತ್ರೀಯನ್ನೂ ತ್ವರೆಗೊಳಿಸಿ ಕಳುಹಿಬಿಟ್ಟು, ಖಡ್ಗಪಾಣಿಯಾಗಿ ಮಹಾರಣ್ಯಮಧ್ಯದಲ್ಲಿ ನಡೆದು ಕಾಂತಾಮಣಿಯ ರೋದನವು ಕೇಳಿ ಬರುತ್ತಿದ್ದ ಕಡೆಗೆ ಓಡಿಬಂದು ನೋಡಿದನು. ಒಂದು ಮರದ ಕೆಳಗೆ ಇಬ್ಬರು ಮಹಮ್ಮದೀಯರೂ ಒಬ್ಬ ಭಿಲ್ಲನೂ ಘೋರಾಹೋರಿಯಿಂದ ಹೋರಾಡುತ್ತಿದ್ದುದನ್ನೂ ಅವರ ಹಿಂದೆ ಒಬ್ಬ ರಾಜಕನ್ನಿಕೆಯು ಭಯದಿಂದ ಗಡಗಡನೆ ನಡುಗುತ್ತಾ ಕಣ್ಣೀರು ಸುರಿಸುತ್ತಾ ನಿಂತಿದ್ದುದನ್ನೂ ದೂರದಿಂದಲೇ ಕಂಡನು. ಮಹಮ್ಮದೀಯರ ಕತ್ತಿಯ ಹೊಡೆತಗಳಿಂದ ಶರೀರವೆಲ್ಲ ರಕ್ತಮಯವಾಗಿದ್ದರೂ ಭಿಲ್ಲನು ಹಿಂಜರಿಯದೆ ಹೋರಾಡುತ್ತಿದ್ದನು. ಈ ಘೋರಕೃತ್ಯವನ್ನು ಕಂಡೊಡನೆಯೇ ರಜಪುತ್ರನು ಕ್ಷಣಮಾತ್ರದಲ್ಲಿ ಹಾರಿಬಂದು ಮಹಮ್ಮದೀಯರಿಬ್ಬರನ್ನೂ ಖಡ್ಗಹತಿಯಿಂದ ಭೂದೇವಿಗೆ ಬಲಿಯಾಗಿ ಒಪ್ಪಿಸಿದನು. ರಾಜಪುತ್ರನ ದರ್ಶನಮಾತ್ರದಿಂದಲೇ ಆ ರಾಜಕನ್ಯೆಯ ದುಃಖವೆಲ್ಲ ಶಾಂತವಾಗಿ ತಕ್ಷಣವೇ ನಾಚಿಕೆಯುಂಟಾಗಲು ಮುಖವನ್ನು ತಗ್ಗಿಸಿಕೊಂಡು ನೆಲವನ್ನು ನೋಡುತ್ತ ನಿಂತಳು. ರಜಪುತ್ರವೀರನು ಮೊದಲು ಯುದ್ಧದ ದೆಸೆಯಿಂದಾದ ಘಾಯದಿಂದ ಮೂರ್ಛಿತನಾಗಿ ಬಿದ್ದಿದ್ದ ಭಿಲ್ಲನನ್ನು ಮೆಲ್ಲಗೆ ಎಬ್ಬಿಸಿ,—'ಎಲೈ-ಭಟನೆ! ನಿನಗೆ ಸಮಸ್ತ ವನೌಷಧಿಗಳೂ ತಿಳಿದಿರುವುವು ಈಗ ನಾನು ಏನುಮಾಡಬೇಕೆಂದು ತಿಳಿಸಿದರೆ ನನ್ನ ಶಕ್ತಿವಂಚನೆಯಿಲ್ಲದೆ ನಿನ್ನನ್ನು ಉಪಚರಿಸುವೆನು.' ಎಂದು ಹೇಳಿದನು.

ಭಟನು:—"ಶಿವಸಿಂಗ್‌ಮಹಾರಾಜಾ! ತಮ್ಮ ಅನುಗ್ರಹ ದಿಂದ ಈ ದಿನ ನನ್ನ ಪ್ರಾಣವುಳಿದಿತು. ತಾವು ಇನ್ನು ಸ್ವಲ್ಪ ಹೊತ್ತು ಇಲ್ಲಿಗೆ ಬಾರದಿದ್ದ ಪಕ್ಷದಲ್ಲಿ ನಮ್ಮಿಬ್ಬರ ಗತಿಯೇ ನಾಗುತ್ತಿದ್ದಿತೋ ದೇವರೇ ಬಲ್ಲನು! ಈಗ ನಾವು ಯಾವ ಗಿಡದ ಕೆಳಗಿರುವೆವೋ—ಅದೇ ಗಿಡದ ಎಲೆಗಳ ರಸವನ್ನು ಹಿಂಡಿ ಗಾಯಕ್ಕೆ ಸವರಿದರೆ ಸ್ವಲ್ಪಹೊತ್ತಿನೊಳಗಾಗಿ ಗುಣ ವಾಗುವುದು" ಎಂದನು. ರಾಜಪುತ್ರನು ತತ್‌ಕ್ಷಣವೇ ಕೆಲವು ಎಲೆಗಳನ್ನು ಕಿತ್ತು ರಸವನ್ನು ಹಿಂಡಿ ಭಿಲ್ಲನ ಶರೀರ ಕ್ಕೆಲ್ಲ ಸವರಿದನು. ಆ ಬಳಿಕ ತಲೆಬಾಗಿ ದೂರದಲ್ಲಿ ನಿಂತಿದ್ದ ಕೋಮಲಾಂಗಿಯನ್ನು ನೋಡಿ ಆದರದಿಂದ ಕೇಳಿದನು-- "ಪದ್ಮಾ! ನೀನು ಇಲ್ಲಿಗೇಕೆ ಬಂದೆ?"

ಪದ್ಮಾ:— ಮಹಾರಾಜಾ! ವಿಮಲಾದೇವಿಯು ಪೃಥ್ವೀ ಸಿಂಗನ ಮರಣಾನಂತರದಲ್ಲಿ ಚಂದ್ರಾವತಿದೇವಿಗೆ ಒಂದು ಪತ್ರವನ್ನು ಬರೆದಿದ್ದಳು. ಅದು ಆಕೆಗೆ ಮುಟ್ಟಿತೋ ಇಲ್ಲವೋ ತಿಳಿಯದು. ಅಷ್ಟರಲ್ಲಿ ಯಶವಂತಸಿಂಹರಾಣಾರವರ ಮರಣವಾರ್ತೆಯನ್ನು ಕೇಳಿದುದರಿಂದ ಚಂದ್ರಾವತೀದೇವಿಯನ್ನು ನೋಡಿಬರಬೇಕೆಂದು ನನಗೆ ಅಜ್ಞಾಪಿಸಿ ಈ ಭಿಲ್ಲನನ್ನು ನನ್ನ ಸಹಾಯಕ್ಕಾಗಿ ಕಳುಹಿದಳು. ಈ ಮಾರ್ಗ ಮಧ್ಯದಲ್ಲಿ ಈ ದುಷ್ಟರು ನಮ್ಮನ್ನು ಬಾಧಿಸತೊಡಗಿದರು. ಈ ಸಮಯದಲ್ಲಿ ನೀವು ಬಾರದೆಹೋಗಿದ್ದರೆ ನಮ್ಮ ನಿಮ್ಮ ಋಣಾನುಬಂಧವಿಂದಿಗೆ ತೀರಿಹೋಗುತ್ತಿದ್ದಿತು. ದೇವರೇ ನಿಮ್ಮನ್ನು ಇಲ್ಲಿಗೆ ಕಳುಹಿದನೆಂದು ನನಗೆ ತೋರುತ್ತಿದೆ"

ರಾಜಪುತ್ರ:—ಮಂದಹಾಸದಿಂದ "ಹಾಗಾದರೆ, ಚಂದ್ರಾವತಿಯನ್ನು ನೋಡುವುದಕ್ಕೆಮಾತ್ರ ಬಂದೆ! ಮತ್ತಾರನ್ನೂ ನೋಡಬೇಕಾದ ಅಗತ್ಯವಿಲ್ಲ—ಅಹುದಷ್ಟೆ?"

ಶಿವಸಿಂಗನ ಪರಿಹಾಸವಾಕ್ಯಕ್ಕೆ ಪದ್ಮೆಯು ಉತ್ತರವನ್ನು ಕೊಡಲಾರದೆ ಲಜ್ಜೆಯಿಂದ ಆರಕ್ತವಾಗಿದ್ದ ಮುಖಕಮಲ ವನ್ನು ಬಾಗಿಸಿಕೊಂಡಳು. ಶಿವಸಿಂಗನು ರಕ್ತತೆಯಿಂದ ಸುಮನೋಹರವಾಗಿದ್ದ ಪದ್ಮೆಯ ಮುಖಮುದ್ರೆಯನ್ನು ಏಕ ದೃಷ್ಟಿಯಿಂದ ದಿಟ್ಟಿಸಿನೋಡಿ ಆನಂದೋದ್ರೇಕದಿಂದ ಲಾಘವದಲ್ಲಿ ಪದ್ಮೆಯ ಮುಂದೆ ನಿಂತು ಅವಳ ಮುಖಕಮಲದ ಸುವಾಸನೆಯನ್ನು ಸ್ವೀಕರಿಸಿ, ಗಾಢಾಲಿಂಗನದಿಂದ ತನ್ನ ಅನುರಾಗವನ್ನು ಹೊರಚೆಲ್ಲಿದನು. ಪದ್ಮೆಯು ಪ್ರಾಣವಲ್ಲಭನ ಮುಖವನ್ನು ನೋಡಿ ಪ್ರೀತಿಯಿಂದ—"ನೀವು ಈ ಅರಣ್ಯದಲ್ಲಿ ಎಲ್ಲಿಗೆ ಹೋಗುತ್ತಿರುವಿರಿ?" ಎಂದಳು.

ಶಿವಸಿಂಗ್:— ಪದ್ಮಾ! ದುರ್ಗಾದಾಸನು ಶತ್ರುಗಳ ಮಧ್ಯದಲ್ಲಿ ಸಿಕ್ಕಿದ್ದ ಚಂದ್ರಾವತಿಯನ್ನು ಕುಮಾರನೊಡನೆ ಉಪಾಯದಿಂದ ಬಿಡುಗಡೆಮಾಡಿ ಅವರಿಬ್ಬರನ್ನೂ ಜೋಧಪುರಕ್ಕೆ ನಾಗಿಸಬೇಕೆಂದು ನನ್ನ ಹಿಂದೆ ಕಳುಹಿರುವನು. ನಾವು ಈ ಅರಣ್ಯಮಾರ್ಗವಾಗಿ ಹೋಗುತ್ತಿರುವಾಗ 'ರಕ್ಷಿಸು-ರಕ್ಷಿಸು!' ಎಂಬ ಆರ್ತಸ್ವರವನ್ನು ಕೇಳಿ ಚಂದ್ರಾವತಿಯು ನನ್ನನ್ನು ಇಲ್ಲಿಗೆ ಕಳುಹಿದಳು. ಇಷ್ಟುಹೊತ್ತಿಗೆ ಚಂದ್ರಾವತಿಯು ಬಹುದೂರ ಹೋಗಿರಬಹುದು' ಎಂದನು.

ಈ ಮಾತುಗಳೆಲ್ಲವನ್ನು ಕೇಳುತ್ತಿದ್ದ ಭಿಲ್ಲನು-'ಸ್ವಾಮಿ! ತಾವು ಈ ತಾಯಿಯನ್ನು ಕರೆದೊಯ್ದರೆ ನಾನು ಮೆಲ್ಲನೆ ಹಿಂದೆ ಬರುವೆನು' ಎಂದು ಹೇಳಲು, ಶಿವಸಿಂಗನು ಹಾಗೆಯೇ ಆಗಲೆಂದು ಒಪ್ಪಿ, ಪದ್ಮೆಯನ್ನು ಕರೆದುಕೊಂಡು ಹೊರಟನು.

ಶಿವಸಿಂಗ ಪದ್ಮೆಯರಿಗೆ ನಡೆದ ಸಂಭಾಷಣೆಯಿಂದ ಪಲ್ಲಕ್ಕಿಯಲ್ಲಿದ್ದ ಸ್ತ್ರೀಯೇ ಚಂದ್ರಾವತಿಯೆಂದೂ, ಕುಮಾರನೇ ಅಜಿತಸಿಂಗನೆಂದೂ ವಾಚಕರು ತಿಳಿದಿರುವರು. ಆದರೆ ಶತ್ರುಗಳ ಮಧ್ಯದಲ್ಲಿ ಸಿಕ್ಕಿದವರು ಹೇಗೆ ತಪ್ಪಿಸಿಕೊಂಡು ಬಂದರೆಂಬುದನ್ನು ತಿಳಿಯಲು ವಾಚಕರು ಅತಿ ಕುತೂಹಲರಾಗಿರಬಹುದು. ದುರ್ಗಾದಾಸನೂ ಆತನ ತಂಗಿಯಾದ ಇಂದಿರಾದೇವಿಯೂ ಚಂದ್ರಾವತಿಯ ವಿಷಯವಾಗಿ ತಕ್ಕಪ್ರಯತ್ನಗಳನ್ನು ಮಾಡುತ್ತಲೇ ಇದ್ದರು. ಆ ದಿನವು ಯಶವಂತ ಸಿಂಹನ ೧೧ನೆಯ ದಿನವಾದುದರಿಂದ ಮಂತ್ರಾಕ್ಷತೆಯನ್ನೂ ಬ್ರಾಹ್ಮಣಸಮಾರಾಧನೆಯನ್ನೂ ವಿಶೇಷವಾಗಿ ನಡೆಯುತ್ತಿದ್ದುದರಿಂದ ಗುಡಾರದಲ್ಲೆಲ್ಲಾ ಬಲ್ಲು ಕಲ್ಲೋಲವಾಗಿದ್ದಿತು.

ಆ ದಿನ ಪ್ರಾತಃಕಾಲ ಇಂದಿರೆಯು ತನ್ನ ಮೇಲುಹೊದಿಕೆಯನ್ನು ಧರಿಸಿ, ಮುಖವನ್ನು ಬೇರೆಯವರು ತೋರಿಸದಂತೆ ಗುಡಾರದಿಂದ ಹೊರಹೊರಟಳು. ಎಷ್ಟು ಬಾರಿ ತಿರುಗಿದರೂ ಆತಂಕವಿಲ್ಲದುದರಿಂದ ಇಂದಿರೆಯು ಉಪಾಯದಿಂದ ಸಮೀಪದಲ್ಲಿದ್ದ ಗೊಲ್ಲರ ಹಟ್ಟಿಗೆ ಹೋಗಿ ಒಬ್ಬ ಗೊಲ್ಲರವಳಿಗೆ ಲಂಚವನ್ನು ಕೊಟ್ಟು ಗೊಲ್ಲರ ಉಡುಪನ್ನು ತಾನು ಧರಿಸಿ, ತಲೆಯ ಮೇಲೆ ಹೂಸರಿನ ಗಡಿಗೆಯನ್ನು ಹೊತ್ತುಕೊಂಡು ಪುನಃ ಗುಡಾರಕ್ಕೆ ಹೊರಟು ಬಂದಳು. ಅಲ್ಲಿದ್ದ ಸಿಪಾಯಿಗಳು ನಿತ್ಯದಂತೆಯೇ ಅಜಿತಸಿಂಗನಿಗೆ ಹಾಲನು ತಂದು ಕೊಡುವ ಗೊಲ್ಲತಿಯೆಂದು ತಿಳಿದು ಆಕೆಯನ್ನು ಯಾರೂ ತಡೆಯಲಿಲ್ಲ. ಹಾಗೆ ಇಂದಿರೆಯು ವೇಷವನ್ನು ಧರಿಸಿ ಒಳಹೊಕ್ಕು ಆ ಅಜಿತಸಿಂಗನನ್ನು ಗಡಿಗೆಯೊಳಗಡೆ ಅಡಿಯಲ್ಲಿ ಮಲಗಿಸಿ ಸ್ವಲ್ಪವೂ ಅಪಾಯವಾಗದಂತೆ ಕುಮಾರನ ಮೇಲೆ ಒಂದು ಸಣ್ಣ ಮಡಕೆಯನ್ನಿಟ್ಟು ಗುಡಾರದಿಂದ ಹೊರಟು ಗೊಲ್ಲರ ಹಟ್ಟಿಗೆ ಹೋಗಿ ಒಬ್ಬ ಗೊಲ್ಲತಿಯ ವಶಕ್ಕೆ ಮಗುವನ್ನೊಪ್ಪಿಸಿ, ತಾನು ಹಿಂದಿನಂತೆ ಉಡುಪನ್ನು ಧರಿಸಿ ಗುಡಾರದೊಳಕ್ಕೆ ಬಂದಳು. ಈ ಹತ್ತು ದಿನಗಳಲ್ಲಿ ಇಂದಿರೆಯು ಎಷ್ಟೋಸಲ ಅತ್ತಿತ್ತ ತಿರುಗಾಡಿದ್ದರೂ ಆಕೆಯ

ಮುಖಕಮಲವು ಹೇಗಿತ್ತೆಂಬುದನ್ನು ಒಬ್ಬರೂ ತಿಳಿಯದಿದ್ದರು. ಆ ದಿನ ಊಟವಾದ ಮೇಲೆ ಇಂದಿರೆಯು ತನ್ನ ಮಲಯುವುಸುಗನ್ನು ಚಂದ್ರಾವತಿಗೆ ಕೊಡಿಸಿ, ಆಕೆಯನ್ನು ಉಪಾಯದಿಂದ ಗೊಲ್ಲರಹಟ್ಟಿಗೆ ಕುಮಾರನಿದ್ದ ಸ್ಥಳಕ್ಕೆ ಕಳುಹಿಬಿಟ್ಟಳು. ಆ ದಿನವೇ ದುರ್ಗಾದಾಸನ ಅಪ್ಪಣೆಯ ಮೇಲೆ ಶಿವಸಿಂಗನು ಕೆಲವು ಜನ ಭಿಲ್ಲರನ್ನು ಕರೆದುಕೊಂಡು ಗೊಲ್ಲರಹಟ್ಟಿಯನ್ನು ಸೇರಿ ಚಂದ್ರಾವತಿಯನ್ನೂ ಅಜಿತಸಿಂಗನನ್ನೂ ಒಂದು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಕರೆದುಕೊಂಡು ಹೋದನು. ಇತ್ತ ಇಂದಿರೆಯು ಚಂದ್ರಾವತಿಯ ವೇಷವನ್ನು ಧರಿಸಿ ಹೊರಗೆ ಪುತ್ರನ ಮರಣವನ್ನು ರೋದನರೂಪದಿಂದ ತೋರಿಸುತ್ತ ಅಂತರಂಗದಲ್ಲಿ ಸುಖವಾಗಿದ್ದಳು.

ಇತ್ತ ಶಿವಸಿಂಗನೂ ಪದ್ಮೆಯೂ ಅರಣ್ಯಮಧ್ಯದಲ್ಲಿ ಹೊರಟು ಎರಡುದಿನಗಳಲ್ಲಿ ಚಂದ್ರಾವತಿಯನ್ನು ಸೇರಿಕೊಂಡರು. ಚಂದ್ರಾವತಿಯೂ ಪದ್ಮೆಯೂ ಪರಸ್ಪರಾಲಿಂಗನ ಮಾಡಿಕೊಂಡು ಕುಶಲವೃತ್ತಾಂತವನ್ನು ವಿಚಾರಮಾಡಿ ಆನಂದವನ್ನು ವ್ಯಕ್ತಪಡಿಸಿದರು. ಶಿವಸಿಂಗನು ಪದ್ಮೆಯನ್ನು ಚಂದ್ರಾವತಿಯೊಡನೆ ಪಾಲ್ಕಿಯಲ್ಲಿ ಕುಳ್ಳಿರಿಸಿ ಪರಿವಾರದೊಡನೆ ಮುಂದೆ ಪ್ರಯಾಣಮಾಡಿದನು. (ಮುಂದೆ ಸಾಗುವದು.)

ಪನ್ನೆ

—※—

ಲೇಖಕ — ಸ. ಗು. ಸರ್ವೇಶ್ವರಭಟ್ಟ ಬಿ.ಎ. ಹೈಸ್ಕೂಲ್ ವಿದ್ಯಾರ್ಥಿ ಮಂಗಳೂರು

I

ಮೇವಾಡದ ಮುಖ್ಯಪಟ್ಟಣವಾದ ಚಿತ್ತೂರು ಲೋಕಪ್ರಸಿದ್ಧವಾಗಿರುವುದೂ, ಅಲ್ಲಿ ಆಳಿದ ರಾಜಕುಲದವರ ಕೀರ್ತಿಯು ಲೋಕವ್ಯಾಪಿಯಾಗಿರುವುದೂ ಸರಿಯಷ್ಟೆ? ಅಂತಹ ರಾಜಕುಲದಲ್ಲಿ ಹುಟ್ಟಿದ ಒಬ್ಬ ರಾಜಕುಮಾರನನ್ನು ಒಬ್ಬ ದಾಸಿಯು ಹೇಗೆ ಕಾಪಾಡಿದಳೆಂಬುದನ್ನು ವಾಚಕ ವಾಚಿಕೆಯರ ಮುಂದಿಡಬೇಕೆಂದಿರುವೆನು.

ನಮ್ಮ ಆರ್ಯರಮಣಿಯರೆಂದರೆ, ಅಸಮಾನೆಯರು. ಅವರು ಸಂಕಲ್ಪಿಸಿದ ಕೆಲಸಗಳನ್ನು ಎಷ್ಟು ಕಷ್ಟವಾದರೂ ಹಿಂತೆರೆಯದೆ ಮಾಡುವರು. ಎಷ್ಟೋ ಮಂದಿ ಮಹಿಳೆಯರು ಅಸಾಧಾರಣಕಾರ್ಯಗಳನ್ನು ಮಾಡಿ ಕೀರ್ತಿಗೆ ಬಂದಿರುವರು. ಅಂತಹರಲ್ಲಿ ಪನ್ನಾದಾಸಿಯು ಒಬ್ಬಳಾಗಿರುವಳು.

ಸಂಗ್ರಾಮಸಿಂಹನು ಬಾಬರನೊಡನೆ ಮಾಡಿದ ಯುದ್ಧದಲ್ಲಿ ಮಡಿದನು. ಆಗ ಅವನ ಮಗನಾದ ಉದಯಸಿಂಹನು ಚಿಕ್ಕ ಮಗುವಾಗಿದ್ದನು. ಆದುದರಿಂದ ಸರದಾರರೆಲ್ಲರೂ ಕೂಡಿ, ಉದಯಸಿಂಹನ ಬದಲಾಗಿ ಅವನ ಚಿಗಪ್ಪನಾದ ವನವೀರನನ್ನು ಆರಿಸಿದರು.

ಕೆಲವು ಕಾಲ ಕಳೆಯಲು ವನವೀರನಿಗೆ ತಾನೇ ಯಾವಾಗಲೂ ರಾಜನಾಗಿರಬೇಕೆಂಬ ಆಶೆಯು ಹುಟ್ಟಿತು. ಆಶೆಯೇ ಮಹಾಪಾಪಿಯಾದುದು. ಅದು ಬಾಂಧವ್ಯವನ್ನಾಗಲಿ, ಜನನಿಂದೆಯನ್ನಾಗಲಿ, ನರಕಯಾತನೆಯನ್ನಾಗಲಿ ಗಣಿಸುವದಿಲ್ಲ. ದುರಾಶೆಯೆಂಬ ಪ್ರೇತಕ್ಕೆ ತುತ್ತಾದವನಿಗೆ ಕೊಲೆಸುಲಿಗೆ—ಪರಸ್ವಾಪಹರಣಗಳು ಹೇಯವೆಂದು ಕನಸಿನಲ್ಲಿಯೂ ಹುಟ್ಟುವದಿಲ್ಲ. ಎಂದ ಮೇಲೆ ಭೀತಿಯೂ ಪಶ್ಚಾತ್ತಾಪಗಳಿಗೆ ಸ್ಥಳವೆಲ್ಲಿರುವದು. ಇರಲಿ. ರಾಜ್ಯಲೋಭಪಿಶಾಚಗ್ರಸ್ತನಾದ ವನವೀರನು ತನ್ನ ಉದ್ದೇಶಸಿದ್ಧಿಗೆ ಕಂಟಕಪ್ರಾಯನಾಗಿದ್ದ ಉದಯಸಿಂಹನನ್ನು ಕೊಲ್ಲುವ ಹಂಚಿಕೆಯನ್ನು ಮಾಡತೊಡಗಿದನು.

ಉದಯಸಿಂಹನು 'ಪನ್ನೆ' ಎಂಬ ದಾಸಿಯ ಆರೈಕೆ ಪೋಷಣೆಯಲ್ಲಿದ್ದನು. ಪನ್ನೆಗೂ ಉದಯಸಿಂಹನಷ್ಟೇ ಪ್ರಾಯದ ಮಗನೊಬ್ಬ ಇದ್ದನು. ಇಬ್ಬರೂ ಸದಾ ಒಟ್ಟಿಗೆ ಆಡುತ್ತಿದ್ದರು. ಚಿತ್ತೂರಿನಲ್ಲಿ ಬಾರಿಯೆಂಬ ಕ್ಷೌರಿಕನು, ರಾಜಮನೆತನದವರಿಗೆ ಕ್ಷೌರಮಾಡುವವನಾಗಿದ್ದನು. ಅವನಿಗೆ ರಾಜನ ಹಂಚಿಕೆಯು ತಿಳಿಯಿತು. ಅವನು ಈ ಹಂಚಿಕೆಯನ್ನ ಪನ್ನೆಗೆ ತಿಳಿಸಿದನು.

× × × × ×

II

ಒಂದು ದಿನ ಬಾರಿಯು ಪನ್ನೆಯಿದ್ದೆಡೆಗೆ ಓಡುತ್ತ ಬಂದು ಗಾಬರಿಯಿಂದ ಹೀಗೆಂದನು. ಪನ್ನೆ, ಸರ್ವನಾಶವಾಯಿತಲ್ಲ! ಹಾ, ದೈವವೆ! ವನವೀರನೇ ರಾಜಕುಮಾರನಿಗೆ ಮೃತ್ಯುವೆ? ಮುಂದೇನುಗತಿ? ಉದಯಸಿಂಹನನ್ನು ಕೊಲ್ಲುವುದಕ್ಕಾಗಿ ಅವನೇ ಖಡ್ಗವನ್ನು ಹಿಡಿದು ಬರುತ್ತಿರುವನು. ಇನ್ನು ಈ ಕುಮಾರನಿಗೆ ಗತಿಯೇನು? "

ಪನ್ನೆಯು ವಿಳಂಬಿಸದೆ ಹತ್ತಿರದಲ್ಲಿದ್ದ ಒಂದು ಹಣ್ಣಿನ ಪುಟ್ಟಿಯನ್ನು ತೆಗೆದು ಅದರಲ್ಲಿದ್ದ ಹಣ್ಣುಗಳನ್ನು ಕೆಳಗೆ ತೆಗೆದಿಟ್ಟು, ನಿದ್ದಿಸುತ್ತಿದ್ದ ರಾಜಕುಮಾರನನ್ನು ಅದರಲ್ಲಿ ಮಲಗಿಸಿ, ಮೇಲೆ ಒಂದು ಬಟ್ಟೆಯನ್ನು ಮುಚ್ಚಿ ಅದರ ಮೇಲೆ ಕೆಲವು ಹಣ್ಣುಗಳನ್ನಿಟ್ಟು ವಾರಿಯೊಡನೆ ಕೊಟ್ಟು ಅದನ್ನು ಕೋಟೆಯ ಹೊರಗಿರುವ ಅರಳಿ ಮರದಡಿಗೆ ಕೊಂಡುಹೋಗಿ ಅಲ್ಲಿ ನಿಂತಿರುವಂತೆ ಹೇಳಿ ಕಳುಹಿದಳು

ಆತನನ್ನು ಕಳುಹಿದೊಡನೆಯೇ ಕುಮಾರಉದಯಸಿಂಹನ ಆಭರಣಗಳನ್ನು ತನ್ನ ಮಗನಿಗೆ ತೊಡಿಸಿ, ತೊಟ್ಟಿಲಲ್ಲಿ ಮಲಗಿಸಿದಳು. ವನವೀರನು ಕೂಡಲೇ ಒಳಹೊಕ್ಕು ಉದಯ ಸಿಂಹನೆಲ್ಲಿ—ಎಂದು ಕೇಳಿದಳು.

ಪನ್ನೆಯು ಕಣ್ಣೀರನ್ನು ಸುರಿಸುತ್ತ, ತೊಟ್ಟಿಲದ ಕಡೆಗೆ ಬೊಟ್ಟುಮಾಡಿ ತೋರಿಸಿದಳು ಕೂಡಲೇ ವನವೀರನು ತೊಟ್ಟಿಲಲ್ಲಿ ಇದ್ದ ಮಗು ಯಾರೆಂದು ವಿಚಾರಿಸದೆ ಪನ್ನೆಯ ಪುತ್ರನನ್ನು ಖಡ್ಗದಿಂದ ತುಂಡರಿಸಿ ಅಪಕೀರ್ತಿಗೆ ಗುರಿಯಾದನು.

ಛಿಃ! ಕುಲಾಂಗಾರನಾದ ಹೇಡಿ, ವನವೀರ! ಕಠಿಣ ಹೃದಯನಾದ ನೀನು ಉತ್ತಮವಾದ ರಜಪೂತವಂಶದಲ್ಲಿ ಹುಟ್ಟಿದೆ! ನಿರ್ದೋಷಿಯಾದ ಬಾಲನನ್ನು ಕೊಂದು ಪಾಪಿಯಾದ ನಿನಗೆ ದೇವರು ಎಂತಹ ನರಕವನ್ನು ನಿರ್ಮಿಸಿರುವನೊ?

III

ಪನ್ನೆಯು ತನ್ನ ಮಗನು ಸತ್ತುದನ್ನು ನೋಡಿ, ದೊಡ್ಡದಾಗಿ ಅತ್ತಳು ಯಾರಿಗಾದರೇನು. ಪುತ್ರಶೋಕವು ಅಸಹನೀಯವು.

ಪನ್ನೆಯ ಅಳುವುದನ್ನು ಕೇಳಿ ಸುತ್ತಮುತ್ತಲಿನವರು ಅಲ್ಲಿಗೆ ಬಂದರು. ಆದರೆ, ಪುತ್ರನನ್ನು ಕೊಂದವರಾರೆಂದು ಕೇಳಲು ಧೈರ್ಯವುಳ್ಳವರಾಗಲಿಲ್ಲ. ಪನ್ನೆಯು ಶಿಶುವನ್ನು ಚಿತೆಯಲ್ಲಿಟ್ಟು ಅದಕ್ಕಾಗಬೇಕಾದ ಸಂಸ್ಕಾರಗಳನ್ನು ಮಾಡಿದಳು.

ಸಂಸ್ಕಾರಗಳಾದೊಡನೆಯೇ ಯಾರಿಗೂ ತಿಳಿಯದಂತೆ ಅರಳೀಮರವಿದ್ದಲ್ಲಿಗೆ ಹೋದಳು. ಅಲ್ಲಿ ವಾರಿಯು ಪನ್ನೆಯ ಹಾದಿ ನೋಡುತ್ತಿದ್ದನು ಪನ್ನೆಯೂ ವಾರಿಯೂ ಆದಿನ ಹಗಲು ರಾತ್ರಿ, ಎಡಬಿಡದೆ ನಡೆದು “ಕಮಲಮೇರು” ಎಂಬ ಸಂಸ್ಥಾನಕ್ಕೆ ಮುಟ್ಟಿದರು ಉದಯಸಿಂಹನನ್ನು ಅಲ್ಲಿಯ ರಾಜನ ವಶಕ್ಕೊಪ್ಪಿಸಿ, ಪ್ರಾಯವು ಬರುವ ವರೆಗೆ ಸುರಕ್ಷಿತವಾಗಿ ನೋಡಿಕೊಳ್ಳುವಂತೆ ಹೇಳಿ ಬಾಗಿಲಿಯಾಗಿ ನಿಂತಿರುಗಿದರು.

ಧನ್ಯೆ! ಪನ್ನೆ! ನೀನೇ ಧನ್ಯೆ!! ಒಂದು ರಾಜವಂಶವನ್ನು ಉಳಿಸುವುದಕ್ಕಾಗಿ ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಬಲಿಗೊಟ್ಟೆ! ದೇಶದ ದೊಡ್ಡ ಸೇವೆಗೈದೆ! ನಿನ್ನಂತಹ ಉಜ್ವಲ ದೇಶಭಕ್ತಿ ರಾಜನಿಷ್ಠೆ ಸಂಪನ್ನೆಯರಾದ ಮಹಿಳೆಯರು ಇನ್ನೂ ಈ ಭಾರತ ಭೂಮಿಯಲ್ಲಿ ಹುಟ್ಟಲಿ' ಭಾರತಮಾತೆ ಅಂತಹವರನ್ನು ಕೃಪೆಮಾಡಲಿ!!

—o—

ಕರ್ನಾಟಕ ನಂದಿನಿ.

(ಪ್ರಥಮ ಸಂಪುಟ.)

ಕರ್ಣಾಟಕ ನಂದಿನಿಯ ಪ್ರಥಮಸಂಪುಟದ ಸ್ವಲ್ಪ ಪ್ರತಿಗಳು ಮಾತ್ರವೇ ಬೈಂಡಾಗಿ ವಿಕ್ರಯಕ್ಕೆ ಸಿದ್ಧವಾಗಿರುವುವು. ೫೬೦ ಪುಟಗಳನ್ನೂ, ೧೮ ಭಾವಚಿತ್ರಗಳನ್ನೂ ಒಳಕೊಂಡಿರುವ ಈ ಸಂಪುಟದಲ್ಲಿ ಕರ್ಣಾಟಕ ದೇಶಭಕ್ತರ-ಭಾಷಾಸೇವಕರ ಮತ್ತು ಭಾರತೀಯ ಸುಪ್ರಸಿದ್ಧಪುರುಷರ, ಮಹಿಳಾಮಣಿಯರ ಜೀವನಚರಿತೆಗಳೂ ಸ್ತ್ರೀಯರಿಗೆ ಅತ್ಯುಪಯುಕ್ತವಾದ ಉಪನ್ಯಾಸಗಳೂ ಸ್ಫೂರ್ತಿದಾಯಕವಾದ ಸಣ್ಣ ಸಣ್ಣ ಲೇಖಗಳೂ ಅನೇಕ ದೇವರ ನಾಮಗಳೂ ಪ್ರಕಟವಾಗಿರುವುವು ಮತ್ತು ಸುಮುಪೇವಿಜಯವೆಂಬ ಹರಿಭಜನ ಗ್ರಂಥವು ಬಹುಮಾನ ಪುಸ್ತಕವಾಗಿ ಲಭಿಸುವುದು ಬೈಂಡಾದ ಸಂಪುಟ (೧೨ ಸಂಚಿಕೆಗಳ ಪುಸ್ತಕ , ೧ ಕ್ಕೆ ಹಾಸಲು ಸೇರಿ ೨-೨-೦ ಮಾತ್ರ. ಬೈಂಡಾಗದ ಸಂಚಿಕೆಗಳನ್ನು ತರಿಸಿಕೊಳ್ಳುವವರಿಗೆ ೧೨ ಸಂಚಿಕೆಗಳಿಗೆ ಹಾಸಲು ಸೇರಿ ೧—೧೨—೦ ಮಾತ್ರ. ಬೇಕಾದವರು ಜಾಗ್ರತೆಯಾಗಿ ಬರೆದು ತರಿಸಿಕೊಳ್ಳಬಹುದು.

ವಿಳಾಸ:— ಕಾರ್ಯದರ್ಶಿ
“ನಂದಿನಿ”
ಸಾತ್ಯಮಂದಿರ, ನಂಜನಗೂಡು (ಮೈಸೂರು)

ನಾಟಕ ಲಕ್ಷಣ ಪ್ರಬಂಧವು.

(ಲೇಖಕ: ಶ್ರೀ . ರಾಮಸ್ವಾಮಯ್ಯಂಗಾರ್ ಸಾಹಿತ್ಯವಿದ್ವಾನ್)

ಹಿಂದಿನ ಸಂಚಿಕೆಯಲ್ಲಿ ನಾಟಕವೇ ಮೊದಲಾದ ದಶ ರೂಪಕಗಳ ಹೆಸರು ಲಕ್ಷಣಗಳನ್ನು ಹೇಳಿದ್ದಿತು ಇನ್ನು ಮುಂದೆ ರೂಪಕಗಳಿಗೆ ಸಹಾಯವಾದ ಅಂಗಗಳು ಹೇಳಲ್ಪಡುವವು

ಇವುಗಳಲ್ಲಿ ಪ್ರಥಮತಃ ೫ ಸಂಧಿಗಳಿವೆ. ಅವು ಅವ ವೆಂದರೆ, ೧ ಮುಖ, ೨ ಪ್ರತಿಮುಖ, ೩ ಗರ್ಭ, ೪ ಅವಮರ್ಶ ೫ ಉಪಸಂಹೃತಿ.

"ಸಂಧಿ" ಎಂದರೆ-"ಏಕೇಕಾರ್ಯಾನ್ವಿತೇಷ್ವತ್ರ ಕಥಾಂಶೇಷು ಪ್ರಯೋಗತಃ ಅವಾಂತರೈಕಕಾರ್ಯಸ್ಯ ಸಂಬಂಧಸ್ಸಂಧಿರಿಷ್ಯತೇ" ಒಂದು ಕಾರ್ಯದಲ್ಲಿ ಸಂಬಂಧಿಸಿರುವ ಕಥೆಗಳಲ್ಲಿ ಪ್ರಯೋಗವಶಾತ್ ಅವಾಂತರ ಕಾರ್ಯದ ಸಂಬಂಧವು ಸಂಧಿಯೆನಿಸುವುದು.

ಇವುಗಳಲ್ಲಿ ಆರಂಭಕ್ಕೂ ಬೀಜಕ್ಕೂ ಇರುವ ಸಂಬಂಧವು "ಮುಖಸಂಧಿ" ಯೆನಿಸುವುದು. ಪ್ರಯತ್ನಕ್ಕೂ ಬಿಂದುವಿಗೂ ಇರುವ ಸಂಬಂಧವು 'ಪ್ರತಿಮುಖಸಂಧಿ' ಯೆನಿಸುವುದು, ಪ್ರಾಪ್ತ್ಯಾಶಾ, ಪತಾಕಾ, ಇವುಗಳ ಸಂಬಂಧವು "ಗರ್ಭಸಂಧಿ" ಯೆನಿಸುವುದು. ನಿಯತಾಪ್ತಿ, ಪ್ರಕರೀ, ಇವುಗಳ ಸಂಬಂಧವು "ವಿಮರ್ಶಸಂಧಿ" ಯೆನಿಸುವುದು. ಫಲಾಗಮ ಕಾರ್ಯಗಳ ಸಂಬಂಧವು "ನಿರ್ವಹಣಾಸಂಧಿ" ಯೆನಿಸುವುದು.

"ಆರಂಭ" ಎಂದರೆ ಹೆಚ್ಚು ಲಾಭಕ್ಕಾಗಿ ಕಾಲವಿಳಂಬವನ್ನು ಸಹಿಸದಿರುವ ಇಚ್ಛೆಯು, ಆರಂಭವೆನಿಸುವದು. ಸ್ವಲ್ಪವಾಗಿ ಉದ್ದೇಶಿಸಿ ತರವಾಯ ಮೂಲ, ಬೇರು, ಬುಡ, ಕೊಂಬೆಗಳನ್ನು ಹೊಂದಿ ಪ್ರಸರಿಸುವ ಬೀಜದಂತೆ ನಾಯಕ ಪ್ರತಿನಾಯಕೋಪನಾಯಕಭೇದದಿಂದ ಬಹು ವಿಸ್ತಾರವಾದ ತ್ರಿವರ್ಗರೂಪವಾದ ಪ್ರಯೋಜನದಲ್ಲಿ ಯಾವುದು ಕಾರಣ ಭೂತವಾಗುವುದೋ ಅದು ಬೀಜವೆನಿಸುವುದು ಸೂತ್ರ— "ಔತ್ಸುಕ್ಯಮಾತ್ರಮಾರಂಭಃ ಫಲಲಾಭಾಯ ಭೂಯಸೇ । ಸ್ತೋಕೋದ್ದಿಷ್ಟಃಕಾರ್ಯ ಹೇತುಃ ಬೀಜಂ ವಿಸ್ತಾರ್ಯತೇ ಕಥಾ ॥"

ಬೀಜವು ಫಲಹೊಂದದಿದ್ದಲ್ಲಿ ಅದನ್ನು ಹೊಂದುವುದರಲ್ಲಿ ಅತಿತ್ವರೆಯಿಂದ ಕೂಡಿರುವ ವ್ಯಾಪಾರವು 'ಪ್ರಯತ್ನ' ವೆನಿಸುವುದು ಬೀಜದ ಮುಖ್ಯ ಫಲವು ಅವಾಂತರ ಫಲದಿಂದ (ಅಂತರಾಳಿಕ) ವಿಚ್ಛೇದವಾಗಲು ವಿಚ್ಛೇದವಾಗದಂತೆ ಮಾಡುವ ವಸ್ತುವು "ಬಿಂದು" ವೆನಿಸುವುದು. ಸೂತ್ರ— "ಪ್ರಯತ್ನಸ್ತು ಫಲಪ್ರಾಪ್ತೌ ವ್ಯಾಪಾರೋತಿತ್ವರಾನ್ವಿತಃ ॥ ಫಲೇಪ್ರಧಾನವಿಚ್ಛಿನ್ನೇ ಬೀಜಸ್ಯಾವಾಂತರೈ ಫಲೈಃ ॥' ತಸ್ಯ ವಿಚ್ಛೇದಕೋ ಹೇತುಃ ಬಿಂದುರಿತ್ಯಾಹಕೋಹಲಃ ॥"

ಉಪಾಯದಿಂದಲೂ ಅಪಾಯದ ಯೋಚನೆಯಿಂದಲೂ ಕಾರ್ಯಸಂಭವವು "ಪ್ರಾಪ್ತ್ಯಾಶಾ" ಎನಿಸಿಕೊಳ್ಳುವುದು. ಮುಖ್ಯ ಕಥೆಯಲ್ಲಿ ಅಂಗಭೂತವಾದ ಬಹು ದೂರದವರೆಗೆ ಅನುವರ್ತಿಸುವ ಕಥೆಯು 'ಪತಾಕಾ' ವೆನಿಸುವುದು ಸೂತ್ರ– "ಉಪಾಯೋಪಾಯ ಶಂಕಾಭ್ಯಾಂ ಪ್ರಾಪ್ತ್ಯಾಶಾಕಾರ್ಯ ಸಂಭವಃ ॥ ಪ್ರತಿಪಾದ್ಯ ಕಥಾಂಗಂ ಸ್ಯಾತ್ ಪತಾಕಾವ್ಯಾಪಿನೀಕಥಾ ॥'

ಅಪಾಯವಿಲ್ಲದಿರುವುದರಿಂದ ಕಾರ್ಯನಿಶ್ಚಯವು "ನಿಯತಾಪ್ತಿ" ಎನಿಸಿಕೊಳ್ಳುವುದು. ಪ್ರಧಾನಫಲಕ್ಕೆ ಸಹಾಯಭೂತವಾದ ಅಂತರಾಳಿಕವಾದ ಅಲ್ಪಕಥೆಯು 'ಪ್ರಕರೀ' ಎನಿಸುವುದು. "ಅಪಾಯೋಭಾವತಃ ಕಾರ್ಯಂ ನಿಶ್ಚಯಂ ನಿಯತಾಪ್ತಿಕಾ । ಅವ್ಯಾಪಿನೀ ಪ್ರಕರಿಕಾ ಕಾರ್ಯನಿರ್ವಾಹಕೃತ್ಸ್ಥಲೇ ॥'

ಪ್ರತಿಬಂಧವನ್ನು ಹೋಗಲಾಡಿಸಿ ಫಲಪ್ರಾಪ್ತಿ ಪರ್ಯಂತವೂ ನಡೆಯುವ ಕರ್ತನ ವ್ಯಾಪಾರವು 'ಫಲಾಗಮ' ವೆನಿಸುವುದು. ಸೂತ್ರ– "ಸಮಗ್ರ ಫಲಸಂಪತ್ತಿಃ"

ಸಂಧಿಯನ್ನು ನಿರೂಪಣೆಮಾಡಿದಮೇಲೆ ಸಂಧ್ಯಂಗಗಳು ವಿವರಿಸಲ್ಪಡುವುವು. ಮುಖಸಂಧಿಯಲ್ಲಿ ಆರಂಭ ಬೀಜವನ್ನು ಅನುಸರಿಸಿ ೧೨ ಅಂಗಗಳಿವೆ. ಯಾವುವೆಂದರೆ, "ಉಪಕ್ಷೇಪಃ ಪರಿಕರಃ ಪರಿನ್ಯಾಸೋ ವಿಲೋಭನಂ । ಯುಕ್ತಿಃಪ್ರಾಪ್ತಿ ಸಮಾಧಾನಂ । ವಿಧಾನಂ ಪರಿಭಾವನಾ ॥ ಉದ್ಭೇದ ಭೇದ ಕರಣಾನಿ ॥" ಎಂಬಿವುಗಳು ಅರ್ಥಕ್ಕನುಸಾರವಾಗಿ ೧೨ ಮುಖಸಂಧಿಯಲ್ಲಿವೆ.

೧ ಬೀಜವನ್ನು ಸ್ವಲ್ಪವಾಗಿ ತೋರಿಸುವುದು "ಉಪಕ್ಷೇಪವು." ೨ ಬೀಜವನ್ನು ಬಹುವಾಗಿ ವಿಶದಪಡಿಸುವುದು "ಪರಿಕರವು" ೩ ಬೀಜ ನಿಷ್ಪತ್ತಿಯು "ಪರಿನ್ಯಾಸವು" ೪ ಬೀಜ ಗುಣವನ್ನು ವರ್ಣಿಸುವುದು "ವಿಲೋಭನವು" ೫ ಬೀಜಾನುಕೂಲವಾದ ಸಂಘಟನ ಪ್ರಯೋಜನವಿಚಾರವು 'ಯುಕ್ತಿಯು." ೬ ಬೀಜದ ಸುಖಾಗಮನವು "ಪ್ರಾಪ್ತಿಯು" ೭ ಬೀಜ

ಸನ್ನಿಧಾನವು "ಸಮಾಧಾನವು" ೮ ಬೀಜದ ಸುಖದು ಖಕ್ಕೆ ಕಾರಣವು "ವಿಧಾನವು." ೯ ಬೀಜವಿಷಯವಾದ ಆಶ್ಚರ್ಯಾತಿಶಯವು "ಪರಿಭಾವನೆ." ೧೦ ಗುಪ್ತವಾದ ಅಂಗವನ್ನು ಪ್ರಕಾಶಪಡಿಸುವುದು "ಉದ್ಭೇದವು" ೧೧ ಬೀಜಾನುಗುಣವಾದ ಉತ್ಸಾಹವು 'ಭೇದವು" ೧೨ ಬೀಜಾನುಗುಣವೂ ಪ್ರಕೃತೋಪಯೋಗಿಯೂ ಆದ ಕಾರ್ಯಾರಂಭವು "ಕರಣವು' ಈ ಹನ್ನೆರಡೂ ಮುಖಸಂಧಿಗ ಅಂಗಗಳು ಇವುಗಳೆಲ್ಲಾ ಇದ್ದೇ ಇರಬೇಕೆಂಬ ನಿಯಮವಿಲ್ಲ ಆದರೆ ಉಪಕ್ಷೇಪ, ಪರಿಕರ, ಪರಿನ್ಯಾಸ, ಯುಕ್ತಿ, ಉದ್ಭೇದ ಸಮಾಧಾನ ಎಂಬ ಆರು ಅಂಗಗಳು ಅವಶ್ಯಕವಾಗಿ ಇರಬೇಕು.

೨ ಕೆಲವು ಅಂಶದಿಂದ ಕಾಣುತ್ತಲೂ ಮತ್ತೆ ಕೆಲವು ಅಂಶಗಳಿಂದ ಕಾಣದೆಯೂ ಇರುವ ಬೀಜದ ಪ್ರಕಾಶವು "ಪ್ರತಿಮುಖ ಸಂಧಿ" ಯೆನಿಸುವುದು ಆದರೆ ಇದರಲ್ಲಿ ಬಂದು ಪ್ರಯತ್ನಾನುಗುಣ್ಯವಾಗಿ—೧ ವಿಲಾಸ, ೨ ಪರಿಸರ್ಪ, ೩ ವಿಧೂತ, ೪ ಶಮ, ೫ ನರ್ಮ, ೬ ನರ್ಮದ್ಯುತಿ, ೭ ಪ್ರಗಮನ, ೮ ವಿರೋಧ, ೯ ಪರ್ಯುಪಾಸನ ೧೦ ವಜ್ರ, ೧೧ ಪುಷ್ಪ, ೧೨ ಉಪನ್ಯಾಸ, ೧೩ ವರ್ಣಸಂಹಾರ ಎಂಬದಾಗಿ ೧೩ ಅಂಗಗಳಿವೆ. ಇವುಗಳ ಲಕ್ಷಣಗಳು ಅವುಸೆಂದರೆ

೧ ಸಂಭೋಗವಿಷಯಕವಾದ ಇಚ್ಛೆ, 'ವಿಲಾಸವು' ೨ದೃಷ್ಟನಷ್ಟವಾದ ಪದಾರ್ಥವನ್ನು ಅನುಸರಿಸುವುದು 'ಪರಿಸರ್ಪವು'. ೩ ಅಸಿಷ್ಟವಸ್ತುವನ್ನು ಹೋಗಲಾಡಿಸುವದು "ವಿಧೂತ". ೪. ಅರತ್ಯುಪಶಮನವು "ಶಮವು" ೫ ಪರಿಹಾಸವಚನವು "ನರ್ಮವು" ೬ ಅನುರಾಗವನ್ನು ಪ್ರಕಾಶಪಡಿಸುವ ಪ್ರೀತಿಯು "ನರ್ಮದ್ಯುತಿ" ಯು. ೭ ಮುಂದುಮುಂದಿನ ವಾಕ್ಯಗಳಿಂದ ಅನುರಾಗ ಸಂಬಂಧವಾದ ಬೀಜವನ್ನು ಪ್ರಕಾಶಪಡಿಸುವುದು "ಪ್ರಗಮನವು" ೮ ಕಪಟದಿಂದ ಹಿತಾಗಮನರೂಪವಾದ ಕಾರ್ಯವನ್ನು ತಡೆವುದು 'ವಿರೋಧವು' ೯ ಇಷ್ಟಜನಗಳನ್ನು ಅನುಸರಿಸುವುದು "ಪರ್ಯುಪಾಸನವು" ೧೦ ಪ್ರತಿಮುಖ ನಿಷ್ಠುರವಚನವು "ವಜ್ರವು." ೧೧ ಅನುರಾಗವನ್ನು ಪ್ರಕಾಶ ಪಡಿಸುವುದರಿಂದ ಕೂಡಿದ ಮಾತ, 'ಪುಷ್ಪವು" ೧೨ ಅನುರಾಗಕ್ಕೆ ಹೇತುವಾದ ವಾಕ್ಯರಚನೆಯು "ಉಪನ್ಯಾಸವು." ೧೩ ಚತುರ್ವರ್ಣವನ್ನು ವರ್ಣಿಸುವುದು 'ವರ್ಣಸಂಹಾರವು.' ಇವುಗಳಲ್ಲಿ ಪರಿಸರ್ಪ, ವಜ್ರ, ಉಪನ್ಯಾಸ, ಪುಷ್ಪ, ಪ್ರಗಮನ ಇವು ಇದ್ದೇ ಇರಬೇಕು

೩ ದೃಷ್ಟನಷ್ಟವಾದ ಬೀಜವನ್ನು ಬಾರಿಬಾರಿಗೂ ಅನ್ವೇಷಣೆಮಾಡುವುದು "ಗರ್ಭಸಂಧಿ" ಎನ್ನಿಸುವುದು ಇದರಲ್ಲಿ ಪ್ರಾಪ್ತ್ಯಾಶಾ ಪತಾಕಾನುಗುಣ್ಯವಾಗಿ, ೧ ಅಭೂತಾಹರಣ ೨ ಮಾರ್ಗ, ೩ ರೂಪ, ೪ ಉದಾಹರಣ, ೫ ಕ್ರಮ, ೬ ಸಂಗ್ರಹ ೭ ಅನುಮಾನ, ೮ ತೋಟಕ, ೯ ಅಧಿಬಲ, ೧೦ ಉದ್ವೇಗ, ೧೧ ಸಂಭ್ರಮ ೧೨ ಆಕ್ಷೇಪ, ಎಂದು ೧೨ ಅಂಗಗಳು ಪ್ರಯೋಗಿಸಲ್ಪಡುವುವು ಅವುಗಳ ಲಕ್ಷಣಗಳು. ೧ ಪ್ರಕೃತೋಪಯೋಗವಾದ ಕಪಟವನ್ನು ಆಚರಿಸುವುದು "ಅಭೂತಾಹರಣವು' ೨ ನಿಜವಾದ ಅರ್ಥವನ್ನು ಹೇಳುವುದು "ಮಾರ್ಗವು" ೩ ವಿತರ್ಕವನ್ನು ಹೇಳತಕ್ಕವಾಕ್ಯವು "ರೂಪವು" ೪ ಪ್ರಕೃತಿ ವಸ್ತುಶ್ರೇಷ್ಠತೆಯನ್ನು ಹೇಳುವುದು "ಉದಾಹರಣವು." ೫ ಚನ್ನಾಗಿ ಆಲೋಚಿಸಿದ ಫಲಪ್ರಾಪ್ತಿಯು "ಕ್ರಮವು" ೬ ಪ್ರಕೃತೋಪಯೋಗಿಯೂ ಸಾಮದಾನಾದಿಗಳಿಂದ ಕೂಡಿದುದೂ ಆದ ವಾಕ್ಯವು "ಸಂಗ್ರಹವು" ೭ ಹೇತುವಿನಿಂದ ಊಹಿಸುವುದು 'ಅನುಮಾನವು' ೮ ದೋಷದಿಂದಲೂ ಸಂಭ್ರಮದಿಂದಲೂ ಕೂಡಿದುದು "ತೋಟಕವು" ೯ ಇಷ್ಟಜನರನ್ನು ವಂಚಿಸುವುದು ಅಧಿಬಲವು' ೧೦ ದುಷ್ಟರಿಂದಾದ ಭಯವು "ಉದ್ವೇಗವು" ೧೧ ಶಂಕೆ-ಭಯದಿಂದ ಕೂಡಿದ ವಾಕ್ಯವು "ಸಂಭ್ರಮವು." ೧೨ ಇಷ್ಟಾರ್ಥದ ಉಪಾಯವನ್ನು ಅನುಸರಿಸುವುದು 'ಆಕ್ಷೇಪವು" ಇವುಗಳಲಿ ಅಭೂತಾಹರಣ, ಮಾರ್ಗ, ತೋಟಕ, ಅಧಿಬಲ, ಆಕ್ಷೇಪ ಇವು ಇದ್ದೇ ಇರಬೇಕು.

೪ ಗರ್ಭಸಂಧಿಯಲ್ಲಿ ಪ್ರಸಿದ್ಧವಾದ ಬೀಜಾರ್ಥವನ್ನು ಆವಕಾರಣದಿಂದಲಾದರೂ ವಿಮರ್ಶಿಸುವುದು "ವಿಮರ್ಶಸಂಧಿ" ಯೆನಿಸುವುದು. ನಿಯತಾಪ್ತಿ ಪ್ರಕರ್ಷಾನುಗುಣ್ಯವಾಗಿ ೧ ಅಪವಾದ, ೨ ಸಂಫೇಟ, ೩ ವಿದ್ರವ ೪ ದ್ರವ ೫ ಶಕ್ತಿ ೬ ದ್ಯುತಿ, ೭ ಪ್ರಸಂಗ, ೮ ಛಲನಂ, ೯ ವ್ಯವಸಾಯಃ, ೧೦ ನಿರೋಧನಂ, ೧೧ ಪ್ರರೋಚನಂ, ೧೨ ವಿಚಲನಂ, ೧೩ ಆದಾನಂ, ಎಂಬ ೧೩ ಅಂಗಗಳುಂಟು. ಅವುಗಳ ಲಕ್ಷಣಗಳು ಅವುಸೆಂದರೆ

೧ ದೋಷವನ್ನು ಪ್ರಸಿದ್ಧ ಪಡಿಸುವುದು "ಅಪವಾದವು". ೨ ದೋಷದಿಂದ ಕೂಡಿದ ವಾಕ್ಯವು "ಸಂಫೇಟವು." ೩ವಧಬಂಧ ಮೊದಲಾದವುಗಳಿಂದ ಕೂಡಿದ ವಾಕ್ಯವು "ವಿದ್ರವವು" ೪ ಗುರುತಿರಸ್ಕಾರರೂಪವಾದ ವಚನವು "ದ್ರವವು" ೫ ವಿರೋಧವನ್ನು ಹೋಗಲಾಡಿಸುವುದು "ಶಕ್ತಿ" ೬ ತರ್ಜನ, ಉದ್ವೇಜನಗಳಿಂದ ಕೂಡಿದ ವಾಕ್ಯವು "ದ್ಯುತಿಯು" ೭ ಗುರುವನ್ನು ಹೊಗಳುವ ವಾಕ್ಯವು "ಪ್ರಸಂಗವು" ೮ ಅವಮಾನ ಕರವಾದ ವಾಕ್ಯವು "ಛಲನವು." ೯ ಸ್ವಶಕ್ತಿಯನ್ನು ಹೊಗಳಿಕೊಳ್ಳುವುದು "ವ್ಯವಸಾಯವು." ೧೦ ಕ್ರೋಧ ಸಂಭ್ರಮಗಳಿಗ ಅನ್ಯೋನ್ಯಪಿಕ್ಷೇಪವು "ನಿರೋಧವು" ೧೧ ಸಿದ್ಧವಾದ ಹಾಗೆ ಮುಂದಿನ ಶ್ರೇಯಸ್ಸನ್ನು ಹೇಳುವ ವಾಕ್ಯವು "ಪ್ರರೋಚನವು." ೧೨ ತನ್ನ ಗುಣ

ವನ್ನು ಪ್ರಕಾಶಪಡಿಸುವುದು "ವಿಚಲನವು" ೧೩ ಕಾರ್ಯಸಂಗ್ರಹವು "ಆಧಾನವು."

೫ ಬೀಜದೊಡನೆ ಕೂಡಿಕೊಂಡಿರುವ, ಯಥಾರ್ಥವಾಗೀ ತವ್ಮ ಸ್ಥಾನದಲ್ಲಿ ನಿರೂಪಿತವಾದ ಅರ್ಥವು ಎಲ್ಲಿ ಒಂದೇ ಪ್ರಯೋಜನವನ್ನು ಹೊಂದುವುದೋ ಅದು "ನಿರ್ವಹಣ ಸಂಧಿ"ಯೆನಿಸುವುದು. ಫಲಪ್ರಾಪ್ತಿಕಾರ್ಯಾನುಗುಣ್ಯವಾಗಿ— ೧ ಸಂಧಿ, ೨ ವಿರೋಧ, ೩ ಗ್ರಥನ, ೪ ನಿರ್ಣಯ, ೫ ಪರಿಭಾಷಣ, ೬ ಪ್ರಸಾದ, ೭ ಆನಂದ, ೮ ಸಮಯ, ೯ ಕೃತಿ, ೧೦ ಆಭಾಷಣ, ೧೧ ಉಪಗೋಹನ, ೧೨ ಪೂರ್ವಭಾವ ೧೩ ಉಪಸಂಹಾರ, ೧೪ ಪ್ರಶಸ್ತಿ—ಎಂದು ೧೪ ಅಂಗಗಳುಂಟು. ಅವುಗಳ ಲಕ್ಷಣಗಳು—

ಬೀಜಪ್ರಾಪ್ತಿಯು "ಸಂಧಿ". ಕಾರ್ಯವನ್ನು ಮುಚ್ಚುವದು "ವಿರೋಧವು". ಕಾರ್ಯೋಪಕ್ಷೇಪಣವು "ಗ್ರಥನವು" ಬೀಜಾನುಗುಣವಾದ ಕಾರ್ಯವನ್ನು ಪ್ರಸಿದ್ಧಪಡಿಸುವುದು "ನಿರ್ಣಯವು" ಅನ್ಯೋನ್ಯವಾಗಿ ಜಂಭಹೊಡೆಯುವುದು "ಪರಿಭಾಷಣವು". ಚನ್ನಾಗಿ ಆಶ್ರಯಿಸುವುದು "ಪ್ರಸಾದವು". ಇಷ್ಟಾರ್ಥಪ್ರಾಪ್ತಿಯು "ಆನಂದವು". ದುಃಖವನ್ನು ಹೋಗಲಾಡಿಸುವುದು "ಸಮಯವು" ಲಬ್ಧವಾದುದನ್ನು ಸಾಧಿಸುವುದು "ಕೃತಿ". ಪ್ರಾಪ್ತವಾದ ಕಾರ್ಯವನ್ನು ಸಮ್ಮತಿಸುವುದು "ಆಭಾಷಣವು" ಅದ್ಭುತ ಅರ್ಥಪ್ರಾಪ್ತಿಯು 'ಉಪಗೋಹನವು". ಇಷ್ಟಕಾರ್ಯದರ್ಶನವು 'ಪೂರ್ವಭಾವವು" ಕಾರ್ಯಾರ್ಥಮುಗಿಯುವುದು "ಉಪಸಂಹಾರವು". ಶುಭವನ್ನು ಹೇಳುವುದು "ಪ್ರಶಸ್ತಿ"

ಈ ೧೪ ಅಂಗಗಳಿಗೂ ೬ ಪ್ರಯೋಜನಗಳು ಸಂಭವಿಸುವುವು. ಅವುವೆಂದರೆ,— ೧ ವಿವಕ್ಷಿತವಾದ ಅರ್ಥವನ್ನು ಹೇಳುವುದು, ೨ ರಹಸ್ಯಾರ್ಥವನ್ನು ಗೋಪನಮಾಡುವುದು; ೩ ಪ್ರಕಾಶಪಡಿಸತಕ್ಕ ಅರ್ಥವನ್ನು ಪ್ರಕಾಶಪಡಿಸುವುದು; ೪ ಅಭಿನಯರಾಗಸಮೃದ್ಧಿಯು ೫ ಚಮತ್ಕಾರಿಕಾರಿತ್ವವು; ೬ ಇತಿವೃತ್ತ ವಿಸ್ತಾರವು.

ಸಂಧಿಗೆ ಸಹಾಯಭೂತವಾದ ಇತಿವೃತ್ತವು ಸೂಚ್ಯ-ಅಸೂಚ್ಯ ಎಂದು ಎರಡು ವಿಧವಾಗಿದೆ. ಅಸೂಚ್ಯವು ದೃಶ್ಯ, ಶ್ರಾವ್ಯ ಎಂದು ಎರಡು ವಿಧವಾಗಿದೆ. ಶ್ರಾವ್ಯದಲ್ಲಿ ಜನಾಂತಿಕ ಪ್ರತಿಪಾದಕ ಎಂದು ಎರಡು ವಿಧವು. ಸೂಚ್ಯದಲ್ಲಿ ೫ ವಿಧವು.— ೧ ವಿಷ್ಕಂಭ, ೨ ಚೂಡಿಕಾ, ೩ ಅಂಕಾಸ್ಯ, ೪ ಪ್ರವೇಶ, ೫ ಅಂಕಾವತರಣ. ಇವುಗಳ ಲಕ್ಷಣಗಳಾವುವೆಂದರೆ,—

ಹಿಂದೆ ನಡೆದುಹೋದ, ಮುಂದೆ ನಡೆಯುವ ಕಥಾಭಾಗವನ್ನು ಸಂಕ್ಷೇಪವಾಗಿ ತಿಳಿಯಪಡಿಸುವುದೇ "ವಿಷ್ಕಂಭವು". (ಸಂಸ್ಕೃತಭಾಷಾಮಾತ್ರದಿಂದ ಕೂಡಿರುವದು ಶುದ್ಧ ವಿಷ್ಕಂಭವು. ಸಂಸ್ಕೃತ ಮತ್ತು ಪ್ರಾಕೃತದಿಂದ ಕೂಡಿದುದು ಸಂಕೀರ್ಣವು.) ದೃಶ್ಯಪ್ರಬಂಧದಲ್ಲಿ ಹೇಳಿರುವ ನಾಯಕ-ನಾಯಿಕೆಯರೇ ಮೊದಲಾದವರ ಅಭಿನಯವನ್ನು ನಾಟಕದಲ್ಲಿ ತೋರ್ಪಡಿಸುವದು ಪಾತ್ರವೆನಿಸುವದು. ಸಂಕೀರ್ಣವು ನೀಚಪಾತ್ರದಿಂದಾಗಲಿ ಮಧ್ಯಮಪಾತ್ರದಿಂದಾಗಲಿ ಪ್ರಯೋಗಿಸಬಹುದು [ನೀಚಪಾತ್ರ - ಸಖಿ-ಚೇಟಿ, ಮಧ್ಯಮಪಾತ್ರ ವಿದೂಷಕ] ಚೂಡಿಕಾ ಎಂದರೆ' ರಂಗಸ್ಥಳವನ್ನು ಪ್ರವೇಶಿಸದಿರುವ, ಗಾಯಕರು ನಿಲ್ಲುವ ಸ್ಥಳದಲ್ಲಿರುವ ಪಾತ್ರದಿಂದ ಸೂಚಿಸತಕ್ಕ ಅರ್ಥವು "ಚೂಡಿಕಾ" ಎನಿಸುವದು ಮೊದಲನೆಯ ಅಂಕದ ಪಾತ್ರಗಳಿಂದ ಉತ್ತರಾರ್ಥವು ಸೂಚಿಸಲ್ಪಟ್ಟರೆ "ಅಂಕಾಸ್ಯ"ವೆನಿಸುವದು.

ವಿಷ್ಕಂಭಕ್ಕೆ ೧ನೆಯ ಅಂಕದಲ್ಲಿ ಪ್ರವೇಶವಾಗಬಹುದು. ದ್ವಿತೀಯಾಂಕಗಳಲ್ಲಿ ಪ್ರವೇಶಕವನ್ನು ಹೇಳತಕ್ಕದ್ದು. ಇವುಗಳಿಂದ ಸೂಚ್ಯಾಂಶವನ್ನು ಸೂಚಿಸಿ. ನೋಡತಕ್ಕದ್ದನ್ನು ಅಂಕದಿಂದ ತೋರ್ಪಡಿಸಬೇಕು. ಅಂಕವೆಂದರೆ, ಬಿಂದುಸೂಚನೆಗಾಗಿ ಪರಿಚ್ಛಿನ್ನವಾದ ಅನೇಕ ಅವಾಂತರ ಪ್ರಯೋಜನಗಳುಳ್ಳ ಕಥಾವಿಶೇಷಕ್ಕೂ ರಸಗಳಿಗೂ ಆಶ್ರಯಭೂತವಾದ ನಾಯಕನ ಚರಿತ್ರೆಯನ್ನು ಸಾಕ್ಷಾತ್ತಾಗಿ ನೋಡಿದಂತೆ ತೋರ್ಪಡಿಸುವದೇ ಅಂಕವೆನಿಸುವದು — "ಪ್ರತ್ಯಕ್ಷನೇತೃ ಚರಿತೋ ಬಿಂದುವ್ಯಕ್ತಿಪುರಸ್ಕೃತಃ। ಅಂಕೋ ನಾನಾಪ್ರಕಾರಾರ್ಥ ಸಂವಿಧಾನರಸಾಶ್ರಯಃ ॥'

ಅಂಕದಲ್ಲಿ ಯುದ್ಧವನ್ನೂ ರಾಜ್ಯನಾಶವನ್ನೂ ಮುತ್ತಿಗೆ ಹಾಕುವದನ್ನೂ ಭೋಜನವನ್ನೂ ಸುರತಕ್ರೀಡೆಯನ್ನೂ ಗಂಧಮಾಲ್ಯಾದಿಗಳನ್ನು ಧರಿಸುವದನ್ನೂ ವಸ್ತ್ರಾಪಹರಣ ಮೊದಲಾದವನ್ನೂ ಪ್ರತ್ಯಕ್ಷವಾಗಿ ತೋರ್ಪಡಿಸಬಾರದು. ಸಮಸ್ತಪಾತ್ರವೂ ಮುಗಿದಮೇಲೆ ಒಂದಂಕವು ಮುಗಿದ ಹಾಗಾಯಿತು, ಅಂಕಸ್ವರೂಪವಾದ ಮೇಲೆ ಕಾವ್ಯಾರ್ಥವನ್ನು ಸೂಚಿಸುವ ಭಾರತೀವೃತ್ತವನ್ನು ತೋರ್ಪಡಿಸುವದು. ಸೂತ್ರಧಾರನು ನಟಿಯನ್ನೂ ವಿದೂಷಕನನ್ನೂ ಚಿತ್ರೋಕ್ತಿಯಿಂದ ಮಾತಾಡಿಸತಕ್ಕದ್ದು 'ಆಮುಖವು.' ಪುರುಷವಿಶೇಷದಿಂದ ಉಪಯೋಗಿಸುವ ಸಂಸ್ಕೃತವಾಗ್ವ್ಯಾಪಾರವು 'ಭಾರತಿ'ಯೆನಿಸುವುದು.—ಸೂತ್ರ—"ಭಾರತೀಸಂಸ್ಕೃತಪ್ರಾಯಃ ವಾಗ್ವ್ಯಾಪಾರೋನರಾಶ್ರಯಃ ॥ ಉಸ್ಮುಖೀ ನರಣಂತತ್ರ ಪ್ರಶಂಸಾತಿಪುರೋಚನೆ"

ಸೂತ್ರಧಾರನೆಂದರೆ, ನಾಯಕನ ಮತ್ತು ಕವಿಯ ವಸ್ತುಗಳ ಗುಣವನ್ನು ವರ್ಣಿಸುವ ರಂಗವನ್ನು ಅಲಂಕರಿಸುವದ

ರಲ್ಲಿ ಸಮರ್ಥನಾದವನು 'ಸೂತ್ರಧಾರನೆನಿಸುವನು. 'ನಟ' ಎಂದರೆ, ವೀಣಾವ್ಯತಿರಾಗಾದಿ ಸಂಗೀತದಲ್ಲಿ ಜ್ಞಾನವುಳ್ಳ ಕರುಣಾಭಿನಯವನ್ನು ತಿಳಿದಿರತಕ್ಕ ಸಮಸ್ತ ಭಾಷೆಯಲ್ಲಿಯೂ ಪಂಡಿತಳಾದ ಸೂತ್ರಧಾರನಿಗೆ ಅನುಸಾರವಾಗಿ ನಡೆಯತಕ್ಕವಳು 'ನಟಿ' ಎನಿಸುವಳು

ಪಾರಿಷ ಪಾರಿಪಾರ್ಶ್ವಕ:— ಭರತಾಚಾರ್ಯರಿಂದ ಅಭಿನಯಿಸಲ್ಪಟ್ಟ ನಾನಾರಸಾಶ್ರಯವಾದ ಭಾವವನ್ನು ಸಮೀಪದಲ್ಲಿದ್ದು ಪರಿಪೋಷಿಸುವವನು "ಪಾರಿಪಾರ್ಶ್ವಕ"ನೆನಿಸುವನು. ತತ್ಕಾಲದಲ್ಲಿ ಹೊಳೆಯುವ ಪ್ರತಿಭೆಯುಳ್ಳವನೂ, ಚತುರೋಪಾಯವನ್ನು ತಿಳಿದವನೂ, ವೇದವಿತ್ತಾದವನೂ, ಮರ್ಮಜ್ಞನಾಗಿ ಹಾಸ್ಯಾನ್ವಿತವಾದ ಮಾತನ್ನು ಆಡತಕ್ಕವನೂ "ವಿದೂಷಕ"ನೆನಿಸುವನು

ಆಮುಖದ ಭೇದವು "ಪ್ರಸ್ತಾವನೆ"ಯೆನಿಸುವುದು. ಕಥೋದ್ಘಾತ, ಪ್ರವರ್ತಕ, ಪ್ರಯೋಗಾತಿಶಯ, ಎಂಬವು ಆಮುಖದ ಭೇದಗಳು. ಸೂತ್ರಧಾರನ ಇತಿಬದ್ಧವಾದ ವಾಕ್ಯ ಮತ್ತು ಅರ್ಥವನ್ನು ಹೇಳುತ್ತ ಪಾತ್ರವನ್ನು ಪ್ರವೇಶಿಸಿದರೆ 'ಕಥೋದ್ಘಾತ'ವೆನಿಸುವುದು. ಇದೆಯೋ—ಎಂಬುವ ಸೂತ್ರಧಾರನ ಪ್ರಯೋಗದಿಂದ ಪಾತ್ರಪ್ರವೇಶವು ಎಲ್ಲಿ ಆಗುವದೋ ಅಲ್ಲಿ "ಪ್ರಯೋಗಾತಿಶಯ"ವೆನಿಸುವುದು ಅವುದಾದರೂ ಕಾಲದ ವರ್ಣನೆಯಿಂದ ಸೂಚಿತವಾದ ಪಾತ್ರವನ್ನು ಪ್ರವೇಶಿಸುವದು 'ಪ್ರವರ್ತಕ'ವೆನಿಸುವದು,

ಆಮುಖದಲ್ಲಿ ವೀಥ್ಯಂಗಗಳು ಸಹ ಸೇರಿರುವದರಿಂದ ಅದರ ಅಂಗಲಕ್ಷಣವನ್ನಿಲ್ಲಿ ತಿಳಿಸುವುದು --"ಉದ್ಘಾತ್ಯಕಾವಲಗಿತೆ, ಪ್ರಪಂಚತ್ರಿಗತೇ ಛಲಂ। ವಾಕ್ಕೇಳ್ಯಾಧಿಬಲೆ, ಗಂಡ ಮವಸ್ಯಂದಿತ ನಾಳಿಕೆ। ಅಸತ್ಪ್ರಲಾಪ ವ್ಯಾಹಾರ ಮೃದವಾನಿ ತ್ರಯೋದಶ॥"

ಅನ್ಯೋನ್ಯಸಲ್ಲಾಪದಲ್ಲಿ ಗೂಢಾರ್ಥವಾದ ಪರ್ಯಾಯವು ಪ್ರಶ್ನೋತ್ತರರೂಪದಿಂದ ಪದಗಳೂ ಇದ್ದಲ್ಲಿ "ಉದ್ಘಾತ್ಯ"ವೆನಿಸುವದು. ಕಾರ್ಯಕಾರಣವು ಬೇರೆಬೇರೆ ಕಡೆಗಳಲ್ಲಿದ್ದು ಸಿದ್ಧಿಸುವದು "ಅವಲಗಿತ" ಎನಿಸುವದು. ಪರದಾರಾದಿ ಪ್ರಸಂಗದಿಂದ ದುಷ್ಟವಾದ ಮಿತಸ್ತೋತ್ರವು "ಪ್ರಪಂಚ"ವೆನಿಸುವದು. ಸೂತ್ರಧಾರ, ನಟ, ಪಾರಿಪಾರ್ಶ್ವಕ ಈ ಮೂವರೂ ಸಲ್ಲಾಪ ಮಾಡುವಲ್ಲಿ "ತ್ರಿಗತ"ವೆನಿಸುವದು. ಹಿತದಂತಿರುವ ಅಪ್ರಿಯವಾದ ಮಾತಿನಿಂದ ವಂಚಿಸುವದು "ಛಲವು". ಉಕ್ತಿಪ್ರತ್ಯುಕ್ತಿರೂಪದಿಂದ ನಿವೃತ್ತಿಸುವದು "ವಾಕ್ಕೇಳಿಯು". ಸ್ಪರ್ಧೆಯಿಂದ ಹೆಚ್ಚಾಗಿ ಮಾತನಾಡುವದು "ಅಧಿಬಲ"ವೆನಿಸುವದು. ಹಠಾತ್ತಾಗಿ ಪ್ರಕೃತವಿರೋಧವಾಗಿ ಹೇಳಿದ ವಾಕ್ಯವು "ಗಂಡವು". ರಸಾಧೀನದಿಂದ ಹೇಳಿದ ವಾಕ್ಯಕ್ಕೆ ಬೇರೆ ಅರ್ಥಮಾಡುವದು "ಅವಸ್ಯಂದಿತವು". ಹಾಸ್ಯದೊಡನೆ ಕೂಡಿರುವ ರಹಸ್ಯಾರ್ಥವನ್ನು ಪ್ರಶಂಸೆಮಾಡುವದು "ನಾಳಿಕಾ" ಎನಿಸುವದು. ಅಸಂಬದ್ಧ ವಾಕ್ಯವು "ಅಸತ್ಪ್ರಲಾಪವು", ಪ್ರಯೋಜನಾತುರಕ್ಕಾಗಿ ಹಾಸ್ಯ-ಶೋಭಗಳನ್ನುಂಟುಮಾಡುವ ವಾಕ್ಯವು "ವ್ಯಾಹಾರವು". ದೋಷದಲ್ಲಿ ಗುಣವನ್ನು ಕಲ್ಪಿಸುವದು 'ಮೃದವವು'. ಇವುಗಳಲ್ಲಿ ಸಂಬಂಧವಿದ್ದ ಹಾಗೆ ಅವುದಾದರೂ ಕೆಲವನ್ನು ಪ್ರಸ್ತಾವನೆಯಲ್ಲಿ ಉಪಯೋಗಿಸಬಹುದು.

ನಾಟಕ — ೬೪ ಅಂಗಗಳಿಂದಲೂ ೫ ಸಂಧಿಗಳಿಂದಲೂ ಮತ್ತು ವೀರಶೃಂಗಾರರಸಗಳಲ್ಲಿ ಅವುದಾದರೂ ಪ್ರಧಾನವಾಗಿರುವ, ಪ್ರಸಿದ್ಧನಾಗಿಯೂ, ಧೀರೋದಾತ್ತನಾಯಕನಿಂದ ಕೂಡಿರತಕ್ಕ ದೃಶ್ಯಪ್ರಬಂಧಕ್ಕೆ "ನಾಟಕ"ವೆಂದು ಹೆಸರು.

ಈ ನಾಟಕದಲ್ಲಿ ನಾಂದಿ ಅವಶ್ಯಕವಾದುದು 'ನಾಂದಿ' ಎಂದರೆ, ಅರ್ಥದಿಂದಾಗಲಿ ಶಬ್ದದಿಂದಾಗಲಿ ಸ್ವಲ್ಪವಾಗಿ ಕಾವ್ಯಾರ್ಥವನ್ನು ಸೂಚಿಸುವದು ಇದಲ್ಲದೆ, ಇದರಲ್ಲಿ ಶಂಖ, ಚಕ್ರ, ಕಮಲ, ಚಕ್ರವಾಕ, ಚಂದ್ರ ಮೊದಲಾದ ಮಂಗಳವಾದ ಪದಗಳಿಂದ ಕೂಡಿರಬೇಕು. ಆಶೀರ್ವಾದ, ನಮಸ್ಕಾರ, ನಿರ್ದೇಶ ಈ ಮೂರರಲ್ಲಿ ಅವುದಾದರೊಂದನ್ನು ನಿರೂಪಿಸುತ್ತಿರಬೇಕು. ಮತ್ತು ೮—೧೦ ೧೨—೧೮—೨೨ ಇವುಗಳಲ್ಲಿ ಅವುದಾದರೂ ಒಂದು ಪದ ನಿಯಮವುಳ್ಳದಾಗಿರಬೇಕು, ಕೆಲವರು ಪದವನ್ನು ಉಪಯೋಗಿಸುವದಿಲ್ಲ; ಕೆಲವರು, ಸಂಪೂರ್ಣಾರ್ಥವನ್ನು ಕೊಡುವ ವಾಕ್ಯಕ್ಕೆ ಪದವೆನ್ನುವರು; ಮತ್ತೆ ಕೆಲವರು, ಒಂದೊಂದು ಪಾದಕ್ಕೆ ಪದತ್ವವನ್ನು ಅಂಗೀಕರಿಸಿ ೮ ಪಾದದಿಂದ ಕೂಡಿದ ಶ್ಲೋಕದ್ವಯವನ್ನು ನಾಂದಿಯಾಗಿ ಉಪಯೋಗಿಸುವರು. ನಾಟಕಾರಂಭದಲ್ಲಿ ಸರ್ವವಿಘ್ನೋಪಶಮನಾರ್ಥವಾಗಿ ಹೇಳತಕ್ಕ ಮಂಗಳವು 'ನಾಂದಿ'ಯೆನಿಸುವದು. ಈ ನಾಂದಿಯು ನಂದೀಶ್ವರನಿಗೆ ಬಹು ಪ್ರೀತಿಕರವಾದುದರಿಂದ ನಾಟಕಪ್ರಾರಂಭದಲ್ಲಿ ಅವಶ್ಯವಾಗಿ ಮಾಡಿಯೇ ತೀರಬೇಕು. ವೇಣೀಸಂಹಾರದಲ್ಲಿ ೮ ಪದವೂ ಮತ್ತು ಉತ್ತರರಾಮಚರಿತ್ರೆ—ಮುರಾರಿ ಇದರಲ್ಲಿ ೧೨ ಪದವೂ, ಬಾಲರಾಮಾಯಣದಲ್ಲಿ ೨೨ ಪದವೂ ಇರುವದು. ನಾಟ್ಯಕ್ಕಿಂತಲೂ ಮೊದಲು ರಂಗದಲ್ಲಿ ಸಂಭವಿಸಬಹುದಾದ ವಿಘ್ನನಿವಾರಣೆಗಾಗಿ ಗಾಯಕರಿಂದ ಆಚರಿಸತಕ್ಕ ಕರ್ಮವು "ಪೂರ್ವರಂಗ"ವೆನಿಸುವದು.

ಪ್ರಕರಣ—ಎಂದರೆ, - "ಉತ್ಪಾದ್ಯೇನೇತಿವೃತ್ತೇನ—ಧೀರಶಾಂತಪ್ರಧಾನಕಂ। ಶೇಷಂನಾಟಕ ತುಲ್ಯಾಂಗಂ। ಭವೇತ್ಪ್ರಕರಣಂ ಹಿತತ್॥" ಉತ್ಪಾದ್ಯ ಇತಿವೃತ್ತ, ಧೀರಶಾಂತ

ನಾಯಕ, ಉಳಿದ ಭಾಗವೆಲ್ಲ ನಾಟಕದಂತೆಯೇ ಇರುವದು "ಪ್ರಕರಣವು".

ಡಿಮದಲ್ಲಿ— ದೇವಗಂಧರ್ವ ಯಕ್ಷರಾಕ್ಷಸ ಮಹೋರಗ ಭೂತಪ್ರೇತಪಿಶಾಚರೆಂಬ ಅತ್ಯಂತ ಉದ್ಧತರಾದ ನಾಯಕರಿಂದ ಕೂಡಿದುದಾಗಿ ರೌದ್ರರಸಪ್ರಧಾನವಾಗಿಯೂ, ಹಾಸ್ಯ ಶೃಂಗಾರರಸಗಳಿಗೆ ಪ್ರವೇಶವಿಲ್ಲದುದಾಗಿಯೂ ಅವಮರ್ಷ ಸಂಧಿಯಿಂದ ಬಿಡಲ್ಪಟ್ಟದಾಗಿಯೂ, ಸೂರ್ಯ-ಚಂದ್ರಾದಿ ಗ್ರಹಗಳಿಂದ ಕೂಡಿದುದಾಗಿಯೂ ಇರಬೇಕು

ವ್ಯಾಯೋಗದಲ್ಲಿ— ಗರ್ಭಾವಮರ್ಷಸಂಧಿಯಿಂದ ಬಿಡಲ್ಪಟ್ಟದಾಗಿಯೂ ರೌದ್ರರಸಪ್ರಧಾನವಾಗಿಯೂ ಒಂದೇ ದಿನದಲ್ಲಿ ನಡೆದ ಮಹಾಯುದ್ಧವಿಚಾರವಾಗಿಯೂ ಇರಬೇಕು.

ಭಾಣದಲ್ಲಿ— ವಿಟನಾಯಕನ ಚಾತುರ್ಯೋಕ್ತಿಯಿಂದ ವೀರ ಶೃಂಗಾರರಸಗಳು ತೋರ್ಪಡಿಸಲ್ಪಡುತ್ತವೆ ಇದರಲ್ಲಿ ಕಲ್ಪಿತವಾದ ಧೂರ್ತರ ಚರಿತ್ರೆಯು ವರ್ಣಿತವಾಗುವುದು. ಇದರಲ್ಲಿ ಒಂದೇ ಅಂಕವು ಇರವದು

ಪ್ರಹಸನವು— ಭಾಣದಂತೆಯೇ ಇರುವುದು. ಇದರಲ್ಲಿ ಹಾಸ್ಯರಸಪ್ರಧಾನವು

ಸಮವಾಕಾರದಲ್ಲಿ— ಅವಮರ್ಷಸಂಧಿಯಿಂದ ಬಿಡಲ್ಪಟ್ಟದಾಗಿಯೂ ದೇವಾಸುರರೇ ನಾಯಕರಾಗಿಯೂ ೩ ಅಂಕಗಳುಳ್ಳದಾಗಿಯೂ ವೀರರಸಪ್ರಧಾನವಾಗಿಯೂ ಧರ್ಮಾರ್ಥಕಾಮಾನುಗುಣ್ಯವಾದ ಶೃಂಗಾರರಸರೀತಿಯುಳ್ಳದಾಗಿಯೂ ಇರಬೇಕು. ಪ್ರಥಮಾಂಕವು ೩ ಯಾಮದಲ್ಲಿ ಮುಗಿಯುವ ಕಥೆಯಿಂದ ಕೂಡಿದುದಾಗಿರಬೇಕು. ದ್ವಿತೀಯವು ೨ ಯಾಮದಲ್ಲಿಯೂ ತೃತೀಯಾಂಕವು ಅರ್ಧಯಾಮದಲ್ಲಿಯೂ ಮುಗಿಯುವಂತೆ ಇರಬೇಕು

ಅಂಕದಲ್ಲಿ— ಪ್ರಸಿದ್ಧವಾದ ಕಥೆಯೂ ಕರುಣಾರಸಪ್ರಧಾನವೂ ಆಗಿದ್ದು, ಸ್ತ್ರೀಯರ ವಿಲಾಸದಿಂದಲೂ ವಾಗ್ಯುದ್ಧದಿಂದಲೂ ಪ್ರಾಕೃತನಾಯಕರುಗಳಿಂದಲೂ ಕೂಡಿದ್ದುದಾಗಿರಬೇಕು.

ಈಹಾಮೃಗದಲ್ಲಿ— ಮಿಶ್ರವೃತ್ತವೂ ನಾಲ್ಕು ಅಂಕಗಳೂ ಉಳ್ಳದಾಗಿಯೂ ಗರ್ಭಾವಮರ್ಷಸಂಧಿಯಿಂದ ಬಿಡಲ್ಪಟ್ಟುದಾಗಿಯೂ ಮೂರು ಸಂಧಿಗಳುಳ್ಳದಾಗಿಯೂ ಮನುಷ್ಯನಾಯಕನಿಂದಲೂ ದೇವತಾಪ್ರತಿನಾಯಕರಿಂದಲೂ ಧೀರೋದ್ಧತರಾಗಿಯೂ ಸುಂದರಿಯಾದ ಸ್ತ್ರೀಯನ್ನು ಅಪಹರಿಸಲಿಚ್ಛೆಯುಳ್ಳವರಾಗಿಯೂ ಕಾಮುಕರಾಗಿಯೂ ಹೋತನಯುದ್ಧಕ್ಕೆ ಸಮವಾಗಿಯೂ ರಸಭಾವವುಳ್ಳದಾಗಿಯೂ ಇರುವುದು. (ಇವೆಲ್ಲವೂ ಸಂಸ್ಕೃತದ ದಶರೂಪಕರೀತಿಯನ್ನು ಅನುಸರಿಸಿ ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟವೆ.)

ಅವಶಿಷ್ಟ

ರಸ— ವಿಭಾವ, ಅನುಭಾವ, ವ್ಯಭಿಚಾರೀಭಾವ, ಸಾತ್ವಿಕಭಾವ, ಇವುಗಳಿಂದ ಚೆನ್ನಾಗಿ ತೋರುವ ಸ್ಥಾಯೀಭಾವವು ರಸವೆನಿಸುವುದು ಈ ಅಂಶವನ್ನು ಅನುಭವಿಸುವ ಕಾಲದಲ್ಲಿ ಮತ್ತಾವ ವಿಷಯಗಳೂ ಅನುಭವಕ್ಕೆ ಬರುವುದಿಲ್ಲ.

ಭಾವ - ಕಾವ್ಯದಿಂದಾಗಲಿ ಅಭಿನಯದಿಂದಾಗಲಿ ತೋರ್ಪಡಿಸುವ ರಾಮಾದಿ ನಾಯಕರ ಸುಖದುಃಖಗಳಿಂದುಂಟಾಗುವ ವಾಸನಾರೂಪವಾದ ಸಾಮಾಜಿಕರ ಮನೋವಿಕಾರವು ಭಾವವೆನಿಸುವುದು. ಅದರಲ್ಲಿ— ಸ್ಥಾಯೀ— ಎಂಬುದು ವಿರುದ್ಧವಾದಕಾರಣದಿಂದಾಗಿರಲಿ ಅವಿರುದ್ಧವಾದಕಾರಣದಿಂದಾಗಿರಲಿ ಮನಸ್ಸಿಗೆ ಮೊದಲು ತೋರಿದ ಭಾವವನ್ನು ಮರೆಮಾಚದೆ ಇರುವುದು.

ಓಂ— ಶಾಂತಿಶ್ಶಾಂತಿಶ್ಶಾಂತಿಃ

ಅಹಲ್ಯಾಬಾಯಿ

[ಲೇಖಕ. - ಶಂಕರಭಟ್ಟ, ಮಂಗಳೂರು]

ವಿಂಧ್ಯಾಪರ್ವತದ ಉತ್ತರದಲ್ಲಿ ಇಂದೂರೆಂಬ ಸಂಸ್ಥಾನವು ಪ್ರಸಿದ್ಧವಾದುದು. ಕೆಲವು ಸಂವತ್ಸರಗಳ ಹಿಂದೆ ಎಂದರೆ ಹದಿನೆಂಟನೆಯ ಶತಮಾನದಲ್ಲಿ ಅದನ್ನು ಖಂಡೇರಾಯನೆಂಬೊಬ್ಬ ರಾಜನು ಆಳುತ್ತಿದ್ದನು. ಆತನಿಗೆ ಅಹಲ್ಯಾಬಾಯಿಯು ಪಟ್ಟದರಸಿಯಾಗಿದ್ದಳು. ಖಂಡೇರಾಯನಿಗೆ ಮಲ್ಲಾರಿರಾಯನೆಂಬೊಬ್ಬ ಮಗನು. ಮುಕ್ತಾಬಾಯಿ ಎಂಬೊಬ್ಬ ಮಗಳು. ಅವನು ಸಕಲೈಶ್ವರ್ಯಸಂಪನ್ನನಾಗಿದ್ದನು.

ಆದರೆ, ಖಂಡೇರಾಯನ ಆಳಿಕೆಯು ಬಹುಕಾಲ ಇರಲಿಲ್ಲ. ಅಲ್ಪಾವಧಿಯಲ್ಲಿಯೇ ಅವನು ದಿವಂಗತನಾದನು. ಆದುದರಿಂದ ಅವನ ಮಗನಾದ ಮಲ್ಲಾರಿರಾಯನು ಸಿಂಹಾಸನಾರೂಢನಾದನು.

ಮನುಷ್ಯನ ಜೀವನವು ಒಂದು ಗೇಣಾಟ್ಟೆಂದೆನ್ನಬಹುದು. ಇಂದು ಇದ್ದವರು ನಾಳೆ ಇಲ್ಲ. ಇದಲ್ಲವೆ ದೈವದ ಮಹಿಮೆ !

ಮಲ್ಲಾರಿರಾಯನೂ ಅಧಿಕಾರಸ್ಥನಾದ ಕೆಲವು ಸಮಯದಲ್ಲಿ ಪರಲೋಕವನ್ನೈದಿದನು. ಪತಿವಿಯೋಗದಿಂದ ದುಃಖವೆಂಬ ನದಿಯಲ್ಲಿ ಮುಳುಗಿದ್ದ ಅಹಲ್ಯಾಬಾಯಿಯು ಈಗ ದುಃಖಸಮುದ್ರದಲ್ಲಿ ತೇಲಾಡಬೇಕಾಯಿತು. ಆ ಅಬಲೆಯಾದ ಹೆಂಗಸಿನಿಂದ ಏನಾದೀತು? ಅವಳಿಗೆ ಗಾಢಾಂಧಕಾರಮಯವಾದೊಂದು ಕಾಡಿನಲ್ಲಿ ಕಣ್ಣಿಗೆ ಬಟ್ಟೆಯನ್ನು ಕಟ್ಟಿ ಬಿಟ್ಟಂತಾಯಿತು. ಇನ್ನು ಮೇಲೆ ಬದುಕುವ ಆಶೆಯು ಇದ್ದಿಲ್ಲವಾದರೂ ಅವಳು ಆತ್ಮಹತ್ಯೆಯನ್ನು ಮಾಡಲಿಚ್ಛಿಸಲಿಲ್ಲ. ಆತ್ಮಹತ್ಯೆಯು ಪಾಪಕರವಾದುದೆಂದು ಅವಳು ತಿಳಿದಿದ್ದಳು.

ಇಂದೂರಿನ ಜನರೆಲ್ಲರೂ ಮುಂದಿನ ಗತಿಯೇನೆಂದು ಆಲೋಚಿಸುತ್ತಿದ್ದರು. ಕಡೆಗೆ ಅವರೆಲ್ಲರೂ ಅಹಲ್ಯಾಬಾಯಿಯೇ ಸಿಂಹಾಸನವನ್ನೇರಬೇಕೆಂದು ಅವಳೊಡನೆ ಬೇಡಿಕೊಂಡರು. ಅವಳಾದರೂ ನಿರುಪಾಯಳಾಗಿ ಪ್ರಜೆಗಳ ಇಷ್ಟವಿದ್ದಂತಾಗಲೆಂದು ಕ್ರಿ. ಶ. ೧೭೬೫ರಲ್ಲಿ ಸಿಂಹಾಸನವನ್ನೇರಿದಳು.

ಅಹಲ್ಯಾಬಾಯಿಯ ಆಳಿಕೆಯು ಬಹು ಚೆನ್ನಾಗಿತ್ತು. ಆಗ ಇಂದೂರು ರಾಮರಾಜ್ಯದಂತೆ ಆರಾಮದಲ್ಲಿತ್ತು. ಊರಿನಲ್ಲಿ ಕಳ್ಳಕಾಕರರ ಭಯವಿಲ್ಲ, ಕೊಲೆಕಲಹಗಳನ್ನು ಕಂಡವರಿಲ್ಲ ಮನೆಮಾರುಗಳನ್ನು ಸುಟ್ಟವರಿಲ್ಲ; ಒಟ್ಟಿಗೆ ಹೇಳುವುದಾದರೆ, ಇಂದೂರು ಬಹು ಉನ್ನತಸ್ಥಿತಿಯಲ್ಲಿತ್ತು.

ರಾಜ್ಯವನ್ನು ರಾಣಿ ಇಷ್ಟು ಚೆನ್ನಾಗಿ ಆಳುತ್ತಿರಲು ಅವಳ ಗುಣಗಳನ್ನು ವರ್ಣಿಸಬೇಕಾಗಿಲ್ಲ. ತನ್ನ ಗಂಡನು ಸತ್ತಂದಿನಿಂದ ಅವನ ಹೆಸರಲ್ಲಿ ಬ್ರಾಹ್ಮಣರಿಗೆ ದಾನಗಳನ್ನೂ ವಿದ್ಯಾರ್ಥಿಗಳಿಗೆ ವೇತನಗಳನ್ನೂ, ಗ್ರಾಮಕ್ಕೊಂದು ಪಾಠಶಾಲೆಯನ್ನೂ ಇನ್ನೂ ಅನೇಕ ಸುಧಾರಣೆಗಳನ್ನೂ ಮಾಡಿದಳು. ಆ ಸಮಯದಲ್ಲಿ ಹಿಂದೂಸ್ಥಾನದಲ್ಲಿಯ ಸಂಸ್ಥಾನಗಳಲ್ಲಿ ಇಂದೂರು ಇಂದುವಿನಂತೆ ಪ್ರಕಾಶಿಸುತ್ತಿತ್ತೆನ್ನುವುದರಲ್ಲಿ ಸಂದೇಹವಿಲ್ಲ!

ರಾಣಿ ಇಷ್ಟು ದಯಾಳುವಾದಾಗ್ಯೂ ಅವಳ ಕೈಕೆಳಗಿದ್ದ ಮುಖ್ಯ ಮುಖ್ಯ ಅಧಿಕಾರಿಗಳಿಗೆ ಎಷ್ಟಾದರೊಬ್ಬ ಹೆಂಗಸಿನಿಂದಾಳಿಸಿಕೊಳ್ಳುವುದು ಯುಕ್ತವೆಂದು ಕಂಡುಬರಲಿಲ್ಲ. ಆದುದರಿಂದವರು ಒಳಗೊಳಗೆ ಸುತ್ತುಮುತ್ತಲಿನ ರಜಪೂತರನ್ನು ಅಹಲ್ಯಾಬಾಯಿಯೊಡನೆ ಯುದ್ಧಕ್ಕೆ ಬರಲು ಪ್ರೇರಿಸಿದರು. ಅವರಾದರೂ ಇದಕ್ಕೊಡಂಬಟ್ಟು ಯುದ್ಧಕ್ಕೆ ಸಿದ್ಧರಾದರಲ್ಲದೆ, ಈ ವಿಷಯವನ್ನು ಅಹಲ್ಯಾಬಾಯಿಗೆ ಪತ್ರದ ಮೂಲಕ ಬರೆದು ತಿಳಿಸಿದರು.

ಅಹಲ್ಯಾಬಾಯಿಗೆ ಇದು ತಿಳಿಯಿತೋ ಇಲ್ಲವೋ ಎನ್ನುವದರಲ್ಲಿ ಇಂದೂರಿಗೆ ರಜಪೂತರು ದಂಡೆತ್ತಿಕೊಂಡು ಬಂದೇ ಬಿಟ್ಟರು!

ಹೀಗಾದರೂ ಅಹಲ್ಯಾಬಾಯಿಯು ರಾಜಪುತ್ರರೊಡನೆ ಯುದ್ಧವನ್ನು ಮಾಡಲು ಇಚ್ಛಿಸಲಿಲ್ಲ. ಆಗವಳು ಯುದ್ಧದ ವಿಷಯವಾಗಿ ಸಭೆಯೊಂದನ್ನು ಕೂಡಿಸಿ ಎಲ್ಲಾ ಸರದಾರರೂ ಮುಖಂಡರೂ ನೆರೆದಿರಲು ಅವರಿದಿರಲ್ಲಿ ಹೇಳಿದಳೇನೆಂದರೆ—"ಸರದಾರರೆ, ನಾನು ಇಷ್ಟರ ತನಕ ನಿಮ್ಮಲ್ಲಿ ಪ್ರೀತಿಯಿಟ್ಟು ನಿಮ್ಮನ್ನು ಪಾಲಿಸಿದೆನು. ನೀವು ಸಹ ನನ್ನಲ್ಲಿ ದ್ವೈತೀಭಾವನೆಯನ್ನಿಟ್ಟಿರುವಿರಿ. ನನ್ನ ಆಳಿಕೆಯು ಇನ್ನೂ ಮುಂದುವರಿಯಬೇಕಾದರೆ, ನೀವು ಸ್ವದೇಶದ ಮೇಲೆ ಭಕ್ತಿಯಿಟ್ಟು ನಿಮ್ಮ ಗಂಡುರಕ್ತವನ್ನು ಆ ರಜಪೂತವೀರರ ರಕ್ತದೊಡನೆ ಬೆರಸಬೇಕು. ನಾನೆಷ್ಟಾದರೂ ಹೆಂಗಸು ಅದಲ್ಲದೆ ಪತಿ-ಪುತ್ರರನ್ನು ಕಳೆದುಕೊಂಡು ಮಹತ್ತಾದ ಶೋಕಸಾಗರದಲ್ಲಿ ತೇಲಾಡುತ್ತಿರುವೆನು. ನನ್ನಿಂದ ಏನೂ ಸಾಗ

ದೆ. ಆದುದರಿಂದ ನೀವು ಈಗಿನ ಕದನದಲ್ಲಿ ನಿಮ್ಮ ಪೂರ್ಣ ಸ್ಫೂರ್ತಿಯನ್ನು ತೋರಿಸಿ ಹೋರಾಡುವಿರೆಂದು ನಂಬಿರುವೆನು.

ಇದನ್ನು ಕೇಳಿ ಎಲ್ಲರೂ ಆನಂದಭರಿತರಾದರು. ನಾವು ಮುಂಚೆಯೇ ಸೂಚಿಸಿದ ರಾಣಿಯ ದ್ರೋಹಿಗಳಾದ ಸರದಾರರಿಗೂ ಒಂದು ವಿಧದಲ್ಲಿ ಆನಂದವೇ! ಅವರು, ರಾಣಿಯು ಶತ್ರುಗಳಿಂದ ಪರಾಜಿತಳಾಗುವಳೆಂದೇ ತಿಳಿದಿದ್ದರು. ಈಗ ನಾವು ಆ ಯುದ್ಧದ ಗತ್ಯಂತರವನ್ನು ಸ್ವಲ್ಪ ವಿಚಾರಿಸುವ.

ರಾಜಪುತ್ರರ ಸೈನ್ಯವು ಕಾರ್ಮುಗಿಲಿನಂತೆ ಇಂದೂರಿನಲ್ಲಿ ನೆರೆದಿತ್ತು. ರಾಣಿಯ ಸೈನ್ಯವು ಅತ್ಯಲ್ಪವಾಗಿ, ಅಪಾರವಾದ ರಾಜಪುತ್ರರ ಸೈನ್ಯದೆದುರಿಗೆ ನಿಲ್ಲಲು ಸಹ ಅಸಮರ್ಥವಾಗಿತ್ತು. ಆದರೂ ಯುದ್ಧದೇವಿಯು ಯಾರ ಕುತ್ತಿಗೆಗೆ ಜಯಮಾಲೆಯನ್ನು ಹಾಕುವಳೆಂದು ಉಸುರಲು ಸಾಧ್ಯವಿಲ್ಲ.

ಈಗ ಯುದ್ಧಕ್ಕೆ ಮೊದಲಾಯಿತು. ಎರಡು ಕಡೆಗಳಿಂದಲೂ ಸಿಂಹನಾದಗಳು ಕೇಳಿಸುತ್ತಿದ್ದುವು. ಒಬ್ಬರನ್ನೊಬ್ಬರು ತಿವಿವರು. ಹಲವು ವೀರರು ರಣಭೂಮಿಯನ್ನು ತಮ್ಮ ಶಯ್ಯೆಯನ್ನಾಗಿ ಮಾಡಿ ಸುಖದಿಂದ ದೀರ್ಘನಿದ್ರೆಯನ್ನು ಮಾಡುತ್ತಿದ್ದರು. ಕೆಲವರು ಪಲಾಯನಸೂಕ್ತವನ್ನು ಜಪಿಸುವರು. ಎರಡು ಕಡೆಗಳಿಂದಲೂ ಹಾಹಾಕಾರಗಳು ಕೇಳಿಬರುತ್ತಿದ್ದುವು

ರಾಜಪುತ್ರರು ಗಟ್ಟಿಮುಟ್ಟಾಗಿದ್ದುದರಿಂದಲೂ, ಅವರ ಸಂಖ್ಯೆಯು ಅಧಿಕವಾಗಿದ್ದುದರಿಂದಲೂ ಇಂದೂರಿನ ಸೈನಿಕರಲ್ಲಿ ಹಲವರು ಪಲಾಯನವನ್ನು ಮಾಡಿದರು.

ಆಗ ರಾಣಿಯಾದ ಅಹಲ್ಯಾಬಾಯಿಯು, ಅವರನ್ನು ಜರೆದು ಮಾತಾಡಿದಳು.—"ಗಂಡಸರಾಗಿಯೂ, ಯುದ್ಧವಿದ್ಯೆಯಲ್ಲಿ ನಿಪುಣರಾಗಿಯೂ ಇರುವ ನೀವು ನಪುಂಸಕರಂತೆ ಯುದ್ಧದಿಂದ ಓಡಿಬರುವುದೆಂದರೇನು ? ನೀವು ಯುದ್ಧವಿದ್ಯೆಯಲ್ಲಿ ಕುಶಲರೆಂದು ಹೇಳುವ ಮಾತು ಇಂದಿಗೆ ಅಂತ್ಯವಾಯಿತು. ಇನ್ನು ನಿಮ್ಮ ಬಾಳಿಕೆಯಿಂದೇನು ಫಲ? ನೀವು ಉತ್ತರಕುಮಾರನಂತೆ ಬಲು ಹೇಡಿಗಳೆಂದು ಈಗ ನಾನು ನೆನಿಸಬೇಕಾಗಿದೆ. ನೀವು ಹೆಂಗಸರಿಗಿಂತ ಹೀನರು; ಬುದ್ಧಿಶೂನ್ಯರು; ಪರಾಕ್ರಮಶೂನ್ಯರು. ಹೆಂಗಸಾದರೂ ನಾನಿನ್ನು ಅರಮನೆಯಲ್ಲಿರಲಾರೆನು. ಶೌರ್ಯದಲ್ಲಿ ಈಗ ನಾನು ಆ ಕ್ಷುದ್ರರಾಜಪುತ್ರರನ್ನು ಗಣಗಳಿಗೆ ಬಲಿಯನ್ನಾಗಿ ಕೊಡುವೆನು. ಇಲ್ಲದಿದ್ದರೆ ನನ್ನ ರಕ್ತವನ್ನು ಶಾಕಿನಿ ಡಾಕಿನಿಗಳಿಗೆ ಅರ್ಪಿಸುವೆನು.

ಹೀಗೆ ಹೇಳಿ ಅಹಲ್ಯಾಬಾಯಿಯು ಅಶ್ವಾರೂಢಳಾಗಿ ಕದನಕ್ಕೆ ನಡೆದಳು. ಆಗ ಓಡಿಬಂದ ಸೈನಿಕರೆಲ್ಲರೂ ಅವಳನ್ನು ಹಿಂಬಾಲಿಸಿದರು. ಅವಳು ಯುದ್ಧಭೂಮಿಗೆ ಕಾಲಿಟ್ಟಳೋ ಎಂಬಷ್ಟರಲ್ಲಿ ಇಂದೂರಿನ ಸೈನಿಕರಿಗೆ ಉತ್ತೇಜನ ದೊರಕಿದಂತಾಯಿತು. ಅವಳು ಕುದುರೆಯನ್ನೇರಿಕೊಂಡು ಸೈನಿಕರಿಗೆ ಹೀಗೆಯೇ ಮಾಡಬೇಕೆಂದು ತಿಳಿಯಿಸುತ್ತಿದ್ದಳು. ಅವಳು ಬಂದನಂತರ ಯಾವ ಸೈನಿಕನೂ ಪಲಾಯನವನ್ನು ಮಾಡಲಿಲ್ಲ.

ಎಷ್ಟು ಸೈನಿಕರಿದ್ದರೇನು ? ರಜಪೂತಸೈನಿಕರಲ್ಲಿ ಅವ್ಯವಸ್ಥೆಯೇ ಪ್ರವೇಶಮಾಡಿಕೊಂಡಿತ್ತು. ಅವರ ಅಪಾರವಾದ ಸೈನ್ಯವು ಹಿಮ್ಮೆಟ್ಟಬೇಕಾಯಿತು. ಸಣ್ಣದಾದೊಂದು ಚೇಳು ದೊಡ್ಡದಾದ ಹಾವನ್ನು ಕೊಲ್ಲುವಂತೆ ಇಂದೂರಿನ ಅಲ್ಪದಳವು ರಾಜಪುತ್ರರನ್ನು ಅವರ ರಾಜ್ಯಕ್ಕೆ ಓಡಿಸಿತು.

ಆದರೆ, ಈಗ ದೇಶದಲ್ಲಿ ಶಾಂತತೆಯಿರಲಿಲ್ಲ. ರಾಣಿಯ ದ್ರೋಹಿಗಳಾದ ಕೆಲವು ಸರದಾರರಿಂದ ಊರಲ್ಲೆಲ್ಲ ಕೊಲೆ ಕಳವುಗಳಿಗೆ ಉತ್ತೇಜನವು ಕೊಡಲ್ಪಟ್ಟಿತು. ಇವನ್ನು ನಾಶಮಾಡಲು ರಾಣಿ, ಒಂದು ಸಭೆಯನ್ನು ಕೂಡಿಸಿ, ಸರ್ವಜನರೆದುರಿಗೆ ಹೀಗೆಂದಳು—'ದೈವಾನುಗ್ರಹದಿಂದಲೂ, ದೇಶಸೇವೆಗೋಸ್ಕರ ಬದ್ಧಕಂಕಣರಾಗಿ ಹೋರಾಡಿದ ಸೈನಿಕರ ಮಹದುಪಕಾರದಿಂದಲೂ ನಮ್ಮ ಇಂದೂರು ಶತ್ರುಗಳಿಂದ ರಕ್ಷಿಸಲ್ಪಟ್ಟಿತು. ಆದರೆ, ಈಗ ಊರಿನಲ್ಲಿ ಕಳ್ಳರ ಭಯವು ಹೆಚ್ಚಾಗಿದೆ. ಅವನ್ನಡಗಿಸಲು ನಮ್ಮ ಪ್ರಜೆಗಳಲ್ಲಿ ಹಲವರು ಶಕ್ತರಿರಬಹುದು. ಯಾವಾತನು ಚೋರರನ್ನಡಗಿಸಿ ದೇಶದಲ್ಲಿ ಶಾಂತತೆಯನ್ನು ನೆಲೆಗೊಳಿಸುವನೋ ಅಂಥವನಿಗೆ ನನ್ನ ಪ್ರೀತಿಯ ಮಗಳಾದ ಮುಕ್ತಾಬಾಯಿಯನ್ನು ವಿವಾಹಪೂರ್ವಕವಾಗಿ ಕೊಡುವೆನು."

ರಾಣಿಯ ಮಾತನ್ನು ಕೇಳಿ, ಜಸವಂತರಾಯನೆಂಬೊಬ್ಬ ಮುಂದಿನ ತಾನು ರಾಣಿಯ ಮಾತುಗಳನ್ನು ಸಲ್ಲಿಸುವೆನೆಂದನು. ಅವನು ಸಮರ್ಥನಾಗಿದ್ದುದರಿಂದ, ತನ್ನ ಪ್ರತಿಜ್ಞೆಯನ್ನು ನೆರವೇರಿಸಿದನು.

ಇದರಿಂದ ಜಸವಂತರಾಯನು ಅಹಲ್ಯಾಬಾಯಿಯ ಅಳಿಯನಾದನು, ಅದಲ್ಲದೆ, ಅವನೇ ರಾಣಿಯ ರಾಜ್ಯದ ಮುಂದಿನ ಹಕ್ಕುದಾರನಾದನು.

ಅನೇಕ ಪ್ರಯತ್ನಗಳನ್ನು ಮಾಡಿ ಅಹಲ್ಯಾಬಾಯಿಯು ತನ್ನ ದೇಶವನ್ನು ಉನ್ನತಸ್ಥಿತಿಗೆ ತಂದುದರಿಂದ ಧನ್ಯಳೆಂದೆಣಿಸಿದಳು. ಆದರೆ ಅಷ್ಟು ಪ್ರಯತ್ನಪಟ್ಟು ಕೆಲವು ವರ್ಷ ಸುಖದಿಂದಾಳುವುದಕ್ಕೆ ಸಮಯವಿರಲಿಲ್ಲ. ಅವಳ ಸತ್ಕೃತ್ಯಗಳನ್ನು ನೋಡಿ ಬ್ರಹ್ಮನು ಸಂತುಷ್ಟನಾಗಿ ಅವಳನ್ನು ತನ್ನ ಲೋಕಕ್ಕೆ ಕರೆಯಿಸಿದನು.

ಪ್ರಾಚೀನ ನಾರೀಮಣಿಯರು

[ಲೇಖಕ: - ಕೆ ಎಸ್ ರಾಮಸ್ವಾಮಯ್ಯಂಗಾರ್, ಮಾಗಡಿ.]

ಏಸಿಯಾಖಂಡದ ವಿಷಯವಾಗಿ ಯುರೋಪ್ ದೇಶವಾಸಿಗಳಲ್ಲಿ ದುರಭಿಪ್ರಾಯಗಳು ಪ್ರಬಲವಾಗುವದಕ್ಕೆ ಯುರೋಪಿಯರ ಅಜ್ಞಾನವೇ ಕಾರಣವು. ತಮ್ಮ ಪ್ರತಿವಾಸನಾ ಸ್ವಭಾವವನ್ನು ಕೂಡ ತಿಳಿಯಲಾರದೆ, ಯೂರೋಪ್‌ಖಂಡವು ತನ್ನನ್ನು ತಾನು ತಿಳಿದುಕೊಳ್ಳಲಾರದೆ. ಇರುವುದು. ಅಂತಹ ದೇಶವು ಈಗ "ನಿಮ್ಮ ಸ್ತ್ರೀಯರಿಗೆ ಹೆಚ್ಚು ಸ್ವಾತಂತ್ರ್ಯವನ್ನು ಕೊಡಬೇಕೆಂದು" ಪ್ರಾಗ್ದೇಶೀಯರಿಗೆ ಹಿತೋಪದೇಶಮಾಡುತ್ತಿದೆ! ಪ್ರಾಗ್ದೇಶಸ್ತ್ರೀಯರಿಗಿಂತ ಯೂರೋಪಿಯರ್ ನಾರೀಮಣಿಯರು ಆಧಿಕ್ಯತೆಯನ್ನು ಹೊಂದಿರುವರೆಂದು ಪಾಶ್ಚಾತ್ಯರಲ್ಲಿ ಅನೇಕರು ಅಭಿಪ್ರಾಯಪಡುತ್ತಿರುವರು. ಗ್ರೀಕ್, ರೋಮನ್ ಸ್ತ್ರೀಯರು ಈಗಲೂ ಗೌರವದಿಂದ ಕಾಣಲ್ಪಡುತ್ತಿಲ್ಲ. ಪೆರಿಕ್ಲೀಸ್ ಕಾಲದಲ್ಲಿ ಅಥೀನಿಯನ್ ಸ್ತ್ರೀಯು ತನ್ನ ಮನೆಯಲ್ಲಿ ಚಾಕರಳಂತೆ ಪರಿಗಣಿಸಲ್ಪಡುತ್ತಿದ್ದಳು. ಚಾರ್ಲಮೀನನ ಕಾಲದ ಸ್ತ್ರೀಯರಲ್ಲಿ ತೋರ್ಪಡಿಸಿದ ಗೌರವವು ಸಂತೃಪ್ತಿಕರವಾಗಿರಲಿಲ್ಲ. ಚಾರ್ಲಮೀನನು ಒಂದು ದಿನ ತನ್ನ ಸೋದರಿಯ ಸಂಗಡ ತುಂಬಿದ ಸಭೆಯಲ್ಲಿ ಅನೇಕ ವಿಷಯಗಳನ್ನು ಚರ್ಚಿಸುತ್ತ ಆಕೆಯಿಂದ ಪರಾಜಿತನಾಗುವ ಸಮಯದಲ್ಲಿ ತನಗೆ ಆಕೆಯಿಂದ ಆಗುವ ಪರಾಭವವನ್ನು ಸಹಿಸಲಾರದೆ, ತನ್ನ ಶಕ್ತಿಯಿದ್ದಷ್ಟು ಆಕೆಯ ಬಾಯಿಯ ಮೇಲೆ ಗುದ್ದಿದನೆಂದೂ ಅದರಿಂದ ಆಕೆಯ ಹಲ್ಲುಗಳು ಉದುರಿ ಹೋದವೆಂದೂ ಒಂದು ಚರಿತ್ರಾಂಶವಾದ ಕಥೆಯಿರುವುದು. ಈ ಅಭಿಪ್ರಾಯಗಳು ಕಾಲಕ್ರಮದಲ್ಲಿ ಯೂರೋಪ್‌ಖಂಡವನ್ನೆಲ್ಲ ವ್ಯಾಪಿಸಿದ್ದರಿಂದ ಆ ದೇಶದಲ್ಲಿರುವ ಪ್ರಜೆಗಳು ನಾಗರಿಕರಾಗಿ, ಸ್ತ್ರೀಯರ ಸ್ಥಿತಿಯು ಒಳ್ಳೆಯ ಸ್ಥಿತಿಗೆ ಬಂದಿತು.

ಆಟೋಮನ್ ತುರುಕರಲ್ಲಿ 'ಸ್ತ್ರೀಯರಿಗೆ ಆತ್ಮವಿಲ್ಲ'ವೆಂಬ ಅಭಿಪ್ರಾಯವುಳ್ಳವರಾಗಿದ್ದರೆಂದು ಅನೇಕರು ನಂಬುವರು. ಈ ಅಸತ್ಯವನ್ನು ಖಂಡಿಸಬೇಕಾದುದು ಅಗತ್ಯವು. ಯಾವ ಮಹಮದೀಯನಾದರೂ ಈ ದುರಭಿಪ್ರಾಯವುಳ್ಳವನಾಗಿರಲಾರನು. ಘೋಷಾಪದ್ಧತಿಯನ್ನು ನೆಲೆಗೊಳಿಸಿದುದಕ್ಕಾಗಿ ಮಹಮದೀಯರ ಸಂಘಸ್ಥಿತಿಯು ಕ್ರಮ ಕ್ರಮವಾಗಿ ತೃಪ್ತಿಕರವಾಗಿ ಬದಲಾಗುತ್ತಿದೆ. ಈ ಘೋಷಾ (ಪರದಾ— ತೆರೆ) ಪದ್ಧತಿಯು ಮೊಟ್ಟಮೊದಲು, ಖಾಲೀಫ್ ವಾಲಿಡರ್ II, ಬೈಜಾಂಟೈನ್ ವಾಸಿಗಳಿಂದ ಗ್ರಹಿಸಿ ತನ್ನ ಪ್ರಜೆಗಳೆಲ್ಲರೂ ಇದನ್ನು ಅವಲಂಬಿಸಬೇಕೆಂದು ಆಜ್ಞಾಪಿಸಿದನು. ಇದಕ್ಕೆ ಅವನ ರಾಜ್ಯದಲ್ಲಿರುವವರೆಲ್ಲರೂ ಪ್ರತಿಕೂಲರಾಗಿಯೇ ಇದ್ದರು. ಸ್ತ್ರೀಯರನ್ನು ಗೌರವಭಾವದಿಂದ ನೋಡುವ ಅರಬ್ಬಿಯವರೂ ಮೂರರೂ ಈ ಪದ್ಧತಿಯನ್ನು ಅವಲಂಬಿಸಲಿಲ್ಲ. ಅರಬ್ಬಿಯವರು ತಮ್ಮ ಹೆಣ್ಣುಮಕ್ಕಳ ಹೆಸರನ್ನೇ ತಮ್ಮ ಮನೆಯ ಹೆಸರನ್ನಾಗಿ ಇಟ್ಟುಕೊಂಡರು. ಈರೀತಿಯಾಗಿಯೇ ಬಗದಾದದ ಪ್ರಜೆಗಳು ಯುದ್ಧಕ್ಕೆ ಹೊರಡುವ ಸಮಯದಲ್ಲಿ ತಮ್ಮ ಅಕ್ಕತಂಗಿಯರ, ಪ್ರೇಮಾಸ್ಪದರಾದ ಹೆಂಡತಿಯರ ಹೆಸರನ್ನು ಉಚ್ಚರಿಸುತ್ತ ಹೋಗುತ್ತಿದ್ದರು. ಈ ಸ್ತ್ರೀಗೌರವವು ಸ್ಪೇನ್ ದೇಶದಲ್ಲಿಯೂ ಗ್ರೀನಡಾದೇಶದಲ್ಲಿಯೂ ಪರಿಪೂರ್ಣತೆ ಹೊಂದಿರುವುದೆಂದು ಹೇಳಬಹುದು. ಈ ವಿಷಯದಲ್ಲಿ ಆಧಾರಗಳು ಉಂಟಾಗಿವೆ. ಪ್ರತಿವೀರನೂ ನಾಗರಿಕತಾಸಂಪನ್ನನಾಗಿ ಗೌರವಪ್ರವೃತ್ತಿಗಳಿಂದಲಿರುವುದು ಸಾಂಘಿಕಾಚಾರವಾದುದು. ಮೂರವರನು ಬಗದಾದದ ಫ್ಲಿದ್ಘೀತೆ ತನ್ನ ಹೆಂಡತಿಯ ಹೆಸರನ್ನು ಹೇಳುವುದಕ್ಕೆ ಬದಲಾಗಿ ಆಕೆಯ ಪಟವನ್ನು ತನ್ನ ಭುಜಗಳಲ್ಲಿ ಧರಿಸಿ ಯುದ್ಧಕ್ಕೆ ಹೋಗುತ್ತಿದ್ದುದು ವಾಡಿಕೆಯಾಗಿತ್ತು. ಸ್ತ್ರೀಯರಿಗೆ ಗೌರವವನ್ನು ತೋರಿಸುವುದರಲ್ಲಿ ಸ್ಪೇನ್ ದೇಶದಲ್ಲಿರುವ ಅರಬ್ಬಿಯವರು ಅಗ್ರಗಣ್ಯರು. ದಕ್ಷಿಣ ಫ್ರೆಂಚಜಾತಿಯವರು ಇವರನ್ನು ಈ ವಿಷಯದಲ್ಲಿ ಬಲು ಮಟ್ಟಿಗೆ ಅನುಸರಿಸಿದರೂ ಸ್ತ್ರೀಸೌಂದರ್ಯಾದಿ ಲಕ್ಷಣಗಳನ್ನು ಮಾತ್ರವೇ ಗೌರವಿಸಲು ಅವರು ಬಿಡಲಾರದೆ ಹೋದರು. ಮೂರರು ಸ್ತ್ರೀಯರಲ್ಲಿ ಹೇಗೆ ನಡೆದುಕೊಂಡರೋ ಆ ವಿಷಯವು ಈ ಕೆಳಗಿನ ಕಥೆಯಿಂದ ತಿಳಿಯಬಹುದು

ಅಲ್ಫಾನ್ಸೊ vii ಎಂಬ ರಾಣಿಯ ಕಾಲದಲ್ಲಿ ಮುಸಲ್ಮಾನರು ಆಜಿಕ್ ಎಂಬ ಕೋಟೆಯನ್ನು ೧೧೩೯ನೆಯ ಇಸವಿಯಲ್ಲಿ ಮುತ್ತಿಗೆ ಹಾಕಿದರು. ಇನ್ನು ತಾನು ಆ ಕೋಟೆಯನ್ನು ರಕ್ಷಿಸಲಾರೆನೆಂದು ಆಕೆಗೆ ತಿಳಿದಾಗ ಆಕೆ, ಕೋಟೆಯ ಬುರುಜಿನ ಮೇಲಕ್ಕೆ ಹೋಗಿ 'ತಾನು ಒಬ್ಬ ಸ್ತ್ರೀಯೆಂದೂ" ಆದುದರಿಂದ ಕೋಟೆಯ ಮುತ್ತಿಗೆಯನ್ನು ನಿಲ್ಲಿಸಬೇಕೆಂದೂ ಮೂರರ ಸಂಗಡ ಹೇಳಿದಳು. 'ನೀನು ನಿಜವಾಗಿ ನಾರೀಮಣಿಯಾದ ಪಕ್ಷದಲ್ಲಿ ನಾವು ಹಿಂದಕ್ಕೆ ಹೋಗುವೆವು" ಎಂದು ಅವರು ಪ್ರತ್ಯುತ್ತರವನ್ನು ಕೊಟ್ಟರು. ಆಗ ಆಕೆಯು ತನ್ನ ಮೇಲಿನ ಮುಸುಕನ್ನು ತೆಗೆಯಲು ಮುಸಲ್ಮಾನ ಸೈನಿಕ

ರೆಲ್ಲರೂ ಆಕೆಗೆ ಸಲಾಂ ಮಾಡಿ ಕೋಟೆಯ ಮುತ್ತಿಗೆಯನ್ನು ಬಿಟ್ಟು ತಮ್ಮ ದಾರಿಯನ್ನು ಹಿಡಿದುಕೊಂಡು ಹೋದರು.

ಯೂರೋಪ್ ಸ್ತ್ರೀಯರು ಅಮಿತ ಗೌರವವನ್ನು ಹೊಂದುತ್ತಿದ್ದರು. ಯುದ್ಧಸಮಯದಲ್ಲಿ ಕೂಡ, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಆವ ಅಪಾಯವನ್ನೂ ಹೊಂದದೆ ಅವರು ತಪ್ಪಿಸಿಕೊಂಡು ಹೋಗುತ್ತಿದ್ದರು. ಅವರಲ್ಲಿ ಕೆಲವರು ತಮ್ಮ ಪ್ರಭುಗಳಿಗೆ ರಾಜಕೀಯ ವಿಷಯಗಳಲ್ಲಿ ಸಲಹೆಗಳನ್ನು ಕೊಡುತ್ತಿದ್ದರು. ಅವರು ಪುರುಷರ ಸಂಗಡ ಸಮವಾಗಿ ಪಾಂಡಿತ್ಯವಿಷಯವಾದ ಚರ್ಚೆಗಳಲ್ಲಿ ಸೇರುತ್ತಿದ್ದರು. ನ್ಯಾಯಶಾಸ್ತ್ರಾನುಸಾರವಾಗಿಯೂ ಕೂಡ ಪ್ರಪಂಚದ ಎಲ್ಲಾ ಸ್ತ್ರೀಯರಿಗಿಂತ ಅವರ ಸ್ಥಿತಿಯೇ ಬಹಳ ತೃಪ್ತಿಕರವಾಗಿದ್ದಿತು. ಇಪ್ಪತ್ತನೆಯ ಶತಮಾನದ ಆಂಗ್ಲೋಸ್ಯಾಕ್ಸನ್ನರಿಗಿಂತ ಅವರ ಸ್ಥಿತಿಯೇ ಅತ್ಯುತ್ತಮವಾಗಿದ್ದಿತೆಂದು ಅಮೇರಿಕನ್ ಗ್ರಂಥಕರ್ತನೊಬ್ಬನು ಬರೆದಿರುವನು. ಅವರು ದಾಸ್ಯವೆಂದರೇನೋ ಅರಿಯರು.

ಜೀವಿತದ ಪ್ರತಿವಿಷಯದಲ್ಲಿಯೂ ಪ್ರಾಗ್ದೇಶದ ಸ್ತ್ರೀಯರು ಪುರುಷರಂತೆ ಖ್ಯಾತಿಹೊಂದಿದರೆಂದು ಹೇಳಬಹುದು. ಅಸಂಖ್ಯಾತರಾದ ಸನ್ಯಾಸಿನಿಯರು ಆಸಿಯಾ ಖಂಡದಲ್ಲಿ ಹುಟ್ಟಿದರು. ಜೋನ್ ಆಫ್ ಆರ್ಕಳಿಗೆ ಆಲೋಚನೆಯನ್ನು ಹೇಳುವ ಸ್ತ್ರೀರತ್ನಗಳು ಇಲ್ಲಿಯೇ ಹುಟ್ಟಿದವರು. ಚಾಂದಬೀಬಿ, ಝಾನ್ಸಿರಾಣಿ, ಮೊದಲಾದ ವೀರಸಾಧ್ವೀಮಣಿಯರು ಹಿಂದೂದೇಶದಲ್ಲಿ ಹುಟ್ಟಿದವರು. ಪ್ರಸಿದ್ಧನಾದ 'ಖಾಸಿ'' ಎಂಬವನು ಡೆಮಾಸ್' ಪಟ್ಟಣವನ್ನು ಮುತ್ತಿದಾಗ ಅವನ ತಂಗಿಯಾದ ಕಾಲಾಗಿರ್ ಎಂಬವಳನ್ನು ಅರಬ್ಬಿಸ್ತ್ರೀಯರ ಸಂಗಡ ಸೆರೆಯಾಗಿ ಹಿಡಿದುಕೊಂಡರು. ಖಾಲೀದನು ಇವರ ಸಹಾಯಕ್ಕೆ ಬರುವವರೆಗೆ ಅವಳು ಕತ್ತಿ ಹಿಡಿದು ಶತ್ರುಗಳೊಡನೆ ಹೋರಾಡಿದಳು! ಮೂವರು ವೀರರನ್ನು ಕೊಂದು ಪೀಟರನ ಕುದುರೆಯನ್ನು ಕೊಂದಳು!— ಕೂಡಲೆ ಕತ್ತಿಯಿಂದ ಪೀಟರನನ್ನು ಕತ್ತರಿಸಿ ಹಾಕಿದಳು. ಅಸಿಸ್ಯೂರಕಾಲದಲ್ಲಿ ರಾಜಸ್ತ್ರೀಯರೆಲ್ಲರೂ ಕವಚವನ್ನು ಧರಿಸಿ ಗ್ರೀಕರೊಡನೆ ಯುದ್ಧಮಾಡುವುದಕ್ಕೆ ಹೋಗುತ್ತಿದ್ದರು.

ಚರಿತ್ರೆಯು ಪ್ರಾರಂಭವಾದ ದಿನದಿಂದಲೂ ಸ್ತ್ರೀವಿದ್ಯಾಭಿಮಾನವು ಪ್ರಾಗ್ಪಶ್ಚಿಮದೇಶಗಳಲ್ಲಿ ಸಮಾನವಾಗಿಯೇ ಇದ್ದಿತು. ಪಶ್ಚಿಮದೇಶಗಳಲ್ಲಿ ಕೂಡ ಸ್ತ್ರೀಯರನೇಕರಿದ್ದರು ೧೭೫೦ನೆಯ ಇಸವಿಯವರೆಗೂ ಇಂಗ್ಲೆಂಡ ದೇಶದಲ್ಲಿಯ ಸ್ತ್ರೀಯರಲ್ಲಿ ಪ್ರಯೋಗಿಸಲ್ಪಡುವ ಶಾಸನಗಳೂ ನ್ಯಾಯವಾಗಿರಲಿಲ್ಲ. ೧೮ನೆಯ ಶತಮಾನಲ್ಲಿಯೂ ಆಂಗ್ಲೇಯದೇಶದಲ್ಲಿ ಸ್ತ್ರೀವಿದ್ಯಾಭ್ಯಾಸನಿರಸನ ಭಾವವು ಪ್ರಬಲವಾಗಿದ್ದಿತು. ಆದುದರಿಂದ 'ಮೇರಿವುಲ್ಸ್ಟನ್‌ಕ್ರಾಫ್ಟ್' ಎಂಬಾಕೆ, ಸ್ತ್ರೀವಿದ್ಯೆಯು ಅಗತ್ಯವೆಂದು ತನ್ನ ದೇಶೀಯರಿಗೆ ಬೋಧಿಸಬೇಕಾಗಿ ಬಂದಿತು. ಆದರೆ, ಆಸಿಯಾಖಂಡದ ಸ್ತ್ರೀಯರು ಬೇರೆರೀತಿಯಾಗಿ ಕಾಣಲ್ಪಡುತ್ತಿದ್ದರು. ಯೂರೋಪಿಯನ್ ಸ್ತ್ರೀಯರಿಗಿಂತಲೂ ಪ್ರಾಗ್ದೇಶದ ಸ್ತ್ರೀಯರು ಜಾತೀಯ ಕ್ಷೇಮಚೇತನ ಮಾಡುತ್ತಿರುವರೆಂದು ಕರ್ಜನ್ ಪ್ರಭುವು ಒಂದುಸಾರಿ ತಿಳಿಸಿದ್ದರು. ಪೂರ್ವದೇಶಗಳಲ್ಲಿ ಶಾಲಿಕ ಶಾಸನವು ಇಲ್ಲದುದರಿಂದ ಪ್ರಾಗ್ದೇಶದಲ್ಲಿ ಸೆಮಿರಾಮಿಸ್, ಈಜಿಪ್ಟಿನ ಹತಾಸ್, ಕ್ಲಿಯಪೇಟ್ರಾ, ಜಪಾನಿನ ಜಿಂಗೋ, ಬಾಲ್ಕಿಸ್, ಸೋಲ್‌ಮನ್ ಚಕ್ರವರ್ತಿಯ ಹೆಂಡತಿ, ಹಿಂದು ದೇಶದಲ್ಲಿ ರುಬಿಯಾಬೇಗಂ ಮೊದಲಾದ ನಾರೀರತ್ನಗಳು ಅನೇಕರಿರುವರು. ಅರಬ್ಬಿಯ ಸಾಮ್ರಾಜ್ಯದಲ್ಲಿಯೂ ಹಿಂದು ದೇಶದಲ್ಲಿಯೂ ಇರುವ ನಾಣ್ಯಗಳ ಮೇಲೆ ರಾಜ ರಾಣಿಯ ಪ್ರತಿಮೆಗಳು ಚಿತ್ರಿಸಲ್ಪಟ್ಟಿವೆ.

ಒಂಭತ್ತನೆಯ ಶತಮಾನದಲ್ಲಿ ಜಪಾನ್ ದೇಶದ ವಿದ್ವಾಂಸರೆಲ್ಲರೂ ಚೈನಾ ಸಾರಸ್ವತವನ್ನು ಕಲಿತುಕೊಂಡಾಗ, ಜಪಾನ್ ಸ್ತ್ರೀಯರೆಲ್ಲರೂ ತಮ್ಮ ಜಪಾನ್ ಸಾರಸ್ವತವನ್ನೇ ಓದುತ್ತಿದ್ದರು. ಅದರಲ್ಲಿ "ಗೆಂಜೀಮನೋಗತಾರಿ" ಎಂಬ ಗ್ರಂಥಕರ್ತ್ರಿಯಾದ "ಶಿಶೋಗನನ್" ಎಂಬವಳೇ ಪ್ರಸಿದ್ಧಳು. ಟಿತೀ ಯುಗವಾ ಕಾಲದಲ್ಲಿಯೂ ಕೂಡ ಚೋ-ಕೋ-ರಾಸು, ಚಿಯೋ ಎಂಬ ಕವಿತಾಸಾಮರ್ಥ್ಯವುಳ್ಳ ನಾರೀಮಣಿಯರಿದ್ದರು. ಪ್ರಾಚೀನ ಭರತಖಂಡದಲ್ಲಿಯೂ ಸುಪ್ರಸಿದ್ಧ ಗಣಿತಶಾಸ್ತ್ರಜ್ಞನಾದ ಭಾಸ್ಕರಾಚಾರ್ಯನ ಮಗಳು "ಲೀಲಾವತಿಯು" ಪ್ರಪಂಚದಲ್ಲೆಲ್ಲಾ ಗಣಿತಶಾಸ್ತ್ರದಲ್ಲಿ ಅದ್ವಿತೀಯಸ್ಥಾನವನ್ನು ಹೊಂದಿರುವಳು. ಆಧ್ಯಾತ್ಮಿಕ ಚರ್ಚೆಯಲ್ಲಿ ಯಾಜ್ಞವಲ್ಕ್ಯ ಋಷಿಯ ಸಂಗಡ ಧೈರ್ಯದಿಂದ ವಾದಿಸಿದ ಗಾರ್ಗಿ, ಸ್ತ್ರೀಲೋಕಕ್ಕೇ ತಿಲಕಪ್ರಾಯಳಾಗಿರುವಳು. ಈಗಿನ ಹಿಂದೂದೇಶಚರಿತ್ರೆಯಲ್ಲಿ ಚಿತ್ತೂರು ರಾಣಿಯಾದ ಮೀರಾಬಾಯಿಯೂ ಔರಂಗಜೇಬನ ಮಗಳಾದ ಜೇಬುನ್ನೀಸಳೂ ಅತ್ಯುತ್ತಮ ಕವಿತಾಸಂಪನ್ನೆಯರಾಗಿದ್ದರು. ಮಹಮ್ಮದೀಯರ ಚರಿತ್ರೆಯನ್ನು ಓದಿದರೆ ಅವರಲ್ಲಿ ಕಾಣಬರುವ ಸುಪ್ರಸಿದ್ಧ ನಾರೀಮಣಿಯರ ಚರಿತ್ರೆಯನ್ನು ಇಂತಹ ಚಿಕ್ಕ ಉಪನ್ಯಾಸದಲ್ಲಿ ಬರೆಯಲಾಗಲಾರದು. "ಖಾಂಸ್ಕ' ಎಂಬವಳು ಮಕ್ಕಾದಲ್ಲಿ ವಾಸಮಾಡುತ್ತಿದ್ದಳೆಂದೂ ಅಲ್ಲಿಗೆ ಹೋಗುವ ಯಾತ್ರಿಕರೆಲ್ಲರೂ ಆಕೆಗೆ ನಮಸ್ಕರಿಸುತ್ತಿದ್ದರೆಂದೂ ಹೇಳುತ್ತಿರುವರು. ಆಕೆಯ ಸೌಂದರ್ಯವನ್ನೂ ಆಕೆಯ ವಿಜ್ಞಾನವನ್ನೂ ಓಮಿಯೋಡು ಕವೀಶ್ವರರು ಹೊಗಳುತ್ತಿದ್ದರು. "ಸುಕೇಯಿನಿ" ಎಂಬಾಕೆಯು ಕವೀಶ್ವರಳು. "ಉಮಾಲುಬನೀಂ" ಎಂಬವಳು ವಾಲಿದ I ನಿಗೆ ರಾಜಕೀಯ ವಿಷಯಗಳಲ್ಲಿ ಸಲಹೆಕೊಡುತ್ತಿದ್ದಳು. ಜುಜೇಯಿದಾ—ಹ

ತಾನು — ಎಂಬವನು ಅಲ್ರಾಸ್ಕಿಡನನಿಗೆ ತನ್ನ ಲೇಖಗಳನ್ನು ಪದ್ಯರೂಪವಾಗಿಯೇ ಬರೆಯುತ್ತಿದ್ದನು. ಆಲ್ಡ್ಮಾಕನ ಕಾಲದಲ್ಲಿ "ಒಪಾಲಿದಾ" ಎಂಬಾಕೆಯು ಸಂಗೀತದಲ್ಲಿ ಬಹಳ ಪ್ರಾವೀಣ್ಯವನ್ನು ಹೊಂದಿದ್ದಳು. ಪ್ರೈನಾಬು ಉಮ್ಮಲ್ ನೈಯಾಪ್ ಎಂಬವಳು ಬಗದಾದದಲ್ಲಿ ನ್ಯಾಯಶಾಸ್ತ್ರವನ್ನು ಬೋಧಿಸಲು ಅಪ್ಪಣೆಮಾಡಲ್ಪಟ್ಟಿತು. ಮೂರಿಪ್ ಸ್ತ್ರೀಯರು ವೇದಾಂತದಲ್ಲಿಯೂ ವ್ಯಾಕರಣದಲ್ಲಿಯೂ ನ್ಯಾಯಶಾಸ್ತ್ರದಲ್ಲಿಯೂ ಪಾಂಡಿತ್ಯವನ್ನು ಹೊಂದಿದ್ದರು. ಆ ಕಾಲದಲ್ಲಿ ಅರಬ್ಬಿಸ್ತ್ರೀಯರು ಉಪಾಧ್ಯಾಯಿನಿಯರಾಗಿರಲು ಈಕಾಲದ ಆಂಗ್ಲೇಯ ಸ್ತ್ರೀಯರಿಗೆ ತಮ್ಮ ವಿಶ್ವವಿದ್ಯಾಲಯಗಳಲ್ಲಿ ಉಪಾಧ್ಯಾಯರಾಗಿರಲು ಅವಕಾಶವಿಲ್ಲದಿರುವುದು ಶೋಚನೀಯವು.

ಈ ಪ್ರಪಂಚದಲ್ಲಿನ ಸ್ತ್ರೀಯರನ್ನು ಪ್ರೇಮವನ್ನೂ ವಿಭಜಿಸುವುದು ದುರ್ಘಟ. ಈ ವಿಷಯವಾಗಿ ಪರ್ಷಿಯನ್ನರೂ ಅರಬ್ಬಿಯವರೂ ತೋರಿರುವ ಅಭಿಪ್ರಾಯಗಳು ಬಹಳ ರಸಭರಿತಗಳಾಗಿಯೂ ಮನೋರಂಜಕಗಳಾಗಿಯೂ ಅನುಭವಗಾನಗಳಾಗಿಯೂ ಇವೆ. ಈ ಮಹಮ್ಮದೀಯರಿಗೆ ಪ್ರೇಮಭಾವಗಳು ಸಹಜವಾದುವುಗಳು. ತಮ್ಮ ಪ್ರೇಮಾಸ್ಪದರನ್ನು ಹರ್ಷಿಸುವಂತೆ ಮಾಡುವುದಕ್ಕಿಂತ ಹೆಚ್ಚಾದ ಕೆಲಸವು ಅವರ ಹೃದಯಬೀದಿಯಲ್ಲಿ ಪಾರಿತೋರಿಸದು. ಈ ಕಾರಣದಿಂದಲೇ ಜಹಂಗೀರು ಚಕ್ರವರ್ತಿಯು ತನ್ನ ಹೃದಯವನ್ನೂ ತನ್ನ ರಾಜ್ಯಾಧಿಪತ್ಯವನ್ನೂ ತನ್ನ ಸರ್ವಸ್ವವನ್ನೂ ತನ್ನ ಪ್ರೇಮಾಸ್ಪದಳಾದ ನೂರಜಹಾನಳಿಗೆ ಕೊಟ್ಟಿದ್ದನು. ಚಿತ್ರಕಲಾಪ್ರೋತ್ಸಾಹಕನೆಂದು ಕೀರ್ತಿಹೊಂದಿದ ಶಹಾಜಹಾನನು ತನ್ನ ಸತೀಮಣಿಯ ಸ್ಮರಣಚಿಹ್ನವಾಗಿ ಪ್ರಪಂಚದಲ್ಲಿ ಅಪ್ರತಿಮ ಸೌಧರಾಜವೆಂದು ಕರೆಯಲ್ಪಡುವ ತಾಜಮಹಾಲನ್ನು ಆಗ್ರಾಪಟ್ಟಣದಲ್ಲಿ ಕಟ್ಟಿಸಿ ಚಿರತರಕೀರ್ತಿಯನ್ನು ಸಂಪಾದಿಸಿದನು.

ಆದರ್ಶಪ್ರಾಯರಾದ ಸತೀಮಣಿಯರ ಲಕ್ಷಣಗಳೆಲ್ಲವೂ ಪ್ರಾಚೀನ ಹಿಂದುಗಳಲ್ಲಿ ಪರಿಪೂರ್ಣತೆಯನ್ನು ಹೊಂದಿದ್ದಿತು. ನಿರ್ಮಲ ಸ್ವಾರ್ಥತ್ಯಾಗವಿರಹಿತ ಪ್ರೇಮವನ್ನು ಕಳೆಯುವುದೇ ಹಿಂದೂ ಸತೀತಿಲಕಳ ಉದ್ದೇಶವು. ಆಕೆಗೆ ಹಣದಿಂದಲೂ ಸೌಂದರ್ಯದಿಂದಲೂ ಅಗತ್ಯವಿಲ್ಲ. ಆದಾಗಲೂ ಆಕೆ ಆಧ್ಯಾತ್ಮಿಕ ಚಿಂತನಸ್ವಭಾವವುಳ್ಳವಳಾಗಿದ್ದಳು. ತನ್ನ ಗಂಡನು ಮಾಡುವ ಕೆಲಸಗಳನ್ನು ತಾನು ಮಾಡಬಾರದೆಂದೂ ತನ್ನ ಕೆಲಸಗಳು ಪ್ರತ್ಯೇಕವಾಗಿ ನಿಯಮಿಸಲ್ಪಟ್ಟಿರುವುವೆಂದೂ ತಿಳಿದುಕೊಂಡಿದ್ದುದರಿಂದ ಆಕೆ ಹೆಚ್ಚು ಸ್ವಾತಂತ್ರ್ಯಕ್ಕಾಗಿ ಆಂದೋಳನೆಯನ್ನು ಮಾಡುತ್ತಿರಲಿಲ್ಲ. ಪ್ರೇಮಪ್ರಪಂಚವನ್ನು ಇತರರಿಂದ ಗ್ರಹಿಸುವುದಕ್ಕಿಂತಲೂ ಇತರರಿಗೆ ಕೊಡುವುದೇ ಉತ್ತಮವೆಂದು ಆಕೆ ಗ್ರಹಿಸಿದ್ದಳು. ಈ ಬಗೆಯಾಗಿ ತಮ್ಮ ಪತಿಗಳಲ್ಲಿರಿಸಿದ್ದ ಪ್ರೇಮಗೌರವಗಳಿಂದ ಸೀತೆ, ದಮಯಂತಿ, ಸಾವಿತ್ರಿ, ಮೊದಲಾದ ಸಾಧ್ವೀಮಣಿಯರು ಅನೇಕ ಕಷ್ಟಗಳ ಪಾಲಾಗಿದ್ದರೂ ಪರಿಣಾಮದಲ್ಲಿ ಸತ್ಫಲವನ್ನು ಹೊಂದಿ ಜಗತ್ತಿನ ಆದರ್ಶನಾರೀಮಣಿಯರೆನಿಸಿದರು.

ಬರ್ಮಾದೇಶದಲ್ಲಿ ಸ್ತ್ರೀಯರು ಗಂಡಸರಿಗೂ ಹೀನಸ್ಥಿತಿಯಲ್ಲಿರುವರೆಂಬ ಮಾತನ್ನು ನಂಬದೆ ಹೋದರೂ ಅವರು ಗಂಡಸರಿಗೂ ತಾವು ಬೇರೆಯವರೆಂಬ ಅಭಿಪ್ರಾಯದಿಂದ ತಮ್ಮ ಸ್ವಾತಂತ್ರ್ಯದ ನಿಮಿತ್ತವಾಗಿ [illegible] ಫ್ಯೂಡಲ್ ಪದ್ಧತಿಯನ್ನನುಸರಿಸಿ ಸಂಘನಿರ್ಮಾಣವು ಬರ್ಮಾದಲ್ಲಿ ನಡೆಯದೆ ಇರುವುದರಿಂದ ಯೂರೋಪಿನ ಸ್ತ್ರೀಯರಂತೆ ಬರ್ಮಾಸ್ತ್ರೀಯರು ಹೀನಸ್ಥಿತಿಯನ್ನು ಅನುಭವಿಸಲಿಲ್ಲ. ಯೂರೋಪುಖಂಡದಲ್ಲಿ ಈಗಲೂ ಸ್ತ್ರೀಯರು 'ಸಂರಕ್ಷಿತ'ರಾಗಿಯೇ ಪರಿಗಣಿಸಲ್ಪಡುತ್ತಿರುವರು. ಸ್ತ್ರೀಯರು ಸ್ಥಿರಾಸ್ತಿಗೆ ಹಕ್ಕುದಾರರಾಗಿರಲು ಅವಕಾಶವಿಲ್ಲ. ಬರ್ಮಾದಲ್ಲಿ ವಿವಾಹವು ಮತವಿಷಯವಾದುದಲ್ಲ. ವಿವಾಹಾನಂತರ ಕನ್ಯೆಯು ತನ್ನ ಗಂಡನ ಮನೆಯ ಹೆಸರನ್ನು ಇಟ್ಟುಕೊಳ್ಳದೆ ತನ್ನ ತವರುಮನೆಯ ಹೆಸರನ್ನೇ ಇಟ್ಟುಕೊಂಡಿರುವಳು. ವ್ಯವಹಾರ ವಿಷಯಗಳಲ್ಲಿ ಭಾರ್ಯಾಭರ್ತರಿಬ್ಬರೂ ಪ್ರಮಾಣಗಳನ್ನು ಮಾಡಿಕೊಳ್ಳುವರು.

ಸಾವಿರಾರು ವರ್ಷಗಳಿಗೆ ಮೊದಲು ಪ್ರಾಗ್ದೇಶದ ಸ್ತ್ರೀಯರು ಏನು ಮಾಡಿದರೆಂಬ ವಿಷಯವಾಗಿ ಬರೆಯಲು ಪ್ರಯತ್ನಿಸಿರುವೆನು. ಈ ವಿಷಯವಾಗಿ ಒಂದು ಚಿಕ್ಕ ಉಪನ್ಯಾಸವನ್ನು ಬರೆದು ಒಬ್ಬ ಆಂಗ್ಲೇಯ ಯುವತಿಗೆ ಕಳುಹಿದೆನು. ಆದರೆ, "ಈ ಕೆಟ್ಟ ಪದ್ಧತಿಗಳಿದ್ದರೂ ಘನಕೆಲಸಗಳನ್ನು ಮಾಡುವುದರಲ್ಲಿ ಏಸಿಯಾ ಖಂಡದ ಸ್ತ್ರೀಯರು ಅಸಾಧಾರಣರಾಗಿದ್ದಾರೆಂದು" ಪ್ರತ್ಯುತ್ತರವನ್ನು ಬರೆದಳು. ಪ್ರಾಗ್ದೇಶದ ಚರಿತ್ರೆಯ ವಿಷಯವಾಗಿ ಆಕೆಗೆ ಏನೂ ತಿಳಿಯದು.

ಎಷ್ಟು ಚರಿತ್ರಾಂಶಗಳಿದ್ದರೂ ಏಸಿಯಾ ಖಂಡದ ಕೆಟ್ಟ ಪದ್ಧತಿಗಳೆಲ್ಲವೂ ಇಂತಹ ಸತ್ಫಲಗಳನ್ನು ಕೊಡುತ್ತಿದ್ದರೆ, ಅವು ಎಷ್ಟು ವಾಂಛನೀಯವೆಂಬುದನ್ನು ಬೇರೆ ಹೇಳಬೇಕೆ? ಯೂರೋಪಿಯನ್ ದೇಶಪದ್ಧತಿಗಳು ಇದುವರೆಗೆ ಅನೇಕ ಸುಪ್ರಸಿದ್ಧ ಸ್ತ್ರೀರತ್ನಗಳನ್ನು ಉದ್ಭವಿಸುವಂತೆ ಮಾಡದೆ ಹೋದವು. ಮುದ್ರಣಾಯಂತ್ರದಿಂದ ಪಾಶ್ಚಾತ್ಯದೇಶಗಳಲ್ಲಿ ದಿಕ್ಕುಕೆಟ್ಟ ಕಲ್ಪಿತಕಥೆಗಳನ್ನು ಬರೆಯುವದಕ್ಕೂ ಪದ್ಯಗಳ

ನ್ನು ಬರೆಯುವದಕ್ಕೂ ಸ್ತ್ರೀಯರಿಗೆ ಪ್ರೋತ್ಸಾಹವು ಉಂಟಾಗುತ್ತಿದೆ. ಪ್ರಾಗ್ದೇಶದ ನಾರೀಮಣಿಯರಿಗಿಂತಲೂ ಪಾಶ್ಚಾತ್ಯಸ್ತ್ರೀಯರಿಗೆ ವಿಜ್ಞಾನವನ್ನು ಸಂಪಾದಿಸಲು ಹೆಚ್ಚು ಅವಕಾಶಗಳು ಇರುವವೆಂದು ಒಪ್ಪಿಕೊಳ್ಳಬಹುದು. ಪಾಶ್ಚಾತ್ಯಸ್ತ್ರೀಯರಿಗೆ ನಮ್ಮ ಸ್ತ್ರೀಯರಂತೆ ಭಾವಗಾಂಭೀರ್ಯವಿಲ್ಲದೆ ಹೋದರೂ ಅವರಿಗೆ ಅನೇಕ ವಿಷಯಪರಿಜ್ಞಾನವಿರುತ್ತದೆಂದು ಹೇಳಬಹುದು. ಈ ಔನ್ನತ್ಯಕ್ಕೆ ಅನೇಕ ವರ್ಷಗಳಿಂದ ಪ್ರಾಗ್ದೇಶನಾರೀರತ್ನವಾದ ಮೇರಿಯನ್ನು ಪೂಜಿಸುತ್ತಿದ್ದುದೂ ಸ್ಪೇನ್‌ದೇಶದಲ್ಲಿದ್ದ ಅರಬ್ಬಿಯವರಿಂದ ಕಲಿತುಕೊಂಡ ಗುಣಗಳ ಪಾಠಗಳೇ ಕಾರಣಗಳು.

Adopted from Andhra Patrika

K. S. R. Iyengar.

ಸ್ಫುಟವಿಷಯಗಳು.

ಆರ್ಯವೈಶ್ಯಮಹಿಳಾ ಸಮ್ಮೇಳನವು.

ಕೆಲವು ವಾರಗಳ ಹಿಂದೆ ಆರ್ಯವೈಶ್ಯಮಹಿಳಾಸಮ್ಮೇಳನವು ನಡೆಯಿತಷ್ಟೆ? ಅದರಲ್ಲಿ ವಿದುಷಿಯಾದ ಆರ್ಯವೈಶ್ಯಮಹಿಳೆಯೊಬ್ಬಳು ಅಗ್ರಾಸನವನ್ನು ಅಲಂಕರಿಸಿದ್ದಳು. ಅವರು ಇಂಗ್ಲಿಷ್‌ದೇಶಗಳಲ್ಲಿ ಸುತ್ತಿ ಪಾಶ್ಚಾತ್ಯರ ನಡೆನುಡಿಗಳನ್ನೂ ರೀತಿನೀತಿಗಳನ್ನೂ ಚೆನ್ನಾಗಿ ತಿಳಿದುಬಂದಿರುವರೆಂದು ಹೆಸರುಗೊಂಡಿರುವರು. ಅವರು ಸಮ್ಮೇಳನದಲ್ಲಿ ನೆರೆದಿದ್ದ ಮಹಿಳೆಯರಿಗೆ,— ಈ ಕಾಲದಲ್ಲಿ ದೇಶಾಭಿಮಾನಪೂರಿತೆಯರಾದ ಸ್ತ್ರೀರತ್ನಗಳು ಮಾಡತಕ್ಕ ಕರ್ತವ್ಯವೇನೆಂಬ ವಿಷಯದಲ್ಲಿ ಕೆಲವು ಮಹತ್ವದ ಉಪದೇಶಗಳನ್ನು ಮಾಡಿರುವರು. ಪೂರ್ವದಿಂದಲೂ ಗಂಡಸರು ಹೆಂಗಸರನ್ನು ಅನ್ಯಾಯವಾಗಿ ಪಾದಾಕ್ರಾಂತಮಾಡಿ ಅವರೊಡನೆ ತಾವೂ ಅಧೋಗತಿಗೆ ಇಳಿದು ಕೆಟ್ಟುಹೋಗಿರುವರೆಂಬ ಅಭಿಪ್ರಾಯವನ್ನು ಸಮ್ಮೇಳನದಲ್ಲಿ ಕಂಠೋಕ್ತವಾಗಿ ಸೂಚಿಸಿದರು. ಇದನ್ನು ಕೇಳಿ ನೆರೆದಿದ್ದ ಮಹಿಳೆಯರೆಲ್ಲರೂ ಬೆರಗಾಗಿಹೋದರು. ನಿಜವಾಗಿಯೂ ಆಲೋಚಿಸಿದರೆ,— ಧೀರರಾದ ಸ್ತ್ರೀ-ಪುರುಷರೆಲ್ಲರೂ ಈಗ ಎಲ್ಲಿ ಹೋಗಿರುವರು? ವೀರರಮಣಿಯರೆಂದು ನಮ್ಮ ಕಣ್ಣೆದಿರಿಗೆ ಇದ್ದವರು, ರಾಜಪುತ್ರಮಹಿಳೆಯರು, ಝಾನ್ಸಿರಾಣಿ, ಶ್ರೀಯುತ ಗಾಂಧಿಯವರ ಧರ್ಮಪತ್ನಿ, ಇಷ್ಟು ಜನರು ಮಾತ್ರವೇ! ಈ ವಿಭಾಗವು ನಿಜವಾಗಿಯೂ ಆಶ್ಚರ್ಯಕರವಾಗಿದೆ. ಈಗ ಸುಮಾರು ೪೦-೫೦ ವರ್ಷಗಳಿಂದ ಸಮಾಜಸಂಸ್ಕರಣಕ್ಕಾಗಿ ಬದ್ಧಕಂಕಣರಾಗಿ ಒಂದಿರುವ ಮಹನೀಯರನ್ನೂ ಅವರ ಕಾರ್ಯಗಳನ್ನೂ ಅನೇಕರು ಬಲ್ಲರು. ಆದರೆ, ಅಂತಹ ಸಮಾಜಸಂಸ್ಕರ್ತರನ್ನೆಲ್ಲ ಮೀರಿಸಿದೆ—ಈ ಅಧ್ಯಕ್ಷಭಾಷಣ! ಈ ಭಾಷಣದಲ್ಲಿ ಬಾಲ್ಯವಿವಾಹದ ಸೊಲ್ಲಡಗಿತು, ವೈಧವ್ಯದ ಸದ್ದೂ ಅಡಗಿತು; ಅಷ್ಟೇ ಅಲ್ಲ, ಪ್ರತಿಯೊಬ್ಬ ಸ್ತ್ರೀಯೂ ಸಾಕ್ಷಾತ್ ಸರಸ್ವತೀಸ್ವರೂಪವನ್ನೇ ಹೊಂದಿದಳು. ಪ್ರತಿಯೊಬ್ಬ ರಮಣಿಯೂ ವೀರಲಕ್ಷ್ಮಿಯ ಪುನರವತಾರವೇ ಆದಳು. ಇನ್ನೂ ಏನೆಂದರೆ ಹೆಂಗಸರಿಗೆ ನಗನಟ್ಟುಗಳ ಮೇಲಿನ ಗೀಳು ಮಾಯವಾಯಿತು, ಅಮೂಲ್ಯವಾದ ರೇಷ್ಮೆಜರತಾರೆಯ ಸೀರೆ-ಕುಪ್ಪಸಗಳಿಗೆ ಬದಲಾಗಿ ಮಳೆಯಾಳದ "ಅಚ್ಚಿ" ಗಳ ಧವಳಾಂಬರವು ತಲೆಯೆತ್ತಿತು. ಕಡೆಯದಾಗಿ,—ಹೆಂಗಸರಿಗೆ ಎಲ್ಲಾ ವಿಧವಾದ ಅಧಿಕಾರವೂ ಎಲ್ಲಾ ವಿಧವಾದ ಹಕ್ಕೂ ಸಿಕ್ಕಿ, ವಕೀಲರ ಕೆಲಸಗಳೂ ನ್ಯಾಯಾಧೀಶರ ಹುದ್ದೆಗಳೂ ಕೂಡ ಇವರ ಪಾಲಿಗೆ ದಕ್ಕಿದವು. ಜಯ, ವಿಜಯೀಭವ! ಅಧ್ಯಕ್ಷಭಾಷಣದ ಮಂಗಳವಾಕ್ಯದೊಡನೆ ಈ ಎರಡು ನುಡಿಯನ್ನು ಹೇಳಿ ಮುಗಿಸಬೇಕೆಂದಿದ್ದೇವೆ. ಅವರು ಹೇಳುವದೇನೆಂದರೆ, -ನಾರೀಮಣಿಗಳೇ! ನಿಮ್ಮ ಗಂಡಂದಿರಿಗೆ ಸ್ವದೇಶಾಚಾರ, ಸ್ವದೇಶಾಭಿಮಾನಗಳು ಹೋಗಿ ಎಲ್ಲವೂ ಪರಕೀಯಾಚಾರ ಪರಕೀಯಾಭಿಮಾನಗಳಾಗಿ ನಿಂತಿವೆ. ನೀವೆಲ್ಲರೂ ನಿಮ್ಮ ನಿಮ್ಮ ಗಂಡಂದಿರಿಗೆ ತಕ್ಕಬುದ್ಧಿಯನ್ನು ಕಲಿಸಿ, ಮೇಲುಪಂಕ್ತಿಯನ್ನು ಹಾಕಿಕೊಡಬೇಕು. ಅದಕ್ಕಾಗಿ ನೀವೇನು ಮಾಡಬೇಕೆಂದರೆ, ಜನಸಮುದಾಯದಲ್ಲಿಯೂ ರಾಜ್ಯಾಂಗದಲ್ಲಿಯೂ ನೆಲಸಿರುವ ಹಕ್ಕನ್ನೆಲ್ಲ ನಿಮ್ಮ ಕೈವಶಮಾಡಿಕೊಳ್ಳಬೇಕು. ನಾನಾವಿಧವಾದ ಉದ್ಯೋಗಗಳನ್ನೆಲ್ಲ ನಿಮ್ಮ ಸ್ವಾಧೀನ ಮಾಡಿಕೊಳ್ಳಬೇಕು. ಮತ್ತು, ಎಲ್ಲಕ್ಕಿಂತಲೂ ಮುಖ್ಯವಾಗಿ ನೀವೆಲ್ಲರೂ ಬಿಳಿಯ ಬಟ್ಟೆಯನ್ನು ಉಡಬೇಕು!!!

ಕರ್ಣಾಟಕ ನಂದಿನಿಯು ದ್ವಿತೀಯವರ್ಷದ ಮಧ್ಯದಲ್ಲಿ ಆಕಾರಬದಲಾವಣೆ ಹೊಂದಿರುವುದು ಸರಿಯಾಗಿ ತೋರುತ್ತಿಲ್ಲವೆಂದೂ, ಮೊದಲಿನ ಆಕಾರದಲ್ಲಿಯೇ ಇರಬೇಕಾಗಿತ್ತೆಂದೂ, ಇದರಿಂದ ವರ್ಗಣೀದಾರರ ಮತ್ತು ಇತರ ವಾಚಕರ ವಾಚನಕ್ಕೆ ತುಂಬಾ ಅಡಚಣೆಯಾಗಿರಬಹುದೆಂದೂ ನಮ್ಮ ಹಿತಚಿಂತಕರಲ್ಲಿ ಕೆಲವರು ಅಭಿಪ್ರಾಯಪಟ್ಟಿರುವರು. ನಮ್ಮ ಯತ್ನದಲ್ಲಿಲ್ಲದೆ ಕೇವಲ ದೈವಾಯತ್ತವಾಗಿಯೇ ನಡೆಯುತ್ತಿರುವ ಸಂಪುಟದ ಈ ಸಲದ ಬದಲಾವಣೆಯಿಂದ ನೀವ್ಯಾರೂ ಬೇಸರಪಡದೆ, ಸಹಜಕ್ಷಮೆಯಿಂದಲೂ ಅಕೃತ್ರಿಮ ಸೋದರವಾತ್ಸಲ್ಯದಿಂದಲೂ ಮನ್ನಿಸಬೇಕೆಂಬುದು ನಮ್ಮ ಪ್ರಾರ್ಥನೆಯಾಗಿದೆ. ಅಲ್ಲದೆ, ನಂದಿನಿಯು ಕಾಲಕ್ರಮವನ್ನು ಅನುಸರಿಸದೆ ಬಹು ಹಿಂದೆ ಬಿದ್ದು ಅತಿ ವಿಳಂಬದಿಂದ ನಡೆಯುತ್ತಿರುವುದಾಗಿ ಮತ್ತೆ ಕೆಲವರು ಆಕ್ಷೇಪಿಸುತ್ತಿರುವರು. ಅದಕ್ಕೆ ಉತ್ತರವು ಹಿಂದೆಯೇ ಕೊಡಲ್ಪಟ್ಟಿರುವುದಾದರೂ ಮತ್ತಿಷ್ಟು ನಾವು ಹೇಳುವುದೆಂದರೆ ಇಷ್ಟೆ.— ಈ ದ್ವಿತೀಯ ವರ್ಷದ ಅಂತ್ಯದವರೆಗೂ, ಎಂದರೆ ಮುಂದಿನ ಸೆಪ್ಟಂಬರ ತಿಂಗಳ ಕಡೆಯವರೆಗೂ, ನಂದಿನಿಯು ಹೀಗೆಯೇ ಮಂದಗತಿಯಿಂದಲೇ ನಡೆಯಬೇಕಾಗಿದೆ. ಸೆಪ್ಟಂಬರ್ ಕೊನೆಯೊಳಗೆ ಅಥವಾ ವಾರ್ಷಿಕೋತ್ಸವಸಮಯದೊಳಗೆ ನಂದಿನಿಯ ದ್ವಿತೀಯವರ್ಷದ ಹನ್ನೆರಡು ಸಂಚಿಕೆಗಳೂ ಪ್ರಸಿದ್ಧವಾಗುವುದರಲ್ಲಿ ಸಂಶಯವಿಲ್ಲ. ಮುಂದಿನ ವರ್ಷದಿಂದ ಕಾಲಕ್ರಮವನ್ನು ತಪ್ಪದೆ ನಡೆಯುವಂತೆ ಸಲಕರಣೆಗಳನ್ನೊದಗಿಸಿಕೊಂಡಮೇಲೆಯೇ ನಂದಿನಿಯು ನವವರ್ಷದಲ್ಲಿ ಪದಾರ್ಪಣಮಾಡುವುದು.

* * * *

ನಂದಿನಿಯು ಇನ್ನುಮುಂದೆ ರಾಷ್ಟ್ರೀಯ ವಿಚಾರಗಳನ್ನು ಪ್ರಸಿದ್ಧಿಪಡಿಸಬಹುದೆಂದು ನಮ್ಮ ಪ್ರಭುವರೇಣ್ಯರಾದ ಶ್ರೀಮನ್ಮಹಾರಾಜಾ ಸರ್ಕಾರದವರು ಅನುಮತಿಕೊಟ್ಟಿರುವುದರಿಂದ ನಾವು ನಮ್ಮ ಚಿರಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅನೇಕ ವಂದನೆಗಳೊಡನೆ ಈ ಮೂಲಕ ನಮ್ಮ ಧರ್ಮಪ್ರಭುವರೇಣ್ಯರಿಗೂ ಅವರ ಘನಸರ್ಕಾರಕ್ಕೂ ಅರ್ಪಿಸಿರುವೆವು. ಮತ್ತು ಇನ್ನು ಮೇಲೆ ನಮ್ಮ ಕರ್ಣಾಟಕ ರಾಷ್ಟ್ರದಲ್ಲಿ ಅಲ್ಲಲ್ಲಿ ನಡೆಯಬಹುದಾದ ವಿಷಯಗಳನ್ನು—ರಾಜಕೀಯ ವಿಚಾರವನ್ನು ಬಿಟ್ಟು— ಧಾರ್ಮಿಕ, ಸಾಮಾಜಿಕ, ವಿದ್ಯಾವಿಷಯಕಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ನಮ್ಮ ಸೋದರೀ ಸೋದರರು ಕಳುಹಿಕೊಡಬಹುದೆಂದೂ, ವಿಶೇಷವಾಗಿ ನಮ್ಮ ಸ್ತ್ರೀಯರ ವಿದ್ಯಾಭ್ಯಾಸ, ಶಿಕ್ಷಣ, ಸಂಘಶಕ್ತಿಯ ತತ್ತ್ವಪ್ರಸಾರಗಳಿಗೆ ಸಂಬಂಧಿಸಿದ ವಿಷಯಗಳಿಗೆ—ಅವರ ಸಮಾಜ, ಸಂಘ, ಸಮ್ಮೇಳನಗಳಲ್ಲಿ ನಡೆಯುವ ವಿಶೇಷ ವಿಚಾರಗಳಿಗೆ— ನಂದಿನಿಯಲ್ಲಿ ಅಗತ್ಯವಾಗಿ ಅವಕಾಶವು ಕೊಡಲ್ಪಡುವುದೆಂದೂ ನಮ್ಮ ದೇಶೀಯ ಸೋದರೀಸೋದರರಲ್ಲಿ ನಿವೇದಿಸುತ್ತಿರುವೆವು.

* * * *

ನಮ್ಮ ಕರ್ಣಾಟಕ ನಂದಿನಿಯು ಚಂದಾದಾರರಿಗೆ ದ್ವಿತೀಯವರ್ಷದ ಕಾಣಿಕೆಯಾಗಿ ಒಪ್ಪಿಸುವೆವೆಂದು ಹಿಂದೆ ಒಂದೆರಡು ಕಡೆ ಹೇಳಿದ್ದಂತೆ 'ಜಾನಕೀ ಕಲ್ಯಾಣ', 'ಲಕ್ಷ್ಮೀನೃಸಿಂಹ ಸ್ತೋತ್ರ'ಗಳನ್ನು ಬಹುವಾಗಿ ನಿರ್ದಿಷ್ಟಕಾಲದಲ್ಲಿ ಒಪ್ಪಿಸಲು ಅನುಕೂಲಿಸಲಿಲ್ಲವೆಂದು ನಿವೇದಿಸಬೇಕಾಗಿದೆ. ಏಕೆಂದರೆ, ಜಾನಕೀಕಲ್ಯಾಣವು ಅನೇಕ ಅನಿವಾರ್ಯಗಳಿಂದ ಅಜ್ಞಾತವಾಗಿರಬೇಕಾಗಿದೆ. ಶ್ರೀಲಕ್ಷ್ಮೀನೃಸಿಂಹ ಸ್ತೋತ್ರವುಮಾತ್ರ ಮುದ್ರಣದಲ್ಲಿದೆ. ಅದುಕೂಡ ಮುದ್ರಾಲಯದವರ ಅನೇಕ ಕಾರ್ಯಗೌರವಗಳಿಂದ ಸ್ವಲ್ಪ ವಿಳಂಬವನ್ನೇ ಹೊಂದಬೇಕಾಗಿದೆ. ಎಂದರೆ, ಲಕ್ಷ್ಮೀನೃಸಿಂಹ ಸ್ತೋತ್ರವು, ರುಕ್ಮಿಣೀವಿಜಯ, ದ್ರೌಪದೀ ವಸ್ತ್ರಾಪಹರಣಗಳಂತೆ ಸಣ್ಣ ಪುಸ್ತಕವೆಂದು ಭಾವಿಸಿ, ಪ್ರಕಾರಾಂತರಭಾವನೆಗೆ ಅವಕಾಶವನ್ನು ಕೊಡಬಾರದು. ಈ ಪುಸ್ತಕವು ಶ್ರೀ ಲಕ್ಷ್ಮೀನೃಸಿಂಹನನ್ನು ಸ್ತುತಿಸುವ ವ್ಯಾಜದಿಂದ ಅಲಂಕಾರಲಕ್ಷಣಗಳೆಲ್ಲವನ್ನೂ ಉದಹರಿಸುವಂತಿದೆ. ಇದರಲ್ಲಿ ೩೮೩ ಕಂದಗಳಿವೆಯಲ್ಲದೆ ಕಡೆಯಲ್ಲಿ ಅಲಂಕಾರಲಕ್ಷಣಗಳನ್ನು ವಚನರೂಪದಿಂದ ಚೆನ್ನಾಗಿ ವಿವರಿಸಿರುವುದು. ಒಟ್ಟು ಗ್ರಂಥವು ಡೆಮ್ಮಿ ಅಷ್ಟಪತ್ರದ ಆಕಾರದಲ್ಲಿ ೧೨ 'ಫಾರಮ್'ಗಳನ್ನು—೧೦೦ ಪುಟ-ಗಳನ್ನೊಳಗೊಳ್ಳುವಂತಿರುವ ಈ ವಿಸ್ತೃತ ಗ್ರಂಥವು ಸ್ವಲ್ಪ ವಿಳಂಬದಿಂದಲಾದರೂ ವರ್ಗಣೀದಾರರಿಗೆ ಕಾಣಿಕೆಯಾಗಿದೊರೆಯುವದು ಲಾಭಕರವೇ ಆಗಿರುವದೆಂದು ತಿಳಿದು ಅವರು ತಾಳ್ಮೆಯನ್ನು ಹೊಂದಿರಬೇಕೆಂಬುದು ನಮ್ಮ ಕೋರಿಕೆಯಾಗಿದೆ.

* * * *

ಕರ್ಣಾಟಕ ವಾಙ್ಮಯಾಭಿವೃದ್ಧಿಯಾಗಬೇಕೆನ್ನುವವರು ನಮ್ಮ ವೃದ್ಧಮಹಿಳೆಯರ ಬಾಯಲ್ಲಿ ಮಾತ್ರವೇ ನಲಿದಾಡುತ್ತಿರುವ, ಮತ್ತು ಕರಡು ಕಾಗದಗಳಲ್ಲಿ ಜೀರ್ಣರೂಪದಿಂದ ಅಜ್ಞಾತವಾಸದಲ್ಲಿರುವ ಹಳೆಯ ಹಾಡು, ಯಕ್ಷಗಾನ, ಲಾವಣಿ ಪದಗಳನ್ನು ತೆಗೆದು ಪ್ರಕಾಶಪಡಿಸುವುದರಿಂದ ವಾಙ್ಮಯಕ್ಕೆ ಕಳೆಯೇರುವದಲ್ಲದೆ, ಸಮಾಜ-ಧರ್ಮಗಳ ಜಾಗ್ರತಿಯೂ ತಕ್ಕಮಟ್ಟಿಗೆ ಆಗಿ, ಸ್ತ್ರೀಯರ ಅಭಿಮಾನವು ಇವುಗಳಲ್ಲಿ ದೃಢವಾಗಿ ನಿಲ್ಲುವದೆಂಬ ಭಾಷ್ಯಕೃವರ್ಗೀಯರ ವಾಕ್ಯದಂತೆ ನಡೆಯಿಸಲು ಪ್ರಯತ್ನಪಟ್ಟಿರುವೆವು. ಈಗಾಗಲೇ ಈ ನಮ್ಮ ಪ್ರಯತ್ನದಿಂದ ಭಗವದ್ಗುಣಕಥನರೂಪವಾದ ನಾಲ್ಕಾರು ದೊಡ್ಡ ದೊಡ್ಡ ಹಾಡುಗಳೂ, ಅನೇಕ ದೇವರ

ನಾವ ದ ಪದಗಳೂ, ೩–೧೦ ಯಕ್ಷಗಾನ ಪ್ರಬಂಧಗಳೂ, ೬–೭ ನಾಟಕಗಳೂ ನಮ್ಮ ಕಡೆಗೆ ಪ್ರಕಟನೆಗಾಗಿ ನಮ್ಮ ಸೋದರಿಯರಿಂದ ಕಳುಹಲ್ಪಟ್ಟು ಬಂದಿರುವವು. ಅವುಗಳಲ್ಲಿ ನಂದಿನಿಯ ನಾಲ್ಕನೆ ಸಂಚಿಕೆ (ಪಿಂಗಳ ಸಂ॥ ಪುಷ್ಯ ೧೯೧೮ ಜನವರಿ)ಯಲ್ಲಿ 'ರಾಸಕ್ರೀಡಾ' ಎಂಬ ಶ್ರೀಕೃಷ್ಣಲೀಲಾಪರವಾದ ದೊಡ್ಡ ಹಾಡನ್ನು ಮುದ್ರಿಸಿರುವೆವು. ಇದೇ (ಮಾಘ ಫಾಲ್ಗುನ) ೫–೬ನೆ ಸಂಚಿಕೆಗಳಲ್ಲಿ ಶ್ರೀಕೃಷ್ಣನ ಜಲಕ್ರೀಡೆಯನ್ನು ವರ್ಣಿಸುವ ಕಥಾಭಾಗವನ್ನೊಳಕೊಂಡಿರುವ ಉದಯರಾಗವನ್ನೂ ಪ್ರಕಟಿಸಿರುವೆವು. ಇನ್ನೂ ಇದರಂತೆಯೇ ಒಂದೇ ವಿಷಯದ ದೊಡ್ಡ ದೊಡ್ಡ ಹಾಡುಗಳು ನಾಲ್ಕಾರು ಉಳಿದಿರುವವು; ಅವು ಕೂಡ ಹೀಗೆಯೇ ಸಂದರ್ಭಾನುಸಾರ ನಂದಿನಿಯಲ್ಲಿ ಪ್ರಕಟವಾಗುವವು. ದೇವರ ನಾಮಗಳಲ್ಲಿ ಕೆಲವನ್ನು ಈವರೆಗೆ ಪ್ರಕಟಿಸಿರುವೆವು. ಯಕ್ಷಗಾನದಲ್ಲಿ ಒಂದೆರಡನ್ನು ಪ್ರಕಾಶಕ್ಕೆ ತಂದಿರುವೆವು; ಮತ್ತು ಇನ್ನೆರಡು ಮೂರು ಪುಸ್ತಕಗಳು ಇಷ್ಟರಲ್ಲಿ ಪ್ರಕಾಶಕ್ಕೆ ಬರುವುದರಲ್ಲಿರುವವು. ಈ ಗ್ರಂಥಗಳು "ಕೇವಲ ಸ್ತ್ರೀಯರ ಪ್ರಯೋಜನ ಮತ್ತು ಸಾಹಿತ್ಯಕ್ಷೇತ್ರದಲ್ಲಿ ಯತ್ಕಿಂಚಿತ್ ಕೃಷಿ" ಇವುಗಳನ್ನೇ ಮುಖ್ಯ ಗುರಿಯಾಗಿರಿಸಿರುವುದರಿಂದ ಇದು ನಮ್ಮ ಇತರ ಭ್ರಾತೃವರ್ಗದವರಿಂದ ಆಕ್ಷೇಪಿಸಲ್ಪಡುವುದಿಲ್ಲವೆಂದು ನಂಬುವೆವು. ಇರಲಿ, ನಮ್ಮ ನಿರೀಕ್ಷೆಗೆ ತಕ್ಕಂತೆ ನಮ್ಮ ಸೋದರಿಯರಲ್ಲಿ ಕೆಲವರು ಈಗೀಗ ಸಾಹಿತ್ಯಸೇವೆ, ಸಮಾಜಸೇವೆ, ದೇಶಸೇವೆಗಳಲ್ಲಿಯೂ ತಮ್ಮ ಪಾಲಿನದಾಗಿ ಬಿದ್ದಿರುವ ಕರ್ತವ್ಯವನ್ನು ಗಮನಿಸುತ್ತಿರುವುದು ಕೂಡ ನಮಗೆ ತಿಳಿದುಬಂದಿರುವುದು. ಹೀಗೆ ಕರ್ತವ್ಯಾಭಿಮುಖರಾಗಿ ಮುಂದೆ ಬಂದಿರುವವರಲ್ಲಿ ಹಿಂದೆ ನಂದಿನಿಯಲ್ಲಿ ಉಲ್ಲೇಖಿತರಾಗಿರುವ ಸೋದರಿಯರಲ್ಲದೆ, ಹೊಳೆನರಸೀಪುರದಲ್ಲಿರುವ ಶ್ರೀ॥ ಸೌ॥ ವೆಂಕಟಲಕ್ಷ್ಮಮ್ಮನೆಂಬ ಮಹಿಳಾಮಣಿಯ ಹೆಸರನ್ನು ನಮ್ಮ ಸೋದರಿಯರ ಮುಂದಿಡಲು ನಮಗೆ ಸಂತೋಷವಾಗುತ್ತಿದೆ. ಭಗವಂತನು ಈ ನಮ್ಮ ಸೋದರಿಯರಂತೆಯೇ ಉಳಿದ ಎಲ್ಲಾ ಸೋದರಿಯರೂ ಕರ್ತವ್ಯಜಾಗೃತಿ ಹೊಂದುವಂತೆ ಅನುಗ್ರಹಿಸಲೆಂದು ಹಾರೈಸುವೆವು.

* * * *

(ಮಾತೃಮಂದಿರ)

ಈ ನಮ್ಮ ಹಿತೈಷಿಣೀ ಮಾತೃಮಂದಿರದಲ್ಲಿ ಸತೀಹಿತೈಷಿಣೀ ಗ್ರಂಥಮಾಲೆ, ಕರ್ಣಾಟಕ ನಂದಿನಿ ಮಾಸಪತ್ರಿಕೆಗಳು ಪ್ರಕಟವಾಗುತ್ತಿರುವುವು, ಮತ್ತು ಇಲ್ಲಿ ವಿದ್ಯಾರ್ಥಿಗಳ ಸಂಘಸ್ಥಾಪನೆಯಾಗಿ, ಆ ಸಂಘದವರಿಗಾಗಿ ಪುಸ್ತಕ ಭಂಡಾರ, ವಾಚನಶಾಲೆ, ಭಜನಾಸಮಾಜಗಳು ಏರ್ಪಟ್ಟು, ಕ್ರಮವಾಗಿ ನಡೆಯುತ್ತಿರುವುದೂ ಸರಿಯಷ್ಟೆ! 'ಇಷ್ಟು ದೂರ ಕ್ರಮಪಟ್ಟು, ಅಧಿಕ ಉತ್ತರವಾದಿತ್ವವನ್ನೊಳಕೊಂಡ ಮಹತ್ಕಾರ್ಯಗಳನ್ನು ನಿರ್ವಹಿಸುತ್ತಿರುವ ಮಾತೃಮಂದಿರಕ್ಕೆ ಒಂದು ಸ್ವತಂತ್ರ ಮುದ್ರಾಲಯವೂ, ಒಂದು ಮಹಿಳಾಮಂಡಲಿಯೂ ಮತ್ತು ಮಂದಿರದ ಉತ್ತರೋತ್ತರಾಭಿವೃದ್ಧ್ಯರ್ಥವಾಗಿ ಒಂದು ಸಹಾಯನಿಧಿಯೂ ಏರ್ಪಡಿಸಲ್ಪಟ್ಟರೆ ಅನುಕೂಲ"ವೆಂದೂ, 'ಮುದ್ರಾಲಯವು ಸ್ವತಂತ್ರವಾಗಿಡಲ್ಪಡುವ ವರೆಗೆ ಮಾತೃಮಂದಿರದ ಸಂಕಲ್ಪ–ಪ್ರಯತ್ನಗಳಿಗೆ ತಕ್ಕಂತೆ ಫಲವಾಗುವ ಬದಲು ಕಾಲವನ್ನು, ಕಾರ್ಯವನ್ನು, ಜನರ ವ್ಯವಸಾಯಿಷ್ಣುತೆಗಳು ತಪ್ಪಿದುದಲ್ಲ"ವೆಂದೂ, ಮತ್ತು 'ಇದರಿಂದ ದೇಶಭಾಷಾಭಿಮಾನಿಗಳ ನಿರೀಕ್ಷಾಭಂಗ ಮತ್ತು ಉದಾಸೀನಗಳಿಗೆ ಕೂಡ ಕಾರಣವಾಗಬಹುದೆ"ಂದೂ ಮೊದಲಾಗಿ ಅಭಿಜ್ಞರಾದ ನಮ್ಮ ಸದ್ವರ್ಗಭ್ರಾತೃಗಳಲ್ಲಿ ಕೆಲವರು ಸೂಚಿಸುತ್ತಿರುವರು. ಈ ಹಿತಸೂಚನೆಯು ನಮಗೆ ಮಾನ್ಯವಾದುದೇ ಸರಿ! ಆದರೆ, ಸದ್ಯಃಸ್ಥಿತಿಯಲ್ಲಿ ಸ್ವತಂತ್ರ ಮುದ್ರಾಲಯಸ್ಥಾಪನೆಗೆ ಸ್ಥಳಾಭಾವ, ಸಹಾಯಾಭಾವ, ಸಂಪದಭಾವಗಳು ಹೆಚ್ಚಾಗಿರುವುದರಿಂದಲೂ–ಎಲ್ಲಕ್ಕಿಂತಲೂ ಹೆಚ್ಚಾಗಿ, ಯುದ್ಧ ಸಂಬಂಧದ ತಾಪಗಳು ಸುತ್ತಿರುವುದರಿಂದಲೂ ಒಂದೆರಡು ವರ್ಷಗಳ ವರೆಗೆ ಸ್ವತಂತ್ರ ಮುದ್ರಾಲಯಸ್ಥಾಪನೆಯ ವಿಷಯವನ್ನು ಮಾನಸಿಕ ಮಾಡಿಡಬೇಕಾಗಿದೆ. ಒಡನೆಯ ವಿಚಾರವು ಈಗ ಎರಡು ವರ್ಷಗಳಿಂದಲೂ ನಮ್ಮ ಮನಸ್ಸಿನಲ್ಲಿದ್ದೇ ಇರುವುದು. ಅದನ್ನು ಕಾರ್ಯಗತಿಸಲು ಮಾತ್ರ ಇನ್ನೂ ಧೈರ್ಯ ಸಾಲದು! ಅದರ ಕಾರಣವಾದರೂ ಮೇಲೆ ಹೇಳಿದವುಗಳಲ್ಲದೆ ನಮ್ಮ ಸ್ಥಳೀಯ ಸೋದರರ ಉದಾಸೀನಭಾವವೂ, ಸೋದರಿಯರ ಅಲಕ್ಷ್ಯಭಾವವೂ ಕಾರಣಗಳಾಗಿವೆ. ಈ ಕೊರತೆಗಳನ್ನು ಹೋಗಲಾಡಿಸಿ, ಅವರು ತಮ್ಮ ತಮ್ಮ ಸತೀ–ಸುತೆ–ಸೋದರಿಯರಿಗೆ ತಕ್ಕಂತೆ ಕಾಲೋಚಿತ ಸೂಚನೆಗಳನ್ನು ಕೊಟ್ಟು ನಮ್ಮೀ ಉದ್ದೇಶಕ್ಕೆ ಪೋಷಕ–ಪ್ರೋತ್ಸಾಹಕರಾಗಿ ನಿಂತು ಸಹಕರಿಸುವವರಾಗಿದ್ದಾರೆಂದು ತಿಳಿದುಬಂದರೆ, ನಾವು ಅಗತ್ಯವಾಗಿಯೂ ಇದರ ಪ್ರಯತ್ನವನ್ನು ಕೈಕೊಳ್ಳುವೆವು. ಮೂರನೆಯ ಸಲಹೆಯ ವಿಷಯವನ್ನು ಕುರಿತು, ನಾವು ವಿಶೇಷ ಪ್ರಸ್ತಾಪಿಸುವಂತಿಲ್ಲ. ಸತೀಹಿತೈಷಿಣೀ–ನಂದಿನಿಯರ ಪುರೋಭಿವೃದ್ಧಿಯನ್ನು ಬಯಸುವ, ಮತ್ತು ಮಾತೃಮಂದಿರದ ಪ್ರಾಶಸ್ತ್ಯವನ್ನು ಕೋರುವ ದೇಶಬಾಂಧವರೂ ಭಾಷಾಭಿಮಾನಿಗಳೂ ಆದ ಮಹಾಜನರ ಗಮನಕ್ಕೆ ಬರಬೇಕಾದ ವಿಚಾರವದಾಗಿರುವುದು. ನೋಡಬೇಕು, ಈ ವಿಚಾರಗಳಲ್ಲಿ ಸ್ಥಳೀಯ ಸೋದರೀ–ಸೋದರರಲ್ಲಿಯೂ ಮತ್ತು ದೇಶೀಯ ಸೋದರೀ––ಸೋದರರಲ್ಲಿಯೂ ಎಷ್ಟು ಮಂದಿ, ತಮ್ಮ ಸಾನುಭೂತಿಪ್ರದರ್ಶನಪೂರ್ವಕವಾದ ಪ್ರೋತ್ಸಾಹನವನ್ನು ಕಳುಹುವರೆಂಬುದು ನಿರೀಕ್ಷೆಯಲ್ಲಿರುವುದು.

ಸಂಪುಟ ೨ ೧೯೧೮ ಸಂಚಿಕೆ ೭-೮

ಕರ್ನಾಟಕ ನಂದಿನೀ



ಭಕ್ತ್ಯಾಗುರೌಮಯ್ಯನುಕಂಪಯಾಚ । ಪ್ರೀತಾಸ್ಮಿ ತೇ ಪುತ್ರ ವರಂ ವೃಣೀಷ್ವ ॥
ನ ಕೇವಲಾನಾಂ ಪಯಸಾಂ ಪ್ರಸೂತಿಂ । ಅವೇಹಿ ಮಾಂ ಕಾಮದುಘಾಂ ಪ್ರಸನ್ನಾಮ್ ॥

ವಾರ್ಷಿಕ ಚಂದಾ ೨—೮—೦ ಬಿಡಿಸಂಚಿಕೆಗೆ ೦—೪—೦

" ಬೋಧಾಯ ವಿಬುಧ ಲಕ್ಷ್ಮ್ಯಾಃ ನಷ್ಟಾಯಾ ದಶಮುಖಾಹಿ ದಷ್ಟಾಯಾಃ ||
ಭವತೋ ಗಾರುಡ ಮಂತ್ರಾ ವಿಜಯನ್ತೇ ರಾಮಚಾಪಟಂಕಾರಾಃ || "

ಓಂ

ಸಕೃದೇವ ಪ್ರಸನ್ನಾಯ ತವಾಸ್ಮೀತಿಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ||

— ಶ್ರೀ —

ರಾಮಸ್ಸತ್ಯಪರಾಕ್ರಮಃ

ಪ್ರಣಿಪಾತ ಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ

ಮಂಗಳಂ ಕೋಸಲೇಂದ್ರಾಯ ಮಹನೀಯ ಗುಣಾತ್ಮನೇ ||

ಸೌಮಿತ್ರಿರ್ಮಿತ್ರನಂದನಃ

ಭರತೋ ಭ್ರಾತೃವತ್ಸಲಃ

ಚಕ್ರವರ್ತಿ ತನೂಜಾಯ ಸಾರ್ವಭೌಮಾಯ ಮಂಗಳಂ ||

ಸಮಸ್ತಶರಣ್ಯದಂಪತೀಭ್ಯಾಂ

ಶತ್ರುಘ್ನೋ ನಿತ್ಯ ಶತ್ರುಘ್ನಃ

ರಾಮಾಯಣ ಮಹಾಮಾಲಾರತ್ನಂ ವಂದೇ ನಿಲಾತ್ಮಜಂ

ದಕ್ಷಿಣೇ ಲಕ್ಷ್ಮಣೋ ಯಸ್ಯ ವಾಮೇತು ಜನಕಾತ್ಮಜಾ ।
ಪುರತೋ ಮಾರುತಿರ್ಯಸ್ಯ ತಂ ವಂದೇ ರಘುನಂದನಂ ||

ಕಾಳಯುಕ್ತಿ ಸಂವತ್ಸರ ೧೮೪೦, ಚೈತ್ರಮಾಸ.

॥ ಶ್ರೀ ॥

। ವಂದೇತ್ವಾಂ ಭೂದೇವಿ ಆರ್ಯಮಾತರಮ್ ।

ಕರ್ನಾಟಕ-ನಂದಿನಿ.

(ಮಾಸಪತ್ರಿಕೆ.)

"ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃ ಪ್ರಭುಃ
ದಾಸ್ಯನ್ತಿ ಮಮ ಯೇ ಚಾನ್ಯೇ ಹ್ಯದೃಷ್ಟಾಃ ಪಥಿಗೋಚರಾಃ ॥"

ಸಂಪುಟ ೨. } ಕಾಳಯುಕ್ತ ಸಂ॥ ಚೈತ್ರ ೧೮೪೦ ೧೯೧೮ನೆ ಏಪ್ರಿಲ್ { ಸಂಚಿಕೆ ೭.

ಪರಮಾತ್ಮಸ್ತುತಿ.

ನಮೋನಮಃ ಕಾರಣಕಾರಣಾಯ, ನಿಷ್ಕಾರಣಾಯಾದ್ಭುತಕಾರಣಾಯ। ನಮೋನಮಸ್ತೇ ಖಿಲಸತ್ವಧಾಮನ್ನಮೋನಮಸ್ತೇ ಜಲಜಾತನೇತ್ರ ॥ ೧ ॥ ವೇದಾಂತ ವೇದ್ಯಾಯ ಮಹಾವಿಪಶ್ಚಿತೇ ಜಗಜ್ಜನಿತ್ರೇ ನಿಖಿಲಾಂತರಾತ್ಮನೇ। ಅಣೋರಣೀಯ ಶ್ರುತಿವೇದಿತಾತ್ಮನೇ, ಗುಹಾಶಯಾಯಾಖಿಲಲೋಕಸಾಕ್ಷಿಣೆ ॥ ೨ ॥ ವಿಜ್ಞಾನತತ್ತ್ವವಿದುಷೇ ವಿವಿಧಾಗಮಾಂತ ವೇದ್ಯಾಯ ವೇದಪುರುಷಾಯ ವಿಧೀತಪಾಯ। ವಿದ್ಯಾಧರಾರ್ಚಿತಪದಾಯ ವಿಹಂಗರಾಜರೂಢಾಯ ಗೂಢಚರಣಾಯ ನಮಃಪರಸ್ಮೈ ॥ ೩ ॥ ನಂದಾತ್ಮಜಾದ್ಯ ಪುರುಷಾಖಿಲ ಲೋಕನಾಥ, ನಾಳೀಕಸದ್ಮಜನ ಕಾರ್ಯಮನೋಬ್ಜಭೃಂಗ। ನವ್ಯಾಂಬುಜಾಕ್ಷ ನವನೀತಹರಾಪ್ರಮೇಯ ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೪ ॥ ಶ್ರೀ ಕೇಶವಾದ್ಯ ಪುರುಷೋತ್ತಮ ಪೂರ್ಣಕಾಮ, ಮತ್ಸ್ಯಾವತಾರ ನಿಗಮೋದ್ಧರ ಭೋ ಮುರಾರೇ। ಲೋಕೇಶ ಸನ್ನುತ ಹಯಾಸ್ಯ ಜಗನ್ನಿವಾಸ, ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೫ ॥ ನಾರಾಯಣಾಚ್ಯುತ ಸುರೇಶ ಮುಕುಂದ ವಿಷ್ಣೋ। ಶ್ರೀಮಂದರಾದ್ರಿ ವಹನಾದ್ಭುತಕೂರ್ಮರೂಪ ॥ ಶ್ರೀಸಿಂಧುಜಾರಮಣದೇವ ಜಗದ್ಧಿತಾಯ ನಾರಾಯಣಾಖಿಲಗುರೋ ಭಗವನ್ನಮಸ್ತೇ ॥ ೬ ॥ ಶ್ರೀಮಾಧವೇಶನುತ ಮನ್ಮಥತಾತ ವಿಷ್ಣೋ। ವಾರಾಹರೂಪ ವಸುಧೋದ್ಧರಣಾಪ್ರಮೇಯ ॥ ಹೈರಣ್ಯನೇತ್ರದಹನೋಜ್ವಲ ಯಜ್ಞಮೂರ್ತೇ। ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೭ ॥ ಗೋವಿಂದ ಚಿನ್ಮಯ ಮನೋಮಯ ಗೋಪರೂಪ, ಪ್ರಹ್ಲಾದರಕ್ಷಕ ಭಯಾದ್ಭುತ ನಾರಸಿಂಹ। ಸಮ್ಯಙ್ನಖಾಗ್ರದಳಿತಾ ಸುರರಾಜವಕ್ಷೋ ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೮ ॥ ಕೃಷ್ಣಾಪ್ರಮೇಯ ಮಹಿಮಾರ್ಣವ ದೇವದೇವ। ವಿಖ್ಯಾತಸುಂದರವಟೋ ಬಲಿಬಂಧದಕ್ಷ ॥ ಇಂದ್ರಾನುಜಾರ್ಯ ಜನವಂದಿತ ವಿಶ್ವರೂಪ। ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೯ ॥ ಶ್ರೀ ಮನ್ಮುಕುಂದ ಮಧುಸೂದನವಾಮನೇಂದ್ರ ವಂಶಾಟವೀದಹನ ಭಾರ್ಗವ ರಾಮಜಿಷ್ಣೋ ॥ ಶಕ್ರೋಗ್ರಗರ್ವಹರಣಾದ್ಭುತ ವೀರ್ಯ ಶೌರ್ಯ। ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೧೦ ॥ ಸ್ವಾಮಿಸ್ತ್ರಿವಿಕ್ರಮ ರಘೂತ್ತಮ ಸೇತುನಾಥ, ಘೋರರಾವಣಾಂತಕ ಹರೇ ಪ್ರತಿಮಪ್ರಭಾವ ॥ ಸೀತಾಪತೇ ನಿಖಿಲಲೋಕ ವಿಮೋಹನಾಂಗ ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೧೧ ॥ ಭೋ ಶ್ರೀಧರಾಚ್ಯುತ ಚರಿತ್ರ ಯದೂತ್ತಮೋಗ್ರ ಕಂಸಾಂತಕಾರ್ಯಜನಿತಾಮರ ಕಲ್ಪಭೂಜಾ ॥ ಶ್ರೀ ಗೋಪಿಕಾ ರಮಣ ಫಲ್ಗುಣ ಸೂತ ಕೃಷ್ಣ। ನಾರಾಯಣಾಖಿಲಗುರೋ ಭಗವನ್ನಮಸ್ತೇ ॥ ೧೨ ॥ ಶ್ರೀ ಮಹಾದ್ಭುತಚರಿತ್ರ ಫಣೀಶವಿಷ್ಣೋ। ಶ್ರೀರೇವತೀರಮಣ ಭೋ ಬಲಭದ್ರರಾಮ ॥ ಶ್ರೀ ರೋಹಿಣೀತನಯ ಪಾಲಿತಸರ್ವಲೋಕ, ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೧೩ ॥ ಶ್ರೀಪದ್ಮನಾಭ ಪರಮಾತ್ಮಕ ಪಾಲಿತಾರ್ಯ ಕಲ್ಕ್ಯವತಾರ ಕಲಿಭಂಜನವಾಜಿವಕ್ತ್ರ ॥ ಮ್ಲೇಚ್ಛಾಂತಕಾದಿಯುಗ ಧರ್ಮ ರಕ್ಷಕ ತಾನ। ನಾರಾಯಣಾಖಿಲ ಗುರೋ ಭಗವನ್ನಮಸ್ತೇ ॥ ೧೪ ॥

ಈ ಪರಮಾತ್ಮಸ್ತುತಿಯು ಅಗಸ್ತ್ಯಮಹರ್ಷಿಕೃತವಾಗಿದ್ದು, ಇದನ್ನು ಪ್ರಪನ್ನಾಮೃತವೆಂಬ ಗ್ರಂಥದಿಂದ ತೆಗೆದು, ನಮ್ಮ ಆರ್ಯನಾರಿಯರ ಪ್ರಾತಃಸ್ಮರಣೆಗೆ ಅನುಕೂಲಿಸಲೆಂದು ಇಲ್ಲಿ ಪ್ರಕಟಿಸಿದೆ.

ಭ ಗಿ ನಿ ಯ ರಿ ಗಾ ಗಿ

ತುಳಸೀ ಹಾಡುಗಳು.

*ಕುಂದಣದ ಕೋಟಿಮನೆಯವಳೆ—ಚೆಲ್ವ—ಬೃಂದಾವನ ದೇವಿ ರಂಗ ಬಂದ ಮಾತಾಡೆ ॥ ಪ ॥ ಸಸಿಯಲ್ಲಿ ಸಕಲ ಜನಂಗಳ ಸಲಹುವಳೆ, ಎಸಳೇಳುದಳದ ಚಿಗುರಿನವಳೆ ॥ ವಸುಧೆಪಾಲಕನರಾಣಿ ನಿನ್ನೆಡೆಗೀಗ—ಅಸುರಸಂಹಾರಿಬಂದ ಮಾತಾಡೆ ॥ ಕುಂದಣದ ॥ ೧ ॥ ಎಳಸಸಿದಳದವಳೆ, ದಳದ ಪರಿಮಳದವಳೆ, ಪದ್ಮಾಕ್ಷನ ಮೋಹದರಸಿ ನೀನು ॥ ಪ್ರಳಯಕ್ಕೆ ಒದಗುವ ದೇವಸರಾಣಿ ನಿನ್ನ ಬಲಗೊಂಬೆನು ಬಾರೆ ಭಾಗ್ಯದ ನಿಧಿಯೆ ॥ ಕುಂದಣದ ॥ ೨ ॥ ಬಳಿಗೆ ಬಂದರೆ ಪಾವನ — ನೆಳಲು ಬಿದ್ದರೆ ಪುಣ್ಯ, ಇಳೆಯೊಳು ಪಾಪನಿವಾರಿಣಿಯೆ । ಥಳಥಳಿಸುವ ರತ್ನಖಚಿತದುಪ್ಪರಿಗೆಗೆ ನಳಿನಾಕ್ಷ ಹರಿ ಬಂದ ಮಾತಾಡೆ ॥ ಕುಂದಣದ ॥ ೩ ॥ ಪಚ್ಚೆಯ ತೆನೆಯವಳೆ ಅರಸಂಚೆ ಮೆಲ್ಲಡಿಯವಳೆ, ಮಿಂಚಿನಕಾಂತಿಯ ನಗೆ ಮೊಗದವಳೆ ॥ ಮೆಚ್ಚಿ ಬಂದಿಹನಿಂದು ಎಚ್ಚರಗೊಂಡೇಳು । ಅಚ್ಯುತರಂಗ ಬಂದ ಮಾತಾಡೆ ॥ ೪ ॥ ಮುತ್ತಿನ ಕೋಟೆಗೆ ರತ್ನದ ತೆನೆಗಳು ವಿಚಿತ್ರದುಪ್ಪರಿಗೆ ಮನೆಯವಳೆ ॥ ಮುದ್ದು ಶ್ರೀ ತುಳಸಿ ನಿನ್ನಗಲಿರಲಾರದೆ, ಮುದ್ದುಶ್ರೀ ಕೃಷ್ಣ ಬಂದ ಮಾತಾಡೆ ॥ ೫ ॥ ಒಡಲು ಒಡಾಲತ್ತ ಒಡಲ ದೇಹಗಳಿತ್ತ ಬಡಿವಾರ ಡಂಭದಮಾತೇತಕೆ ॥ ಒಡಲೊಳಗಿನಚಿಂತೆ ಅಡರಿಬರುತ್ತಿದೆ, ಹಿಡಿದು ನೂಕಿರೆ ಕರಿಮಯ್ಯ ಗೊಲ್ಲನ ॥ ೬ ॥ ನೂಕಿಸಬೇಕೆ ಬೃಂದಾವನದೇವಿ, ನಾಲ್ಕು ತಿಂಗಳು ನಿನ್ನ ಮನೆಯಲ್ಲಿರುವೆ ॥ ಬೇಕಾದ ಮುತ್ತು ನವರತ್ನವ ತಂದಿರುವೆ, ನೀ ಸುಮ್ಮನೆ ಬಾಗಿಲ ತೆಗೆಯೆ ॥ ೭ ॥ ಎಂದ ಮಾತಿಗೆ ಬೃಂದಾವನದೇವಿ, ನಿಂದು ತಾ ಮುಗುಳುನಗೆ ನಗುತ ॥ ಬಂದಿರೆ ಕೃಷ್ಣರೆ ಎಂದುಪಚರಿಸುತ, ಗಂಧಾಕ್ಷತೆ ವೀಳ್ಯ ತಂದೊಪ್ಪಿಸುತ ॥ ೮ ॥

ಕಲ್ಯಾಣಂ —ತುಳಸಿ—ಕಲ್ಯಾಣಂ ॥ ಪ ॥ ಕಲ್ಯಾಣಂ ನಮ್ಮ ಕೃಷ್ಣಶ್ರೀತುಳಸಿಗೆ ॥ ಅ ॥ ಅಂಗಳದೊಳಗೆಲ್ಲ ತುಳಸಿಯ ವನವಾಗಿ, ಸಿಂಗರವಾಗಿರೆ ಶೀಘ್ರದಿಂದ ॥ ಕಂಗಳ ಪಾಪವ ಪರಿಹರಿಸುವ ಮುದ್ದು ರಂಗಬಂದಿಲ್ಲೇ ನೆಲಸಿಹನು ॥ ಕಲ್ಯಾಣಂ ॥ ೧ ॥ ಸಾರಿಸಿ ರಂಗವಲ್ಲಿಯನಿಟ್ಟು ಜಗಲಿಗೆ ಕಾರಣೆ ತೋರಣಂಗಳ ರಚಿಸೆ ॥ ನಾರಾಯಣ ನೊಡನುದಯದಲಿ ಪೂಜಿಸಿದರೆ ಭೂರಿ ಸೌಭಾಗ್ಯವ ಕೊಡುತಿರ್ಪಳು ॥ ಕಲ್ಯಾಣಂ ॥ ೨ ॥ ಭಕ್ಷ ಹುಗ್ಗಿಯು ಪರಮಾನ್ನ ನೈವೇದ್ಯವ ಭಕ್ತಿಯಿಂದಲೆ ಸಮರ್ಪಿಸಿ ॥ ಕೃಷ್ಣ ಶ್ರೀ ತುಳಸಿಯ ಪೂಜೆಮಾಡಿದವರಿಗೆ ಅಷ್ಟೈಶ್ವರ್ಯವ ಕೊಡುತಿರ್ಪಳು ॥ ೩ ॥ ಉತ್ಥಾನ ದ್ವಾದಶಿ ಸಂಜೆಯ ಹೊತ್ತಿನೊಳ್ ಮುತ್ತೈದೆಯರೆಲ್ಲ ಹರುಷದಲಿ ॥ ಮುತ್ತಿನಾರತಿಯೆತ್ತಿ ಕರಗಳ ಮುಗಿದರೆ ಮುತ್ತೈದೆತನವನು ಕೊಡುತಿರ್ಪಳು ॥ ೪ ॥ ಒಂದು ಪ್ರದಕ್ಷಣೆ ಮಾಡಿದ ಮನುಜರಿಗೆ ಮುಂದಕ್ಕೆ ಮುಕ್ತಿಗೆ ಸಾಧನವು ॥ ಕುಂದದೆ ಏಳು ಪ್ರದಕ್ಷಣೆ ಮಾಡಿದವರಿಗೆ, ರಂಗ ಕೊಡುವ ದಿವ್ಯ ವೈಕುಂಠವಂ ॥ ಕಲ್ಯಾಣಂ ॥ ೫ ॥

ಜಯಮಂಗಳಂ—ನಿತ್ಯ—ಶುಭಮಂಗಳಂ ॥ ಪ ॥ ಸುರರು ಕ್ಷೀರಾಬ್ಧಿಯ ಮಥಿಸಲು ಮಥದೊಳು ಭರದಿ ಶ್ರೀಹರಿಕಂಡು ಕೈಪಿಡಿಯೆ ॥ ಚರಣಸೇವೆಯಮಾಡಿದವರಿಗಿಷ್ಟಾರ್ಥವ ಕೊಡುವ ಶ್ರೀ ಬೃಂದಾವನದೇವಿಗೆ ॥ ೧ ॥ ನೋಡಿದ ಮಾತ್ರದಿ ಪಾಪನಿವಾರಿಣಿಗೆ ಬೇಡಿದ ವರಗಳ ಕೊಡುವಳಿಗೆ ॥ ಮಾಡೆ ವಂದನೆಯನ್ನು ಮನುಜರ ಪಾತಕ, ಕೂಡಲೀಡಾಡುವ ಗುಣವಂತೆಗೆ ॥ ೨ ॥ ಮುಟ್ಟಿದ ಮಾತ್ರದಿ ಮುಕ್ತರೆಂದಿನಿಪರ ಮುದದಿಂ ಪಾಲಿಪ ಮುನಿವಂದ್ಯೆಗೆ ॥ ಕೊಟ್ಟು ತಾ ಬೇರಿನ ನೀರನು ಕಾಲನ ಮುಟ್ಟಲೀಸದ ಹಾಗೆ ಮಾಳ್ಪಳಿಗೆ ॥ ೩ ॥ ಅನ್ಯರ ಮನೆಯಲ್ಲಿ· ಅನ್ನವ ನುಂಬರಿಗುನ್ನತ ಪಾಪವು ಪೊದ್ದಿರಲು ॥ ತನ್ನ ದಳದೊಳೊಂದ ಕರ್ನದೊಳಿಟ್ಟರೆ ಧನ್ಯರಮಾಡುವ ದಯಾನಿಧಿಗೆ ॥ ೪ ॥ ಒಡೆಯನ ಮನೆಗೆ ನೀರನುತಂದು ತುಂಬುವ ಳೆಡವಿಬಿದ್ದವಳ ಕೊಡವೊಡೆಯೆ ॥ ಸಿಡಿದ ನೀರಿಂಶ್ರೀ ತುಳಸಿಗೆ ತಂಪಾಗಲು, ಕೊಟ್ಟಳವಳಿಗೆ ಮೋಕ್ಷದ ಭಾಗ್ಯವ ॥ ೫ ॥ ಮಂಗಳಂ ಶ್ರೀ ತುಳಸಿ ದೇವಿಗೆ—ಜಯ—ಮಂಗಳಂ ಬೃಂದಾವನದೇವಿಗೆ ॥ ಮಂಗಳಂ ರಂಗನ ಪಟ್ಟದ ರಾಣಿಗೆ—ಮಂಗಳಂ ಮುಕ್ತಿದಾಯಕ ಮುಕುಂದಗೆ ॥ ೬ ॥

ಜಯ ಜಯ ಮಂಗಳಂ ॥ ಪ ॥ ಕೃಷ್ಣ ಮೋಲೆಯ ಕೆಳುಹಿದ ಶ್ರೀತುಳಸಿಗೆ ಪಚ್ಚೆದಳದ ಬೃಂದಾವನದೇವಿಗೆ । ವಿಶ್ವಕರ್ಮನ ಕರಸಿ, ತನ್ನರಮನೆಯುಪ್ಪ

---

* ನಮ್ಮ ಆರ್ಯಸ್ತ್ರೀಸಮುದಾಯದಲ್ಲಿ ತುಳಸೀಪೂಜೆಯು ದಿನಂಪ್ರತಿಯ ಸೇವೆಯಲ್ಲಿ ಮೊದಲನೆಯದಾಗಿರುವದಲ್ಲದೆ ಚಾತುರ್ಮಾಸ್ಯವ್ರತದಲ್ಲಿಯಂತೂ ಈ ಪೂಜೆಯು ವಿಶೇಷ ಉತ್ಸಾಹದಿಂದ ನಡೆಯುವದೂ ಸರಿಯಷ್ಟೆ! ಆ ನಮ್ಮ ಸೋದರಿಯರ ಉಪಯೋಗಕ್ಕಾಗಿ ಪ್ರಕಟಿಸಬೇಕೆಂದು ಬಂದಿರುವ ಈ ಹಾಡುಗಳನ್ನಿಲ್ಲಿ ಮುದ್ರಿಸಿರುವೆವು. ದೋಷಗಳಿದ್ದಲ್ಲಿ ಅಭಿಜ್ಞರು ಸರಿಪಡಿಸಿ, ಓದುವರೆಂದು ನಂಬುವೆವು.

ರಿಗೆಯು ರಚಿಸೆ ॥ ಪಟ್ಟಣ ಹೊಳಲಲಂಕಾರವಮಾಡಿ ಕೃಷ್ಣ ಬರುವನು ಅರಮನೆಗೆನುತ । ಹತ್ತು ನೆಲೆಯುಮಾಡಿ ಮಾಟ ದುಪ್ಪರಿಗೆಯ ವಿಚಿತ್ರದಿ ನಿರ್ಮಿಸಿದ ॥ ೧ ॥ ಮಣಿಮಂಟಪದ ಸುತ್ತಲು ನಿಂದಿಹ ಗಿಣಿ ಹಿಡಿದಿಹ ಚಿತ್ರದ ಬೊಂಬೆಗಳು । ಕೊಳಗಳು ಅಲ್ಲಲ್ಲಿಗೆ ಜಲಕ್ರೀಡೆಯಾಡುವ ಗೋಪಾಂಗನೆಯರು ॥ ಮೊಲೆಯುಣುತಿಹ ಕರುಗಳೂ ಗೋವ್ಗಳು । ಕೊಳಲದನಿಗೆ ತಮ್ಮ ಕಿವಿಕೊಡುತಿರಲು । ಹರಿಮೆಚ್ಚಿ ಕಾಣಿಕೆ ಬೇಡುವೆನೆಂದು ಕ್ಷಣದಲಿ ನಿರ್ಮಿಸಿದ ॥ ೨ ॥ ನಾಲ್ಕುದಿಕ್ಕಿನ ಬಾಗಿಲುವಾಡಕೆ ಓರಣದಲಿ ಬಿಗಿದಿಹ ಕನ್ನಡಿ ಕಲಶ, ಮಾಣಿಕ್ಯ ಮುತ್ತಿನ ಕುರುಜಲಿ ಪಟ್ಟೆ ಮೇಲುಕಟ್ಟುಗಳಕಟ್ಟಿ ॥ ಹಿರಳೆ ನೇರಳೆ ಕಿತ್ತಳೆ ದಾಡಿಂಬ, ಹಸಿಯುಡಕೆ ಫಲವಸ್ತುಗಳು, ಹೂವಿನ ಮಾಲೆಗಳೊಪ್ಪಿದವೆ ಬೃಂದಾವನ ದೇವೀ ಮಂಟಪಕೆ ॥ ೩ ॥ ಬೃಂದಾವನದೇವಿ ಮಿಂದು ಪಟ್ಟೆಯನುಟ್ಟು, ಕುಂಡಣದ ಮಿಸುನಿಯ ಕುಪ್ಪಸತೊಟ್ಟು। ದುಂಡಮಲ್ಲಿಗೆ ಶಾವಂತಿಗೆ ಜಾಜೀ ದಂಡೆಗಳನೆ ಮುಡಿದು ॥ ಗಂಧಕಸ್ತೂರೀ ತಿಲಕವನಿಟ್ಟು, ಕಣ್ಗಳಿಗೊಪ್ಪುವ ಕಾಡಿಗೆ ಹಚ್ಚಿ । ರಂಗ ಬಂದಾನೆಂದು ಶೃಂಗಾರವಾದಳೆ ತುಳಸೀ ದೇವಿ ॥ ೪ ॥ ಹರಿ ಬಂದನು ಅರಸಿಯ ಬಳಿಗೆ, ಹರದಿಯರೆದುರಾರತಿಯೆತ್ತಿ । ಕಣ್ಣುದೃಷ್ಟಿಗೆ ಉಪ್ಪು ಬೇವು ನಿವಾಳಿಸಿ ಶ್ರೀಪಾದವ ತೊಳೆದು ॥ ಮೆರೆವ ಮಾಣಿಕದ ಗದ್ದುಗೆ ತಂದಿರಿಸಿ, ಹರಿ ಸಹಿತಲೆ ದೇವಿಯ ಕುಳ್ಳಿರಿಸಿ । ನೆರೆದ ವಿಪ್ರರು ಸಂಕಲ್ಪವ ಪೇಳಲು, ಮಂತ್ರಾಕ್ಷತೆ ಮೇಲ್ ಚಲ್ಲಿದರು ॥ ೫ ॥ ಬೃಂದಾವನದೇವಿಗು ಶ್ರೀಕೃಷ್ಣರಾಯಗು, ಸಾಂಬ್ರಾಣಿಯ ಧೂಪ ದೀಪಗಳಿರಿಸಿ । ತೆಂಗಿನಕಾಯಿ ಬಾಳೆಹಣ್ಣು ಸಕ್ಕರೆ ಪಾಲು ನೈವೇದ್ಯವನಿಟ್ಟು॥ ಪೊಂದಟ್ಟೆಯೊಳ್ ತಾಂಬೂಲವನೊಪ್ಪಿಸಿ ಮಂತ್ರಪುಷ್ಪವನಿಟ್ಟು, ನೀರಾಜನವೆತ್ತಿ ಸಂಭ್ರಮದಲಿ ತಾವ್ ತಂದೆತ್ತಿದರಾರತಿಯ ॥ ೬ ॥ ಕ್ಷೀರಾಂಬುಧಿ ನಿಲಯನು ಬಂದ, ಬಾಣನ ತೋಳ್ಗಳ ತರಿದ ಹರಿ ಬಂದ । ವೇದ ಪೆತ್ತವ ಬಂದ, ವೇದಗಳ್ಳನ ಕೊಂದಾತನು ಬಂದ ॥ ಈರೇಳು ಬಾರಿಯು ವೀರಕ್ಷತ್ರಿಯರ ಕುಲಬೇರನು ತರಿದಾ, ಶೂರಭಾರ್ಗವ ರಾಮನು ಬಂದನೆಂದು ಮೊರೆದವು ಕಹಳೆಗಳು ॥ ೭ ॥ ಮುತ್ತಿನಾರತಿ ಪವಳದ ಆರತಿ, ಪಂಚರಂಗಿನಾರತಿ ಕದಳಾರತಿಗಳನು । ಎತ್ತುತ ಶ್ರೀಹರಿಯ ಲೀಲೆಯ ಕೊಂಡಾಡುತಲಿ ॥ ಕುಟ್ಟಿ ಕರೆದಾ ಏಳು ದಿನದ ಮಳೆಗೆ, ಕಿರುಬೆರಳ ತುದಿಯಿಂ ಬೆಟ್ಟವನೆತ್ತಿದ, ಗೋವಳರಾಯಂಗೆ ತಂದೆತ್ತಿದರಾರತಿಯ ॥ ೮ ॥ ಆಲಸಿಮನುಜರು ದ್ವಾದಶೀ ದಿನದಲಿ, ಆಲಸ್ಯವಿಲ್ಲದೆ ಶ್ರೀತುಳಸಿಗೆ ಘೃತತೈಲದ ದೀಪಂಗಳ ಬೆಳಗುತಲಿ ॥ ಹಾಲು ಸಕ್ಕರೆ ನೈವೇದ್ಯವನಿಟ್ಟು ಕೈಮುಗಿದರೆ ದಾರಿಕೊಡುವಳು ಇಹಪರವೆರಡಕೆ । ಈ ಭಾಷೆಗೆ ತಪ್ಪಿದರೆ ನಿಜ—ಭಕ್ತರಾಣೆಯೆಂದನು ರಂಗ ॥ ಜಯ ಜಯ ಮಂಗಳಂ ॥ ೯ ॥ §

ತುಳಸಿ ಮಧ್ಯದೊಳಿರುವ ಕೃಷ್ಣನ ಬಳಸಿ ನೋಡುವ ಬನ್ನಿರೆ ॥ ಪ ॥ ರಂಗ ರಂಗ ಶ್ರೀರಂಗನಾಥನು ಸಿಂಗರದಿ ತಾ ನಿಂದಿಹ । ಮಂಗಳಾಂಗಗೆ ಮಂಗಳಾರತಿ ಅಂಗನೆಯರೆಲ್ಲ ಎತ್ತಿರೆ ॥ ೧ ॥ ಶುಕ್ರವಾರದ ಪೂಜೆಗೊಳ್ಳಲು ರಕ್ಕಸಾರಿ ಬಂದಿರ್ಪನೆ । ಚಕ್ರಧರ ತ್ರಿವಿಕ್ರಮಾಚ್ಯುತ ಜನಾರ್ದನನೀ ಶ್ರೀಕೃಷ್ಣನೇ ॥ ತುಳಸಿ ॥ ೨ ॥ ಗೊಲ್ಲಸತಿಯರ ಗಲ್ಲ ಪಿಡಿದು ಮೆಲ್ಲಮೆಲ್ಲನೆ ಮುದ್ದಿಪ । ಫುಲ್ಲನಾಭನು ಫುಲ್ಲನೇತ್ರೆಯರ್ಗೆಲ್ಲ ಸುಖಗಳ ಸಲ್ಲಿಪ ॥ ತುಳಸಿ ॥ ೩ ॥ ಒಂದು ಕಯ್ಯೊಳು ಗಂಧಪುಷ್ಪವು, ಒಂದು ಕಯ್ಯೊಳು ಕಂದನು । ಮಂದಹಾಸದೊಳಿಂದುಮುಖಿಯರು ನಿಂದುನೋಳ್ಪರು ಅಂದವ—ತಾವ್ ಬಂದು ನೋಳ್ಪರು ಚಂದವ ॥ ೪ ॥ ಕಾಮೀಜನರಿಗೆ ಕಾಮವೀವನ ಪ್ರೇಮದಿಂದಲಿ ಭಜಿಸಿರೆ, ಕಾಮನಯ್ಯನ ಕಮಲಮುಖಿಯರು ನೇಮದಿಂದಲಿ ನುತಿಸಿರೆ ॥ ತುಳಸಿಮಧ್ಯದೊಳಿರುವ ॥ ೫ ॥

ಧೂಪಾರತಿಯ ನೋಡುವ ಬನ್ನಿ—ನಮ್ಮ—ಗೋಪಾಲಕೃಷ್ಣದೇವರ ಪೂಜೆಯ ॥ ಪ ॥ ಅಗರು ಚಂದನ ಗುಗ್ಗುಳ ಸಾಂಬ್ರಾಣಿ ಘಮಘಮಿಸುವ ಧೂಪ, ದೀಪಾರತಿಯು ॥ ಮಿಗಿಲಾದ ಏಕಾರತಿಗೆ ಬತ್ತಿಯ ಹಾಕಿ, (ನಮ್ಮ) ಜಗನ್ನಾಥ ಸ್ವಾಮಿ ದೇವರಪೂಜೆಯ ॥ ೧ ॥ ಮದ್ದಳೆ ಜಾಗಟೆ ತಾಳ ದಂಡಿಗೆ ಭೇರಿ, ಪಂಚ ಘಂಟೇಶಬ್ದ ನಾದಂಗಳು ॥ ತಿದ್ದಿದ ಧವಳ ಶಂಖದ ನಾದಗಳಿಂದ (ನಮ್ಮ) ಪದ್ಮನಾಭದೇವರ ಪೂಜೆಯ ॥ ೨ ॥ ಹರಿಸರ್ವಾತ್ಮನೆ ಚಿಂತಿವಿಧಾತ್ಮನೆ (?) ಪರಮಮಂಗಳ ಪುರುಷೋತ್ತಮನೆ ॥ ಪರದೈವ ನೀನೆಂದು ಶ್ರೀರಂಗನಾಥಗೆ, ತಂದೆತ್ತಿ ಧೂಪದೀಪಾರತಿಯ ॥ ಧೂಪಾರತಿಯ ನೋಡುವ ಬನ್ನಿ ॥ ೩ ॥

ಅಂಗನೆಯರು ನೀರಾಜನವ । ಶ್ರೀರಂಗಗೆತ್ತಿದರೆ ನೀರಾಜನವ ॥ ಪ ॥ ಅಜ ನವ ರುದ್ರಾದಿಗಳು ಪೊಗಳಲು ನಿಗಮವಂದಿತಗೆ ನೀರಾಜನವ । ಭುಜಗಶಯನನಿಗೇ ಭೂಸುರ

---

§ ಈ ಹಾಡುಗಳಲ್ಲಿ ಪ್ರಾಸನಿಯಮವಿಲ್ಲದಿದ್ದರೂ ನಮ್ಮ ಸ್ತ್ರೀಯರಾಡುವ ತಿಳಿಗನ್ನಡದ ಶಬ್ದಗಳೇ ಇದರಲ್ಲಿರುವದರಿಂದ, ಕವಿಪುಂಗವರು ಹಾಸ್ಯಮಾಡದೆ ಸಾರವನ್ನು ಮಾತ್ರ ಗ್ರಹಿಸುವುದು ಸಲ್ಲಕ್ಷಣವು.

ವಂದ್ಯಗೆ ನಿಜಮೂರುತಿಗೆ ನೀರಾಜನವ ॥ ೧ ॥ ಕುಕ್ಷಿಯೊಳಗೀರೇಳು ಜಗವನೆಲ್ಲ ರಕ್ಷಿಸಿದಗೆ ನೀರಾಜನವ । ದಕ್ಷನಾಗಿ ನಿಜ ಭಕ್ತರ ಸಲಹುವ ಲಕ್ಷ್ಮೀಪತಿಗೆ ನೀರಾಜನವ ॥ ೨ ॥ ಲೋಕವುಹಿಮನೆಂದು ಪೊಗಳುವ ದೇವಗೆ ಲೋಕೇಶಗೆ ನೀರಾಜನವ ॥ ಶ್ರೀಕಾಂತಗೆ ಅಹೋಬಲ ನರಸಿಂಹಗೆ ಅನೇಕ ಮೂರುತಿಗೆ ನೀರಾಜನವ ॥ ೩ ॥

ಬಿದುರಿನ ಹೇಳಿಕೆ

(ಹಾಡು)

ಬಿದುರು ಬಿದುರಾದೆನೆ--ಎಲೆ ಬಿದುರೆ—ಬಿದುರು ಬಿದುರಾದೆನೆ ॥ ಪ ॥ ಹುಟ್ಟಿ ಹುಟ್ಟಿ ಕಡಲೆಯಾದೆ ಬೆಳೆಯುವಾಗ ಬಿದುರಾದೆ । ಬಲ್ಲಂಥ ಜಾಣನಿಗೆ ಉಪ್ಪಿನ ಕಾಯಾದೆನೆ । ನಾ ನುಪ್ಪಿನ ಕಾಯಾದೆನೆ ॥ ೧ ॥ ಅಂಕಣಕ್ಕಾದೆನೆ--ನಾ ಬಿಂಕಣಿಕೆ ಯಾದೆನೆ । ಕೊಂಕಣದೇಶಕ್ಕೆ ಹೋಗಿ ಮಂಕುಮರುಳಾದೆನೆ । ನಾಮಂಕುಮರುಳಾದೆನೆ ॥ ೨ ॥ ಎಣ್ಣೆಯನಾಳಿಯಾದೆ-ಎಲೆಯ ಸಂಬಳಿಗೆಯಾದೆ । ಗೋಪಾಳದ ದಾಸಯ್ಯಗೆ ಬವನಾಸಿಯಾದೆನೆ । ನಾ ಬವನಾಸಿಯಾದೆನೆ ॥ ೩ ॥ ಊದಲಿಕ್ಕೆ ಕೊಳಲಾದೆ, ಊರುವ ದೊಣ್ಣೆಯಾದೆ । ಉಳುವ ಎತ್ತಿಗೆ ನಾಮಾರುಗೋಲಾದೆನೆ । ನಾ ಮಾರು ಗೋಲಾದೆನೆ ॥ ೪ ॥ ಹರಿಗೋಲು ನಾನಾದೆ, ಗುರಿಗೋಲು ನಾನಾದೆ । ಅಂಚೆ ಹುಡುಗನ ಕಯ್ಗೆ ಸಿಂಚಿಗೋಲೂ ಆದೆನೆ । ನಾ ಮುಂಚಿಗೋಲೂ ಆದೆನೆ ॥ ೫ ॥ ಅಟ್ಟಕ್ಕೆ ನಾನಾದೆನೆ ತೊಟ್ಟಿ ಮೊರವಾದೆನೆ । ಕುಟ್ಟಕುರುಡನ ಕಯ್ಗೆ ಗಟ್ಟಿಗೋಲೂ ಆದೆನೆ । ನಾ ಗಟ್ಟಿಗೋಲೂ ಆದೆನೆ ॥ ೬ ॥ ಮಾಡುವುದುಕೆ ಮೊರವಾದೆ ಮಕ್ಕಳಾಡುವ ಮುಚ್ಚಲಾದೆ । ದೇಶಪತ್ರಿರಾಯನಿಗೆ ಪಲ್ಲಕ್ಕಿ ಕೊಂಬಾದ್ನೆನೆ । ನಾ ಪಲ್ಲಕ್ಕಿ ॥ ೭ ॥ ಓಡನಿಗೆ ನಿಡುಗೋಲಾದೆ ದೊಂಬನಿಗೆ ಗಣೆಯಾದೆ । ಬಲ್ಲಂಥ ಜಾಣನಿಗೆ ಬಿಲ್ಲು ಅಂಬು ಆದೆನೇ— ನಾ — ಬಿಲ್ಲು ಅಂಬು ಆದೆನೆ ॥ ೮ ॥ ಅಟ್ಟಕ್ಕೆ ನಾ ನೇಣಿಯಾದೆ ಬೆಟ್ಟಕ್ಕೆ ನಾ ಬಿದುರಾದೆ । ನಂಜನಗೂಡು ನಂಜುಂಡಗೆ ನಂದೀಕಂಬವಾದೆನೆ—ನಾ ನಂದೀಕಂಬವಾದೆನೆ ॥ ೯ ॥ ಹಾಸುವ ಹಾಸಿಗೆಯಾದೆ ಬೀಸುವ ದೊಣ್ಣೆಯಾದೆ । ಮೂಡ್ಲಗಿರಿ ತಿಮ್ಮಪ್ಪಗೆ ಸತ್ತಿಗೆ ನೆರಳಾದೆನೆ—ನಾ ಸತ್ತಿಗೆ ನೆರಳಾದೆನೆ ॥ ೧೦ ॥

ಮಾತೃಮಂದಿರಂ ವಿದ್ಯಾರ್ಥಿಸಂಘಕೃತ

ಶ್ರೀ ರಾಮನವಮಿಯ

ಶರಣ್ಯಾ ದಂಪತೀಃ ಸೇವಾ.

ಹಿಂದಿನ ಸಂಚಿಕೆಯಲ್ಲಿ ನಿವೇದಿಸಿದ್ದಂತೆ ಮಾತೃ ಮಂದಿರದ ಷಾಣ್ಮಾಸಿಕೋತ್ಸವದ ಶ್ರೀಶಾರದಾ ಪೂಜೆಯನ್ನು ನಡೆಯಿಸಿದ ಬಳಿಕ, ಈ ಸಂಘದಭಜನಾ ಸಮಾಜದವರು ಇದೇ ಕಾಳಯುಕ್ತ ಸಂ ॥ ಚೈತ್ರ ನವರಾತ್ರಿಯ ಭಜನೆಯನ್ನು ಶ್ರೀರಾಮ ಜಯಂತ್ಯುತ್ಸವವನ್ನು ನಡೆಯಿಸಲು ಸಂಕಲ್ಪಿಸಿ ಹಿರಿಯರ ಅನುಮತಿಯನ್ನೂ ಪಡೆದರು. ಮುಖ್ಯವಾಗಿ "ಇಂದಿನ ಮಕ್ಕಳೇ ಮುಂದಿನ ಮಂದಿಗಳು" ಎಂಬ ವಾಕ್ಯವನ್ನು ಅನುಸರಿಸಿ ದೇಶಸೇವೆಯಲ್ಲಿಯೂ ಸಮಾಜಸೇವೆಯಲ್ಲಿಯೂ ಮುಂದಾಳುಗಳಾಗಿ ನಿಲ್ಲಬೇಕಾದ ವಿದ್ಯಾರ್ಥಿಗಳಿಗೆ ತಕ್ಕಮಟ್ಟಿಗೂ ಧರ್ಮಶ್ರದ್ಧೆ, ದೈವಭಕ್ತಿ, ಗುರುಜನ ವಿಧೇಯತೆ, ಸದಸದ್ವಿಚಾರ, ಪಾಪ ಪುಣ್ಯಗಳ ಸ್ವರೂಪಜ್ಞಾನಗಳುಂಟುಮಾಡಿಕೊಡುವದು ಪ್ರತಿಯೊಬ್ಬ ಹಿತಚಿಂತಕರಿಗೂ ಅಗತ್ಯವಾದುದೆಂದು ಬಲ್ಲವರು ಹೇಳಿರುವುದನ್ನು ಕೇಳಿ ತಿಳಿದಿರುವುದರಿಂದ, ಈ ವಿದ್ಯಾರ್ಥಿಸಂಘದವರು ತಾವಾಗಿಯೇ ಶ್ರದ್ಧಾಭಕ್ತಿ ಉತ್ಸಾಹಗಳಿಂದ ಕೈಕೊಂಡ ಸೇವಾಕಾರ್ಯವು ಯಥಾಕ್ರಮವಾಗಿ ನಡೆಯುವಂತೆ ಏರ್ಪಡಿಸುವುದು ಅವಶ್ಯ ಕರ್ತವ್ಯವೆಂದು ತೋರಿದುದರಿಂದ, ಸೇವೆಗೆ ಬೇಕಾದ ಸಕಲ ವಿಧವಾದ ಖರ್ಚುಗಳಿಗೂ ಮಾತೃಮಂದಿರವು ಉತ್ಸಾಹ ಪೂರ್ವಕವಾಗಿ ಒಪ್ಪಿತು.

ಭಜನೆ, ಪುರಾಣಾದಿಗಳು ನಡೆಯುವಾಗ ಬಂದುಸೇರುವ ಭಕ್ತವರ್ಗಕ್ಕೆ ವಿಶಾಲವಾದ ಸ್ಥಳವು ಅವಶ್ಯವಾಗಿ ದೋರಿ ನಮ್ಮ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರ ಅನುಮತಿಯನ್ನು ಪಡೆದು ಇಲ್ಲಿಯ ಬಲಾತ್ಕಾರ ವಿದ್ಯಾಭ್ಯಾಸದ ಕಟ್ಟಡವನ್ನು ಬಿಡಿಸಿಕೊಂಡು ಅಲ್ಲಿ ಸೇವಾಕಾರ್ಯವನ್ನು ಉಪಕ್ರಮಿಸಲಾಯಿತು.

ಇದೇ ಕಾಳಯುಕ್ತ ಸಂ ॥ ಚೈತ್ರಶುದ್ಧ ಪ್ರಥಮಾ ಶುಕ್ರವಾರ (೧೨-೪-೧೮) ರಾತ್ರಿ ೮ ಘಂಟೆಗೆ ಭಜನಾಸಮಾಜದ ವಿದ್ಯಾರ್ಥಿಗಳು, ಸ್ಥಳೀಯ ಮಹಾಜನರನ್ನೂ ವಿದ್ಯಾರ್ಥಿಗಳನ್ನೂ ಉಪಾಧ್ಯಾಯರನ್ನೂ ಕರೆತಂದರು. ಇಲ್ಲಿಯ ಸಬ್ ಡಿಸ್ಟ್ರಿಕ್ಟ ಆಫೀಸರವರು ದಯಮಾಡಿಸಿದ್ದರು. ಸಂಘದ ಪ್ರಧಾನ ಪೋಷಕರು ಎಲ್ಲರಿಗೂ ಸ್ವಾಗತವನ್ನು ಕೋರಿ ಆ ಬಳಿಕ ಶ್ರೀ ರಾಮಚಂದ್ರನ ಗುಣ ಕಥನಪೂರ್ವಕವಾದ ಭಾಷಣಮಾಡಿ, ಸಂಘದ ವಿದ್ಯಾರ್ಥಿಗಳ ಸೇವೆಗೆ ಎಲ್ಲರೂ

ಅನುಮೋದನವನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದು ನಿವೇದಿಸಿದ್ದರು ಪೋಷಕರ ಭಾಷಣವಾದ ಬಳಿಕ ಸ॥ ಡಿ॥ ಆಫೀಸರ್ ಶ್ರೀಯುತ ಎ. ಕೃಷ್ಣಸ್ವಾಮಿ ಅಯ್ಯಂಗಾರ್, ಬಿ. ಎ. ಅವರು ಸಂತೋಷದಿಂದ ವಿದ್ಯಾರ್ಥಿಗಳ ಈ ವಿಧವಾದ ಪ್ರಯತ್ನವು ಅತ್ಯಂತ ಶ್ಲಾಘ್ಯವೆಂದೂ, ಹಿರಿಯರೆಲ್ಲರೂ ಪ್ರೋತ್ಸಾಹಕರಾಗಿನಿಂತು ಇವರ ಸೇವಾಕಾರ್ಯವನ್ನು ಯಥಾಸಾಂಗವಾಗಿ ನಡೆಯಿಸುವ್ರದೂ ಮತ್ತು ಇವರು ಹೀಗೆಯೇ ಪದೇ ಪದೇ ಉತ್ಸವಾದಿಗಳನ್ನು ನಡೆಯಿಸಿ ಅವರೂ ಲಕ ದೈವಭಕ್ತಿಯನ್ನು। ವೃದ್ಧಿಪಡಿಸಿಕೊಳ್ಳುವಂತೆಯೂ ಗುರು ಜನರ ಅನುಗ್ರಹಕ್ಕೆ ಪಾತ್ರರಾಗುವಂತೆಯೂ ಮಾಡುವುದು ಅವಶ್ಯ ಕರ್ತವ್ಯವೆಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಆ ಬಳಿಕ ಸಂಕಲ್ಪಪೂರ್ವಕವಾಗಿ ಸೇವಾಕಾರ್ಯವು ಪ್ರಾರಂಭಿಸಲ್ಪಟ್ಟಿತು. ಕ್ರಮಪ್ರಕಾರ ಪ್ರತಿರಾತ್ರಿಯೂ (೧೨—೪—೧೮ರಿಂದಾ ೧೮—೪—೧೮ರ ವರೆಗೆ) ಶ್ರೀರಾಮಾವತಾರ ಮಹಾತ್ಮ್ಯೆಯಿಂದ ಪುರಾಣ, ಭಜನೆ, ಮಂಗಳಾರತಿಗಳು ನಡೆಯುತ್ತಿದ್ದವು. ಶ್ರೀರಾಮನವಮಿಯ ದಿನ ಮಧ್ಯಾಹ್ನ ಶ್ರೀರಾಮಜಯಂತ್ಯುತ್ಸವವೂ ರಾಮಾಯಣ ಪಾರಾಯಣ, ಪುರಾಣ, ಭಜನೆ ಮಂಗಳಾರತಿಗಳೂ ನಡೆದವು. ಇದೇರಾತ್ರಿ ಶ್ರೀಯುತ, ಅಪ್ರಮೇಯ ಅಯ್ಯಂಗಾರ್ರವರು ಶ್ರೀರಾಮದೇವರ ಸಮ್ಮುಖದಲ್ಲಿ ವಿದ್ಯಾರ್ಥಿಗಳಿಗೂ, ಶ್ರೀರಾಮ ಭಕ್ತರಾಗಿ ಪುರಾಣಶ್ರವಣೋತ್ಸುಕರಾಗಿಯೂ ಭಜನಾಸೇವೆಯಲ್ಲಿ ಉತ್ಸುಕರಾಗಿಯೂ ಬಂದಿದ್ದ ಸದ್ಗೃಹಸ್ಥರಿಗೂ, ಅನ್ಯಮಹಿಳೆಯರಿಗೂ ಹೃದಯಂಗಮವಾಗುವಂತೆ "ಶ್ರೀಶರಣ್ಯ ದಂಪತಿ" ಎಂಬ ಹೆಸರಿನಿಂದ ಜಗತ್ಸೃಷ್ಟಿಮೊದಲು, ಶ್ರೀರಾಮಾವತಾರದವರೆಗೆ ಭಗವಂತನು ನಡೆಯಿಸಿರುವ ವ್ಯಾಪಾರವನ್ನು ಆತನ ವಿಷಯಕವಾಗಿ ಆದಿಯಿಂದ ಆತನ ಅಂತರಂಗ ಭಕ್ತರಾದ ಮಹಾತ್ಮರು ಹೇಳುತ್ತಬಂದಿರುವ ತತ್ವಗಳನ್ನೂ ಸವಿಸ್ತಾರವಾಗಿ, ಉಪನಿಷದ್ವಾಕ್ಯಗಳ ಮತ್ತು ಇನ್ನೂ ಅನೇಕ ಸೂಕ್ತಿಗಳ ಉದಾಹರಣೆಗಳೊಡನೆ ಉಪನ್ಯಾಸ ಮಾಡಿದರು. ಈ ಉಪನ್ಯಾಸವು ರಾತ್ರಿ ಏಳು ಘಂಟೆಗೆ ಆರಂಭವಾಗಬೇಕಾಗಿದ್ದುದು ಮಳೆಯ ದೆಸೆಯಿಂದ ನಿಲ್ಲಿಸಲ್ಪಟ್ಟು ರಾತ್ರಿ ೧೦ ಘಂಟೆಗೆ ಪ್ರಾರಂಭವಾದುದರಿಂದಲೂ ಅಧ್ಯಕ್ಷರಾಗಿ ಬಂದಿದ್ದ ಸರ್ಕಲ್ ಇನ್ಸ್ಪೆಕ್ಟರರಾದ ಶ್ರೀಯುತ, ವಿಜಯ ರಾಘವಾಚಾರ್ ಬಿ. ಎ., ಅವರು ತುಂಬಾ ಆಯಾಸಪಟ್ಟಿದ್ದವರಿಂದಲೂ ಅಲ್ಲದೆ, ಶ್ರೀರಾಮಾವತಾರದ ವರೆಗಿನ ಉಪನ್ಯಾಸಕ್ಕೇ ರಾತ್ರಿ ೧೨ ಗಂಟೆ ಹೊಡೆದು ಹೋಗಿದ್ದುದರಿಂದಲೂ ಉಪನ್ಯಾಸಕರು, ಆದರ್ಶಕಾವ್ಯವಾದ ರಾಮಾಯಣದ ಪ್ರತಿಪಾತ್ರಗಳ ಗುಣ, ನಡೆ, ನುಡಿ, ಸ್ವಭಾವಗಳನ್ನು ವಿವರಿಸಿ, ಆಆ ಪಾತ್ರಗಳು ಜಗತ್ತಿಗೆ ಬೋಧಿಸುವ ತತ್ವಗಳನ್ನೂ ನಿರೂಪಿಸುವದಾಗಿದ್ದ ಉತ್ತರಾರ್ಧದ ಉಪನ್ಯಾಸವನ್ನೂ ಮುಂದೆ ಅವಕಾಶವಾದಂದು ಮಾಡುವುದಾಗಿ ನಿಲ್ಲಿಸುವವರಾದರು.

ಉಪನ್ಯಾಸವಾದ ಬಳಿಕ, ಅಧ್ಯಕ್ಷರು ಅಧಿಕ ಸಂತೋಷದಿಂದಲೂ ಉತ್ಸಾಹದಿಂದಲೂ ಶ್ರೀರಾಮ ಸೇವೆಯ ಮಹತ್ವವನ್ನೂ, ಉಪನ್ಯಾಸಕರು ಮಾಡಿದ ಉಪನ್ಯಾಸದಿಂದ ಅಗತ್ಯವಾಗಿ ನಾವು ಸಂಗ್ರಹಿಸಬೇಕಾದ ವಿಷಯಗಳನ್ನೂ ಸರಸವಾಗಿಯೂ ಸುಲಭ ಗ್ರಾಹ್ಯವಾಗುವಂತೆಯೂ ವಿವರಿಸಿದುದಲ್ಲದೆ, ಶ್ರೀರಾಮಾವತಾರದ ವಿಷಯವಾಗಿ ತಮಗೆ ತಿಳಿದಿರುವುದನ್ನು ತಾವೂ ವಿದ್ಯಾರ್ಥಿಗಳಿಗೆ ತಿಳಿಸಬೇಕೆಂಬ ಉತ್ಸಾಹವಿದ್ದು ಅವಶ್ಯಕವಾದ ವಿಷಯಗಳನ್ನು ಗುರುತು ಹಾಕಿಕೊಂಡು ಬಂದಿರುವದಾಗಿಯೂ, ಆದರೂ ಉಪನ್ಯಾಸಕರು ಅವರ ಭಾಷಣದಲ್ಲಿ ತಮಗೆ ಅವಕಾಶವನ್ನೇ ಕೊಡದೆ ಜಗತ್ಸೃಷ್ಟಿಮೊದಲು ರಾಮಾವತಾರದವರೆಗೆ ಸಮಗ್ರ ವಿಷಯಗಳನ್ನು ನಿವೇದಿಸಿರುವುದರಿಂದಲೂ ರಾತ್ರಿ ಹೊತ್ತು ಬಹಳವಾಗಿರುವದರಿಂದ ತಾವು ಅದನ್ನು ಈಗ ಹೇಳಲಾಗಲಿಲ್ಲವೆಂದೂ ಸೂಚಿಸಿ, ವಿದ್ಯಾರ್ಥಿಸಂಘದವರ ಪ್ರಯತ್ನವೂ ಪರ್ಯವಸಾನ ದಿರದ ಸದುದ್ದೇಶವೂ ಉತ್ತರೋತ್ತರಾಭಿವೃದ್ಧಿಹೊಂದುವಂತೆ ಭಗವಂತನು ಅನುಗ್ರಹಿಸಲೆಂದು ಕೋರಿ, ಸಂಘದ ಪೋಷಕರಿಗೂ ಸಹಾಯಕರಿಗೂ ಮತ್ತು ಅಲ್ಲಿಗೆ ಬಂದಿದ್ದವರೆಲ್ಲರಿಗೂ ತಮ್ಮ ಸಂತೋಷವನ್ನು ಸೂಚಿಸಿದರು. ಉಪನ್ಯಾಸವು ಮುಗಿದ ಮೇಲೆ ಮಂಗಳಾರತಿಯಾಯಿತು.

ದಶಮಿ ಶನಿವಾರ (೨೦-೪-೧೮) ಮಧ್ಯಾಹ್ನ ಶ್ರೀರಾಮ ಪಟ್ಟಾಭಿಷೇಕ; ಭಜನೆ ಮಂಗಳಾರತಿಗಳೂ, ಪುರಾಣಿಕರಿಗೆ ಸಂಭಾವನೆಯೂ ನಡೆದವು. ರಾತ್ರಿ ಭಜನೆ ಮಂಗಳಾರತಿಗಳು ನಡೆದು ಚೈತ್ರ ನವರಾತ್ರಿಯ ಸೇವಾಕಾರ್ಯವು ಸಾಂಗವೆನಿಸಿತು.

ಉದ್ದೇಶಿಸಿದ ಕಾರ್ಯದಲ್ಲಿ ಸರ್ವಪ್ರಕಾರದಿಂದಲೂ ಸಹಾಯಕರಾಗಿಯೂ ಪ್ರೋತ್ಸಾಹಕರಾಗಿಯೂ ನಿಂತು ಸಾಂಗವಾಗಿ ನಡೆಯಿಸಿಕೊಟ್ಟ ನಮ್ಮ ಸ್ಥಳೀಯ ಸೋದರೀ ಸೋದರರೆಲ್ಲರಿಗೂ ನಾವು ಚಿರಕೃತಜ್ಞರಾಗಿರುವೆವು: ನಮ್ಮ ಪ್ರಾರ್ಥನೆಯನ್ನು ಅನುಮೋದಿಸಿ, ಸ್ಥಳವಸತಿಯನ್ನು ಕಲ್ಪಿಸಿಕೊಟ್ಟು ವಿಶೇಷವಾಗಿ ಪ್ರೋತ್ಸಾಹಿಸಿದ ಸರ್ಕಲ್ ಇನ್ಸ್ಪೆಕ್ಟರವರಿಗೂ ಈ ಬಲಾತ್ಕಾರ ವಿದ್ಯಾಭ್ಯಾಸದ ಪಾಠಶಾಲಾಧ್ಯಾಪಕರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸಿರುವೆವಲ್ಲದೆ ಮುಂದೆಯೂ ಮಾಡುವಂದಿರುವ ನಡೆಯಿಸುವ ಭಗವತ್ಸೇವಾಕಾರ್ಯಗಳಲ್ಲಿ ಹೀಗೆಯೇ ಪ್ರೋತ್ಸಾಹಕ

ಹಕರಾಗಿರಬೇಕೆಂದೂ ಎಲ್ಲರಲ್ಲಿಯೂ ನಿವೇದಿಸುವೆವು. ಮತ್ತು ಹಿಂದೆ ನಂದಿನಿ-ಹಿತೈಷಿಣಿಯರಿಗೆ ಅಂಗಾರಕ ದೆಸೆಯಂತೆ ವಕ್ರಿಸಿದ್ದನೆಂದು ತೋರ್ಪಡಿಸಿಕೊಂಡಿದ್ದರೂ ಅಸ್ವಸ್ಥ್ಯ ಕ್ಯ, ಮನಸ್ಥೈರ್ಯ, ಕರ್ತವ್ಯಜಾಗ್ರತೆ, ಉತ್ಸಾಹಶಕ್ತಿಗಳನ್ನುಂಟುಮಾಡಿ ವಿಶೇಷವಾಗಿ ಅನುಗ್ರಹಿಸಿರುವ ಪಿಂಗಳ ಸಂವತ್ಸರಾಧಿಪನ ಆಶೀರ್ವಾದ ಪ್ರಭಾವದಿಂದ ಇಂದು ನವವರ್ಷಾದಿಯ ಉತ್ಸವವನ್ನು ನೋಡುವಂತಾದೆವೆಂಬ ಸಂತೋಷಾತಿಶಯದಿಂದ ನಾವು, ಪಿಂಗಳನ ಪ್ರೇರಣೆಯಿಂದ ನಮಗೆ ಮೊದಲು ವಿರೋಧಿಗಳಾಗಿ ತೋರಿದ್ದರೂ ನವವತ್ಸರಾದಿಯಲ್ಲಿ ಕೇವಲ ಹಿತಚಿಂತಕ ಭ್ರಾತೃಗಳಾಗಿ ನಿಂತು ತಮ್ಮ ನಿಷ್ಕಲ್ಮಷ ಹೃದಯದ ಭ್ರಾತೃಭಾವದ ಸಾನುಭೂತಿ ಪ್ರದರ್ಶನ ಮಾಡಿರುವ ನಮ್ಮ ಸದ್ಧರ್ಮಭ್ರಾತೃಗಳಿಗೂ ನಾವು ಈ ಮೂಲಕ ನಮ್ಮ ಧನ್ಯವಾದಗಳನ್ನು ಸಮರ್ಪಿಸಿರುವೆವಲ್ಲದೆ, ನವವತ್ಸರಾಧಿಪತಿಯೂ ನಮ್ಮಲ್ಲಿ ಸಹೃದಯನಾಗಿದ್ದು ದೈವಭಕ್ತಿ, ಸ್ವಧರ್ಮನಿಷ್ಠೆ, ಕರ್ತವ್ಯದಕ್ಷತೆಗಳು ಉತ್ತರೋತ್ತರಾಭಿವೃದ್ಧಿಹೊಂದುವಂತೆ ನಮ್ಮ ಪ್ರತಿದಿನದ ನಿತ್ಯ ಕೈಂಕರ್ಯಗಳಿಗೂ ಸಹಾಯಕನಾಗಿರಬೇಕೆಂದೂ ಈ ವರೆಗೆ ಬಂದು ಅಡ್ಡಯಿಸಿದ ವಿಘ್ನಗಳನ್ನು ಪರಿಹರಿಸಿದಂತೆಯೇ ಮುಂದೆಯೂ ಬರಬಹುದಾದ ವಿಘ್ನಗಳನ್ನು ದಾಟಿಸಿ, ಮುಂದೆ ನಾವು ಇದಿರುಗೊಳ್ಳಬೇಕಾಗಿರುವ ಶರನ್ನವರಾತ್ರಿಯ ಉತ್ಸವ ಸಮಾರಂಭವನ್ನೂ ವಿಜಯೋತ್ಸಾಹಗಳಂತೆ ಇದಿರ್ಗೊಳ್ಳುವಂತೆ ವರವನ್ನು ದಯಪಾಲಿಸಬೇಕೆಂದೂ ಪ್ರಾರ್ಥಿಸಿ, ನವವತ್ಸರವು ನಮ್ಮ ದೇಶಾಧಿಪತಿಗಳಿಗೂ ದೇಶೀಯರಿಗೂ ದೇಶೋದ್ಧಾರಕರಿಗೂ ಶುಭದಾಯಕವಾಗಲೆಂದು ಭಗವಂತನಲ್ಲಿ ನಮ್ರಭಾವದಿಂದ ಪ್ರಾರ್ಥಿಸುತ್ತ ಈ ಲೇಖನವನ್ನು ವಿರಮಿಸುವೆವು.

ಸಂ. ನಂದಿನಿ.

ಶ್ರೀಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನೂಮತ್ಸಮೇತ ಶ್ರೀ ರಾಮಚಂದ್ರ ಪರಬ್ರಹ್ಮಣೇನಮಃ

"ವೈದೇಹೀಸಹಿತಂ ಸುರದ್ರುಮತಲೆ ಹೈಮೇಮಂಟಪೇ । ಮಧ್ಯೇ ಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಂ॥ ಅಗ್ರೇವಾಚಯತಿಪ್ರಭಂಜನಸುತೇ ತತ್ವಮುನಿಭ್ಯಃ ಪರಂವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂಭಜೇ ಶ್ಯಾಮಲಂ"

---

* ಆರಲ್ಲಿ ಆಶ್ರಿತವಾತ್ಸಲ್ಯವೂ ಸತ್ಯವಾಕ್ಯವೂ ದೃಢಪ್ರತಿಜ್ಞೆಯೂ ಸರ್ವಕಾಲದಲ್ಲಿಯೂ ನಿಯತವಾಗಿರುವುವೋ ಅವರೇ ಮಹಾತ್ಮರು! ಅವರೇ ಕಾಲತ್ರಯದಲ್ಲಿಯೂ ಸ್ಮರಣೀಯರು!! ಅವರೇ ಪುಣ್ಯಶ್ಲೋಕರು!!! ಈ ಗುಣಗಳಿಂದ ಹಿಂದೆ ಭರತಖಂಡವನ್ನು ಆಳಿದ ಮಹಾರಾಜರುಗಳಲ್ಲಿ ದಶರಥಪುತ್ರನಾದ ಶ್ರೀರಾಮಚಂದ್ರನು ಅತಿಶಯನಾಗಿರುವನು.

ಶ್ರೀರಾಮಚಂದ್ರನು ದೇವತೆಗಳಿಂದಲೂ ರಾಕ್ಷಸರಿಂದಲೂ ಮಾನವರಿಂದಲೂ ಮಾಡಲ್ಪಡಲಾರದ ಅತಿಶಯ ಕಾರ್ಯಗಳನ್ನು ನಡೆಯಿಸಿದನು. ಆದುದರಿಂದ ಸ್ಥಿತಿಕರ್ತನಾದ ಶ್ರೀಮಹಾವಿಷ್ಣುವೆಂದು ಮಹರ್ಷಿಗಳಿಂದಲೂ ಬ್ರಹ್ಮ-ರುದ್ರಾದಿಗಳಿಂದಲೂ ಹೊಗಳಿಸಿಕೊಂಡನು. ಶ್ರೀರಾಮಚಂದ್ರನು ತನ್ನ ಭವನದಿಂದ ಹೊರಟು ಪಟ್ಟಾಭಿಷೇಕಕ್ಕೆಂದು ತಂದೆಯ ಭವನವನ್ನು ಕುರಿತು ಬರುತ್ತಿದ್ದಾಗ,—

"ಯಸ್ತುರಾಮಂ ನಪಶ್ಯೇತ್ತು, ಯಂಚರಾಮೋನಪಶ್ಯತಿ ।
ನಿಂದಿತಸ್ಸವಸೇಲ್ಲೋಕೇಸ್ವಾತ್ಮಾಪ್ಯೇನಂ ವಿಗರ್ಹತೇ॥"

ಎಂದು ಎಲ್ಲರೂ ಹೇಳಿಕೊಳ್ಳುತ್ತ ರಾಮದರ್ಶನ ಲಾಲಸರಾಗಿ ಬಂದರು. ಶ್ರೀರಾಮಚಂದ್ರನ ದರ್ಶನ, ಸಲ್ಲಾಪ, ಸಹವಾಸಬಲದಿಂದ ಅಯೋಧ್ಯಾ ಪಟ್ಟಣದಲ್ಲಿದ್ದ ಎಲ್ಲಾ ಪ್ರಾಣಿಗಳನ್ನೂ ತಾನು ಪರಂಧಾಮಕ್ಕೆ ಹೊರಟಾಗ್ಗೆ ಜೊತೆಯಲ್ಲಿಯೇ ಕರೆದುಕೊಂಡು ಹೋದನು. ಪರಮಪದಕ್ಕೆ ಸಮಾನವಾದ ಸಾಂತಾನಿಕಲೋಕವೆಂಬ ಲೋಕಾಂತರವನ್ನು ನಿರ್ಮಾಣಮಾಡಿ ಅಲ್ಲಿಟ್ಟು ಅದ್ಯಾಪಿ ಅವರ ಮಧ್ಯೇ ವಾಸಮಾಡಿಕೊಂಡಿರುವನು.

ಈಗ ಶ್ರೀರಾಮಚಂದ್ರನ ಪ್ರತ್ಯಕ್ಷದರ್ಶನವು ಕಲಿಮಹಿಮೆಯಿಂದ ಮಾನವ ಸಾಮಾನ್ಯರಿಗೆ ದುರ್ಲಭವಾದುದರಿಂದ ಅರ್ಚಾವಿಗ್ರಹ, ಭಾವಚಿತ್ರಗಳನ್ನೇ ಶ್ರೀರಾಮಚಂದ್ರನೆಂದು ಭಕ್ತಿಭಾವದಿಂದ ಧ್ಯಾನಿಸಿ, ಪೂಜಿಸಿ, ಕೃತಾರ್ಥರೆನ್ನಿಸಿ ಪ್ರತ್ಯಕ್ಷದರ್ಶನಕ್ಕೆ ಮಾರ್ಗವನ್ನು ಮಾಡಿಕೊಳ್ಳಬೇಕು. ಧ್ಯಾ

---

* ಈ ಲೇಖವು ಮಾತೃಮಂದಿರಂ ವಿದ್ಯಾರ್ಥಿಸಂಘಕೃತ ಶರಚ್ಛದಂಪ ತೀಸೇವಾಮಹೋತ್ಸವದ ಪ್ರಥಮ ದಿನದಲ್ಲಿ ಈ ಸಂಘದ ಪ್ರಧಾನಪೋಷಕರು, ಶ್ರೀರಾಮಗುಣ ಕಥನದ ಸಂಕ್ಷಿಪ್ತ ವರ್ಣನರೂಪವಾಗಿ ಮಾಡಿದ ಭಾಷಣವಾಗಿರುವುದು.

ಸಂಪತ್ತಿಯೂ ದೇಹಶಕ್ತಿಯೂ ಇರುವ ಮಹನೀಯರು ಜನ್ಮ ವ್ರತವೆಂದು ಸರ್ವಕಾಲದಲ್ಲಿಯೂ ನಡೆಯಿಸುತ್ತಿರುವರು. ನಮ್ಮಂತಹ ರಿಕ್ತರು ಮಹತ್ತ್ವಯತ್ನದಿಂದಲೇ ಕೈಕೊಳ್ಳಬೇಕು. ಶ್ರೀರಾಮಚಂದ್ರನು ಸಂಪದ, ವೈಭವಾದಿಗಳಿಗೆ ವಶನಲ್ಲವೆಂದೂ ಕೇವಲ ಭಕ್ತಿಗೆ ಮಾತ್ರವೇ ಒಲಿಯುವನೆಂದೂ ಗುರುಜನರಿಂದ ಕೇಳಿ ತಿಳಿದಿರುವೆನು.

ಈ ಭಕ್ತಿಯೆಂಬುದು ಬಹುಕಾಲಸಾಧನೆಯಿಂದಲೇ ಉಂಟಾಗತಕ್ಕುದು. ಉಪಪನ್ನರಲ್ಲದವರು ಉತ್ತರಾಯನದಲ್ಲಿ ವಸಂತ ನವರಾತ್ರಿಯೆಂದು ಚೈತ್ರಮಾಸದಲ್ಲಿಯೂ, ದಕ್ಷಿಣಾಯನದಲ್ಲಿ ಶರನ್ನವರಾತ್ರಿಯೆಂದು ಆಶ್ವಯುಜ ಮಾಸದಲ್ಲಿಯೂ ತಮ್ಮ ತಮ್ಮ ಶಕ್ತ್ಯುಚಿತವಾಗಿ ಶ್ರೀರಾಮಚಂದ್ರನ ಸೇವೆಯನ್ನು ನಡೆಯಿಸುವರು.

ಮಾನವಮಾನದ ಒಂದು ಸಂವತ್ಸರವು ದೇವಮಾನದಲ್ಲಿ ಒಂದು ದಿನವು. ಅವರಿಗೆ ಉತ್ತರಾಯನವೇ ಹಗಲೆಂದೂ ದಕ್ಷಿಣಾಯನವೇ ರಾತ್ರಿಯೆಂದೂ ಗಣನೆಯಾಗಿದೆ. ಮಾನವರು ಮೇಲಿನಂತೆ ಪೂಜಿಸಿದರೆ ಶ್ರೀರಾಮಚಂದ್ರನು ತನ್ನನ್ನು ಪ್ರತಿದಿನವೂ ಹಗಲೂ ರಾತ್ರಿಯೂ ಪೂಜಿಸಿದರೆಂದು ತಿಳಿದು ಭಕ್ತರಿಗೆ ಪ್ರಸನ್ನನಾಗುವನು.

ಆಶ್ರಿತ ವಾತ್ಸಲ್ಯದಲ್ಲಿಯೂ ಸತ್ಯವಾಕ್ಕಿನಲ್ಲಿಯೂ ದೃಢಪ್ರತಿಜ್ಞೆಯಲ್ಲಿಯೂ ಶ್ರೀರಾಮಚಂದ್ರನು ಅದ್ವಿತೀಯನೆಂದು ಹೇಳಿದುದು ಅತಿಶಯೋಕ್ತಿಯೆಂದು ಭಾವಿಸಬಾರದು. ಏಕೆಂದರೆ ಮೊದಲು ಶ್ರೀರಾಮನ ಆಶ್ರಿತವಾತ್ಸಲ್ಯದ ಮೇರೆಯೆಲ್ಲಿಯವರೆಗೆ ಮುಟ್ಟಿತ್ತೆಂಬುದಕ್ಕೆ ಒಂದೆರಡು ದೃಷ್ಟಾಂತಗಳನ್ನಿಲ್ಲಿ ಕೊಡುವೆನು.

೧ ತಮ್ಮನಾದ ಭರತನು, ತನ್ನ ತಾಯಿಯಿಂದ ವಂಚಿತನಾಗಿ ಅರಣ್ಯಕ್ಕೆ ತೆರಳಿದ, ಮತ್ತು ಚಿತ್ರಕೂಟ ಪರ್ವತದಲ್ಲಿ ವಾಸವಾಗಿದ್ದ ರಾಮಚಂದ್ರನಿಗೆ ಪ್ರಥಮತಃ ಆಶ್ರಿತನಾದನು. ಭರತನ ಭಕ್ತಿಭಾವಕ್ಕೆ ಸಂತುಷ್ಟನಾಗಿ ಭರತನನ್ನು ನಾನಾವಿಧ ಸಾಂತ್ವವಚನಗಳಿಂದ ಸಮಾಧಾನಪಡಿಸಿ, ಪಾದುಕೆಯನ್ನಿತ್ತು, ೧೪ ವರ್ಷವಾದ ಮರುದಿನವೇ ಬಂದು ಸೇರುವೆನೆಂದು ಅಭಯಪ್ರದಾನಮಾಡಿ ಬೀಳ್ಕೊಟ್ಟನು. ಆ ಅವಧಿಯು ಶ್ರೀರಾಮನು ಲಂಕಾಪಟ್ಟಣದಲ್ಲಿದ್ದಾಗ ಬಂದೊದಗಿತು. ಅದಕ್ಕಾಗಿ ಅತ್ಯಂತ ಚಿಂತೆಪಟ್ಟು ಕ್ಲಿಪ್ತಕಾಲಕ್ಕೆ ಬಂದೊದಗಿ ಭರತನನ್ನು ಸಂತೈಸಿದನು.

೨ ಸುಗ್ರೀವನ ಇಷ್ಟದಂತೆ ಬಂದ ಆಂಜನೇಯನು ಎರಡನೆಯವನಾಗಿ ಶ್ರೀರಾಮಚಂದ್ರನಲ್ಲಿ ಭಕ್ತಿಭಾವದಿಂದ ಆಶ್ರಿತನಾದನು. ಅವನ ಮಹಿಮೆಯು ದಿಗಂತ ವಿಶ್ರಾಂತವಾಗುವಂತೆಯೂ ಉತ್ತರೋತ್ತರಾಭಿವೃದ್ಧಿಯಾಗುತ್ತಿರುವ ಶ್ರೀಯಶಸ್ಸುಂಟಾಗುವಂತೆಯೂ ವರಪ್ರದಾನ ಮಾಡಿದುದಲ್ಲದೆ, ತನ್ನ ಪಟ್ಟಾಭಿಷೇಕ ಕಾಲದಲ್ಲಿ ಅತಿಶಯವಾದ ಬಹುಮತಿಯನ್ನುಂಟುಮಾಡಿದನು.

೩ ಸುಗ್ರೀವನು ದೇಶಭ್ರಷ್ಟನಾಗಿ ಅಲೆಯುತ್ತಿದ್ದನು. ಅವನೇ ಮೂರನೆಯವನಾಗಿ ಬಂದು ಶ್ರೀರಾಮಚಂದ್ರನ ಆಶ್ರಯವನ್ನು ಹೊಂದಿದವನು. ಶ್ರೀರಾಮಚಂದ್ರನು ಸುಗ್ರೀವನ ಶತ್ರುವಾದ ವಾಲಿಯನ್ನು ಸಂಹರಿಸಿ, ನಿಷ್ಕಂಟಕವಾದ ಕಿಷ್ಕಿಂಧಾರಾಜ್ಯಕ್ಕೆ ಸುಗ್ರೀವನನ್ನು ರಾಜನನ್ನಾಗಿ ಮಾಡಿದನು.

೪ ಅಣ್ಣನಾದ ರಾವಣನಿಂದ ತಿರಸ್ಕೃತನಾದ ವಿಭೀಷಣನು, ಸಮಸ್ತವನ್ನೂ ಪರಿತ್ಯಾಗಮಾಡಿ ನಾಲ್ಕನೆಯವನಾಗಿ ಬಂದು ಶ್ರೀರಾಮಚಂದ್ರನ ಆಶ್ರಿತನಾದನು. ರಾಮಚಂದ್ರನು ಆತನಿಗೆ ಲಂಕಾರಾಜ್ಯದ ಪಟ್ಟವನ್ನು ಕಟ್ಟಿದನು. ಚಿರಕಾಲ ಲಂಕಾರಾಜ್ಯವಾಳುವಂತೆ ಅನುಗ್ರಹಿಸಿದನು. ಆಶ್ರಿತವಾತ್ಸಲ್ಯದ ದಿಗ್ದರ್ಶನಕ್ಕಾಗಿ ಆತನ ಆಶ್ರಿತರಾಗಿ ಉನ್ನತಪದವಿಗೆ ಬಂದವರಲ್ಲಿ ಈ ನಾಲ್ವರ ಕಥೆಯೇ ಸಾಕಷ್ಟು ದೃಷ್ಟಾಂತಗಳಾಗಿವೆ. ಇನ್ನು ಸತ್ಯವಾಕ್ಪರಿಪಾಲನೆಯ ವಿಚಾರವಾಗಿ ಒಂದೆರಡು ಮಾತು:—

ಕುಲಕ್ರಮಾಗತವಾಗಿ ಬಂದ ರಾಜ್ಯಾಭಿಷೇಕಕ್ಕೆ ರಾಮಚಂದ್ರನೇ ಅರ್ಹನಾಗಿದ್ದರೂ ಸಪತ್ನೀಮಾತೃವಾದ ಕೈಕೇಯಿ ೧೪ ವರ್ಷ ಅರಣ್ಯದಲ್ಲಿರಬೇಕೆಂದು ಸೂಚಿಸಿದಳು. ಅದಕ್ಕಾತನು ಹಿಂದುಮುಂದು ನೋಡದೆ ಈಗಲೇ ಹೊರಡುವೆನೆಂದು ಒಪ್ಪಿದನು; ಅದರಂತೆ ಹೊರಟೂಬಿಟ್ಟನು. ಅನಂತರ ಭರತನೂ, ವಸಿಷ್ಠಾದಿಗಳೂ, ಇತರರೂ ಎಷ್ಟುವಿಧವಾಗಿ ಪ್ರಾರ್ಥಿಸಿದರೂ ಸತ್ಯಸಂಕಲ್ಪನಾದ ಶ್ರೀರಾಮಚಂದ್ರನು ಅರಣ್ಯಕ್ಕೇ ತೆರಳಿದನು.

ಶರಭಂಗರೇ ಮೊದಲಾದ ಋಷಿಗಳು ರಾಕ್ಷಸರ ಹಿಂಸೆಯನ್ನು ಶ್ರೀರಾಮನಿಗೆ ತಿಳಿಸಿದರು. ಅದಕ್ಕಾತನು ರಾಕ್ಷಸರನ್ನು ಸಂಹರಿಸಿ, ಋಷಿಗಳ ಬಾಧೆಯನ್ನು ಪರಿಹರಿಸುವುದಾಗಿ ಅಭಯಪ್ರದಾನ ಮಾಡಿದನು; ಅದರಂತೆಯೇ ಪಂಚವಟಿಯಲ್ಲಿದ್ದುಕೊಂಡು ಖರದೂಷಣ ತ್ರಿಶಿರಾದಿ ರಾಕ್ಷಸರನ್ನು ಸಂಹರಿಸಿ ಋಷಿಗಳಿಗೆ ಕ್ಷೇಮವನ್ನುಂಟುಮಾಡಿದನು. ಸತ್ಯವನ್ನು ಕಾಪಾಡುವುದಕ್ಕೋಸ್ಕರ ಇವೇ ಮೊದಲಾದ ಅನೇಕ ಸಾಹಸಕಾರ್ಯವನ್ನು ನಿರ್ವಹಿಸಿದನು. ಇನ್ನು ಆತನ ದೃಢಪ್ರತಿಜ್ಞೆಯ ವಿಷಯವಾಗಿ ಒಂದೆರಡು ಮಾತು.—

ಅರಣ್ಯದಲ್ಲಿ ವಾಸವಾಗಿದ್ದ ಶಬರಿಯು ತಾನು ಸಂಗ್ರಹಮಾಡಿದ್ದ ಅಲ್ಪಫಲವನ್ನು ಶ್ರೀರಾಮಚಂದ್ರನಿಗೆ ಒಪ್ಪಿಸಿದಳು. ಅಷ್ಟಕ್ಕೆ ತೃಪ್ತನಾದ ಶ್ರೀರಾಮಚಂದ್ರನು ಶಬರಿಗೆ ಉತ್ತಮವಾದ ಗತಿಯನ್ನು ಕೊಟ್ಟನು. ಶ್ರೀರಾಮಚಂದ್ರನು ವಿಭೀ

ಷಣನನ್ನು ಪರಿಗ್ರಹಮಾಡುವ ಕಾಲದಲ್ಲಿ —

" ಸಕೃದೇವ ಪ್ರಪನ್ನಾಯ ತವಾಸ್ಮೀತಿಚ ಯಾಚತೆ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್
ವ್ರತಂ ಮಮ ॥ "

ಎಂದು ತನ್ನ ಸಂಕಲ್ಪವನ್ನು ವ್ಯಕ್ತಗೊಳಿಸಿದನು.

ಈ ರೀತಿ ದೃಢಪ್ರತಿಜ್ಞೆಯುಳ್ಳ ಶ್ರೀರಾಮಚಂದ್ರನನ್ನು ಉಪಾಸನೆಮಾಡಿದವರಾರೇ ಆಗಲಿ, ಶ್ರೀರಾಮನ ಕಟಾಕ್ಷಕ್ಕೆ ಪಾತ್ರರಾಗುವರು. ಇದಕ್ಕೂ ಅತಿಶಯವಾದುದು ಮತ್ತೊಂದಿಲ್ಲ.

ಶ್ರೀರಾಮಾವತಾರವಾದ ಸ್ವಲ್ಪ ಕಾಲದಲ್ಲಿಯೇ ದುಷ್ಟನಿಗ್ರಹಾರ್ಥವಾಗಿ ವಿಶ್ವಾಮಿತ್ರಮಹರ್ಷಿಯು ದಶರಥಮಹಾರಾಜನಲ್ಲಿ ಬಂದನು; ಯಜ್ಞಸಂರಕ್ಷಣೆಗೋಸ್ಕರ ರಾಮಚಂದ್ರನನ್ನು ಕಳಿಸಿಕೊಡಬೇಕೆಂದು ಕೇಳಿದನು. ಆ ಕಾಲದಲ್ಲಿ ದಶರಥಮಹಾರಾಜನು, ಪುತ್ರಪ್ರೀತಿಯಿಂದ, ಶ್ರೀರಾಮನಿಗೆ ಯುದ್ಧಯೋಗ್ಯತೆಯಿನ್ನೂ ಉಂಟಾಗಿಲ್ಲ, ಊನಷೋಡಶವರ್ಷದ (ಪಾದೋನಷೋಡಶವರ್ಷ—ಎಂದರೆ, ೧೨ ವರ್ಷ) ಬಾಲಕನೆಂದು ಹೇಳಿದನು. ಆಗ ವಿಶ್ವಾಮಿತ್ರನು —

" ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾ
ಕ್ರಮಂ । ವಸಿಷ್ಠೋಪಿ ಮಹಾತೇಜಾಃ ಯೇ ಚಾನ್ಯೇ
ತಪಸಿಸ್ಥಿತಾಃ ॥ "

ಎಂದು ಹೇಳಿದನು. ಶತ್ರುತ್ವವನ್ನು ಸಾಧಿಸುತ್ತಿದ್ದ ರಾವಣನು ಕೂಡ,—

" ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾಃ ನಿಧನಂಗ
ತಾಃ । ತಂ ಮನ್ಯೇ ರಾಘವಂ ವೀರಂ ನಾರಾಯಣ
ಮನಾಮಯಂ ॥ " ಎಂದು ಹೇಳಿರುವನು.

ಇತ್ಯಾದಿಗಳಿಂದ ಶ್ರೀರಾಮಚಂದ್ರನು ಶ್ರೀಮನ್ನಾರಾಯಣನ ಅವತಾರವೆಂದೂ, ಸೀತಾದೇವಿಯು ಜಗನ್ಮಾತೆಯಾದ ಸಾಕ್ಷಾತ್ ಲಕ್ಷ್ಮಿಯ ಅವತಾರವೆಂದೂ, ಶ್ರೀಸೀತಾರಾಮರನ್ನು ದೃಢಭಕ್ತಿಭಾವದಿಂದ ಭಜಿಸಿದವರಿಗೆ ಐಹಿಕಾಮುಷ್ಮಿಕ ಶ್ರೇಯಸ್ಸುಂಟಾಗುವುದೆಂಬುದೂ ಸ್ವತಸಿದ್ಧವಾಯಿತು. ಆದುದರಿಂದ, ಲೋಕಾದರ್ಶರಾದ ಆದರ್ಶಪುರುಷನೂ ಆದರ್ಶನಾರಿಯೂ, ಜಗಜ್ಜನನೀಜನಕರೂ, ಶರಣ್ಯದಂಪತಿಗಳೂ ಆಗಿರುವ ಶ್ರೀ ಸೀತಾರಾಮಚಂದ್ರರನ್ನು ಭಜನೆಮಾಡಬೇಕೆಂದು ಸಂಕಲ್ಪಿಸಿ, ಭಗವದ್ಭಜನೆಯನ್ನು ನಡೆಯಿಸಲು ಬರುವ ಮಹಾತ್ಮರಾದ ಗುರುಜನರ ಅನುಗ್ರಹರೂಪವಾದ ಭಗವತ್ಪ್ರಸಾದವನ್ನು ಪಡೆದು, ಕೃತಕೃತ್ಯರಾಗಬೇಕೆಂದು ನಿರೀಕ್ಷಿಸುತ್ತಿರುವ ಈ ವಿದ್ಯಾರ್ಥಿಗಳ ಪ್ರಾರ್ಥನೆಯನ್ನು ಇಲ್ಲಿರುವ ಸರ್ವರೂ ಅನುಮೋದಿಸಿ, ಸೇವಾಕಾರ್ಯದಲ್ಲಿ ಪ್ರೋತ್ಸಾಹಕರಾಗಿ ನಿಂತು ಉದ್ದೇಶಸಾಫಲ್ಯಗೊಳಿಸಬೇಕೆಂಬುದೇ ನನ್ನ ಪ್ರಾರ್ಥನೆ. (ತಥಾಸ್ತು) (೧೨—೪—೧೮)

ರಾಗ — (ಶಿರಿಕಾಂತ । ಶ್ರಿತಚಿಂತಾ)

ಜಯ ರಾಮಾ ಜಯ ರಾಮಾ ರಘುವಂಶಾಬ್ಧಿ ಸೋಮಾ ॥ಪ
ವೈದೇಹಿಮನೋಹರ—ವೇದವೇದ್ಯ ಶ್ರೀಕರ । ಸಾಧುಜನ
ಸುಖಕರ, ಮಾಧವ ಮುರಹರ ॥ ಜಯ ಶೌರಿ, ಮುರವಿದಾರಿ,
ದಿತಿಜಾರಿ ॥ ಜಯ ॥ ೧ ॥ ನೀರೇರುಹಲೋಚನ—ವಾರಾಶಿ
ಬಂಧನ । ಆನಂದಮಯ ಸದನ — ಅಕ್ಷಯ ಸುವಚನ ॥
ಸ್ಮರತಾತ ವರದಾತ, ರಮಾಸಮೇತ ॥ ೨ ॥ ಶೇಷಾಪ್ರಿ
ನಿಕೇತನ—ಆಶ್ರಿತಪರಿಪಾಲನ । ಕ್ಲೇಶಪಾಶವಿಮೋಚನ—
ವಾಸವಾರ್ಚಿತ ಚರಣ ॥ ಜಯ ದೇವಾದ್ಭುತಪ್ರಭಾವ ಶ್ರೀ
ರಾಘವ ॥ ಜಯ ॥ ೩ ॥

ಮಾತ್ಸ[illegible]-ಮ[illegible]ಮಾ.

ನಾಲ್ಕನೆ ಸಂ[illegible]ಕೆಯಿಂದ ಮುಂದೆ –

ಎಲೈ ಮಾತ್ಸರ್ಯಮಹಾಶಯ !

ಹಿಂದಿನ ಸಂಚಿಕೆಯಲ್ಲಿ ಕೃತ, ತ್ರೇತಾ ದ್ವಾ[illegible] ಗಳಲ್ಲಿ ಪ್ರದರ್ಶಿತವಾದ ನಿನ್ನ ಪ್ರತಾ[illegible] ವನ್ನು ಮಾಡಿದ್ದು, ಕ[illegible]ಯುಗದ ಪ್ರ[illegible] ಲೇಖನಿಯನ್ನು ಸಜ್ಜುಗೊಳಿಸಿಕೊಂಡು ಬ[illegible] ಳ್ಳೊಂಡಿದ್ದೆನಲ್ಲವೆ? ಇದೊ[illegible]; ನಿನ್ನ ಪ್ರತಾಪವರ್ಣನ ಮತ್ತು [illegible] ಲೇಖನಿಯನ್ನು ಕೃತಾರ್ಥ[illegible] ಕೂಡ ಭದ್ರಾಸನಾಸೀನನನ್ನಾಗಿ [illegible] ದಿಂದ ಸಮಗ್ರವಾಗಿ [illegible] ಸಂತೋಷ !

ಅಯ್ಯಾ, ಮಾತ್ಸರ್ಯ[illegible]! ನಿನ್ನ [illegible] ವರ್ಣಿಸಿದಂತೆಲ್ಲ ನೀನು ಉಬ್ಬಿ [illegible]! ನಿನಗೆ ಇಷ್ಟು ಉತ್ಸಾಹವಿಲ್ಲ[illegible] ಹೋಗುತ್ತಿದ್ದೆ; [illegible] ಹೊಂದುತ್ತಾ ಬಂದು [illegible] ವ್ಯಾಪಿಸಿರುವೆ! ಅದರ[illegible] ನಿನ್ನ ಅಗ್ರಜರು [illegible] ತಿಯೋ ಪ್ರಖ್ಯಾತಿಯನ್ನು [illegible] ವೃದ್ಧಿಯನ್ನು ಹೊಂದುತ್ತಿರುವ[illegible] ಅ[illegible] ದಲ್ಲಿ ಸರ್ವಶ್ರೇಷ್ಠನಾದ ಕಾಮನ [illegible] ದಲೂ ನಿಗ್ರಹಿಸಲು—ಸಹಿಸಲು—ಅಸಾಧ್ಯ[illegible] ಮೂರ್ತಿಯ ಕ್ರೋಧಾಗ್ನಿಯಿಂದ [illegible] ಕಾಮನ ಪ್ರತಾಪಕ್ಕೆ ಕೊರತೆಯಾಗಲಿಲ್ಲ; [illegible] ವಂತೆಯೂ ಇಲ್ಲ. ನಾವಂತೂ ಪರಾಕ್ರಮ[illegible] ಸಮಾನರೆಂದೇ ಹೇಳಬಹುದು.

ಹೇಗೆನ್ನುವೆಯಾ, ಮಾತ್ಸರ್ಯ[illegible] ದಿಂದ ಕೇಳು:— ಲೋಕದಲ್ಲಿ ತಂದೆ-ಮಕ್ಕಳ ಸಂಬಂಧವು ಬಲು ಬಲವತ್ತರವಾದುದು. ತಂದೆಗೆ ಮಗನ ಮೇಲಿನ ಪ್ರೀತಿಯು ಮೇರೆಯಿಲ್ಲದುದಾಗಿರಬೇಕು, ಮಗನು ವೃದ್ಧಿಗೆ ಬಂದಂತೆಲ್ಲ ತಂದೆಯ ಸಂತೋಷವು ಹೆಚ್ಚುತ್ತ ಬರುವುದು. ಇದೇ ಸೃಷ್ಟಿಯ ನಿಯಮವು. ಆದರೆ, ಈ ಬಾಂಧವ್ಯದಲ್ಲಿ, ಮಗನಲ್ಲಿ ನೀನು ನೆಲಸಿದೆಯಾದರೆ, ಅವನು ತಂದೆಯ ಸಾವನ್ನೇ ಕೋರುತ್ತಿರುವಂತೆ ಮಾಡುವೆ;—ತಂದೆಯಲ್ಲಿ ನೆಲಸಿದೆ[illegible]ರಾದರೆ, ಮಗನ ಸಾವನ್ನೇ ಕೋರುವಂತೆಯೂ,— ಅದ [illegible] ಆ ತಂದೆಯಾದವನು ಮತ್ತೊಬ್ಬಳು ಪತ್ನಿಯನ್ನು [illegible]ನಾಗಿದ್ದರೆ, ತನ್ನ ಕುಮಾರಿ ಈ ಪುತ್ರನ ಸಾವನ್ನು [illegible]ವಂತೆಯೂ ಕೂಡ ಆಗುವನು

[illegible] ಸಂಬಂಧವು ಅಕ್ಷೋಭ್ಯ ಮತ್ತು ಅನಂತ [illegible]ದೆಂದ ಬಲ್ಲವರು ಹೇಳುವರು. ಅವರು ಸರ್ವದಾ [illegible] ಕ್ಷೇಮಚಿಂತನೆಯನ್ನು ಮಾಡುತ್ತಿರುವವರಾಗಬೇ[illegible] ವುದು. ಈ ವರ್ತಮಾನಕಾಲದಲ್ಲಿ [illegible]ಗ್ರಸ್ಥನಾದ ಕಾಮಮಹಾಶಯನು ಸರ್ವವ್ಯಾಪಿ[illegible] ಪ್ರಸಿದ್ಧಿಗೊಂಡಿರುವನು. ಆತನು ಪತಿ [illegible] ಬೇರೂರಿದರೆ, ಆತನು (ಪತಿ) ಪತ್ನಿಯಲ್ಲಿ [illegible]ವಂತೆಯೂ,— ತನ್ನ ಕಾಮಪೂರ್ತಿಗೆ ಪತ್ನಿ [illegible] ಉಪಸರ್ಗಳೆಂಬ ಹೀನಭಾವವನ್ನು ಹೊಂ[illegible]ದಿಂದ – ಆ ಪತ್ನಿಯು ದರ್ಶನ ಸಂಭಾಷಣಾದಿಗಳು [illegible]ಯೆಂದು ಅವುಗಳನ್ನು ತಿರಸ್ಕರಿಸುವಂ[illegible] ಮನಸ್ಸಿಗೆ ಒಲಿದ ಸ್ತ್ರೀಯೋ ಅಪ್ಸರಸ್ಸೆಂದು [illegible]ಗುವಂತೆಯೂ ಮಾಡುವನು. [illegible] ಪತ್ನಿಯ ಮೇಲೆ ನೀನು ಆವೇಶಿಸಿದೆಯಾ [illegible]ವನ್ನು ನೀನು ಎಂದಿಗೂ ವ್ಯರ್ಥ [illegible], ಹೊಂಚಿದ್ದು ಆ ಸಮಯದಲ್ಲಿ, ಅವಳ [illegible] ನೀನು ಆವೇಶಿಸಿಯೋ ಆವೇಶಿಸು[illegible]— "ಸಪತ್ನೀ [illegible]" ಎಂಬ ಕಿಚ್ಚನ್ನಿಟ್ಟು, ಆ ಕಿಚ್ಚಿನ ತಾಪದಿಂದ [illegible] ಪತಿಯು ಮತ್ತೊಬ್ಬ ಪತ್ನಿಯನ್ನು ಅನುವರ್ತಿ[illegible] ಆತನ ಅಧಃಪತನವನ್ನೇ ಚಿಂತಿಸುವಂತೆ [illegible] ಕೂಡಿಸುವೆ! ನಿನ್ನ ಹಿರಿಯಣ್ಣನಾದ ಕಾ[illegible] ಪತ್ನಿಯಲ್ಲಿ ಆವೇಶಿಸಿದರಂತೂ ಹೇಳುವದೇನು? [illegible]ದಲ್ಲಿರುವ ಉಪಾಯಗಳೆಲ್ಲವೂ ಅವಳಿಗೆ ಪ್ರತ್ಯಕ್ಷ[illegible] ಬಹು ವಿಧದಿಂದ ಪತಿಯನ್ನು ವಂಚಿಸಿ ಸರ್ವ[illegible] ತನ್ನ ಕಾಮಪೂರ್ತಿಯನ್ನು ಚಿಂತಿಸುವವಳ[illegible] ಮಾಡುವನು. ಆ ಸಮಯದಲ್ಲಿ ಅಂತಹ ಸ್ತ್ರೀಯ [illegible]ಕ್ಕೆ ಸಿಕ್ಕಿದ ಪುರುಷನನ್ನು ನೀನು ಆಕ್ರಮಿಸುವ[illegible] ಸಹಜವೇ ಆಗಿರುವುದು. ನಿನ್ನಿಂದ ಆಕ್ರಮಿಸಲ್ಪಟ್ಟ ಆ ಸ್ತ್ರೀಯ ಉಪಪತಿಗೆ, ಅವಳ ಪತಿಯ ಸ್ವತಂತ್ರ ಜೀವನವು ಶೂಲಪ್ರಾಯವಾಗುವುದು. ಆದುದರಿಂದ, ಆತನು ಪತ್ನಿಗೂ ಪತ್ನಿಯ ಪ್ರೀತಿಪಾತ್ರನಿಗೂ ದಾಸಾನುದಾಸನಾಗಿರುವಂತೆ

ಮಾಡಲು ಪ್ರಯತ್ನಿಸುವೆ; ಸಾಧ್ಯವಾಗದಿದ್ದರೆ ಕೊನೆಗೆ ಆತನ ಜೀವಿಕೆಗೇ ಕೊನೆಯನ್ನು ಕಾಣಿಸುವೆ. ಇದರಿಂದ, ನೀವಿಬ್ಬರೂ ಸೇರಿಯೇ ಬಹುಶಃ ಕಾರ್ಯಭಾಗಗಳನ್ನು ನಡೆಯಿಸುತ್ತಿರುವಿರೆಂಬುದು ಸ್ಪಷ್ಟಪಡುವದಲ್ಲವೆ? ಇರಲಿ.

ಅಯ್ಯೋ, ಮಾತ್ಸರ್ಯ! ನಿನಗೆ, ಧನಿಕನಾಗಿರಬೇಕು, ದರಿದ್ರನಾಗಿರಬೇಕು, ಸುರೂಪಿಯಾಗಿರಬೇಕು, ಕುರೂಪಿಯಾಗಿರಬೇಕು, ಇತ್ಯಾದಿ ಭೇದಭಾವವಿರಬೇಕಾದ ಅಪೇಕ್ಷೆಯಿಲ್ಲ. ಕುರೂಪಿಯಲ್ಲಿ ನೀನು ಬೇರೂರಿದೆಯಾದರೆ, ಸುರೂಪಿಯ ಮೇಲೆ ನಿನ್ನ ಪ್ರತಾಪವನ್ನು ತೋರಿಸುವೆ; ಕೆಲವೆಡೆ ಧನಿಕನಲ್ಲಿ ನೀನು ಬೇರೂರಿ, ದರಿದ್ರರ ಮೇಲೆ ನಿನ್ನ ಶಕ್ತಿಯನ್ನು ಪ್ರಯೋಗಿಸುವೆ. ಸುರೂಪಿಯಲ್ಲಿ ಬೇರೂರಿ ಕುರೂಪಿಗಳ ಮೇಲೆ ಕೂಡ ನಿನ್ನ ಪ್ರತಾಪವನ್ನು ಪ್ರಯೋಗಿಸುವೆ! ಎಂಥವರಾದರೇನು? ನಿನ್ನ ಉಪಾಸಕರಿಗೆ ವಿಜಾತೀಯವಾದ ಬುದ್ಧಿಯೂ ಶಕ್ತಿಯೂ ಸಾಮರ್ಥ್ಯವೂ ಉಂಟಾಗುವವು. ಹೇಗೆನ್ನುವೆಯೊ?— ಹಾಗಿದ್ದರೆ ಕೇಳು, ನಿನ್ನ ಮಹಿಮಾಪ್ರದರ್ಶನಕ್ಕೂ, ನಮ್ಮ ಅಶೇಷ ಕರ್ಣಾಟಕ ಬಾಂಧವರ ಮನಸ್ಸಮಾಧಾನಕ್ಕೂ ದೃಷ್ಟಾಂತವಾದ ಒಂದು ಕಥೆಯನ್ನು ಹೇಳುವೆನು. —

“ಒಂದು ಅಗ್ರಹಾರದಲ್ಲಿ ಒಬ್ಬ ದರಿದ್ರನು ಸಂಸಾರಿಯಾಗಿ ಭಿಕ್ಷಾಟನೆಯಿಂದ ಜೀವಿಸುತ್ತಿದ್ದನು. ಅವನ ನೆರೆಯಲ್ಲಿ ಒಬ್ಬ ಧನಿಕನು ಬಲಿಭಿಕ್ಷವರ್ಜಿತನಾಗಿ ವಾಸಿಸುತ್ತಿದ್ದನು. ದರಿದ್ರನ ಹೆಂಡತಿಯು ಅನ್ನ-ಬಟ್ಟೆಯಿಲ್ಲದೆ ಸಂಕಟಪಡುತ್ತಿರುವ ತನ್ನ ಮಕ್ಕಳನ್ನು ನೋಡುತ್ತ ಒಂದು ದಿನವನ್ನು ಒಂದು ಯುಗದಂತೆ ಕಳೆಯುತ್ತಿದ್ದಳು. ಕಡೆಗೆ ಕಷ್ಟವನ್ನು ಸಹಿಸಲಾರದೆ ಸದಾಚಾರಸಂಪನ್ನನೂ ಜಿತೇಂದ್ರಿಯನೂ ದೈವನ್ಯಸ್ತಭರನೂ ಆಗಿದ್ದ ಪತಿಯನ್ನು ಕುರಿತು ಆ ಸಾಧ್ವಿಯು ಹೀಗೆ ಹೇಳಿದಳು.— “ಸ್ವಾಮಿ, ತಮಗೆ ದೈವಕಟಾಕ್ಷವಿದೆ; ಆದರೂ ತಾವು ದೃಢಚಿತ್ತದಿಂದ ನಿರ್ಜನಪ್ರದೇಶದಲ್ಲಿ ಧ್ಯಾನಮಾಡಿ ಆತನನ್ನು ಪ್ರಾರ್ಥಿಸಿದಲ್ಲಿ ಪ್ರಸನ್ನನಾಗಿ ವರವನ್ನು ದಯೆಪಾಲಿಸುವನು. ಸುಮುಹೂರ್ತವನ್ನು ನೋಡಿ ಹಾಗೇಕೆ ಮಾಡಬಾರದು?”

ಪತ್ನಿಯ ಪ್ರಾರ್ಥನೆಯು ಅವಳ ಪತಿಗೆ ಉಚಿತವಾಗಿಯೇ ಕಂಡುಬಂದಿತು. ಒಂದು ದಿನ ಪತಿಯು ಪತ್ನಿಗೆ ಹೀಗೆಂದು ಹೇಳಿದನು— “ನಾಳೆದಿನ ಮಧ್ಯಾಹ್ನಕ್ಕೆ ದೇವರ ನಿವೇದನಕ್ಕೆ ಯೋಗ್ಯವಾದ ಪಾಥೇಯವನ್ನು ಸಿದ್ಧಪಡಿಸು.” ಎಂದು ಹೇಳಿದನು. ಪತಿಯ ಆಜ್ಞೆಯನ್ನು ಶಿರಸಾವಹಿಸಿದಳು; ನೆರಮನೆಗೆ ಎಂದೂ ಹೋಗದಿದ್ದ ಇವಳು, ಇಂದು ಹೋದಳು. ನೆರಮನೆಯ ಧನಿಕನ ಹೆಂಡತಿಯು ಅವಲಕ್ಕಿಗಾಗಿ ಭತ್ತವನ್ನು ಬೇಯಿಸಿಟ್ಟುಕೊಂಡು ಬಡವರಾರಾದರೂ ಬಂದಾರೇ-ಎಂದು ನಿರೀಕ್ಷಿಸುತ್ತಿದ್ದಳು; ನೆರೆಮನೆಯವಳು ಬಂದುದನ್ನು ಕಂಡು ಹಿಗ್ಗಿ ಅವಳಿಗೆ ಹೀಗೆ ಹೇಳಿದಳು — ‘ಭತ್ತವನ್ನೆಲ್ಲ ಹುರಿದು, ಕುಟ್ಟಿ ಅವಲಕ್ಕಿ ಮಾಡು, ನಿನಗೂ ಒಂದು ಸೇರು ಅವಲಕ್ಕಿಯನ್ನು ಕೊಡುವೆನು. ನೀನೆಂದೂ ತಿಂದವಳಲ್ಲ, ನನ್ನಿಂದ ನೀನು ಒಂದು ದಿನವಾದರೂ ಸುಖಪಡುವೆ’ ಎಂದಳು. ಅದಕ್ಕೆ ಇವಳು ಒಪ್ಪಿ, ತಾನೊಬ್ಬಳೇ ಎಲ್ಲವನ್ನೂ ಕುಟ್ಟಿ ಅವಲಕ್ಕಿಯನ್ನು ಮಾಡಿಟ್ಟಳು. ಧನಿಕನ ಪತ್ನಿಯು ಬಂದು ನೋಡಿ, ಒಂದು ಸೇರು ಅವಲಕ್ಕಿಯನ್ನು ತೆಗೆದುಕೊಂಡು ಉಳಿದುದನ್ನು ಒಳಗಿಡೆಂದು ಆಜ್ಞಾಪಿಸಿದಳು. ಅದರಂತೆಯೇ ನಡೆದು, ತನ್ನ ಪಾಲಿಗೆ ಬಂದ ಅವಲಕ್ಕಿಯನ್ನು ಮನೆಗೆ ತಂದು ಸದ್ಭಾವದಿಂದ ಹುಳಿಯವಲಕ್ಕಿಯಾಗುವಂತೆ ಪಕ್ವಮಾಡಿ, ಶುಚಿಯಾಗಿ ಬುತ್ತಿಯನ್ನು ಕಟ್ಟಿಟ್ಟಳು. ಅವಳ ಪತಿಯು ಉಷಃಕಾಲದಲ್ಲೆದ್ದು ದೇವರನ್ನು ಧ್ಯಾನಿಸುತ್ತ ಹೊರಟನು. ಮಧ್ಯಾಹ್ನದ ವರೆಗೂ ಅರಣ್ಯದಲ್ಲಿ ಪ್ರಯಾಣ ಮಾಡಿದನು. ಮಧ್ಯಾಹ್ನ ಕಾಲಕ್ಕೊದಗಿದ ಒಂದು ಸರೋವರದಲ್ಲಿ ಸ್ನಾನಾಹ್ನಿಕಕ್ಕೆ ಇಳಿದು, ತಾನು ತಂದಿದ್ದ ಬುತ್ತಿಯನ್ನು ಶುಚಿಯಾದ ಸ್ಥಳದಲ್ಲಿರಿಸಿ, ಸ್ಥಿರಮನಸ್ಸಿನಿಂದ ಭಗವಧ್ಯಾನ ಮಾಡುತ್ತ ಆಹ್ನಿಕದಲ್ಲಿ ತತ್ಪರನಾದನು. ಈ ಸತಿಪತಿಯರ ಸದ್ಭಾವನೆಗೆ ಸಂತುಷ್ಟನಾದ ದೇವರು ಮನುಷ್ಯರೂಪದಿಂದ ಬಂದು, ಆ ಬುತ್ತಿಯನ್ನು ನೋಡಿ, ಅದರ ಪರಿಶುದ್ಧತೆಗೂ ಸುವಾಸನೆಗೂ ಮೆಚ್ಚಿ, ಅದನ್ನು ತಾನು ಸ್ವೀಕರಿಸಿ, ಆ ಸ್ಥಳದಲ್ಲಿ ಒಂದು ಅಕ್ಷಯ ಪಾತ್ರೆಯನ್ನಿಟ್ಟು,—‘ಬ್ರಾಹ್ಮಣನೆ, ನಾನು ನಿನ್ನ ಮನೋಭಾವಶುದ್ಧತೆಗೆ ಮೆಚ್ಚಿದೆನು; ಅಕ್ಷಯ ಪಾತ್ರೆಯನ್ನು ಅನುಗ್ರಹಿಸಿರುವೆನು. ಇದರಿಂದ ನಿನ್ನ ಸಕಲ ಇಷ್ಟಾರ್ಥವೂ ಫಲಿಸುವುದು; ಎಷ್ಟು ಜನಗಳಿಗಾದರೂ ಮೃಷ್ಟಾನ್ನ ಭೋಜನವಾಗುವುದೆಂದು’ ಹೇಳಿ ತಿರೋಧಾನನಾದನು.

ಈ ಶಬ್ದಶ್ರವಣದಿಂದ ಎಚ್ಚತ್ತ ಬ್ರಾಹ್ಮಣನು ನಾಲ್ಕುಕಡೆಯನ್ನೂ ನೋಡಿದನು. ಆರೂ ಇರಲಿಲ್ಲ; ಈ ವಾಣಿಯು ದೈವಿಕವೆಂದು ತಿಳಿದನು; ಬುತ್ತಿಯಿಟ್ಟಿದ್ದ ಸ್ಥಳಕ್ಕೆ ಬಂದು ನೋಡಿದನು; ಅಲ್ಲಿ ಸ್ವರ್ಣಪಾತ್ರೆಯೊಂದು ಇದ್ದಿತು; ಅದನ್ನು ಕಂಡು ಭಗವದ್ವಾಕ್ಯವು ನಿರ್ಧಾರವಾಯಿತು; ಅದನ್ನು ಕೈಯೆತ್ತಿ ತೆಗೆದುಕೊಂಡು, ಪರಮಾತ್ಮನನ್ನು ಸ್ತುತಿಸುತ್ತ ನಡೆತಂದು, ಸಾಯಂಕಾಲಕ್ಕೆ ಮನೆಯನ್ನು ಸೇರಿ, ನಡೆದ ವಿದ್ಯಮಾನವನ್ನು ಪತ್ನಿಗೆ ತಿಳಿಸಿದನು. “ದೇವರ ಮಹಿಮೆ ಅಪಾರವಾದುದು, ನಾಳೆ ಇಷ್ಟರೂ ನಿಷ್ಠರೂ ಆದ ಬ್ರಾಹ್ಮಣರನ್ನು ಭೋಜನಕ್ಕೆ ಬರಮಾಡಿ, ಈ ಪಾತ್ರೆಯನ್ನು ಪೂಜಿಸ

ಬೇಕೆಂದು” ಹೇಳಿದಳು. ಪತಿಯೂ ಅದನ್ನು ಸಂತೋಷದಿಂದೊಪ್ಪಿದನು. ಉಷಃಕಾಲದಲ್ಲೆದ್ದು ಮನೆಯನ್ನು ಗೋಮಯದಿಂದ ಸಾರಿಸಿ, ರಂಗವಲ್ಲಿಯಿಂದ ಅಲಂಕರಿಸಿ, ಮಡಿಯುಟ್ಟು ಶುಚಿರ್ಭೂತರಾಗಿ ದಂಪತಿಗಳು ಹೊರಟು ತಮ್ಮ ನಿಯಮದಂತೆ ಶಿಷ್ಟರಾದ ದಂಪತಿಗಳನ್ನು ಭೋಜನಕ್ಕೆ ಕರೆದು ಬಂದರು. ಮಧ್ಯಾಹ್ನಕಾಲಕ್ಕೆ ಭಕ್ತಿಭಾವದಿಂದ ದೇವರನ್ನೂ ದೇವರಿಂದ ಅನುಗ್ರಹಿಸಲ್ಪಟ್ಟ ಅಕ್ಷಯಪಾತ್ರೆಯನ್ನೂ ಪೂಜಿಸಿ, ‘ಸ್ವಾಮಿ, ಆಮಂತ್ರಿತರಾಗಿ ಬರುವ ಬ್ರಾಹ್ಮಣ ದಂಪತಿಗಳನ್ನು ಮತ್ತು ಇತರ ಆಬಾಲವೃದ್ಧರಾದಿಯಾದ ಅಭ್ಯಾಗತರನ್ನು ಇಷ್ಟವಾದ ಭಕ್ಷ್ಯಭೋಜ್ಯದಿಂದ ತೃಪ್ತಿಪಡಿಸಬೇಕು.” ಎಂದು ಪ್ರಾರ್ಥಿಸಿದರು. ಅಷ್ಟರಲ್ಲಿಯೇ ಕರೆಯಲ್ಪಟ್ಟವರೆಲ್ಲರೂ ಬಂದು ಸೇರಿದರು. ದೈವಪ್ರಸಾದಮಹಿಮೆಯಿಂದ ದಿವ್ಯದೇಹಿಗಳಾದ ಸ್ತ್ರೀ-ಪುರುಷರು ಸೊಂಟವನ್ನು ಕಟ್ಟಿ ಬಂದು, ಅಭ್ಯಾಗತರಾದ ಆಬಾಲವೃದ್ಧರನ್ನು ಉಪಚಾರದಿಂದ ಕುಳ್ಳಿರಿಸಿ, ಅವರವರ ಇಷ್ಟಗಳನ್ನು ತಿಳಿದು ಭಕ್ಷ್ಯಭೋಜ್ಯಾದಿಗಳನ್ನು ಬಡಿಸಿ, ಕಡೆಯ ವರೆಗೂ ಉಪಚಾರ ಹೇಳುತ್ತ ಸತ್ಕರಿಸಿದರು. ಬಂದಿದ್ದವರೆಲ್ಲರೂ ಮನೆಯ ಯಜಮಾನನ್ನು ಹರಿಸಿ, ಸಂತೋಷದಿಂದ ತೆರಳಿದರು. ಆ ನಂತರ ಮಕ್ಕಳೊಡನೆ ಸತಿಪತಿಯರೂ ಭೋಜನ ಮಾಡಿದರು. ಹೀಗೆಯೇ ಪ್ರತಿದಿನವೂ ಇವರು ಅಕ್ಷಯಪಾತ್ರೆಯಿಂದ ನಾಲ್ಕಾರು ಮಂದಿಯನ್ನಾದರೂ ಕರೆತಂದು ತೃಪ್ತಿಪಡಿಸುತ್ತಿದ್ದರು.

ಅನ್ನ-ಬಟ್ಟೆಗೆ ಅನುಕೂಲವಿಲ್ಲದಿದ್ದವರು ಈ ರೀತಿ ನಡೆಯಿಸಿದರೆ ನೆರಮನೆಯ ಧನಿಕನ ಪತ್ನಿಗೆ ಸಹನವಾದೀತೇ? ಅವಳು ಅನನ್ಯಭಾವದಿಂದ ನಿನ್ನನ್ನೇ ಮರೆಹೊಗುವುದೂ ನಿನ್ನನ್ನೇ ಧ್ಯಾನಿಸುವರಿಗೆ ನೀನು ಅವರಲ್ಲಿ ಸಾಕ್ಷಾತ್ಕರಿಸುವುದೂ ಸಹಜವೇ ಅಹುದಲ್ಲವೆ? ಮಾತ್ಸರ್ಯಮಹಾಶಯ! ನಿನ್ನ ಆವೇಶಬಲದಿಂದ ಧನಿಕನ ಪತ್ನಿಯು ಮೊದಲು ತಾನು ದುರ್ಲಕ್ಷ್ಯದಿಂದ ಕಾಣುತ್ತಿದ್ದ ಬಡಬ್ರಾಹ್ಮಣನ ಪತ್ನಿಯಲ್ಲಿ ಸ್ನೇಹವನ್ನು ಬಯಸಿ, ದಿನವೂ ಅವಳ ಮನೆಗೆ ಬಂದು ಹೋಗುತ್ತ ಅಂತರಂಗವನ್ನು ತಿಳಿಯಲು ಸಮಯವನ್ನು ನಿರೀಕ್ಷಿಸುತ್ತಿದ್ದಳು. ಒಂದು ದಿನ ಸಮಯವೂ ದೊರೆಯಿತು. ಅತ್ಯಂತ ದಾರಿದ್ರ್ಯಾವಸ್ಥೆಯಲ್ಲಿದ್ದವರಿಗೆ ಇಷ್ಟು ಸಂಪನ್ನತೆಯುಂಟಾಗಲು ಕಾರಣವೇನೆಂದು ಕೇಳಿದಳು. ನಿಷ್ಕಪಟಿಗಳಾದ ಸಾಧುಗಳನ್ನು ವಂಚಿಸುವುದು ಬಹುಸುಲಭವಷ್ಟೆ! ಕಪಟವನ್ನರಿಯದ ದರಿದ್ರ ಬ್ರಾಹ್ಮಣನ ಪತ್ನಿಯು ಅವರ ಮನೆಯಿಂದ ಅವಲಕ್ಕಿಯನ್ನು ತಂದುದು ಮೊದಲು ಅಂದಿನ ವರೆಗಿನ ವೃತ್ತಾಂತವೆಲ್ಲವನ್ನೂ ತಿಳಿಸಿದಳಲ್ಲದೆ, “ಅಮ್ಮಾ, ಈ ಭಾಗ್ಯವೆಲ್ಲವೂ ನಿನ್ನ ದಯೆಯಿಂದಲೇ ಲಭ್ಯವಾಯಿತು.” ಎಂದೂ ಉಪಚಾರೋಕ್ತಿಯನ್ನು ಹೇಳಿದಳು. ಅವಳ ಸ್ತುತಿಗೆ ಉಬ್ಬಿಹೋದ ಧನಿಕನ ಪತ್ನಿಯು ಸಂಭ್ರಮದಿಂದ ಮನೆಗೆ ಬಂದಳು; ಗಂಡನನ್ನು ಹೀಯಾಳಿಸಿ, ‘ನಮ್ಮ ಮನೆಯಲ್ಲಿ ಕೂಲಿಕೆಲಸಮಾಡಿ ತೆಗೆದುಕೊಂಡು ಹೋದ ಒಂದು ಸೇರು ಅವಲಕ್ಕಿಯಿಂದ ದರಿದ್ರನು ದೇವರನ್ನು ಒಲಿಸಿಕೊಂಡು ಬಂದನು. ಪ್ರತಿದಿನವೂ, ಬ್ರಾಹ್ಮಣರೂ ಮುತ್ತೈದೆಯರೂ ನೆರಮನೆಗೆ ಬಂದು ಸವಿಭೋಜನದಿಂದ ತೃಪ್ತರಾಗಿ ಸ್ತುತಿಸುತ್ತ ಹೋಗುವುದನ್ನು ನೋಡುತ್ತಲೂ ಕೇಳುತ್ತಲೂ ನಾನು ಸತ್ತವಳಂತೆ ಆಗಿರುವೆನು. ನಿಮಗೆ ನಾಚಿಕೆ ಎಳ್ಳಷ್ಟಾದರೂ ಇದೆಯೋ?’ ಎಂದಳು. ಧನಿಕನು, ಮೊದಲಿಂದಲೂ ನಿನ್ನ ಮತ್ತು ನಿನ್ನ ಅಣ್ಣಂದಿರ ಭೃತ್ಯನೇ ಆಗಿದ್ದನು. ಆದರ ಮೇಲೆ ಪತ್ನಿಯಿಂದ ಹೀಯಾಳಿಸಲ್ಪಟ್ಟ ಬಳಿಕ ಹೇಳುವುದೇನು? ಥಟ್ಟನೆ ಹೇಳಿದನು,— ‘ಇಷ್ಟೇಕೆ ಆಗ್ರಹಪಡುವೆ? ನಾನೇನು, ಕೈಯಲ್ಲಾಗದವನೆಂದು ತಿಳಿದಿರುವೆಯೊ? ಆ ದರಿದ್ರನಿಗಿಂತಲೂ ನಾನು ಕಡಮೆಯವನೊ? ಅವನೇನು ಮಾಡಿದನೆಂಬುದನ್ನಿಷ್ಟು ತಿಳಿಯ ಹೇಳು, ಅವನ ಹೆಂಡತಿ ಅವನಿಗೆ ಮಾಡಿಕೊಟ್ಟುದೇನೆಂಬುದನ್ನೂ ತಿಳಿದಿದ್ದರೆ ಹೇಳು, ಅವರಿಗಿಂತಲೂ ಹೆಚ್ಚಾಗಿಯೇ ನಾನು ಕಾರ್ಯವನ್ನು ಸಾಧಿಸಿಕೊಂಡು ಬರುವೆನೋ ಇಲ್ಲವೋ ಆ ಬಳಿಕ ನೀನೇ ನೋಡುವೆ” ಎಂದನು. ಹೆಂಡತಿಯು ಗಂಡನಿಗೆ ತಾನು ತಿಳಿದುಬಂದಿದ್ದುದೆಲ್ಲವನ್ನೂ ತಿಳಿಸಲು, ಅದಕ್ಕವನು, “ಹಾಗಿದ್ದರೆ ಪಾಥೇಯವು ಸಿದ್ಧವಾಗಲಿ, ಈ ದಿನ ಅರ್ಧರಾತ್ರಿಗೇ ಹೊರಡುವೆನು.” ಎಂದು ಹೇಳಿ ಮಲಗಿದನು. ಗಂಡನ ಮಾತನ್ನು ಕೇಳಿ ಹೆಂಡತಿಗೆ ತುಂಬಾ ಸಂತೋಷವಾಯಿತು. ಸಂಭ್ರಮದಿಂದ ಪಾಥೇಯವನ್ನು ಸಿದ್ಧಪಡಿಸಲು ಬಂದಳು. ದಿನವೂ ಇವಳು ಹುಳಿಯವಲಕ್ಕಿಯನ್ನು ಮಾಡುವ ಪದ್ಧತಿಯಿದ್ದುದರಿಂದ ಪಾಥೇಯಕ್ಕಾಗಿ ಹೆಚ್ಚಿಗೆ ಕೆಲಸವನ್ನೇನೂ ಮಾಡಬೇಕಾಗಲಿಲ್ಲ; ಮಾಡಿದ್ದುದೇ ಉಳಿದಿತ್ತು, ಅದನ್ನೇ ಅಡಕೆಯೆಲೆಯಲ್ಲಿ ಕಟ್ಟಿ, ಮಲಗಿದ್ದ ಗಂಡನ ತಲೆಯ ಕಡೆಯಲ್ಲಿಟ್ಟು ಮಲಗಿದಳು. ಧನಿಕನು ಎಚ್ಚರಿಕೆ ಹೊಂದಿದ ಕೂಡಲೇ ಎದ್ದು ಬುತ್ತಿಯನ್ನು ಬಗಲಿಗೆ ಹಾಕಿ, ಹೆಂಡತಿಗೂ ಹೇಳದೆ ಮನೆಯನ್ನು ಬಿಟ್ಟು ಹೊರಟನು. ಹೊರಹೊರಟವನು ಮಧ್ಯಾಹ್ನ ನಿರೀಕ್ಷಣೆಯಲ್ಲಿಯೇ ನಡೆಯುತ್ತಿದ್ದನು. ಮಧ್ಯಾಹ್ನವೂ ಆಯಿತು, ಒಂದು ಸರೋವರವೂ ಸಿಕ್ಕಿತು; ಒಂದೆಡೆ ತನ್ನ ಬುತ್ತಿಯನ್ನಿರಿಸಿ, ನೀರಿನಲ್ಲಿಳಿದು ಬುತ್ತಿಯಲ್ಲಿಯೇ ನೆಟ್ಟ ದೃಷ್ಟಿಯುಳ್ಳವನಾಗಿ ಜಪಮಾಡುವವನಂತೆ ಕುಳಿತನು. ಋಜುಮಾರ್ಗದಲ್ಲಿರುವ ಸಾಧುಗಳಿಗೆ ನಿನ್ನ ಭೃತ್ಯರ ಅಂತರಂಗವು ತಿಳಿಯದಾದರೂ

ಸರ್ವಾಂತರ್ಯಾಮಿಯಾದ ದೇವರಿಗೆ ಅಸಾಧ್ಯವೇ? ಅತನು, 'ಭಾವನೆಯೆಂತಹುದಂತೆ ಫಲಂಗಳ್' ಎಂಬ ವಾಕ್ಯವನ್ನು ನಿದರ್ಶನಪಡಿಸಲು ರೂಪಾಂತರದಿಂದ ಬಂದು, ಬುತ್ತಿಯಲ್ಲಿ ಒಂದು ಬಟ್ಟಲನ್ನಿಟ್ಟು, "ಮನೋಭಾವಕ್ಕೆ ತಕ್ಕ ಪ್ರತಿಫಲವು ದೊರಕುವುದು." ಎಂದು ಹೇಳಿ ಅದೃಶ್ಯನಾದನು. ಧನಿಕನು ಆ ನಿಮಿಷದಲ್ಲಿಯೇ ಎದ್ದು ಬುತ್ತಿಯ ಸ್ಥಳದಲ್ಲಿ ನೋಡಿದನು, ಬುತ್ತಿಯೂ ಇದ್ದಿತು; ಬಟ್ಟಲೂ ಇದ್ದಿತು. ಸಂತೋಷದಿಂದ ಬುತ್ತಿಯನ್ನು ತಿಂದನು. ಬಟ್ಟಲನ್ನು ಬಗಲಲ್ಲಿಟ್ಟು ಕೊಂಡು ಮನೆಗೆ ನಡೆತಂದನು. ನಡೆದ ವಿಷಯವನ್ನೆಲ್ಲಾ ಹೆಂಡತಿಯೊಡನೆ ಹೇಳಿ ಬಟ್ಟಲನ್ನು ಕೊಟ್ಟನು. ಹೆಂಡತಿಯ ಮಾತಿನಂತೆ ಆಗಲೆ ಬಟ್ಟಲನ್ನು ಪೂಜಿಸಿ ಪಕ್ವಾನ್ನ ಸಿದ್ಧವಾಗಲೆಂದನು. ಅವನ ಮನೆಯಲ್ಲಿ ಗಂಡಹೆಂಡಿರಿಬ್ಬರಲ್ಲದೆ ಮತ್ತಾರೂ ಇರಲಿಲ್ಲ. ಬಟ್ಟಲಿನ ಮಹಿಮೆಯಿಂದ ಒಬ್ಬರಿಗಿಬ್ಬರಂತೆ ಕತ್ತಿ ಮತ್ತು ಸೀರೆಯನ್ನು ಸಿದ್ಧಪಡಿಸಿ ಕೊಂಡು ಸಿದ್ಧರಾದರು. ಇವರ ಆಲಾಪವನ್ನು ಲಕ್ಷ್ಯಮಾಡದೆ ಹುಬ್ಬನ್ನು ಕೂಡ ಬಿಡದೆ ಕ್ಷೌರವನ್ನು ಮಾಡಿ ಬುರಿಯಾದರು. ನೆರೆಮನೆ ದಂಪತಿಗಳನ್ನೂ ಅಲ್ಲಿರುವ ಕೆಲವು ಗೃಹಸ್ಥರನ್ನೂ ಅವರ ಹೆಂಡಿರು ಮಕ್ಕಳನ್ನೂ ಒಂದುಕಡೆ ಬರಮಾಡಿ, ತಮ್ಮ ಬಟ್ಟಲಿನ ಮಹಿಮೆಯನ್ನೂ ಪ್ರದರ್ಶಿಸಿ, ಎಲ್ಲರನ್ನೂ ತೃಪ್ತಿಪಡಿಸಿ ಕಳುಹಬೇಕೆಂದು ನಿಶ್ಚಯಿಸಿಕೊಂಡು, ಮರುದಿನ ಉದಯವಾದ ಬಳಿಕ ತಮ್ಮ ಕೆಲಸದವರನ್ನು ಕಳುಹಿ ಆ ಅಗ್ರಹಾರ ನಿವಾಸಿಗಳಾದ ಸ್ತ್ರೀಪುರುಷರನ್ನು ೧೦ ಘಂಟೆಗೆ ಮನೆಗೆ ಬರುವಂತೆ ಆಮಂತ್ರಣವನ್ನು ಕಳುಹಿದರು. ಅದರಂತೆಯೇ ಎಲ್ಲರೂ ಬಂದರು. ಬಳಿಕ ಬೀದಿಯ ಬಾಗಿಲನ್ನು ಬಂದುಮಾಡಿ ಬಂದು ಬಟ್ಟಲನ್ನು ಪೂಜಿಸಿದನು. ಮೊದಲುದಿನದಂತೆ ಒಬ್ಬೊಬ್ಬರಿಗೂ ಇಬ್ಬಿಬ್ಬರಂತೆ ಜನರು ಕಾಣಿಸಿಕೊಂಡು, ಎಲ್ಲರಿಗೂ ಕ್ಷೌರಕರ್ಮವನ್ನು ಪೂರೈಸಿ ಮರೆಯಾದರು. ದರಿದ್ರ ಬ್ರಾಹ್ಮಣದಂಪತಿಗಳು ನಿಷ್ಕಾಮಂತರೂ ಪರಾನ್ನವನ್ನು ಮುಟ್ಟದವರೂ ಆಗಿದ್ದುದರಿಂದಲೂ ಧನಿಕನ ಮನೆಗೆ ಹಿಂದೆಯೆಂದೂ ಹೋದವರಲ್ಲವಾದುದರಿಂದಲೂ ಇಂದಿನ ಸತ್ಕಾರವನ್ನು ಪಡೆಯಲು ಅವರು ಬಂದಿರಲಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಮಾತ್ಸರ್ಯಮಹಾಶಯ! ಇದರಿಂದ ತಿಳಿದುದೇನು? ದರಿದ್ರಬ್ರಾಹ್ಮಣದಂಪತಿಗಳ ನಿರ್ಮಲಮನೋಭಾವವೂ ಅವರಿಗೆ ಲಭ್ಯವಾಗಿರುವ ಭಗವದನುಗ್ರಹವೂ ಆ ಅಗ್ರಹಾರವಾಸಿಗಳಿಗೆಲ್ಲಾ ಚನ್ನಾಗಿ ತಿಳಿದುದಲ್ಲದೆ, ಧನಿಕದಂಪತಿಗಳು ನಿನ್ನ ದಾಸಾನುದಾಸರೆಂಬುದೂ, ನಿನ್ನ ಪ್ರೇರಣೆಯಿಂದಲೇ ಅವರಿಂತು ನಡೆಯಿಸಿದರೆಂಬುದೂ, ನಿನ್ನ ಪ್ರತಾಪವು ಅದ್ಭುತವೂ, ನಿನ್ನ ಪ್ರಸಾದವು ಭಯಂಕರವೂ ಆಗಿರುವದೆಂಬುದೂ ಮುಂದಟ್ಟಾಗಿ, ನಿನ್ನ ಮತ್ತು ನಿನ್ನ ಭೃತ್ಯರ ಸ್ಮರಣೆಯು ಕೂಡ ತಮಗೆ ದೂರವಾಗಿರಬೇಕೆಂಬ ಭಾವನೆಯು ಎಲ್ಲರಿಗೂ ಉಂಟಾಯಿತು. ಇಷ್ಟೆಲ್ಲ ಏಕೆ? ಇರಲಿ, ಮತ್ತೊಂದು ಕಥೆಯನ್ನು-ನಾವು ಪ್ರತ್ಯಕ್ಷವಾಗಿ ನೋಡಿರುವ ಸಂಗತಿಯನ್ನು-ಇಲ್ಲಿ ಉದಹರಿಸಿ, ಈ ಕಲಿಕಾಲದಲ್ಲಿ ನೀನು ಮನೆಮನೆಯಲ್ಲಿಯೂ ವಾಸಮಾಡುತ್ತಿರುವೆಯೆಂದು ಹೇಳಿದ್ದ ನಮ್ಮ ಮಾತನ್ನು ಸತ್ಯವನ್ನಾಗಿ ಮಾಡಿಕೊಡುತ್ತೇವೆ.

ಪ್ರಸಿದ್ಧವಾದ ಒಂದು ಅಗ್ರಹಾರದಲ್ಲಿ (ಹೆಸರು ಹೇಳಲು ಇಷ್ಟವಿಲ್ಲದುದರಿಂದ ಇಲ್ಲಿ ಬರೆದಿಲ್ಲ.) ಒಂದು ಬಡತನದ ಚಿಕ್ಕ ಸಂಸಾರ; ಈ ಸಂಸಾರದಲ್ಲಿ ಪತಿವಿಹೀನೆಯಾದ ತಾಯಿ, ಗೃಹಸ್ಥನಾದ ಹಿರಿಯ ಮಗ, ಬ್ರಹ್ಮಚಾರಿಯಾಗಿ ವಿದ್ಯಾಭ್ಯಾಸ ಮಾಡುತ್ತಿರುವ ಮಗನೊಬ್ಬ, ವಿಧವೆಯಾದ ಮಗಳೊಬ್ಬಳು, ಗಂಡನ ಮನೆಯಲ್ಲಿ ಬಾಳುವ ಮಗಳೊಬ್ಬಳು, ಮನೆಗೆ ಬಂದ ಸೊಸೆ, ಇಂತಿಷ್ಟೇ ಮಂದಿಯಿದ್ದವರು. ಪರಸ್ಪರಾನುರಾಗಕ್ಕೆ ಪ್ರತಿಯಾಗಿ ಈ ಸಂಸಾರದಲ್ಲಿ ನಿನ್ನ ಮತ್ತು ನಿನ್ನ ೨—೩—೪ ನೆಯ ಅಣ್ಣಂದಿರ ಸಾಕ್ಷಾತ್ಕಾರವು ಮಾತ್ರ ಉಂಟಾಗಿದ್ದಿತೆಂದು ಹೇಳಬಹುದು. ಪತಿವಿಹೀನೆಯಾದ ಮಗಳು ತವರೋ ರಾಜ್ಯದಲ್ಲಿಯೇ ನರಳುತ್ತಿದ್ದಳು; ಮೇಲೆ ವೈಧವ್ಯಾಸುಖದಲ್ಲಿ ಕೊರಗುತ್ತಿದ್ದಳು. ಹೀಗಿರುವಲ್ಲಿ ಹೆರವರ ಮನೆಯಿಂದ ಬಂದ ಸೊಸೆಯು ಗಂಡನ ಕೂಡ, ಅವನಿಗೆ ಅನುಕೂಲಳಾಗಿದ್ದು ಸುಖಪಡುತ್ತಿದ್ದರೆ, ತಾಯಿಗೆ ಹೇಗೆ ತಾನೆ ದುಃಖವಾಗದಿದ್ದೀತು? ಸರಿಯ ಅತ್ತಿಗೆ (ಗಂಡನ ಅಕ್ಕ) ದುಃಖಪಡುತ್ತಿರುವಾಗ ನಾದಿನಿಯು ಸುಖಸಂತೋಷದಲ್ಲಿರಬೇಕೆ? ಅಕ್ಕನ ದುಃಖವನ್ನು ನೋಡಿಯೂ ತಮ್ಮನು ನಿಶ್ಚಿಂತನಾಗಿ ನಲಿಯುತ್ತಿರಬೇಕೆ? ಇದು ಹೆತ್ತತಾಯಿಗೆ ಸಹ್ಯವಾಗುವುದುಂಟೆ? ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲಿ ತಾಯಿಯ ಪ್ರೇಮವು ಸಹಜವಾದುದು. ಅದರಮೇಲೆ, ಮನೆತಪ್ಪಿ ಸಂಕಟಪಡುವ ಮಗಳ ವಿಷಯದಲ್ಲಿ ಸಂತಾಪಪಡುವದು ಅತಿಶಯವಲ್ಲ; ಆದರೆ ಹೊರಗಿನಿಂದ ಬಂದ ಹುಡುಗಿಯು ಹೇಗಿರಬೇಕು? ಬೆಲೆಗೆಕೊಂಡ ಗಾಣದ ಎತ್ತೇ ಆಗಬೇಕು! ಆ ಎತ್ತು ವಿರಾಮವಾಗಿ ಹುಲ್ಲು ತಿಂದು ಮೆಲುಕು ಹಾಕುತ್ತ ಮಲಗಿದರೆ ಕೊಂಡವನ ಮನಸ್ಸು ಹೇಗೆ ಸಹಿಸಬಹುದು! ಈ ತೆರದ ತಪ್ಪನ್ನೇ ಹುಡುಕುತ್ತ, ಸಿಟ್ಟಿಗೇಳುತ್ತ, ವಾಕ್ತಾಡನ, ಹಸ್ತತಾಡನದಿಂದ ಅತ್ತೆಯಾದವಳು ಸೊಸೆಯನ್ನು ದಿನವೂ ಉಪಚರಿಸುವುದಾದರೆ ಅದು ನಿನ್ನ ಪ್ರಭಾವವೆಂದೇ ಹೇಳಬೇಕಲ್ಲದೆ ಅತ್ತೆಯ ತಪ್ಪೆನ್ನಲಾಗದು! ಮತ್ತೂ, ಮಾತೃಭಕ್ತಿಯುಳ್ಳ ಮಗನು ಹೊರಗೆ ಸುತ್ತಿ ಅಲೆದು ಬಂದೊಡನೆ ಈ ತಾಯಿಯಾದವಳು ಮಗನಿಗೆ ಅವನ ಹೆಂಡತಿಯ

ದೋಷಗಳನ್ನು ಹೇಳುತ್ತ ಬಂದರೆ, ಎಷ್ಟೋ ತಾರತಮ್ಯಜ್ಞ ನೂ ಸಹನೆಯುಳ್ಳವನೂ ಆಗಿದ್ದರೂ ತಾಯಿಯ ಮೇಲಿನ ಗೌರವಬುದ್ಧಿಯು ಹೆಂಡತಿಯ ವಿಷಯದಲ್ಲಿ ನಿಷ್ಠುರವನ್ನೇ ತಾಳುವುದೂ ನಿನ್ನ ಪ್ರತಾಪದ ಫಲವಾಗಿದೆ. ಅತ್ತೆಯಿಂದ ಉಂಟಾದ ಮರ್ಯಾದೆಯ ಶೇಷವು ಗಂಡನಿಂದ ಪೂರ್ತಿಯಾಗಲೇ ಬೇಕು. ಇಷ್ಟಕ್ಕೇ ಮುಗಿಯಲಿಲ್ಲ, ಈ ಸಂದರ್ಭದಲ್ಲಿ ರೋಗದಲ್ಲಿದ್ದ ಪತಿವಿಹೀನೆಯಾದ ಮಗಳೂ ಸತ್ತ್ರಕಾಲದಲ್ಲೆಂತೂ ಸೊಸೆಯ ಸ್ಥಿತಿಯನ್ನು ಹೇಳುವದಾಗದು! ಪಾಪ, ಈ ತೊಡಗಾಲಿನ ಹುಡುಗಿ ಬಂದು ಶಾರದೆಯಂಥ ಮಗಳನ್ನು ಜವರಾಯನಿಗೆ ಕೊಟ್ಟಳಂತೆ! ಉರಿಮಾರಿಯು, ಮುಸ್ಸೋರೆಯ ಹುಡುಗಿ ಮನೆಯನ್ನು ಹಾಳುಮಾಡಲು ಬಂದಳೆಂಬುದೂ ಇಂಥವಳಿಂದ ತನ್ನ ಮನೆ ಉದ್ಧಾರವಾಗುವುದಿಲ್ಲವಾದುದರಿಂದ ಮಗನಿಗೆ ಇವಳನ್ನು ತಪ್ಪಿಸಿ, ಬೇರೊಬ್ಬಳನ್ನು ತಂದುಕೊಳ್ಳಬೇಕೆಂಬುದೂ ಅತ್ತೆಯ ಮನಸಿನಿಕೆಯಾಗಿದೆ. ಆದರೆ, ಮಾತ್ಸರ್ಯಮಹಾರಾಜ! ನೀನು ಸ್ವತಂತ್ರನೂ ಸ್ವೇಚ್ಛಾವಿಹಾರಿಯೂ ಅಹುದಷ್ಟೆ! ಈ ವರೆಗೆ ಅತ್ತೆಯಲ್ಲಿ ಮಾತ್ರವೇ ಇದ್ದು ನಿನಗೆ ಬೇಸರವಾಯಿತು, ಇನ್ನು ಸೊಸೆಯಲ್ಲಿಯೂ ಸ್ವಲ್ಪ ಸ್ವಲ್ಪವಾಗಿ ಪ್ರವೇಶಿಸಲು ತೊಡಗಿದೆ; ಮಾತೃಭಕ್ತನಾಗಿದ್ದ ಮಗನನ್ನು ನಿನ್ನ ೪—೫ ನೆಯ ಅಣ್ಣಂದಿರ ಮಂತ್ರಬಲದಿಂದ ಪತ್ನಿಯ ಕಡೆಗೆ ಒಲಿಸಿದೆ: ದಿನಕ್ರಮದಲ್ಲಿ, ಪತ್ನಿಗೆ ಅವನಿಂದ ಆಗುತ್ತಿದ್ದ ಮರ್ಯಾದೆಯು ಈಗ ತಾಯಿಗೂ ಪೂರ್ಣವಾಗುವಂತೆ ಮಾಡಿ— ಮಾಡುತ್ತಿರುವೆ; ಹೇಳುವುದೇನು? ನಿನ್ನ ಪ್ರತಾಪ-ಸಾಹಸಗಳಿಗೂ ನಿನ್ನ ಅಣ್ಣಂದಿರ ಪರಾಕ್ರಮಗಳಿಗೂ ಕೌತುಕಪಡುವುದೇ ಅಹುದಷ್ಟೆ!

ಅಯ್ಯ. ಮಹರಾಯ! ನೀನು ಹೆಂಗಸಿಗಾಗಲಿ, ಗಂಡಸಿಗಾಗಲಿ ಪ್ರಸನ್ನನಾದರೆ, ಅವರ ಆಚರಣೆಯೇ ವಿಜಾತೀಯವಾಗುವುದು! ಲಕ್ಷಣವಾಗಿಯೂ ಸುಖವಾಗಿಯೂ ಇರುವ ನೆರೆಯವರನ್ನೂ ಬೀದಿಯಲ್ಲಿ ತಿರುಗುವ ಹುಡುಗರನ್ನೂ ಪ್ರಿಯವಚನದಿಂದ ಕರೆತಂದು, ಮುತ್ತೈದೆಯರಾಗಿದ್ದವರಿಗೆ ಅರಿಸಿನ ಕುಂಕುಮವನ್ನು ಕೊಡುವ ನೆವದಲ್ಲಿ, ಬಾಲ್ಯದಿಂದ ಅಭ್ಯಾಸ ಮಾಡಿದ ವಶೀಕರಣ ಮದ್ದನ್ನು ಸೇರಿಸಿದ ಫಲ ಭಕ್ಷ್ಯ ಮೊದಲಾದುವನ್ನು ಹುಡುಗರಿಗೂ ಹಾಗೆಯೇ ಮುತ್ತೈದೆಯರಿಗೂ ಕೊಟ್ಟು, ಅವರ ಸರ್ವನಾಶವನ್ನು ಮನಸ್ಸಿನಲ್ಲಿ ಬಿದು ನೋಡಿ ಹಿಗ್ಗುವಂತೆ ಮಾಡುತ್ತಿರುವೆ.

ಇಷ್ಟು ಸಾಮಾನ್ಯಸಂಸಾರದ ವಿಚಾರವಾಯಿತು. ಇನ್ನು ರಾಜ್ಯಭಾರವನ್ನು ವಹಿಸಿರುವ ದೇಶಾಧಿಪತಿಗಳನ್ನಾದರೂ ನೀನು ಬಿಟ್ಟಿರುವೆಯಾ? ಮಾತ್ಸರ್ಯಮಹಾಶಯ! ಅವರನ್ನು ನೀನು ಸರ್ವಪ್ರಕಾರದಿಂದಲೂ ನಿನ್ನ ದಾಸಾನುದಾಸರನ್ನಾಗಿಯೇ ಮಾಡಿಕೊಂಡಿರುವೆ! ಇದಕ್ಕೆ ಈ ವರ್ತಮಾನದಲ್ಲಿ ನಡೆಯುತ್ತಿರುವ ಯುರೋಪ್‌ಖಂಡದ ಘನಘೋರ ಸಂಗ್ರಾಮವೇ ದೃಷ್ಟಾಂತವಾಗಿದೆಯಲ್ಲವೆ? ಈ ವರೆಗೆ ನಾಮಶೇಷಮಾತ್ರವಾದ ದುರ್ದಶೆಗಿಳಿದು ಕೊರಗುತ್ತಲಿರುವ ಬೆಲ್ಜಿಯಂ, ಸರ್ವಿಯಾ,ರೊಮೇನಿಯ, ರಷ್ಯಾ ಮೊದಲಾದ ದೇಶಗಳನ್ನೂ ಆ-ಆ ದೇಶೀಯರನ್ನೂ ನೋಡಿದರೆ, ಅರಿಗೆ ತಾನೆ ದುಃಖವಾಗದಿರುವುದು? ನೀನು ಆರಲ್ಲಿ ಬೇರೂರುವೆಯೋ ಅವರು, ತಾವು ನಾಶವಾದರೂ ಲಕ್ಷಕ್ಕೆ ತೆಗೆದುಕೊಳ್ಳದೆ, ಎರಡನೆಯವರಿಗೆ ಉಂಟಾಗುವ ಹಾನಿಯೇ ತನಗೆ ಸಂಭವಿಸುವ ಮೇಲ್ಮೆಯೆಂದು ಭಾವಿಸಿ ಮುಂದರಿಯುವರು. ಅವರ ಕೃತ್ಯವೆಲ್ಲವೂ ಆಸುರೀ ಕೃತ್ಯವೇ ಆಗುವುವು. ನೀರಿಗೆ ನೀರಾದ ವಸ್ತುವೇ ಮಿಳಿತವಾಗುವಂತೆ ನಿನ್ನ ಪ್ರಸನ್ನತೆಗೆ ಪಾತ್ರರಾದವರೇ ಪರಸ್ಪರ ಮಿಳಿತರಾಗುವುದು ಸ್ವಭಾವವು! ಅಂತಹವರಿಂದ ಸಹಿಸಲಸದಳವಾದ ವಿಪತ್ತು ಸಂಭವಿಸಿದರೂ ಋಜುಮಾರ್ಗದಲ್ಲಿ [illegible] ನಿನ್ನ ಭೃತ್ಯರಾದವರಿಗೆ ಮಾತ್ರ ಶರಣಾಗತರಾಗುವುದಿಲ್ಲ. ಧರ್ಮಕ್ಕೋಸ್ಕರ ಸರ್ವಸ್ವವನ್ನೂ ಸೂರೆಕೊಡುವುದಕ್ಕೆ ಕೂಡ ಹಿಂಜರಿಯಲಾರರೆಂದರೆ ಅತಿಶಯೋಕ್ತಿಯಲ್ಲ.

ಸಾಮಾನ್ಯವಾಗಿ ವಿಚಾರ ಮಾಡಿದರೆ, ಒಂದು ಸಣ್ಣ ಸಂಸಾರದಲ್ಲಿ ವಾಸಮಾಡುವ ನಾಲ್ಕಾರು ಮಂದಿ ಸ್ತ್ರೀಪುರುಷರಲ್ಲಿ ಕೂಡ, ಒಬ್ಬೊಬ್ಬರೂ ಒಂದೊಂದು ವಿಧವಾದ ಮನೋಭಾವವೂ ವೃತ್ತಿಯೂ ಉಳ್ಳವರಾಗಿರುವರು; ಅಂತಹದರಲ್ಲಿ ದೇಶದಲ್ಲಿರುವವರೆಲ್ಲರೂ ಒಂದೇ ವಿಧದ ಮನೋಭಾವ-ವೃತ್ತಿಗಳುಳ್ಳವರಾಗಿರುವರೆ? ಇಲ್ಲ. ತನ್ನ ಪೋಷ್ಯವರ್ಗಕ್ಕೆ ಸೇರಿದವರ ಕ್ಷೇಮಕ್ಕೋಸ್ಕರ ಯಜಮಾನನು ಒಬ್ಬೊಬ್ಬರಲ್ಲಿಯೂ ಕಾಲಾನುಗುಣ್ಯವಾಗಿ ದರ್ಪದಿಂದಲೂ ಕರುಣೆಯಿಂದಲೂ ನಡೆದಲ್ಲದೆ ಸಂಸಾರ ನಿರ್ವಹಣದಲ್ಲಿ ದಕ್ಷನೆನಿಸಲಾರನು! ಎಂದ ಮೇಲೆ ದೇಶಗಳನ್ನಾಳುವ ಚಕ್ರೇಶ್ವರನು ಒಂದೇ ವಿಧದಲ್ಲಿರಬೇಕೆಂಬುದು ಸಂಭವವಲ್ಲ; ಗೃಹಕೃತ್ಯನಿರ್ವಹದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಮಟ್ಟಿಗೆ ಸ್ವಾತಂತ್ರ್ಯವನ್ನೋ—ಅಥವಾ-ನಿರ್ಬಂಧವನ್ನೋ ಕೊಡಬೇಕೆಂಬುದು ಯಜಮಾನನಿಗೇ ಗೊತ್ತಿರುವುದು. ಸ್ವಾಭಾವಿಕವಾಗಿ ಪೋಷ್ಯವರ್ಗಕ್ಕೆ ಸೇರಿದ ಪ್ರತಿಯೊಬ್ಬನೂ ತಾನು ಸಮರ್ಥನೆಂದೇ ತಿಳಿಯುವನು. ಹಾಗೆ ಮಾಡಿದರೆ ಸಂಸಾರವು ಒಟ್ಟಾಗಿರುವುದೆ? ಪ್ರತಿಯೊಬ್ಬರೂ ತಾವು ಮಾಡುವುದು ಧರ್ಮಸ್ಥಾಪನೆಗೆಂದೇ ಹೇಳುವರಲ್ಲದೆ ಅಧರ್ಮವೆಂದು ಹೇಳುವುದಿಲ್ಲ; ಹಾಗೆ ತಿಳಿದೂ ಇಲ್ಲ; ತಿಳಿಯುವುದೂ

ಇಲ್ಲ. ಅವರು ಹೇಗಿದ್ದರೂ ವಿಚಾರಪರರು; ತಿಳಿದೇ ತಿಳಿಯುವರು. ನಮ್ಮ ಆರ್ಯರು ಪ್ರಮಾಣಗ್ರಂಥವೆಂದೂ ಪುಣ್ಯಕಥೆಯೆಂದೂ ಭಾವಿಸುವ ರಾಮಾಯಣದಲ್ಲಿ, ವಿಭೀಷಣನು ರಾವಣನಿಗೆ ವಿವೇಕವನ್ನು ಹೇಳುವಾಗ— ಕೃತಯುಗದಲ್ಲಿ ಧರ್ಮವು ಅಧರ್ಮವನ್ನು ನುಂಗುವುದೆಂದೂ, ತ್ರೇತಾ ಮೊದಲಾದ ಇತರ ಯುಗಗಳಲ್ಲಿ ಅಧರ್ಮವು ಧರ್ಮವನ್ನು ನುಂಗುವುದೆಂದೂ, ನೀನು ಎಷ್ಟೋ ಯಜ್ಞಯಾಗ, ಜಪತಪ, ದಾನಧರ್ಮಗಳನ್ನು ಮಾಡಿರುವೆ; ಕೃತಿಯಲ್ಲಿ ಈ ಧರ್ಮವು ನಿನ್ನಿಂದ ಆಚರಿಸಲ್ಪಟ್ಟ ಅಧರ್ಮವನ್ನು ನುಂಗಿತು;— ಈಗ ತ್ರೇತೆಯಾದುದರಿಂದ ನಿನ್ನಿಂದ ಆಚರಿಸಲ್ಪಟ್ಟ— ಸೀತಾಪಹರಣರೂಪವಾದ ಅಧರ್ಮವು ನಿನ್ನ ಧರ್ಮವೆಲ್ಲವನ್ನೂ ನುಂಗಿಬಿಡುವುದು—ಎಂದು ತಿಳಿಸಿದನು. ಆ ಕಾಲದಲ್ಲಿ ರಾವಣನಿಗೆ ಅದು ನಿಜವೆಂದು ತಿಳಿದು ಬರದಿದ್ದರೂ ಅದರ ಫಲವನ್ನು ರಾವಣನೇನೋ ಅನುಭವಿಸಿದನು. ಈ ಘೋರ ಸಂಗ್ರಾಮದ ಪರ್ಯವಸಾನವು ಕೂಡ ಅಂತಹದೇ ಆಗುವುದರಲ್ಲಿ ಸಂಶಯವಿಲ್ಲ. ಆದುದರಿಂದ, ಎಲೈ ಬಲಗರ್ವಿತನಾದ ಮಾತ್ಸರ್ಯನೇ! ಪರಿಣಾಮದಲ್ಲಿ ನಿನ್ನ ಭಕ್ತರೇ ಜಯಿಸುವರೆಂದು ಮಾತ್ರ ಹಿಗ್ಗದಿರು; ನಿನ್ನ ಭಕ್ತರಿಗೆ ಕಾಲಬಲದಿಂದ ಮೊದಮೊದಲು ಜಯವಾಗುವುದೆಂದು ತೋರಿಬಂದರೂ ದೈವಬಲದಿಂದ ಅದು ಪರಾಜಯಹೊಂದಿ ಕಡೆಗೆ ನಿನ್ನ ಭೃತ್ಯರೂ ನಾಶಹೊಂದಿ, ನಿನ್ನ ಪ್ರತಾಪವೂ ಧಿಕ್ಕಾರಯೋಗ್ಯವೇ ಆಗುವುದು! ಇರಲಿ. ಪ್ರಕೃತದಲ್ಲಿ, ಮತ್ತೊಂದು ದೃಷ್ಟಾಂತದಿಂದ ಪ್ರಸ್ತುತದ ನಿನ್ನ ಪ್ರತಾಪವರ್ಣನೆಯನ್ನು ಮಾಡಿ ಆ ಬಳಿಕ ಪರಿಣಾಮವನ್ನು ವಿಲಿಖಿಸುವೆನು.

ಪ್ರಸ್ತುತದಲ್ಲಿ,-ವಾಚನಾಭಿರುಚಿಯನ್ನುಂಟುಮಾಡಿ ದೇಶವಿದೇಶಗಳ ವರ್ತಮಾನವನ್ನು ತಿಳಿಯುವಂತೆ ಮಾಡಿ, ಪ್ರಾಚೀನ-ಅರ್ವಾಚೀನರಾದ ಮಹನೀಯರ ಆದರ್ಶಯೋಗ್ಯಗಳಾದ ಆಚಾರ ವಿಚಾರಗಳನ್ನು ತಿಳಿದು, ತಮ್ಮ ತಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳುವಂತೆ ಮಾಡುವುದೇ ಪತ್ರಕರ್ತರ ಕರ್ತವ್ಯವಾಗಿಯೂ, ಈ ಕರ್ತವ್ಯವನ್ನು ನಡೆಯಿಸುವವರೇ ಲೋಕಕ್ಕೆ ಹಿತೈಷಿಗಳೂ ಉಪಕಾರಿಗಳೂ ಆಗುವರೆಂಬುವುದೂ ನಿರ್ವಿವಾದದ ಮಾತಾಗಿದೆ. ಆದುದರಿಂದಲೇ ಸರ್ಕಾರದವರು ಕೂಡ ವೃತ್ತಪತ್ರಪ್ರಚಾರಕ್ಕೆ ಅವಕಾಶವನ್ನು ಕೊಟ್ಟು ಸಂದರ್ಭಾನುಸಾರ ಪ್ರೋತ್ಸಾಹಿಸುತ್ತ ಬಂದಿರುವರು. ಈ ವೃತ್ತಪತ್ರಕಾರರು ತಾವೂ ಸರ್ಕಾರದವರ ವ್ಯವಸ್ಥೆಗಳನ್ನು ಪ್ರಚಾರಪಡಿಸುತ್ತಲೂ, ತಮ್ಮ ವಿಚಾರಸರಣಿಯಿಂದ ಮೇಲೆ ಹೇಳಿದ ತಮ್ಮ ಪಾಲಿನ ಕರ್ತವ್ಯವನ್ನು ಸಾಧ್ಯವಾದಂತೆ ನಡೆಯಿಸುತ್ತಲೂ ಬರುತ್ತಿರುವರು. ಅಯ್ಯಾ, ಮಾತ್ಸರ್ಯಮಹಾಶಯ! ಈ ರೀತಿಯಾಗಿ ದೇಶೋನ್ನತಿಯೇ ಮುಖ್ಯ ಗುರಿಯಾಗಿಟ್ಟಿರುವ ಪತ್ರಕರ್ತರಲ್ಲಿಯಾದರೂ ನೀನು ಇಲ್ಲವೆಂದು ಭಾವಿಸುವಂತಿಲ್ಲ; ಹಾಗೆ ಅವರಲ್ಲಿ ನಿನ್ನ ಪ್ರವರ್ತನೆಯಿಲ್ಲವಾದರೆ ನಿಜವಾಗಿಯೂ ಅವರೆಲ್ಲರೂ ದೇಶಸೇವಕರಾದಾರು! ಅವರನ್ನು ಕೂಡ ನೀನು ನಿನ್ನ ದಾಸಾನುದಾಸರನ್ನಾಗಿ ಮಾಡಿಕೊಳ್ಳುವುದರಲ್ಲಿರುವೆ. ಅವರು ನಿನ್ನ ಉಪಾಸಕರಾದರೆ, ಮತ್ತೊಬ್ಬರ ವೃದ್ಧಿಯು ಶೂಲಪ್ರಾಯವೇ ಆಗುವುದು. ಅಂತಹವರು ತಮ್ಮ ವೃತ್ತಪತ್ರದಲ್ಲಿ ತಮ್ಮ ಸ್ವಭಾವ ಉದ್ದೇಶಗಳನ್ನು ಪ್ರಚುರಪಡಿಸುವುದಕ್ಕೆ ಮಾತ್ರ ಆದೀತೇ ಹೊರತು, ಇತರ ಪತ್ರಕರ್ತರನ್ನಾಗಲಿ ದೇಶಹಿತೈಷಿಗಳನ್ನಾಗಲಿ ಮೂಲೋತ್ಪಾಟನ ಮಾಡುವುದಕ್ಕಾಗಲಾರದು. ಆದರೂ ಇವರು, ನಿರ್ದೋಷಿಗಳೂ, ನಿಷ್ಕಪಟಿಗಳೂ, ನಿರಲಸರೂ, ನಿಸ್ಪೃಹರೂ ಆದ ದೇಶಸೇವಕರಲ್ಲಿ ಇಲ್ಲದ ಸಲ್ಲದ ದೋಷಗಳನ್ನು ಕಲ್ಪಿಸಿ, ಪ್ರಚುರಪಡಿಸಿ, ತಮ್ಮ ಕಾರ್ಯ, ಮನಸ್ಸು, ಲೇಖನಿಗಳನ್ನು ಕಲುಷಿತಗಳನ್ನಾಗಿ ಮಾಡಿಕೊಳ್ಳುತ್ತಿರುವರು. ಅವರ ಮೇಲೆ, ತಮ್ಮಂತೆಯೇ—ತಮ್ಮಷ್ಟೇ—ಸ್ವತಂತ್ರರೂ ಶಕ್ತರೂ ಆದ ಪತ್ರಕರ್ತರನ್ನು ಅವಾಚ್ಯವೂ ಅಶ್ಲೀಲವೂ ಆದ ವಾಗಾಡಂಬರಗಳಿಂದ ದೂಷಿಸಿ, ತಮ್ಮ ಪತ್ರವನ್ನೇ ಹೊಲಗೆಡಿಸಿಕೊಳ್ಳುವರು. ಅಂತಹ ನಿನ್ನ ಭೃತ್ಯರಾಗುತ್ತಿರುವ ಪತ್ರಕರ್ತರನ್ನೂ ಅವರ ಅಸಂಬದ್ಧವಾದ ಅಭಿಪ್ರಾಯಗಳನ್ನೂ ದೇಶೀಯರೂ ದೇಶೋದ್ಧಾರಕರೂ ಅನುಮೋದಿಸದೆ,—ಗಣನೆಗೆ ತಾರದೆ,— ಅವರ ದೂಷಣೆಯೇ ಭೂಷಣವಾಗಿ ಪರಿಣಮಿಸುವಂತೆ ಇತರರಿಗೆ ಪ್ರೋತ್ಸಾಹಕರಾಗಿ ನಿಂತರೆ,—ಮಾತ್ಸರ್ಯನೆ!-ಆಗ ನಿನ್ನ ಭಕ್ತನಿಗೆ ಹೇಗೆ ತಾನೆ ಮನಶ್ಶಾಂತಿಯುಂಟಾದೀತು? ಮನೋವೈಕುಲ್ಯದಿಂದ ಬುದ್ಧಿಮಾಂದ್ಯವೂ ವಿಚಾರಶಕ್ತಿಕ್ಷೀಣತೆಯೂ ಉಂಟಾಗಿ, ನಿನ್ನ ಪ್ರತಾಪವು ಅವರ ಮೇಲೆ ಹೆಚ್ಚಾಗುತ್ತ ಬಂದಂತೆಲ್ಲ ಅದೊಂದು ಸನ್ನಿಪಾತರೋಗವೇ ಆಗಿ ಪರಿಣಮಿಸುವುದು. ಈ ರೋಗವು ಪ್ರಾರಂಭದಲ್ಲಿ ಸ್ಪಷ್ಟವಾಗಿ ಗೊತ್ತಾಗದೆ ನೋಡುವವರಿಗೆ ಉತ್ಸಾಹಕರವಾಗಿ ತೋರಿದರೂ ಪರ್ಯವಸಾನಕಾಲದಲ್ಲಿ ಪ್ರಾಣಾಪಾಯಕರವೇ ಆಗುವಂತೆ ನಿನ್ನ ಕೃಪಾಪಾತ್ರರಾದವರ ಸ್ಥಿತಿಯೂ ದಿನಕ್ರಮದಲ್ಲಿ ಆಗುವುದು.

ಅಯ್ಯಾ, ಮಾತ್ಸರ್ಯ! ಇಷ್ಟಕ್ಕೆ ನಿನ್ನ ಪ್ರತಾಪವರ್ಣನವು ಸಾಕು; ಇಷ್ಟರಿಂದಲೇ ನೀನು ಹಿಗ್ಗಿಹಿಗ್ಗಿ ಕುಣಿಯುತ್ತಿರುವೆ; ಇನ್ನೂ ಮುಂದೆ ವರ್ಣಿಸುತ್ತ ಬಂದರೆ ನಿನ್ನೀ ಸಂತೋಷಾತಿಶಯದಿಂದ ನಿನಗೆ ವಿಪತ್ತುಂಟಾಗಬಹುದು; ಅಷ್ಟಕ್ಕೆ ಅವಕಾಶಕೊಡಲು ನಮ್ಮ ಮನಸ್ಸೊಪ್ಪುವುದಿಲ್ಲವಾ

ದುದರಿಂದ ಪ್ರತಾಪವರ್ಣನೆಯನ್ನು ಸಾಕುಮಾಡಿ, ನಿನ್ನೀ ವರೆಗಿನ ಪ್ರತಾಪಗಳ ಪರಿಣಾಮಗಳನ್ನು ಒಂದೆರಡು ಮಾತಿನಲ್ಲಿ ಇಲ್ಲಿ ಪ್ರಸ್ತಾಪಿಸಿ, ಅದರಿಂದ ನಿನ್ನ ಆನಂದಾತಿಶಯವನ್ನು ಸಂಕೋಚಪಡಿಸುವುದು ನಮ್ಮ ಈಗಿನ ಕರ್ತವ್ಯವು.

ಹಿಂದೆ, ಉದಾಹೃತರಾದ ಧ್ರುವ, ನಳ, ಶಕುನಿ ಮೊದಲಾದವರು ನಿನ್ನ ಪ್ರತಾಪದಿಂದ ಮೊದಲು ಕಷ್ಟಪಟ್ಟರಾದರೂ ಅದರಿಂದ ನಿನಗಾದ ಫಲವನ್ನು ವಿವರಿಸುವೆನು, ಕೇಳು.—

೧. ಧ್ರುವರಾಯನೂ ಆತನ ತಾಯಿಯಾದ ಸುನೀತೆಯೂ ಭಗವದನುಗ್ರಹಕ್ಕೆ ಪಾತ್ರರಾಗಿ ಉತ್ತಮೋತ್ತಮ ಪದವಿಯನ್ನು ಪಡೆದರು. ಅವರ ಕೀರ್ತಿಯು ಆಚಂದ್ರಾರ್ಕಸ್ಥಾಯಿಯಾಗಿ ಪ್ರಕಾಶಿಸುವಂತಾಯಿತು. ನಿನ್ನ ಭೃತ್ಯಳಾದ ಸುರುಚಿಯು ಪತಿಯ ತಿರಸ್ಕಾರ, ಜನನಿಂದೆಗಳಿಗೆ ಗುರಿಯಾಗಬೇಕಾಯಿತು.

೨. ನಿನ್ನಿಂದ ಪ್ರೇರಿತನಾಗಿ ನಳಮಹಾರಾಜನನ್ನು ವಿಧವಿಧವಾಗಿ ಭಂಗಿಸಿದ ಕಲಿಪುರುಷನು ಕೊನೆಗೆ ನಳನಿಗೆ ವಿಧೇಯನಾಗಿ ಆತನಲ್ಲಿ ಕ್ಷಮೆಯನ್ನು ಬೇಡಿದನು. ನಳಮಹಾರಾಜನಾದರೋ ಪುಣ್ಯಶ್ಲೋಕನೆನಿಸಿ ಕಲ್ಪಾಂತದ ವರೆಗೆ ನಿಲ್ಲುವ ಯಶಸ್ಸನ್ನು ಸಂಪಾದಿಸಿದನು.

೩. ಕೈಕೇಯಿಗೆ ಬೋಧಿಸಿದ ಮಂಥರೆಯು ಶತ್ರುಘ್ನನ ಕಯ್ಗೆ ಸಿಕ್ಕಿ ಪ್ರಾಣದಾನವನ್ನು ಬೇಡುತ್ತ ಸಂಕಟಪಡುತ್ತಿದ್ದ ವೇಳೆ ನೋಡಿದವರಾರಿಗಾದರೂ ಪರಿತಾಪವುಂಟಾಗದಿರಲಿಲ್ಲ. ಪ್ರಾಣಾಂತಶಿಕ್ಷೆಯಿಂದ ಅವಳ ಘೋರಪಾತಕಕ್ಕೆ ಪ್ರಾಯಶ್ಚಿತ್ತವನ್ನುಂಟುಮಾಡಬೇಕೆಂದಿದ್ದ ಭರತಶತ್ರುಘ್ನರು, ಶ್ರೀರಾಮನಿಗೆ ಅಸಮಾಧಾನವುಂಟಾಗಿ, ಈ ಅಪರಾಧದಿಂದ ತಾವು ತಿರಸ್ಕೃತರಾದೇವೆಂಬ ಭೀತಿಯಿಂದ ತಾವಾಗಿಯೇ ಅವಳನ್ನು ಪ್ರಾಣದಿಂದ ಬಿಟ್ಟುಕೊಟ್ಟರು.

೪. ಸೋದರಮಾವಂದಿರೆಂಬ ಗೌರವವೂ ಕನಿಕರವೂ ಇಲ್ಲದೆ ದುಷ್ಕೃತ್ಯದಲ್ಲಿ ಪ್ರವರ್ತಿಸಿದ ಕೌರವನು ದುರ್ಯಶಕ್ಕೆ ಪಾತ್ರನಾದನು; ಮತ್ತು ಪಾಂಡವರಲ್ಲಿ ದ್ರೋಹವನ್ನೆಣಿಸಿದುದಕ್ಕೋಸ್ಕರ ತಮ್ಮಂದಿರೊಡನೆ ರಣಭೂಮಿಯಲ್ಲಿ ಪ್ರಾಣಬಿಟ್ಟನು. ಪಾಂಡವರಾದರೋ ಅರಣ್ಯದಲ್ಲಿದ್ದ ವೇಳೆ ಮಹನೀಯರಾದ ಋಷಿಸಮೂಹದಿಂದ ಕೂಡಿ ಆನಂದದಲ್ಲಿಯೇ ಇದ್ದರು. ಮತ್ತೆ ತಮ್ಮ ಸದ್ವರ್ತನಕ್ಕೆ ಅನುಗುಣವಾಗಿ ಭಗವತ್ಕೃಪಾಪಾತ್ರರಾಗಿ ವಿಜಯವನ್ನು ಹೊಂದಿ ದಿಗಂತ ವಿಶ್ರಾಂತವಾದ ಯಶಸ್ಸನ್ನು ಪಡೆಯುವವರಾದರು.

ಆದುದರಿಂದ, ಎಲೈ ದುರಭಿಮಾನಪೂರ್ಣನಾದ ಮಾತ್ಸರ್ಯನೆ! ನಾನೇ ಅಜೇಯನೆಂದೂ ಅವಧ್ಯನೆಂದೂ ಸರ್ವತಂತ್ರ ಸ್ವತಂತ್ರನೆಂದೂ ಬೀಗಿ ಬಿರಿದು ಹೋಗದೆ, ನೀನು ಆದಿಯಿಂದ ಎಲ್ಲೆಲ್ಲಿ ನಿನ್ನ ಪ್ರತಾಪವನ್ನು ತೋರಿಸಿರುವೆಯೋ—ಅಲ್ಲೆಲ್ಲಾ ನಿನಗಾದ ಪರಿಣಾಮವನ್ನು ನೆನಪಿಗೆ ತೆಗೆದುಕೊಂಡು ನಿನ್ನ ಮುಂದಿನ ಕಾಲವನ್ನಾದರೂ ಸದ್ವಿನಿಯೋಗ ಮಾಡು. ಕಾಲವು ಸ್ವತಂತ್ರವಾದುದು; ಅದನ್ನು ಯಾರೂ ತಡೆದು ನಿಲ್ಲಿಸುವವರಿಲ್ಲ; ಆ ಕಾಲವೇ ಎಲ್ಲರನ್ನೂ ಆಳುತ್ತಿರುವುದೆಂದರೆ ಸುಳ್ಳಲ್ಲ; ಸಮಸ್ತ ಪ್ರಾಣಿಗಳೂ ಈ ಕಾಲಪುರುಷನ ಆಜ್ಞೆಗೆ ಬದ್ಧರಾಗಿಯೇ ಇರುವರು; ಈ ಕಾಲವು ಚಕ್ರದಂತೆ ಸುತ್ತುತ್ತಿದ್ದು, ನಾವು ನೋಡುವಂತೆಯೇ ನಮ್ಮ ಆಯುಷ್ಯವನ್ನು ಸವೆಯಿಸುತ್ತಿರುವುದು. ಹುಟ್ಟಿದ ಪ್ರಾಣಿಗೆ ಮರಣವು ಸಿದ್ಧವೆಂಬುದು ನಿಜವಾದರೂ ಹುಟ್ಟಿ, ಕೇವಲ ಮದಮಾತ್ಸರ್ಯಗಳಿಂದ ತಿಂದುತೇಗಿ ಲೋಕಕಂಟಕನಾಗಿದ್ದು ಸಾಯಬೇಕೆಂದು ಭಗವಂತನು ಮಾನವನನ್ನು ಸೃಷ್ಟಿಸಿಲ್ಲ; ಕರಚರಣಾದ್ಯವಯವಗಳನ್ನೂ ಬುದ್ಧಿ, ಮೇಧಾ, ಜ್ಞಾನಗಳೇ ಮೊದಲಾದ ಜ್ಞಾನೇಂದ್ರಿಯಗಳನ್ನೂ ಪಡೆದ ಈತನು ನಿರ್ವಂಚನೆಯಿಂದ ತನ್ನ ಆಶ್ರಿತವರ್ಗಕ್ಕೂ ಇತರರಿಗೂ ಸಹಾಯಕನೂ ಹಿತೈಷಿಯೂ ಆಗಿದ್ದು ಕೀರ್ತಿಯನ್ನು ಗಳಿಸಿ ಅನಂತರ ಕಾಲದಲ್ಲಿ ಲೀನನಾಗುವುದೇ ಭಗವಂತನ ಸೃಷ್ಟ್ಯುದ್ದೇಶವು, ಹೀಗೆ ಸದಸದ್ವಿಚಾರಯುಕ್ತನಾಗಿ ಸದ್ಭಾವನೆಯುಳ್ಳವನೇ ನಿರಂತರ ಸುಖ-ಸಂತೋಷಗಳಿಗೆ ಭಾಜನನಾಗುವನೇ ಹೊರತು, ನಿನ್ನ ಭೃತ್ಯನಾಗಿ ಉನ್ನತಿಗೆ ಬರುವೆನೆಂದು ನಂಬಿರುವವನು ಸ್ವಪ್ನದಲ್ಲಿಯೂ ಸುಖದ ಆಶೆಯನ್ನು ಹೊಂದಲವಕಾಶಕಾಣದೆ, ಮನಸ್ಸಮಾಧಾನದ ಹೆಸರನ್ನಾದರೂ ಕೇಳಲಾರದೆ, ತನ್ನಲ್ಲಿ ತನಗೆ ಉಂಟಾಗುವ ಸಂಶಯದಿಂದಲೂ ಅನ್ಯರ ಅಭ್ಯುದಯವನ್ನು ನೋಡಿ ತನಗಾಗಲಿಲ್ಲವೆಂಬ ಹೃತ್ತಾಪದಿಂದಲೂ ಪರವಶನಾಗಿ ಸರ್ವಪ್ರಕಾರದಿಂದಲೂ ಸದ್ಭಾವನಾಯೋಗದಿಂದ ಉನ್ನತಿಯಲ್ಲಿರುವವರನ್ನು ಕೆಡಿಸಬೇಕೆಂದು ಪ್ರಯತ್ನಪಟ್ಟು ತನ್ನ ಇಹಲೋಕದ ಸುಖ-ವೈಭವಗಳನ್ನೂ ತಾನೇ ಕೆಡಿಸಿಕೊಂಡು, ದುಷ್ಕೃತ್ಯದ ಫಲವಾಗಿ ಅಪಕೀರ್ತಿಗೂ ಘೋರನರಕಕ್ಕೂ ಭಾಜನನಾಗುವನು. ಈ ವಿಷಯವು ನಿನಗೆ ಸೃಷ್ಟ್ಯಾದಿಯಿಂದ ಅನುಭವಕ್ಕೆ ಬಂದಿದ್ದರೂ, ಎಲೈ ಮಾತ್ಸರ್ಯನೆ, ನಿನಗೆ ನಾಚಿಕೆಯಾಗದೆ, ಮತ್ತೆ ಮತ್ತೆಯೂ ಜನರನ್ನು ನಿನ್ನ ಭೃತ್ಯರನ್ನಾಗಿ ಮಾಡಿಕೊಳ್ಳುವಿಯಲ್ಲವೆ? ಇಷ್ಟಾದರೂ ನಿನಗೆ ಪಶ್ಚಾತ್ತಾಪವಾಗದಿರುವುದಕ್ಕೆ ಕಾರಣವೇನು? ಅಪಕೀರ್ತಿಯು ನಿನ್ನನ್ನು ಸೋಂಕುವುದಿಲ್ಲವೆಂದೇ? ಇರಬಹುದು! ಹಾಗಾಗಲು ನಿನಗೆ ದೈವಪ್ರಸಾದವೇನಾದರೂ ಉಂಟೋ?

ಆಹಾ, ಗೊತ್ತಾಯಿತು, ಪ್ರಾಣಿಗಳಿಗೆ ಮೃತ್ಯುವಿನಿಂದಲೇ ಮರಣವುಂಟಾದರೂ ಅಪವಾದವು ಮೃತ್ಯುವನ್ನು ಹೊಂದದೆ ಬೇರೆ ಬೇರೆ ಕಾರಣಗಳಿಗೆ ಬರುವಂತೆ ಬ್ರಹ್ಮದೇವರಲ್ಲಿ ವರವನ್ನೂ ಪಡೆದಿರುವೆಯಾಗಿದ್ದೀತು! ಹಾಗೂ ಆಗಲಿ, ಮಾತ್ಸರ್ಯಮಹಾರಾಜ, ನಿನ್ನಲ್ಲಿ ನನ್ನ ನಮ್ರಪ್ರಾರ್ಥನೆಯೇನೆಂದರೆ ಇಷ್ಟೆ!—

ದೈವನ್ಯಸ್ತಭರರಾಗಿಯೂ ಕರ್ತವ್ಯನಿರತರಾಗಿಯೂ ಕಾಲಕಾಲಕ್ಕೆ ತಮಗೊದಗುವ ವಿಘ್ನಗಳನ್ನು ಧೈರ್ಯದಿಂದ ನಿವಾರಿಸಿ ಕರ್ತವ್ಯದಲ್ಲಿ ಜಾಗ್ರತರಾಗಿರುವ ಧೀರರಾದವರಿಗೆ ನೀನು ಅನುಕೂಲನಾಗಿದ್ದು, ನಿತ್ಯಾನಂದ ಸುಖಾನುಭವಕ್ಕೆ ವಿಘ್ನಗಳಾಗಿಬರುವ ದುರ್ವ್ಯಸನಗಳ ವಿಷಯದಲ್ಲಿ ಮಾತ್ರ ನಿನ್ನ ಪ್ರತಾಪವನ್ನು ತೋರಿಸಿ, ಆ ಮೂಲಕ ಜಗತ್ತಿನಲ್ಲೆಲ್ಲಾ ಶಾಂತಿ, ಧೃತಿ, ಸಂತೋಷಗಳೆಂಬ ತ್ರಿವಿಧ ಸಂಪತ್ತುಗಳು ಅಭಿವರ್ಧಿಸುವಂತೆ ಮಾಡಬೇಕೆಂದೂ ಹೀಗೆ ನೀನು ಮಾಡುವವನಾದರೆ, ನಿರಂತರವೂ ನಿನಗೆ ನಮ್ಮ ಧನ್ಯವಾದಗಳು ಅರ್ಪಿಸಲ್ಪಡುವವೆಂದೂ ನಿವೇದಿಸಿ, ನಿನ್ನೀ ಮಹಿಮಾವರ್ಣನಪರವಾದ ದೀರ್ಘಲೇಖನಕ್ಕೆ ವಿರಾಮವನ್ನುಂಟುಮಾಡಿ, ಲೇಖನಿಯನ್ನು ಕೆಳಗಿಡುವೆವು. (ತಥಾಸ್ತು! ತಥಾಸ್ತು!! ತಥಾಸ್ತು!!!)

ಸಮಸ್ತ ಸನ್ಮಂಗಳಾನಿ ಭವಂತು !

ವೃತ್ತಮಣಿ ವೆಂಕಟಕೃಷ್ಣಯ್ಯಂಗಾರ್.

ರಾಗ (ಯಮುನಾಪಿ ದೃಷ್ಟಿ ಕೆಂಡ)

ಪಾರಿಯೊಳ್ಳೇದಾಗಿರಬೇಕು । ಹರಿದಾಸರಂದದಲೇ || ಪಾರಿ || ಪ ||
ಯಾರೇನೆಂದರು ನರ— ಯಾವ ಕಾಲದಲ್ಲಿಯೂ ।
ಪಾರವಿಲ್ಲದಂಥ ಈ ಸಂಸಾರ ವಾರ್ಧಿ ದಾಟುವೊಡೆ || ಪಾರಿ || ೧ ||
ಓದಿದರ್ಥವ ಮನಕೆ ತಿಳಿದು ನಿರುತವು ಅನುಭವ ಮಾಡುತ ।
ಅನಾದಿಸಿದ್ಧವಾದ ತತ್ತ್ವದ ಹಾದಿಯನ್ನು ಕಾಣುವುದಕೇ || ಪಾರಿ || ೨ ||
ಕಾಮ ಕ್ರೋಧ ಲೋಭ ಮೋಹ ಮತ್ಸರ ತಾಮಸಾದಿ ದುರ್ಗುಣ ||
ನಿರ್ನಾಮವೆನ್ನಿಸಿ ಪ್ರೇಮದೀ ಗುರು ರಾಮ ವಿಠಲನ ತಾ ಕಾಣುವಡೆ || ಪಾರಿ || ೩ ||

ಶ್ರೀರಾಮಚಂದ್ರಪರಬ್ರಹ್ಮಣೇನಮಃ

ಮೀರಾಬಾಯಿ.

[ಲೇಖಕ:— ಹೈಸ್ಕೂಲ ವಿದ್ಯಾರ್ಥಿ, ಸುಂದರಶರ್ಮ, ಚಿತ್ರದುರ್ಗ.]

ಮಾರ್ವಾರು ರಾಜ್ಯದಲ್ಲಿನ ಮೀರತು ಗ್ರಾಮದಲ್ಲಿ ಪ್ರಸಿದ್ಧನಾದ ರಾಠೂರು ವಂಶದ ಜಯಮಾಲನಿಗೆ ಒಂದು ಪುತ್ರಿಕಾರತ್ನವಿದ್ದಿತು. ಆ ಎಳೆಯ ಮಗುವಿಗೆ ತಂದೆ ತಾಯಿಗಳು "ಮೀರಾಬಾಯಿ" ಎಂದು ನಾಮಕರಣ ಮಾಡಿದ್ದರು. ಆ ಬಾಲಿಕಾಮಣಿಯು ತಾನು ಮಾತನಾಡಲು ಕಲಿತಾಗಲೇ ಅವ್ಯಕ್ತಮಧುರವಾದ ತೊದಲು ಮಾತಿನಲ್ಲಿ "ಕೃಷ್ಣಾ" ಎಂದು, ಶ್ರೀಕೃಷ್ಣಭಗವಂತನನ್ನು ಕರೆಯಲಾರಂಭಿಸಿತು. ಕ್ರಮಕ್ರಮವಾಗಿ ಆಕೆಯು ಜತೆಯ ಹುಡಿಗಿಯರ ಸಂಗಡ ಆಡಿಕೊಳ್ಳುವಷ್ಟು ದೊಡ್ಡವಳಾಗಿ ಆ ಆಟಗಳಲ್ಲಿ ಸಹಿತ ತನ್ನ ಮುದ್ದುಬೊಂಬೆಗಳನ್ನು ಸಣ್ಣ ಕೃಷ್ಣನಂತೆ ಭಾವಿಸಿಕೊಂಡು, ಮಣ್ಣಿನ ಗುಂಡುಗಳನ್ನು ಆ ಮೂರ್ತಿಗಳಿಗೆ ವಿಹಾರಸ್ಥಳವಾಗಿ ಬಿಟ್ಟು, ತನ್ನ ಹೃದಯದಲ್ಲಿ ನೆಲಸಿರುವ ಶ್ರೀಕೃಷ್ಣನ ಪ್ರೇಮಾಂಕುರವು, ಜನ್ಮಪರಂಪರೆಯಾಗಿ ಅಭಿವೃದ್ಧಿಹೊಂದಿ ಪುಷ್ಪದಿಂದಲಂಕರಿಸುತ್ತಾಳೋ ಎನ್ನುವ ಹಾಗೆ ಆನಂದಮಯವಾದ ಭಗವನ್ನಾಮ ಸಂಕೀರ್ತನೆಗಳನ್ನು ಮಧುರಸ್ವರದಿಂದ ಹಾಡುತ್ತಿದ್ದಳು. ಕನ್ಯೆಯಾದ ಮೀರಾಬಾಯಿಯು ಸುಂದರಾಂಗಿಯರಲ್ಲಿ ಹೆಚ್ಚಾದ ಸುಂದರಾಂಗಿ. ಚಟುವಟಿಕೆಯಲ್ಲಿಯೂ ಬುದ್ಧಿ ಜ್ಞಾನಗಳಲ್ಲಿಯೂ ಈಕೆಗೆ ಸಮಾನರಾದ ನಾರೀಮಣಿಯರೇ ಇಲ್ಲವೆಂದು ಹೇಳಬಹುದು. ಆದರೂ ಆಕೆಯು ಯಾವಾಗಲೂ ಯಾರಬಳಿಯಲ್ಲಿಯೂ ಅವಿಧೇಯಳಾಗಿರಲಿಲ್ಲ. ಭಗವನ್ನಾಮ ಚಿಂತನೆಯು ದಿನೇ ದಿನೇ ಅಭಿವೃದ್ಧಿಯಾದ ಹಾಗೆಲ್ಲ ಆ ಗುಣವತಿಗೆ ಸ್ವಲ್ಪ ಕಾಲಕ್ಕೆ ಬಾಲ್ಯದಶೆಯು ಬಿಟ್ಟು ಯೌವನವಂಕುರಿಸಲಾರಂಬಿಸಿತು. ಆಗ ಆಕೆಯ ತಂದೆ ತಾಯಿಗಳು ತಮ್ಮ ಮಗಳಿಗೆ ಮದುವೆಯ ಕಾಲವು ಸಮೀಪಿಸಿತೆಂದು ತಿಳಿದು ತಕ್ಕವರನಿಗೋಸ್ಕರ ಹುಡುಕಲು ಎತ್ನಿಸಿದರು; ಮೀರಾಬಾಯಿಯು, ಜನನೀ ಜನಕರ ಅಂತರ್ಯವನ್ನು ಗ್ರಹಿಸಿ, ಒಂದು ದಿನ ತಾಯಿಯ ಬಳಿಗೆ ಹೋಗಿ ಕೈಗಳನ್ನು ಜೋಡಿಸಿಕೊಂಡು "ಅಮ್ಮಾ! ನನ್ನ ಪ್ರಾರ್ಥನೆಯನ್ನು ಸ್ವಲ್ಪ ಲಾಲಿಸು. ಪರಮೇಶ್ವರನು ತನ್ನನ್ನು ಭಾವಿಸುವದಕ್ಕೂ ಸೇವಿಸುವದಕ್ಕೂ ಮನಸ್ಸನ್ನು ಸೃಷ್ಟಿಮಾಡಿದನು. ಮಾಯೆಯಿಂದ ಮೋಸಹೋದರೂ, ಮೋಹಾಂಧಕಾರದಿಂದ ಸುಮ್ಮನಿದ್ದರೂ, ನಮ್ಮ ತಂದೆಯಾದ ಈಶ್ವರನನ್ನು ಮರೆಯಕೂಡದು. ಆಹಾರ ಪಾನೀಯಗಳನ್ನೂ ಅಲಂಕಾರಗಳನ್ನೂ ಮೋಹವನ್ನೂ ಕಲ್ಪಿಸಿರುವನು. ಇಂತಹ ಸೌಖ್ಯವನ್ನು ಕೋರುವವರು ಈಶ್ವರೋದ್ದೇಶವನ್ನು ನೆರವೇರಿಸಲಾರರು. ಆದುದರಿಂದ ಪ್ರಿಯಜನನೀ! ಸಂಸಾರಾರ್ಣವದಲ್ಲಿ ನನ್ನನ್ನು ಬೀಳಗೊಡಕಬೇಡ." ಎಂದು ವಿನಯಪೂರ್ವಕವಾಗಿ ಪ್ರಾರ್ಥಿಸಿದಳು.

"ಮಗುವೇ! ಈ ಮಾತುಗಳು ಕನ್ಯೆಯ ಬಾಯಿಯಿಂದ ಬರತಕ್ಕವುಗಳಲ್ಲ. ವೈವಾಹಿಕವಿಷಯಗಳು ಕನ್ಯೆಯರಿಗೇನು ತಿಳಿಯುವವು? ಮಕ್ಕಳ ಶುಭಾಶುಭಗಳನ್ನು ತಿಳಿಯಲು ತಾಯಿ ತಂದೆಗಳೇ ಕರ್ತರು. ಜನನೀ ಜನಕರ ಬಳಿ ಮಕ್ಕಳು ವಿಧೇಯರಾಗಿರಬೇಕು." ಎಂದು ಆಕೆಯ ತಾಯಿಯುತ್ತರವಿತ್ತಳು.

ಆಗ ಮೀರಾಬಾಯಿಯು ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಹಿಂದಕ್ಕೆ ಹೋಗಿ "ಅಯ್ಯೋ! ನನ್ನ ಜೀವವೆಲ್ಲವೂ ಕೃಷ್ಣಭಗವಂತನ ಪಾದಾರವಿಂದಧ್ಯಾನದಲ್ಲಿಯೇ ವಿನಿಯೋಗಿಸಬೇಕೆಂಬ ನನ್ನ ಇಚ್ಛೆಯನ್ನು ಇನ್ನು ಯಾರು ತಿಳಿಯಬಲ್ಲರು? ರಾಜಾಂತಃಪುರಗಳಲ್ಲಿ ರಾಣಿಯರನು ಭವಿಸುವ ಮಹಾ ಸೌಖ್ಯಗಳನ್ನು ನಾನೊಲ್ಲೆನು. ಓ! ಭಕ್ತವತ್ಸಲನೇ!! ನಿನ್ನನ್ನು ಸೇವಿಸುವದರಲ್ಲಿ ನಾನಪ್ರಮತ್ತಳು. ನನ್ನ ಜೀವಮಾನವೆಲ್ಲವನ್ನೂ ವಿನಯಪೂರ್ವಕವಾಗಿ ತ್ವದೈಕ ಚಿಂತನೆಯಲ್ಲಿಯೇ ಕಳೆಯುವೆನು. ದಯಾಮಯಾ! ಏನು ಬರುವುದೋ ಬರಲಿ. ಇಗೋ ನಾನು ಆಣೆ ಇಟ್ಟುಕೊಳ್ಳುವವಳು. ನಾನು ಯಾವಾಗಲೂ ನಿನ್ನ ಸೇವೆಯ ಹೊರತು ಮತ್ತೇನನ್ನೂ ಕೋರುವವಳಲ್ಲ. ನಾನು ನಿನಗೆ ದಾಸಿಯಾಗಿರುವೆನೇ ಹೊರತು, ಸೋಮಾರಿ ರಾಣಿಯಾಗಿರಲಾರೆನು." ಎಂದು ದೇವರನ್ನು ಪ್ರಾರ್ಥಿಸಿದಳು. ಅನಂತರ ಸ್ವಲ್ಪ ಕಾಲವಾದ ಮೇಲೆ ಮೀರಾರು ದೇಶದ ಮಹಾರಾಜರಾದ "ಕುಂಭಾಜೀ" ಎನ್ನುವಾತನಿಗೆ ಈಕೆಯನ್ನು ಕೊಟ್ಟು ಮಹಾವೈಭವದಿಂದ ವಿವಾಹ ಮಹೋತ್ಸವವನ್ನು ಮಾಡಿ ತಾಯಿ ತಂದೆಗಳು ಆಕೆಯನ್ನು ಅತ್ತೆಯ ಮನೆಗೆ ಕಳುಹಿಸಿದರು. ಮೀರಾಬಾಯಿಗೆ ಇದು ಒಂದು ಹೊಸವಿಧವಾಗಿತ್ತು.

ಮೀರಾಬಾಯಿಯು ಎಂದೂ ಇಂತಹ ರತ್ನಮಯವಾದ ಸೌಧವನ್ನು ಕಂಡವಳಲ್ಲ. ಪರಿಚರ್ಯಮಾಡಲು ಸೇವಾಜನ

ಸಮೂಹವಿದ್ದರೂ ಅವರಿಂದ ಮಾಡಿಸದೆ ತಾನೇ ಸ್ವತಃ ಆ ಹಾರ ಪದಾರ್ಥಗಳನ್ನು ಮಾಡಿಕೊಂಡು ಮಹಾಪ್ರ[illegible] ನೈವೇದ್ಯ ಮಾಡಿ ತರುವಾಯ ಊಟ [illegible] ಮಯವಾದ ಪೀಠವನ್ನೂ, ಹ[illegible]. ಆಕೆಯು ಮನಸ್ಸಿನಲ್ಲಿ ಯಾವಾಗಲೂ ಇಚ್ಛಿಸುತ್ತಿರಲಿಲ್ಲ. ಆಕೆ, ಬರಿಯ ನೆಲದಮೇಲೆ ಕೃಷ್ಣಾಜಿನವನ್ನು ಹಾಸಿಗೆಯಾಗಿ ಹಾಸಿ ಕೊಂಡು, ನಿದ್ರಿಸುತ್ತಿದ್ದಳು. ಅಂತಃಪುರದಲ್ಲಿಯ ಅಲ್ಪರಾದ ದಾಸಿಯರನ್ನು ತನ್ನ ಹತ್ತಿರಕ್ಕೆ ಬಾರದಂತೆ ಮಾಡಿ, ಉತ್ತಮ ಸ್ತ್ರೀಯರನ್ನು ಸಂಘವಾಗಿ ಸೇರಿಸಿಕೊಂಡು, ಅವರಿಗೆ ಈಶ್ವರಧ್ಯಾನವನ್ನೂ ಸನ್ಮಾರ್ಗವನ್ನೂ ಬೋಧಿಸುತ್ತಿದ್ದಳು. ಆ ಗುಣಮಣಿಯು ವಿಹರಿಸುವ ಮಂದಿರಾರಾಮಗಳಲ್ಲಿ ಸುಕುಮಾರ, ಸೌರಭ್ಯಸಂಪದವಾದ ಮಲ್ಲಿಗೆಗಳಾಗಲೀ ಸಂಪಿಗೆಗಳಾಗಲೀ ಇವೇ ಮುಂತಾದ ಯಾವ ಪುಷ್ಪಜಾತಿಯಾಗಲಿ ಔಷಧಕ್ಕಾದರೂ ಕಾಣಬರುವದಿಲ್ಲ. ಅಲ್ಲಿ ಎಲ್ಲಿ ನೋಡಿದರೂ ಚಲುವೆಯಿಂದ ಮಾಡಲ್ಪಟ್ಟ ಪವಿತ್ರವಾದ ತುಲಸೀ ತೋಟಗಳು ಕಾಣಿಸುತ್ತಿದ್ದವು.

ರಾಣನು, ತನ್ನ ಭಾರ್ಯೆಯಾದ ಮೀರಾಬಾಯಿಯ ಈ ಪರಿಯನ್ನು ಕಂಡು ಅಸಂತುಷ್ಟ ಮನಸ್ಸುಳ್ಳವನಾಗಿ ಮೊಗದಲ್ಲಿ ಕೋಪವನ್ನು ತೋರಿಸುತ್ತ ಆಕೆಯ ಸಂಗಡ "ರಾಣಿಯರು ಈ ವಿಧದಲ್ಲಿರ ಕೂಡದು." ಎಂದು ಖಂಡಿತವಾಗಿ ಹೇಳಿದನು. "ರಾಣಾಜೀ! ನನ್ನ ಸಂಕಲ್ಪಕ್ಕೆ ವ್ಯತಿರಿಕ್ತವಾಗಿ ನಿಮ್ಮನ್ನು ಮದುವೆಯಾಗಲು ಬಲವಂತ ಮಾಡಲ್ಪಟ್ಟೆನು. ಇಲ್ಲಿಯವರೆಗೆ ನನ್ನ ಜೀವಮಾನವೆಲ್ಲವನ್ನೂ ಶ್ರೀಕೃಷ್ಣ ಭಗವಂತನಿಗೆ ಸಮರ್ಪಿಸಿದ್ದೆನು. ಜೀವಿತ ಕಾಲವೆಲ್ಲವೂ ಆ ದಯಾಸ್ವರೂಪನಿಗೆ ಉಪಚಾರ ಮಾಡುವುದರಲ್ಲಿಯೇ ವಿನಿಯೋಗಿಸಲು ಪ್ರತಿಜ್ಞೆಮಾಡಿದೆನು. ಮಿಕ್ಕಕಾರ್ಯಗಳಿಂದ ನನಗೆ ಕೆಲಸವಿಲ್ಲ" ಎಂದು ಮೀರಾಬಾಯಿಯು ಹೇಳುತ್ತಾ ಆಕೆಯು ಭರ್ತನ ದೃಷ್ಟಿಪಥವನ್ನು ದಾಟಬಂದು 'ಮೀವಾರು ರಾಜನೇ! ನೀನು ಕೋರಿದುದನ್ನೆಲ್ಲ ನಾನು ಮಾಡುವವಳು. ಆ ಭಕ್ತವತ್ಸಲನನ್ನು ಪ್ರಾರ್ಥಿಸುವುದೇ ನನ್ನ ಪ್ರಾರ್ಥನೆಯು. ಅದು ನಿನಗೆ ಅಸಂತೋಷದಾಯಕವಾಗಿದ್ದರೆ ನನ್ನನ್ನು ಪರಿತ್ಯಜಿಸು ಮಹಾರಾಜ! ಈಶ್ವರನನ್ನು ಪರಿತ್ಯಜಿಸಿದ ಮೇಲೆ ಪ್ರಾಣಗಳು ನಿಲ್ಲುವುದು ಹೇಗೆ?" ಎಂದು ಸಹಜ ಕೋಮಲವಾದ ಕಂಠಸ್ವರದಿಂದ ಆತನಿಗೆ ಕೇಳುವಹಾಗೆ ಹೇಳಿದಳು.

ಆಕೆಯು ಯಾವಾಗಲೂ ತನ್ನ ನಿಯಮವನ್ನು ಬಿಡದೆ ಹಿಂದಿನಂತೆಯೇ ಹಟದಿಂದ ದೇವರನ್ನು ಆರಾಧಿಸುತ್ತಿದ್ದಳು. ಹೀಗೆ ಕೆಲವು ದಿನಗಳಾದತರುವಾಯ ದೇವಾಲಯಕ್ಕೆ ಹೋಗಿ ದೇವರನ್ನಾರಾಧಿಸುವಾಗ ಪರವಶತ್ವವನ್ನು ಹೊಂದುತಿದ್ದಳು. ಆಕೆಯು ಪರವಶತ್ವಾವಸ್ಥೆಯಿಂದ ಬಿಡುಗಡೆಯಾದ [illegible] ಮಧುರವಾದ ತನ್ನ ಕಂಠವನ್ನೆತ್ತಿ [illegible] ಸಂಕೀರ್ತನವನ್ನು ಮಾಡುತ್ತ ಕೇಳು[illegible] ಸಾಗರದಲ್ಲಿ ಮುಳುಗಿರುತ್ತಿದ್ದಳು. ಆಕೆ ಹಾಡುತ್ತಿರುವಾಗ, ಕೇಳಲು ಮನೋಹರವಾದ ಆ ಹಾಡನ್ನು ಗ್ರಹಿಸಿ [illegible] ಜನರು ಗುಂಪು ಗುಂಪಾಗಿ ದೇವಾಲಯಕ್ಕೆ ಹೋಗುತ್ತಿದ್ದರು.

ಹೇಗೋ ಆಕೆಯ ಗಾನಾಧಿಕ್ಯವು ಆಗಣ ಮೊಗಲ್ ಚಕ್ರವರ್ತಿ ಅಕಬರ ಪಾದಷಹನ ಕಿವಿಗೆ ಬಿದ್ದು ಕೇಳಲುತ್ಸಾಹವನ್ನು ಹುಟ್ಟಿಸಿತು. ಆದರೆ ಚಕ್ರವರ್ತಿಗೆ ಅಂತಹ ಮಹಾರಾಣಿಯ ದರ್ಶನವು ಹೇಗೆ ಲಭಿಸುವದು? ಆಕೆಯನ್ನು ಹೇಗೆ ಪ್ರಾರ್ಥಿಸುವನು? ಅಂತಹ ಗಾನಾಮೃತವು ಹೇಗೆ ಬರುವುದು? ಅಂತಹ ಕಾರ್ಯವನ್ನು ಚಕ್ರವರ್ತಿಯು ಸಾಹಸದಿಂದ ನಡೆಸಿದಲ್ಲಿ ರಾಣಾನ ಹತ್ತಿರ ದೊಡ್ಡ ದೋಷಕಾರಿಯಾಗಿ ಆ ಮಹಾರಾಜನಿಗೆ ಪರಮ ಶತ್ರುವಾಗಬೇಕಾಗುವುದು. ಪಾದಷಹನ ಸಂಸ್ಥಾನದಲ್ಲಿ ಗಾನ ವಿದ್ಯಾಧಿಕನಾದ 'ತಾನುಸೇನ್', ಎಂಬಾತನು ಚಕ್ರವರ್ತಿಗೊಂದುಪಾಯವನ್ನು ಹೇಳಿದನು. ತಾನು ಸೇನನೂ ಚಕ್ರವರ್ತಿಯು ಸಾಧು ವೇಷವನ್ನೂ ಹಾಕಿಕೊಂಡು ದೇವಾಲಯವನ್ನು ಪ್ರವೇಶಿಸಿದರು. ಮೊದಲಿನಂತೆಯೇ ಮೀರಾಬಾಯಿಯು ಮೊಗದಲ್ಲಿ ಭಕ್ತ್ಯಾನಂದರಸಗಳು ತಾಂಡವಾಡುತಿರೆ ಭಗವನ್ನಾಮ ಸಂಕೀರ್ತನಾಮೃತವನ್ನು ಹೇಳಿ, ಕೇಳುವವರಿಗೆ ಕರ್ಣಾನಂದಕರವಾಗಿ ಹಾಡಿದಳು. ಶಾಶ್ವತಾನಂದಕರವಾದ ಆ ಸಂಗೀತ ಪ್ರವಾಹದಲ್ಲಿ ಮುಳುಗಿದ ಚಕ್ರವರ್ತಿಯು ಹೃದಯದಲ್ಲಿ ಒಂದು ಹೊಸ ಸಂಕಲ್ಪವಂಕುರಿಸಲು, ಪವಿತ್ರ ಚರಿತ್ರೆಯಾದ ಆ ಸಾಧ್ವೀಮಣಿಯ ಪಾದಕ್ಕೆರಗಿ ಅಗೊಂದಮೂಲ್ಯವಾದ ಕಂಠಾಭರಣವನ್ನು ಕಾಣಿಕೆಯಾಗಿತ್ತನು. ಮನೋಹರವಾದಲಂಕಾರವನ್ನು ನೋಡಿ ಆಶ್ಚರ್ಯದಿಂದ "ಸಾಧುಗಳಿಗಿಂತಹ ಅಲಂಕಾರಗಳಿಂದ ಕೆಲಸವಿಲ್ಲವಲ್ಲ! ಇದು ನ್ಯಾಯಾರ್ಜಿತವಾಗುತ್ತದೆಯೇ? ಹಾಗಾದರೆ ಹೆಂಗಸು ಕಾಣಿಕೆಯನ್ನು ತೆಗೆದುಕೊಳ್ಳಕೂಡದು." ಎಂದು ಮೀರಾಬಾಯಿಯು ಕೇಳಿದಳು. "ತಾಯೀ! ಯಮುನಾ ನದಿಯಲ್ಲಿ ಸ್ನಾನಮಾಡುತ್ತಿದ್ದಾಗ ಆ ವಸ್ತು ನದಿಯು ಕೊಟ್ಟಿತು. ಅದನ್ನೇ ನಿನ್ನ ದೇವರಿಗೆ ಸಮರ್ಪಿಸಿದೆನು. ಇದು ಅತ್ಯಲ್ಪವಾದ ಕಾಣಿಕೆಯೆಂದು ನಾನು ತಿಳಿಯುವೆನು." ಎಂದು ಚಕ್ರವರ್ತಿಯು ಆಕೆಯ ಸಂಗಡ ಹೇಳಿ ತಾನು ಸೇನೆಯೊಂದಿಗೆ ದೇವಾಲಯವನ್ನು ಬಿಟ್ಟು ಹೋದನು.

ಮೀರಾಬಾಯಿಯು ಮನೋಹರವಾದ ಆ ಆಭರಣದಿಂದ ಶ್ರೀಕೃಷ್ಣಮೂರ್ತಿಯನ್ನಲಂಕರಿಸಿದಳು, ದೇವಾಲಯದಲ್ಲಿ,

ಕಾಂತಿಯುಕ್ತವಾಗಿ ಬೆಳಗುತ್ತಿರುವ ಆ ಆಭರಣದ ವಿಷಯವು ರಾಣನಿಗೆ ತಿಳಿಯಲು ರಾಣನು ಅದನ್ನು ತರಬೇಕೆಂದು ಕೆಲವು ಸೇವಕರನ್ನು ಕಳುಹಿಸಿದನು. ಅವರು ಆಗ ಆ ಆಭರಣವನ್ನು ತೆಗೆದುಕೊಂಡು ಬಂದು ರಾಣನ ಮುಂದಿಟ್ಟರು. ಆಗ ಆ ಸಭೆಯಲ್ಲಿದ್ದವನೊಬ್ಬನೆದ್ದು " ಅಯ್ಯಾ! ಈ ವಸ್ತು ನನ್ನದು. ಅದನ್ನು ಚಕ್ರವರ್ತಿಗೆ ಇದಕ್ಕೆ ಸ್ವಲ್ಪ ಮುಂಚೆಯೇ ವಿಕ್ರಯಿಸಿದೆನು " ಎಂದು ಹೇಳಿದನು ಈ ವಾಕ್ಯಗಳನ್ನು ಕೇಳಿದ ಕೂಡಲೇ ರಾಣಾ ತನ್ನ ಸಹಚಾರಿಣಿಯಾದ ಮೀರಾಬಾಯಿ ನಿತ್ಯವೂ ಹೋಗಿ ಪೂಜೆಮಾಡುವ ದೇವಾಲಯಕ್ಕೆ ಹೋಗಿ ಚಕ್ರವರ್ತಿಯು ಹೇಗೆ ಕೊಟ್ಟನು, ಎಂಬೀ ವಿಷಯವನ್ನು ತಿಳಿದು ಸ್ವಲ್ಪವಾದರೂ ಯೋಚಿಸದೆ ಕೋಪಾವೇಶದಿಂದೊಡಗೂಡಿ " ಅವಳು ನನಗೆ ಭಾರ್ಯೆಯಾಗಿರಲು ತಕ್ಕವಳಲ್ಲ"ವೆಂದು ಉಚ್ಚರಿಸಿ ನಿರ್ದೋಷಿಯಾದಾ ಸಾಧ್ವೀಮಣಿಯನ್ನು ಕೊಲ್ಲಲು ಸೇವಕರಿಗಾಜ್ಞಾಪಿಸಿದನು ಆದರೆ ಸೇವಕರಲ್ಲೊಬ್ಬರೂ ಆ ಮಹಾರಾಜನ ಆಜ್ಞೆಯನ್ನು ನಡೆಯಿಸದವರಾದರು. ಯಾಕೆಂದರೆ ರಾಜಾಜ್ಞೆಯನ್ನು ನಡೆಸದಿದ್ದರೆ ಬರುವ ಭಯಕ್ಕಿಂತ ಭಕ್ತಳಾದ ಈ ಸ್ತ್ರೀಮಣಿಯನ್ನು ಹಿಂಸಿಸಿ ದೈವದ್ರೋಹವನ್ನು ಕಟ್ಟಿಕೊಳ್ಳುವುದು ದುಸ್ತರವೆಂಬ ಭೀತಿಯು ಅವರಿಗೆ ಹೆಚ್ಚಾಗಿ ತೋರಿದುದೇ ಕಾರಣವು. ಆಗ ರಾಣಾನು ಸ್ವತಃ ಹೋಗಿ ದೇವಸ್ಥಾನಕ್ಕೆ ಸಮೀಪವಾಗಿರುವ ಒಂದು ಸಣ್ಣ ಮಂದಿರದಲ್ಲಿ ಆಕೆಯನ್ನಿರಿಸಿ ಆಕೆಯಲ್ಲಿ ಕಾಠಿಣ್ಯವನ್ನು ತೋರಿಸುತ್ತಿದ್ದನು. ಆಕೆಯು ಶಾಂತಚಿತ್ತಳಾಗಿ ಅಲ್ಲಿ ಪ್ರವೇಶಿಸಿ ಶ್ರೀಕೃಷ್ಣನನ್ನು ಧ್ಯಾನಿಸುತ್ತ ಕಾಲವನ್ನು ಕಳೆಯುತ್ತಿದ್ದಳು.

ರಾಣಾನು ಅಷ್ಟರಲ್ಲಿಯೇ ಶಾಂತಿ ಹೊಂದದೆ ಆಕೆಯನ್ನು ಬಿಡಿಸಿಕೊಳ್ಳುವುದಕ್ಕೆ ಬಹಳ ಕಾಲವನ್ನು ಅನೇಕ ವಿಧವಾಗಿ ಕಳೆಯುತ್ತಿದ್ದನು. ಒಂದು ದಿನ ಮನೋಹರವಾಗಿ ತಯಾರು ಮಾಡಿದ ಪೆಟ್ಟಿಗೆಯೊಂದನ್ನು ಲೇಖನದೊಡನೆ ಆಕೆಯ ಬಳಿಗೆ ಕಳುಹಿಸಿದನು. ಮೀರಾಬಾಯಿಯು ಅದನ್ನು ತೆಗೆದುಕೊಂಡು, ಉತ್ತರವನ್ನು ಬಿಚ್ಚಿ,

ಶರಷಟ್ಪದಿ || ನೀನು ನಿಜಭಕ್ತ ।
ಳು ನಿಶ್ಚಲವ ನಿ ।
ನ್ನ ನಿಯಮವಹುದು ರಮಣೀಮಣೀ ॥
ನಿನಗೊಲಿವಿನಿಂದಿ ।
ದನು ಕಳುಹಿರುವೆನಿ ।
ದನು ಸಂತಸದಿ ಧರಿಸು ಕೊರಳೊಳ್ ॥

ಎಂದು ಓದಿಕೊಂಡು ಆಶ್ಚರ್ಯದಿಂದ ಆ ಪೆಟ್ಟಿಗೆಯನ್ನು ತೆಗೆಯುವಷ್ಟರಲ್ಲಿಯೇ ಅದರಲ್ಲೊಂದು ವಿಷಸರ್ಪವು ಬುಸಗುಟ್ಟುತ್ತ ಆಕೆಯ ಮೇಲೆ ಧುಮುಕಿ ತೀವ್ರವಾಗಿ ಕಡಿಯಲು " ರಾಣಜೀ! ನೀನು ಕಳುಹಿದ ಚಂದ್ರಹಾರವನ್ನು ಮನೋಗತನಾದ ಭಗವಂತನಿಗೆ ಸಮರ್ಪಿಸುವೆನು." ಎಂದು ನಿಶ್ಚಲಭಾವದಿಂದ ಉಚ್ಚರಿಸಿ ಆ ವಿಷಸರ್ಪವನ್ನು ಆಕೆ ಕೊರಳಿಗೆ ಕಂಠಾಭರಣವಾಗಿ ಅಲಂಕರಿಸಿಕೊಂಡಳು. ಆ ವಿಷಸರ್ಪದಿಂದ ಆಕೆಗೆ ಸ್ವಲ್ಪವಾದರೂ ಹಾನಿಯಾಗಲಿಲ್ಲ. ತರುವಾಯ ಮತ್ತೊಂದು ದಿನ ರಾಣನು " ಈ ಅಮೃತವನ್ನು ಕುಡಿ " ಎಂದು ವಿಷಪೂರಿತವಾದ ಒಂದು ಬೆಳ್ಳಿಯ ಬಟ್ಟಲನ್ನು ಆಕೆಗೆ ಕಳುಹಿಸಿದನು. ಆಕೆಯು ಪಾತ್ರೆಯನ್ನು ತೆಗೆದುಕೊಂಡು "ರಾಣಜಿ! ನಿನಗನೇಕ ವಂದನೆಗಳು. ಇದಿಗೋ ಪವಿತ್ರವಾದ ವಿಷ್ಣುಪಾದೋದಕವನ್ನು ನಾನು ಕುಡಿಯುತ್ತಿರುವೆನು." ಎಂದು ಹೇಳಿ ಪಾತ್ರೆಯೊಳಗಿನ ವಿಷವನ್ನು ಕುಡಿದಳು. ಪರಿಶುದ್ಧವಾದುದಕವಾದರೂ ಹಾನಿ ಮಾಡಬಹುದು. ಆದರೆ, ಈ ವಿಷವು ಆಕೆಗೆ ಲೇಶಮಾತ್ರವೂ ಹಾನಿಮಾಡಲಾರದಾಯಿತು. ಹೀಗೆ ಮತ್ತೆ ಕೊಂಚಕಾಲದವರೆಗೂ ಆಕೆಯು ಆತನಾಜ್ಞೆಗಳನ್ನು ನಡೆಯಿಸುತ್ತಾ ವಿಧೇಯಳಾಗಿ ಪ್ರವರ್ತಿಸುತ್ತಿದ್ದಳು. ತರುವಾಯ "ನೀನು ಜೀವಿಸಿರುವುದು ಉಪಯೋಗವಿಲ್ಲ. ನೀನು ಪ್ರಾಣತ್ಯಾಗ ಮಾಡಿಕೋ" ಎಂದು ಖಂಡಿತವಾಗಿ ಒಂದು ಕಾಗದವನ್ನು ಆಕೆಯ ಬಳಿಗೆ ಮಹಾರಾಜನು ಕಳುಹಿಸಿದನು. "ಅದಕ್ಕೆ ನಾನು ವಿಧೇಯಳೆಂ"ದು ಹೇಳಿ ನಿಶಾಸಮಯದಲ್ಲಿ ಆಕಾಶದಲ್ಲಿ ನಕ್ಷತ್ರಗಳು ಮಿನುಕು ಮಿನುಕೆಂದು ಬೆಳಗುತ್ತಿರುವಾಗ ಯೋಗಿನೀ ವೇಷದಿಂದ ದುರ್ಗದ್ವಾರವನ್ನು ಬಿಟ್ಟು ಯಮುನಾನದೀತೀರಕ್ಕೆ ಹೋಗಿ ಈಶ್ವರಧ್ಯಾನವನ್ನು ಮಾಡಿ ಅತಿವೇಗವಾಗಿ ಪ್ರವಹಿಸುತ್ತಿರುವ ಆ ತಣ್ಣಗಿರುವ ಪ್ರವಾಹದಲ್ಲಿ ಮುಳುಗಲು " ಮೀರಾಬಾಯಿ! ನಿನ್ನ ಪ್ರಾಣನಾಯಕನ ಹತ್ತಿರ ನೀನು ತೋರಿಸಬೇಕಾದ ವಿಧೇಯತೆಯನ್ನು ನೆರವೇರಿಸಬೇಕಾದ ವಿಧಾಯಕ ಕೃತ್ಯಗಳು ನಿನಗೆ ಮುಗಿದಿರುವವು. ಆದರೆ ನೀನೀ ಲೋಕದಲ್ಲಿ ನೆರವೇರಿಸಬೇಕಾದ ಕೃತ್ಯಗಳು ಇನ್ನೂ ಮಿಕ್ಕಿವೆ. ಭಕ್ತಿಮಾರ್ಗಗಳ ವಿಚಾರದಲ್ಲಿ ನಿನ್ನ ಸುಬೋಧನೆಗಳಿಗೋಸ್ಕರ ಮಾನವರೆಲ್ಲರೂ ಕಾದಿದ್ದಾರೆ. ಅವರ ಬಳಿಗೆ ಹೋಗಿ ಅವರೆಲ್ಲರನ್ನೂ ಮೋಕ್ಷಾಸಕ್ತರನ್ನಾಗಿ ಮಾಡು" ಎಂಬ ಅಶರೀರವಾಕ್ಯು ಆಕೆಗೆ ಕೇಳಿಸಿತು.

ಆ ಮಾತುಗಳನ್ನಾಲಿಸಿ ತತ್ಕ್ಷಣವೇ ನೀರಿನಿಂದ ಮೇಲಕ್ಕೆ ಬಂದು ದಾರಿಯುದ್ದಕ್ಕೂ ಭಗವನ್ನಾಮ ಸಂಕೀರ್ತನೆಗಳನ್ನು ಮಾಡುತ್ತ ಕಾಡೆಂದೂ ಊರೆಂದೂ ಯೋಚಿಸದೆ ಹೋಗುತ್ತಿದ್ದಳು. ಆಕೆಯನ್ನು ನೋಡಿದವರೆಲ್ಲರೂ ಮಹನೀಯಳೆಂದು ತಿಳಿದು ಪೂಜಿಸುತ್ತಿದ್ದರು. ಹಾಗೆ ಆ ನಾರೀಮಣಿಯು ದ್ವಾರಕೆಯವರೆಗೆ ಪ್ರಯಾಣ ಮಾಡಿದಳು. ಹರಿಗುಣ ಕೀರ್ತನವನ್ನು ಮಾಡುತ್ತ ದೇಶ ಸಂಚಾರ ಮಾಡುತ್ತಿದ್ದ ಆ ಯೋಗಿನಿಯನ್ನು ಕುರಿತು ಹೇಳುವ ಮಾತುಗಳು ಮೀವಾರು ರಾಣನ

ಕಿವಿಗೆ ಬೀಳುತ್ತಿದ್ದವು. ರಾಣನು ಆ ಯೋಗಿನಿಯನ್ನು ತನ್ನ ಭಾರ್ಯೆಯೆಂದು ತಿಳಿದು "ಆಕೆಯು ಎಲ್ಲಿದ್ದರೂ ಸಂಹರಿಸಿ ಬನ್ನಿರೆಂದು ಸೇವಕರನ್ನು ಕಳುಹಿಸಿದನು. ಕ್ರೂರರಾದ ಶೂರರನ್ನು ಮೀರಾಬಾಯಿಯು ನೋಡಿದ ಕೂಡಲೇ ಅವರುದ್ದೇಶವನ್ನು ಗ್ರಹಿಸಿ ಹತ್ತಿರಿದ್ದ ಈಶ್ವರಾಲಯವನ್ನು ಪ್ರವೇಶಿಸಿ ಸಾಷ್ಟಾಂಗವಾಗಿ ಆ ದೇವರಿಗೆ ನಮಸ್ಕರಿಸಿ "ಹಾ! ಭಕ್ತವತ್ಸಲಾ! ಹಾ! ದಯಾನಿಧೀ! ಹಾ! ಲೋಕೇಶ್ವರಾ! ಹಾ! ಯೋಗಿನೀಜನಸಂರಕ್ಷಣಾ! ಹಾ! ದ್ರೌಪದೀ ಮಾನ ಸಂರಕ್ಷಕ! ಹಾ! ಜನನ-ಮರಣ-ನಾಶಂಕರಾ! ಭಕ್ತವಶಂಕರ! ಹಾ! ದೀನಜನಶರಣ್ಯಾ! ನಿನ್ನ ಕಣ್ಣೆದುರಿಗಿರುವ ದೀನಳಾದ ನನ್ನನ್ನು ನೋಡು. ಹಾ! ವರದಾ! ರಕ್ಷಿಸು! ರಕ್ಷಿಸು! ಹಾ! ಈಶ್ವರಾ! ಶತ್ರುಗಳಿಂದ ನನ್ನನ್ನು ಕಾಪಾಡು, ಕಾಪಾಡು," ಎಂದು ದೀನಸ್ವರದಿಂದ ಆ ದೇವರನ್ನು ಪರಿಪರಿ ವಿಧಗಳಿಂದ ಪ್ರಾರ್ಥಿಸಿದಳು. ಆ ಮಹಾಶೂರರನ್ನು ಆಕೆಯು ಸಮೀಪಿಸುವಷ್ಟರಲ್ಲಿಯೇ ಪ್ರಕಾಶವಾದೊಂದು ದೊಡ್ಡ ಬೆಳಕು ಅವರಿಗೆ ದೃಷ್ಟಿಗೋಚರವಾಗಿ ನಿಶ್ಚೇಷ್ಟರನ್ನಾಗಿಮಾಡಿತು. ಬೆಳಕು ಮಧ್ಯದಿಂದ "ಓ! ಪಾಪಾತ್ಮರೇ ಸದಾ ಈಶ್ವರ ಚಿಂತನಾಪರವಶಳಾದ ಸಾಧ್ವೀಮಣಿಯನ್ನು ಹಿಂಸಿಸಲು ಸಾಹಸ ಪಟ್ಟಿರುವಿರಾ? ಹೋಗಿ; ಹೋಗಿ." ಎಂದು ವಾಕ್ಯಗಳು ಗಂಭೀರಸ್ವರದಿಂದ ಅವರ ಕಿವಿಗೆ ಕೇಳಬಂದುವು. ಆ ಶೂರರು ತಮ್ಮ ಪ್ರಯತ್ನವನ್ನು ಬಿಟ್ಟು ಮರಳಿ ತಮ್ಮ ರಾಜ್ಯಕ್ಕೆ ಹೋದರು. ರಾಣಾನ ದ್ರೋಹ ಬುದ್ಧಿಯನ್ನು ಕುರಿತು ಜನರು ಬಹಳ ನಿಂದಿಸಿದರು.

ಮೀರಾಬಾಯಿಯು ಪವಿತ್ರವಾದ ಬೃಂದಾವನದಲ್ಲಿ ಪೂಜಿಸುತ್ತಿದ್ದಳು. ಆಗ ಜನಸಮೂಹವೆಲ್ಲವೂ, ಕೈಲಾಸದಿಂದ ಪಾರ್ವತೀ ದೇವಿಯು ಈರೀತಿಯಲ್ಲಿ ಜನಿಸಿರುವಳೆಂದು ಆಕೆಯನ್ನು ಹೊಗಳತೊಡಗಿದರು. ಆ ಬೃಂದಾವನದಲ್ಲಿಯೇ ಆಕೆಯು ವಾಸವಾಗಿದ್ದಳು. ಅಲ್ಲಿನ ಜನರೆಲ್ಲರೂ ಆಕೆಯ ಹಾಡುಗಳನ್ನೇ ಭಕ್ತಿ ವಿಶ್ವಾಸಗಳಿಂದ ಹಾಡುತ್ತಿದ್ದುದನ್ನು ರಾಣನು ಕೇಳುತ್ತಿದ್ದನು. ರಾಣನು ಬಂದ ಪ್ರದೇಶದಲ್ಲೆಲ್ಲಾ ಗಂಡನಿಂದ ತ್ಯಜಿಸಲ್ಪಟ್ಟಿರುವ ಸಾಧ್ವೀಮಣಿಯ ಪ್ರಶಂಸೆಗಳೇ ಕೇಳಬರುತ್ತಿದ್ದವು. ಎಲ್ಲಿ ನೋಡಿದರೂ ತಾನಿದುವರೆಗೂ ತ್ಯಜಿಸಿದ್ದ ಭಾರ್ಯೆಯು ಹೇಳುತ್ತಿದ್ದ ಭಗವನ್ನಾಮ ಸಂಕೀರ್ತನೆಗಳನ್ನೇ ಜನರು ಹಾಡುತ್ತಿದ್ದರು. ಯಾರನ್ನು ನಾಶಮಾಡಲು ತಾನು ಯತ್ನಿಸಿದನೋ ಆ ಸತೀಮಣಿಯ ಪಾದಾರವಿಂದ ಸೇವೆಗೋಸ್ಕರ ತನ್ನ ರಾಜ್ಯದಲ್ಲಿಯ ಪ್ರಜೆಗಳೆಲ್ಲರೂ ಹೋಗುತ್ತಿರುವುದನ್ನು ರಾಣನು ಕಣ್ಣಿನಿಂದ ನೋಡುತ್ತಿದ್ದನು. ಜನರನ್ನಾಕರ್ಷಿಸುವ ಸುಗುಣ ಪುಂಜವು ಆಕೆಯ ಹತ್ತಿರಿರುವುದರಿಂದ, ರಾಣನಿಂದ ಪರಿಪಾಲಿಸಲ್ಪಡುವ ರಾಜ್ಯಕ್ಕಿಂತ ಆಕೆಯ ರಾಜ್ಯವೇ ವಿಸ್ತೀರ್ಣವಾಗಿ ವಿರಾಜಿಸುತ್ತಿತ್ತು. ಮೀವಾರು ರಾಜ್ಯಕ್ಕೆ ಕೀರ್ತಿಕಾಂತೆಯಾದ ತಮ್ಮ ಮಹಾರಾಜ್ಞಿಯನ್ನು ಹಿಂದಕ್ಕೆ ಕರೆತರಬೇಕೆಂದು ಮಂತ್ರಿಗಳು ಬಹು ವಿಧವಾಗಿ ರಾಣನನ್ನೂ ಪ್ರಾರ್ಥಿಸಿದರು. ಆತನ ಹೃದಯವು ಬಾರಿ ಬಾರಿಗೂ ಆ ವಿಷಯವನ್ನೆ ಪ್ರೇರೇಪಿಸ ತೊಡಗಿತು. ರಾಣನು ಒಂದು ದಿನ ತಾನು ಮಾಡಿದ ಕಾರ್ಯಗಳನ್ನು ಜ್ಞಾಪಿಸಿಕೊಳ್ಳುತ್ತಾ "ಅಯ್ಯೋ! ನಾನು ಪ್ರಾರ್ಥಿಸಿದರೆ ಆಕೆಯು ಅಂಗೀಕರಿಸಿ ಮರಳಿ ಬರುವಳೇ? ಆಕೆಯು ಇಹಪರ ಸೌಖ್ಯಗಳನ್ನು ಬಿಟ್ಟು ಈಶ್ವರಾರಾಧನೆಯಲ್ಲಿಯೇ ಕಾಲವನ್ನು ಕಳೆಯುತ್ತಿದಾಳಲ್ಲ! ನಾನು ಈಯಪವಿತ್ರವಾದ ರಾಜವೇಷದಲ್ಲ ಆಕೆಯ ಬಳಿಗೆ ಹೋಗಿ ಆಜ್ಞಾಪಿಸಬಹುದೇ? ಆ ಸಾಧ್ವೀ ಪ್ರಾಪಂಚಿಕ ಸುಖಲಾಲಸೆಯಾದ ಮಹಾರಾಜ್ಞಿಗಿಂತ ಸಾವಿರಪಾಲು ಹೆಚ್ಚಾಗಿ ಪೂಜಿಸಲರ್ಹಳು. " ಎಂದು ಚಿಂತಿಸಿ ಕಾಷಾಯ ವಸ್ತ್ರಗಳನ್ನು ಧರಿಸಿಕೊಂಡು ಆಕೆಯಿದ್ದ ದೇವಾಲಯಕ್ಕೆ ಹೋಗಿ ಸಂದರ್ಶಿಸಿ ಪ್ರಸಿದ್ಧಿ ಹೊಂದಿದ ಆಕೆಯ ಗೀತಗಳನ್ನೇ ಹಾಡುತ್ತ,

"ಭಿಕ್ಷಾಮ'ದೇಹಿ" ಎಂದಾಕೆಯನ್ನು ಪ್ರಾರ್ಥಿಸಿದನು.

"ಸನ್ಯಾಸಿಯಾಗಿರುವ ನಾನು ಆಶೀರ್ವಾದವಿನಹ ನಿನಗೇನು ಮಾಡೇನು?"

"ಅಲ್ಲ, ಅಲ್ಲ, ನೀನೇ ನನಗೆ ಸಹಾಯಮಾಡತಕ್ಕವಳು."

"ಯಾವವಿಧದಲ್ಲಿ ನಿನಗೆ ಸೇವೆ ಮಾಡತಕ್ಕವಳು."

"ನನ್ನ ಪಾಪವಿಮೋಚನೆ ಮಾಡುವರೂಪದಲ್ಲಿ"

ಎಂದು ಹೇಳಿ ರಾಣನು ತನ್ನ ಕಪಟ ವೇಷವನ್ನು ಬಿಟ್ಟು ಯಥಾರ್ಥ ಸ್ವರೂಪದಿಂದ ದೇವಿಯ ಹತ್ತಿರ ನಿಂತುಕೊಂಡನು. ಆಗ ಆಕೆಯ ಹೃದಯದಲ್ಲಿ ಜನಿಸಿದ ದುಃಖಾದ್ಭುತಗಳಿಗೆ ಸ್ಥಳವು ಸಾಲದಾಯಿತು. ಆಕೆಯು ತನ್ನ ಮನೋನಾಯಕನನ್ನು ಪ್ರೇಮದಿಂದಾದರಿಸಿ ಮೀವಾರು ರಾಜ್ಯವನ್ನು ಪ್ರವೇಶಿಸಿದಳು. ತರುವಾಯ ಆಕೆಯು ಮೀವಾರು ರಾಜ್ಯಕ್ಕೆ ನಾಯಕಮಣಿಯಾಗಿ ಭೂತದಯೆ, ಭಗವನ್ನಾಮ ಸಂಕೀರ್ತನೆ ಮುಂತಾದವುಗಳಿಂದ ಚಲಿಸದೆ, ನಿಗರ್ವಚೂಡಾಮಣಿಯಾಗಿ ಭರ್ತನೊಡಗೂಡಿ ಬಹಳಕಾಲ ಸುಖವಾಗಿದ್ದಳು. ರಾಣನು ಪತಿವ್ರತಾಶಿರೋಮಣಿಯೂ ಭಕ್ತಾಗ್ರೇಸರಳೂ ಆದ ತನ್ನ ಭಾರ್ಯೆಯಿಂದ ಭಗವದ್ವಿಷಯಿಕಜ್ಞಾನವನ್ನು ಹೊಂದಿ ಭಕ್ತನಾಗಿ ಜನಗಳಿಂದ ಕೊಂಡಾಡಲ್ಪಟ್ಟನು. ಆ ಪುಣ್ಯಾಂಗನೆಯ ಪವಿತ್ರವಾದ ನಾಮಾಕ್ಷರಗಳೆಲ್ಲವೂ ಅವರಿಂದ ಈಗಲೂ ಸ್ಮರಿಸಲ್ಪಡುತ್ತವೆ.

ಶ್ರೀರಾಮಚಂದ್ರ ಪ್ರಸನ್ನ.

ರಾಣೀ ತಾರಾಬಾಯಿ.

[ಲೇಖಕ:— ಹೈಸ್ಕೂಲ ವಿದ್ಯಾರ್ಥಿ, ಸುಂದರಶರ್ಮ, ಚಿತ್ರದುರ್ಗ.]

ಶೂರಸೇನನೆಂಬ ರಾಜನಿಗೆ ತೋಡಾ ಎಂಬ ವಿಸ್ತಾರವಾದ ರಾಜ್ಯವುಂಟು; ಆದರೆ ಯುದ್ಧಗಳಿಂದ ತುಂಬಿರುವ ಆ ಕಾಲದಲ್ಲಿ ತನಗಿದ್ದ ರಾಜ್ಯವೆಲ್ಲವನ್ನೂ ಸುರಕ್ಷಿತವಾಗಿ ಕಾಪಾಡಿಕೊಳ್ಳುವಂತಹ ವೀರತ್ವವುಳ್ಳವನಾವನೂ ಕಾಣಬರುತ್ತಿರಲಿಲ್ಲ. ಈತನ ಸ್ಥಿತಿಯು ಅಂತಹುದೇ! ಆಗಣ ದಿಲ್ಲಿ ಚಕ್ರವರ್ತಿಯಾದ ಅಲ್ಲಾವುದ್ದೀನನು ಆತನ ರಾಜ್ಯದಮೇಲೆ ದಾಳಿಯಿಟ್ಟನು. ಶೂರಸೇನನ ಯೋಧವರರು ಘೋರವಾದ ಯುದ್ಧದಲ್ಲಿ ಕಾದಿ ಕಾದಿ ಪೆಟ್ಟುತಿಂದು ನಿರುತ್ಸಾಹರಾಗಿದ್ದ ಸಮಯದಲ್ಲಿ ಆಫ್ಘನ್ ದೇಶಸ್ಥನಾದ ಲೈಲಾ ಎಂಬಾತನು ತೋಡಾ ರಾಜ್ಯದಮೇಲೆ ದಂಡೆತ್ತಿ ಶೂರಸೇನನನ್ನು ಸೋಲಿಸಿ ರಾಜ್ಯಭ್ರಷ್ಟನನ್ನಾಗಿ ಮಾಡಿ ತನ್ನ ವಿಜಯಧ್ವಜವನ್ನೆತ್ತಿದನು. ಶೂರಸೇನನು ರಾಜ್ಯಭ್ರಷ್ಟನಾಗಿ ಮೀವಾರು ರಾಣನಾದ ರಾಯಮಲ್ಲನಿಂದ ಪಾಲಿಸಲ್ಪಡುವ ಬಿಜನೂರಿಗೆ ಹೋಗಿ ಅಲ್ಲಿ ಮರೆಮಾಡಿಕೊಂಡು ಮಿಕ್ಕವಿಚಾರವನ್ನು ತಿಳಿಯುತ್ತಾ ಶತ್ರುತ್ವವನ್ನು ತೀರಿಸಲು ಸುಸಮಯವನ್ನು ಕಾದಿದ್ದನು.

ಶೂರಸೇನನಿಗೆ ಸುಂದರವದನಾರವಿಂದಳಾದ ಒಬ್ಬ ಚಿಕ್ಕ ಹುಡಿಗಿಯಿರುವಳು. ಆ ಮುದ್ದು ಹುಡಿಗಿಯ ಹೆಸರೇ ತಾರಾಬಾಯಿ. ಆ ಹುಡಿಗಿಯು ಚಿಕ್ಕವಳಾದರೂ ತನ್ನಪ್ರಿಯ ಜನಕನ ರಾಜ್ಯವು ಮಹಮ್ಮದೀ ಪ್ರಭುವಿನೊಳಪಡಲು ಸ್ವಲ್ಪವಾದರೂ ಸಹಿಸಲಿಲ್ಲ. ಪ್ರೇಮಾಸ್ಪದನಾದ ತನ್ನ ಜನಕನು ಹೀಗೆ ರಾಜ್ಯವನ್ನು ಸೋತು ಹೋದುದಕ್ಕೆ ದುಃಖಿಪಡುತ್ತಾ ಹೋದ ರಾಜ್ಯವನ್ನು ಮರಳಿ ತೆಗೆದುಕೊಳ್ಳುವದಕ್ಕೆ ತಕ್ಕ ಸಾವಿರಾರು ಉಪಾಯಗಳನ್ನು ಮಾಡುತ್ತಿದ್ದಳು. ಆ ವಿಷಯವು ತನ್ನ ಮನಸ್ಸಿಗೆ ತೋಚಿದಾಗಲೆಲ್ಲಾ “ಅಯ್ಯೋ! ನಾನು ನನ್ನ ತಂದೆಗೆ ಪುತ್ರನಾಗಿ ಜನಿಸಿದ್ದರೆ ಡಾಲನ್ನೂ ಖಡ್ಗವನ್ನೂ ಸೊಂಟದಲ್ಲಿ ಧರಿಸಿ ಕ್ಷಾತ್ರವಂಶನಾದ ನನ್ನ ಜನ್ಮವನ್ನು ಸಾರ್ಥಕ ಮಾಡಿ ತಂದೆತಾಯಿಗಳ ಋಣವನ್ನು ವಿಮುಕ್ತ ಮಾಡದಿರುತ್ತಿದ್ದೆನೇ!” ಎಂದು ವಿಚಾರಿಸುತ್ತಿದ್ದಳು. ಹೀಗಿರಲು ಆ ಹುಡಿಗಿಗೆ “ನಾನು ಏತಕ್ಕೆ ರಾಜಕುಮಾರನ ಹಾಗೆ ಶಸ್ತ್ರವಿದ್ಯೆಯನ್ನು ಕಲಿಯಕೂಡದು? ಪೂರ್ವಕಾಲದಲ್ಲಿ ನಮ್ಮ ವಂಶದಲ್ಲಿ ಸ್ತ್ರೀಯರು ವೀರವನಿತೆಯರಾಗಿ ಯುದ್ಧಯಾತ್ರೆಯನ್ನು ಮಾಡುತ್ತಿರಲಿಲ್ಲವೇ! ನಾನು ಯಾಕೆ ಅಭ್ಯಾಸ ಮಾಡಕೂಡದು?” ಎಂಬ ನಿಶ್ಚಯಾಭಿಪ್ರಾಯ ಹುಟ್ಟಿತು.

ಆ ಕ್ಷಣದಿಂದ ಆಕೆಯು ಒಂದು ನಿಮಿಷವನ್ನಾದರೂ ವೃಥಾ ಕಳೆಯುತ್ತಿರಲಿಲ್ಲ. ತನ್ನ ಸುಕುಮಾರ ಮೂರ್ತಿಗೆ ಬೇಕಾದ ಮನೋಹರ ವಸ್ತ್ರಗಳನ್ನೂ ಆಭರಣಗಳನ್ನೂ ತೆಗೆದುಹಾಕಿ ದೇಹಪರಿಶ್ರಮೆಗೆ ಬೇಕಾದುದನ್ನು ಧರಿಸಿ ಅವಯವಪಟುತ್ವಕ್ಕೋಸುಗ ವ್ಯಾಯಾಮವನ್ನು ಮಾಡಸಾಗಿದಳು. ಆಕೆಯು ಕ್ರಮಕ್ರಮವಾಗಿ ಶಸ್ತ್ರವಿದ್ಯೆಯನ್ನು ಚೆನ್ನಾಗಿ ಕಲಿತು, ರಣಶೂರರಾದ ವೀರಾಗ್ರೇಸರರನ್ನು ಬರಮಾಡಿ “ತೋಡಾ” ವನ್ನು ಆಕ್ರಮಿಸಿದ ಮಹಮ್ಮದೀಯರನ್ನು ಹೊರಡಿಸಲು ಉಪಾಯಗಳನ್ನು ಅವರೊಡನೆ ಆಲೋಚಿಸುತ್ತಿದ್ದಳು. ಈಕೆಯು ಕುದರೆಯ ಸವಾರಿಯಲ್ಲಿ ಸಮರ್ಥಳು. ಎಂತಹ ದುಷ್ಟ ಕುದರೆಯನ್ನಾದರೂ ತನ್ನ ವಶಮಾಡಿಕೊಳ್ಳಬಲ್ಲಳು. ಈಕೆಗಿಂತ ಚೆನ್ನಾಗಿ ಸವಾರಿಮಾಡತಕ್ಕ ಯೋಧವರರು ಆಕೆಯ ತಂದೆಯಹತ್ತಿರ ಇರಲೇ ಇಲ್ಲ.

ಶೂರಸೇನನು ತನಗಿದ್ದ ಸೇನಾಸಮೂಹವನ್ನು ಸಿದ್ಧಮಾಡಿಕೊಂಡು ತೋಡಾಮೇಲೆ ದಂಡೆತ್ತಿ ಹೋದನು. ತಾರಾಬಾಯಿಯು ಪುರುಷರೂಪವನ್ನು ಧರಿಸಿ ಹುಳುಕಿಲ್ಲದ ಧೈರ್ಯಪಾಟವದಲ್ಲಿ ತನ್ನ ತಂದೆಗೆ ಹೆಚ್ಚು ಸಂತೋಷವನ್ನುಂಟುಮಾಡುತ್ತ ಸೇನಾ ಸಮುದಾಯದ ಸಂಗಡ ಹೋಗುತ್ತಿದ್ದಳು. ಶತ್ರುಗಳನ್ನು ಜಯಿಸಿದವಿನಾ ಹಿಂದಕ್ಕೆ ಬರಕೂಡದೆಂದು ತಂದೆಯನ್ನು ಪ್ರೋತ್ಸಾಹಿಸುತ್ತ ಆತನ ಹೃದಯದಲ್ಲಿ ನಾಟಿಕೊಂಡಿದ್ದ ಶತ್ರುವಿದ್ವೇಷವನ್ನು ಬಲಪಡಿಸಿದಳು. ಆದರೆ ಆಫ್ಘನ್‌ರ ಸೈನ್ಯವು ಮಿತಿಮೀರಿದ್ದಿತು. ತಾರೆಗೆ ಜಯಲಕ್ಷ್ಮಿಯು ಒಲಿಯಲು ಇದು ಸುಸಮಯವಾಗದಾಯಿತು. ಶೂರಸೇನನ ಸೈನ್ಯವು ಸೋತು ದಿಕ್ಕುಗೆಟ್ಟು ಬಿಜನೂರಿಗೆ ಓಡಿ ಹೋಗಬೇಕಾಗಿ ಬಂದಿತು. ತಾರೆಯು ಮಾತ್ರ ಇದಕ್ಕೆಲ್ಲಾ ಸ್ವಲ್ಪವಾದರೂ ಚಲಿಸದೆ ತುಟಿಯನ್ನು ಕಚ್ಚಿಕೊಂಡು ಪ್ರಕಾಶಮಾನವಾದ ಕಠಿಣ ನೋಟಗಳನ್ನು ನೋಡುತ್ತ ಸೊಂಪಾದ ತನ್ನ ಕುದರೆಯಮೇಲೆ ಗಂಭೀರ ಭಾವದಿಂದ

ಕುಳಿತುಕೊಂಡು ಇಷ್ಟಕ್ಕೆ ಹತ್ತರಷ್ಟು ದ್ವೇಷವನ್ನು ತೀರಿಸಿಕೊಳ್ಳದೆ ಹೋಗುವೆನೆ'' ಎಂದು ಶಪಥವನ್ನು ಮಾಡಿಕೊಳ್ಳುತ್ತ ಹಿಂತಿರುಗಿದಳು; ಮತ್ತೆ ಆಕೆಯು ಶತ್ರುನಿರ್ಮೂಲಕ್ಕೋಸುಗ ದಿಟ್ಟವಾದ ಪ್ರಯತ್ನಗಳನ್ನು ಮಾಡಲು ನಿಶ್ಚಯಿಸಿಕೊಂಡಳು.

ತಾರೆಯ ಮನೋಹರಾಕಾರವೂ, ಅನನ್ಯ ಸಾಮಾನ್ಯವಾದ ಧೈರ್ಯ ಗಾಂಭೀರ್ಯಾದಿ ಗುಣಗಳೂ ಶಸ್ತ್ರವಿದ್ಯಾನೈಪುಣ್ಯವೂ ಅನೇಕ ರಾಜರ ಹೃದಯಗಳಲ್ಲಿ ಮೋಹವನ್ನುಂಟು ಮಾಡಿತು. ರಾಜಪುತ್ರ ಪ್ರಭುಗಳು ಅನೇಕ ಕಾಣಿಕೆಗಳಿಂದ ಮರ್ಯಾದಾಪೂರ್ವಕವಾದ ಸಂಭಾವನೆಗಳನ್ನು ಕಳುಹಿ ಆಕೆಯನ್ನು ಪಾಣಿಗ್ರಹಣ ಮಾಡಿಕೊಳ್ಳಲು ಕೋರಿದರು. ಶೂರಸೇನನು ಆ ಸಂದೇಶಗಳನ್ನು ತನ್ನ ಮುದ್ದು ಕುವರಿಯ ಬಳಿಗೆ ಕಳುಹಲು "ಪೂಜ್ಯನಾದ ನನ್ನ ತಂದೆಯ ರಾಜ್ಯವನ್ನು ಮರಳಿ ಹಿಂದಕ್ಕೆ ತಂದು ಕಾಣಿಕೆಯಾಗಿ ಯಾವನು ಕೊಡಬಲ್ಲನೋ ಅಂತಹನೇ ನನ್ನನ್ನು ವಿವಾಹ ಮಾಡಿಕೊಳ್ಳುವನು.'' ಎಂದು ಆಕೆಯು ಆ ಸಂದೇಗಳಿಗೆಲ್ಲಾ ಒಂದೊಂದಕ್ಕಾಗಿ ಸದುತ್ತರವಿತ್ತಳು.

ಆದರೆ ಯಾರು ಆ ಮಹಮ್ಮದೀಯ ಪ್ರಭುಗಳನ್ನು ಎದುರಿಸಿ ಅವರ ಅಸಂಖ್ಯಾತವಾದ ಸೈನ್ಯಪ್ರವಾಹಗಳಿಗೆ ತನ್ನ ಜೀವಿತವನ್ನೊಪ್ಪಿಸಲು ಸಾಹಸಪಡುವರು? ಎಂತಹ ರಾಜಕುಮಾರನಾದರೂ ಎಂತಹ ರಾಜಪ್ರಭುವಾದರೂ ಆಕೆಯ ವಾಂಛಿತವನ್ನು ಪೂರ್ತಿಮಾಡಲು ಸಾಹಸಪಡಲಿಲ್ಲ. ಕಡೆಗೆ ರಾಯಮಲ್ಲನ ಕುಮಾರನಾದ ಜಯಮಲ್ಲನು ತಾರೆಯ ಕೋರಿಕೆಯನ್ನು ತಾನೇ ನಡೆಸುವವನೆಂದು ಪ್ರಗಲ್ಭ ಮಾತುಗಳನ್ನಾಡಿದನು. ಈ ವಾರ್ತೆಯು ಆಕೆಯ ಕಿವಿಗೆ ಸೋಂಕಿದೊಡನೆಯೇ ಆ ಆನಂದಕ್ಕೆ ಮೇರೆಯಿಲ್ಲದಿತ್ತು. ಜಯಿಸಿದ್ದರೆ ಬರುತ್ತಿದ್ದಂತಹ ಆನಂದಬಾಷ್ಪವು ಆಕೆಯ ಕಣ್ಣುಗಳಿಂದ ಹೊರಬೀಳಲಾರಂಭಿಸಿತು. ಶೂರಸೇನನು ಆತನ ಮಾತನ್ನು ಕೇಳಿ, ಬಿಜನೂರಿಗೆ ಬಂದು ತಾರೆಯನ್ನು ದರ್ಶಿಸಬಹುದೆಂದು ವರ್ತಮಾನವಿತ್ತನು. ಜಯಮಲ್ಲನು ಆ ಪುರವನ್ನು ಹೊಕ್ಕು ತಾರಾಬಾಯಿಯ ದರ್ಶನಮಾಡಿಕೊಂಡು ತನ್ನ ಹೃದಯದಲ್ಲಿನ ಕಾಪಟ್ಯವನ್ನು ಅಡಗಿಸಲು ಆಕೆಯೊಂದಿಗೆ ಹುಚ್ಚು ಹುಚ್ಚು ಮಾತುಗಳನ್ನು—ನೀಚಮಾತುಗಳನ್ನು ಉಚ್ಚರಿಸ ತೊಡಗಿದನು. ಸಮೀಪದಲ್ಲಿ ನಿಂತುಕೊಂಡಿದ್ದ ಶೂರಸೇನನು ಆ ಮಾತುಗಳನ್ನು ಕೇಳಿದೊಡನೆಯೇ ಕ್ರೋಧಪರವಶನಾಗಿ ತೀವ್ರವಾಗಿ ತನ್ನ ಖಡ್ಗವನ್ನು ತೆಗೆದುಕೊಂಡು ಅವನನ್ನು ಕಡಿದುಹಾಕಿದನು. ಈ ತಲ್ಲಣವು ರಾಜಪುತ್ರವೀರರ ಆಸ್ಥಾನಕ್ಕೆ ತಿಳಿದೊಡನೆಯೆ ಅವರೆಲ್ಲರೂ ನಿನ್ನ ಮಗನನ್ನು ಕಡಿದಿರುವವನಿಗೆ ತಕ್ಕ ಶಿಕ್ಷೆಯನ್ನು ವಿಧಿಸೆಂದು ರಾಯಮಲ್ಲನನ್ನು ಪ್ರೋತ್ಸಾಹಿಸಿದರು. ಆದರೆ ಆತನು ಧರ್ಮಿಷ್ಠನಾಗಿ, 'ಅಸತ್ಯವಾದ ವಾಗ್ದಾನಗಳನ್ನೂ ಅಯೋಗ್ಯವಾದ ಕಾರ್ಯಗಳನ್ನೂ ನಿಜವಾದ ರಾಜಪುತ್ರನಾವನೂ ಮಾಡಲಾರನು. ಆ ನೀಚನು ಅಂತಹ ಮೃತ್ಯುವನ್ನು ಹೊಂದಬೇಕಾದುದೇ! ಅವನನ್ನು ವಿಧಿಸಿದ ವೀರನನ್ನು ಬಿಜನೂರಿನಲ್ಲಿ ಪ್ರಭುತ್ವ ಮಾಡಲು ಬಿಡನು'' ಎಂದು ಆಣತಿಯಿತ್ತನು.

ರಾಯಮಲ್ಲನ ದ್ವಿತೀಯ ಪುತ್ರನು ಪ್ರಥ್ವೀರಾಜನು. ಆತನು ಬಹಳ ಸಾಹಸಿಯು; ಸ್ವೇಚ್ಛಾನುವರ್ತಿ. ಆತನು ತನ್ನ ಸೋದರನ ಮರಣವನ್ನೂ ತಾರಾಬಾಯಿಯ ನಿಯಮವನ್ನೂ ಕೇಳಿದನು. ತೋಡಾದಲ್ಲಿರುವ ಆಫ್‌ಘನ್ ನಾಯಕನ ಮೇಲೆ ದಂಡೆತ್ತಿಹೋಗಿ ಆತನನ್ನು ಸೋಲಿಸಿದರೆ ಬಹಳ ಕೀರ್ತಿದಾಯಕವೆಂದು ತಿಳಿದನು. ಶೀಘ್ರವಾಗಿಯೇ ಆತನು ಬಿಜನೂರಿಗೆ ಹೋಗಿ ಶೂರಸೇನನನ್ನು ನೋಡಿಕೊಂಡು ತನ್ನ ಕೋರಿಕೆಯನ್ನು ಆತನಿಗೆ ನಿವೇದಿಸಿದನು. ತರುವಾಯ ಆತನೊಡನೆ ತಾರಾಬಾಯಿಯ ಬಳಿಗೆ ಹೋದನು. ಬಂದ ರಾಜಕುಮಾರನ ಮೇಲೆ ತಾರಾಬಾಯಿಯು ತನ್ನ ನೋಟವನ್ನು ಪ್ರಸರಿಸಿ, "ಆಫ್‌ಘನ್‌ರನ್ನು ತೋಡಾರಾಜ್ಯದಿಂದ ಹೊರಡಿಸಿ ಆದನ್ನು ನಮ್ಮ ತಂದೆಗೆ ಸಮರ್ಪಿಸಬಲ್ಲೆಯಾ? " ಎಂದು ಕೇಳಿದಳು.

ಆದಕ್ಕೆ "ತೋಡಾರಾಜ್ಯವನ್ನು ನಾನು ಜಯಿಸಿ ನಿಮ್ಮ ತಂದೆಗೆ ಕೊಡಬಲ್ಲೆನು. ರಾಜಪುತ್ರನ ವಿಶ್ವಾಸದ ಮೇಲೆ ಆಣೆಯಿಟ್ಟುಕೊಂಡು ಹೇಳುತ್ತಿರುವೆನು." ಎಂದು ಸ್ಥಿರವಾದ ಪ್ರತ್ಯುತ್ತರವನ್ನು ಪೃಥ್ವೀರಾಜನಿಂದ ಆಕೆಯು ಕೇಳಿದಳು. ಕೂಡಲೆ ಅವರಿಬ್ಬರಿಗೂ ಮಹೋತ್ಸವವು ಆಗ ಸಾಗಿತು. ಯುದ್ಧ ಸನ್ನಾಹಗಳು ಕೂಡ ಹಿಂದೆ ಹಿಂದೆಯೇ ಮಾಡಲಾದವು.

ನಿಜವಾಗಿಯೂ ಪೃಥ್ವೀರಾಜನು ಸಂಗ್ರಾಮವಿದ್ಯೆಯಲ್ಲಿ ಅಸಮಾನ ಪ್ರಜ್ಞಾವಂತನಾದುದರಿಂದಲೇ ಮಹಮ್ಮದೀಯರಿಗೆ ಪವಿತ್ರವಾದ ಮೋಹರಂ ದಿನಗಳಲ್ಲಿ ಶತ್ರುವಾದಾ ಆಫ್‌ಘನ್ನನ್ನೆದಿರಿಸಲು ಸುಸಮಯವೆಂದೇರ್ಪಡಿಸಿದನು. ಆ ಸಮಯದಲ್ಲಿ ಮಹಮ್ಮದೀಯರು ತಮ್ಮ ಜಾತಿಯವರಾದ ಹಸ್ಸನ್ ಹುಸೇನ್ ಎಂಬವರು ಮರಣಹೊಂದಿದಕ್ಕೆ ವಿಷಣ್ಣಹೃದಯರಾಗಿ ಅಸ್ತ್ರಸನ್ಯಾಸವನ್ನು ಮಾಡಿಕೊಂಡು "ತೆಜಿಯಾ" ಹಾಕಲು ಅವರ ಆತ್ಮವನ್ನು ಗೌರವಿಸುವುದಕ್ಕಾಗಿ ಗುಂಪುಸೇರುವರು. ಪೃಥ್ವೀಶನು ಸೈನ್ಯಪರಿವೃತನಾಗಿ ವೀರಪುರುಷನ ರೂಪವನ್ನು ಧರಿಸಿದ್ದ ತಾರೆಯೊಡನೆ ತೋಡಾವನ್ನು ಸೇರಿದನು. ಆ ಸಮಯದಲ್ಲಿ ಮಹಮ್ಮದೀಯರು ಚಿರಕಾಲ ಶುಷ್ಕೋಪವಾಸಗ

ಳಿಂದ ಬಳಲಿದವರಾಗಿ ದುಃಖಾಕ್ರಾಂತರಾಗಿ ಸಮಾಧಿಗಳ ಹತ್ತಿರ ಮೊಣಕಾಲೂರಿ ಕುಳಿತಿದ್ದರು. ನಗರ ಪ್ರಾಕಾರದ ನಿರ್ಜನ ಪ್ರದೇಶದಲ್ಲಿ ತಮ್ಮ ಸೇನೆಗಳನ್ನು ಬಿಡಿಸಿ ಪೃಥ್ವೀಶನೂ ತಾರಾದೇವಿಯೂ ವಿಶ್ವಾಸಪಾತ್ರನಾದ [illegible] ಯೋಧವರನನ್ನು ಸಂಗಡ ಕ[illegible] ತ್ತಲು ಪರವಶರಾಗಿರುವ ಜನ[illegible]. ಪಟ್ಟಣ ಮಧ್ಯಭಾಗದಲ್ಲಿ ವಿಜಯಸಾಧಕ[illegible] ಈ ಉತ್ಸವವು ನಡೆಯುತ್ತಿತ್ತು. ಶತ್ರುವಾದ ಅಫ್ಘನ್ ನಾಯಕನು ಉತ್ಸವ ಸಮೂಹವನ್ನು ಕಲೆತುಕೊಳ್ಳಲು ಸಮೀಪ ಮಂದಿರ ಪ್ರಾಂಗಣದ ಹತ್ತಿರ ಸಿದ್ಧವಾಗಿ ನಿಂತುಕೊಂಡಿದ್ದನು. ಹೀಗಿದ್ದು ಹತ್ತಿರಿದ್ದವರನ್ನು ನೋಡಿ:—

"ಈ ಗುಂಪಿನಲ್ಲಿ ಮೂವರು ಹೊಸಬರಾಗಿ ಕಾಣುವರು? ಅವರೆಲ್ಲರೂ ಎಲ್ಲಿಯವರು?" ಎಂದು ಪ್ರಶ್ನಿಸಿದನು.

"ಅಯ್ಯಾ! ಎಲ್ಲಿ?"

"ಅಲ್ಲಿ— ವೀರನ ಸಮೀಪದಲ್ಲಿರುವವರಾರು?"

ಈ ಸಮಯದಲ್ಲಿ ಸೂಟತಪ್ಪಿದ ಗುರಿಯಿಂದ ಒಂದು ತೀವ್ರವಾದ ಬಾಣವು ಮಹಮ್ಮದೀಯ ನಾಯಕನ ಪ್ರಶ್ನೆಗಳಿಗುತ್ತರವಿತ್ತಿತು. ದುಃಖ ಸೂಚಕಗಳಾದ ಕಪ್ಪು ಬಟ್ಟೆಗಳನ್ನು ಧರಿಸಿರುವ ಅಫ್‌ಘ್ನ ನಾಯಕನಾದ ಲೈಲಾಮಿಯು ಗತಪ್ರಾಣನಾಗಿ ಭೂಮಿಯ ಮೇಲೆ ಬಿದ್ದನು. ಒಂದು ನಿಮಿಷದಲ್ಲಿಯೇ ಜನಗಳ ರೋದನವಡಗಿತು. ವಿಚಾರಗಳಿಂದ ತುಂಬಿದ ತಮ್ಮ ಹೃದಯಗಳನ್ನು ಮುಷ್ಟಿ ಘಟ್ಟಣೆಗಳಿಂದ ಒಪ್ಪಿಸುವದು ನಿಂತುಹೋಯಿತು.

ಒಂದಿಷ್ಟು ಕಾಲ ಅವರೆಲ್ಲರೂ ವಿಚಿತ್ರ ರೂಪಗಳನ್ನುವಹಿಸಿದ್ದರು. ಆಗ ಆ ಪ್ರದೇಶವು ಬಹಳ ಭೀತಾವಹವಾಗಿ ಕಾಣುತ್ತಿದ್ದಿತು. ಕೆಲವು ಜನರು ಎಲ್ಲಿಯೋ ಓಡಿ ಹೋದರು. ಮತ್ತೆ ಕೆಲವರು ಜನಸಮೂಹದ ನಡುವೆ ತಮಗಾಗಿ ಬಹಳ ಆಯಾಸದಿಂದ ಮಾರ್ಗವನ್ನು ಮಾಡಿಕೊಳ್ಳುತ್ತಾ, ನಡೆದು ಹೋಗುತ್ತಿರುವ ಆ ನೂತನ ವಿಗ್ರಹಗಳನ್ನು ಹಿಂಬಾಲಿಸಲು ಹೋಗುತ್ತಿದ್ದರು. ಮೊದಲಿನ ಮೂವ್ವರು ನಗರ ಪ್ರಾಕಾರ ದ್ವಾರದ ಕೊನೆಗೆ ಸೇರಿದರು ದ್ವಾರಕ್ಕಡ್ಡಾಗಿ ದೊಡ್ಡ ಆನೆಯೊಂದು ನಿಂತುಕೊಂಡು ಅವರಿಗೆ ಮಾರ್ಗನಿರೋಧವನ್ನು ಮಾಡುತ್ತಿದ್ದಿತು. ಹಿಂದಿನಿಂದ ಇವರ ಮೇಲೆ ಕಲ್ಲುಮಳೆಯು ಸುರಿಯಆರಂಭಿಸಿತು. ಆಗ " ಸೊಂಡಿಲನ್ನು ಚಂಡಾಡು " ಎಂದು ಪೃಥ್ವೀರಾಜನು ಸಂಜ್ಞೆಮಾಡಲು ತಾರಾದೇವಿಯು ತನ್ನ ಖಡ್ಗದಿಂದ ಮಾರ್ಗಾವರೋಧಿಯಾದ ಆ ಆನೆಯ ಹಸ್ತವನ್ನು ತೀವ್ರವಾಗಿ ಗಾಯಮಾಡಿದಳು. ಅದೂ ಕೂಡಾ ಘಟ್ಟಿಯಾಗಿ ಚೀತ್ಕಾರ ಮಾಡುತ್ತ ಮುಂದಕ್ಕೆ ನುಗ್ಗಿ ಜನರ ಸಮೂಹದಲ್ಲಿ ಬಿದ್ದು ಚಿಲ್ಲಾಪಿಲ್ಲಿ ಮಾಡಸಾಗಿತು.

ಈ ಪ್ರಕಾರ ವೀರ ಮೂರ್ತಿಗಳಾದ ಮೂವ್ವರೂ ದ್ವಾರವನ್ನು ಬಿಟ್ಟು ಹೊರಕ್ಕೆ ಬಂದರು. ಇವರು ಮಾಡಿದ ಸಾಹಸ ಕಾರ್ಯಕ್ಕೆ ಕೋಪಾವೇಶದಿಂದೊಡಗೂಡಿದವರಾಗಿ ಮಹಮ್ಮದೀಯರೆಲ್ಲರೂ ಒಂದೇ ಸಾರಿ ಯುದ್ಧಸನ್ನದ್ಧರಾಗಿ ನಿಂತಿದ್ದ ರಾಜಪುತ್ರರ ಬಲದ ತುದಿಯನ್ನು ಮುಟ್ಟಿದರು. ಆಗ ರಾಜಪುತ್ರರು ಶತ್ರುಗಳನ್ನು ತಾಗಿ ಅವರನ್ನು ಹಿಮ್ಮೆಟ್ಟಿಸಿದರು. ಮಹಮ್ಮದೀಯರು ರಾಜಪುತ್ರರ ಶಸ್ತ್ರಗಳಿಗೆ ತಮ್ಮ ಪ್ರಾಣವನ್ನು ಕೊಡಲಾರದೆ ತೋಡಾವನ್ನು ಬಿಟ್ಟು ಓಡಿಹೋದರು. ಈ ವಿಧದಿಂದ ತೋಡಾ ಜಯಿಸಲ್ಪಟ್ಟಿತು. ಸಫಲೀಕೃತ ಮನೋರಥಳಾಗಿ ಸುಖಾನಂದ ಸಮುದ್ರದಲ್ಲಿ ತೇಲಾಡುತ್ತಿದ್ದ ತಾರಾದೇವಿಯು ಆ ಪಟ್ಟಣವನ್ನು ಮನೋಹರವಾಗಿ ಅಲಂಕರಿಸಿ ತನ್ನ ಪ್ರಿಯ ಜನಕನನ್ನು ಸಂಗಡ ಕರೆತರಲು ಒಂದು ಶಕಟವನ್ನು ಕಳುಹಿಸಿದಳು. ಶೂರಸೇನನು ತನ್ನ ಮುದ್ದು ಮಗಳಿಂದ ಕಳುಹಲ್ಪಟ್ಟ ಶಕಟವನ್ನೇರಿ ತೋಡಾ ಪಟ್ಟಣಕ್ಕೆ ಹೋದನು. ಪುರಜನರು ತಮ್ಮ ಪೂರ್ವ ನಾಯಕನ ಬರುವಿಕೆಗೆ ಸಂತಸಗೊಂಡು ಪ್ರೀತಿ ಪೂರ್ವಕವಾಗಿ ಆತನನ್ನು ಗೌರವಿಸಿದರು. ಶೂರಸೇನನ ಕೇತನವು ತೋಡಾ ಕೋಟೆಯ ಮೇಲೆ ಪುನಃಪ್ರಕಾಶಮಾನವಾಯಿತು. ಸಾಹಸೌದಾರ್ಯ ಗುಣಸಂಪತ್ತಿಯಿಂದೆ ವಿರಾಜಿಸುವ ತಾರೆಯಲ್ಲಿಯೂ, ತನ್ನ ನಿಯಮವನ್ನು ನೆರವೇರಿಸಿ ಪ್ರಕಾಶಮಾನನಾದ ತಾರಾಮನೋಹರನಲ್ಲಿಯೂ ಶೂರಸೇನನು ಅಧಿಕ ಕೃತಜ್ಞತೆಯನ್ನು ತೋರಿಸುತ್ತಾ ತನ್ನ ರಾಜ್ಯವನ್ನು ಸುಖದಿಂದ ಪಾಲಿಸತೊಡಗಿದನು.

ಇಷ್ಟರಲ್ಲಿಯೇ ಮಹಮ್ಮದೀಯರು ದ್ವೇಷವನ್ನು ಬಿಟ್ಟು ಸುಮ್ಮನಿರಲಿಲ್ಲ. ಅಜ್ಮೀರನ್ನು ಪಾಲಿಸುತ್ತಿದ್ದ ಮಹಮ್ಮದೀಯ ಪ್ರಭುವು ಪೃಥ್ವೀರಾಜನನ್ನು ಸಾಧಿಸಲು ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದನು. ಆದರೆ ತಾರಾದೇವಿಯು ತನಗೆ ಸಹಾಯವಾಗಿ ಬಂದ ನಿಜಸೇನೆಯಿಂದ ಕೂಡಿ ಆಕಸ್ಮಿಕವಾಗಿ ಆತನ ಮೇಲೆ ಬಿದ್ದು ಪರಾಜಿತನನ್ನಾಗಿ ಮಾಡಿ ಅಜ್ಮೀರನ್ನು ಸಹ ಸೇರಿಸಿಕೊಂಡಳು.

ರಾಯಮಲ್ಲನು ಅತಿವೃದ್ಧನಾಗಿ ಅಸಹಾಯನಾಗಿದ್ದುದರಿಂದ ತನ್ನ ಪುತ್ರನ ಆಗಮನವನ್ನು ಕೋರುತ್ತಿದ್ದನು. ಆದರೆ ಪೃಥ್ವೀರಾಜನು ಸ್ವೇಚ್ಛಾಲೋಲನಾಗಿ ತನ್ನ ಜನಕನ ಹತ್ತಿರಕ್ಕೆ ಹೋಗದೆ ಕಮಲಮೇರುದುರ್ಗದ ಪರ್ವತದುರ್ಗಗಳಿಗೆ ತನ್ನ ವೀರಪತ್ನಿಯ ಸಂಗಡಹೋಗಿ ಅಲ್ಲೊಂದು ದಿವ್ಯ ಮಂದಿರವನ್ನು ಕಟ್ಟಿಸಿದನು. ನಗರ ಪ್ರಾಕಾರಗಳು ಶತ್ರುಗಳಿ

ಗಭೇದ್ಯವಾಗಿದ್ದವು. ಪಟ್ಟಣದೊಳಗೆ ಪೌರಜನಗಳು ಶತ್ರುಭಯವಿಲ್ಲದೆ ಹಾಯಾಗಿ ಕಾವ್ಯರ ಮಾಡುತ್ತಿದ್ದರು. ಮೇಲಿನ ಪರ್ವತವು ಎತ್ತರವಾಗಿದ್ದಿತು. ಅದರ ಶಿಖರದ ಮೇಲೆ ಒಂದು ಮೇಘಮಂದಿರವು ನಿರ್ಮಿಸಲ್ಪಟ್ಟಿತ್ತು. ಆ ಭವನದಲ್ಲಿ ಪ್ರಿಯಕಾಂತೆಯಾದ ತಾರೆಯೊಂದಿಗೆ ಪೃಥ್ವೀರಾಜನು ಶತ್ರುಸಂಹಾರಕನಾಗಿಯೂ ದೀನ ರಕ್ಷಕನಾಗಿಯೂ ಮಹಾಬಲಶಾಲಿಯಾಗಿಯೂ ಅನೇಕ ಸಂವತ್ಸರಗಳು ಸುಖಜೀವನ ಮಾಡುತ್ತಿದ್ದನು. ಆ ಪರ್ವತದಲ್ಲೆಲ್ಲಿ ನೋಡಿದರೂ ರಕ್ಷಣವಿಲ್ಲದ ಸ್ಥಳವೇ ಇಲ್ಲ. ಅಲ್ಲಿದ್ದು ಆತನು ಅನೇಕ ದಂಡ ಯಾತ್ರೆಗಳನ್ನು ಮಾಡಿದನು. ಆತನೆಲ್ಲಿದ್ದರೂ ತಾರೆಯು ಆತನನ್ನು ಬಿಡದೆ ಆತನ ನೆಳಲನ್ನೇ ಆಶ್ರಯಿಸಿದ್ದಳು. ರಾಜಪುತ್ರರು ಪೃಥ್ವೀರಾಜನ ನಿರಂಕುಶವಾದ ವಿಜಯಧ್ವಜಕ್ಕೆ ದಾಸರಾಗಿದ್ದರು.

ಪೃಥ್ವೀರಾಜನಿಗೊಬ್ಬ ಸೋದರೀಮಣಿ ಇರುವಳು. ಆಕೆಯು ಶಿರೋಹೀ ರಾಜಕುಮಾರನಿಗೆ ಪತ್ನಿಯಾದಳು. ಆತನಲ್ಲಿ ರಾಜಚಿಹ್ನೆಗಳಾವವೂ ಕಾಣಬರದಿದ್ದವು. ಮಿತಿಮೀರಿದ ಅಫೀಮು ಆತನಿಗೆ ಮುಖ್ಯವಾಗಿದ್ದಿತು. ಅದರ ಮದದಿಂದ ಆ ರಾಜಪುತ್ರನು ಮೈಮರೆತು ತನ್ನ ಕಾಂತೆಯಲ್ಲಿ ಅಗೌರವದಿಂದ ಪ್ರವರ್ತಿಸ ತೊಡಗಿದನು. ಮಿತಿಯಿಲ್ಲದೀ ಅವಮಾನವನ್ನು ಸಹಿಸಲಾರದೆ ಆ ರಾಜಕುವರಿಯು ತನ್ನ ಸೋದರನಿಗೆ "ಸೋದರಾ! ನನ್ನನ್ನು ಭರ್ತನಿಂದ ಕಾಪಾಡು ನನ್ನನ್ನು ತವರುಮನೆಗೆ ಕರೆದುಕೊಂಡು ಹೋಗು. ಇಲ್ಲಿ ನಾನಿನ್ನಿರಲಾರೆನು." ಎಂದು ವರ್ತಮಾನವನ್ನು ಕಳುಹಿಸಿದಳು.

"ನಾನು ಬರುತ್ತಿದ್ದೇನೆ." ಎಂದು ಪೃಥ್ವೀರಾಜನಾಕೆಗೆ ಪ್ರತ್ಯುತ್ತರವಿತ್ತನು.

ಒಂದುದಿನ ನಿಶಾಸಮಯದಲ್ಲಿ ಶಿರೋಹೀ ರಾಜಕುಮಾರನು ಅಫೀಮನ್ನು ಸೇವಿಸಿ ಮತ್ತನಾಗಿ ತನ್ನ ಹಾಸಿಗೆಯ ಮೇಲೆ ಶರೀರವನ್ನು ಮರೆತು ಬಿದ್ದಿದ್ದನು. ಸಮೀಪದಲ್ಲಿ ತನ್ನ ಭಾರ್ಯೆಯು ಸ್ಫಟಿಕ ನೆಲದ ಮೇಲೆ ವ್ಯಾಕುಲಚಿತ್ತಳಾಗಿ ಧೈರ್ಯವನ್ನು ಬಿಟ್ಟು ನಿದ್ರೆಯಿಲ್ಲದೆ ಆಲೋಚನಾಪರವಶಳಾಗಿ ಮಲಗಿದ್ದಳು. ಅಯ್ಯೋ! ಏನು ಹೇಳಲಿ ಮೈಮರೆತು ಬಿದ್ದಿದ್ದ ರಾಜಪುತ್ರನ ಕಂಠದ ಮೇಲೆ ತನ್ನ ನಿಶಿತ ಖಡ್ಗವನ್ನು ಇಟ್ಟು ಪಕ್ಕದಲ್ಲಿ ಪೃಥ್ವೀರಾಜನು ಕಾಲನಹಾಗೆ ಭಯಂಕರನಾಗಿ ಕಾಣಿಸಿದನು.

ಆಗಾಕಾಂತೆ ತನ್ನ ಸೋದರರನ್ನು ಗುರ್ತಿಸಿ ಅವಸರದಿಂದೆದ್ದು "ಸೋದರಾ! ಕೊಲ್ಲಬೇಡ, ಕೊಲ್ಲಬೇಡ." ಎಂದು ತನ್ನಣ್ಣನನ್ನು ಬೇಡಿಕೊಂಡಳು.

ಪೃಥ್ವೀರಾಜನು ತನ್ನ ಕತ್ತಿಯನ್ನು ಹಿಂದಕ್ಕೆ ತೆಗೆದುಕೊಂಡು ಆ ರಾಜಕುಮಾರನನ್ನು ಕಂಡು, "ನೀನಾಕಾಂತೆಯ ಕಾಲುಗಳಿಗೆ ನಮಸ್ಕರಿಸೆಂ"ದು ಆಣತಿಯಿತ್ತು ಅದು ನೆರವೇರಿದ ನಂತರ "ಆಕೆಯ ಪಾದುಕಗಳನ್ನು ನಿನ್ನ ತಲೆಯಲ್ಲಿ ಧರಿಸು" ಎಂದು ಮರಳಿ ಆಜ್ಞಾಪಿಸಲು ಪ್ರಾಣಗಳ ಮೇಲಿದ್ದ ಆಶೆಯಿಂದ ಅದನ್ನು ಕೂಡಾ ಆ ರಾಜಪುತ್ರನು ನೆರವೇರಿಸಿದನು! ತರುವಾಯ ಪೃಥ್ವೀರಾಜನು ಕೆಲವು ದಿನಗಳು ಅಲ್ಲಿ ನಿಂತು ಬಾಂಧವ್ಯವನ್ನು ಮಾಡಿದನು. ರಾಜಕುಮಾರರಿಬ್ಬರೂ ಅನ್ಯೋನ್ಯಸ್ನೇಹಭಾವದಿಂದಿದ್ದರು. ಪೃಥ್ವೀರಾಜನು ಸ್ವಲ್ಪ ಕಾಲಕ್ಕೆ ತನ್ನ ಪ್ರಯಾಣವಾಗಮಕ್ಕಾಗಿ ಭಾವ ಮೈದುನನ ಅಪ್ಪಣೆಯನ್ನು ಪಡೆದು ಹೊರಟನು. ಶಿರೋಹೀ ಅಡಿಗೆ ಬಹಳ ಪ್ರಸಿದ್ಧಿಗೆ ಬಂದುದರಿಂದ ತನ್ನ ಭಾವನು ತನ್ನನ್ನು ಬಿಟ್ಟು ಹೋಗುವಾಗ ಕೆಲವು ಭಕ್ಷ್ಯಗಳನ್ನು ಕಾಣಿಕೆಯಾಗಿ ಆತನಿಗೆ ಕೊಟ್ಟನು. ಪೃಥ್ವೀರಾಜನು ಮಾರ್ಗಮಧ್ಯದಲ್ಲಿ ಗಮನಾಯಾಸದಿಂದ ಹಸಿವುಗೊಂಡು ಅಲ್ಲಿ ಕೆಲವು ಭಕ್ಷ್ಯಗಳನ್ನು ತಿಂದನು. ಅನಂತರ ಕಮಲಮೇರಿಗೆ ಬಂದು ಸೇರಿದನು.

ಇಲ್ಲಿ ತಾರಾಬಾಯಿಯು ತನ್ನ ಪ್ರಿಯನು ಬಾರದಿರುವುದಕ್ಕೋಸುಗ ಕಾದಿದ್ದಳು. ಪಾಪ! ಪೃಥ್ವೀಶನು ಭಕ್ಷ್ಯಗಳನ್ನು ತಿಂದುದು ಮೊದಲು ಒಂದು ವಿಕಾರಕ್ಕೊಳಗಾಗಿದ್ದನು. ಆದಿನ ಅವಯವಗಳೆಲ್ಲವೂ ಪಟುತ್ವವನ್ನು ಬಿಟ್ಟು ಹೇಗೆ ಹಾಗೆ ಕದಲಲಾಗದಂತೆ ನೀರಸಸ್ಥಿತಿಗೆ ಬಂದವು. ಆ ಭಕ್ಷ್ಯಗಳಲ್ಲಿ ವಿಷವು ಪ್ರಯೋಗಿಸಲ್ಪಟ್ಟಿರುವುದೆಂದು ಆತನು ಗ್ರಹಿಸಿದನು. ಆತನು ಪರ್ವತದ ಮೇಲಿದ್ದ ತನ್ನ ದಿವ್ಯಮಂದಿರಕ್ಕಾಗಿ ಬಂದುಸಲ ದಿಟ್ಟಿಸಿನೋಡಿದನು. "ನನ್ನ ಪ್ರಿಯತಮೆಯಾದ ರಾಣಿಯ ಬಳಿಗೆ ಹೋಗಿ, ರಾಜನು ನಿನ್ನನ್ನು ಕೋರಿದ್ದನು. ರುಜಾಪೀಡಿತನಾಗಿ ನೀರಸಸ್ಥಿತಿಗೆ ಬಂದಿರುವನು. ನಿನ್ನ ಆಗಮನಕ್ಕಾಗಿ ನಿರೀಕ್ಷಿಸುತ್ತಿದ್ದಾನೆ." ಎಂದು ತಾರಾದೇವಿಗೆ ಬಿನ್ನವಿಸೆಂದು ಒಬ್ಬ ಸೇವಕನಿಗಾಜ್ಞಾಪಿಸಿದನು. ಪಾಪ! ಆ ರಾಜಕುಮಾರನು ಅತ್ಯಾಶೆಯಿಂದ ತನ್ನ ಮೇಘಮಂದಿರವನ್ನು ನೋಡುತ್ತಾ ಪ್ರಾಣಬಿಟ್ಟನು. ತಾರೆಯು ಈ ವಾರ್ತೆಯನ್ನು ಕೇಳಿದ ಕೂಡಲೇ ಮನೋವೇಗವುಳ್ಳ ಕುದುರೆಯಮೇಲೆ ಕುಳಿತು ತನ್ನ ಕಾಂತನಿದ್ದೆಡೆಗೆ ಅತಿವೇಗದಿಂದ ಬಂದಳು. ಆದರೆ ತುರಗವೇಗವನ್ನು ಮೀರಿ ವಿಷವೇಗವು ಪೃಥ್ವಿರಾಜನ ಪ್ರಾಣಗಳನ್ನು ಹರಿಸಿತು. ಪಾಪ! ತಾರಾದೇವಿ ವಿಗತ ಜೀವಿತನಾದ ಪ್ರಾಣೇಶ್ವರನನ್ನು ನೋಡಿದ ಕೂಡಲೇ ಬುಡಕಡಿದ ಬಾಳೆಯಗಿಡದಹಾಗೆ ನೆಲದ ಮೇಲೆ ಬಿದ್ದು ತಾನೂ ಪ್ರಾಣವನ್ನು ಬಿಟ್ಟಳು.

ಇದೀಗ ನಿಜವಾದ ಪತಿ-ಪತ್ನೀಪ್ರೇಮವು! ಇದೀಗ ಸತೀದೇವಿಯ ಘನತೆ!!

———

ಅಬಲಾದೌರ್ಜನ್ಯ.

(ಹಿಂದಿನ ಸಂಚಿಕೆಯಿಂದ ಮುಂದೆ)

ಜನರಲ್ಲಿ ಮರ್ಯಾದೆಯಿಂದಿರಬೇಕೆಂಬ ಉದ್ದೇಶದಿಂದ ತನ್ನ ಶಾರೀರಿಕ ಕ್ಲೇಶಗಳನ್ನು ಕೂಡ ಸೋಸುತ್ತ ಗಂಭೀರದಲ್ಲಿರುತ್ತಿದ್ದರೆ, ತಾಯಿಯು ಬಂದು ಮಾಡುವ ಉಪಟಳದಿಂದ ಆಕೆಗೆ ಎಷ್ಟು ಕ್ಲೇಶವೂ, ತಮ್ಮ ಮನೆಯಲ್ಲಿನ ಸಣ್ಣ ವಿಚಾರ ಹೊರಗೆ ನೆರೆಹೊರೆಯವರು ಕೇಳಿದಾಗ ಆಗುವ ಅಪಮಾನವೂ ಎಷ್ಟು ಮಟ್ಟಿನದಾಗಿರಬೇಕು? ತಾಯಿಯೇ ಹೀಗೆ ಮಾಡಲು ಕಾರಣವೇನು? ಎಂದರೆ ಬೇರೆ ಏನೂ ಕಾರಣವಲ್ಲ. ತಮ್ಮ ಅಧಿಕ ಪ್ರಸಂಗ, ಸ್ವಯಂ ಪ್ರಭುತ್ವಕ್ಕೆ ಹಾನಿಯು ದುರಭಿಮಾನ, ಅಸಹನೆ, ಅಲ್ಪದ ಇಚ್ಛೆಗಳಿಂದ ನಿಜವನ್ನು ತಿಳಿಯಲಾರದೆ, ಬಂದ, ಅಲ್ಪಮಾನ [illegible] ಪರವಶರಾಗಿ, ಮಗಳ ಮೇಲೆ ತನ್ನ ಪ್ರಭುತ್ವವನ್ನು ತೋರಿಸಲು ಬಂದು, ವೃಥಾ [illegible] ಕೂಡದು. ತಾಳ್ಮೆಯಿಂದ ಹಿತವನ್ನು ತಿಳಿಯಬೇಕೆಂದು ಹೇಳಿದ ಮಗಳನ್ನು ದ್ವೇಷಿಸಿ ಅಷ್ಟು ಗಲಭೆಯನ್ನು ಮಾಡುವರೆಂದರೆ ಸಾಕು. ಹೆತ್ತ ತಾಯಿಯರೇ ಹೀಗೆ ಮಕ್ಕಳ ವಿಷಯದಲ್ಲಿ ನಡೆಯುವವರಾದರೆ, ಇನ್ನು [illegible] ನಡೆಯುತ್ತಿರುವ ಅತ್ತೆ ಸೊಸೆಯರ - ಅತ್ತಿಗೆ-ನಾದಿನಿಯರ ವಿರೋಧ ಎಷ್ಟು ಹೆಚ್ಚಾಗಿರಬಹುದು? ಇವರಲ್ಲಿ ಇಷ್ಟು [illegible] ಆಗದರಂತೂ ಇಲ್ಲಿ ನಾತಿನ್ನ—[illegible]— ತಪ್ಪಲಾರದೆಂದರೆ ಅತ್ಯುಕ್ತಿಯಾಗಲಾರದು! ದುರಭಿಮಾನಿಯಾದ ಧೂರ್ತಸೊಸೆಗೆ ತನ್ನ ಮೇಲೆ ಅಧಿಕಾರವನ್ನು ತೋರಿಸುವ ಅತ್ತೆಯೇ ಮುಖ್ಯ ಶತ್ರುವೆಂದೂ ಆ ಶತ್ರುವಿಗೆ, ನಾದಿನಿ, ಭಾವ ಮೈದುನರೆಂಬ ಬಲಗಳು ಇರುವನ್ನು ತನಗೆ ಪ್ರಭುತ್ವದ ಚಿಂತೆ ತಪ್ಪಲಾರದುದರಿಂದ ಆ ಬಲ ಶತ್ರುವನ್ನು ಸಬಲವಾಗಿ ದೂರಸಾಗಿಸಿಬಿಟ್ಟು ತಾನು ಸುಖವಾಗಿರಬೇಕೆಂದೂ ಅವರು. ಅದು ಸಾಧ್ಯವಿಲ. ತಾವು ಇಲ್ಲದ ಸೋಗನ್ನು ಹಾಕಿಕೊಳ್ಳುವದು, ಅತ್ತೆಯು- ನಾದಿನಿಯರ, ಭಾವ ಮೈದುನರ ಮೇಲೆ ಇದ್ದುದನ್ನೂ ಇಲ್ಲದುದನ್ನೂ ಸೇರಿಸಿ ಅವರ ಮೇಲೆ ನೂರಾರು ತಪ್ಪುಗಳನ್ನು ಹೊರಿಸಿ, ಗಂಡನಲ್ಲಿ ದೂರಿ, ಅನ್ನ ನಿದ್ರೆಗಳನ್ನೂ ಬಿಟ್ಟು, ಅಳುತ್ತ ಕುಳಿತು ನೆರೆಹೊರೆಯವರಲ್ಲಿ ಸಂಸಾರದ ಉಪದ್ರವವನ್ನು ಹೇಳಿ ಸಂಸಾರದಲ್ಲಿ ವಿಷಬೀಜವನ್ನು ಬೆಳಸುತ್ತಿರುವರು. ಸ್ವಾತಂತ್ರ್ಯಪ್ರಿಯಳಾದ ಅತ್ತೆಯೂ ಈ ಸೊಸೆಯ ವರ್ತನವನ್ನು ನೋಡಿ ಸಹಿಸಲಾರಳು! "ತನ್ನ ಮಾತಿನಂತೆ ನಡೆಯುತ್ತ ಬಿದ್ದಿರಬೇಕಾದ ಈ ತೊತ್ತು ತನ್ನ ಅಧಿಕಾರವನ್ನು ಕಸಿದುಕೊಳ್ಳಬೇಕೆಂಬಷ್ಟು ದೂರ ಕೊಬ್ಬಿತೇ!" ಹೀಗೆ ಭಾವಿಸುತ್ತ ತನ್ನ ಅಧಿಕಾರವು ತನ್ನಲ್ಲಿರುವಾಗಲೇ ಸೊಸೆಯನ್ನು ಹಿಂಸಿಸುವುದೂ ಮಗನಲ್ಲಿ ಚಾಡಿಯನ್ನು ಹೇಳುವುದೂ—ಕಂಡಕಂಡವರಲ್ಲಿ ಸೊಸೆಯ ಮೇಲೆ ದೂರುವುದೂ—ಮೊದಲಾದ ಕೃತ್ಯಗಳಿಂದ ಸಂಸಾರದಲ್ಲಿ ಶಾಂತಿ, ಸಂತೋಷ, ಉತ್ಸಾಹ— ಮುಂತಾದ ಗುಣಗಳ ಹೆಸರನ್ನು ಕೂಡ ಉಳಿಸದೆ ಬಿಡುತ್ತಿರುವರು. ಇಂತಹ ಸಂಸಾರಗಳಲ್ಲಿ ದಿನವೂ ತೊಡಕಾಗುತ್ತಿರುವ ಪುರುಷರಿಗೆ ಇವರಿಂದ ಅದೆಷ್ಟು ಸುಖ ದೊರೆಯುತ್ತಿರಬಹುದೋ ಹೇಳಬಹುದೆ? ಈ ಪ್ರಸ್ತಾಪಗಳು ಇಷ್ಟಕ್ಕೇ ಸಾಕಾಗಿರಲಿ.

ಸೋದರಿಯರೇ! ಕ್ಷಮೆಯಿರಲಿ. ಪ್ರಸಂಗಕ್ಕೆ ಉದಾಹರಣೆಯನ್ನು ಮಾತ್ರ ಕೊಟ್ಟೆವು ಅಷ್ಟೆ. ಸೋದರಿಯರ ಮೇಲೆ ಅಸೂಯೆಯಿಂದದನ್ನು ಬರೆಯಲಿಲ್ಲ. ನಾವೆಲ್ಲರೂ ಅಲ್ಲಿಗಲ್ಲಿಗೆ ನೋಡುತ್ತಿರುವ, ಕೇಳುತ್ತಿರುವ ವಿಚಾರಗಳ ಉದಾಹರಣೆಯಿಂದಲೇ ನಮ್ಮ ನಮ್ಮಲ್ಲಿರುವ ದೌರ್ಜನ್ಯಾಂಶಗಳನ್ನು ಅರಿತು ತಿದ್ದಿ ಹೊರಗೆಹಾಕಿ, ನಮ್ಮಲ್ಲಿ ಸೌಜನ್ಯಕ್ಕೆ ಅನುವು ಮಾಡಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿಂದ ಮಾತ್ರ ಇದನ್ನು ಬರೆದಿರುವೆವು. ಇದಕ್ಕಾಗಿ ಕ್ಷಮೆಯಿರಲಿ!

ಒಂದು ಮನೆಯಲ್ಲಿ ಇಬ್ಬರಿದ್ದರೆ ಕೂಡ, ಅವರಲ್ಲಿ ಪರಸ್ಪರ ಮೈತ್ರಿಭಾವವಿಲ್ಲದಿದ್ದರೆ ಆ ಮನೆಗೆ ಕ್ಷೋಭೆತಪ್ಪದು. ಹೀಗಿರುವಲ್ಲಿ ಒಂದೇ ಮನೆಯಲ್ಲಿ ಪರಸ್ಪರ ವಿರುದ್ಧಭಾವದ ಶತ್ರು ಮಿತ್ರರು ಅನೇಕರಿದ್ದರೆ ಆ ಗೃಹರಾಜ್ಯದಗತಿಯೇನಾಗಬೇಕು?

ಇಲ್ಲಿ ಮಿತ್ರರೆಂದರೆ - ತಾವಾರು, ಎಲ್ಲಿಯವರು, ಏತಕ್ಕಾಗಿ ಹುಟ್ಟಿರುವವರು, ತಮಗೂ ಪರಮಾತ್ಮನಿಗೂ ಇರುವ ಸಂಬಂಧ ಎಂತಹುದು, ಪರಮಾತ್ಮನಿಗೂ ಇತರ ಮಾನವರಿಗೂ ಇರತಕ್ಕ ಸಂಬಂಧ ಎಂತಹುದು, ಮತ್ತು ಪರಮಾತ್ಮನಿಗೂ ಇತರ ಪ್ರಾಣಿಗಳಿಗೂ ಇರುವ ಸಂಬಂಧವಾವುದು—ಇವೆಲ್ಲವನ್ನೂ ತಿಳಿದುಕೊಳ್ಳುವ ಸದಸದ್ವಿವೇಕವುಳ್ಳವರಾಗಿ, ಪ್ರಾಪಂಚಿಕ, ಮತ್ತು ಪಾರಮಾರ್ಥಿಕ ತತ್ವಗಳನ್ನು ತಿಳಿದು, ಭೂತದಯಾ ಔದಾರ್ಯಗುಣಗಳಿಂದ ಕೂಡಿರುವವರೇ ಮಿತ್ರರು. ಇವರಲ್ಲಿಯೇ ನಿಜವಾದ ಮೈತ್ರಿಯು — ಎಂದರೆ – ಇತರರಿಗೆ ಶ್ರೇಯಸ್ಸುಂಟಾಗಲೆಂಬ ಸದಿಚ್ಛೆಯು ಇರುವುದು. ಶತ್ರುಗಳೆಂದರೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಾದಿ ಅಂತಃಶತ್ರುಗಳ ಆವೇಶದಿಂದ ಉಚಿತಾನುಚಿತ, ಸಾರಾಸಾರ, ಪೇಯಾಪೇಯ, ಭಕ್ಷ್ಯಾಭಕ್ಷ್ಯ, ಪಾತ್ರಾಪಾತ್ರ, ತಾರತಮ್ಯಜ್ಞಾನವಿಲ್ಲದೆ ಎಲ್ಲವನ್ನೂ ತಮ್ಮ ಸದ್ಭಾವನಾಶೂನ್ಯರಾಗಿ ಸ್ವಜನರೆನ್ನದೆ ಅನ್ಯರೆನ್ನದೆ—ಅವರ ನಾಶವನ್ನೇ ಚಿಂತಿಸುತ್ತ ತಮ್ಮ ಉದ್ದೇಶ ಸಿದ್ಧಿಯಾಗುವ

ವರೆಗೂ ಅಂತತಃ ಕೆಡುಕನ್ನು ಚಿಂತಿಸುತ್ತಲೂ ಬಾಹ್ಯದಲ್ಲಿ ಹಿತವನ್ನು ಮಾಡುವವರಂತೆ ನಟಿಸುತ್ತಲೂ, ಗೃಹಚ್ಛಿದ್ರಗಳನ್ನೇ ಹುಡುಕುತ್ತಿದ್ದು ಸಿಕ್ಕಿದಾಗ ಕಲಹ ಕಾರಣಗಳನ್ನು ಹಬ್ಬಿಸುತ್ತಲೂ ಇರುವ ಮೂರ್ಖರೇ ಶತ್ರುಗಳಾಗಿರುವವರು. ಈ ಮೇಲೆ ಹೇಳಿರುವ ಮಿತ್ರಭಾವಹೀನವಾಗಿರುವುದೇ ನಮ್ಮ ಸ್ತ್ರೀವರ್ಗದ ಮೇಲೆ ಸದ್ಯಸ್ಥಿತಿಯಲ್ಲಿ ಕವಿದಿರುವ ದೌರ್ಜನ್ಯಕ್ಕೆ ಹೇತುವಾಗಿದೆ. ಈ ಸದ್ಭಾವನಾಶೂನ್ಯ ಹೃದಯದಲ್ಲಿ ತಾನಾಗಿ ಹುಟ್ಟುವ ದುರಾಗ್ರಹಾದಿಗಳೇ ಈ ನಮ್ಮವರ "ಅಬಲಾ" ಎಂಬ ಶಬ್ದವನ್ನು "ಅತಿಬಲಾ" ಅಥವಾ "ಬಲಾಪೇಕ್ಷೆಯಿಲ್ಲದವಳು" ಎಂದು ಹೇಳಿಕೊಳ್ಳಲು ಆಸ್ಪದಗಳಾಗಿವೆ.

ಒಟ್ಟಿನಲ್ಲಿ ಹೇಳುವುದೆಂದರೆ ಇಷ್ಟು; ವಿನಯ, ವಿವೇಚನೆ, ವಿತರಣಾದಿ ಕೌಶಿಲ್ಯಗಳನ್ನು ಅಭಿವೃದ್ಧಿಪಡಿಸುವ ಸುಶಿಕ್ಷಣಾರೂಪವಾಗಿ ಲಭಿಸುವ ಜ್ಞಾನವೇ ವಿದ್ಯೆ. ಈ ವಿದ್ಯೆಯಿಂದಲೇ ಮಾನಸಿಕ ಉನ್ನತಿ-(ಅಂತಃಕರಣವು ಸದ್ಗುಣ ಸದ್ಭಾವನೆಗಳಿಂದ ಪ್ರಕಾಶಹೊಂದುವದು)- ಶಾರೀರಿಕ ಉನ್ನತಿ- (ಸದ್ವಿಷಯ ಚಿಂತನೆ, ಸತ್ ಅಭ್ಯಾಸ, ಸದಾಹಾರಾದಿಗಳಿಂದಲೂ ಮಾನಸಿಕ ಶಕ್ತಿಯಿಂದಲೂ ದೇಹವು ಉಪಾಧಿಗಳಿಗೀಡಾಗದೆ ದೃಢವಾಗಿರುವುದು) ಗಳನ್ನು ಹೊಂದಿ, ಆ ಮಹತ್ಕಾರ್ಯವನ್ನು ನಿರ್ವಹಿಸುವುದಕ್ಕೂ ಅರ್ಹತೆಯನ್ನು ಹೊಂದಬಹುದಾಗಿದೆ. ಅದಿಲ್ಲದೆ ಶಿಕ್ಷಾರಹಿತವಾಗಿದ್ದ ಉಳಿದ ವಾಗಾಡಂಬರಾದಿ ಮೇಲಿನ ನಡತೆಗಳೆಲ್ಲವೂ ಅವಿದ್ಯೆಯೆನ್ನಿಸುವುದು. ಈ ವಿದ್ಯೆಯಿಂದಾಗುವ ಪರಿಣಾಮವೇ ಈವರೆಗೆ ವಿವರಿಸಲ್ಪಟ್ಟ ವಿಚಾರಗಳಾಗಿರುವವು.

ಸ್ವಕೀಯರ ಮೇಲುಂಟಾದ ಈರ್ಷ್ಯಾಸೂಯೆಗಳಿಂದಾಗುವ ಪರಿಣಾಮ.

—0—

ಹಿಂದೆ ಹೇಳಿದಂತೆ ಸ್ವಂತ ಜನರಲ್ಲಿ ಉಂಟಾದ ಈರ್ಷ್ಯಾಸೂಯೆಗಳಿಂದ ಅವರ ಪ್ರತಿಯೊಂದು ಕಾರ್ಯಕಲಾಪಗಳಲ್ಲಿಯೂ ಮೇಲ್ಕಂಡ ಸ್ವಪ್ರತಿಷ್ಠಾಪರರಾದ ಅವಿದ್ಯಾವಂತೆಯರಿಗೆ ದೋಷವೇ ಕಂಡುಬರುವುದು. ಈ ಬಗೆಯ ದೋಷದೃಷ್ಟಿಯ ಬಲದಿಂದಲೂ ಈರ್ಷ್ಯಾಕಲುಷಿತ ಮನಸ್ಸಿನ ದುರ್ಬಲತೆಯಿಂದಲೂ ಅವರನ್ನು (ತಮ್ಮ ಅಗ್ರಹಕ್ಕೆ ಪಾತ್ರರಾದ ಸ್ವಂತ ಜನರನ್ನು) ದೂಷಿಸಬೇಕೆಂಬ ಆಶೆ, ಇವರಲ್ಲಿ ಅಂಕುರವಾಗುವುದು. ಸಾಮಾನ್ಯವಾಗಿ ನಮ್ಮ ಸ್ತ್ರೀಜಾತಿಗೆ ಅವುದೇ ಒಂದು ವಿಷಯದಲ್ಲಿಯಾಗಲಿ, ಆಶೆಯುಂಟಾಯಿತೆಂದರೆ, ಅದನ್ನು ಮಾಡದಿದ್ದರೆ ಅವರ ಮನಸ್ಸಿಗೆ ತುಂಬ ಕಷ್ಟವಾಗುವುದು. ಹೇಗಾದರೂ ಅವರು ಆ ಆಶೆಯನ್ನು ಈಡೇರಿಸಿಕೊಳ್ಳಲು ಪ್ರಯತ್ನಪಟ್ಟೇ ಪಡುವರಲ್ಲದೆ ಬಿಡುವವರಲ್ಲ. ಆದುದರಿಂದ ಮೇಲೆ ಹೇಳಿದಂತೆ ತಮ್ಮವರ ಮೇಲಿನ ದೂರನ್ನು ಹೇಳಬೇಕೆಂಬ ಇವರ ಆಶೆಯು ಪೂರ್ಣವಾಗಬೇಕಾದರೆ, ಅಗ ಇವರು ಇತರರಾರನ್ನಾದರೂ ಹುಡುಕಲೇಬೇಕು; ಅವರಲ್ಲಿ ಬಳಕೆಯನ್ನು ಹೊಂದಿ ಮೆಲ್ಲ ಮೆಲ್ಲನೆ ತಮ್ಮ ಮನಸ್ಸಿನಲ್ಲಿರುವ ವಿಷಯವನ್ನು ಉಸಿರಲೇ ಬೇಕು. ಇಂತಹರಿಗೆ, "ತಮ್ಮವರನ್ನೇ ತಾವು ಇತರರಲ್ಲಿ ದೂಷಿಸಿದರೆ ತಮ್ಮ ಮಾನವನ್ನು ತಾವೇ ಬೈಲಿಗೆ ತಂದುಕೊಂಡಂತಾಗುವುದಲ್ಲದೆ, ಅದರಿಂದ ತಮ್ಮ ಮನಸ್ಸಿನ ಸಮಾಧಾನಕ್ಕೆ ತಾವೇ ಪ್ರತಿಕೂಲರಾಗುವೆ"ವೆಂಬ ವಿಚಾರವು ಮೊದಮೊದಲು ತಿಳಿವುದಿಲ್ಲ. ಪರಿಣಾಮದಲ್ಲಿ ತಮ್ಮಿಂದಾದ ತಪ್ಪಿಗಾಗಿ ತಾವು ತಮ್ಮಲ್ಲಿಯೇ ಕೊರಗಿಕೊರಗಿ ಸಾಯಬೇಕಾಗುವುದು! ಅವರಲ್ಲಿ ಕೆಲವರಿಗೆ ಕಡೆಯವರೆಗೂ ಆ ತಿಳಿವಳಿಕೆಯುಂಟಾಗುವುದಿಲ್ಲ; ಅಂತಹ ಅಂಧಹೃದಯರಿಗೆ ತಮ್ಮ ದೌರ್ಜನ್ಯವು ತಿಳಿಯದೆ, ತಮ್ಮ ದೌರ್ಜನ್ಯದ ಫಲಾನುಭವವಾಗಿ ತಾವು ಅತ್ಯಂತ ಹೀನಸ್ಥಿತಿಗೆ ಬಂದು ತಪಿಸುತ್ತಿದ್ದರೂ, ತಾವು, ತುಂಬ ಸಜ್ಜನೆಯರೆಂದೂ ತಮ್ಮ ಮೇಲೆ ಅಸೂಯೆಯಿಂದಲೂ ಕೃತಘ್ನತೆಯಿಂದಲೂ ತಮ್ಮವರೇ ತಮ್ಮನ್ನು ಈ ಗತಿಗೆ ತಂದರೆಂದೂ ಪ್ರಲಪಿಸುತ್ತ ಕೇಳುವವರಿಗೂ ನೋಡುವವರಿಗೂ ಅಸಹ್ಯತೆಯನ್ನುಂಟುಮಾಡುತ್ತಿರುವವರು, ಈಗಲೂ ನಮಗೆ ಅಲ್ಲಿಗಲ್ಲಿಗೆ ಕಾಣುತ್ತಿರುವರು. ಇರಲಿ! ಇವರು ಹೀಗೆ ತಮ್ಮವರ ತಪ್ಪನ್ನು ಹೆರವರಲ್ಲಿ ಹೇಳಿ, ಮನೆಯ ಛಿದ್ರವನ್ನು ಹೊರಗೆಡಹುವುದರಿಂದಾಗುವ ಫಲವೇನೆಂಬುದೇ ನಮಗಿಲ್ಲಿ ಮುಖ್ಯ ವಿಚಾರವು.

ಸ್ವಜನರಲ್ಲಿ ಕೋಪಗೊಂಡು ಅವರ ವಿಷಯದಲ್ಲಿ ಮತ್ಸರಗ್ರಸ್ತರಾಗಿ ಅವರ ತಪ್ಪನ್ನೇ ಅರಿಸುತ್ತಿರುವವರಿಗೆ, ಅವರನ್ನು ಹಿಂದೆ ಮುಂದೆ ಆಡಿಕೊಳ್ಳದಿರಲಾಗುವುದಿಲ್ಲ; ಆಡಿಕೊಳ್ಳಬೇಕಾದರೆ ಮೊದಮೊದಲು ತಮ್ಮ ತಮ್ಮಲ್ಲಿಯೇ ಗೊಣಗುವುದು, ಶಪಿಸುವುದು, ಇವು ನಡೆಯುವುವು. ಅಷ್ಟರಿಂದಲೇ ಆ ವಿಕಾರವಾದ ಮನಸ್ಸು ತೃಪ್ತಿಹೊಂದುವದಿಲ್ಲ. ಅರ ಇದಿರಿಗಾದರೂ ಆಡಿ ಅವರಿಂದಲೂ ಆಡಿಸಲೇ ಬೇಕು; ಮತ್ತು ತಮ್ಮವರ ತಪ್ಪನ್ನು ತಾವು ಉದ್ಘಾಟಿಸುವುದನ್ನು ಅವರು ಮತ್ತಿಷ್ಟು ಪುಷ್ಟಿಗೊಳಿಸಬೇಕು; ಅದರಿಂದ ತಮ್ಮ ಮನಸ್ಸಮಾಧಾನವಾಗಬೇಕು. ಅವರಲ್ಲಿ ಸ್ವಾತಂತ್ರ್ಯಪ್ರಿಯರಾದವರಿದ್ದರೆ, ಪ್ರತ್ಯಕ್ಷವಾಗಿ ನಿಷ್ಠುರವನ್ನು ಹೇಳುವುದಲ್ಲದೆ ಮೇಲೆ ಹೇಳಿದುದನ್ನೂ ಮಾಡುವರು. ಹೀಗೆ ಮಾಡಲಾಗದಿದ್ದ ದಿನವೇ ಅವರಿಗೆ ದುರ್ದಿನವೆನಿಸುವುದು; ಅವರಿಗೆ ಅಂದು ತಿಂದ ಅನ್ನವು ಜೀರ್ಣಿಸುವುದಿಲ್ಲವೆಂದರೂ ಒಪ್ಪುವುದು! ಆದುದರಿಂದ ಅವರು ತಮ್ಮ ಮನಸ್ಸಿನಲ್ಲಿರುವುದನ್ನು ಆಡಿ ತೋರಿಸಲು ತಮಗೆ ತಮ್ಮ ಮನೆಯವರಲ್ಲದ ಇತರರು ಆರನ್ನಾದ

ರೂ ಅವರು ಅರಸಲೇ ಬೇಕು! ಹಾಗೆ ಅರಸುವ ಇವರ ಕಣ್ಣಿಗೆ ಬೀಳುವವರು, ತಮಗೆ ಚಿಕ್ಕವರಾಗಿರಲಿ, ದೊಡ್ಡವರಾಗಿರಲಿ,—ಕಡೆಗೆ ಮಕ್ಕಳಾದರೂ ಸರಿ—ಅವರಲ್ಲಿ ಹೇಳಿ ತಮ್ಮ ಉಬ್ಬಸರೋಗವನ್ನು ಕಳೆದುಕೊಳ್ಳಬೇಕು. ಆ ಸಂದರ್ಭದಲ್ಲಿ ತಮ್ಮ ದೂರನ್ನು ಕೇಳುವವರೊಬ್ಬರಾದರೂ ದೊರೆತರೆ ಸಾಕೆಂದು ಆತುರಪಡುತ್ತಿರುವ ಇವರ ಮನಸ್ಸಿಗೆ ವ್ಯಕ್ತಿತಾರತಮ್ಯ ಜ್ಞಾನವಾಗಲಿ, ಮತಭೇದವಾಗಲಿ, ಪಾತ್ರಗಳ ನೀಚೋಚ್ಚತನಗಳಾಗಲಿ, ಗೋಚರಿಸುವಂತಿಲ್ಲ. ಹೇಳಿ ಕೇಳಿದುದೊಂದೇ ಗೊತ್ತು. ಹೀಗೆ ಮಾಡುವುದಕ್ಕಾಗಿ ಮೇಲೆ ಹೇಳಿದಂತೆ ಹೆರವರಲ್ಲಿ ಹೆಚ್ಚುಹೆಚ್ಚಾಗಿ ಬಳಕೆಯನ್ನು ಮಾಡಿಕೊಳ್ಳಬೇಕು.

ಹೀಗೆ ಸಂಪಾದಿಸಿದ ಸ್ನೇಹಿತರ ಸ್ವಭಾವವೆಲ್ಲವೂ ಒಂದೇ ಬಗೆಯದಾಗಿರುವುದಿಲ್ಲ. ಕೆಲವರಿಗೆ ನೆರೆಹೊರೆಯವರಲ್ಲಿಯೂ ಸ್ತ್ರೀಯರಲ್ಲಿಯೂ ನಿಜವಾದ ಅಭಿಮಾನವಿದ್ದು ಎಲ್ಲರ ಹಿತಚಿಂತನೆಯೂ ಅವರಿಗೆ ಸಹಜ ಗುಣವಾಗಿರಬಹುದು. ವಿವೇಕವುಳ್ಳವರು, ಈ ದೂಷಕರ ದೂಷಣೆಗಳನ್ನು ಅಷ್ಟಕ್ಕೇ ಮುರಿದು ಅವರವರಲ್ಲಿ ಸಾಮರಸ್ಯವುಂಟಾಗಿ ಶಾಂತಿಯು ನೆಲಗೊಳ್ಳುವಂತೆ ಮಾಡುವವರೂ ಇರಬಹುದು. ಇಂತಹರಲ್ಲಿ ದೂರು ಹೇಳಿದರೆ ಅದರಿಂದ ಈ ದೂರಿಗೆ ಪಾತ್ರರಾದವರಿಗಾಗಲಿ, ಅವರ ಮನೆತನಕ್ಕಾಗಲಿ, ಆವ ಹಾನಿಯೂ ತಟ್ಟುವುದಿಲ್ಲ. ದೂರುಹೇಳಿದವರ ಮಾನಕ್ಕೇ ಕೊರತೆಯಾಗಬಹುದು. ಮತ್ತೆ ಕೆಲವರು, ಆರು ಏನು ಹೇಳಿದರೂ "ಮೌನೇನ ಕಲಹಂನಾಸ್ತಿ" ಎಂಬ ಸೂತ್ರವನ್ನೇ ಹಿಡಿದು "ಎಡದ ಕಿವಿಯಿಂದ ಕೇಳಿ ಬಲದ ಕಿವಿಯಿಂದ ದೂಡುವುದು" ಎಂಬಂತೆ ಅದನ್ನು ಅಲ್ಲಿಯೇ ಆಗಲೇ ಮರೆತು ತಮ್ಮಷ್ಟಕ್ಕೆ ತಾವು ನೆಮ್ಮದಿಯಲ್ಲಿರುವರು. ಇಂತಹರಿಂದಲೂ ಮೇಲೆ ಹೇಳಿದವರಿಗೆ ಆವ ಹಾನಿಯೂ ಆಗುವಂತಿಲ್ಲ; ದೂರುವವರಿಗೂ ಇವರಿಂದ ಪ್ರೋತ್ಸಾಹವಾಗಲಿ, ಉತ್ಸಾಹಭಂಗವಾಗಲಿ, ಎರಡೂ ಆಗುವುದಿಲ್ಲ. ಆದರೆ, ಅಷ್ಟಕ್ಕೇ ಮತ್ಸರವು ಸುಮ್ಮನಿರಬೇಕಲ್ಲವೆ! ನೆರೆಹೊರೆಯವರ ಹುಳುಕನ್ನೇ ಹುಡುಕುತ್ತ ಕಲಹವನ್ನೆಬ್ಬಿಸುವುದರಲ್ಲಿಯೂ ಹತ್ತಿದ ಕಲಹಗಳನ್ನು ನೋಡಿ ನಲಿಯುವದರಲ್ಲಿಯೂ ಆಶೆಯುಳ್ಳವರಿದ್ದರೆ ಸಾಕು, ಅವರು ಅಂತಹ ಸುಸಂಧಿಯನ್ನು ಹೇಗೂ ಕಳೆದುಕೊಳ್ಳುವವರಾಗಿಲ್ಲ; ತಮ್ಮ ಕಡೆಗೆ ದೂರು ತಂದವರನ್ನು ಉಪಚಾರೋಕ್ತಿಗಳಿಂದ ಚೆನ್ನಾಗಿ ಉಬ್ಬಿಸಿ, ತಮ್ಮ ಕಡೆಗೆ ಒಲಿಸಿಕೊಂಡು, ಮೊದಲೇ ಮತ್ಸರ, ಕ್ರೋಧಗಳಿಂದ ವಿಕಾರವಶವಾಗಿರುವ ಅವರ ಮನಸ್ಸನ್ನು ಮತ್ತಷ್ಟು ದ್ವೇಷ-ಹಠ, ನಿರಂಕುಶಪ್ರವರ್ತನಗಳ ಗಾಳಿಯಿಂದ ಹೊಲಸಾಗುವಂತೆ ಉಪದೇಶಿಸಿ, ಅವರು ಅದರಿಂದ ವೈಮರೆತು, ಸ್ವಜನರಿಗೆ ದಿನದಿನಕ್ಕೂ ಹೆಚ್ಚು ಹೆಚ್ಚಾದ ತೊಂದರೆಗಳನ್ನು ಕೊಡುವಂತೆ ಮಾಡಿಬಿಡುವರು. ಹೀಗೆ ಹತ್ತಿದ ಕಲಹವು ಮೊದಲು, ಇವರ ಆಗ್ರಹಕ್ಕೆ ಪಾತ್ರರಾಗಿರುವವರಿಗೆ ಮಾತ್ರ ಕಷ್ಟ ಕ್ಲೇಶಗಳನ್ನುಂಟು ಮಾಡುವುದು; ಬರಬರುತ್ತ ಅದೇ ವಿಷದಂತೆ ಆ ಮನೆಗೆಲ್ಲ ವ್ಯಾಪಿಸಿ, ಮನೆಯಲ್ಲಿ ಒಬ್ಬರನ್ನೂ ಬಿಡದೆ, ಎಲ್ಲರನ್ನೂ ತನ್ನ ಜ್ವಾಲೆಯಿಂದ ಕಂದಿ ಕುಂದುವಂತೆ ಮಾಡುವುದು. ಹೆಚ್ಚೇಕೆ, ಇಂತಹ ಗೃಹಕಲಹಗಳಿಗೆ ಕಾರಣರಾದ ಒಬ್ಬಿಬ್ಬರಿಂದಲೇ ಎಷ್ಟೋ ಮನೆತನಗಳು ಕೂಡ ನಾಶಹೊಂದಿರುವದನ್ನು ಚರಿತ್ರೆ, ಇತಿಹಾಸಗಳಿಂದಲೂ ಇತರ ದೃಷ್ಟಾಂತ ವಿಚಾರಗಳಿಂದಲೂ ಮನಗಾಣಬಹುದು. ಆದರೆ ಈ ಮೇಲೆ ಹೇಳಿದ ಕಲಹಕ್ಕೆ ಸ್ವಜನರ ಮೇಲಿನ ಮತ್ಸರಕ್ಕಾಗಿ ಅನ್ಯರ ಸ್ನೇಹವನ್ನು ಸಂಪಾದಿಸಿ, ಅವರಿಂದ ಸ್ವಜನರ ಮಾನಖಂಡನವನ್ನು ಮಾಡಿಸಬೇಕೆಂಬ ದುರಭಿಮಾನವು, ಕೇವಲ ಅಕ್ಷರಶತ್ರುಗಳಾದ ಮಹಿಳೆಯರಿಂದಲೇ ಆಗುವುದೆಂದು ಮಾತ್ರ ಹೇಳಬಾರದು. ಈಗಿನ ವ್ಯವಹಾರೋದ್ಯೋಗ ಪರಿಶ್ರಮಿಕಕಲೆಗಳಲ್ಲಿ ಪರಿಣತೆಯರಾಗಿ ತಾವು ವಿಶೇಷ ಸುಧಾರಿಸಿದವರೆಂದೂ, ಪೂರ್ಣ ವಿದ್ಯಾವತಿಯರೆಂದೂ, ಹೆಮ್ಮೆಗೊಂಡಿರುವ ಮಹಿಳೆಯರಿಂದಲೂ ಹಿಂದೆ ಹೇಳಿದ ಅನರ್ಥಗಳಲ್ಲದೆ, ಮೇಲೆಹೇಳಿದ ಅಕ್ಷರಶತ್ರುಗಳೆನ್ನಿಸುವಂಥ ಮೂಢ ಸ್ತ್ರೀಯರಿಗೂ ಇಮ್ಮಡಿ-ಮುಮ್ಮಡಿಯಾದಷ್ಟು ಹಾನಿಗಳುಂಟಾಗಿ- ಆಗುತ್ತಿರುವುದೆಂದೂ ಹೇಳಬಹುದು. ಹೇಗೆಂದರೆ ಮೇಲೆ ಹೇಳಿದ ಸ್ತ್ರೀಯರು ತಮ್ಮ ಸ್ವಜನರನ್ನು ಮಾತ್ರವೇ-ಕ್ವಚಿತ್ತಾಗಿ ತಮ್ಮ ಅನುಯಾಯಿಗಳನ್ನೂ ಕೂಡ-ಸಂಕಟಪಡಿಸುವವರಾಗುವರು; ಇವರು (ಕಲಾಭಿಜ್ಞತೆಯಿಂದ ಮುಕ್ತರಾದವರು) ತಮ್ಮ ಸ್ವಜನರನ್ನು ಮಾತ್ರವೇ ಅಲ್ಲ, ಅವರ ತಲೆತಲಾಂತರದವರನ್ನು ತಮ್ಮ ಸಮಾಜ ಪದ್ಧತಿ-ಶಾಸನ-ಧರ್ಮಗಳನ್ನೂ, ಧರ್ಮಪಂಥದವರನ್ನೂ ಕೂಡ ಕ್ಲೇಶಕ್ಕೆ ಹಚ್ಚುವುದರಲ್ಲಿ ತಮಗಿರುವ ನಿಸ್ಸೀಮ ಪಾಂಡಿತ್ಯವನ್ನು ಪ್ರದರ್ಶಿಸುವರು. ಅಂತಹರಿಗೆ ಅವರ ಹಿಂದಿನವರೆಲ್ಲರೂ ಮೂಢರು, ಮೂರ್ಖರು, ಸೋಮಾರಿಗಳು, ಅಂಧರು, ಜಡರು ಎಂಬ ಭಾವನೆಯುಂಟಾಗುವುದರಿಂದ ಅವರು, ತಾವೇ ಕುಶಲರೆಂದೂ, ಚಟುವಟಿಕೆಯುಳ್ಳವರೆಂದೂ ಸಾಹಸ, ಜಾಗ್ರತೆಗಳುಳ್ಳವರೆಂದೂ ಸಂಪೂರ್ಣ ಪಾಂಡಿತ್ಯವುಳ್ಳವರೆಂದೂ, ತಮ್ಮ ಈ ಪಾಂಡಿತ್ಯಕ್ಕೆ ತಾವು ಅವಲಂಬಿಸಿರುವ ವಿದೇಶೀಯಾಚಾರವಿಚಾರಗಳ ಅನುಕರಣ ಮತ್ತು ಅವರ ಸ್ನೇಹ ವ್ಯವಹಾರವೇ ಕಾರಣವೆಂದೂ ನಂಬುವರು; ಈ ನಂಬಿಕೆಯಿಂದಲೇ ಅವರು ತಮ್ಮ ಸಮಾಜದ ಕಟ್ಟಳೆಗಳನ್ನು ಮೀರಿ ನಡೆಯುವುದಕ್ಕೂ ತಮ್ಮ ಸ್ವಜನರೆನಿ

ಸುವವರನ್ನು ಬೇಕಾದಂತೆ ಅಲ್ಲಗಳೆದು, ಅವರ ಆಚಾರ—ವಿಚಾರ—ಧರ್ಮಶ್ರದ್ಧೆಗಳನ್ನು ಘಾತಕ ಕ್ರಿಯೆಗಳಿಂದು ಜರಿದಾಡುವುದಕ್ಕೂ, ತಮ್ಮಂತೆ ಸುಧಾರಿಸಿದ ಪದ್ಧತಿಗಳನ್ನು ಅನುಕರಿಸಿ, ನಾಗರಿಕರಾಗುವ ವಿದ್ಯೆಯನ್ನು ಕಲಿಯಬೇಕೆಂದು ಬೋಧಿಸುವುದಕ್ಕೂ ಅವರು ಸ್ವತಂತ್ರರಾಗುವರು. ಹೀಗೆ ಮಾಡುವುದರಿಂದ ಅವರು ಹೊಂದುವ ಲಾಭದ ಮಾತು ಹಾಗಿರಲಿ, ಬಾಧಕವೆಷ್ಟೆಂದು ಇಲ್ಲಿ ವಿವರಿಸುವಂತಿಲ್ಲ. ಒಂದು ಕಡೆ ಮೇಲೆ ಹೇಳಿದವರಿಂದ ಆಂತರಿಕ ಕ್ಲೇಶವುಂಟಾಗುದೆ. ಇವರಿಂದ ಅಂತರ್ಬಾಹ್ಯಗಳೆರಡರಲ್ಲಿಯೂ ಕಷ್ಟಕ್ಲೇಶಗಳುಂಟಾಗುವಂತಿರುವುವು. ಹೀಗೆ ಎರಡು ವಿಧವಾದ ಆಘಾತಗಳೂ ಸೇರಿದರೆ, ಅದರಿಂದ ಎಷ್ಟು ಸುಖ, ಶಾಂತಿ, ಸಂಪದಭಿವೃದ್ಧಿಗಳಾಗುವವೋ ಎಂಬುದು ಭಾವನೆಗೂ ವಿದೂರವಾಗಿದೆ. ಎಂದರೆ ಇಲ್ಲಿ ನಾವು ಕೌಶಲ್ಯದಕಲೆಗಳನ್ನೂ ವಿದ್ಯಾಭ್ಯಾಸವನ್ನೂ ನಿಷೇಧಿಸುವೆವೆಂದಾಗಲಿ ವಿದೇಶೀಯಾಚಾರ ವಿಚಾರಗಳನ್ನು ದ್ವೇಷಿಸುವೆವೆಂದಾಗಲಿ, ಅನ್ಯರಲ್ಲಿ ಸ್ನೇಹವನ್ನು ಸಂಪಾದಿಸಕೂಡದೆಂದು ಹೇಳುವೆವೆಂದಾಗಲಿ ಭಾವಿಸಬಾರದು. ನಮ್ಮ ಉದ್ದೇಶವು ಹಾಗಿಲ್ಲ. ಒಂದೇ ಮನೆಯಲ್ಲಿ ಒಬ್ಬ ಕರ್ತೃವಿನ ವಿಚಾರಣೆಯಲ್ಲಿ ಅನ್ಯೋನ್ಯವಿಂಬ ಯಾವ ಜ್ಞೀವವೂ ಇರಬೇಕಾದ ತಮ್ಮಲ್ಲಿ ತಾವೇ ಒಬ್ಬರಿಗೊಬ್ಬರು ಮತ್ಸರಿಸಿ, ಅವರ ದೋಷಗಳನ್ನು ಅನ್ಯರಲ್ಲಿ ಹೇಳುವುದು ಹಾನಿಕರವೆಂದೂ, ಅದರಿಂದ ಇಂದು ತಮಗೆ ಅನ್ಯರಿಂದು ತೋರುವ ಹೆರವರೇ ಮುಂದೆ ತಮಗೆ ಮಾನಹಾನಿ ಮಾಡುವವರಾದಾರೆಂದೂ ತಿಳಿದು ಮತ್ಸರವನ್ನೂ ಮೊಳೆಯಲ್ಲಿಯೇ ಕಿತ್ತು ಹಾಕಬೇಕೆಂದೂ ಅದರಿಂದಲೇ ಮನಸ್ಸಮಾಧಾನವಾಗುವದೆಂದೂ ಪ್ರಥಮತಃ ಹೇಳಲ್ಪಟ್ಟ ಸೋದರಿಯರಿಗೆ ನಿವೇದಿಸುವುದು; ಮತ್ತು ತಾವು ಒಂದೆರಡು ಕಲೆಗಳನ್ನು ಕಲಿತಮಾತ್ರದಿಂದಲೇ ತಮ್ಮ ಶಾರೀರಿಕ, ಮಾನಸಿಕ ಧರ್ಮಗಳನ್ನು ಜನ್ಮಸ್ಥಾನ, ಪೋಷಣಕ್ರಮ, ದೇಶಧರ್ಮ, ಅನುಷ್ಠಾನಗಳನ್ನು ವಿಚಾರಪೂರ್ವಕವಾಗಿ ನೋಡಲೊಲ್ಲದೆ, ಅಭಿಮಾನಾಂಧತೆಯಿಂದ ಅವನ್ನು ಮೂಲೆಗೊತ್ತರಿಸುವದರಿಂದಲೂ ತಮ್ಮಂತೆಯೇ ನಡೆಯಲು ತಮಗೆ ಸೇರಿದವರನ್ನೂ, ಸೇರದಿರುವರನ್ನೂ ನಿರ್ಬಂಧಿಸುವದರಿಂದಲೂ ನಿಜವಾದ ಲೋಕಹಿತವು ಸಾಧನೆಯಾಗದೆ ಹೋಗುವುದೆಂದು ತಿಳಿದು ಸ್ವಪ್ರತಿಷ್ಠಾಕಾಮನೆಯ ಮತ್ತತೆಯನ್ನು ಬಿಟ್ಟು ಸಹಜ ಸೌಜನ್ಯದಿಂದ ಲೋಕಹಿತವನ್ನು ಸಾಧಿಸುವದರಲ್ಲಿ ಸಂಕಲ್ಪಿಸಿ, ತಮ್ಮಲ್ಲಿ ಮೊದಲಿಂದಲೂ ಬಂದಿರುವ ಪದ್ಧತಿಗಳನ್ನು ಈ ಕಾಲಕ್ಕೆ ಬಾಧಕವಿಲ್ಲದಂತಿಷ್ಟು ಮಾತ್ರ ಸುಧಾರಿಸಿಕೊಂಡು ಆಚರಿಸಬೇಕಾದುದೇ ಶ್ರೇಯಸ್ಕರವೆಂದೂ ಆ ನಮ್ಮ ಕಲಾಭಿಜ್ಞ ಸೋದರಿಯರಲ್ಲಿ ನಿವೇದಿಸುವುದು. ಇಂತಿಷ್ಟೇ ನಮ್ಮ ಉದ್ದೇಶವು.

ಏಕೆಂದರೆ, ಯಾರೇ ಆಗಲಿ, ಸೃಷ್ಟಿನಿಯಮವನ್ನು ಮೀರಲಾಗುವುದಿಲ್ಲ; ಪ್ರಕೃತಿಯ ಧರ್ಮವನ್ನು ಪುರುಷನೂ, ಪುರುಷ ಧರ್ಮವನ್ನು ಪ್ರಕೃತಿಯೂ ಹಿಡಿದರೆ ಸೃಷ್ಟಿನಿಯಮವನ್ನು ಅನುಸರಿಸಿದಂತೆ ಆಗುವುದಿಲ್ಲ. ಪ್ರಕೃತಿಯ ಧರ್ಮವನ್ನು ಪ್ರಕೃತಿಯೂ, ಪುರುಷ ಧರ್ಮವನ್ನು ಪುರುಷನು ಚೆನ್ನಾಗಿ ಅನುಸರಿಸುತ್ತಿದ್ದರೆಂದೇ ಸೃಷ್ಟಿ ನಿಯಮವನ್ನು ಅನುಸರಿಸಿ ನಡೆದಂತಾಗುವುದು. ಸಹಜ ಭಾವದಿಂದ ನಿರ್ವಹಿಸಿದರೆ, ಕೋಮಲತೆ, ಶಾಂತತೆ [illegible] ಪ್ರಕೃತಿಯ ಸ್ವೈಸರ್ಗಿಕ ಗುಣಗಳೆನಿಸುವುವು [illegible] ಇರುವುದು. ಪ್ರಕೃತಿಯ ಸ್ವೈಸರ್ಗಿಕ ಗುಣಗಳು [illegible] ಸ್ತ್ರೀಯ [illegible] ಇರಬೇಕೆಂದೂ ಸ್ತ್ರೀಯೆ (ಪ್ರಕೃತಿ) ಸ್ವರೂಪ [illegible] ಕರಾದ [illegible] ಪ್ರಕೃತಿ ಸ್ವರೂಪಿಣಿಯರಾದ ಈ ಸ್ತ್ರೀಯರು [illegible] ಸಮಾನಾಧಿಕಾರ [illegible] [ಶಕ್ತಿ, ಸಂಪತ್ತು,] [illegible] ಸ್ತ್ರೀಯರಿಗೆ [illegible] ಪ್ರಕೃತಿಧರ್ಮದ [illegible] ಸಾಧ್ಯವಾಗದ [illegible] ಈ [illegible] ಪ್ರಕೃತಿಸಲ್ಪಡುವುದು.

ಮುಖ್ಯವಾಗಿ ಇಲ್ಲಿ ಹೇಳತಕ್ಕುದಿಷ್ಟೇ. ' ನಾರಿಯರಿಗೆ ಪತಿಯೊಬ್ಬನೇ ಆರಾಧ್ಯದೇವನು; ಜೀವನ, ಭೋಗ್ಯನೂ [illegible]. ಸಂಸಾರಕ್ಕೆ ಅಧಿಪತಿಯೆಂದರೆ ಅತನೊಬ್ಬನೇ. [illegible] ಪತಿಯೊಬ್ಬನನ್ನು ಹೊರತು ಉಳಿದವರೆಲ್ಲರನ್ನೂ ದ್ವೇಷಿಸಬೇಕೆಂದಾಗಲಿ, ಉಪೇಕ್ಷಿಸಬೇಕೆಂದಾಗಲೀ ಹೇಳಿದಂತೆ ಭಾವಿಸಬಾರದು. ನಾರಿಯರಿಗೆ ಮಾತಾಪಿತೃಗಳೂ ಪತಿಯ ಮಾತಾಪಿತೃಗಳೂ ಚಿರಸ್ಮರಣೀಯರೂ ಪೂಜ್ಯರೂ, ಸೇವ್ಯರೂ ಆಗಿರುವರು. ಉಳಿದವರು ಒತಹುಟ್ಟುಗಳಂತೆಯೂ, [illegible] ಹುಟ್ಟಿದವರಂತೆಯೂ ನಿಷ್ಕಲ್ಮಷವಾದ ವಿಶ್ವಾಸ [illegible] ಕ್ಷೇಮಚಿಂತನೆಗಳಿಗೆ ಅರ್ಹರು. ಇದೇ ಸತಿಯರ ಶ್ರೇಷ್ಠಧರ್ಮವು. ಈ ಧರ್ಮದ ಜ್ಞಾನವು ಅವರಿಗೆ ಸ್ಥಿರವಾಗಿರಬೇಕಾದರೆ ಅವರ ಬುದ್ಧಿಯು ಪರಿಪಕ್ವವಾಗಬೇಕು. ಬುದ್ಧಿ ಪರಿಪಕ್ವಸ್ಥಿತಿಗೆ ಬಂದಲ್ಲದೆ ಮೇಲೆ ಹೇಳಿದ ಜ್ಞಾನವು ಸ್ಥಿರವಾಗಿರಲಾರದು. ಬುದ್ಧಿಪರಿಪಕ್ವಕ್ಕೆ ಗುರುಕೃಪೆಯೇ ಆಧಾರ; ಆರ್ಯ ಧರ್ಮದಲ್ಲಿ ಸ್ತ್ರೀಯರಿಗೆ ಕೈಹಿಡಿದ ಸ್ವಾಮಿಯೇ ಬುದ್ಧಿ ವಿಕಾಸವನ್ನುಂಟು ಮಾಡುವ ಮತ್ತು ನಿರಾತಂಕವಾದ ಆನಂದವನ್ನುಂಟು ಮಾಡುವ ಗುರುವು. ಅತನ ಸಹಚರ್ಯೆಯೇ ಇವಳ ಅಭ್ಯಾಸ, ಗುರುಸೇವೆ,

ನಿತ್ಯಕೈಂಕರ್ಯವೆನ್ನಿಸುವದು. ಇದನ್ನು ಬಿಟ್ಟು ತಾನು ನಾಲ್ಕಾರು ಪುಸ್ತಕ ಪಾಠಗಳಿಂದ ವಾಚಾಳತೆಯನ್ನೂ ಒಂದೆರಡು ಕಲಾಭ್ಯಾಸದಿಂದ ಕೌಶಲ್ಯವನ್ನೂ ಹೊಂದಿಗ ಮಾತ್ರಕ್ಕೆ ಅಹಂಕಾರದಿಂದ ಬೇಗಿ ಮರ್ಯಾದೆಯನ್ನು ಮೀರಿ ನಡೆಯುವ ಸ್ತ್ರೀಯು, ವೇದಾಧ್ಯಯನವನ್ನು ಬಿಟ್ಟು, ಸಂಧ್ಯಾವಂದನಾದಿ ಕರ್ಮಾನುಷ್ಠಾನಗಳನ್ನು ತೊರೆದ ಬ್ರಾಹ್ಮಣನು ಕರ್ಮಚಂಡಾಲನೆನಿಸುವಂತೆ ನೀತಿಬಾಹಿರಳಾದ ಇವಳೂ ಚಂಡಾಲಿ ನಿಯನಿಸುವಳು. ವಿಚಾರ ಮಾಡುವುದಾದರೆ ಇಂತಹ ಕರ್ಮಬಾಹಿರರಿಗಿಂತಲೂ ಜನ್ಮತಃ ಚಂಡಾಲರಾಗಿ ಸ್ವಧರ್ಮ ಕರ್ಮಗಳಲ್ಲಿ ನಿರತರಾಗಿರುವವರು ಉತ್ತಮರೆಂದು ಆರ್ಯರು ಹೇಳುವರು. ಆದುದರಿಂದಲೇ ಸ್ವಚ್ಛಂದತೆಯಲ್ಲಿ ನಡೆಯಿಸುವ ಓದುಗಾರಿಕೆಯು ವಿದ್ಯೆಯೆನಿಸದೆ, ಅವಿದ್ಯೆ—ಅಥವಾ—ವಿಪರೀತ ವಿದ್ಯೆಯೆನ್ನಿಸಿ, ಅಂತಹ ವಿದ್ಯೆಗಿಂತಲೂ ಮೂಢರಾಗಿರುವುದೇ ಉತ್ತಮವೆಂದೂ, ಇವರ ಪ್ರತಿಷ್ಠೆಗಿಂತಲೂ ಮೂಢರ ಮೂಢಭಕ್ತಿಯೇ ಉತ್ತಮವೆಂದೂ ಹೇಳಿಸಿಕೊಳ್ಳುವದು. ಇಂತಹರನ್ನೇ ಮೂರ್ಖರೆಂದೂ, ಅವಿದ್ಯಾವತಿಯರೆಂದೂ, ಪಶುಸಮಾನರೆಂದೂ, ಕಾಡುಮೃಗಗಳೆಂದೂ ಹಲವರು ಹಲವು ಬಗೆಯಾಗಿ ದೂರುತ್ತಿರುವರು. ಇಂತಹರು ನಮ್ಮ ಸಮಾಜದಲ್ಲಿ ಅತ್ಯಲ್ಪಮಂದಿ ಇರಬಹುದಾದರೂ "ಕುಲಕ್ಕೆ ಮೃತ್ಯು ಕೊಡಲಿಯ ಕಾವು" ಎಂಬಂತೆ ಆ ಅಲ್ಪಮಂದಿಯ ಮರ್ಯಾದೋಲ್ಲಂಘನ ಕಾರ್ಯಗಳೇ ಅವರ ಮೌಢ್ಯ, ಅಥವಾ ಮೂರ್ಖತನಗಳೇ ನಮ್ಮ ಸಮಾಜವನ್ನೇ ಆಕ್ರಮಿಸುತ್ತಿರುವಂತಹ "ಅಬಲಾ ದೌರ್ಜನ್ಯ"ವಾಗಿ ಪರಿಣಮಿಸಿರುವುದೆಂದೂ ಈ ದೌರ್ಜನ್ಯದ ಫಲಾನುಭವವು ಅಲಂಘ್ಯ ಮತ್ತು ಅವರ್ಣನೀಯಗಳೆಂದೂ ತಿಳಿಸಲು ವಿಷಾದಿಸಬೇಕಾಗಿದೆ.

ಸ್ತ್ರೀಯರ ಅವಿದ್ಯೆಗೆ

ಪುರುಷರ ಉಪೇಕ್ಷೆಯೇ ಕಾರಣವು.

ಸ್ತ್ರೀಯರ ಅವಿದ್ಯೆಗೆ ಮೂಲಭೂತರಾರೆಂದು ನೋಡಿದರೆ, ಪುರುಷರೆಂದೇ ಹೇಳಬೇಕಾಗುವುದು. ಹಾಗೆ ಹೇಳಿದೆವಾದರೆ ನಮ್ಮ ಪುರುಷಬಾಂಧವರು ನಮ್ಮನ್ನೂ ನಮ್ಮ ನಿಷ್ಠುರ ಲೇಖಿನಿಯನ್ನೂ ಶಪಿಸುವರು. ಆದರೂ ನಾವು ಮಾಡುವುದೇನಿದೆ? ಒಂದು ಕಾರ್ಯಕ್ಕೆ ಕೈನೀಡಿದೆವೆಂದರೆ ಅದರಿಂದುಂಟಾಗುವ ಕಷ್ಟನಿಷ್ಠುರಗಳೆಲ್ಲಕ್ಕೂ ತಲೆಯೊಡ್ಡಲು ಸಿದ್ಧರಾಗಿ ನಿಲ್ಲಲೇಬೇಕು; ಆದುದರಿಂದ ನಮ್ಮ ಬಾಂಧವರ ಆಗ್ರಹಕ್ಕಾಗಲಿ, ಶಾಪನೆಗಳಿಗಾಗಲಿ ಭಯಪಟ್ಟು ಸುಮ್ಮನಾಗುವುದು ಸರಿಯಲ್ಲವೆಂದೂ ಸಕಾರಣವಾಗಿ ಹೇಳುವ ನಮ್ಮ ಸಮಾಧಾನ ವಾಕ್ಯಗಳನ್ನು ಮೊದಲಿನಿಂದ ಕೊನೆಯವರೆಗೂ ತಾಳ್ಮೆಯಿಂದ ಕೇಳಿ ಆಬಳಿಕ ಆಗ್ರಹಿಸುವುದನ್ನೂ ಶಪಿಸುವುದನ್ನೂ ವಿಮರ್ಶಾಪೂರ್ವಕವಾಗಿ ಮಾಡಬಹುದೆಂದೂ ನಮ್ಮ ಬಾಂಧವರಲ್ಲಿ ನಾವು ಮೊದಲು ನಿವೇದಿಸುವೆವು.

ಮೊದಲು, ನಮ್ಮ ಆರ್ಯಪುರುಷಬಾಂಧವರನ್ನು ನಾವು ಮೂರು ಪಂಗಡವಾಗಿ ವಿಂಗಡಿಸಬೇಕು.

ಉತ್ತಮವರ್ಗ:— ಪುರುಷಧರ್ಮವರಿತು, ಕರ್ತವ್ಯತತ್ಪರರಾಗಿ, ಶಮದಮಾದಿಗಳಿಂದಲೂ ಸದಸದ್ವಿವೇಚನ, ಭೂತದಯೆ, ಔದಾರ್ಯ ಗುಣಗಳಿಂದಲೂ ಐಹಿಕಾಮುಷ್ಮಿಕ ತತ್ವಜ್ಞತೆಯಿಂದಲೂ ನಿಷ್ಕಾಮ ಕರ್ಮಾಚರಣೆಯಿಂದಲೂ ವರ್ತಿಸುವ ಮಹನೀಯರೇ ಉತ್ತಮವರ್ಗದವರು. ಇಂತಹ ಮಹನೀಯರೇ ನಮ್ಮ ಸ್ತ್ರೀವರ್ಗವನ್ನು ಸುಸ್ಥಿತಿಗೆ ತರುವುದಕ್ಕೆ ಸಮರ್ಥರೂ ವಿಶೇಷ ಸಾಮರ್ಥ್ಯವನ್ನು ಪ್ರದರ್ಶಿಸುವ ಪುಣ್ಯಪುರುಷರೂ ಆಗಿರುವರು. ಇಂತಹರು ಸದ್ಯಸ್ಥಿತಿಯಲ್ಲಿ ವಿರಳರಾಗಿರುವರು. ಸತ್ಪುರುಷರೂ ಚಿರಸ್ಮರಣೀಯರೂ ಅಭಿವಂದನೀಯರೂ ಆದ ಈ ಮಹಾತ್ಮರಿಗೆ ಅನಂತಕಾಲದವರೆಗೂ ನಮ್ಮ ಧನ್ಯವಾದಗಳು!

ಮಧ್ಯಮವರ್ಗ:— ತಾವು ವಿದ್ಯಾಪರಿಣತರೂ ಮೇಧಾವಿಗಳೂ ಉದ್ಯಮಶೀಲರೂ ಆಗಿದ್ದರೂ ಇತರರ ಕಷ್ಟನಿವಾರಣೆಯಲ್ಲಿಯಾಗಲಿ, ಇತರರ ಶ್ರೇಯೋಭಿವೃದ್ಧಿ ಮಾರ್ಗದಲ್ಲಿಯಾಗಲಿ ಗಮನವಿಲ್ಲದೆ ಕೇವಲ ತಮ್ಮ ದೇಹ, ತಮ್ಮ ಆತ್ಮ ಇವುಗಳ ಶಾಂತತೆಯ ವಿಷಯದಲ್ಲಿ ಮಾತ್ರವೇ ನಿರತರಾಗಿರುವುದು; ಇಂತಹರಿಂದ ಅನ್ಯರಿಗೆ ಹಾನಿಲಾಭಗಳೇನೂ ಉಂಟಾಗುವಂತಿಲ್ಲ. ಇವರೇ ಮಧ್ಯಮವರ್ಗದವರು. ಈ ಮಧ್ಯಮವರ್ಗದ ಪುರುಷರು ಸ್ತ್ರೀಯರಲ್ಲಿ ಅಭಿಮಾನ ಆದರಗಳುಳ್ಳವರಾಗಿದ್ದರೂ ಅವರ ದೌರ್ಜನ್ಯನಿವಾರಣೆಗೆ ಅಷ್ಟಾಗಿ ಪ್ರವರ್ತಿಸಲಾರರು; ಮೇಲ್ಕಂಡ ಮಹನೀಯರ ಪ್ರಯತ್ನಕ್ಕೆ ಸಾನುಭೂತಿಯನ್ನು ಪ್ರದರ್ಶಿಸುವದೊಂದನ್ನು ಮಾತ್ರ ಬಲ್ಲರು. ಇದೂ ಒಂದು ವಿಧದಿಂದ ಉಪಕಾರವೇ ಸರಿ.

ಇನ್ನು ಕಡೆಯ ವರ್ಗಕ್ಕೆ ಸೇರಿದ ಪುರುಷರಲ್ಲಿ, ಕೆಲವರು ತಾವು ಪಾಂಡಿತ್ಯವುಳ್ಳವರೂ ವಾಗ್ಪೌರುಷದಿಂದ ಜೀವಿಸುವವರೂ ಸ್ವಾಂತಂತ್ರ್ಯಸಂಪತ್ತಿಯುಳ್ಳವರೂ ಆಗಿದ್ದರೂ ಪ್ರಕೃತಿಧರ್ಮದ ಕಡೆಗೆ ತಮ್ಮ ಸೂಕ್ಷ್ಮದೃಷ್ಟಿಯನ್ನು ಹೋಗಗೊಡದೆ, ಸ್ವಪ್ರತಿಷ್ಠೆ, ಸ್ವಾರ್ಥತೆಗಳಿಂದಲೇ ತುಂಬಿದವರಾಗಿ

ರುವವರೂ, ಮತ್ತೆ ಕೆಲವರು ವಿದ್ಯೆ, ಪಾಂಡಿತ್ಯ, ವಾಚಾಳತೆ ಊಹಾಪೋಹ, ಸ್ವರೂಪಜ್ಞಾನಗಳಾವುದೊಂದೂ ಇಲ್ಲದೆ ಕೇವಲ ದಿನಗಳೆಯುವುದರಲ್ಲಿಯೂ, ಹೊಟ್ಟೆಗೆ ತುಂಬುವುದರಲ್ಲಿಯೂ ಮಾತ್ರ ನಿಪುಣರಾಗಿರುವವರೂ—ಹೀಗೆ ಎರಡು ಬಗೆಯಾಗಿ ಇರುವರು. ಇವರಲ್ಲಿ ಮೇಲಿನವರು (ಮೂರನೆ ವರ್ಗದಲ್ಲಿ ಮೊದಲಿನವರು) ಸ್ತ್ರೀವರ್ಗವನ್ನು ನಿರ್ಬಂಧದಲ್ಲಿಟ್ಟು ಅವರ ದೌರ್ಜನ್ಯ ದೌರ್ಭಾಗ್ಯಗಳಿಗೆ ಹೇತುಭೂತರಾಗಿ ಅದರ ಫಲಾನುಭವವನ್ನು ತಾವೇ ಅನುಭವಿಸುತ್ತ ನರಳುತ್ತಿರುವರು. ಇವರು ಮಾಡಿ-ಮಾಡುತ್ತಿರುವ ನಿರ್ಬಂಧಗಳಲ್ಲಿ ಅವುದೇ ಒಂದು ಬಗೆಯು ಸಾಧಕವೂ ಇಲ್ಲದೆ, ಬಾಧಕವೂ ಕ್ರೂರತನವೂ ಆಗಿರುವುವು. ಹೇಗೆಂದರೆ,—

ಸ್ತ್ರೀಯರು ತಮ್ಮ ಪುರುಷರ ನಿರ್ಮಲ, ನಿಷ್ಕಪಟ ವಿಶ್ವಾಸಕ್ಕೆ ತಾವೇ ಒಳಪಟ್ಟು ವಿಧೇಯರಾಗಿ ವರ್ತಿಸುವಂತೆ ಮಾಡಿಕೊಳ್ಳುವುದು ಪುರುಷರ ಕಯ್ಯಲ್ಲಿದ್ದರೂ, ಅವರು ಆ ಮಾರ್ಗವನ್ನು ಬಿಟ್ಟು, ಅವರನ್ನು ಕಠಿಣವಾದ ನಿರ್ಬಂಧಕ್ಕೆ ಗುರಿಪಡಿಸಿದರೆ ಸಕಲಮನಸ್ಸಿನ ಸ್ತ್ರೀಯರ ಕೋಮಲಭಾವಕ್ಕೆ ಮುಳ್ಳುಹತ್ತಿದಂತಾಗಿ, ಅವರು ಪ್ರಯತ್ನಪೂರ್ವಕವಾಗಿ ಸುಳ್ಳು, ಮೋಸ, ಬೂಟಕ, ದ್ರೋಹಚಿಂತನೆಗಳನ್ನು ಕ್ರಮವಾಗಿ ಅಭ್ಯಸಿಸುವರು. ಇದನ್ನರಿಯದೆ, ಅವರನ್ನು ವಾಗ್ದಂಡದಿಂದಲೂ, ದುರ್ಭಾಷೆಗಳಿಂದಲೂ, ಪ್ರಹಾರಗಳಿಂದಲೂ, ಇನ್ನೂ ಇತರ ಕ್ಷುದ್ರ-ಅಜ್ಞಾನಕೃತ ತಪ್ಪಿಗಾಗಿ ಅಸಹನೀಯವಾದ ಶಿಕ್ಷೆಗಳನ್ನು ವಿಧಿಸುವುದರಿಂದಲೂ ವರ್ತಿಸುತ್ತ ಬಂದರೆ, ಪಾಪ, ಅವರೇನು ಮಾಡುವರು? ತಮ್ಮ ತಪ್ಪುಗಳನ್ನು ಬಚ್ಚಿಡುವರು, ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಮೇಲೆ ಹೇಳಿದಂತೆ ನಾಟಕದ ಬೂಟಕವನ್ನೇ ತೋರುವರು...............! ತಮ್ಮ ಅಭಿವೃದ್ಧಿಗೆ ಸ್ತ್ರೀಯರೇ ಆಧಾರಸ್ವರೂಪಿಣಿಯರೆಂದೂ ಅವರನ್ನು ಪರಿಶುದ್ಧಸ್ಥಿತಿಯಲ್ಲಿಟ್ಟುಕೊಂಡು ಬರುವುದರಿಂದ ಅವರು ತಮ್ಮ ಇಹಪರ ಸುಖಗಳಿಗೂ ಸಾಧಕರಾಗಿ ನಿಲ್ಲುವರೆಂದೂ ಇವರು ತಿಳಿಯಲಾರದೆ, ಅವರು ಅವಿದ್ಯೆ-ಅವಿಚಾರಗಳಿಂದ ಆನಂದೋತ್ಸಾಹಗಳ ಲೇಶವೂ ಇಲ್ಲದೆ ಕಷ್ಟಜೀವಿಗಳಾಗಿಯೇ ಇರಲೆಂಬ ಭಾವದಿಂದ ಅವರನ್ನು ಪುರಸ್ಕರಿಸುವ ಮಾತು ಹಾಗಿರಲಿ, ಕೇವಲ ತುಚ್ಛಮೃಗಜಾತಿಗಳನ್ನು ಕಾಣುವಂತೆ ಕಡೆಗಣಿಸುತ್ತಿರುವುದರ ಫಲಾನುಭವವು ಯಾರ ಪಾಲಿಗೆ?

ಅವುದೇ ಒಂದು ಗೃಹಕಾರ್ಯವೂ ಸ್ತ್ರೀಯರನ್ನೇ ಅವಲಂಬಿಸಿರುವುದು. ಸ್ತ್ರೀಯರಿಂದಲೇ ಗೃಹಕಾರ್ಯವು ನಿರ್ವಹಿಸಲ್ಪಡುವುದು. ಅವ ಗೃಹವು ಗೃಹಿಣಿಯಿಂದ ರಹಿತವಾಗಿ, ದಕ್ಷಳಾದ ಸ್ತ್ರೀಯು ವಿಚಾರಕ್ಕೊಳಪಡದಿರುವುದೋ ಆ ಗೃಹಕಾರ್ಯವು ಸುಲಲಿತವಾಗಿಯಾಗಲಿ, ಸಮರ್ಪಕರೀತಿಯಿಂದಾಗಲೀ ನಿರ್ವಹವಾಗುವುದಿಲ್ಲ. ಅದರಲ್ಲಿ ಅನೇಕ ಕೊರತೆಗಳಿದ್ದೇ ಇರುತ್ತವೆ. ಹಾಗೆ ಅತ್ಯಗತ್ಯವಾಗಿ ಅವಲಂಬಿಸಲ್ಪಡಬೇಕಾದ ಸಹಕಾರೀ ಪಾತ್ರವು ಪರಿಶುದ್ಧವಾಗಿಯೂ, ತನ್ನ ಪುರೋಭಿವೃದ್ಧಿಗೆ ಬೇಕಾದ ಸಲಕರಣೆಗಳನ್ನೊದಗಿಸಲು ಸಮರ್ಥವಾಗಿಯೂ ಇರಬೇಕಲ್ಲವೆ? ಹಾಗಿಲ್ಲದೆ ಅದರಲ್ಲಿ ಅಲ್ಪಸ್ವಲ್ಪ ದುಷ್ಟಕಣಗಳಿಗೆ ಅವಕಾಶ ಕೊಟ್ಟರೂ, ವಿಷವು ಕ್ಷಣಕ್ಷಣಕ್ಕೂ ವ್ಯಾಪಿಸುವಂತೆ ಮಹತ್ತಾಗಿ ತನ್ನನ್ನೂ ತನ್ನನ್ನು ಸೇರಿದವರನ್ನೂ ಕೂಡಿಯೇ ಇಂದಿಲ್ಲದಿದ್ದರೆ ಮುಂದೆಯಾದರೂ ಕ್ಲೇಶಕ್ಕೆ ಗುರಿಮಾಡದಿರಲಾರದಲ್ಲವೆ? ಭ್ರಾತೃಗಳೇ! ವಿಚಾರಮಾಡಿರಿ, ಪುರುಷನ ಚತುರ್ವಿಧ ಪುರುಷಾರ್ಥ ಸಾಧನೆಗೆ ಸ್ತ್ರೀಯೇ ಕಾರಣವೆಂದಮೇಲೆ, ಆ ನಾರಿಯರು ಅಕುಟಿಲ, ಅಚ್ಛಿನ್ನ-ಲಕ್ಷ್ಯಯುವಾದ ಪ್ರೀತಿಯಿಂದಲೂ, ನಮ್ರತೆಯಿಂದಲೂ, ಹಿತಚಿಂತನೆಯಿಂದಲೂ ತನಗೆ ಶಕ್ತಿಯನ್ನು ಉತ್ತೇಜನಗೊಳಿಸುತ್ತಿರುವಂತೆ ಮಾಡಬೇಕಾದರೆ, ಅವಳಲ್ಲಿ ಪುರುಷನು ಹೇಗೆ ನಡೆಯಬೇಕು? ತನ್ನನ್ನೇ ನಂಬಿ ಬರುವ ನಾರಿಯರಲ್ಲಿ ನಿಜವಾದ ಅಂತರಂಗವನ್ನೊಪ್ಪಿಸಿ, ಅವಳ ಬುದ್ಧಿಜ್ಞಾನಕೌಶಲ್ಯಗಳು ವಿಕಾಸಹೊಂದುವಂತೆ ನಯನೀತಿವಚನಗಳನ್ನು ಹೇಳುತ್ತ ಅವರನ್ನು ಪ್ರಜ್ಞಾವಂತರನ್ನಾಗಿ ಮಾಡಬೇಕಲ್ಲದೆ, ನಿರ್ಬಂಧಿಸುವುದು ಅನರ್ಥಕ್ಕೆ ಕಾರಣವೆಂದರೆ ಪುನರುಕ್ತಿಯಲ್ಲವೆ?

ಇನ್ನು ಮೂರನೆ ವರ್ಗದ ಕನಿಷ್ಠಪಕ್ಷದವರನ್ನು ಕುರಿತು ಹೇಳುವುದೊಂದುಳಿಯಿತು. ಆದರೆ ಅವರನ್ನು ಹೇಗೆ ಕರೆಯಬೇಕೋ ನಮಗದೇ ತಿಳಿಯಲಿಲ್ಲ. ಏಕೆಂದರೆ? "ಹೆಂಡತಿ ಹೆಗಡೆಯಾದರೆ, ಗಂಡ ಮೂಳನಾಯಿಗೂ ಕಡೆ" ಎಂಬ ಗಾದೆಯಂತೆ, ಹೆಂಡಿರ ದಾಸಾನುದಾಸನಾಗಿ ಅವರಿಟ್ಟ ಗೆರೆಯನ್ನು (ಅದು ತನ್ನ ಪುರುಷ ಮಾನವ-ಕರ್ತವ್ಯಕ್ಕೆ ಲೋಪವಾಗುವಂತಿದ್ದರೂ) ಮೀರಲಾರದೆ, ಭಗವತ್ಕೃಪಾದತ್ತವಾದ ಶಕ್ತಿ, ಮೇಧಾ-ಇಂದ್ರಿಯಪಟುತೆಗಳಿದ್ದೂ ವಿಕಲಾಂಗರಂತೆ ಕರ್ತವ್ಯಪರಾಙ್ಮುಖರಾಗಿರುವವರನ್ನು ಹೇಗೆ ಸಂಬೋಧಿಸಬೇಕು? . . . .
ಆದರೆ ಮಾಡುವುದೇನು? ಸ್ವಯಂಕೃತಾಪರಾಧದ ಫಲವು ಎಂದಿಗೂ ತಪ್ಪದು! ಅದೇನೆನ್ನುವಿರಿ? ಪ್ರಾಯಃ ಸ್ತ್ರೀ ಚಿತ್ತವೇ ಚಂಚಲವು. (ಕೆಲವು ಸಂದರ್ಭಗಳಲ್ಲಿ ಸ್ತ್ರೀಯರ ಹೃದಯವು ಕಠಿಣಾತ್ ಕಠಿಣತರವೇ ಆಗುವುದು.) ಅದು ಆರಂಭದಿಂದಲೂ ಎಂದರೆ ಮಾತು ಕಲಿತುದು ಮೊದಲು ತಾಯಿತಂದೆಯರ ನೈತಿಕ ಶಿಕ್ಷಣೆಗೊಳಪಡದೆ, ಲಾಲನೆಯಿಂದ

ಲೂ ಹೊಗಳಿಕೆಯಿಂದಲೂ ಬೆಳೆದರೆ ಅವರಲ್ಲಿ ಒಂದು ವಿಧ ವಾದ ಗರ್ವವು (ಅಭಿಮಾನ) ಹುಟ್ಟುವುದು. ಈ ಗರ್ವವು ಪತಿಗೃಹಕ್ಕೆ ಬರುವ ಮೊದಲು ತಾಯಿಯ ಬಳಿಯಲ್ಲಿದ್ದಾಗ ಅಷ್ಟು ಬಾಧಕವಾಗುವುದಿಲ್ಲ; ಪತಿಯ ಮನೆಗೆ ಬಂದಮೇಲೆ ಅದು ತನ್ನ ಗುಣವನ್ನು ಪ್ರಕಟಿಸುವುದು. ಈ ಗರ್ವವೇ ತನ್ನ ಪತಿಯ ತೇಜೋಭಂಗ ಮಾಡುವುದಕ್ಕೂ, ತವರ್ಮ ನೆಯ ಸುಖವನ್ನು ಉಗ್ಗಡಿಸುತ್ತ ಅತ್ತೆಯ ಮನೆಯಲ್ಲಿ ಕೆಲ ಸಕ್ಕೆ ವೈಗಳ್ಳತನಮಾಡುವುದು, ಅತ್ತೆ ಮೊದಲಾದವರ ಮೇಲೆ ದೂರು ಹೇಳುವುದಕ್ಕೂ ಕಾರಣವಾಗುವುದು. ಪತಿಯು ಸುಶಿಕ್ಷಿತನೂ ದಕ್ಷನೂ ಆಗಿದ್ದರೆ ಮಾತ್ರ ಇಷ್ಟಕ್ಕೆ ಅವಕಾಶ ವಾಗುವುದಿಲ್ಲ; ಎಂದರೆ ಅಭಿಮಾನವು ಸಂಪೂರ್ಣವಾಗಿ ಹೋಗುವುದಿಲ್ಲವಾದರೂ ಅದರಿಂದ ಇತರರಿಗೆ ಹಾನಿಯಾ ಗದೆ ಕೇವಲ ಪತಿಯ ಮನಸ್ಸಿಗೆ ಮಾತ್ರ ಆಯಾಸವಾಗುವಂತೆ ಮಾಡುವುದು. ಅದು ಹೇಗೆ -ಎಂತು—ಎಂಬುದನ್ನಿಲ್ಲಿ ನಿದ ರ್ಶಿಸುವುದಕ್ಕಿಂತಲೂ, ಅಭಿಮಾನವತಿಯರಾದ ಪತ್ನಿಯರು ತಮ್ಮ ವಿಷಯದಲ್ಲಿ ಅಡಿಗಡಿಗೆ ತೋರುತ್ತಿರುವ ಶಠತೆಗಳಿಂ ದಲೂ, ತಮ್ಮ ಅಭಿಮಾನದಿಂದ ತಮ್ಮ ವಿಷಯದಲ್ಲಿ ತಾವೇ ತೋರುವ ಕ್ರೂರತನಗಳಿಂದಲೂ (ಉಪವಾಸ ಜಾಗರಾದಿ ಕ್ಲೇಶಗಳನ್ನು ಅನುಭವಿಸುವುದು) ಪತಿಗಳ ಮನಸ್ಸಿಗೆ ಹೇಗೆ ಆಯಾಸಪಡಿಸುವವೆಂಬುದನ್ನು ಅಡಿಗಡಿಗೆ ಅನುಭವಿಸುತ್ತಿರು ವವರೇ ಊಹಿಸಬೇಕಾಗಿದೆ.

ಹೀಗೆ ಮೊದಲೇ ಅಭಿಮಾನದಿಂದ ಬೀಗಿದ ಸ್ತ್ರೀಯನ್ನು ಪತಿಯಾದವನು ಮುಖಸ್ತುತಿಯಿಂದ ಮತ್ತಷ್ಟು ಉಬ್ಬಿಸು ವುದು,— ಬಹುಮಾನದ ನೆವದಿಂದ ತನ್ನ ಯೋಗ್ಯತೆಯನ್ನು ಮೀರಿ ಪತ್ನಿಯ ಸಂತೋಷಕ್ಕೆಂದು, ಅವಳು ಕೋರಿದ ವಸ್ತುಗಳನ್ನು ತಂದೊಪ್ಪಿಸುವುದು, ಪತ್ನಿಯ ಮುಖೋಲ್ಲಾಸ ಕ್ಕೆಂದು ಅವಳ ಮುಂದೆ ಅತಿಯಾದ ಹಾಸ್ಯನಟನೆಗಳನ್ನು ಪ್ರದರ್ಶಿಸುವುದು, ಕೋಮಲೆಯಾದ ಪತ್ನಿಗೆ ಆಯಾಸವಾಗ ದಿರಲೆಂದು ಅವಳನ್ನು ಕುಳ್ಳಿರಿಸಿ, ತಾನು ಗೃಹಕಾರ್ಯವನ್ನು ಮಾಡುವುದಲ್ಲದೆ ಅವಳ ಉಪಚಾರಕ್ಕೂ ತೊಡಗುವುದು— ಇವೇ ಮೊದಲಾದವುಗಳಿಂದ ಪತ್ನಿಯರನ್ನು ಮದಿಸುವಂತೆ ಮಾಡಿಬಿಟ್ಟರೆ, ಮದಿಸಿದ ಆ ಅಂಗನೆಯರು ವಿದ್ಯಾವತಿಯ ರಾಗಿರಲಿ, ವಿದ್ಯೆಯಿಲ್ಲದವರಾಗಿರಲಿ ಹೇಗಿದ್ದರೂ ಮೇಲೆ ಹೇಳಿದ ವರ್ತನೆಗಳಿಂದ ಮತ್ತೆಯರಾಗಿ, ಪತಿಯನ್ನು ತಮ್ಮ ಆಜ್ಞಾಧಾರಿಗಳನ್ನಾಗಿಯೂ ಇತರರನ್ನು ತಮ್ಮ ಆಳಿಗದವರ ನ್ನಾಗಿಯೂ ಭಾವಿಸುವರಾಗುವರು. ಇದರಿಂದಲೇ ಬಲ್ಲ ವರು, ಪತ್ನಿಯರಲ್ಲಿ ಆಂತರಿಕ ಸ್ನೇಹವಿಟ್ಟಿದ್ದರೂ ಅವರನ್ನು ಎಷ್ಟುಮಟ್ಟಿಗೆ ಆದರ-ವಿಶ್ವಾಸ-ಗೌರವಬುದ್ಧಿಯಿಂದ ನೋಡ ಬೇಕೋ ಅಷ್ಟಲ್ಲದೆ ತಮ್ಮ ಜೀವನಮೇಲಿನ ಸರ್ವಸ್ವಾತಂ ತ್ರ್ಯವನ್ನೂ ಅವರಿಗೆ ಒಪ್ಪಿಸುವ ಹೀನಸ್ಥಿತಿಗೆ ಮಾತ್ರ ಬರ ಬಾರದೆನ್ನುವರು. ಪ್ರಾರಂಭದಲ್ಲಿ ಮೇಲೆ ಹೇಳಿದ ಮಾಡಿ ಆ ಬಳಿಕ ಬೀಗಿಕಾಳಿತು, ಇಲ್ಲವೆ ಇನ್ನೂ ಇತರ ವಿಧವಾದ ಹಿಂಸೆಗಳನ್ನು ಕೊಡುವ ಪತ್ನಿಯರ ವಿಷಯದಲ್ಲಿ ಕಡೆಗೆ ಕೋಪಗೊಳ್ಳುವುದಾಗಲಿ, ವಿರಕ್ತರಾಗಿ ಹೋಗುವುದಾಗಲಿ, ಅವರನ್ನು ವಾಗ್ದಂಡನೆಗಳಿಂದ ಕ್ರೂರವಾಗಿ ದಂಡಿಸಲು ಪ್ರಯತ್ನಿಸುವುದಾಗಲಿ ಉಚಿತವಲ್ಲ. ಮೇಲೆ ಹೇಳಿದಂತೆ ಪ್ರಾರಂಭದಿಂದಲೂ ಪತ್ನಿಯರನ್ನು ಉಬ್ಬಿಸಿ-ಉಬ್ಬಿಸಿ ಅವರ ಮನಸ್ಸಂತೋಷಕ್ಕಾಗಿ ಬೇಕಾದ ಆಟಪಾಟಗಳಲ್ಲಿ ಬೆರೆದು, ಅವರು ಕೇಳಿದುದನ್ನು ತಮ್ಮ ದೇಹವನ್ನು ಒತ್ತೆಯಿಟ್ಟಾದರೂ ತಂದಿತ್ತು, ಅವರ ಮನೋಲ್ಲಾಸಕ್ಕಾಗಿ ತಮ್ಮ ತಾಯಿ ತಂದೆ ಒಡಹುಟ್ಟಿದವರನ್ನೂ ತೊರೆದು, ಕಡೆಗೆ, ಎಂದರೆ, ತಮ್ಮ ವರ್ತನದ ವಿಷಯಕವಾಗಿ ಜ್ಞಾನೋದಯವಾದ ಮೇಲೆ ಪತ್ನಿಯರನ್ನು ಕುರಿತು ನಿಷ್ಠುರವಾಡುತ್ತಲೂ ತಮ್ಮ ಕರ್ತವ್ಯ ಪರಾಙ್ಮುಖತೆಗಾಗಿ ಪಶ್ಚಾತ್ತಾಪಪಡುತ್ತಲೂ ಇರುವುದನ್ನು ನಾವು ಅಲ್ಲಿಗಲ್ಲಿಗೆ ನೋಡಿಯೂ ಸೋಡುತ್ತಲೂ ಇರುವೆವು.

ಅಶಿಕ್ಷೆಯ ಅಲಂಘ್ಯಫಲ.

——:o:——

ಪುರುಷರ ಉಪೇಕ್ಷೆ ಮತ್ತು ಅಶಿಕ್ಷೆಗಳ ಫಲವು ಇಷ್ಟಕ್ಕೆ ಮುಗಿದಂತಾಗಲಿಲ್ಲ. ಹಲವು ಕಡೆ, ಹಲವು ರೂಪಗಳನ್ನು ಧರಿಸಿ, ತಮ್ಮ ತಮ್ಮ ಸಮಾಜದ ಕಡೆಗೆ ತಮ್ಮ ದೇಶಕ್ಕೂ ಲಾಂಛನಾಸ್ಪದವಾಗಿ ತಿರುಗುವುದು. ಉದಾಹರಣೆಗೆಂದರೆ,—

ಪತ್ನಿಯು ಓದು-ಬರೆಹ ಕಲಿತವಳೆಂದು ಹಿಗ್ಗಿ, ಮೊದ ಮೊದಲು ಅವಳ ವ್ಯಾಸಂಗಕ್ಕೆ ವಿಘ್ನ ಬಾರದಂತೆ ಸಹಾಯಕ ನಾಗುತ್ತಿದ್ದು, ಬರಬರುತ್ತ ಪತ್ನಿಯು ವಿದ್ಯಾವತಿಯೆಂಬ ಆನಂದದಿಂದ ಹಿಗ್ಗಿ, ಅವಳನ್ನು ಪ್ರಯಾಸಕಾರ್ಯಕ್ಕೆ ಕೈಹಾಕ ದಂತೆ ಮಾಡಿ, ತಾನೇ ಅವಳಿಗೆ ಪರಿಚರ್ಯವನ್ನು ಮಾಡುತ್ತ, ಪತ್ನಿಯು ವಿದ್ಯಾಪರಿಶ್ರಮಹೊಂದಿ ವೇತನವನ್ನು ಪಡೆದು ಸಂಸಾರಕ್ಕೆ ತಂದುಹಾಕುತ್ತಿದ್ದರೆ, ತಾನು ಅಡುವವನೂ, ಮಕ್ಕಳನ್ನು ಆಡಿಸುವವನೂ ಆಗಿ, ಪತ್ನಿಯ ಠೀವಿಯನ್ನು ನೋಡಿ ನೋಡಿ ಹಿಗ್ಗುತ್ತಿರುವ, ಸ್ವರೂಪಜ್ಞಾನವಿಲ್ಲದ ಪುರು ಷರೂ, ಪತಿಯನ್ನು ಜನನಿಂದೆಗೆ ಗುರಿಮಾಡಿ ಮೇಲೆ ಹೇಳಿ ದಂತೆ ವರ್ತಿಸುವ ಮಾನಿನಿಯರೂ ನಮ್ಮವರಲ್ಲಿ ಎಷ್ಟೋ ಮಂದಿ ಇರುವರಲ್ಲವೆ? ಇಂತಹ ದೇವೀದಾಸರಾಗಿ, ದೇವಿ ಯು ಆವಕಾಲಕ್ಕೆ ಆವರೀತಿ ಅಗ್ರಹ ಮಾಡುವಳೋ ಎಂಬ

ಭೀತಿಯಿಂದ ತದೇಕಚಿತ್ತರಾಗಿ ಭಗವದಾಜ್ಞೆಯನ್ನೂ ಸೃಷ್ಟಿ ನಿಯಮವನ್ನೂ ಮೂಲೆಗೊತ್ತರಿಸಿ, ದೇವಿಯು ಮನೋನುಸಾರವಾಗಿ ನಡೆಯುವುದೇ ಜನ್ಮಸಾರ್ಥಕತೆಯೆಂದೂ ಇದನ್ನು ಬಿಟ್ಟರೆ ಅಧೋಗತಿಯೆಂದೂ ನೆನದು, ಸರ್ವದಾ ದೇವ್ಯುಪಾಸನೆಯಲ್ಲಿಯೇ ಇರುವ ಪುರುಷಮಹಾಶಯರೊಂದು ಕಡೆಯಿದ್ದರೆ, ಮತ್ತೊಂದು ಕಡೆ, ಪತಿಗಳನ್ನು (ಕಾರ್ಯತಃ) ದಾಸಾನುದಾಸರನ್ನಾಗಿ ಮಾಡಿಕೊಂಡು ಅವರ ಸ್ವಾತಂತ್ರ್ಯ, ಬುದ್ಧಿ' ಮೇಧಾ-ಜ್ಞಾನ-ಬಲಗಳೆಲ್ಲವನ್ನೂ ಕೇವಲ ವಿಲಾಸ, ಉದರಂಭಣ, ವಿಷಯತೃಪ್ತಿಗಳಲ್ಲಿಯೇ ಸವೆಯುವಂತೆ ಮಾಡಿರುವ ಹೆಂಗಸರೂ ಇರುವರು. ಇಂಥವರನ್ನು ನಾವು ಆವ ಅನ್ವರ್ಥನಾಮದಿಂದ ಸಂಬೋಧಿಸಿ ಈ ಲೇಖನಿಯನ್ನು ಧನ್ಯವೆನಿಸುವ?

'ಮಹಿಳಾ'— ಇಲ್ಲ! ಮಹಿಳೆಗೆ ಬೇಕಾದ ಮಾನ, ತಾಳ್ಮೆ, ನಲ್ಮೆಗಳು ಇವರಲ್ಲಿಲ್ಲ. ಮನಸ್ಥೈರ್ಯವಿಲ್ಲದಿವರನ್ನು ಮಹಿಳೆಯರೆನ್ನುವುದೆಂತು?

'ಭಾಮಾ'— ಪ್ರಕಾಶಮಯವಾದಬುದ್ಧಿಯೂ ಭಾವಶುದ್ಧಿಯೂ ಇಲ್ಲದವರು ಭಾಮೆಯರೆನ್ನಿಸುವುದೆಂತು?

'ವಧೂ'— ವಿದ್ಯಾ-ವಿನಯ ವಿವೇಚನೆಗಳೇ ಇಲ್ಲದವರನ್ನು ವಧೂಟಿಗಳೆನುವುದೆ?

'ಸತೀ'— ಸತೀ-ಸ್ತ್ರೀಧರ್ಮ-ಧ್ಯೇಯ-ಕರ್ತವ್ಯಗಳ ಜ್ಞಾನವೇ ಇಲ್ಲದವರು ಸತೀಶಬ್ದಕ್ಕೆ ಪಾತ್ರರಾಗುವುದಾದರೂ ಹೇಗೆ? ಇನ್ನೇನು ಮಾಡುವ? ಆವುದನ್ನು ನೋಡಿದರೂ ಸರಿಹೋಗುವುದಿಲ್ಲ. ಭಾರ್ಯೆ-ಪತ್ನೀ, ಸಖೀ-ಸಹಚಾರಿಣೀ ಕಾಂತಾ-ನಾರೀ-ಆರ್ಯಾ ಇತ್ಯಾದಿ ಶಬ್ದಗಳಿಂದಲಂಕೃತೆಯರಾಗುವುದೆಂತೂ ಅವರ ಅದೃಷ್ಟಕ್ಕೆ ಬಹುದೂರದಲ್ಲಿರುವುದೆಂದು ಭಾವಿಸಬೇಕಾಗಿದೆ. ಇಂತಹ ಪ್ರಬಲೆ—ಅತಿಬಲೆಯರಾದ ಯುವತಿಯರ ವಿಷಯದಲ್ಲಿ ನಾವು ಹೇಳುವುದೇನಿದೆ? ತಮ್ಮ ಗೃಹಿಣೀ ಪದವಿಗೆ ಹಾನಿಕರವಾದ ಮೇಲಿನ ದೋಷಗಳನ್ನು ಎಂದರೆ ನ್ಯೂನಾತಿರಿಕ್ತಗಳಾದ ನಡತೆಗಳನ್ನು ಕ್ರಮಪಡಿಸಿಕೊಂಡಲ್ಲದೆ ಸ್ತ್ರೀಜಗತ್ತನ್ನೇ ಸುಂಗುತ್ತಿರುವ ಅಬಲಾದೌರ್ಜನ್ಯವಾಗಲಿ, ಅದರಿಂದ ಹುಟ್ಟುವ ದೌರ್ಭಾಗ್ಯವಾಗಲಿ ನಿವಾರಣವಾಗುವಂತಿಲ್ಲ. ದೌರ್ಜನ್ಯ ದೌರ್ಭಾಗ್ಯಗಳಿಗೆ ತವರಾಗಿರುವ ಈ ನಮ್ಮ ದೇಶದಲ್ಲಿ ಇತರ ಶಾಂತಿ, ಸಂಪತ್ತುಗಳ ಅಭ್ಯುದಯದ ಆಶೆಯಾದರೂ ಎಲ್ಲಿರುವುದು. ಆದರೆ ಈಗ ಮಾಡುವುದಾದರೂ ಏನು? ಬಲಿತ ಬಿದಿರು ಬಗ್ಗಿಸಲು ಬರುವುದಿಲ್ಲ. ಎಳೆಯ ಬಿದಿರನ್ನೇ ಬಗ್ಗಿಸಿ ಹದಮಾಡಿಕೊಳ್ಳಬೇಕು. ಎಂದರೆ ಈ ವರೆಗೆ ಮೀರಿ ಹೋಗಿರುವ ಸ್ತ್ರೀಯರ ದೌರ್ಜನ್ಯವನ್ನು ಕ್ರಮಕ್ಕೆ ತರಲು ಆಗುವುದಿಲ್ಲ; ದೌರ್ಜನ್ಯದ ಅಂಕುರವಿಲ್ಲದ, ಮತ್ತು ದೌರ್ಜನ್ಯದ ಪ್ರಾರಂಭದಶೆಯಲ್ಲಿರುವ ಮಹಿಳೆಯರನ್ನು ಕ್ರಮಕ್ಕೆ ತಂದು ಸುಶಿಕ್ಷಿತರನ್ನಾಗಿ ಮಾಡಬೇಕು. ಅದು ಕೂಡ ಪುರುಷರ ಕರ್ತವ್ಯಕ್ಕೆ ಸೇರಿದುದು!

(ಸಶೇಷ)

ಶ್ರೀ

ಅಹಲ್ಯಾ ಶಾಪವಿಮೋಚನ

“ ಯತ್ಪಾದಾಬ್ಜನಖೋದಕಂತ ಪಿಬತಾಂ ಪಾಪೌಘವಿಧ್ವಂಸನಂ ।
ಯನ್ನಾಮಾಮೃತ ಪೂರಕಂತು ಪಿಬತಾಂ ಸಂಸಾರ ಸಂತಾರಕಂ ॥
ಪಾಷಾಣೋಽಪಿಯದಂಘ್ರಿಪದ್ಮರಜಸಾ ಶಾಪಾನ್ಮುನೇರ್ಮೋಚಿತಃ ।
ಆರ್ತತ್ರಾಣ ಪರಾಯಣಸ್ಸಭಗವಾನ್ ನಾರಾಯಣೋ ಮೇಗತಿಃ ॥”

॥ ಶ್ರೀ ॥

। ವಂದೇತ್ವಾಂ ಭೂದೇವಿ ಆರ್ಯಮಾತರಮ್ ।

ಕರ್ನಾಟಕ-ನಂದಿನಿ.

(ಮಾಸಪತ್ರಿಕೆ.)

"ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃ ಪ್ರಭುಃ
ದಾಸ್ಯನ್ತಿ ಮಮಯೋ ಚಾಸ್ಯೇಹ್ಯದೃಷ್ಟಃ ಪಥಿ ಗೋಚರಾಃ ॥"

ಸಂಪುಟ ೨. } ಕಾಳಯುಕ್ತ ಸಂ॥ ವೈಶಾಖ ೧೮೪೦ — ೧೯೧೮ನೆ ವ॥ { ಸಂಚಿಕೆ ೮.

ನರಸಿಂಹ ಮಂತ್ರವೊಂದೇ ಸಾಲದೇ ॥ ಪ ॥

ಆಸುಳೆ ಪ್ರಹ್ಲಾದನ ತಲೆಕಾಯ್ದುದೀ ಮಂತ್ರ । ಅಸುರರೊಡಲನು ಒಗೆದ ದಿವ್ಯಮಂತ್ರ ॥
ವಸುಧೆಯೊಳು ದಾನವರ ಅಸುವಹೀರಿದ ಮಂತ್ರ । ಪಶುಪತಿಗೆ ಪ್ರಿಯವಾದ ಮೂಲಮಂತ್ರ ॥೧॥
ದಿಟ್ಟಧ್ರುವರಾಯನಿಗೆ ಪಟ್ಟಕಟ್ಟಿದ ಮಂತ್ರ । ಸೃಷ್ಟಿಯೊಳು ವಿಭೀಷಣನ ಪೊರೆದ ಮಂತ್ರ ॥
ತುಟ್ಟತುದಿಯಲಿ ಅಜಮಿಳನ ಸಲಹಿದ ಮಂತ್ರ । ಮುಟ್ಟಿ ಪೂಜಿಸುವರಿಗೆ ಅದೃಷ್ಟಮಂತ್ರ ॥ ೨ ॥
ಹಿಂಡುಭೂತವ ಕಡಿದು ತುಂಡು ಮಾಡಿದ ಮಂತ್ರ। ಕೊಂಡಾಡಿ ಲೋಕದೊಳಖಂಡ ಮಂತ್ರ ॥
ಗಂಡುಗಲಿ ಗಗನ ಪ್ರಚಂಡ ಜನರುಗಳ । ಗಂಡ ಪುರಂದರವಿಠಲ ನಿಮ್ಮ ಮಂತ್ರ॥ ನರಸಿಂಹ ॥೩॥

ರಾಗ— (ಕರುಣದಿ ರಕ್ಷಿಸುಯನ್ನನು)

ಕರುಣಿಸು ಕಾರುಣ್ಯನಿಧಿಯೆ — ನಿನ್ನ — ಚರಣವ ನಂಬಿದೆ ಸಿರಿಪತಿಯೆ ॥ ಪ ॥
ಕರುಣಿಸು ವರಗುಣಾಭರಣ ಸೇವಕಭಯ—ಹರಣನೆ ಸುರವಂದ್ಯ ಚರಣನೆ ರಘುವರ ॥ ಅನು ॥
ಸರಸಿಜಭವಮುಖ್ಯಸುರರು ನಿನ್ನ ಚರಣಪದ್ಮವ ಸ್ಮರಿಸುವರು । ಸರಸೀಜೋದ್ಭವೆಯೆಂಬ ಸಿರಿಯನ್ನು ಉರದಲ್ಲಿ ಧರಿಸುತ್ತ ಮೆರೆಯುವ ಸರಸಿಜನಾಭನೆ ॥ ೧ ॥ ಅಂಗಜ ಜನಕನೆ ನಿಮ್ಮಯ— ವರ—ಮಂಗಳ ಮಹಿಮೆಯ ಪದವ ॥ ರಂಗನೆ ತೋರೊ ಸನ್ಮಂಗಳಗಾತ್ರ, ಶ್ರೀ ಅಂಗನೆಯರಸನೆ। ಹಿಂಗದೆ ಭಜಿಪೆನೊ ॥ ಕರುಣಿಸು ॥ ೨ ॥ ವರಶೇಷಗಿರಿವಾಸ ನಿನ್ನ—ನಿಜ—ಚರಣದಾಸ್ಯದೊಳಿರಿಸೆನ್ನ ॥ ಕರವೆತ್ತಿ ಮುಗಿವೆನು, ಭರಿಸೆನ್ನ ಧೊರೆ ನೀನು । ದುರಿತಕೋಟಿಗಳನ್ನು ಪರಿಹರಿಸಿ ಪೊರೆಯೆನ್ನನು ॥ ಕರುಣಿಸು ಕಾರುಣ್ಯ ನಿಧಿಯೆ ॥ ೩ ॥

॥ ಶ್ರೀ ॥

ಶ್ರೀಕೃಷ್ಣಪರಬ್ರಹ್ಮಣೇನಮಃ

ಭಾಗವತವು

ಅಥವಾ

ಶ್ರೀಕೃಷ್ಣ ಲೀಲಾ.

(ಯಕ್ಷಗಾನ ಗ್ರಂಥ)*

"ಜಯತಿ ಜಯತಿ ದೇವೋ ದೇವಕೀ ನಂದನೋಽಯಂ ।
ಜಯತಿ ಜಯತಿ ಕೃಷ್ಣೋ ವೃಷ್ಣಿವಂಶಪ್ರದೀಪಃ ॥
ಜಯತಿ ಜಯತಿ ಮೇಘಃ ಶ್ಯಾಮಲಃ ಕೋಮಲಾಂಗಃ ।
ಜಯತಿ ಜಯತಿ ಪೃಥ್ವೀ ಭಾರನಾಶೋ ಮುಕುಂದಃ ॥"

ಇಷ್ಟದೇವತಾ ಪ್ರಾರ್ಥನೆ.

ರಾಗ ॥ (ಜಯರಾಮಚಂದ್ರ)

ಜಯ ಕೃಷ್ಣ ಜಗದೀಶ, ಜಯ ವ್ಯಾಘ್ರ ಗಿರಿವಾಸ । ಜಯ ಕೋಟಿ ರವಿಭಾಸ, ಜಯ ವೆಂಕಟೇಶ ॥ ಜಯಜಯ ॥ ಪ ॥ ಏಕರೂಪನು ನೀನೆ, ಅನೇಕರೂಪನು ನೀನೆ । ಲೋಕಕೊಡೆಯನು ನೀನೆ, ಲೋಕ ಧೊರೆ ನೀನೇ ॥ ಸಾಕಾರವಿಗ್ರಹನು ನೀನೆ ಸರ್ವಾಧ್ಯಕ್ಷ, ಶ್ರೀಕಾಂತ ನೀನಿಲ್ಲದಿಲ್ಲವೀ ಜಗದಿ ॥ ಜಯ ॥ ೧ ॥ ಸೂಕ್ಷ್ಮರೂಪನು ನೀನೆ, ಸ್ಥೂಲರೂಪನು ನೀನೆ । ಸಾಕ್ಷಿಯಾಗಿರುತಿಹ ಸಾರತಮ ನೀನೇ ॥ ಅಕ್ಷಯಾತ್ಮಕ ನೀನೇ, ಕುಕ್ಷಿಲೌಕಿಕ ನೀನೇ । ಲಕ್ಷ್ಮೀಶನಾದ ಶ್ರೀ ಪಕ್ಷಿವಾಹನನೇ ॥ ಜಯಜಯ ॥ ೨ ॥ ಧರಣಿಯೊಳಗುರುತರದಿ ಮೆರೆವ ಪುಲಿಗಿರಿಯೊಳಗೆ, ಹರುಷದಲಿ ನೆಲಸಿರುವ ಸಿರಿಯರಸ ಹರಿಯೇ ॥ ಕರುಣದಲಿ ಭಕ್ತರನು ಪರಿಪಾಲಿಸುವ ನಮ್ಮ ವರದ ರಾಮಾನುಜ ವಿಠಲ ವೆಂಕಟನೇ ॥ ಜಯ ॥ ೩ ॥

ರಾಗ— (ಶರಣು ಶರಣು ಮಹಾಂಜನೇಯನೇ)

ಶರಣು ಶರಣ ರಮಾವಿನೋದನೆ, ಶರಣು ಪರಮಾನಂದನೆ॥ ಶರಣು ಜಗದುದಯ ಸ್ಥಿತೀಶನೆ, ಶರಣು ಪರಿಪೂರ್ಣಾತ್ಮನೇ॥ ಶರಣು ॥ ೧ ॥ ಪ್ರಾಣಮನಸರ್ವೇಂದ್ರಿಯಾತ್ಮನೆ ವಾಣೀಘೋಷವ ಪೆತ್ತನೆ, ಕ್ಷೋಣಿಯೊಳು ತೇಜೋನಿಲಾಧಿಕ ಬಾಣಭೂತದೊಳಿರುವನೆ ॥ ೨ ॥ ಬ್ರಹ್ಮರುದ್ರರ ಪುಟ್ಟಿಸಿದ ಪರಬ್ರಹ್ಮಮಂಗಳರೂಪನೆ । ಬ್ರಹ್ಮವೆಲ್ಲವ ಬ್ರಹ್ಮಗಿತ್ತನೆ ಧರ್ಮರೂಪದಿ ಮೆರೆವನೆ ॥ ೩ ॥ ಪ್ರಕೃತಿರಹಿತನೆ ಪರಮ ಪುರುಷನೆ, ಪ್ರಕೃತಿಗುಣಕತಿದೂರನೆ । ವಿಕೃತಿರಹಿತನೆ ವಿವಿಧ ರೂಪನೆ, ಸುಕೃತಿಗಳಿಗತಿಪ್ರಿಯನೆ ॥ ಶರಣು ॥ ೪ ॥ ಎಲ್ಲರೊಳಗಲ್ಲಲ್ಲಿ ಇರುವನೆ, ಎಲ್ಲಿಯೂ ನೀ ನಿರ್ಜನೆ ॥ ಸೊಲ್ಲಿನೊಳಗಲ್ಲಿರ್ದು ನುಡಿಸುವ ಸರ್ವಸಾಕ್ಷಿಕ ಸರ್ವನೇ ॥ ೫ ॥ ದೋಷರಹಿತನೆ ಸರ್ವಭೂತವ ಪೋಷಿಸುವ ಪರಮಾತ್ಮನೆ ॥ ಶೇಷಶಯನಾನಂತ ಶುಭಗುಣ ಭೂಷಭೂಷಿತ ರೂಪನೇ ॥ ಶರಣು ॥ ೬ ॥ ಶರಣು ಪರಮವ್ಯೂಹವಿಭವನೆ, ಶರಣು ಅಂತರ್ಯಾಮಿಯೇ । ಶರಣು ರಾಮಾನುಜವಿಠಲನೆ, ಪರಮ ಪುಲಿಗಿರಿವಾಸನೆ ॥ ಶರಣು ॥ ೭ ॥

ವೃತ್ತ ॥ ಶ್ರೀಲಕ್ಷ್ಮೀ ಕುಚ ಕುಂಕುಮಾಂಕಿತ ಲಸದ್ವಕ್ಷಸ್ಥಲೋದ್ಭಾಸನಂ । ಲೀಲಾ ಜಾಲ ವಿಲಾಸದಿಂ ಧರಣಿಯೊಳ್ ಸಾನಂದಮಂ ತೋರ್ಪನಂ ॥ ಭೂಲೋಕಾಧಿಕವಾದ ವ್ಯಾಘ್ರಗಿರಿಯೊಳ್ ನಿಂದಿರ್ಪ ಶ್ರೀವಾಸನಂ । ಭೂ ಲಕ್ಷ್ಮೀಪತಿಯಾದ ದೇವ ಹರಿಯಂ ಚನ್ನಾಗಿ ನಾಂ ಧ್ಯಾನಿಪೆಂ ॥ ಶ್ರೀರಾಮಾಧರ ಚುಂಬನೋತ್ಪ್ರಕಟಿತ ಪ್ರೋತ್ಫುಲ್ಲ ಸದ್ವಕ್ತ್ರನಂ । ಪಾರಾವಾರ ಜಲೋದ್ಭವಾ ಮನಸಿಜಾಂಭೋಜಾದಿ ಮಾರ್ತಾಂಡನಂ ॥ ಶ್ರೀರತ್ನಾಕರ ರತ್ನಭೂಷಿತಮುದಂ ಶ್ರೀಶೇಷ

* ಈ ಯಕ್ಷಗಾನ ಪ್ರಬಂಧವನ್ನು ರಚಿಸಿದವರು ಶ್ರೀವೈಷ್ಣವ ಮತಸ್ಥರೂ, ಭಗವದ್ಭಕ್ತರೂ, ಜಿತೇಂದ್ರಿಯರೂ ಆದ ಮಹಾತ್ಮ "ರಾಮಾನುಜಾಚಾರ್ಯ"ರೆಂಬುವರು. ಇವರು ಚಾಮರಾಜನಗರ ನಿವಾಸಿಗಳಾಗಿದ್ದರು. ಇವರ ಕವಿತೆಯು ಸರಲವೂ ರಸಭರಿತವೂ ಕರುಣಾ-ಭಕ್ತಿರಸ ಜನಕವೂ ಆಗಿರುವುದೆಂದು ಈ ಭಾಗವತವನ್ನು ಓದುವವರಿಗೆ ತಾನಾಗಿಯೇ ತಿಳಿಯುತ್ತದೆ. ಈ ಮಹಾನುಭಾವರು ದಿವಂಗತರಾಗಿ ಈಗಾಗಲೇ ೩೦ ವರ್ಷಗಳ ಮೇಲಾಗಿರಬಹುದು. ಇವರಿಗೆ ಪುತ್ರಸಂತಾನವಿಲ್ಲ. ಇವರ ದೌಹಿತ್ರರೊಬ್ಬರು ಬಿ. ಏ., ಎಲ್. ಎಲ್. ಬೀ. ಪಟ್ಟಭದ್ರರಾಗಿ ಉತ್ತಮಸ್ಥಿತಿಯಲ್ಲಿರುವರು. ಇವರು ರಚಿಸಿದ ಕೃತಿಗಳಲ್ಲಿ ಒಂದಾದರೂ ಇನ್ನೂ ಮುದ್ರಿತವಾಗಿಲ್ಲವಾದುದರಿಂದ ಬಹುಜನ ನಮ್ಮ ಸೋದರಿಯರ ಅಭಿಮತದಂತೆ ಇದನ್ನೇ ಮೊದಲು ಇಲ್ಲಿ ಪ್ರಕಟಿಸಲು ಸಂಕಲ್ಪಿಸಿದೆವು.

(ಸಂ. ನಂದಿನೀ + ಹಿತೈಷಿಣೀ.)

ಪರ್ಯಂಕನಂ । ಕಾರುಣ್ಯಾಂಬುಧಿಚಂದ್ರನಾದ ಹರಿಯಂ ಕೊಂಡಾಡುವೆಂ ಪಾಡುವೆಂ ॥

ಶ್ಲೋಕ ॥ ತತ್ರೈವ ಗಂಗಾ ಯಮುನಾ ಚ ವೇಣೀ, ಗೋದಾವರೀ ಸಿಂಧು ಸರಸ್ವತೀ ಚ । ಸರ್ವಾಣಿ ತೀರ್ಥಾನಿ ವಸಂತಿ ತತ್ರ ಯತ್ರಾಚ್ಯುತೋದಾರಕಥಾಪ್ರಸಂಗಃ ॥

ವೃತ್ತ ॥ ಗೋಪಸ್ತ್ರೀ ಕುಚಕುಂಭಯುಗ್ಮಶಿಖರಂ ಪ್ರಕ್ಷೇಪದಿಂದಾಕ್ಷಣಂ ಕೃತ್ವಾ ಘೋಷಶಮಂ ಕರಂ ತುಲಸಿಕಾ ಸಂಸರ್ಗದಿಂ ಶೋಭಿತಂ । ಶ್ರೀಪದ್ಮಾಕರ ಪಲ್ಲವಾಂತರಗಳಿಂ ಸಲ್ಲಾಲಿತಂ ಪಾಲಿತಂ । ಆಪದ್ರಕ್ಷಕನಾದುದಂ ಭಜಿಪೆನಾ ಶ್ರೀಕೃಷ್ಣಪಾದಾಬ್ಜಮಂ ॥

ಗುರುಧ್ಯಾನ.

ರಾಗ— (ಭಜಿಸಿ ಬದುಕು ಮಾನವ)

ಭಜಿಸಿ ಬದುಕು ಮನವೇ—ಯತೀಂದ್ರನ—ಭಜಿಸಿ ॥ ಪ ॥ ಭಾವಶುದ್ಧಿಯಿಂ ರಾಮಾನುಜರಂ ॥ ಅ ॥ ಸುಜನವಿನುತಶ್ರೀಕೇಶವ ಮುನಿಗಣ ಯಜನದೊಳಗೆ ಅವತರಿಸಿದ ಮಹಿಮನ ॥ ಭಜಿಸಿ ॥ ೧ ॥ ಗರುಡಗಮನಕರಿಗಿರಿ ಧೊರೆವರದನ । ಚರಣಯುಗಳ ಚರಿತಾಮೃತಭರಿತನ ॥ ೨ ॥ ನರಕಗಿರಿಗೆ ವಜ್ರಾಯುಧವೆನಿಸಿಹ ವರತ್ರಿದಂಡವ ಧರಿಸಿದ ಧೊರೆಯನು ॥ ೩ ॥ ದುರಿತಕೋಟಿಘನ ಝಂಝಾನಿಲ ವಾಗ್ಭರಿತ ವೈಖರೀ ವೇದನಿನಾದನ ॥ ೪ ॥ ಚಂಡಕಿರಣ ಮಾರ್ತಾಂಡ ಸದೃಶವಿಂ । ಊರ್ಧ್ವಪುಂಡ್ರ ಉದ್ದಂಡ ಮಹಾತ್ಮನ ॥ ೫ ॥ ಬುದ್ಧಜೈನ ಅದ್ವೈತವ ಖಂಡಿಸಿ, ಶುದ್ಧ ವಿಶಿಷ್ಟಾದ್ವೈತೋದ್ಧಾರನ ॥ ೬ ॥ ವಿಭವದೊಳಗೆ ಬಲರಾಮಲಕ್ಷ್ಮಣರೆಂಬ, ಉಭಯ ವಿಭೂತಿದ್ವಯನಾಯಕನ ॥ ೭ ॥ ಪರಮಪದದಿ ಉರಗೇಂದ್ರನ ರೂಪದಿ, ಶಿರಿಯಧರನು ಪರಿಯಂಕದಿ ಧರಿಸನಂ ॥ ಭ ॥ ೮ ॥ ಶೇಷಗಿರೀಶಗೆ ಭೂಷಣವಿತ್ತನ, ವ್ಯಾಸಸೂತ್ರ-ಶ್ರೀ ಭಾಷ್ಯಕಾರರನು ॥ ಭಜಿಸಿ ॥ ೯ ॥ ವ್ಯಾಘ್ರಗಿರಿಯ ರಾಮಾನುಜವಿಠಲ ಭಾಗ್ಯವಿಭವ ಶ್ರೀವೈಷ್ಣವರೆರೆಯನ ॥ ಭಜಿಸಿ ॥ ೧೦ ॥

ಶ್ಲೋಕ ॥ ಶ್ರೀಶಮ್ಮತೇಶ ಜಗದೀಶ ಪರಾತ್ಪರೇಶ । ವಿಶ್ವೇಶಕೇಶವ ಪ್ರಕೃತೀಶ ಫಣೀಶವಾಯುಃ ॥ ವ್ಯಾಜಾಸು ಪಾತು ಮಮ ತೀರ್ಣ ಪದಾಶ್ರಿತಾನಾಂ ವ್ಯಾಘ್ರಾಚಲೇಶ ಕಮಲಾಧವ ವಂದನಂ ತೇ ॥

ಕುಲದೈವ ಪ್ರಾರ್ಥನೆ.

(ಹಾಡು) ಕುಲದೈವವಾದೆನ್ನ ಪುಲಿಗಿರೀಶನ ಪಾದನಳಿನವಂ ಪೂಜಿಸಿ ಪೇಳುವೆ ಕಥೆಯಂ ॥ ೧ ॥ ಇಷ್ಟದೇವನಾದ ಕೃಷ್ಣಮೂರುತಿಯನ್ನು । ಇಷ್ಟದಿಂ ಧ್ಯಾನಿಸಿ ಪೇಳುವೆನೀಗ ॥ ೨ ॥ ಹೃದಯದೊಳ್ ನೆಲಸಿರ್ಪ ನಾರಾಯಣನನ್ನು । ಮುದದಿಂದ ಕೀರ್ತನೆ ಗೈಯುವೆ ನಾನು ॥ ೩ ॥ ಮನೋಭೀಷ್ಟವಂ ಮನ್ನಿಸಿ ಕೊಡುವಂಥ । ಕನಕಾಂಗಿ ಲಕ್ಷ್ಮಿಯ ಭಜಿಸುವೆ ಮನದಿ ॥ ೪ ॥ ನಕ್ರನ ಸೀಳಿ ಪರಾಕ್ರಮವುಳ್ಳ ಶ್ರೀ । ಚಕ್ರವ ಮನವಮುಟ್ಟಿ ಪೂಜಿಪೆನೀಗ ॥ ೫ ॥ ಪಂಕಜಾಕ್ಷನಪಾಣಿಪಂಕಜದಲ್ಲಿರ್ಪ, ಶಂಖವನಂಬುವೆ ನಿಃಶಂಕನಾಗಿ ॥ ೬ ॥ ಸಾಸಿರ ಫಣೆಯುಳ್ಳ ಹರಿಗೆ ಹಾಸಿಗೆಯಾದ, ಶೇಷನ ಪಾದವ ಕೊಂಡಾಡುವೆನು ನಾಂ ॥ ೭ ॥ ಪರಮಪುರುಷನಿಗೆ ವಾಹನವಾದಶ್ರೀ ಗರುಡನ ಪಾದಕೆ, ಮಣಿಯುವೆ ಮುದದಿ ॥ ೮ ॥ ಸೇನೇಶ ವಿಷ್ವಕ್ಸೇನರ ಕೊಂಡಾಡಿ, ಶ್ಯಾನೆ ಇಷ್ಟಾರ್ಥವ ಪಡೆಯುವ ನಿಂದು ॥ ೯ ॥ ಶಠರನ್ನು ಜಯಿಸಿದ ವಿಠಲರೂಪಕನಾದ, ಶಠವೈರಿಯನ್ನು ಸಂ–ತೋಷದಿಂ ನಮಿಪೆ ॥೧೦॥ ಪರಮಯೋಗಿಗಳಾದ ಪರಕಾಲಾದಿಗಳನ್ನು, ಪರಮ ಹರುಷದಿಂದ ಪೂಜಿಸುವೆನು ॥ ೧೧ ॥ ಶ್ರೀಮಂತರಾದ ಮಹಾಯತಿರಾಜ ಶ್ರೀ ರಾಮಾನುಜರನ್ನು ಮನವಮುಟ್ಟಿ ನೆನೆಪೆ ॥೧೨॥ ಲೋಕಕ್ಕೆ ಉಪಕಾರವಾದ ಗ್ರಂಥವನಿತ್ತ, ಲೋಕಾಚಾರ್ಯರ್ಗೆ ಕೈಮುಗಿಯುವೆನು ॥ ೧೩ ॥ ದ್ರಾವಿಡವೇದದಿ ಕೋವಿದರಾದ ಸಂ । ಭಾವಿತ ವರವರಮುನಿಯನ್ನು ನೆನೆವೆ ॥೧೪॥ ಭಾಷ್ಯಕ್ಕೆ ಬೇಕಾದ ಗ್ರಂಥವ ಮಾಡಿದ, ದೇಶಿಕಾದಿಗಳನ್ನು ವರಿಸುವೆ ಮನದಿ ॥ ೧೫ ॥ ಪ್ರಾಚೀನ ಲೋಕಕ್ಕೆ ಲೋಚನರಾದಂಥ, ಸ್ವಾಚಾರ್ಯರ ಅಡಿಗಳ ಮುದದಿಂದ ನೆನೆವೆ ॥೧೬॥ ನಿತ್ಯಮುಕ್ತರಾದ ಸತ್ಯವಂತರನ್ನು ಭಕ್ತಿಯಿಂ ವಂದಿಸಿ ನುತಿಯಾಗುವೆನು ॥ ೧೭ ॥ ಶ್ರೀವಿಷ್ಣುಗಳ ಪರತತ್ತ್ವವೆಂದರಿತಿಹ ಶ್ರೀವೈಷ್ಣವರ ಶ್ರೀಪಾದಕೆ ನಮಿಪ ॥ ೧೮ ॥ ಸರಸಿಜಭವ ಭವಸುರರು ದಿಕ್ಪಾಲಕರು । ಹರಿಗೆ ಕಿಂಕರರೆಂದು ಪರಿಭಾವಿಸುವೆನು ॥ ೧೯ ॥

ದ್ವಿಪದಿ ॥ ಇಂದಿರೇಶನಪಾದ ಪಂಕಜವ ನೆರೆನಂಬಿ । ವಂದನಂ ಮಾಡುವೆನು ಚಂದದಲಿ ಈ ಕಥೆಯ ॥ ಕುಂದಿಲ್ಲದೀಗಲ್ ವಿಘ್ನ ಪರಿಹರಂಗಳ ಮಾಡಿ । ಮುಂದೆಯುಂ ನಿರ್ವಿಘ್ನವಾಗಿ ಸಂರಕ್ಷಿಸುತಲಿ ॥ ನಂದದಿಂ ದಿಹಪರದೊಳಾನಂದವಿತ್ತೆನ್ನ । ನೆಂದೆಂದಿಗೂ ಬಿಡದೆ ಸಲಹೆಂದು ಬೇಡುವೆನು । ತಂದೆ ಪುಲಿಗಿರಿಧೊರೆಯ ಕಾರುಣ್ಯವಾರಿಧಿಯ ॥—

(ವಚನ)

ಈ ಪ್ರಕಾರ ನಿರ್ವಿಘ್ನದಿಂ ಗ್ರಂಥಪೂರ್ತಿಗೋಸುಗಂ ಮತ್ತಂ ಉತ್ತರೋತ್ತರಾಭಿವೃದ್ಧಿಗಂ ಇಷ್ಟದೇವತಾಪ್ರಾರ್ಥನೆಯಂ ಮಾಡಿ ಕಥೋಪಕ್ರಮಣವಂ ಮಾಡುವೆನೆದೆಂತೆನೆ—

ವೃತ್ತ ॥ ಶ್ರೀಮದ್ಭಾಗವತಾರ್ಥಮಂ ರಚಿಸುವೆಂ ಶ್ರೀಕೃಷ್ಣ

ನಂ ಧ್ಯಾನಿಸಿ, । ಶ್ರೀಮತ್ಕನ್ನಡಕಾವ್ಯದಿಂ ದಶಮಸ್ಕಂಧಾರ್ಥಮಂ ಭಾವಿಸಿ, । ಸಾಮಂಗಲ್ಯಪಸೀವ ಕೃಷ್ಣಕಥೆಯಂ ಪೇಳ್ವೆರ್ಗೆ ಕೇಳ್ವರ್ಗೆ ಶ್ರೀ ರಾಮಾನಾಯಕಕಾಯ್ತು ದಿವ್ಯಸುಖಮಿತ್ತೀ ಲೋಕ ಮೂಲೋರ್ಕದೊಳ್ ॥

(ಸುತ್ತ್ಂ)

ಭಾಗವತಪುರಾಣಮಂ ಪೇಳ್ದ ಯೋಗೀಶರಂ ನೆನೆಪೆನನುಕ್ರಮದಿಂ ಪರಮ ಭಾಗವತರಂ ಮನ್ನಿಸುತೆನು ಯೋಗೀಕುಲ ಸನ್ನುತರಾದವರಂ ಭಾವಿಸಿ ಪಡೆಸೆನಾಂ ಸುಖಸಂಗತಿಯಂ ಭಾಗವತೋಪದೇಶಕಥಾನುಕ್ರಮಮವದೆಂತೆನೆ—

ಶ್ರೀನಾರಾಯಣನಂ ಸಹಸ್ರಶಿರವುಳ್ಳ ಶ್ರೀಶೇಷನಂ ಬ್ರಹ್ಮನಂ । ಜ್ಞಾನಾದಿ ಸನತ್ಕುಮಾರಾದಿ ಮುನಿಯಂ ನಾರದ ವ್ಯಾಸರಂ । ನಾನಾಪೇತ್ತ ಪರಾಶರಾದಿ ಶುಕಸನ್ಮೌನೀಂದ್ರರಂ ಸೂತರಂ। ಧ್ಯಾಸಂಗೈಯುತ್ತೆ ಪೇಳ್ವೆ ದಿವ್ಯಕಥೆಯಂ ಶ್ರೀಕೃಷ್ಣ ಸದ್ವಾರ್ತೆಯಂ ॥

ಇಂತು, ಸಂಕರ್ಷಣಾತ್ಮಕನಾದ ಭಗವಂತನಾದ ಆದಿಶೇಷನಿಂದ ಸನತ್ಕುಮಾರಾದಿ ಮುನಿಗಳಿಗೆ ಅವರಿಂದ ಸಾಂಖ್ಯಾಯನರಿಗೆ ಸಾಂಖ್ಯಾಯನರಿಂದ ಪರಾಶರ ಬೃಹಸ್ಪತಿಗಳಿಗೆ, ಪರಾಶರರಿಂದ ಮೈತ್ರೇಯರಿಗೆ, ಮೈತ್ರೇಯರಿಂದ ವಿದುರನಿಗೆ ಉಪದೇಶಿಸಲ್ಪಟ್ಟ ಕಥಾಕ್ರಮವೆಂತೆಂದರೆ,—

॥ ಹಾಡು ॥ (ಮಾನವಗೊಂಡರು ಪಾಂಡುಪುತ್ರರು)

ಭಾಗವತದ ಕಥೆಯಾಲೈಸಲು ಘನಭಕ್ತಿಯಿಂದಲೆ ಮನವೆ। ಭೋಗಭಾಗ್ಯಸಂಪದಗಳನಿತ್ತು, ಭೋಗಿಶಯನನ ದಿವ್ಯ ಪಾದವ ತೋರುವ ॥ ಭಾಗವತ ॥ ಅ ॥ ಸಾರಸಭವನಿಗೂ ಶ್ರೀಶೇಷನಿಗೂ ನಾರಾಯಣನಿತ್ತು ॥ ನಾರದಗುಸುರಿದ ಬ್ರಹ್ಮನು, ಸನಕರಿಗಿತ್ತನು ಶ್ರೀಶೇಷ । ನಾರದನುಸುರಿದ ವ್ಯಾಸಮುನೀಂದ್ರಗೆ, ಸಾರಿದ ಸನಕನು ಸಾಂಖ್ಯಾಯನರಿಗೆ ॥ ೧ ॥ ವ್ಯಾಸಮುನೀಂದ್ರರು ನಿಜಸುತನಾದಾ ಶ್ರೀಶುಕಗರುಹಿದರು॥ ಶ್ರೀಶುಕಮುನಿಯು ಪರೀಕ್ಷಿತರಾಜಗೆ ಲೇಸೆಂದುಸುರಿದರು ॥ ಆ ಸಮಯದಿ ಶ್ರೀಸೂತರು ಕೇಳುತ, ಆ ಶೌನಕರಿಗೆ ಪೇಳಿದ ಕಥೆಯೀ—॥ ಭಾಗವತ ॥ ೨ ॥ ವೇದವೆ ಈ ತೆರದಿಂದಲಿ ವಿರಚಿತವಾಯಿತೀ ಭಾಗವತ । ಸ್ವಾದವನುಂಡವರಿಗೆ ಇದ ಕಿಂತಲಿನ್ನಾವುದುಂಟು ಲಲಿತ ॥ ಈ ಧರೆಯೊಳು ವ್ಯಾಘ್ರಾದ್ರಿನಾಯಕರಾದ ರಾಮಾನುಜವಿಠಲನ ನುತಿಪ ॥ ಭಾಗವತದ ॥ ೩ ॥

(ವಚನ)

ಅಷ್ಟಾದಶ ಪುರಾಣಾಂತರಂಗಳೋಳ್ ಭಾಗವತ ಮಹಾತ್ಮ್ಯೆಯೆಂತೆಂದರೆ,—

ಶ್ಲೋಕ॥ ನಿಮ್ನಗಾನಾಂ ಯಥಾಗಂಗಾ ದೇವಾನಾಮಚ್ಯುತೋ ಯಥಾ।
ವೈಷ್ಣವಾನಾಂ ಯಥಾಶಂಭೋಃ ಪುರಾಣಾನಾಮಿದಂಕಥಾ ॥

(ಇದರ ತಾತ್ಪರ್ಯವು)

ಪದ॥ ನದಿಯೊಳಗೆ ಶ್ರೀಹರಿಪಾದ ಜಾತೆಯೆರತ್ನ । ಮದನಾರಿಶಂಭುವೇರತ್ನ ವೈಷ್ಣವರೊಳಗೆ ॥ ಪದುಮನಾಭನೆರತ್ನ ಸಕಲ ದೇವರಿಗೆಲ್ಲ ಬುಧರು ತಿಳಿದಿಹರು ॥ ೧ ॥ ಪುರಾಣದೊಳಗೆಲ್ಲ ಶ್ರೀಭಾಗವತವೆರತ್ನ । ಈರಾರು ಸ್ಕಂಧದಲಿ ದಶಮವೇ ನವರತ್ನ । ಭೂರಿವಿಭವದಿ ರತ್ನ ಕೃಷ್ಣಾವತಾರವೆ, ಈ ರತ್ನ ಗಳಿಸಿ ಜನರು ॥ ೨ ॥ ನಾಭಿಕಮಲದಿ ಪುಟ್ಟಿ ಭಯಪಡುವ ಬ್ರಹ್ಮನಿಗೆ, ಸಾಭಿಮಾನದಿ ತಂದೆಹರಿಯು ಕಲಿಸಿದ ಕಥೆಯು । ಲಾಭವನು ತಾ ಪಡೆದು, ತನ್ನ ಮಗ ನಾರದಗೆ ಪ್ರಾಭವವ ಮಾಡಿತ್ತ ಭಾಗವತ ॥ ೩ ॥

ವ್ಯಾಸರಿಗೆ ತಂದಿತ್ತು ನಡೆದ ನಾರದಮುನಿಯು, ವ್ಯಾಸಂಗವನು ಮಾಡಿ ತನ್ನ ಮಗ ಶುಕಮುನಿಗೆ॥ ಸೂಚಿಸಿದ ಸಮ್ರಾಟ್ ಪರೀಕ್ಷಿತಗೆ, ಶ್ರೀಶುಕರು ಬೋಧಿಸಿದರು ॥ ಬೋಧನೆಯ ಕಾಲದೊಳಲ್ಲಿದ್ದ ಸೂತಮುನಿ । ಬಾದರಾಯಣಿ ಪೇಳ್ದ ಭಾಗವತವ ಚನ್ನಾಗಿ॥ ವೋದದಲಿ ತಿಳಿದು ಶೌನಕರಿಗರುಹಿದರು॥ ಆ ಧೋರೆಯ ಋಷಿಪುತ್ರರ । ವಾದ ಸಂವಾದ ಪ್ರಶ್ನೋತ್ತರಂಗಳಿಗೆಲ್ಲ । ಈ ಧರೆಗೆ ಕಲಿಯುಗದ ಜನರಗತಿಗಳಿಗಾಗಿ । ವೇದವೀ ತೆರದೊಳಗೆ ರಂಜಿಸಿತು ಸುಸ್ವಾದ । ಶುಕಮುನಿಯ ಮುಖಕಮಲದಿಂದ ॥

(ವಚನ)

ಈ ಪ್ರಕಾರ ಶುಕಾಚಾರ್ಯರಿಂ ಪ್ರಣೀತವಾದ ಈ ಭಾಗವತ ಪರಂಪರಾಧಿಕ್ಯ ಪ್ರಶಂಸೆಯಂಮಾಡಿ, ದಿವ್ಯಕ್ಷೇತ್ರಮಾದ ನೈಮಿಷಾರಣ್ಯದಲ್ಲಿ ದೀರ್ಘಸತ್ರಯಾಗದೀಕ್ಷಿತರಾದ ಶೌನಕಾದಿಮುನಿಗಳು ಶ್ರೀಸೂತಪುರಾಣಿಕರಂ ಕುರಿತು ಪ್ರಶ್ನೆಯಂ ಮಾಡುವ ಪ್ರಕಾರಮಂ ನಿರೂಪಿಸುವರದೆಂತೆನೆ—

॥ ಚೌಪದಿ ॥

ಕೇಳಿರೈ ಭೂಸುರರು ಹಿಂದೆ ನೈಮಿಷದೊಳಗೆ । ಬಂದು ಸೇರಿದರಲ್ಲಿ ಶೌನಕಾದಿಗಳೆಲ್ಲ ॥ ಅಂದು ಸೂತರ ಕುರಿತು ಪ್ರಶ್ನೆಯಂ ಮಾಡಿದರು । ಮುಂದೆ ಸದ್ಗತಿಮಾರ್ಗವಾವುದೆಂದೆನುತ ॥ ೧ ॥ ಸಕಲ ಪೌರಾಣಗಳು ಶಾಸ್ತ್ರ ಇತಿಹಾಸಗಳು। ಸಕಲ ಧರ್ಮನ್ಯಾಯಗ್ರಂಥಗಳೆಲ್ಲವಂಬಲ್ಲೆ । ಶ್ರೀಕೃಷ್ಣನೊಳ್ ಭಕ್ತಿಪ್ರಕಟಮಹವೋಲೆಮಗೆ । ನೀ ಕರುಣದಿಂದರುಹಿ ಬುದ್ಧಿಯಂ ಕಲಿಸುವುದು ॥ ೨ ॥ ಎಂದು ಪೇಳಿದ ಮಾತ ಕೇಳಿ ಶ್ರೀಸೂತಮುನಿ । ಅಂದು ಶೌನಕಮುನಿಗೆ ಹರಿಕಥೆಯ

ಬೆಳಗುತಾ । ನಂದದಲಿ ಪೇಳಿದನು ಭಾಗವತ ಚನ್ನಾಗಿ। ಒಂದುಳಿಯದಂತೆ ಮೊದಲಿಂದ ಕೊನೆಗು ಕಥೆಯಂ ॥ ೩ ॥

(ಗದ್ಯ)

ಈ ಪ್ರಕಾರ ಶೌನಕಾದಿ ಋಷಿಗಳಿಂ ಪ್ರಶ್ನೆಮಾಡಲ್ಪಟ್ಟ ಶ್ರೀಸೂತಪುರಾಣಿಕರು ಮಂಗಳಾಚರಣೆಯಂಮಾಡಿ, ಭಾಗವತಪ್ರತಿಪಾದ್ಯನಾದ ಶ್ರೀಹರಿಯನ್ನೂ ಪ್ರತಿಪಾದಕನಾದ ಪುರಾಣರತ್ನವನ್ನು ತಮಗೆ ನಿರೂಪಿಸಿದ ಶುಕಾಚಾರ್ಯರನ್ನೂ ಧ್ಯಾನಿಸಿ ವಂದನಂಗೈಯ್ದು, ಶೌನಕಾದಿ ಋಷಿಗಳಿಗೆ ನಿರೂಪಿಸುವರದೆಂತೆನೆ:— ಶುಕಮುನಿಯು ಪೂರ್ವದೊಳ್ ವಿಕಸಿತಂ ಮಾಡಿದ ಭಾಗವತ ಪುರಾಣಮಂ ಸಕಲ ಸೌಭಾಗ್ಯರತ್ನಾಕರಂ ಪೆರ್ಚೆ, ಸುಕರ ಕಥಾ ನಿಕರಶಿಖರವೆಂಬಂತೆ, ಭಾರತೀರತ್ನದೊಳ್ ನವರತ್ನವೆಂಬಂತೆ, ದ್ವಾದಶಸ್ಕಂಧ ಸಂಬಂಧ ಹದಿನೆಂಟುಸಾವಿರಗ್ರಂಥ ದಶಲಕ್ಷಣಾತ್ಮಕವಾದ, ಶ್ರೀಧರನ ಮಹಿಮೆ ವರ್ಣಿತವಾದ ಈ ಕಥೆಯಂ ಆ ಧೊರೆಪರೀಕ್ಷಿತನು ಕೇಳಿ, ತೃಪ್ತಿಯಿಲ್ಲದೆ ಕೃಷ್ಣಚರಿತಕರ್ಣಾಮೃತ ವಿಸ್ತಾರದಿಂ ಕೇಳಲುದ್ಯುಕ್ತನಾಗಿ ಮತ್ತೆ ಶುಕಮುನಿಯ ಪಾದಕಭಿವಂದಿಸಿ, ಮತ್ತೆ ಪೇಳೆಂದನು. ಆ ಮಾತನಾಲಿಸಿ ಮುನೀಂದ್ರನತಿಹರುಷದಿಂದ ಆತನಿಗೆ ನುಡಿದನು— ಕೃಷ್ಣಚರಿತ್ರಮಯವಾದ ಭಾಗವತ ತತ್ತ್ವಮಂ, ಶ್ರೀಹರಿಯ ದಿವ್ಯಕಥೆಯಂ ಗೀರ್ವಾಣಸಂಬಂಧವಾದ ಹರಿಚರಿತೆಯಂ ಸರ್ವರಿಗೂ ತಿಳಿವುದಕೆ, ಸಂಗ್ರಹದಿ ವರ್ಣಿಪೆನು, ಸರ್ವರೂ ಕೇಳಿ ಸರ್ವದಾ ಭಕ್ತಜನರು ಸಂತೋಷಪಡಬಹುದು. ಹನ್ನೆರಡು ಸ್ಕಂಧದೊಳಗಿನ್ನು ಸಮವಿಲ್ಲದಕೆ ಉನ್ನತದೊಳೆಸೆವ ದಶಮಸ್ಕಂಧವೆಂಬುದು ಚನ್ನಾಗಿ ಶ್ರೀಹರಿಯ ಗುಣದಿ ರಂಜಿಸುತಿಹುದು ಚಿನ್ಮಯನ ಪರಮ ಪದವ ॥ ಶುಕಗಿರಿಯೊಳುದಿಸಿದ ಭಾಗವತಮಾರ್ತಾಂಡದಿಂ ವಿಕಸಿತವಾಗಿ ರಾಜರ್ಷಿಯ ಹೃತ್ಕಮಲಂ, ಲಕುಮಿಯರಸನಪದದೊಳರ್ಪಿತವಾಗೆ ಸುಖಿಮೀವ ಕಥೆಯ ಪೇಳೆಂದೆನುತ ಶುಕಮುನಿಯ ಪದಾಬ್ಜಕೆರಗಿ ಪ್ರಶ್ನೆಯ ಮಾಡಿದನು ಪರೀಕ್ಷಿತರಾಜ ಪಾಂಡುಕುಲವೀರನೀ ಪ್ರಕಾರ ॥ ದಶಮಸ್ಕಂಧದ ಪ್ರಥಮೋಧ್ಯಾಯದಾ ಪ್ರಥಮ ಶ್ಲೋಕವು ಆದಿಯಾಗಿ ಇಪ್ಪತ್ತು ಶ್ಲೋಕದ ವರೆಗು ಪರೀಕ್ಷಿದ್ರಾಜನು ಶುಕಾಚಾರ್ಯರಂ ಕುರಿತು ಪ್ರಶ್ನೆಯಂ ಮಾಡುವ ಪ್ರಕಾರವಂ ವಿವರಿಪೆಂ ॥

॥ ಶ್ಲೋಕ. ॥

ಕಥಿತೋ ವಂಶವಿಸ್ತಾರೋ ಭವತಾ ಸೋಮಸೂರ್ಯಯೋಃ । ರಾಜ್ಞಾಂಚೋಭಯ ವಂಶಾನಾಂ ಚರಿತಂ ಪರಮಾದ್ಭುತಮ್ ॥ ಯದೋಶ್ಚ ಧರ್ಮಶೀಲಸ್ಯ ನಿತರಾಂ ಮುನಿಸತ್ತಮ । ತತ್ರಾಂಶೇನಾವತೀರ್ಣಸ್ಯ ವಿಷ್ಣೋರ್ವೀರ್ಯಾಣಿ ಶಂಸನಃ ॥ ಅವತೀರ್ಯ ಯದೋರ್ವಂಶೇ ಭಗವಾನ್ ಭೂತ ಭಾವನಃ । ಕೃತವಾನ್ಯಾನಿ ವಿಶ್ವಾತ್ಮಾ ತಾನಿ ನೋ ವದ ವಿಸ್ತರಾತ್ ॥

(ತಾತ್ಪರ್ಯ.)

ಹಾಡು ॥ ಸೋಮಸೂರ್ಯರ ವಂಶವಿಸ್ತರ ಸಂಗತಿಯ ನೀ ಪೇಳ್ದಿಯೋ। ಸೋಮರವಿಕುಲ ಜಾತರಾಜರ ಚಾರುಚರಿತವ ಪೇಳ್ದನಿ । ಶುಕಮುನೀಂದ್ರ ॥೧॥ ಎದುಮಹೀಪತಿ ಧರ್ಮಶೀಲನ ಅದುಭುತಾವಳಿ ಪೇಳ್ದಿಯೋ । ಯದುಕುಲೋದ್ಭವ ವಿಷ್ಣುಕೃಷ್ಣನ ಮಧುರ ಕಥೆಯನು ಪೇಳ್ದನಿಶುಕ ॥ ೨ ॥ ಭೂತಭಾವನನುದಿಸಿ ಯದುಕುಲ ನಾಥ ನಟಿಸಿದ ಚರ್ಯವ । ಪ್ರೀತಿಯಿಂ ಪೇಳ್ದನಿಯೆ ಪುಲಿಗಿರಿನಾಥ ಶ್ರೀಶನ ಮಹಿಮೆಯ ॥ ಶುಕಮುನೀಂದ್ರ ॥ ೩ ॥

ವಚನ ॥ ಇಂತು ಬೆಸಗೊಂಡುದಲ್ಲದೆ ಮತ್ತೆಯುಂ ಬೆಸಗೊಳ್ವನದೆಂತೆನೆ—

ವೃತ್ತ ॥ ಅರಿಷಡ್ವರ್ಗವಗೆದ್ದ ನಿತ್ಯಮುಕ್ತರುಗಳಿಂ ಸಂಗೀತ ಮಾಗಿರ್ಪುದಂ । ಉರುಸಂಸಾರ ಮಹೌಷಧಂ ಶ್ರುತಿಮನೋರಮ್ಯಂಗಳಾಗಿರ್ಪುದಂ ॥ ಪುರುಷ ಶ್ರೇಷ್ಠಗುಣಾನುವಾದ ಕಥೆಯಂ ಕೊಂಡಾಡದೋಲಿರ್ಪರಾರ್ । ತುರುವಂ ಕೊಲ್ಲುವ ಪಾಪಿಯೊರ್ವನುಳಿದಿನ್ನಾರುಂಟು ಈ ಲೋಕದೊಳ್ ॥

ವಚನ ॥ ಇಂತು ಹರಿಗುಣವರ್ಣನ ಪೂರ್ವಕ ಪ್ರಾರ್ಥಿಸಿ, ಮತ್ತೆಯುಂ ಪ್ರಾರ್ಥಿಸುವ ಬಗೆ—

॥ ಶ್ಲೋಕ. ॥

ಪಿತಾಮಹಾ ಮೇ ಸಮರೇಽಮರಂಜಯೈರ್ದೇವವ್ರತಾದ್ಯಾತಿರಥೈಸ್ತಿಮಿಂಗಿಲೈಃ । ದುರತ್ಯಯಂ ಕೌರವ ಸೈನ್ಯಸಾಗರಂ ಕೃತ್ವಾಽತರನ್ ವತ್ಸಪದಂ ಸ್ಮಯತ್ಪ್ಲವಾಃ ॥ ದ್ರೌಣ್ಯಸ್ತ್ರವಿಪ್ಲುಷ್ಟಮಿದಂ ಮದಂಗಂ ಸಂತಾನ ಬೀಜಂ ಕುರುಪಾಂಡವಾನಾಮ್ । ಜುಗೋಪ ಕುಕ್ಷಿಂಗತ ಆತ್ತಚಕ್ರೋ ಮಾತುಶ್ಚ ಮೇ ಯಃ ಶರಣಂಗತಾಯಾಃ ॥ ವೀರ್ಯಾಣಿ ತಸ್ಯಾಖಿಲ ದೇಹಭಾಜಾಮಂತರ್ಬಹಿಃ ಪೂರುಷಕಾಲರೂಪೈಃ ॥ ಪ್ರಯಚ್ಛತೋ ಮೃತ್ಯುಮುತಾಮೃತಂಚ ಮಾಯಾಮನುಷ್ಯಸ್ಯ ವದಸ್ವವಿದ್ವನ್ ॥

ರಾಗ— ಕೇದಾರಗೌಳ ॥ (ಏನುಬೇಡಲಿ ಹರಿಯನ್ನ)

ಪೇಳು ಕೃಷ್ಣನ ಕಥೆಯ, ವ್ಯಾಸಮುನಿತನಯ ॥ ಪಲ್ಲ ॥ ನಿಜಪಿತಾಮಹರಾದ ಧರ್ಮಸುತ ಭೀಮ ನರನಕುಲಸಹದೇವಾದಿ ಪಂಚಪಾಂಡವರು ನಿಜನಾಥ ಹರಿಯ ಪದ ಪಂಕಜದ ಹರಿಗೋಲನೇರಿ ಜಯವೇರಿದರು ಅವ ಹದಿ ದರ್ಪದಿಯಿಂದ॥೧॥

ಸಮರದೊಳಗಮರಜಯು ಭೀಷ್ಮ ಮುಖ್ಯಾದಿ ರಥಿಕ ತಿಮಿ ತಿಮಿಂಗಲವೆಂಬ ಮತ್ಸ್ಯದಂತೆಸೆವಾ ॥ ಅಮಿತಬಲ ಕೌರ ವನ ಸೈನ್ಯಸಾಗರವನ್ನು ಕಮಲಾಕ್ಷನೊಲವಿಂದ ಕರ ವಡಿ ? (ಕಾಲುವೆ?) ಯಂತೆ ದಾಟಿದರು ॥೨॥ ದ್ರೋಣಪುತ್ರಾಸ್ತ್ರದಿಂ ತ್ರಾಣತಪ್ಪಿದ್ದೆನ್ನ ಪ್ರಾಣವಂಕಾಯೆಂದು ಯನ್ನ ನಿಜಜನ ನೀ ॥ ನೀನೇಗತಿಯೆಂದೆನುತ ಶರಣುಪೊಂದುವಳಾಗೆ ಶ್ರೀನಿ ವಾಸನು ಯನ್ನ ಈದೇಹ ಸಲಹಿದನು ॥ ೩ ॥ ಚಕ್ರಧಾರಿಯು ಎನ್ನ ತಾಯಿ ನಿಜಕುಕ್ಷಿಯನುಪೊಕ್ಕು ಕುರುಪಾಂಡವರ ವಂಶ ಕರವಾದ । ಇಕ್ಕುಲದಸಂತಾನ ಬೀಜವೀದೇಹವನು ರಕ್ಷಿಸಿದ ಮನ್ಮಾಥ ಕೃಷ್ಣನಚರಿತೆಯನು ॥ ೪ ॥ ಅಖಿಲದೇಹಾತ್ಮರಿಗೆ ಅಂತರ ಬಹಿಯೊಳಗೆ । ನಿಖಿಳಪುರುಷಕಲ ದಿವ್ಯರೂಪಗಳಿಂ॥ ಸಕಲಸಂಸಾರಪರಮಾವ್ಯತಂಗಳನೀನ ಸುಖದಾತ ವ್ಯಾಪ್ತ ಗಿರಿಸಖನ ಕಥೆಯನುಸುರಯ್ಯ ॥

॥ ವಚನ. ॥

ಈ ರೀತಿಯೊಳ್ ಭಗವತ್ಕಲ್ಯಾಣಗುಣಾನುವಾದಪೂರ್ವಕ ಪ್ರಶ್ನೆಯಂ ಮಾಡಿ, ಮತ್ತೆಯುಂ, ರಾಮಕೃಷ್ಣರು ಲೀಲಾ ಮನುಷ್ಯ ನಟನೆಗಳಂ ನಟಿಸಿದ ಸಂಗತಿಯಂ ಕುರಿತು ಪ್ರಶ್ನೆ ಮಾಡುವರದೆಂತೆನೆ:—

॥ ಷಟ್ಪದೀರೂಪ. ॥

ರೋಹಿಣೀಸುತ ರಾಮನೆಂದೆಯೊ । ಆಹ ದೇವಕಿ ಗರ್ಭ ಜಾತನು । ದೇಹದಂತರ ಬರದೆ ರೋಹಿಣಿಗೆ ಸುತನೆಂತಾದ॥ ತಂದೆಮನೆಯನು ಬಿಟ್ಟದೇಕೆ ಮುಕುಂದ ಗೋಕುಲಕಂದು ತೆರಳಿದ । ಬಂದು ಜ್ಞಾತಿಗಳಿಂದ ವಾಸವನೆಲ್ಲಿ ತಾಗ್ಯೆಯ್ದು ॥ ನಿಂದುವ್ರಜದೊಳದೇನು ಮಾಡಿದ ಬಂದು ಮಧುರೆಯೊಳಾವ ಕೇಶವ, ಕೊಂದನೇತಕೆ ತಾಯಿಗಣ್ಣನ ಕೊಲ್ಲಸಲ್ಲದನ ॥ ಮನುಜದೇಹವಿ ಎನಿತು ವರುಷವು, ಕನಕವೃಷ್ಟಿಗಳಿಂದ ಕೂಡುತ ಘನಮಹಿಮ ದ್ವಾರಕಿಯೊಳಿದ್ದನು ಸತಿಯರೆನಿಬರ ವಗೆ॥ ಇದರ ವಿಸ್ತರವನ್ನು ಇನ್ನೂ । ಮುದದಿ ಮಾಡಿದ ಕೃಷ್ಣಚೇಷ್ಟೆಯ । ಸದಯ ಮುನಿಸರ್ವಜ್ಞನೀಪೇಳ್ ಶ್ರದ್ಧ ದಾಸನಿಗೆ॥ ಉದಕವನು ಬಿಟ್ಟಿರುವೆನಾದರು ಉದರ ಬಾಧೆ ಯು ಇಲ್ಲನಿನ್ನಯ । ಪದುಮಮುಖದಿಂ ಸ್ರವಿಸುತಿರುತಿಹ ಪರಮಮಧುವಾದ ॥ ಹರಿಯ ಚರಿತಾಮೃತವ ಸವಿಯುತ್ತಿರು ವವಗೆ ಹಸಿವೆಲ್ಲಿ ಫುಲಿಗಿರಿ । ವರದ ರಾಮಾನುಜ ವಿಠಲನಾ ಚರಿತ ಭರಿತನಿಗೆ—

॥ ವಚನ. ॥

ಈ ಪ್ರಕಾರ ಪರೀಕ್ಷಿದ್ರಾಜನೂ ಪ್ರಶ್ನೆಮಾಡಿದನೆಂದು ಸೂತಪುರಾಣಿಕರು ಶೌನಕರಿಗೆ ಪೇಳದಬಳಿಕ, ಪರೀಕ್ಷಿತರಾ ಜನಂ ಬಹುಮಾನಿಸಿ, ಕೃಷ್ಣನ ಮಹಾಚರಿತಂಗಳೆಲ್ಲಮಂ ಗಾನಮಾಡಲು ಯತ್ನಿಸಿ, ಶ್ರೀಪತಿಯ ಧ್ಯಾನದಿಂದುಂಟಾದ ಸಂತೋಷದಿಂದ ಪರಂಪರೆಯಾಗಿ, ಶ್ರೀಕೃಷ್ಣಾವತಾರಕ್ಕೆ ಕಾರಣವೇ ಮೊದಲಾದ ಕಥೆಯಂ ಶುಕಮುನಿಯು ರಾಜನಿಗೆ ಪೇಳಿದರದೆಂತೆನೆ—

(ಆರ್ಯಾಮಟ್ಟು).

ದುಷ್ಟದೊರೆಗಳಿಂ ಭಾರವ ತಡೆಯದೆ ಧರಣಿಯು ಗೋ ವಾಗಿ । ಸೃಷ್ಟಿಸುವನ ಮರೆಹೊಕ್ಕಳು ತರುಣಿಯು ಶರಣಾಗತ ಳಾಗಿ ॥ ನಿಟ್ಟುಸುರನು ಬಿಟ್ಟು ಕಣ್ಣಲಿ ನೀರುತೊಟ್ಟಿಸಿ ಬಹು ವಾಗಿ । ಕಷ್ಟವನುಸುರುತ ನಿಂತಳು ವರಪರಮೇಷ್ಟಿಗೆ ತಲೆ ವಾಗಿ ॥ ಬ್ರಹ್ಮನು ಭೂಮಿಯ ಭಾಷೆಯ ಕೇಳಿ ಸುಪರ್ವರು ಶಿವಸಹವಾಗಿ । ನಿರ್ಮಲ ಕ್ಷೀರಸಮುದ್ರಕೆ ಪೋಗಿ ನೃಸಿಂಹನ ಬಹುಮುದದಿ ॥೨॥ ಬ್ರಹ್ಮವ ಪಠಿಸುತ ಪುರುಷಸೂಕ್ತವಿ ಪರ ಬ್ರಹ್ಮನ ಸ್ತುತಿಮಾಡಿ । ಗಮ್ಮನೆ ನಿಂತನು ಧ್ಯಾನವಮಾಡುತ ಬ್ರಹ್ಮನು ಕೊಂಡಾಡಿ ॥ ೩ ॥ ಆಕಾಶದಿ ಘುಡಘುಡಿಸುವ ವಚನವನಾವಿಧಿಕೇಳಿದನು । ನಾಕೇಶರುಗಳಿಗಾ ಹರಿಯಾ ಡಿದ ವಾಕ್ಯವ ಪೇಳಿದನು ॥ ಶ್ರೀಕಾಂತನ ದಿವ್ಯಾಜ್ಞೆಯು ನಮಗೀಗಾಯಿತು ಯೆಂದವನು ॥೪॥ ಆ ಕಾರ್ಯದ ಸಂಗತಿ ಗಳ ವಿವರವ ಸುರರಿಗೆ ಪೇಳಿದನು ॥೫॥

॥ ವಚನ. ॥

ಅಶರೀರವಾಕ್ಯದಿಂ ಶ್ರೀಹರಿಯಾಜ್ಞಾಪಿಸಿದಮಾತಂ ಬ್ರಹ್ಮ ದೇವನು ಸುರರಿಗೆ ಪೇಳುವ ಬಗೆಯೆಂತೆನೆ ॥

॥ ಸೀಸಪದ್ಯ. ॥

ವಸುದೇವನರಸಿಯಲಿ ಬಿಸಜಾಕ್ಷ ಜನಿಸುವನು, ವಸುಧೆ ಯಲಿ ಜನಿಸಲೀ ಸುರಸತಿಯರು ॥ ಹಸನಾಗಿ ಶ್ರೀಹರಿಯ ಹರುಷ ಗೊಳಿಸ ಮುದಕ್ಕೆ । ವಸುಮತೀಯನ ಶಿರದಿ ಪೊತ್ತ ನಂತೆ ॥ ವಾಸುದೇವನ ಕಳಾಸಾಶಿರದ ಶಿರವುಳ್ಳ ವಾಸುಕಿಯು ಶ್ರೀಹರಿಗೆ ಅಣ್ಣನಾಗಿ ॥ ಶ್ರೀಶನಿಗೆ ಪ್ರಿಯಕಾರ್ಯ ರಾಶಿಗಳ ಮಾಡುತ್ತ ಶ್ರೀಶೇಷನುದಿಸುವನು ಶೀಘ್ರನಾಗಿ ॥ ಲೋಕ ವಾವವಳಿಂದ ಮೋಹಪಡುತಿರುವುದೋ ಆಕೆಯೇ ಜನಿಸು ವಳು ಲೋಕದಲ್ಲಿ ॥ ಲೋಕಮಾಯಕಳೆಂಬ ಭಗವತಿಯು ಕಾರ್ಯಾರ್ಥ । ಯೋಗ ಮಾಯೆಯು ಎಂಬ ನಾಮದಿಂದ ॥ ಧರೆಯ ಮೊರೆಯನು ಕೇಳಿ ಜ್ವರವ ಪರಿಹರಿಸುವಡೆ ಹರಿಯು ಮನದಲ್ಲಿ ಮೊದಲೆ ಮರೆಯದಿಹನು ॥ ನಿಮ್ಮಂಶದಿಂ ನೀವು ಯದುಕುಲದಿ ಪುಟ್ಟಿರೈ ಸುಮ್ಮಾನದಿಂ ದೇವನುದಯಿಸುವ ನು॥ ಧರೆಯ ಭಾರವ ಹರಿಗೆ ಹರಿಜನಿಸುವನಿತರೊಳ್ ಧರೆಯೊ ಳಗೆ ನೀವೆಲ್ಲ ಜನಿಸಿರಯ್ಯ ॥ ಈ ತೆರದಿ ದೇವಗಣಕಾಜ್ಞಾಪಿಸಿ

ಬ್ರಹ್ಮ ಪ್ರೀತಿಯಲಿ ಭೂಮಿಯನು ಸಂತವಿಟ್ಟ । ಧಾತ ನಡೆದನು ಭೂನಾಥಕೇಳ್ ಮುಂದೆ ಪೇಳ್ವಕಥೆಯ ॥

॥ ವಚನ. ॥

ಹೀಗೆ ಆಜ್ಞಾಪಿಸಿ ಬ್ರಹ್ಮದೇವನು ತನ್ನ ಲೋಕಕ್ಕೆ ತೆರಳಿದ ಮೇಲೆ ಭೂಲೋಕದೊಳ್ ಯಾದವರಿಗೆ ರಾಜಧಾನಿಯಾದ ಮಧುರಾಪುರದೊಳ್ ದೇವಕೀ ವಸುದೇವರಿಗೆ ವಿವಾಹಾದಿಯಾಗಿ ಕೃಷ್ಣಾವತಾರಕ್ಕೆ ಕಾರಣವಾದ ಕಥಾವೃತ್ತಾಂತವಂ ಪರೀಕ್ಷಿತ ರಾಜಂಗೆ ಶುಕರು ಪೇಳುವರದೆಂತೆನೆ:—

॥ ಹಾಡು. ॥

ಶೂರಸೇನನು ಮಧುರಾಪುರದೊಳು ಧೊರೆತನ ಮಾಡೆ ಘನ । ಶೂರ ಯಾದವರಿಗೆ ರಾಜಧಾನಿಯಾಗಿರುವಲ್ಲೊಂದು ದಿನ ॥೧॥ ಶೌರಿನಾಮಕ ವಸುದೇವ ಮದುವೆಯಾಗಿ ದೇವಕಿಯೊಡಗೂಡಿ । ಊರುಸುತ್ತಲು ರಥವೇರಿ ಬಂದನು ಪರಿವಾರಗಳನು ಗೂಡಿ ॥೨॥ ತಂಗಿಯ ಮೇಲಣ ಮಮತೆಗೆ ಕಂಸನು ಬಂಡಿಯ ಕುದುರೆಗಳಾ । ಭಂಗಾರದ ಕಡಿವಾಣವ ಪಿಡಿದನು ರಥ ಶತಬಹುವಿದಳ (?) ॥೩॥ ಬಳುವಳಿಯ ಬಹು ಕೊಟ್ಟನು ದೇವಕನು ನೂರಾನೆಗಳ । ಅಳವಡಿಸಿದ ಹದಿನೈದುಸಾಸಿರ ಪರಿಯಂತರ ಕುದುರೆಗಳ ॥೪॥ ಚಿನ್ನದ ರಥಗಳ ಕೊಟ್ಟನು ಮಗಳಿಗೆ ಸಾವಿರದೆಂಟುನೂರ । ಇನ್ನೂರೆರಡುಮಂದಿ ಗೌಡಿಗಳು ಪಲ್ಲಕ್ಕೀ ಪರಿವಾರ ॥೫॥ ತಂದೆ ದೇವಕನೀಪರಿಯಲಿ ಪುತ್ರಿಗೆ ಕೊಟ್ಟನು ಬಹುಸೂರ । ಅಂದು ಮಹಾರವ ಶಂಖದುಂದುಭಿ ಧ್ವನಿಯಾಯಿತು ಶುಭಕಾರ ॥೬॥ ಇಂತಿರಲಾಕಾಶದಿ ತಾ ನುಡಿಯಿತು ಕಂಸನ ಕುರಿತಾಗ । ಇಂತಿವಳೆಂಟನೆ ಗರ್ಭವು ನಿನ್ನನು ಕೊಲ್ಲುವದದು ಬೇಗ ॥೭॥ ಎನಲಾ ಪಾಪಿಯು ತಂಗಿಯ ಕೊಲ್ಲುವೆನೆನುತಲೆ ಮುಂದಲೆಯ । ತನ್ನ ಕರದಿ ಪಿಡಿದೆಳೆದನು ಖಡ್ಗವ ತೆಗೆದನು ನಿಜವರಿಯ ॥ ೮ ॥ ಮಾಡಬಾರದ ಪಾಪಕಾರ್ಯದೊಳೆರಗಿದ ಕಂಸನ ಕುರಿತಾಗ । ಬೇಡಿಕೊಂಡನು ಪುಲಿಶೈಲರಮಾಪತಿ ಭಕ್ತಶೌರಿಯು ಬೇಗ ॥ ೯ ॥

॥ ವಚನ. ॥

ದೇವಕಿಯ ಕೊಲ್ಲಲುದ್ಯುಕ್ತನಾದ ಕಂಸನಂ ಕುರಿತು ನೀತಿವಾಕ್ಯಗಳಿಂದ ವಸುದೇವ ನುಡಿಯುವ ಪ್ರಕಾರವದೆಂತೆನೆ ॥

॥ ಶ್ಲೋಕ. ॥

ಶ್ಲಾಘನೀಯಗುಣ: ಶೂರೈರ್ಭವಾನ್ ಭೋಜಯಶಸ್ಕರ: ।
ಸಕಥಂ ಭಗಿನೀಂ ಹನ್ಯಾತ್ ಸ್ತ್ರಿಯಮುದ್ವಾಹಪರ್ವಣಿ ॥

॥ ರಾಗಾ ॥ (ಆರ್ಯಾರೂಪ).

ಶೂರ ಕಂಸನೆ ಕೇಳು ಕೀರ್ತಿವಂತನೆ ನಿನ್ನ ತಂಗಿಯೆನಿಸಿಹಳನಾ । ನಾರಿಯ ಕೊಲ್ವರೆ ಕಲ್ಯಾಣದಿ ನಿನಗುಚಿತವೆ ಈ ಯತನಾ ॥೧॥ ಮೃತ್ಯುವು ತಪ್ಪದು ದೇಹಗಳೆತ್ತಲು ಸಂಗಡ ಪುಟ್ಟುಹುದು । ಬಿತ್ತರವೀಗಲೋ ಮತ್ತಾವಾಗಲೋ ಮೃತ್ಯುವು ನಿಜವಹುದು ॥೨॥ ದೇಹವಗಳಿಸಲು ಜೀವನು ತನ್ನಯ ಕರ್ಮವನನುಸರಿಸಿ । ದೇಹಾಂತರ ಪೊಂದಿ ಪೂರ್ವದ ದೇಹವ ಬಿಡುವನು ಮುದವೆರಸಿ ॥೩॥ ಕನಸಿನ ತೆರದೀ ದೇಹಕೆ ಮೆಚ್ಚಿ ಜನರಿಗೆ ಹಿಂಸೆಯನು । ಮನಸಿನೊಳಗುಂ ನರನೆಣಿಸಲೆಬಾರದು ಶಾಸ್ತ್ರವ ಬಲ್ಲವನೂ ॥ ೪ ॥ ನಡೆಯುವ ನರ ಮುಂದಡಿಯಿಟ್ಟಡಿಗಡಿನಡೆಯುವ ರೀತಿಯಲಿ । ಪಿಡಿಯುತ ಜಾಯೊಳು ಮಿಡಿಯುತ ಜಿಗುಣೆಯು ನಡೆಯುವ ಜಾತಿಯಲಿ ॥೫॥ ಈಕೆಯು ನಿನಗೆ ಸುಪುತ್ರಿಯು ಪೋಲುವ ಬಾಲೆಯು ನೀಕೇಳೈ ॥ ನೀಕರುಣಿಸಿ ಮತ್ತೀಕೆಯ ಕೊಲ್ಲಲಿ ಬೇಡವೊ ಕೈತಾಳೈ ॥೬॥ ಈ ಪರಿ ಸ್ವಾಂತದ ಮಾತನು ಕೇಳದೆ ಪೋಗಲು ತನ್ನೊಳಗೇ । ಆ ಪರಿಯನು ವಸುದೇವನು ನೋಡುತ ಚಿಂತಿಸಿ ಮನದೊಳಗೆ ॥೭॥ ಮೃತ್ಯುವಿಗರ್ಪಿಸಿ ಪುತ್ರರನಿವಳನು ಬಿಡಿಸಲಿಬೇಕೆಂದು । ಚಿತ್ತದಿನೆನೆದನು ಮುಂದಣ ಕಥೆಯನು ನೋಡುವೆನೆಂತೆಂದು ॥೮॥ ಮನದಲಿ ದು:ಖವ ನಿಲ್ಲಿಸಿ ನಗೆಮೊಗದಿಂದಲೆ ವಸುದೇವ । ಘನಚಾತುರ್ಯದ ಕಾಲೋಚಿತ ಮಾತಾಡಿದ ಶುಭಜೀವ ॥ ೯ ॥ ಇಳೆಯೊಳು ಪುಲಿಗಿರಿ ರಾಜರಾಮಾನುಜ ವಿಠಲವೆಂಕಟನಾ । ಎಳೆದಾವರೆ ಪೊನ್ನಡಿಗಳ ನೆನೆಯುತ ಪೇಳುವೆನಾ ತೆರನ ॥೧೦॥

॥ ವಚನ. ॥

ಕಂಸನೊಳು ವಸುದೇವನು ಸಾರಾಂಶದ ವಾಕ್ಯವಂ ಪೇಳಿ ಧೈರ್ಯವಂ ಪಡಿಸುವನದೆಂತೆನೆ—

॥ ಶ್ಲೋಕ. ॥

ನಹ್ಯಸ್ಯಾಸ್ತೇ ಭಯಂ ಸೌಮ್ಯ ಯದ್ವೈ ಸಾಹಾಶರೀರವಾಕ್ । ಪುತ್ರಾನ್ ಸಮರ್ಪಯಿಷ್ಯೇಽಸ್ಯಾಯತಸ್ತೇ ಭಯಮುತ್ಥಿತಮ್ ॥

॥ಕಂದ॥ ಆಕಾಶವಾಣಿಯಿಂ ನಿನಗೀಕೆಯ ಭಯಬೇಡ ಕೇಳು ಮೈದುನ ಕಂಸಾ ॥ ಈಕೆಯೊಳುದಿಸುವ ಕುವರರ । ನಾಕ್ಷಣ ನಿನಗೊಪ್ಪಿಸುವೆನು ಮನ್ನಿಸು ದಯೆಯಿಂ ॥

॥ ಶ್ಲೋಕ. ॥

ಸ್ವಸುರ್ವಧಾನ್ನಿವವೃತೇ ಕಂಸಸ್ತದ್ವಾಕ್ಯಸಾರವಿತ್ ।
ವಸುದೇವೋಽಪಿತಂ ಪ್ರೀತ: ಪ್ರಶಸ್ಯಪ್ರಾವಿಶತ್ಗೃಹಮ್ ॥

ರಾಗ— (ಬಂದಾ ಮುಚುಕುಂದವರದಾನಂದ).

ಕೇಳು ಕೇಳಭಿಮನ್ಯು ಪುತ್ರ ಸತ್ಯಚರಿತ್ರ ॥ಕೇಳು॥ಪಲ್ಲ॥ ಕೇಳು ಕೇಳು ಅಭಿಮನ್ಯುಸುಪುತ್ರ । ಕೇಳುವರಿಗೆ ಇದು ಕರ್ಣಪವಿತ್ರ । ಬಾಲಲೀಲೆಗಳು ಬಹಳ ವಿಚಿತ್ರ । ಬಾಲಕ ಶ್ರೀಹರಿ ಕೃಷ್ಣಚರಿತ್ರ ॥ಅನು॥ ಕಂಸ ವಸುದೇವನ ಮಾತು ಕೇಳಿ । ಆ ಸಾರವ ತಿಳಿದು । ಹಿಂಸೆ ಮಾಡದೆ ಬಿಟ್ಟಮೇಲೆ॥ ವಸುದೇವ ಮನೆಗೆ । ತಾಸಾಗಿ ಪೋದ ಪ್ರೀತಿಯಲಿ ॥ ಈಸು ನಡೆದಮೇಲಾದೇವಕಿ ನವಮಾಸ ತುಂಬಿ ಶಿಶುಪಡೆಯುತ ಬಂದಳು । ಆ ಸುತರೆಂಟು ಮೇಲೊಂದಬಲೆಯು ಭಾಸುರ ರಂದದಿ ಪ್ರತಿವತ್ಸರವು ॥೧॥

ಮೊದಲು ಪುಟ್ಟಿದ ಕೀರ್ತಿಮಂತ । ಅವನನು ಕಂಸನ ಎದು ರೊಳು ತಂದಿತ್ತು ಶೌರಿನಿಂತ । ಅನೃತಕೆ ಅಂಜಿ ಪದಗಿದ್ದ ಶಿಶುವನು ಕೊಟ್ಟನು ಶಾಂತ ॥ ಬುಧರಿಗೆ ದುಸ್ಸಹವಾವುದು ರಾಜನೆ । ವಿದ್ವಾಂಸರುಗಳಿಗೇನು ಅಪೇಕ್ಷೆಯು ॥ ಕದರ್ಯ ಜನಗಳಿಗಕಾರ್ಯವಾವುದು ಇದು ದುಃಸ್ತ್ಯಜವೆ ದೃಢಾತ್ಮ ಜನರಿಗೆ ॥ ಕೇಳು ॥ ೨ ॥

ಶೌರಿಯು ಸಮವನು ನೋಡಿ ಕಂಸ ಸತ್ಯಕ್ಕೆ ಮೆಚ್ಚಿ ಈ ರೀತಿ ನುಡಿದನು ಆಗ ನೃಶಂಸ ॥ ಕೊಂಡೊಯ್ಯುದೀ ಕುಮಾರನ ಭಯವಿಲ್ಲವು ಲೇಶ ॥ ಸಾರುವೆ ನಿನ್ನಯ ಎಂಟನೆ ಪುತ್ರನು ಮೀರದೆ ಕೊಲ್ಲುವ ಮೃತ್ಯುವು । ಈ ರೀತಿಯೆನ್ನಲು ಶಿಶುವ ಪಡೆದು ಕೆಲಸಾರಿದ ಪುಲಿಗಿರಿಪತಿ ಕಿಂಕರನೂ ॥ ಕೇಳು ॥೩॥

॥ವಚನ॥ ಇಂತು ವಸುದೇವನು ತೆರಳಿದ ಬಳಿಕ ನಾರದನು ಕಂಸನ ಬಳಿಗೆ ಬಂದು ಪೇಳ್ವನದೆಂತೆನೆ:—

॥ಪದ॥ ನಂದಮೊದಲಾಗಿರುವ ಗೋಕುಲದ ಗೋಪರು । ನಂದಪತ್ನಿಯು ಮುಖ್ಯ ಗೋಪಿಯರು ಯಾದವರ ವೃಂದವೇ ಮೊದಲಾಗಿ ವಸುದೇವದೇವಕಿಯು । ಬೃಂದಾರಕರು ಇವರು ॥ ೧ ॥

ಕಂಸನನುವರ್ತಿಸಿದ ಬಾಂಧವರೆಲ್ಲ ಹಿಂಸಕರು ಲೋಕಕ್ಕೆ ಅಸುರರಿವರೆಲ್ಲರೂ ಶಂಸೆಮಾಡಿದನಾಗ ನಾರದನು ಈಮಾತು ಕಂಸನಿಗೆ ತಿಳಿಯುವಂತೆ ॥ ೨ ॥

ಭೂಮಿಭಾರಕರಾದ ದೈತ್ಯಪತಿಗಳಿಗಾಗಿ ಭೂಮಿಯಲಿ ಪುಟ್ಟಿ ಹರು ದೇವತೆಗಳೆಂತೆಂದು, ಈ ಮಾತ ಕಂಸನಿಗೆ ಪೇಳಿ ನಾರದ ಮುನಿಯು ಆ ಬಳಿಕ ನಡೆದ ತಾನು ॥ ೩ ॥

॥ ಶ್ಲೋಕ. ॥

ಋಷೇರ್ವಿನಿರ್ಗಮೇ ಕಂಸೋ ಯದೂನ್ ಮತ್ವಾ ಸುರಾನಿತಿ । ದೇವಕ್ಯಾಗರ್ಭ ಸಂಭೂತಂ ವಿಷ್ಣುಂಚ ಸ್ವವಧಂಪ್ರತಿ ॥

ರಾಗ— ॥ಸೌರಾಷ್ಟ್ರ॥

ಋಷಿಯಾಗ ತೆರಳಲು ಯಾದವರನಿಮಿಷರೆಂದು ಅರಿತನು ದೇವಕೀದೇವಿಯ । ಬಸುರಿನ ಶಿಶುವು ತನ್ನಸುವನು ತೆಗೆಯುವ ವಿಷಯವ ತಾ ತಿಳಿದ । (ಕೊಲ್ಲುವನೆಂಬ ವಿಷಯವ ತಾ ತಿಳಿದ)॥೧॥

ದೇವಕೀವಸುದೇವರನು ನಿಗ್ರಹಿಸಿ । ನಾವಿನೋಡದೆ ಸಂಕೋಲೆಯು ಹಾಕಿಸಿ । ಆ ವಧುಪೌತ್ರಣುಗರನು ವಧಿಸಿ । ಶ್ರೀವಿಷ್ಣುವೇ ಜನಿಸಿ ಕೊಲ್ಲುವನೆಂಬ ಭಾವವನೆ ಸ್ಮರಿಸಿ ॥೨॥

ಮಾತಾಪಿತೃಗಳನ್ನು ಜ್ಞಾತಿಬಾಂಧವರನ್ನು ಘಾತಪಡಿಸಿ ಬಹು ರಾಯರಕೊಲ್ಲಿಸಿ ॥ ನೀತಿ ನೋಡದೆ ಬಲವಂತನು ಮೆರೆದನು ಈತನೆ ಕಾಲನೇಮಿ ಪುಟ್ಟಿದ ನೀಗ । ಕಂಸನಾಗಿ ಕಾಮಿ ॥೩॥

ಈ ಪರಿ ಪೂರ್ವದ ಜನ್ಮವ ತಿಳಿದಾಟೋಪದಿ ಯಾದವರಲ್ಲಿ ದ್ವೇಷಿಸಿದ । ಭೂಪನಾದ ಉಗ್ರಸೇನನನ್ನು ಜರಿದ । ತಾ ಪಡೆದನು ಧೊರೆತನದ ಕಾರ್ಯವನೆಲ್ಲ ಆ ಪರಮಾತ್ಮ ಬಲ್ಲ ॥೪॥

ಬಾಣಬಲೀಂದ್ರ ಜರಾಸುತ ಮೊದಲಾದ । ಚಾಣೂರ ಮುಷ್ಟಿಕ ರಿಷ್ಟ ಪೂತನಿಯರ । ತಾ ನೊಡಗೂಡಿ ಯಾದವರೊಳು ಕಂಸನು ಕೇಣಸರವಕೊಟ್ಟನು ಶ್ರೀ ಪುಲಿಗಿರಿ ಜಾಣನಿಂ ಭಯಪಟ್ಟನು ॥ ೫ ॥

॥ ಇತಿ ದ್ವಿತೀಯೋಧ್ಯಾಯಃ ॥

॥ ಶ್ರೀ ॥

॥ ಶ್ಲೋಕ. ॥

ತೇಪೀಡಿತಾ ನಿವಿವಿಶುಃ ಕುರುಪಂಚಾಲಕೇಕಯಾನ್ । ಶಾಲ್ವಾನ್ ವಿದರ್ಭಾನ್ ನಿಷಧಾನ್ ವಿದೇಹಾನ್ ಕೋಸಲಾನಪಿ ॥

॥ ವಚನ. ॥

ಕುರುಸಾಲ್ವ ಮೊದಲಾದ ದೇಶದರಸುಗಳನ್ನು ನಿಷಧ ವೈದೇಹಮಾಗಧರ ಧೊರೆಗಳಂ ಕೈಸೆರೆಪಿಡಿದು । ಮಧುರೆಯೊಳಿಹ ಅಕ್ರೂರವಿಕ್ರೂರರನ್ನಾಕ್ರಮಿಸಿ । ಪರಾಕ್ರಮದಿಂದ ಅಕ್ರಮದ ಕಾರ್ಯದೊಳಿರಗಿದ್ದನಾ ಕಂಸ ॥

ರಾಗ— ॥ ನಾಮನಾದಕ್ರಿಯ । ನೀಲಾಂಬರಿ. ॥

ಪೇಳ್ವನುಡಿಗಳನೆಲ್ಲ ಕೇಳೊ ಧೊರೆರಾಯ ಚಲ್ವಪುಲಿಗಿರಿ ಪತಿಯ ಮಹಿಮೆಗಳ ಬಗೆಯ ॥ಪಲ್ಲ॥ ಮುಂದೆ ಕೇಳ್ ಧೊರೆಯೆ ಅರ್ಭಂದಿ ಮಕ್ಕಳ ಕಂಸ । ಕೊಂದನಾ ದೇವಕಿಯ ಕಂದರಾಮೇಲೆ ॥ ಒಂದೊಂದು ಪುಟ್ಟುತಲೆ ಬಂದು ಕೈಯಲಿ ಪಿಡಿದು । ಕಂದಹತ್ಯವಮಾಡಿ ನಿಂದನಾಮೂರ್ಖ ॥೧॥

ವಿಷ್ಣುನಾಲಯವೆಂಬ ದಿಟ್ಟನಂತನು ದೇವಿ ಹೊಟ್ಟೆಯೊಳಗೇಳನೆಯ ಪುಟ್ಟಗಂಟಾಗೆ ॥ ಅಷ್ಟರೊಳಗಾ ದೇವಿ ಶೋಕಹ

ರ್ಭವತಾಳೆ ಸೃಷ್ಟೀಶಯೋಚಿಸಿದ । ಆ ಖಲನ ಭಯವ ॥೨॥
ಯೋಗಮಾಯೆಯ ಕರೆದು ಆಜ್ಞಾಪಿಸಿದ ಹರಿಯು ಪೋಗಿ ನೀ ದೇವಕಿಯ ಗರ್ಭವನು ತೆಗೆದು ॥ ಬೇಗದಲಿ ರೋಹಿಣಿಯ ಉದರದೊಳಗೆ ಇರಿಸು ಈಗ ದೇವಕಿಯಲ್ಲಿ ನಾನು ಜನಿಸುವೆನು ॥ ೩ ॥
ನೀನು ನಂದನ ಸತಿ ಯಶೋದೆಯಲಿ ಪುಟ್ಟು । ಮಾನವರು ನಿನ್ನನರ್ಚಿಸುವರಿದುಗುಟ್ಟು ॥ ಜಾಣೆ ನಿನಗಲ್ಲಿ ಬಹು ಹೆಸರುಗಳನಿಟ್ಟು ಕ್ಷೋಣಿಯಲಿ ಗುಡಿಕಟ್ಟಿ ನಿನ್ನ ಪೂಜಿಪರು ಒಟ್ಟು ॥೪॥
ಭದ್ರಕಾಳೀ ದುರ್ಗೀ ವೈಷ್ಣವೀ ವಿಜಯಾ ವಿದ್ಯಾ ಕೃಷ್ಣಾ ದೇವಿ ಮಾಧವೀ ಕನ್ಯಾ । ಭದ್ರೆ ನಾರಾಯಣೀಶಾಸೀ । ಮಾಯಾದೇವಿ ಬುದ್ಧಿವಂತೆಯೆಂದು ನಿನ್ನ ಕರೆಯುವರು ॥೫॥
ಆಕರ್ಷಣೆಯಿಂ ಸಂಕರ್ಷಣನು ಎಂದು । ಆ ಕುಮಾರನ ಬಲಕೆ ಬಲರಾಮನೆಂದು ॥ ಲೋಕ ರಮಣತ್ವದಿಂ ರಾಮನಿಂತೆಂದು ಲೋಕದಲಿ ಕರೆಯುವರು ಬಲಭದ್ರನೆಂದು ॥೬॥
ಈ ಪರಿಯಲಿ ದುರ್ಗೀ ಶ್ರೀಪತಿಯ ವರವ ತಾಪಡೆದು ಬಂದಳೀ ಜಗದೊಳಿರುವ । ಆ ಪರಿಯೊಳೇಳನೆಯ ಗರ್ಭದಂಕುರವ ಗೋಪ್ಯದಿಂ ರೋಹಿಣಿಯೊಳಿರಿಸಿದಳು ಘನವ ॥ ೭ ॥
ದೇವಕಿಯ ಗರ್ಭ ದೇವಕಾರ್ಯಾರ್ಥಕೆ । ಸ್ರಾವನಾಗುತಿರಲು ದೇವನಾಜ್ಞೆಯಿಂದೀ । ಭಾವವನು ತಿಳಿಯದೆ ಪೌರನಾರಿಯರೆಲ್ಲ ದೇವಕಿಗೆ ಗರ್ಭ ಸ್ರಾವನಾಯಿತೆಂದು ಕೂಗಿದರು ॥ ೮ ॥

॥ ವಚನ. ॥

ದೇವಕಿಯ ಏಳನೆಯ ಗರ್ಭವಿಂತಾಗೆ ದೇವಕೀದೇವಿ ಭಗವಂತನಂ ಗರ್ಭದೊಳ್ ಧರಿಸಿದ ಪ್ರಕಾರವದೆಂತೆನೆ:—

ರಾಗ— ॥ಆನಂದಭೈರವಿ.॥

ರಂಗದೇವನ ಶ್ರೀ ಕೃಷ್ಣರಾಯನ ದೇವದೇವನ ದೇವಿಯಂತರಂಗದಿ ಗರ್ಭವತಾಳಿದಳು ॥ ಶೃಂಗಾರಶೇಖರ ಶ್ರೀಪುಲಿಗಿರಿವಾಸ ಮಂಗಳಮಹಿಮ ಶ್ರೀನಿವಾಸನ ॥ ಪಲ್ಲ॥
ಆದಿಯೊಳಾನಕ ದುಂದುಭಿ ಚಿತ್ತದೊಳಾದಿನಾರಾಯಣನಾವೇಶಮಾಡಲು । ಆದಿತ್ಯನಂದದ ಹೊಳೆಯುತ್ತ ವಸುದೇವ ದೇದೀಪ್ಯಮಾನನಾದಾ ॥ ೧ ॥ರಂಗ॥
ಮಾಧವನಂಶವ ಶೂರನ ಸುತನಿಂದ ಮೋದದಿ ದೇವಕಿ ಧರಿಸಿ ತಾನುದರದಿ । ಶ್ರೀದೇವಿಯುರಸನ ಗರ್ಭದೊಳಿಂಬಿಟ್ಟು ದಿಗ್ದೇವಿ ಶಶಿಯಂದದೀ ॥ ೨ ॥ರಂಗ॥
ಶ್ರೀವಾಸುದೇವನೆ ಲೋಕನಿವಾಸನೆ ಆವಾಸಭೂತಳಾಗಿರುತ ವಿರಾಜಿಸೆ । ದೇವಕಿ ಕಂಸನ ಮನೆಯೊಳಗಗ್ನಿಯೂ ಶಶಿಯಂದದಿ ॥ ೩ ॥ರಂಗ॥

(ಮುಂದೆ ಸಾಗುವದು)

ಸತೀಹಿತೈಷಿಣೀ ಪ್ರಸಿದ್ಧ ಪತ್ರಿಕೆ.

ಸತೀಹಿತೈಷಿಣಿಯ ಗ್ರಾಹಕ ಬಾಂಧವರಲ್ಲಿ
ಸವಿನಯ ನಿವೇದನಗಳು.

ಸತೀಹಿತೈಷಿಣಿಯು ತನ್ನ ವಾಲ್ಯೂ ೧ನೆ ಗ್ರಂಥವಾದ ಪೂರ್ಣಾಂಕವನ್ನು ಪಿಂಗಳ ಸಂವತ್ಸರದ [illegible]ದಲ್ಲಿ ಪ್ರಕಾಶಪಡಿಸಿ, ಅಲ್ಲಿಂದೀಚೆಗೆ [illegible]ದ್ದರಿಂದ [illegible] ತಗುಲಿದೆ [illegible] ಸತೀಹಿತೈಷಿಣೀ [illegible] ಬಂದು [illegible] ಸತೀಹಿತೈಷಿಣೀ ಗ್ರಂಥಮಾಲೆಯ ೧೧ನೆ ಪುಸ್ತಕವಾದ "ಆನಂದಮಯಿ" [illegible] ಬಹು [illegible] ಈ ಪುಸ್ತಕವು [illegible] ಚಂದಾದಾರರಿಗೆಲ್ಲ [illegible].

ಮತ್ತು ನಮ್ಮ ಗ್ರಾಹಕ ಸಂದೋಹ ಬಾಂಧವರ ಪ್ರೋತ್ಸಾಹದ ಬಲದಿಂದ ಮಾತೃಮಂದಿರಕ್ಕೆ ಪ್ರಕಟನೆಗಾಗಿ ಬಂದಿರುವ ನಾಟಕ ಪುಸ್ತಕಗಳನ್ನೂ ದೊಡ್ಡ ದೊಡ್ಡ [illegible] ಪ್ರಬಂಧಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ [illegible] ನಿಶ್ಚಯಿಸಿ, "ಸತೀಹಿತೈಷಿಣೀ ಸನ್ಮಾನ ಗ್ರಂಥಾವಳಿ" ಎಂಬ ಹೆಸರಿನಿಂದ ವರ್ಷಕ್ಕೆ ನಾಲ್ಕಾರು ಪುಸ್ತಕಗಳನ್ನು ಪ್ರಸಿದ್ಧಮಾಡುವ ಪ್ರಯತ್ನದಲ್ಲಿರುವೆವು. ಅದರಂತೆ ಈಗ ಸನ್ಮಾನ ಗ್ರಂಥಾವಳಿಯ ಪ್ರಥಮ ಪುಸ್ತಕವಾದ—ದಿವಂಗತ ಪರಗೂರು ವೆಂಕಟ ವರದಾಚಾರ್ಯರಿಂದ ವಿರಚಿತವಾದ— "ತಪತೀ ಕಲ್ಯಾಣ" ವೆಂಬ ೫ ಅಂಕಗಳುಳ್ಳ ನಾಟಕವು ಪ್ರಕಟವಾಗಿ, ಚಂದಾದಾರರಿಗೆಲ್ಲ ಕಳುಹಲ್ಪಟ್ಟಿರುವುದು.

ಕಾರ್ಯದರ್ಶಿ ಸತೀಹಿತೈಷಿಣೀ—ಸಂದಿಸಿ,
ಮಾತೃಮಂದಿರಂ, ನಂಜನಗೂಡು.

ಆಳ್ವಾರರ ವೈಭವವು.

(೫ನೆ ಸಂಚಿಕೆಯಿಂದ ಮುಂದೆ ಸಾಗಿದುದು)

ಲೇಖಕಿ:— ಶ್ರೀ. ಸಾ. ರಂಗನಾಯಕಮ್ಮ

ಮತ್ತು ಅರ್ಚಕ ಪರಿಚಾರಕರೇ ಮೊದಲಾದ ಅಯ್ವತ್ತೆರಡೂ ಕಿಗದವರನ್ನೇರ್ಪಡಿಸಿ, ತಿರುನಾರಾಯಣಪುರವೆಂದು ಹೆಸರಿಟ್ಟು ಉತ್ಸವ ವಿಗ್ರಹವನ್ನರಸುತ್ತಿರಲು, ಆಗ ಇವರ ಸ್ವಪ್ನದಲ್ಲಿ ತಿರುನಾರಾಯಣಸ್ವಾಮಿಯು ತನ್ನ ಉತ್ಸವ ಮೂರ್ತಿಯಾದ ರಾಮಪ್ರಿಯನು ಡಿಲ್ಲಿಯಲ್ಲಿ ತುರುಷ್ಕ ರಾಜಗೃಹದಲ್ಲಿ ಎದ್ದವಾಗಿ ತಿಳುಹಲು, ರಾಮಾನುಜರು ಸಂತುಷ್ಟರಾಗಿ ಶಿಷ್ಯರನ್ನೊಡಗೊಂಡು ಹೊರಟು ಡಿಲ್ಲಿಯನ್ನ ಸೇರಿದರು. ಅಲ್ಲಿಯ ಧೊರೆಯು ರಾಮಾನುಜರ ತೇಜಸ್ಸನ್ನು ನೋಡಿ ಆಶ್ಚರ್ಯಪಟ್ಟು ಮರ್ಯಾದೆಮಾಡಿ, ಬಂದ ಕಾರಣವನ್ನು ಕೇಳಲು, “ ರಾಮಪ್ರಿಯ'ನೆಂಬ ಹೆಸರುಳ್ಳ ನಮ್ಮ ಸ್ವಾಮಿಯ ವಿಗ್ರಹವು ನಿಮ್ಮಲ್ಲಿದೆ, ಅದನ್ನು ಕೊಡಬೇಕು.” ಎಂದು ಕೇಳಿದರು. ಅವನು ಅನೇಕ ದೇಶಗಳಲ್ಲಿ ಕೊಳ್ಳೆಹೊಡೆದು ತಂದು ಒಟ್ಟು ಹಾಕಿದ್ದ ವಿಗ್ರಹಗಳನ್ನು ತೋರಿಸಲು ಯತಿರಾಜರು ಅಲ್ಲಿ ಅರಸಿನೋಡಿ ವಿಚಾರಿಸಿ, “ ನಮ್ಮ ಸ್ವಾಮಿ, ಇಲ್ಲಿ ಇಲ್ಲ. ನಿಮ್ಮ ಪುತ್ರಿಯು ಆಟಕ್ಕಾಗಿ ಇಟ್ಟುಕೊಂಡಿರುವರು. ಅದನ್ನು ಕೊಡಿಸಬೇಕೆ”ಂದು ರಾಜನನ್ನು ಕೇಳಲು ಆ ರಾಜನು “ ನಿಮ್ಮ ಸ್ವಾಮಿಯಾಗಿದ್ದರೆ ನೀವು ಕರೆದರೆ ಬರುವನು” ಎಂದು ಹೇಳಿ ವಿಗ್ರಹವನ್ನು ತೋರಿಸಲು ರಾಮಾನುಜರು ರಾಮಪ್ರಿಯನನ್ನು ನೋಡಿ “ಇತ್ತ ದಯೆಗೈಯಬೇಕೆ”ಂಬ ಅರ್ಥವುಳ್ಳ ಪಾಶುರವನ್ನು ಹೇಳಿದರು. ಸ್ವಾಮಿಯು ಎಲ್ಲರೂ ನೋಡುತ್ತಿರುವಂತೆಯೇ ರಾಜಪುತ್ರಿಯಿಂದ ಅಲಂಕರಿಸಲ್ಪಟ್ಟ ಸ್ವರ್ಣನೂಪುರಗಳನ್ನು ಧ್ವನಿಮಾಡುತ್ತ ಮನೋಹರವೇಷರಾಗಿ ಎದ್ದುಬಂದು ಯತಿರಾಜರ ಅಂಕದಲ್ಲಿ ಕುಳ್ಳಿರಲು, ರಾಮಾನುಜರು ಆನಂದಾರ್ಣವ ಮಗ್ನರಾಗಿ “ನಮ್ಮ ಶೆಲ್ವಪಿಳ್ಳೆ ” ಎಂದು ನಾಮಕರಣವನ್ನು ಮಾಡಿ ಕರೆದರು. ಅಂದಿನಿಂದ ಸ್ವಾಮಿಗೆ ‘ಶೆಲ್ವಪಿಳ್ಳೆ’ ಅಥವಾ ‘ಸಂಪತ್ಕುಮಾರ’ನೆಂಬ ಹೆಸರು ಪ್ರಸಿದ್ಧಿಹೊಂದಿತು. ಆ ನಂತರ ಯತಿರಾಜರು ಶೆಲ್ವಪಿಳ್ಳೆಯನ್ನು ಬಿಜಯಮಾಡಿಸಿಕೊಂಡು ತೆರಳಲು ಡಿಲ್ಲಿಯ ರಾಜಪುತ್ರಿಯು ಅದಕ್ಕಾಗಿ ವ್ಯಾಕುಲಗೊಂಡಿರುವುದನ್ನು ನೋಡಿ ದೊರೆಯು ಆ ವಿಗ್ರಹವನ್ನು ಹಿಂತಿರುಗಿ ತೆಗೆದುಕೊಂಡು ಬರುವಂತೆ ದೂತರನ್ನು ಅಟ್ಟಿದನು. ರಾಮಾನುಜರು ಅಗಮ್ಯವಾದೊಂದು ಸ್ಥಳದಲ್ಲಿರಿಸಿಕೊಂಡಿದ್ದು ಅನಂತರ ಸ್ವಾಮಿಯನ್ನು ಯಾದವಾದ್ರಿಗೆ ಸೇರಿಸಿ ಪ್ರತಿಷ್ಠಿಸಿದರು, ಮತ್ತು ಆ ಸಮಯದಲ್ಲಿ ಸಹಾಯಮಾಡಿದ ಚಂಡಾಲರು ತಮಗೊಂದು ಬಹುಮಾನವನ್ನು ಬೇಡಲು ಯತಿಪತಿಯು ಅವರಿಗೆ ತಿರುಕ್ಕುಲದ ದಾಸರೆಂದು ಹೆಸರಿಟ್ಟು ಕಲ್ಯಾಣಿಯಲ್ಲಿ ಮಿಂದು ದೇವಸ್ಥಾನವನ್ನೊಳಹೊಕ್ಕು ಬಲಿಪೀಠದವರೆಗೆ ಬಂದು, ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ತೀರ್ಥ ಪ್ರಸಾದವನ್ನು ಸ್ವೀಕರಿಸುವಂತೆ ಅನುಗ್ರಹಿಸಿದರು. (ಈಗಲೂ ಅವರ ಅಪ್ಪಣೆಯಂತೆ ರಥೋತ್ಸವದ ಸಮಯದಲ್ಲಿ ಮೂರು ದಿವಸ ಚಂಡಾಲರು ಕಲ್ಯಾಣಿ ಸರಸ್ಸಿನಲ್ಲಿ ಸ್ನಾನವನ್ನು ಮಾಡಿ ದೇವಸ್ಥಾನದೊಳಹೊಕ್ಕು ತಾವು ತಂದ ಅಕ್ಕಿ, ಬೆಲ್ಲ, ಮೊದಲಾದ ಸಾಮಗ್ರಿಗಳನ್ನು ಬಲಿಪೀಠದ ಮುಂದಿರಿಸಿ, ತೀರ್ಥ ಪ್ರಸಾದಗಳನ್ನು ಪಡೆದು ಹೋಗುವರು.) ಅನಂತರ ಯತಿರಾಜರು ಸ್ವಾಮಿಗೆ ಮಹಮಜ್ಜನವನ್ನು ಮಾಡಿಸಿ, ಇಷ್ಟೋತ್ಸವಗಳೆಲ್ಲವನ್ನೂ ನೆರವೇರಿಸಿದರು. ಅತ್ತ ತುರುಷ್ಕರಾಜಪುತ್ರಿಯು ಸ್ವಾಮಿಯ ವಿಯೋಗವನ್ನು ತಡೆಯಲಾರದೆ ತಿರುನಾರಾಯಣ ಪುರಕ್ಕೆ ಬಂದು ಸ್ವಾಮಿಯನ್ನು ಸೇವಿಸಿ ಅಲ್ಲಿಯೇ ಅಂತರ್ಧಾನವನ್ನೈದಿದಳು.

ಆ ನಂತರ ಒಡೆಯವರು ಪದ್ಮಗಿರಿಯಲ್ಲಿ ಬೌದ್ಧರನ್ನು ಜಯಿಸಿ, ಅವರೆಲ್ಲರನ್ನೂ ಕಲ್ಯಾಣದಲ್ಲಿರಿಸಿ, ಹನ್ನೆರಡು ಸಂವತ್ಸರಗಳು ಯಾದವಾದ್ರಿಯಲ್ಲಿ ಶ್ರೀವೈಷ್ಣವರಿಗೆ ದರ್ಶನಾರ್ಥಗಳನ್ನು ಹೇಳುತ್ತ ಸುಖದಿಂದಿದ್ದರು.

ಒಂದು ದಿವಸ ಒಬ್ಬ ಶ್ರೀವೈಷ್ಣವರು ರಾಮಾನುಜರ ಸನ್ನಿಧಿಗೆ ಬಂದು ದಂಡಪ್ರಣಾಮವನ್ನು ಮಾಡಿ, ಕೃತಾಂಜಲಿಪುಟರಾಗಿ, “ ಚೋಳರಾಜನ ಸೇವಕರು ಬಂದು ನಮ್ಮ ಕೂರತ್ತಾಳ್ವಾರರನ್ನೂ ಪೆರಿಯನಂಬಿಗಳನ್ನೂ ರಾಜಸಭೆಗೆ ಕರೆದುಕೊಂಡು ಹೋಗಲು, ರಾಜನು ಅವರಿಬ್ಬರನ್ನೂ ‘ ಶಿವಾತ್ಪರತರಂ ನಾಸ್ತಿ ’ ಎಂದು ಬರೆದುಕೊಡಿರೆಂ’ದು ನಿರ್ಬಂಧಿಸಿದನು. ಅದಕ್ಕೆ ಕೂರುತ್ತಾಳ್ವಾರ್ ಮತ್ತು ಪೆರಿಯನಂಬಿಗಳು—“ ಅದು ಅಪ್ರಮಾಣವು” ಎಂದು ಅನೇಕ ಉಪನಿಷದ್ವಾಕ್ಯಗಳನ್ನೂ, ವೇದರಹಸ್ಯಗಳನ್ನೂ ಉಪನ್ಯಸಿಸಲು ಧೊರೆಯು ಕುಪಿತನಾಗಿ ನಿಮ್ಮ ಹಸ್ತಾಕ್ಷರವನ್ನು ಹಾಕಿಯೇ ತೀರಬೇಕೆಂದು ನಿರ್ಬಂಧಿಸಲು ಆಳ್ವಾರ್, “ ದ್ರೋಣಮಸ್ತಿ ತತಃಪರಂ” ಎಂದು ಬರೆದು ಕೊಟ್ಟರು. ಚೋಳಭೂಪತಿಯು ಈ ಪರಿಹಾಸದಿಂದ ಆಗ್ರಹಪಟ್ಟು, ಅವರಿಬ್ಬರ ನೇತ್ರೋತ್ಪಾಟನ ಮಾಡಿಸಿದನು. ಪೆರಿಯನಂಬಿಯು ನೇತ್ರವೇದನೆಯಿಂದ ಮನೆಗೆ ಬರುತ್ತ ಮಧ್ಯದಲ್ಲೆ ಪರಮಪದವನ್ನು

ಹೊಂದಿದರು. ಕೂರುತ್ತಾಳ್ವಾರರು ಸಂಬಿಗಳ ವಿಯೋಗ ದಿಂದಲೂ ಕಣ್ಣು ನೋವಿನಿಂದಲೂ ಸಂಕಟಪಡುತ್ತ ಮನೆ ಯಲ್ಲಿಯೇ ಇರುವರೆ"ಂದು ತಿಳುಹಿದನು. ರಾಮಾನುಜರು ಅದನ್ನು ಕೇಳಿ, ವ್ಯಸನಪಟ್ಟು ಕೂರುತ್ತಾಳ್ವಾರು ಜೀವಿಸಿರು ವರೆಂಬ ಸಮಾಧಾನಹೊಂದಿ ಪೆರಿಯನಂಬಿಗೆ ಶ್ರೀಚೂರ್ಣ ಪರಿಪಾಲನವನ್ನು ಮಾಡಿದರು.

ಆ ನಂತರ ' ಮಾರುತಿಯಾಂಡಾನ್ " ಎಂಬ ತಮ್ಮ ಶಿಷ್ಯ ನನ್ನು, ಕೂರುತ್ತಾಳ್ವಾರನ್ನು ಸಮಾಧಾನ ಪಡಿಸುವದಕ್ಕಾಗಿ ಕಳುಹಲು ಆತನು ಹೋಗಿ ಕೂರೇಶರಿಗೆ ಯತಿರಾಜರ ದಿಗ್ವಿ ಜಯವನ್ನೂ ವೈಭವವನ್ನೂ ತಿಳುಹಿ, ಅವರನ್ನು ಸಂತುಷ್ಟರ ನ್ನಾಗಿ ಮಾಡಿದನು. ಆನಂತರ, ಸ್ವಲ್ಪ ದಿವಸಗಳಲ್ಲಿಯೇ ಚೋಳನು ಗಂಡಮಾಲೆಯಿಂದ ಮೃತನಾದನೆಂಬ ವಾಕ್ಯ ವನ್ನು ಕೇಳಿ ಮಾರುತಿಯಾಂಡಾನು ತಿರುನಾರಾಯಣಪುರಕ್ಕೆ ಬಂದು ಕಲ್ಯಾಣಿ ಸರಸ್ಸಿನಲ್ಲಿ ಶಿಷ್ಯರೊಡನೆ ಅನುಷ್ಠಾನವನ್ನು ಮಾಡುತ್ತಿರುವ ಯತಿರಾಜರಿಗೆ ಬಿನ್ನವಿಸಿದನು. ಇವರು ಅದನ್ನು ಕೇಳಿ ಸಂತಸಗೊಂಡು "ಈಗ ಈ ಕಲ್ಯಾಣಿ ಸರಸ್ಸಿಗೆ ಈ ಹೆಸರು ಅನ್ವರ್ಥವಾಯಿತು." ಎಂದು ಹೇಳಿ ಶಿಷ್ಯವರ್ಗದ ಜೊತೆಗೆ ನೃಸಿಂಹಸ್ವಾಮಿಯನ್ನೂ ತಿರುನಾರಾ ಯಣ ಸ್ವಾಮಿಯನ್ನೂ ಮತ್ತು ಶಲ್ವಪಿಳ್ಳೆ ಸ್ವಾಮಿಯನ್ನೂ ಸೇವಿಸಿ, ತೀರ್ಥಪ್ರಸಾದಗಳನ್ನು ಸ್ವೀಕರಿಸಿ, ಸ್ವಾಮಿಯ ಕೈಂಕರ್ಯಕ್ಕೆ ಕೆಲವು ಶ್ರೀವೈಷ್ಣವರನ್ನು ನಿಯಮಿಸಿ, ತಾವು ಶಿಷ್ಯಸಮೇತರಾಗಿ ಶ್ರೀರಂಗಕ್ಕೆ ಹೊರಟರು. ಅಲ್ಲಿರುವವ ರೆಲ್ಲರೂ ಒಡೆಯವರನ್ನು ಅಗಲಲಾರದ ತಾವೂ ಬರುವೆನೆಂ ದು ಪ್ರಾರ್ಥಿಸಲು ಯತಿರಾಜರು ತಮ್ಮಂತೆ ಒಂದು ಶಿಲಾ ಮೂರ್ತಿಯನ್ನು ನಿರ್ಮಿಸಿ, ಅದರಲ್ಲಿ ತಮ್ಮ ದಿವ್ಯಶಕ್ತಿಯನ್ನು ತುಂಬಿ, ಅದನ್ನು ಆರಾಧಿಸುತ್ತಿರುವಂತೆ ತಮ್ಮ ಶಿಷ್ಯರುಗಳಿಗೆ ನಿಯಮಿಸಿ ತಾವು ಶ್ರೀರಂಗಕ್ಕೆ ಬಂದು ಸೇರಿದರು. ಶ್ರೀರಂಗ ದಲ್ಲಿರುವ ಜನರೆಲ್ಲರೂ ಯತಿರಾಜರು ಬಂದವಾರ್ತೆಯನ್ನರಿತು ಮರ್ಯಾದೆಯಿಂದ ಇದಿರ್ಗೊಂಡು ಪುರಪ್ರವೇಶವನ್ನು ಮಾ ಡಿಸಲು ಒಡೆಯವರು ಊರನ್ನು ಹೊಕ್ಕು ಶ್ರೀರಂಗನಾಥನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ತೀರ್ಥಪ್ರಸಾದಗಳನ್ನು ಪಡೆದು, ಕೂರೇಶರ ಮನೆಗೆ ಬಂದರು. ಅವರು ಎಂಬೆರು ಮಾನಾರಿಗೆ ನಮಸ್ಕರಿಸಿ ನಿಲ್ಲಲು, "ನಿಮಗೆ ಈ ವಿಧವಾದ ಸಂಕಟವುಂಟಾಗಬಹುದೇ " ಎಂದು ಚಿಂತಿಸಿ ಪುನಃ ಸಮಾ ಧಾನವನ್ನು ಪಡೆದು, ತಮ್ಮ ಮಠಕ್ಕೆ ಬಿಜಯಮಾಡಿ ಸುಖ ದಲ್ಲಿದ್ದರು.

ಆ ನಂತರ ಯತಿರಾಜರು, ದಿವ್ಯದೇಶಗಳಲ್ಲಿ ಆಳ್ವಾರರ ಆಚಾರ್ಯರುಗಳ ವಿಗ್ರಹಗಳನ್ನೂ, ಆಂಡಾಳ್ ವಿಗ್ರಹವನ್ನೂ ಪ್ರತಿಷ್ಠಿಸಿ, ತಿರುವಧ್ಯಯನ ಮಹೋತ್ಸವಗಳನ್ನು ಕ್ರಮವಾಗಿ ನೆರವೇರುವಂತೆ ಮಾಡಿ, ತಿರುವಾಯಿಮೊಳಿ ಮೊದಲಾದ ದಿವ್ಯ ಪ್ರಬಂಧಗಳನ್ನು ಕ್ರಮವಾಗಿ ಪಠಿಸುವಂತೆ ಶಿಷ್ಯರುಗಳಿಗೆ ಉಪದೇಶಿಸಿ, ಸ್ಥಿರಪಡಿಸಿದರು. ಮತ್ತು ಚಿತ್ರಕೂಟಸ್ಥಳವನ್ನು ಚೋಳನು ಶೈವಮಯವಾಗಿಮಾಡಿ ಅಲ್ಲಿರುವ ಗೋವಿಂದರಾ ಜಸ್ವಾಮಿಯನ್ನು ಮೂಲೋತ್ಪಾಟನ ಮಾಡಿಸಬೇಕೆಂದಿದ್ದಸ ಮಯದಲ್ಲಿ 'ತಿಲ್ಲ' ಎಂಬ ಶಿಷ್ಯನು ಆ ವಿಗ್ರಹವನ್ನು ಪ್ರಯಾ ಸದಿಂದ ಮರೆಮಾಡಿ ತಿರುಪತಿಯನ್ನು ಸೇರಿಸಿದ್ದನು. ಇದನ್ನು ಯತಿರಾಜರು ತಿಳಿದು, ಮೊದಲಿದ್ದ ಗೋವಿಂದರಾಜಸ್ವಾಮಿಗೆ ಒಡಗಲು ಪ್ರತಿಷ್ಠಿಸಿ, ತಿಲ್ಲಿ ಗೋವಿಂದರಾಜನೆಂದು ನಾಮ ಕರಣವನ್ನು ಮಾಡಿದರು ಉತ್ಸವಮೂರ್ತಿಯನ್ನು ಅರ್ಚ ಕರು ಪೆಂಟಾದ್ರಿಯಲ್ಲಿರಿಸಿರುವುದನ್ನು ತಿಳಿದು, ಅದನ್ನು ಅಲ್ಲಿಂದ ತರಿಸಿ, ಪ್ರತಿಷ್ಠಿಸಿ ಕ್ರಮಪಡಿಸಿದರು. ಮತ್ತು ಕೂರೇಶರನ್ನೊಡಗೊಂಡು ಕಾಂಚೀಪುರವನ್ನೈದಿ ವರದರಾಜ ಸ್ವಾಮಿಯ ಮುಂದೆ ನಿಲ್ಲಿಸಿ, ವಾಂಛಿತಾರ್ಥಪ್ರದಾಯಕನಾದ ಈ ಸ್ವಾಮಿಯನ್ನು ಪ್ರಾರ್ಥಿಸಿ ನೇತ್ರವನ್ನು ಪಡೆಯಿರೆಂದು ಕೂರೇಶರಿಗೆ ಕಟ್ಟಪ್ಪಣೆ ಮಾಡಲು, ಅವರು ಸ್ವಾಮಿಯನ್ನು ಸ್ತೋ ತ್ರಿಸಿ, ಜ್ಞಾನಚಕ್ಷುಸ್ಸನ್ನು ಬೇಡಲು ರಾಮಾನುಜರು ಕ್ಲೇಶ ಗೊಂಡು, ತಾವೇ ಪ್ರಾರ್ಥಿಸಿದರು. ಆಗ ಕೂರೇಶರು ವರದ ರಾಜಸ್ವಾಮಿಗೆ ಧರಿಸುವ ಆಭರಣಗಳು ಇಂತಹವೆಂದು ಗುರುತಾಗಿ ಹೇಳಿದುದನ್ನು ಕೇಳಿ ಸಂತುಷ್ಟರಾಗಿ ಶ್ರೀರಂಗವ ನ್ನೈದಿ ಸುಖವಾಗಿದ್ದರು. ಈ ಪ್ರಕಾರ ರಾಮಾನುಜರು ಭೂಲೋಕವನ್ನು ವೈಕುಂಠವನ್ನಾಗಿ ಮಾಡಿ, ನಾಸ್ತಿಕರನ್ನು ಭಗವದಾರಾಧಕರನ್ನಾಗಿಮಾಡಿ, ಶ್ರೀವೈಷ್ಣವ ಸಿದ್ಧಾಂತವನ್ನು ಸ್ಥಿರಪಡಿಸುತ್ತ ಕೆಲವುಕಾಲ ಸುಖವಾಗಿದ್ದರೆಂಬಲ್ಲಿಗೆ ಗುರು ಪರಂಪರೆಯಲ್ಲಿ ರಾಮಾನುಜರ ವೈಭವವು ಆಧಿಕ್ಯವನ್ನೈದಿತು.

(ಸಂಪೂರ್ಣಂ)

ಅಹಮ್ಮದನಗರದ ಮುತ್ತಿಗೆ

(ಲೇಖಕ:—ವಿದ್ಯಾರ್ಥಿ ಪರಮೇಶ್ವರಭಟ್ಟ, ಮಂಗಳೂರು).

ಹಿಂದುಸ್ಥಾನಕ್ಕೆ, ಪೂರ್ವದಲ್ಲಿ ಆರ್ಯರು ಪ್ರವೇಶಿಸಿದರು; ಅವರು ಕ್ರಮೇಣ ಇಲ್ಲಿಯೇ ನೆಲಸಿ ಹಿಂದುಗಳಾದರು. ಆ ಮೇಲೆ ಹಲವು ಪಂಗಡದವರು ಹಿಂದುಸ್ಥಾನವನ್ನು ಪ್ರವೇಶಿಸಿದರು; ಕ್ರಮೇಣ ಆರ್ಯರೊಡನೆ ಕಲೆತರು. ಆದರೆ ಹನ್ನೊಂದನೆಯ ಶತಮಾನದಲ್ಲಿ ಮಹಮ್ಮದೀಯರು ಪ್ರವೇಶಿಸಿ, ಇಲ್ಲಿಯ ಕ್ಷತ್ರಿಯ ರಾಜರನ್ನು ಸೋಲಿಸಿ ತಾವೇ ರಾಜ್ಯಗಳನ್ನು ಸ್ಥಾಪಿಸಿದರು. ಅವರ ವಂಶೀಯರು ಹದಿನಾರನೆಯ ಶತಮಾನದ ವರೆಗೆ ಡಿಲ್ಲಿಯಲ್ಲಿ ಆಳಿದರು; ಆ ಬಳಿಕ ಮೊಗಲರು ಹಿಂದುಸ್ಥಾನವನ್ನು ಪ್ರವೇಶಿಸಿ, ಅವರನ್ನು ದಕ್ಷಿಣಕ್ಕೆ ಅಟ್ಟಿದರು. ದಕ್ಷಿಣಕ್ಕೆ ಹೋಗಿ ಮಹಮ್ಮದೀಯರು ಮೊದಲೇ ಅಯ್ದು ರಾಜ್ಯಗಳನ್ನು ಸ್ಥಾಪಿಸಿದ್ದರು; ಅವುಗಳಲ್ಲಿ ಅಹಮ್ಮದನಗರವು ಉತ್ತರದಲ್ಲಿದ್ದಿತು. ಅದನ್ನು ಅಲ್ಲಿಯ ಸುಲ್ತಾನರು ಆಳುತ್ತಿದ್ದರು. ಹಾಗಿರುವಲ್ಲಿ ೧೫೯೫ ರಲ್ಲಿ ಅಲ್ಲಿಯ ಸುಲ್ತಾನನು ಸತ್ತನು. ಅವನಿಗೆ ಮಕ್ಕಳಿರಲಿಲ್ಲ. ಅದರಿಂದ ಸಿಂಹಾಸನಕ್ಕೋಸ್ಕರವೆಂಬ ವಿಷಯವಾಗಿ ಸರದಾರರೊಳಗೂ ರಾಜಪಂಗಡಗಳಲ್ಲಿಯೂ ಕಲಹಗಳೆದ್ದುವು. ಕಲಹವು ವಿಪರೀತವಾಯಿತು. ಆಗ ಅವರಲ್ಲಿ ಒಂದು ಪಂಗಡದವರು ಡಿಲ್ಲಿಯ ಚಕ್ರವರ್ತಿಯಾಗಿದ್ದ ಅಕಬರನಿಗೆ ದಕ್ಷಿಣಕ್ಕೆ ಬರಬೇಕೆಂದು ಸೂಚಿಸಿದರು.

ಮೊಗಲರ ಸೈನ್ಯವು ಅಹಮ್ಮದನಗರವನ್ನು ಮುತ್ತಿತು. ಇತ್ತ ಕೋಟೆಯ ಸಂರಕ್ಷಣೆಯನ್ನು ಚಾಂದಬೀಬಿಯೆಂಬ ರಾಜಕುಲದವಳು ವಹಿಸಿಕೊಂಡಳು. ಅವಳು ನಿಜವಾಗಿ ರಾಜನಾಗಬೇಕಾದವನ ಅತ್ತೆಯಾಗಿದ್ದಳು. ಹೆಂಗಸಾದರೇನು? ಧೈರ್ಯಶೌರ್ಯಗಳಲ್ಲಿ ಅವಳು ಗಂಡಸೇ ಆಗಿದ್ದಳು. ಅವಳಿಗೆ ಸ್ವದೇಶದಲ್ಲಿ ತುಂಬಾ ಪ್ರೀತಿಯಿದ್ದಿತು. ಇವಳು ಅಹಮ್ಮದನಗರವನ್ನು ಹೇಗಾದರೂ ರಕ್ಷಿಸಬೇಕೆಂದು ನಿಶ್ಚಯಿಸಿದಳು; ಸುತ್ತಮುತ್ತಲಿನ ಅಕ್ಬರನ ವೈರಿರಾಜರನ್ನು ಸಹಾಯಕ್ಕೆ ಕರೆದಳು. ಆದರೆ, ಪ್ರತಾಪಸಿಂಹನೆಂಬ ಒಬ್ಬ ವೀರರಾಜನ ಹೊರತು ಮತ್ತಾರೂ ಸೇರಲಿಲ್ಲ.

ಚಾಂದಬೀಬಿಯು ಕೋಟೆಯ ರಕ್ಷಣೆಯನ್ನು ಬಹುಚೆನ್ನಾಗಿ ಮಾಡಿದಳು. ಅವಳ ಬೆಂಬಲಕ್ಕೆ ಪ್ರತಾಪಸಿಂಹನಿದ್ದನು. ಅವರಿಬ್ಬರೂ ಕೋಟೆಯನ್ನು ಬಹು ಚೆನ್ನಾಗಿ ಕಾಯ್ದುಕೊಳ್ಳುತ್ತಿದ್ದರು. ಎಲ್ಲಿಯಾದರೂ ತಮ್ಮ ಸೈನ್ಯವು ಹಿಂಜರಿದರೆ ಸಾಕು, ಚಾಂದಬೀಬಿಯು ಅಲ್ಲಿಗೆ ಬಂದು ತಾನೇ ಯುದ್ಧಕ್ಕೆ ಮುಂದುವರಿಯುತ್ತಿದ್ದಳು.

ಎರಡು ಕಡೆಯವರೂ ಯುದ್ಧವನ್ನು ಚೆನ್ನಾಗಿ ನಡೆಯಿಸುತ್ತಿದ್ದರು. ದೊಡ್ಡ ದೊಡ್ಡ ಫಿರಂಗಿಗಳು ಇಕ್ಕಡೆಯಲ್ಲಿಯೂ ಗುಂಡುಗಳ ಮಳೆಗಳನ್ನು ಸುರಿಸುತ್ತಿದ್ದುವು. ಶತ್ರುದಳದ ಅಶ್ವಾರೂಢರೂ ಕಾಲಾಳುಗಳೂ ಕೋಟೆಯನ್ನು ಲಗ್ಗೆ ಹತ್ತಿ ಬರುವರು. ಕೋಟೆಯಮೇಲಿದ್ದವರು ಅವರನ್ನು ಹಿಂದಕ್ಕಟ್ಟುತ್ತಿರುವರು; ಶತ್ರುದಳದವರ ಕೈಹೆಚ್ಚಿನದಾಯಿತು. ಪಠಾಣರು ಹಿಂಜರಿದರು. ಆಗ ಚಾಂದಬೀಬಿಯೇ ಪುರುಷವೇಷವನ್ನು ಧರಿಸಿ ಅಶ್ವಾರೂಢಳಾಗಿ ಬಂದು ಅವರ ಇದುರೆ ನಿಂತು, "ಸರದಾರರೆ, ಸೈನಿಕರೆ, ಆವಕೆಲಸಕ್ಕೆಳೆದಿರಿ? ಬುದ್ಧಿಯನ್ನೆಲ್ಲಿಟ್ಟಿರಿ? ರಣರಂಗದಿಂದ ಹೆಂಗಸರಂತೆ, ಅದರಲ್ಲಿಯೂ ಹೇಡಿಗಳಂತೆ, ಓಡುವಿರಿ, ನಾಚಿಕೆಯಾದರೂ ಬೇಡವೆ? ಬನ್ನಿರಿ, ವೀರರಿಗೆ ಇದು ಉಚಿತವಲ್ಲ. ಧೈರ್ಯವನ್ನವಲಂಬಿಸಿರಿ, ಶೌರ್ಯವನ್ನು ತೋರಿಸಿರಿ ಸಾಹಸದಿಂದ ಶತ್ರುಗಳನ್ನು ಸದೆಬಡಿಯಿರಿ, ಯುದ್ಧದಲ್ಲಿ ಮಡಿದರೆ ವೀರಸ್ವರ್ಗವಾದರೂ ಲಭಿಸುವುದು. ಶತ್ರುಗಳಿಗೆ ಬೆನ್ನುತೋರಿ ಓಡಿಹೋಗಿ ಹೇಡಿಗಳಂತೆ ಮನೆಯಲ್ಲಿ ಅಡಗಿದ್ದ ಮಾತ್ರಕ್ಕೆ ಸಾವು ತಪ್ಪುವುದಿಲ್ಲ. ಇದೋ ನಾನು ಹೊರಟೆ." ಎಂದು ಹೇಳಿ ಶತ್ರುಗಳಕಡೆಗೆ ಸಾಗಿದಳು. ಅದನ್ನು ನೋಡಿ ಸೈನಿಕರೂ ಮುಂದರಿದರು. ಭೀಕರಯುದ್ಧವಾಯಿತು. ಅಂದು ಮೊಗಲರು ಹಿಂದಿರುಗಿದರು; ಸೇನಾಪತಿಯು ಹಿಂದಿರುಗಿದಳು.

ಹಿಂದುವಾದರೇನು? ಮಹಮ್ಮದೀಯಳಾದರೇನು? ವೀರತ್ವಕ್ಕೆ ತಕ್ಕ ಪುರಸ್ಕಾರವು ಬೇಕೇಬೇಕು. ಚಾಂದಬೀಬಿಯು ಮಹಮ್ಮದೀಯ ಹೆಂಗಸಾಗಿದ್ದರೂ ಅವಳು ಒಬ್ಬ ಉತ್ತಮ ಕ್ಷತ್ರಿಯ ವೀರನಂತಿದ್ದಳೆಂದರೆ ಸುಳ್ಳಾಗದು. ಮೊಗಲರು ಎಷ್ಟು ಲಗ್ಗೆಹತ್ತಿ ಬಂದರೂ ಅವಳು, ಶತ್ರುಗಳನ್ನು ಕೋಟೆಯ ಒಳಗಡೆಗೆ ಬರಗೊಡಲಿಲ್ಲ.

ಚಾಂದಬೀಬಿಯು ತನ್ನಿಂದಾದಷ್ಟು ಕೋಟೆಯನ್ನು ಭದ್ರಪಡಿಸಿ ಶತ್ರುಗಳನ್ನು ಅಟ್ಟಲು ಸನ್ನಾಹಗಳನ್ನು ಮಾಡುತ್ತಿದ್ದಳು. ಆದರೆ ಆ ಕೋಟೆಯಲ್ಲಿಯೇ ಇದ್ದ ಕೆಲವು ಖೂಳರು ಅವಳಿಗೆ ವಿರೋಧಿಗಳಾಗಿ ತಿರುಗಿ ಅವಳನ್ನು ಕೊಂದರು. ಇದರಿಂದ ಕೋಟೆಯಲ್ಲಿ ಗಲಬಿಲಿಯುಂಟಾಯಿತು. ಮರುದಿನ, ಶತ್ರುಗಳು ಸುಲಭವಾಗಿ ಕೋಟೆಯನ್ನು ಸ್ವಾಧೀನಪಡಿಸಿಕೊಂಡರು.

ಹಾಸಿಗೆಯೇ ಹಾವಾದರೆ, ಬೇಲಿಯೆ, ತೋಳವಾದರೆ ಜೀವಿ

ಸುವುದು ಹೇಗೆ? ಸಾಹಸ ಪರಾಕ್ರಮಾದಿ ಸದ್ಗುಣದಿಂದ ಶೋಭಿಸುವ ಮಹನೀಯರಾದರೂ ಕದಾಚಿತ್, ಕೃತ್ರಿಮ ಸಂಧಾನದಲ್ಲಿಯೇ ಇರುವ ಖಲರ ಮತ್ಸರಾಗ್ನಿಗೆ ಎಡೆಯಾಗುವರೆಂಬುದು ಇದರಿಂದ ವ್ಯಕ್ತವಾಯಿತು. ಆದರೂ, ಸಜ್ಜನರನ್ನು ವಂಚನೆಯಿಂದಲೂ, ದುರಾಶೆಯಿಂದಲೂ ಘಾತಕತನದಿಂದಲೂ ನಾಶಪಡಿಸುವ ಪಾತಕಿಗಳಿಗೆ ಎಂದಿಗೂ ಸುಖಸಮಾಧಾನಗಳು ಲಭಿಸುವುದಿಲ್ಲವೆಂಬುದು, ಅವರ ಅಕೃತ್ಯಕ್ಕೆ ತಕ್ಕ ಕಷ್ಟ ದುಃಖಾನುಭವಗಳು ಅವರ ಬೆನ್ನುಹತ್ತಿಯೇ ಇರುವವೆಂಬುದೂ, ಸತ್ಪುರುಷರು ಕಾಲಬಲಕ್ಕೊಳಪಟ್ಟು ಒಂದುವೇಳೆ ದ್ರೋಹಿಗಳ ಕೃತ್ರಿಮದಿಂದ ಘಾಸಿಪಟ್ಟರೂ, ಅವರ ಸದ್ವರ್ತನದ ಸತ್ಕೀರ್ತಿಯೂ ಸುಖಸಂತೋಷಗಳೂ ಅವರ ಪಾಲಿಗೆ ಇದ್ದೇಇರುವವೆಂಬುದೂ, ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಜಾಗರಿತವಾಗಿರತಕ್ಕದ್ದು. ಹಾಗೆಯೇ ಚಾಂದಬೀಬಿಯನ್ನು ಕೊಂದ ಖಲರಿಗೆ ಜಗತ್ತಿನವರ ಶಾಪನೆಗಳೂ, ಚಾಂದಬೀಬಿಯಲ್ಲಿದ್ದ,ದೇಶಭಕ್ತಿ ಪ್ರಜಾವಾತ್ಸಲ್ಯಾದಿ ಸದ್ಗುಣಗಳಿಗೆ ಜಗತ್ತಿನವರ ಅಭಿನಂದನವೂ ಇಂದಿಗೂ ಇದ್ದೇ ಇರುವುವು.

ಪತ್ರವ್ಯವಹಾರ.

ಅವ್ಯಾಜಮನೋಹರ ಸೋದರವಾತ್ಸಲ್ಯಪ್ರೇರಿತನಾದ ಸೋದರನು ತನ್ನ ಸೋದರಿಗೆ ಬರೆದ ಪತ್ರಿಕೆ.

| ಶ್ರೀಸದ್ಗುರು ಸಹಾಯ |

ಹರಿದ್ರಾಕುಂಕುಮಶೋಭಿತೆಯಾದ ಕನಕಾಂಬೆಗೆ,
ಆಶೀರ್ವಾದಗಳು. ಉಭಯ ಕುಶಲೋಪರಿ.

ನಿನ್ನ ಕಾಗದವು ಮೊನ್ನೆಯೇ ನನ್ನ ಕೈಸೇರಿತು. ಕಾಗದವು ಕೈಸೇರಿದ ದಿನವೇ ನಿನಗೆ ಉತ್ತರವನ್ನು ಕೊಡಬೇಕೆಂದು ಅತ್ಯಂತ ಕುತೂಹಲವುಳ್ಳವನಾಗಿದ್ದರೂ ಪ್ರಬಲ ಕಾರಣದಿಂದ ಎರಡು ದಿನಗಳ ನಿಧಾನವಾಯಿತು. ಕಾರಣವೇನೆಂದರೆ, ನೀನು ನಿನ್ನ ಕಾಗದದಲ್ಲಿ ಒಕ್ಕಾಣಿಸಿರುವಂತೆ ನಿನ್ನ ಅತ್ತಿಗೆ ನನ್ನ ಲೇಖನಿಗೆ ಅಡ್ಡಿಯಾಗುವಳಲ್ಲವೆಂಬುದೂ ನಿನ್ನಲ್ಲಿ ಕುಶಲ ಪತ್ರವ್ಯವಹಾರವನ್ನು ಬೆಳೆಸಲು ನಿನ್ನ ಅತ್ತಿಗೆಯೇ ಮುಂದಾಗಿರುವಳೆಂಬುದೂ ಮೊನ್ನೆ ನಿನ್ನ ಕಾಗದವು ಬರುವ ಮೊದಲೇ ಕಳುಹಲ್ಪಟ್ಟಿರುವ ಅವಳ ಸ್ವಂತ ಬರೆವಣಿಗೆಯ ಕಾಗದದಿಂದ ನಿನಗೆ ಗೊತ್ತಾಗಿರಬಹುದು. ಆದರೂ ವಿನೋದಶೀಲಳಾದ ನಿನ್ನ ಆಕ್ಷೇಪಕ್ಕೆ ನಾನು ಅಸಮಾಧಾನಗೊಳ್ಳುವುದಿಲ್ಲವಾದುದರಿಂದ ನಿಜವಾದ ಕಾರಣವನ್ನೇ ತೆಗೆದು ನಿನ್ನ ಮುಂದಿಡುವೆನು. ಅದರ ಮೇಲೆ ನಿನಗೆ ತೋರಿದಂತೆ ಅರ್ಥವನ್ನು ಕಲ್ಪಿಸಬಹುದು.

ತಂಗಿ, ಕನಕಾ! ನಿನ್ನೀ ಅಣ್ಣನಿಗೆ ಕನ್ನಡದಲ್ಲಿ ಕಾಗದವನ್ನು ಬರೆಯುವ ಅಭ್ಯಾಸವೇ ಇಲ್ಲವೆಂಬುದನ್ನು ನೀನು ಚೆನ್ನಾಗಿ ಬಲ್ಲೆ; ಹಾಗಿದ್ದರೂ ಕನ್ನಡವೆಂದರೆ ಒಂದು ತೊಡಕೆಂದೇ ತಿಳಿಯುತ್ತಿರುವ ನನ್ನನ್ನು ಕುರಿತು, "ಉತ್ತರವನ್ನು ಬರೆಯುವದಾದರೆ ಕನ್ನಡದಲ್ಲಿಯೇ ಸ್ಪಷ್ಟವಾಗಿ ಬರೆಯಬೇಕು, ಇಂಗ್ಲೀಷು ಅಥವಾ ಮರಾಠಿ, ತೆಲಗು ಮೊದಲಾದ ಭಾಷೆಗಳಲ್ಲಿ ಬರುವ ಕಾಗದಗಳನ್ನು ನಾನು ನೋಡುವುದೇ ಇಲ್ಲ. ತಂಗಿಯ ಮಾತಿನಲ್ಲಿ ನಿಜವಾದ ಅಭಿಮಾನವಿದ್ದರೆ ಕನ್ನಡದಲ್ಲಿಯೇ ಬರೆಯುವೆಯೆಂದು ನಂಬುವೆನು." ಎಂದು ನೀನು ನಿನ್ನ ಕಾಗದದ ಕೊನೆಯಲ್ಲಿ ಬರೆದಿರುವುದನ್ನು ನೋಡಿ ನಾನು ಗೊಂದಲದಲ್ಲಿ ಬಿದ್ದೆನು. ಸರ್ಕಾರೀ ಕೆಲಸಗಳಲ್ಲಿಯಾಗಲೀ ಇತರ ವ್ಯವಹಾರೋದ್ಯೋಗಗಳಲ್ಲಿಯಾಗಲೀ ಎಂತೆಂತಹ ಕಠಿಣಪ್ರಸಂಗಗಳಲ್ಲಿಯೂ ಹಿಂತೆಗೆಯದವನಿಗೆ, ತನ್ನ ಮಾತೃಭಾಷೆ [ತಾಯ್ನುಡಿ] ಯಲ್ಲಿ ಕ್ಷೇಮಸಮಾಚಾರಪತ್ರಿಕೆಯನ್ನು ಬರೆಯಬೇಕೆಂದ ಮಾತ್ರವೇ ಈ ಅವಸ್ಥೆಯಾಗಬೇಕೇ? ಇಂಗ್ಲೀಷಿನಲ್ಲಿ ಬರೆಯಬಹುದಾಗಿದ್ದರೆ ಗಣನೆಯೇ ಇರುತ್ತಿರಲಿಲ್ಲ. ಕನ್ನಡ ಪ್ರಹಾಗಿಲ್ಲ; ಕನ್ನಡದಲ್ಲಿ ಬರೆಯಬೇಕೆಂದರೆ, ಅವಕಾಶವು ತುಂಬಾ ಇರಬೇಕು; ಕೆಲಸಗಳ ತಾಪವೇನೂ ಮನಸ್ಸಿಗೆ ಹತ್ತದಂತಿರಬೇಕು; ಇವೆರಡೂ ಆದರೂ ಬೇಕಾದ ಕಡೆ ಬೇಕಾದ ವಾಕ್ಯಗಳನ್ನು ಜೋಡಿಸಿ ಬರೆಯುವ ಸಾಮರ್ಥ್ಯವು ಎಲ್ಲಿಂದ ಬರಬೇಕು? ಹೀಗೆಯೇ ಒಂದು ದಿನವೆಲ್ಲ ಯೋಚನೆಯಲ್ಲಿಯೇ ಕಳೆದೆನು; ಇಷ್ಟಕ್ಕೂ ನಮ್ಮಲ್ಲಿ ದೇಶಭಾಷಾಶಿಕ್ಷಣದ ಅಭಾವವೇ ಕಾರಣವೆಂದೂ, ಅದು ಸಾಲದುದಕ್ಕೆ ಸ್ವಲ್ಪ ಇಂಗ್ಲೀಷು ಕಲಿತಮಾತ್ರಕ್ಕೇ ತಮ್ಮ ತಾಯ್ನುಡಿಯನ್ನೇ ಮರೆತು ಬಿಡುವ ನಮ್ಮ ದುರ್ನಯವೇ ನಮಗಿಂತಹ ದುರ್ಬಲತೆಯನ್ನುಂಟುಮಾಡಿರುವುದೆಂದೂ ನಾನು ಈಗ ಚೆನ್ನಾಗಿ ಮನಗಂಡೆನು. ತಂಗಿ! ಈವರೆಗೆ ನಿನಗೆ ಇಂಗ್ಲೀಷಿನಲ್ಲಿ ಬರೆಯುತ್ತಿದ್ದುದಕ್ಕಾಗಿ ನಾನು ಕ್ಷಮೆಯನ್ನು ಕೋರುವೆನಲ್ಲದೆ, ನಮ್ಮ ತಾಯ್ನುಡಿಯ ವಿಷಯವಾಗಿ ನನ್ನಲ್ಲಿ ಆದರಭಾವವನ್ನುಂಟು

ಮಾಡಿದ ನಿನ್ನ ಉಪಕಾರಕ್ಕಾಗಿ ನಿನ್ನನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುವೆನು; ಮತ್ತು ಇದೇ ಪ್ರಥಮ ಪ್ರಯತ್ನವೆನಿಸುವಂತೆ, ನಿನಗೆ ಕನ್ನಡದಲ್ಲಿ ಹೊಟ್ಟೆನೋಡಲು ಬರೆಯುವ ಈ ಕಾಗದಗಳಲ್ಲಿ ಅನೇಕ ಲೋಪಗಳು ಕಂಡು ಬರಬಹುದಾದರೂ ಅಪಹಾಸ್ಯಮಾಡದಿರಬೇಕೆಂದು, ನೀನು ವಯಸ್ಸಿನಲ್ಲಿ ಚಿಕ್ಕವಳಾಗಿದ್ದರೂ ಕೂಡ ನಿನ್ನಲ್ಲಿ ನಾನು ಪ್ರಾರ್ಥಿಸಬೇಕಾಗಿದೆ.

ತಂಗಿ,

"ನಿನ್ನ ಕಾರ್ಯಗೌರವದಲ್ಲಿ ನನ್ನನ್ನು ಜ್ಞಾಪಿಸಿಕೊಳ್ಳುವುದಾಗಲಿ, ನನ್ನ ಕಾಗದವನ್ನು ನಿಧಾನವಾಗಿ ಓದುವೆಯೆಂಬುದಾಗಲೀ ಸಂದೇಹವಾಗಿದೆಯೆಂದ ಬಳಿಕ ನಿನ್ನಿಂದ ಉತ್ತರವು ಖಂಡಿತವಾಗಿಯೂ ಬರುವುದೆಂಬ ನಂಬಿಕೆಯೇನು?" ಹೀಗೆಂದು ಒಂದು ಸಂಶಯ ನಾನೀಗ ನನ್ನೇ ರಚಿಸಿದ್ದೆಯಲ್ಲವೆ? ಇದಕ್ಕೆ ನನ್ನೀ ಕಾಗದದ ಪೀಠಿಕೆಯೇ ಉತ್ತರವನ್ನು ಕೊಡ ಬಹುದಾಗಿದೆ. ಇರಲಿ.

ಮಾತೃಶ್ರೀಯವರ ಬುದ್ಧಿಶಕ್ತಿಯಿಂದ ನೀನು ಚೆನ್ನಾಗಿ ಬುದ್ಧಿಗಲಿತೆಯೆಂದೂ, ಅದರಂತೆ ನಡೆಯುತ್ತಿರುವೆಯೆಂದೂ ತಿಳಿದು ಇಲ್ಲಿ ಶ್ರೀ। ತೀರ್ಥರೂಪರಿಗೂ ಮಾತುಶ್ರೀಯವರಿಗೂ ಪರಮಾನಂದವಾಯಿತು; ಆದರ ಮೇಲೆ ನಿನ್ನ ಪತಿಯು ಶ್ರೀ। ತೀರ್ಥರೂಪರಿಗೆ ಬರೆದಿದ್ದ ಪತ್ರವನ್ನು ನೋಡಿದ ಬಳಿಕ ಅಂತೂ ಅವರಿಗುಂಟಾದ ಆನಂದಾತಿಶಯವನ್ನು ವರ್ಣಿಸಲಳವಲ್ಲ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ವಿಧೇಯರೂ ನೀತಿವಂತರೂ, ಧರ್ಮಶೀಲರೂ, ನಿರಲಸರೂ ಆಗಿ, ತಮ್ಮ ಕರ್ತವ್ಯದಲ್ಲಿ ಜಾಗರೂಕರಾಗಿರುವರೆಂದು ಹೊಗಳಿಸಿಕೊಂಡರೆ, ಯಾವ ತಾಯಿತಂದೆಗಳು ತಾನೇ ಸಂತೋಷಪಡದಿರುವರು? ಅವರಲ್ಲಿಯೂ ಹೆಣ್ಣುಮಗಳು ಅತ್ತೆಯ ಮನೆಯಲ್ಲಿ ಸುಶೀಲೆಯೂ ವಿನಯಾವನತೆಯೂ ಕಾರ್ಯದಕ್ಷಳೂ ಆಗಿ, ಅತ್ತೆಯ ಮನೆಯವರೆಲ್ಲರಿಂದಲೂ ಆದರಿಸಲ್ಪಡುವಳೆಂದು ಕೇಳುವುದಕ್ಕೂ ಹೆಚ್ಚಾದ ಸೌಭಾಗ್ಯವಿಶೇಷವು ತಾಯಿತಂದೆಗಳಿಗೆ ಮತ್ತೊಂದಿರುವುದೆ? ಹೀಗೆ ಬರೆದುದರಿಂದ ತಾಯಿತಂದೆಗಳಿಗೆ ಮಾತ್ರವೇ ಆನಂದವಾಗಿರಬೇಕೆಂದು ಭಾವಿಸಬೇಡಮ್ಮ; ತನ್ನ ತಂಗಿಯು ಜನರಿಂದ ಹೊಗಳಿಸಿಕೊಳ್ಳುವುದನ್ನು ನೋಡಿ ಎಂತಹ ಅಣ್ಣನಿಗಾದರೂ ಅಭಿಮಾನವೂ ಹೆಮ್ಮೆಯೂ ಉಂಟಾಗದಿರುವುದಿಲ್ಲ. ಹಾಗಿರುವಲ್ಲಿ, ನೀನು ತವರ್ಮನೆಯಲ್ಲಿದ್ದಂತೆ ಅಲ್ಲಿಯೂ "ಹಠಶಠತೆಗಳಲ್ಲಿದ್ದು ಅತ್ತೆಯಮನೆಯವರಿಗೆ ಎಷ್ಟು ಶ್ರಮವನ್ನುಂಟು ಮಾಡುವೆಯೋ" ಎಂದು ಚಿಂತಿಸುತ್ತಿದ್ದ ನನಗೆ ನಿನ್ನ ಅನುನಯವೃತ್ತಿಯನ್ನು ಕೇಳಿ ಎಷ್ಟು ಆನಂದವಾಗಿರಬಹುದೋ ನೀನೇ ಯೋಚಿಸು!

ತಂಗಿ, ಲೇಖನವಿಸ್ತಾರಕ್ಕೆ ಭಯಪಡುವೆನಾದುದರಿಂದ, ಇನ್ನು ಸ್ವಲ್ಪದರಲ್ಲಿಯೇ ನಿನ್ನ ಪತ್ರಕ್ಕೆ ಉತ್ತರವನ್ನು ಬರೆಯುವೆನು. ಮನೆಯಲ್ಲಿ ಚಿ। ಸೌ। ಗಳೇ ಆದಿಯಾಗಿ ಎಲ್ಲರೂ ಆರೋಗ್ಯದಲ್ಲಿರುವರು. ಮಾತುಶ್ರೀಯವರು ಕಾರ್ಯಬಾಹುಳ್ಯದಲ್ಲಿರುವುದರಿಂದ ನಿನ್ನ ಎರಡು ಕಾಗದಗಳಿಗೂ ಉತ್ತರವನ್ನು ಕೊಡಲಿಲ್ಲ; ಅಷ್ಟೇ ಹೊರತು, ನಿನ್ನನ್ನು ಅವರು ಮರೆತರೆಂದೂ, ಅಲ್ಲವೆ ಉಪೇಕ್ಷಿಸಿದ್ದಾರೆಂದೂ ನೀನು ಭಾವಿಸುವುದು ತಪ್ಪು; ಹೆತ್ತತಾಯಿಯೇ ಮಕ್ಕಳನ್ನು ಮರೆಯುವುದಾದರೆ — ಯಾವ ಮಕ್ಕಳಿಗಾಗಿ ಪಡುಪಾಟುಪಟ್ಟು ಸಾಕಿ ಅವರನ್ನು ದೊಡ್ಡವರನ್ನಾಗಿ ಮಾಡಿದರೋ, ಅಂತಹ ತಾಯಿಗೇ ಆ ಮಕ್ಕಳನ್ನು ಉಪೇಕ್ಷಿಸುವುದಾದರೆ — ಜಗತ್ತಿನಲ್ಲಿಲ್ಲ ಪರಮಪೂಜ್ಯವಸ್ತುವೆನ್ನಿಸುವುದೇನಿದೆ? ಹೆಣ್ಣುಮಕ್ಕಳಲ್ಲಿ ತಾಯಿತಂದೆಗಳ ಪ್ರೀತಿಯು ನಿರಪೇಕ್ಷವಾದುದು; ಆದುದರಿಂದ ಆ ಪ್ರೀತಿಗೆ ಎಂದಾಗಲೂ ಕ್ಷೀಣಿಸುವುದೆಂಬ ಭೀತಿಗೆ ಅವಕಾಶವಿಲ್ಲ. ತೀರ್ಥರೂಪರು ನಿನ್ನ ಮತ್ತು ನಿನ್ನ ಸ್ವಾಮಿಯ ಪತ್ರಿಕೆಗಳಿಗ ಉತ್ತರವನ್ನೇ ಕೊಡಲಿಲ್ಲವದೇಕೆಂದು ಕೇಳಿದೆ. ಅವರು ಉತ್ತರವನ್ನು ಕೊಡದಿರುವುದಕ್ಕೆ ಕೂಡ ಮೇಲೆ ಹೇಳಿದುದೇ ಕಾರಣವು. ಹೇಗಾಗಿ, ನಿಮ್ಮ ಕಡೆಯ ಕ್ಷೇಮಲಾಭಗಳು ನಮಗೂ, ನಮ್ಮ ಕಡೆಯ ಕ್ಷೇಮಲಾಭಗಳು ನಿಮಗೂ ನಮ್ಮ ನಿಮ್ಮ ಪತ್ರಗಳಿಂದ ತಿಳಿಯುತ್ತಿದೆಯಾದ್ದರಿಂದ, ಅವಕಾಶವಾದಾಗ ನಿಮ್ಮಿಬ್ಬರಿಗೂ ವಿವರವಾಗಿಯೇ ಉತ್ತರವನ್ನು ಬರೆಯುವರು. ನಿನ್ನ ಪತ್ರಿಗೆ ನಾನು ಹೇಳಬೇಕಾದುದೇ ಇಲ್ಲ. "ಕಛೇರಿಗೆ ರಜೆ ಬಂದಾಗ, ತಂಗಿಯ ಮನೆಗೆ ಪತ್ನೀಪರಿವಾರದೊಡನೆ ಬರಲಾದೀತೇ?" ಎಂದು ಕೇಳಿರುವೆಯಲ್ಲವೆ? ಅಕ್ಕ-ತಂಗಿಯರನ್ನು ನೋಡ ಬರಲು ಅಕ್ಕರೆಯಿಲ್ಲದವನು ಅಣ್ಣನೆನ್ನಿಸುವನೆ? ಅಗತ್ಯವಾಗಿಯೂ ಬಂದು, ನಾಲ್ಕಾರು ದಿನಗಳು ನಿಮ್ಮ ಮನೆಯಲ್ಲಿದ್ದು, ಬರುವಾಗ ನಿಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದು, ತವರ್ಮನೆಯಲ್ಲಿ ಅಣ್ಣನು ತಂಗಿಗೆ ಮಾಡುವ ಆದರೋಪಚಾರವನ್ನು ತಕ್ಕಂತೆ ಮಾಡಬೇಕೆಂದು ನಿಶ್ಚಯಿಸಿರುವೆನು. ಮತ್ತೇನು?

ಇನ್ನು ನಿನಗೆ ಬುದ್ಧಿವಾದವನ್ನು ಬರೆಯಬೇಕೆಂದು ನೀನು ಸೂಚಿಸಿದ್ದುದಕ್ಕೆ ಉತ್ತರವಲ್ಲವೆ? ತಂಗಿ, ಬುದ್ಧಿವಾದವನ್ನು ಹೇಳಬೇಕೆಂದು ತೋರಿದಾಗ, ನಿನಗೆ ಬುದ್ಧಿಕಾಲದೆಂದು ತೋರಿಬಂದಾಗ, ಬರೆಯುವೆನು. ಸದ್ಯಕ್ಕೆ ನೀನು ಅಹಂಕಾರವನ್ನು ಬಿಟ್ಟು, ಉದಾಸೀನವನ್ನು ತಳ್ಳಿ, ವಿನಯ, ಶ್ರದ್ಧೆ, ಭಕ್ತಿ, ಪ್ರೀತಿ, ಆದರ ಭಾವಗಳಿಂದ ನಿನ್ನ ಗೃಹಿಣೀ ಧರ್ಮವನ್ನು ಪಾಲಿಸುತ್ತಿರುವೆಯೆಂದೂ ನಿನ್ನ ಸ್ವಾಮಿಗೆ ನೀನು ಅನುಕೂಲೆಯೂ, ಮನೋಜ್ಞೆಯೂ ಆದ ಪತ್ನಿಯಾಗಿರುವೆ

ಯೆಂದೂ ನನ್ನ ಮನಸ್ಸಿಗೆ ವಿಶ್ವಾಸವುಂಟು. ಆ ವಿಚಾರದಲ್ಲಿ ಹೆಚ್ಚು ಬರೆಯಲಾರೆ

ನಿನ್ನ ಸ್ವಾಮಿಗೆ ನನ್ನ ವಿಜ್ಞಾಪನೆಯನ್ನು ತಿಳಿಸುವುದು. ಆತನಿಗೆ ನಾನು ನಾಳೆಯೇ ಉತ್ತರವನ್ನು ಬರೆಯುವೆನು. ಮತ್ತೊಂದು ಅಗತ್ಯಸೂಚನೆ, ಏನೆಂದರೆ, ನನಗೆ ನೀನು ಮುಂದೆ ಬರೆಯುವ ಕಾಗದಗಳಲ್ಲಿ ಪ್ರತ್ಯಕ್ಷದಲ್ಲಿ ನನ್ನೊಡನೆ ಹೇಗೆ ಸಲಿಗೆಯಿಂದ ಮಾತನಾಡುವೆಯೋ ಹಾಗೆಯೇ ಪತ್ರಲೇಖನದಲ್ಲಿಯೂ ಬರೆಯಬೇಕೆಂದು ಅಪೇಕ್ಷಿಸುವೆನು.

‘ಶ್ರೀನಿಲಯ’ ತ್ರಿನಯನಕ್ಷೇತ್ರ	ಇಂತು ಆಶಿಸುವ ನಿನ್ನ ಅಣ್ಣ,
ಕಾಳಯುಕ್ತಿ ಚೈತ್ರ ಶುದ್ಧ ನವಮಿ.	ಮುರಲೀಧರ.

ತಾಜಾಕಲಂ:— ಹಿಂದೆ ನಿನಗೆ ನಾನು ಮಾತುಶ್ರೀಯವರ ಪತ್ರದೊಡನೆ ಕಳುಹಿದ್ದ [illegible] ಹಾಡಿನ ಕೊನೆಯ ನುಡಿಯಲ್ಲಿ “ ಅವರ ಅನುಜ—[illegible]ಜನೆಂದು ಮನದಲ್ಲೆಣಿಸಬೇಡವಮ್ಮ” ಎಂದು ಬರೆದಿದೆಯೇಕೆಂದೂ ಅದರ ಅಭಿಪ್ರಾಯವೇನೆಂದೂ ನೀನು ಆಕ್ಷೇಪಿಸಿರುವೆಯಷ್ಟೆ? ಅದು ನನ್ನ ಹಸ್ತದೋಷದಿಂದಾದ ತಪ್ಪೇ ಹೊರತು ಕವಿಯ ದೋಷವಲ್ಲ. ‘ಮನದಲ್ಲೆಣಿಸಬೇಡವಮ್ಮ’ ಎಂಬುದನ್ನು “ಮನದಲ್ಲೆಣಿಸಬೇಕಮ್ಮ” ಎಂದು ತಿದ್ದಿಕೊಂಡರೆ ಸರಿಹೋಗುವುದು.

ಇತಿ, ನಿನ್ನ ಅಣ್ಣ.

ತಂಗಿಯು ಅಣ್ಣನ ಪತ್ರಿಕೆಗೆ ಕೊಟ್ಟ ಪ್ರತ್ಯುತ್ತರವು.

|| ಶ್ರೀಃ ಶಿವಂ ತು ||

ಪಿತೃಸದೃಶಪೂಜ್ಯನಾದ ಭ್ರಾತೃಸಮ್ಮುಖದಲ್ಲಿ ನಮಸ್ಕಾರಪೂರ್ವಕ ವಿಜ್ಞಾಪನೆಗಳು.—

ಅವ್ಯಾಜ ಮನೋಹರವಾತ್ಸಲ್ಯದಿಂದ ಬರೆದು ಕಳುಹಿದ ಕುಶಲವಾರ್ತಾಪತ್ರಿಕೆ, ಕೈಸೇರಿ ಮನಸ್ಸಿಗೆ ಅತ್ಯಂತ ಉತ್ಸಾಹವನ್ನುಂಟುಮಾಡಿತು. ಈ ಮೊದಲೇ ಎಂದರೆ, ಮೂರು ದಿನಕ್ಕೆ ಮೊದಲೆ ನನ್ನ ಕೈಸೇರಿದ್ದ ಅತ್ತಿಗೆಯ ಪತ್ರಿಕೆಗೆ ಇಂದು ಪ್ರತ್ಯುತ್ತರವನ್ನು ಬರೆಯುತ್ತಿದ್ದ ಸಮಯದಲ್ಲಿಯೇ ನಿನ್ನ ಪತ್ರಿಕೆಯೂ ಕೈಸೇರಿದುದರಿಂದ ನಿಮ್ಮಿಬ್ಬರಿಗೂ ಒಟ್ಟಾಗಿಯೇ ಉತ್ತರವನ್ನು ಕೊಡಲು ನಿಶ್ಚಯಿಸಿ ಉತ್ಸಾಹದಿಂದ ಕುಳಿತಿರುವೆನು. ಹಿರಿಯನೂ ತಂದೆಯಂತೆ ಪೂಜ್ಯನೂ ಆದ ಅಣ್ಣನು ಆಜ್ಞಾಪಿಸುತ್ತಿರುವಲ್ಲಿ ಅದರಂತೆ ನಡೆಯದೆ ತನ್ನ ಮನಸ್ಸಿನಂತೆಯೇ ನಡೆಯುವೆನೆನ್ನುವುದು ತಂಗಿಗೆ ವಿಹಿತವಲ್ಲ; ಆದುದರಿಂದ ಸಮಕ್ಷಮದಲ್ಲಿ ಮಾತನಾಡುವಂತೆಯೇ ಸಲಿಗೆಯಿಂದ ಬರೆಯಲು ಕೈತಡೆಯುತ್ತಿದ್ದರೂ ನಿನ್ನ ಮಾತನ್ನು ಮೀರಲಾರದೆ ಬರೆಯುತ್ತಿರುವೆನು. ಇದರಲ್ಲಿ ಮರ್ಯಾದಾತಿಕ್ರಮಣದೋಷವೇನಾದರೂ ಕಂಡುಬಂದರೂ ಸೋದರಭಾವದ ಸೌಲಭ್ಯದಿಂದಾದುದೆಂದು ತಿಳಿದು ಕ್ಷಮಿಸಬೇಕೆಂದು ಪ್ರಾರ್ಥಿಸುವೆನು.

ಅಣ್ಣ, ನನ್ನ ಪತ್ರಕ್ಕುತ್ತರವನ್ನು ಕೊಡಲು ಸಾವಕಾಶವಾದುದಕ್ಕೆ ನೀನು ಬರೆದಿರುವ ಕಾರಣವನ್ನು ತಿಳಿದು ನಾನು ಆಶ್ಚರ್ಯಪಡುತ್ತಿರುವುದೊಂದು ಕಡೆಗಿರಲಿ, ನನ್ನ ಸ್ವಾಮಿಯು ತನ್ನ ಮೂಗಿನ ಮೇಲೆ ಬೆರಳಿಟ್ಟುಕೊಂಡು ಗಹಗಹಿಸಿ ನಕ್ಕುಬಿಟ್ಟರು. ಏಕೆಂದರೆ, ಅವರು — ‘ಹುಟ್ಟಿದುದು ಕನ್ನಡನಾಡು, ಹೆತ್ತವಳು ಕನ್ನಡಿತಿ, ತಿಂದು ಬೆಳೆಯುತ್ತಿರುವುದು ಕನ್ನಡದಟ್ಟಿಯೊಳಗಿನ ಅನ್ನಪಾನಾದಿ, ಮೊತ್ತಮೊದಲು ಕಲಿತುದು ಕನ್ನಡವಮಾತು, ಒಡನಾಡಿ ಆಡಿದವರು ಕನ್ನಡಜನರು, ಕಲಿಸಿದವರು ಕನ್ನಡದವರು, ಬೆಳೆದು ದೊಡ್ಡವಳಾಗಿ [illegible] ಎಲ್ಲಾ ಕೆಲಸಗಳಲ್ಲಿಯೂ ಕನ್ನಡದ್ದೇ ನಮ್ಮನ್ನು ಕಾಪಾಡುತ್ತಿದ್ದು ಈಗಲೂ, ಮುಂದೆಯೂ ಕನ್ನಡದ [illegible] ಮಾತಾಗಿರುವಾಗ, ಕನ್ನಡದಲ್ಲಿ ಬರೆಯುವುದಕ್ಕೆ ತಪ್ಪು ತೊಡಕು! [illegible] ಆದೀತು, [illegible] ಮುಂದೆ, ತಮ್ಮ ತಾಯ್ನುಡಿಯನ್ನು [illegible] ಹೊರಗಿನ [illegible] ಒಡಲನ್ನು ಅಲಂಕರಿಸಿಕೊಂಡು [illegible]” [illegible] ನೋಡಿ ಅದರಂತೆ [illegible], [illegible] ಹಾಗೆ ತಾಯನ್ನು [illegible] ತೊಡಕೆಂದು ಹೇಳುವುದು ಸಾಹಸವೇ ಸರಿ! ಹೋಗಲಿ, ಹೆತ್ತ ತಾಯಿಯ ಗುಣವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಅಣ್ಣನಿಗೆ, ತಂಗಿಯು [illegible] ಲೇ ಅದನ್ನು ತಿಳಿಸಿದಳೆಂಬುದು ಅಭಿಮಾನದ ಮಾತು!” ಹೀಗೆ ಹಾಸ್ಯಮಾಡುವರು. ಅಣ್ಣ! ಅಭಿಮಾನದಿಂದ ನೀನೇನೋ ನನ್ನನ್ನು ಹೊಗಳುವೆ; ಅಷ್ಟೇ ಹೊರತು, ಆ ಹೊಗಳಿಕೆಗೆ ನಿಜವಾಗಿಯೂ ನಾನು ಪಾತ್ರಳಲ್ಲ. ಅಲ್ಲದೆ, ತಂಗಿಯಲ್ಲಿ ಕ್ಷಮೆಯನ್ನು ಕೇಳುವುದೂ ಕೂಡ ಅಣ್ಣನಿಗೆ ತಕ್ಕ ಕೆಲಸವಲ್ಲವೆಂಬುದು ನನ್ನ ಮತವು.

ಅತ್ತಲಿನ ಕುಶಲವಾರ್ತೆಗಳು ಬಹುದಿನಗಳಿಂದ ತಿಳಿಯದಿದ್ದುದರಿಂದಲೂ ನಾವಿಬ್ಬರೂ ಎರಡು ಮೂರು ಪತ್ರಗಳನ್ನು ಬರೆದರೂ ನಿಮ್ಮ ಕಡೆಯಿಂದ ಒಂದು ಉತ್ತರವಾದರೂ ಬಾರದಿದ್ದುದರಿಂದಲೂ “ ಮೊನೆಮಾತುಗಳಿಂದ ಅಣ್ಣನನ್ನು ಕೆಣಕಿದರೆ ಒಡನೆ ಉತ್ತರವು ಬರುವುದು. ” ಎಂದು ಭಾವಿಸಿ, “ಅಣ್ಣನು ತಂಗಿಗೆ ಉತ್ತರವನ್ನು ಕೊಡದಿರುವನೆ ! ಆದರೆ, ಪಾಪ, ಆತನೇನು ಮಾಡಬಲ್ಲನು; ಅತ್ತಿಗೆಯ ಅಪ್ಪಣೆಯಿಲ್ಲದೆ

ಬರೆಯುವ ಧೈರ್ಯವಿಲ್ಲದಿರಬಹುದು, ಅಥವಾ ಅಣ್ಣನ ಲೇಖಿನಿಗೆ ಅತ್ತಿಗೆಯೇ ಅಡ್ಡಿಯಾಗಿರಬಹುದು. ” ಹೀಗೆಂದು ವಿನೋದಕ್ಕಾಗಿ ಚುಚ್ಚಿ ಬರೆದೆನು; ಅಷ್ಟೇ ಹೊರತು, ಅತ್ತಿಗೆಯು ನನ್ನ ವಿಷಯದಲ್ಲಿ ಅನ್ಯಥಾ ಭಾವದಲ್ಲಿರುವಳೆಂದು ನಾನು ಮನಸ್ಸಿನಲ್ಲಿಯೂ ತರುವಂಥವಳಲ್ಲ.

ನಿಜ; ಹೆಣ್ಣುಮಕ್ಕಳ ವಿಷಯದಲ್ಲಿ ತಾಯಿ ತಂದೆಗಳು ನಿರ್ವ್ಯಾಜಪ್ರೇಮವುಳ್ಳವರಾಗಿರುವರು; ಅನವರತವೂ ಅವರ ಕ್ಷೇಮಾಭ್ಯುದಯವನ್ನೇ ಹಾರೈಸುತ್ತಿರುವರು. ಅದನ್ನು ನಾನೇನೂ ಒಪ್ಪದಿಲ್ಲ. ಆದರೂ, ಎಲ್ಲಿ, ನಾವು ಅತ್ಯಂತ ಪ್ರೀತಿಗೌರವವನ್ನಿರಿಸಿರುವವರೋ-ಅಲ್ಲಿ, ನಮಗೆ ಅವುದಾದರೂ ಒಂದು ಬಗೆಯ ಶಂಕೆಯುದ್ಭವಿಸುವುದಲ್ಲವೆ? ‘ ಅವರ ಬುದ್ಧಿವಾದಪತ್ರಿಕೆ ಬಾರದಿದ್ದರೆ ಅವರು ಮರೆತರೋ, ಉಪೇಕ್ಷಿಸಿದರೋ ಅಥವಾ ನಮ್ಮಿಂದ ಅಜ್ಞಾತದೋಷಗಳೇನಾದರೂ ನಡೆದಿದ್ದು ಅದಕ್ಕಾಗಿ ಅವರು ಅಸಮಾಧಾನಗೊಂಡಿರುವರೋ ಹಾಗಿಲ್ಲದಿದ್ದರೆ ಅಸ್ವಸ್ಥದಲ್ಲಿರುವರೋ ......’ ಎಂಬೀತರದ ಅನೇಕ ಸಂಶಯಗಳು ಬಾಧಿಸುವವೆಂಬುದು ಅನುಭವವೇದ್ಯವೇ ಅಹುದಷ್ಟೇ! ಇದರ ಮೇಲೆ, ಅಣ್ಣ! ನಿನ್ನಿಂದ ಸ್ಫೂರ್ತಿದಾಯಕವಾದ ಸವಿಸ್ತರ ಪತ್ರವನ್ನು ಪಡೆಯುವ ಅಭಿಲಾಷೆಯೂ ಉಂಟಾಗಿ ಹಾಗೆ ಬರೆದೆನು.

ತಂಗಿಯು ಅತ್ತೆಯ ಮನೆಯಲ್ಲಿ ಅನುನಯ ವೃತ್ತಿಯಿಂದಿರುವಳೆಂಬುದನ್ನು ಅತ್ತಿಗೆಯೊಡನೆ ಇತ್ತಕಡೆಗೆ ಬಂದಾಗ ಅಣ್ಣನೇ ಕಣ್ಣಾರೆ ನೋಡಿ ತಿಳಿಯಬೇಕಲ್ಲದೆ ತಂಗಿ, ತಾನೇ ಹೇಳುವದೆಂತು? ಸಂತೋಷ, ಅಣ್ಣ ಅತ್ತಿಗೆಯರ ಆಗಮನಕ್ಕೆ ಸ್ವಾಗತವನ್ನು ಈಗಿನಿಂದಲೇ ಕೋರುತ್ತಿರುವೆನು. ಇಲ್ಲಿ ನಾವೆಲ್ಲರೂ ಆರೋಗ್ಯದಲ್ಲಿರುವೆವು. ನಮ್ಮಿಬ್ಬರ ಅನಂತ ನಮಸ್ಕಾರಗಳನ್ನು ಮಾತುಶ್ರೀಯವರಿಗೂ ಶ್ರೀ. ತೀರ್ಥರೂಪರಿಗೂ ತಿಳಿಸಬೇಕೆಂದು ಪ್ರಾರ್ಥಿಸುವೆನು.

ಅಣ್ಣ! ಸತೀಪತಿಯರು ಏಕದೇಹನ್ಯಾಯದಲ್ಲಿರುವವರಷ್ಟೆ! ಹಾಗಾದರೆ ಅಣ್ಣನ ಅರ್ಧಾಂಗಿ-ಅಥವಾ ವಾಮಾಂಗಿ-ಗೆ ಬರೆದ ಉತ್ತರವೂ ಅಣ್ಣನ ಪತ್ರದೊಡನೆಯೇ ಗರ್ಭೀಕೃತವಾಗಿದ್ದರೆ ಆಕ್ಷೇಪವೇನೂ ಇಲ್ಲವಷ್ಟೆ? ಹಾಗಿದ್ದರೆ ಅತ್ತಿಗೆಯು ನನಗೆ ಬರೆದಿದ್ದ ಕಾಗದದ ಒಂದು ನಕಲನ್ನೂ ಅದಕ್ಕುತ್ತರವನ್ನೂ ಇದರೊಡನೆ ಕಳುಹಿರುವೆನು; ಅತ್ತಿಗೆಗಿದನ್ನೊಪ್ಪಿಸಬೇಕೆಂದು ಕೋರುವೆನು.

‘ಕಲ್ಯಾಣಮಂದಿರಂ’ ಪಾವನಕ್ಷೇತ್ರ	ಇಂತು ಪ್ರಾರ್ಥಿಸುವ ಅಭಿಮಾನದ
ಕಾಳಯುಕ್ತ ಚೈತ್ರಶುದ್ಧ ದ್ವಾದಶಿ,	ತಂಗಿ ಕನಕಾ.

———————

ಅತ್ತಿಗೆಯ ಪತ್ರದ ನಕಲು

ಶ್ರೀಯೈ ನಮಃ

ಸೌ. ಹರಿದ್ರಾಕುಂಕುಮಶೋಭಿತೆಯಾದ ನಾದಿನಿ-ಕನಕಾಂಬೆಗೆ ಆಶೀರ್ವಾದಗಳು.

ಪ್ರಿಯಸಖಿ, ಕನಕಾ;

ಇಲ್ಲಿ ನಾನು ನಿನಗೆ ಅತ್ತಿಗೆ ನಾದಿನಿಯ ಮರ್ಯಾದಾದ್ಯೋತಕವಾದ ಬಹುವಚನವನ್ನು ಪ್ರಯೋಗಿಸದೆ, ಕೇವಲ ಸೋದರೀ ಭಾವನೆಯಿಂದಲೂ ಬಾಲ್ಯಸಖ್ಯದ ಸೌಲಭ್ಯದಿಂದಲೂ ಭಿಡೆಯಿಲ್ಲದೆ ಬರೆಯುವೆನು; ಅನ್ಯಥಾ ಭಾವಿಸಬಾರದು.

ನೀನು ಇಲ್ಲಿಗೆ ಮಾತುಶ್ರೀಯವರಿಗೂ ಶ್ರೀ ತೀರ್ಥರೂಪರಿಗೂ ಮತ್ತು ಶ್ರೀ ನಿನ್ನ ಅಣ್ಣನವರಿಗೂ ಬರೆದ ಪತ್ರಿಕೆಗಳೆಲ್ಲವೂ ಯಥಾಕಾಲದಲ್ಲಿಯೇ ಕೈಸೇರಿದವು. ಮಾತುಶ್ರೀಯವರು ನಿನಗೆ ಉತ್ತರವನ್ನು ಕೊಡುವ ಕುತೂಹಲದಲ್ಲಿದ್ದರೂ ಅನೇಕ ಹೊಸಹೊಸ ಸಂಗತಿಗಳನ್ನು ನಿನಗಾಗಿ ಸಂಗ್ರಹಿಸಿಟ್ಟುಕೊಂಡಿರುವುದರಿಂದ ಅದನ್ನು ಅದಷ್ಟು ವಿಸ್ತಾರವಾಗಿ ಬರೆಯಬೇಕೆಂದು ಯೋಚಿಸುತ್ತಿರುವರು. ತೀರ್ಥರೂಪರಿಗೆ ಅವಕಾಶವೇ ಸಾಲದೆ ಇರುವುದರಿಂದ ನಿಮ್ಮ ಅಣ್ಣನವರಿಗೇ ತಮ್ಮ ಭಾಗದ ಕೆಲಸವನ್ನು ವಹಿಸಿರುವರು. ನಿಮ್ಮ ಅಣ್ಣನವರು ನಿನಗೆ ಪತ್ರವನ್ನು ಬರೆಯಲು ಅತ್ಯಂತ ಉತ್ಸಾಹದಲ್ಲಿರುವವರಾದರೂ ಅವರ ಸರಕಾರೀ ಉದ್ಯೋಗ, ಮನೆಯ ಆಡಳಿತದ ವಿಚಾರ, ಸಾಲದುದಕ್ಕೆ ಮಿತ್ರಸಮಾಜದವರ ಪರಿಪೋಷಣ-- ಇತ್ಯಾದಿ ಹಲವು ಕಾರ್ಯಗಳಿಂದ ನಿನ್ನ ಎರಡು ಮೂರು ಪತ್ರಿಕೆಗಳಿಗೂ ಸರಿಯಾಗಿ ಉತ್ತರವನ್ನು ಕೊಡದಿರುವರೇ ಹೊರತು ಪ್ರಾಣಕ್ಕಿಂತಲೂ ಹೆಚ್ಚಾಗಿರುವ ತಂಗಿಯಾದ ನಿನ್ನನ್ನು ಅವರು ಸ್ವಪ್ನ ಸುಷುಪ್ತಿಗಳಲ್ಲಿಯೂ ಉಪೇಕ್ಷಿಸಲು, ಇಲ್ಲವೆ-ಮರೆಯಲು ಸಮರ್ಥರಾಗಿಲ್ಲ. ಈ ವಿಚಾರವನ್ನೇ ಅವರು ದಿನವೂ ನನ್ನಲ್ಲಿ ಹೇಳುತ್ತಿರುವುದರಿಂದ, ವಿಶೇಷವಾಗಿ- ಪತಿಗೆ ತನ್ನಿಂದ ಸಾಧ್ಯವಾದಷ್ಟು ಶ್ರಮಪರಿಹಾರಮಾಡುವುದು ಸತಿಗೆ ಕರ್ತವ್ಯವಾಗಿರುವುದರಿಂದ ನಿನ್ನ ಪತ್ರಿಕೆಗಳೆಲ್ಲಕ್ಕೂ ನಾನೇ ಉತ್ತರವನ್ನು ಕೊಡಲು ಕುಳಿತಿರುವೆನು.

ಪ್ರಿಯಸಖಿ,

ನೀನು ತಾಯಿ, ತಂದೆ, ಅಣ್ಣ- ಇವರ ಮೇಲೆ ಇಷ್ಟು ತಪ್ಪುಗಳನ್ನು ಹೊರಿಸಿದುದು ಅಲ್ಲದೆ ಬಹುದಿನಗಳಿಂದ ಇತ್ತಕಡೆಯ ಕುಶಲವಾರ್ತೆಗಳು ತಿಳಿಯದೆ ಗಾಬರಿಗೊಂಡಿರುವುದಾಗಿ ನಿಮ್ಮ ಅಣ್ಣನವರಿಗೆ ಬರೆದಿದ್ದೆಯಷ್ಟೆ; ಅಷ್ಟೇಕೆ? ನನಗೇ ಬರೆದಿದ್ದರೆ ನಾನು ನಿನಗೆ ಉತ್ತರವನ್ನು ಕೊಡುತ್ತಿರಲಿಲ್ಲವೋ? ಬರೆಯದಿದ್ದುದೇಕೆ? ಅತ್ತಿಗೆಗೆ ಬರೆ

ದರೆ ಎಲ್ಲಿ ಅನ್ಯಥಾರ್ಥ ಕಲ್ಪನೆಯಾಗುವುದೋ ' ಎಂಬ ಸಂಶಯವೇನು? ಹಾಗಿದ್ದರೆ, ಪ್ರಿಯ ಕನಕಾ, "ನಾನು ನನ್ನ ಬಾಲ್ಯಸಖಿಗೆ ಬರೆಯುವೆ"ನೆಂದೇ ಭಾವಿಸಿ ನೀನು ಬರೆಯಬಹುದಾಗಿತ್ತಲ್ಲವೆ? ಹೋಗಲಿ, ಆ ವಿಚಾರವಾಗಿ ಹೆಚ್ಚಾಗಿ ಬರೆದು ನಿನ್ನನ್ನು ನಾಚಿಸುವದಿಲ್ಲ. ನೀನು ನನ್ನನ್ನು ಪ್ರಾರ್ಥಿಸದೆ ನಾನಾಗಿಯೇ ನಿನಗೆ ಪತ್ರವನ್ನು ಬರೆಯುವೆನು. ಇದರಿಂದ ನನಗೇನೂ ಮಾನಹಾನಿಯಾಗಲೀ ನಷ್ಟವಾಗಲೀ ಆಗುವುದಿಲ್ಲ. ಮುಖ್ಯವಾಗಿ, ನೀನು ನಿಮ್ಮ ಅಣ್ಣನವರಲ್ಲಿ "ಅತ್ತಿಗೆ ತವರ್ಮನೆಯಿಂದ ಬಂದಳೆಂದುತಿಳಿದು ಸಂತೋಷ, ಅವಳಿಗೆ ನನ್ನ ಜ್ಞಾಪಕಕೊಡುವುದು; ಮತ್ತು ಚಿ. ಸೌ. ಲಲಿತೆಗೂ, ಚಿ. ಸುಕುಮಾರನಿಗೂ ನನ್ನ ಮುದ್ದುಗಳನ್ನೊಪ್ಪಿಸುವುದು." ಎಂದು ಬರೆದಿರುವುದನ್ನು ಓದಿಯೇ ನಾನು, ಅತ್ಯಂತತೃಪ್ತಳಾದೆನು. ಅದರಂತೆ ನೀನು ಕಳುಹಿದ ಮುತ್ತುಗಳು ನಿನ್ನ ಸೋದರಳಿಯನಿಗೆ ಒಪ್ಪಿಕೆಯಾದವು. ಆರುತಿಂಗಳಿನವನಾದ ನಿನ್ನ ಸೋದರಳಿಯನು ನಿನ್ನ ಮುತ್ತುಗಳನ್ನು ಸ್ವೀಕರಿಸಿದುದು ಮಾತ್ರವಲ್ಲದೆ, ಆವಾಗ ನೋಡಿದರೂ 'ಅತ್ತೆ, ಅತ್ತೆ, ಅತ್ತೆ'—ಎಂದು ನಿನ್ನನ್ನೇ ಕೂಗುತ್ತಿರುವನು ಸೌ. ಲಲಿತೆಯು ತನ್ನ ಅತ್ತೆ ಬರಿಯಮುತ್ತುಗಳನ್ನೇ ಕಳಿಸಿದಳೋ? ಅವಳೇಕೆ ಬರಲಿಲ್ಲ ? ಎಂದು ಕೇಳುತ್ತಿರುವಳು. ಅಲ್ಲದೆ, ಅವಳಿಗೆ, ಇಲ್ಲಿ ಬೆನ್ನಮೇಲೆ ಯಾರೂ ಚಪ್ಪರಿಸುವರಿಲ್ಲವಂತೆ! ಅದಕ್ಕಾಗಿ ಅವಳು ನಿನ್ನ ಬಳಿಗೆ ಬೇಗಬರುತ್ತಾಳಂತೆ!

ಓಗೆಯನಾದಿನಿ! ನಗಬೇಡ "ಸರಸಕ್ಕೂ ವಿರಸಕ್ಕೂ ಸಮಾನಸ್ಕಂಧರಾಗಿಯೇ ಇರಬೇಕೆಂದು" ಹೇಳುವ ನೀತಿ ಸುಳ್ಳಲ್ಲ. ಓ! ನ. ನಾದಿನಿಯು ಮಾಡುತ್ತಿದ್ದ ಚೇಷ್ಟೆಯೂ ಹಾಸ್ಯವಿನೋದಗಳೂ ಅತ್ತಿಗೆಗೆ ಸರ್ವದಾ ನೆನಪಿಗೆ ಬರುತ್ತಿದ್ದರೂ ಮತ್ತೆ ಮತ್ತೆಯೂ ಅದನ್ನೇ ಬಯಸುತ್ತಿರುವ ಅತ್ತಿಗೆಯ ಅಭಿಲಾಷೆಯನ್ನು ನಾದಿನಿ ನಡಸಿಕೊಡುವಳದೆಂದು ? ಇಷ್ಟಕ್ಕೆ ವಿನೋದವೂ ಸಾಕು, ಹೆಚ್ಚುಹೊತ್ತು ಕುಳಿತು ಬರೆಯಲು ನಿನ್ನ ಸೋದರಳಿಯನು ಕೈಬಿಡಲೊಲ್ಲನಾದುದರಿಂದ ಈಗ ಇಷ್ಟಕ್ಕೇ ನೀನು ತೃಪ್ತಳಾಗಬೇಕು. ಕನಕಾ! ನೀನು ನಿನ್ನ ವಿನೋದ ಭಾಷಣಗಳಿಂದ ನಿನ್ನ ಸ್ವಾಮಿಯನ್ನು ನಗೆಗಡಲಲ್ಲಿ ಮುಳುಗಿ ತೇಲುವಂತೆ ಮಾಡುತ್ತಿರುವೆಯಷ್ಟೆ! ಮಾಡು, ಮಾಡು! ಇಂತಹ ವಿನೋದಿನಿಯಾದ ಪತ್ನಿಯನ್ನು ಪಡೆದಾತನು ಧನ್ಯನೇಸರಿ. ಪತ್ನಿಯ ವಿನೋದವೂ ಮಾರ್ಮಿಕವೂ ಆದ ಭಾಷಣವು ತನ್ನ ಪತಿಯು ಎಂತಹ ಆಲಸನೂ, ಉದ್ಯೋಗ ಪರಾಙ್ಮುಖನೂ ಆದವನಾಗಿರಲಿ, ಆತನನ್ನು ನವಶಕ್ತಿಯಿಂದುದ್ದೀಪ್ತನನ್ನಾಗಿ ಮಾಡಬಲ್ಲದು. ಅಂತಹ ಆಮಂದಾನಂದವು ನಿನ್ನಿಂದ ನಿನ್ನ ಸ್ವಾಮಿಗೆ ನಿರಂತರವೂ ಉಂಟಾಗುತ್ತಿರಲೆಂದು ನಾನು ಪರಮಾತ್ಮನಲ್ಲಿ ಪ್ರಾರ್ಥಿಸುವೆನು. ನಿನ್ನ ಅತ್ತಿಗೆಗೆ ಲಭಿಸಿರುವ ವಿನೋದಿನಿಯಾದ ನಾದಿನಿಯಂತೆ ನಿನಗೂ ಒಬ್ಬಳು ವಿನೋದಿನಿಯಾದ ನಾದಿನಿಯಿರುವಳಷ್ಟೆ?

'ಶ್ರೀನಿಲಯ' ಶ್ರೀನಯನಕ್ಷೇತ್ರ
ಕಾಳಯುಕ್ತ ಚೈತ್ರಶುದ್ಧ ಪಂಚಮಿ
} ಇಂತು ಹಾರೈಸುವ ನಿನ್ನ ಅತ್ತಿಗೆ
ಮನೋರಮೆ.

ಅತ್ತಿಗೆಗೆ ನಾದಿನಿಯ ಪ್ರತ್ಯುತ್ತರವು.

—:o:—

ಶ್ರೀ ಪಾತು .

ಮಾತಾಸದೃಶೆಯಾದ ಹರಿದ್ರಾಕುಂಕುಮಶೋಭಿತೆ,
ಅತ್ತಿಗೆಯಲ್ಲಿ ವಿಜ್ಞಾಪನೆ—

ಅತ್ತಿಗೆ! ನಿನ್ನ ಅಕೃತ್ರಿಮ ಸ್ನೇಹಪೂರ್ಣವಾದ ಪತ್ರಿಕೆ, ನನ್ನ ಕೈಸೇರಿ ಇಂದಿಗೆ ಮೂರು ದಿನಗಳಾದವು. ಅಣ್ಣನ ಉತ್ತರವೂ ಬಂದ ಬಳಿಕ ಇಬ್ಬರಿಗೂ ಒಟ್ಟಿಗೆ ಉತ್ತರವನ್ನು ಬರೆಯಬೇಕೆಂದು ಎರಡು ದಿನಗಳನ್ನು ಕಳೆದೆನು; ಆದರೆ, ಅಣ್ಣನು ಇಷ್ಟು ಜಾಗ್ರತೆಯಾಗಿ ಬರೆಯುವನೋ ಇಲ್ಲವೋ ಎಂಬ ಸಂಶಯದಿಂದ ನಿನಗೆ ಈ ದಿನವೇ ಉತ್ತರವನ್ನು ಬರೆಯಬೇಕೆಂದು ನಿಶ್ಚಯಿಸಿ ಬರೆಯಲು ಕುಳಿತಾಗಲೇ ಅಣ್ಣನ ಪತ್ರಿಕೆಯೂ ಕೈಸೇರಿತು. "ಭಾವನೆಯೆಂತಿಹುದಂತೆ ಫಲಂಗಳ್" ಎಂಬ ನೀತಿಯನ್ನು ಅನುಸರಿಸಿ ನನ್ನ ಇಷ್ಟಸಿದ್ಧಿಯನ್ನು ಮಾಡಿತು. ಭಲೆ, ಅತ್ತಿಗೆ! ಸ್ವಾತಂತ್ರ್ಯಪ್ರಿಯನಾದ ಅಣ್ಣನನ್ನು ನಿನ್ನ ಆಜ್ಞಾಧಾರಕನನ್ನಾಗಿ ಮಾಡಿಕೊಂಡಿರುವೆಯೆಂದು ಅಣ್ಣನ ಪತ್ರದಿಂದ ತಿಳಿದೆನಾದುದರಿಂದ ನಿನಗಿದೋ "ಶಹಬಾಸ್"ಗಿರಿಯನ್ನು ಕಳುಹಿರುವೆನು. ಸ್ವೀಕರಿಸುವೆಯಷ್ಟೆ? 'ಆದರೆ, ಇದರಲ್ಲಿ ನನ್ನ ತಪ್ಪೇನು!

"ಸಾವಿರ ಕುದುರೆ ಸರದಾರನಾದರೂ ಮನೆಹೆಂಗಸಿನ ಗುಲಾಮನೇ ಸರಿ." ಎಂಬ ಲೋಕಾನುಭವಿಗಳ ಮಾತೇ ಇದೆ. "ಪುರುಷರು ತಾವಾಗಿ ಹಾಗೆ ಆಜ್ಞಾಧಾರಕರಾದರೆ ಹೆಂಗಸರಾದ ನಮ್ಮ ಅಪರಾಧವೇನದಂಲ್ಲಿ?" ಎಂದು ಕೇಳುವೆಯೋ? ಇದೆ; ನಿನ್ನಲ್ಲಿ ಅಂತಹ ಅಪರಾಧವಿಲ್ಲದೆಯಿಲ್ಲ. ಅದೇನೆನ್ನುವೆಯೊ ? ನಿನ್ನಲ್ಲಿರುವ ಆಕರ್ಷಣಾಶಕ್ತಿಯೇ ! ಅದಕ್ಕೆಂದರೆ, ನಿನ್ನ ವಿದ್ಯಾಪ್ರೌಢಿಮೆ, ಸ್ವಾಭಿಮಾನ, ಧರ್ಮಶ್ರದ್ಧೆ, ಸಮಯಾಚಾರ, ಇವೇ ಕಾರಣಗಳು ಸಾಕು. ನಿನ್ನೀ ವಶೀಕರಣ ಮಾತ್ರಪ್ರಭಾವದಿಂದಲೇ ಅಣ್ಣನು ತನ್ನ ದೇಶದ ಕಡೆಗೂ, ತನ್ನ ಭಾಷೆಯ ಕಡೆಗೂ, ತನ್ನ ಪೂರ್ವಾಚಾರಗಳ ಕಡೆಗೂ ಇಷ್ಟು ಪ್ರೇಮಲ ದೃಷ್ಟಿಯಿಂದ ನೋಡುವಂಥವನಾದನು. ಇದಕ್ಕಾಗಿ ನೀನು ನಮ್ಮೆಲ್ಲರಿಗೂ ಚಿರಸ್ಮರಣೀಯಳೇ ಸರಿ.

ಅತ್ತಿಗೆ! ನೀನು ಹೇಳುವ ಆ ಮರ್ಯಾದಾದ್ಯೋತಕಗಳಾದ ಬಹುವಚನಗಳು ನಿನ್ನ ನಾದಿನಿಗೆ ಬೇಡವೇಬೇಡ; ನಿನ್ನ ಸಲಿಗೆಯೇ ಸ್ಥಿರವಾಗಿರಲಿ. ಹೀಗೆಯೇ ನೀನು, ಬಾಲ್ಯಸ್ನೇಹದ ಪ್ರೇರಣೆಯಿಂದಲೋ, ಪತಿಯ ಶ್ರಮಪರಿಹಾರ ಮಾಡಬೇಕೆಂಬೀ ಸತೀಧರ್ಮದ ಪ್ರೇರಣೆಯಿಂದಲೋ, ಇಲ್ಲವೆ, ಅತ್ತೆ ಮಾವರ ಮತ್ತು ಪತಿಯ ಆಜ್ಞಾಪಾಲನವು ಮುಖ್ಯವೆಂಬೀ ಭಾವನೆಯಿಂದಲೋ ಹೇಗಾದರೂ ಸರಿ, ಅಡಿಗಡಿಗೂ ನಿನ್ನ ನಾದಿನಿಯ ಕುಶಲವನ್ನು ಪತ್ರಮುಖದಿಂದ ವಿಚಾರಿಸುವುದೇ ನಿನ್ನೀ ನಾದಿನಿಯ ಪ್ರಾರ್ಥನೆ.

ಅತ್ತಿಗೆ! ನಿನಗೆ ನಾನು ಬರೆಯಲಿಲ್ಲವೆಂದು ಆಕ್ಷೇಪಿಸಿದೆಯಲ್ಲವೆ? ಜ್ಞಾಪಿಸಿಕೊ! ಚಿ|| ಸುಕುಮಾರನು ಹುಟ್ಟಿದನೆಂಬ ವರ್ತಮಾನವನ್ನು ಕೇಳಿದೊಡನೆ ನಾನು ತವರ್ಮನೆಯಲ್ಲಿದ್ದು ನಿನಗೇ ಎರಡು ಪತ್ರವನ್ನು ಬರೆದಿರಲಿಲ್ಲವೆ? ಆ ಪತ್ರಗಳಲ್ಲಿ ನಾನು ಕೇಳಿದ್ದ ವಿಚಾರಗಳಿಗಾವುದಕ್ಕಾದರೂ ನೀನು ಉತ್ತರವನ್ನು ಬರೆದಿದ್ದೆಯಾ? "ಆರೋಗ್ಯವಾಗಿರುವೆನೆಂದಿಷ್ಟು" ಮಾತ್ರ ಬರೆದು ನನ್ನ ಕಾಟವನ್ನು ತಪ್ಪಿಸಿಕೊಂಡಿದ್ದೆಯಲ್ಲವೆ? ಹಾಗೇಕೆ ಮಾಡಿದೆ? ನನ್ನನ್ನೂ ಆಕ್ಷೇಪಿಸಲು ಉದ್ಬುದ್ಧವಾಗಿ ನೀಡುತ್ತಿರುವ ನಾಲಿಗೆ ಈಗ ಹೇಳುತ್ತಿರುವುದೇನು? ನಿನ್ನಲ್ಲಿ ಮಾತ್ರವೇ ಬಾಲ್ಯಸ್ನೇಹವು ಬಹು ಭದ್ರವಾಗಿದೆಯಲ್ಲವೆ? "ಎಷ್ಟಾದರೂ ನಾದಿನಿಯೆಂದರೆ ಅತ್ತಿಗೆಯರ ಆತಂಕಕಾರಣೆಯರೇ ಅಹುದು" ಎಂಬ ಮಾತು ಈಗಲಾದರೂ ನಿಜವಾಯಿತೆ? ಚನ್ನಾಗಿ ಯೋಚಿಸು, ಅತ್ತಿಗೆ! ನನಗೆ ನೀನು ಬಾಲ್ಯಸಖಿಯೆಂದಿಷ್ಟೇ ನಿನ್ನಲ್ಲಿ ನನಗೆ ಪ್ರೀತಿಯಿರುವುದೆಂದೆಣಿಸಬೇಡ. ನನ್ನ ಪರಮವಿಶ್ವಸನೀಯನಾದ ಅಣ್ಣನ ಜೀವನದ ಸಾರರತ್ನವೇ ನೀನು; ನಿನ್ನಿಂದಲೇ—ನಿನ್ನ ಸಹಚರ್ಯೆಯಿಂದಲೇ ನನ್ನ ಅಣ್ಣನ ಜೀವನವು ಸುಖಮಯವಾಗುವುದು; ಅಷ್ಟೇ ಅಲ್ಲ, ನಮ್ಮ ತವರ್ಮನೆಯ ಅಭಿವೃದ್ಧಿಗೆ ಕೂಡ ನೀನೇ ಆಧಾರಳು. ಹೀಗಿರುವುದರಿಂದ ನಾನು ನಿನ್ನಲ್ಲಿ ಹೇಗೂ ಅನ್ಯಥಾ ಭಾವಿಸುವಂತಿಲ್ಲ, ನೀನಾದರೂ ನನ್ನನ್ನು ಕಡೆಗಣಿಸಬಹುದು, ಹೀಗೆ ಸ್ಪಷ್ಟವಾಗಿ ಬರೆದುದಕ್ಕಾಗಿ ಕ್ಷಮೆಯನ್ನು ಕೋರಬೇಕೆ ? ಬೇಡವೆ ?

ಸಂತೋಷ! ಅತ್ತೆಯನ್ನೇ ಜಪಿಸುತ್ತಿರುವ ಅಳಿಯನನ್ನು ಇತ್ತ ಕಳುಹಿದೆಯಾದರೆ ನಿನಗೂ ಮಗನ ತುಡುಗು ಸ್ವಲ್ಪ ಸಹನವಾದೀತು; ಅತ್ತೆಗೂ ಆನಂದವಾದೀತು! ಚಿ. ಸೌ. ಲಲಿತೆಗೆ "ಅತ್ತೆ ಬರಲಿಲ್ಲ, ಬೆನ್ನಮೇಲೆ ಅಪ್ಪಳಿಸಿ, ಕೆನ್ನೆಗೆ ತಟ್ಟಲು ಹೇಳಿಕಳುಹಿರುವಳು." ಎಂದು ಹೇಳುವುದಲ್ಲದೆ ಅದರಂತೆ ಮಾಡಬೇಕೆಂದೂ ಅಪೇಕ್ಷಿಸುವೆನು.

ಸರಿಯೆ! ನಿನ್ನ ಅಭಿಪ್ರಾಯದಂತೆ ನಾವಿಬ್ಬರೂ ಸಮಾನಸ್ಕಂಧರಾಗಿಯೇ ಇರುವೆವು. ಆದರೆ, ಅತ್ತಿಗೆ, ನೀನು ಬಯಸುವುದೇನು? ಸರಸವೊ—ವಿರಸವೊ? ವಿನೋದವೇ ಬೇಕೊ? ಅದಕ್ಕೇನು ಕೊರತೆ? ಅವಕಾಶವಾದಾಗಲೆಲ್ಲಾ ಆಗಬಹುದು. ಹೇಗಾದೀತು? ಅತ್ತಿಗೆ! ಅಣ್ಣನಲ್ಲಿ ತೋರುವ ವಿನೋದಕ್ಕೂ, ಅತ್ತಿಗೆಯಲ್ಲಿ ಮಾಡುವ ವಿನೋದಕ್ಕೂ, ಪತಿಯ ಬಳಿಯಲ್ಲಿ ತೋರಿಸುವ ವಿನೋದಕ್ಕೂ, ವ್ಯತ್ಯಾಸವೇ ಇಲ್ಲವೆ? ಎಲ್ಲಾ ಕಡೆಯಲ್ಲಿಯೂ ಒಂದೇ ವಿನೋದವಾದರೆ ಅದಕ್ಕೆ ಬೆಲೆಯನ್ನು ಕಟ್ಟುವುದಾದರೂ ಹೇಗೆ? ಎಂದರೆ, ಇಲ್ಲಿ ವಿನೋದವಿಲ್ಲವೆಂದು ಹೇಳಲಿಲ್ಲ; ವಿನೋದಕ್ಕೇನೂ ಕೊರತೆಯಿಲ್ಲ. ಆದರೂ, ಅತ್ತಿಗೆ! ಭದ್ರ! ನಿನ್ನ ನಾದಿನಿ, ಕೇವಲ ವಿನೋದಿನಿಯೆಂದೂ ಅವಳು ವಿನಯ ವಿವೇಚನೆಗಳೇನನ್ನೂ ತಿಳಿಯದವಳೆಂದೂ ಭಾವಿಸುವೆ! ಭದ್ರ!! ನಿನ್ನ ಪ್ರಾರ್ಥನೆಗಳಿಗಾಗಿ ನಾನು ನಿನಗೆ ಕೃತಜ್ಞಳಾಗಿರಬೇಕಲ್ಲವೆ?

ಏಕೆ? ನಿನಗೆ ಒಬ್ಬಳೇ ವಿನೋದಿನಿಯಾದ ನಾದಿನಿಯಿದ್ದರೆ, ಅತ್ತಿಗೆ! ನಿನ್ನ ನಾದಿನಿಗೆ ನಾಲ್ವರು ವಿನೋದಿನಿಯರಾದ ನಾದಿನಿಯರಿರುವರು. ಏನು ಹೇಳುವೆ? ನನಗೂ ಹೆಚ್ಚಾದಳೆಂದು ಅಸೂಯೆ ಪಡುವೆಯೇನು? ಹಾಗೆ ಮಾತ್ರ ಮಾಡಬೇಡ ಕಂಡಿಯಾ?--

ಅತ್ತಿಗೆ! ಈ ದಿನದ ಪತ್ರ ಲೇಖನವು ಬಹು ವಿಸ್ತಾರವಾಯಿತು ಈ ವೇಳೆಗೆ ಒಂದು ದೊಡ್ಡ ಲೇಖನವನ್ನೇ ಬರೆಯಬಹುದಾಗಿದ್ದಿತು. ನಾನೇನೋ ಹುಚ್ಚುರೇಗಿದವಳಂತೆ ಇಷ್ಟು ದೀರ್ಘ ಲೇಖನವನ್ನು ಬರೆದು ಬಿಟ್ಟೆನು. ಇದನ್ನು ನೀನೂ ಅಣ್ಣನೂ ಸಾವಧಾನದಿಂದ ಓದುವಿರೋ, ಇಲ್ಲವೆ-ಬೇಸತ್ತು ಒಗೆವಿರೋ ತಿಳಿಯೆನು. ಹಾಗೆ ಬೇಸರಿಸುವಿರಾದರೆ ಮುಂದೆ ಎಂದೆಂದಿಗೂ ಈ ನಾದಿನಿಯ ದೀರ್ಘಭಾಷಣವನ್ನು ಕೇಳಲಾರಿರಿ.

ಇಂತು ನಿವೇದಿಸುವ ನಿನ್ನ ಪ್ರೇಮದ ನಾದಿನಿ,

ಕನಕಾ.

ವಿ. ಸೂ.—೭—೮ ನೇ ಸಂಚಿಕೆಗಳೆರಡನ್ನೂ ಸೇರಿಸಿದುದರಿಂದ ಈ ಲೇಖನಗಳನ್ನು ಇಷ್ಟು ವಿಸ್ತರಿಸಿ ಮುದ್ರಿಸಿತು. ಬರಿಯ ಕಥಾ ವ್ಯಾಸಂಗಕ್ಕಿಂತಲೂ ಅದರೊಡನೆ ಇಂತಹ ಪತ್ರವ್ಯಾಸಂಗವೂ ಸೇರಿಸಿದರೆ ಫಲಕಾರಿಯೆಂದು ತಿಳಿದು ಬಂದುದರಿಂದ ಈ ಪದ್ಧತಿಯನ್ನು ಕೈಕೊಳ್ಳಲಾಗಿದೆ. ಇದನ್ನು ದೋಷವಾಗೆಣಿಸುವ ಮಹಾಶಯರು ನಮ್ಮ ದೇಶಬಾಂಧವರಲ್ಲಿ ಇಲ್ಲದೆ ಇಲ್ಲ; ಆದರೂ ಸಹಜ ಕ್ಷಮೆಯಿಂದ ಮೂಲಕಾರಣವನ್ನೂ ಪ್ರಯೋಜನವನ್ನೂ ವಿಚಾರಕ್ಕೆ ತಂದು ಆ ನಮ್ಮ ಬಾಂಧವರು ಮನ್ನಿಸುವರೆಂಬ ಭರವಸೆಯುಂಟು.

ಸಂ. ನಂದಿನಿ.

ವಿಮಲಾ.

ಮುಂದೆ ಸಾಗಿದುದು—

ಹತ್ತನೆಯ ಪ್ರಕರಣ.

:o:

(ರಾಜಸಿಂಹ)

ಒಂದು ದಿನ ಪ್ರಾತಃಕಾಲ, ಅಚಲೇಶ್ವರಾಲಯದಲ್ಲಿ ವೈಕುಂಠಯೋಗಿಯು ಜಪವನ್ನು ಮಾಡುತ್ತಿದ್ದನು. ಭಸ್ಮಪೂರಿತವಾದ ಶರೀರವೂ, ಕಂಠದಲ್ಲಿದ್ದ ರುದ್ರಾಕ್ಷದ ಮಾಲೆಯೂ ಬಿಳಿಲನ್ನು ಹೋಲುತ್ತಿದ್ದ ಜಡೆಯೂ ಆತನನ್ನು ಸಾಕ್ಷಾತ್ ಶಂಕರನೆಂದೇ ತಿಳಿಸುತ್ತಿದ್ದಿತು. ಅಚಲೇಶ್ವರನ ಸಹವಾಸದಿಂದಲೋ ಎಂಬಂತೆ ಆ ಯೋಗಿಪುಂಗವನು ಕೂಡ ಅಚಲನಾಗಿಯೇ ಎಷ್ಟು ಹೊತ್ತಾದರೂ ಧ್ಯಾನದಲ್ಲಿಯೇ ಇದ್ದನು. ಆ ದೇವಾಲಯದಲ್ಲಿ ಒಂದು ಕಡೆ ಆತನ ಶಿಷ್ಯನೊಬ್ಬನು ಕಯ್ಗಳನ್ನು ಜೋಡಿಸಿಗೊಂಡು ಯೋಗಿಯ ಕಟಾಕ್ಷವನ್ನೇ ಎದುರು ನೋಡುತ್ತಿದ್ದನು. ಸ್ವಲ್ಪ ಹೊತ್ತಿಗೆ ವೈಕುಂಠಯೋಗಿಯು ಜಪವನ್ನು ಮುಗಿಯಿಸಿ ಕಣ್ಣುಗಳನ್ನು ತೆರೆದು ತನ್ನೆದುರಿಗೆ ನಿಂತಿದ್ದ ಶಿಷ್ಯನನ್ನು ನೋಡಿ "ಏನೈ ವತ್ಸನೆ, ವಿಶೇಷವೇನು?" ಎಂದು ಕೇಳಿದನು. ಆ ಶಿಷ್ಯನು ವಿನೀತನಾಗಿ "ಸ್ವಾಮಿ, ತಮ್ಮ ಅಪ್ಪಣೆಯ ಮೇರೆಗೆ ಡಿಲ್ಲಿ ಮೊದಲಾದ ಪಟ್ಟಣಗಳಿಗೆ ಹೋಗಿ ವಿಶೇಷಾಂಶಗಳನ್ನೆಲ್ಲಾ ತಿಳಿದುಕೊಂಡೆನು." ಎಂದು ಹೇಳಿ, ಪೃಥ್ವೀಸಿಂಗನ ಮರಣ ವಿಚಾರದಿಂದ ಮೊದಲ್ಗೊಂಡು, ಸಂಯುಸಪಾಲನು ಚಂದ್ರಾವತಿಯನ್ನು ಕರೆದುಕೊಂಡು ಹೋಗಲು ಬಂದಿರುವ ವರೆಗೂ ತಿಳಿಸಿದನು. ಈ ಸಮಾಚಾರವನ್ನೆಲ್ಲಾ ಕೇಳಿದ ಮೇಲೆ ಯೋಗಿಯು ಸ್ವಲ್ಪಹೊತ್ತು ಸುಮ್ಮನಿದ್ದು ಆ ಬಳಿಕ ಆಲಯದಿಂದ ಹೊರಗೆ ಹೋಗುತ್ತಿದ್ದನು. ಇಷ್ಟರಲ್ಲಿ ಯೋಗಿಯ ದರ್ಶನಾರ್ಥವಾಗಿ ಬಂದಿದ್ದ ರಾಜಸಿಂಹನು ಆತನಿಗಿದಿರಾಗಿ ಬಂದು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ನಿಂತನು. ಯೋಗಿಯು ಆತನಿಗೆ ಆಶೀರ್ವದಿಸಿ, ತನ್ನ ಹಿಂದೆ ಬರುತ್ತಿದ್ದ ಶಿಷ್ಯನನ್ನು ಹಿಂದಕ್ಕೆ ಕಳುಹಿದನು.

ಉದಯಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಸಿಂಹನು ಮೇವಾಡ ದೇಶವನ್ನೆಲ್ಲ ಪಾಲಿಸುತ್ತಿದ್ದನು. ಈತನು ತನ್ನ ಪ್ರಜೆಗಳನ್ನು ಮಕ್ಕಳಂತೆ ಪ್ರೀತಿಸುತ್ತ ಸದಾಚಾರಸಂಪನ್ನನಾಗಿ ಕ್ಷತ್ರಿಯ ಧರ್ಮಕ್ಕೆ ಕಳೆಯೇರುವಂತೆ ಬೆಳಗುತ್ತಿದ್ದನು. ಈತನ ಕೀರ್ತಿಯು ದಿಗಂತಗಳಲ್ಲಿಯೂ ವ್ಯಾಪಿಸಿರುವದು. ಈತನ ಸದ್ಗುಣ ಪರಾಕ್ರಮಾತಿಶಯಗಳನ್ನು ಕೇಳಿ, ರಾಜಪುತ್ರಸ್ಥಾನದಲ್ಲಿಯ ರಜಪುತ್ರರನೇಕರು ಈತನ ಸ್ನೇಹವನ್ನು ಬೆಳಸಿದರು. ಮಹಮ್ಮದೀಯರನ್ನು ಈ ದೇಶದಿಂದಲೇ ಓಡಿಸಿ, ನಿಷ್ಕಂಟಕವಾಗಿ ಏಕಚ್ಛತ್ರಾಧಿಕಾರ ಮಾಡ ಬೇಕೆಂಬುದೇ ಈತನ ಅಭಿಮತವಾಗಿದ್ದಿತು. ತನ್ನ ಅಭಿಮತಾನುಸಾರವಾಗಿ ತಕ್ಕ ಪ್ರಯತ್ನಗಳನ್ನು ಮಾಡುತ್ತ ಸಮಯವನ್ನು ನಿರೀಕ್ಷಿಸುತ್ತಿದ್ದನು. ಜೋಧಪುರ, ಜಯಪುರ ಮೊದಲಾದ ರಾಜ್ಯಾಧಿಪರು ಬಾದಶಹನಿಗೆ ವಶವಾಗಿದ್ದರೂ ಈತನು ವಶವಾಗುವ ಮಾತು ಹಾಗಿರಲಿ, ಆತನ ಹೆಸರನ್ನು ಕೇಳಿದರೂ ನಿರಾಕರಿಸುತ್ತಿದ್ದನು. ಈ ಕಾರಣದಿಂದಲೇ ಔರಂಗಜೇಬನಿಗೆ ರಾಜಸಿಂಹನ ಮೇಲೆ ಮಹದಾಗ್ರಹವು ಹುಟ್ಟಿ ಈತನನ್ನು ಹೇಗಾದರೂ ಉಪಾಯದಿಂದ ತನ್ನ ಸ್ವಾಧೀನ ಮಾಡಿಕೊಳ್ಳಬೇಕೆಂದು ಆಲೋಚಿಸುತ್ತಿದ್ದನು.

ಆ ಕಾಲದಲ್ಲಿ ವೈಕುಂಠಯೋಗಿಯ ಹೆಸರು ರಜಪುತ್ರಸ್ಥಾನದಲ್ಲೆಲ್ಲಾ ಪ್ರಸಿದ್ಧವಾಗಿದ್ದಿತು. ರಜಪುತ್ರರೆಲ್ಲರೂ ಆತನನ್ನು ದೇವರ ಅವತಾರವೆಂದು ಪೂಜಿಸುತ್ತಿದ್ದರು. ರಾಜಸಿಂಹನು ಆತನನ್ನು ತ್ರಿಕಾಲಜ್ಞನೆಂದು ತಿಳಿದು ಆಗಾಗ್ಗೆ ಈತನ ದರ್ಶನವನ್ನು ಪಡೆಯುತ್ತಿದ್ದನು. ಆವ ಕೆಲಸವನ್ನು ಮಾಡಬೇಕಾದರೂ ವೈಕುಂಠಯೋಗಿಗೆ ನಿವೇದಿಸಿ, ಆತನ ಅನುಮತಿಯನ್ನು ಪಡೆದೇ ಮಾಡುತ್ತಿದ್ದನು. ಮತ್ತು, ಯೋಗಿಯು ಎಂತಹ ಕಾರ್ಯವನ್ನು ಆಜ್ಞಾಪಿಸಿದರೂ ಅದನ್ನು ಶಿರಸಾವಹಿಸಿ ಅತ್ಯಂತ ಭಕ್ತಿಭಾವದಿಂದ ಮಾಡುತ್ತಿದ್ದನು. ಇವನ ಈ ರೀತಿ ಅಕೃತ್ರಿಮ ಭಕ್ತಿಭಾವನೆಗೆ ತಕ್ಕಂತೆಯೇ ಯೋಗಿಯು ಕೂಡ ಈತನಲ್ಲಿ ಅತ್ಯಂತ ವಿಶ್ವಾಸವುಳ್ಳವನಾಗಿದ್ದನು.

ರಾಜಸಿಂಹನ ರೂಪಲಾವಣ್ಯಾತಿಶಯಗಳನ್ನೂ ಧೈರ್ಯಶೌರ್ಯಾದಿ ಗುಣಗಳನ್ನೂ ಯೋಗಿಯು ತಿಳಿದುಕೊಂಡು ನಿರಂತರವೂ ಪರಮಾನಂದ ಭರಿತನಾಗಿದ್ದನು. ಎಷ್ಟು ಕೆಲಸಗಳಿದ್ದರೂ ಬಿಟ್ಟು ತಿಂಗಳಿಗೆ ಎರಡು ಮೂರು ಸಲ ತನ್ನ ದರ್ಶನಕ್ಕೆ ಬರಬೇಕೆಂದು ಯೋಗಿಯು ಆಜ್ಞಾಪಿಸಿದ್ದನು; ರಾಜಸಿಂಹನು ಕೂಡ ಗುರ್ವಾಜ್ಞೆಯಂತೆಯೇ ಮಾಡುತ್ತಿದ್ದನು. ರಾಜಸಿಂಹನ ಈ ಅಪ್ರತಿಮ ಸಾಹಸೌದಾರ್ಯಾದಿ ಗುಣಗಳನ್ನು ನೋಡಿ ವೈಕುಂಠಯೋಗಿಯು, ಎಂತಹ ಕಷ್ಟಗಳನ್ನಾದರೂ ಸಹಿಸಿ ಮಹಮ್ಮದೀಯರನ್ನು ಈ ದೇಶದಿಂದ ಹೊರಡಿಸಿ ದೇಶವನ್ನು ಉದ್ಧಾರಮಾಡುವ ಪರಾಕ್ರಮಶಾಲಿಯು ರಜಪುತ್ರ ವಂಶದಲ್ಲೆಲ್ಲಾ ಈ ರಾಜಸಿಂಹನೊಬ್ಬನೇ ಸರಿಯೆಂದು ನಂಬಿದ್ದನು.

ಇಂದು ವೈಕುಂಠಯೋಗಿಯು ತನ್ನ ದರ್ಶನಕ್ಕೆ ಬಂದ

ರಾಜಸಿಂಹನನ್ನು ಒಂದು ಉಪವನಕ್ಕೆಕರೆದುಕೊಂಡು ಹೋಗಿಆತನೊಡನೆ ರಹಸ್ಯವಾಗಿ ಸಂಭಾಷಿಸಲು ಉಪಕ್ರಮಿಸಿದನು.

'ವತ್ಸಾ! ನಿನ್ನ ರಾಜ್ಯವೆಲ್ಲವೂ ಸುಕ್ಷೇಮವೇ? ನೀನಿಲ್ಲಿಗೆ ಬಂದುದರಲ್ಲಿ ವಿಶೇಷವೇನಾದರೂ ಉಂಟೋ?"

ರಾಜ.— ಸ್ವಾಮೀ, ತಮ್ಮ ಸಂದರ್ಶನಾಭಿಲಾಷೆಯೊಂದಲ್ಲದೆ ವಿಶೇಷವು ಮತ್ತೇನೂ ಕಾಣಲಿಲ್ಲ! ತಮ್ಮ ಆಶೀರ್ವಾದದಿಂದ ಎಲ್ಲವೂ ಕ್ಷೇಮವು.

ಯೋಗಿ:— ಯಶವಂತಸಿಂಹನ ವೃತ್ತಾಂತವನ್ನು ನೀನೇನಾದರೂ ಬಲ್ಲೆಯಾ?

ರಾಜ:— ಮೊನ್ನೆಯೇ ಅವನು ಕಾಬೂಲು ದೇಶಕ್ಕೆ ಹೋಗಿರುವನೆಂದು ಕೇಳಿದೆನು. ಪಾಪ! ಆತನ ಕುಮಾರ ಪೃಥ್ವೀಸಿಂಗನನ್ನು ಔರಂಗಜೇಬನು ವಿಷದಿಂದ ಕೊಲ್ಲಿಸಿದನಂತೆ! ಇದಕ್ಕಿನ್ನೂ ವಿಶೇಷ ಸಮಾಚಾರವು ನನಗಿನ್ನೂ ತಿಳಿದುದಿಲ್ಲ.

ಯೋಗಿ: - ಯಶವಂತಸಿಂಹನು ಈಗ ಕಾಬೂಲಿನಲ್ಲಿಲ್ಲ!

ರಾಜ:— ಮತ್ತೆಲ್ಲಿರುವನು? ಯುದ್ಧವನ್ನು ಇಷ್ಟು ಬೇಗ ಮುಗಿಸಿದನೆ?

ಯೋಗಿ:- ಯುದ್ಧವನ್ನೂ ಮುಗಿಸಿದನು; ಜಯವನ್ನೂ ಪಡೆದನು. ಆದರೂ ಆತನು ಮಾತ್ರ ಜೋಧಪುರಕ್ಕೆ ಹೋಗಲಿಲ್ಲ; ಇಹಲೋಕ ವ್ಯಾಪಾರದಲ್ಲಿ ವಿರಕ್ತನಾಗಿ ಪರಲೋಕಕ್ಕೆ ತೆರಳಿದನು.

ರಾಜ:- ಏನು ಏನು? ಯಶವಂತಸಿಂಹನು ಮೃತಪಟ್ಟನೆ? ಇನ್ನು ಚಂದ್ರಾವತೀದೇವಿಯ ಗತಿಯೇನು? ಈಗ ಆಕೆ ಎಲ್ಲಿರುವಳು?

ಯೋಗಿ:— ಔರಂಗಜೇಬನಿರುವಲ್ಲಿ ಆಕೆಗೆ ಭಯವೇನು? ಯಶವಂತನು ಸತ್ತುಹೋದನೆಂಬ ಕೊರತೆಯನ್ನುಂಟುಮಾಡದಂತೆ ಔರಂಗಜೇಬನು ಆಕೆಯನ್ನು ತನ್ನ ಪಟ್ಟಮಹಿಷಿಯನ್ನಾಗಿ ಮಾಡಿಕೊಳ್ಳುವನಂತೆ!

ರಾಜ:— ಹರಿ ಹರಿ! ಕೇಳಲಾರೆನು! ಸ್ವಾಮಿ! ಪತಿವ್ರತಾ ಶಿರೋಮಣಿಯಾದ ಚಂದ್ರಾವತೀದೇವಿಯನ್ನೇ ಸ್ವಾಧೀನ ಮಾಡಿಕೊಳ್ಳಬೇಕೆಂದು ಆ ಮೋಸಗಾರನು ಅಪೇಕ್ಷಿಸಿರುವನೆ? ಜೋಧಪುರವು ಇಂದಿಗೆ ಅರಾಜಕವಾಯಿತೆ?

ಯೋಗಿ:— ಕುಮಾರ ನಯನಪಾಲನು ಇರುವಾಗ ಜೋಧಪುರವು ಅರಾಜಕವೆಂತಾಗುವುದು? ಆತನು ಈಗಲೇ ಅಲ್ಲ, ಬಹುಕಾಲದಿಂದಲೂ ಆ ರಾಜ್ಯದ ಮೇಲೆ ಗೃಧ್ರ ದೃಷ್ಟಿಯನ್ನಿಟ್ಟೇ ಇರುವನು.

ರಾಜ:— ಜೋಧಪುರವನ್ನು ಅಪಹರಿಸಲು ಆ ದ್ರೋಹಿಯು ಎಳಸಿರುವನೆ? ಮಹಾತ್ಮಾ! ತಮಗೆ ತಿಳಿದಿರುವ ವೃತ್ತಾಂತವೆಲ್ಲವನ್ನೂ ದಯೆಯಿಟ್ಟು ಸವಿಸ್ತರವಾಗಿ ಹೇಳಬೇಕು.

ರಾಜಸಿಂಹನು ಹೀಗೆ ಬೇಡಿಕೊಳ್ಳಲು ವೈಕುಂಠಯೋಗಿಯು ಯಶವಂತಸಿಂಹನ ಮರಣವೃತ್ತಾಂತವನ್ನೂ ಅಜಿತಸಿಂಗನ ಜನನವನ್ನೂ ಔರಂಗಜೇಬನು ಕಪಟದಿಂದ ಆಕೆಯನ್ನು ಕರೆತರಲು ನಯನಪಾಲನನ್ನು ಕಳುಹಿದ ವಿಚಾರವನ್ನೂ ಸಾಂಗವಾಗಿ ಹೇಳಿದನು. ಅದನ್ನು ಕೇಳಿ ರಾಜಸಿಂಹನ ಮನಸ್ಸಿನಲ್ಲಿ ಭಯ, ಶೋಕ, ರೋಷ, ಧೈರ್ಯ, ಸಾಹಸಗಳು ಏಕಕಾಲದಲ್ಲಿ ಉಂಟಾದುವು. ರಾಜಸಿಂಹನು ಕ್ಷಣಹೊತ್ತು ಸುಮ್ಮನಿದ್ದು ಕಡೆಗೆ ಯೋಗಿಯ ಕಡೆಗೆ ತಿರುಗಿ ಹೇಳಲಾರಂಬಿಸಿದನು:—

"ನಿರೂಪಿಸಬೇಕು, ತಪೋಧನರೆ! ಇಂತಹ ಘೋರಕೃತ್ಯವನ್ನು ಮಾಡಿದ ಆ ಔರಂಗಜೇಬನನ್ನು ಏನು ಮಾಡಲಿ? ಸುಕುಮಾರನಾದ ಪೃಥ್ವೀಸಿಂಗನನ್ನು ಕೊಲ್ಲಲು ಆತನ ಮನಸ್ಸು ಹೇಗೆ ಒಪ್ಪಿತು? ನಿರ್ಮಲಚಿತ್ತನಾದ ಯಶವಂತಸಿಂಹನು ಆತನಿಗೆ ಮಾಡಿದ ಅಪರಾಧವೇನು? ಯಶವಂತಸಿಂಹನ ಪರಾಕ್ರಮದಿಂದಲ್ಲವೇ ಆ ದುರಾತ್ಮನು ಇಷ್ಟು ಪ್ರಾಬಲ್ಯಕ್ಕೆ ಬಂದುದು? ಇಷ್ಟಾದರೂ ವಿಶ್ವಾಸವು ಬೇಡವೆ? ಕೃತಜ್ಞತೆಯಾದರೂ ಇರಬೇಡವೆ? ಛೀ! ಮೃತನಾದ ಆತನ ಪತ್ನಿಯನ್ನು ಕೂಡ ವಶೆಯಲು ಯೋಚಿಸಿದನೇ? ಇದೆಂತಹ ನೀಚಕೃತ್ಯವು? ರಾಜಪುತ್ರಸ್ಥಾನವು ನಿರ್ವೀರ್ಯವಾಯಿತೆಂದೆಣಿಸಿ, ಹೀಗೆ ಮಾಡಿರುವನೊ? ತನ್ನ ಅಭಿಮತಕ್ಕೆ ಯಾರೂ ಅಡ್ಡಬರಲಾರರೆಂದು ಮದಿಸಿ ಹೀಗೆ ಆಚರಿಸುತ್ತಿರುವನೊ?..............."

ವೈಕುಂಠಯೋಗಿ:— ರಾಜಸಿಂಹ! ಸ್ಥಿರವಾಗು. ಆಗಬೇಕಾದುದೆಲ್ಲವೂ ಆಗಿಯೇ ಹೋದುವು. ವೃಥಾಲಾಪದಿಂದೇನೂ ಫಲವಾಗುವಂತಿಲ್ಲ. ಚಂದ್ರಾವತೀದೇವಿಯು ಈಗ ಶತ್ರುಗಳ ಮಧ್ಯದಲ್ಲಿ ಸಿಕ್ಕಿ ಬಿದ್ದಿರುವಳು. ಬಾಲಕನು ಕ್ಷೇಮವಾಗಿರುವನು. ನಯನಪಾಲನು ಇವರನ್ನು ಹೇಗಾದರೂ ಮೋಸಪಡಿಸುವ ಪ್ರಯತ್ನದಲ್ಲಿರುವನು. ಶಿವಸಿಂಗನೂ ದುರ್ಗಾದಾಸನೂ ವಿಚಾರಗ್ರಸ್ತರಾಗಿ ಮುಂದೇನು ಮಾಡುವುದಕ್ಕೂ ತಿಳಿಯದೆ ತಲ್ಲಣಿಸುತ್ತಿರುವರು. ಇನ್ನು ನೀನು ಇಲ್ಲಿ ಸಾವಕಾಶಮಾಡದೆ, ನಿನ್ನ ರಾಜಧಾನಿಗೆ ಹೋಗಿ ಸ್ವಲ್ಪ ಸೈನ್ಯವನ್ನು ಅವರ ಸಹಾಯಕ್ಕಾಗಿ ಕಳುಹು. ಅನಂತರ ದೈವಗತಿ ಹೇಗಿರುವುದೋ ಹಾಗಾಗಲಿ. ನಯನಪಾಲನು ಚಂದ್ರಾವತಿಯನ್ನು ಬಾದಷಹನಿಗೆ ಒಪ್ಪಿಸಿ, ಜೋಧಪುರ ರಾಜ್ಯವನ್ನು ಸಂಪಾದಿಸಲು ಹವಣಿಸುತ್ತಿರುವನು. ಆಶಾ ಪಿಶಾಚ ಗ್ರಸ್ತನಾಗಿರುವ ಆ ದುರ್ಮಾರ್ಗಿಯು ಎಂತಹ ನೀಚಕಾರ್ಯವನ್ನಾದರೂ ಮಾಡಲು ಹಿಂತೆಗೆಯನು. ಸಾವಕಾಶ ಮಾಡಿದಲ್ಲಿ ಕೆಲಸವು

ಮೀರಿ ಹೋಗಬಹುದು. ನೀನೀಗಲೇ ನಿನ್ನ ರಾಜಧಾನಿಗೆ ಹೋಗಿ ಸ್ವಲ್ಪ ಸೈನ್ಯವನ್ನು ಕಳುಹಿಸು. ಸೈನ್ಯಸಹಾಯವು ದೊರೆತರೆ ದುರ್ಗಾದಾಸನೂ ಶಿವಸಿಂಗನೂ ನಯುನಪಾಲನನ್ನು ಓಡಿಸಬಲ್ಲರು."

ವೃಕುಂಠಯೋಗಿಯ ವಾಕ್ಯವನ್ನು ಕೇಳಿ ರಾಜಸಿಂಹನು ಸಮಾಧಾನಪಟ್ಟು, ಯೋಗಿಗೆ ನಮಸ್ಕರಿಸಿ, ಆತನ ಅಪ್ಪಣೆಯನ್ನು ಪಡೆದು ನಿಜಪರಿವಾರದೊಡನೆ ಉದಯಪುರವನ್ನು ಕುರಿತು ಹೊರಟು ಹೋದನು.

ಹನ್ನೊಂದನೆಯ ಪ್ರಕರಣ.

(ನಯುನಪಾಲ)

ನಯುನಪಾಲನು ಔರಂಗಜೇಬನ ಸೇನಾನಾಯಕರಲ್ಲೊಬ್ಬನು. ಈತನು ರಾಜಪುತ್ರ ವಂಶಜನು. ಯಶವಂತಸಿಂಹನ ತಂದೆಯೂ ಈತನ ತಂದೆಯೂ ಅಣ್ಣತಮ್ಮಂದಿರು. ನಯುನಪಾಲನ ತಂದೆಯು ದುರಾಚಾರನೂ ಕ್ರೂರಾತ್ಮನೂ ಆಗಿದ್ದುದರಿಂದ ಆತನ ತಂದೆಯು ಕಿರಿಯ ಮಗನಾದ ಯಶವಂತಸಿಂಹನ ತಂದೆಗೆ ಪಟ್ಟವನ್ನು ಕಟ್ಟಿದನು. ಈ ಕಾರಣದಿಂದ ಯಶವಂತಸಿಂಹನ ಮೇಲೆ ಅಸೂಯೆಯು ಬಹುಕಾಲದಿಂದಲೂ ನಯುನಪಾಲನಿಗಿದ್ದಿತು. ಇಷ್ಟೇ ಅಲ್ಲ; ಸಮಯ ಸಿಕ್ಕಿದಾಗ ಯಶವಂತಸಿಂಹನನ್ನು ಮೋಸಪಡಿಸಿ ಜೋಧಪುರ ರಾಜ್ಯವನ್ನು ತನ್ನ ವಶಮಾಡಿಕೊಳ್ಳಬೇಕೆಂದು ನಿರೀಕ್ಷಿಸುತ್ತಿದ್ದನು. ಔರಂಗಜೇಬನ ಅನುಗ್ರಹವನ್ನು ಪಡೆದರೆ ತನ್ನ ಕಾರ್ಯವು ನೆರವೇರುವುದೆಂದು ತಿಳಿದು ಆತನಲ್ಲಿ ಅತ್ಯಂತ ವಿಧೇಯನಾಗಿದ್ದು ಆತನನ್ನೇ ಅನುವರ್ತಿಸಿಕೊಂಡಿದ್ದನು. ಯಶವಂತಸಿಂಹನ ಮರಣವು ಆತನ ಕಿವಿಯಲ್ಲಿ ಬಿದ್ದೊಡನೆಯೇ ಆತನಿಗುಂಟಾದ ಸಂತೋಷಕ್ಕೆ ಪಾರವಿಲ್ಲದುದಾಯಿತು. ಈ ಸಮಾಚಾರವನ್ನು ಔರಂಗಜೇಬನು ತಿಳಿದು, ಯಶವಂತಸಿಂಹನ ಮರಣಾನಂತರ ಚಂದ್ರಾವತಿಯನ್ನು ಹಿಡಿದುತರಲು ಈತನನ್ನೇ ಕಳುಹಿದರೆ ತನ್ನ ಕಾರ್ಯವು ನೆರವೇರುವುದೆಂದು ತಿಳಿದು ಆತನನ್ನೇ ಕಳುಹಿದನು. ನಯುನಪಾಲನು ಕೂಡ ಚಂದ್ರಾವತಿಯನ್ನು ಹೇಗಾದರೂಮಾಡಿ ಹಿಡಿದುತಂದು ಬಾದಷಹನಿಗೆ ಒಪ್ಪಿಸಿ, ಜೋಧಪುರವನ್ನು ಸ್ವಾಧೀನಮಾಡಿಕೊಳ್ಳಬೇಕೆಂದು ನಿಶ್ಚಯಿಸಿದನು. ಔರಂಗಜೇಬನೂ ಸಹ ಯಶವಂತಸಿಂಹನನ್ನು ಮೋಸಪಡಿಸಿ ಅಥವಾ ಕೊಲ್ಲಿಸಿಯಾದರೂ ಜೋಧಪುರವನ್ನು ಸಂಪಾದಿಸಿ, ನಯುನಪಾಲನಿಗಾಗಲಿ ಅಥವಾ ಆತನ ಬಂಧುಗಳಿಗಾಗಲಿ ಕೊಡಬೇಕೆಂದು ಯೋಚಿಸುತ್ತಿದ್ದನು. ಆದರೆ, ಯಶವಂತಸಿಂಹನು ನಿರುಪಮಾನ ಪರಾಕ್ರಮಶಾಲಿಯಾಗಿದ್ದುದರಿಂದ ಇದಕ್ಕೆ ಸಮಯವು ಒದಗಲಿಲ್ಲ.

ಯಶವಂತಸಿಂಹನ ಮರಣಾನಂತರ ನಯುನಪಾಲನು ಇನ್ನು ಜೋಧಪುರಕ್ಕೆ ತಾನೇ ಅಧಿಪತಿಯೆಂದು ಸಂತೋಷಪಟ್ಟು ಚಂದ್ರಾವತಿಯನ್ನು ಹಿಡಿದುತಂದು ಬಾದಷಹನಿಗೆ ಒಪ್ಪಿಸುವ ಕಾರ್ಯದಲ್ಲಿ ಉದ್ಯುಕ್ತನಾಗಿ ಹೊರಟನು. ಜೋಧಪುರಕ್ಕೆ ಉತ್ತರಾಧಿಕಾರಿಯಾಗಿದ್ದ ಅಜಿತಸಿಂಗನೂ ಮೃತನಾದುದರಿಂದ ಆ ರಾಜ್ಯವು ತನಗೇ ಸಿಕ್ಕುವುದೆಂದು ಮನದಲ್ಲಿ ನಿಶ್ಚಯಿಸಿಕೊಂಡನು. ಆದರೇನು? ತಾನೊಂದು ನೆನಸಿದರೆ ದೈವವೊಂದನ್ನು ಮಾಡುವುದೆಂಬುದು ನಿಜವಾಯಿತು. ಸಕಲ ಸೇನಾಸಮೇತನಾಗಿ ಆತನು ಕಾಬೂಲನ್ನು ಪ್ರವೇಶಿಸಿ, ದುರ್ಗಾದಾಸನನ್ನು ಹೇಗಾದರೂ ಉಪಾಯದಿಂದ ಮೋಸಪಡಿಸಬೇಕೆಂದು ಪ್ರಯತ್ನಿಸಿದನಾದರೂ ಕಡೆಗೆ ಆತನೇ ಮೋಸಹೋದನು. ದುರ್ಗಾದಾಸನು ಚಂದ್ರಾವತಿಯನ್ನೂ ಅಜಿತಸಿಂಗನನ್ನೂ ಶತ್ರುಗಳಿಂದ ತಪ್ಪಿಸಿದ ಮೇಲೆ ನಯುನಪಾಲನೊಡನೆ ಮತ್ತಷ್ಟು ಸ್ನೇಹವುಳ್ಳವನಂತೆ ನಟಿಸುತ್ತಿದ್ದನು. ದಿನೇ ದಿನೇ ಆತನ ಮುಖವು ಕಳೆಯೇರಿತು. ನಯುನಪಾಲನು ಆಗಾಗ ದುರ್ಗಾದಾಸನೊಡನೆ "ಚಂದ್ರಾವತಿಯು ಇನ್ನಾದರೂ ಪ್ರಯಾಣ ಮಾಡುವಳೋ ಇಲ್ಲವೊ? ನಾವು ದಿಲ್ಲೀನಗರವನ್ನು ಬಿಟ್ಟು ಬಹಳ ದಿನಗಳಾದವು." ಎಂದು ಕೇಳುತ್ತಿದ್ದನು. ಅದಕ್ಕಾ ದುರ್ಗಾದಾಸನು ತಕ್ಷಣವೇ ಒಳಗೆ ಹೋಗಿ ಪುನಃ ಬಂದು "ಸ್ವಾಮೀ, ಆಕೆಯ ಶರೀರಾರೋಗ್ಯವು ಸ್ವಲ್ಪ ಸ್ವಲ್ಪ ಏರುತ್ತಿದೆ. ಇನ್ನು ೨—೩ ದಿನಗಳು ಮಾತ್ರ ತಾವು ದಯೆಯಿಟ್ಟು ನಿಂತರೆ ಆಮೇಲೆ ಹೊರಡಬಹುದು." ಎಂದು ಹೇಳುತ್ತಿದ್ದನು. ಈ ಮಾತುಗಳನ್ನು ಕೇಳಿ ನಯುನಪಾಲನು ಹಾಗೆಯೇ ಆಗಲಿ, ಆವ ತೊಂದರೆಯೂ ಇಲ್ಲದಂತೆ ಚಂದ್ರಾವತಿಯನ್ನು ಕರೆದುಕೊಂಡು ಬರಬೇಕೆಂದು ಬಾದಷಹರ ಅಪ್ಪಣೆಯಾಗಿದೆಯಾದುದರಿಂದ ಆಕೆಯ ಇಷ್ಟದಂತೆಯೇ ನಡಿಯುವೆನು." ಎಂದು ಪ್ರತ್ಯುತ್ತರವನ್ನು ಕೊಡಲು, ದುರ್ಗಾದಾಸನು ಒಳಗೊಳಗೆ ಸಂತೋಷಪಡುತ್ತದ್ದನು,

ಒಂದು ದಿನ ಸಾಯಂಕಾಲ ನಯುನಪಾಲನು ತನ್ನ ಗುಡಾರದ ಸುತ್ತಲೂ ಸಂಚರಿಸುತ್ತಾ ಸೈನಿಕರು ಜಾಗರೂಕರಾಗಿರುವರೋ ಇಲ್ಲವೋ—ಎಂದು ಪರೀಕ್ಷಿಸುತ್ತಿದ್ದನು. ಆತನ ಮುಖಲಕ್ಷಣವನ್ನು ನೋಡಿದರೆ, ಮನಸ್ಸಿನಲ್ಲಿ ದೀರ್ಘಾಲೋಚನೆಯನ್ನು ಮಾಡುತ್ತಿದ್ದಂತೆ ಕಾಣುತ್ತಿದ್ದಿತು. ತನ್ನಲ್ಲಿ ತಾನೇ ಏನನ್ನೋ ಹೇಳಿಕೊಳ್ಳುತ್ತಲೂ ಮೀಸೆಯನ್ನು ತಿದ್ದಿಕೊಳ್ಳುತ್ತಲೂ ಅತ್ತಿತ್ತ ತಿರುಗಾಡುತಲಿದ್ದನು. ಅಷ್ಟರಲ್ಲಿ ಒಬ್ಬ ಸಿಪಾಯಿಯು ಓಡಿಬಂದು ಸಲಾಂಮಾಡಿ, "ಮಹಾ

ಸ್ವಾಮಿ, ದುರ್ಗಾದಾಸನ ಮುಖಲಕ್ಷಣಗಳನ್ನು ನೋಡಿದರೆ, ಆತನು ನಮಗೇನೋ ಮೋಸಪಡಿಸಲು ಯತ್ನಿಸಿರುವಂತೆ ನನಗೆ ತೋರುತ್ತದೆ. ಹೀಗೆ ಉಪೇಕ್ಷೆಯಿಂದಿರುವುದು ಸರಿಯಲ್ಲ. ಕೆಲಸವು ಮೀರಿಹೋದಮೇಲೆ ನಾವು ಮಾಡುವುದೇನಿರುವುದು? ಆದುದರಿಂದ ತಾವು ತಕ್ಕಮಟ್ಟಿಗೂ ಜಾಗರೂಕರಾಗಿರುವುದೇ ಮೇಲು " ಎಂದನು.

ಈ ಮಾತನ್ನು ಕೇಳಿ ನಯನಪಾಲನು ಆಶ್ಚರ್ಯಾನ್ವಿತನಾಗಿ " ಏನು, ದುರ್ಗಾದಾಸನು ನಮ್ಮನ್ನು ಮೋಸಪಡಿಸಬೇಕೆಂದಿರುವನೆ? ನನ್ನಲ್ಲಿ ಎಷ್ಟೋ ಭಕ್ತಿವಿಶ್ವಾಸದಿಂದದ್ದವನು ನನಗೆ ದ್ರೋಹಮಾಡಲೆಣಿಸಿರುವನೆ? ಈ ಗುಡಾರಗಳ ಸುತ್ತಲೂ ನಮ್ಮ ಸೇನಾಸಮೂಹವು ಕಾದುಕೊಂಡಿರಲು ಅವನಿಂದೇನಾಗುವುದು? ನನ್ನೊಡನೆ ಹೋರಾಡುವದಕ್ಕೂ ಅಸಮರ್ಥನಾಗಿರುವನಲ್ಲ! ಇರಲಿ; ಇನ್ನು ಮೇಲೆ, ದುರ್ಗಾದಾಸನನ್ನೂ ಇಂದಿರೆಯನ್ನೂ ಗುಡಾರದಿಂದ ಅತ್ತಿತ್ತ ಬಿಡಕೂಡದೆಂದು ಸಿಪಾಯಿಗಳಿಗೆ ಹೇಳಿರಿ " ಎಂದು ಅಪ್ಪಣೆ ಮಾಡಿದನು. ಆದರೂ ಆತನ ಮನಸ್ಸಿನಲ್ಲಿ ಸಂಶಯವುಂಟಾಯಿತು. ದುರ್ಗಾದಾಸನು ಮಾಡಿದ ಮೋಸವನ್ನು ನಯನಪಾಲನು ತಿಳಿಯದವನಾಗಿದ್ದುದರಿಂದ ಈ ವರೆಗೂ ದುರ್ಗಾದಾಸನಲ್ಲಿ ನಂಬಿಕೆಯನ್ನಿಟ್ಟಿದ್ದನು. ಇನ್ನು ಮೇಲೆ ನಯನಪಾಲನು ಎಷ್ಟು ಆಜ್ಞೆಗಳನ್ನು ಕೊಟ್ಟರೂ ದುರ್ಗಾದಾಸನಿಗೆ ಚಂದ್ರಾವತಿಯ ವಿಷಯದಲ್ಲಿಯಾಗಲಿ, ಆಕೆಯ ಕುಮಾರನ ವಿಷಯದಲ್ಲಿಯಾಗಲೀ ಭಯವಿಲ್ಲವಲ್ಲವೆ? ದುರ್ಗಾದಾಸನ ಮೇಲೆ ತನಗೆ ಅನುಮಾನ ಹುಟ್ಟಿದುದರಿಂದ, ಚಂದ್ರಾವತಿಯನ್ನು ಕರೆದುಕೊಂಡು ಹೋಗಿ ಬಾದಷಹನಿಗೊಪ್ಪಿಸಿ, ಆತನಿಂದ ಬಹುಮಾನವನ್ನು ಪಡೆಯಬೇಕೆಂದು ನಯನಪಾಲನು ನಾಳೆಯದಿನವೇ ಪ್ರಯಾಣಕ್ಕೆ ಎಲ್ಲರೂ ಸಿದ್ಧರಾಗಬೇಕೆಂದು ತನ್ನ ಸೈನಿಕರಿಗೆಲ್ಲ ಆಜ್ಞಾಪಿಸಿದನು. ಪರಿವಾರವೆಲ್ಲವೂ ಪ್ರಯಾಣಕ್ಕೆ ಸಿದ್ಧವಾಯಿತು.

ಹೀಗೆ ಪರಿವಾರವೆಲ್ಲವೂ ಹೊರಟು ಬೆಟ್ಟ-ಗುಡ್ಡಗಳನ್ನು ದಾಟಿ, ೨—೩ ದಿನಗಳಲ್ಲಿ ಜಲಾಲಾಬಾದ್ 'ದುರ್ಗವನ್ನು ಸೇರಿತು. ಅಲ್ಲಿ ಎಂದಿನಂತೆ ಗುಡಾರವನ್ನು ಹಾಕಿಸಿ, ಪರಿವಾರಕ್ಕೆಲ್ಲ ಅನುಕೂಲಪಡಿಸಿದನು. ಆದರೆ, ಆವ ಕಾರಣದಿಂದಲೋ ತನ್ನ ಗುಡಾರವನ್ನು ಚಂದ್ರಾವತಿಯ ಗುಡಾರದ ಬಳಿಯಲ್ಲಿಯೇ ಹಾಕಿಸಿ, ದುರ್ಗಾದಾಸನೂ ಇಂದಿರೆಯೂ ಅತ್ತಿತ್ತ ತಿರುಗಾಡಕೂಡದೆಂದು ಆಜ್ಞಾಪಿಸಿದನು. ಆ ದಿನ ಆತನು ಮಾತುಮಾತಿಗೂ ಅತ್ತಿತ್ತ ನೋಡುತ್ತಲೂ ತಿರುಗಾಡುತ್ತಲೂ ತನ್ನಲ್ಲಿ ತಾನೆ ಮಾತನಾಡಿಕೊಳ್ಳುತ್ತಲೂ ಇದ್ದನು. ಆತನ ಸೈನಿಕರು ಮೊದಲಿನಂತೆಯೇ ಗುಡಾರದ ಸುತ್ತಲೂ ಕಾವಲಿದ್ದರು. ಈ ಸಮಯದಲ್ಲಿ ನಯನಪಾಲನ ಮನಸ್ಸಿನಲ್ಲಿ ಯಾವ ಯೋಚನೆಯುಂಟಾಗಿದ್ದಿತೆಂದು ತಿಳಿಯುವಂತಿರಲಿಲ್ಲವಾದರೂ ಆತನು ಆಗಾಗ ಈ ಮುಂದೆ ಹೇಳುವಂತೆ ಅಸ್ಫುಟವಾಗಿ ಹೇಳುತ್ತಿದ್ದನು:—

' ಆದರೆ ನಾನು ಮಾತ್ರ ಏಕೆ ಸುಮ್ಮನಿರಬೇಕು?......... ಚಿಕ್ಕಂದಿನಲ್ಲಿ ನೋಡಿದ್ದೆನಾದುದರಿಂದ ಈಗ ಚನ್ನಾಗಿ ಜ್ಞಾಪಕವಿಲ್ಲ;.............. ಇಷ್ಟು ಪ್ರಯಾಸಪಟ್ಟು ಬಾದಷಹನಿಗೇಕೆ ಒಪ್ಪಿಸಬೇಕು?............ಆ............... ನನ್ನನ್ನು ಏನು ಮಾಡಬಲ್ಲನು? ತಪ್ಪಿಸಿಕೊಂಡು ಹೋದಳೆಂದರೆ............ಆಗಲಿ; ಒಂದುಸಲ ನೋಡಿ ಆಮೇಲೆ ಇದನ್ನೆಲ್ಲ ಯೋಚಿಸುವೆನು! "

ಹೀಗೆ ಕೆಲವು ಮಾತುಗಳನ್ನು ಸ್ಪಷ್ಟವಾಗಿಯೂ ಕೆಲವನ್ನು ಅಸ್ಫುಟವಾಗಿಯೂ ಉಚ್ಚರಿಸುತ್ತ ಆತನು ತನ್ನ ಗುಡಾರದಿಂದ ಹೊರಗೆ ಬಂದು ಅತ್ತಿತ್ತ ನೋಡುತ್ತ ಒಬ್ಬ ಪರಿಚಾರಿಕೆಯನ್ನು ಕರೆದು "ತಾನು ಒಳಗೆ ಬರುತ್ತಿರುವೆನೆಂದು ಚಂದ್ರಾವತಿಗೆ ತಿಳಿಸು " ಎಂಬುದಾಗಿ ಹೇಳಿದನು. ದಾದಿಯು ಒಳಗೆ ಹೋಗಿ ಸಮಾಚಾರವನ್ನು ಹೇಳಿ ಬರುವುದರೊಳಗಾಗಿಯೇ ತಾನೂ ಚಂದ್ರಾವತಿಯ ಬಿಡಾರವನ್ನು ಪ್ರವೇಶಿಸಿದನು. ಆತನು ಯಾವಾಗ ಯಾವ ಸಂಗತಿಯನ್ನು ತಿಳಿಸುವನೋ ಎಂದು ದುರ್ಗಾದಾಸನು ಯಾವಾಗಲೂ ನಯನಪಾಲನೊಡನೆ ತಿರುಗುತ್ತಿದ್ದು ಆತನೊಡನೆ ತಾನೂ ಬಿಡಾರದೊಳಕ್ಕೆ ಹೋದನು. ಇಂದಿರೆಯು ನಯನಪಾಲನು ಬರುವ ವರ್ತಮಾನವನ್ನು ತಿಳಿಯದಿದ್ದುದರಿಂದ, ತನ್ನ ಮೇಲುಮುಸುಕನ್ನು ತೆಗೆದುಹಾಕಿ ಆವುದೋ ಕಾರ್ಯದಲ್ಲಿದ್ದಳು ಅಲ್ಲಲ್ಲಿ ಕೆಲವರು ದಾದಿಯರು ಮಾತ್ರ ಕುಳಿತಿದ್ದರು. ನಯನಪಾಲನು ಇಷ್ಟರಲ್ಲಿ ಒಳಹೊಕ್ಕು ಅತ್ತಿತ್ತ ನೋಡಲಾರಂಭಿಸಿದನು. ದುರ್ಗಾದಾಸನೂ ನಯನಪಾಲನ ಹಿಂದೆಯೇ ನಿಂತುಕೊಂಡಿದ್ದನು. ಚಂದ್ರಾವತಿಯನ್ನು ಚಿಕ್ಕಂದಿನಲ್ಲಿ ನೋಡಿದ್ದನಾದುದರಿಂದ ಆಕೆಯ ಗುರುತನ್ನು ಚನ್ನಾಗಿ ತಿಳಿಯಲಾರದೆ ಕುಳಿತಿದ್ದ ಇಂದಿರೆಯನ್ನು ನೋಡಿ "ಈಕೆಯೇ ಚಂದ್ರಾವತಿಯೋ? " ಎಂದು ಅಲ್ಲಿ ನಿಂತಿದ್ದ ದಾಸಿಯನ್ನು ಕೇಳಿದನು. ದಾಸಿಯು, ವೃತ್ತಾಂತವನ್ನೆಲ್ಲ ಈತನು ಅರಿತಿರವನೆಂದೂ, ತಾನು ಸುಳ್ಳು ಹೇಳಿದರೆ ದಂಡನೆಗೆ ಗುರಿಯಾಗುವೆನೆಂದೂ ತಿಳಿದು ಭಯದಿಂದ ನಡುಗುತ್ತ ತೊದಲುನಾಲಿಗೆಯಿಂದ "ಅ...—ಲ್ಲ......ಅಲ್ಲ; ಚಂದ್ರಾವತಿ...ಯಲ್ಲ... ಇ......ಇ......ಇಂದಿರೆ........" ಎಂದು ಹೇಳಿದಳು. ಆ ಮಾತುಗಳನ್ನು ಕೇಳಿ ನಯನಪಾಲನು ಕಾಲಾಗ್ನಿಯಂತೆ ಕೆರಳಿ ಗುಡುಗುಡಿಸುತ್ತ " ಎಲೆ, ಮೂರ್ಖಳೆ! ಚಂದ್ರಾವತಿ

ಯೇನಾದಳೆಂಬುದನ್ನು ಹೇಳುವೆಯೋ... ಇಲ್ಲವೊ......" ಎಂದು ಕೇಳಿದನು. ತಕ್ಷಣವೇ ಆ ದಾಸಿಯು ಶಿಕ್ಷೆಗೆ ಭಯಪಟ್ಟು, ಎಲ್ಲ ವೃತ್ತಾಂತವನ್ನೂ ಸಮಗ್ರವಾಗಿ ಹೇಳಿದಳು. ಆ ಮಾತನ್ನು ಕೇಳಿದ ನಯನಪಾಲನು ರೋಷಹುಟ್ಟಿದ ನಾಗರಹಾವಿನಂತೆ ಬುಸುಗುಟ್ಟುತ್ತ ದುರ್ಗಾದಾಸನನ್ನು ನೋಡಿ, ಹೀಗೆ ಗರ್ಜಿಸಿದನು:—

" ದುಷ್ಟಾತ್ಮಾ, ಈ ಮೋಸಕಾರ್ಯವು ನಿನ್ನಿಂದಲೇ ನಡೆದಿರುವುದು! ನೀನು ಹೀಗೆ ಮೋಸಮಾಡುವೆಯೆಂದು ನಾನು ಸ್ವಪ್ನದಲ್ಲಿಯೂ ತಿಳಿದಿರದಿರಲಿಲ್ಲ! ಚಂದ್ರಾವತಿಯನ್ನು ಎಲ್ಲಿಗೆ ಸಾಗಿಸಿದೆಯೆಂಬುದನ್ನು ಹೇಳುವೆಯೋ ಇಲ್ಲವೊ ?" ಎಂದು ತನ್ನ ಸೊಂಟದಲ್ಲಿದ್ದ ಕತ್ತಿಯನ್ನು ಒರೆಯಿಂದ ಹಿರಿದುಕೊಂಡನು.

ದುರ್ಗಾದಾಸನು ಆತನ ಮಾತಿಗೆ ಪ್ರತ್ಯುತ್ತರವನ್ನು ಕೊಡದೆ ಕಿರುನಗೆಯಿಂದ ಒಮ್ಮೆ ನೋಡಿದನು. ನಯನಪಾಲನು ಇಂದಿರೆಯ ಕಡೆಗೆ ತಿರುಗಿ "ಎಲೆ, ಧೂರ್ತೆ! ಚಂದ್ರಾವತಿಯ ಸಮಾಚಾರವನ್ನು ಹೇಳುವೆಯೋ ಇಲ್ಲವೋ? ಇನ್ನು ಸಾವಕಾಶಮಾಡಿದರೆ ಖಂಡಿತವಾಗಿಯೂ ನನ್ನ ಕರವಾಳಕ್ಕೆ ಬಲಿಯಾಗುವೆ. ಪ್ರಾಣದ ಮೇಲೆ ಆಶೆಯಿದ್ದರೆ ಬೇಗ ಹೇಳು." ಎಂದು ಕೇಳಿದನು. ಆದರೇನು? ದುರ್ಗಾದಾಸನು ಯಾವ ಪ್ರತ್ಯುತ್ತರವನ್ನು ಕೊಟ್ಟನೋ ಅದನ್ನೇ ಇಂದಿರೆಯೂ ಉತ್ತರವಾಗಿತ್ತಳು. ನಯನಪಾಲನು ಎಷ್ಟು ಸಲ ತನ್ನನ್ನು ಕೇಳಿದರೂ ಭಯಪಡಿಸಿದರೂ ದುರ್ಗಾದಾಸನು ಕಿರುನಗೆಯನ್ನು ಹೊರತು ಮತ್ತಾವ ಪ್ರತ್ಯುತ್ತರವನ್ನು ಕೊಡಲೇ ಇಲ್ಲ.

ಇತ್ತ ನಯನಪಾಲನು ತನ್ನ ಆಶೆಯೆಲ್ಲವೂ ನಿರಾಶೆಯಾಯಿತಲ್ಲಾ ಎಂದು ಯೋಚಿಸುತ್ತ ಅತ್ಯಂತ ದುಃಖಾಕ್ರಾಂತನಾದನು. ಚಂದ್ರಾವತಿಯನ್ನು ಬಾದಷಹನಿಗೊಪ್ಪಿಸಿ ಜೋಧಪುರರಾಜ್ಯವನ್ನು ಸಂಪಾದಿಸಬೇಕೆಂದಿದ್ದ ಆತನ ಮಹತ್ತರವಾದ ಆಶೆಯು ಭಸ್ಮೀಕೃತವಾಯಿತು. ಡಿಲ್ಲೀ ನಗರಕ್ಕೆ ಹೋಗಿ ಬಾದಷಹನಿಗೆ ತನ್ನ ಮುಖವನ್ನು ಹೇಗೆ ತೋರಿಸಲಿ—ಎಂದು ನಿರಂತರವೂ ಚಿಂತಾಕ್ರಾಂತನಾದನು. ಇಂದಿರಾ ದುರ್ಗಾದಾಸರನ್ನು ಚತುರ್ವಿಧೋಪಾಯದಿಂದ ಕೇಳಿದನಾದರೂ ಯಾವ ಪ್ರಯೋಜನವೂ ಇಲ್ಲದೆ ಹೋಯಿತು. ಇನ್ನು ಎಷ್ಟು ಯೋಚಿಸಿದರೂ ಫಲವಿಲ್ಲವೆಂದು ನಿಶ್ಚಯಿಸಿ ಚಂದ್ರಾವತಿಯನ್ನು ಹುಡುಕುವುದಕ್ಕಾಗಿ ನಾಲ್ಕುಕಡೆಗೂ ತನ್ನ ಸೈನ್ಯವನ್ನು ಕಳುಹಿಸಿ, ಇಂದಿರೆ ದುರ್ಗಾದಾಸರನ್ನು ಸೆರೆಯಾಗಿ ಹಿಡಿದುಕೊಂಡು, ಉಳಿದ ಸೈನ್ಯದೊಡನೆ ತಾನೂ ಒಂದು ಮಾರ್ಗವನ್ನು ಹಿಡಿದು ಹುಡುಕುತ್ತ ಹೊರಟನು.

ಹನ್ನೆರಡನೆಯ ಪ್ರಕರಣ.

——:o:——

(ಆಶಾಭಂಗವು.)

ಜಲಾಲಾಬಾದ ದುರ್ಗವನ್ನು ಬಿಟ್ಟಮೇಲೆ ನಯನಪಾಲನು ತನ್ನ ಸೈನ್ಯದೊಡನೆ ಕೂಡಿ, ಚಂದ್ರಾವತಿಯನ್ನು ಹುಡುಕುತ್ತ ಹೊರಟನು. ಮಾರ್ಗದಲ್ಲಿದ್ದ ಪ್ರತಿಯೊಂದು ದುರ್ಗ-ಗ್ರಾಮಗಳನ್ನೂ ಶೋಧಿಸುತ್ತ ಬರುತ್ತಿರಲು, ಒಂದು ಹಳ್ಳಿಯ ಸಮೀಪದಲ್ಲಿ ಕೆಲವರು ಭಿಲ್ಲರು ಒಂದು ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುತ್ತಿದ್ದಂತೆ ತಿಳಿಯಿತು. ತಕ್ಷಣವೇ ನಯನಪಾಲನು ತನ್ನ ಸೈನ್ಯವನ್ನು ಕರೆದುಕೊಂಡು ಪಲ್ಲಕ್ಕಿಯನ್ನು ಸಮೀಪಿಸಿ ಪರಿವಾರಸಮೇತರಾಗಿ ಹೋಗುತ್ತಿದ್ದ ಭಿಲ್ಲರನ್ನು ತಡೆದು ನಿಲ್ಲಿಸಿದನು. ಆಗ ಭಿಲ್ಲರು ಮಹಮ್ಮದೀಯರನ್ನು ಪಲ್ಲಕ್ಕಿಯ ಸಮೀಪಕ್ಕೆ ಬರಗೊಡಿಸದಂತೆ ಸುತ್ತಲೂ ಅಡ್ಡಗಟ್ಟಿ ಅವರೊಡನೆ ಹೋರಾಡಲಾರಂಭಿಸಿದರು. ನಯನಪಾಲನು ಚಂದ್ರಾವತಿಯು ತನಗೆ ಸಿಕ್ಕಿದಳೆಂದು ಅಮಂದಾನಂದವನ್ನು ಹೊಂದಿದನು. ಇಂದಿರಾ ದುರ್ಗಾದಾಸರು ತಮ್ಮ ಪ್ರಯತ್ನವೆಲ್ಲವೂ ವ್ಯರ್ಥವಾಯಿತೆಂದು ಚಿಂತಿಸುತ್ತ ನಿಂತರು. ಜೋಧಪುರವಂಶವನ್ನು ಉದ್ಧಾರಮಾಡುವೆನೆಂದು ಯಶವಂತಸಿಂಹನೊಡನೆ ತಾನು ಮಾಡಿದ ಪ್ರತಿಜ್ಞೆಯನ್ನು ಸ್ಮರಿಸಿಕೊಂಡು ದುರ್ಗಾದಾಸನು ವಿಷಾದಮಗ್ನನಾದನು. ಪಲ್ಲಕ್ಕಿಯಲ್ಲಿರುವ ಚಂದ್ರಾವತಿಯನ್ನೂ ಅಜಿತ್‌ಸಿಂಗನನ್ನೂ ನೋಡಿದ ಕೂಡಲೇ ನಯನಪಾಲನು ಅವರಿಬ್ಬರಿಗೂ ಗತಿಮುಟ್ಟಿಸುವನೆಂದು ಇಂದಿರೆಯು ನಿಶ್ಚಯಿಸಿಕೊಂಡಳು. ಆದರೆ ಸಹಜಧೈರ್ಯಶಾಲಿಯಾದ ದುರ್ಗಾದಾಸನು, ಪ್ರಾಣಹೋದರೂ ಸರಿಯೆ, ನಯನಪಾಲನೊಡನೆ ಹೋರಾಡಿ ಚಂದ್ರಾವತಿಯನ್ನು ಹೇಗಾದರೂ ಮಾಡಿ ಕಾಪಾಡುವೆನೆಂದು ನಿಶ್ಚಯಿಸಿಕೊಂಡನು.

ಭಿಲ್ಲರೂ ರಾಜಪುತ್ರರೂ ಸೇರಿ ಪಲ್ಲಕ್ಕಿಯ ಬಳಿಗೆ ಒಬ್ಬರನ್ನೂ ಬರಗೊಡಿಸದೆ ಮಹಮ್ಮದೀಯರೊಡನೆ ಹೋರಾಡುತ್ತಿದ್ದರು. ಆದರೇನು? ಮಹಮ್ಮದೀಯರ ಸೈನ್ಯವು ತಮಗಿಂತಲೂ ಅಧಿಕವಾಗಿದ್ದುದರಿಂದ ರಾಜಪುತ್ರರಿಗೆ ಅವರೊಡನೆ ಹೋರಾಡುವುದು ಅತ್ಯಂತ ಕಷ್ಟವಾಯಿತು. ಪರಿವಾರದಲ್ಲಿ ಕೆಲವರು ಹತರಾದರು; ಅಷ್ಟರಲ್ಲಿ ನಯನಪಾಲನು ತನ್ನ ಖಡ್ಗವನ್ನು ಗರಗರನೆ ತಿರುಗಿಸುತ್ತ ಪಲ್ಲಕ್ಕಿಯನ್ನು ಸಮೀಪಿಸಿದನು. ಪರಿವಾರವೆಲ್ಲವೂ ಶತ್ರುಗಳೊಡನೆ ಹೋರಾಡುತ್ತಿದ್ದುದರಿಂದ ಈತನನ್ನು ಒಬ್ಬರೂ ಅಡ್ಡಿಪಡಿಸಲಿಲ್ಲ. ನಯನಪಾಲನು ಮೆಲ್ಲಮೆಲ್ಲನೆ ಪಲ್ಲಕ್ಕಿಯನ್ನು ಸಮೀಪಿಸಿ, ಬಾಗಿಲನ್ನು ತೆರೆದು, ಒಳಗೆ ಹೋಗಲು ತನ್ನ ತಲೆಯನ್ನು

ಒಳಗೆ ಇಟ್ಟನು. ತಕ್ಷಣವೇ ಒಳಗಿನಿಂದ ಒಂದು ಕತ್ತಿಯ ಏಟು ಆತನ ಭುಜವನ್ನು ತಾಕಿತು. ಆ ಏಟನ್ನು ಸಹಿಸಲಾರದೆ ಆತನು ಆಕ್ಷಣವೇ ಮೂರ್ಛಿತನಾಗಿಬಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚೆತ್ತು ದುರಾಗ್ರಹದಿಂದ ಪಲ್ಲಕ್ಕಿಯೊಳಗಿದ್ದ ಚಂದ್ರಾವತಿಯನ್ನು ಹಿಡಿದು ತರುವಂತೆ ತನ್ನ ಭಟನೊಬ್ಬನಿಗೆ ಆಜ್ಞಾಪಿಸಿದನು. ಭಟನು ಪಲ್ಲಕ್ಕಿ ಸಮೀಪಿಸಿದ ಕೂಡಲೆ ಒಬ್ಬ ರಜಪುತ್ರಸ್ತ್ರೀಯನು ಖಡ್ಗಪಾಣಿಯಾಗಿ ಹೊರಗೆ ಬಂದು ನಿಂತು, ಮಹಮ್ಮದೀಯರೊಡನೆ ಹೋರಾಡಲಾರಂಭಿಸಿದನು. ಈ ಚಿತ್ರವನ್ನು ನೋಡಿದ ಕೂಡಲೇ ನಯನಪಾಲನು ಹತಾಶನಾದನು. ಈ ವರೆಗೂ ಚಂದ್ರಾವತಿಗೆ ಒದಗಿದ್ದ ದುರ್ಗತಿಯ ವಿಷಯವಾಗಿ ಸಂತಾಪಪಡುತ್ತಿದ್ದ ಇಂದಿರಾ ದುರ್ಗಾದಾಸರು ನಿಶ್ಚಿಂತರಾಗಿ ಆ ಚಮತ್ಕಾರವನ್ನು ನೋಡುತ್ತ ನಿಂತರು. ಚಂದ್ರಾವತಿಯು ತನಗೆ ಸಿಕ್ಕುವದು ದುರ್ಘಟವೆಂದು ನಯನಪಾಲನು ತಿಳಿದುಕೊಂಡನು. ಪಾಪ! ಆತನು ಎಷ್ಟು ಪಾಡುಪಟ್ಟರೂ ಲೇಶಮಾತ್ರವೂ ಪ್ರಯೋಜನವಿಲ್ಲದೆ ಹೋಯಿತು; ಎಷ್ಟು ದೀರ್ಘಾಲೋಚನೆಯನ್ನು ಮಾಡಿದರೂ ತಕ್ಕ ಉಪಾಯವು ಆತನಿಗೆ ತಿಳಿಯಲೇ ಇಲ್ಲ. ಆದರೆ, ಆತನ ಹೃದಯದಲ್ಲಿ ನಾಟಿದ್ದ ಆಶಾಬೀಜವು ಸ್ವಲ್ಪ ಅಂಕುರಿಸಿದ್ದುದರಿಂದ ಆತನು ಮತ್ತೊಂದು ಬಾರಿ ದುರ್ಗಾದಾಸನನ್ನು ಭಯಪಡಿಸಿದರೆ ಚಂದ್ರಾವತಿಯ ವೃತ್ತಾಂತವನ್ನು ತಿಳಿಸುವನೇನೋ ಎಂಬ ಶಂಕೆಯಿಂದ ಆತನನ್ನು ಕುರಿತು "ಎಲೈ, ಮೂರ್ಖಚಿತ್ತನೆ! ಈಗಲಾದರೂ ಚಂದ್ರಾವತಿಯ ವೃತ್ತಾಂತವನ್ನು ತಿಳಿಸುವೆಯೋ ಇಲ್ಲವೋ? ನಿನಗೆ ಪ್ರಾಣದ ಮೇಲೆ ಆಶೆಯಿದ್ದಲ್ಲಿ ನನ್ನನ್ನು ಮೋಸಪಡಿಸದೆ ನನ್ನ ಅನುಗ್ರಹವನ್ನು ಸಂಪಾದಿಸಿ ಸುಖದಿಂದ ಜೀವಿಸು. ಔರಂಗಜೇಬ ಬಾದಷಹರೊಡನೆ ನಿನ್ನ ವಿಷಯವನ್ನು ಹೇಳಿ ನಿನಗೆ ಬಹುಮಾನ ಕೊಡಿಸುವೆನು. ಈಗ ನೀನು ನನ್ನ ಮಾತನ್ನು ಕೇಳದಿದ್ದಲ್ಲಿ ನಿನ್ನ ತಂಗಿಯಾದ ಇಂದಿರೆಯನ್ನು ನಿನ್ನೆದುರಿನಲ್ಲಿ ಅವಮಾನಪಡಿಸಿ ಈ ನನ್ನ ಖಡ್ಗಕ್ಕೆ ಬಲಿಕೊಡುವೆನು; ಕಡೆಗೆ ನಿನ್ನ ಗತಿಯಾದರೂ ಹೀಗೆಯೇ ಆಗುವದೆಂದು ತಿಳಿ. ಬೇಗ ಹೇಳು!" ಎಂದು ಗದರಿಸಿದನು.

ಎಷ್ಟು ವಿಧವಾಗಿ ಭಯಪಡಿಸಿದರೂ ದುರ್ಗಾದಾಸನು ಆತನಿಗೆ ಪ್ರತ್ಯುತ್ತರವನ್ನೇ ಕೊಡಲಿಲ್ಲ. ಆತನ ಅಲಕ್ಷ್ಯಭಾವವನ್ನು ಕಂಡು ನಯನಪಾಲನು ಇಂದಿರೆಯನ್ನು ನೋಡಿ,— "ಎಲೆ, ದುರಹಂಕಾರಿ, ಚಕ್ರವರ್ತಿಯಾದ ಆಲಂಘೀರ್ ಬಾದಷಹನಿಗೇ, ದ್ರೋಹಮಾಡಿದ ನಿನ್ನನ್ನು ಪ್ರಾಣದೊಡನೆ ಉಳಿಸಲೇ ಬಾರದು. ನಿನ್ನ ಚರಿತ್ರೆಯನ್ನು ಕೇಳಿದರೆ ನೀನು ಹೆಂಗಸಾಗಿದ್ದರೂ ಎಷ್ಟೋಜನ ವೀರಪುರುಷರನ್ನು ಬಲಿತೆಗೆದುಕೊಂಡು ಹುಟ್ಟಿದಂತೆ ಕಾಣುವದು. ಪ್ರಾಣದಮೇಲೆ ಆಶೆಯಿದ್ದಲ್ಲಿ ಚಂದ್ರಾವತಿಯೆಲ್ಲಿರುವಳೆಂಬುದನ್ನು ತಿಳಿಸಿ ನನ್ನ ಅನುಗ್ರಹಕ್ಕೆ ಪಾತ್ರಳಾಗು; ಇಲ್ಲವಾದರೆ ನಿನ್ನೆದುರಿಗೇ ನಿಮ್ಮಣ್ಣನಾದ ದುರ್ಗಾದಾಸನನ್ನು ಖಂಡಖಂಡವಾಗಿ ಕಡಿಸಿ ಹದ್ದುಗಳಿಗೆ ಹಾಕಿಸುವೆನು. ಅಷ್ಟೇ ಅಲ್ಲ; ನಿನ್ನನ್ನು ಇಷ್ಟು ಜನಗಳ ಮುಂದೆ ಅವಮಾನಪಡಿಸಿ ಜಾತಿಭ್ರಷ್ಟಳನ್ನಾಗಿಮಾಡಿ, ಕಡೆಗೆ ಒಬ್ಬ ತುರುಷ್ಕನಿಗೆ ನಿನ್ನನ್ನು ಮದುವೆಮಾಡಿ ನಿನ್ನ ಜನ್ಮವನ್ನೆಲ್ಲ ದುಃಖಭಾಜನವನ್ನಾಗಿ ಮಾಡುವೆನು." ಎಂದು ಅನೇಕವಿಧವಾಗಿ ನಯಭಯಗಳಿಂದ ಬೋಧಿಸಿದರೂ ಸಹಜಧೈರ್ಯಾಲಂಕೃತಳಾದ ಇಂದಿರೆಯು ಸ್ವಲ್ಪವೂ ಭಯಪಡದೆ ಪೌರುಷವನ್ನು ವಹಿಸಿ, ಕೋಪಾರುಣನೇತ್ರಳಾಗಿ ನಯನಪಾಲನನ್ನು ಕುರಿತು ಹೇಳಿದಳು.

"ಎಲೈ, ಕ್ರೂರಾತ್ಮನೆ; ತರಗೆಲೆಯ ಸಬ್ಬಕ್ಕೆ ಹಲ್ಲಿಯು ಭಯಪಡುವುದೆಂದು ತಿಳಿದಿರುವೆಯಾ? ಮಾತುಮಾತಿಗೂ ನಮ್ಮನ್ನೇಕೆ ಬೆದರಿಸುವೆ? ಪ್ರಾಣಗಳಮೇಲೆ ಆಶೆಯನ್ನಿಟ್ಟು ನಾವು ಇಂತಹಕಾರ್ಯವನ್ನು ಮಾಡಿದೆವೆಂದು ತಿಳಿದಿರುವೆಯಾ? ಜೋಧಪುರದ ಸೇವಾದ್ವಾರವಾದುದರಿಂದಲೂ ನಮ್ಮ ಪ್ರಾಣಗಳು ನಮಗೆ ಅಧಿಕವಲ್ಲವು. ಇಂದಿನವರೆಗೂ ಆಕೆಯ ಅನ್ನವನ್ನೇ ತಿನ್ನುತ್ತಿರುವುದರಿಂದ ಚಂದ್ರಾವತಿಯನ್ನು ಕಾಪಾಡುವುದು ನಮ್ಮ ಮುಖ್ಯ ಕರ್ತವ್ಯವು. ಇದಕ್ಕಾಗಿ ನಾವು ಮಾಡಬೇಕಾದ ಕಾರ್ಯಗಳನ್ನೆಲ್ಲ ಮುಂಚೆಯೇ ಮಾಡಿರುವೆವು; ಇನ್ನುಮೇಲೆ ನೀನು ನಮ್ಮಿಬ್ಬರನ್ನೂ ಏನುಮಾಡಿದರೂ ಭಯವಿಲ್ಲ; ಅಸ್ಥಿರವಾದ ಈ ಪ್ರಾಣಗಳಮೇಲೆ ನಿನಗಿರುವಂತೆ ಆಶೆಯು ಎಲ್ಲರಿಗೂ ಇರುವುದೆಂದು ತಿಳಿದಿರುವೆಯಾ?

ನಯನ:— ಎಲೆ ಗಯ್ಯಾಳಿ, ಸಕಲ ಮಹಮ್ಮದೀಯ ಸಾಮ್ರಾಜ್ಯಲಕ್ಷ್ಮೀಧುರಂಧರನಾದ ಆಲಂಘೀರ್ ಬಾದಷಹನನ್ನು ತೃಣಪ್ರಾಯನನ್ನಾಗಿ ಎಣಿಸಿ ನಿರುಪಮಾನ ಬಲಾನ್ವಿತವಾದ ನಯನಪಾಲನನ್ನು ಧಿಕ್ಕರಿಸಿ, ನೀನು ಆಡಿದ ಮಾತುಗಳಿಗೆ ನಿನ್ನನ್ನು ಈಗಲೇ ಕೊನೆಗಾಣಿಸಬಹುದು. ಆದರೆ, ಸದಯಹೃದಯನಾದ ನಾನು ಇನ್ನು ಮೇಲೆಯಾದರೂ ನೀನು ಚಂದ್ರಾವತಿಯು ಎಲ್ಲಿರುವಳೆಂಬುದನ್ನು ತಿಳಿಸುವೆಯೆಂದು ಹೆಚ್ಚಿನ ಸಾಹಸವನ್ನು ನಿಲ್ಲಿಸಿರುವೆನು. ಆದುದರಿಂದ ನನ್ನ ಮಾತಿನಲ್ಲಿ ಲಕ್ಷ್ಯವಿಟ್ಟು ಚಂದ್ರಾವತಿಯ ವಿಷಯವನ್ನು ಹೇಳು. ನಿಜವನ್ನು ಹೇಳಿದುದೇ ಆದರೆ ನಿಮ್ಮಿಬ್ಬರನ್ನೂ ಭಂಗಾರದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪಟ್ಟಣಕ್ಕೆ ಕಳುಹುವೆನು.

ಇಂದಿರಾ—"ಎಲೈ, ದುರಾಶಾಪಿಶಾಚಗ್ರಸ್ತನಾದ ನಯನಪಾಲನೆ! ಭಂಗಾರದ ಪಲ್ಲಕ್ಕಿಯೆಂದು ಆಶೆಯನ್ನು ಹುಟ್ಟಿಸಿದ ಮಾತ್ರಕ್ಕೆ ನಮ್ಮ ಪ್ರತಿಜ್ಞೆಯನ್ನು ಬಿಡುವೆವೆಂದು ತಿಳಿದಿರುವೆಯಾ? ನಿನ್ನಂತೆ ನಿರ್ಗತಿಕನಾಗಿ, ಹೊಟ್ಟೆಯನ್ನು ಹೊರೆಯಲು ಪವಿತ್ರವಾದ ಕ್ಷತ್ರಿಯ ಧರ್ಮವನ್ನು ಬಿಟ್ಟು ನೀಚರ ಆಶ್ರಯ

ನಿತ್ಯಚರ್ಯೆ.

—:o:—

[ಲೇಖಕ:— ಶ್ರೀ॥ ಎನ್. ಎನ್. ನರಹರಯ್ಯ, ಬಿ ಎ; ಎಲ್-ಎಲ್. ಬಿ.]

“ ಶರೀರಮಾದ್ಯಂ ಖಲು ಧರ್ಮಸಾಧನಮ್ ” ಎಂಬ ನ್ಯಾಯ ವಿರುವುದು; ಎಂದರೆ, ಧರ್ಮವನ್ನು ನಡೆಸುವುದಕ್ಕೆ ಸಹಕಾರಿಯಾಗುವ ಸಾಧನಗಳಲ್ಲಿ ಶರೀರವೇ ಪ್ರಧಾನಭೂತವಾದುದು. ಇದೇ ಅರ್ಥವನ್ನೇ ಎಲ್ಲರೂ ಅಂಗೀಕರಿಸಿ ಅನುವಾದಿಸುವರು —“ ಜೀವನ್ ಭದ್ರಾಣಿ ಪಶ್ಯತಿ ” ಎನ್ನುವರು;—ಎಂದರೆ ಬದುಕಿಕೊಂಡಿದ್ದರೆ ಮಂಗಳಗಳನ್ನು ಕಾಣುವನು ಎಂದು ಅರ್ಥವು. “ ಆಪದರ್ಥಂ ಧನಂ ರಕ್ಷೇದ್ದಾರಾನ್ ರಕ್ಷೇದ್ಧನೈರಪಿ ॥ ಆತ್ಮಾನಂ ಸತತಂ ರಕ್ಷೇದ್ದಾರೈರಪಿ ಧನೈರಪಿ ॥ ” ಎಂದು ಸ್ಮೃತಿ ಹೇಳುವುದು; ಎಂದರೆ, ಆಪತ್ತಿಗಾಗಿ ಧನವನ್ನು ರಕ್ಷಿಸಬೇಕು; ಧನದಿಂದಲಾದರೂ ಹೆಂಡಿರನ್ನು ರಕ್ಷಿಸಬೇಕು. ಸರ್ವ ವಿಧದಿಂದಲೂ ಕೊನೆಗೆ ಹೆಂಡಿರಿಂದಲೂ ಧನದಿಂದಲೂ ತನ್ನನ್ನು ರಕ್ಷಿಸಿಕೊಳ್ಳಬೇಕು” ಎಂದು ಶ್ರುತಿಯೂ,‘ಸರ್ವತ ಏವಾತ್ಮಾನಂ ಗೋಪಾಯೇತ್’’ ಎಂದರೆ ಸರ್ವ ವಿಧದಿಂದಲೂ ತನ್ನನ್ನು ರಕ್ಷಿಸಿಕೊಳ್ಳಬೇಕು, ಎಂದು ವಿಧಿಸಿ, “ ತಸ್ಮಾದುಹ ನ ಪುರಾಯುಷಃ ಸ್ವಃಕಾಮೀ ಪ್ರೇಯಾತ್ ”, ಎಂದರೆ, “ ಆದುದರಿಂದ ಇಷ್ಟ ಸ್ವರ್ಗ ಕಾಮನಾದವನು ಆಯುಷ್ಯ ತುಂಬುವ ಮುನ್ನ ಸಾಯಲು ಕೂಡದು. ” ಎಂದು ನಿಷೇಧಿಸುವುದು; ಪ್ರಾಣ ಹೋಗುವ ಸಂಭವವೊದಗಿದರೆ ನಿಷಿದ್ಧ ಭಕ್ಷ್ಯವನ್ನೂ ಭಕ್ಷಿಸಿ ಬಿಡಬಹುದು ನಿಷಿದ್ಧ ಪೇಯವನ್ನೂ ಪಾನಮಾಡಿ ಬಿಡಬಹುದು;- ಈ ವಿಷಯವನ್ನು ಅನೇಕ ಪುರಾವೃತ್ತಾದಿಗಳು ಬೋಧಿಸುವುವು. ಸಾಧನವನ್ನು ಚೆನ್ನಾಗಿ ರಕ್ಷಿಸಿಕೊಳ್ಳದಿದ್ದರೆ ಸಾಧ್ಯಲಾಭವು ಸರಿಯಾಗಿ ಆಗುವುದಿಲ್ಲ. ಮಂಡಕತ್ತರಿಯಿಂದ ವಿಜಯಲಕ್ಷ್ಮಿಯನ್ನು ಆಲಿಂಗಿಸಿಕೊಳ್ಳಲು ಹೇಗೆ ಸಾಧ್ಯವಲ್ಲವೋ ಹಾಗೆ ಆಮಯಾದಿಗ್ರಸ್ತನಾದವನಿಗೆ ಅನೇಕ ಧರ್ಮಗಳು ಸಾಧ್ಯವಿಲ್ಲದೆ ಹೋಗುವುವು. ಧರ್ಮವೆಂದರೆ ಕೇವಲ ಆಮುಷ್ಮಿಕ ಸಿದ್ಧಿಯನ್ನು ಸಂಪಾದಿಸಿಕೊಡುವುದೆಂದು ಭಾವಿಸಕೂಡದು; ಯಾವುದರಿಂದ ಇಹದಲ್ಲಿ ಅಭ್ಯುದಯವೂ ಪರದಲ್ಲಿ ಮೋಕ್ಷವೂ ಸಿದ್ಧಿಸುವುದೋ ಅದೇ ಧರ್ಮವೆಂದು ವೈಶೇಷಿಕ ದರ್ಶನವು ಕೂಗುವುದು. ಧರ್ಮಶಾಸ್ತ್ರವೆಂದರೂ ಧರ್ಮಶಬ್ದಕ್ಕೆ ಧರ್ಮ, ಅರ್ಥ, ಕಾಮ ಮೋಕ್ಷ,—ಎಂಬ ನಾಲ್ಕು ಪುರುಷಾರ್ಥಗಳೆಂದೇ-ಅರ್ಥವು. ಸಕಲ ಪುರುಷಾರ್ಥಗಳಿಗೂ ಪ್ರಧಾನ ಸಾಧನವಾದ ದೇಹವನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದು ಎಲ್ಲರೂ ತಿಳಿದಿರುವುದು ಆವಶ್ಯಕವು; ಆದರೂ ಎಲ್ಲರೂ ಎಲ್ಲವನ್ನೂ ತಿಳಿದುಕೊಳ್ಳಲು ಸಾಧ್ಯವಲ್ಲ. ಮಹಾರೋಗಾದಿಗಳು ಪ್ರಾಪ್ತವಾದರೆ ವೈದ್ಯನ ಸಹಾಯವೇ ಬೇಕಾಗುವುದು. ಒಂದು ವೇಳೆ ತಾನೇ ವೈದ್ಯನಾದರೂ ದೈವಯೋಗದಿಂದ ಆತನಿಗೇನಾದರೂ ರೋಗಾದಿಗಳು ಪ್ರಾಪ್ತವಾದರೆ ಆಗ ಅವನ ಬುದ್ಧಿ ಜಡವಾಗುವುದರಿಂದ ಅವನ ಶಾಸ್ತ್ರಜ್ಞಾನವು ಅವನ ಸಹಾಯಕ್ಕೆ ಬರಲಾರದು. ಪರಾಪೇಕ್ಷೆಯಿರುವ ಕಾಲದಲ್ಲಿ ಇರಲೇಬೇಕು. ಮನುಷ್ಯನು ಯಾವಾಗಲೂ ಪರತಂತ್ರನಾಗಿಯೇ ಇರುವುದೂ ಅಯುಕ್ತವಾದುದರಿಂದ ಪರನಿರಪೇಕ್ಷೆಯ ಕಾಲಗಳೂ ಇದ್ದೇ ಇರುವುವು. ಮನುಷ್ಯನ ನಿತ್ಯಚರ್ಯೆಯೂ ಪರಾಪೇಕ್ಷೆಯನ್ನು ಕೋರದ ವಿಷಯಗಳಲ್ಲಿ ಒಂದು. ನಿತ್ಯಚರ್ಯೆ ಸರಿಯಾಗಿದ್ದರೆ ಮನುಷ್ಯನಿಗೆ ಅನಿಚ್ಛಾಪ್ರಾಪ್ತ ದುಃಖವೂ ಪರೇಚ್ಛಾಪ್ರಾಪ್ತ ದುಃಖವೂ ಬಂದರೆ ಬರಬಹುದೇ ಹೊರತು, ಸ್ವೇಚ್ಛಾಪ್ರಾಪ್ತ ದುಃಖವು ಬರಲೇ ಆರದು. ಆದುದರಿಂದ ಆ ನಿತ್ಯಚರ್ಯೆ ಹೇಗಿರಬೇಕೆಂಬ ವಿಷಯದಲ್ಲಿ ವೈದ್ಯಶಾಸ್ತ್ರಾದಿಗಳ ಮತವನ್ನನುಸರಿಸಿ ಸಂಕ್ಷೇಪಿಸಿ ನಾಲ್ಕು ಮಾತುಗಳನ್ನಾಡಬೇಕೆಂದು ನಮ್ಮ ಉದ್ದೇಶವಾಗಿರುವುದು. ಅಧಿಕ ವಿಷಯಗಳನ್ನು ಅಪೇಕ್ಷಿಸುವವರು ಗ್ರಂಥಗಳನ್ನೋದಿ ತಿಳಿಯಬಹುದು.

ಮೊದಲು, ಮನುಷ್ಯನು ಸೂರ್ಯೋದಯಕ್ಕೆ ಇನ್ನೂ ೪ ಗಳಿಗೆಗಳ ಹೊತ್ತು (೧ ಗಳಿಗೆಗೆ ೨೪ ‘ಮಿನಿಟ’; ೪ ಗಳಿಗೆಯೆಂದರೆ ೧ ಘಂಟೆ ೩೬ ‘ಮಿನಿಟ’ಗಳ ಕಾಲವು) ಇರುವಾಗಲೇ ಎದ್ದು ಬಿಡಬೇಕು. ಇದಕ್ಕೆ ಬ್ರಾಹ್ಮಮುಹೂರ್ತವೆಂದು ಹೆಸರು. ಕೆಲವರು ರಾತ್ರಿಯಿನ್ನೂ ಅರ್ಧಯಾಮವು (ಎಂದರೆ ೧॥ ಘಂಟೆಗಳ ಹೊತ್ತು; ಯಾಮಕ್ಕೆ ೩ ಘಂಟೆ) ಇರುವಾಗ ಏಳಬೇಕೆಂದು ಹೇಳುವರು. ಇನ್ನೂ ಕೆಲವರು, “ಪಂಚಪಂಚ ಉಷಃಕಾಲಃ” ಎಂದರೆ ೫೫ ಗಳಿಗೆಗೆ ಎಂದರೆ ರಾತ್ರಿ ಶೇಷವು ಇನ್ನು ೨ ಘಂಟೆಗಳಿರುವ ಹೊತ್ತಿಗೆ ಎದ್ದು ಬಿಡಬೇಕೆಂದೂ ೧॥ ಘಂಟೆಗಳಿರುವ ಹೊತ್ತಿನ ಮೇಲೆ ಮಲಗುವುದೇ ಯುಕ್ತವಲ್ಲವೆಂದೂ ಹೇಳುವರು. ಏಳುವಾಗ ‘ನಾರಾಯಣ’ ‘ಕೃಷ್ಣ’ ಎಂದು ಏಳುವುದು ಪೂರ್ವಪದ್ಧತಿಯಾಗಿರುವುದು. ಕೆಲವರು ಧ್ಯಾನಶ್ಲೋಕಗಳನ್ನು ಪಠಿಸುವರು, ಕೆಲವರು ಉದಯರಾಗಗಳೆಂಬ ಹಾಡುಗಳನ್ನು ಹೇಳುವರು:-ಇನ್ನೆಲ್ಲವೂ ಪರಮಾತ್ಮನ ಧ್ಯಾನದಲ್ಲಿ ಪರ್ಯವಸಾಯಿಯಾಗುವುವು. ಎದ್ದ ಕೂಡಲೇ ಪರಮಾತ್ಮಧ್ಯಾನವನ್ನು ಮಾಡ

ವುದು ದುಃಖಶಾಂತಿಕರವೆಂದು ನಮ್ಮ ಪೂರ್ವಿಕರ ಮತವು. ಇದನ್ನು ಮೂಢಾಚಾರವೆಂದು ತಿಳಿಯ ಕೆಲಸವಿಲ್ಲ; ಯಾವಾಗಲೇ ಆಗಲಿ, ಒಂದು ಕ್ಷಣ ಕಾಲವು ಪರಮಾತ್ಮಧ್ಯಾನವನ್ನು ಮಾಡಿದರೆ ಆಗುವ ಪ್ರಯೋಜನವು ಎಂತಹುದೇ ಆಗಲಿ, ಅದೃಷ್ಟ ಭಾಗ್ಯವು ಬೇರೆ ಹೋಗುವುದಿಲ್ಲ, ಮನಸ್ಸಿಗೇನೋ ಒಂದು ವಿಧದ ಶಕ್ತಿ ವಿಶೇಷವು ಬಂದೇ ಬರುವುದು. ದೇಹಕ್ಕೆ ಪುಷ್ಟಿಯೂ ಶಕ್ತಿಯೂ ಬರುವ ಅಭ್ಯಾಸಗಳನ್ನು ಪ್ರತಿದಿನವೂ ಇಟ್ಟುಕೊಳ್ಳಬೇಕೆಂದು ಸರ್ವರೂ ಅಂಗೀಕರಿಸುವರಷ್ಟೇ. ಹಾಗೆಯೇ ಮನಸ್ಸಿಗೂ ಶಕ್ತಿ ದಾರ್ಢ್ಯಾದಿಗಳು ಬರುವಂತೆ ಮಾಡಿಕೊಳ್ಳುವುದು ಅವಶ್ಯಕವು. ಮನಶ್ಶಕ್ತಿ ಚೆನ್ನಾಗಿದ್ದರೆ ದುರ್ಬಲವಾದ ದೇಹವೂ ಅನೇಕ ವೇಳೆಗಳಲ್ಲಿ ಸಬಲವಾದಂತೆ ಆಚರಿಸುವುದು. ಮನಸ್ಸಿಗೇನಾದರೂ ಉದ್ರೇಕಾದಿಗಳು ಬಂದರೆ ಹೇಡಿಯೇ ಧೀರನಿಗೂ ಅಧಿಕನಾಗಿ ಆಚರಿಸಿರುವ ವೃತ್ತಾಂತಗಳೇ ಈ ವಿಷಯವನ್ನು ದೃಢೀಕರಿಸುವುವು. ಹೀಗಿರಲು, ಮಾನಸಿಕ ಶಕ್ತಿ ವೃದ್ಧಿಹೊಂದುವಂತೆ ಮಾಡುವ ಉಪಾಯಗಳು ಅಪ್ರಯೋಜಕಗಳಲ್ಲ. ಬೆಳಗಿನ ಹೊತ್ತಿನಲ್ಲಿ ಸಂಚಾರವೂ ವ್ಯಾಯಾಮವೂ ದೇಹಕ್ಕೆ ಶಕ್ತ್ಯಾದಿಗಳನ್ನು ಹೆಚ್ಚಿಸುವುವಾಗಲು ಅದೇ ಹೊತ್ತಿನಲ್ಲಿ ಮನಸ್ಸಿಗೂ ದಾರ್ಢ್ಯಾದಿಗಳನ್ನು ತರುವ ಉಪಾಯಗಳೇನಾದರೂ ಇದ್ದರೆ ಅವು ಹೇಗೆ ತಿರಸ್ಕರಣೀಯಗಳಾಗುವುವು ? ಪರಮಾತ್ಮನ ಧ್ಯಾನವಾದ ಬಳಿಕ ಪಂಚಕನ್ಯಾಸ್ಮರಣವನ್ನು ಮಾಡುವುದೂ ಪದ್ಧತಿ. ನಿದ್ರೆಯಿಂದ ದೇಹೇಂದ್ರಿಯಗಳಿಗೆಲ್ಲವೂ ಸಂಪೂರ್ಣ ಶಾಂತಿಯುಂಟಾಗಿ ಮನಸ್ಸೂ ಪ್ರಸನ್ನವಾಗಿರಲು, ಆಗ ಮಹಾತ್ಮರಾದವರನ್ನೂ ಸ್ಮರಿಸುವುದರಿಂದ ತಾವೂ ಅವರಂತೆ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಬೇಕೆಂಬ ಉತ್ತೇಜನವು ಬಂದೇ ಬರುವುದು. ಚಿತ್ತವು ಕ್ಷುಬ್ಧವಾಗಿರುವ ಕಾಲದಲ್ಲಿ ಇಂತಹ ಸ್ಮರಣಗಳ ಪರಿಣಾಮಕ್ಕೂ ಚಿತ್ತವು ಪ್ರಸನ್ನವಾಗಿರುವ ಕಾಲದಲ್ಲಿ ಅವುಗಳ ಪರಿಣಾಮಕ್ಕೂ ಅಜಗಜನ್ಯಾಯವಿರುವುದು. ಆ ಸ್ಮರಣೆಯಾದ ಮೇಲೆ ಕಾಶಿಯನ್ನು ಸ್ಮರಿಸಿಕೊಂಡು “ ನಾನು ಕಾಶಿಗೆ ಹೋಗುವೆನು ” ಎನ್ನುವ ಮಾತನ್ನು ಉಚ್ಚರಿಸುವರು. ಇಷ್ಟೆಲ್ಲವೂ ತಿಳಿಯದವರು ಸುಮ್ಮನೆ ಕಾಶಿ ಕಾಶಿಯೆಂದೇ ಏಳುವುದೂ ಉಂಟು. ಕಾಶಿಯೆಂಬುದು ಅದ್ವಿತೀಯ ಪುಣ್ಯಕ್ಷೇತ್ರವೆಂದೂ ಅಲ್ಲಿಯ ವಾಸವೂ ಮರಣವೂ ನಿರುಪಮ ಫಲದಾಯಕಗಳೆಂದೂ ಪ್ರಾಯಕವಾಗಿ ನಮ್ಮವರ ಭಾವನೆ. ಆದುದರಿಂದ ಎದ್ದಕೂಡಲೇ ಸರ್ವೋತ್ತಮವಾದ ಪುರುಷಾರ್ಥಗಳನ್ನು ಸಂಪಾದಿಸಬೇಕೆಂದು ಜನರು ನಿತ್ಯವೂ ಭಾವಿಸುತ್ತಿದ್ದರೆ ಬಾಧಕವೇನು ? ಯಾವ ಪುರುಷಾರ್ಥವು ಸರ್ವೋತ್ತಮವಾದುದೆಂಬ ವಿಚಾರದಲ್ಲಿ ಒಬ್ಬೊಬ್ಬರು ಒಂದೊಂದು ದೇಶದಲ್ಲಿ ಒಂದೊಂದು ಕಾಲದಲ್ಲಿ, ಒಂದೊಂದು ವಿಧದ ಅಭಿಪ್ರಾಯವನ್ನು ಪಡಬಹುದು. ಆದರೆ ಯಾರಿಗೆ ಇಹದಲ್ಲಿ ಪುಣ್ಯವೂ ಪರದಲ್ಲಿ ಮೋಕ್ಷವೂ ನಿರುಪಮವಾಗಿ ಕಾಣುವವೋ ಅವರು ಅವೆರಡೂ ಎಲ್ಲಿ ಸುಲಭವಾಗಿ ದೊರೆವುವೋ ಅಲ್ಲಿಗೆ ಹೋಗಬೇಕೆಂದು ಬಯಸಿದರೆ ಅದರಲ್ಲಿ ಅತಿಶಯವೇನು? ಇದೆಲ್ಲವನ್ನು ಹೇಳಿದುದರಿಂದ ಎದ್ದಕೂಡಲೇ ಪರಮಾತ್ಮನಧ್ಯಾನವನ್ನು ಪುಣ್ಯಾತ್ಮರ ಸ್ಮರಣೆಯನ್ನು ನಿರುಪಮ ಪುರುಷಾರ್ಥವನ್ನು ಸಂಪಾದಿಸುವೆನೆಂಬ ಭಾವನೆಯನ್ನು ಮಾಡಬೇಕೆಂದು ಹೇಳಿದ ಹಾಗಾಯಿತು. ಅವರವರು ಅವರವರ ಪದ್ಧತಿಯನ್ನು ಸಂಪ್ರದಾಯವನ್ನು ಅನುಸರಿಸಿ ನಡೆಯಬಹುದು. ಇದು ಆಸ್ತಿಕ್ಯಬುದ್ಧಿಯುಳ್ಳವರ ಮಾತಾದರೂ ಇಂತಹ ಸ್ಥಳಗಳಲ್ಲಿ ಮನುಷ್ಯನಿಗೂ ಸ್ವಯಂ ಪ್ರಶಸ್ತ್ಯವಾದುದರಿಂದ ವಸ್ತು ಅನುಭವದೇ ಯಾಗಿಸಿಕೊಳ್ಳುವುದು. ಆದುದರಿಂದ ಇವೆಲ್ಲಯ ಹಿರಿಯರ ಕಾಲದ ಮಹಾಚರಣೆಯನ್ನು ಉಪದೇಶಿಸುವರೆಂದು ಗ್ರಂಥಕಾರರನ್ನು ಯಾರೂ ಆಕ್ಷೇಪಿಸ ಕೆಲಸವಿಲ್ಲ. ಬೆಳಗಿನ ಹೊತ್ತಿನಲ್ಲಿ ಸರ್ವೋತ್ತಮರಾದವರನ್ನು ಸ್ಮರಿಸುವ ಪ್ರಸಂಗ ತಮತಮಗೆ ಸ್ಪೃಹಣೀಯವಾದ ಪುರುಷಾರ್ಥವನ್ನು ಭಾವಿಸುವುದೂ ಮುಖ್ಯವು.

ಏಳುವಾಗ ಇಷ್ಟ್ಯಾಂತ. ಬೆಣ್ಣೆ, ಮೊಸರು, ತುಪ್ಪ, ಕನ್ನಡಿ, ಬಿಳಿಯ ಸಾಸಿವೆ, ಬಿಲ್ವ, ಗೋರೋಚನ, ಹೂವಿನ ಮಾಲೆ ಇವನ್ನು ನೋಡುವುದೂ ಮುಟ್ಟುವುದೂ ಶುಭವನ್ನುಂಟು ಮಾಡುವುದೆಂದು ಹೇಳುವರು. ದನಕರುಗಳನ್ನು ಸಾಕಿಕೊಂಡಿರುವವರು ಆ ಹೊತ್ತಿನಲ್ಲಿಯೇ ಮೊಸರನ್ನು ಕಡೆದು ಬೆಣ್ಣೆ ತೆಗೆಯುವುದೂ ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡುವುದೂ ಪದ್ಧತಿಯಾಗಿರುವುದು; ಕೆಲವು ಉದಯರಾಗಗಳು ಕೇವಲ ಗ್ರಾಮೀಣರಲ್ಲಿಯೇ ರೂಢವಾಗಿದ್ದರೂ ಈ ಅರ್ಥವನ್ನೇ ಬೋಧಿಸುವುವು ಇದು ಏನೋ ಅರ್ಥವಿಲ್ಲದೆ ಹೇಳಿದ ಮಾತೆಂದು ತಿಳಿಯಕೂಡದು. ಮೊಸರು ಉಷ್ಣವನ್ನು ದೀಪನವನ್ನೂ ವೃದ್ಧಿಮಾಡುವುದು; ಮೂತ್ರರೋಗ, ಶೀತವಿಕಾರಗಳು, ವಿಷಮಜ್ವರ, ಅತಿಸಾರ, ಅರುಚಿರೋಗ, ಕಾರ್ಶ್ಯ ಇಂತಹ ಬಾಧೆಗಳನ್ನು ನಿವಾರಿಸುವುದೂ ಅಲ್ಲದೆ ಬಲವನ್ನೂ ವೀರ್ಯವನ್ನೂ ವೃದ್ಧಿಗೊಳಿಸುವುದು. ಬೆಳಗಿನ ಹೊತ್ತು ಏನಾದರೂ ಪೇಯಗಳನ್ನು ಸೇವಿಸುವುದೂ ರೂಢಿಯಲ್ಲಿರುವುದಷ್ಟೇ; ಕೆಲವರು ಪ್ರಾತಃಕಾಲದಲ್ಲಿ ಕಡೆದ ಮೊಸರನ್ನು ತೆಗೆದುಕೊಳ್ಳುವರು. ಮೊಸರಿನ ಗುಣವು ಬೇರೆ ಬೇರೆಯಾಗುತ್ತಲೇ ಇರುವುದು ಹೆಪ್ಪುಹಾಕಿ ಮೊಸರಾಗುತ್ತ ಬರಲು ಕೊಂಚ ಹುಳಿಯಾಗಿರುವುದು; ಬಳಿಕ ಸಂಪೂರ್ಣ

ವಾಗಿ ಮಧುರವಾಗುವುದು; ಮತ್ತೆ ಹುಳಿ_ಸವಿ ಬೆರೆದಂತಿರುವುದು; ಆಮೇಲೆ ಹುಳಿಯಾಗುವುದು; ಕೊನೆಗೆ ಸಂಪೂರ್ಣವಾಗಿ ಹುಳಿಯಾಗುವುದು. ಈ ಅಯ್ದು ಸ್ಥಿತಿಯಲ್ಲಿಯೂ ಮೊಸರನ್ನು ಸೇವಿಸಬಹುದು; ಇದನ್ನು ಕಾಲಕ್ಕೆ ಹೆಪ್ಪಿಟ್ಟರೆ ಬುತ್ತಿಕಟ್ಟಿ ಕೆಲಸಕ್ಕೆ ಬಾರದೆ ಹೋಗುವುದು. ರಾತ್ರಿಯಲ್ಲಿ ಹೆಪ್ಪು ಹಾಕಿದ ಹಾಲು ಬ್ರಾಹ್ಮಮುಹೂರ್ತದ ಹೊತ್ತಿಗೆ ಚನ್ನಾಗಿ ಮೊಸರಾಗಿ ಎರಡನೆಯ ಸ್ಥಿತಿಯಲ್ಲಿರುತ್ತದೆ. ಅದು ಮಲವನ್ನು ಸಡಲಿಸುವುದು, ಭೋಗೇಚ್ಛೆಯನ್ನು ಹೆಚ್ಚಿಸುವುದು; ಮೇದೋಭಿವೃದ್ಧಿಯನ್ನು ಮಾಡುವುದು, ವಾತವನ್ನು ಹೊಡೆವುದು. ತುಪ್ಪವು ಕಣ್ಣಿಗೆ ಹಿತಕಾರಿಯಾಗಿರುವುದು; ಅಗ್ನಿದೀಪನವನ್ನು ಮಾಡುವುದು; ವಿಷವನ್ನೂ ತೇಜೋಹೀನತೆಯನ್ನೂ ಪಿತ್ತವನ್ನೂ ವಾಯುವನ್ನೂ ಹೊಡೆವುದು; ಮಲವನ್ನೂ ಕೊಂಚ ಸಡಲಿಸುವದು; ಕಾಂತಿ, ಓಜಸ್ಸು, ತೇಜಸ್ಸು, ಲಾವಣ್ಯ, ಬುದ್ಧಿ ಇವನ್ನು ಹೆಚ್ಚಿಸುವುದು; ಸ್ವರವನ್ನು ಚೆನ್ನಾಗುವಂತೆ ಮಾಡುವುದು; ಸ್ಮರಣಶಕ್ತಿಯನ್ನೂ ಹೆಚ್ಚಿಸುವುದು; ಆಯುಸ್ಸನ್ನೂ ಬಲವನ್ನೂ ಹೆಚ್ಚಿಸುವುದು; ಉನ್ಮಾದ, ಶೂಲ, ಜ್ವರ ಇವನ್ನು ಹೋಗಲಾಡಿಸುವುದು; ಕ್ಷಯ, ತುರಿ, ರಕ್ತವಿಕಾರ ಇವನ್ನು ಹೋಗಲಾಡಿಸುವುದು. ಜೇನು ಹಾಸಿಗೆ, ಉಷ್ಣವನ್ನು ಹೆಚ್ಚಿಸುವುದು, ಶ್ಲೇಷ್ಮವನ್ನೂ ವಾತವನ್ನೂ ನಾಶಮಾಡುವುದು: ರಕ್ತ, ಪಿತ್ತ, ಜಠರಾಗ್ನಿ ಇವು ವರ್ಧಿಸುವಂತೆ ಮಾಡುವುದು. ನವೆ, ಕುಷ್ಠ, ಕ್ರಿಮಿ ಇವನ್ನು ನಾಶ ಮಾಡುವುದು; ಬಿಲ್ವವು ಹೊಟ್ಟೆಕಚ್ಚು, ಶ್ಲೇಷ್ಮ, ವಾತ, ಆಮ, ಶೂಲ ಇವನ್ನು ನಾಶಮಾಡುವುದು. ಗೋರೋಚನವು ಶೀತಳವಾದುದು, ಬಲಕಾರಕವಾದುದು, ಕಾಂತಿಯನ್ನು ಕೊಡುವುದು, ವಿಷವನ್ನು ಹೊಡೆವುದು, ಮುಖದ ಅಲಕ್ಷ್ಮಿಯನ್ನು ಹೋಗಲಾಡಿಸುವುದು. ಕನ್ನಡಿಯಿಂದಾಗುವ ಪ್ರಯೋಜನಗಳನ್ನು ಹೊಸದಾಗಿ ಹೇಳಬೇಕಾದುದಿಲ್ಲ. ಹೂವನ್ನು ನೋಡುವುದರಿಂದ ಮನಸ್ಸಿಗೆ ಆಹ್ಲಾದವಾಗುವುದು. ಎದ್ದ ಕೂಡಲೆ ದೇವತಾ ಪೂಜಾರ್ಥವಾಗಿ ಹೂ ತುಳಸಿಗಳನ್ನು ತರಲು ಅನೇಕರು ಹೋಗುವರು; ಹೊಸತಾಗಿ ಬಿಟ್ಟಿರುವ ಹೂಗಳನ್ನು ಆ ಕಾಲದಲ್ಲಿ ನೋಡುವುದರಿಂದಲೂ ಸ್ಪರ್ಶಿಸುವುದರಿಂದಲೂ ಅಧಿಕವಾದ ಪ್ರಯೋಜನವಾಗುವುದು. ಇಷ್ಟರೂ ಬಂಧುಗಳೂ ನಮಗೆ ನಿರಂತರವೂ ಸಹಾಯ್ಯ ಮಾಡದೆ ಇದ್ದರೂ ಅವರು ಕೇವಲ ಸಮೀಪಗತರಾಗಿದ್ದರೆ ಅವರನ್ನು ನೋಡುವುದರಿಂದಲೇ ಮನಸ್ಸಿಗೆಷ್ಟೋ ಆಪ್ಯಾಯನವಾಗುವುದು. ಸ್ಪರ್ಶನದಿಂದ ದರ್ಶನಕ್ಕೂ ಅಧಿಕತರವಾದ ಪ್ರಯೋಜನವಾಗುವುದು. ಸ್ಪರ್ಶೇಂದ್ರಿಯವು ಸರ್ವವ್ಯಾಪಿಯಾಗಿರುವುದು; ಇತರೇಂದ್ರಿಯಗಳ ವ್ಯಾಪಾರಕ್ಕೂ ಸ್ಪರ್ಶನವೇ ಪ್ರಧಾನವಾಗಿರುವುದು; ಈಗ ಕಿರಣಗಳು ಕಣ್ಣನ್ನು ಸ್ಪರ್ಶಿಸಿದಲ್ಲದೆ ರೂಪಜ್ಞಾನ ಹುಟ್ಟುವುದಿಲ್ಲ; ಶಬ್ದಮಯವಾದ ವಾಯುಪರಮಾಣುಗಳು ಕಿವಿಯನ್ನು ಸ್ಪರ್ಶಿಸಿದಲ್ಲದೆ ಶಬ್ದಜ್ಞಾನ ಹುಟ್ಟುವುದಿಲ್ಲ; ಗಂಧವನ್ನು ಬೀರುವ ಪರಮಾಣುಗಳು ಮೂಗನ್ನು ಸ್ಪರ್ಶಿಸಿದಲ್ಲದೆ ರಸಜ್ಞಾನ ಹುಟ್ಟುವುದಿಲ್ಲ; ಈ ರೀತಿಯಲ್ಲಿ ಸ್ಪರ್ಶನವೆಂಬುದು ಇತರೇಂದ್ರಿಯಗಳಿಗೂ ಸಹಕಾರಿಯಾಗಿರುವುದು. ಆದುದರಿಂದ ಉತ್ತಮವಾದ ಪದಾರ್ಥವನ್ನು ಸ್ಪರ್ಶಿಸುವುದರಿಂದ ಅದರ ಗುಣವು ದೇಹವಾದ್ಯಂತವೂ ವ್ಯಾಪಿಸುವುದು. ಪ್ರತಿದಿನವೂ ಅತ್ಯುತ್ಕೃಷ್ಟವಾದ ದಿವಸದ ಭಾಗದಲ್ಲಿ ಮನಸ್ಸೆಲ್ಲವೂ ಪ್ರಸನ್ನವಾಗಿರುವಾಗ ಇಂತಹ ಪ್ರಯೋಜನವು ಸ್ವಲ ಸ್ವಲ್ಪವಾಗಿ ಆಗುತ್ತಿದ್ದರೆ ದೇಹವು ನಿರೋಗವಾಗಿಯೂ ಬಲ, ಶಕ್ತಿ, ಕಾಂತಿ, ಮೊದಲಾದ ಗುಣಗಳಿಂದ ಕೂಡಿದುದಾಗಿಯೂ ಸುರಕ್ಷಿತವಾಗಿರುವುದರಲ್ಲಿ ಸಂದೇಹವಿಲ್ಲ. ಇದರ ಮೇಲೆ ಎದ್ದ ಕೂಡಲೇ ತುಪ್ಪದಲ್ಲಿ ಮುಖವನ್ನು ನೋಡಿಕೊಂಡರೆ ಆಯುರ್ವೃದ್ಧಿಯೆಂದು ಹೇಳುವರು; ಬೆಣ್ಣೆಯನ್ನು ಕಾಯಿಸಿ, ತುಪ್ಪವನ್ನು ಮಾಡುವವರಿಗೆ ಈ ಪ್ರಯೋಜನವು ನಿರಾಯಾಸವಾಗಿ ಲಭಿಸುತ್ತಲೇ ಇರುವುದು. ಎದ್ದ ಕೂಡಲೇ ಹಸುವ ಮುಖವನ್ನೂ ಮಕ್ಕಳ ಮುಖವನ್ನೂ ನೋಡುವುದುಂಟು. ಹಸು ಅತ್ಯಂತ ಸಾಧುವಾದ ಪ್ರಾಣಿ; ಕಸವನ್ನು ತಿಂದು ರಸವನ್ನು ಹಿಂಡಿ ಲೋಕಕ್ಕೆ ಮಹೋಪಕಾರಮಾಡುವುದು. ಋಗ್ವೇದವೂ ಕೂಡ ಹಸುವನ್ನು—

> ಮಾತಾ ರುದ್ರಾಣಾಂ ದುಹಿತಾವಸೂನಾಂ ಸ್ವಸಾದಿತ್ಯಾನಾಮ
> ಮೃತಸ್ಯನಾಭಿಃ ।
> ಪ್ರನುವೋಚಂಚಿಕಿತುಷೇಜನಾಯಮಾಗಾಮನಾಗಾಮದಿತಿಂ
> ವಧಿಷ್ಟ ॥
> ವಚೋವಿದಂವಾಚ ಮುದೀರಯನ್ತೀಂ ವಿಶ್ವಾಭಿರ್ಧೀಭಿರು
> ಪತಿಷ್ಠಮಾನಾಮ್ ।
> ದೇವೀಂ ದೇವೇಭ್ಯಃ ಪರ್ಯೇಯುಷೀಂಗಾಮಾ ಮಾವೃಕ್ತ
> ಮರ್ತ್ಯೋದಭ್ರಚೇತಾಃ ॥
>
> (ಅ. ೬, ಅ.೭, ವ.೮, ಋ.೧೫-೬)

ಎಂದರೆ, ಹಸು ರುದ್ರ ಪುತ್ರರಾದ ಮರುತ್ತುಗಳಿಗೆ ಜನನಿ; ವಸುಗಳ ಪುತ್ರಿ; ಆದಿತ್ಯರುಗಳ ಸ್ವಸೃ; ಅಮೃತದ (ಹಾಲಿನ) ಆವಾಸಸ್ಥಾನವು; ಇಂತಹ ನಿರಪರಾಧಿನಿಯೂ ಅದೀನೆಯೂ ಆದ ಹಸುವನ್ನು ಹಿಂಸಿಸಬೇಡಿರಿ-ಎಂದು ನಾನು ಚೇತನಾಯುಕ್ತ ಜನಕ್ಕೆ ಹೇಳಿದೆನಲ್ಲವೇ. ವಚೋವಿದವಾದ ಮಾತನ್ನಾಡುತ್ತ ಸಮಸ್ತವಾದ ವಾಕ್ಯಗಳಿಂದಲೂ ಉಪತಿಷ್ಠಮಾನೆಯೂ ದ್ಯೋತಮಾನೆಯೂ ಆಗಿ ದೇವತೆಗಳಿಗಾಗಿ

ಅವತರಿಸುವ ಗೋವಾದ ನನ್ನನ್ನು ಅಲ್ಪಬುದ್ಧಿಯುಳ್ಳ ಮನುಷ್ಯನು ಹಿಂಸಿಸುವನು' ಎಂದು ಹಸುವನ್ನು ಕೊಂಡಾಡುವುದು. ಇದರಿಂದ ಪಶು ಅನಾದಿ ಕಾಲದಿಂದಲೂ ನಮಗೆ ಪೂಜ್ಯವಾದುದಾಗಿ ಬಂದಿರುವುದೆಂದು ಸಿದ್ಧವಾಗುವುದು. ಹಸುವಿನ ಜೀವಿತದಿಂದ ಲೋಕಕ್ಕೆ ಅವಿಚ್ಛಿನ್ನವಾದ ಪ್ರಯೋಜನವು ಆಗುತ್ತಲೇ ಇರುವುದು. ಇಂತಹ ಪ್ರಾಣಿಯ ಮುಖವನ್ನು ಎದ್ದ ಕೂಡಲೇ ನೋಡುವುದರಿಂದ ಮನಸ್ಸಿಗೆ ಉಲ್ಲಾಸವಾಗದಿರುವುದೆಂದರೇನು? ಸಂತೋಷವೇ ನಿರುಪಮವಾದ ಪುರುಷಾರ್ಥವೆಂದು ಹೇಳಬಹುದು. ದುಃಖಗಳು ನಿವೃತ್ತಿಹೊಂದಿದರೆ ಅದೇ ಮೋಕ್ಷವೆಂದು ಸಾಂಖ್ಯಮತವು; ಆನಂದ ಪ್ರಾಪ್ತಿಯೇ ಮೋಕ್ಷವೆಂಬುದು ವೈದಿಕ ಮತವು. ಉಲ್ಲಾಸವೆಂಬುದು ದುಃಖದ ಕೊಯು ಮರೆಯೆಂದಾಗಲೀ ಆನಂದದ ಛಾಯೆಯೆಂದಾಗಲೀ ಹೇಳಿದರೆ [illegible] ತಪ್ಪುವುದು. ಮಕ್ಕಳ ಮುಖವನ್ನು ನೋಡುವುದರಿಂದಲೂ ಉಲ್ಲಾಸವೇ ಆಗುವುದು. ಮಕ್ಕಳು ಯಾವಾಗಲೂ ವಿನೋದವನ್ನು ಬಯಸುವರು; ದೊಡ್ಡವರನ್ನು ಉಪದ್ರವ ಪಡಿಸುವ ಅನೇಕ ಸಂದರ್ಭಗಳು ಮಕ್ಕಳ ಹೃದಯದ ಮೇಲೆ ಯಾವ ಪರಿಣಾಮವನ್ನೂ ಮಾಡಲಾರವು. ಕಷ್ಟಸುಖಗಳೆಂದರೇನೆಂದರಿಯದೆ ನಿರಾಲೋಚನೆಯಿಂದ ವರ್ತಿಸುವ ಅವರಿಗೆ ಚೆನ್ನಾಗಿ ನಿದ್ರೆ ಬರುತ್ತ ಏಳುವ ಹೊತ್ತಿಗೆ ಮುಖವು ಸಂತೋಷವನ್ನು ತೋರುತ್ತ ಮುದ್ದುಮುದ್ದಾಗಿರುವುದು. ಅಂತಹ ಮಕ್ಕಳ ಮುಖವನ್ನು ನೋಡುವುದರಿಂದ ಉಲ್ಲಾಸವಾಗಿಯೇ ಆಗುವುದು. ಹಾಗೆಯೇ ಬೆಳ್ಳಿ ಮೊದಲಾದುವನ್ನು ಕಾಣುವುದೂ ಯಾವ ಸ್ಥಿತಿ ಕೇವಲ ಶ್ವೇತವಾಗಿ ಸ್ಫೂರ್ತಿಗೊಂಡ ದುಃಖದಂತೆ ಕಾಣುವರೋ ಅವರನ್ನು ನೋಡುವುದೂ ಶುಭಪ್ರದವಾಗಿ ಭಾವಿಸಲ್ಪಡುವುದಿಲ್ಲ. ಬೆಕ್ಕಿಗೆ ಕ್ರೌರ್ಯವೂ ವಂಚನೆಯೂ ಹೆಚ್ಚು; ಎದ್ದ ಕೂಡಲೇ ಅಂತಹ ಪ್ರಾಣಿಗಳನ್ನು ನೋಡಿದರೆ ಮನಸ್ಸಿಗೆ ಆಗಬೇಕಾದ ಉಲ್ಲಾಸವು ಆಗುವುದಿಲ್ಲವೆಂದರೆ ತಪ್ಪೇನು? ಈಗ ಹೇಳುತ್ತಿರುವುದು ಜನಸಾಮಾನ್ಯವಾದ ನಡೆವಳಿಯೇ ಹೊರತು ಪ್ರಪಂಚವನ್ನೆಲ್ಲಾ ಶುದ್ಧ ಬ್ರಹ್ಮಾತ್ಮಕವಾಗಿ ತಿಳಿವ ವೇದಾಂತಿಗಳ ಮಾತಲ್ಲ. ಯಾರಿಗೆ ಸುಖವೂ ದುಃಖವೂ ಹರ್ಷವೂ ಶೋಕವೂ-ಇತ್ಯಾದಿಯಾದ ಎಲ್ಲಾ ದ್ವಂದ್ವಭಾವಗಳಿರುವುವೋ ಅವರು ತಮ್ಮ ತಮ್ಮ ಸ್ಥಿತಿಗೆ ತಕ್ಕಂತೆ ವರ್ತಿಸುವುದೇ ಯುಕ್ತವು. ಹಾಗೆಯೇ ಎದ್ದ ಕೂಡಲೇ ಬಯ್ಯುವುದು, ದೂರುವುದು, ಮೊದಲಾದುವನ್ನು ನಿಷೇಧಿಸುವರು; ಎಡವಿದರೂ, ಜಾರಿದರೂ, ಮುಗ್ಗರಿಸಿದರೂ, ತಲೆ ತಗಲಿಸಿಕೊಂಡರೂ, ಬಿದ್ದರೂ, ಮತ್ತೆ ಮಲಗಿಕೊಂಡು ಆ ಆ ಕಾರ್ಯದಿಂದ ಚಿತ್ತಕ್ಕೆ ಸಂಭವಿಸಿದ ಪರಿಣಾಮವು ನಿವೃತ್ತಿ ಹೊಂದಿದ ಬಳಿಕ ಮತ್ತೆ ಎದ್ದು ಉಲ್ಲಾಸ ಪ್ರಾಪ್ತಿಯಾಗುವ ಮಾರ್ಗವನ್ನು ಹಿಡಿವರು. ಇವನ್ನೆಲ್ಲಾ ವಿಮರ್ಶಿಸಿ ಗುಣಾವಗುಣಗಳನ್ನು ನಿರ್ಣಯಿಸಬಹುದಾದರೂ ಗ್ರಂಥವಿಸ್ತರ ಭಯದಿಂದ ಇಲ್ಲಿಯೂ ಅವರವರೇ ವಿಚಾರ ಮಾಡಲೆಂದೂ ವಿಚಾರ ಮಾಡಿದವರಿಗೆ ಗುಣಗಳು ತೋರಬಹುದೆಂದೂ ಸೂಚಿಸಿದೆ.

ಉಷಃಕಾಲದಲ್ಲಿಯೇ ಮಲಮೂತ್ರ ವಿಸರ್ಜನೆ ಮಾಡುವುದನ್ನು ಪೂರ್ವರ ಪದ್ಧತಿ. ಇದರಿಂದ ಹೊಟ್ಟೆಕೆಡುವುದೂ, ಜ್ವರಿಸಿಕೊಳ್ಳುವುದೂ, ಭಾರವಾಗಿರುವುದೂ ಕಾಲಗ್ರಸ್ತವಾಗಿರುವುದೂ ನಿವೃತ್ತವಾಗುವುವು. ಮಲವಾಗಲಿ ಮೂತ್ರವಾಗಲಿ ದೇಹವನ್ನು ಬಿಡುವುದಕ್ಕೆ ಸಿದ್ಧವಾದ ಕೂಡಲೇ ಅವನ್ನು ವಿಸರ್ಜಿಸಬೇಕೆಂಬ ಶಾಸ್ತ್ರವಿರುವುದು: ಇದಕ್ಕೆ ಮಲದ [illegible] ದೂ ಮೂತ್ರದ ವೇಗವೂ [illegible] ಸಂಭವವಾಗಿರುವುವು. ಉಷಃಕಾಲದಲ್ಲಿಯೇ ಆಗಲಿ ಇತರಕಾಲದಲ್ಲಿಯೇ ಆಗಲಿ, ಈ ವೇಗಗಳನ್ನು, ತಡೆಯಕೂಡದು. ಮಲದ ವೇಗವನ್ನು ತಡೆದರೆ ಹೊಟ್ಟೆಯುಬ್ಬಿಕೊಳ್ಳುವುದು, ಶೂಲೆ [illegible] ಗುದಸ್ಥಾನದಲ್ಲಿ ಕತ್ತರಿಸುವಂತಹ ಬಾಧೆಯಾಗುವುದು, ತಲೆ ಹೆಚ್ಚುವುದು, ಪುರೀಷವು ಸದ್ವಾರದಿಂದ ನಿವೃತ್ತವಾಗದೆ ಅನ್ಯಮಾರ್ಗವನ್ನು ಹುಡುಕುವುದು. ಇದರ ಪರಿಣಾಮವಾಗಿ ಪುರೀಷವು ರೂಪಾಂತರವನ್ನು ಹೊಂದಿ ಬಾಯಿಯ ದ್ವಾರಕ್ಕೆ ಬರುವುದು; ಇದರಿಂದ ಉಸಿರು ದುರ್ಗಂಧವುಳ್ಳದಾಗಿ ಬಾಯಿ ವಾಸನೆಯುಳ್ಳದ್ದಾಗುವುದು. ಕೆಲವು ವೇಳೆ ಅಧೋವಾಯು ಸಡಿಲುವುದು; ಎಲ್ಲರ ಮುಂದೆಯೂ ಅಧೋವಾಯುವನ್ನು ಸಶಬ್ದವಾಗಿ ಬಿಡುವುದೂ ನಿಕೃಷ್ಟವಾದದ್ದೂ ಎಲ್ಲರಿಗೂ ದುರ್ಗಂಧವನ್ನುಂಟುಮಾಡುವ, ಬಿಡುವವರಿಗೆ ಲಜ್ಜಾವಿಶೇಷಕ್ಕೆ ಕಾರಣವಾಗುವುದು. ಇದರಿಂದ ಅನೇಕರು ಇದನ್ನು ತಡೆವುದಕ್ಕೆ ಯತ್ನಿಸುವರು. ಅಧೋವಾಯುವನ್ನು ತಡೆವುದರಿಂದ ಹೊಟ್ಟೆಯುಬ್ಬರಿಸಿಕೊಳ್ಳುವುದು; ಮಲೋ [illegible] ವಿಫದ ಒಳಲಿಕೆಯಾದಂತಾಗುವುದು; ನೋವು ಹುಟ್ಟುವುದು, ಹೊಟ್ಟೆಯಲ್ಲಿ ವಾತಜನ್ಯವಾದ ಅನೇಕ ರೋಗಗಳು ಹುಟ್ಟುವುವು. ಆದುದರಿಂದ ಅಧೋವಾಯುವಿನ ವೇಗವು ಕಾಣಬಂದರೆ ಮೆಲ್ಲಗೆದ್ದು ನಿರ್ಜನಸ್ಥಾನಕ್ಕೆ ಹೋಗಿ ಆ ಬಾಧೆಯನ್ನು ಪರಿಹರಿಸಿಕೊಂಡು ಬರುವುದು ಸರ್ವೋತ್ತಮವು. ಮೂತ್ರದ ವೇಗವನ್ನು ತಡೆವುದರಿಂದ ಮೂತ್ರಾಶಯದಲ್ಲಿಯೂ ಮೂತ್ರವಿಸರ್ಜನ ದ್ವಾರದಲ್ಲಿಯೂ ಶೂಲೆಗೆ ಕಾರಣವಾಗುವುದು; ಮೂತ್ರಕೃಚ್ಛ್ರವೆಂಬ ರೋಗವು ಹುಟ್ಟುವುದು, ಮೂತ್ರಕೃಚ್ಛ್ರವೆಂದರೆ ಮೂತ್ರವಿಸರ್ಜನ ಕಾಲದಲ್ಲಿ ಉರಿಮೊದಲಾದ

ನಾನಾಬಾಧೆಗಳಾಗುವುವು. ತಲೆನೋವಿಗೆ ಕಾರಣವಾಗುವುದು; ದೇಹವೆಲ್ಲವೂ ಕಾದು ಹೋದಂತೆ ಕಾಣುವುದು; ಕಿಬ್ಬೊಟ್ಟೆಯಲ್ಲಿ ಒಂದು ವಿಧದ ಸೆಳೆತದ ಬಾಧೆಗೆ ಕಾರಣವಾಗುವುದು. ಒಂದೇವಾಪ್ರವೃತ್ತಿ ಈ ರೋಗವನ್ನು ತಡೆವುದರಿಂದ ಹುಟ್ಟಿದರೆಬಹುದು; ಆದರೆ, ಮೂತ್ರಪ್ರವೃತ್ತಿ ತಡೆವುದರಿಂದ ಇಂದ್ರಿಯವು ... ಹಾನಿ ಮಾಡಕೊಳ್ಳುತ್ತ ... ಪ್ರವೃತ್ತಿಯೂ ಬರುತ್ತ ಬರುತ್ತ ಅದೇ ದುಸ್ಸ್ವಭಾವವೂ ಹುಟ್ಟುವದು. ಹೀಗೆ ಹೇಳುವದರಿಂದ ಮಲಮೂತ್ರಾದಿಗಳು ದೇಹದಲ್ಲಿ ಒಂದು ಕ್ಷಣವೂ ನಿಲ್ಲಕೊಡದೆಂದೂ ಅವು ಉತ್ಪನ್ನವಾದ ಕೂಡಲೆ ವಿಸರ್ಜಿಸಿ ಬಿಡಬೇಕೆಂದೂ ತಿಳಿಯಕೂಡದು. ಮಲಮೂತ್ರಗಳು ದೇಹದಲ್ಲಿ ಉತ್ಪನ್ನವಾಗುತ್ತಲೇ ಇದ್ದರೂ ರೋಗವು ಕಾರ್ಯಗಳಿಗೆ ಹೊರಲು ಅವನ್ನು ವಿಸರ್ಜಿಸುವುದಕ್ಕೆ ಯತ್ನ ಮಾಡಕೂಡದು; ರೋಗವು ಹುಟ್ಟಿದರೂ ಎಷ್ಟು ಪ್ರಮಾಣದ ಮಲಾದಿಗಳು ವಿಸರ್ಜನೆಗೆ ಅವಶ್ಯಕವಾಗಿರುವವೋ ಅಷ್ಟನ್ನೇ ವಿಸರ್ಜಿಸಬೇಕಲ್ಲದೆ ಬಲಾತ್ಕಾರದಿಂದ ಹೆಚ್ಚು ಹುಟ್ಟುವಂತೆ ಮಾಡಗೊಡದು. ಎಂದರೆ, ಬೇಕಿ ಮಲವಿಸರ್ಜನ ಮಾಡುವುದೇ ರೋಗವಾದ ... ಗಳು ಸಾಯಲ್ಲ. ಇವೆಲ್ಲವೂ ದೇಹಜನ್ಯವಾದ ರೋಗಗಳು; ಮನೋಜನ್ಯವಾದ ರೋಗಗಳು ಕೆಲವಿರುವವು. ದೇಹಜನ್ಯಗಳಾದ ರೋಗಗಳನ್ನು ತಡೆವುದು ಅಯುಕ್ತವಾದರೆ ಮನೋಜನ್ಯಗಳಾದ ರೋಗಗಳನ್ನು ತಡೆವುದು ಯುಕ್ತವೇ ಸರಿ. ಉದಾಹರಣೆಗಾಗಿ ಕಾಮ, ಶೋಕ, ಭಯ, ಕ್ರೋಧ,— ಇತ್ಯಾದಿಗಳು ಮನೋವೇಗಗಳೆನಿಸಿಕೊಳ್ಳುವವು; ಇವನ್ನು ಎಷ್ಟು ತಡೆದರೆ ಅಷ್ಟು ಪ್ರಯೋಜನವಿರುವುದು. ಮನಶ್ಶಕ್ತಿಯೆಂಬುದು ದೇಹಶಕ್ತಿಗೂ ಅಧಿಕತರವಾದುದು; ಮನಶ್ಶಕ್ತಿ ಚೆನ್ನಾಗಿದ್ದರೆ ದೇಹಶಕ್ತಿ ಎಷ್ಟು ಕುಂಠಿತವಾಗಿದ್ದರೂ ಬಾಧಕವಾಗಲಾರದು. ಮನಶ್ಶಕ್ತಿಯನ್ನು ಯಾವಾಗಲೂ ವೃದ್ಧಿಗೊಳಿಸುವ ಯತ್ನವನ್ನೇ ಮಾಡುತ್ತಿರಬೇಕು; ಮನಶ್ಶಕ್ತಿಯುಳ್ಳವರೇ ದೀರ್ಘಾಯುಗಳು; ಅವರೇ ಬಲಿಷ್ಠರು; ಅವರೇ ಆರೋಗ್ಯಶಾಲಿಗಳು; ಅವರೇ ಸಕಲ ಪುರುಷಾರ್ಥಗಳನ್ನೂ ಅನುಭವಿಸುವರು. ಮನೋವೇಗವನ್ನು ಸಂಪೂರ್ಣವಾಗಿ ತಡೆವುದು ಯೋಗಿಗಳಿಗೂ ಸಾಧ್ಯವಲ್ಲದುದರಿಂದ ಅದನ್ನು ಎಲ್ಲಿಯವರೆಗಾದರೆ ಅಲ್ಲಿಯವರೆಗಾದರೂ ತಡೆಯಬೇಕೆಂಬ ನಿಯಮವನ್ನು ಸರ್ವರೂ ಅನುಸರಿಸುವುದು ಯುಕ್ತವು. ಇನ್ನೊಬ್ಬನು ಕೋಪಾವೇಶದಿಂದ ಮಾತನ್ನಾಡಿದರೆ ನಮಗೂ ಕೋಪವು ರೇಗುವುದು ಸಹಜವು; ಅಲ್ಲಿಗೆ ಇಬ್ಬರದೂ ಸಮವಾಗುವುದು, ಒಬ್ಬನದು ಹೆಚ್ಚಲ್ಲ, ಇನ್ನೊಬ್ಬನದು ಕಡಿಮೆಯಿಲ್ಲ. ಆದರೆ, ರೇಗಾಡುವ ಮನುಷ್ಯನೊಡನೆ ಶಾಂತಸ್ವಭಾವದಿಂದ ವರ್ತಿಸಿದರೆ ಅವನೇ ನಾಚಿಕೊಂಡು ಸುಮ್ಮನಾಗುವ ಸಂಭವವಿರುವುದು, ನೋಡಿದವರೂ ಅವನನ್ನೇ, ಛೀ-ಎನ್ನುವರು. ಕೆಲವರಾದರೆ ಇನ್ನೊಬ್ಬನು ರೇಗಾಡುವುದಕ್ಕೆ ಸೊದರಿಮ್ಮಡಿಸದರೆ ತಾವು ಸುಮ್ಮನಿದ್ದುಬಿಟ್ಟ ಪಕ್ಷದಲ್ಲಿ ಅದೇ ಸೋ ತಮ್ಮ ಅಯೋಗ್ಯತೆಯೆಂದು ಭಾವಿಸಲ್ಪಡುವುದೆಂದು ತಿಳಿವರು; ಅದು ಯುಕ್ತವಲ್ಲ. ಎಂದರೆ, ತಾವು ಯಾವಾಗಲೂ ದೈನ್ಯವೃತ್ತಿಯನ್ನೇ ಅವಲಂಬಿಸಬೇಕೆಂದು ತಿಳಿಯಕೂಡದು. ಮನುಷ್ಯನು ಯಾವಾಗಲೂ ಸ್ವಗಾಂಭೀರ್ಯವನ್ನೂ ಸ್ವಗೌರವವನ್ನೂ ಸ್ವತೇಜಸ್ಸನ್ನೂ ಕಳೆದುಕೊಳ್ಳಕೂಡದು; ತನ್ನನ್ನು ತಾನು ಅಯೋಗ್ಯನೆಂದು ಭಾವಿಸಲೇ ಕೂಡದು; ಪ್ರಪಂಚವೆಲ್ಲವೂ ತನ್ನನ್ನು ಪ್ರತೀಪಿಸಿದರೂ ತಾನೊಬ್ಬನೇ ಅದೆಲ್ಲವನ್ನೂ ತೃಣೀಕರಿಸಲು ಶಕ್ತನೆಂಬ ಧೈರ್ಯವೂ ಗುಂಡಿಗೆಯೂ ಎಲ್ಲರಿಗೂ ಇರಬೇಕು, ಆದರೆ ಮಾತಿನಲ್ಲಿ ಸ್ವಗಾಂಭೀರ್ಯವನ್ನು ತ್ಯಜಿಸಕೂಡದು, ಪರಿಹಾಸದಲ್ಲಿಯೂ ... ತನದ ದನ್ನು ಆಡಕೂಡದು. ಇದರಿಂದ ತಾನು ... ಎಂದು ಭಾವಿಸಲ್ಪಡುವುದು ... ತನ್ನಲ್ಲಿ ಉದಾತ್ತಗುಣಗಳು ವೃದ್ಧಿಯಾಗುತ್ತಿರುವವು. ಭಯಪಡುವುದೂ ಯುಕ್ತವಲ್ಲ; ಭಯದಿಂದ ಇದ್ದ ಯೋಗ್ಯತೆಯೂ ಹೋಗಿಬಿಡುವುದು. ಭಯಯುನಾದವನನ್ನು ಕಂಡರೆ ಲೋಕವೆಲ್ಲವೂ ಹೆದರಿಸುವುದು, ಶೋಕದಿಂದ ಧೈರ್ಯವೀರ್ಯಾದಿಗುಣಗಳೆಲ್ಲವೂ ಕ್ಷೀಣವಾಗುವುವು; ಬಲವು ನಷ್ಟವಾಗುವುದು, ವೀರ್ಯಕ್ಕೆ ಕೊರತೆಬರುವುದು; ಶೋಕಕ್ಕೆ ಸಮವಾದ ಶತ್ರುವೇ ಇಲ್ಲವೆಂದು ದೊಡ್ಡವರು ಹೇಳುವರು. ಕಾಮವೂ ಹಾಗೆಯೇ; ಆಶೆಹೆಚ್ಚಿದ ಮನುಷ್ಯನು ಸರ್ವಲೋಕಕ್ಕೂ ದಾಸನಾಗಬೇಕಾಗುವುದು; ಆಶೆ, ಯಾರಿಗೆ ವಶವರ್ತಿನಿಯಾಗಿರುವುದೋ ಅವನಿಗೆ ಲೋಕವೇ ದಾಸ್ಯವನ್ನು ವಹಿಸಿನಿಲ್ಲುವುದು. ಈ ರೀತಿಯಲ್ಲಿ ನಾನಾವಿಧದ ಮನೋವೇಗವನ್ನು ತಡೆವುದರಿಂದ ಮನುಷ್ಯನಿಗೆ ಆಗುವ ಪ್ರಯೋಜನಗಳು ಅನೇಕವಾಗಿರುವುವು.

ಮಲಮೂತ್ರಗಳನ್ನು ವಿಸರ್ಜಿಸಿದ ಕೂಡಲೆ ಶೌಚವನ್ನು ಮಾಡಿಕೊಳ್ಳುವುದು ಪೂರ್ವದಿಂದ ಪದ್ಧತಿ ಬಿದ್ದಿರುವುದು. ಗುದವನ್ನೂ ಮೂತ್ರದ್ವಾರದ ಮುಖವನ್ನೂ ಸರಿಯಾಗಿ, ಶುಚಿಮಾಡಿಕೊಳ್ಳುವುದರಿಂದ ದೇಹಕ್ಕೆ ಕಾಂತಿಯೂ ಬಲವೂ ಬರುವುವೆಂದು ವೈದ್ಯರು ಹೇಳುವರು. ಮಲಮೂತ್ರವನ್ನು ವಿಸರ್ಜಿಸಿದ ಬಳಿಕ ಕೈಕಾಲು ತೊಳೆದುಕೊಳ್ಳುವುದೂ ಪದ್ಧತಿ. ಇದೆಲ್ಲಯು ಹಡಿಭಾಸನ (ತತ್ಸಮ- ಛಾಂದಸ,- ಎಂದರೆ ವೈದಿಕರು ಅನುಸರಿಸುವ ಮಾರ್ಗ)ವೆಂದು ಆಕ್ಷೇಪಿಸಿಸುವರೂ ಇರಬಹುದು; ಆದರೆ ವೈದ್ಯರನ್ನು ಕೇಳಿದರೆ ಕೈಕಾಲು ತೊಳೆ

ದುಕೊಳ್ಳುವುದರಿಂದ ಕೈಕಾಲುಗಳು ಶುದ್ಧವಾಗುವುವು; ಅಲ್ಲಿಯ ಕೊಳೆಯೆಲ್ಲವೂ ಹೋಗುವುದು, ಶ್ರಮವು ಶಾಂತಿಹೊಂದುವುದು, ದೇಹಕ್ಕೆ ಪುಷ್ಟಿಹೆಚ್ಚಿ ವೀರ್ಯವೃದ್ಧಿಯಾಗುವುದು, ಕಣ್ಣುಗಳಿಗೆ ಹಿತಕಾರಿಯಾಗುವುದು, ರಜೋಗುಣವು ದೂರಾಗುವುದು,-ಇತ್ಯಾದಿಯಾಗಿ ಹೇಳುವರು. ನಮ್ಮ ಪದ್ಧತಿಯನ್ನು ನೋಡಿದರೆ ದೇಹವೆಲ್ಲವೂ ಆಚ್ಛಾದಿತವಾಗಿರುವುದು; ಎಲ್ಲಿ ಹೋದರೂ ಹೊರಗೆ ಕಾಣುವುದು ಕೈ, ಕಾಲು, ಮುಖ. ಇವೆಲ್ಲವೂ ಚೊಕ್ಕಟವಾಗಿದ್ದರೆ ನೋಡುವವರಿಗೆ ಚೆನ್ನಾಗಿರುವದೆಂದೂ ಅದರಿಂದ ಅವರಿಗೆ ನಮ್ಮಲ್ಲಿ ಗೌರವಬುದ್ಧಿ ಹುಟ್ಟುವುದೆಂದೂ ಯಾರೂ ಹೇಳದಿರಲಾರರು. ಮುಖ್ಯವಾಗಿ ಶೌಚದ ಉದ್ದೇಶಗಳು ಎರಡು,-ಗಂಧವೂ ಲೇಪವೂ ಹೋಗಬೇಕು, ದೇಹದ ಮಲಗಳಲ್ಲಿ ಒಂದೊಂದರಲ್ಲಿ ಒಂದೊಂದು ವಿಧದ ದುರ್ಗಂಧವಿದ್ದೇ ಇರುವುದು, ಅದು ಹೊರಗೆ ಬಂದಾಗ ಬಾಹ್ಯ ಚರ್ಮಕ್ಕೆ ಅಂಟಿಕೊಳ್ಳುವುದು, ಇವೆರಡೂ ಹೋಗಬೇಕು. ಶೌಚಕ್ಕೆ ಮಣ್ಣನ್ನೂ ನೀರನ್ನೂ ಉಪಯೋಗಿಸುವುದು ನಮ್ಮವರ ಪದ್ಧತಿ. ಮಣ್ಣು, ಗಂಧವನ್ನು ಹೀರಿಕೊಳ್ಳುವುದೂ ಅಲ್ಲದೆ ಅದನ್ನು ಹಾಕಿ ತಿಕ್ಕುವುದರಿಂದ ಜಿಡ್ಡು ಹೋಗುವುದು; ಬಳಿಕ ನೀರನ್ನು ಹಾಕಿ ತೊಳೆವುದರಿಂದ ಎಲ್ಲವೂ ಕೊಚ್ಚಿಕೊಂಡು ಹೋಗಿ ಶುದ್ಧವಾಗುವುದು. ನಮ್ಮಲ್ಲಿ ಚಾತುರ್ವರ್ಣ್ಯವೂ ಜಾತಿಧರ್ಮಗಳೂ ಮೊದಲಿಂದಲೂ ಅಂಗೀಕೃತವಾದುದರಿಂದಲೂ ಆ ಆ ವರ್ಣದ ಆಆ ಜಾತಿಯಲ್ಲಿಯೂ ಒಂದೊಂದು ವಿಧದ ಗುಣವೂ ಕರ್ಮವೂ ಉಕ್ತ ಪ್ರಕಾರವಾಗಿ ನಿಶ್ಚಿತವಾಗಿದ್ದುದರಿಂದಲೂ ಆ ಆ ವರ್ಣಾದಿಗಳ ದೇಹದಿಂದ ಹೊರಗೆ ಬರುವ ಮಲಾದಿಗಳಲ್ಲಿಯೂ ಒಂದೊಂದು ವಿಧದ ಗುಣವು ಇದ್ದೇ ಇರುವುದೆಂಬುದನ್ನು ಆಧಾರವಾಗಿಟ್ಟುಕೊಂಡು ತದನುಗುಣವಾಗಿ ಇಂತಿಂತಹ ವರ್ಣದವರು ಇಂತಿಂತಹ ಮಣ್ಣನ್ನು ಇಷ್ಟಿಷ್ಟಾವೃತ್ತಿ ಶೌಚದಲ್ಲಿ ಉಪಯೋಗಿಸಬೇಕೆಂದು ನಿಯಮವನ್ನು ಕಲ್ಪಿಸಿದ್ದರು; ಆ ನಿಯಮವನ್ನು ಅನುಸರಿಸುವುದರಿಂದ ಇಷ್ಟಸಿದ್ಧಿಯಾಗುತ್ತಿದ್ದಿತು. ಮಣ್ಣೆಂದ ಕೂಡಲೇ ಈಗಿನವರು ಅನೇಕರಿಗೆ ಅಸಹ್ಯವೇ ಹುಟ್ಟುವುದು; ಅದೆಲ್ಲವೂ ಅನಾಗರಿಕರಾದ ಪೂರ್ವದವರ ಪದ್ಧತಿಯೆಂದೂ ನಾಗರಿಕತಾ ಪರಾಕಾಷ್ಠಾಗತರಾದ ತಾವು ಅದನ್ನು ಅನುಸರಿಸುವುದು ಅಪ್ಪಹಾಕಿದ ಆಲದ ಮರವೆಂದು ನೇಣುಹಾಕಿಕೊಳ್ಳುವ ಕೇವಲ ಮೌಢ್ಯವೇ ಹೊರತು ಅದರಲ್ಲಿ ಬುದ್ಧಿಲೇಶವೂ ಇಲ್ಲವೆಂದೂ ಅವರ ಮತವು. ಅನರ್ಘ್ಯವಾದ ರತ್ನ ಮಾಲೆಗಳನ್ನು ಕಂಡವಳಿಗೆ ಕರಿಯ ಮಣಿಯೆಂದರೆ ಅಸಡ್ಡೆ ಹುಟ್ಟುವುದೇನೋ ಸರಿ; ಆದರೆ ಹಾಗೆ ನಿಕೃಷ್ಟವಾಗಿ ಭಾವಿಸಲ್ಪಡಬಹುದಾದ ವಸ್ತುವಿನಲ್ಲಿಯೂ ಗುಣವಿರುವುದೇ ಇಲ್ಲವೇ,-ಅದರಿಂದ ಇಷ್ಟಸಿದ್ಧಿಯಾಗುವುದೇ-ಇಲ್ಲವೇ, ಎಂಬುದೊಂದೇ ನಾವು ಹೇಳಬೇಕಾದ ಮಾತು. ಈಗ ಮಣ್ಣಿನ ಪ್ರಸಕ್ತಿಯೊದಗಿರುವುದರಿಂದ ಅದನ್ನು ಯಾರಾದರೂ ಅವರಿಗೇನಾದರೂ ಪ್ರಯೋಜನವಾಗಿರುವುದೇ-ಎಂಬ ವಿಷಯವನ್ನು ನಾವು ವಿಚಾರಿಸಬಹುದು. ಈ ಪ್ರಬಂಧಕಾರನು ಕಂಡು ಕೇಳಿರುವುದರಲ್ಲಿ ಗಂಗ ತೀರದಲ್ಲಿ ವಾಸಮಾಡುವ ಬಡವರ ಹೆಂಗಸರನೇಕರು ಗಂಗ ಪ್ರವಾಹದ ಕಾಲದಲ್ಲಿ ತಂದುಹಾಕಿ ಹೆಪ್ಪುಕಟ್ಟಿರುವ ನುಣುಪಾದ ಒಂದು ಬಗೆಯ ಜೇಡಿಯ ಮಣ್ಣನ್ನು ತಂದು ತಲೆಗೂ ಮೈಯಿಗೂ ಚೆನ್ನಾಗಿ ತಿಕ್ಕಿಕೊಂಡು ಆ ಆ ಋತುಧರ್ಮಾನುಸಾರವಾಗಿ ನಾಲ್ಕಯ್ದು ದಿನಗಳಿಗೆ ಒಂದಾವೃತ್ತಿಯೋ ಹದಿನಯ್ದು ದಿನಗಳಿಗೊಂದಾವೃತ್ತಿಯೋ ಸ್ನಾನಮಾಡುವರು; ಇದರಿಂದ ಎಷ್ಟು ಮುದುಕಿಯರಾದರೂ ಅವರ ತಲೆಯ ಕೂದಲು ಒಂದೂ ನರೆಯದೆಯೂ ತಲೆಯ ಕೂದಲು ಉದುರದೆಯೂ ತಲೆ, ಪಟ್ಟುತಲೆಯಾಗದೆಯೂ ಇರುವುದು. ಅಗಸರು ಚೌಳು ಮಣ್ಣನ್ನು ಹಾಕಿ ಬಟ್ಟೆಗಳನ್ನು ಒಗೆಯುವದರಿಂದ ಎಂತಹ ಮಲಿನ ವಸ್ತ್ರವೂ ಶುಭ್ರವಾಗುವುದು. ಜಟ್ಟಿಗಳು ಅಂಗಸಾಧನೆಮಾಡಿ ದೇಹವೆಲ್ಲವೂ ಸ್ವೇದಮಯವಾಗಿರುವಾಗ ಪುಡಿಯಾದ ಕೆಮ್ಮಣ್ಣನ್ನು ಹುಯ್ದುಕೊಂಡು ಕುಸ್ತಿಯಾಡಿಕೊಳ್ಳುವರಷ್ಟೇ; ಇದರಿಂದ ತತ್ಕಾಲದಲ್ಲಿ ಅವರ ಶ್ರಮವೂ ಪರಿಹೃತವಾಗುವುದಲ್ಲದೆ ಅವರ ದೇಹದ ಕಾಂತಿಯೂ ಲಾಲಿತ್ಯಾದಿಗಳೂ ಎಷ್ಟು ಹೆಚ್ಚುವುವೋ ಅದನ್ನು ವಿಚಾರಮಾಡಿ ತಿಳಿಯಕೊಂಡವರು ಇಲ್ಲವೆನ್ನಲಾರರು. ಬಡವರನೇಕರು ಮುಸರೆಯ ಪಾತ್ರೆಗಳನ್ನೂ ಉಪಕರಣಗಳನ್ನೂ ತೊಳೆವುದಕ್ಕೆ ತೆವಟದ ಮಣ್ಣಿನ ಹುಡಿಯನ್ನು ಉಪಯೋಗಿಸುವರಷ್ಟೆ; ಅದರಿಂದ ಪಾತ್ರೆಗಳು ನಿರ್ಮಲವಾಗಿ ಎಷ್ಟು ಸ್ವಚ್ಛವಾಗುವುವೋ ಎಂಬುದನ್ನು ಅನೇಕರು ಅರಿಯದಿಲ್ಲ. ಬಹುದೂರ ಓಡಿ ಮೆಯ್ಯೆಲ್ಲವೂ ಬೆವರುಕಿತ್ತು ಹರಿಯುತ್ತಿರುವ ಕುದುರೆಗಳು ಧೂಳಿಯ ಮಣ್ಣಿನಲ್ಲಿ ಬಿದ್ದು ಹೊರಳಿ ಮೆಯ್ಯೆಲ್ಲಕ್ಕೂ ಮಣ್ಣುತುಂಬಿಕೊಳ್ಳುವಂತೆ ಮಾಡಿಕೊಂಡು ಕೊಂಚಹೊತ್ತು ಹಾಗೆಯೇ ಇದ್ದು ಬಳಿಕ ಎದ್ದು ಮೆಯ್ಯನ್ನು ಒದರು ಮಣ್ಣೆಲ್ಲವೂ ಬಿದ್ದು ಹೋಗುವಂತೆ ಮಾಡಿಕೊಂಡು ಗತಶ್ರಮಗಳಾಗುವದನ್ನೂ ಅನೇಕರು ಅರಿಯದೆ ಇಲ್ಲ. ಹೀಗೆ ಬೆಳೆಯಿಸಿದಷ್ಟೂ ಉದಾಹರಣೆಗಳು ಹೆಚ್ಚುವುವು. ಮುಖ್ಯವಾಗಿ, ಮಣ್ಣು ಬೆಲೆಯಿಲ್ಲದ ವಸ್ತುವಾದರೂ ಅದು ನಿಷ್ಪ್ರಯೋಜನವಾದುದಲ್ಲ. ನಮ್ಮ ಪೂರ್ವಿಕರು ಘುಣಾಕ್ಷರ ನ್ಯಾಯದಿಂದ ಏನನ್ನೋ ಹೇಳಿದ್ದರೆ ಕಷ್ಟಪಟ್ಟು ಅದರಲ್ಲಿ ಗುಣವಿರುವುದನ್ನು ಪ್ರದರ್ಶಿಸುವುದು ಏನು ಜಲತಾಡನವೆಂದು ಕೆಲವರು ಪೂರ್ವಪಕ್ಷ ಮಾಡದೇ

ಇರುವುದಿಲ್ಲ. ನಮ್ಮ ಪೂರ್ವಿಕರು ನಾಗರಿಕರೋ ಅನಾಗರಿಕರೋ, ವಿಚಾರಪರರೋ ವಿಚಾರಶೂನ್ಯರೋ ಅದನ್ನು ಸಾಧಿಸುವುದು ನಮ್ಮ ಪ್ರಕೃತದ ಕೆಲಸವಲ್ಲ. ನಮ್ಮ ಪೂರ್ವಿಕರು ನಾಗರಿಕರೇ ಅಹುದೆಂದೂ ಈಗಿನ ಹಾಗೆ 'ಸಾಬೂನು' ಮೊದಲಾದುವಕ್ಕೆ ಸದೃಶ್ಯಗಳಾದ ವಸ್ತುಗಳನ್ನು ನಿರ್ಮಿಸುವುದು ಅವರಿಗೊಂದು ಕಷ್ಟವಾಗಿರಲಿಲ್ಲವೆಂದೂ ಅವರು ಯಾವುದೋ ಒಂದು ಉದ್ದೇಶದಿಂದಲೇ ಆ ಮಾರ್ಗವನ್ನು ಅನುಸರಿಸಲಿಲ್ಲವೆಂದೂ ಕೆಲವರು ವಾದಿಸುವರು; ಇನ್ನೂ ಕೆಲವರು ನೀಚ ಸ್ಥಿತಿಯಿಂದ ಉಚ್ಚ ಸ್ಥಿತಿಗೆ ಹತ್ತುತ್ತಿರುವುದೇ ನಾಗರಿಕ ಲಕ್ಷಣವೆಂದೂ ಅವರು ಯಾವಾಗ ಆ ಮಾರ್ಗವನ್ನು ಅನುಸರಿಸಲಿಲ್ಲವೋ ಆಗಲೇ ಅವರ ಅನಾಗರಿಕತ್ವವು ಸಿದ್ಧವಾಯಿತೆಂದೂ ಹೇಳುವರು. ಅದು ಹೇಗಾದರೂ ಇರಲಿ, ಒಂದು ಮತವನ್ನು ಸ್ಥಿರೀಕರಿಸಿ, ಇನ್ನೊಂದನ್ನು ಖಂಡಿಸುವುದು ನಮ್ಮ ಪ್ರಕೃತದ ಕೆಲಸವಲ್ಲ. ಮುಖ್ಯವಾಗಿ ತಾವು ಮಲವಿಸರ್ಜನೆ ಮಾಡುವುದರಿಂದ ಇತರ ಪ್ರಾಣಿವರ್ಗಕ್ಕೆ ಯಾವ ಬಾಧೆಯೂ ಆಗದಂತೆ ನೋಡಿಕೊಂಡು, ಪ್ರಾಯಿಕವಾಗಿ ಊರಹೊರಗೆ ಹೋಗುವುದು ನಮ್ಮ ಪೂರ್ವಿಕರ ಪದ್ಧತಿಯಾಗಿದ್ದುದರಿಂದಲೂ ಅಲ್ಲಿಗೆ ದ್ರವ್ಯ ಸಾಧ್ಯವಾದ ಸಾಬೂನು ಮೊದಲಾದವುಗಳಿಗೆ ಸದೃಶ್ಯವಾದ ವಸ್ತುಗಳನ್ನು ಹೊತ್ತುಕೊಂಡು ಹೋಗುವುದಾದರೂ ಇಲ್ಲವಪ್ಪರೆ ಅಲ್ಲಿಂದ ಸಮಲಹಸ್ತರಾಗಿಯೇ ಮನೆಗೆ ಬಂದು ಶೌಚ ಮಾಡಿಕೊಳ್ಳುವುದಾದರೂ ಸರಿಯಾದ ಪದ್ಧತಿಯಾಗಲಾರದಾಗಿ ಅಲ್ಲಿಯೇ ಸಿಕ್ಕುವ ಮಣ್ಣನ್ನು ಉಪಯೋಗಿಸಿದರೆ ಇಷ್ಟಸಿದ್ಧಿಯಾಗುವುದೆಂದು ಆ ನಿಯಮವನ್ನು ಕಲ್ಪಿಸಿದರೆಂದರೆ ಅತಿಯುಕ್ತಿಯಾಗಲಾರದು. ಇದರ ಮೇಲೆ ದ್ರವ್ಯಸಾಧ್ಯವಾದ ವಸ್ತುಗಳು ಲಕ್ಷ್ಮೀಕಟಾಕ್ಷಕ್ಕೆ ಪಾತ್ರರಾದವರಿಗೆ ಸಾಧ್ಯವಾದುದರಿಂದಲೂ ಅಂಥ ವಸ್ತುಗಳನ್ನೇ ಉಪಯೋಗಿಸಬೇಕೆಂಬ ನಿಯಮವು ಲೋಕದಲ್ಲಿ ಎಲ್ಲೆಲ್ಲಿಯೂ ಹೆಚ್ಚಾಗಿರುವ ಬಡವರ ವಿಷಯದಲ್ಲಿ ದ್ರವ್ಯಾಲಾಭ, ತಕ್ಕಷ್ಟು ಉಪಯೋಗಿಸಿದರೆ ವ್ಯಯವಾಗಿ ಹೋಗುವುದೆಂಬ ಲೋಭ, ಇತ್ಯಾದಿ ಕಾರಣಗಳಿಂದ ಇಷ್ಟಸಿದ್ಧಿವಾಗಲಾರದುದರಿಂದಲೂ ಶ್ರೀಮಂತರಾದರೂ ಸಾಮಾನ್ಯ ವಸ್ತುಗಳನ್ನು ಉಪಯೋಗಿಸುವುದರಿಂದ ಅವರ ಹೆಮ್ಮೆಯನ್ನು ಅಡಗಿಸುತ್ತಿರುವ ಉಪಾಯವು ನಿರಂತರವೂ ಪ್ರಯುಕ್ತವಾಗುತ್ತಿರುವುದೆಂದು ಆ ನಿಯಮವನ್ನು ಏಕೆ ಕಲ್ಪಿಸಬಾರದು? ಇದರಿಂದ ಜನರೆಲ್ಲರೂ, ದೊಡ್ಡವರಾದರೂ ಚಿಕ್ಕವರಾದರೂ ಊರ ಹೊರಗೇ ಹೋಗಿ ಮಲವಿಸರ್ಜನೆಯನ್ನು ಮಾಡಿ ಬರುತ್ತಿದ್ದರೆಂದು ತಿಳಿಯಕೂಡದು. ಈಗಿನ ಹಾಗೆ ಆಗಲೂ ಶ್ರೀಮಂತರಿದ್ದೇ ಇದ್ದರು, ಅವರೂ ಭೋಗವಸ್ತುಗಳನ್ನು ಸಮಯವೊದಗಿದಾಗಲೆಲ್ಲವೂ ಉಪಯೋಗಿಸುತ್ತಿದ್ದುದರಲ್ಲಿ ಸಂಶಯವಿಲ್ಲ. ಅನೇಕ ರಾಜಸ್ತ್ರೀಯರೇ ಮೊದಲಾದವರನ್ನು ಸೂರ್ಯನೂ ವಾಯುವೂ ಕಂಡೇ ಇರಲಿಲ್ಲವೆಂದು ಕವಿಗಳು ಉದ್ಘೋಷಿಸುವರು; ಎಂದರೆ, ಬೀದಿಯ ಬಿಸಿಲು ಗಾಳಿಗಳನ್ನು ಅವರು ಅರಿತವರೇ ಅಲ್ಲವೆಂದು ತಾತ್ಪರ್ಯವು. ಅಂತಹರು ಮನೆಯ ಹಿಂದಣ ಭಾಗದಲ್ಲಿ ಹಿತ್ತಲನ್ನು ಮಾಡಿಕೊಂಡಿದ್ದರು; ಮಲವಿಸರ್ಜನೆ ಮಾಡಿ ಬರುವುದಕ್ಕೆ ಹೋಗಿಬರುವೆನೆನ್ನುವ ಅರ್ಥದಲ್ಲಿ ಹಿತ್ತಲಿಗೆ ಹೋಗಿ ಬರುವೆನೆಂದು ಹೇಳುವ ಮಾತೇ ಇದನ್ನು ದೃಢೀಕರಿಸುವುದು. ಮಲವಿಸರ್ಜನೆಯಾದ ಬಳಿಕ ಶೌಚವು ಎಷ್ಟು ಅವಶ್ಯಕವಾಗಿ ಭಾವಿಸಲ್ಪಡುತ್ತಿದ್ದಿತೆನ್ನುವುದಕ್ಕೆ "ಮಲವಿಸರ್ಜನೆ ಮಾಡಿ ಬರುವೆನು' ಎಂಬ ಅರ್ಥದಲ್ಲಿ ಕೈಕಾಲು ತೊಳೆದುಕೊಂಡು ಬರುವೆನೆಂದಾಗಲೀ ಕೈಯನ್ನಾಲಿಗೆ ಹೋಗಬೇಕೆಂದಾಗಲೀ ಹೇಳುವ ಮಾತೇ ಸಾಕು. ಹಾಗೆಯೇ 'ಮೂತ್ರ ವಿಸರ್ಜನೆ ಮಾಡಿ ಬರುವೆನು' ಎಂಬ ಅರ್ಥದಲ್ಲಿ ಜಲಸ್ಪರ್ಶ (ಕೈ ತೊಳೆದುಕೊಳ್ಳುವುದು) ಕ್ಕೆ ಹೋಗಿ ಬರುವೆನು ಎಂಬ ಮಾತಿರುವುದು. ಇದು ಕೇವಲ ಸಂಸ್ಕೃತಜ್ಞರ ಮಾತೇ ಅಲ್ಲ, ಉತ್ತರ ದೇಶದಲ್ಲಿ ಕೈ ತೊಳೆದುಕೊಂಡು ಬರುವುದಕ್ಕೆ (ಹಾಥ್ ಧೋನೇಕೇ ಲಿಯೇ) ಎಂದು ಸರ್ವಸಾಮಾನ್ಯವಾಗಿ ಹೇಳುವರು. ಬಾಲವೃದ್ಧರಿಗೂ ಹೊರಗೆ ಹೋಗಲಾರದವರಿಗೂ ಸುಖಪುರುಷರಿಗೂ ಮಲವಿಸರ್ಜನೆಗೆ ಹಿತ್ತಲಲ್ಲಿಯೇ ಸ್ಥಳವನ್ನು ಮಾಡಿದ್ದರೂ ಅದಕ್ಕೂ ಸರ್ವಸಾಮಾನ್ಯವಾದ 'ಬಹಿರ್ದೇಶ' ಬಹಿರ್ಭೂಮಿ' ಎಂಬ ಹೆಸರುಗಳೇ ಇರುವುವು. ಇವೆಲ್ಲವೂ ಭಾವಗರ್ಭಿತವಾಗಿಯೂ ಬಹಾಸಾರಹಿತವಾಗಿಯೂ ಇರುವ ಮಾತುಗಳು. ಹಾಗೆ ಬಿದ್ದ ಮಲದ ಮೇಲೆ ಒಣ ಮಣ್ಣನ್ನಾಗಲೀ ಬೂದಿಯನ್ನಾಗಲೀ ಹಾಕಿದ್ದು ಆಗಾಗ ಹೊರಗೆ ಸಾಗಿಸುತ್ತಿದ್ದರು. ಮಣ್ಣನ್ನು ಹಾಕುವುದರಿಂದ ಅಲ್ಲಿ ದುರ್ಗಂಧಾದಿಗಳು ಹಬ್ಬುವುದಿಲ್ಲ; ಬೂದಿಯನ್ನು ಹಾಕುವುದರಿಂದಲೂ ಈ ಪ್ರಯೋಜನವಾಗುವುದೂ ಅಲ್ಲದೆ ಮಲವೂ ಬೂದಿಯೂ ಏಕೀಭವಿಸಿ ಅನೇಕ ಸಸ್ಯಗಳಿಗೆ ಉತ್ತಮವಾದ ಗೊಬ್ಬರವಾಗುವುದು.

(ಮುಂದೆ ಸಾಗುವದು.)

ತುಳಸೀ ಹಾಡುಗಳು.

ಜಯ ಜಯ ಮಂಗಳಂ ॥ ಪ ॥

ಶ್ರೀ ತುಳಸೀದಳ ಒಂದವ ಪಜಿಸೆ । ಸೇತುಬಿಂದು ರಾಮೇಶ್ವರ ಕಾಶಿಯ ತೀರ್ಥದಿ ಮಿಂದ ಫಲಂಗಳ ಕೊಡುವುದು ಒಂದೇ ದಳ ತಾನು ॥ ಪಾತಕನೆಲ್ಲಾ ಪರಿದೋಡುವುದು— ಪುರುಷೋತ್ತಮರ ಕೈಪಿಡಿದೋಪ್ಪುಗು ಕೀರ್ತಿಯ ಬಣ್ಣಿಸಲೆಸ್ನಳವೇ—ಶ್ರೀ ತುಳಸಿಯ ಮಹಿಮೆಯನೂ ॥ ಜಯ ॥ ೧ ॥

ಪಚ್ಚೆತೆನೆಯೆಳೆಗಲಂಕಾರವ ಮಾಡಿ । ಹೆಚ್ಚಿಸ ಶ್ರೀ ತುಳಸೀ ವೃಂದಾವನ ದೇವಿಗೆ ಅತ್ಯಂತನರಸಿಗೆ ಬಂದ ಜನರಿಗೆ ಒದಗುವಳೊಲವಿಂ ತಾನು ॥ ಸಚ್ಚಿತ್ತಪಿಗಳಸೀವಳು ತಾಪತ್ರಯಗಳ ಬಿಡಿಸುವಳು, ಉತ್ತರೋತ್ತರಕೆ ಕಾರಣವಾದಳೆ ವೃಂದಾವನದೇವೀ ॥ ೨ ॥

ಮಂಗಳಂ ಶ್ರೀ ತುಳಸೀ ವೃಂದಾವನದೇವಿಗೆ । ಮಂಗಳಂ ಭಕ್ತರ ಪಾಲಿಪ ಜನನಿಗೆ । ಮಂಗಳಂ ಕೃಷ್ಣನ ಪಾದದ ಸೆರೆಯುವ ತುಳಸೀದೇವಿಗೇ ॥ ಜಯ ಜಯ ॥ ೩ ॥

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥

ಶ್ರೀತುಳಸಿಯು, ಶ್ರೀಹರಿಯು ಅನಂತವಾಗಿರಲಾಗ ಅಮೃತ ಕಲಶದಲಿ ಜನಿಸಿದಳು ದೇವೀ ॥ ಧರೆಯನುದ್ಧರಿಸುತ್ತ ಜಗವ ಪಾವನ ಮಾಳ್ಪ ಸುಪ್ರಸಿದ್ಧ ಪರಂತಿಯು ಶ್ರೀ ತುಳಸಿಯು ॥ ಜಯ ॥ ೧ ॥

ಪಂಚ ಮಹಾ ಸ್ತೋತ್ರಂಗಳಿಗೆ ಪ್ರಾಯಶ್ಚಿತ್ತಳೆಂದೆನಿಸಿ । ಅನಂತ ತೀರ್ಥಂಗಳಿಗೆ ಅಧಿಕಳೆನಿಸಿ ॥ ಪಂಕಜನಾಭನ ಶ್ರೀಪಾದ ಪೂಜೆಗೆ । ಅಲಂಕಾರವಾದಳೆ ಶ್ರೀ ತುಳಸೀ ॥ ೧ ॥

ಹಸರು ಪಟ್ಟೆನಾಶಿಯನುಟ್ಟಳೆ ಶ್ರೀತುಳಸೀ । ಹೊಸ ಮುತ್ತಿನಾಭರಣಗಳನೆ ತೊಟ್ಟು ॥ ಪಚ್ಚೆಯ ಕುಪ್ಪಸವ ತೊಟ್ಟಳೆ ಶ್ರೀತುಳಸಿ । ಅತ್ಯಂತನ ಕೂಡುವ ಭರದಿಂದಲಿ ॥ಜಯ॥ ೨॥

ಧಳಧಳನೆ ಹೊಳೆವ ಎಳೆ ತುಳಸಿಯು । ಬಳಬಳನೆ ಬಳಕುತ್ತ ಬಂದ ದೇವಿಯನು ॥ ಸೆಳೆದಪ್ಪಿ ತುಳಸಿಯನು ಶ್ರೀ ಕೃಷ್ಣ ತೊಡೆಮೇಲೆ ಕುಳ್ಳಿರಿಸಿ ಮನ್ನಣೆ ಮಾಡಿದ ॥ಜಯ॥೩॥

ಉತ್ಥಾನ ದ್ವಾದಶೀಯಲಿ ಕಟ್ಟಿ ಗುಡಿ ತೋರಣವ । ಮುತ್ತಿನಾಕುಚ್ಚುಗಳ ಬಿಡಿಸಿ ॥ ವಿಪ್ರರಂ ಕರೆದು ವೀಳ್ಯವಂ ಕೊಟ್ಟರೆ ಪ್ರತ್ಯಕ್ಷವಾದಳೆ ಶ್ರೀತುಳಸಿಯು ॥ ೩ ॥

ರಂಗನ್ನ ತೋರೆ ಶ್ರೀ ತುಳಸೀ— ಶುಭ — ಮಂಗಳಾ
ರತಿಯೆತ್ತುವೆ ನಿಮ್ಮ ಬಳಸಿ ॥ ಪ ॥

ಉದಧಿ ಕಾರ್ತೀಕಮಾಸದಲ್ಲಿ—ಬಂದು—ಒದಗಿತು ಶುಕ್ಲ ಪಕ್ಷದ ದ್ವಾದಶಿಯಲ್ಲಿ ॥ ಮಧುಸೂದನನು ಬಹನಿಲ್ಲಿ—ಎಂದು—ಒದರುತ್ತಲಿವೆ ಶ್ರುತಿಶಾಸ್ತ್ರಂಗಳಲ್ಲಿ॥ ರಂಗನ ॥ ೧ ॥

ಪಾತಕರ ಪರಿಹಾರಿಣಿ ನೀನು —ಎಂದು— ನಾ ತಿಳಿದು ಅಭಿನಮಿಸುವೆನು॥ ಮಾತುಳಾಂತಕನ ತೋರಿನ್ನು—ಹೊಸ— ಜಾತಿ ಮುತ್ತಿನಾರತಿಯೆತ್ತುವೆನು ॥ ರಂಗನ ॥ ೨ ॥

ಇಕ್ಕುವೆ ರಂಗವಲ್ಲಿ ನಾನು ಪಕ್ಕ ಇಕ್ಕೆಲಗೊಂಬೆ ನಿಲಿಸಿ ಬೇಗ ಳನು ॥ ಸಕ್ಕರೆ ಹಾಲು ವೃಂದವನ್ನು ಎಂದು ಅಕ್ಕರೆಯ ಸ್ವೀಕರಿಸೆನು ॥ ರಂಗನ ॥ ೩ ॥

ಜಯಮಂಗಳಂ—ನಿತ್ಯ ಶುಭಮಂಗಳಂ ॥ ಪ ॥

ಅರ್ಘ್ಯವ ಸಲಿಸಿಕ್ಕಿ ಚಿತ್ತ ವೃಂದಾವನಕೆ । ಭಕ್ತಿಯಲಿ ಮೂರೆಸಳು ಪಟ್ಟನಿಟ್ಟು ॥ ಪ್ರದಕ್ಷಿಣೆ ಮಾಡಿದಾ ಮನುಜನಿಗೆ ಶ್ರೀವಿಷ್ಣು ಸಾಯುಜ್ಯ ತಪ್ಪದು ಮುಂದಕೆ ॥ ಜಯ ॥ ೧ ॥ ಧಾರೆಯನು ಎರೆವಲ್ಲಿ ದಾನಗಳ ಕೊಡುವಲ್ಲಿ । ದೇವಿ ಶ್ರೀ ತುಳಸಿಯ ದಳವಿಲ್ಲದೆ ॥ ಮಾಡಿದಾ ದಾನವು ನಿಷ್ಫಲವೆನಿಸುವುದು ಒಡೆದಿಯಲಿ ಮಾಡಿದ ಹೋಮದಂತೆ ॥ ಜಯ ॥ ೨ ॥ ಮುನಸ್ಕರು ಅರವತ್ತು ಗಾವುದಕೆ ಪೋಗಿ ಅಲ್ಲಿ । ತನುವ ತೊಳಲಿಸಿ ಭಂಗಪಡುವುದೇಕೆ ॥ ಹೊನ್ನು ಹಣವು ಕಾಸು ಬಟ್ಟದೆ, ಶ್ರೀ ತುಳಸಿಯಂ ಚೆನ್ನಾಗಿ ಭಜಿಸೆ ಮುಕ್ತಿಪಡೆವರ್ ಜನರು ॥ ೩ ॥ ನಾರದಮುನಿಯೊಡನೆ ಲಕ್ಷ್ಮಿಯಿಂತೆಂದಳು, ಏನಯ್ಯ ನಾರದ ನಮ್ಮ ಮಾನಸಿಸ ಮಾತನು ॥ ಸಾವಿರ ಜನರ ಮುಂದೆ ಬೇಗದೊಳಿನ್ನು, ಮಾಡಿಕೊಂಡು ಬಂದೆ ಶ್ರೀತುಳಸಿಯಂ ॥ ೪ ॥ ಕುಲದೊಳಗೆ ನೀನಾವ ಕುಲದೊಳಗೆ ಪುಟ್ಟಿದಳಿ. ಎಲ್ಲಿ ರಾಣೀ ಹುಟ್ಟಿ ಎಲೆಯ ಬಿಟ್ಟು ॥ ಒಳ್ಳೆ ನಿಮ್ಮ ಗುಣವಂ ಬಣ್ಣಿಸಲಳವಲ್ಲ, ಫುಲ್ಲನಾಭನೆ ನಿಮ್ಮ ಮಹಿಮೆಯೆಲ್ಲ ॥ ೫ ॥ ಕರೆದು ಹಂಗಳ ಕಟ್ಟಿ ನೆರೆದ ತುರುಗಳ ಬಿಟ್ಟು ಹರುವಿಯ ಹಾಲನು ತಂದು ॥ ಭರದಿಂದಲಡಿಗೆಯ ಮಾಡಿ ಕೃಷ್ಣರಾ ಮುಂದಿರಿಸಿ, ಅಕ್ಕ ಬಾರೇ ಒಡನುಂಬುವ ॥ ೬ ॥ ಅಕ್ಕ ನಿಮ್ಮರಸರಿಗೆ ನೆಚ್ಚಿ ಒಂದವಳಲ್ಲ, ಕಕ್ಕಸವ ನಾಡವರೆನ್ನ ಕೂಡೆ ॥ ನೀ ವಿಕ್ಕಿದುದನೇ ಉಂಬೆ, ನೀನ್ ಕೊಟ್ಟ ಕೆಲಸವ ಮಾಳ್ಪೆ, ನಿಮಗಿಂತ ಹಿರಿಯಳಲ್ಲ ಕಿರಿಯಳಹುದು ॥ ೭ ॥ ಬಿಡಿರಿನ್ನು ಶ್ರೀತುಳಸಿಯರೆ ನಿಮ್ಮಿಬ್ಬರ ಹೋರಾಟ । ಹರಿಯು ಶ್ರೀರಂಗ ಕೊಟ್ಟು ಬೇರಿರಿಸುವೆ ॥ ಅಡವಿಯೊಳ್ ತರುಗಳು ಸಡುವಿನೊಳು ನೀ ಒಂದೆ ಏಕೆ ನಿಮಗೀ ಹೋರಾಟವು ॥ ೮ ॥ ವೃಂದಾವನದಲಿ ಗೋವಿಂದಗೆ ಮಂಚವ ಹಾಕಿ, ಚಂದದ ಹಂಸೆಯ ಹಾಸ ಹಾಸಿ ॥ ರಂಗನೂ ಲಕ್ಷ್ಮಿಯೂ ತುಳಸೀದೇವಿಯರು, ವೃಂದಾವನದ ಸುಖದಲ್ಲಿರ್ಪರು ॥ ಜಯ ಮಂಗಳಂ ॥ ೯ ॥

ವಿ ಸೂ.---ಹಿಂದಿನ ಹಾಡುಗಳಲ್ಲಿ "ಬೃಂದಾವನ" ಎಂದು ಬಂದಿರುವ ಕಡೆಯಲ್ಲೆಲ್ಲ "ವೃಂದಾವನ"ವೆಂದು ಸರಿಪಡಿಸಿ ಓದಬೇಕು.

ಸತೀಹಿತೈಷಿಣೀ ಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳೆಲ್ಲವೂ ಸ್ತ್ರೀಯರಿಗೆ ಅತ್ಯುಪಯುಕ್ತವಾಗಿರುವವಲ್ಲದೆ ವಿದ್ಯಾರ್ಥಿ-ವಿದ್ಯಾರ್ಥಿನಿಯರ ನೈತಿಕಶಿಕ್ಷಣ ಅಭ್ಯಾಸಗಳಿಗೆ ಅತ್ಯಂತ ಸಹಾಯಕವಾದವುಗಳಾಗಿವೆಯೆಂಬುದನ್ನು ನಾವು ಹೇಳಬೇಕಾಗಿಲ್ಲ. ಒಮ್ಮೆ ನೋಡಿದರೆ ಗುಣವು ತಾನಾಗಿಯೇ ತಿಳಿದು ಬರುವುದು.

ಈ ವರೆಗೆ ಪ್ರಕಟವಾಗಿರುವ ಗ್ರಂಥಗಳು—

೧	ಮಾತೃನಂದಿನಿ	೧—೪—೦
೨	ಸುಶೀಲೆ (ಪುನರ್ಮುದ್ರಣ)	೦-೬-೦
೩	ಸಭಾ (ದ್ವಿತೀಯಮುದ್ರಣವಾಗುತ್ತಿದೆ. ಆಶ್ವಯುಜದೊಳಗಾಗಿ ಕ್ರಯಕ್ಕೆ ದೊರೆಯುವುದು)	
೪	ವಿದ್ಯುಲ್ಲತಾ	೦-೧೪-೦
೫	ವಿರಾಗಿಣಿ (ನಳಿನ ಭಾಗ ೨	೧-೦-೦
೬	ದಕ್ಷಕನ್ಯಾ	೧-೨-೦
೭	ರಮಾನಂದ (ದ್ವಿತೀಯಮುದ್ರಣ)	೦-೧೦-೦
೮	ವಿಕ್ರಮ	೧-೨-೦
೯	ಚಂದ್ರವದನಾ	೦-೧೦-೦
೧೦	ಪೂರ್ಣಕಲಾ	೧-೪-೦

ಶಾಶ್ವತಚಂದಾದಾರರಿಗೆ ಸುಲಭಕ್ರಯಕ್ಕೆ ದೊರೆಯುವುವಲ್ಲದೆ, ಭದ್ರಗೀತಾವಲಿ ೮೪, ಸೇವಾವಿಚಾರ-ವಿದ್ಯಾವಿಚಾರ (೮೧) ಗಳು ಬಹುಮಾನವಾಗಿ ಲಭಿಸುವವು.

ಇದರಲ್ಲಿ ಈವರೆಗೆ ಪ್ರಕಟವಾಗಿರುವ ಹತ್ತುಪುಸ್ತಕಗಳೂ ಮೈಸೂರ, ಮದ್ರಾಸು, ಧಾರವಾಡ ಪ್ರಾಂತದ ವಿದ್ಯಾಭ್ಯಾಸದ ಶಾಖೆಯವರಿಂದ ಬಾಲ-ಬಾಲೆಯರಿಗೆ ಪಾಠಪುಸ್ತಕವಾಗಿಯೂ, ಪರೀಕ್ಷಾಪಠ್ಯಪುಸ್ತಕವಾಗಿಯೂ, ಶಾಲಾ-ವಾಚನ ಪುಸ್ತಕವಾಗಿಯೂ, ಬಹುಮಾನಪುಸ್ತಕವಾಗಿಯೂ ಸ್ವೀಕರಿಸಲ್ಪಟ್ಟಿರುವವೆಂದರೆ, ಸಾಕು; ಇದರ ಉಪಯೋಗವು ತಾನೇ ವ್ಯಕ್ತವಾಗಬಹುದು.

ಮುದ್ರಣದಲ್ಲಿರುವ ಅತ್ಯುತ್ತಮಗ್ರಂಥಗಳು

೧೧ ಯಾಜ್ಞಸೇನಿ, ೧೨ ಬ್ರಹ್ಮಚಾರಿಣಿ, ೧೩ ಗೃಹಿಣೀ—ಆನಂದಮಯಿ— ಈ ಮೂರು ಗ್ರಂಥಗಳೂ ಕಾಳ-ಯುಕ್ತ ಸಂವತ್ಸರದ ಫಾಲ್ಗುನ ಮಾಸದೊಳಗಾಗಿ ಪ್ರಕಟವಾಗುವವು.

ವಿಳಾಸ— ಕಾರ್ಯದರ್ಶಿ,
ಹಿತೈಷಿಣೀ, ಮಾತೃಮಂದಿರಂ,
ನಂಜನಗೂಡು; (ಮೈಸೂರು ಡಿ||)

ವಾಗ್ಭೂಷಣ

—:():—

ಕರ್ಣಾಟಕ ವಿದ್ಯಾವರ್ಧಕ ಸಂಘದಿಂದ ಪ್ರಕಾಶವಾಗುವ ಉತ್ತಮವರ್ಗದ ಕನ್ನಡನುಡಿಯ ಮಾಸಪತ್ರಿಕೆ, ಕರ್ಣಾಟಕ ವಾಙ್ಮಯಾಭಿವೃದ್ಧಿಗಾಗಿ ೨೧ ವರ್ಷಗಳಿಂದ ಹೊರಡುತ್ತಿರುವ ಈ ಮಾಸಪತ್ರಿಕೆಯನ್ನು ಕರ್ಣಾಟಕ ಭಾಷಾಭಿಮಾನಿಗಳಾದ ಸ್ತ್ರೀ-ಪುರುಷರೆಲ್ಲರೂ ನೋಡುವುದು ಅವಶ್ಯಕವು. ಇದರಲ್ಲಿ ಕರ್ಣಾಟಕ ವಾಙ್ಮಯಾಭಿವೃದ್ಧಿಗೆ ಸಾಧನರೂಪಗಳಾದ ಅತ್ಯುತ್ತಮತರದ ಲೇಖಗಳೂ, ಕರ್ಣಾಟಕ ಭಾಷಾಸಾಮ್ರಾಜ್ಯದಲ್ಲಿ, ಹಿಂದೆ ಹೆಸರಾದವರ ಮತ್ತು ಈಗ ಹೆಸರುಗೊಂಡಿರುವವರ ಜೀವನಚರಿತೆಗೂ ಇನ್ನೂ ಇತರ ಧಾರ್ಮಿಕ, ನೈತಿಕ, ಸಾಮಾಜಿಕ, ಮತವಿಷಯಕ ಲೇಖಗಳೂ, ಪ್ರಚಲಿತ ವಿಷಯಗಳೂ ಪ್ರಕಟಗೊಳ್ಳುತ್ತಿರುವವು ವಾರ್ಷಿಕ ಚಂದಾ ಹಾಸಲು ಸೇರಿ ೨—೮—೦

ವಿಳಾಸ:— ಮ್ಯಾನೇಜರ, 'ವಾಗ್ಭೂಷಣ'
ಕ. ವಿ. ವ. ಸಂಘ ಧಾರವಾಡ.

ಸಚಿತ್ರ ಭಾರತ

—:():—

ಐತಿಹಾಸಿಕ, ಸಾಮಾಜಿಕ, ನೈತಿಕ, ತಾತ್ವಿಕ, ಪ್ರಗತಿಪರ ವಿಚಾರಗಳನ್ನು ಸುಲಭ ಶೈಲಿಯಲ್ಲಿ ಕಥಾ, ಪ್ರಬಂಧ, ಸಂಭಾಷಣಾದಿಗಳಿಂದ ಚರ್ಚಿಸಿ, ವಾಚಕರ ಮನಸ್ಸಿಗೆ ಉತ್ಸಾಹ, ಇತಿಕರ್ತವ್ಯತಾ ಸ್ಫೂರ್ತಿಗಳನ್ನುಂಟುಮಾಡುವ ಉತ್ತಮವರ್ಗದ ಮಾಸಪತ್ರಿಕೆ ಸಂದಿಸಿಯನ್ನೇ ಡಬಲ್ ಕ್ರೌನ್ ೪೮ ಆಕಾರ ೪೮ ಪುಟಗಳು. ೪ ನೇ ವರ್ಷದಿಂದ ಅನೇಕ ಸುಧಾರಣೆಗಳನ್ನೊಳಕೊಂಡಿರುವುದು. ವಾರ್ಷಿಕವರ್ಗಣಿ ೩-೬-೦

ವಿಳಾಸ:— ಮ್ಯಾನೇಜರ್, 'ಸಚಿತ್ರ ಭಾರತ'
ಶ್ರೀಕೃಷ್ಣ ಮುದ್ರಾಲಯ, ಹುಬ್ಬಳ್ಳಿ.

ಪರಮಾರ್ಥ

—:():—

ಭಕ್ತಿ, ಜ್ಞಾನ, ವೈರಾಗ್ಯವೇ ಮೊದಲಾದ, ಪಾರಮಾರ್ಥಿಕ ಸುಖಸಾಧನ ರೂಪಗಳನ್ನು ಕಥಾ, ಉಪನ್ಯಾಸ- ರೂಪಗಳಿಂದ ತಕ್ಕ ಉದಾಹರಣೆಗಳೊಡನೆ ಪ್ರತಿಪಾದಿಸುವ ತಿಳಿಗನ್ನಡದ ಮಾಸ ಪತ್ರಿಕೆ. ಸ್ತ್ರೀ-ಪುರುಷರೆಲ್ಲರೂ ನೋಡತಕ್ಕದ್ದು. ವಾರ್ಷಿಕಚಂದಾ ೧—೧೨—೦

ವಿಳಾಸ:— ಮ್ಯಾನೇಜರ್, 'ಪರಮಾರ್ಥ'
ಪರಮಾರ್ಥ ಮುದ್ರಾಲಯ, ಅವೆನ್ಯೂರೋಡ್, ಬೆಂಗಳೂರುಸಿಟಿ.

ಇದನ್ನು— ಬಿಂದೂ ನಾರಾಯಣ ಮುತಾಲಿಕ-ದೇಸಾಯಿ, ಇವರು ಹುಬ್ಬಳ್ಳಿಯ "ಶ್ರೀಕೃಷ್ಣ ಮುದ್ರಾಲಯ"ದಲ್ಲಿ ಮುದ್ರಿಸಿದರು,
ಹಾಗೂ ಶ್ರೀಮತೀ ತಿರುಮಲಾಂಬಾ ಇವರು 'ನಂಜನಗೂಡ, 'ಕರ್ಣಾಟಕ ನಂದಿನಿ' ಆಫೀಸಿನಲ್ಲಿ ಪ್ರಸಿದ್ಧಪಡಿಸಿದರು.

ಸಂಪುಟ ೨ ❋ ೧೯೧೯ ❋ ಸಂಚಿಕೆ ೯-೧೨

ಕರ್ನಾಟಕ ನಂದಿನೀ



ಭಕ್ತ್ಯಾ ಗುರೌ ಮಯ್ಯನುಕಂಪಯಾ ಚ । ಪ್ರೀತಾಸ್ಮಿ ತೇ ಪುತ್ರ ವರಂ ವೃಣೀಷ್ವ ॥
ನ ಕೇವಲಾನಾಂ ಪಯಸಾಂ ಪ್ರಸೂತಿಂ । ಅವೇಹಿ ಮಾಂ ಕಾಮದುಘಾಂ ಪ್ರಸನ್ನಾಮ್ ॥

ವಾರ್ಷಿಕ ಚಂದಾ ೨-೮-೦ ಬಿಡಿ ಸಂಚಿಕೆಗೆ ೦-೪-೦

॥ ಶ್ರೀ ॥

। ವಂದೇತ್ವಾಂ ಭೂದೇವಿ ಆರ್ಯಮಾತರಮ್ ।

ಕರ್ನಾಟಕ—ನಂದಿನಿ.

(ಮಾಸಪತ್ರಿಕೆ.)

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚ್ಚೈವ ಯಃ ಪ್ರಭುಃ ।
ದಾಸ್ಯನ್ತಿ ಮಮಯೋ ಚಾನ್ಯೇಽಪ್ಯದೃಷ್ಟಾಃ ಪಥಿಗೋಚರಾಃ ॥"

ಸಂಪುಟ ೨. | ೧೯೧೮ ಜೂನ—ಸಪ್ಟೆಂಬರ್ | ಸಂಚಿಕೆ ೯-೧೨.

ಭಾಗವತವು ಅಥವಾ ಶ್ರೀಕೃಷ್ಣ ಬಾಲಲೀಲಾ.

೮ನೇ ಸಂಚಿಕೆಯಿಂದ ಮುಂದೆ—

ದೇವಿಯು ಜ್ಞಾನದಿಂ ಮದಿಸಿದ ಖಳನೊಳಗಾವಿರ್ಭವಿಸಿಕೊಂಡಿರುವಂತೆ ಕಾಣಲು ॥ ಭಾವಿಸ ನೋಡಲು ಕಂಸನ ಮನಕೆ ವಿವೇಕವು ತೋರಿತಾಗ ॥ ಶ್ರೀಕಾಂತನಂ ತಾಳಿ ರಾಜಿಪದೇವಿಯು ಆ ಕಂಸನು ನೋಡಿಯಿಂತೆಂದನು ಮನದಲ್ಲಿ॥ ಪ್ರಾಕೃತ ರೀತಿಯ ಗರ್ಭವ ನಾ ಕಾಣೆ, ಈ ಕಂದನೇ ಕೊಲ್ಲುವನೆಂದನು ॥ ಈಕೆಯ ಪ್ರಾಣವ ತೆಗೆಯುವೆನೆಂದರೆ, ಲೋಕದೊಳಪಕೀರ್ತಿ ನಾರಿಯ ಕೊಂದರೆ । ಬೇಕಾದ ಸಂಪದ ಪೋದಮೇಲಿನ್ನೇನು ಸಾಕುವಿವೇಕವು ಎಂದನು ॥ ೩ ॥ ಈಪರಿ ಕಂಸನು ಕೋಪವ ನಿಲ್ಲಿಸಿ, ಶ್ರೀಪತಿ ಜನ್ಮವನೀಕ್ಷಿಸಿಕೊಳ್ಳುತ್ತ । ಭೂಪನು ವೈರವ ತೊಟ್ಟನು ಮನದಲ್ಲಿ, ಶ್ರೀಪರಮಾತ್ಮನಲಿ ॥ ಆಪತ್ತು ಬಂದಾಗ ಪಾಪಿಗಾದರು ಜಗದಾಪದ್ರಕ್ಷಕನೊಳು ಜ್ಞಾಪಕ ಮಾತ್ರವು ॥ ಕೋಪದಿಂದಾದರು ಪುಟ್ಟಲು ಸರ್ವದಾ ಆ ಪುರುಷನೇ ಧನ್ಯನು ॥ ೪ ॥ ಕುಳಿತಲ್ಲಿ ನಿಂತಲ್ಲಿ ತಿರುಗುತಬರುವಲ್ಲಿ ತಾರೆಂದು ಪಾನವ ಮಾಡಿ ಮಲಗುವಲ್ಲಿ॥ ಆತಂಗೆ ಚಿಂತೆಯು ಹತ್ತಿತು ಮನದಲ್ಲಿ, ಶ್ರೀಪರಮಾತ್ಮನಲ್ಲಿ॥ ಪಾತಾಳ ಭೂತಲ ವಿತಳ ರಸಾತಲ ಮಹಾತಲ ಪೊಕ್ಕರು ಭೀತಿಯಿಂದ ಕಂಸನು ॥ ಖ್ಯಾತ ಶ್ರೀಪುಲಿಗಿರಿನಾಥನ ಮಯವಾಗಿ ಜಗವೆಲ್ಲ ಕಂಡನಾಗ ॥ ೬ ॥

। ವ ಚ ನ ।

ಈ ಪ್ರಕಾರ ದೇವಕಿಯ ಅಷ್ಟಮಗರ್ಭವಂನೋಡ್ಡಿ ಕಂಸನಿಗೆ ಪರಮಚಿಂತೆದೋರಿ, ತದೇಕಚಿಂತಾಕ್ರಾಂತನಾಗಿ, ಜಗವೆಲ್ಲ ಭಗವತ್‌ಸ್ವರೂಪವನ್ನಾಗಿ ಕಂಡು ಭಯಪಡುತ್ತ ಶಿಶುಜನನವನ್ನೇ ನಿರೀಕ್ಷಿಸಿಕೊಂಡಿದ್ದನು. ಇಷ್ಟರೊಳ್ ನಾರದಾದಿ ಮುನಿಗಳಿಂದಲೂ ರುದ್ರಾದಿದೇವತೆಗಳಿಂದಲೂ ಕೂಡಿ ಬಂದು ಬ್ರಹ್ಮನು ಗರ್ಭಸ್ತುತಿ ಮಾಡುವ ಕ್ರಮವದೆಂತೆನೆ—

ರಾಗಾ ॥ ಮಧ್ಯಮಾವತಿ ॥

ನಿನ್ನನೇ ಮರೆಹೊಕ್ಕೆವು, ಶ್ರೀಹರಿಕೃಷ್ಣ, ನಿನ್ನನೇ ಮರೆಹೊಕ್ಕೆವು ॥ ಪ ॥ ನಿನ್ನನೇ ಮರೆಹೊಕ್ಕೆವನ್ಯರಕಾಣೆವು । ಪನ್ನಗಶಯನ ಪುರಾಣಪೂರುಷಹರಿ ॥ ಅ ॥ ಸತ್ಯವ್ರತನೆ ಬಹುಸತ್ಯಪರನೆ ಶ್ರೀಸತ್ಯನೆ ಕೇಳು ಸೀ ಸತ್ಯಕ್ಕೆ ಯೋನಿಯೆ॥ ಸತ್ಯದೊಳ್ನಿಹಿತನೆ ಸತ್ಯಕ್ಕೆ ಸತ್ಯನೆ ಸತ್ಯಾತ್ಮಕನೀನೇ ॥ ದೇವರದೇವ—ಸತ್ಯಸಂಗನು ನೀನೇ,— ವರಗಳನೀವ — ಸತ್ಯಮೂರುತಿನೀನೇ । ಮಹಾನುಭಾವ । ಸತ್ಯಸಂಧನುನೀನೇ ॥ ಭಕ್ತರ ಕಾಯ್ವ—। ಸತ್ಯನೇತ್ರನೆದಿವ್ಯ ಸತ್ಯಚರಿತ್ರನೆ ॥ ೧ ॥ ಏಕಾಯನವಿದು ದ್ವಿಫಲತ್ರಿಮೂಲವು ನಾಲ್ಕುರಸವು ಪಂಚಬೀಳು ಷಡಾತ್ಮವು । ಆ ಕೃತಿಯಿಂದೇಳುತ್ವಕ್ಕೆಂಟು ಶಾಖೆ

ಯು ॥ ನಾಲ್ಕಯ್ದು ನೇತ್ರಂಗಳು—ಈ ಪರಿಯಲ್ಲಿ ಈರಯ್ದು ಪತ್ರಂಗಳು । ಇವುಗಳಲ್ಲಿ, ಪರಿಪರಿಗೋತ್ರಂಗಳು । ಈ ವೃಕ್ಷದಿ, ಲೋಕವಿಚಕ್ಷಣವಾದೆರಡು ಪಕ್ಷಿಗಳು ॥ ೨ ॥ ಶ್ರೀನಿವಾಸನೆ ಕೇಳಿಂತಪ್ಪ ಲೋಕಕ್ಕೆ ಸ್ಥಾನವಿಧಾನ ಅನುಗ್ರಹರೂಪನು । ನೀನೊಬ್ಬನಾಗಿರೆ ನಿನ್ನ ಮಾಯೆಗೆ ಸಿಕ್ಕಿ—ನಾನಾ ತಿಳಿಯುವರು, ಮೂಢರು ಅಜ್ಞಾನದಿ ಮುಳುಗುವರು—ಆ ಮನುಜರು ದೀನರೆಂದೆನಿಸುವರು, ಆಚಾರ ವಿಹೀನರಾಗಿರುತಿಹರು ॥ ಈ ರೀತಿ—ಹಾನಿಬಾರದ ರೀತಿ ಕಾಯೊ ನಾರಾಯಣ ॥ ನಿನ್ನನ್ನೇ ॥ ೩ ॥ ನೀನೇ ಚರಾಚರ ಲೋಕಕ್ಕೆ ಸುಖವನ್ನು, ದಾನವಮಾಡುವ ಸತ್ವರೂಪವ ಧರಿಸುವೆ ಆನಂದರೂಪದಿಂದಮರರಿಗೊಲಿದು ನೀ ॥ ದಾನವರನು ಕೊಬೆಲ್ಲುವೆ—ಭೇಗದಿ ಭಕ್ತ—ಮಾನವರನು ಕಾಯುವೆ—ಕಿಂಕರರಿಗೆ ನೀನಾಗಿ ಪೊಳಿಟರುವೆ ॥ ನಿರಂತರ । ಧ್ಯಾನವ ಮಾಡುವ ಸುಜ್ಞಾನವ ಕೊಡು ದೇವ ॥ ನಿನ್ನನ್ನೇ ॥ ೪ ॥ ಸರಸಿಜಲೋಚನ ಸತ್ವಧಾಮನೆ ನಿನ್ನ ಚರಣದೊಳಿಂಬಿಟ್ಟು ಮಾನಸಿಕರು ನಿನ್ನ ಚರಣಸಂಗತಿಯಿಂದ—ಭವನೀರಧಿಯನ್ನು—ಕರುತುರುಪದಗೈಯ್ವರು(?)—ನಿನ್ನಯ ಪದಹರಿಗೋಲನೇರುವರು, ಈ ಸಂಸಾರ ಶರಧಿಯ ದಾಟುವರು । ಮರಳಿ ತಾವು ಮರಣವೆಂಬುದ ಕಾಣರು—ನಿನ್ನಯ ದಿವ್ಯ—ಪರಮಪದದಿ ನಿತ್ಯ ಸುಖದೊಳಗಿರುವರು ॥ ನಿನ್ನನೆ ॥ ೫ ॥ ಅರವಿಂದಲೋಚನ ಮತ್ತೆ ಕೆಲವರಿಗೆ ಅಂಷಡ್ವರ್ಗವ ಜಯಿಸಿದರುಕೂಡ, ಅರಿಯದೆ ನಿನ್ನ ಶ್ರೀ ಪಾದದ ಮಹಿಮೆಯ ॥ ದುರುಳರು ಮತಿಹೀನರು—ಕಷ್ಟದಿ ಲೋಕಾಂತರಗಳ ಸಾಧಿಪರು । ನಿನ್ನಂಘ್ರಿಯ, ಧರಿಸದೆ ಕೆಳಜೀಳ್ವರು—ತಿರುಗಿ ಬೇಗ ಹರಣಕೆ ಶಿಲುಕುವರು ॥ ನಿನ್ನನೇ ॥ ೬ ॥ ನಿನ್ನೊಳು ದೃಢಭಕ್ತಿಯುಳ್ಳ ಮಹಾತ್ಮರು, ಅನ್ಯರ ತರದಂತೆ ಭ್ರಮಿಸಿ ಬೀಳುವರಲ್ಲ ॥ ನಿನ್ನ ಕಟಾಕ್ಷದಿ ನಿರ್ಭಯರಾಗಿ ತಾ—ವನ್ಯ ದೇವರ ನೋಡರು । ದುರ್ದೇವತೆ—ಬೆನ್ನಲಿ ತಿರುಗುವರು । ಎಂದೆಂದಿಗೂ ನಿನ್ನನೇ ಭಜಿಸುವರು । ಆ ಪುರುಷರು, ಧನ್ಯರಾಗಿರುತಿಹರು ॥—ಶ್ರೀಹರಿನಿನ್ನ ॥ ಸನ್ನುತಶೀಲರು ಚನ್ನಾಗಿ ನೆನೆವರು ॥ ನಿನ್ನನ್ನೇ ಮರೆಹೊಕ್ಕೆವು ॥ ೭ ॥ ಜೀವರ ಶ್ರೇಯಸ್ಸಿಗೋಸುಗ ನೀನೀಗ ಭಾವಿಸಿ ಸತ್ವಶರೀರವ ಧರಿಸುವೆ । ಶ್ರೀವಿಷ್ಣುವೆ ಲೋಕ ರಕ್ಷಕನೆನ್ನುತ—ಭಾವಿಸಿ ನುತಿಪರು । ದೇವರಿಗೆಲ್ಲ—ದೇವರೆಂದರಿತಿಹರು ॥ ವೇದಕ್ರಿಯಾ ಭಾವದಿಂದರ್ಚಿಪರು ॥ ಸಮಾಧಿಸ್ಥ—ಭಾವದಿಂ ಮುನಿಗಳು ಪೂಜಿಪರೆನ್ನುತ ॥ ೮ ॥ ಸತ್ವಗುಣಗಳಿಂದ ಸತ್ವಮೂರುತಿಯೆಂದು ಸತ್ವದಿಂ ತೋರುತಲಿರುವೆ ಈ ಜಗದೊಳು । ಸತ್ಯಸುಜ್ಞಾನದಿ ಅಜ್ಞತ್ವನೀಗುತ, ನಿತ್ಯದಿ ಭಜಿಸುವರು ॥ ಮಹಾತ್ಮರು ಗತ್ಯಂತರ ನೋಡರು—ನಿನ್ನಯಸೇವಾ ಕೃತ್ಯದೊಳಿರುತಿಹರು । ನಿನ್ನನೆ ನಿನ್ನ ಭೃತ್ಯರು ಪೊಗಳುವರು । ಶ್ರೀಪರಮಾತ್ಮ । ನಿತ್ಯ ತೃಪ್ತನೆ ನಿನ್ನ ಶಕ್ತಿಯಪಾರವು ॥ ನಿನ್ನನ್ನೇ ॥ ೯ ॥ ನಾಮರೂಪುಗಳನ್ನು ಧರಿಸದೆ ವೈಕುಂಠಧಾಮದೊಳಿರುತಿಹ ಸಾಕ್ಷಿರೂಪನು ನೀನು। ನೇಮದ ಮುನಿಗಳ ಮನಸುವಾಕ್ಯಗಳಿಂದ—ಪ್ರೇಮದಿಂದನು ಮೇಯನು ॥— ಆದರು ನೀನು—ಜನ್ಮಸ್ವೀಕರಿಸುವೆಯೊ । ಭಕ್ತರಿಗಾಗಿ । ಕರ್ಮವ ಮಾಡುವೆಯೋ—ಪಾವನವಾದ—ನಾಮವ ಧರಿಸುವೆಯೊ । ಮಂಗಳಗುಣ, ಶ್ರೀಮಂತನೆನಿಸುವೆಯೊ ॥ ಅಮರರಿಗಾಗಿ ॥ ಪ್ರೇಮದಿಂದವತಾರಗೈವ ನಾರಾಯಣ ॥ ನಿನ್ನನ್ನೇ ॥ ೧೦ ॥ ಪರಮ ಪೂರುಷ ನಿನ್ನ ಚರಣಸೇವೆಗಳಲಿ, ಪರಮಭಕ್ತಿಗಳುಳ್ಳ ಭಾಗವತರು ನಿನ್ನ—ಪರಮಮಂಗಳವಾದ—ನಾಮರೂಪಗಳನ್ನು—ನಿರುತದಿ ನೆನೆಯುವರು । ನಿನ್ನಯ ಕಥೆ—ಹರುಷದಿ ಕೇಳುವರು—ಕೇಳುತ ನಿನ್ನ—ಚರಣವ ಸ್ಮರಿಸುವರು। ಸ್ಮರಿಸಿ ನಿನ್ನ—ಪರಿಪರಿ ಪೊಗಳುವರು ॥ ಈ ಪರಿ ನಿನ್ನ ॥ ಮರೆಹೊಕ್ಕ ಜನರಿಗೆ ಜನನ ಮರಣವಿಲ್ಲ ॥ ನಿನ್ನನ್ನೇ ॥ ೧೧ ॥ ಧರಣೀ ಭಾರವ ಅಪಹರಿಸುವ ನೆವದಿಂದ, ಧರೆಯೊಳಗವತಾರಗೈಯ್ವ ನಿನ್ನಯ ದಿವ್ಯ । ಚರಣಾಂಕಿತದಿಂದ ಕಾಣುವ ಧರೆಯನ್ನು ಹರುಷದಿಂ ನೋಡುವೆವು ॥ ಶೋಭನವಾದ ಚರಣಾಂಬುಜ ಕಾಣ್ಬೆವೊ ॥ ದಿಕ್ಕುಗಳಲ್ಲಿ ತಿರುಗಿದಂಕಿತ ನೋಳ್ಪೆವೊ । ಅದೃಷ್ಟದಸಿರಿಗೆ ಸಮ್ಮತಿಸುವೆವೊ । ಧರೆಯಲಿ ನಿನ್ನ ॥ ಕರುಣಾರಸವ ಕಂಡು ಪರಿತೋಷ ಪಡುವೆವು ॥ ನಿನ್ನನ್ನೇ ॥ ೧೨ ॥ ಜನ್ಮರಹಿತನಾದ ಜಗದೀಶ ನಿನಗೀಗ ಜನ್ಮವೆಂಬುದು ವಿಡಂಬನವಲ್ಲವೆ । ಜನ್ಮವಿಲಯದಿಂದ ದೂರನೆನುತಶ್ರುತಿ ಚೆನ್ನಾಗಿ ಕೂಗಿಡಲೂ ॥ ಈ ಸೃಷ್ಟಿಯೂ, ನಿನ್ನ ಮಾಯದಿ ಪುಟ್ಟಲು—ಸಂರಕ್ಷಣೆಯನು ನೀಂಗೈಯ್ಯುತ್ತಿರಲು ॥ ಸಂಕೋಚವು ನಿನ್ನಿಚ್ಛೆಯಿಂದಾಗಲು। ಈ ಪರಿಯಿಂದ ಸನ್ಮತಿಗಳು ಪೇಳಲು, ಇಂತಿರುತಿರೆ, ಮನ್ಮಥಪಿತನಿಗೆ ಜನ್ಮವಿನೋದವು ॥ ನಿನ್ನನ್ನೇ ॥ ೧೩ ॥ ಮೀನು ಕುದುರೆ ಹಂಸ ಜಲಚರಕಚ್ಛಪ—ಮಾನವ ಸಿಂಹ ವರಾಹರಾಜನ್ಯದಿ । ಕ್ಷೋಣೀಸುರರು ಮತ್ತು ವಿಬುಧರ ಕುಲದಲ್ಲಿ ನೀನವತರಿಸಿದೆಯೊ॥ ಆ ದೇವನೇ । ನೀನೆಂದು ನಂಬಿದೆವೊ॥ ಭೂಮಿಯಭಾರ—ನೀನಪಹರಿಸುವೆಯೊ । ಲೋಕಕೆ ಬಹು, ಮಾನವ ತೋರುವೆಯೋ ॥ ಯದೂತ್ತಮ, ಸಾನಂದರೂಪ ನಿರಂತರ ವಂದನ ॥ ನಿನ್ನನ್ನೇ ॥ ೧೪ ॥ ಮೀನಶರೀರ ಹಯಾನನ ಕಚ್ಛಪ ನೀನೇ ನೃಸಿಂಹವರಾಹಾದಿಹಂಸನು । ಮಾನವಕುಲರಾಜ ರಾಮ ಶ್ರೀ ಭಾರ್ಗವ, ವಾಮನರೂಪ ನೀನು—ಈ ತೆರದಲಿ ನಾನಾ ರೂಪಾದೆಯೋ—ಈ ರೂಪವ ಧ್ಯಾನಿಸಿ ನೋಡುವೆವೊ, ಬೇಕಾದಷ್ಟು ಗಾನವಮಾಡುವೆವೊ॥

ಶ್ರೀಪುಲಿಗಿರಿ—ಶ್ರೀನಿವಾಸನೆ ಪರಿಪಾಲಿಸು ಜಯ ಜಯ || ನಿನ್ನನ್ನೇ || ೧೫ ||

। ವಚನ ।

ಈ ಪರಿಯಿಂದ ಕಮಲಾಸನಾದಿ ಪ್ರಮುಖರು ಶ್ರೀಪತಿಯಂ ಕೊಂಡಾಡಿ ಪಾಡಿ ದೇವಕಿಯೊಳ್ ನುಡಿದ ಬ್ರಹ್ಮ, ಕೇಳಮ್ಮ, ನಿನ್ನ ಗರ್ಭದೊಳಿರುವನೇ ಪರಬೊಮ್ಮ, ಬೇಗದಿಂ ಮುರಿಯುವನು ಕಂಸನ ಹಮ್ಮು ಪ್ರಾಣದಿಂ ತೊಲಗುವ ಖಳನಿಂ ಭಯಬೇಡವಮ್ಮ ಕಾಪಾಡುವ ನಮ್ಮ ಯದುಕುಲದ ಸಿಂಹ, ನೀಂತಾಪ ಪಡಬೇಡವಮ್ಮ ಯದುಕುಲೋದ್ಧಾರಕ ನಮ್ಮ, ಈತನೇ ನರಸಿಂಹ, ನೀಕೇಳಮ್ಮ ಸುಮ್ಮ ||

। ವಚನ ।

ಈ ಪ್ರಕಾರದಿಂದ ಬ್ರಹ್ಮಾದಿ ದೇವತೆಗಳು ಪರಮಾತ್ಮನಂ ಧ್ಯಾನಿಸಿ, ಪ್ರಾರ್ಥಿಸಿ, ಸ್ತುತಿಸಿ, ದೇವಕಿಯಂ ಸನ್ಮಾನಿಸಿ ಸಂತೋಷದಿಂದ ತೆರಳಲು, ಶ್ರೀಕಾಂತನುದಯಿಸುವ ಕಾಲದೊಳ್ ಸಂತೋಷಸೌಭಾಗ್ಯ ಸುಖತತಿಗಳತ್ಯಂತ ಸಂಭ್ರಮದೊಳೊಪ್ಪಿತೀಪರಿಯು ಮೂಜಗಕೆ ಸಿರಿಯು ||

ಕೃಷ್ಣಾವತಾರಕಾಲದ ಮಾಹಾತ್ಮ್ಯ

ರಾಗ|| ದೇಶೀಯ । ಶಂಕರಾಭರಣ

ಕೃಷ್ಣಾವತಾರ-ಕೃಷ್ಣಾವತಾರ। ಸೃಷ್ಟಿಗಧಿಕವಿದು ಕೃಷ್ಣಾವತಾರ || ಪ || ಇಂತಿರೆ ನಂತರ ಕೇಳು ಪರೀಕ್ಷಿತ, ಸಂತೋಷಕಾಲದ ಸೊಬಗಿನ ನೋಡ || ಕೃಷ್ಣಾ || ೧ || ಕೃಷ್ಣಾವತಾರದ ಕಾಲವಿಶೇಷವು । ಸೃಷ್ಟಿಗಧಿಕವಾಗಿ ತಲೆದೋರಿತಾಗ || ಕೃಷ್ಣಾ || ೨ || ಸರ್ವಗುಣೋಪೇತ ಕಾಲವೊಪ್ಪಿತ್ತು । ಶರ್ವರಿಯುಲಿ ಪರಮ ಶೋಭನವಾಯಿತು ||೩|| ಸಪ್ತವಿಂಶತಿತಾರೆ ಸೌಮ್ಯಂಗಳಾದವು । ಸತ್ವದಿಂದೊಪ್ಪಿತು ಮತ್ತೆ ಗ್ರಹಂಗಳು ||೪|| ದಿಕ್ಕುಗಳೆಲ್ಲ ಪ್ರಸನ್ನಂಗಳಾದವು । ಚುಕ್ಕಿಗಳಂಬರ ತುಂಬಿಮಿನೋದವು || ೫ || ಶೃಂಗಾರವಾದ ಪುರ ವ್ರಜಗೂಡಿ । ಮಂಗಳ ಭೂಯಿಷ್ಠವಾದಳು ಭೂಮಿ || ೬ || ಗಂಗಾದಿನದಿಗಳು ಶೃಂಗಾರವಾದವು । ರಂಗನು ಭೂಮಿಗೆ ದಯಮಾಡುವಾಗ || ೭ || ನರ್ಮದೆ ಮೊದಲಾದ ನಾನಾ ನದಿಗಳು । ನಿರ್ಮಲೋದಕದಿಂದ ನಿಬಿಡಂಗಳಾದವು ||೮|| ರಾಜೀವಕಾಂತಿವಿಶೇಷದಿಂ ಮಡುಗಳು । ಈ ಜಗದಲ್ಲಿ ವಿರಾಜಿತವಾದವು ||೯|| ಪಕ್ಷಿಬ್ರಹ್ಮರಕುಲ ನಾದಸ್ತಬಕದಿಂದ । ವೃಕ್ಷಂಗಳೆಲ್ಲವಿರಾಜಿತವಾದವು ||೧೦|| ಮಂದಮಾರುತಸುಖ ದಿಂದ ಬೀಸುತಪುಣ್ಯ । ಗಂಧಮಹಿಮ ದಿವ್ಯ ಶುಚಿಯಾದನಾಗ ||೧೧|| ಯಜ್ಞೇಶ್ವರ ತಾನು, ವಿಪ್ರರ ಮನೆಯಲ್ಲಿ । ಅಗ್ನಿಹೋತ್ರಗಳಿಂದ ಬೆಳಗಿದನಾಗ ||೧೨|| ದೈತ್ಯಕಂಟಕರಾದ ಸಾಧುಸಜ್ಜನರಿಗೆ । ಚಿತ್ತಂಗಳೆಲ್ಲ ಪ್ರಸನ್ನಂಗಳಾದವು ||೧೩|| ಜಾಯಮಾನನು ಜಗದೀಶನಾಗಿರುತಿರೆ । ಭೋಯೆಂದು ದುಂದುಭಿಮೊಳಗಿತುಮೇಲೆ ||೧೪|| ಕಿನ್ನರರೆಲ್ಲ ಗಂಧರ್ವರ ಕೂಡಿ । ಚನ್ನಾಗಿ ಗಾನವಗೈದರು ಪಾಡಿ ||೧೫|| ಸಿದ್ಧಚಾರಣರೆಲ್ಲ ಕೊಂಡಾಡುತ್ತ ಕರ । ಬದ್ಧರಾಗಿರುತಿದ್ದರಂತರಿಕ್ಷದಲಿ ||೧೬|| ವಿದ್ಯಾಧರಾಪ್ಸರೆಯರು ನರ್ತನ । ವಿದ್ಯೆಯಿಂದ ಪೂಜಿಸಿ ಪಾಡಿದರಾಗ ||೧೭|| ಸುರಮುನಿಸಿದ್ಧರು ಪುಷ್ಪವೃಷ್ಟಿಗಳನ್ನು । ಪರಿತೋಷದಿಂದಲಿ ಮಾಡಿದರಾಗ ||೧೮|| ಮೆಲ್ಲಮೆಲ್ಲನೆಮೇಘ, ಮಂಡಲ ಜಲಧಿಗೆ । ಸೊಲ್ಲನು ಕರಿಸುತ ಘರ್ಜಿಸಿತಾಗ ||೧೯|| ಅರ್ಧರಾತ್ರಿಯು ತಮವದ್ಭುತವಾಗೆ । ಜನಾರ್ಧನ ಜನಿಸುವ ಲಗ್ನದೊಳಗೆ ||೨೦|| ದೇವರೂಪಿಣಿಯಾದ ದೇವಕಿಯುದರದಿ । ಶ್ರೀವಿಷ್ಣು ಜನಿಸಿದ ನಾಗ ವಿನೋದಿ ||೨೧|| ಪೂರ್ವದಿಕ್ಕಿನೊಳ್ ಪುಷ್ಕಳೇಂದುವಿನಂದದಿ । ಸರ್ವಗುಹಾಶಯ ನವತಾರಗೈದ ||೨೨|| ಭೋಂಕಾರಗೈಯುವ ಭೇರಿವಾದ್ಯಂಗಳು । ಝೋಂಕರಿಸಿತು ತಕ್ಕೆ ವಾದ್ಯಂಗಳು ||೨೩|| ಶಂಖಮೃದಂಗ ತರಂಗ ವಾದ್ಯಂಗಳು । ಖಿಣಿಖಿಣಿ ಖಣಿಖಣಿಯೆಂದವು ಬೇಗ ||೨೪|| ಪಂಕಜನೇತ್ರನು ಪರಮಪವಿತ್ರನು । ವೆಂಕಟಪತಿಯವ ತರಿಸಿದನಾಗ ||೨೫|| ಹುಣಿಮೆ ಚಂದ್ರಮನಂತೆ ಪುಲಿಗಿರಿ ನಾರಾ—ಯಣಮೂರ್ತಿಯವತಾರಗೈದ ವಿನೋದ || ಕೃಷ್ಣಾ || ೨೬ ||

। ವಚನ ।

ಇಂತು ಶುಭಕಾಲವಿಶೇಷದೊಳ್, ಶುಭತಿಥಿ, ಶುಭವಾರ, ಶುಭನಕ್ಷತ್ರ, ಶುಭಲಗ್ನದೊಳ್ ಶ್ರೀಕೃಷ್ಣಾವತಾರ ಗೈದನದೆಂತೆನೆ—

ಕಂದ||— ಪಟ್ಟದ ಘೊರೆಕೇಳ್ ಮುದದಿಂ ।
ದಷ್ಟಮಿ ರೋಹಿಣಿಯುನಟ್ಟಿರುಳೊಳಾಗೊಲವಿಂ ||
ಸೃಷ್ಟಿಗೆ ಮಿಗಿಲಚ್ಚರಿಯೆನೆ ।
ವಿಷ್ಣುವೆತಾನವತರಿಸಿದ ಲೋಕಶರಣ್ಯಂ ||

ರಾಗ|| ಯಮುನಾ ||

ಬಾಲಕೋತ್ತಮ ನಾಗಜನಿಸಿದ ಕೇಳೊ ನೀನು ಪರೀಕ್ಷಿತ ನೀಲಮೇಘಶ್ಯಾಮನಿರ್ಮಲ ಲೀಲಲೋಕೈಕಾದ್ಭುತ || ಪ || ಅಂಬುಜೇಕ್ಷಣ ಸುಂದರಾನನ ಕಂಬುಕಂಠ ಚತುರ್ಭುಜ । ಅಂಬುರುಹಕರದಲ್ಲಿ ಚಕ್ರವು ಕಂಬುಖಡ್ಗಗದಾಯುಧ ||೧|| ಹಸ್ತದುಂಗುರ ವಕ್ಷದಲಿ ಶ್ರೀವತ್ಸಲಕ್ಷ್ಮೀ ವಿರಾಜಿತ । ಕೌಸ್ತುಭೋತ್ತಮವಾದ ರತ್ನವು ಕೊರಳ ಮಧ್ಯದಿ ಹೊಳೆಯುತ || ೨ || ಚಂದ್ರವದನನು ಚಂದದಿಂ ಪೀತಾಂಬರವನು ಧರಿಸುತಾ । ಸಾಂದ್ರಜಲಧರ ಸೌಭಸೋನ್ನತ ಕಾಂತಿಯಿಂದಲಿ ಹೊಳೆಯುತ || ೩ || ಕೋಟಿವೈಢೂರ್ಯಾದಿರತ್ನ ಕಿರೀಟ ಕುಂಡಲ ಶೋಭಿತ । ಸಾಟಿಯಿಲ್ಲದ ಸಾಸಿರಂಗಳ ಕೋಟಿ

ಕುಂತಳ ವಿರಾಜಿತ ॥ ೪ ॥ ಬಿಡಗು ನಡುವೊಡ್ಯಾಣ ತೋಳ್ಬಳೆ ಕಡಕ ಕಂಕಣ ಧರಿಸುತ ॥ ತೊಡವಿಯಲಿ ವ್ಯಾಘ್ರಾದ್ರಿ ನಾಯಕ ಒಡೆಯ ಶ್ರೀನಿಧಿ ಹೊಳೆಯುತ ॥ ಬಾಲಕೋತ್ತಮನಾಗ ಜನಿಸಿದ ॥ ೫ ॥

॥ ಸೀಸಪದ್ಯ ॥

ವಸುದೇವ ನೋಡಿದನು ವಿಷ್ಣು ಮೂರುತಿಯನ್ನು । ವಿಸ್ಮಯದಿ ವಿಸ್ತಾರ ನೇತ್ರಯುತನ ॥ ಥಳಥಳನೆ ಹೊಳೆಯುತಿಹ ಸುತನಾದ ಪರಿಯನ್ನು । ಬಳಬಳಸಿ ನೋಡುತ್ತ ಭ್ರಮೆಗೊಳುತ್ತ । ಕೃಷ್ಣಾವತಾರಮಹದುತ್ಸವಾನಂದಾಬ್ಧಿ ಸೃಷ್ಟಿಸಂಭ್ರಮದಲ್ಲಿ ಮಿಂದು ಮಿಂದು ॥ ಹತ್ತುಸಾಹಸ್ರಗೋದಾನವನು ವಿಪ್ರರಿಗೆ । ಚಿತ್ತದಲಿ ನಲಿದಿತ್ತ ಮುದಪಡುತ್ತ ॥ ಪರಮ ಪೂರುಷನೆಂದು ಅರಿತು ಸಾಷ್ಟಾಂಗವನು ಪರಿತೋಷದಲಿ ಮಾಡಿ ಕರವಗೂಡಿ ॥ ಹೊಳೆವ ಮೈ ಬಣ್ಣದಿಂ ಸೂತಿಕಾಗೃಹವನ್ನು ನೋಡಿ ನೋಡಿ ॥ ಹರಿಯ ಮಹಿಮೆಗಳನ್ನು ತಿಳಿದು ಬೆಳದು । ದುರುಳ ಕಂಸನ ಭಯವ ತೊರೆದು ಜರಿದು । ಪರಿಪರಿಯುಲ್ಲಿ ಪೊಗಳಿ ಮರಳಿ ಮರಳಿ । ಹರಿಯೊಡನೆ ನುಡಿಯುತಿದ್ದ ಕರಬದ್ಧ ಸುಪ್ರಸಿದ್ಧ ॥

॥ ವಚನ ॥

ಈ ಪ್ರಕಾರ ಅವತಾರ ಮಾಡಿದ ಭಗವಂತನಂ ಕಂಡು ವಸುದೇವನು ಭಕ್ತಿಯಿಂದ ಸ್ತುತಿಸುವನದೆಂತೆನೆ ॥

ರಾಗಾ ॥ ಹುಶೇನಿ ॥ (ಹ್ಯಾಂಗೆಬೋಗಲಿ)

ದೇವ ದೇವರ ದೇವ ಕಾಯೋ । ದೇವಕೀ ಜಠರೋದ್ಭವ ॥ ದೇವತಾಗಣ ರಕ್ಷಣೋತ್ಸುಕ ದೈತ್ಯ ಕುಲ ಸಂಹಾರಕ ॥ಪ॥ ವಿದಿತನಾದೆಯೊ ನೀನು ಸಾಕ್ಷಾತ್ಪುರುಷ ಪ್ರಕೃತಿ ವಿದೂರನು ॥ ಅಧಿಕವಾದಾನಂದರೂಪನು ಹೃದಯಸಾಕ್ಷಿ ಸ್ವರೂಪನು ॥೧॥ ಜಾಣ ನಿನ್ನಯ ಮಾಯೆಯಿಂ ತ್ರಿಗುಣಾತ್ಮವಾದೀ ಜಗವನು । ನೀನು ನಿರ್ಮಿಸಿ ಲೇಪನಲ್ಲದೆ ಲೇಪನಂದದಿ ಕಾಣ್ಬೆಯೊ ॥ ದೇವ ॥೨॥ ವಿಕೃತಿಯೈದಿದ ಪ್ರಕೃತಿ ಮಂಡಲ ಪ್ರಕೃತ ನಿನಗೆ ಶಯನವು । ಸುಕೃತನಿನ್ನೊಳಗಕೃತವಾಗಿಯೆ ಸಕಲರೂಪಗಳಿರುವುವು ॥ ದೇವ ॥೩॥ ಈ ಪರಿಯಲಿ ನೀನು ಬುಧ್ಯನಮೇಯಲಕ್ಷಣರೂಪನು । ಆ ಪರಿ ತ್ರಿಗುಣಾತ್ಮನಾದರು ಹೇಯಗುಣರಾಹಿತ್ಯನು ॥ ದೇವ ॥ ೪ ॥ ಸರ್ವಸಾಕ್ಷಿಕನಾಗಿನೀನು । ಸರ್ವಭೂತದೊಳಿರುತಿರೆ । ಸರ್ವವಸ್ತು ಪರಾತ್ಮನಾಗಿರೆ ಸರ್ವನಿನ್ಹೊರತೆನಿಸದೆ ॥ ದೇವ ॥೫॥ ಗುಣಗಳಿಂದನು ವೃತ್ತಿಯೆಂಬುದ ನೆಣಿಸಿ ಕುಮತಿಗಳರಿಯರು ಗಣಿತವಲ್ಲಾ ಜನರಮತಿಗಳು ಗುಣದಮಹಿಮೆಯ ತಿಳಿಯರು ॥ ದೇವ ॥೬॥ ಜಗದ ಸೃಷ್ಟಿಸ್ಥಿತಿಲಯಂಗಳು ತ್ರಿಗುಣದಿಂದಲಿ ಪೇಳ್ವರು । ಸುಗುಣ ನಿನ್ನಯ ಲೀಲೆಯಿಂದಲೆ ಸಗಲು ಮುಗುಳು ಸ್ಥಿತಿಗಳು ॥ ದೇವ ॥೭॥ ಸತ್ವಗುಣದಿಂ ಲೋಕರಕ್ಷೆಗೆ ಶುಕ್ಲವರ್ಣವ ಧರಿಸುವೆ । ಸೃಷ್ಟಿಗೋಸುಗ ರಕ್ತವರ್ಣರಜೋಗುಣಾತ್ಮಕನಾಗುವೆ ॥ ದೇವ ॥೮॥ ಲೋಕವಿಲಯಕೆ ಕೃಷ್ಣವರ್ಣತಮೋಗುಣಾತ್ಮಕನಾಗುವೆ । ಲೋಕದೊಳು ಕ್ರೀಡಾರ್ಥವೆನ್ನೊಳು ಆಕೃತಿಯನು ತಾಳಿದೆ ॥ ದೇವ ॥೯॥ ರಾಜವೇಷದ ಕೋಟಿ ದೈತ್ಯರ ತೇಜದಿಂ ಸಂಹರಿಸುವೆ । ಶ್ರೀಜಗತ್ಪತೇ ನಮ್ಮ ಮನೆಯೊಳು ವ್ಯಾಜದಿಂದವತರಿಸಿದೆ ॥ದೇವ॥ ॥೧೦॥ ನಿನ್ನ ಜನ್ಮವು ನಮ್ಮೊಳೆನ್ನುತ ನಿನ್ನ ಅಗ್ರಜರೆಲ್ಲರ । ಕುನ್ನಿ ಕಂಸನು ಕೊಂದು ಬಿಸುಟನು ಮುನ್ನ ಕೇಳು ಸುರೇಶ್ವರ ॥ ದೇವ ॥೧೧॥ ದೇವ ನೀನವತಾರಗೈದುದ ಧೂತ ಹುಸಿದಲಿ ಕೇಳುತ । ಆವ ವೇಳೆಯೊಳಿಲ್ಲಿ ಬರುವನೋ ಆಯುಧಂಗಳ ಪಿಡಿಯುತ ॥ದೇವ॥೧೨॥ ಪಾವನೋತ್ತಮ ಪೂರ್ಣಕಾಮ ಪಾಪನಾಶ ಪರಾತ್ಪರಾ । ಶ್ರೀವಧೂವರ ಶ್ರೀನಿವಾಸ ಭಕ್ತಜನಮಂದಾರಕಾ ॥ ದೇವ ॥೧೩॥ ಪುಂಡರೀಕದಳಾಯತೇಕ್ಷಣ ಪುಣ್ಯಕೋಟಿ ವಿಶಾರದ । ಕುಂಡಲೀಶ ಶಯನಾದಿ ಪುರುಷ ಕಾಮಕೋಟಿ ವಿರಾಜಿತ ॥ ೧೪ ॥ ಪರಮ ಪುರುಷ ಪರೇಶ, ಪಾವನ, ಶರಧಿಶಯನ, ಸುರೇಶ್ವರ । ಧರಣಿಗಧಿಕ ವ್ಯಾಘ್ರಗಿರಿಶ್ರೀವರದ ವೆಂಕಟನಾಯಕ ॥ ದೇವ ॥೧೫॥

॥ ವಚನ ॥

ಈ ರೀತಿಯಿಂ ಪಿತನು ನುತಿಸಿದನಾಮೇಲೆ, ಮಾತೆ ದೇವಕಿಯು ಮಹಾಪುರುಷ ಲಕ್ಷಣೋಪೇತನಾದ ಸುತನಂ ನೋಡಿ ಮುಗುಳುನಗೆಗೂಡಿ, ಘಾತಕ ಕಂಸನಿಂ ಭಯ ಪಡುತ ಹರಿಯಂ ನುತಿಸಿ ಮಾತಾಡುವಳ್ಮಗನೊಡನೆ ಮಾಯದಿರುಳೋಳ್ ॥

ರಾಗ ॥ ಖರಹರಪ್ರಿಯ ॥

ನಮೋ ನಮೋ ಸದಾ ಮಹಾನುಭಾವನೆ ॥ಪ॥ ನಮೋ ನಮೋ ರಮೋತ್ತಮ ವಿಮಾನ ಮಾನ ಮೌನಿಸನ್ನುತಾ । ಸಮಾನ ಮಾನ ದಾನವಾರಿ ವಾಮನಾದಿದೇವನೆ ॥ ಅನು ॥

ನಿರ್ವಿಶೇಷ ನಿರ್ವಿಕಾರ ನಿರ್ಗುಣಾಖ್ಯ ಬ್ರಹ್ಮವೆಂಬ । ಸರ್ವವಿಷ್ಣುರಧ್ಯಾತ್ಮದೀಪ ನೀನೆಯೆನ್ನುವರ್ ॥ ನಮೋ ॥ ೧ ॥ ಆದಿಪರಂಜ್ಯೋತಿವಸ್ತು ಬೋಧಕಾರಣಾವ್ಯಕ್ತ । ನಾದನೀ ನಿರಂಜನನಿರೀಹನೆಂದು ಪೇಳುವರ್ ॥ ನಮೋ ॥೨॥ ಬ್ರಹ್ಮರಾತ್ರಿಯಲ್ಲಿ ಜಗವು ತಮ್ಮ ಭೂತವನ್ನು ಪೊಂದಿ । ಬ್ರಹ್ಮಸೃಷ್ಟಿಲೀನವಾಗಲೊಮ್ಮೆ ನೀನು ಶೇಷನು ॥ ನಮೋ ॥ ೩ ॥ ಕಾಲರೂಪವೆಲ್ಲ ನಿನ್ನ ಲೀಲೆಯೆಂದು ಪೇಳುವರ್ । ಸಮೂಲವಿಶ್ವವೆಲ್ಲ ನಿನ್ನ ಲೀಲೆಯಿಂ ವಿಕಾಸವು ॥ ನಮೋ ॥೪॥ ಸನ್ನೆ ನಿಮಿಷ ಕಾಲಪಿಡಿದು ಮುನ್ನವತ್ಸರಾಂತವೆಲ್ಲ । ನಿನ್ನ ಚೇಷ್ಟೆಯೆನ್ನುವರ್ ಮಹೇಶ ಕ್ಷೇಮ ಧಾಮನೆ ॥ ನಮೋ ॥ ೫ ॥

ಮೃತ್ಯುವೆಂಬ ಸರ್ಪದಿಂದ । ಮರ್ತ್ಯಭಯದಿ ಜಗವ ಸುತ್ತಿ ।
ಮೃತ್ಯುಭಯವು ತಪ್ಪಲಿಲ್ಲ ಮರ್ತ್ಯನಿಗೆ ಎನ್ನುವರ್ ॥ನಮೊ॥
॥೬॥ ನಿಶ್ಯ ನಿಸ್ಸ ವಾದವನ್ಯದೃಚ್ಛೆಯಿಂದಲೈದಿತಾನು । ಸ್ವಸ್ಥ
ನಾದ ಮರ್ತ್ಯನಿಗೆ ಮೃತ್ಯುವ್ಯರ್ಥ ಸತ್ಯವು ॥ ನಮೋ ॥೭॥
ಸತ್ವ ನೀನು ಉಗ್ರಸೇನ ಪುತ್ರನೆಂಬ ಘೋರನಿಂದ । ತ್ರಸ್ತ
ರಾದ ನಮ್ಮ ಸಲಹು ಭೃತ್ಯ ಮಿತ್ರ ಕೃತ್ಯನೆ ॥ ನಮೋ ॥೮॥
ಧ್ಯಾನಧಿಷ್ಟರೂಪವಿದು । ಮಾನವರಿಗೆ ಯೋಗ್ಯವಲ್ಲ । ನೀನು
ಪೌರುಷಾಂಗವನ್ನು ಕಾಣದಂತೆ ಮಾಡೆಲೈ ॥ ನಮೋ ॥೯॥
ನಿನ್ನ ಜನ್ಮವೆನ್ನೊಳೆಂಬುದನ್ನು ಕಂಸ ತಿಳಿಯಬೇಡ । ಅಣ್ಣ
ನೆಂಬ ಪಾಪಿಯಿಂದ ಇನ್ನು ಧೈರ್ಯವಿಲ್ಲವೈ ॥ ನಮೋ ॥೧೦॥
ಶಂಖ ಚಕ್ರ ಗದೆಯು ಪದ್ಮ ದಂಕಿತಾದ್ಯಷ್ಟಭುಜದಿ । ಬಿಂಕ
ವಾದ ರೂಪವನ್ನು ಡೊಂಕು ಮಾಡಬೇಕೆಲೈ ॥ನಮೋ॥೧೧
ಪ್ರಳಯದಲ್ಲಿ ತನ್ನ ದೇಹದೊಳಗೆ ವಿಶ್ವವನ್ನು ಧರಿಸಿ । ಹೊ
ಳೆವ ನೀನುಯನಗೆ ಮಗನು ಇಳೆಗೆಚಿತ್ರವಾದುದ್ದೈ ॥ನಮೋ॥
॥೧೨॥ ತನ್ನ ದೇಹದಲ್ಲಿ ಲೋಕವನ್ನು ತಾಳ್ದದೇವ ನೀನು ।
ಯನ್ನ ಗರ್ಭದಲ್ಲಿ ಬಂದ ಚನ್ನುಲೋಕ ಡಂಬವ ॥ನಮೋ॥
॥೧೩॥ ಸತ್ಯಕೃತ್ಯನಾದ ನೀನು । ಸತ್ವರೂಪವನ್ನು ತಾಳಿ ।
ಪುತ್ರನಾಗಿ ಬಂದೆ ಲೋಕಚಿತ್ರವಾಯಿತಚ್ಚರಿ ॥ನಮೋ॥೧೪॥
ಭೃತ್ಯಮಿತ್ರನಾದ ನೀನು ಭೃತ್ಯರನ್ನು ಕಾಯ್ದು ಕೊಂಡು ।
ಸತ್ಯವ್ಯಾಘ್ರಶೈಲದಲ್ಲಿ ನಿತ್ಯನಾದ ದೇವನೇ ॥ನಮೋ॥೧೫॥

॥ ವಚನ ॥

ಈ ಪ್ರಕಾರ ಸ್ತುತಿಮಾಡಿದ ದೇವಕಿಯೊಡನೆ ಶ್ರೀಹರಿಯು ಸಂತೋಷದಿಂದ ಪೇಳ್ವನದೆಂತೆನೆ ।

ರಾಗ ॥ ಬಂದಾ ಮುಚು ಕುಂದವರದಾ ॥

ನೀನೇ ಪೂರ್ವಸರ್ಗದಲಿ ಪ್ರಶ್ನಿ । ಕೇಳ್ನೀನು ಪ್ರಶ್ನಿ ।
ನೀನೇ ಪೂರ್ವಸರ್ಗದಲಿ ಪ್ರಶ್ನಿ ॥ ಪಲ್ಲ ॥

ಮಾನಿನಿ ಕೇಳ್ನಿಧಾನ ಮಾತುಗಳಿದು । ನೀನಿದನಾಲಿಸು
ಸ್ವಾಯಂಭುವ ವರಮನ್ವಂತರದಲಿ । ನೀನೇ ಪ್ರಶ್ನಿಯು ಈ
ತನೆ ಸುತಪನು । ಮಾನವ ಸೃಷ್ಟಿಗೆ ಬ್ರಹ್ಮನು ಕಳುಹಲು ॥
ನೀನಿವನಹ ಬಹು ತಪವನು ಗೈದಿರಿ ॥ ನೀನೇ ॥ಅನು॥

ತಡೆದು ಇಂದ್ರಿಯ ಗ್ರಾಮವನ್ನು ಚಳಿ ಮಳೆಗಾಳಿ ಕಡು
ಘರ್ಮ ಬಿಸಿಲು ಕಾಲವನ್ನು ಸಹಿಸುತ್ತ ಶ್ವಾಸ ಮಿಡುಕ ತೊ
ಳೆಯುತ್ತ ಕಲ್ಮಷವನ್ನು । ತರಗೆಲೆ ತಿಂದು ಪಿಡಿದು ಗಾಳಿಯ
ಕುಡಿದು॥ಕಡುಶಾಂತದಿ ವರ ಪಡೆಯಲಿಬೇಕೆಂದಡಬಿಡದೆನ್ನ
ನು ಆರಾಧಿಸಿ ತಪ । ತೊಡಗಿರೆ ವರುಷ ಹನ್ನೆರಡು ಸಹಸ್ರವು
ನಡೆಯಲು ನಿಮಗಾ ಸಡಗರ ತಪದಿಂ॥ಡೊಡನ ಪ್ರಸನ್ನನಾ
ದೆನು ಈ ಪರಿ ॥ ನೀನೇ॥೧॥

ಬೆರದು ಭಕ್ತಿಗೆ ಭಾವಿಸಿಯಿಂದು ವರವೀವನೆಂದು ವರದ
ರಾಜನು ನಾನೆ ಬಂದು ವರವ ಕೇಳೆಂದು ಒರೆಯಲೆನ್ನಂಥ
ಸುತ ಬೇಕೆಂದು॥ವರಿಸುತ್ತ ಮುಂದೀ ವರ ಕೇಳಿಕೊಂಡಿ
ರೆಂದು॥ಉರುತಪಗೈದೀರ್ವರು ಅನಪತ್ಯರು । ತರಳರು ಇಲ್ಲ
ದೆ ಮರುಗುತಲೆನ್ನಯ । ಮರುಳಿನ ಮಾಯದ ಉರುಳಿಗೆ ಶಿಲ
ಕುತ॥ಪರಮಪದ ಸ್ಥಿತಿವರಿಸದೆ ಪೋದಿರಿ॥ನೀನೇ॥೨॥

ವರವಿತ್ತು ತೆರಳಿ ಪೋದಮೇಲೆ ಗ್ರಾಮ್ಯಾದಿ ಸುಖವ ಪಿರಿ
ದುಂಡು ಪಡೆದಿರಲಾ ವೇಳೆ । ಜಗದಲ್ಲೆನಗೆ ಸರಿಯೊಬ್ಬರಿಲ್ಲ
ದಿರಲಾಮೇಲೆ॥ಕರುಣಿಸಿನಾಂ ತರಳನಾದೆನು ನಿಮಗೆ॥ಎರ
ಡನೆ ಜನ್ಮದಿ ವರಮುನಿಕಶ್ಯಪರದಿತಿಯು ನೀವಾಗಿರುತಿರೆ ನಿ
ಮ್ಮೊಳು । ವರದ ಉಪೇಂದ್ರನೆ ತರಳವಾಮನನೆಂದು । ಧರೆ
ಯಲಿ ಪೆಸರನು ಕರೆಯುವ ತೆರದಲಿ । ಹರುಷದಿ ಕರುಣಿಸಿ
ವರಸುತನಾದೆನು॥ನೀನೇ॥೩॥

ಮತ್ತೂ ಮೂರನೆ ಜನ್ಮವೀಗ ಅಜನ್ಮದಲಿ ಎತ್ತಿದ್ದ ದೇಹ
ದಿಂದಲೆ ಬೇಗ । ಎಂದಿನ ತೆರದಿ ಪುತ್ರನಾದೆನು ನಿಮ್ಮೊಳ
ಗೀಗ॥ನಾನಂದು ನಿಮಗೆ । ಸತ್ಯಭಾಷೆಯ ಕೊಟ್ಟ ಸತ್ಯದ
ಮಾತಿಗೆ ತಪ್ಪುವನಲ್ಲವು । ತತ್ವದಿ ಪೂರ್ವದೊಳಿತ್ತ ವರವು
ನಿಮಗೆತ್ತರಿದೆನ್ನುತ ಮರ್ತ್ಯ ಶರೀರವನೆತ್ತಲು ಪೂರ್ವದೊಳೆ
ತ್ತಿದ ದೇಹವು ಗೊತ್ತಿಗೆ ಶಿಲುಕದೆ ಬಿತ್ತರವೆನ್ನುತ ಅತ್ತಣ
ಜನ್ಮದ ಗೊತ್ತಿಗೆ ಈ ಪರಿ॥ಸತ್ವ ಶರೀರದ'ವೃತ್ತಿಯತೋರಿದೆ
॥ನೀನೇ॥೪॥

ಪುತ್ರ ಮಿತ್ರನೆನ್ನುತ ನೀವು ಯನ್ನೊಳು ಪ್ರೇಮಪಾತ್ರರಾ
ದರು ಸರಿಯೇ । ನೀವು ಶ್ರೀಪರಬ್ರಹ್ಮ । ತತ್ವಭಾವದಿಂದರಿ
ತರು ನೀವು ಚಿತ್ತದೊಳೊಂದು ಹೊತ್ತು ನೆನೆದರು ಸಾಕು॥
ಚಿತ್ತದಿ ಯನ್ನೊಳು ಮಿತ್ರತೆ ಮಾಡಿದ ಕೃತ್ಯಕೆ ಯನ್ನಯ
ಉತ್ತಮಗತಿಯನು ತತ್ವದಿಪಡೆವಿರಿ ಸತ್ಯದ ಪುಲಿಗಿರಿ ಪೃಥ್ವೀ
ಶನು ನಾನತ್ಯಧಿಕನು ಪುರುಷೋತ್ತಮನಾದರು । ಭಕ್ತಿಗೆ
ಒಲಿದು ಸುಪುತ್ರನಾದೆನು॥ನೀನೇ॥೫॥

॥ ವಚನ ॥

ಈ ಪ್ರಕಾರ ತಾಯೊಡನೆ ಪೇಳಿ ತಂದೆಯೊಡನಿಂತೆಂದ ಕೇಳ್ತಾತ ಪೇಳುವ ಮಾತ । ಪಾಪಿಖಳನಿಂದಂಜಿದಡೆ । ಗೋಕುಲದ ಗೋಪನರಮನೆಯೊಳೆನ್ನನಿರಿಸು । ಗೋಪಿ ಪಡೆಯುವ ದುರ್ಗೆಯ ನೀನಪಹರಿಸಿತಂದಿಲ್ಲಿರಿಸು । ಯನ್ನಾಜ್ಞೆಯಿಂ ನಿನ್ನ ಕಾಲ್ತೊಡರು ಹರಿದು, ಬೀಗವು ಮುರಿದು, ಬಾಗಿಲು ತೆರಿದು ತನ್ನೊಳು ತಾನೆ ಮಾರ್ಗವ ಕೊಡುವಳ್ ಯಮುನಾ ನದಿಯು ನಡೆವುದುಚಿತವೆಂದನಾ ಹರಿಯೂ ॥

ಈ ಪ್ರಕಾರ ಪೇಳಿ ಮಾಧವನು ಮೌನವಂ ತಾಳ್ದು, ತನ್ನ ಮಾಯಾ ಬಲದಿಂ ಪ್ರಾಕೃತ ಬಾಲಕನಾಗೆ, ಕೆಲದೊಳ್ ತಾಯಿತಂದೆಯರ್ ನೋಡುತ್ತಿರಲು ಆ ಸಮಯದೊಳಾದ ಸಂತೋಷಮಂ ಪೇಳ್ವೆನದೆಂತೆನೆ॥

ಇಂತು ಶಿಶುವಾಗಿ ಮಲಗಿದ್ದ ಭಗವಂತನಂ ವಸುದೇವನು ನಂದಗೋಕುಲಕ್ಕೆ ಕರೆದೊಯ್ಯುವ ಪ್ರಕಾರ ವದೆಂತೆನೆ॥

ರಾಗ॥ ಕಾಂಭೋದಿ॥

ಭಗವಂತನಿಂದ ಪ್ರೇರಿತನಾಗಿ ಬೇಗದಿ ಮಗುವನು । ಕರೆದುಕೊಂಡು॥ ಸುಗುಣನು ವಸುದೇವ ಸೂತಿಕಾಗೃಹದಿಂದ ತೆರಳಲಿಚ್ಛೈಸಲಂದು ॥ಪಲ್ಲ॥ ಆಗ ಗೋಕುಲದಲ್ಲಿ ನಂದ ಪತ್ನಿಯು ಯೋಗಮಾಯೆಯು ಪೆತ್ತಳು। ಬೇಗ ಮಾಯೆಯು ಬಂದು ದ್ವಾರಪಾಲಕರಿಗೆ ಅಮೋಘನಿದ್ರೆಯ ಕೊಟ್ಟಳು॥೨॥ ಶ್ರೀಹರಿಮಾಯೆಯಿಂದಾಪೂರ ಜನರೆಲ್ಲ ಮೋಹವ ಪೊಂದಿದರು । ದೇಹದಿ ಪ್ರಜ್ಞೆಗಳಿಲ್ಲದೆ ಮಲಗುತ್ತ ನಿದ್ರೆಯು ತಾಳಿದರು॥೩॥ ಹರಿಯನೆತ್ತಿಕೊಂಡು ಹೊರಡಲು ವಸುದೇವ ಸರಪಣಿಗಳ್ ಪುಡಿಯಾದವು। ಬಿರಿದು ಬಾಗಿಲಕದ, ಹರಿದುಕಬ್ಬಿಣಕೀಲು ಬಿರಿ ನುಚ್ಚು ನುರಿಯಾದವು॥೪॥ ಮಿತ್ರನುದಯದಲ್ಲಿ ಕತ್ತಲೆ ಸರಿವಂತೆ ಕಿತ್ತುಕವಾಟಂಗಳು । ಮುತ್ತಿದ ದುರಿತಂಗಳೆತ್ತಲೋ ಪೋದವು ಪುತ್ರನು ಕೈಲಿರಲು ॥೫॥ ಘರ್ಜಿಸಿ ಘನರಾಜ ಗಗನಮಂಡಲದೊಳು। ಪರ್ಜನ್ಯ ವರ್ಷಿಸಲು । ಮೂರ್ಜಗದೊಡೆಯಗೆ ಶೇಷನು ಕೊಡೆಯಾಗಿ । ಯಾಚ್ಛಾದಿಸಬಂದನು॥೬॥ ಇಂದ್ರನೊಂದೇ ಸಾರಿ ಕರೆಯಲು ಮಳೆಯನು ಬಂದಳು ಯಮುನಾನದಿ॥ ಚಂದದಿಂ ತುಂಬಿಗಂಭೀರ ಪ್ರವಾಹದಿ ತೆರೆನೊರೆಗಳ ಸಹಿತ॥೭॥ ಭೀಷಣಾಕಾರದಿಂ ಯಮುನನುಜೆಯು ಪರಿವೇಷದಿಂ ಬರಲುಮತ್ತೆ। ಶ್ರೀಶಗೆ ಮಾರ್ಗವ ಕೊಟ್ಟಳು ಸಾಗರ ಕೋಸಲ ಪತಿಗಿತ್ತಂಕೆ॥೮॥ ನಂದನ ವ್ರಜದಲ್ಲಿ ಶೌರಿಯು ಬರಲಲ್ಲಿ ಮಂದರುಮಲಗಿರಲು, ಕಂದನ ಗೋಪಿಯು ಕೆಲದಲಿ ಮಲಗಿಸಿ ಕಂಡನು ದುರ್ಗೆಯನು । ನಂದ ಗೋಪನ ಸತಿ ತನ್ನ ಹಾಸಿಗೆಯಲ್ಲಿ ಕಂದನ ಪಡೆದಿದ್ದರೂ। ಚಂದದಿಂ ಹೆಣ್ಣುಗಂಡೆಂಬುದನರಿಯದೆ ನಿದ್ರೆಯಿಂ ಮಲಗಿದ್ದಳು॥೧೦॥ ಅಲ್ಲಿದ್ದ ಬಾಲೆಯ ಕರೆತಂದು ವಸುದೇವ। ದೇವಕೀ ಶಯನದಲ್ಲಿ। ಮೆಲ್ಲನೆ ಇರಿಸಿದ ಚೆಲ್ವ ಶ್ರೀಪುಲಿಗಿರಿ ವಲ್ಲಭನಾಜ್ಞೆಯಲಿ॥೧೧॥

—ಇತಿ ಚತುರ್ಥೋಽಧ್ಯಾಯಾರ್ಥ—

॥ ವಚನ ॥

ಇಂತು ವಸುದೇವನು ಶಿಶುವಂ ತಂದಿರಿಸೆ, ಮುಸುಕಿತು ನಿಗಳಂಗಳ್ ಕಾಲ್ಗಳಿಗೆ ವಶವಿಲ್ಲದಂತೆ ಪುರಬಾಗಿಲು ಪೂರ್ವದಂತೆನುಸುಕಿತು ಲೋಹಮಯಕವಾಟದೊಳಗಾಗ। ಬಾಲೆಯಳುತಿರುವ ಧ್ವನಿಯನು ಬಾಗಿಲಂ ಕಾಯ್ವಭಟರು ಕೇಳಿದಾಕ್ಷಣಕೆ ಘುಡುಘುಡಿಸುತೆದ್ದು ಸದ್ದುಮಾಡದೆ ಬಂದು ಕಾಲನಿವನೆಂದು; ಕಣ್ಗಳಂಬಿಟ್ಟು ಕೆದರಿದಜುಟ್ಟುಮಟ್ಟುಮೀರಿ ಬಲುಸಿಟ್ಟನಿಂ ನಿಟ್ಟುಸಿರ ಬಿಡುತ, ಶಿಶು ಹುಟ್ಟಿರುವ ಕೊನೆಹಟ್ಟಿಗೆ ಬೇಗದಿಂ ಬಂದು ನಿಂದನಾ ಕಂಸನಂದು, ಆ ಸಮಯದಿ ಕಂಸಾಸುರನು ರೋಷಾನ್ವಿತನಾಗಿ ಬಂದು ನಿಂದುದಂಕಂಡು ದೇವಕಿಯು ಮಗುವಿಗೆ ಮೋಸವಾಗುವುದೆಂದು ಮನನೊಂದು ಮರುಗಿ, ತನುಕೊರಗಿ ಮಸದಾಸೆಯಿಂದಣ್ಣನಿಗೆ ಮರುಕ ಬರಲೆನ್ನುತ ಕೃಪಣೆಯು ಮನ್ನಿಸಿ ಮಾತಾಡಿ ಬೇಡುತಿಹಳೀ ಪರಿಯೊಳು॥

ರಾಗ॥ ಆನಂದಭೈರವಿ (ಈತನೀಗ ವಾಸುದೇವನು)

ಅಣ್ಣ ಲಾಲಿಸೆನ್ನ ಮಾತನು । ಕೊಲ್ಲಬಾರದಣ್ಣ ನೀನು ಹೆಣ್ಣುಕೂಸನು ॥ ಪಲ್ಲ ॥ ಅಣ್ಣಾ ಲಾಲಿಸೆನ್ನ ಸೊಲ್ಲ ಚಣ್ಣ ನಲ್ಲವಲ್ಲಯನ್ನ ಹೆಣ್ಣು ಕೊಲ್ಲಸಲ್ಲದಲ್ಲ ಕಣ್ಣುತೆರೆದು ನೋಡುಮಲ್ಲ॥ ಅಣ್ಣ॥ ಅನು॥

ಹಸುಮಗುವ ಕಸಕಬೇಡೆನ್ನೈ । ಹೆಣ್ಣುಕೂಸು ಸೊಸೆಯು ನಿನಗೆ ಹೊಸಗೆ ಕಾಲವೈ॥ ಕುಸುಮಬಣ್ಣದಗ್ನಿಯಂತೆ ಎಸೆದು ಹೊಳೆಯುತಿದ್ದ ಯನ್ನ । ಬಸುರಸಲ್ಲಿ ಬೆಳೆದು ಬಂದ ಶಿಶುಗಳನ್ನು ಕೊಂದೆಯಲ್ಲ ॥ ಅಣ್ಣ ಲಾಲಿ ॥೧॥

ಚಿಕ್ಕ ಮಕ್ಕಳಾರು ಕೊಂದರೂ ಪಾಲಿಸೀ ಚಿಕ್ಕ ಹೆಣ್ಣು ಕೂಸ ನಾದರೂ ॥ ತಕ್ಕ ತಕ್ಕ ಚಿಕ್ಕವಾದ ಮಕ್ಕಳನ್ನು ಕಳೆದುಕೊಂಡು ಉಕ್ಕಿ ಬರುವ ದುಃಖದಲ್ಲಿ ಸಿಕ್ಕಿ ಸೊಕ್ಕಿ ಸೊರಗಿದೆನು ॥ ೨ ॥

ಸಿಟ್ಟುಗೊಳ್ಳ ಬೇಡವಣ್ಣನೇ— ನಿನ್ನಕೂಡ-ಹುಟ್ಟಿರುವ ತಂಗಿಯಲ್ಲವೇ ॥ ಪುಟ್ಟ ಕಡೆಯ ಕುಟ್ಟಿಯನಗೆ ಬಿಟ್ಟು ಕರುಣೆಯಿಟ್ಟು ಕೊಡಿಸು ದಿಟ್ಟವ್ಯಾಘ್ರಶೈಲದರಸು ಬಿಟ್ಟು ಕೊಡುವನಲ್ಲ ಕೊನೆಗೆ ॥ ಅಣ್ಣ ॥ ೩ ॥

॥ ವ ಚ ನ ॥

ಈಪರಿ ಮಾತಾಡಿದ ಬಳಿಕ ದೇವಕಿಯು ಕಂಸನನ್ನು ಮರೆಮಾಡಿಕೊಳ್ಳುತ್ತ ತಾಪಪಡುತ್ತ ಅಳುತ್ತಳುತ್ತ ಬೇಡಿಕೊಂಡಳಾದರೂ ಕಂಸನು ಕರುಣೆ ತೋರದೆ, ತಂಗಿಯ ಪ್ರಾರ್ಥನೆಯಂ ಕಡೆಮಾಡಿ, ಎಳೆಗೂಸಿನ ಸುಳಿಗಾಲ್ಗಳಂ ಪಿಡಿದೆಳೆದು, ಕಂಠ್ಯೋಳ್ ಪಿಡಿದು ಶಿಲೆಯಮೇಲಪ್ಪಳಿಸಿ ಹೊಯ್ಯಲು ಕೈಯೆತ್ತಲು ಮತ್ತೆ ತಲೆ ಕಯ್ಯಿಂದ ಕಳಚಿ ಚಿಮ್ಮನೆಚಿಗದು ಅಂಬರವನೇರಿ ನಿಂತಳು ಪೀತಾಂಬರನ ತಂಗಿಯು, ಮಂಗಳ ಮಹಾಷ್ಟ ಭುಜದೊಳು ಸಿಂಗರಿಸಿದಾಯುಧದಿಂದ ಕಂಗೊಳಿಸುತಿದ್ದಳಾ ಗಗನಮಂಡಲದೊಳೀಪರಿಯೊಳ್॥

ರಾಗ॥ ಸೀಸಪದ್ಯ॥

ದಿವ್ಯಮಾಲಿಕೆವಸ್ತ್ರ, ಲೇಪರತ್ನಾಭರಣ। ಸವ್ಯದಕ್ಷಿಣದೊಳಗೆ ಶಂಖಚಕ್ರ॥ ಬಿಲ್ಬಾಣ ಶೂಲಗದೆ, ಖಡ್ಗ ಚರ್ಮಾಯುಧವು, ಬಲ್ಮೆಯಿಂ ಧರಿಸಿರುತ ಕೈಲಿನಿರುತ ॥ ಸಿದ್ಧ ಚಾರಣರೆಲ್ಲ ಸುತ್ತಮುತ್ತಲು ನಿಂತು । ಶುದ್ಧದಿಂ ಪೂಜಿಪರು ಬದ್ಧಕರರು ॥

ಸ್ವರ್ಗವೇಶ್ಯೆಯರಲ್ಲಿ ನರ್ತನವಗೈಯುವರು । ಗಂಧರ್ವರನು ಕರಿಸಿ ಪಾಡುತಿಹರು ॥ ಬಲಿಗಳನು ಬೆಳಗಿಕಿಂನರೋರಗರು ಲಲಿತೆಗರ್ಪಿಸಿ ಬಹಳ ಸುತಿಸುತಿರಲು । ಚಲುವೆ ದುರ್ಗೆಯು ಒಲಿದು ನಲಿಯುತಿರಲು ಖಳನು ನೋಡುತಿರಲವನೊಳಗೆ ನುಡಿಯುತಿಹಳೀಪರಿಯೊಳು ॥—

॥ ವ ಚ ನ ॥

ಈ ಪ್ರಕಾರ ಪ್ರಕಾಶಿಸುವ ದುರ್ಗಾದೇವಿಯು ಕಂಸನೊಡನೆ ಮಾತಾಡುವ ಬಗೆ:—

ರಾಗಾ॥ ಮುಖಾರಿ॥

ಕೇಳೆಲೋ ಖಳ ನೀನೂ—ನಿಜದಿಂ — ಪೇಳುವೆನಿದ ನಾನು ॥ ಖೂಳರಪತಿನೀನೂ —ನಿನ್ನ ನುಸೀಳುವ ಬೇರಿಹನು॥ ಅ ॥ ಮಂದಮತಿಯು ಕಾಣೊ—ಬಾಲೆಯುಕೊಂದರೆ ಫಲ ವೇನೊ ॥ ಬಂದಿದೆ ನಿನಗೇನೋ ಕಾಲವು ಸಂದಣಿಸಿತು ಕಾಣೊ ॥ ಕೇಳೆಲೋ ॥ ೧ ॥ ಗರ್ವಿಸದಿರು!ನೀನು—ನಿನ್ನನು —ಪೂರ್ವದಿ ಕೊಂದವನು ॥ ಉರ್ವಿಗೆ ಬಂದಿಹನು—ಆತನು, ಸರ್ವರೊಳಿರುತಿಹನು ॥ ೨ ॥ ಕಂಸನೆ ಮರೆಯು ವೆಯಾ— ಜನರನು--ಹಿಂಸೆಯ ಮಾಡುವೆಯಾ ॥ ಧ್ವಂಸವ ಪೊಂದುವೆಯಾ —ವಂಶಕೆ—ಪಾಂಸಕನಾಗಿಹೆಯು ॥ ೩ ॥ ಸಂಧವ ಮಾಡದಿರು—ನಿನಗೀ—ಗಂತಕ ಪುಟ್ಟಿಹನು ॥ ಅಂತ್ಯದ ಕಾಲವನು—ತಿಳಿಯದೆ—ಸಂತಸಪಡುತಿಹೆಯು ॥ ೪ ॥ ಕೃಪಣೆಯು ನಾನಲ್ಲ—ಯನ್ನೊಳು—ಅಪಕರಿಸಲು ಬಲ್ಲ ॥ ಸಫಲವು ನಿನಗಲ್ಲ—ಪುಲಿಗಿರಿ—ನಿಪುಣನು ತಾಬಲ್ಲ!॥ ೫ ॥

ಕಂದ॥—ಈ ಪರಿಯೊಳ್ ಮಾಯಾಂಗನೆ ।
ಪಾಪಾಗ್ರೇಸರನಿಗುಸುರಿಯಾಗಳೆ ಸಲವಿಂ ॥
ತಾ ಪಡೆದಳಪರಿಮಿತ ಸ ।
ದ್ವೀಪಾಂತರಗಳ ಭಗವತಿಯೀಭುವಿಯೊಳಗೆ ॥

॥ ವ ಚ ನ ॥

ಇಂತು ದೇವಿಯಾಡಿದ ವಾಕ್ಯವಂಕೇಳಿ ಕಂಸನು ಗಡಗಡನೆ ನಡುಗಿ, ದೇವಕೀ ವಸುದೇವರಂ ವಂದಿಸಿ, ಅವರಂ ಸೆರೆಯಿಂದ ಬಿಡಿಸಿ, ಭಾವನಂ ತಂಗಿಯಂ ಸಂಭಾವಿಸಿ ವಿನಯ ವಚನದೊಳ್ ಪ್ರಾರ್ಥಿಸುವ ಬಗೆ ॥—

ರಾಗ॥ ಸುರಟಿ ॥ (ಮೋಸಪೋದೆನಲ್ಲ)

ಭಾವಕೇಳಿರಯ್ಯ—ದೇವಕೀ ಭಾವಿಸುದಮ್ಮಯ್ಯ ॥ ಪ ॥ ಗೋವನು ವಧಿಸುವ ಕಟುಕನ ತೆರದಿಂ, ವಾವಿಯು ನೋಡದೆ । ಕೊಂದೆನು ಶಿಶುಗಳಂ ॥ಅ॥ ಕ್ಷಮಿಸಬೇಕು ಭಾವಾ—ಕಾಲಿಗೆ-ನಮಿಸುವೆ ವಸುದೇವಾ ॥ ಅಮಿತ ಕುಮಾರರ ಕೊಂದೆನು ನೀವಾ, ಮಮತೆಗೆ ದುಃಖಿಸಬೇಡಿ ಸುಜೀವಾ॥ ಭಾವ ॥ ೧ ॥ ಕರುಣವ ಕಡೆಮಾಡಿ—ಸ್ವಜನರ—ತೊರೆದೆನು ಜರಿದಾಡಿ ॥ ಅರಿಯದೆ ಕೊಂದೆನು ಮಕ್ಕಳಗೇಡಿ,—ದೊರಕುವದುಂಟೆ ಸುಲೋಕವು ನೋಡಿ ॥ ೨ ॥ ಬಾಂಧವ ಮಿತ್ರರನು—ಜ್ಞಾತಿಗಳೆಂದರಿಯದೆ ತೊರೆದವನು ॥ ಕಂದರ ಕೊಂದವನೆಂದಪಕೀರ್ತಿಯು ಬಂದುದು ವಿಪ್ರನಕೊಂದವನಂದದಿ ॥೩॥ ಹುಸಿಕರೆ ನರರೆಲ್ಲಾ—ದೈವವು ಪುಸಿಯುನು ಸಿರಿತಲ್ಲಾ ॥ ಅಶರೀರದ ನುಡಿಯಿಂದಲಿ ತಂಗಿಯ ಹಸುಮಕ್ಕಳನಾ ಕಸಕಿದೆನಲ್ಲಾ ॥ ೪ ॥ ಜಂತುಗಳನುಸರಿಸಿ—ಸುಕೃತಗಳಂತವನನುಭವಿಸಿ ॥ ಅಂತಕನಾಧೀನದ ಶಿಶುವೆರಿಸಿ, ಅಂತಃಕರಣಕೆ ಕರದರಿ ಚರಿಸಿ ॥ ೫ ॥ ಜೀವದ ಬಾಳುಗಳು—ಎಂದಿಗೂ--ದೈವಾಧೀನಗಳೂ ॥ ಭಾವಿಸೆ ಗಾಳಿಗೆ ಭೂರೇಣುಗಳು, ತಾವೆ ಸೇರುವ ಹಾರುವ ತೆರವಿದು ॥ ೬ ॥ ಭೂತ ಶರೀರಗಳೂ—ನೊರೆಗಳು—ಆತುಮನಿಜವಹದು ॥ ಸೋತು ಶರೀರದ ಯೋಗವಿಯೋಗದ ಭೀತಿಗಳಲ್ಲದೆ ಯಾತರ ಮೋಹವು॥೭॥ ಕೊಂದವನಾನೆಂದು-ಆಳದಿರಿ-ಕಂದರಕನವರಿದು ॥ ಕೊಂದವನಿವಕೊಲೆ ತಿಂದವನವನೆಂದೆನ್ನುವವರೆಗೂಬಂಧವು ಬಿಡದು ॥ ೮ ॥ ತಪ್ಪುಗೈಯ್ದೆನಾಕು— ತಪ್ಪನು—ವೊಪ್ಪಿ ಕ್ಷಮಿಸಬೇಕು ॥ ಅಪ್ಪಣೆಕೊಡುನಿಜವೇಕೆನ್ನಪ್ಪ ಭಾವ ವಸುದೇವ ಪರಾಕು ॥ ೯ ॥ ಕೆಂಪುದೋರಿಮೀರೆ, ಕಣ್ಣೊಳು—ಗುಂಪುವಾರಿಸೋರೆ ॥ 'ದಂಪತಿಗಳ ಪಾದಂಗಳ ಪಿಡಿಯುತ, ಕಂಪಿಸಿ ದುರ್ಗೆಯ ರಂಪವ ನೆನೆಯುತ ॥೧೦॥ ನಿಗಳವ ಕಳಚಿದನು—ತನ್ನಯ—ಸುಗುಣವ ತೋರಿದನು ॥ ಜಗದಲಿ ಪುಲಿಗಿರಿ ವೆಂಕಟರಮಣನ । ಸೊಗಸಿನಭಕ್ತರ ಶಕ್ತಿಯುಪಾರವು ॥ ಭಾವ ॥ ೧೧ ॥

॥ ವ ಚ ನ ॥

ಅಣ್ಣನ ದೈನ್ಯವಚನಮಂ ಕೇಳುತ್ತ, ತನ್ನೊಳು ತಾನೇ ರೋಷವಂನುಂಗಿ ತಂಗಿಯು ಸುಮ್ಮನಾಗಲು ಮನ್ನಿಸಿ ಕಂಸನೊಳು ವಸುದೇವ ನಸುನಕ್ಕು ಮುನ್ನೊಂದು ತತ್ವಮಂ ಪೇಳ್ವನದೆಂತೆನೆ—

। ವೃತ್ತ ।

ಕೇಳ್ಕೈ ಕಂಸನೆ ಲೋಕದೊಳ್ .ಜನರು ತಾವಜ್ಞಾನದಿಂ ಮಾನದಿಂ ।
ಖೂಳರು ಯನ್ನದು ತನ್ನದೆನ್ನುತ ಮಹಾಮೋಹಂಗಳಂ—ಪೊಂದುವರ್ ॥
ಮೂಳಾಟಂಗಳನಾಡಿ ಲೋಭ ಭಯ ವಿದ್ವೇಷಾದಿ ರೋ—ಷಂಗಳಂ ।
ತಾಳುತ್ತೊಬ್ಬರಿಗೊಬ್ಬರಾಗಿ ಕೆಡುವರ್ ನೀಂ ಪೇಳ್ದವೊಲ್—ಮಾನವರ್ ॥

॥ ವ ಚ ನ ॥

ಈ ಪ್ರಕಾರದಿಂ ಪೇಳಿದ ವಸುದೇವನ ವಾಕ್ಯಮಂಕೇಳಿ

ಕಂಸನು, ತಾಪವನ್ನಳಿದು ವಸುದೇವ ದೇವಕಿಯರ ಅಪ್ಪಣೆ ಯುಂ ಪಡೆದು ತನ್ನರಮನೆಗೈದಿ, ದುರ್ಗೆಯ ವಾಕ್ಯಮಂ ನೆನೆನೆನೆದು ಶಂಕೆಗೊಳ್ಳುತ್ತ ತನ್ನ ಮಂತ್ರಿಗಳಂ ಕರೆಯಿಸಿ ಅವರೊಡನೆ ಆಲೋಚಿಸುವ ಬಗೆ—

ರಾಗಾ। ಶಂಕರಾಭರಣ।

ಕರಸಿದ—ಕರಸಿದ ॥ ಪ ॥ ಬರಸಿ ವೋಲೆಯ ಕರಕರಸಿ ಮಂತ್ರಿಗಳನ್ನು। ಒರಸಿ ದುರ್ಗೆಯು ಹೂಂಕರಿಸಿದ ಮಾತಿಗೆ॥ ಕರಸಿದ ॥ ೧ ॥ ಕರಸಿ ಹತ್ತಿರ ಕುಳ್ಳಿರಿಸಿ ತನ್ನವರನ್ನು । ಒರೆದು ದುರ್ಗಿಯಭಯ—ವೆರಸಿ ತಾ ಕರಸಿದ ॥ ೨ ॥ ಸಿರಿ ವಾಸಪುಲಿಗಿರಿ ಅರಸಿನ ಮಾಯೆತಂದಿರಿಸಿದಬೇಗೆಯು—ಮೆರೆಸಿ ತತ್ತರಿಸಿದ ॥ ಕರಸಿದ ॥ ೩ ॥

॥ ವ ಚ ನ ॥

ಇಂತು ಒಡೆಯನು ಕರಸಿದಾಕ್ಷಣಕ್ಕೆ ದೈತ್ಯರು ನಡೆತರಲು ಎದೆಯೊಡೆವಂದದಿಂ ದುರ್ಗೆಯು ಘುಡುಘುಡಿಸಿನುಡಿದ ಮಾತುಗಳಂ ಕಂಸನು ಬಿಡದೆ ಪೇಳಲು, ಯೋಗಮಾಯೆಯ ನುಡಿಗಳಂ ಕೇಳಿ ದೈತ್ಯರು, ವೇಗದಿಂ ನುಡಿದರುತ್ತರವಂ ತಪ್ಪೊಡೆಯನಿಗೆ;— ತಂತ್ರವಂ ತಿಳಿಯದ ದುರ್ಮಂತ್ರಿಗಳು ಮಂತ್ರಿಪದವೇರಿ ಸುರರಿಗಂತರಾಯವನೋಡುತ್ತ ಮೂಢರು ಕಂಸನೊಳಿಂತೆಂದರು—

ರಾಗಾ। ॥

ಚಿಂತೆಯಾತಕೆ ರಾಜ— ಚಿಂತಿಸದಿರು ಭೋಜ । ಪಂಥವ ನೋಡೆಮ್ಮ ಪಾಲಿಸೆಂದು ॥ ಪ ॥ ಭೂಮಿಯೊಳಗೆ ಪುರಗ್ರಾಮದೊಳ್‌ಜನಿಸಿದ । ಸೀಮೆಯ ಶಿಶುಗಳ ಕೊಲ್ಲುವೆವು ನಾವು । ೧ । ಹತ್ತುದಿನದವೊಳಪುಟ್ಟಿದ ಶಿಶುಗಳ, ಕುತ್ತಿಗೆಯನು ಮುರಿದು, ಸುತ್ತುವೆವು ನಾವು । ೨ । ಸುರರು ಪೌರರು ಕಿನ್ನರರು ಗೈಯ್ಯುವದೇನು । ಪರದೇಶಿಗಳು ಈ ನರರು ಮಾಡುವುದೇನು । ೩ । ಅಮರರೆಲ್ಲರು ನಿನ್ನ ಸಮರಕ್ಕೆ ನಿಲ್ಲದೆ । ಸಮರಭೀರುಗಳಾಗಿ ತೆರಳುವರಿಲ್ಲಿ ॥೪॥ ರಣದಲ್ಲಿ ನಿಲ್ಲದೆ ಮನೆಯಲ್ಲಿ ಶೌರ್ಯವ । ಗೊಣಗುವ ಸುರರಿಂದ ಭಯವೇನು ನಿನಗೆ॥೫॥ ಹರಿಹರಸರಸಿಜಭವರೇನು ಗೈಯ್ವರು। ಸುರಪತಿಯಿಂದ್ರ ತಾನೇನ ಮಾಡುವನು ॥೬॥ ಹರಿಯು ಅಂತರ್ಯಾಮಿ ರಣದಿ ಬರುವನಲ್ಲ । ಮರೆಯಲ್ಲಿ ಇರುವನ ಭಯವೇನು ನಿನಗೆ॥೭॥ ಹರನು ಇಳಾವೃತವರುಷದವನದಲ್ಲಿ । ಮರೆಯಾಗಿ ಇರುವನು ಭಯವೇನು ಕೊನೆಗೆ ॥೮॥ ಬ್ರಹ್ಮದೇವನು ನಿತ್ಯ ಬ್ರಹ್ಮಚಾರಿಯು ಆಗಿ । ಸಮ್ಮ ಮಾಡುವುದೇನು ತಪವಗೈಯ್ಯುವನು ॥೯॥ ಸುರಪತಿಯಿಂದ್ರನು ಸ್ವಲ್ಪವೀರ್ಯನು । ಇಂತಿರುವನವಾಡೇನು ಲೋಕದೊಳಗೆ॥ ೧೦ ॥ ಸುರರು ಜ್ಞಾತಿಗಳಾಗಿ ಬೆಳೆಯುತ್ತಲಿರುವರು । ಗರುವವನಾವೀಗ ಮುರಿಯುವೆವಯ್ಯ॥೧೧॥ ತಪದೆಯಿವರಡಿ ಬೇರಕೀಳುವುದಕೆ । ಅಪ್ಪಣೆಯಿತ್ತರೆ ಸಾಕು ನೀನಮಗೆ॥೧೨॥ ವ್ಯಾಧಿಯು ಬಲಿತರೆ ಸ್ವಾಧೀನಬರದಂತೆ । ಯಾದವರೆಲ್ಲರು ಬಲಿಯುವರಿಲ್ಲಿ॥೧೩॥ ಎಂದಿನ ದಿನದಂತೆ ಇರಲಾಗದೀಗ ಪುರಂದರನಾದರೂ ಜಗಳಕ್ಕೆ ಬರಲಿ॥೧೪॥ ಪುಲಿಗಿರಿವೆಂಕಟರಮಣನ ಬಲದಿಂದ । ಬಲಿತುಕೊಂಡಿರುವರು ಸುರರು ಯಾದವರು॥೧೫॥

॥ವ ಚ ನ॥

ಇಂತು ದೈತ್ಯರು ನುಡಿಯಲಾಮೇಲೆ ಅಂತರಂಗದಲಿ ಬಕಪೂತನಿ ಮುಂತಾದವರು ನಡೆತಂದು ಕಂಸನೊಳಗೇಕಾಂತದಲಿ ನುಡಿವರಾ ಮಾತನಾಪೇಳ್ವೆ ಕೇಳಚ್ಚರಿಯನು॥—

ರಾಗಾ॥ ಸೀಸಪದ್ಯ॥

ದೇವರ್ಕಳಿಂಗೆಲ್ಲ ಮೂಲಪುರುಷನು ವಿಷ್ಣು । ಶ್ರೀವಿಷ್ಣುಮೂರ್ತಿಯಲಿ ಸರ್ವಧರ್ಮ ॥ ಗೋವಿಪ್ರಯಜ್ಞತಪದಾನದಕ್ಷಿಣೆಯಿಲ್ಲ । ಯಾವ ಧರ್ಮದ ಮೂಲವೆನಿಸುತಿಹುದೊ ॥ ವಿಧಿಶಿವಾಮರರಲ್ಲಿ ಪದುಮನಾಭಗೆ ಪಕ್ಷತ್ರಿದಶರಿಗೆ ಅಧ್ಯಕ್ಷ ಅಸುರಶಿಕ್ಷ ॥ ಗೋವಿಪ್ರ ದೇವತಾ ಯಜ್ಞ ತಪ ಸತ್ಯಗಳು । ಯಾವ ಸಹನಶ್ರದ್ಧೆ ಶಮದಮಾದಿಗಳೂ ॥ ಈ ವಿಧದಧರ್ಮಗಳು । ಅವ ಸತ್ಯಾದಿಗಳು ಶ್ರೀವಿಷ್ಣುಮೂರುತಿಯ ದೇಹಗಳೂ ॥ ಅದಕಾರಣದಿಂದ ಬ್ರಹ್ಮವಾದಿಗಳನ್ನು ವೇದವಾದಿಗಳನ್ನು । ಋಷಿಗಳನ್ನು ಸಾಧುಸಜ್ಜನ ಯಜ್ಞಶೀಲರನ್ನು ಪಾಲ್ಮೊಸರು ಕರೆವ ಗೋವು ದೇವಗನ್ನು । ತಂಡತಂಡದಿ ಕೊಂಡುಶಿರ ಚೆಂಡಾಡಿ ಬರುತಿಹೆವು ಕೇಳು ಭೋಜರಾಜಾ ॥

॥ವ ಚ ನ॥

ಈ ಪ್ರಕಾರ ದುರ್ಮಂತ್ರಿಗಳ ವಚನವಂ ಕೇಳಿ ಕಂಸನ ಬುದ್ಧಿ ಹೇಗಾಯಿತದೆಂತೆನೆ—

॥ಪದ॥

ನೀತಿತಪ್ಪಿದ ಧೊರೆಯು, ನೀರುಬತ್ತಿದ ಕೆರೆಯು, ಮಾತುತಪ್ಪಿದ ಹಿರಿಯು, ಮೋಸಗಾರರಪರಿಯು ॥ ಮಾತೆಯಿಲ್ಲದ ಕಿರಿಯು, ಜ್ಯೋತಿಯಿಲ್ಲದಪರಿಯು, ಮಾತನಾಡದ ನೆರೆಯು ಭೂತಸೇರಿದಪರಿಯು ॥ ಮೇರೆದಪ್ಪಿದ ಹೊರೆಯು, ನೀರು ಮುಳುಗಿದ ಪರಿಯು, ಮಾನವಿಲ್ಲದ ಮರೆಯು, ಮಕ್ಕಳಾಟಿಕೆಪರಿಯು, ಮೌನವಿಲ್ಲದ ತೆರೆಯು, ಹೀನಶುನಕದ ಸರಿಯೂ ॥ ರಕ್ಕೆಯಿಲ್ಲದ ಮರಿಯು, ಸಿಕ್ಕಿನೊರಗುವ ಸೆರೆಯು, ಮಕ್ಕಳಿಲ್ಲದ ಸಿರಿಯು, ವಕ್ಕಲಿಲ್ಲದಪರಿಯೂ ॥ ಸಿರಿಯಿಲ್ಲದಿರೆ ಕರಿಯು, ಗೊರೆಯೊಳೀಜುವಪರಿಯು । ಕರಿಗಳಿಲ್ಲದ ಸಿರಿಯು ಹಿರಿಯರಿಲ್ಲದಪರಿಯು—ಧೊರೆಗಳಿಲ್ಲದ ಧರೆಯು ದೇವರಿಲ್ಲದ ಪರಿಯೂ ॥ ಹರಿಯು ಇಲ್ಲದ ಗಿರಿಯು, ನರಿಯು ಸೇರುವ

ದರಿಯು । ಈ ಪರಿಯು ಕಂಸನ ಸಿರಿಯು, ಪರಿಯುವ ವೈಖರಿಯು, ದುರ್ಮಂತ್ರಿಗಳ ನೆರೆಯು, ಸೇರಿದ ಝರೆಯು ಕಂಸನ ಮನಕಿಕ್ಕಿದ ಉರಿಯಂತೆ ಸರಿಯು, ಮತ್ತಲ್ಲಿಗೆ ಕಂಸನ ವಿವೇಕದಟ್ಟುಳಿಯು ಲೋಕಕಚ್ಚರಿಯು ||

|| ವ ಚ ನ ||

ಈ ಪ್ರಕಾರ ವಿಕಾರವಶನಾದ ಕಂಸನು ಏನುಮಾಡಿದನೆಂದರೆ—

ರಾಗಾ । ಕಲ್ಯಾಣಿ ।

ದುರ್ಮತಿಖಳ ಕಂಸನು । ಈಪರಿ ದುರಾಲೋಚನೆಗೈದನು || ಪ || ದುರ್ಮಂತ್ರಿಗಳಸೇರಿ ಧರ್ಮಂಗಳನು ಮೀರಿ ಬ್ರಹ್ಮಹಿಂಸೆಯೆಹಿತಕರ್ಮವೆಂದರಿತನು || ಅನು || ಕಾಲಪಾಶಕೆ ಸಿಲುಕಿ ।ಕಂಸನು। ಧರ್ಮಮೂಲವೆಲ್ಲವಕಲಕೀ ||ಶೀಲಸಜ್ಜನರಲ್ಲಿ ಕದನ ಗೈಯುವದಕ್ಕೆ ಖೂಳರಕ್ಕಸರನು ಕರಸಿ ಕಳುಹಿದನು || ೧ || ಕಾಮರೂಪವಧರಿಸಿದ ದಾನವರಂ ಸೀಮೆ ಗ್ರಾಮಕೆ ಕಳುಹಿ || ತಾಮಸಾತ್ಮಕನಾದ ಕಂಸನು ಬಲುಪ್ರೇಮಪಡುತೆ ನಿಜಧಾಮಕೆ ತೆರಳಿದನು || ೨ || ಮೂಢಚೇತನ ದೈತ್ಯರು, ಸೀಮೆ ಸೀಮೆಯೊಳಪೊಕ್ಕು ಹುಡುಕುವರು || ನೋಡಿ ಸಜ್ಜನರನು ಕಾಡಿದ್ವೇಷವಮಾಡಿ ನೋಡಿಕೊಳ್ಳದೆ ಮೃತ್ಯುವ ಬೇಡಿಕೊಂಡವರಂತೆ ||೩|| ಗುರುಹಿರಿಯರ ಕೆಣಕೀ-ಸತ್ಪುರುಷರ ಗುರುತುನೋಡದೆ ತಣಿಸಿಸುಖಬಾಳುಕೀರ್ತಿಗಳನು ಕಳಕೊಂಡು ಬರಿದೆ ತಪ್ಪೊಳುತಾವೆ ಕೆಡುವರು ದೈತ್ಯರು||೪ || ಇಳೆಯೊಳು ಬಳಬಳಸಿ, ಕಾಡುತ ಪೋಗಿ—ಖಳರೆಲ್ಲರು ಕಳವಳಿಸಿ|| ಪುಲಿಗಿರಿ ವೆಂಕಟರಮಣನ ಭಕ್ತರ ಬಲುಮೆತಿಳಿಯದೆ ಕೆಡುವರು ದೈತ್ಯರು || ೫ ||

|| ವ ಚ ನ||

ಈ ಪ್ರಕಾರ ಕಂಸನಿಂ ಕಳುಹಲ್ಪಟ್ಟ ದೈತ್ಯರು ಸೀಮೆಗಳಮೇಲೆ ಸಂಚರಿಸುತ್ತ ಹಿಂಸೆಯಂಮಾಡುತ್ತಿರಲು।ಕಂಸನು ಸಂತೋಷದಿಂ ತನ್ನಮನೆಯೊಳಿರಲು; ಅತ್ತನಂದಗೋಕುಲದಲ್ಲಿ ನಂದಗೋಪನರಮನೆಯೊಳು ಪುತ್ರೋತ್ಸವಮುಂತಾದ ಸಂಭ್ರಮವು ನಡೆಯುವ ಪರಿಯಂ ಶ್ರೀಶುಕಾಚಾರ್ಯರು ಪರೀಕ್ಷಿದ್ರಾಜನಿಗೆ ಪೇಳ್ವರದೆಂತೆನೆ—

|| ವಚನ ||

ಇಂತಿರುತಿರಲಿತ್ತಲತ್ತ ಶ್ರೀಕಾಂತನುದಯಿಸಿರೆ ಗೋಕುಲದೊಳಾಕಾಂತೆಯರು ನಲಿದೆದ್ದು ಮುದ್ದುಸಂತಾನವನು ಕಂಡು ಸಂತಸಗೊಂಡು ಸಡಗರದೊಳಿರುತಿರಲಂದು । ಮುಂದೆ ಕೇಳ್ದೊರೆಯೆ ವ್ರಜದೊಳಾನಂದಸಂದೋಹ ಸಂದಣಿಸಿತಾ ನಂದಗೋಪನಿಗಿಂದಿರೇಶನು ಸುತನಾಗಲಾನಂದಾಬ್ಧಿಯಲಿ ಮುಳುಗಾಡುತಮಿಂದುನಿಂದನಾನಂದನಂದು || ಇಂತು ಪುತ್ರೋತ್ಸವವಾಯಿತೆಂದತ್ಯಂತ ಹರ್ಷವಂಪೊಂದಿ ಪುತ್ರನಿಗೆ ಜಾತಕರ್ಮವಂ ಮಾಡಿಸುವ ಕ್ರಮುವದೆಂತೆನೆ ||

ರಾಗಾ. || ದೇಶೀಯ ||

* ನಂದವ್ರಜದೊಳಾನಂದಾಶಯ-ಸಂದಣಿಸಿತು-ಆ ನಂದನಿಗತಿಶಯ । ನಂದನನುದಯಿಸಲಂದೊದಗಿತು ಜಯ ಮುಂದಂದಾಕ್ಷಣ ಕಂದನ ಮಹಿಮೆಯ || ನಂದನು ಬಹುಮುದದಿಂದಲಿ ವಿಪ್ರರ ವೃಂದವ ಕರತರಿಸಿ ದೈವಜ್ಞರ । ಮಿಂದು ಮಡಿಯನ್ನುಟ್ಟೊಂದಿಗೆ ಶೃಂಗರದಿಂದಲಿ ಮೆರೆಯುತ, ನಂದನು ಭೂಸುರರಿಂದತಿಶಯದಲಿ, ಸ್ವಸ್ತಿಯ ಗೈಸಿದ ಚಂದದಿ ಪಿತೃದೇವಾರ್ಚನೆಗಳಿಸಿದ । ಸುಂದರ ಸುತನ ಜಾತಕರ್ಮವ|| ನಂದನು ಮಾಡಿದನೂ-ಪರಮಾನಂದವ ಗೂಡಿದನು— ||೧||

ಅಳವಡಿಸಿದ ಗೋದಾನವ ದಿವಜರಿಗೆ-ಎರಡು ಲಕ್ಷವ ಕೊಟ್ಟನು ಬುಧರಿಗೆ-ತಿಲಪರ್ವತಗಳ ದಾನವ ಕಾಮಿಗೆ ಬೆಲೆಯಿಲ್ಲದ ನವರತ್ನದ ಜಾಳಿಗೆ, ಥಳಥಳಿಸುವ ಭಂಗಾರದ ಬಿಂದಿಗೆಯೊಳಗೇಳ್ಬಗೆ ರತ್ನಂಗಳ ದ್ವಿಜರಿಗೆ, ಜಲವನು ಪೂರಿಸಿ ಕುಂಭಗಳನುಮಿಗೆ| ಯೊಲಿದಾಡುತ್ತ ತಾನಿತ್ತನು ಬಹುಬಗೆ ಹಲವಂಗದ ಆದೇಶದ ಬುಧರಿಗೆ ನಲಿದಿತ್ತನು ಸುತನುತ್ಸವದೊಳಗೆ || ನಂದನು ಮಾಡಿದನು ||೨|| ದಾನಕಾಲದೊಳಗಾಗುವ ವಿಧಿಯುಲಿ ಸ್ನಾನ ಶೌಚ ಸತ್ಕಾರಂಗಳಿಂದಲಿ । ಮಾನಮೌನಮನದಂತರದಲ್ಲಿ । ಧ್ಯಾನವಿದ್ಯೆ ನಿಜದಂತಃಕರಣದಿ, ಜ್ಞಾನಿಯು ಶುದ್ಧಿಯ ಗೈಯುವತೆರದಲಿ ಆನಂದದಿ ವಿಧ್ಯುಕ್ತದಿಪುತ್ರಗೆ || ನಂದನು ಮಾಡಿದನು -|| ೩ ||

ವೇದಪಾರಂಗತರಾದರುವಿಪ್ರರು ಬೋಧಿಸೆ ಮಾಗಧ ಸೂತರು ಬಂದಿಗಳ್-ನೋದದಿಂಪಾಡಲು ಗಾಯಕರೆಲ್ಲರು, ನಾದಿಸೆ ದಿನಿಯುಲಿ ದುಂದುಭಿರವಗಳು ಆದಿಸದಲ್ಲಿ ಸಾರಿಸಿದ ಮನೆಗಳು । ಬೀದಿಗಳಲಿ ರಂಗೋಲಿಯ ಸಾಲ್ಗಳು । ಆಧೊರೆಯೂರಲ್ಲಿ ಚಿತ್ರಧ್ವಜಂಗಳು, ಹಾದಿಗೆ ಪಲ್ಲವ ತೋರಣಸಾಲ್ಗಳು, ಸಾಧಿಸಿಯೋಪರಿ ಪುತ್ರೋತ್ಸವದೊಳು || ನಂದನು ಮಾಡಿದನು || ೪ || ಕರುತುರು ಯೆತ್ತಿನ ಕೊರಳಿಗೆ ಮುತ್ತಿನ ಸರಗಳ ರಂಜಿಸಿ, ಹಿರಳಿಗೆ ಹೊದಿಸಿ । ಪರಿಪರಿ ಬಣ್ಣವ ಬರೆಸುತ ಮೆಯ್ಯೊಳು-ತರತರ ನವಿಲಿನ ಗರಿಗಳು ಕೊಂಬುಗಳೊಳು । ಅರಿಸಿನದೆಣ್ಣೆಯ ಲೇಪದ ಗೆರೆಗಳು । ಶಿರದೊಳು ಚಿನ್ನದ ಸರಗಳು ಕೊರಳೊಳು ಪರಿಪರಿಪೀತಾಂಬರಗಳ ನೆರಿಗಳು । ಕಿರುಗೆಜ್ಜೆಯಸರಪಾಡಗವುರದೊಳು, ಕರಿಗಳ ಮರಿ

* ಈ ಹಾಡಿನ ಪ್ರತಿಯೊಂದು ನುಡಿಯಲ್ಲಿಯೂ ಅನವಶ್ಯಕ ಶಬ್ದಗಳೂ ಪುನರುಕ್ತಿಯೂ ಬಂದಿರುವುದಲ್ಲದೆ, ಪಾದನೇಮವಾಗಲಿ ಅರ್ಥಗಾಂಭೀರ್ಯವಾಗಲಿ ಇಲ್ಲ. ಕೆಲವು ನುಡಿಗಳು ಹ್ರಸ್ವವಾಗಿಯೂ ಕೆಲವು ದೀರ್ಘವಾಗಿಯೂ ಇರುವುವು. ಆದರೂ ಇದನ್ನು ಬೇರ್ಪಡಿಸುವ ಗೊಡವೆಗೆ ಹೋಗದೆ ವಾಚಕರ ಅವಗಾಹನಕ್ಕಾಗಿ ಇದ್ದಂತೆಯೇ ಮುದ್ರಿಸಿರುವೆವು.

ಗಳು ನಡೆಯುವತೆರದೊಳು॥ ಕರುತುರುನಲಿಯುತ್ತಿರಲೀಪರಿಯೊಳು ॥ ನಂದನು ಮಾಡಿದನು ॥೫॥

ಧನಕನಕಾಭರಣಂಗಳನಿಟ್ಟು-ಮಣಿಮಯ ಮುಕ್ತಾಹಾರವತೊಟ್ಟು ಘನತರ ಕಂಚುಕ ವಸ್ತ್ರಗಳುಟ್ಟು, ಜನಜನರಿಗೆ ಮಾತಾಡುವರೊಟ್ಟು, ಮನದಲ್ಲಿ ಬಹುತರ ಮುದಗಳಪಟ್ಟು ಧನಕನಕವು ನವರತ್ನಗಳಿಟ್ಟು, ಮಣಿಮಯದಾಚಿನ್ನದತಟ್ಟೆಗಳೊಟ್ಟು ಗಣನೆಗಳಿಲ್ಲದ ಫಲಗಳನಿಟ್ಟು ಘನತರ ಕೈಗಾಣಿಕೆಯನುಕೊಟ್ಟು, ಅರಮನೆಯೊಳು ಗೋಪರು ನೆರೆದರುವಟ್ಟು ನಂದನು ಮಾಡಿದನು ॥೬॥

ಗೋಪೀದೇವಿಯು ಮುದದೊಳಗಂದು—ಗೋಪ್ಯದಿ ಪುತ್ರನ ಪಡೆದಿಹಳೆಂದು, ಗೋಪಸ್ತ್ರೀಯರು ಕೇಳುತಲಂದು, ರೂಪಿನ ವಸ್ತ್ರಾಭರಣವತಂದು, ತಾಪಡೆದರು ಬಲು ಶೃಂಗಾರವಂದು, ರೂಪಿಸಿ ಕಣ್ಣಳಿಗಂಜನಮುದ್ದು ॥೭॥

॥ ವ ಚ ನ ॥

ಇಂತು ಯಶೋದೆಗೆ ಪುತ್ರೋತ್ಸವವಾದುದಂಕೇಳಿ ಗೋಪಸ್ತ್ರೀಯರು ನಂದನರಮನೆಗೆಂದು ಬೀದಿಯೊಳ್ ನಡೆತರುವ ಸಡಗರವದೆಂತೆನೆ

॥ ಸೀಸಪದ್ಯ ॥

ತುಂಬಿಗುರುಳಿನ ಮಲಕು । ಚಂದ್ರಬಿಂಬದ ಬೆಳಕು। ಗುಂಭಿತದನುಡಿಗಿಲಕು, ತುಂಬಿದಲಕು॥ ಕುಂಭಕುಚಗಳಕುಲಕು, ಶಂಬರಾರಿಯ ಸುಲಕು; ಸಂಭ್ರಮದ ಪೈಚಳಕು । ಥಳಕುಬೆಳಕು ॥ ಚುಂಬನದತುಟಿಮಲಕು । ಬಿಂಬಫಲಗಳ ತಳಕು । ಗಂಭೀರನಗೆಬೆಳಕು । ತುಂಬಿತುಳುಕು॥ ಹಂಬುನಡುವಿನಬೆಳಕು । ಅಂಬರಾಂತರದಳಕು । ಪೊಂಬಣ್ಣಪೈಬೆಳಕು । ಗೊಂಬೆಗಮುಕು । ಅಂಬುಜಾಸ್ಯದತಳಕು । ಅಂಬರೇಂದ್ರದಬೆಳಕು । ಅಂಬಿನೆಸಗೆಯಬೆಳಕು । ಅಕ್ಷಿತಳಕು ॥ ರಂಭವೋಕೈತಳಕು । ರಂಭೆಯೊಲವಿನ ಗಿಲಕು । ಕಂಬುಕಂಠಿಯರಲಕು । ಕಾಮನಳಕು॥ ಸಂಭ್ರಮದ ನಡೆನುಡಿವಿಲಾಸದಿಂದಂಭುಜಾಕ್ಷಿಯರು, ನಲಿಯುತ್ತ ಬರುತಲಿಹರು ಮುಂಬರಿವ ಪ್ರೀತಿಯಿಂ ತುಂಬಿತುಳುಕಾಡುತ್ತ ಗಂಭೀರವತಿಯರು ಗೋಪನಾರಿಯರು ಬರುತಿರುವರೀ ತೆರದಿ ಬೀದಿಯೊಳಗೆ ॥

॥ ವ ಚ ನ ॥

ಈ ಪ್ರಕಾರದಿಂ ಸಡಗರದಿಂದೈತಂದ ಗೋಪಿಯರು,ನಂದನರಮನೆಯಂ ಪೊಕ್ಕು ಯಶೋದಾನಂದನನಕಂಡು ಚಂದದಿಂ ತೆಗೆದಪ್ಪಿ ಮುದ್ದಾಡುತ್ತ ನಂದನರಸಿಯ ಪುಣ್ಯಕೆಣೆಯಿಲ್ಲವೆಂದು ಕೊಂಡಾಡಿ ಆನಂದದಿಂದ ನೆರೆದು ಪರಿಪರಿಯಿಂ ಪಾಡುವರದೆಂತೆನೆ.

ರಾಗ— ಶ್ರೀರಾಗ.

ಪೋಕುಳಿಯೆರಚಿದರು ಸಂತೋಷದಿ ಗೋಕುಲದರಸಿಯರು ॥ ಪ ॥ ಗೋಕುಲದೊಳಗೆ ನೀನೆಂದಿಗೂನಿಂದು ಸಾಕಿಸಲಹು ನಮ್ಮ ಕಂದನೀನೆಂದು ॥ ೧ ॥ ಅರಿಸಿನದೆಣ್ಣೆಯ ನೀರೊಳು ಬೆರಸಿ । ಎರಚಿಯಾಡಿದರು ಮುದ್ದುಕಂದನ ಹರಸಿ॥ ೨ ॥ ಚಿತ್ರವಿಚಿತ್ರದ ವಾದ್ಯವುಪೊಳಗೆ । ಸುಪುತ್ರ ಮಹೋತ್ಸವದೊಳಗೆ ॥ ೩ ॥ ಇಂದಿರಾರಮಣ ಶ್ರೀಕೃಷ್ಣನು ಬಂದು— ನಂದನ ಮಂದಿರಪೊಂದಿರಲಂದು ॥ ೪ ॥ ಪಾಲುಮೊಸರು ಬೆಣ್ಣೆ ನೀರೊಳು ಬೆರಸಿ । ಲೀಲೆಯಿಂಗೋಪರು ಮೈಯೊಳಗೊರಸಿ ॥೫॥ ಬಂದವರಿಗೆ ಭರದಿಂದಲಂದು-ನಂದನು ಪೂಜೆಯಗೈಯುತಿರಲಂದು ॥ ೬॥ ಗೋದಾನ ವಸನಾಭರಣಗಳನ್ನು ಮೋದದಿ ಕೊಡುತಿರಲುಡುಗೊರೆಯನ್ನು ॥ ೭ ॥ ಸೂತಮಾಗಧ ಬಂದಿಗಳಿಗೆ ವಿಸ್ತರದಿ । ನೀತಿಯರಿತು ಬಹುಮಾನಿಸಿ ಮುದದಿ ॥ ೮ ॥ ಸುತನೇಳಿಗೆಯನ್ನು ಮನದೊಳಗೆಣಿಸಿ—ಹಿತದಲ್ಲಿ ಪುಲಿಗಿರಿಪತಿಯನ್ನು ಸ್ಮರಿಸಿ ॥೯॥

॥ ವ ಚ ನ ॥

ಇಂತು ವ್ರಜದೊಳ್ ನಂದನಂದನನ ಜನ್ಮೋತ್ಸವಂಬೆಳಗೆ । ನಂದನರಮನೆಯಲ್ಲಿ ಬಂದಿರುತ್ತಿಹ ರೋಹಿಣೀದೇವಿಯು ನಿಜನಂದನನ ಅಭ್ಯುದಯಮಂಬಯಸಿ । ಮಿಂದುಮುಡಿಯುಟ್ಟು ನಂದನಂದನನೊಂದಿಗೆ ತನ್ನಕಂದನಿಗು ಚಂದದಲಿ ಜಾತಕರ್ಮವನು ಮುಂದಾಗಿತಾಮಾಡಿ ನೋಡಿ । ನಂದಗೋಪಿಯರಿಂದಲಾನಂದಿತಳಾಗಿ ಬಾಗಿ। ಬಂದಬಂದವರಿಗತ್ಯಧಿಕ ಧನಕನಕವಸ್ತ್ರಗಳಿಂದ ಪೂಜಿಸಿ ಸುತನಿಗಭ್ಯುದಯವೆಂದೆ ಸುತ ಹರಿಯಪಾದಕರ್ಪಿತವಾಗುವಂತೆ ಕೊಟ್ಟಳಾಕಾಂತೆ,ಇಂತು ಪುತ್ರೋತ್ಸವಂಗಳಾದ ಬಳಿಕಲಾನಂದವ್ರಜವು ಚಂದ್ರಸೂರ್ಯರಿಂದೊಪ್ಪುವ ಗಗನದಂತೆಯೂ ಇಂದ್ರೋಪೇಂದ್ರರಿಂದೆಸೆವ ಸ್ವರ್ಗದಂತೆಯೂ ಜನ್ಮಾಂತರ ಕೃತಪುಣ್ಯಫಲದಿಂದ । ಸಂತಾನದ ಬೀಜಾವಾಪನವಾಗಿ ಗೋಕುಲದ ಶ್ರೀಸೌಭಾಗ್ಯ ಕಣ್ಗೊಪ್ಪಿತದಂತೆಸೆ—ಪೇದಪುಷ್ಕರಣಿಯಂತೆ, ಪುಷ್ಕರದ್ವೀಪದಂತೆ; ದ್ವೀಪಾಂತರದಂತೆ ಅಂತರ್ಗಂಗೆಯಂತೆ, ಗಂಗಾಜಲದಂತೆ, ಜಲಜಾತಗಳಂತೆ, ಜಾತರೂಪಗಳಂತೆ, ರೂಪಾಂಗನೆಯಂತೆ, ಅಂಗನಾನಯನದಂತೆ, ನಯನಕಮಲಗಳಂತೆ, ಕಮಲಮುಖದಂತೆ, ಮುಖಚಂದ್ರಮನಂತೆ, ಚದ್ರೋದಯದಂತೆ, ಉದಯದಿನನಂತೆ, ದಿನಮಣಿಯಂತೆ, ಮಣಿರತ್ನದಂತೆ, ರತ್ನಾಕರದಂತೆ,ಆ ಕರಾಂಬುಜದಂತೆ, ಅಂಬುಜಕೋಶದಂತೆ, ಕೋಶೇಶ್ವರನಂತೆ, ಈಶ್ವರಧೈರ್ಯದಂತೆ ಧೈರ್ಯಲಕ್ಷ್ಮಿಯಂತೆ ಲಕ್ಷ್ಮೀಪತಿಯಂತೆ, ಕಣ್ಗೆಸೆದುದಾವಿಧದಿ ಶ್ರೀಕರದಗೋಕುಲದ ಶಿರಿಯುಪ್ಪಿಮಿಯು. ಮತ್ತೂ ಗೋಕುಲದ ಸಿರಿಯು ಎಂತಿದ್ದಿತೆಂದರೆ—

ರಾಗ । ತಾಂಬೋಧಿ ।

ಇಂದಿರೇಶನಂದದಿಂಬಂದು ವಾಸವಾಡಲು । ಆನಂದ ನೂರು ಇಂದಿರಾಸು ಮಂದಿರವಾಯಿತು ॥ಪ॥ ಅಂದಿನಿಂದ ನಂದಗೋಕುಲ ಚಂದವಾಯಿತು । ಗೋವಿಂದಬಂದು ನಿಲ್ಲಲಾನಂದವಾಯಿತು ॥೧॥ ಲಕ್ಷ್ಮೀದೇವಿಯ ಸಾಕ್ಷಾತ್ಕಟಾಕ್ಷವಾಯಿತು । ಪುರವು-ಲಕ್ಷ್ಮೀಕಾಂತನ ವೀಕ್ಷೆಯಿಂ ಲಕ್ಷಣವಾಯಿತು ॥ ೨ ॥ ಪುತ್ರಮಿತ್ರರಿಂದ ಜನರು ಪುಷ್ಟಿಯಾದರು । ಬಹುಸತ್ಯವಂತರಾಗಿ ಕೃತಕೃತ್ಯರಾದರು ॥೩॥ ಬಂಧು ಬಳಗ ಭೋಗಭಾಗ್ಯದಿಂದಲೊಪ್ಪಿತು । ಗೋವೃಂದಗಳು ಹೆಚ್ಚಿ ಕ್ಷೀರಸಿಂಧುವಾಯಿತು ॥ ೪ ॥ ನಂದಪುತ್ರನಿಂದ ಪುರವು ಅಂದವಾಯಿತು । ಬಲು ಅಂದಚಂದದಿಂದ ಸಿರಿಯು ಮುಂದುದೋರಿತು ॥ ೫ ॥ ಕಾಮಿತಾರ್ಥಂಗಳು ಜನರಿಗೆ ಸಿದ್ಧಿಯಾಯಿತು । ಶ್ರೀರಾಮಕೃಷ್ಣರಿರಲು ಲಕ್ಷ್ಮೀಧಾಮವಾಯಿತು॥೬॥ ವರ್ಣಿಸಲು ಶಕ್ಯವಲ್ಲ ರಮ್ಯವಾಯಿತು । ಊರು ಪರ್ಣಶಾಲೆಯೆಲ್ಲ ಸುವರ್ಣವಾಯಿತು ॥ ೭ ॥ ಫಲಪುಷ್ಪಂಗಳೆಲ್ಲ ನಿತ್ಯ ಫಲಿತವಾಯಿತು । ಈ ಇಳೆಯೊಳು ಪುಲಿಗಿರೀಶನ ಕೃಪೆಯು ತೋರಿತು.

॥ ವ ಚ ನ ॥

ಇಂತಿರಲು ನಂದಗೋಪನು ಕಂಸನಿಗೆ ಕಪ್ಪವನ್ನೊಪ್ಪಿಸಲು ಮಧುರಾಪುರಿಗೆ ಪೊರಡಬೇಕೆಂದು ಗೋಕುಲದ ರಕ್ಷಣೆಗೆ ಗೋಪರಂನಿಯಮಿಸಿ ಕಪ್ಪವನ್ನೊಪ್ಪಿಸಲು ಪೊರಟನದೆಂತೆನೆ.-

ರಾಗಾ. ಯಮುನಾ॥

ನಂದಬಂದನು ಮಧುರಾಪುರಿಗೆ—ತಂದನು ಕಪ್ಪವ ಕಂಸಗೆ ರೊಪ್ಪವ ॥ ಪ ॥ ಬಂಧುಗಳೊಂದಿಗೆ ಬಂಡಿಗಳೇರಿ। ಕಂದದೆ ಕುಂದದೆ ಬಂದನು ತಂದನು ॥೧॥ ದಪ್ಪದ ತುಪ್ಪದ ಕೊಪ್ಪರಿಗೆಬಹು ರೊಪ್ಪದ ಹಣಗಳ ತಪ್ಪದೆ ತಂದನು ॥೨॥ ಒಪ್ಪದಿ ಕಪ್ಪವನೊಪ್ಪಿಸಿ ಬೇಗದಿ । ತಪ್ಪದೆ ಕಂಸನೊಳಪ್ಪಣೆಗೊಂಡನು ॥ ೩ ॥ ನಂದನು ಬಂದುದ ಕೇಳಲು ಶೌರಿ । ಮುಂದವನಲ್ಲಿಗೆ ಪೋದವಿಚಾರಿ ॥ ೪ ॥ ವಸುದೇವನು ಕಂಡೆದ್ದುನಂದನು ಆಸುಗೂಡಲು ಪ್ಯೈಪಸರಿಪ ತೆರದೊಳು ॥ ೫ ॥ ಪ್ರೀತಿಯಿಂದಲಾಲಿಂಗನೆ ಗೈದರು। ಮಾತುಗಳಾಡುತ ಕುಳಿತರು ಈರ್ವರು ॥೬॥ ಪುತ್ರರ ಮಮತೆಯು ಮನದೊಳಗಿಟ್ಟು । ಚಿತ್ತರದಲಿ ಮಾತಾಡಿದಗುಟ್ಟು ॥ ೭ ॥ ಅಣ್ಣಾಕೇಳು ದಿನ ಕಳೆದರು ನಿನಗೆ । ಪುಣ್ಯಾದಿ ಪುತ್ರನ ಪಡೆದೆಯು ಮನೆಗೆ॥೮॥ ಪುತ್ರರು ಬಂದೆಡೆಯಿಲ್ಲದೆ ದೂರದೊಳೆತ್ತಲೋಯಿರುವರು ದರುಶನಬಿತ್ತರ ॥ ೯॥ ವ್ರಜದೊಳಗೆಲ್ಲ ಕುಶಲವೆ, ನಲ್ಲ। ಪ್ರಜೆಗಳು ತೃಣಜಲಸುಖವೆ, ನಲ್ಲ ॥ ೧೦ ॥ ತಾತನು ನೀನೆಂದೆನು ತಲೆಪುತ್ರನು । ಮಾತೆಯು ಸಹನಿನ್ನೂರೊಳಗಿರುವನು ॥೧೧॥ ಲಾಲಿಸಿಪೋಷಣೆ ಗೈಯ್ಯುತನೀನು । ಪಾಲಿಪಧರ್ಮಕೆ ಪರಿಮಿತಿಯೇನು ॥೧೨॥ ಎಂದ ಮಾತನು ಕೇಳುತ ನಂದ । ಚಂದದಿ ಮಾತಾಡಿದನಲವಿಂದ ॥ ೧೩ ॥ ದೇವಕೀ ಗರ್ಭದಿ ಜನಿಸಿದ ಮಕ್ಕಳ । ಜೀವದಿ ಕೊಂದನು ಕಂಸನು ಬಹುಖಳ ॥ ೧೪ ॥ ಕನ್ಯೆಯು ಕಡೆಯಲ್ಲಿ ಪುಟ್ಟಿದರಿರದೆ । ಪುಣ್ಯವು ಗಗನಕೆ ಹಾರಲುಬಹುದೆ ॥ ೧೫ ॥ ವಿಧಿಬರದಿರುವುದು ತಪ್ಪದು ಫಣೆಯೊಳು । ಬುಧರಿದಕಳುಕುವರಲ್ಲವ್ರ ಇಳೆಯೊಳು ॥೧೬॥ ಒಟ್ಟಿಗೆ ಪುಲಿಗಿರಿಬೆಟ್ಟದ ನಾಥನ ಕಟ್ಟಳೆ ದೊಡ್ಡದು ಸೃಷ್ಟಿಗೆಯೆಂದ ॥ ೧೭ ॥

॥ ವಚನ ॥

ಈ ಪರಿಯೊಳ್ ನಂದವಸುದೇವರೀರ್ವರೂ ಯೋಗಕ್ಷೇಮದ ಮಾತುಗಳಾಡಿದ ಬಳಿಕ ನಂದನಿಗೆ ವಸುದೇವನು ಪೇಳುವನದೆಂತೆನೆ ।

॥ ಪದ ॥

ನಂದಾಯಿತು ಕಪ್ಪವುಕಂಸನಿಗೆ ಕಂಡಾಯಿತು ನಾವು ನಿಮ್ಮನು, ಮುಂದಾಗುವುದು ಗೋಕುಲದಿ ದಂಧನವು ? ನೀವಿಂದಿರಲಾಗದು ನಡೆವುದೆಂದನಾ ನಂದನೊಳು ವಸುದೇವಂ॥ ಶೌರಿಯುವಚನವಕೇಳುತ ಮೀರದೆ ಸಖಸಪ್ಪಣೆಯುತಾಳಿಪೇಳಿ॥ ಧೀರನು ಭಂಡಿಯ ಮೇಲೇರಿ ಗೋಪರ ಸೇರಿಸಾರಿ ನಡೆದನು ತನ್ನ ಪುರಕೆ ಗೋಕುಲಕೆ ॥

ಇ ತಿ ಷ ಷ್ಠೋ ೀ ಧ್ಯಾ ಯ ಃ

॥ ವಚನ ॥

ಇಂತು ಪೊರಟು ಬರುವ ನಂದನು ಬರುತದಾರಿಯೊಳು ಕಂಡನಪಶಕುನಂಗಳನದೆಂತೆನೆ.

ನಂದನು ದಾರಿಯುಲಿ ಬರುತಲಿರೆ ಕಂಡನಪಶಕುನಗಳಂ ಮನದೊಳರಿದು ಚಿಂತಿಸಿ, ಶೌರಿಯು ನುಡಿ ನಿಜವೆಂದೆನುತ ಹರಿಗೆ ಶರಣಾಗತನಾಗಿ ಬರುತಲಿಹನು ಮಾರ್ಗದಿ ಶೀಘ್ರದೊಳಾಗ॥

ರಾಗಾ॥ ಶುದ್ಧಸಾವೇರಿ॥

ಕ್ರೂರಕಂಸನು ಸಾರಿಕಳುಹಲು ಘೋರಪೂತನಿಯು । ನಾರೀರೂಪವತಾಳಿ ಬಂದಳು ಬಾಲಘಾತಿನಿಯು ॥ ಪಲ್ಲ ॥ ಓರೆನೋಟದಪೋರೆಯಿಂದುರಿ ಮಾರಿಬರುತಿಹಳು। ಊರು ಕೇರಿಯು ಪೊಕ್ಕುಮಕ್ಕಳ ಸೂರೆಗೈಯುತಿಹಳು ॥ ಹಾರಿ ಹರಿ ಹರಿದಾರಿ ಮೊರೆಮೊರೆದಾಡಿ ಬರುತಿಹಳು॥ಮೀರಿ ಮುರಿಮುರಿದಾಡಿ ತರತರದೋಡಿ ಬರುತಿಹಳು ॥ ೧ ॥ ಚೆಲ್ವಕೃಷ್ಣನ ಸೊಲ್ಲು ಇಲ್ಲದ ಪಳ್ಳಿಗಿಣುಕುವಳು । ಎಲ್ಲಿರಕ್ಷೋಘ್ನಾದಿ ಮಂತ್ರಗಳಿಲ್ಲವಲ್ಲಿಹಳು ॥ ಮೆಲ್ಲಮೆಲ್ಲನೆ ಮಾಟಗಾತಿಯು

ಮಾತೆಯಂತಿಹಳು । ಗುಲ್ಲು ಮಾಡದೆ ಬಂದುಮಕ್ಕಳ ನೆಲ್ಲ ಕೊಲ್ಲುವಳು ॥ ೨ ॥ ನೋಡಿ ಮೊಲೆಮೊಲೆಯೂಡಿ ಕೊಲೆಯಾಡಿ ಬರುತಿಹಳು । ಕೇಡುಗಾತಿಯು ನೋಡಿ ಮನೆಮನೆ ಗೂಡಿಕೊಂಡಿಹಳು ॥ ಕಾಡಿಬೇಡುತ ಮಕ್ಕಳೆಲ್ಲವ ತೀಡಿ ತೇಗುವಳು । ನಾಡಿನೊಳು ಪುಲಿಶೈಲನಾಥನ ಶಕ್ತಿಗಳು ಕುವಳು॥ ೩ ॥

॥ ವ ಚ ನ ॥

ಈ ಪ್ರಕಾರದಿಂ ಬರುತ್ತಿರುವ ಬಾಲಘಾತನಿಯೂ ಪೂತನಿಯು ಸಾಲಂಕೃತೆಯಾಗಿ ಗೋಕುಲಕ್ಕೆ ಬರುವಳೆಂತೆನೆ

ರಾಗಾ॥ ಕಾಂಭೋಧಿ॥

ಬಂದಳು ಮಾಯಾಂಗಿಣಿ ಪೊಂದಿರೆ ಕಂಯ್ಯೊಳರಗಿಣಿ । ಚಂದದಿ ಮಾನಿನಿ ಮುಂದಾಗಿಪೂತನಿ ॥ ಪ ॥ ಮಾಯಾಕಾತಿ ಕಂಸನದೂತಿ । ತಾಯಿಪ್ರೀತಿ ತೋರುವರೀತಿ। ದಾಯಮರಿತ ಕೊಲ್ಲುವಜಾತಿ । ಉಪಾಯಗಾತಿ ॥ ೧ ॥ ಬಾಲಘಾತೀರಕ್ಕಸಜಾತಿ । ಜಾಲಗಾತಿ ಜಾಣೆನೀತಿ ॥ ನಾಲಿಗೆಯೊಳ್ಸವಿನೀತಿ । ರಾಜ್ಯಕೇಭೀತಿ ॥ ೨ ॥ ಘೋರ ರೂಪವನ್ನು ಬಿಟ್ಟು ಕೋರಿ ನಾರೀರೂಪವತೊಟ್ಟು । ನಾರಿ ಸಾರಿಬಿಟ್ಟುವಾರೆಗಣ್ಣಿನ ಗುಟ್ಟು ॥ ೩ ॥ ಮಲ್ಲಿಗೆ ಮಾಲೆಯಮುಡಿ । ಹಲ್ಲಿಗೆ ಕಪ್ಪಿನ ಪುಡಿ । ಸಲ್ಲಲಿತ ಸವಿನುಡಿ । ಪಲ್ಲವಪಾಡಿ ಬಂದಳು ॥ ೪ ॥ ಲೋಕವೆಲ್ಲ ಸುತ್ತಿ ಬೇಗಗೋಕುಲಕೆ ಬಂದಳಾಗ॥ ಲೋಕನಾಥ ಪುಲಿಗಿರೀಶನಿರುವಲ್ಲಿ ಬೇಗಾ ॥ ೫ ॥

॥ ವ ಚ ನ ॥

ಈ ಪ್ರಕಾರದಿಂ ಕಪಟರೂಪದಿಂ ನಂದಗೋಕುಲದೊಳಗೆ ಪೂತನಿಯು ಬರುವಾಗ ತೋರುವಬೆಡಗ ಪೇಳ್ವೆನದೆಂತೆನೆ

ರಾಗಾ॥ ಗುಂಭ ಕಾಂಬೋಧಿ ॥

ಬಂದಳೆಂದೂ ನಂದಗೋಕುಲಕೆಂದು ಪೂತನಿ । ಒಳ್ಳೆ ಅಂದಚಂದೆವನು ತಾಳಿಬಾಲಘಾತಿನಿ ॥ ಪ ॥ ತೋರಕುಚಗಳ ಭಾರದಿಂ ಪೊಯ್ಯ್ಯುರೆ ನಲಿಯುತ್ತ । ದೊಡ್ಡ । ಭಾರಿಭಾರಿ ಹಿಂದೆ ಇಡೆಯಿಂದೂರಿಯಾಡುತ್ತ । ಕುಚಭಾರದಿಂದ ಬಡನಡುಕೂಡಿ ಬಳಕುತ್ತ ॥ ದಿವ್ಯಸೀರೆ ಮುತ್ತಿನಹಾರದಿಂದ ನಾರಿಮೆರೆಯುತ್ತ॥ ಬಂದಳೆಂದು ॥ ೧ ॥ ಚಂಚಲಿಸುತಿಹ ಕರ್ಣಭೂಷಣದಿಂದ । ಕಾರ್ಮಿಂಚಿನಂತೆ ಪೊಳೆಯುತ್ತಿಹ ಕುಂತಳದಿಂದ ನಾರಿ–ಕೊಂಚವಾಗಿವೋರೆದೃಷ್ಟಿ ಮಿಂಚುಗಳಿಂದ-ಪರ-ವಂಚನೆಯ ಪುಸಿನಗೆ ಸಂಚುಗಳಿಂದ ಬೇಗ ॥ ಬಂದಳೆಂದು ॥ ೨ ॥ ಮಲ್ಲಿಗೆ ಮಾಲೆಯ ಮುಡಿಯಲ್ಲಿ ಧರಿಸುತ್ತ-ಕರ-ಪಲ್ಲವದಿ ಕಮಲವ ಪಿಡಿದಲ್ಲಿ ಬರುತ್ತ । ಇರೆವಲ್ಲಭನೊಡಬಂದ ಲಕ್ಷ್ಮಿಯೆನ್ನುತ್ತ । ಚಲ್ವಗೊಲ್ಲತಿಯರೆಲ್ಲ ನೋಡಿ ಮಾತನಾಡುತ ॥ ೩ ॥ ಮಂದಿರಂಗಳಲ್ಲಿ ಬಂದು ನಿಂದುನೋಡುತ–ಚಿಕ್ಕಕಂದರೆಲ್ಲಿ ಕಾಣೆನೆಂದು ಕಾಡಿಬೇಡುತ್ತ—ಬೇಗ-ನಂದನರಮನೆಯೊಳು ಬಂದು ನೋಡುತ್ತ–ಗೋವಿಂದನನ್ನು ಕಂಡಳೆಂದು ನಿಂದು ನಿಂದುನೊಡುತ್ತ ॥ ಬಂದಳೆಂದು ॥ ೪ ॥ ಪುಟ್ಟ ಮಕ್ಕಳನ್ನು ಕೊಂದದುಷ್ಟೆಯೆನ್ನುತ। ತಿಳಿದು-ಕೃಷ್ಣಮೂರುತಿ ಸರ್ವಜ್ಞಸುಮ್ಮನೆ ನೋಡುತ ಎಳ್ಳಷ್ಟುಮಾತನಾಡದಂತೆ ಸುಮ್ಮನಿರುತ್ತ । ಪುಲಿಬೆಟ್ಟದ ಶ್ರೀವೆಂಕಟೇಶನಸುನಗುತ್ತ ॥ ೫ ॥

॥ ವ ಚ ನ ॥

ಇಂತು ನಡೆತಂದ ಪೂತನಿ, ಶಿಶುವಾಗಿ ಮಲಗಿರುವ ಶ್ರೀಹರಿಯು ಬಳಿಗೆ ಬರುವಳದೆಂತೆನೆ.

ಇಂತು, ಶಿಶುಗಳನರಸುತ್ತ ಬರುವ ಶಿಶುಘಾತಿನಿ ಪೂತಿನಿಯೆಂದು, ಭಸಿತದಿ ಮುಚ್ಚಿದ ಬಡಬಾಗ್ನಿಯಂತೆ, ವ್ರಜದರಸನ ಮನೆಯೊಳ್ ನಿಜತೇಜವಂ ಮರಸಿಹ ಮಾಯದ ಮಗುವೆನಿಸಿ, ಹಾಸಿಗೆಯೊಳ್ ಮಲಗಿರುವ ಅಸುರಾಂತಕನಂ ಯದೃಚ್ಛೆಯಿಂ ಕಂಡಳಾ ಕಂಣಾರೆ ಕುಮತಿ—ಇಂತು ತನ್ನಂ ಕಂಡ ಕುಮತಿಯಂ ನೋಡಿ, ಬಾಲರ ಕೊಲ್ಲುವ ಮಾಳಿಯೆಂದರಿತಿಹ ಚರಾಚರಾತ್ಮಕನಾದ ಶ್ರೀಹರಿಯು, ಮಹೇಶ್ವರನಾದರೂ, ಬಾಲಭಾವನಂ ವಹಿಸಿ ಕಣ್ತೆರೆಯದೆ ರೆಪ್ಪೆ ಬಡಿಯದೆ, ಪ್ರಭುವಾದರೂ ಮಾತನಾಡದೆ ಸುಮ್ಮನಿರುತಿರೆ ಕಂಡು ನಾಡಾಡಿ ಶಿಶುವೆಂದರಿತು ಬಂದಳಾತರುಣಿ ಪೂತನಿ ಬರುವ ವೊಯ್ಯಾರವದೆಂತೆನೆ

॥ ಸೀ ಸ ಪ ದ್ಯ ॥

ವದನ ಚಂದ್ರನ ಕಾಂತಿ । ರದನ ಕುಂದದ ಪಂಕ್ತಿ । ವಚನ ಚಂದನಶಾಂತಿ । ರಚನೆಭ್ರಾಂತಿ ॥ ತಿಲಕರಚನದಫಾಲ ಜ್ವಲಿತ ದೀಪದಲೀಲ। ಹೊಳೆವ ಕನ್ನಡಿಜಾಲ ಸಮಕಪೋಲ॥ ಎದೆಯು ಭಾವದಕಟ್ಟು । ಮದನ ಬಾಣನಪೆಟ್ಟು ೩। ಮದನ ಮಂದಿರಗುಟ್ಟು ಮನದಗುಟ್ಟು ॥ ಕಡೆಯು ಕಂಣಿನಸೋಗೆ । ಕಾಮಿಗಳ ಮನಬೇಗೆ। ನಡೆಹಂಸೆಗೆಣೆಯಾಗೆ। ನಡುವುತೂಗೆ॥ ಸರಸವಚನರಚನ ಸಂಭ್ರಮವಿಭ್ರಮ ಸುಸ್ಮಯ ವಿಸ್ಮಯವಿವಿಧ ವಿಲಾಸಗಳಿಂ ದೈತಂದು। ಪೂತನಿಯು ಕಂಡು ಕೃಷ್ಣನ ಕಯ್ಯೊಳೆತ್ತಿಕೊಂಡಳು ಕಂದನೆಂದು ॥

ರಾಗಾ ॥ ಭೈರವಿ ॥

ಅಸುರಾಂತಕನೆಂದರಿಯದೆ ರಕ್ಕಸಿ, ಶಿಶುವೆಂದು ಕರೆದುಕೊಂಡು, ಮುಸುಕಿಟ್ಟು ತೊಡೆಯೊಳು ಮಲಗಿಸಿಕೊಂಡಳು ಅಸುರಜಾತಿಯ ಪೂತನಿ ॥ ಪ ॥

ಮಲಗಿದ್ದ ಹಾವುಕಂಡು ಹಗ್ಗವೆಂದರಿಯದೆ ಕಯ್ಯೊಳೆತ್ತುತ, ತಲೆಯೊಳಗಿರಿಸಿದ ತೆರನಾಯಿತೇನೆಂಬೆ ನಿಳೆಯೊಳಗಚ್ಚರಿಯು ॥ ೧ ॥ ವರೆಯೊಳಗಡಗಿರುವ ತೀಡಿದ ಕತ್ತಿಯು ತೆರದೊಳಗಿರುತಿರುವಾ ॥ ವರನಾರಿಯನುಕಂಡು ತರುಣಿಗೋ

ಪಿಯು ಸುಮ್ಮನಿರುತಿರೆ ಬೆರಗಾಗುತ್ತ ॥ ಅಸು॥೭॥ ಶಿಶುವನ್ನು ತೊಡೆಯೊಳಿಟ್ಟು, ಬಾಯೊಳು ತನ್ನ—ವಿಷದ ಮೊಲೆಯನೆ ಕೊಟ್ಟು। ಪಸುಳೆಯು ಕೊಲ್ಲುವ ರೀತಿಯ ಮನವಿಟ್ಟು, ಹುಸಿನಗೆನಗುತ್ತಿದ್ದಳು॥೩॥ ನೋಡಿದ ಕೃಷ್ಣದೇವ–ವಿಷವ ತುಂಬಿ-ಯಾಡುವಾಸುರಭಾವವ। ಮಾಡಿದ ಕೋಪವನು ಮಸದಾಡಿ ಮೊನೆಗೂಡಿ ನೋಡಿದನವಳ ॥ಅಸು॥೪॥ ಬಿಡದೆ ಮೊಲೆಯ ಪಿಡಿದ, ಬಾಯೊಳು ಕಯ್ಯಿಂ, ಜಡಿದು ಜಗ್ಗಿಸಿಕುಡಿದ॥ ತಡೆಯಲಾರದೆ ಕೂಗೆ ಬಿಡುಬಿಡೋಯೆನ್ನುತ, ಬಡಿದುಕೊಂಡಳು ಪೂತನೀ॥೫॥ ಪಾಲನೀಂಟುವತೆರದಿ- ಗೋಪಾಲನು- ಬಾಲಲೀಲೆಯ ತೋರುತ॥ ಲೀಲೆಯಿಂ ಪಂಚಪ್ರಾಣಸಹಿತ ಮೊಲೆಪಾಲನುಣ್ಣುತಲಿದ್ದನು॥೬॥ ಕಣ್ಣು ಕಯ್ಕಾಲುಗಳು- ತೆರದುಪೋಗಿ--ತಣ್ಣಗಾದವುತೊಗಲು, ಚಿಣ್ಣ ಮೊಲೆಯುಣುಣ್ಣೆ ಭಿನ್ನಗಾತ್ರಳು ಬಹು, ಬಣ್ಣಿಸಿ ಕೂಗಿದಳು ॥೭॥ ಗುಡುಗಿದ ಧ್ವನಿಯಕೇಳಿ—ಮೂರ್ಲೋಕವು—ನಡುಗಿತು ಭಯವತಾಳಿ॥ ಪೊಡವಿಯೊಳ್ಜನರೆಲ್ಲ ಬಿದ್ದರುಬೆದರುತ್ತ। ಸಿಡಿಲೆರಗಿದತೆರದಿ॥೮॥ ಕೆದರಿದ ಕೇಶದಿಂದ-ಪೂತನಿ-ಕಾಲೊದರುತ್ತ ಬೇಗದಿಂದ ॥ ಕದಲಿಪ್ರಾಣದಿಂದ—ಕ್ಷಿತಿಯೊಳು ಬಿದ್ದಳು, ಅದುಭುತವೇನೆಂಬೆನು॥೯॥ ವ್ರಜದೊಳು ಬಿದ್ದವಳು ಪೂತನಿ ತನ್ನ-ನಿಜರೂಪತಾಳಿದಳು ॥ ಪ್ರಜೆಯು ನೋಡುತಲಿರೆ ವಜ್ರಘಾತದಿಂದ ವೃತ್ರನತೆರವಾದಳು ॥೧೦॥ ದುರುಳರಶಿಕ್ಷಿಸುವ-ಭಕ್ತರಬೇಗ-ಕರುಣದ ರಕ್ಷಿಸುವ ॥ ವರ ಪುಲಿಗಿರಿನಾಥ ವೆಂಕಟರಮಣನ ಸರಿಯುಂಟೆ ಜಗದೊಳಗೆ ॥೧೧॥

॥ಕಂದ॥

ಘೋರೆಯ ದೇಹವು ಬೀಳಲ್। ಆರುಕ್ರೋಶದ ತರುಗಳು ಚೂರ್ಣಗಳಾಗಲ್ ॥ ತೋರಿತುಭೀತಿಯು ಜನರಿಗೆ। ತಾರೆಗಳುದುರಿದವುನೆಲಕೆ ಕೇಳದ್ಭುತಮಂ ॥—

॥ಪದ॥

ನೆಟ್ಟನೆ ಬಿದ್ದುರಳಿರುವ ಪೂತನಿಯ। ಕಟ್ಟೆ ಮುಖದೊಳ್ ಕೋರೆದಾಡೆಗಳುಹಲದಂತೆ। ಬೆಟ್ಟದ ಗುಹೆಯಂತೆ ಮೂಗಿನ ರಂಧ್ರ। ಹುಟ್ಟಿರುವ ಕೆಂಜೆಡೆಯ ಮುಡಿಯು ಶಿರದೊಳಗೆ॥ ಅಂಧಃಕೂಪದರೀತಿಕಣ್ಣಳು। ಗಂಡಶ್ಶೈಲಗಳಂತ ಘೋರತರ ಮೊಲೆಗಳು। ಹಿಂದಟ್ಟಿದಮಟ್ಟ ಮರಳೊಟ್ಟನಬೆಟ್ಟ ಬಂಧವೋಯೆಂಬಂತೆ ಕಯ್ಕಾಲ್ಗಳ ಬಂಧನದ ಕೀಲು॥ ನೀರಿಲ್ಲದ ಮಡುಹೊಟ್ಟೆಯು। ಈರೀತಿಯ ಕಾಯವನುಕಂಡು ಗೋಪನಾರಿಯರು। ತಲ್ಲಣಿಸಿಬಿದ್ದರು ಚೀರಿತು ಕಯ್ಕಾಲು ಕಿವಿಗಳು—ಊರೊಳಗದೇನೆಂಬೆ ಚಿತ್ರ ಪಾಂಡವರವೌತ್ರ॥

॥ ವ ಚ ನ ॥

ಇಂತು ಬಿದ್ದಿರುವ ಪೂತನಿಯಮೇಲೆ ಬಾಲಕೃಷ್ಣನು ಆಡುತ್ತ ಮಲಗಿರಲು ಗೋಪಿಯರು ಕರೆದುಕೊಳ್ಳುವರದೆಂತೆನೆ.

ರಾಗಾ॥

ಮಕ್ಕಳಮಾಣಿಕ್ಯ ರಕ್ಕಸಿಯೆದೆಯೊಳು ಚಿಕ್ಕವನಾಡುತಿರೆ ಗಕ್ಕನೆಗೋಪಿಯರಕ್ಕರದಿಂದಲೆ ಥಕ್ಕನೆ ಕರತಂದರು ॥ಪ॥ ಅಕ್ಕರೋಹಿಣೀದೇವಿ, ಚಿಕ್ಕಯಶೋದೆಯು ಇಕ್ಕೆಲದೊಳಗಿರಲೂ। ರಕ್ಕಸಿಯನುಕಂಡು ಲೆಕ್ಕಿಸಿ ಭಯಗೊಂಡು, ಚಿಕ್ಕಸ ಬೆರಗಾದರು ॥೧॥ ಮಕ್ಕಳತಾಯಿಯರ ಕರದರು ಕೂಡಿವಕ್ಕಲಿನವರೆಲ್ಲರು । ಲೆಕ್ಕಿಸದಿರುತಿಹ ರಕ್ಕಸವೈರಿಗೆ ರಕ್ಷೆಯನಿಡುತಿಹರು ॥೨॥ ಹಸುವಿನಬಾಲದಿ ಹಸುಳೆಯ ಮಯ್ಯೊಳು ಹೊಸಗಿಸಿಸುತ್ತಿದರು। ಶಿಶುವಿಗೆ ಬೇಗದಿ ಹಸುವಿನ ಗಂಜಲ ಬಿಸಿಯಾಗಿಯೆರೆಯುವರು ॥೩॥ ಗೋಮಯದಿಂದತಿ ನೇಮದೊಳೀರಾರು ಕೋಮಲದಂಗದೊಳು । ಪ್ರೇಮದಿಂ ಪುಲಿಗಿರಿಧಾಮನ ನಾಮದಿ ರಕ್ಷೆಯಮಾಡಿದರು ॥೪॥

॥ ವ ಚ ನ ॥

ಗೋಪಿಕಾಸ್ತ್ರೀಯರು ಜಲದಿಂ ಕರಚರಣಗಳಂ ತೊಳೆದು ತಮ್ಮ ಕರಂಗಳೊಳ್ ಬೀಜನ್ಯಾಸವಂ ಮಾಡಿಕೊಂಡು ನಿಜಾಂತರಂಗಶುದ್ಧಿಯಿಂದ ಬಾಲಕನಿಗೆ ದ್ವಾದಶಾಂಗದೊಳ್ ಬೀಜನ್ಯಾಸವಂ ಮಾಡುವರದೆಂತೆನೆ—

॥ಪದ॥

ಕೇಶವನಾರಾಯಣ ಕಾಯೋಕೂಸನು—ಮಾಧವಗೋವಿಂದ ಕಾಯೋ ಕೂಸನು ವಿಷ್ಣು ಮಧುಸೂದನ ಕಾಯೋ ಕೂಸನು। ತ್ರಿವಿಕ್ರಮವಾಮನ ಕಾಯೋಕೂಸನು। ಶ್ರೀಧರ ಹೃಷೀಕೇಶ ಕಾಯೊ ಕೂಸನು। ಪದ್ಮನಾಭ ದಾಮೋದರರ್ಕ ಕಾಯೊ ಕೂಸನು। ಶ್ರೀಶನೆಯಿಂತೆಂದು ದ್ವಾದಶ ನಾಮದಿಂ ದ್ವಾದಶಾಂಗದೊಳ್ ರಕ್ಷೆಗೈಯ್ದು। ವಿಷ್ಣುಕವಚದಿಂ ಅವಯವಂಗಳೊಳ್ ರಕ್ಷೆಯಂ ಮಾಡುವರದೆಂತೆನೆ—

(ಆರ್ಯಾಮಟ್ಟೆ)

ಅಜಮೂರ್ತಿಯನಿನ್ನಂಘ್ರಿದ್ವಯವನು ನಿಜದಿಂ ಕಾಯುತಲಿರಲಿ। ಅಜೆಯರಸನು ? ಮಣಿಕಾಲ್ಗಳಕಾಯಲಿ, ಭಜಿಸಲಿ ಯಜ್ಞನು ತೊಡೆಗಳನು ॥೧॥ ಕಟಿತಟವಚ್ಯುತ ಜಠರವ ಹಯಮುಖ ಪಟುತರ ಹೃದಯವ ಕೇಶವನು ॥ ದಿಟದಿಂದೀಶನು ವಕ್ಷವಕಾಯಲಿ ಸ್ಫುಟದಲಿ ಸೂರ್ಯನು ಕಂಠವನೂ ॥೨॥ ಶ್ರೀವಿಷ್ಣುವು ನಿಜಭುಜಗಳಕಾಯಲಿ ಉರುವಿಕ್ರಮನು ಮುಖಪದ್ಮವನು ॥ಶಿರವನು ಕಾಯಲಿ ಪರಮೇಶ್ವರನು ಕರುಣಾಸಾಗರ ಮೂರುತಿಯು ॥೩॥

|| ವಚನ ||

ಇಂತು ರಕ್ಷೆಯುಂಮಾಡಿ ದಿಗ್ಬಂಧನಮಂ ಮಾಡುವರದೆಂತೆನೆ—

|| ಮೇಲಿನಮಟ್ಟು ||

ಚಕ್ರವಧರಿಸಿದ ಲಕ್ಷ್ಮೀನಾಯಕ ರಕ್ಷಿಸಲಿ ನಿನ್ನಗ್ರದಲಿ । ಆಕ್ಕರೆಯಿಂಗದೆಧರಿಸಿದನರಹರಿ ರಕ್ಷಣಮಾಡಲಿ ಪಶ್ಚಿಮದಿ || ೧ || ಎಡಬಲದಲಿ ಶಿರಿಯುರಸನುಕಾಯಲಿ ಪಿಡಿಯುತ ಧನುವನುಖಡ್ಗವನು || ಒಡನಾಡುತ ಮಧುಭಂಜನ ಶಂಖವ ಪಿಡಿದುರುಗಾಯನುಕೋಣದಲಿ || ೨ || ರಕ್ಷಣೆಮಾಡಲಿ ಮೇಲೆ ವುಪೇಂದ್ರನು ತಾರ್ಕ್ಷ್ಯನು ಧರೆಯಲಿ ರಕ್ಷಿಸಲಿ || ಸಾಕ್ಷಾದ್ಧಲದರ ಸುತ್ತಲು ಮುತ್ತಲು ಲಕ್ಷಣಮೂರುತಿ ರಕ್ಷಿಸಲಿ || ೩ ||

|| ವಚನ ||

ಪ್ರಾಣೇಂದ್ರಿಯರಕ್ಷಾ ಪಂಜರವಂ ಮಾಡುವರದೆಂತೆನೆ.

|| ಮೇಲಿನಮಟ್ಟು ||

ಇಂದ್ರಿಯಗಳ ವಿಷಯೇಂದ್ರನು ಕಾಯಲಿ ಇಂದಿರೆಯರಸನು ಚಂದದಲಿ । ಎಂದೆಂದಿಗು ಮುದದಿಂದಲಿ ಪ್ರಾಣವ ನಾರಾಯಣ ರಕ್ಷಿಸಲಿ ||೧|| ಶ್ವೇತದ್ವೀಪದ ಪತಿ ಚಿತ್ತವನು । ಪ್ರೀತಿಯೊಳನುದಿನಪಾಲಿಸಲೀ || ಈತನ ಮನವನು ಯೋಗೇಶ್ವರ ಶ್ರೀನಾಥನು ಕಾಯಲಿ ನಿತ್ಯದಲಿ || ೨ || ಈತನ ಬುದ್ಧಿಯಪ್ರಶ್ನಿಯಗರ್ಭನು ಖ್ಯಾತಿಯಗೂಡಿಸಿ ರಕ್ಷಿಸಲಿ । ಆತುಮನನು ಪರಮಾತುಮುಮೂರುತಿ ಪ್ರೀತಿಯ ತೋರುತ ಪಾಲಿಸಲಿ || ೩ ||

|| ವಚನ ||

ಮತ್ತೆಯುಂ ಕಾಲದೇಶರಕ್ಷಾಬಂಧನವಂ ಮಾಡುವರದೆಂತೆನೆ.—

ಕ್ರೀಡೆಯಕಾಲದಿ ಶ್ರೀಗೋವಿಂದನು ಕ್ರೀಡಿಸಿ ಮಲಗಲು ಮಾಧವನು । ಆಡಲು ಕಾಯಲಿ ಶ್ರೀವೈಕುಂಠನು ಕೂಡಲು ಸಲಹಲಿ ಶ್ರೀಪತಿಯು || ೧೦ || ಭೋಜನಕಾಲದಿ ಯಜ್ಞವ ಭುಜಿಸುವ ಶ್ರೀಜಗದೀಶನು ಪಾಲಿಸಲಿ || ರಾಜಿಪಪುಲಿಗಿರಿ ರಾಜರಾಮಾನುಜವಿಠಲ ನಿತ್ಯದಿ ರಕ್ಷಿಸಲಿ || ೧೨ ||

|| ವ ಚ ನ ||

ಇಂತು ಶ್ರೀಪತಿಗೆ ಬೀಜನ್ಯಾಸವಂಮಾಡಿನೋಡಿ ನೂರೆಂಟು ತಿರುಪತಿಯದೇವರಂಕಣಿಯಂತೆ ಕರೆದು ಪ್ರಾಕೃತನರರು ಬೇವಿನಸೊಪ್ಪಿನ ಮಂತ್ರದಿಂ ಮಂತ್ರಿಸುವಂತೆ ಗೋಪಿಯರು ಹಾಡಾಡಿಯನುಡಿಯಿಂದ ಅಭಿಮಂತಿ ಸುತ್ತಿಹರು ನೃಸಿಂಹಾದಿ ಮಂತ್ರದಿಂದಾಪರಿಯ ಕೇಳ್ಪೆಪರೀಕ್ಷಿತನೆ ಪೇಳ್ವೆನದೆಂತೆನೆ—

ರಾಗಾ— || ಆರಭಿ ||

ಓಂ ನಮೋಭಗವತೇ ನಾರಸಿಂಹಾಯ ಉಗ್ರಸಿಂಹಾಯ ಪ್ರಹ್ಲಾದ ವರದಾಯ, ಜ್ವಾಲಾಮಾಲಾ ನೃಸಿಂಹಾಯ ಕರಾಳವದನಾಯ || ಹಿರಣ್ಯಕಶಿಪು ವಕ್ಷಸ್ಥಲ ವಿದಾರಿತ ನಖೋಗ್ರದಂಷ್ಟ್ರಾಯ || ಉಗ್ರನಾರಸಿಂಹಾಯಸ್ತಂಭೋದ್ಭವಾಯ । ಕುಂಭಿಣೀಧವಾಯ ಓನ್ನಮೋ ಮಹಾನಾರಸಿಂಹಾಯ || ಗಂಡಭೇರುಂಡ ನೃಸಿಂಹಾಯ ಮಹಾಸಿಂಹಾಯ । ನಮೋ ಲಕ್ಷ್ಮೀನೃಸಿಂಹಾಯ ದುಷ್ಟಗ್ರಹಾನ್ ಛಿಂಧಿ ಛಿಂದೀ ಛಿಂದಿ ಛಿಂದೀ || ರಾಕ್ಷಸಗ್ರಹಾನ್ ಸಂಹರ-ಸಂಹರ || ಘಟ ಘಟ ಘಟ್ ಘಟ್ । ಹ್ರಾಂ ಹ್ರೀಂ ಹ್ರೂಂ ಫಟ್‌ಸ್ವಾಹಾ || ಓನ್ನಮೊ ಶ್ರೀಶಾಯ ವಾಘ್ರಾಚಲೇಶಾಯ ಶ್ರೀವೆಂಕಟೇಶಾಯ । ಶ್ರೀನಿವಾಸಾಯ ||

|| ಸೀಸಪದ್ಯ ||

ಬೇಡಿಕೊಂಬೆವು ನಿನ್ನ—ಭಾಗ್ಯವಂತನ್ನನೀ । ನೋಡಿಬಾ ಪುಲಿಗಿರೀ ಧೊರೆಸುಪ್ರಸನ್ನ || ಮೂವತ್ತು ಮೂರ್ಕೋಟಿ । ದೇವರ್ಕಳೆಲ್ಲರೂ । ಭಾವಿಸೀಬನ್ನಿನೀವಿಲ್ಲಿಗೆಂದು । ಕೂಸನ್ನು ಪಾಲಿಸೀ ಮಾತನ್ನು ಲಾಲಿಸೀ । ಭಾಸುರೊತ್ತಮರೆಲ್ಲ ಕೇಳಿಸೊಲ್ಲ || ಆದಿನಾರಾಯಣಾ ಸೂರ್ಯನಾರಾಯಣಾ, ಆದಿಪರಂಜ್ಯೋತಿಯೆ ಕಾಯೊಹರಿಯೇ || ಹುಲಗನ್ನಮುರಡಿಯಾ । ಬಲುಹು ದೈವದಗಂಡ । ಕಲಿಯುಗದ ವೆಂಕಟನೆ ಕಾಯೊಧೊರೆಯೆ || ಮೂಡಲು ಗಿರಿತಿಮ್ಮಪ್ಪ ಬಿಳಿಗಿರಿಯರಂಗಪ್ಪ । ಮೇಲುಗೋಟೆಯ ಚಲುವರಾಯಬಾರೋ || ಕಂಟಸಿಂಗರಿಬೆಟ್ಟದಳಸಿಂಗರಸ್ವಾಮಿ । ಕಂಟಕವ ಪರಿಹರಿಸಿ ಕೂಸ ಸಲಹೊ || ಬೆಟ್ಟದಾ ಕೋಟೆಯಾಕೊಳಲುಗೋಪಾಲನೇ । ಪಟ್ಟಣದ ರಂಗಪ್ಪ ಪಾಲಿಸಪ್ಪ || ಶ್ರೀರಂಗದೊಡೆಯನೇ । ರಂಗನಾಥಸ್ವಾಮಿ । ಮನ್ನಾರುರಂಗನೇ ಮನ್ನಿಸಯ್ಯ || ತಿರುಪತಿಯ ವೆಂಕಟನೆ ತಿರಿಗಿ ಪೊಗಳುವೆ ನಿನ್ನ । ದುರಿತದೈವದ ಗಂಡ । ಬವರವನುಕಾಯೋ || ಮಾಗಹಳ್ಳಿಯ ಸಿಂಹ । ಮುದ್ದೂರು ನರಸಿಂಹ ಮುದ್ದುನೀಗುಮ್ಮಕ್ಕೆ ದೊಡ್ಡ ಗುಮ್ಮ || ಚುಂಚನಾಕಟ್ಟೆಯಾ । ಕೋದಂಡರಾಮಪ್ಪ । ಕಾಂಚಿಯವರದಪ್ಪ । ಪಾಲಿಸಪ್ಪ || ತಿರುನಾರಾಯಣಸ್ವಾಮಿ ತಡವು ಮಾಡದೆ ಬೇಗ । ಯದುಗಿರಿಯ ನಾಥನೇ ಎದ್ದುಬಾರೋ । ವಿಜಯ ನಾರಾಯಣಾ । ಕೀರ್ತಿನಾರಾಯಣಾ ವರದನಾರಾಯಣಾ । ಕಾಯೊಕರುಣಾ । ದರ್ಭಶಯನದ ದೊಡ್ಡ ದೇವರೇ ಬಾರಯ್ಯ ದುರ್ಭಿಕ್ಷವನು ಪರಿದು ದಯವ ಮಾಡು । ಅಪ್ಪಮಳವೂರಲ್ಲಿ ಇಪ್ಪನೇ ಬಾರಯ್ಯ ಅಪ್ಪಳಿಸು ಗುಹವನ್ನು ಅಪ್ರಮೇಯ || ಮಧುರೆಕಳ್ಳಳಹರೇ ಮುದದಿಂದ ಬಾರಯ್ಯ । ಕುದುರೆಯನ್ನೇರಿ ಖಡ್ಗವನು ಪಿಡಿದು || ಕರಿಯಘಟ್ಟದ ದೊಡ್ಡದೊರೆಯೆ ನೀಸಲಹಯ್ಯ । ಕರುಣಾಳು ನಿತ್ಯ ಕಂದರ್ಪತೇಜ || ಮಾಗಡೀ ರಂಗಪ್ಪ ಬೇಗದಿಂ ಬಾರಪ್ಪ ।

ಭೋಗಿವನು ಪಾಲಿಸೈ ಯೋಗಿವಂದ್ಯ || ಶ್ರೀನಿವಾಸಕ್ಷೇತ್ರ ಶ್ರೀನಿವಾಸನೆ ಕಾಯೊ । ಶ್ರೀನೃಸಿಂಹನೆ ಬಾರೊ ಮುಖವ ತೋರೊ || ನರಸಿಂಹ ಪುರವೆಂಬ ದಕ್ಷಿಣ ಕಾಶಿಯಾ । ವರ ಗುಂಜಿನರಸಿಂಹ ಕಾಯೊ ನಮ್ಮ || ಮಹೀಸುರಪುರಾಧಿಪ ಶ್ರೀಶ್ವೇತವರಾಹನೆ । ಶ್ರೀಮುಷ್ಣದೊಡೆಯನೆ ಬಾರೊ ಒಡನೆ|| ಮಹಿಷಾಸುರಪುರದ । ಶ್ರೀಲಕ್ಷ್ಮಿಯರಸನೆ ಬಾರೊ ಸುಪ್ರಸನ್ನ ಶ್ರೀಕೃಷ್ಣದೇವ || ತೆರಕಣಾಂಬಿಯಲಿರ್ದ ದೊಡ್ಡದೇವಿಯೆ ಬಾರೆ । ತುಪ್ಪದೀವಿಗೆಯಮ್ಮ ತಪ್ಪಬೇಡ || ಹುಲಗನ್ನಮುರಡಿಯಾ ಅಲಮೇಲ ಮಂಗಮ್ಮ । ಘುಲಘುಲನೆ ಬಾರಮ್ಮ ಸಲಹುನಮ್ಮ || ಹಿರಿಯ ದೇವಿಯೆ ಬಾರೆ ಕಿರಿಯ ದೇವಿಯೆಬಾರೆ ವರಲಕ್ಷ್ಮೀ ಬಾರಮ್ಮ ವರವ ನೀಡು || ಬಿಳಿಯಕಲ್ಲಿನ ಬೆಟ್ಟ ವಿಳಿದು ನೀ ಬಾರಮ್ಮ ಮಳವೂರ ಅರವಿಂದ ನಾಯಕಿಯೇ|| ಮಂಗಳಾಂಗಿಯೆ ಬಾರೆ ಪಟ್ಟಣದಶೃಂಗಾರ । ರಂಗನಾಯಕಿ ನಮ್ಮ ರಕ್ಷಿಸಮ್ಮ || ಯದುಗಿರೀ ನಾಯಕೀ ಸಕಲ ವರದಾಯಕೀ । ತಿರುಪತಿಯ ಅಲಮೇಲ ಮಂಗತಾಯೆ । ನಿಮ್ಮಪತಿಗಳಕೂಡಿ ನೀವು ಬಂದಿಲ್ಲಿಗೇ । ನಮ್ಮ ಕೂಸಿಗೆ ನೀವೆ ಕಾವಲಮ್ಮ || ಪುಲಿಗಿರಿಯವಾಸನೇ ಪುಲಿಯಮುರಿದಿಟ್ಟವನೇ ಬಲಗೊಂಬೆ ನಿಮ್ಮನು ಸಲಹಬೇಕಯ್ಯ । ಚಿಕ್ಕಮಕ್ಕಳ ಕಾಯ್ವ ಮಕ್ಕಳವೇಂಕಟರಮಣ । ರಕ್ಕಸರ ಸಂಹರಿಸು ರಾಕ್ಷಸಾರಿ ||

|| ಮೇಲಿನ ಮಟ್ಟ ||

ಢಾಕಿನೀಯೆಂಬುವೀ ಯಾತುಧಾನಾಧಮರ । ಕಾಕುಕೂಷ್ಮಾಂಡದೋಲ್ ಕೊಲ್ಲು ಕೊಲ್ಲು ಅರ್ಭಕಾಗ್ರಹವನ್ನು ಕುಟ್ಟಿ ಮುರಿದೀಡಾಡು । ಭೂತಪ್ರೇತಗಳನ್ನು ಬೂದಿಮಾಡು || ಯಕ್ಷಪೈಶಾಚನೈ ನಾಯಕಗ್ರಹವನ್ನು ಭಕ್ಷಣೆಯ ಮಾಡಿರೈ ದೇವತೆಯರೆ । ತೋಟದಾರೇವತೀ ಚೇಷ್ಟೆಯಂ ನೀಮುರಿದು। ಕೋಟಲೆಯ ಪರಿಹರಿಸಿ ಕಾಯಬೇಕು|| ಪೂತನಾಗ್ರಹಗಳಂ । ಮಾತ್ರಕಾಗ್ರಹಗಳಂ । ನೀಚವುನ್ಮಾದವುಂ ಛಿಂದಿಛಿಂದಿ || ಪ್ರಾಣದೇಹೇಂದ್ರಿಯಂ । ದ್ರೋಹವೆಂ ಗೈಯ್ವುದಂ ಕೆಟ್ಟಪಸ್ಮಾರವುಂ ಕುಟ್ಟಕುಟ್ಟ || ಸ್ವಪ್ನದೃಷ್ಟಂಗಳಂ । ಕೆಟ್ಟ ಉತ್ಪಾತವುಂ । ವೃದ್ಧಬಾಲಗ್ರಹವನ್ನು ಗುದ್ದುಗುದ್ದು || ಕೇಳಿ ಈ ನುಡಿಯನ್ನು ಲಾಲಿಸೀ ಪಾಲಿಸೀ ಬಾಲಗೋಪಾಲನಂ ಬೇಗದಿಂದ || ಪುಲಿಗಿರಿಯವಾಸನೇ । ಕಲಿಯ ವೆಂಕಟರಮಣ । ಘುಲಿಘುಲಿನೆ ನೀಬಾರೊ ಮುಖವತೋರೊ || ಸಲಹೊ ರಾಮಾನುಜ ವಿಠಲ ವ್ಯಾಘ್ರಾದ್ರೀಶ, ಶರಣು ವೆಂಕಟರಮಣ ನೀನೆ ಶರಣು ||

|| ವಚನ ||

ಕೃಷಂಗೀಪರಿ ರಕ್ಷೆಯಂ ಮಾಡಿಯಾಸುದತಿಯರು ಸುಪ್ರೇಮದಿಂ ಶಿಶುಗಳಿಗೆ ಸ್ತನ್ಯಂಗಳಂ ಕೊಟ್ಟು ತೊಟ್ಟಿಲೊಳು ಮಲಗಿಸಿ ಪಚ್ಚೆಯಂ ಹೊದಿಸಿ ತೂಗಿದರು ನಲವಿನಿಂ

ಅತ್ತ ಮಧುರಾ ನಗರದಿಂದತ್ಯಾತುರದಿಂದ ಪೊರಮಟ್ಟು ಬಂದಾನಂದಾದಿಗಳು ಪೂತನಿಯೊಡಲನು ಕಂಡು ಭಯವಿಸ್ಮಯಗಳಿಂದ ವಸುದೇವನಾಡಿದ ವಾಕ್ಯವು ನಿಜವಾಯಿತೆಂದೂ ವ್ರಜದೊಳಗೆ ಉತ್ಪಾತವಾಗಿರುವುದೆಂದೂ ಹೇಳಿಕೊಳ್ಳುತ್ತ ಕೊಡಲಿಗಳಂ ತಂದು ಪೂತನಿಯೊಡಲ ಕಡಿದು ಕಡಿದು ಬಂಡಿಯಮೇಲಿಟ್ಟುಕೊಂಡೊಯ್ದು ದೂರದೊಳಿಟ್ಟು ಕಾಷ್ಟಂಗಳನ್ನೊಟ್ಟಿಸುಡಲು ಅಗಿಲು ಧೂಪದ ಸುರಭಿತೋರಿತು ಶ್ರೀಕೃಷ್ಣನ ಪಾದಸ್ಪರ್ಶಮಾತ್ರದಿಂದ, ರಕ್ಕಸಿಯ ಪಾಪ ತೊಲಗಿತು ಪರಮ ಸದ್ಗತಿದೊರಕಿತು ಭೂಪಕೇಳಾಶ್ಚರ್ಯಮಂ—

ರಾಗ ||

ಹರಿಗೆ ಸ್ತನ್ಯವನಿತ್ತು ಪಡೆದಳು ಮನೆಯನ್ನು ಪರಮಪದದಿ ಪೂತನೀ । ಆ ಮಾನಿನಿ-ಪರಮ ಪುಣ್ಯದ ವಾಹಿನೀ || ಕರುಣಾಸಾಗರಕೃಷ್ಣ ಪತಿತಪಾವನನೆಂಬ ಬಿರದು ನಿಶ್ಚಯವಾಯಿತು । ವೇದದ ಮಾತು ||೧|| ಧರೆಯೊಳು ತರಳರ ಸದದು ರಕ್ತವನುಂಬ ದುರುಳಪಾತಕಿಯವಳು । ಹರಿಯ ಕೊಲ್ಲುವೆನೆಂದು ಗರಳ ಮೊಲೆಯಕೊಡಲು, ಪರಮಪದವನಿತ್ತನು । ಪುಣ್ಯಾತ್ಮನು ||೨|| ಪರಮಾತ್ಮನಿಗೆ ಪ್ರಿಯವಸ್ತು ಸ್ವಲ್ಪವತಂದು ಪರಮಭಕ್ತಿಯೊಳರ್ಪಿಸೆ । ವರಭಕ್ತರಿಗಪ್ಪಗತಿಗೆ ಸಾಟಿಗಳುಂಟೆ । ಪೊರೆವಮಾತೆಗಳಂದದೆ । ಮರ್ಯಾದೆ ||೩|| ಲೋಕವಂದಿತವಾಗಿ ಭಕ್ತರ ಹೃದಯದಿ ಏಕವಾಗಿಹ ಪಾದದಿ । ಲೋಕಕಂಟಕಿಯವಳ ದೇಹವಾಕ್ರಮಿಸುತ್ತ ಆಕೆ ಮೊಲೆಯನುಣ್ಣಲು ಈಕರುಣಾಳು||೪|| ಸರಸಿಜ ಭವ ಶಿವ ಸುರರೆಲ್ಲ ತಪಿಸುತ್ತ ಚರಣಯುಗ್ಮವ ಕಾಣರು । ದುರುಳೆ ರಕ್ಕಸಿಬಂದು ವಿಷವಕೊಟ್ಟರೆ ತನ್ನ ವರವೈಕುಂಠವಕೊಟ್ಟನು-ಶ್ರೀಕೃಷ್ಣನು ||೫|| ಕರುಳಬಗೆದುತಿಂಬ ಘೋರಪಾತಕಿಯವಳು । ಧರೆಗೆಸಲ್ಲಳು ನೀಚಳು । ಹರಿಗೆ ಸ್ತನ್ಯವಕೊಟ್ಟು ಜನನಿಯಗತಿಪೊಂದಿ ಪರಮಪಾವನೆಯಾದಳು । ರಾಜನೆ ಕೇಳು ||೬|| ಒಲಿದು ಶ್ರೀಭಗವಂತ ಕೈವಲ್ಯಾದಿಗಳನ್ನು ಸಲಿಪ ದೇವಕಿಪುತ್ರನು । ಮೊಲೆಯಕೊಟ್ಟವರಿಗೆ ಮೀಸಲುಂಡವರಿಗೆ । ನೆಲೆಯಕಟ್ಟದ ನಿತ್ಯದಿ ವೈಕುಂಠದಿ ||೭|| ಭುಗಭುಗಿಸುತಲಿರ್ಪ ಅಗಿಲುವಾಸನೆಯಂತೆ ತೊಗಲ ಗಂಧವುಸುತ್ತ-ಲೂ । ಹೊಗೆಯ ಸೌರಭ ಕೇಳ ಜಗಳಿಬಂದರುಜನರು ಪೊಗೆಯಿದೆಲ್ಲಿಯದೆಂದರು—ಗೋಕುಲದವರು ||೮|| ತರುಣಿ ಪೂತನಿವೈಯ ಪರಿಮಳವಿದುಯೆಂದು, ತರುಣಿಯರೆಲ್ಲರು ತಿಳಿದು । ಹರಿಗೆ ಕ್ಷೇಮವಕೋರಿ ದುರುಳೆಹೋಮವಮಾಡಿ ಹರುಷಗೊಂಡರುಮನದಿ । ಗೋಕುಲದಿ ||೯|| ಪುತ್ರರಕ್ಷವ

ಕೈಯೊಳೆತ್ತಿಪಿಡಿದು ನಂದ ನೆತ್ತಿವಾಸಿಸಿ ಮುದದಿ । ಸುತ್ತ ಮುತ್ತಲು ಶಿಶುವೆತ್ತಿಮುದ್ದಾಡುತ್ತ ಸುತ್ತಿಕೊಂಡರು ಜನರು ಗೋಕುಲದವರು ॥೧೦॥ ಧರೆಯೊಳು ಪೂತನಾ ಮುಕ್ತಿಕಥೆಯ ಶ್ರೀಸುಧಾರಸವ । ಹರಿಕೃಷ್ಣಾರ್ಭಕ ಚರ್ಯವ। ನಿರುತ ಕೇಳಲು ಪುಲಿಗಿರಿರಾಮಾನುಜ ವಿಠಲ ಕರುಣಿಸಿ ಪೊರೆಯುವನು । ಶ್ರೀರಮಣನು ॥೧೧॥

॥ ವ ಚ ನ ॥

ಇತಿ ಶಾಮಸೂರಿಸುತ ರಾಮಾನುಜಾರ್ಯ ವಿರಚಿತ ಶ್ರೀಮದ್ಭಾಗವತ ಪುರಾಣ ಮಧ್ಯಾಂತರ್ವರ್ತಿ ದಶಮಸ್ಕಂಧಾಂತರ್ಗತ ಕಥಾಯಾಂ ಕರ್ಣಾಟಕ ಭಾಷಾಯಾಂ ವಿವಿಧರಾಗ ಗೀತಿಗೀತಾಯಾಂ ಶ್ರೀಕೃಷ್ಣಾರ್ಭಕ ಚರಿತ್ರ ಪೂತನಾಮೋಕ್ಷಪುಣ್ಯ ಕಥಾ ವಿವರಣಾಸಪ್ತಮೋಧ್ಯಾಯಾರ್ಥಃ

ರಾಗ॥ (ದುರುಳ ಕೌರವ)

ಈಪರಿಯಲಿ ಗೋಪೀಗೋಪರಿಗೆ ಶ್ರೀಪತಿಯಾನಂದವ ತೋರಿ । ಗೋಪನ ಮನೆಯೊಳ್ಬೆಳೆದ ಗೋಪಾಲ ಬಾಲ ಕೇಳು ಭೂಪಾಲ ॥೧॥ ಎನಲಾ ಮಾತನು ಕೇಳುತ ರಾಜನು ಮುನಿಗಿಂತೆಂದನು ಕೇಳ್ಯುಮಿಯೇ । ಜನಾರ್ದನನ ಕಥಾಮೃತಮಂ ಮನದಣಿಯದು ಕೇಳಲು ಮನೋಜ್ಞಮಾಗಿಹುದು ॥ ೨ ॥ ಪರಿಪರಿಯಲಿ ತಾಳಿದ ಹರಿಯವತಾರಂಗಳ ಕಥೆಗಳಕೇಳಿ । ಪರಿಪೂರ್ತಿಹೊಂದದು ಚಿತ್ತವು ಮತ್ತೆಕೇಳೆ ಸತ್ವವಿವೃದ್ಧಿ ॥ ೩ ॥ ಹರಿಯಲಿಭಕ್ತಿ ಭಕ್ತರಲಿರಕ್ತಿ ತೆರೆಗಳು ಸಿದ್ಧಿಸುವ ಸುಖಸಾರವಿದು । ಪೇಳೈನರಹರಿರೂಪವತಾಳಿ ನಟಿಸಿದ ನರಹರಿ ಕೃಷ್ಣನಕಥೆಯ॥

॥ ವ ಚ ನ ॥

ಎಂದೀ ಮಾತನು ಕೇಳಿ ರಾಜನಿಗಿದಂ ವಿಸ್ತಾರದಿಂ ಪೇಳ್ವೆನೆಂದು ತೊಟ್ಟಿಲಸೇವೆ ಕೇಳು ದೊರೆಮುಂದಾದುದಂಮೋದದಿಂ। ನಂದನಂದನನ ಬಾಲಲೀಲೆಯಂ ಪೇಳ್ವೆನೆಂದಿಂತೆಂದನು

ರಾಗ॥ ಜೋಗುಳ॥

ಜೋ ಜೋ ಗೋಪಿಯಕಂದ ಮುಕುಂದ ಜೋ ಜೋ ನಂದನಕಂದಗೋವಿಂದ ಜೋಜೋ ಸುಂದರ ಗೋಕುಲಾನಂದ । ಜೋಜೋ ಪಾವನ ಚರಣಾರವಿಂದ ॥ ಜೋ ಜೋ ॥ ಪ ॥ ಜೋ ಜೋ ಸುಂದರವಿಷ್ಣುವರ್ಧಿಷ್ಣು ಶ್ರೀಕೃಷ್ಣ ಮಾರುತಿಗಂದು । ತೊಟ್ಟಿಲ ಸೇವೆಯ ಮಾಡಬೇಕೆಂದು ॥ ಪಟ್ಟದರಸಿಗೋಪೀ ಗೋಪಾಲರು ಅಷ್ಟೈಶ್ವರ್ಯವಗೂಡಿ ಮಾಡಿದರು ॥ ಜೋ ಜೋ ॥ ೧ ॥ ಸುಂದರ ಸುಕುಮಾರ ನಂದನಂದನಗೆ । ಅಂದು ತೊಟ್ಟಿಲಸೇವೆ ಚಂದದಿಬೆಳಗೆ । ಬಂದ ಪುರಂದರ ಚಂದ್ರಶೇಖರ ಅಂದೊಡಗೂಡುತ ಬ್ರಹ್ಮತಾನಿಳೆಗೆ ॥ ಜೋ ಜೋ ॥ ೨ ॥ ಭಾರತಿಬಂದಳು ಬಾಲೆಗೀರ್ವಾಣಿ । ಮಾರುತಿ ಬಂದಳು ಧರ್ಮನರಾಣಿ। ಆರತಿಯೆತ್ತುವ ಸಾರಥಿಯಾಗುತ್ತ ಪಾರ್ವತಿ ಬಂದಳು ಪಾದದರ್ಶನಕೆ ॥ ಜೋ ಜೋ ॥ ೩ ॥ ಹುಯ್ದು ತಾರೆಯು ತೊಟ್ಟಿಲಸೇವೆಯು ಒಟ್ಟಾಗಿಸೇರಿತು ಕೃಷ್ಣಮೂರುತಿಗೆ । ಕಟ್ಟಾಣಿ ಗೋಪಿಯು ಕರಸಿ ಮುತ್ತೈದೆಯರೊಟ್ಟಾಗಿ ಸೇರಿದ ರೊಪ್ಡೋಲಗಕೆ ॥ ಜೋಜೊ ॥ ೪ ॥ ಮಂಗಳವಾದ್ಯವು ಮೊಳಗುತ್ತ ಬರಲು । ವೇದಂಗಳ ಪಠಿಸಲು ವಿಪ್ರರು ಮೊದಲು ॥ ಅಂಗನೆಯರು ಗಾನಂಗಳ ಪಾಡಲು ರಂಗಗೆ ಮಂಗಳಸ್ನಾನಗೈಯ್ಸಿದಳು ॥ ಜೋಜೋ ॥ ೫ ॥ ಪನ್ನಗವೇಣಿಯು ಪನ್ನಗ ಶಾಯಿಗೆ ಪನ್ನೀರನೆರೆಯಲು ಬಣ್ಣವಹೊದಿಸಿ।ಸ್ವರ್ಣಾಭರಣ ಭೂಷಣ ವಳಪಡಿಸಿ।ಕಣ್ಕಪ್ಪ ಹಚ್ಚಿ ಕರೆತಂದಳರಸಿ ॥ಜೋಜೋ ॥ ೬ ॥ ಷಡುರಸದನ್ನವು ಪಾಲುಪಾಯಸವು । ಪೊಡವಿಯ ವಿಪ್ರರಿಗೆಲ್ಲ ಭಕ್ಷ್ಯಭೋಜ್ಯಗಳು। ಒಡವೆಸಹಿತ ಗೋದಾನ ವಸ್ತ್ರಂಗಳ ಸಡಗರದಲಿ ತಾನೊಲಿದು ನೀಡಿದಳು ॥ ಜೋ ಜೋ ॥ ೭ ॥ ಕುಟ್ಟಕ್ಕಿ ಕದಳಿಯು ಕಂಡಸಕ್ಕರೆಯು । ಕುಟ್ಟಿದ ತಂಬಿಟ್ಟು ಚಿಗುಳಿಯುಂಡೆಗಳು। ಪುಟ್ಟಪುಟ್ಟನೆ ಕೊಳಕಟೆಯಮಾಡಿ । ತಟ್ಟೆಯೊಳಿಟ್ಟಾಳೆ ಕಟ್ಟಾಣಿಗೋಪಿ ॥ ಜೋ ಜೋ ॥ ೮ ॥ ಸಕ್ಕರೆ ತುಪ್ಪವು ಸೇರು ಮನೋಹರ ಚಕ್ಕೂಲಿಕರಜಿಯ ಕಾಯಿವಿಸ್ತಾರ । ಲೆಕ್ಕವಿಲ್ಲದ ತೇಂಗೊಳಲು ಮುತ್ಸೋರ।ರಕ್ಕಸವೈರಿಗೆ ಪ್ರೀತಿವಿಚಾರ ॥ ಜೋ ಜೋ ॥ ೯ ॥ ಒಳ್ಳೆತುಪ್ಪದ ಸಜ್ಜಪ್ಪದಗೂಡ । ಕೊಳ್ಳೆಕೊಳ್ಳೆಯ ಅತಿರಸಗಳಮಾಡೆ। ಎಳ್ಳುಕಡಲೆ ಪುರಿಯುಂಡೆಯ ಮೂಡೆ । ಚಲ್ವಮೂರುತಿಗರ್ಪಿಸಿ ನಿಂತು ನೋಡೆ ॥ ಜೋ ಜೋ ॥ ೧೦ ॥ ಹಣ್ಣು ಸಕ್ಕರೆ ವೀಳ್ಯಗಳಿರಿಸಿ। ಪನ್ನೀರು ಗಂಧವು ಪರಿಮಳವೆರಸಿ । ಪೂರ್ಣಚಂದ್ರಮನಂತೆ ಹೊಳೆವ ಮಂಟಪದಲ್ಲಿ । ಹಣ್ಣು ಪಣ್ಯಾರದರಾಶಿ ಮೂಡಿದವು ॥ ಜೋ ಜೋ ॥ ೧೧ ॥ ಚಿನ್ನದ ಸರಪಣಿ ಚದುರೆದ ಕೆಳಗೆ । ರನ್ನದ ತೊಟ್ಟಿಲು ರವಿಯಂತೆಬೆಳಗೆ । ಕನ್ನೆಯರ್ ಮಲಗಿಸಿ ಹರಿಯುದರೊಳಗೆ ಚೆನ್ನಾಗಿತೂಗಿದ ರಾಗ ತನ್ನೊಳಗೆ ॥ ಜೋ ಜೋ ॥ ೧೨ ॥ ಜೋಗಳಪಾಡುತ ಮುತ್ತೈದೆಯರು । ಬೇಗ ಶ್ರೀಪುಲಿಗಿರಿವಾಸನೆನೆದು ॥ ರಾಗದಿಂಪಾಡುತ ಸಂಭ್ರಮಗೊಂಡು । ತೂಗಿದರ್ಕೈ ಜೋಜೋಯೆಂದು ನಿಂದು ಜೋ ಜೋ ॥ ೧೩ ॥ ಜೋ ಜೋ ಪುಲಿಗಿರಿ ವೆಂಕಟರಮಣ । ಜೋ ಜೋ ಭಕ್ತರ ಸಂಕಟಹರಣ ॥ ಜೋ ಜೋ ಲೋಕಾವರಣಕ್ಕೆ ಶರಣ । ಜೋ ಜೋ ಗಂಗೆಯಪೆತ್ತಿಹಚರಣ ॥ ಜೋ ಜೋ ॥೧೪ ॥ ಜೋಜೋಯೆನ್ನುತಗುಂಡನು ತಂದು। ಜೋಜೋಯೆನ್ನುತ ಮಲಗಿಸಿನಿಂದು। ಜೋಜೋಯೆನ್ನುತ ಕಾಯೊಡದೊಂದು

ಜೋಜೋಯೆನ್ನುತ ತೂಗಿದರಂದು ॥ ಜೋಜೋ ॥ ೧೫ ॥ ಜೋಜೋ ಇಟ್ಟರೆ ಒಡೆಯುದ ಗುಂಡ । ಜೋಜೋ ಎಳೆ ದರೆ ತರೆಯುದಗುಂಡ । ಜೋಜೊ ಬಿಸಲಿಗೆ ಗಾಳಿಗೆ ಮುಂಡ ಜೋ ಜೋ ಮೆಣಸಿನಕಾಯಿಗೆ ಗಂಡ ॥ ೧೬ ॥ ಹೆಣ್ಣಿನ ಕೈಯೊಳಗೋಡಿಯಾಡುವನೆ । ವರಳಲ್ಲಿ ಗರಗರನೆ ತಿರುಗಿ ಯಾಡುವನೆ ॥ ಹಣ್ಣಿನಕಾಯನ್ನು ಅರೆದುನೋಡುವನೆ । ಬಣ್ಣಿಸಿ ನೋಡಲು ಪೊಳದುದ್ದುದವನೆ ಜೋಜೋ ॥ ೧೭ ॥ ತಂಡತಂಡದಿ ಗುಂಡುಕಲ್ಲನುಪಾಡಿ । ಗುಂಡಪ್ಪರಾಯನ ತೆಗೆದು ಬಿಸಾಡಿ । ಪುಂಡರೀಕಾಕ್ಷನ ಮೊಗವ ಮುದ್ದಾಡಿ । ಕೊಂಡಾಡಿ ತೂಗಿದರಾಗೊಡಗೂಡಿ ॥ ಜೋಜೋ ॥೧೮॥ ಜೋಜೋ ಗೋಪೀಬಾಲ ಗೋಪಾಲ । ಜೋಜೋ ಕಾರು ಣ್ಯಾ ಶೀಲವಿಶಾಲ ॥ ಜೋಜೋ ಪಾಲಿತಭಕ್ತಕುಚೇಲ । ಜೋಜೋ ಪೀತಾಂಬರದಿವ್ಯಚೇಲ ॥ ಜೋಜೋ ॥೧೯॥ ಜೋಜೋ ಚಿನ್ನದಚಾವಡಿದೊರೆಯೆ । ಜೋಜೋ ಚಿನ್ನದ ಬೆಟ್ಟದಹರಿಯೆ । ಜೋ ಜೋ ಚನ್ನಿಗರಾಯ ಮದಕರಿಯೆ ॥ ಜೋ ಜೋ ॥ ೨೦ ॥ ಜೋಜೋ ಜಾಹ್ನವೀಜನಕ ಜಗ ದೀಶ । ಜೋಜೋ ದಕ್ಷಿಣಶೇಷಾಚಲೇಶ । ಜೋ ಜೋ ರಾಮಾನುಜನಿತಲೇಶ । ಜೋಜೋ ಪುಲಿಗಿರಿ ಶ್ರೀವೆಂಕಟೇಶ ಜೋ ಜೋ ! ೨೧ ॥

ರಾ ಗಾ॥ (ಮೇಲಿನಮಟ್ಟು)

ಇಂತೆಂದು ಶ್ರೀಹರಿಯ ಬಣ್ಣಿಸಿಪಾಡಿ । ಸಂತೋಷದಿಂ ಮೊಗವ ಮುದ್ದಾಡಿನೋಡಿ । ಕಾಂತೆಯರ್ ಮುತ್ತಿನಾರತ್ನ ದಾರತಿಮಾಡಿ । ಕಂತುಪಿತನಿಗೆ ಮಂಗಳಾರತಿಯನೀಡಿ ॥ ಕನ್ನೆಯರಿಗೆಲ್ಲಕುಂಕುಮವನಿಟ್ಟು । ಪಣ್ಯಾರ ಫಲಂಗಳ ಬಾಗಿ ನವಕೊಟ್ಟು ಚಿಣ್ಣನಿಗೆಸೌವರ್ಣ ದಕ್ಷತೆಯನಿಟ್ಟು । ಪನ್ನಗ ವೇಣಿಯರು ಪಾಡಿದರುತಾವೊಟ್ಟು ॥

॥ ಲಾ ಲಿ ॥

ಲಾಲಿಲೀಲಾಜಾಲ ಲಕ್ಷಣ ಸುಶೀಲ ಲಾಲಿ ಲಕ್ಷ್ಮೀಲೋಲ ರಾಜಗೋಪಾಲ । ಲಾಲಿಗೋಪಾಲಬಾಲ ದಿವ್ಯವನಮಾಲ । ಲಾಲಿಕಸ್ತೂರಿಕಾಫಾಲ ಭೂಪಾಲ ॥ ಲಾಲಿ॥ಪ॥ ಲಾಲಿ ಶ್ರೀ ರಂಗೇಶರಂಗನೇ ಲಾಲೀ । ಲಾಲಿ ತಿರುಪತಿ ವೆಂಕಟೇಶನೆ ಲಾ ಲೀ। ಲಾಲಿಶ್ರೀಹಸ್ತಿಗಿರಿವರದನೇ ಲಾಲೀ। ಲಾಲಿಯದುಗಿರಿ ಚ ಲುವರಾಯನೇ ಲಾಲೀ । ಲಾಲೀ ॥೧॥ ಲಾಲಿಪುಲಿಗಿರಿ ಶ್ರೀವೆಂ ಕಟೇಶ। ಲಾಲಿಭಕ್ತರ ಪೋಷಪ್ರತ್ಯಕ್ಷವೇಷ ॥ ಲಾಲಿಲೋಕೈ ಕೇಶ ಶ್ರೀ ಸರ್ವೇಶ । ಲಾಲಿ ಪುಲಿಗಿರಿವಾಸ ಶ್ರೀನಿವಾಸ ಲಾಲಿ ॥ ೨ ॥

ರಾಗಾ ॥ ಆನಂದಭೈರವಿ ॥ (ಭಾಗವತ ಕಥೆಯಾಟ್ಟೆ)

ಕೇಳು ಪರೀಕ್ಷಿತ ಬಾಲಕ ಕೃಷ್ಣನ ಕೋಲಾಹಲಚರ್ಯ । ಪೇಳುವೆನಾನಾಲಿಸು ಲಕ್ಷ್ಮೀಕಾಂತನ ಲೀಲೆಯು ಲೋಕಕೆ ಪ ರಮಾಶ್ಚರ್ಯ ॥ ಪ ॥ ನಿದ್ರೆಗಣ್ಣಿನ ಶಿಶುವನು ತೊಟ್ಟಿಲ ಮಧ್ಯ ದಿ ಬಿಟ್ಟವಳು । ವಿಧ್ಯುಕ್ತದಿ ಪುರನಾರಿಯರನ್ನು ಹೃದ್ಯದಿ ಪೂಜಿಪಳು ॥ ಕೇಳು ॥ ೧ ॥ ನಿದ್ರೆಯತಿಳಿದು ಸ್ತನ್ಯವಬಯ ಸಿ ಮಧ್ಯದೊಳಳುತಿಹನು । ಸದ್ದಲಿಗೋಪಿಕೇಳದೆ ಪೋಗ ಲು ಒದ್ದನು ಚರಣದಿ ಗುದ್ದುವ ಸಮಯದಿ ॥ ೨ ॥ ಪ್ರಕಟವ ಮಾಡದೆ ನಿಕಟದಿ ಬಂದನು ಶಕಟಾಸುರನೆಂದು । ಶಕಟರೂ ಪದ ಪ್ರಕಟವ ಕಾಣಲು ಕಪಟಿಯು ಇವನೆಂದು ॥ ಸಕುಟಿಲ ದೈತ್ಯನ ಚೊಕ್ಕಟವಮಾಡುವ ಅಕುಟಿಲಮನಗೊಂಡು । ಮುಕುಟವನೊದ್ದನು ಶಕಟನುಬಿದ್ದನು ಅಕಟಕಟಾಕ್ಷಣ ಅ ಕಮಲೇಕ್ಷಣ ॥ ೩ ॥ ಚಿಲ್ವಿನ ಮೃದುತರ ಪವಳದ ಕಿಸಲಯ ಪಲ್ಲವ ಪಾದದೊಳು । ಕೊಲ್ಲಲು ಬಂಡೀನೊಗಚಕ್ರಂಗಳು ಭಿನ್ನಗಳಾಗಿರಲು । ಅಲ್ಲಿಹ ನಾರಿಯರೆಲ್ಲರು ಆ ಕ್ಷಣದಲ್ಲಿಯೆ ನೋಡಿದರು । ಬಲ್ಲಿದ ಶಕಟನ ಮುರಿದೀಪರಿಯು ಇಲ್ಲ ಇದೇ ನೆಂದಚ್ಚರಿಗೊಂಡರು ॥ ಕೇಳು ॥ ೪ ॥ ನಂದಯಶೋದೆಯ ರೊಂದಿಗೆಜನರು ಸಂದಣಿಸುತ್ತಿದರು।ಎಂದೂ ಇಲ್ಲದ ಈ ವಿಪ ರೀತವು ಇಂದೇನೆನ್ನುವರು। ಮುಂದೋರದೆ ಮನನೊಂದು ವಿ ಷಾದದಿ ಮೋಹಿತರಾಗಿಹರು। ಕಂದನ ಪಾದದಿ ಕೊಂದನು ಶ ಕಟನನೆಂದಾ ಗೋಪರಬಾಲರು ನುಡಿದರು॥೫॥ಬಾಲರು ಪೇಳ ಲು ಕೇಳದೆ ಪೋದರು ಬಾಲರ ನುಡಿಯೆಂದು,ಲೀಲೆಯನಂತರ ಮಹಿಮೆಯ ತಿಳಿಯದೆ ಬಾಲಕನಿವನೆಂದು, ಮೇಲಳುತಿರುವ ನ ಕರತಂದಳು ತನ್ನಾಲಯದೊಳಗಂದು॥ಲಾಲಿಸಿವಿಪ್ರರ ಮುಖ ದಿಂ ಸ್ವಸ್ತಿಯ ಹೇಳಿಸಿ ತಾನೊಲೆಯುನೂಡಿಸಿ ಬಿಟ್ಟಳು ॥೬॥ ಬಲವಂತರು ಆ ಬಂಡಿಯ ಸೆಳೆದೊಂದೆಡೆಯೊಳಗಿರಿಸಿದರು, ಬಲಿಹೋಮಾರ್ಚನೆ ದಧ್ಯಕ್ಷತ ಕುಶಜಲದಿಂ ಮಾಡಿದರು । ಕುಲಶೀಲದ್ವಿಜರಾಶೀರ್ವಚನದ ಫಲವೆಂದೆಣಿಸಿದರು, ಜಲ ವನುತರಿಸಿ ಪರಿಮಳವೆರಸಿ ಜಪಿಸುತಲಿಪ್ಪರು ವೇದದಿವಿಪ್ರ- ರು ॥೭॥ ವೇದವಪಠಿಸುತ ವೇದಜ್ಞರು ಆ ವೇದೋದಕ ತಂದು । ವೇದಾತ್ಮನಿಗಭಿಷೇಕವ ಗೈದರು ಆದರಿಸುತೆಬಂದು। ಓದಿಸಿಸ್ವಸ್ತಿಹೋಮವಗೈದರು ವಿಪ್ರರಕರೆ ಕರೆದು। ಆದಿನ ನಂದನು ಅತಿರಸದನ ದಿ ಆರಾಧನೆಯನು ಗೈದನು ದ್ವಿಜರಿ- ಗೆ ॥೮॥ ತುಂಗದೊಳೆಸೆಯುವ ಪುಲಿಗಿರಿನಾಯಕನಪ್ರಿಯ ನೆನೆನೆನೆದು । ರಂಗನಿಗಭ್ಯುದಯಂಗಳ ಬಯಸಿ ದ್ವಿಜರನುಕರ ತಂದು । ಶೃಂಗರಿಸಿದ ಕರುತುರುಗಳ ಕೊಟ್ಟವಿಧಂಗಳ ತಿಳಿ ತಿಳಿದು । ಮಂಗಳಮೂರುತಿ ಕೃಷ್ಣನು ವ್ರಜದೊಳು ಕಣ್ಗಳಿ ಗತಿಸುಖತೋರುತಲಿದ್ದನು ॥೯॥

॥ ವ ಚ ನ ॥

ಇಂತಿರುತಿರಲೊಂದುದಿನ ಗೋಪಿ, ಸಂತಾನಮಂ ತೊಡೆ

ಯೊಳಿಟ್ಟು ಮುದ್ದಾಡುತಿರೆ, ಗಿರಿಯಂತೆ ಅತಿಭಾರವಾಗೆ ಹೊರಲಾರದೆ ಶಿಶುವಂ ಕಾಂತೆಕೆಳಗಿಟ್ಟುಚಿಂತಿಸಿ ಮನವಿಭ್ರಮುಗೊಂಡು ಚಿಂತಾಮಣಿ ಮಗ ಬರಿಮಗುವಲ್ಲ ಮಹಾಪುರುಷನೇನಿಂತೆಂದು ಭಾವಿಸುತ ಸಂತೋಷದಿಂ ನಡೆದಳು ಮನೆಯ ಕೆಲಸಕೆ ವಾರಿಜಾಕ್ಷಿ.

ರಾಗ || ಆನಂದ ಭೈರವಿ ||

ಕೇಳಯ್ಯ ಪಾಂಡವಪೌತ್ರ । ಹರಿಲೀಲೆಯು ಲೋಕವಿಚಿತ್ರ । ಬಾಲಕ ಕೃಷ್ಣಚರಿತ್ರ । ಇದಕೇಳಲು ಜನ್ಮಪವಿತ್ರ || ಕೇಳಯ್ಯ || ಪ || ದೈತ್ಯ ತೃಣಾವರ್ತಬಂದ—ಕಂಸನ—ಭೃತ್ಯನು ಕೂಸನುಕಂಡ || ಸುತ್ತಿವಾತದರೂಪದಿಂದ । ಕೈಯೊಳೆತ್ತಿಕೊಂಡನು ಬೇಗದಿಂದ || ೧ || ಗೋಕುಲವನು ಸುತ್ತಿಕೊಂಡ । ಬಹು—ವ್ಯಾಕುಲವ ಪಡಿಸುತನಿಂದ । ನೂಕಿ ಕಣ್ಣಿಗೆ ಧೂಳಿಂದ—ಭೂಲೋಕಬೆದರೆ ಕೂಗಿಕೊಂಡ || ೨ || ಒಂದು ಮುಹೂರ್ತ ಗೋಕುಲವು । ರಜದಿಂದ ಕತ್ತಲೆಕವಿದವು । ನಂದನಕಾಣದೆ ಗೋಪಿ ತನ್ನ ಮಂದಿರವ ಹುಡುಕಿದಳ್ ಪ್ರಳಾಪಿ || ೩ || ಕಣ್ಣಿಗೆ ಮಣ್ಣಿರಚಿದನು ಗೋಪಿ ಕಣ್ಣತೆರೆಯಲಾರದಿಹಳು । ತನ್ನ ಮಿತ್ರಸ್ವರ ಕಾಣದವಳು—ಇನ್ನು ಮುನ್ನೊಂದ ತೋರದೆ ಭ್ರಮಿಸಿದಳು || ಕೇಳಯ್ಯ || ೪ || ಚಂಡಮಾರುತ ದೈತ್ಯನಿಂದ, ತಂಡತಂಡಧೂಳಿನ ಮಳೆಯಿಂದ ಹಿಂಡುಕಣ್ಣುಕತ್ತಲೆಯಿಂದ—ಕೂಸಕಂಡರಿಯದೆ ಖಳನಿಂದ || ಕೇ || ೫ || ಕರುಣದಿಂದಲೆ ಕೂಸನೆನದು —ಗೋಪಿ— ಧರೆಗೆ ಬಿದ್ದಳು ಮೈಯಮರೆದು। ಕರುಪೋದ ತುರುವಂತೆ ಮೊರೆದು ಗೋಪಿ ಮರಳಿ ಮರಳಿ ರೋದಿಸಿದಳು || ೬ || ಗೋಪಸ್ತ್ರೀಯರು ಇದಕೇಳಿ-ಬಹು- ತಾಪಪಟ್ಟರು ಖತಿತಾಳಿ। ಗೋಪೀಪುತ್ರನ ಸುಂಟರಗಾಳಿ। ಪಾಪಿಹಾರಿಸೆ ಅಂತರಾಳಿ || ೭ || ಸುತ್ತಿವಾತನು ವೇಗತೀರಿ -ಶಿಶುವೆತ್ತಿಕೊಂಡನು ನಭಕೇರಿ। ಕತ್ತುಪಿಡಿಯೆಹರಿಸಾರಿ, ಅವನು ಶಿಶುವೆತ್ತಲಾರದೆ ಭಾರತೋರಿ || ೮ || ಬಿಟ್ಟಫಟ್ಟವೊ ಎಂದು ತಿಳಿದು। ಬಿಟ್ಟರೂ ಬಿಡದೆ ಶ್ರೀಹರಿಯು। ಪಟ್ಟನೊಳಗೆ ಕತ್ತಪಿಡಿದು। ದುಷ್ಟನ ಚೇಷ್ಟೆನಿಲ್ಲಿಸಿದನು ಜರಿದು || ಕೇಳಯ್ಯ || ೯ || ಕಣ್ಣುಮೆಡರಿ ತಣ್ಣಗಾಗಿ-ಖಳ-ಬಣ್ಣಗೆಟ್ಟನು ಭಾಷೆನೀಗಿ। ಮುನ್ನಬಿದ್ದನು ಪ್ರಾಣಪೋಗಿ। ಚಣ್ಣಸಹಿತವ್ರಜಕಾಗಿ || ಕೇಳಯ್ಯ || ೧೦ || ಮೇಲಿಂದ ಶಿಲೆಮೇಲ್ ಬೀಳೆ-ದೇಹ- ಸೀಳಾಗಿ ರುಧಿರವು ಸುರಿಯೆ ನೀಲಲೋಹಿತ ಬಾಯಬಿಡಲು । ಪೌರರೆಲ್ಲ ತಲ್ಲಣಿಸುತ್ತಿರಲು || ಕೇಳಯ್ಯ || ೧೧ || ಅಳುತ ನಾರಿಯರೆಲ್ಲಬಂದು। ಶಿಶುಖಳನ ಮೇಲಿರುವುದಕಂಡು। ತಿಳಿದು ಜೀವದೊಳಿಹನೆಂದು। ತಾವು ಗಳಿಲನೆಕರದು ಕೊಂಡರಂದು || ೧೨ || ತೊಳಲಿ ಬಳಲಿ ಮನನೊಂದು। ಗೋಪಿತಿಳಿಯದೆ ಹರಿಮಗನೆಂದು। ಹಲುಬಿ ಹರಸಿಕೊಂಡಳೆಂದು। ನಮ್ಮ ಪುಲಿಶೈಲಪತಿಯೆಂದು || ಕೇಳಯ್ಯ || ೧೩ ||

|| ಭಾ || ಷಟ್ಪದಿ ||

ಮೃತ್ಯು ಮುಖದಿಂ ಗೆದ್ದುಬಂದಾ। ಪುತ್ರನಂಪಿಡಿದೆತ್ತಿಕೊಂಡಳು । ತತ್ತರಿಸಿತಲ್ಲಣಿಸಿ ಚಿತ್ರವಿಚಿತ್ರವೆಂದೆನುತಾ || ಮತ್ತ ಕಾಶಿನಿ ಗೋಪಿಮರುಗುತ । ಮಿತ್ರೆಯರ್ಗುಸುರಿದಳು ಭರದಿಂ। ಪುತ್ರಪ್ರೇಮದ ಒಲೆಗೆ ಸಿಲುಕುತ ಭೂಮಿಈಮಾತಾ ||

ರಾಗ ||

ಅಮ್ಮಗೋಪಿಯರೆಕೇಳಿ ನಮ್ಮಕೂಸು ಬದುಕಿದನು । ಗುಮ್ಮಕೊಂದರೇನು ಮಾಡಲೆ ಅಯ್ಯಯ್ಯೋ ವಿಧಿಯೆ || ಪ || ಸರರ ತಿಂಬದೈತ್ಯನಾತ । ತರಳರ ಜಿಡುಪನೆಧೂತ । ಕರದುಕೊಂಡು ಗಗನಕೆಪೋದನೆ । ಉಳಿಯುವರೇನೆ ತರುಣಿಯಾದರಾಗಲಮ್ಮ ಧರೆಗೆ ಗಗನದಿಂದ ಬೀಳೆ । ತರಳನು ಬದುಕುವುದುಂಟೇನೆ ಕೇಳಮ್ಮಜಾಣೆ || ಅಮ್ಮ || ೧ || ಅಂತರಿಕ್ಷದಿಂದ ಬಿದ್ದು ಮೃತ್ಯುಮುಖದಿಂದಗೆದ್ದುಸ್ವಸ್ತಿಮಂತನಾದಕಾಣಮ್ಮ ಫಣೆಯೊಳು ಬೊಮ್ಮ । ಬಿತ್ತರದ ಗಂಡವೇನೊ ಬರೆದಿದ್ದೀ ಪರಿಯೊಂದು ಕಳೆದು ಚಿತ್ರವಾಯಿತೆಮ್ಮಚಿಣ್ಣನುಜೀವಿಸಿದನು || ೨ || ಗೋಪೀ ಗೋಪಗೋಪಾಲರು ಗೋಪಸ್ತ್ರೀಯರೆಲ್ಲನೆರೆದು । ಗೋಪಾಲನ ಮುದ್ದುಗೈದರು ಗೋಕುಲದವರು । ಶ್ರೀಪತಿಯು ದಯೆಯಿಂದ ಆಪತ್ತುಕಳೆದುದೆಂದು ತಾವ್ ಪಿರಿದು ಸವಿಗೊಂಡರು ಕೇಳಿರೆಲ್ಲರು || ಅಮ್ಮ || ೩ || ಚಿಣ್ಣನ ಕೊಲ್ಲುವೆನೆಂದು ಮುನ್ನಬಂದ ದೈತ್ಯನಂದು । ಚಿಣ್ಣಬದುಕಿಕೊಂಡ ಕಾಣಮ್ಮ ಆಶ್ಚರ್ಯವಮ್ಮ । ತನ್ನಪಾಪದಿಂದತಾನೆ ಬಣ್ಣಗೆಟ್ಟು ಪೋದಖಳನು, ಸನ್ನುತರು ಸೌಖ್ಯಪಡುವರು ಸಾಧುಜನರು || ೪ || ಪೂರ್ವಜನ್ಮದಲ್ಲಿ ನಾವು ಮಾಡಿದ ತಪಸಿನ ಫಲವೊ ಶ್ರೀವಾಸುದೇವಾರ್ಚನ ಫಲವೊ ದಾನದ ಫಲವೊ ಭಾವಿಯನ್ನು ತೆಗೆಯಿಸಿಯೊಳ್ಳೆ ಹೂವಿನ ತೋಟವ ರಚಿಸಿ ಭಾವಿಸಿದ ಭೂತಫಲವೊ ಮತ್ತಾವ ಫಲವೊ || ಅಮ್ಮ || ೫ || ಕತ್ತಲೆ ನಿಲ್ಲುವುದುಂಟೆ ಮಿತ್ರನುದಯಿಸಲೊಮ್ಮೆ ಸತ್ತಕೂಸು ಬದುಕುವುದುಂಟೇನೆ ಎಲ್ಲೆಲ್ಲಿಯುಕಾಣೆ || ಮೃತ್ಯುವನ್ನು ಪರಿದು ದೈವಕೃತ್ಯ ಸೇರಿ ನಮಗೆತ್ತಂತ ಪ್ರೀತಿಯನಿತ್ತನೆ । ವಿಚಿತ್ರವಲ್ಲೇನೆ । ಅಮ್ಮ || ೬ || ನಾರಿಯರೊಡನೆ ಗೋಪೀ ನಾರಿಸಾರಿ ಈಪರಿಯಿಂದ। ಬಾರಿಬಾರಿಗು ಮೋದಪಟ್ಟಳೆ ಹೊಡೆದು ಚಪ್ಪಾಳೆ || ಈರೇಳು ಲೋಕಕ್ಕೆಪುಲಿಗಿರಿ ವೆಂಕಟರಮಣನು ಧೀರ ರಾಮಾನುಜವಿಠಲನೆ ಪಾಲಿಸುವನು—ಈಕುವರನನ್ನು || ೭ ||

|| ವಚನ ||

ಅದಿಗಡಿಗದ್ಭುತ ಕಾರ್ಯಂಗಳನೋಡಿ ನಂದನು ಒಡನೊಡನೆ ವಸುದೇವನ ನುಡಿಗಳಂ ನೆನೆನೆನೆದು। ಮಡದಿಯೊಡನೆಂದ ಶೌರಿಯ ನುಡಿಸತ್ಯವಾಯಿತಿಂತೆಂದು । ಪಡೆದಪುತ್ರನ ಪಿಡಿದೆತ್ತಿ

ಮುದ್ದಿಸುತ ಮನ್ನಿಸುತ ಹರುಷಗಡಲೊಳಾಡುವನನವರತ. ಇಂತಿರಲೊಂದುದಿನ ಗೋಪಿ ಕಂದನಂ ತೊಡೆಯೊಳಿಟ್ಟು ಸೋರುತಿದ್ದ ಮೊಲೆಯಂ ಕೊಟ್ಟು ಪರಮಾನಂದಾಬ್ಧಿಯೊಳ್ಮುಳುಗಿಯೋಲಾಡಿ ಕಂದನ ಮಂದಸ್ಮಿತವದನಾರವಿಂದಮಂ ಮುದ್ದಾಡುತಿರಲಂದಾಕಳಿಸೆ ಕಂಡಳಾತನ ಬಾಯೊಳಗೆ ಜಗವನಾಕಾಂತೆ ಯಶೋದೆ ಭಾಗ್ಯವಂತ.

ರಾಗಾ ॥ ಮೋಹನ ॥ (ನಾನೇನಮಾಡಿದೆನೊ)

ಶ್ರೀ ಕಾಂತನ ಬಾಯೊಳು ಲೋಕವನೆಲ್ಲ-ಆ ಕಾಂತೆಯು ಕಂಡಳು ॥ ಶ್ರೀಕಾಂತನ ಬಾಯೊಳೇಕಾಂತದಿ ಗೋಪೀ । ಲೋಕಾಂತವನೆಲ್ಲಾ - ಲೋಕಾಲೋಕವ ॥ ಪ ॥ ಅಂತರಿಕ್ಷವಕಂಡು ಆಕಾಶವನು ಕಂಡು ಜ್ಯೋತಿರ್ಮಯವಕಂಡು ಜ್ವಾಲಾಮಾಲೆಯಂಕಂಡು । ನಕ್ಷತ್ರಗಳಕಂಡು ನಾನಾರೂಪಂಗಳಕಂಡು ಆರ್ಕಚಂದ್ರರಕಂಡು ಅಗ್ನಿವಾಯುವಕಂಡು ಸಪ್ತಸಾಗರ ಸಪ್ತದ್ವೀಪಂಗಳಕಂಡು ॥ ಶ್ರೀ ॥ ೧ ॥ ಅಷ್ಟಗಜಗಳಕಂಡು ಅವರ ಸಂತತಿಕಂಡು । ದುಷ್ಟವನವಕಂಡು ದೊಡ್ಡಭೂಮಿಯಕಂಡು। ಬೆಟ್ಟಘಟ್ಟವಕಂಡು ಭಾರಿದುರ್ಗವಕಂಡು ॥ ಸೃಷ್ಟಿಚಕ್ರವಕಂಡು ಸಕಲ ಲೋಕವಕಂಡು ಪುಟ್ಟಬಾಯೊಳಗಿಷ್ಟ ಸಂಭ್ರಮದಿಂದ ॥ ೨ ॥ ಸ್ಥಿರಜಂಗಮಾದ್ಯರಾವರಭೂತಂಗಳಕಂಡು, ಹರಿಯಬಾಯೊಳಗಾಗ ವಿಶ್ವರೂಪವಕಂಡು । ಥರಥರನೆ ತರುಣಿ ನಡುಗುತ್ತ ಬೆದರುತ್ತ ಸರಸರನೆಕಣ್ಣಳಮುಚ್ಚಿ ಕಾತರಿಸುತ । ಪರಮಶ್ರೀಪುಲಿಗಿರಿವೆಂಕಟರಮಣನ ವರಮಾಯೆಯನೋಡಿ, ಪರಮವಿಸ್ಮಿತೆಯಾಗಿ। ಪರಮ ಪುರುಷನನ್ನು ಪೊಗಳುತ್ತ ಹರಿಣಾಕ್ಷಿ॥ಶ್ರೀಕಾಂತನ ॥ ೩ ॥

॥ ಇತಿದಶಮಸ್ಕಂಧೇ ಅಷ್ಟಮೋಧ್ಯಾಯಃ ॥

ರಾಗಾ॥ (ಧಣ ಧಣ ಧಣ ಧಣ)

ರಾಜನೆಕೇಳೊ ರಾಮಕೃಷ್ಣರ ನಾಮಕರಣದ ಸಂಗತಿಯ । ಮೂಜಗದೊಳು ಶ್ರೀರಾಮಕೃಷ್ಣರ ನಾಮಪೆಕೊಡುವುದು ಸದ್ಗತಿಯ ॥ ಪ ॥ ಗರ್ಗಾಚಾರ್ಯನು ಬಂದನು ಯಾದವ ವರ್ಗದ ಕುಲಗುರು ಬೇಗ। ಮಾರ್ಗದಿ ಕಾಣಲು ಪ್ರೀತಿಯೊಳೆದ್ದಾಪ ನರ್ಗದಿನಂದವಿರಾಗ ॥ ಅರ್ಘ್ಯವನಿತ್ತು ಹರಿಗರ್ಪಿಸಿ ಮಾರ್ಗದೊಳರ್ಚಿಸಿ ಕೈಮುಗಿದನುತಾನಾಗ॥೧॥ ಅತಿಶಯ ಸಂತಸದಿಂ ಚಿನ್ನದ ಆಸನವಿತ್ತಾನಂದ । ಪ್ರೀತಿಯೊಳಾ ಮುನಿ ಕುಶಲವಕೇಳಿ-ಪೂರ್ಣರುನೀವೆಂದ। ಚೇತನರಿಗೆ ಸಂರಕ್ಷಣೆಗೋಸುಗ ಚಲನವು ನಿಮ್ಮದು ಎಂದ।ಆತುಮನನು ನೀವರಿತಹಕಾರಣ ಜ್ಯೋತಿಗೆ ನೀವೇನೆಲೆಯೆಂದ॥ ೨ ॥ ಬ್ರಹ್ಮನು ಸೃಷ್ಟಿಪ ಬಹುಳ ವಿಚಾರಿಸೆ, ಬ್ರಹ್ಮನ ಗುರುಗಳು ಎಂಬ । ಬ್ರಹ್ಮವತಿಳಿದಿಹ ಬ್ರಾಹ್ಮಣರೊಳಗೆ ಮಹಾಋಷಿ ನೀವೆಂದು॥ ನಮ್ಮೀಬಾಲಕರಿಬ್ಬರಿಗಿಂದು ನಾಮಕರಣಮಾಡಿಸಿರೆಂದ॥ ೩ ॥ ಎಂದಮಾತಿಗೆ ಗರ್ಗನು ಹರಿಯನುಮಂದಿಸಿ ನುಡಿದನುನಂದನೊಳು । ಎಂದಿಗೂಯಾದವರಾಚಾರ್ಯನು ನಾನೆಂದೆನುತೆಲ್ಲರು ತಿಳಿದಿಹರು । ಇಂದುಪುರೋಹಿತನಾಗಲು ದೇವಕೀನಂದನನೆನ್ನುತ ತಿಳಿಯುವರು ಚಂದದಿನೀವ್ ವಸುದೇವನ ಮಿತ್ರರು ಎಂದತಿಸಂಶಯಪಡುವ ಕಂಸನವಂ ॥ ೪ ॥ ದೇವಕಿಯೆಂಟನೆಯ ಗರ್ಭವು ಹೆಣ್ಣಿನಭಾವವದಲ್ಲವುಎಂದು॥ ದೇವಿದುರ್ಗೆಯ ವಚನವಕೇಳಿ ದೈತ್ಯನುಮನದೊಳುತಂದು। ನಾವಿಂದಿಲ್ಲಿಗೆ ಬಂದುದಕೇಳಿ ಹಾವಳಿಗೈಯ್ವನು ಮುಂದು । ಈ ವಿಧದಿಂಸಂಶಯಪಡುವನು ಈ ಪುತ್ರರ ಶುಭವಚಿಂತಿಸಿರೆಂದು ॥ ೫ ॥ ಎನ್ನಲಾಗರ್ಗನ ವಚನವಕೇಳುತ್ತೆಂದನು ನಂದನು ಮುದದಿಂದ। ಇನ್ಯಾರಿಗೂ ಅರುಹಿಲ್ಲದೆ ಇಲ್ಲಿಯೇ ಕಾಂತದಿಗೈಸಿರಿ ಮರೆಯಿಂದ । ಎನ್ನಯ ನಂಟರ—ಮಾತ್ರವ ಕೂಡಿ ನಿಮ್ಮ ವೇದದನುಡಿಯಿಂದ । ಮನ್ನಿಸಿ ಮುದದಿಂ ದ್ವಿಜಸಂಸ್ಕಾರದಿ ಬಣ್ಣಿಸಿ ನಾಮವನಿಡಿರೆಂದ ॥ ೬ ॥ ಎಂದಾ ನಂದನನುಡಿಯನು ಕೇಳಿ ಅಂದಾಗರ್ಗನು ಮುದದಿಂದ । ಮುಂದಾಗುವ ವಿಧ್ಯುಕ್ತದ ವಸ್ತುಗಳೊಡನೆ ತರಸಿದನಲವಿಂದ । ನಂದಾದಿಗಳಿಂದೊಡಗೂಡುತ ಮುನಿ ನಂದನರಿಗೆ ಬಹುಮತಿಯಿಂದ ॥ ರಾಜನೆಕೇಳು ॥ ೭ ॥

॥ ವ ಚ ನ ॥

ಇಂತು ಪ್ರಾರ್ಥಿತನಾಗಿ ಗರ್ಗಾಚಾರ್ಯನು ಮುಂದಾಗಿ ರೋಹಿಣೀ ಸುಕುಮಾರನಿಗೆ ನೈಸರ್ಗಿಕ ಗುಣಾನುಸಾರವಾಗಿ ನಾಮವಂನಿಡುವದೆಂತೆನೆ.

ರಾಗಾ ॥ (ಈತನೀಗ ವಾಸುದೇವನು)

ಈತನೀಗ ರಾಮದೇವನು ಕೇಳುನಂದಾ—ಈತನೇ ಬಲಭದ್ರದೇವನು॥ ಈತನೀಗ ರಾಮದೇವ ಖ್ಯಾತನು ಮಹಾನುಭಾವ ಭೂತಲದೊಳ್‌ರಮಿಸುವ ನೀತಿಯಿಂದರಾಮನಾಮವ॥ ಈತನೀಗ ॥ ಅನು ॥ ತನ್ನ ಸದ್ಗುಣಗಳಿಂದ ನನ್ನುತರ ಮೋದದಿಂದ ಮನ್ನಿಸಿ ಕಾಪಾಡಿ ಸುಖವನ್ನು ಕೊಟ್ಟು ನಲಿಯುವ॥ ಈತನೀಗ ।೧॥ ರೋಹಿಣಿಯ ಗರ್ಭಜಾತ । ಬಾಹುಬಲವಿಖ್ಯಾತ । ಸಾಹಸಿಕ ಸಾರಭೂತ ದೇಹದಿಂ ಬಲಭದ್ರನೆಂದು॥ ಈತನೀಗ ॥ ೨ ॥ ಯಾದವರೊಳಗನೇರಿ ಭೇದವಿಲ್ಲದವೆ ಪುಲಿಭೂಧರಪತಿಯನಾಮವಾದ ಸಂಕರ್ಷಣನೆಂದು ॥ ಈತ ॥೩॥

॥ ವ ಚ ನ ॥

ಬಲರಾಮಂಗೆ ಈಪರಿಯಿಂ ಪೆಸರಿಟ್ಟನಂತರಂ ಶ್ರೀಪತಿಗೆ ನಾಮಾಂಕಿತವನಿತ್ತನು ಗೂಢಾರ್ಥದಿಂ ಗೋಪರಿಗೆ ತಿಳಿಯದಂತೆ

॥ ಮೇಲಿನಮಟ್ಟು ॥

ಈತನೀಗ ಕೃಷ್ಣದೇವನು, ಕೇಳುನಂಧಾ—ಈತನೀಗವಾ

ಸುದೇವನು || ಈತನೀಗ ಕೃಷ್ಣದೇವ ಗೋಪಿಯುದರ ಜಾತ ಭಾವ । ಖ್ಯಾತ ಜಗದೊಳ್ ಪ್ರಖ್ಯಾತ ಜಗನ್ನಾಥನೆಂಬ ||ಅ|| ಸಾರಿಸಾರಿಯುಗದೊಳವತಾರಗೈಯ್ವ ನಿನ್ನ ಸುತಗೆ ತೋರಿತೀಗ ಶುಕ್ಲರಕ್ತಪೀತವರ್ಣವು । ಮೂರುವರ್ಣವಾಗಿ ಈಬಾರಿ ಕೃಷ್ಣವರ್ಣವಾದ ಕಾರಣದಿ ನಿನ್ನ ಸುತಗೆ ಕೃಷ್ಣನೆಂಬ ನಾಮಕರಣವು|| ಈತ || ೧ || ಪೂರ್ವವೊಂದುವೇಳೆ ವಸುದೇವನಲ್ಲಿ ನಿನ್ನ ಸುತನು. ಉರ್ವಿಯೊಳಗೆ ತಾನು ಜನ್ಮಿಸಿದ ಕಾರಣಾ । ಭಾವದಿಂದ ಶ್ರೀಮಂತನಾದ ನಿನ್ನ ಸುತಗೆ ದೇವದೇವ ಶ್ರೀವಾಸುದೇವನೆಂಬ ನಾಮಕರಣ||ಈತ || ೨ || ಗುಣಗಳನ್ನು ಕರ್ಮಗಳನು ಎಣಿಸಿ ತದನುಸಾರನಿನ್ನ ಅಣುಗನಿಗೆ ಬಹುಳನಾಮ ರೂಪವಿರುವುದು। ಗಣನೆಮಾಡೆ ಶಕ್ಯವಲ್ಲ ಜನರ ಮನಕೆ ತಿಳಿಯಸಲ್ಲ, ಅಣಕವಲ್ಲ ಸುತನ ಮಹಿಮೆ ಗುಣಪನಾಸು ಒಲ್ಲೆನೆಲ್ಲ || ಈತ || ೩ || ಈತನಿಮ್ಮ ಗೋಕುಲಕೆ ನಾಥನೆನಿಸಿ ನಿಮಗೆ ಸೌಖ್ಯದಾತನಾಗಿ ಜನರ ಕಾಪಾಡುತಿರುವನು || ಘಾತವಾತ ಭೂತವಿಘಾತಸರ್ವಕಷ್ಟವನ್ನು ಈತನಿಂದ ಪಾಟಿ ನೀವು ಪ್ರೀತಿಯನ್ನು ಪಡುತಲಿಹಿ|| ಈತನೀಗ|| ೪ || ಉರ್ವಿಯಲ್ಲಿ ಚೋರರೆಯ್ದಿ ಗರ್ವದೊಳ ನಾಥರನ್ನು ಪೂರ್ವದಲ್ಲಿ ಬಹಳವಾಗಿ ಬಾಧೆಪಡಿಸಲು || ಸರ್ವಸಾಧು ಜನರನೀತನೋರ್ವ ಕೈಯಪಿಡಿಯೆ ಖಳರ ಗರ್ವವನ್ನು ಮುರಿದು ಜನರು ಸರ್ವಸೌಖ್ಯಪಟ್ಟರೂ||ಈತ|| || ೫ || ಸೃಷ್ಟಿಯೊಳಗೆ ನಿನ್ನ ಸುತನೊಳಿಷ್ಟವನ್ನು ಗೈದವಗೆ । ದುಷ್ಟಶತ್ರುಜನಗಳಿಂದ ಕಷ್ಟವಿಲ್ಲವು । ವಿಷ್ಣುಭಕ್ತರಲ್ಲಿ ದೈತ್ಯರಷ್ಟು ಭಯದಿ ನಡೆವರಂತೆ । ಕೃಷ್ಣಭಕ್ತರನ್ನು ಖಳರು ಕಷ್ಟಪಡಿಸಲಾರರೈ || ಈತ || ೬ || ಲಕ್ಷ್ಮಿಯಿಂದ ಕೀರ್ತಿಯಿಂದ ಲಕ್ಷಣ ಸ್ವಭಾವದಿಂದ ಲಕ್ಷ್ಮೀನಾರಾಯಣಂಗೆ ಸಮನು, ದಕ್ಷೆಯಿಂದ ಪಾಲಿಸಿವನ ರಕ್ಷಿಸುವನು ನಿಮ್ಮನಮ್ಮ ದಕ್ಷಿಣದಪುಲಿಯ ಶೈಲಾಧ್ಯಕ್ಷವೆಂಕಟೇಶ || ಈತನೀಗ || ೭ ||

|| ವ ಚ ನ ||

ಈತೆರದಿ ಗರ್ಗಾಚಾರ್ಯನು ವಿಜಾತೀಯ ವಾಕ್ಯದಿಂ ಪ್ರೀತಿಯಿಂ ಗೋಪನಿಗೆ ಪರಮಾತ್ಮತತ್ವವನ್ನರುಹಿ ತೆರಳಲು, ಪೂರ್ಣಾನುಗೃಹೀತನಾದೆನೆಂದು ತಿಳಿದು ಸುಖದೊಳಿದ್ದನಾ ನಂದನಂದು ||

ರಾಗಾ || (ನಮೋನಮೋ ಸದಾಮಹಾನು)

ಮಂಡಿಯಿಟ್ಟರಿಷ್ಟದೊಳಗೆ ರಾಮಕೃಷ್ಣರು—ಬಲರಾಮಕೃಷ್ಣರು ||ಪ|| ತಂಡತಂಡದಿ ವ್ರಜದಿ ರಮಿಸಿಕೊಂಡು ತಿರುಗುತಿರ್ಪರೆಂದು || ಮಂಡಿ ||ಅ|| ಕಡಗಕಂಕಣದಿಂದಲೊಪ್ಪುವ ಕರವನೆಲದೊಳು । ಮಡಗಿ ತೊಡಗಿ ಮಣಿಯಕಾಲವೊಡನೆ ತನ್ನೊಳು || ಕಡುವಿಡಾಯದಂದದಿಂದ ಸಡಗರದೊಳು ।ಸಡುಗುಡಾಡು (?) ವಂತೆ ವೇಗದೊಡನೆ ಚರಿಸುತಿರುವರೆಂದು|| ಮಂಡಿ ||೧|| ಗೆಜ್ಜೆಪಾದಗ ಧರಿಸಿ ಚಲಿಸಿ ಪದಗಳೊಪ್ಪಲು ! ಹೆಜ್ಜೆಗಳನು ಮುಂದು ಮುಂದಕೆಳೆಯುತಿರ್ಪರು || ಗೆಜ್ಜೆಗೆಜ್ಜೆಗೆ ತಗಲಿಯಗಲಿ ಧ್ವನಿಗಳೊಪ್ಪಲು ||೨|| ಚರಣಾಭರಣನಾದದಿಂದ ಹರುಷಗೊಳ್ಳುತ । ಧರಣಿಯೊಳಗೆ ವ್ರಜದ ಕೆಸರಿನೊಳಗೆ ತಿರುಗುತ || ಪರಮಭೀತರಂತೆ ತಾಯಿಯರ ಬಳಿಗೆಬಂದು ಸೇರಿಕೊಳ್ಳುತ|| ಮಂಡಿ ||೩|| ರಾಮಕೃಷ್ಣರ ಕರೆದುಕೊಂಡು ಮಾತೆಯರೀರ್ವರು । ಪ್ರೇಮದಿಂದ ಕೆಸರನೊರಿಸಿ ಸ್ತನ್ಯವಿತ್ತರು || ಕೋಮಲಂಗಳಾದ ಪಲ್ಲು ಮೊಳಕೆಕಂಡರು || ಸೋಮಸುಂದರ ನಗೆಯಮೊಗವ ನೋಡಿಮುದವ ಪಡುತಲಿಹರು || ಮಂಡಿ ||೪|| ಸಖಿಯರೊಳಗೆ ಕೆಲಸಗೈವ ಸಮಯ ನೋಡುತಾ । ಸುತರು ಸಕಲವಾದ ಚೇಷ್ಟೆಯನ್ನು ಮಾಡುತ|| ಅತಿವಿಲಾಸ ಬಾಲಲೀಲೆಯಿಂದಲೊಪ್ಪುತ । ಪತಿತಪಾವನ ಪುಲಿಗಿರಿಯ ಪತಿಯ ಮಂಗಳಮೂರುತಿ ನಗುತ ! ಮಂಗಳ ||೫||

|| ಕಂದ ||

ಲೋಕೈಕೇಶ್ವರನಾದರು । ಪ್ರಾಕೃತದ ಶಿಶುಗಳಂತೆ ನಲಿಯುತ್ತಿಹನಾ || ಗೋಕುಲದ ಗೋಪಿಯರಿಗಾ । ಶ್ರೀಕಾಂತನೊಲಿದು ಮುದವಡಿಸಿದನೇನೆಂಬೆಂ ||

ರಾಗಾ || (ದಿಕ್ಕುದಿಕ್ಕಿನಲ್ಲಿನಲ್ಲಿ)

ನಂದನಂದನನೊಂದೊಂದಾಗಿ ಮಾತಕಲಿತನು । (ಕೃಷ್ಣ) ತಂದೆತಾಯಿ ಬಂಧುಬಳಗಗಳೊಂದಿಗೆ ನುಡಿವನು || ಪ || ಅಮ್ಮಮ್ಮಮ್ಮಮ್ಮೆಂಬುದ ಪರಬೊಮ್ಮನು ಕಲಿತನು। (ಕೃಷ್ಣ) ಮೊಮ್ಮೊಮ್ಮೊಮ್ಮೊಮ್ಮೆಂಬುದ ನರಸಿಂಹನು ಕಲಿತನು ||೧|| ಅಯ್ಯಯ್ಯಯ್ಯಯ್ಯೆಂಬುದ ಮನ್ಮಥನಯ್ಯನುಕಲಿತನು||(ಕೃಷ್ಣ) ಜಯ್ಜಯ್ಜಯ್ಜಯ್ಯೆಂಬುದ ಶಿವನಜ್ಜಯ್ಯನು ಕಲಿತನು ||೨|| ತಾತಾತಾತಾಯೆಂಬುದ ಬ್ರಹ್ಮನತಾತನು ಕಲಿತನು ! (ಕೃಷ್ಣ) ತೈತೈತೈತೈಯೆಂಬುದ ಲೋಕನಾಥನು ಕಲಿತನು ||೩|| ಅಪ್ಪಪ್ಪಪ್ಪಪ್ಪೆಂಬುದ ಲೋಕಕ್ಕಪ್ಪನು ಕಲಿತನು । (ಕೃಷ್ಣ) ತುಪ್ಪುಪ್ಪುಪ್ಪುಪ್ಪೆಂಬುದ ಕೃಷ್ಣಪ್ಪನು ಕಲಿತನು ||೪|| ಅಣ್ಣಣ್ಣಣ್ಣಣ್ಣೆಂಬುದ ಮೇಘವರ್ಣನು ಕಲಿತನು। (ಕೃಷ್ಣಾ) ಹಣ್ಣಾ—ಣ್ಣಾಣ್ಣಾಣ್ಣೆಂಬುದ ತಾವರೆಗಣ್ಣನುಕಲಿತನು || ೫ || ಅತ್ತತ್ತತ್ತೆಂಬುದ ವೇದವ ಪೆತ್ತವಕಲಿತನು । ತತ್ತತ್ತೆನ್ನುತ ತೊದಲುತ ಜಗವನು ಪೊತ್ತವಕಲಿತನು ||೬|| ಅಕ್ಕಾಸಕ್ಕರೆ ಪಾಚಿಯೆಂಬುದ ಚಕ್ರಿಯು ಕಲಿತನು । (ಕೃಷ್ಣ) ಚಕ್ಕುಲಿಗಿಕ್ಕುಲಿಯೆಂಬುದ ಲೋಕರಕ್ಷಕಕಲಿತನು || ೭ || ಬುಲ್ಲಿಕಾಯನು ಬೆಲ್ಲವನೆಂಬುದ ವಲ್ಲಭಕಲಿತನು । (ಕೃಷ್ಣ) ಎಲ್ಲರತೆರದೊಳು ಜೊಲ್ಲನು ಸುರಿಸುತ ಮೆಲ್ಲಲು ಕಲಿತನು ||೮|| ನಾಡಿಗರಾಡುವಂತೆ ಆಡುತಲಿದ್ದನು । (ಕೃಷ್ಣ) ನಾಡಿಗೆಪುಲಿಗಿರಿವೆಂಕಟಪತಿರಾಮಾನುಜ ವಿಠಲನು ||೯||

|| ಕಂದ ||

ಘನತರಚೇಷ್ಟೆಯಮಾಡುವ| ತನಯರತಡೆಯರು ಯಶೋದೆ ರೋಹಿಣಿಯರ್ ತಾವ್ || ಮನೆಗೆಲಸಮಾಡಲಾರರು । ಜನನಿಯರಾಸುತರ ಲೂಟಿಯೇನೆಂಬೆಸದಂ ||

ರಾಗ|| (ಸೀತಾನಂದನನು)

ಅಂಬೆಗಾಲಿಟ್ಟನಾಗ, ಇಂತಿರುವಾಗ—ಅಂಬುಜ ನಯನ ಬೇಗ || ಪ || ಅಂಬೆಗಾಲಿಟ್ಟನು ಅಂಬುಜನಯನನು । ಕಂಬುಕಂಠಿಯರಿಗೆ ಸಂಭ್ರಮತೋರುತ || ಅಂಬೆ ||ಅನು|| ಕಂಬವಸುತ್ತಾಡುತ--ತಪ್ಪಾಮಾಲೆ ಯೆಂಬ ಆಟವನಾಡುತ|| ತುಂಬೆಗುರುಳುಗಳಿಂದ ತುಂಬಿದ ಮುಖದಿಂದ । ಅಂಬರದಲಿ ಚಂದ್ರ ಬಿಂಬವನೋಡುತ್ತ || ಅಂಬೆ ||೧|| ಅಂದಿಗೆ ಕಿರುಗೆಜ್ಜೆಯ—ಶ್ರೀಪಾದಾರವಿಂದದೊಳಪಡಿಸಿ || ಚಂದ್ರಸೂರ್ಯರು ಪೊಳೆವಂದದಿಬಲರಾಮ । ನಿಂದೊಡಗೂಡಿಗೋವಿಂದ ಗೋಕುಲದಲ್ಲಿ|| ಅಂಬೆ||೨ । ತುಂಬುರನಾರದರು- ಪಾಡುತಲಿರು- ವಂಬುಜಪಾದದಿಂದ || ಕುಂಬಿಣಿಯುಳ್ರವಿಬಿಂಬವಿಡಂಬಿನೀಲಾಂಬರಸಹಿತ ಪೀತಾಂಬರಧಾರಿ ||ಅಂಬೆ ||೩|| ಹಿಂದಿರುಗುತ ನೋಡುತ--ಸಂತೋಷದಿ—ಮುಂದೆ ಹೆಜ್ಜೆಯನಿಡುತ || ಕುಂ- ದರದನ ಶರದಿಂದುವದನ ಮುಚುಕುಂದವರದ ಶ್ರೀನಂದ ಕುಮಾರನು || ಅಂಬೆ ||೪|| ಜಾನುಜಂಘೆಯ ಧರಿಸಿ- ಭೂಮಿಯಮೇಲೆ-ಜಾನುತಾಗದೆ ಚಲಿಸಿ || ಮಾನಿನಿಯರ ಮುದ್ದು ಮೋಹನಪುಲಿಗಿರಿ ಶ್ರೀನಿವಾಸರಾಮಾನುಜವಿಠಲನು ||ಅಂಬೆ || ೫ ||

|| ವ ಚ ನ ||

ಇಂತು ರಾಮಕೃಷ್ಣರೀರ್ವರೂ ಬಾಲಲೀಲೆಯಿಂದ ತಾಯಿಯರಿಗೂ ಇತರ ನಾರಿಯರಿಗೂ ಆನಂದೋತ್ಸಾಹಗಳನ್ನುಂಟುಮಾಡುತ್ತಲಿದ್ದರಲ್ಲದೆ.ಸತಿಯರು ಅಂತಃಪುರದೊಳಿರೆ ಕಂಡು ಸುತರೀರ್ವರೂ ಬಂದು ನಿರ್ಭೀತಿಯಿಂದ ಕರುಗಳ ಬಾಲಗಳಂಪಿಡಿದೆಳೆಯುತ, ಕರುಗಳಕಾಲಸಕೆಳಗೋಡಾಡುತ ಬಾಲಮಂಪಿಡಿದು ಜೋಲಾಡುತ, ಕೋಲಾಹಲದಿಂ ಕರುಗಳು ಸುತ್ತಮುತ್ತಲು ಸುತ್ತಿಸುತ ಸೆಳೆಯುತ ಬಿಡದತ್ತತ್ತ ಪೋಗುತಿರೆ ಸತಿಯರುಕಂಡು ಗೃಹಕೃತ್ಯವಂ ಬಿಟ್ಟು ಬಂದೆತ್ತಿಕೊಂಡಪ್ಪಿ ಮುದ್ದಿಸಿದರಾಬಾಲಕರಂ

ರಾಗ ||

ನಂದಗೋಪಾಲಕ ಬಾಲಿಕಾ ಬಾಲಕರಿಂದೊಡಗೂಡುತ ಲಾಡಿದನು । ಸುಂದರ ಬಲರಾಮನಿಂದ ಕೂಡುತ ಮಂದಿರದೊಳಗಾನಂದದಲಿ || ಪಲ್ಲ || ಉರಿಯುವದರಿಯದಪರಿಯಂತೆ ಹರಿತಂದು ಉರಿಗೊಳ್ಳಿಪಿಡಿಯುವನು । ಗರಳವ ತಿಳಿಯದೆ ಉರಗನ ಪಿಡಿತಂದು ಹರುಷದಿಂ ಕ್ಷೀರವನೆರೆಯುವನು ||೧|| ಗೂಳಿಯ ಶೃಂಗವ ಪಿಡಿದು ಜೋಲಾಡುತ ಗಾಳಿಯಪಿಡಿಯ ಪೋಗುವನು| ಕೋಳಿಯ ಕರೆತಂದು ಕೋಣೆಯೊಳಿಂಬಿಟ್ಟು ಹೋಳಿಹುಣ್ಣಿಮೆವಾದ್ಯಗೈಯ್ಯುವನು || ೨ || ಶ್ವಾನದ ಮರಿಯನು ಕೋಣೆಗೆ ಕರೆತಂದು ಬೋನವಪಾಯೊಳಗೆ ಬಸಿಯುವನು । ಕೋಣನಕಂಡರೆ ಕಾಲಿನ ಕೆಳಗಿಂದ ಗಾಣದ ಮರಿಯಂತೆ ಸುತ್ತುವನು || ೩ || ಜಲವನ್ನು ನೋಡುತ್ತ ತಲೆಯನ್ನು ಕಾಣುತ ಮುಳುಗುತ ಪಿಡಿಯ ಪೋಗುವನು । ಒಲೆಯಮೇಲ್ ಕುದಿಯುವ ಜಲದೊಳು ಕೈಯಿಟ್ಟು ಕುಳಿತು ಬಾಯಾರೆ ಚಪ್ಪರಿಸುವನು ||೪|| ಹಕ್ಕಿಯ ಕಂಡವಲಕ್ಕಿಯ ಹಾಕುತ ರೆಕ್ಕೆಯ ಕೈಯಲಿಪಿಡಿಯುವನು । ಕುಕ್ಕುಟ ಕುರವಕಪಕ್ಷಿಗಳಂದದಿ ಕೋಕೇಯನ್ನುತ ಕೂಗುವನು ||೫|| ಮುಳ್ಳುಕಲ್ಲೆನ್ನದೆ ಕಳ್ಳಿಯ ಬೇಲಿಯೊಳೆಲ್ಲೆಲ್ಲಿಯು ತಿರುಗುತ್ತಲಿಹನು । ಫುಲ್ಲನಾಭನು ನಿಂತಲ್ಲಿ ತಾನಿಲ್ಲದೆ ಒಲ್ಲದ ಚೇಷ್ಟೆಯ ಮಾಡುವನು ||೬|| ಕ್ರೀಡಿಸುತಾಡುತ ನೋಡುತ ಪಾಡುತ ಗಾಡಿಗರಾಟವನಾಡುವನು । ನಾಡಿಗೆ ಪುಲಿಗಿರಿರಾಜರಾಮಾನುಜ ವಿಠಲವೆಂಕಟನಾಯಕನು ||ನಂದ || ೭ ||

|| ವ ಚ ನ ||

ಇಂತು ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನು ಬಲಭದ್ರ ಸಹಿತ ಸಂಗಡಿಗರೊಡಗೂಡಿ ಗೋಕುಲದ ತರುಣಿಯರಿಗಾನಂದವಂ ಬೀರುತ್ತ ಕ್ರೀಡಿಸುತ್ತಿದ್ದನು.

ರಾಗ || -

ನೋಡಿರೆ ನೋಡಿರೆ || ಪ || ನೋಡಿರೆನಂದಯಶೋದಾನಂದನಾಡುವ ಲೀಲೆಗಳ । ಆಡುವ ಮಕ್ಕಳ ಕೂಡುತ ಮನೆಮನೆಗೋಡಿಯಾಡಿ ಹರಿದಾಡುವ ಮೋಡಿಯ || ಅ || ಚಂಡು ಬುಗರಿಯಾಟವಾಡುತ- ಚಿಣ್ಣೆಯಕೋಲು—ಗಂಡುಗೋಲಿ ಗಾಲಿಯುಡುತ ಉಗ್ಗಡಿಸುತ್ತ || ಕಂಡವರಹೆಣ್ಣಿನೆದೆ ಗುಂಡಿಗೆ ಸರಿಯಾಗಿ ಪುಟಚಂಡನೆಸೆದು ಕಾಣದಂತೆ ಪುಂಡು ಕಲಿತುಕೊಳ್ಳುವನ || ನೋಡಿರೆ || ೧ || ಪಾಲು ಮೊಸರು ಸೂರೆಗೈಯುತ—ಮನೆಮನೆಯೊಳು—ನಾಲಡೆ ಸಂಚಾರಮಾಡುತ । ಆನಂದಪಡುತ || ಬಾಲರೊಂದಿಗೆ ಬಾಲನಾಗಿ ಮೇಲೆಬಿದ್ದು ಲೋಲನಾಗುತ ಪೇಳಲಾಗದ ರೀತಿಯಿಂದ ಲೀಲೆಯಂ ತೋರುತಲಿರ್ಪನ || ೨ || ಸದ್ದುಮಾಡದೆ ಸಂಚರಿಸುತ—ಮನೆಮನೆಯೊಳು—ಕದ್ದು ಪಾಲ್ಬೆಣ್ಣೆ ಮೆಲ್ಲುತ || ಜೃಂಭಿಸುತ ಎದ್ದುಬಂದುನೋಡಲು ಸಮೃದ್ಧಿಯಾಗಿತಿಂದು ಮನೆಯೊಳಗಿದ್ದವರ ಬೈದು ಕಡೆಗೆ ಕದ್ದುಪೋಗುವ ಕಳ್ಳಕೃಷ್ಣನ || ೩ || ಮೂಡಿಬರುವ ಚಂದ್ರನಂದದಿ — ಬಲರಾಮನೊಡ— ಗೂಡಿ ಕಾಮಕೋಟಿತೇಜದಿ || ಸುಮ್ಮಾನದಿ || ಕೂಡುತ ಸಂಗಾತಿಯರ ನೋಡುತ ಬೇಕಾದುದನ್ನು । ಬೇಡುವೆನು ನೀ ನೀಡು

ಪೆಯಾ ಮಾಡು ಸತ್ಯವೆಂಬುವನ ‖ ೪ ‖ ಗೊಲ್ಲರ ಸಂಸಾರದವನ—ಕೋಟಲೆಘನ—ವೆಲ್ಲ ಗೋಪೀಯಲ್ಲಿ ಪೇಳೋಣ ‖ ಇನ್ನೇನು ಮೌನ ‖ ಎಲ್ಲರೂ ರಾಮಾನುಜವಿಠಲ ಪುಲಿರಾಜಶೈಲ ವಲ್ಲಭನ ಲೀಲೆಗಳಂ ನಿಲ್ಲದೆ ಪೇಳೋಣವಮ್ಮ ‖ ೫ ‖

‖ ವ ಚ ನ ‖

ಇಂತಿರುವಷ್ಟರೊಳ್ ಪುಟ್ಟಹೆಮ್ಮಕ್ಕಳಂಸೇರಿ ಶ್ರೀಕೃಷ್ಣನಿಗೆ ಅಟ್ಟಳಿಯಾಟಗಳಂತೆ, ಚಿಟ್ಟಕಲ್ಲಿನ ಒಲೆಯಂತೆ, ಚಿಟ್ಟಿಯಪಾತ್ರವಂತೆ, ಸಟ್ಟುಗಪ್ರಸವುಟಂತೆ. ಸೆಲ್ಲೊಟ್ಟಿಸೋಗರ, ಕುಟ್ಟಿದ ಅವರೆಯ ಹೊಟ್ಟಿನಬೇಳೆ, ಮುಟ್ಟದ ಕಲ್ಲು ಬಗ್ಗರೆ ಪಲ್ಲಕಾಯಿ, ಕುಟ್ಟಿದರಾಗೀ ಹಿಟ್ಟಿನನೀರು ಹಾಲುಮೊಸರು ತುಪ್ಪದಕೋಡಿ;—ಕುತುಕುತುಕುಂಬಾರವಾಯಿತು, ನೆಲದಲಿ ಪಾಕೆ, ಬಲುಕೋಲಾಹಲದಿ ಅಟ್ಟುಂಡುತಿಂದು ಬ್ಯಾಯೆಂದು ಬೇಕೆಂದು ತೇಗದತೆಂದಿ;— ಸೃಷ್ಟಿಗೆಚ್ಚರಿಯೆನುವಂತೆ ರಾತ್ರಿಯಾದಂತೆ ಚಿಟ್ಟಮನೆಯಂತೆ ಮಲಗುವುದಂತೆ ಗೇರಸಿಯ ಮರೆ ಮೂಡಿದಮನೆ, ಹರಚಾಚಾಪೆಯುವಂತೆ, ಕಿರಿಕಿರಿಗೆಯ ಹೊದಪು, ಹರಕು ಸೀರೆಯ ಹಾಸು, ಇದರೊಳ್ ಚಿಕ್ಕಪೆಣ್ಮಕ್ಕಳ ಕೂಡಿ ಮಲಗುವುದಂತೆ; ಅಲ್ಲಲ್ಲಿಗೆ ಸರಿಯಾದಂತೆ ಸುಪ್ಪಿ ಸುಪ್ಪಿ ಸುವ್ವಾಲೆಯಂತೆ, ಹೇಳುವುದೇನಂತೆ ಆಗಲೀ ಕೃಷ್ಣನಿಗೆ ಮಕ್ಕಳಿಗೆ ಈಪರಿಯಚಂತೆ; ಉಗನಿಯ ಮಡಪಿನವೀಳ್ಯ ಬುಗರೀಕಾಯಿಯ ಗೋಟಡಿಕೆ, ಸೊಗಸಿನ ಗೋಡೆಯಸುಣ್ಣ ಭಗಿನೀಕಡ್ಡಿಲವಂಗ, ತೊಗರಿಬೇಳೆಯ ಪತ್ರೆ, ತಿಗರಿದ ಸಗಣಿಯಗಂಧ, ಕುಂಬಳದಹೂವು, ಉಗುಳಿನಪನ್ನೀರು, ಹಗರಣ ಶೋಭನದ ಸಂಸಾರ, ಅರಿಯದ ಮುದ್ದುಮಗು ಕೃಷ್ಣನಿಗೆ ನೆರೆಯದ ಪೆಣ್ಮಕ್ಕಳೊಳುಕೂಡಿ ಶೋಭನವಂತೆ ಸುಖದಂತೆ ಬೆಳಗಾದಂತೆ, ಮರಿಬಸುರಂತೆ ಬಳೆತೊಡಿಸುವಂತೆ, ಸೀಮಂತವಂತೆ ನವಮಾಸವಾದಂತೆ ಹಡೆದಳು ಕೂಸ, ಗಂಡಾಯಿತು, ಹೆಣ್ಣಾಯಿತೆಂದು ಗುಂಡುಕಲ್ಲುಗಳ ನಾಲುಸಾಲಾಗಿರಿಸಿ ನೋಡುತ, ಸಂತಾನಹೆಚ್ಚಿ ಸಾವಿರಮನೆಯಾಗುಯೆಂದು ಹರಸುತಲಿಹರಂತೆ; ಶ್ರೀಕಾಂತನಿಗೇನು ಸಂತೋಷವೋ ಈಪರಿಯಟ್ಟಳಿಯಾಟದಲಿ ಕೃಷ್ಣನಾಡುವನಂತೆ ಮರುದಿನದಂತೆ ಮರಿಶೋಭನವಂತೆ, ಆಶ್ಚರ್ಯವಂತೆ, ಮರಿಮಕ್ಕಳು ಶೋಭನಮಾಡುವಂತೆ ಲೋಕದವರಂತೆ.

ರಾಗಾ ‖

ಶೋಭನಮಟ್ಟಳಿ ಶೋಭನವೆ । ಶೋಭನ ಚಿಕ್ಕ ಹೆಮ್ಮಕ್ಕಳು ಕೃಷ್ಣಗೆ ಶೋಭನವೋ ಶುಭಶೋಭನವೆ ‖ ಪ ‖ ಪುತ್ತಳಿ ಬೊಂಬೆಯ ಪೋಲುವ ಚಂದದಿ, ಚಿತ್ತಲೆಯಿರುವ ಹೆಮ್ಮಕ್ಕಳೊಳು । ನಿತ್ಯದಿಗೋಪಿಯ ಮೊಲೆಯುಣ್ಣುವಬಾಲ ಉತ್ತಮಕೃಷ್ಣ ಗೋವಿಂದನಿಗೆ ‖ ಶೋಭನವೋ ‖ ೧ ‖ ಚಾಪೆಯ ಹೊದಿಸಿದ ಅರಮನೆಯೊಳಗೆ ದೀಪವು ಸೂರ್ಯನ ಬೆಳಕೆನುತ । ಕೋಪಿನಕಟ್ಟದ ಗೋಪಿಯಸುತನಿಗೆ ಗೋಪಕುಮಾರಿಯರೊಳು ಗಳಿಗೆ ‖ ೨ ‖ ಕುಟ್ಟಿದ ಚಿಗುಳಿತಂಬಿಟ್ಟುಗಳಂದದಿ ಚಿಟ್ಟಬೆಲ್ಲವು ಬಾಳೆಹಣ್ಣು ಕೊಟ್ಟು । ತಟ್ಟೆಯೊಳಾರತಿ ಯೆತ್ತಿರೆಪುಲಿಗಿರಿ ಕೃಷ್ಣರಾಮಾನುಜವಿಠಲಗೆ ‖ ಶೋಭನವೋ—ಶುಭ—ಶೋಭನವೆ ‖ ೩ ‖

‖ ವ ಚ ನ ‖

ಇಂತು ಕೃಷ್ಣನಟ್ಟಳಿ ಘನವಾಯಿತು ಗೋಕುಲದಿ ಮಟ್ಟಮೀರಿತು ದಿನದಿನದಿ, ಪಟ್ಟದದೊರೆ ಪರೀಕ್ಷಿತನಕೇಳಷ್ಟರೊಳ್ ಗೋಪಿಯರೆಲ್ಲಸೇರಿ ಕೃಷ್ಣನ ದಿವ್ಯಕೌಮಾರ ಚಾಪಲ್ಯ ಬಾಲಲೀಲೆಗಳಂ ತಾಯಿ ಗೋಪೀದೇವಿಗೆ ಪೇಳುವೆವೆಂದು ಬಂದು ದೂರುವರದೆಂತೆನೆ—

ರಾಗಾ ‖ (ಚಿಕ್ಕವನೇ ಇವನು)

ಕೇಳೇ ಗೋಪ್ಯಮ್ಮ—ಕುಮಾರನ ಹಮ್ಮ ಕೇಳೆ ಗೋಪ್ಯಮ್ಮ ‖ ಪ ‖ ಕೋಳಿಕೂಗುತಬಂದು, ಕರುಗಳ, ಪೇಳದೆ ಬಿಟ್ಟುಣಿಸುತ್ತ। ಬಾಲಮಂಡಿಯನಿಟ್ಟು ತಾನು, ಪಾಲನುಂಡು ಪೋಪನೀಪರಿ ‖ ಕೇಳೆ ‖ ಅನು ‖ ಚಿಕ್ಕಕರುವನ್ನು ಬಿಟ್ಟಿಣಿಸಿ ಸಿಕ್ಕದೋಡುವನು ।—ಕಿರ್ರೀಥವಗೂಡಿ । ನಕ್ಕು ಹಾಸ್ಯವನು । ಕಳ್ಳರತೆರ । ಪೊಕ್ಕು ಮನೆಯನ್ನು । ನೋಡುತಲಿರೆ ‖ ಸಿಕ್ಕೆ ಪಾಲ್ಮೊಸರತಾ ನಕ್ಕರದಲ್ಲಿ ತಿಂದು । ಚಿಕ್ಕಮರಿಗಳಿಗಿಕ್ಕಿತಿನ್ನಿಸಿ ಸಿಕ್ಕದಿರೆ ಪಾಲ್ಮೊಸರ ಕೋಪದಿ, ಕುಕ್ಕಿಭಾಂಡವ ಚಿಕ್ಕಮಕ್ಕಳನಿಕ್ಕಿಬೆದರಿಸಿ ಸಿಕ್ಕದೋಡುವ ‖ ೧ ‖ ಒಲದುಗೋಪಿಯರೂ—ಗೃಹಕೃತ್ಯದ ಗಲಭೆಯೊಳಿರಲು । ಸಮಯವನ್ನು ನೋಡಿ ನಲಿದು ತಾ ಒರಲು । ಕತ್ತಲೆಮನೆಯೊಳಗೆ ಪಾಲಿರಲು । ಭೂಷಣಾದಿ । ಥಳಥಳಿಸುವವೈಬೆಳಕು ದೀಪವೆ ಕಂಡು ‖ ನಿಲುಕದಿದ್ದರೆ ಮರದ ಪೊರಕಿನ ತಲೆಯ ಪೀಠವನೇರಿನಿಂದು । ಶಿಲೆಯಹಾರಿಸಿ ಛಿದ್ರಗೈದಾಕಳಿಸಿ ನೆಲುವಿನ ಮೊಸರ ಕುಡಿವನು ‖ ಕೇಳೆ ‖ ೨ ‖ ಚೋರರೋಪಾಯದಲಿ—ಧೈರ್ಯವಪೊಂದಿ—ಸೂರೆಗೈಯ್ಯುತಲಿ । ನಿನ್ನಿದಿರೋಳ್, ಮೇರೆಮೀರದೆಲುಮುದಕುಂಬಂತೆ, ದೂರಿಯಾಡುತಲಿ ‖ ಆಡುತಲಿರ್ಪ್ಪ ‖ ಈ ರೀತಿ ನಗಭಯಸಂಯಸಶ್ರೀಮುಖದಿಂದ ‖ ವಾರಿಜಾಕ್ಷಿಯರೆಲ್ಲ ನೋಡುತನಾರೆ ಗೋಪಿಯ ನಗೆಮುಖದಲಿ ಶೌರಿಪುಲಿಗಿರಿರಾಜ ರಾಮಾನುಜವಿಠಲನ ಮುದ್ದಿಸುತ್ತಿರೆ ‖ ೪ ‖

‖ ವ ಚ ನ ‖

ಈಪರಿಯಿಂ ಗೋಪಿದೇವಿಗೆಪೇಳಿ ಗೋಪಿಯರು ಸರಭರದಿಂ ತಮ್ಮ ತಮ್ಮ ಗೃಹಗಳಿಗೆ ತೆರಳಿದರಾ ಬಳಿಕ,—ಅಂದಿನಿರುಳೀ ಪರಿವ್ರಜದೊಳ್ ಸಾನಂದದಿಂ ದೇವೇಂದ್ರನ ದಿಗ್ವನಿತಾಮುಖ

ಮಂಡಲದಂತೆ ಚಂದ್ರಮನುದಿಸಿಮುಖದೋರೆ ಚಂದ್ರಕಾಂತವು ಕರಗಿಸೋರೆ, ಚಕ್ರವಾಕವುಸಾರೆ, ಚಿಕ್ಕಿಗಳಂಬರವೇರೆ, ಉಕ್ಕಿಸಾಗರಮೀರೆ, ಪಕ್ಷಿಗಳ್ ಗೂಡುಗಳಸೇರೆ, ನೀಲಿಯು ಜಾರೆ ಜಾರರಮನಸಸೂರೆ, ಅಮೃತದಧಾರೆಯೋಘರೆತೋರೆ; ಕುಮುದಗಳು ನಕ್ಕವು, ಕಮಲಗಳ್ ಮುಖಪೆತ್ತವು, ಕತ್ತಲೆ ಮುತ್ತಿತು ಮರೆದಕ್ಕವುಜಕ್ಕವಕ್ಕಿಗಳಿಕ್ಕೆಲದೊಳು, ದ್ವಿಜರಾಜನೊ ಖಗರಾಜನೊ ಆಖಂಡಲಗಜರಾಜನೊ,ಭೂಮಂಡಲಪ್ಪೈರಾಜನೊ,—ಆಕಾಶದ ಮುಖಮಂಡಲವೊ ಲೋಕೇಶನ ಕುಂಡಲವೊ ಈ ಲೋಕಂಗಳ ಲೋಚನಮೆಂಬಂತೆ ರಾಕಾಸುಧಾಕರಮುಖದೋರಿ ಸುಧಾಧಾರೆ ಬೀರಿ ಮುದವೇರೆ, ಶಶಿಯಾಗಮೂಡಿಬರುತಿರೆ, ಶಶಿಮುಖಿಯರಪುದನೇನೆಂಬೆ......

....*

ಈಪರಿಯೊಳ್‌ಚಂದ್ರೋದಯವಾಗೆ ಗೋಪಿದೇವಿಕೃಷ್ಣನನ್ನೆತ್ತಿಕೊಂಡುಬಂದು ತೋರಿದಳು, ಮಂದಿರಾಂಕಣದಿ ಚಂದಮಾಮನ ನೋಡೆಂದಳಾಕ್ಷಣದಿ,ಚಿಣ್ಣನುನೋಡಿ, ಚಂದ್ರನಂ ತೋರಿ ಈ ಹಣ್ಣುತಾರಮ್ಮಯ್ಯ ಎಂದುಬೇಡಲು ಜನನಿನುಡಿದಳು—ಹಣ್ಣಲ್ಲವೋಕೃಷ್ಣ ಈತನು ತಣ್ಣನೆಯತಂಪುಕೊಡುವ ಬಣ್ಣದಿಮೆರೆವ ಹುಣ್ಣಿಮೆಯ ಚಂದ್ರನೀತನಂ ಕಣ್ಣಾರೆ ನೋಡಯ್ಯ ಕೃಷ್ಣರಾಯ ॥

ರಾಗಾ॥ (ಫಲವನೆರೆದರು)

ಚಿಣ್ಣನೋಡೆಲೊ ಚಲುವನಾದ—ಚಂದಮಾಮನ ॥ಪ॥ ಹುಣ್ಣಿಮೆಯಂತೆ ಚಿಣ್ಣನಿನ್ನ ಕಣ್ಣಿಗೆಸೆವ ಬಣ್ಣದಪನ ॥ ಅನು ॥ ಇಂದುವದನ ನಿಂದುಬರುವ ನಿಂದು ಈತನು । ಚಂದದಿಂದ ಚದುರಬರುವ ಚಂದಮಾಮನು ॥ ಮಂದರಾದ್ರಿ ಮಥನದಲ್ಲಿ ಮುದದಿಜಾತನು । ಮಂದಿಗಳಿಗೆ ಮುದವಕೊಡುವ ಬಂಧು ಪ್ರೀತಭಾಗ್ಯದಾತ ॥ ೧ ॥ ಎಂದಮಾತಕೇಳಿ ತಾರೆಯೆಂದನಾಕ್ಷಣ—ಇಂದು ಎನ್ನ ಕೈಗೆತಾರೆ ಅಮೃತಕಿರಣನ । ಮಂದಿರದೊಳಿಟ್ಟುಕೊಂಬೆ ಮಧುರಕಿರಣನ ॥ ಎಂದೂ ಕಾಣಲಿಲ್ಲವಮ್ಮ ಇಂದಿನಂತೆ ಈತನನ್ನು ॥ ಇಂದು ಎನ್ನ ಕೈಗೆತಾರೆ ಚಂದಮಾಮನ ॥ ೨ ॥

ಕರದಲ್ಲಿ ಬರುವುದಂತೆ, ಬರಿದೆ ಭ್ರಾಂತಿಯಾಕೆ ಬಹನೆ ಗಗನಧಾಮನು। ಅರಿಯದವನು ನೀನು ಅವನು ಸಾರ್ವಭೌಮನು ॥ ಕರೆಯೆನೀನು ಬರುವನೇನೋ ಲೋಕಾರಾಮ ಚಂದ್ರಮಾಮ ॥ ಚಂದದಿಂದ ನೋಡೊ ಕೃಷ್ಣ ॥ ೩ ॥

ತಾಯಮಾತುಕೇಳಿ ಕೃಷ್ಣ ಸನ್ನೆಮಾಡಿದ ಬಾಯಿಮಾತಿಗೆ ಶಿಶುವಕೈಗೆ ಶಶಿಯು ಸೇರಿದ ॥ ಕಾಯವನ್ನು ಮರೆತುತಾಯಿಬೇಳೆ ನೋಡಿದ ॥ ಮಾಯಕಾರಮಹಿಮೆತೋರಿಬೇಗ ಶಶಿಯ ಕಳುಹಿದಾ । ಚಂದ್ರ ನಾಗಳೆಂದಿನಂತೆ ಗಗನಸೇರಿದ ॥ ೪ ॥

ನಂದನರಸಿಯೆಂದಿನಂತೆ ಮರೆತಿಳಿದು ಎದ್ದುನಿಂತಳು । ಚಂದ್ರಬಂದುತೆರಳೆ ಆನಂದಪಟ್ಟಳು । ಕಂದನನ್ನು ಕರೆದು ಕೊಂಡು ಮುದ್ದುನಿಟ್ಟಳು । ಬಂಗಾರುಪುಳಿಗೀರಿತರಾಮಾನುಜಾರ್ಯ ವಿಠಲನನ್ನು ಸುಂದರಾಂಗಿ ನೋಡಿ ಆಶ್ಚರ್ಯಪಟ್ಟಳು ॥ (ಎಂದಿನಂತೆ ಕಂದನಲ್ಲವೆಂದು ಬರಿದೆಭ್ರಾಂತಿಯೆಂದು ಸುಂದರಾಂಗಿಯಾಶ್ಚರ್ಯಪಟ್ಟಳು) ॥ ೫ ॥

॥ ವ ಚ ನ ॥

ಇಂತು ಸುಂದರಾಂಗಿಯಾಗೋಪಿ, ಕಂದನ ಮಹಿಮೆಯಂ ನೋಡಿ ಆಶ್ಚರ್ಯಗೊಂಡು ಮಗನ ಮಹಿಮೆಗಳಂ ಬಣ್ಣಿಸುವಳದೆಂತೆನೆ—

ರಾಗಾ॥ ನೀಲಾಂಬರಿ॥

ಸುತನಾಟಗಳನು ನೋಡಿದರೆ ಅದುಭುತವಾಗಿದೆ ಕಾಣಿರೇ ಪೊಗಳಿದರೆ ॥ ಪ ॥ ಮಗನೆಂಬುದು ಭ್ರಮೆಯಮ್ಮ—ಬರಿ—ಮಗುವಲ್ಲವು ಮಾಯದ ಮಗುವಮ್ಮ । ಹಗರಣವಾದರೆ 'ಘನಪಮ್ಮ'—ಇವ—ಜಗದಾನಂದನು ಪರಬೊಮ್ಮ ॥ ೧ ॥ ಶಿಶುವೆನ್ನುತ ಶಶಿಯನು ತೋರಿದರೆ ಈ ಹಸುಮಗು ಕೈಯನು ನೀಡಿದರೆ ॥ ಪುಸಿಯಲ್ಲದೆ ಶಶಿಬರಬಹುದೆ—ಈ—ವಿಷಯವ ನೋಡಲು ಇವ ಶಿಶುವಹುದೆ ॥ ೨ ॥ ಅರಿಯದೆ ಮಗುವೆನುತಿದ್ದೆ—ಪುಳಿಗರಿ ಶಿರಿದೊರೆಯನು ಮರೆತಿದ್ದೆ॥ ಬರಿಭ್ರಾಂತಿಯ ನಾಮಿಗೆಗೆದ್ದೆ—ಘೋರ—ವರರಾಮಾನುಜವಿಠಲನಮರೆಜಿದ್ದೆ ॥ ೩ ॥

॥ ವ ಚ ನ ॥

ಇಂತು ತರಳನ ಮಹಿಮಾತಿಶಯವನ್ನರಿಯಲಾರದೆ ವಿಸ್ಮಯಪಡುತಿರೆ, ಹರಿ, ಮಾಯೆಯಂ ಬೀರೆ ಯಶೋದೆ ಮತ್ತೆ ಪುತ್ರವ್ಯಾಮೋಹಕ್ಕೆಕಟ್ಟುಬಿದ್ದು ಸುತನಂಪಿಡಿದೆತ್ತಿ ಮುದ್ದಾಡುವಳದೆಂತೆನೆ—

ರಾಗಾ ॥ (ಎಷ್ಟೆಂದು ಹೇಳಬೇಕೆ)

ಬಾರೊಬಾರೆನ್ನ ಧೊರೆಯೆ— ಭಾಗ್ಯದಸಿರಿಯೆ — ಬಾರೆನ್ನ ದೊರೆಯೆ ॥ ಪ ॥ ಬಾರೊಮುರಾರಿಯೆ ಬಾಲಕಧೊರೆಯೆ । ತೋರಿಸುನಿಜಮುಖ ವಾರಿಜದೊರೆಯೆ ॥ ಅನು ॥ ಚಿಣ್ಣ ಬಾರಯ್ಯ ಚಿಂತಾಮಣಿಯೆ— ಪಾಲ ಸುಣ್ಣ ಬಾರೈಯೆನ್ನರಗಿಣಿಯೆ ॥ ಕಣ್ಣಾರೆನೋಡಿ ಧನ್ಯಳಾಗುವೆ ದೀನರಧಣಿಯೆ ॥ ಬಣ್ಣಿಸಲೆನ್ನಳವಲ್ಲವೊ ಧಣಿಯೆ, ಕಣ್ಣಿನ ಪುಣ್ಯದ ಚಿನ್ನದ ಕಣಿಯೆ ॥ ಬಾರೊ ॥ ೧ ॥ ಬೇರೊಂದು ಭಾವವ ಬಳೆಸಲಾಸರಿಯೇ ಭಾವಿಸಿನೋಡೆ—ಈರೇಳು ಜಗದೊಳಗಾರುಸರಿಯೆ—ಸರಿಯಿಲ್ಲ ನಿನಗೆ—ನಾರಾಂಶಸಂಗತಿ ನಿಗಮದಿಮೆರೆಯೆ॥ ಸಾರಿದಸಾರ ವಿಚಾರವತಿಳಿಯದೆ ತೋರಿದೆಕುಲಕೆ ಸುಧೀರ

* ಇಲ್ಲಿ ನಾಲ್ಕಾರು ಸಾಲುಗಳು ಅಪ್ರಕೃತವೂ ಅಸಮಂಜಸವೂ ಆಗಿ ತೋರಿದುದರಿಂದ ಬಿಟ್ಟುಬಿಟ್ಟಿರುವೆವು. ಸಂ.—ನಂ.

ಕುಮಾರನೆ ॥ ಬಾರೊ ॥ ೨ ॥ ಮುದ್ದುತಾರ್ಕ್ಷ್ಯ ಮೋಹನ ಮೂರ್ತಿ—ಮಂಗಳಮೂರ್ತಿ—ಎದ್ದು ಬಾರೈಯನ್ನಯ ಕೀರ್ತಿ— ಆನಂದಮೂರ್ತಿ—ಮುದ್ದಾಸೆ ಮೂಜಗಚಕ್ರವರ್ತಿ । ಪದ್ಮವಿಲೋಚನ ಪುಲಿಗಿರಿ ಶ್ರೀನಿಧಿ । ಅದ್ಭುತಮಹಿಮ ರಾಮಾನುಜ ವಿಠಲ ॥ ಬಾರೊ ॥ ೩ ॥

॥ ವ ಚ ನ ॥

ಇಂತು ಗೋಪಿದೇವಿ, ಸುಕುಮಾರನಂ ಮುದ್ದಾಡಿ ತೊಟ್ಟಿಲೊಳ್ ಮಲಗಿಸಿ ಪಾಡಿತೂಗಿ, ಸುಖನಿದ್ರೆಗೈದು ಬೆಳಗಾಗಲು ಬಣ್ಣಿಸುತೆತ್ತರಿಸಿ ಕರದು ಮುತ್ತಿಟ್ಟು ನೀರೆರೆದು ಚಿನ್ನದಕ್ಷತೆಯಿಟ್ಟು, ಮುದದಿ ಸಣ್ಣನೀರಾಜಿಯುಂಗಿಯುಂತೊಡಿಸಿ, ಮಲ್ಲಿಗೆಮೊಗ್ಗೆ ಮುಡಿಸಿ ಕಣ್ಣಿಗೆ ಕಾಡಿಗೆಹಚ್ಚಿ ಮುತ್ತಿನಮಲಕು ಮೂಗಾಯಿ ನವರತ್ನದಪದಕ ಪುಲಿಯುಗುರುಬಾವುಲಿ ಕೆತ್ತಿದ ಸರಕೇಸರಿಯ ಪಂಜಾರದೊತ್ತಿಗೆ ವೀರನಾರಾಯಣ ತಾಳಿಯ ನಳವಡಿಸಿ ಮೃಗಮದತಿಲಕವತಿದ್ದಿ ಬೀದಿಗೆ ಬಿಟ್ಟಳು ಮಗನಂ ಯಶೋದೆ

ರಾಗ॥ ॥ (ಸಲಿದಾಪೆನ್ನ ನಾಲಿಗೆಮೇಲೆ)

ಬರುತಾ ಶ್ರೀಕೃಷ್ಣ ಮನೆಮನೆಪುಗುತ- ಪುರದೊಳಗಿರುವ ನೆರೆಹೊರೆಗೋಪರ ತರಳರದೊರೆ ॥ ಬರುತಾ ॥ ಪ ॥ ಬಂದಾ ಮನೆಮನೆಯೊಳಗಾಡುತನಿಂದ — ಆನಂದದಿಂದ --- ನಂದ ಗೋಪಿಯುಕಂದಮುಕುಂದ ॥ ಮಂದಿರದೊಳಗಿಹ ಕಂದಲ ಮೊಸರನುವಿಂದಲಿಸವಿದಾ ನಂದವಪಡುತ ॥ ೧ ॥ ಮುಂದಾ ನವನೀತವತಿಂದ ಕಂದ--ಆ ಮನೆಯಿಂದ ಬಂದನಿನ್ನೊಂದು ಮನೆಯೊಳು ನಿಂದ ॥ ಕೆಂದಾವರೆ ಅಡಿಯಿಂದ ಸಂತಯಿಸುತ ಸುಂದರಿಯರ ಮರೆಯಿಂದಲಿ ಕರೆಯುತ ॥ ೨ ॥ ಸಾಕಿಗಾರರ ಸಂಗಡಲಿರುತ—ಸೊಬಗಿನ ಮಕ್ಕಳಾಟವ ಬೇಗ್ಯ ಲೂಟಿಗೈದ ॥ ಕೋಟಿಕಪಟಘನ ನಾಟಕಿ ಪುಲಿಗಿರಿ ಕೋಟಿ ವೆಂಕಟರಾಮಾನುಜವಿಠಲ॥ ಬರುತಾ ॥ ೩ ॥

॥ ವ ಚ ನ ॥

ಇಂತು ವ್ರಜದ ನಾರಿಯರಿಗೆ ಕೃಷ್ಣನ ಕೋಟಲೆ ಘನವಾಯಿತು; ಲೂಟಿಯಂ ತಾಳಲಾರದೆ ಯಶೋದೆಯಲ್ಲಿಗೆ ಮಗನಂ ದೂರಲು ಬಂದರು. ರಾಗಾ ॥

ಸೈಯೋ ಇದು ಸೈಯೆಗೋಪಿ—ಸೈಯುವ್ವಾಸೈಯೆ ॥ ಪ ॥ ಮೆಯ್ಮರೆದು ಮಲಗಿದ್ದರೆ, ತ್ಯೆಯ್‌ತ್ಯೆಯೆಂದು ಕುಣಿಯುತ ಬಂದು । ಮೆಯ್ಮೇಲೆಬಿದ್ದುಕುಚವಕೈಯೊಳ ಪಿಡಿಯುವದು ॥ ಸೈಯೆ ॥ ೧ ॥ ಬಾಲಕರ ಕೂಡಿಕೊಂಡು—ಆಲಯದೊಳಗೆ ಬಂದು । ಮೇಲೆಕಾಣದಂತೆ ಇದ್ದ ಪಾಲುಮೊಸರು ಕದ್ದು ತಿಂಬದು ॥ ಸೈಯೆ ॥ ೨ ॥ ಕೈಮುಗಿವೆ ಗೋಪಿ ನಿನಗೆ, ಸೈ ಮಗನಿಗೆ ನೀತಿಪೇಳೆ, ಪ್ರಿಯಪುಲಿಗಿರಿ ಶ್ರೀನಾಥ ಅಪ್ರಮೇಯ ರಾಮಾನುಜವಿಠಲಗೆ ॥ ೩ ॥

॥ ವ ಚ ನ ॥

ಇಂತು ದೂರುತ್ತಿರುವರಂ ಕುರಿತು ಗೋಪಿದೇವಿಯು ನುಡಿವಳದೆಂತೆನೆ—

ರಾಗಾ ॥ ಸೌರಾಷ್ಟ್ರ ॥

ಯಾತಕಮ್ಮ ದೂರುವಿರಿ—ಪ್ರೀತಿಯಿಂದ ನಿಮ್ಮ ಮನೆಗೆ- ನಾಥಕೃಷ್ಣ ಬಂದರೆಷ್ಟೊಂದು ದೂರುವಿರೆಂದು ।. ಬಾರಿಬಾರಿಗೆಲ್ಲರು ಒಂದು ॥ ಪ ॥ ಬಂದರೇನೂ ಭಯವಿಲ್ಲ ಮಂದಿರಕೆ ಬಹುಮಂದಿಯಿಂದ ಕೂಡಿಕೊಂಡು ಬರುವನು । ಪಾಲು ಮೊಸರು—ತಿಂದು ತಿಂದು ಚೆಲ್ಲಿಬಿಡುವನು । ಈ ಸುಕುಮಾರನು—ಸುಂದರಿಯರ ಬಂದು ಕರೆವನು ॥ ೧ ॥ ಕೊಟ್ಟಹಾಲು ಕುಡಿಯದಂತೆ ಒಟ್ಟಲೊಳಗೆ ಇಟ್ಟುಪೋಪ। ನಿಷ್ಠೂರವೇತಕೆ ಗೈಯ್ವಿರೆ, ನೀರೆಯರೆ॥ ಪುಟ್ಟಕೂಸ ಪುಂಡು ಮಾಳ್ಪರೆ ॥೨॥ ಸುಳ್ಳುಮಾತಪೇಳ್ವರಲ್ಲ ಕಳ್ಳಕೃಷ್ಣಕಾಣೆ ಗೋಪಿ । ನಿಲ್ಲದೆ ನೀಬಂದು ನೋಡಮ್ಮ—ಓ ಗೋಪ್ಯಮ್ಮ—ಚೆಲ್ವೆಯರ ಸನ್ನೆಗೈವನಮ್ಮ ॥ ೩ ॥ ಚೆಲ್ವೆಯರಸನ್ನೆಗೈಯಬಲ್ಲನೇನೆಯೆನ್ನ ಕೂಸು । ಇಲ್ಲದಮಾತನೇಕೆಪೇಳ್ವಿರೇ—ಮಕ್ಕಳಮೇಲೆ- ಸುಳ್ಳಪೇಳಬೇಡಿಕಾಣಿರೆ ॥ ೪ ॥ ನೆರಗುತೆಗೆದುನೋಡೆಗೋಪಿ- ಬರಿದೆಪೇಳ್ವರುಂಟೇನಮ್ಮ । ಕರದವುಗುರಘಾಯನೋಡಮ್ಮ—ಪುಸಿಯೇನಮ್ಮ—ತರುಣಿ, ಮಗನ ಮಹಿಮೆ ನೋಡಮ್ಮ ॥ ೫ ॥ ಇನ್ನುಮೇಲೆಬಂದರಿವನ ಎನ್ನಬಳಿಗೆ ಕರೆದು ತನ್ನಿ । ಮನ್ನಿಸಿ ಬುದ್ಧಿಯ ಪೇಳ್ವೆನು—ಶ್ರೀಪುಲಿಗಿರಿ—ರನ್ನ ರಾಮಾನುಜ ವಿಠಲಗ ॥ ೬ ॥

॥ ವ ಚ ನ ॥

ಇಂತು ದೂರಿದಗೋಪಿಯರಿಗೆ ಯಶೋದೆಯುತ್ತರವಿತ್ತು ಕಳುಹಲು, ಗೋಪಿಯರು ತೆರಳೆ, ಯಶೋದಾನಂದನನವರ ಬೆನ್ನಟ್ಟಿಬಂದನು; ಮನೆಮನೆಯಂಪೊಕ್ಕು ನವನೀತವಂಕದ್ದು ಮೆಲ್ಲುವ ಕೃಷ್ಣನಂ ಕಂಡು ಗೋಪಿಯರು ಬೆಣ್ಣೆಸಹಿತಲೇ ಕೈಕಟ್ಟಿ ಕಂಕುಳೊಳಿಟ್ಟು ಯಶೋದೆಯೆಡೆಗೆ ಕರೆತಂದರು; ಒಳಮಂದಿರವಂಪುಗುವಷ್ಟರೊಳ್ ಗೋಪಿಯರ ಕಂಕುಳೊಳಿದ್ದ ಕೃಷ್ಣ ಮಾಯವಾಗಿರೆ, ಗೋಪಿದೇವಿಯತೊಡೆಯಲ್ಲಿ ಕುಳಿತಾಡುತಿದ್ದ ಕೃಷ್ಣನಂಕಂಡು ಲಜ್ಜಿತೆಯರಾಗಿ ಹಿಂತಿರುಗೆ, ಯಶೋದೆ ಕಂಡು, ಕರೆದು, ಬಂದಂತೆ ಹಿಂದಿರುಗುವಿರೇಕೆಂದು ಬೆಸಗೊಳಲವರು, ಬೆಣ್ಣೆಯಂಕದ್ದು ಮೆಲುತಿದ್ದ ನಿನ್ನ ಮಗನ ಕೈಗಳಂಕಟ್ಟಿ ಬೆಣ್ಣೆಯೊಡನೆ ಕರೆತರುತ್ತಿರೆ ಕೈಯೊಳಿದ್ದ ಕೃಷ್ಣನು ಕದ್ದೋಡಿದನದರಿಂ ತೆರಳುತ್ತಿರುವೆವೆಂದು ಹೇಳಿ ನಡೆದರು. ಗೋಪಿಯರು ತೆರಳಿದಬಳಿಕಲಾ ಯಶೋದೆ ಕೃಷ್ಣನಂ ಕುರಿತು, ಕಂದಕೇಳಿದೆಯೇನೊ ನಿನ್ನನಿಷ್ಟುದೂರುವರೇಕೆ ಪೇಳನೆ, ಕೃಷ್ಣನು ತಾಯ ಮುಖಮಂ ನೋಡುತ,

ನಿನ್ನ ತೊಡೆಯುಂದಿಟ್ಟತ್ತಿತ್ತ ಕದಲದಿದ್ದ ನನ್ನಮೇಲಿವರು ದೂರುವರೇಕೆ ನೋಡಮ್ಮ, ಹೊಟ್ಟೆಕಿಚ್ಚಿನಿಂದಿವರಿಂತು ಪೇಳುವರು, ಅಷ್ಟು ಅನುಮಾನವೇಕೆ ನಿನಗೆ, ಎನ್ನನೊಂದು ಪುಟ್ಟಕೋಣೆಯೊಳ್‌ಕೂಡಿ ಬೀಗವಂಹಾಕಿ ನೋಡೊಂದು ದಿನ, ಅಷ್ಟಾದರೂ ಈ ಗೋಪಿಯರುಬಂದುದೂರುವ ದುಷ್ಟತನಮಂ ನೀನೇ ನೋಡುವೆಯೆಂದನು. ಆ ಮಾತ ಕೇಳಿ ಗೋಪಿದೇವಿಯು ಕೃಷ್ಣನಂ ಸಂದುಸೇರುವೆಯ ಮಾಳಿಗೆಯೊಳ್‌ಕೂಡಿ, ಬೀಗವಂಹಾಕಿರೆ, ಅಂತರ್ಯಾಮಿ ಅನೇಕ ಕೃಷ್ಣನಾಗುತ ಗೋಪಿಯರ ಮನೆಗೆ ಬಂದು ನವನೀತವಂ ಕದ್ದುತಿಂದು ನಲಿದಾಡುತಿರೆ ಕಂಡು ಗೋಪಿಯರು ಪಿಡಿದು ಕೈಕಟ್ಟಿ ಲೆಕ್ಕವಿಲ್ಲದಕೃಷ್ಣನಾಗಿರೆ ಕರೆತಂದರೆಲ್ಲರೂ—

ರಾಗ॥ ಘಂಟಾ॥

ನಾ ಪಿಡಿದೆನು ಇವನ ನಾಪಿಡಿದೆನು ಇವನ—ನಾಪಿಡಿದೆನು ಎಂದು । ಗೋಪಿಯರೆಲ್ಲರು ನೆರೆದರು ಕರದೊಳ್ ಗೋಪಾಲನ ಕರತಂದು ॥ ಪ ॥ ಎಲ್ಲರ ಕೈಯ್ಯೊಳಗೆಲ್ಲಿನೋಡಲು ಈ ಕಳ್ಳನೆ ಇರುತಿಹನು । ಅಲ್ಲಿಹರೆಲ್ಲರು ನೋಡುತಲಚ್ಚರಿಗೊಳ್ಳುತಲಿಹರು ॥ ನಿಲ್ಲದೆಗೋಪೀದೇವಿಯಬಳಿಗೆಲ್ಲರು ಕರತಹರು । ಕಳ್ಳನಕೈಯೊಳ್ ಬೆಣ್ಣೆಸಹಿತ ಕಟ್ಟುತಲ್ಲಿಗೆ ಬಂದವರು ॥ ೧ ॥ ಗೋಪಿಯಬಳಿಯೊಳು ತೋರಲ್ಕೆತಂದರು ಗೋಪನಾರಿಯರು । ಗೋಪನರಸಿಯಬಳಿಗೈತರೆ ಗೋಪಿಯರು ಗೋಪಿಯಸುತನಿಲ್ಲದಿರೆ । ತಾಪಪಡುತತಾವ್ ಮುಖಮುಖನೋಡುತ ಕೋಪದಿ ನಿಂತಿಹರು । ಗೋಪಿಯರೇ ನೀವೇಕೆ ಬಂದಿರಿಯೆನುತಾ ಗೋಪಿಯು ಕೇಳಿದಳು ॥ ೨ ॥ ಕಳ್ಳಕೃಷ್ಣನ ಕೈಕಟ್ಟಿ ನಾವೆಲ್ಲರಿಲ್ಲಿಗೇ ಕರತರುತಿರಲೂ । ಇಲ್ಲಿಗೆ ಬರಲು ಕದ್ದೆಲ್ಲಿಯೊ ಪೋದನು ಎಲ್ಲಿಯು ಕಾಣೆನಲು ॥ ಮೆಲ್ಲನೆ ಬೀಗವತೆಗೆದು ಯಶೋದೆಯು ಚೆಲ್ವೆಯರನು ಕರೆದು । ಚೆಲ್ವಶ್ರೀಪುಲಿಗಿರಿವಲ್ಲಭಕೃಷ್ಣನನಲ್ಲಿಯೆ ತೋರಿದಳು ॥ ೩ ॥

ಕಂದ॥—ಮನೆಯೊಳಗಿಹ ಸುತನಂ ನು—
ಮ್ಮನೆದೂರುವರುಂಟೆ ಗೋಪಿಯರೆ ನೀವ್‌ಪೇಳೀ॥
ಮನೆಗೈದಿರಿ ನೆಮ್ಮದಿಯಿಂ ।
ದೆನೆ ಲಜ್ಜಿತರಾಗಿ ತೆರಳಿದರಬಲೆಯರು ತಾವ್ ॥

॥ವ ಚ ನ॥

ಇಂತು ತೆರಳಲಾ ನಾರಿಯರ ಹಿಂದೆಯೇ ನಡೆತಂದನಾ ಕೃಷ್ಣನು, ಸುಂದರಾಂಗಿಯರಂ ಸಂಧಾನಕೆ ಕರೆದನು, ನೆರೆದವರೊಡನೆ ಬೆರೆದನು, ಮೋಹವನ್ನೆರೆದನು, ಸುರಿದನುಮಧುರಸರಸೋಕ್ತಿಗಳಂ।— ಇಂತಿರಲೊಂದು ದಿನವಾ ಯಶೋದೆ ಸುತನಂ ತೊಡೆಯೊಳ್ ಕುಳ್ಳಿರಿಸಿ ಮುದ್ದಾಡುತ್ತಿರೆ, ಇಂದುವದನೆಯರೈತಂದು ದೂರುತಂದರು ನಾರಾಯಣನ ಮೇಲೆ—

॥ ಸೀಸಪದ್ಯ ॥

ಓ ನಂದ ನರ್ಧಾಂಗಿ—ಓ ಮೃದುತರಲತಾಂಗಿ । ಓಮಂದಗಜಗಮನೆ ಮಧುರಗಾನೆ ॥ ಕಾಳಾಹಿನಿಭವೇಣಿ, ಕೇಳಮ್ಮ ಕಲ್ಯಾಣಿ । ಬಾಲೆಕೋಕಿಲವಾಣಿ, ಗೋಪರಾಣಿ ॥ ಈ ಮಾತು ಕೇಳಮ್ಮ ಈನಿಮ್ಮ ಮಗುನಮ್ಮ, ಪಾಡುಪಡಿಸುವನಮ್ಮ ಆಲಿಸಮ್ಮ ॥ ಪಾಲುಮೊಸರಿನಮಾತು ಪೇಳಬಂದವರಲ್ಲ, ಬಾಲನಿವತಾನಲ್ಲ ಕೇಳುನೊಲ್ಲ ॥ ಮಾನವೆಂಬುಧನಿನ್ನಧೀನವಾಗಿದೆನಮ್ಮ, ಮಾನಮೌನವತೊರೆದು ಪೇಳ್ವೆವಮ್ಮ॥ ಪತಿಯರೂಪದಿಬಂದು ಹಿತದಿಸೇರಿದನಿಂದು, ಪತಿಯುಬಂದುದ ಕಂಡು ನಡೆದನಿಂದು ॥ ನೆರಗತೆಗೆದುಕುಚಾಗ್ರ ದುಗುರು ಘಾಯವನೋಡು । ಮಗನು ನಂಣವನೇನೆ ಮಾತನಾಡು ॥ ವೇಷವನು ಕಾಣದೆಯೆ—ಮೋಸಪೋದೆವುಕೇಳೆ । ಮೋಸಗಾರಿಕೆತಾನೆ, ಮಾನವೇನೆ ॥=॥ ಈ ತೆರದಿ ಚಿತ್ರವಿಚಿತ್ರ ಚರಿತ್ರದಿಂ । ನಾಧನಂದದಿಬಂದು ಮರುಳುಮಾಡಿ । ಪ್ರೀತಿಯಿಂ ಪೊರೆವ ಗೋಪಾಲಕೃಷ್ಣನಿಗೆ, ನೀತವೇ ನೀ ಕೇಳು ಮತಿಯಪೇಳು ॥

॥ ವ ಚ ನ ॥

ಇಂತು ದೂರಿದ ಗೋಪಿಯರವಚನಮಂಕೇಳಿ, ಯಶೋದೆಯು ನಸುನಕ್ಕು ತೊಡೆಯ ಮೇಲೆ ಕುಳಿತಿದ್ದ ಸುತನಂ ಮುತ್ತಿಟ್ಟು ಕೇಳುವಳದೆಂತೆನೆ—

ರಾಗ॥ (ಇಂಥಾಹೆಣ್ಣಿನ ನಾನೆಲ್ಲಿಯು)

ಏನಯ್ಯಕೃಷ್ಣಾ ನೀನಡೆವರೀತಿಗಳೆಲ್ಲ ನಿಜವೋ—ಪುಸಿಯೊ ಪೇಳ್ಳೈ ॥ ಪ ॥ ಮಾನಿನಿಯರುಬಂದು ಮಾನವಂತರು ನಿನ್ನ ಹೀನವಾಕ್ಯದಿ ಪೇಳ್ವರೋ—ಚೋರನು ಎಂದು ॥ ಅನು ॥ ಉದಯವಾಗಲು ಎದ್ದುನಾಗಿ— ಮನೆಯ ಕದವತೆಗೆದು ಒಳ ಪೋಗಿ—ನೀನು—ಮುದದಿಂ ಮಂದಿರದೊಳು ಪೋಗೀ—ಚೆಲ್ವ—ಮದಗಜಗಮನೆಯರ ಕೂಗಿ— ಅವರೆದೆಗೆ ಎದೆಯನೊತ್ತಿ ವದನದಿಂ ಶರದಿಂದುವದನೆಯರ ಮಧುರದಧರವ ನವಿದೆಯಂತೆ ॥ ಏನ ॥ ೧ ॥ ನೀರೆಯೋರ್ವಳು ನಿರ್ವಾಣದೊಳೂ—ನಾರಿ—ನೀರಮನೆಯೊಳಿರುತಿರಲು—ತೈಲಧಾರಣೆಯನುಮಾಡಿಕೊಡಲೂ—ಆಗ—ನಾರೀ ರೂಪದಿ ನೀನು ಬರಲು—ನೀನೇ ನೀರನೆರೆದು ಪುರುಷಾಕಾರವ ತೋರಿಸಿ ಮನಸೂರೆಗೊಂಡವನೆಂದು ದೂರುಬಂದಿದೆಯೆಂದು ॥ ೨ ॥ ಸತಿಪತಿಯರು ಏಕವಾಗಿ—ರಾತ್ರಿ—ಹಿತದಿಂ ಕೂಡಿರುತಿರಲಾಗಿ ಜಾಗ—ರತಿಯಿಂದ ಮನೆಗೆ ನೀ ಪೋಗಿ ಚೋರ—ಪತಿಬಂದನೆಂದು ನೀ ಕೂಗಿ—ತುರು—ತತಿಯ ಬಿಚ್ಚೋಡಿಸಲಾಗಿ—ಗೃಹ—ಪತಿಯುಪುಡುಕುತಲೈದೆ ಪತಿಪುಲಿಗಿರೀಶನೀನವಳ—

ಪತಿಯರೂಪದಿಸೇರಿ ರತಿಯೊಳ್ ಸಾಗಿದೆಯಂತೆ ॥ ೩ ॥

॥ ವಚನ ॥

ಇಂತು ಬೆಸಗೊಂಡ ತಾಯಿಯ ಬಳಿಯಲ್ಲಿ ಕೃಷ್ಣನು— ಅಮ್ಮ, ನಾನೊಂದಸರಿತವನಲ್ಲ, ತಮಗೆ ತಾವೇ ಚೇಷ್ಟೆಗಳಂ ಮಾಡಿ ಆಡುತಲಿದ್ದ ನನ್ನಂ ಕಾಡಿ, ಕರಕರೆದು ಮುದ್ದಾಡಿ, ಭಯಪಡಿಸಿ ಸಿಟ್ಟಿಗೇರಿಸಿ ಹಾಸ್ಯಮಾಡಿ ತಮ್ಮ ಮನಬಂದಂತೆ ನನ್ನಂ ಕುಣಿಸಿ ಪೀಡಿಸಿದ ಈ ಗೋಪಿಯರು ನನ್ನನ್ನೇ ದೂರುವರು, ನನ್ನ ತಪ್ಪೇನಿದರಲ್ಲಿ ನೀಪೇಳಮ್ಮ—ಇಂತೆಂದು ಪೇಳಲಾನುಡಿಕೇಳಿ ಯಶೋದೆ, ಗೋಪಿಯರಂ ಎಚ್ಚರಿಸಿ ಕಳುಹಿಕೊಟ್ಟಳು. ಮತ್ತೊಂದು ದಿನದೊಳ್ ಗೋಪಾಂಗನೆಯೋರ್ವಳು ಬಂದು ಕೃಷ್ಣನಂ ಕೈಯೊಳ್‌ಪಿಡಿದು ಕ್ರೀಡಾವಿನೋದಾರ್ಥವಾಗಿ ಚಂಡಿಕೆಯಂ ಪಿಡಿದೆಳೆಯಲು ಅವಳೊಡನೆ ನುಡಿದನು—

ರಾಗಾ ॥

ಕುಡುಮಿಯೆ ಉಡುಗರತಿ—ಎನ್ನೊಡಿ—ಕುಡುಮಿಯೆ ಉಡುಗರತಿ ॥ ಕುಡುಮಿಯೆ ಉಡುಸಲ್ಲೊಡಮೆಯೆಕುಡಿಪೆಂ ಅಡಿಯೇನ್ ಉನ್‌ತಿರುವಡಿಗಳೆಪುಡಿಪೆಂ ॥ ಅ ॥

ಗಟ್ಟನೀನೆಂಗರಮಟ್ಟೆ-ನಾಸರಿಂಜೇವಿಟ್ಟಾಲಟ್ಟಡಿಯಿಡಮಾಟ್ಟೇನ್ ॥೧॥ ಇಳತಿಳತ್ತೆನ್ನೈ ಶೋಳತಾದೇಯನ್ ಕಳತ್ ಉಳಕುಂ ಕಂಡೆನ್ನವಳಕಂ ॥೨॥ ಪುಲಿಮಲೆಯೊಡೆಯರ್ನ್ ತಿರುವಡಿಯಾಣೆ। ಅಡಿಯೇನ್ ಉನ್‌ತಿರುವಡಿದಾಸನ್ ॥ ೩ ॥

॥ ವಚನ ॥

ಇಂತು ರಾಧೆಯೊಡನೆ ವಿನೋದಗೈದು ವ್ರಜದೊಳ್ ಲೀಲೆಯಂ ತೋರುತ್ತಿದ್ದನು. ಇಂತಿರಲೊಂದುದಿನ ಕೃಷ್ಣನು ಆಡುತಾಡುತ್ತ ಮಣ್ಣಂ ತೂರುತ್ತಿದ್ದಂತೆಯೇ ಮಣ್ಣಮೆಲುತಿರೆ ಒಡನಿದ್ದ ಬಾಲರು ಬಂದು ಬಲರಾಮಂಗೆ ಪೇಳೆ, ಬಲರಾಮನೈತಂದು ಮಾತೆಯೊಡನೆ ಕೃಷ್ಣನು ಮಣ್ಣಮೆಲುವನೆಂದು ಪೇಳಿದನು. ಮಣ್ಣತಿಂದನೆಂಬುದಂಕೇಳಿ ಯಶೋದೆ ಪುತ್ರನ ಕರಮಂ ಪಿಡಿದು, ಭಯದಿಂದ ತನ್ನನ್ನೇ ನೋಡುತ್ತಿರುವ ಮಗನಮುಖಮಂನೋಡಿ ನಯಭಯದಿಂ ಕೇಳ್ವಳೆಂತೆನೆ—

ರಾಗಾ॥ ಸಾವೇರಿ॥

ಏನಯ್ಯಾ ಕೃಷ್ಣನೀನಡೆವ ನಟನೆಯೆಲ್ಲ ನಿಜದಿಂಮಾಜದೆ ಪೇಳು । ಏನುಕಾರಣದಿಂದ ಬೀದಿಮಣ್ಣನು ಬಹುಮಾನದಿಂ ಸವಿದೆಯೋ—ದೀನರಪರಿಯೊಳ್ ॥ ಪಲ್ಲ ॥ ಹಣ್ಣುಸಕ್ಕರೆ ಪೊಸಬೆಣ್ಣೆ ನೀಸವಿಯದೆ ಮಣ್ಣು ತಿನ್ನುವರುಂಟೆ ಮರೆಯೊಳಗೆ ॥ ನಿನ್ನ ಸಂಗಡಿಗರು ನುಡಿವ ಮಾತನುಕೇಳು ನಿಮ್ಮಣ್ಣ ಈ ಬಲರಾಮನು । ಪೇಳ್ವನು ಕೇಳು ॥ ೧ ॥ ಅಮ್ಮಲಾಲಿಸೆ ಮಣ್ಣನೊಮ್ಮೆ ಮೆದ್ದವನಲ್ಲ ಸುಮ್ಮನೆ ಸುಳ್ಳು ಪೇಳುವರೆಲ್ಲರು। ನಮ್ಮ ಬಲಭದ್ರಜ್ಞಾತಿಯು ನಿಜವುಂಟೆ ಸುಮ್ಮನೆ ನೋಡೆಯೆನ್ನ-ಬಾಯನುಮುನ್ನ ॥ಏನ್ಯಯ್ಯಾ॥೨ ॥ ಬಾಯತೆಗೆಯೆನಲು ತಾಯ ಮಾತನುಕೇಳಿ ಮಾಯಾಬಾಲಕ ನಿತ್ಯೈಶ್ವರ್ಯ ಶ್ರೀಹರಿಯಾ॥ ಜೀಯಶ್ರೀಪುಲಿಗಿರಿ ರಾಯರಾಮಾನುಜ ವಿಠಲ ಬಾಯತೋರಿದನಾಕ್ಷಣ ವೆಂಕಟರಮಣ ॥ ಏನಯ್ಯಾ ॥೩॥

॥ ವಚನ ॥

ಇಂತು ಕೃಷ್ಣನು ಬಾಯ್ದೆರೆದುತೋರೆ ನಂದನರಾಣಿ ಕಂಡಳು ಕಂದನಬಾಯೊಳಗೆರಡನೆಯ ಪೇಳೆಯದೆಂತೆನೆ—

ಹರಿಶ್ರೀಕೃಷ್ಣನು ಬಾಯತೆರೆಯೆ ಕಂಡಳಾತನ ಬಾಯೊಳ್, ಸ್ಥಿರಜಂಗಮಾದಿ ಜಗಮಂ, ದ್ವೀಪಾಬ್ಧಿ ಭೂಗೋಳಮಂ, ಮರುದಗ್ನೀಂದುಸಮಗ್ರತಾರಕಿನಭೋಚಕ್ರಂಗಳಂ ಜಲಗಳಂ ತರುತೇಜೋರ್ವಿರನಾದಿ ತದ್ವಿಪರಮಂ ವೈಕಾರಿಕಾಧೀಶರಂ, ಮನಮಂ ಪಂಚಮಹಾದಿ ಭೂತವನಮಂ ಶಬ್ದಾದಿ ತನ್ಮಾತ್ರಕಾ ಘನಮಂ, ಸತ್ವರಜಸ್ತಮೋ ತ್ರಿಗುಣಮಂ ಜ್ಞಾನಕ್ರಿಯಾರ್ಥೇಂದ್ರಿಯಾರ್ಪಣಮಂ ವಾಕ್ಕರಪಾಯ್ವಾಂಘ್ರಿಗುಣಮಂ ಕರ್ಮೇಂದ್ರಿಯಜ್ಞಾಧಿಪಾರ್ಜನಮಂ, ಘ್ರಾಣತ್ವಗಕ್ಷಿ ಕರ್ನರಸನಂ ಜ್ಞಾನಹೃಷೀಕಂಗಳಂ; ಧರೆಯಂ ನಿರ್ಜರಪೂಜ್ಯಮೇರುಗಿರಿಯಂ ದುಗ್ಧಾಬ್ಧಿ ಕಲ್ಲೋಲ ಲಹರಿಯಂ ಲೋಕವಿಲೋಕನೀಯಹುವಿಯಂ ಬ್ರಹ್ಮಾದಿ ಸಾಮ್ರಾಜ್ಯವೈಖರಿಯಂ ವೇದವಿನೋದ ವಾಕ್ಯಝರಿಯಂ ವಿಶ್ವಂಭರಾಧಾರದಿಕ್ಕರಿಯಂ, ಕೇಸರಿಯಂ ಮುರಾರಿ ಹರಿಯೊಳ್ ಕಣ್ಣಾರೆತಾಕಂಡಳು.

ಮತ್ತಮಂತಲ್ಲದೆ, ನರರಂ, ವಾನರರಂ, ಪೌಲಸ್ತ್ಯಪ್ರಮುಖ ಕಿನ್ನರರಂ ಸುರಾದ್ಯಸುರರಂ ಭೂಸುರರಂ ಗಂಧರ್ವ ವಿದ್ಯಾಧರಾಪ್ಸರರಂ ಚತುರ್ಮುಖಪ್ರಮುಖರಂ ಪಂಚಾದಿಷಟ್ ಸಪ್ತಮಾನವರಂ ಭಾಸ್ಕರರಂ ಸಹಸ್ರಮುಖರಂ ಮತ್ತಿಳೆಯಂ ಚಿತ್ರವಿಚಿತ್ರ ಜೀವಕಳೆಯಂ ಕಾಲಸ್ವಭಾವಾಶಯಾವಳಿಯಂ ಅಂಗವಿಶೇಷಭೇದಕಲೆಯಂ ಭೂವಲಯಾಂಗನಾಕುವಲಯಾನಂದ ಪ್ರಬೋಧೋಡುರಾಟ್ಕಲೆಯಂ ಶ್ರೀಹರಿಯುಂಬತನ್ನಾಮೊಲೆಯಂ ತಾಕಂಡು ಬೆದರಿದಳಾಯಶೋದಾ ಇಂತು ಹರಿಯ ಬಾಯೊಳು ಕಾಣುತ್ತ ವಿಸ್ಮಯಗೊಂಡು ನುಡಿವಳದೆಂತೆನೆ.

ರಾಗಾ ॥ (ಕನಸು ಕಂಡೆನು ರಾಮಚಂದ್ರ)

ಕನಸು ಕಂಡೆನೋಯೇನೊ—ಕನವರಿಸಿದೆನೊ ॥ ಪಲ್ಲ ॥ ಕನಸುಕಂಡೆನೊ ನಾರಾಯಣನ ಮಾಯೆಯೊ ಬುದ್ಧಿ ಮನಕೆ ಮೋಹವೊ ಎನಗೆ ತನಯನುದರದಲ್ಲಿ॥ ಕನಸು ॥ ಅನು ॥ ತನಯನೆನ್ನಯ ತನುವಿನೊಳ್ ಜನಸಿಬಂದ ಜನನಯೋಗವೊ

ಯನ್ನ ಮನದೊಳಚ್ಚರಿಯು । ಮನಸು ವಾಕ್ಕರ್ಮದಿಂ ಬಹುದಿನ ತರ್ಕಿಸೆ ನಿಜವಿನಿತು ಗೋಚರಿಸದೆ ಕಳವಳಗೊಳುತಿದೆ॥ ಕನಸು ॥ ೧ ॥ ಜಗವನಿರ್ಮಿಸಿಮತ್ತೆ । ಜಗವಪಾಲಿಸಿ ಮಿಗೆ ಜಗವನುದರದೊಳು ಧರಿಸಿರಿಸಿ ॥ ನಿಗಮಗೋಚರ ನಮ್ಮ ಮಗುವಾಗಿರಲುಂಟೆ । ಜಗದಾಧಾರನ ಪದವಪೊಗಳಿ ನಾನವಿಸುವೆ॥ ಕನಸು ॥೨॥ ಸುತನೆಂದು ಪತಿಯೆಂದು ಆದ್ಭುತಾನಂದ ವ್ರಜಪತಿಸತಿಯೆಂದಹಂಕೃತಿಯೊಳಾನಿದ್ದೆ॥ ಹಿತರು ಈವ್ರಜಸತೀಪತಿ ತುರುತತಿಯೆಂದು ಅತಿ ಮಾಯಾಕುಮತಿಗೆ ಗತಿಪುಲಿಗಿರಿ ಪತಿಯೇ॥ ೩ ॥

॥ ವ ಚ ನ ॥

ಇಂತು ಕೃಷ್ಣನಂ ಪರಮಾತ್ಮನೆಂದರಿತ ಯಶೋದೆಗೆ ಮತ್ತೆಮಾಯೆಯಂ ಬೀರುವನದೆಂತೆನೆ

ರಾಗಾ ॥ (ಆರ್ಯಾಧಾಟಿ)

ಮಾಯಾವಿಭುಸರ್ವೇಶ್ವರ ವೈಷ್ಣವ ಮಾಯೆಯನು ಬೀರಿದನು ಕ್ಷಣದೊಳ್ । ತಾಯಿಗೆ ತಗಲಿತು ಮಮತಾ ಮಾಯಾಪಾಶವು ಸುತನೊಳಗಾಕ್ಷಣದೊಳ್ ॥ ಹೆಚ್ಚಲು ಮಾಯೆಯು ವಿಸ್ಮೃತಿಯಿಂತಾ ಸಚ್ಯುತನತೊಡೆಯೊಳಿರಿಸಿದಳಾಗ॥ ಹೆಚ್ಚಲು ಮಮತೆಯು ಹೃದಯದೊಳಾಸತಿ ಗಚ್ಚರಿಯೆನೆ ಮೊದಲಿನ ತೆರದಿಂ ॥ ೨ ॥ ನಿಗಮಾಗಮ ಸಾತ್ವತಸಂಹಿತೆಯುಪನಿಷದಾದಿಗಳಿಂದನವರತಂ । ಪೊಗಳಿಸಿಕೊಳ್ಳುವ ಪುಲಿಗಿರಿ ಪತಿಯನು ಮಗನೆಂದರಿತಳು ಹರಿಯನ್ನು ॥ ೩ ॥

॥ ವ ಚ ನ ॥

ಇಂತು ಗೋಪಿದೇವಿ ಮಾಯೆಯಿಂದಾವೃತೆಯಾಗಿ ಕೃಷ್ಣನಂ ನಿಜಸುತನೆಂದರಿತು ಸುಖದಿಂದಿದ್ದಳೆಂಬಭಿಪ್ರಾಯಮಂ ಕೇಳಿ ಪರೀಕ್ಷಿತನು ಶುಕಮುನಿಯಂ ಕುರಿತು ಪ್ರಶ್ನೆ ಮಾಡುವನದೆಂತೆನೆ.

ರಾಗಾ ॥ ರಾಮಲಾಲಿ ॥

ನಂದನಿಗೆ ಬಂದಸಿರಿಯ ಪೇಳು ಮುನಿವರ್ಯ॥ ಪ ॥ ನಂದನಾವ ತಪವಗೈದಾನಂದವಾದ ಶ್ರೇಯೋಲಾಭ ಬಂದ ಮಹೋದಯ ಫಲದಂದವನು ಪೇಳಿಕೃಪೆಯಿ॥ ನಂದನಿಗೆ ॥೧॥ ಮೋದದಿಂಯಶೋದೆ ಯಾಪಾರಾಧನೆಯ ಮಾಡಿದಳೊ । ಮಾಧವನು ಸ್ತನ್ಯಪಾನಮಾಡಿದ ವಿಧಾನಪೇಳೋ ॥ ೨ ॥ ಹೆತ್ತವರಲ್ಲದೆ ಸ್ತನ್ಯವಿತ್ತು ಹಿತವಪೆತ್ತು ಪರವಸ್ತುಲೋಕ ಕರ್ತನ ವಿಚಿತ್ರಲೀಲೆ ನೋಡಿದಂಥ ॥ ೩ ॥ ಲೋಕದೊಳ ವ್ಯಾಪೀ ಪಾಪಶೋಕಪಂ ಪರಿಹರಿಪನನ್ನು । ಪಾಕಶಾಸನಾದಿಗಳು ಪಾಡಿಯನ್ನೂ ಪಡೆಯದಂಥ॥೪॥ ಪೃಥ್ವಿಯೊಳ್ ಪಾವನವೆನಿಪ ಪುಲಿಗಿರೀಶನ ಚರಿತೆಯನ್ನು । ಉತ್ತಮರು ಗಾನಗೈವವಸ್ತು ಪ್ರಸನ್ನವಾಗೆ ॥ ನಂದ ॥ ೫ ॥

॥ ವ ಚ ನ ॥

ಇಂತು ಬೆಸಗೊಂಡ ಪರೀಕ್ಷಿದ್ರಾಜಂಗೆ ಶುಕಮುನಿಯು ಸಾರಾಂಶಮಂ ಪೇಳ್ವರದೆಂತೆನೆ.

ರಾಗಾ। (ಮೇಲಿನ ಮಟ್ಟು)

ಭಾರತ ಸೌಭಾಗ್ಯಚರಿತಕೇಳ್ ಪರೀಕ್ಷಿತ । ನಾರಾಯಣ ನಂದವ್ರಜಕೆ ಬಂದಚರಿತ ॥ ಪ ॥ ದ್ರೋಣನೆಂಬ ದೊಡ್ಡವಸು ಧರೆಯೆಂಬುವಳು । ಪ್ರಾಣಕಾಂತೆಯೊಡನೆ ಬ್ರಹ್ಮಪದದೊಳಿರಲು । ಕ್ಷೋಣಿಯೊಳು ಜನಿಸಿಯೆಂದು ಬ್ರಹ್ಮನುಪೇಳಿದಾ। ವಾಣಿಯನ್ನು ಕೇಳುತವರು ಬಿನ್ನೈಸಿದರು ॥ ಭಾರತ ॥ ೧ ॥ ದೇವನಿನ್ನ ಆಜ್ಞೆಯಂತೆ ತೀವ್ರದೊಳಗೆ । ನಾವೀರ್ವರು ಜನಿಸಿದಮೇಲೆ ಊರ್ವಿಯೊಳಗೆ ॥ ದೇವದೇವವಿಶ್ವಾಧೀಶ ಶ್ರೀಶಹರಿಯಲ್ಲಿ । ಭಾವಶುದ್ಧಿಯಿಂದ ನಮಗೆ ಭಕ್ತಿಯಿರಲಿ ॥ ೨ ॥ ಗೋವಿಂದನೊಳು ಭಕ್ತಿಯಿರಲು ಭವ ಜಲಧಿಯನ್ನು । ಜೀವಾತ್ಮರುದಾಟಿ ಸುಖಭಾವ ಪೊಂದುವರು ॥ ಆ ವಿಧದ ದೇವ ಅಸ್ತುಯೆಂದು ದಿವ್ಯ ವರವನಿತ್ತನು ॥ ೩ ॥ ಬಂದ ದ್ರೋಣ ನಾಮಕವಸುಯಶೋವಂತನು। ನಂದನಾಗಿ ಗೋಕುಲದೊಳಂದು ಪುಟ್ಟಿದನು ॥ ಬಂದಿಗೇಧರೆಯೂ ಪುಟ್ಟಿಯೆಂದಿನಂತೆಯೇ ಸುಂದರಿಯಶೋದೆ ನಂದನರಸಿಯಾದಳು॥೪॥ ಈ ಪರಿಯೊಳ್ ಪುತ್ರನೆಂಬ ಶ್ರೀಪತಿಯೊಳ್‌ನಂದಗೋಪಗೋಪನರಸಿಗೆ ಭಕ್ತ್ಯತಿಶಯವು। ಗೋಪಗೋಪಿಯರಿಗೆ ವರಲೇಪದಿಂದಾ ಗೋಪಾಲನೊಳ್ ಸತ್ಸಂಗವುಪ್ರಾಪ್ತವಾಯಿತು ॥ ೫ ॥ ಆತ್ಮಭೂವಿತ್ತವರವ ಸತ್ಯಗೈಯುವ— ಕೃತ್ಯದಿಂ ಶ್ರೀಕೃಷ್ಣವ್ರಜಕೆ ಚಿತ್ತೈಸಿದನು ॥ ಉತ್ತಮಬಲರಾಮಸಹಿತ ಸರ್ವರಿಗೂ । ಅತ್ಯದ್ಭುತಲೀಲೆತೋರಿ ಪ್ರೀತಿಪಡಿಸಿದ ॥ ೬ ॥ ವ್ಯಾಘ್ರಶೈಲರಾಮಾನುಜ ವಿಠಲನ ಆಜ್ಞೆಯಿಂದಲಿಲ್ಲಿಗೆ ಅಧ್ಯಾಯವಾಗಲು । ಭಾಗ್ಯನಿಧಿ ಭಾನುತೇಜಪಾಲಿಸುವನು ಶ್ರೀಘ್ರಫಲದಾಯಕ ಶ್ರೀವೆಂಕಟೇಶನು ॥೭॥

॥ ಇತಿ ನವಮೋಧ್ಯಾಯಃ॥

॥ ವ ಚ ನ ॥

ಈ ತೆರದಿ ಪುತ್ರಭೂತನಾದ ಶ್ರೀಕೃಷ್ಣನೊಳ್ ನಂದಯಶೋದೆಯರಿಗೆ ನಿರಂತರ ಮಮತಾಪ್ರಾಪ್ತಿಗೆ ಹೇತುವಾದ ಜನ್ಮಾಂತರವರಪ್ರದಾನ ಪೂರ್ವವಾದ ಭಕ್ತಿಕಾರಣಮಂ ಪೇಳಿ ಮುಂದೆ ಕೃಷ್ಣಚರಿತಾಮೃತಮಂ ಪರೀಕ್ಷಿದ್ರಾಯಂಗೆ ಶುಕಾಚಾರ್ಯರು ನಿರೂಪಿಸುವರೆಂತೆನೆ—ಯಶೋದೆ ಅರುಣೋದಯದೊಳೆದ್ದು ಮನೆವಾರ್ತೆಯ ಗೌಡಿಗಳಂ ಕಾರ್ಯಾಂತರಕೆ ಕಳುಹಿ ತನಯನ ಚರಿತಗೀತಾಮೃತಮಂ ನೆನೆನೆನೆದು ಗಾನಮಾಡುತ್ತೆ ಮೊಸರಂ ಕಡೆಯುತೊಡಗಿದಳು. ಇಂತು ಮೊಸರಂ ಕಡೆವ ಯಶೋದೆಯ ಸೊಬಗಂ ಪೇಳ್ವೆಕೇಳೊ ದೊರೆಯೆ

॥ ಲಾ ವ ಣಿ ॥

ದಿಟ್ಟಿವೊಸರ ಕಡೆಯೆ ಸಂಭ್ರಮಪಟ್ಟು ಕೇಳುದೊರೆಯೆ ॥ ಪಟ್ಟೆಮಡಿಯುತಾತೆಗೆದುಟ್ಟು ತಟೆಯುತಟದನಟ್ಟದೊಳಗೆ ತಾನಿಟ್ಟು । ಕಾಂಚಿಯ ಪಟ್ಟೆಯಧಾಮವಳವಟ್ಟು ಹವಳಕ್ಕೆ ಕಟ್ಟಿನವಳು ॥ ಇಷ್ಟಪುತ್ರನೊಳಿಟ್ಟ ಮಮತೆಯಿಂ ಬಟ್ಟ ಕುಚಯುಗದತೊಟ್ಟು ಸೊರತುಪಾಲ್ ತೊಟ್ಟಿಕ್ಕುತಿರೆ, ಗಟ್ಟಿಯಾಗಿ ಮೇಲ್ಕಟ್ಟಿರುತಿಹ ಮಣಿಕಟ್ಟುರವಕೆ ಪಟಪಟನೊಡೆದು ಕುಚಗಳ್ ಕುಲಕಲಾಧಿಟ್ಟಿ ಕಡೆದಳಣ್ಣಾ ಅಹುದಣ್ಣಾ ಕೇಳಣ್ಣ॥ ೧ ॥ ಹೊಂಬಣ್ಣ ವೈಬಣ್ಣ ಆ ಹೆಣ್ಣಸಡುಸಣ್ಣ । ಸಣ್ಣನಡುವು ಗುಣಾಜನ್ಮದಂತೆ ಸೌವರ್ಣದೋಲ್ ವೈಬಣ್ಣ ಹೊಳೆಯೆ ಕಡೆಗಣ್ಣಸೋಗೆ ನಿಜಕರ್ಣಸೋಂಕುತಿರೆ ಸಂಪನ್ನೆಕಡೆವ ಕೈಕಣ್ಣಸೆಳೆಯಲಾ ಸಣ್ಣಾತ್ರೋಳ. ಬಿಳಿಬಂಣದರವಕೆವರವರ್ಣನಿಯು ಕರ್ಣದೊಳಗೆ ಸುವರ್ಣ ಕುಂಡಲಾ ತೂರ್ಣಚಲಿಸಲಾ ಪೂರ್ಣಚಂದ್ರದಮುಖಬಿವರಲಾ ಕನ್ಯೆ ಮುಡಿಯೊಳಾಕೀರ್ಣ ಪೂಗಳು ಸಂಣಮಲ್ಲೆ ಮೊಗ್ಗೆ ಸಂಪೂರ್ಣ ಜಾರಲಾ ತಂಪಿನಹೊತ್ತಿನೊಳ್ ಸಂಪನ್ನೆಕಡೆಯೆ ತಾಬೆಣ್ಣೆಯಂ ಸಂಪೂರ್ಣವಾಗಿ ತೆಗೆಯೆ ಸನ್ನೆಯರಿತು ಕೃಷ್ಣನಳಲಾಗ ಬಲುಬೇಗ ॥ ೨ ॥ ಶ್ರೀಲೋಲ ಶ್ರೀಲೋಲ-ಶ್ರಿತಪಾಲ ಸುಖಮೂಲ । ಬಾಲಕೃಷ್ಣಘನನೀಲವರ್ಣಗೋಪಾಲ ಮೂರ್ತಿ ಮೊಲೆಪಾಲ ಬಯಸಿಬರೆ ಸುಶೀಲೆ ಸುತನಲೀಲೆಯೆಂಬ ಗುಣಜಾಲವನ್ನು ತಾನಾಲಿಸುತ್ತಿರೆ ನಿಜತಾಯು ಬಳೆದನಿಯಾಲಿಸಿ ಕಡೆವಾಲಯಕ್ಕೆ ಸುರಖೇಲಬಂದು ಕಡೆಗೋಲ ಪಿಡಿದು ಕೈಗಳ ತಡೆದು ನಿಜಲೀಲೆದೋರಿ ಮುದಜಾಲಜೀರಿ ವನಮಾಲಿ ಪುಲಿಶೈಲೇಶನೊಲಿದುನಿಂದ, ಮುದದಿಂದ್ದಸಲವಿಂದ ॥ ೩ ॥

ರಾಗಾ ॥ ರೇಗುಪ್ತಿ ॥

ದರಹಸಿತ ಮುಖವೀಕ್ಷಿಸುತ ಸುಂದರನಂ ತೊಡೆಯೊಳಿಟ್ಟು ಸುಖದಲಿ ಪರಮಾತ್ಮನಸಪ್ಪಿ ಮುದದಿಂದಲಿ ॥ ಸೊರತಿದ್ದ ಮೊಲೆಯನಿತ್ತಳು ಪ್ರೇಮಾತಿಶಯದಿಂ ಪರಮಾತ್ಮನುಣುತಿದ್ದನು ॥ ಪರಿಪೂರ್ಣನಿಗೆ ಮೊಲೆಪಾಲ್ ಪರಿಪೂರ್ತಿಯಾಗದಿರೆ ಅರಕೆ ಹೊಟ್ಟೆಯಮಾಡಿ । ಹರಿಯನಲ್ಲಿಯೆ ಬಿಟ್ಟು ತ್ವರಿತದಿ ನಡೆದಳು ಒಲೆಯೊಳುಕ್ಕುವ ಪಾತ್ರೆಗೆಯಲು॥ ಕಡುಕೋಪದಿಂ ಕೆಂದುಟಿಯ ಕಡಿಯುತ ನಟಿಯಿಂದ ಕಣ್ಣೀರ್ ಬಿಡುತ । ಸಿಡದಲ್ಲಿಂದೇಕಾಂತದಿಬಂದ ಕಡೆದಿದ್ದಕೆನೆಮೊಸರಿನ ॥ ಗಡಿಗೆಯನೊಡೆದು ಪುಡಿಮಾಡಿಕೆಡಹಿದ ನೊಡನೆ ತನ್ನೊಳುತಾನೆ । ಸಡಗರದಿಂ ಕಡೆದಿದ್ದ ಪೊಸಬೆಣ್ಣೆಯ ನಡಿಗಡಿಗೆ ಮೆಲ್ಲುತಿದ್ದ ॥ ೨ ॥ ಒಲೆಯೊಳು ಕಾದಿದ್ದಕೆನೆಪಾಲ್ಗೊಡಮಂ ನೆಲದೊಳು ತೆಗೆದಿರಿಸಿಗೋಪಿ-ಗಳಲನೆ ತಾ-ಬಂದು ಕಡೆವ ಸ್ಥಳದಲಿನೋಡೆ ॥ ನೆಲದೊಳಗೊಡೆದಿದ್ದ ಮೊಸರಿನ ಗಡಿಗೆಯಕಂಡು ಲಲನೆ ನಕ್ಕಳು ಬಾಲನಾ ॥ ಛಲದಿಂದಾಚರಿಸಿದಟ್ಟುಳಿಯನು ಪುತ್ರವತ್ಸಲೆ ಮನ್ನಿಸಿದಳು ಮುದದಿ॥ ಕೆಲದೊಳು ಕಾಣದೆ ಪುತ್ರನ ದೂರದಿ ಬಳಿಕ ಕಂಡಳು ಬಾಲೆ ಪುಲಿಗಿರಿಪತಿಯನ್ನು ॥ ೩ ॥*

॥ ವ ಚ ನ ॥

ಇಂತು ದಧಿಭಾಂಡವನ್ನೊಡೆದು ಪೊಸರು ಬೆಣ್ಣೆಯ ನೀಡಾಡಿ ದೂರದೊಳ್ನಿಂದಿಹ ಮಗನಂ ನಿರೀಕ್ಷಿಸಲಾ ಯಶೋದೆಗೆ ಮಗನು ತೋರಿದ ಲೀಲೆಯದೆಂತೆನೆ.

ರಾಗಾ ॥

ತರುಣಿಯುತಾಂ ನೋಡುತಲಿರೆ ತಲೆಕೆಳಗಣ ಮರದೊರಳಿನ ಮೇಲಿರುವನು ಶ್ರೀಹರಿಯೂ, ಮರಿಮರ್ಕಟವಾರ್ಜಾಲಕೆ ಬೇಕಾದವರಿಗೀಯುತಿಹನು॥ ನವನೀತವ ಕದ್ದೊಯ್ದುಹ ಭಯದಿಂ ತವಕದಮನ ಚಂಚಲಲೋಚನನೂ । ನವಿಯುತಲಿರೆ ಹೈಯ್ಯಂಗವವನು ನಿಜ ಕುವರನ ಬಳಿಗೈದಿದಳಾ ಸತಿ ತಾನು ॥ ಕರದಲಿಕೋಲನು ಪಿಡಿದೈತಹಳನು ಪರಿಕಿಸಿಪೊರಳಿಂದಿಳಿದವನಾ । ತರುಣಿಗೆತಾ ಭಯಪಡುವನತೆರನತ್ವರದೊಳು ಸಿಲುಕದೆಯೋಡುವನು ॥ ೩ ॥ ಜಪತಪದಿಂದಲಿ ಯೋಗೀಜನಮನನಿಪುಣತೆಗೊಲೆಯದ ಮೂರುತಿಯಾ । ಚಪಳೆಯು ಬೆನ್ನಟ್ಟಿದಳಾಗಳಾ ಕಪಟನ ಪಿಡಿಯುವೆನೆಂದೆನುತ ॥೪॥ ಗುರುತರಭಾರದಿ ಚಲಿಪನಿತಂಬದಭರದಿಂ ಮೃದುಗತಿಯುಳ್ಳ ಸುಭಾಗೆ । ಸರಿಸುವಕಚಧರವರಸುಮಭರೆ ಪುಲಿಗಿರಿವರನ ಕರದಲಿ ಪಿಡಿಯುವಳಾಗೆ ॥೫॥

॥ ವ ಚ ನ ॥

ಇಂತು ನಿಜಜನನಿಯೋ ತಾನೆಂದರಿತಿಹ ಯಶೋದೆ ಬೆನ್ನಟ್ಟಿಬಂದು ಸುತನಂ ಪಿಡಿದು ಬೆದರಿಸಿ ಭಯಪಡಿಸುವ ಬಗೆ—

ರಾಗಾ ॥ ಶಂಕರಾಭರಣ ॥

ಪಿಡಿದಳುಬಾಲಕನ--ನೀಲಾಂಗನ--ಪಿಡಿದಳುಬಾಲಕನ ॥ ಪ॥ ಕಡೆಗೋಲಿನಿಂದೊಡಗೂಡಿದಮೊಸರಿನ। ಗಡಿಗೆಯನೊಡೆದು ಸಾರಿಡುವಪರಾಧಿಯ ॥ ಪಿಡಿದಳು ॥ ಅ ॥ ಕಣ್ಣಾಪ್ಪನಿಟ್ಟಿಹನ-ರೋದಿಪನಂತೆ-ಕಣ್ಣೀರಸುರಿಸುವನ-ಕರೆದರೆಕಪ್ಪು-ಕಣ್ಣೀರನೊರೆಸುವನ॥ ಧಿಕ್ಕರಿಸಲು॥ ಕಣ್ಣತೀಡುತ ಕೈಯಿಂ ಚಿಣ್ಣನು ಭಯದಿಂದಾಕೀರ್ಣಲೋಚನನಾಗಿ ತನ್ನನೋಡುವನನ್ನು ಪಿಡಿದಳು ॥ ೧ ॥ ಭೀತಿಯಪೊಂದಿಹನಾ—ಕೈಕೋಲಿನ—ಮಾತೆಯನೋಡುವನ-ಈಪ್ರಾಕೃತ—ರೀತಿಯೊಳಾಡುವನ ॥

---

* ಈ ಹಾಡಿನಲ್ಲಿ ಪಾದನಿಯಮವಾಗಲಿ ಪ್ರಾಸನಿಯಮವಾಗಲೀ ಇಲ್ಲ. ಆದರೂ ವಾಚಕರು ಆಕ್ಷೇಪಿಸದೆ ಲೇಖಕರ ಭಕ್ತಿಪಾರವಶ್ಯತೆಯ ಮೇಲೆ ಮಾತ್ರವೇ ಗುರಿಯಿಟ್ಟು ಅರ್ಥಸಂಗ್ರಹಮಾಡಿಕೊಳ್ಳುವುದು ಉಚಿತವೆಂದು ಸೂಚನೆ.

ಈಸುತನ || ಭೀತಿಚಿತ್ತವನೋಡಿಪುತ್ರವತ್ಸಲೆಯಾಗ ಪ್ರೀತಿಯಿಂದಲಿವರಮಾತೆಕೋಲ್ ಬಿಸುಡುತ || ಪಿಡಿದಳು || ೨ || ನಿಗಮಾದಿಸನ್ನುತನ-ಬಾಲಕನಾಗಿ-ಜಗವನ್ನು ಮೋಹಿಪನ—ಮಾಯಕವ್ಯಾಪ್ತ-ನಗಧರಶ್ರೀನಿವಾಸನ||ಯಶೋದೆಯು || ಜಗದೇಕವೀರನ ಮಹಿಮೆಯನರಿಯದೆ ಮಗನಹಗ್ಗದಿಬಂಧಿಪೆನೆಂದು ಮನದೊಳು || ಪಿಡಿದಳು ||೩||

|| ವ ಚ ನ ||

ಇಂತು ಯಶೋದೆಯು ಕೈಗೆ ಸಿಲುಕಿದ ಬಾಲಕನ ಮಹಿಮೆಯದೆಂತಹುದೆಂದೆನೆ—

ರಾಗಾ || ದೇಶೀಯ ಶಂಕರಾಭರಣ ||

ಅಂತರ್ಬಹಿಯೆಂಬುದಿಲ್ಲ—ಅಂತರ್ಯಾಮಿಗೆ ಪರತಂತ್ರ, ನೆಂಬುದಿಲ್ಲವು ಆದ್ಯಂತರಹಿತಗೆ ಪೂರ್ವಾಪರವೆಂಬುದಿಲ್ಲ—ಸರ್ವಾವಾಸಗೆ | ಜಗಕೆ ಪೂರ್ವಾಪರವೆಲ್ಲವು ಈವೋರ್ವನಲ್ಲಿದೆ || ಅಂತರ್ಬಹಿರೂಪನು ಅನಂತನೋರ್ವನೆ ಜಗಕೆ—ಕಾಂತಪುಲಿಗಿರೀಶ ಜಗದ್ರಕ್ಷಕನು ||೨|| ಲಾಲಿಸ್ಯೆ ರಾಜರಾಜಯೆನ್ನಸೊಲ್ಲ-ಗೋಪಿ-ಬಾಲನ ಪರತತ್ವವೆಂದು ತಿಳಿಯಲಿಲ್ಲ—

ರಾಗಾ || ಆನಂದಭೈರವಿ ||

ಜನನಿಕಟ್ಟಿದಳು ಒರಳಿಗೆಸತನ—ಶ್ರುತಿತತಿಸಮ್ಮತನ|ಪ| ಜನನಮರಣ—ಜರೆಗಳಿಂರಹಿತ ವಿಧಿಜನಕ ಸನಕನುತ ಮಹಾನುಭಾವನ || ಅನು || ಅಪ್ರಾಕೃತದಿವ್ಯಮಂಗಳವಿಗ್ರಹನ-ಅವ್ಯಕ್ತಾಚ್ಯುತನ-ಅಪ್ರಮೇಯನ-ಅಧೋಕ್ಷಜನ ಮಾನವರೂಪನ | ಈ ಪ್ರಾಕೃತರಂತೆ ತಿಳಿದು ತನ್ನ ಆತ್ಮಜನೆಂದವನ—ಕ್ಷಿಪ್ರದಿಂದ ಮರದೊರಳಿಗೆ ಗೋಪಿಯು ಅಪ್ರತಿಮನ ಬಂಧಿಸುವಳು ಹಗ್ಗದಿ ||೧|| ಅಂದಪರಾಧವಗೈದವನನ್ನು—ಕಟ್ಟುವಳಾಗೆ-ಮುಂದೆತಂದಿದ್ದ ಹಗ್ಗದಿತಾನು| ಆಗೆರಡು ಬೆರಳಿನಿಂದ ಸಾಲದೆ—ಇರಲವಳು—ಮತ್ತೊಂದಸುತಂದು|| ಒಂದರಿಂದ ಮತ್ತೊಂದಕೆ ಸೇರಿಸೆ—ಎಂದಿನಂತೆ ಎರಡಂಗುಲಸಾಲದ||೨|| ಪಿರಿದೊಂದಸೇರಿಸಿಕಟ್ಟಿದಳಾಗ—ಅದುಸಾಲದಿರಲು—ಮರಳಿ—ಮರಮರಳಿ ತಂದಳು ಬೇಗ || ಎರಪೆರಪೇ ಬೆರಳುಸರಿಯಾಗಿ ಸಾಲದೆಯಿರಲಾವಾಗ || ಹರಿಮಾಯಾಯೋಗ || ಸರಮನೆ ತನ್ನರಮನೆ ರಜ್ಜುಗಳೂ ಬರಿದಾಗಲು ಬಲುಬೆರಗಾದಳು ||೩|| ಬಳಲಿಸುರಿಯುವಬೆವರಿನ ಮೆಯ್ಯವಳ—ಬಚ್ಚಿದ ತುರುಬಿಂ— ಬಿಳುತಿಪ್ಪದಿವ್ಯಹೂವಿನಸರದವಳ— ಶ್ರಮವನು ನೋಡಿ ಒಲಿದು—ಕಟ್ಟಿಸಿಕೊಂಡನು ಆತರಳ || ಇಂತಿರಸುರಿಂ || ಒಲಿದ ಜಗವು ತನ್ನಾಧೀನದೊಳಿರೆ, ತಿಳಿಸಿದ ಭಕ್ತರ ವಶ್ಯತಾನೆಂಬುದ || ಜನನಿ ||೪|| ಸರಸಿಜೋದ್ಭವಗಂಗಾಧರರು—ನಿತ್ಯಸೇವಕರು—ಸಿರಿಲಕ್ಷ್ಮೀ ಅಂಗದಿನಿತ್ಯಾಶ್ರಿತರು || ಇಂಥವರಿಗಿಲ್ಲದ—ಪರಮಾನಂದವಗೂಡಿದಳವಳು || ಆಚ್ಚರಿಯೀಪರಿ || ವರಪುಲಿಗಿರಿರಾಮಾನುಜವಿಠಲನ ಪರಮಪ್ರಸಾದವ ಪಡೆದಳು ಯಶೋದೆ ||೫||

|| ವ ಚ ನ ||

ಇಂತು ಯಶೋದೆ, ಸುತನಂ ಒರಳಿಗೆ ಕಟ್ಟಲು ಅಪ್ರಾಕೃತದ ಬಾಲನಾಗಳೇನಮಾಡಿದನೆಂಬೆನು—

ರಾಗಾ || ಧನಾಸರಿ ||

ಮಾತೆಯು ಮನೆಯೊಳು ಗೃಹಕೃತ್ಯದಲಿ ಮನವಿಟ್ಟಿರುತಿರ | ಸಂಭ್ರಮದಿ ಆತರುವಾಯ ಯಮಳಾರ್ಜುನರ ಪುರಾಕೃತನೆನೆದನು ಮನದಿ || ಪಲ್ಲ || ಪೂರ್ವದಿ ಧನದಾತ್ಮಜರೀಇವರು—ಉರ್ವಿಗೆ—ಗುಹ್ಯಕರೆಂಬುವರು || ಈರ್ವರಿಗೀಯಲು ನಾರದಶಾಪವ ಗರ್ವಿಷ್ಟರು ತರುರೂಪಾಗಿಹರು || ೧ || ಸಿರಿವಂತರು ವಿಖ್ಯಾತರು ನಳಕೂಬರ ಮಣಿಗ್ರೀವರೆಂಬುವರು | ತರುವಾಗಿರೆ ಪುಲಿಗಿರಿಪನು ನೆನೆದನು ವರಕಥೆ ದಶಮೋಧ್ಯಾಯವಿದು ||೨||

|| ವ ಚ ನ ||

ಇಂತು ನಳಕೂಬರ ಮಣಿಗ್ರೀವರ ಶಾಪಪ್ರಸಕ್ತಿಯಂ ಕೇಳಿ ಪರೀಕ್ಷಿದ್ರಾಯನು ಪ್ರಶ್ನೆಮಾಡುವ ಬಗೆ—

ರಾಗಾ|| ಮಂಗಳಕೌಶಿಕೆ||

ಲಾಲಿಸು ಬಿನ್ನಪವ—ಶುಕಮುನಿ—ಪೇಳಿದರರ್ಥವ || ಪ|| ಶಾಪಕೆ ಕಾರಣವೇನು—ಈರ್ವರು—ಪಾಪಮಾಡಿದುದೇನು || ತಾಪಸಮುನಿವರತಾನು ಈಪರಿಕೋಪಿಸಿದಾಪರಿಯೇನು ||

|| ವ ಚ ನ ||

ಇಂತು ಬೆಸಗೊಂಡ ರಾಜೇಂದ್ರಂಗೆ ಶುಕಮುನಿ ಪೇಳುವರದೆಂತೆನೆ—

ರಾಗಾ|| ಮೋಹನ||

ಕೇಳುನಿರಂತರ ಹರಿಚರಿತಾಮೃತ ಲೋಲಪರೀಕ್ಷಿತನೆ | ಬಾಲಮತಿಗಳಿವರೀ ತರುರೂಪವ ತಾಳಿದವಿವರವನೆ || ಪ || ಧನದಾತ್ಮಜರಿವರೀರ್ವರು ರುದ್ರನ—ಅನುಚರರೆಂಬುವರು || ಅನುದಿನಮಂದಾಕಿನಿಯೊಳು ಮದಯೌವನ ಗರ್ವಿತರವರು | ಅನುವಾಗಿರುತಿಹ ಮದಿರಾವಾರುಣಿ ಪೀರಿಮದಾಘೂರ್ಣಿತನೇತ್ರರು ತನುಮದವೇರಿಹರು | ತರುಣೀ ಜನರೊಳು ಸೇರಿಹರು | ಪಾಡುವ ಅಂಗನೆಯರ ಕೂಡಿಹರು || ಪುಷ್ಪಿತವನದಿ ವಿಹರಿಸುತ ನದಿಯೊಳಗಂಬುಜ ವನರಾಜಿಯೊಳಿರೆ ಮದಕರಿಯಂದದಿ ||೧|| ಗಂಗೆಯಜಲದತರಂಗದ ಶೀಕರ ಸಂಗದಿ ತನುನೆನೆದು—ಶೃಂಗಾರದಿ ನೆರದಂಗಗಳಿಂದಮರಾಂಗನೆಯರ ಬೆರದು | ಅಂಗಜಸಮರ ತುರಂಗಗಳಂದದಿ ಕಂಗೊಳಿಸುತಲಿಹರು | ತುಂಗದೊಳೆರಡು ಗಜಂಗಳು ಸ್ತ್ರೀಕರಿಗಳಕೂಟದಿ

ಸಂಗಿಸುವಂತೆ ಲತಾಂಗಿಯರನು ಬೆರೆದು || ಕುಚಗಳ— ಪೊಂಗಲಸವಪಿಡಿದು, ಅವರವರಂಗದಿ ಮನಬೆರೆದು । ಸುರತ ತರಂಗಗಳೆಸೆವ ಅನಂಗಸಮರಶರಭಂಗಗಳಿಂದ ದಿಗಂಬರ ರಾಗಿರೆ || ಕೇಳು || ೨ || ಇಂತಿರೆಸುರಮುನಿನಾರದರಲ್ಲಿ ಗೇಕಾಂತದೊಳ್ಳೈತರಲು । ಕಂತುಶರದಿಪರಿಭ್ರಾಂತರನೋಡಿ ದಾನಂತರ ಮುನಿಮುಳಿದು । ನಿಂತಿರೆ ಶಾಪದಿ ಶಂಕಿತರಾಗುತ ಚಿಂತಿಸಿ ದೇವಿಯರು । ಸ್ವಂತ ವಸನಗಳಕಾಂತೆಯಲ್ಲರು ಸರ ಭಸದಿಂ ಧರಿಸಿದರು । ಪುರುಷರು ನಿಂತು ದಿಗಂಬರರೂ । ಋಷಿಯುಪರಂತು ನಿಟ್ಟಿಸುತವರು । ಎಣಿಸದೆ ಸ್ವಾಂತಲೀಲೆ ಯೊಳಿರಲು || ಸುರಮುನಿ । ಇಂತಿರುವಿವರ ಮದವಿಳಿಸುವೆ ನೆನ್ನುತ, ಚಿಂತಿಸಿ ಪುಲಿಗಿರಿಪತಿಯನು ಮನದಲ್ಲಿ || ೩ ||

|| ವ ಚ ನ ||

ಇಂತು, ಮದಿರಾಮತ್ತರೂ ಶ್ರೀಮದಾಂಧರೂ ಆದೀರ್ವ ರಂ ನೋಡಿ ಸುರಮುನಿ ಮರುಕಗೊಂಡು ಅನುಗ್ರಹಾರ್ಥ ಮಾಗಿ ಶಾಪಮಂ ಕೊಡುವರದೆಂತೆನೆ—

ರಾಗಾ ||

ವಿಷಯಾಸಕ್ತನಬುದ್ಧಿಭ್ರಂಶಕೆ ವಿಷಯವೇ ಅಲ್ಲದೆ ಬೇರಿ ಲ್ಲ—ವಿಷಮರಜೋಗುಣವಲ್ಲದೆ ಅನ್ಯ ವಿಷಯವುಲೋಕ್ಕ ದೊಳಿನಿತಿಲ್ಲ । ಪ । ಶ್ರೀಮದದಿಂ ಅಂಧನಾದಗೆ ಧನಮದ ವಿದ್ಯಾಮದ ಕುಲಮದ ಜನಿಸುವುದು || ಆ ಮದದಿಂದಲೇ ಪಾನಮದವೂ ತರುಣೀಮದ ದ್ಯೂತಮದಗಳ್ ಪುಟ್ಟುವುವು || ೧ || ಶ್ರೀಮದದಿಂಪಶುವಂ ಸಂಹರಿಸುವ ತಾಮಸಬುದ್ಧಿಯು ಪುಟ್ಟುವುದು । ಈಮದದಿಂದಲೆ ಮನುಜತ್ವವೂ ಜರಾಮೃತ್ಯು ಗಳೂ ಸ್ಥಿರವೆಂಬುವರು || ೨ || ನರಭೂದೇವಶರೀರವು ಕೊನೆಗೀಪರಿಯಪ್ಪುದು ಕ್ರಿಮಿವಿಧ್ಯಾತ್ಮಕವು || ಪರಹಿಂಸಕ ನಾರಕಿಯೂ ತನ್ನಯಾಪರಗತಿಯನದೆಂತರಿಯುವನು || ೩ || ವರಮಾತಾಪಿತೃ ವರಾಸ್ನವನೀಯುವ ಗುರುಪುರುಷರ ಋಣ ದೇಹವಿದೋ ವರಮಾತಾಮಹನದೊ ಕ್ರಯದವನದೊ ನರಿ ಯದೊ ಮರಿಯದೊ ಬಲೆಗಾರನದೊ || ೪ || ಈಪರಿಯಲಿ ಸಾಧಾರಣದೇಹವ ತಾಪಡೆದವನೆ ಸರಿಯೆಂಬುವನು । ಆ ಪ್ರಕೃತಿಯಗುಣದಿಂದಲೆ ಸೃಷ್ಟಿಯಲೋಪವು ಸಂಭವಿಸುತ್ತಿ ರಲು || ತಾಪಸ ತನ್ನದು ಎಂಬುವನೆ. ಪರಹಿಂಸಕನೋರ್ವನ ನುಳಿದಿನ್ನು । ಶ್ರೀಪುಲಿಗಿರಿಪತಿಕಿಂಕರನಾರದ ನೀಪರಿಯಿಂದಲೆ ಪೇಳುವನು ||

|| ವ ಚ ನ ||

ಇಂತು ಶ್ರೀಮದಾಂಧಕರ ಚೇಷ್ಟೆಗಳಂ ನಿರೂಪಿಸಿ, ಮತ್ತೆ ಯುಂ ಅವರೀರ್ವರಂ ಕುರಿತು, ಶ್ರೀಮದಾಂಧಕರಾದ ಅಸತ್ ಕಾಮುಕರಿಗೆ ದಾರಿದ್ರ್ಯವೇ ಪರಮಾಂಜನವು, ಶ್ರೀಮದಿಂ ಭೂತಗಳಂ ನಿರೀಕ್ಷಿಪ ಮದವುಳಿದ ದರಿದ್ರನು ತನ್ನಂದದಿಂದ ಲೆ ಅನ್ಯರನು ಭಾವಿಪನು. ಆದುದರಿಂದ ದಾರಿದ್ರ್ಯವೇ ಮೋ ಕ್ಷಕ್ಕೆ ಸಾಧನವೆಂದುಪೇಳಿ, ಮದೋನ್ಮತ್ತರಾದೀರ್ವರ ಅನು ಗ್ರಹಾರ್ಥವಾಗಿ ಶಾಪೋಪಶಾಪಗಳನ್ನು ಕೊಡುವರದೆಂತೆನೆ:

ರಾಗಾ || ಸೌರಾಷ್ಟ್ರ || ಅಟತಾಳ ||

ನಿರಹಂಕಾರಿತಾನಾಗುವದರಿದ್ರನು ಸರಿಯುತಮದದಿಂದ । ಪರಿಪರಿಕಷ್ಟವ ಸಹಿಸುವನದು ಪರಮತಪಸ್ಸಹುದು || ೧ || ನಿತ್ಯದೊಳನ್ನಾತುರದ ದರಿದ್ರನ ಕ್ಷುತ್ಕೃಶಕಾಯಕನ || ಸತ್ವೇಂದ್ರಿಯಗಳು ಶೋಷಿಸಿ ಹಿಂಸೆ ನಿವಾರಣವಾಗುವುದು || ೨ || ಸತ್ಪುರುಷರುಸಮದರ್ಶಿಗಳವನೊಳು ಪ್ರತ್ಯಹಸೇರು ವರು । ಸತ್ಯಾತ್ಮರ ಸಂಸರ್ಗದಿ ತೃಷ್ಣೆಯು ಕೃತ್ರಿಮವುಳಿಯು ವುದು || ೩ || ಸಾಧುಸಮಾತ್ಮಕರಾಗಿಮುಕುಂದನಾ ಪಾದ ವಭಜಿಸುವರಾ । ಸಂದರ್ಶನಪರಿಯಂತವೇಬಂಧವು ಆದಿತ್ಯನ ಕಂಡಕ್ಷಿಯೊಲು || ೪ || ಅಸದಾಶ್ರಯರು ಆಸಕ್ತರುಪೆ ಕ್ಷ್ಯರು ಅಸುಧನಗರ್ವಿತರು । ವಸುಧೆಯೊಳಿದ್ದು ನಿರರ್ಥಕವ ದರಿಂ ಪಶುಸಮವಿರಿಸುವೆನು || ೫ || ವಾರುಣಿ ಮದಿರಾ ಮತ್ತರು ಶ್ರೀಮದವೇರಿರುವಂಧಕರು । ನಾರೀಕಾಮುಕರಜಿ ತಾತ್ಮರ ಮದವಾರಣಗೈಯ್ಯುವೆನು || ೬ || ಇವರೀರ್ವರು ದಿಕ್ಪಾಲಕನ ಸುತರೆಂಬುವರು, ನಿರ್ಲಜ್ಜಿತರು। ವಿವಸನವಾಗಿಹ ದೇಹವತಿಳಿಯದೆ ಕವಿದರು ದುರ್ಮದರು || ೭ || ಅದರಿಂದೀ ರ್ವರು ತರುರೂಪವತಾಳಿರುತಿರೆ ಪುನರಪಿಯೂ । ಮದವಳಿ ಯಲು ಮತ್ಪ್ರಸಾದದಿಂದಲೆ ವದಗಲಿ ಸುಸ್ಮೃತಿಯು । ೮ । ಮದನುಗ್ರಹದಿಂದಿವ್ಯಶರಚ್ಛತ ಕುದುರಿದ ಮೇಲೊಡನೆ । ಒದಗಲಿ ಶ್ರೀವಾಸುದೇವನ ಸನ್ನಿಧಿಯಾಕ್ಷಣದೊಳಗೆ || ೯ || ಪರಮಾನುಗ್ರಹದಿಂದಲೆ ಸುರವರಪುರವಾಸಮಂ ಪೊಂದುವ ರು । ಪರಮಾತ್ಮನ ಭಕ್ತರು ತಾವಾಗಲಿ, ವರದಿಂದಲೀ ಸುರರು || ೧೦ || ಈಪರಿಪೇಳಲು ನಳಕೂಬರಮಣಿಗ್ರೀವ ರೆಂಬುವರು । ಆವಾಗಳೆ ಯಮಳಾರ್ಜುನವೃಕ್ಷದ ಭಾವವ ತಾಳಿದರು || ೧೧ || ಈಪರಿಪೇಳಿದಬಳಿಕಾಸುರಮುನಿ ಕೃಪಾ ಕರ ತೆರಳಿದನು । ಶ್ರೀಪತಿಪುಲಿಗಿರಿ ವರನಾರಾಯಣನಾಶ್ರಮ ಕುರಿತವನು || ೧೨ ||

|| ವ ಚ ನ ||

ಇಂತು ದೇವರ್ಷಿಯಿಂ ನಳಕೂಬರಮಣಿಗ್ರೀವರಿಗೆ ಕೊಡ ಲ್ಪಟ್ಟ ಶಾಪಾನುಗ್ರಹವೃತ್ತಾಂತಮಂ ಶುಕಮುನಿ ಪರೀಕ್ಷಿದ್ರಾ ಜಂಗೆಪೇಳಿ ಮತ್ತೆ ಮುಂದಿನವೃತ್ತಾಂತಪೇಳುವರು;—ಕೇಳೈ ರಾಜೇಂದ್ರನೆ ಭಾಗವತನುಡಿಯಂ ಸತ್ಯವಾಗಿಮಾಡುವುದೇ ತನ್ನ ನಿಯಮವೆಂದುಭಾವಿಸುವವಾಸುದೇವನು ತಾಯಿಯಾದ ಯಶೋದೆ ತನ್ನಂ ಒರಳಿಗೆ ಕಟ್ಟಿರಲದರಿಂದಲೇ ಭಕ್ತರನ್ನು

ಅನುಗ್ರಹಿಸುವ ಯೋಚನೆ ಮಾಡುವನದೆಂತೆನೆ—

ರಾಗಾ ॥ ಮಾಳವಿ ॥ ತ್ರಿಪುಡೆ ॥

ದೇವರ್ಷಿಯೆನಗತಿಪ್ರಿಯತಮ, ಭಾವಿಕಾರ್ಯಮಹಾತ್ಮ ಗೀತವದಾವುದದನೇಸಾಧಿಸುವೆಯಮಳಾರ್ಜುನರಕುರಿತು॥೧॥ ಇಂತು ಶ್ರೀಹರಿನೆನೆದು ವೃಕ್ಷಗಳಂತರದಿ ತಾನೈದೆತನ್ನಯ ಅಂತರಂಗದ ಕಲ್ಪನೆಪಾತ್ರದಿ ಅಡ್ಡನಾಯ್ತೊರಳು ॥ ೨ ॥ ಬಾಲದಾಮೋದರನು ಶೀಘ್ರವಿಶಾಲವೇಗದಿ ಸೆಳೆಯುತಿರೆ ತರು ಮೂಲಬಂಧವು ಸಡಲಿತಾಕ್ಷಣ ಚಂಡರವದಿಂದ॥೩॥ ಪರಮ ವಿಕ್ರಮಿತಾತಿಕಂಪಿತ ಪಿಕ್ಕರಸ್ಕಂಧಪ್ರವಾಳಸು ಕರದಶಾಖಾ ತರುಗಳೆರಡು ಧರೆಯೊಳುರುಳಿದವು ॥೪॥ ಪರಮಕಾಂತಿಯಿಂ ದಾ ವೃಕ್ಷಂಗಳೆರಡರಿಂದೆದ್ದೀರ್ವರುಸಿದ್ಧರು । ಸ್ಫುರಿಸಿಬಂದರು ಕಕುಭಗಳನೆರೆಬೆಳಗುತಾಗಾ ॥೫॥ ಪೊಳೆಯುತೀರ್ವರು ತರುಗಳಿಂದಾ ಜ್ವಲನಮೂರ್ತಿದ್ವಯಂಗಳಂದದಿ । ನಲಿದು ಬಂದವರಖಿಲಲೋಕೇಶ್ವರನ ಕಂಡಾಗ ॥೬॥ ಕೃಷ್ಣಮೂ ರ್ತಿಗೆ ನಮಿಸಿ ಶಿರಸಾ ಬದ್ಧಾಂಜಲಿಪುಟರಾಗುತ। ವಿಷ್ಣುಪುಲಿ ಗಿರಿಪತಿಯ ನುತಿಸುತನಿಂದರಾಗಾ ॥ ೭ ॥

॥ ವ ಚ ನ ॥

ಇಂತು ದಾಮೋದರನಸಾನ್ನಿಧ್ಯದಿಂ ಶಾಪವಿಮುಕ್ತರಾದ ನಳಕೂಬರ ಮಣಿಗ್ರೀವರು ಭಕ್ತಿಯಿಂ ಸ್ತುತಿಮಾಡುವ ಪ್ರಕಾರವದೆಂತೆನೆ—

(ನಳಕೂಬರ ಮಣಿಗ್ರೀವಕೃತ ಶ್ರೀಕೃಷ್ಣಸ್ತುತಿಃಗುಹ್ಯಕೌ)

ರಾಗಾ ॥ ಕಾಂಬೋಧಿ ॥

ಕೃಷ್ಣಕೃಷ್ಣಮಹಾತ್ಮಕೇಶವ ಮಹಾಯೋಗೀ ವಿಷ್ಣು ಶ್ರೀ ಪರಮಾತ್ಮಕೃಷ್ಣ । ಪಾಹಿ । ಸೃಷ್ಟೀಪತಿಚಿದಚಿದ್ವಿಶಿಷ್ಟ ವ್ಯಕ್ತಾ ವ್ಯಕ್ತ ಸೃಷ್ಟಿರೂಪನುನೀನೆ ॥ ಪ ॥ ಪರಮಪುರುಷನುನೀನೆ ಪ್ರಕೃತಿಕಾರಣನೀನೆ, ಪರಾತ್ಪರನು ನೀನೆ ಪರಬ್ರಹ್ಮನೀನೆ, ಸ್ಥಿರಚರಾದಿಸಮಸ್ತ ಭೂತವಾಸಾವಾಸಕಾರಣ ಚಿತ್ತ ಪ್ರಾಣ ಪ್ರೇರಕನು ನೀನೇ ॥ ಸಿರಿಷಡ್ಗುಣೈಶ್ವರ್ಯ ವಿಷ್ಣುರವ್ಯಯ ನೀನೆ, ಪರಮಕಾಲಸ್ವರೂಪ ಈಶ್ವರನು ನೀನೆ । ಪರತತ್ವಪರ ಮಾತ್ಮ ಪರಂಜ್ಯೋತಿ ನೀನೆಂದು, ಪರಮಮುಮುಕ್ಷುಗಳು ಬಲ್ಲರೈ ಹರಿಯೇ ॥೧॥ ತ್ರಿಗುಣಮಯಸೂಕ್ಷ್ಮತರ ಪ್ರಕೃತಿರೂಪನು ನೀನೆ, ಮಿಗೆ ಮಹತ್ತತ್ವಗುಣರೂಪಕನುನೀನೆ । ಜಗಕೆದೇಹೀ ದೇಹಭಾವದಿಂದಲಿನೀನು ಜಗದುಪಾದಾನ ಕಾರಣನುನೀನೆ ॥ ಸುಗುಣಪುರುಷಾಧ್ಯಕ್ಷಭಾವದಿಂದನಿಮಿತ್ತ ಸಕಲವಸ್ತುವಿಕಾರ ಕರ್ತೃನೀನೇ ॥ ನಿಗಮಸನ್ನುತ ಸಕಲ ಸಗುಣನಿರ್ಗುಣ ರೂಪ ಜಗದಗಣಿತಾನಂದಸಂದೋಹ ನೀನೇ ॥ ಕೃಷ್ಣ ॥ ೨ ॥ ಪ್ರಾಕೃತವಿಕಾರಗುಣಗೃಹ್ಯಮಾಣಗಳಿಂದ ಲೌಕಿಕರು ನಿನ್ನ ನಿಜವ ತಿಳಿಯಲಳವೆ । ಪ್ರಾಕ್ಸಿದ್ಧನಾಗಿಯೆ ಸಕಲಜೀವರಿ ಗೆಲ್ಲ ಲೋಕಸೃಷ್ಟಿಗೆಪೂರ್ವಸಿದ್ಧನಾಗಿರುವೆ॥ ಪ್ರಾಕೃತಗುಣಾ ವಿಷ್ಟನಾದಜೀವಾತ್ಮನು ಲೌಕಿಕವಿಲಕ್ಷಣನರಿಯಲಹನೆ॥ ಲೋ ಕನಾಯಕನೆ ಅಪ್ರಾಕೃತನೆ ವ್ಯಾಘ್ರಗಿರಿ ಶ್ರೀಕಾಂತ ರಾಮಾ ನುಜ ಪ್ರಾಣಕಾಂತ ॥ ಕೃಷ್ಣ ॥೩॥

॥ ವ ಚ ನ ॥

ಇಂತು ಸ್ತುತಿಸಿ ಮತ್ತೆಯೂ ಪ್ರಣಾಮಪೂರ್ವಕವಾಗಿ ಸ್ತುತಿಸುವರದೆಂತೆನೆ—

ರಾಗಾ ॥ ಶ್ರೀರಾಗ ॥

ಕೃಷ್ಣನಮೋ ನಿನಗೆನುವೆ—ಶ್ರೀ—ವಿಷ್ಣುನಮೋ ಭಗ ವಂತನೆ ॥ ಪ ॥ ವಾಸುದೇವಭಗವಂತನೆ— ನಿಜ—ಶೇಷ ಗುಣಚಿನ್ಮರೂಪನೆ । ಶ್ರೀನಿವಾಸಪರಬ್ರಹ್ಮರೂಪನೆ। ನಿನ್ನಚರ ಣದಾಸರಾದೆವೈ ॥ ೧ ॥ ದೇಹಿಗಳಂತೆ ನೀನಲ್ಲವೈ ಕಾಮ ರಾಹಿತ್ಯದೇಹವುನಿನ್ನದು । ಅನ್ಯದೇಹಿಗಳಿಂದ ಅಸಂಗವಾದ ವಾಹಿನೀಕಾರ್ಯ ಗೈವೆಯೈ ಕೃಷ್ಣ ॥ ೨ ॥ ಅಧಿಕಸಮಾ ನಂಗಳಿಲ್ಲದ—ಅತ್ಯಧಿಕವಾದ ನಿನ್ನ ವೀರ್ಯದ । ಗುಣ— ಸುಧೆಯೆಂಬ ಕೀರ್ತಿಪ್ರಕಾಶವು ॥ ೩ ॥ ಇಂತಿರುವ ನೀಂ ಸರ್ವಲೋಕಕೆ—ನಿರಂತರ ಸೃಷ್ಟಿಕೈವಲ್ಯಕೆ । ಅನಂತಾವತಾ ರವಗೈದೆ ನೀ ನೀಗೆ ಚಿಂತಿತದಾತ ನಿಜಾಂಶದಿ ॥ ೪ ॥ ಪರಮ ಕಲ್ಯಾಣ ನಮೋ ನಮೊ, ಪರವಾಸುದೇವ ನಮೋನಮೊ । ಯದುವರ ಪುಲಿಗಿರಿವರಶಾಂತ ನಮೋನಮೊ ॥ ಕೃಷ್ಣನಮೋ ॥ ೫ ॥

॥ ವ ಚ ನ ॥

ಇಂತು ಸ್ತುತಿಸಿದಬಳಿಕಲಾ ಧನದಸಂಭವರು ಕೃಷ್ಣನಂ ಕುರಿತು,— ಹೇ ಭಗವಂತ! ಪರಮರ್ಷಿಯನುಗ್ರಹದಿಂದ ನಿನ್ನ ಚರಣಸಂದರ್ಶನಲಾಭವು ನಮಗಾಯಿತು. ಚರಣಕಿಂಕ ರರಾದೆವೆಮ್ಮಂ ಅನುಗ್ರಹಿಸು—ಎಂದು ಹೇಳಿ ಮತ್ತೂ ತಮ್ಮ ಅಭೀಷ್ಟವಂ ನಿವೇದಿಸುವರದೆಂತೆನೆ—

ರಾಗಾ ॥ ನೀಲಾಂಬರಿ ॥

ಧನ್ಯರಾದೆವು ನಾವು ಪರಮಪುರುಷ—ನಿನ್ನ—ಕರುಣಾ ಕಟಾಕ್ಷವೀಕ್ಷಣಗಳಿಂ ॥ ಪ ॥ ತವದಿವ್ಯಗುಣಕಥನ ರವದಿ ವಾಣಿಗಳಿರಲಿ—ಶ್ರವಣಗಳು—ತವಕಥಾಶ್ರವಣದೊಳಗಿರಲಿ ॥ ತವಚರಣಪೂಜೆಯಲಿ ಕವಿದುಹಸ್ತಗಳಿರಲಿ—ತವಪಾದಸ್ಮೃತಿ ಯಲ್ಲಿ ಸವಿದುಮನವಿರಲಿ ॥ ೧ ॥ ತವನಿವಾಸಸ್ಥಾನ ಭವನ ಪ್ರಣಾಮದಲಿ ಭವಭವದಿಸರ್ವದಾ ಅನುಭವಿಸಿ ಶಿರವಿರಲಿ ॥ ತವಕಳೇಬರರಾದ ಭುವಿಯಸತ್ಪುರುಷರಲಿ ಕವಿಕವಿದುದೃಷ್ಟಿ ಗಳು ದರ್ಶನದೊಳಿರಲಿ ॥ ೨ ॥ ಶ್ರವಣಕೀರ್ತನದಿವ್ಯ, ತವ ಗುಣಸ್ಮರಣ ಪದಪ್ರವಣ ಸೇವನ ವಂದನಾರ್ಚನಾದಿಗಳು । ತವದಾಸ್ಯಸಖ್ಯಗಳು ಆತ್ಮನೈವೇದನವು ಇವು ನಿರಂತರವಿರಲಿ ವ್ಯಾಘ್ರಗಿರಿವರದ ॥ ಕೃಷ್ಣಾ ॥ ೩ ॥

|| ವ ಚ ನ ||

ಇಂತು ಕೀರ್ತ್ಯರ್ವಮಾನನಾದಾಗೋಕುಲಾಧೀಶ್ವರನು ಒರಳಿಗೆ ಕಟ್ಟಲ್ಪಟ್ಟವನಾಗಿಯೇ ಪ್ರೇಮದಿಂ ಮಂದಸ್ಮಿತ ಮುಖಾರವಿಂದಮನ್ನೆತ್ತಿ ಮಧುರವಚನಪೀಯೂಷಮಂ ಸುರಿಸುವಂತೆ ಗುಹ್ಯಕರೊಡನೆ ಪೇಳ್ವನದೆಂತೆನೆ.

ರಾಗಾ || ನವರೋಜು ||

ಎಲೆ ನಳಕೂಬರಶರ್ಮ—ತಿಳಿದಿಹೆನ್ನೈನಾನಿಮ್ಮ|| ಪ || ಭಳಿ ಭಳಿರೇ ಕರುಣಾತ್ಮಕನಾರದನೊಳಿತಾಗಲಿಯೆಂದೀಪರಿ ಪೂರ್ವ ದಿ || ಅ || ಶ್ರೀಮದದಿಂದಂಧರುನೀವಾಗಿರೆ ನೋಡಿದನಾ ಮುನಿತಾ ।ನಾಮದಪಳಿಸಿ ಅನುಗ್ರಹಮಾಡಿದನೇಮದೊಳಾಡಿದನಾ ಮಧುರೋಕ್ತಿಯು|| ೧ || ಸಾಧುಸಮಾತ್ಮರ ಸುತರಾಂ ಪೋದದಿ ಮದರ್ಪಿತಮನರ । ಸಂದರ್ಶನ ಪರಿಯಂತವೆ ಬಂಧವು ಆದಿತ್ಯನಕಂಡಕ್ಷಿಗಳಂದದಿ || ೨ || ನಮ್ಮೊಳು ಪುಟ್ಟಿತು ಭಾವ—ಈಪ್ಸಿತವಾಯಿತು ಅಭವ || ನಿಮ್ಮ ಸದನಕುರಿತ್ಯೈದಿರಿ ಪುಲಿಗಿರಿಬೊಮ್ಮನ ಮರೆಯದೆ ನಂಬುವರಾಗಿರಿ || ೩ ||

|| ವ ಚ ನ ||

ಇಂತು ಭಗವಂತನು ನುಡಿದ ಮಾತಂಕೇಳಿ ಒರಳೊಳು ಬದ್ಧನಾದ ದಾಮೋದರನಂ ಪ್ರದಕ್ಷಿಣ ನಮಸ್ಕಾರಮಂಮಾಡಿ ಹರಿಯಪ್ಪಣೆಯಿಂದ ನಡೆದರುತ್ತರದಿಕ್ಕಿಗಾ ಧನದಾತ್ಮಜರೆಂಬಲ್ಲಿಗೆ ಭಾಗವತ ದಶಮಸ್ಕಂಧದೋಳ್ ಏಕಾದಶೋಧ್ಯಾಯಾರ್ಥವು ಮುಗಿದುದು.

ಇಂತು ಕುರುಕುಲಶ್ರೇಷ್ಠಕೇಳಿ ಕ್ಷ್ಮಾತರುಗಳು ಬಿದ್ದ ಶಬ್ದಮಂ ಕೇಳುತಲ್ಲಿಗೆ ಬಂದರು ನಂದಗೋಪಾದಿಗಳ್ ಸಿಡಿಲೆರಗಿದಭಯುದಶಂಕೆದೋರಿದವರಂತೆ.

ರಾಗಾ || ಸಾವೇರಿ ||

ಅಚ್ಯುತನಾಟವ ನೋಡಿನೋಡಿಯಚ್ಚರಿಗೊಂಡರು । ಜನರು । ಬೆಚ್ಚುತನಿಂತರು || ಪ || ಧರಣಿಯೊಳಗೆ ಯಮಳಾರ್ಜುನ ತರುಗಳೆರಡು ಉರುಳಿರಲು । ಪುರದವರೆಲ್ಲರುಕಂಡು ಮರುಳುಗೊಂಡರು || ೧ || ಒರಳಿಂದಿರುವ ಬಾಲಕನು ಒರಳ ತುಯ್ಯುತ್ತೆಳೆಯುತಿರೆ । ತರುಗಳ್ ಬಿದ್ದಕಾರಣವರಿಯದೆಯೆಲ್ಲರು || ೨ || ಆರದು ಇದೆತ್ತಣದು ತೋರದು ಅಚ್ಚರಿಯೆಂದು। ಊರಜನರೆಲ್ಲರತಿಕಾತರರಾಗೆ ಸಾರಿದರಾಬಾಲರು || ೩ || ಕುಮಾರನೊರಳನೆಳೆಯುತ್ತಿರೆ ದಾರಿಯಡ್ಡಲಾಗಿ ವೃಕ್ಷಜಾತಿ ಬಿದ್ದವು || ೪ || ತರುಗಳಿಂ ಬಂದದಿವ್ಯಪುರುಷರೀರ್ವರನ್ನು ನಾವು ಪೇರ್ಮೆಯಿಂದ ಕಂಡೆವೆಂದೀ ತೆರವಪೇಳಲು । ತರಳರುಕ್ತಿಯೆಂದು ಕೆಲರು ತಾರದೆ ಮನದೊಳು ಅನುಮಾನದಿ ಪರರು ಪುಲಿಗಿರೀಶನ ಮಾಯಾಮೋಹಿತರಾದರು || ೫ ||

|| ವ ಚ ನ ||

ಇಂತು ಯಮಳಾರ್ಜುನ ಭಂಗವಂಗೈದು ಬಾಲರೂಪದಿಂ ನಲಿದಾಡುವ ಕೃಷ್ಣನಂ ನಂದನುನೋಡಿ ನಗುತನಗುತ ಬಂಧನದಿಂದ ಬಿಚ್ಚಿಬಿಟ್ಟನು ಭವಬಂಧಮೋಚನನಾದ ಕೃಷ್ಣನಂ—ಎಂಬಲ್ಲಿಗೆ ಏಕಾದಶಾಧ್ಯಾಯದಲ್ಲಿ ಯಮಳಾರ್ಜುನಭಂಜನ ಕಥಾಪ್ರಕರಣಂ ಸಂಪೂರ್ಣಂ.

ರಾಗಾ ||

ಲೋಕಭಾವನನಾದ ಕೃಷ್ಣನು ಲೋಕಭಾವನನಾಗಿ ಗೋಕುಲದ ಗೋಪಿಯರಾಡಿಸಿದಂತೆ ತಾನಾಡುವನು ಲೋಕೈಕನಾಯಕನು || ಪ || ಹೇಳನವಮಾಡಲು ಹಾಸ್ಯಗೈಯಲು ಮಿಗೆಬಾಲನಂತೆ ಕುಣಿದಾಡಿಸಲು ಕೂಸಮಾಡಿಸಲು ಬಲು ಮುಗುದನಂದದಿ ದಾರುಯಂತ್ರಗಳಂತೆ ತದ್ವಶವರ್ತಿಯಾಗಿ ನಲಿವನು ನಿತ್ಯನಿಜತಂತ್ರದವನು ||

ರಾಗಾ || (ಸೀತಾನಂದನನು)

ಆಡಿಸುತ್ತಿಹಳು—ಗೋಪಿದೇವಿ—ಪಾಡಿಸುತ್ತಿಹಳು || ಪ || ಆಡಿಸುವಂತಾಡುತಿರ್ಪನು ನಾಡುಬಾಲಕರಾಡುವಂದದಿ || ಅ || ಹಾಡಕಲಿಸುವಳು —ಕುಣಿಕುಣಿ—ದಾಡಿಸುತಿಹಳು || ಆಡಿಸುವರಾಧೀನನಾಗಿಯೆ—ಮಾಡಿದ ಗೊಂಬೆಯಾಡುವಂದದಿ || ೧ || ಪೀತ ತಾರೆಂಬುವಳು—ಮಾನಬಳ್ಳದ-ಮೂಟೆಹೊರಿಸುವಳು। ದಾಟಿಯಿಂದವರಾಜ್ಞೆಯವಹಿಸಿ ಚೂಟಿಯಿಂ ಹುಡುಗಾಟದವನನು || ೨ || ಬಾಲನಾಡೆಂಬಳು - ತಾತಾಗುಬ್ಬಿ—ತೋಳನಾಡೆಂಬಳು।ಬಾಲಲೀಲೆಯತೋರಿ ತನ್ನವರಾಲಿಸಿ ಪ್ರೀತಿಯಿಂ ಪಾಲಿಸುತ್ತಿರೆ || ೩ || ದೂರಿಯಾಡುವನು—ಆಟಂಗಳ-ತೋರಿಸುತ್ತಿಹನು — ಭೂರಿಭಕ್ತರ ಸೇರಿ ವಶ್ಯರ ಬಾರಿಬಾರಿಗೂ ತೋರುತಿರ್ಪನು || ೪ || ಲೋಕನಾಯಕನು—ಸಂತೋಷವ—ಗೋಕುಲಕೀಯುವನು । ಲೋಕಭೂಷಣವ್ಯಾಘ್ರಶೈಲಾ ಲೋಕಭಾವನ ಶ್ರೀಕರಾಂಗನ || ಆಡಿಸು || ೫ ||

|| ವ ಚ ನ ||

ಇಂತು ಭಗವಂತನಾದ ಕೃಷ್ಣನು ಗೋಪೀಜನರ ಬಳಿಯಲ್ಲಾಡುತಿರೆ ನೀರೆಯೋರ್ವಳು ಫಲಮಂಕೊಳ್ಳಿರೆಂದುಸಾರಲು ಅದಂಕೇಳಿ ಸತ್ವರದಿಂ ಕೃಷ್ಣನು ಬರುವನದೆಂತೆನೆ—

ರಾಗಾ|| (ಇಲ್ಲಿಗೆಬಾರೆ ಮಲ್ಲಿಗೆಹೂವೆ)

ಕರದಲ್ಲಿ ಧಾನ್ಯತುಂಬಿ ಭರದಿಬಂದ—ಕೃಷ್ಣ—ಕರದು ಹಣ್ಣಿನವಳನ್ನು ತರುಣಿಯೆಂದ || ಅ || ಫಲವಬಯಸಿಸರ್ವ ಫಲಪ್ರದನುಬಂದ—ಎನ್ನ—ಕರದೊಳಿದಕೊ ಬಹಳ ಧಾನ್ಯವೆಂದ || ೧ || ನಿನ್ನಮಾನದಿಂದಳೆದುಕೊಡೆಂದ—ಎನಗೆ—ಹಣ್ಣನಳೆದುಕೊಟ್ಟು ಮನ್ನಿಸೆಂದ || ೨ || ಹಣ್ಣಿನವಳುಕೇಳಿ ಮಹಾತ್ಮನ ವಚನವ—ಚೆಲ್ವ—ಗುನ್ನಿಮರಿಯಾನೆಯಂತೆ ಬರು

ತಿರ್ಪನ ॥ ೩ ॥ ಧನ್ಯೆತಾನರವಿಂದನಯನನ ನೋಡುತಾ— ನಾರಿ—ಕಣ್ಣತೆರೆದು ನೋಡಿದಳಾ ಪುಣ್ಯಪುರುಷನ ॥ ೪ ॥ ಸಣ್ಣಕೈಯಲಧಾನ್ಯಸುರಿದ ಚಿಣ್ಣಕೃಷ್ಣನ—ಕರದಿ—ಹಣ್ಣು ತುಂಬಿದಳುಬೇಗ ಪೂರ್ಣಕಾಮನ ॥ ೫ ॥ ಹಣ್ಣಿನವಳ ಹೆಡಿಗೆಯಲ್ಲಿ ಚಿನ್ನರತ್ನವು—ಸಂ—ಪೂರ್ಣವಾಗಿ ತುಂಬಿತಾಗ ಮುತ್ತುರತ್ನವು ॥ ೬ ॥ ಫಲಗಳನ್ನು ಸರ್ವಾಭೀಷ್ಟಪ್ರದನು ಕೃಷ್ಣನು———ಗೋಪಲಲನೆಯರಿಗೆಲ್ಲ ಕೊಟ್ಟು ನಲಿಯುತಿದ್ದನು ॥ ೭ ॥ ವ್ರಜದ ಬೀದಿಯಲ್ಲಿ ಜೊತೆಯವರನ್ನು ಕೂಡಿ—ರಾಮಾನುಜವಿಠಲ ಪುಲಿಗಿರೀಶನಾಡುತಿದ್ದನು ॥ ೮ ॥

॥ ವ ಚ ನ ॥

ಇಂತು ರಾಮಕೃಷ್ಣರು ಆಡುತಾಡುತ್ತ ಜೊತೆಯವರನೊಡಗೂಡಿಹೋಗಿ ವ್ರಜಮಧ್ಯದಲ್ಲಿ ಆಡುತ್ತಿರಲದಂ ಕಂಡು ರೋಹಿಣಿ ಮನೆಗೆ ಕರೆಯೆ ಬರಲೊಲ್ಲೆಂದ ತರಳರಂ ಬಿಟ್ಟು ಮನೆಗೈದಿಯಶೋದೆಯಂ ಕಳುಹಲು, ಯಶೋದೆಯೋಡಿ ಬಂದು ಕೃಷ್ಣನ ಕೈ ಹಿಡಿದು ಪ್ರೀತಿಯಿಂ ಕರೆವಳದೆಂತೆನೆ.

ರಾ ಗಾ ॥

ಕೃಷ್ಣ ಕೃಷ್ಣನೀಬಾರೊ, ಎನ್ನಿಷ್ಟಪುತ್ರ ಮುಖವನು ತೋರೊ ॥ ಪ ॥ ಬಿಟ್ಟು ಊಟವನ್ನೆಷ್ಟು ಆಟನಾಕಷ್ಟು ಕೇಳ ನಾರೋ । ತಂದೆಬೇಗಬಾರೊ ಮುಂದೆ ಮೊಲೆಯುಕೋರೊ । ಚಂದದಿಂದಪೇರೊ ಸುಂದರಾಂಗಬಾರೋ ಎಲೆಪುತ್ರ ಕಂದ ಮಿತ್ರ ಅರವಿಂದನೇತ್ರ ವಜ್ರಗಾತ್ರ। ಆನಂದದಾತನಾ ಕೇಳೋ॥ ಆಟಸಾಕು, ಈ ಕೂಟಸಾಕು, ಪೋರಾಟಸಾಕು ॥ ಬಟ್ಟೇಳಬೇಕು, ನೀಕೇಳುಮಾತ, ಉಣ್ಣೋಳುಧಾತ ಕರುಣಾಳು ನೀ ತವಲ್ಲೇಳೋ ॥ ೧ ॥ ಬಹಳ ಹಸಿದಿಯಲ್ಲೊ ಸಾಕು ಸಾಕು ನಿಲ್ಲೋ। ರಾಮ ರಾಮ ಬಾರಪ್ಪರಾಮಾನುಜನಕರ ತಾರಪ್ಪ ಉದಯದಲ್ಲುಂಡೆಯಪ್ಪ, ಆಡಿದಣಿದೆಯೆನ್ನಪ್ಪ । ನಿಮ್ಮ ಒರಲಿಯೆಂದಿಪ್ಪ, ನಿಮ್ಮಪ್ಪಹಸಿದುಕಾದಿರ್ಪ । ಕುಲದನಂದನ ಕೇಳಪ್ಪ ಪೊಲಿದುಬಾರೊಯನ್ನಪ್ಪ।ಬಲರಾಮನ ಸಂಗಡಲಿಪ್ಪ, ಶ್ರೀಕೃಷ್ಣಪ್ಪ ಪ್ರೀತಿಯ ಪಾಲಿಸುಯೆನ್ನಪ್ಪ ॥ ೨ ॥ ಧೂಳೀ ಧೂಸರವಲ್ಲೊ ಶರೀರ—ಏಳೆಲೊ ಮಜ್ಜನ ಮಾಡಲುಕುವರ। ಮೇಲಿಂದೊದಗಿತು ಜನ್ಮದತಾರಾ । ಪಾಲಿಸು ದ್ವಿಜರಿಗೆ ಗೋಧನವಾರ । ತೈಲಾಭ್ಯಂಗನಕೆಟ್ಟದೆನೀರ— ಎಳೆಸೀಗೆ ತಿಂತ್ರಿಣಿಪಿರ । ಮೇಲೀಭ್ಯಂಗಾಮಲಕದಸಾರ । ಕೈಲವ ಕಲ್ಪಿಸಿಬಂದೆ ಕುಮಾರ । ಸಾಲದೆ ಚಂಚಲಚೇಷ್ಟೆಯುದಾರ । ಬಾಲರನೋಡೆ ಅಲಂಕೃತರಾಗಿಹರ। ಮೇಲವರಪ್ಪೆಯ ಕೈಯಲ್ಲುಂಡಿಹರ। ಜಾಲವ ಮಾಡದೆ ಬಾರೆಲೋಧೀರ—ಸಾಲಾಂಭರಣದ ಸಾಲಂಕಾರ—ತಾಳೀ ಕೊರಳಿಗೆ ಮುತ್ತಿನಹಾರ ಸಾಲಂಕೃತನಾಗಿ ಮಾಡೊವಿಹಾರ॥ ಪಾಲಿಸು ವ್ಯಾಘ್ರಾಚಲರಾಮಾನುಜ ವಿಠಲವೆಂಕಟನಾಥ— ಪಾಲಿಸೊಯನ್ನಯಮಾತ ॥೩॥

॥ ವ ಚ ನ ॥

ಇಂತು ಯಶೋದೆ ಮಮತೆಯಿಂ ರಾಮಕೃಷ್ಣರಂ ಆದರಿಸಿ ಕರೆದೆತ್ತಿಕೊಂಡು ಮನೆಗೆ ಬಂದು ಬಾಲರೀರ್ವರಿಗೂ ಉಪಚಾರ ಮಾಡಿದಳು. ಅಷ್ಟರೊಳಗತ್ತ ವ್ರಜದ ಜನರೊಳಾಲೋಚನೆಯುಂಟಾಗೆ ಅಡಿಗಡಿಗೆ ನಂದಗೋಪನರಮನೆಯಲ್ಲಿ ಕಾಣಿಸಿದ ಉತ್ಪಾತಂಗಳಂ ಕುರಿತು ನಂದಾದಿಗಳು ವಿಚಾರ ಮಾಡುತ್ತಿರುವಲ್ಲಿ ಉಪನಂದನೆಂಬ ಗೋಪನೋರ್ವನು ರಾಮಕೃಷ್ಣರ ಹಿತಾಕಾಂಕ್ಷಿಯಾಗಿ ಪೇಳ್ವನದೆಂತೆನೆ

ರಾಗ ॥ (ಕೇಳಿಕೇಳಿರಿ ನಮಪಾಳಿಯಾದವರೆನ್ನ)

ಕೇಳಿಕೇಳಿರಿ ಗೊಲ್ಲಪಾಳಿಯಾದವರೆಲ್ಲ ಏಕೀಬೇಗದಿ ವ್ರಜದೇಳಿಗೆಗಾಗಿ ॥ ಗೋಕುಲವಾಸವು ಸಾಕು ಮುಂದಕ್ಕೆ ಏಳಬೇಕುಇಲ್ಲಿರಲವಿವೇಕವುಕೇಳಿ ॥ ೧ ॥ ಮಕ್ಕಳಕೊಲ್ಲುವ ರಕ್ಕಸಿಕೈಯಲ್ಲಿ, ಸಿಕ್ಕಿದ್ದ ಬಾಲಕ ಸಿಕ್ಕಿದ್ದೆ ಹೆಚ್ಚು ॥ ೨ ॥ ಬಂಡಿಯು ಬಾಲನ ಮಂಡೆಯೊಳ್ ಬೀಳದಂತೆ ಪುಂಡರೀಕಾಕ್ಷ ಕಾದುಕೊಂಡನು ಕೇಳಿ ॥೩॥ ಪಕ್ಷಿಹಾರುವ ಅಂತರಿಕ್ಷಕ್ಕೆಬಾಲನ ಚಕ್ರವಾತನು ಮೇಲಕ್ಕೆಕೊಂಡೊಯ್ದನು ॥೪॥ ಮೇಲಿಂದ ಕಲ್ಲಿನ ಮೇಲೆಬಿದ್ದವನನ್ನು ಪಾಲಿಸಿದರು ಸುರಪಾಲಕರೆಲ್ಲ ॥೫॥ ಆ ತಾಳೆಮರವುಬಿದ್ದು ನೌಕಲ್ಲಿ ಬದುಕಿದ ಕಾಳಿಕೆ ಅತ್ಯಂತನಮೌಳಿಯಕಾಯ್ದಳು ॥ ೬ ॥ ಉತ್ಪಾತವಿಲ್ಲಿಗೆ ತಪ್ಪುವವರಿಗು ಮುಂದಿರ್ಪ್ಪುದೇಲೇಸುಪೋಪ್ಪುದಿಂ ಕೇಳಿ ॥ ೭ ॥ ಬೃಂದಾವನವು ಎಂಬ ಸುಂದರವನವು ಪಶುವೃಂದಕ್ಕೆ ಶುಭಕರದಿಂಪೊಪುತಿಹುದು ॥ ೮ ॥ ಗೋಕುಲದ ಗೋಕುಲ ಗೋಪಿಯರಿಗೆ ಪ್ರಿಯತೋವು ಪುಣ್ಯಸದಿತ್ಯಣಕಾವುಗೊಂಡಿಪುದು ॥ ೯ ॥ ವ್ಯಾಘ್ರಾದ್ರಿರಾಮಾನುಜ ವಿಠಲನ ನೆನೆಯುತ ಶೀಘ್ರದಿಂ ಗೋಧನವಗ್ರದಿನಡಿಸಿ । ಕೇಳಿ ಕೇಳಿರಿ ಗೊಲ್ಲ ॥ ೧೦ ॥

ರಾ ಗಾ ॥

ಶೃಂಗಾರವಾದರಾಗ—ಗೊಲ್ಲರುಬೇಗ ॥ ಅಂಗದೊಳಂಗಿ ಕುಲಾವಿಕುರಂಗದ । ರಂಗಿನಸಿರಿ ಕೇಳಂಗ ಪರೀಕ್ಷಿತ ॥ ಸಿಂಗರವಾದ ॥ ಅನು ॥ ಆ ಉಪನಂದನನೊಲ್ಲನು ಕೇಳ್ದರು— ಗೊಲ್ಲರೆಲರೊಂದೇಮನ ತಾಳ್ದರು । ಉಜ್ಜುಗಿಸುತ ಸಜ್ಜುಗಳಾದರು । ಸಜ್ಜನರೆಲ್ಲರು ಪ್ರಜ್ವಲಿಸಿದರು । ಸುಮ್ಮಾನದಿ ನಲಿನಲಿದಾಡಿದರು । ಸಮ್ಮತಿಯಿಂದಲೆ ಝುಮ್ಮನೆ ಎದ್ದರು । ಸರಿಸರಿ ಶಹಭಾಸೆಂದರು। ಭಳಿಭಳಿರೆ ಭಲಾರೆಂದರು। ಬಲವಂತರು ಬಂಡಿಗಳೆಳೆತಂದರು, ಮನೆ ಮನೆಗೆ ಶಕಟವನೆಳೆದರು ।

ಸಕುಟುಂಬದಿ ಶಕಟವನೇರಿದರು। ಸಂಸಾರ ಸಾಮಗ್ರಿಯ ತುಂಬಿದರು। ಒರಳನು ತೆಗೆದುಕೊಂಡರು ಕೆಲರು। ಒನಕೆಯ ಕೊಂಡರು ಕೆಲವರು । ಮೊರವನು ಕೊಂಡರು ಕೆಲವರು । ಮಕ್ಕಳು ಮರಿಗಳ ಜೊತೆಗೊಂಡರು ಜನರು, ಅಕ್ಕಿ ಬೇಳೆಯನೆಲ್ಲ ಹೂಡಿದರು । ಮಿಕ್ಕದ್ದೆಲ್ಲ ಲೆಕ್ಕಗಳಿಲ್ಲವು । ಲೆಕ್ಕವಿಲ್ಲದ ವೊಕ್ಕಲು ಹೊರಟರು। ಸುದ್ದಿಯ ಕೇಳಿ ಸಿದ್ಧರಾದರು । ವೃದ್ಧರು ಬಾಲರು ಮುಗ್ಧೆಯರೆಲ್ಲರು । ಬಂಡಿಯನೇರಿ ಮಂಡಿಸಿಕುಳಿತರು । ಗಂಡಸರು ಬಿಲ್ಲು ಬಾಣಗಳ ಹಿಡಿದರು । ಗೋಧನಮಂ ಮುಂಗಡೆಯೊಳಗಿಟ್ಟರು। ಸಾಧನ ಸಂಪತ್ತುಗಳನು ತೊಟ್ಟರು । ಶೃಂಗವಪೂರಿಸಿ ಶೃಂಗಾರವಾದರು । ಮಂಗಳವಾದ್ಯಗಳವಮಾಡುತ ಬಂದರು । ತೂರ್ಯದ ಮಹತ್ತರ ಘೋಷವಗೈದರು । ಸಾರುತ ಹೊರಟರು ಸಪುರೋಹಿತರು ನಾರಿಯರೆಲ್ಲರು ರಥವೇರಿ ಮೆರೆವರಾ ಶೌರಿಯ ಗುಣಸಂಕೀರ್ತನೆಯೊಳಿಹರು । ತರುಣಿ ಯಶೋದಾ ರೋಹಿಣಿಯರು—ಹರುಷದಿಂ ರಥವೇರಿ ಕುಳಿತರು । ವರರಾಮಕೃಷ್ಣರ ಕುಳ್ಳಿರಿಸಿಕೊಂಡರು । ಬೃಂದಾವನಕ್ಕೈತಂದವರೆಲ್ಲರು । ಎಂದಿಗೂ ಸುಖಕರ ಮಾದಾವನದಂದವ ಕಂಡರು । ಮುಂದೆ ವಸತಿಯ ಸಂಪೇರ್ಗೈದರು । ನಂದನ ಕಂದನನೊಂದಿಗೆ ಬಂದರು ಬೃಂದಾವನ ಗೋವರ್ಧನಕವರು, ಬಂದು ಯಮುನಾ ಪುಳಿನಂಗಳ ಕಂಡರು ಇಂದಿರಾಪತಿ ವ್ಯಾಘ್ರಗಿರಿರಾಮಾನುಜ ವಿಠಲನು ಸುಂದರ ಬಲರಾಮನನೊಂದಿಗೆ ಸುಖಿಸಿದರು ।

॥ ವಚನ ॥

ಇಂತು ನಂದಗೋಕುಲದವರೆಲ್ಲರೂ ಇಂದಿರೇಶನೊಡಗೂಡಿ ಬೃಂದಾವನಕ್ಕೈತಂದು ಸುಖವಸತಿಯಂ ಕಲ್ಪಿಸಿಕೊಂಡು ಆನಂದದೊಳಿದ್ದರೆಂಬಲ್ಲಿಗೆ ಗ್ರಂಥ ಭಾಗವು ಸಂಪೂರ್ಣಮಾಗಲು ಭಗವಂತನಂ ಕುರಿತು ಮಂಗಳಮಂ ಪಾಡುವರದೆಂತೆನೆ-

ಮಂಗಳಂ

ಮಂಗಳಂ ಶ್ರೀಕೃಷ್ಣ ಮೂರುತಿಗೆ-ಜಯ--ಮಂಗಳಂ ಪತ್ಯಭಾಮೆಯರಸಗೆ ॥ ಪ ॥ ದೇವಕಿಯುದರದಿ ಜನಿಸಿ ಗೋಕುಲದಲ್ಲಿ। ಗೋವಳರೊಡೆಯನ ಮನೆಯೊಳಗೆ। ಭಾವಿಸಿ ಬಲರಾಮನಸಹಿತ ಬಾಲಲೀಲೆಯ ತೋರಿ ನಲಿದವಗೆ।ಮಂಗಳಂ ॥೧॥ ಮುಂದೆ ಪೂತನಿ ಬರಲಂದು ಮೊಲೆಯನುಂಡು ರಕ್ಕಸಿಯ ಕೊಂದವಗೆ । ಕುಂದರದನ ಶರದಿಂದು ವದನನಿಗೆ ಸುಂದರ ಸುಕುಮಾರ ನಂದನಂದನಗೆ ॥ ಮಂಗಳಂ ॥ ೨ ॥ ಪಾಲು ಬೆಣ್ಣೆಯ ಕದ್ದು ಕೋಲಾಹಲವಮಾಡಿ । ಲೀಲೆಯಿಂ ಗೋಪಿಯರಿಗೆ । ಬಾಲಲೀಲೆಯ ತೋರಿ, ಬಾಲಕಿಯರ ಕೂಡಿ ಕೇಳಿಯಾಡಿದ ಗೋಪಾಲನಿಗೆ ॥ ಮಂಗಳಂ ॥ ೩ ॥ ತರುಣಿಯರ ಕರಕಮಲವ ಪಿಡಿದವರ ಅರಸುತನವಮಾಡಿ ಮೆರೆದವಗೆ । ದುರುಳ ದೈತ್ಯರ ಮೆಟ್ಟಿ ಭರದಿ ಕಂಸನ ಕುಟ್ಟಿ ಮಾತೆಯ ಕಾಲು ಸೆರೆಯ ಬಿಡಿಸಿದವಗೆ ॥ ಮಂಗಳಂ ॥ ೪ ॥ ಧರೆಯೊಳಧಿಕ ವ್ಯಾಘ್ರಗಿರಿಯೊಳು ನೆಲಸಿದ। ಕರುಣಾಸಾಗರ ಕರಿವರದನಿಗೆ। ವರದರಾಮಾನುಜ ವಿಠಲವೆಂಕಟನಾಥ । ಪರಮಪುರುಷ ಸಿರಿಯರಸನಿಗೆ ॥ ಮಂಗಳಂ ॥ ೫ ॥

—ಶ್ರೀ ಕೃಷ್ಣಾರ್ಪಣಮಸ್ತು—

ಕಾಳಗೌಡ.

(ಗೋವುಕಥೆಯ ಮಟ್ಟು)

ಹಾಲಹಳ್ಳಿಯ ಕಾಳಗೌಡನು
ಮಾಳಿಯೆಂಬಾ ಮಡದಿಯೊಂದಿಗೆ
ಬಾಳಿದಾ ಪರಿ ಪೇಳ್ವೆನೀಗಳೆ
ಕೇಳಿರೆಲ್ಲರು ಕೂಡುತೆ ॥ ೧ ॥

ಕಾಳು ಕಣಜಗಳೊಳಗೆ ಬಿರಿವುದು
ಏಳು ಹಸುಗಳ ಹೈನವಿರುವುದು,
ಮೇಲೆ ಮೂರೆಮ್ಮೆಗಳು ಕರೆವುವು,
ಚೀಲದೊಳು ಬಲು ರೊಕ್ಕವು ॥ ೨ ॥

ಇರುವುದಾತಗೆ ಚಲುವ ಮನೆಯು,
ಎರಡು ವರುಷದ ತರಳನಿರುವನು,
ನೆರೆಯೊಳೀತನ ಮಾತುನಡೆವುದು,
ಕಿರಿಯರಂಜುವರವನಿಗೆ ॥ ೩ ॥

ಇಷ್ಟು ಸಂಪತ್ತುಳ್ಳ ಗೌಡಗೆ
ಕೆಟ್ಟ ಸಿಟ್ಟಿನಚಾಳಿಯಿರುವುದು,
ಕಷ್ಟಮಾಡುವ ಹೆಂಡಿತಿಯುಂ
ದಿಟ್ಟತನದಲಿ ಬೈವನು ॥ ೪ ॥

ಎತ್ತರದೆ ಕೆಲಸಗಳ ಮಾಡಲು
ಮೆಚ್ಚಿಕೆಯ ಮಾತೇನು ಹೊರಡದು,
ಹುಚ್ಚುಕೂಗುಗಳಿಂದೆ ಕಿರಿಚುತೆ
ಮುಚ್ಚರಿಸುವನು ಮಡದಿಯ ॥ ೫ ॥

ನೊಂದು ಗೌಡನ ಮಡದಿ ಮನದೊಳು
ಕುಂದನೆಣಿಸದೆ ಸುಮ್ಮನಿರುವಳು
ಎಂದಿಗಾದರು ಬುದ್ಧಿ ಗಂಡಗೆ
ಬಂದೆ ಬರುವುದು ಎನ್ನುತಾ ॥ ೬ ॥

ಪೀಡೆ ಬಹಳವ ಮಾಡತೊಡಗಲು
ಬೇಡಿಕೊಂಬಳು ಬೇಡವೆನ್ನುತೆ,
ಗೌಡಕೇಳನು ಮಾಡಿಸಿಡುಕನು
ಕಾಡುತಿರುವನು ಮಡದಿಯ ॥ ೭ ॥

ಉರಿವ ಬೇಸಗೆಯೊಂದು ದಿನದಲಿ
ಹೊರಗೆ ಗದ್ದೆಗೆ ಹೋಗಿ ಗೌಡನು
ಹೊರೆಯ ಹುಲ್ಲನು ಹೊತ್ತು ತಲೆಯೊಳು
ಕುರಿತು ಮನೆಯನು ತೆರಳಿದ ॥ ೮ ॥

ಬಿಸಿಲ ಬೇಗೆಯು ಮೇಲೆ ಕಾಯುವುದು,
ಹಸಿವಿನಿಂದಲೆ ಹೊಟ್ಟೆ ಬೇಯುವುದು,
ನೊಸಲು ಬೆವರಿಂ ತುಂಬುತಿರುವುದು
ದೆಸೆಯು ಕಾಣದು ಗೌಡಗೆ ॥ ೯ ॥

ಬಂದು ಮನೆಯನು ಸೇರಿ ಗೌಡನು
ಗೊಂದಲವ ಮಾಡುತ್ತ ಬೋನವ
ತಿಂದು ನುಡಿದನು ಗೌಡನಾನಿಗೆ
ಮುಂದೆ ಪೇಳುವ ತೆರದೊಳು ॥ ೧೦ ॥

ಏನೆಲೇ! ನಿನಗೇನು ತಿಳಿವುದು
ನಾನು ಬಿಸಿಲೊಳು ಪಡುವ ಬವಣೆಯು!
ಗೋಣಬಾಗಿಸಿ ಹುಲ್ಲ ಕುಯ್ವುದು
ಶಾನೆ ಗಾಸಿಯು, ಗಾಸಿಯು! ॥ ೧೧ ॥

ವ್ಯಾವಹಾರಿಕವಾದ ಅಚ್ಚಕನ್ನಡದಲ್ಲಿ ‘ ರಂಗಶೆಟ್ಟಿ ” ಮೊದಲಾದ ಕೃತಿಗಳನ್ನು ರಚಿಸಿದ “ ಮಲ್ಲಿಗೆ ” ಎಂಬನನ್ನ ಸೋದರಿಯು (Sow. Toolsi Bai. Mrs. Subbarao Bellary) ಕೆಲವು ದಿನಗಳ ಕೆಳಗೆ ತನ್ನ ಇಪ್ಪತ್ತಯ್ದನೆಯ ವಯಸ್ಸಿನಲ್ಲಿ ಕ್ಷಯರೋಗಕ್ಕೆ ತುತ್ತಾದರು. ಈಕೆಗೆ ಅನ್ಯಭಾಷೆಗಳನ್ನು ಪಯೋಗಿಸದೆ ಕೇವಲ ಅಚ್ಚಗನ್ನಡದಲ್ಲಿಯೇ ಬರೆಯಬೇಕೆಂದು ಬಹು ಆಸೆ. ವಿರಾಮದೊರೆತಾಗ ಕೆಲವು ಸಣ್ಣಸಣ್ಣ ಕೃತಿಗಳನ್ನು ಬರೆದು ಇರುತ್ತಾರೆ. ಈ ಮೇಲಣ ಕೃತಿಯು ಅವುಗಳಲ್ಲಿ ಒಂದಾಗಿದ್ದು ಹೆಂಗಸರ ಮಹತ್ವವನ್ನು ಬೋಧಿಸತಕ್ಕುದಾಗಿಯೂ ಹಾಸ್ಯರಸಪ್ರದವಾಗಿಯೂ ಇದೆ.

M. N. G.

ಹೆಂಗಸರಿಗೇನಿಹುದು ಗಾಸಿಯು?
ಅಂಗಳದೊಳೆಳೆಬಿಸಿಲ ಕಾಸುತೆ—
ಸಂಗಡಿಗರೊಡನಾಡಿ ಮೆರೆವುದು—
ಹೆಂಗಸರು ಪಡೆದಿರುವುದು ॥ ೧೨ ॥

ಸುಡುವಬಿಸಿಲೊಳು ಹೊರಗೆಹೋಗದೆ
ಮಡದಿಯರು ಮನೆಯೊಳಗೆ ನಿಲ್ಲುತೆ,
ಪಡದೆ ಗಂಡಸು ಪಡುವ ಬವಣೆಯು
ಕಡುಗಿ ಪದುಳದೊಳಿರುವರು ॥ ೧೩ ॥

ನಾನು ಮಾಡುವ ಕಷ್ಟಕೆಲಸಗ—
ಳೇನು ಸಾಧ್ಯವೆನಿನಗೆ? ಬಲು ಬಿ—
ನ್ನಾಣತನದಿಂ ಮಾಡಹೋದರೆ
ಬೇನೆ ಬರುವುದು ತಪ್ಪದೆ ॥ ೧೪ ॥

ಕೇಳಿ ಗಂಡನ ಮಾತ ಮಾಳಿಯು
ತಾಳಿಕೊಳ್ಳುತ ಬಂದ ಸಿಟ್ಟನು
ಓಲೆಸುತ್ತಾಡಿಸುತೆ ಕಿವಿಯೊಳು
ಪೇಳಿದಳು ಮೆಲ್ಲುಡಿಯೊಳು ॥ ೧೫ ॥

ತರುವುದಕ್ಕೇ ಗಂಡನಿರುವುದು
ನೆರೆದು ತಿನ್ನುವುದಕ್ಕೆ ಹೆಂಡಿರು
ಇರುವರೆನ್ನುತೆ ಹೇಳಿಕೊಳ್ಳುವ
ಹಿರಿಯರಾನುಡಿ ಯರಿಯರಾ? ॥ ೧೬ ॥

ಮಡದಿ ಪೇಳಿದ ಮಾತಕೇಳುತ
ಪೊಪೆಯೊಳಗೆ ಮಿಗೆ ಬೆಂಕಿಬೀಳಲು
ಸಿಡಿದು ಬೀಳುತೆ ಸಿಟ್ಟಿನಿಂದಲೆ
ನುಡಿದನೀಪರಿ ರೇಗುತೆ ॥ ೧೭ ॥

ನಾವು ಹೇಸರಕತ್ತೆಗಳು ದಿಟ;
ಸೇಸೆ ಮಾಡುವುದೆಮ್ಮ ಕೆಲಸವು,
ನಾವು ದುಡಿದುದ ಕುಳಿತು ಸುಮ್ಮನೆ
ಮೇವ ಕೆಲಸವು ನಿಮ್ಮದು! ॥ ೧೮ ॥

ಸಮ್ಮತವು; ಸಿಟ್ಟೇಕೆ? ಹೊರಗಡೆ
ನಿಮ್ಮ ಕೆಲಸವೆ ಮಿಗಿಲು; ಮನೆಯೊಳ
ಗೆಮ್ಮ ಪಾಲಿಗು ಕೆಲಸವಿಲ್ಲವೆ
ಸುಮ್ಮನೆಯೆ ಕುಳಿತಿರುವೆವೇ? ॥ ೧೯ ॥

ಉಡುಗೆ ಸಾರಣೆಯೊಂದು ಕೆಲಸವೆ?
ಅಡುಗೆ ಮನೆಯಾ ಕೆಲಸಲೆಕ್ಕವೆ?
ಬಿಡುವು ಹೇರಳವಾಗಿದೊರೆಯಲು
ಬಡಿವುತಿರುವಿರಿ ಹರಟೆಯು ॥ ೨೦ ॥

ಇದಕೆ ತಕ್ಕುದ ಮಾಡದಿದ್ದರೆ
ಪದುಳಹೆಚ್ಚಲು ಸೊಕ್ಕಿಬಿರಿಯುವೆ;
ಮೊದಲು ಮಾಡುವೆನಿದಕೆದಾರಿಯು
ಹದನ ನೋಡುವೆ ಎಂದನು ॥ ೨೧ ॥

ಸುಮ್ಮಸುಮ್ಮನೆ ಕೋಪವೇತಕೆ?
ನಮ್ಮ ನಮ್ಮೊಳು ಜಗಳವೇತಕೆ?
ನಿಮ್ಮ ಮಾತಿಗೆ ಬೇರೆ ನುಡಿವೆನೆ?
ಹಮ್ಮು ನನಗೇನಿರುವುದೇ ? ॥ ೨೨ ॥

ಹೆಚ್ಚು ನುಡಿಗಳನಾಡದಂತೆ
ಮುಚ್ಚಿಬಾಯನು ಕೇಳು ಮಾತನು
ಕೊಚ್ಚದಿರು ಜಂಬವನು ಎನ್ನಯ
ಇಚ್ಛೆಗಿದಿರೇ ಹುಟ್ಟಿಯೇ ॥ ೨೩ ॥

ಇಷ್ಟು ದಿವಸಗಳಿಂದ ನಾನೆಯೆ
ಕಷ್ಟಪಟ್ಟೆನು ಹೊರಗೆ ಬಿಸಿಲೊಳು
ಬಿಟ್ಟುಬಿಡುವೆನು ನಾಳೆಯಿಂದೀ
ಕಷ್ಟವನು ನಿನಗಾಗಿಯೇ ॥ ೨೪ ॥

ನಾಳೆ ಬೆಳಗಿನ ಜಾವದಿಂದ
ಕೇಳು! ನನ್ನಯ ಕೆಲಸಗಳನು
ಮಾಳಿ, ನೀನೇ ಮಾಡು; ಮನೆಯೊಳು
ಕೂಳ ನಡುವೆನು ನಾನೆಯೇ ॥ ೨೫ ॥

ಎಂದ ಮಾತಿಗೆ ಗೌಡಸಾನಿಯು
ಮುಂದೆ ಬಾರದೆ ಹಿಂದುಗಡೆಯೇ
ನಿಂದು ನುಡಿದಳು ತನ್ನ ಗಂಡಗೆ
ಮುಂದೆ ಪೇಳುವ ತೆರದೊಳು ॥ ೨೬ ॥

ಕಷ್ಟದಾ ಕೆಲಸಗಳು ನಿಮ್ಮವು
ಹಿಟ್ಟನಡುವುದು ನಮ್ಮ ಕೆಲಸವು
ಇಷ್ಟಬಂದರೆ ನಮ್ಮ ಕೆಲಸವ
ಚಟ್ಟನೆಯೆ ನೀಂ ಮಾಳ್ಪರಿ ॥ ೨೭ ॥

ಹೆಂಗುಸಿರದೆಯೆ ನಿಮ್ಮ ಕೆಲಸಕೆ
ಸಂಗಡಲೆ ತಾಂ ಕೈಯ ಹಾಕಲು.
ಮಂಗಮೋರೆಯ ತಾಳಿಕೊಳ್ಳುತೆ
ಕಂಗೆಡುತ್ತಲಿ ಸಾಯ್ವಳು ॥ ೧೮ ॥

ಮುಚ್ಚು ಬಾಯನು ಹುಚ್ಚುನಾಯಿಯೆ!
ಎಚ್ಚರಿಲ್ಲದೆ ಏನ ಬೊಗಳುವೆ?
ಹೆಚ್ಚು ಮಾತಾಡಿದರೆ ನಿನ್ನನು
ಬೆಚ್ಚಿಬಿಡುವೆನು ಎಂದನು. ॥ ೧೯ ॥

ಹುಚ್ಚು ಕೂಗುಗಳನ್ನು ಕೇಳುತೆ
ಚಚ್ಚರುಳ್ಳ ಗೌಡನಾನಿಯು,
ರಚ್ಚೆ ಹೆಚ್ಚಳವಾಗದಂತೆ
ಬಿಚ್ಚದಿದ್ದಳು ಬಾಯನು ॥ ೨೦ ॥

ಕಾಳಗೌಡನು ಮತ್ತೆ ನುಡಿದನು
ನಾಳೆ ಎರಡನೆ ಜಾವದೊಳಗೆ
ಮೇಲು ಬೋನವ ಮಾಡಿಕೊಂಡು
ವೇಳೆ ತಪ್ಪದೆ ತರುವೆನು ॥ ೨೧ ॥

ಎರಡು ಚೀಲವ್ರು ಬಿರಿಯುವಂತೆ
ಭರದಿ ಕುಯ್ಯುವೆ ನಾನು ಹುಲ್ಲನು,
ಸರಿಯು ಹುಲ್ಲನು ತಾರದಿದ್ದರೆ
ಇರೆನು ಸುಮ್ಮನೆ ಖಂಡಿತ ॥ ೨೨ ॥

ಮಾಳಿ ಕಳೆಯುತೆ ರಾತ್ರಿಯನ್ನು
ಕೋಳಿ ಕೂಗಲು ಬಿಟ್ಟು ಹಾಸುಗೆ
ಕಾಳಗೌಡನು ಪವಡಿಸಿರಲು–
ಬೀಳುಕೊಂಡಳು ಮನೆಯನು ॥ ೨೩ ॥

ಚೆಕ್ಕುವಾ ಹಾರೆಯನು ಹಿಡಿಯುತೆ
ಚಿಕ್ಕವೊಂದನು ಹಾಕಿ ಹೆಗಲಿಗೆ
ಬೆಕ್ಕುಕ್ಷಿಹಾದಿಯೊಳಡ್ಡ ಒಂದರು
ಲೆಕ್ಕ ಮಾಡದೆ ಹೊರಟಳು ॥ ೨೪ ॥

ನಾರಿ ಬೇಗನೆ ಗದ್ದೆಯನ್ನುತ
ಮೂರುತಾಸುಗಳೊಳಗೆ ಹುಲ್ಲನು
ಸೇರಿಸಿಡುತಲೆ ಬಂದು ಕುಳಿತಳು
ನೇರಳೆಯ ಗಿಡದಡಿಯೊಳು ॥ ೨೫ ॥

ಕೋಲಪುರದಾ ದಾರಿಯಾಗಿರೆ,
ಹಾಲುಮಾರುವರೆಲ್ಲ ದಣಿಯುತೆ
ಮಾಳಿ ಕುಳಿತಾ ಗಿಡದ ಕೆಳಗಡೆ
ಕಾಲಹಾಕುತೆ ಬಂದರು ॥ ೨೬ ॥

ಗೌಳಿಗಿತ್ತಿಯರನ್ನು ಕರೆಯುತೆ
ಮೇಲು ಕತೆಗಳನವರಿಗರುಹುತೆ
ಮಾಳಿಯವರಾ ಮಡಕೆಯೊಳಗಿನ
ಹಾಲ ಕೇಳುತೆ ಕುಡಿದಳು ॥ ೨೭ ॥

ಕುಪ್ಪಿಯೆಂಬಾ ಗೊಲ್ಲಳೊಬ್ಬಳು
ಕುಪ್ಪಸವನೊಂದನ್ನು ಹೊಲಿಸಲು
ಚಿಪ್ಪಿಗನು ಪುರದಲ್ಲಿ ದೊರೆಯದೆ
ಒಪ್ಪಿಸಿದಳಾ ಮಾಳಿಗೆ ॥ ೨೮ ॥

ಹೊಲಿಗೆ ಕೆಲಸವನಕ್ಕರೆಯಿಂದಲಿ
ಕಲಿತ ಮಾಳಿಯು, ಕೊಂಡು ರವಿಕೆಯ
ಚೆಲುವ ಪರಿಯೊಳು ಗೊಲ್ಲಗಿತ್ತಿಗೆ
ಹೊಲಿದು ಕೊಟ್ಟಳು ಬೇಗನೆ ॥ ೨೯ ॥

ಅಡಿಕೆ ಸುಣ್ಣವ ವೀಳ್ಯದೆಲೆಯನು
ಕೊಡಲು, ತೆಗೆದುಕೊಂಡು ಮಾಳಿಯು
ಹುಡುಕಿ ಚೀಲದೊಳಿಟ್ಟ ಕಡ್ಡಿಯ
ಪುಡಿಯ ಹಂಚಿದಳವರಿಗೆ ॥ ೩೦ ॥

ಹರಿಸಿ ದಣಿವನು ಗಿಡದ ನೆರಳೊಳು
ಇರಲು, ಮನೆಯೊಳು ಕಾಳಗೌಡನು
ಎರಡು ತಾಸಿನ ಮೇಲೆ ನಿದ್ದೆಯ
ತೊರೆದು, ದಿಗಿಲೊಳಗೆದ್ದನು ॥ ೩೧ ॥

ಬಿಸಿಲು ಬೆಳಕುಗಳೆಲ್ಲ ಕಡೆಯೊಳು
ಪಸರಿಸಿ‌ಮ್ ಮೇಣ್ ತರಳನಳುವನು!
ಹಸುಗಳೆಲ್ಲವು ಕೂಗುತಿರುವುವು
ಕಸವ ಕಾಲೊಳು ಕೆರೆಯುತಾ ॥ ೩೨ ॥

ಒಡನೆ ಮೆಯ್ಯನು ಕೊಡವಿಕೊಳ್ಳುತೆ
ಹುಡುಕಿ ಮನೆಯೊಳಗೆಲ್ಲ ನೋಡಲು,
ಅಡುಗೆ ಮನೆಯೊಳು ಕಸದ ಕುಪ್ಪೆಯು
ಬಡಿವುತಿರುವುದು ನಾತವು! ॥ ೩೩ ॥

ದಿಟ್ಟಮುಖದಾ ಕಾಳಗೌಡನು
ತಟ್ಟನೆಯೆ ನೀರ್ಮನೆಗೆ ಹೋಗುತೆ
ತೊಟ್ಟಿಯೊಳು ತಾಂ ತೊಂಗಿನೋಡಲು
ಬಟ್ಟ ನೀರೂ ಕಾಣದು ॥ ೪೪ ॥

ದನದ ಕೊಟ್ಟಿಗೆಯೆಲ್ಲ ಸಗಣಿಯು
ಮನೆಯೊಳಗೆ ಬಲು ರಂಪುತುಂಬಿರೆ
ಮನದಿ ಕಳವಳಗೊಂಡು ಗೌಡನು
ಕನಲುತಿದ್ದನು ಸಿಡಿಯುತಾ ॥ ೪೫ ॥

ಕಡಿದು ಕಷ್ಟವು ಬಂದಿತೆನ್ನುತೆ
ಅಡುಗೆ ಮನೆಯೊಳು ಹೊಕ್ಕುನೋಡಲು,
ಗಡಿಗೆ-ಮಡಕೆಗಳಿರವ ಕಂಡು
ಬಡವ ಗೌಡನು ಬೆದರಿದ ॥ ೪೬ ॥

ಒಲೆಯು ಬೂದಿಯನೆತ್ತಿಸಾಗಿಸಿ
ನೆಲವ ಗುಡಿಸುತೆ ಮತ್ತೆ ಸಾರಿಸಿ
ಗೆಲುವುದೆಂತುಟು ನಾನು ಎನ್ನುತೆ
ಹಲುಬಿ ನೊಂದನು ಮನದೊಳು ॥ ೪೭ ॥

ಇಂತು ಗೌಡನು ಹಲವು ಪರಿಯಲಿ
ಚಿಂತಿಸುತ್ತಿರಲತ್ತ ತರಳನು
ಪಂತ ಹಿಡಿಯುತ ಅಳುವ ಕಿತ್ತಿದ
ನೆಂತು ಪೇಳಲಿ ಅಂದವ ॥ ೪೮ ॥

ಹೊರಕಡೆಗೆ ಕರೆದೊಯ್ವರಿಲ್ಲದೆ
ತರಳ ಮಲಗಿದ ಕಡೆಯೆ ಹೋಗಿರೆ,
ಇರದೆ ಹೊರಳಲು ಮೈಯ್ಗೆ ಮೆತ್ತಿರೆ,
ಹರಿಯೆ ಮೂತ್ರದ ಕೋಡಿಯು ॥ ೪೯ ॥

ನೋಡಿ ಗೌಡನು ಕೆಟ್ಟೆನೆನ್ನುತ
ಓಡಿಹೋದನು ನೆರೆಯಹಟ್ಟಿಗೆ.
ಬೇಡಿ ತಂಬಿಗೆ ತುಂಬ ನೀರನು
ಕೂಡಲೆಯೆ ತಾಂ ತಂದನು ॥ ೫೦ ॥

ಎರೆದು ನೀರನು ತರಳನೊಡಲಿಗೆ
ಒರೆಸಿ ಮೈಯ್ಯನು ಪಿಡಿದು ಬೈಯಲು
ಇರದೆ ತರಳನು ಕರೆದು ಕಂಬನಿ
ಮರುಗಿ ಕೂಗುತ್ತಳಲಿದ ॥ ೫೧ ॥

ಕಂಗೆಡುತ್ತಿಹ ಕಂದಗೋಸುಗ
ತಂಗಳಾಗಿಹ ರೊಟ್ಟಿಯೊಂದನು
ಅಂಗಳಕೆ ತಾಂ ತಂದು ಮಗುವನು
ಸಂಗಡಲೆಯೆ ಕರೆತಂದನು ॥ ೫೨ ॥

ಪುಟ್ಟ ಮಗುವಿಗೆ ರೊಟ್ಟಿ ಕೊಡುತಲಿ
ಕೊಟ್ಟಿಗೆಯು ಕಡೆ ಗೌಡ ಪೋಗಲು
ಕೆಟ್ಟ ಕಾಗೆಯು ಪುಟ್ಟಮಗುವಿನ
ರೊಟ್ಟಿಯನು ಕಸಿದೋಡಿತು ॥ ೫೩ ॥

ಮಿಗಿಲು ಹೊತ್ತಾಯ್ತೆಂದು ಗೌಡನು
ದಿಗಿಲಿನಿಂದಲೆ ಕೊಟ್ಟಿಗೆಯು ಕಡೆ
ಹೊಗುತಹಾಲನು ಕರೆಯತೊಡಗಲು
ಸಿಗಿದು ಹಸುವಿರದೊದ್ದಿತು ॥ ೫೪ ॥

ಒದ್ದಪೆಟ್ಟಿಗೆ ಸಗಣಿರಾಸಿಯು
ಮುದ್ದೆಯೊಳು ಮುಳುಗುತ್ತೆ ಗೌಡನು
ಸುದ್ದಿಯಿಲ್ಲದೆ ಸದ್ದುಮಾಡದೆ
ಎದ್ದ ಗಳಿಗೆಯು ಬೈದನು ॥ ೫೫ ॥

ಬೇರೆ ಬಟ್ಟೆಯ ಹಾಕಿಕೊಳ್ಳುತೆ
ಸಾರಿ ನಡೆದನು ನೆರೆಯು ಹಟ್ಟಿಗೆ
ಸೇರು ಹಾಲನು ಕೊಂಡುತಂದನು
ಕೀರ ಮಾಡುವೆನೆನ್ನುತಾ ॥ ೫೬ ॥

ಕಸವು ಮನೆಯೊಳು ಪಸರಿಸಿರಲು
ಮುಸುರೆ ಮಡಕೆಯು ತೊಳೆಯದಿರಲು,
ಹಸಿವು ಗೌಡನ ಕಾಡುತಿರಲು,
ಬಸಿದ ಮಡಕೆಗೆ ಹಾಲನು ॥ ೫೭ ॥

ಚಕ್ಕಮುಕ್ಕಿಗೆ ಬೆಂಕಿ ಹತ್ತದೆ
ಪಕ್ಕದಲ್ಲಿಯ ಮನೆಗೆ ಹೋಗಿ
ಚಿಕ್ಕಸೌಟಿನೊಳು ಬೆಂಕಿಬೇಡಲು
ನಕ್ಕು ಕೊಟ್ಟಳು ಕೆಂಡವ ॥ ೫೮ ॥

ತಂದು ಬೆಂಕಿಯ ಕುಳಿತು ಒಲೆಯು
ಮುಂದೆ, ಗೌಡನು ಊದುತ್ತಿರಲು
ಹಿಂದುಗಡೆಯೊಳು ಹಸುವು ಕೊಟ್ಟಿಗೆ
ಯಿಂದ ಮಾಳಿಗೆ ಹತ್ತಿತು ॥ ೫೯ ॥

ಕಟ್ಟು ಬಿಚ್ಚದೆ ಹಸುವು ಬೇಸರು
ಪಟ್ಟು ಹಗ್ಗವ ಜಗ್ಗಿ, ಹಂತವ
ನೆಟ್ಟನೇರುತೆ, ಸೇರಿ ಮಾಳಿಗೆ,
ತಟ್ಟತಟ್ಟನೆ ಕುಣಿಯಿತು ॥ ೬೦ ॥

ಸದ್ದು ಕೇಳುತೆ ಕಾಳಗೌಡನು
ಎದ್ದು ಮೇಲ್ಕಣ್ಣೆತ್ತಿ ನೋಡಲು
ಬಿದ್ದು ಮಣ್ಣಿನ ಧೂಳು ಕಣ್ಣೊಳು
ಶುದ್ಧ ಬೆಪ್ಪನ ಮಾಡಿತು ॥ ೬೧ ॥

ಆಗ ಗೌಡನು ರೇಗಿಕೊಂಡುರೆ
ಕೂಗಿಕೊಳ್ಳುತೆ ಹಂತದಿಂದಲೆ
ನಾಗಿ ಹತ್ತುತೆ ಸೇರಿಮಾಳಿಗೆ
ತಾಗಿ ಬಡಿದನು ಹಸುವನು ॥ ೬೨ ॥

ಹಿಡಿದು ಮೂಗಿನ ಹಗ್ಗವನ್ನುರೆ
ಬಿಡದೆ ಸೆಳೆಯುಲು ಕಾಳಗೌಡನು
ಬಡಿದ ಸಿಟ್ಟಿಗೆ ಕೊಂಬಿನಿಂದಲಿ
ಜಡಿದು ತಿವಿಯುಲು ತೊಡಗಿತು ॥ ೬೩ ॥

ಕಡಿದು ಕಷ್ಟವು ಬಂದಿತೆನ್ನುತೆ
ಒಡನೆ ಗೌಡನು ದಸದ ಹಗ್ಗವ
ಬಿಡುತೆ ಬೆಳಕಿನ ಕಂಡಿಯಿಂದಲಿ
ಕಡೆಗೆ ಬಂದನು ಕೆಳಗಡೆ ॥ ೬೪ ॥

ಬಿಟ್ಟು ಹಗ್ಗವ ಕೆಳಗೆ ಕೈಯೊಳು
ಗಟ್ಟಿಯಾಗಿಯೆ ಪಿಡಿದುಕೊಂಡು
ಸುಟ್ಟು ಒಲೆಯಾ ಬಳಿಗೆ ಬರಲಾ
ಕೆಟ್ಟ ಹಸು ಬಲು ಜಗ್ಗಿತು ॥ ೬೫ ॥

ಕೈಲಿಹಿಡಿಯುಲು ಬಲವು ಸಾಲದೆ
ನೂಲಹಗ್ಗವ ಬಿಗಿಯೆ ಸೊಂಟಕೆ
ಹಾಳುಹಸುವದು ಬೆದರಿ ಬೇಗನೆ
ಮಾಳಿಗೆಯ ಬಿಟ್ಟಿಳಿಯಿತು ॥ ೬೬ ॥

ಆಗ ಗೌಡನು ಹಸುವಿನೆಳೆತದಿ
ತೂಗ ಬೀಳುತೆ ಬೆಳಕು ಕಂಡಿಗೆ
ಕೂಗಿಕೊಳ್ಳಲು ಹೊರಗಿನಿಂದಲಿ
ಬೇಗ ಬಂದನು ತರಳನು ॥ ೬೭ ॥

ಉರಿಯುತಿರುವ್ವದ ಕಂಡು ಭರದೊಳು
ತರಳನಿರದೆಯೆ ಕರವನೊಲೆಯೊಳು
ಸರಿಸಿ ಚಾಚಲು, ಬಿಸಿಯು ತಾಕಲು
ಕಿರಿಚಿ ಕೂಗುತೆ ನೊರಗಿದ ॥ ೬೮ ॥

ಏನಮಾಡಲು ಕೈಲಿನಾಗದೆ
ಶಾನೆ ಕಳವಳಗೊಂಡು ಗೌಡನು
ಮಾನಹೋದರೆ ಹೋಗಲೆನ್ನುತೆ
ದೀನನಂದದೆ ಹಲುಬಿದ ॥ ೬೯ ॥

ಹೊತ್ತು ಮೀರಲು ಮಾಳಿ ಮನದಲಿ
ಹೆತ್ತಮಗುವಿನ ಮೇಲಿನೆರಕದಿ
ತತ್ತರವಗೊಳ್ಳುತ್ತಲಾಕ್ಷಣ
ಹೊತ್ತು ಹೊರೆಯನು ಹೊರಟಳು ॥ ೭೦ ॥

ಬಂದು ನೋಡಿದಳೆಲ್ಲ ಪರಿಯನು
ನೊಂದು ಮನದಲಿ ಬಿಡಿಸಿ ಗಂಡನ
ದಂದುಗಂ ಗೊಂಡೆಲ್ಲ ಕೆಲಸವ
ಅಂದಮಾಡಲು ಹೊರಟಳು ॥ ೭೧ ॥

ಬೇಗ ಬೋನವಮಾಡಿ ಬಡಿಸಲು
ಆಗ ಗೌಡನು ನುಡಿದನೀಪರಿ—
‘ ಸಾಗದೀ ಮನೆಕೆಲಸ ನನ್ನಿಂ-
ದೇಗಲಾರದು ಮಾಳಿಯೇ ” ॥ ೭೨ ॥

“ ಬರಿದೆ ನಿನ್ನನು ಜರಿಯುತಿದ್ದೆನು
ಸರಿಯು ತೆರದಿಂ ಅರಿವ ಕಲಿತೆನು
ಮರೆಯೆನೆಂದಿಗು; ನಾಳೆಯಿಂದಲಿ
ಹೊರಗೆ ಹೊರಡುವೆ ಹುಲ್ಲಿಗೆ ” ॥ ೭೩ ॥

ಇಂತು ಕಾಳನು ಮಾಳಿ ಮಕ್ಕಳು
ಸಂತಸದಿ ತಾವಿನ್ನು ಮನೆಯೊಳು
ಚಿಂತೆಗಳಿಗೆಡೆಗುಡದೆ ಬಾಳಿದ
ರಂತೆ ಮುಗಿದುದು ಇಲ್ಲಿಗೆ ॥ ೭೪ ॥

“ ಮಲ್ಲಿಗೆ ”

ವಿ.ಸೂ:—

ಇಂತಹ ಅಚ್ಚ ತಿಳಿಗನ್ನಡನುಡಿಯಲ್ಲಿ ನಮ್ಮ ಸೋದರಿಯರು ರಚಿಸಿ ಕಳುಹುವ ಕೃತಿಗೆ ನಂದಿನಿಯಲ್ಲಿ ಮೊದಲು ಆಶ್ರಯವನ್ನು ಕೊಡಲಾಗುವುದು.

ವಿವಾಹಯೋಗ್ಯನಾದ ಪುರುಷನು.

ಪುರುಷನು ವಿವಾಹವನ್ನು ಯಾವಾಗ್ಗೆ ಮಾಡಿಕೊಳ್ಳಬೇಕು, ಅದನ್ನು ಮಾಡಿಕೊಳ್ಳುವದಕ್ಕೆ ಪೂರ್ವದಲ್ಲಿ ಅವನು ಎಂಥ ಸ್ಥಿತಿಯನ್ನು ಹೊಂದಿರಬೇಕು. ಮುಂತಾದ ಪ್ರಶ್ನಗಳ ಬಗ್ಗೆ ಶ್ರೀಭವಿಷ್ಯಮಹಾಪುರಾಣದ ಬ್ರಾಹ್ಮಪರ್ವದ ಅರನೆಯ ಅಧ್ಯಾಯದಲ್ಲಿ ಒಳ್ಳೆ ಸಮರ್ಪಕವಾದ ಉತ್ತರವಿರುವದು; ಅದು ಕೇವಲ ವಾಚನೀಯವಾಗಿರುವದಲ್ಲದೆ ಮನನೀಯವೂ ಆಗಿರುವದರಿಂದ ಅದನ್ನು ನಾವು ಇಲ್ಲಿ ಹೇಳಬಿಚ್ಛಿಸುತ್ತೇವೆ.

‘‘ಮೊದಲು ವಿದ್ಯಾದಿಗಳನ್ನು ಸಂಪಾದಿಸಿ, ಅವುಗಳ ಸಾಧನದಿಂದ ಕ್ರಮವಾಗಿ ದ್ರವ್ಯವನ್ನು ಸಂಪಾದಿಸಿ, ಆ ಬಳಿಕ ಶಾಸ್ತ್ರೋಕ್ತ ವಿಧಿಯಿಂದ ಯೋಗ್ಯಳಾದ ಭಾರ್ಯೆಯನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಯಾಕೆಂದರೆ, ನಿರ್ಧನರಿಗೆ ಗೃಹಸ್ಥಾಶ್ರಮವು ಸುಖಕರವಾಗಿರದೆ ಕ್ಲೇಶದಾಯಕವಾಗಿಯೇ ಇರುತ್ತದೆ. ಅದಕ್ಕಾಗಿ ಗೃಹಸ್ಥಾಶ್ರಮದ ಇಚ್ಛೆಯನ್ನು ಮಾಡುವ ಪುರುಷನು, ಮೊದಲು ದ್ರವ್ಯವನ್ನೇ ಸಂಪಾದಿಸಬೇಕು. ಮನುಷ್ಯನು ನರಕದಲ್ಲಿಯ ತೀವ್ರನಾದ ದುಃಖಗಳನ್ನು ಸಹಿಸಬಹುದು; ಆದರೆ ಗೃಹದಲ್ಲಿ ಕ್ಷುಧೆಯಿಂದ ಪೀಡಿತರಾದ ಹೆಂಡಿರು ಮಕ್ಕಳನ್ನು ನೋಡುವದು ಅಸಾಧ್ಯವಾದದ್ದು. ತನ್ನ ಅರ್ಭಕವು ಯಾವದಾದರೊಂದು ಪದಾರ್ಥವನ್ನು ಬೇಡಿ ಅಳುತ್ತಿರುವಾಗ, ದಾರಿದ್ರ್ಯದ ಮೂಲಕವಾಗಿ ಅದನ್ನು ಅದಕ್ಕೆ ಕೊಡಲು ಅಸಂಭವನೀಯವಾದರೆ, ಅದರಿಂದ ವಿದೀರ್ಣವಾಗದ ಹೃದಯವು ವಜ್ರಕ್ಕೂ ಕಠಿಣವಾಗಿರಬೇಕು. ಪ್ರಿಯಳೂ ಸಾಧ್ವಿಯೂ ಆದ ತನ್ನ ಭಾರ್ಯೆಗೆ ಉಟ್ಟುಕೊಳ್ಳಲು ಗಟ್ಟಿಯಾದ ವಸ್ತ್ರವು ಕೂಡ ಇಲ್ಲದಿರುವದನ್ನೂ ಕ್ಷುಧೆಯಿಂದ ಅವಳು ಕೃಶಳಾಗಿರುವದನ್ನೂ ನೋಡಿ ಉಂಟಾಗುವ ದುಃಖಕ್ಕೆ ಸರಿಯಾದ ಯಾವ ದುಃಖವೂ ಇಲ್ಲ. ದಾರಿದ್ರ್ಯದ ಮೂಲಕವಾಗಿ ಮೈಗೆ ತೊಡಕೊಳ್ಳಲು ಎಣ್ಣೆಯಿಲ್ಲದ್ದಕ್ಕಾಗಿ, ರುಕ್ಷರೂ ನಿಸ್ತೇಜರೂ ಆದ, ಹಾಸಿಗೆಯಿಲ್ಲದ್ದಕ್ಕಾಗಿ ಭೂಮಿ ಪಾಷಾಣಗಳ ಮೇಲೆ ಮಲಗುವವರಾದ, ಮಕ್ಕಳನ್ನು ನೋಡಿ, ಗೃಹಪತಿಯ ಹೃದಯವು ಒಡೆದು ಪುಡಿಪುಡಿಯಾಗದೆ ಉಳಿಯುವದೆ? ವಸ್ತ್ರವು ಇಲ್ಲದ್ದಕ್ಕಾಗಿ ಕೈಗಳಿಂದಲೇ ಮೈಯನ್ನು ಮುಚ್ಚಿಕೊಳ್ಳುವ ದೀನವದನನಾದ ಪುತ್ರನ ಮುಖಾವಲೋಕನವನ್ನು ಮಾಡುವ ಪುರುಷನಿಗೆ ಮರಣವೇ ಉತ್ಸವವಾಗಿದ್ದು, ಬದುಕುವದೇ ಮರಣವಾಗಿರುತ್ತದೆ. ಸೊರಗಿ ಸಾಯುತ್ತಿರುವ ಮಕ್ಕಳನ್ನು ನೋಡಿ, ದೀನಳಾದ ಭಾರ್ಯೆಯ ಮುಖಾವಲೋಕನವನ್ನು ಮಾಡುವದು ವಜ್ರಕ್ಕೂ ಕಠಿಣವಾದ ಮನಸ್ಸುಳ್ಳವನಿಂದಾದರೂ ಆಗದು. ದ್ರವ್ಯಹೀನ ಪುರುಷನು ವಿವಾಹವನ್ನು ಮಾಡಿಕೊಂಡರೂ ಅವನಿಗೆ ತ್ರಿವರ್ಗದ ಪ್ರಾಪ್ತಿಯಾಗಲಾರದು. ಸ್ತ್ರೀಯಿಲ್ಲದ ಅಥವಾ ಸ್ತ್ರೀಯಿಂದ ರಹಿತನಾದ ಪುರುಷನಿಗೆ ಗೃಹಸ್ಥಾಶ್ರಮದ ಅಧಿಕಾರವಿರದಂತೆಯೇ ದ್ರವ್ಯಹೀನನಾದ ಪುರುಷನಿಗೆ ಯಾವ ಅಧಿಕಾರವೂ ಇಲ್ಲ. ಸಂತಾನವೇ ಧರ್ಮಾರ್ಥಕಾಮಗಳಿಗೆ ಸಾಧನವೆಂದು ಕೆಲವರು ಪ್ರತಿಪಾದಿಸುತ್ತಾರೆ. ಅನ್ಯರಾದ ಕೆಲವು ನೀತಿಜ್ಞರು ಸತಿಯೇ ಇವುಗಳಿಗೆ ಸಾಧನವೆಂದು ಹೇಳುತ್ತಾರೆ. ಯಾಕೆಂದರೆ, ಇಷ್ಟ (ಯಜ್ಞಯಾಗಾದಿ) ಹಾಗೂ ಪೂರ್ತ (ಕೂಪ ತಡಾಗ ಮುಂತಾದವುಗಳ ನಿರ್ಮಾಣ) ಈ ಬಗೆಯಾದ ದ್ವಿವಿಧ ಕರ್ಮಗಳ ರೂಪದಿಂದ ಧರ್ಮವಾದರೂ ಎರಡು ವಿಧವುಳ್ಳದ್ದಾಗಿದ್ದು ಅದು ಭಾರ್ಯಾಮೂಲಕವಾಗಿರುವದರಿಂದ ಭಾರ್ಯಾಸ್ವರೂಪವುಳ್ಳದ್ದೇ ಆಗಿರುತ್ತದೆ. ಆದರೆ ದ್ರವ್ಯವೊಂದೇ ಇವುಗಳೆಲ್ಲ ಸಾಧನವಾಗಿರುತ್ತದೆ. ದರಿದ್ರರಾದವರು ತಮಗೆ ಬಾಂಧವರಾಗಿದ್ದರೂ ಅವರನ್ನು ನೋಡಿದ ಕೂಡಲೆ ಲಜ್ಜಿತರಾಗುವ ಅಪ್ತೇಷ್ಟರೇ ಧನವಂತರಾದ ಪರಕೀಯರನ್ನು ಆನಂದಪೂರ್ವಕವಾಗಿ ಸ್ವಾಗತಿಸುತ್ತಾರೆ. ಹತ್ತಿರದಲ್ಲಿದ್ದ ದರಿದ್ರನನ್ನು ಕಣ್ಣೆತ್ತಿ ನೋಡದವರು ದೂರದಲ್ಲಿದ್ದ ಧನವಂತನನ್ನು ಬಹುಮಾನಪೂರ್ವಕವಾಗಿ ಸೇವಿಸುತ್ತಾರೆ. ಅದಕ್ಕಾಗಿ, ಮೊದಲು ಪ್ರಯತ್ನಪೂರ್ವಕವಾಗಿ ದ್ರವ್ಯವನ್ನೇ ಸಂಪಾದಿಸಬೇಕು. ಯಾಕೆಂದರೆ, ದೊಡ್ಡಸ್ತಿಕೆಗೆ ಅದೇ ಮೂಲಕಾರಣವಾಗಿದೆ. ಅದರಂತೆಯೇ ವಿದ್ಯಾ ಕುಲೀನತೆ, ಸುಶೀಲತೆ ಮುಂತಾದ ಗುಣಗಳು ಮನುಷ್ಯನಲ್ಲಿ ಧನವಿಲ್ಲದಿದ್ದರೆ ಇದ್ದೂ ಇಲ್ಲದಂತಾಗುತ್ತವೆ; ಹಾಗೂ ಗುಣಹೀನನಾದ ಧನವಂತನಲ್ಲಿ ಈ ಗುಣಗಳು ಇಲ್ಲದಿದ್ದರೂ ಅವು ಅವನಲ್ಲಿ ಇವೆಯೆಂದು ಜನರು ಹೊಗಳುತ್ತಾರೆ. ಶಾಸ್ತ್ರ,ಶಿಲ್ಪ, ಕಲೆ, ಉದ್ಯಮ ಮುಂತಾದ ಸಾಧನಗಳು ಧನೋತ್ಪಾದಕವಾಗಿದ್ದು ಆ ಧನವು ಧರ್ಮಕ್ಕೆ ಸಾಧನೀಭೂತವಾಗಿರುತ್ತದೆ. ಈ ಸಾಧನವುಳ್ಳವನಿಗೆ ಮಾತ್ರ ಧರ್ಮಾರ್ಥಕಾಮಾದಿ ತ್ರಿವರ್ಗದ ಪ್ರಾಪ್ತಿಯಾಗುತ್ತದೆ. ಈ ತ್ರಿವರ್ಗದ ಪ್ರಾಪ್ತಿಯಿಲ್ಲದವನ ಜನ್ಮವು ಆಡಿನ ಕೊರಳೊಳಗಿನ ಮೊಲೆಯಂತೆ ನಿರರ್ಥಕವಾದದ್ದೇ ಸರಿ. ಪೂರ್ವಜನ್ಮದಲ್ಲಿ ಕೂಡಿಸಿಟ್ಟ ಪುಣ್ಯದಿಂದ ಇಹಜನ್ಮದಲ್ಲಿ ಈ ಪುರುಷಾರ್ಥಗಳ ಸಾಧನಕ್ಕಾಗಿ ವಿಪುಲವಾದ ಸಂಪತ್ತಿಯು ಪ್ರಾಪ್ತವಾಗುತ್ತದೆ. ಈ ಪುರುಷಾರ್ಥಗಳನ್ನು ಹೊಂದಿ ಮತ್ತೆ ಹೊಸಜನ್ಮವನ್ನು ತೆಗೆದುಕೊಂಡರೆ, ವಿಪುಲವಾದ ಧರ್ಮಸಾಧನದ ಮೂಲಕ ಮತ್ತೆ ಸಂಪತ್ತಿಯೂ ಆ ಸಂಪತ್ತಿಯೋಗದಿಂದ ಮತ್ತೆ ಧರ್ಮಾರ್ಥಾದಿ ಸಾಧನಗಳೂ ಕ್ರಮಕ್ರಮವಾಗಿ ಪ್ರಾಪ್ತವಾಗುತ್ತಿರುತ್ತವೆ. ಸಾರಾಂಶ, ಕುಲಪರಂಪರಾಗತ ಅಥವಾ ಸ್ವಸಾಮರ್ಥ್ಯದಿಂದ ಸಂಪಾದಿಸಿದ ದ್ರವ್ಯಯುಕ್ತನಾದವನೇ ವಿವಾಹವನ್ನು ಮಾಡಿಕೊಳ್ಳಬೇಕು.

ವಿಮಲಾ.

ಕಳೆದ ಸಂಚಿಕೆಯಿಂದ ಮುಂದೆ ಸಾಗಿದುದು—

ವನ್ನು ಮಾಡುವ ಇಚ್ಛೆಯು ನನಗೆ ಕನಸಿನಲ್ಲಿಯೂ ಹುಟ್ಟ ಲಾರದು. ನಮ್ಮ ಕ್ಷತ್ರಿಯಧರ್ಮಕ್ಕೆ ಮರುಳೋದ ಅಥ ಪತ್ಯವೂ ಕೂಡ ಸರಿತಾಗಲಾರದೆಂದು ನಾವು ತಿಳಿದಿರುವೆವು. ಮಾಡಿದ ಪ್ರತಿಜ್ಞೆಯನ್ನು ನಾವೆಂದೂ ತಪ್ಪುವವರಲ್ಲ. ನೀನು ನಿನ್ನ ದುರಾಶೆಯನ್ನು ಬಿಟ್ಟು, ನಮ್ಮನ್ನು [illegible] ಮಾಡಬೇಕೆಂದಿ ರುವೆಯೋ? ಜಾಗ್ರತೆಯುಳ್ಳವನಾಗಿ ನಿನ್ನ ಸ್ಥಾನಕ್ಕೆ ಹೋಗು. ಚಂದ್ರಾವತಿರಾಣಿಯೂ ಅಜಿತಸಿಂಗನೂ [illegible]. ಇನ್ನು ಅವರನ್ನು ಹಿಡಿಯಲು ನಿನ್ನಿಂದ ಆಗಲಾರದು.

ನಯನ:— ಏನು, ಏನು? ಅಜಿತಸಿಂಗನು ಬದುಕಿರು ವನೆ? ಆ ದಿನ ಆತನು ಮೃತಿಹೊಂದಲಿಲ್ಲವೆ!

ಇಂದಿರಾ:— ಆಹಾ! ನಿನ್ನ ಚಾತುರ್ಯವನ್ನು ಏನೆನ್ನ ಬೇಕು? ನಿನ್ನಂತಹ ಸೈನ್ಯಾಧಿಪನನ್ನು ಕೊಟ್ಟ ಔರಂ ಗಜೀಬನನ್ನೇನನ್ನಬೇಕು?

ಇಂದಿರೆಯು ಈ ನಿರ್ಭಯವಾದ ವಾಕ್ಯದಿಂದ ನಯನ ಪಾಲನಿಗೆ ಆಶ್ಚರ್ಯವೂ, ಅಜಿತಸಿಂಗನು ಬದುಕಿರುವ ವಾರ್ತೆಯನ್ನು ಕೇಳಿ ಭಯವೂ [illegible] ಹೋಗಿ [illegible] ಕೌತುಕಗೊಂಡು ಮಾತಿನ ಧಾಟಿ [illegible] ಕವಾಗಿ ನೋಡುತ್ತ [illegible] ಸ್ವಲ್ಪ ಹೊತ್ತಿನಲ್ಲಿಯೇ [illegible] ನಾದನು.

ಪಲ್ಲಕ್ಕಿಯಲ್ಲಿದ್ದ ಚಂದ್ರಾವತಿಯೂ, ಅಜಿತಸಿಂಗನೂ, ಪದ್ಮೆಯೂ ಏನಾದರೆಂಬುದ ವಾಚಕರಿಗೆ ತಿಳಿಯಬೇಕಾಗಿ ದಲ್ಲವೆ? ಮುಸಲ್ಮಾನರೂ [illegible] ಶಿವಸಿಂಗನೊಡನೆ ಏಕಾಂತದಲ್ಲಿ ಸ್ವಲ್ಪ ಮಾತಾಡುತ್ತಿರುವಾಗ ಒಬ್ಬ ಭಿಲ್ಲನು ನಯನಪಾಲನು ಇವರನ್ನು ಹಿಡಿಯಲು ಬರು ವನೆಂಬುದನ್ನು ತಿಳಿದು ಓಡಿಬಂದು ಶಿವಸಿಂಗನಿಗೆ ಆ ವಾರ್ತೆ ವನ್ನು ಮುಟ್ಟಿಸಿದನು. ಅದನ್ನು ಕೇಳಿದಾಕ್ಷಣವೇ ಶಿವ ಸಿಂಗನು ಭಯದಿಂದ ಕಂಪಿತನಾಗಿ [illegible] ದನು. ಪಾಲ್ಕಿಯಲ್ಲಿದ್ದ ಚಂದ್ರಾವತಿ, ಪದ್ಮೆಯರು [illegible] ಗಂಡವು ಹೇಗೆ ಕಳೆಯುವುದೋ" ಎಂದು ಚಿಂತಿಸುತ್ತಿ ದ್ದರು. ಶಿವಸಿಂಗನು ಸ್ವಲ್ಪ ಯೋಚಿಸಿ, [illegible] ಳ್ಳಿದ್ದ ಹಳ್ಳಿಯ ಒಳಗೆ [illegible]. ನಯನ ಪಾಲನ ಆಗಮನವನ್ನು ತಿಳಿಸಿದುದರಿಂದ ಉಪಾಯ ಗಾಣದೆ, ಶಿವಸಿಂಗನೂ ರಜಪುತ್ರರೂ ಭಿಲ್ಲರೂ ಚಂದ್ರಾ ವತೀ ಅಜಿತಸಿಂಗರನ್ನು ಹೇಗೆ ರಕ್ಷಿಸಬೇಕೆಂದು ಚಿಂತಿಸ ತೊಡಗಿದರು. ಇಷ್ಟರಲ್ಲಿ ಕಾರ್ಯಾನುಕೂಲ-ಚತುರೋ ಪಾಯಗಳನ್ನರಿತ ಪದ್ಮೆಯು ಒಂದು ಒಳ್ಳೆಯ ಉಪಾಯ ವನ್ನು ಯೋಚಿಸಿ, ಎಲ್ಲರಿಗೂ ಆ ಉಪಾಯವನ್ನು ತಿಳಿಸಿದಳು. ಈ ಉಪಾಯವನ್ನು ಕೇಳಿ ಎಲ್ಲರೂ ಧೈರ್ಯವನ್ನು ಹೊಂದಿ ಪದ್ಮೆಯ ಬುದ್ಧಿಚಾತುರ್ಯವನ್ನು ಹೊಗಳಲಾರಂಭಿಸಿದರು.

ತತ್ಕ್ಷಣವೇ ಪದ್ಮೆಯು ಅಜಿತಸಿಂಗನನ್ನೆತ್ತಿಕೊಂಡು ಪಕ್ಕ ದಲ್ಲಿದ್ದ [illegible] ಪರ್ವತಭಾಗವನ್ನೇರಿ ಅಚಲೇಶ್ವರ ಮಂ ದಿರವನ್ನು ಪ್ರವೇಶಿಸಿ, [illegible] ಯೋಗಿಯ ದರ್ಶನವನ್ನು [illegible] ನಯನಪಾಲನು ಚಂದ್ರಾವತಿಯನ್ನು ಮು [illegible] ಸೈನ್ಯದೊಡನೆ [illegible]. ಇದುವರೆಗೆ [illegible] ಗಂಡಗಳನ್ನು [illegible] ದೇವನು [illegible] ವನು. ತಾವು ಈ ಬಾಲಕನನ್ನು ಸ್ವಲ್ಪ ಕಾಲ ಹತ್ತಿರದಲ್ಲಿರಿಸಿಕೊಂಡು ರಕ್ಷಿ ಸಬೇಕು" ಎಂದು ಹೇಳಲು, [illegible] ಯೋಗಿಯು ಹಾಗೆ [illegible] ಆ ಬಾಲಕನನ್ನು ಒಬ್ಬ ಭಿಲ್ಲಾಂಗನೆಗೆ [illegible]. ಇತ್ತ ಶಿವಸಿಂಗನು ಚಂದ್ರಾ [illegible] ಪಲ್ಲಕ್ಕಿಗೆ ಕರೆದುಕೊಂಡು ಹೋಗಿ, [illegible] ಆ ಶಿಬಿಕೆಯನ್ನು [illegible] ರಜಪುತ್ರರೂ ಭಿಲ್ಲರೂ ಮತ್ತನೇಕ [illegible] ಪದ್ಮೆಯು ಹೇಳಿದಂತೆ ಒಬ್ಬ ರಜಪುತ್ರ [illegible] ಕುಳ್ಳಿರಿಸಿದ್ದರೂ ನಯನಪಾಲನು [illegible] ಚಂದ್ರಾವತಿಯಿರುವಳೆಂದು ಅತ್ಯಂತ ಸಂತೋ ಷಪಟ್ಟನು. ಆದರೆ, ಚಂದ್ರಾವತಿಗೆ ಪ್ರತಿಯಾಗಿ ಒಬ್ಬ ರಜ ಪುತ್ರವೀರನು ಪಾಲ್ಕಿಯಿಂದ ಹೊರಗೆ ಬಂದು ಶತ್ರುಸೈನ್ಯ ವನ್ನು [illegible] ತೊಡಗಿದನು.

ಇಷ್ಟು [illegible] ದುರ್ಗಾದಾಸನಿಂದ ತನಗಾದ ಪ್ರಯೋ ಜನವೂ [illegible] ತಿಳಿದು ನಯನಪಾಲನು ರಾಜಪುತ್ರ ರನ್ನು [illegible] ನಿರ್ಮೂಲ ಮಾಡುವಂತೆ ತನ್ನ ಸೈನಿಕ ರಿಗೆ ಆಜ್ಞಾಪಿಸಿದನು. [illegible] ಆತನ ಅಪ್ಪಣೆ ಮೀರಿ [illegible] ಯುದ್ಧ ಮಾಡತೊಡಗಿದರು. ಜೋ [illegible] ರಾಜಪುತ್ರರೂ ಕೂಡ ತಮ್ಮ ಪ್ರಾಣದ [illegible] ಆಶೆಯನ್ನು ಬಿಟ್ಟು ಹೋರಾಡಲಾರಂಭಿ ಸಿದರು. [illegible] ವರಿಗಾದ ದುರ್ಗತಿಯನ್ನು ನೋಡುತ್ತ [illegible] ದುರ್ಗಾದಾಸರು ಬಲೆಯಲ್ಲಿ ಸಿಕ್ಕಿಬಿದ್ದ ಸಿಂಹದಂತೆ ಅತ್ಯಂತ ದುಃಖಾಕ್ರಾಂತರಾಗಿ ಭಗವಂತನ ಧ್ಯಾನಮಾಡ

ತೊಡಗಿದರು. ಇಷ್ಟರಲ್ಲಿಯೇ ಸ್ವಲ್ಪ ದೂರದಲ್ಲಿ ಯಾವುದೋ ಒಂದು ದೊಡ್ಡ ಸೈನ್ಯವು ಬರುತ್ತಿದ್ದಂತೆ ನಯನಪಾಲನಿಗೆ ತಿಳಿಯಿತು. ತತ್ಕ್ಷಣವೇ ಆತನು ರಜಪೂತರ ಸೈನ್ಯವು ಬರುತ್ತಿರುವುದನ್ನು ತಿಳಿದು ತನ್ನ ಸೈನಿಕರಲ್ಲಿ ಕೆಲವರನ್ನು ಇಂದಿರೆಯನ್ನು ಡಿಲ್ಲೀನಗರಕ್ಕೆ ಕರೆದುಕೊಂಡು ಹೋಗಿರೆಂದು ಆಜ್ಞಾಪಿಸಿ ಕಳುಹಿದನು.

ಕ್ರಮಕ್ರಮವಾಗಿ ಆ ಸೈನ್ಯವು ಸಮೀಪಿಸಿ ರಜಪೂತರೊಡನೆ ಸೇರಿ ಮಹಮ್ಮದೀಯರೊಡನೆ ಹೋರಾಹೋರಿಯಿಂದ ಹೊಡೆದಾಡತೊಡಗಿತು. ನಯನಪಾಲನು ರಾಜಪುತ್ರರ ಸೈನ್ಯವನ್ನು ಸುತ್ತಲೂ ಆವರಿಸಿ ಯುದ್ಧಮಾಡಿದನಾದರೂ ಅದರಿಂದ ಪ್ರಯೋಜನವಿಲ್ಲದೆ ಹೋಯಿತು. ಬಂದಿಯಾಗಿದ್ದ ದುರ್ಗಾದಾಸನು ಇದೇ ಸಮಯವೆಂದು ಯೋಚಿಸಿ ಉಪಾಯದಿಂದ ತಪ್ಪಿಸಿಕೊಂಡು ಬಂದು ರಜಪೂತರೊಡನೆ ಸೇರಿ ನಯನಪಾಲನೊಡನೆ ಯುದ್ಧಕ್ಕೆ ನಿಂತನು. ರಾಜಪುತ್ರರ ಕೋಪಾಗ್ನಿಯನ್ನೂ ಅವರ ಶಸ್ತ್ರದ ಏಟುಗಳನ್ನೂ ಸಹಿಸಲಾರದೆ ತುರುಕರ ಸೈನ್ಯವು ಸ್ವಲ್ಪ ಹೊತ್ತಿನ ದಿಕ್ಕಾಪಾಲಾಗಿ ಚದರಿ ಓಡಿಹೋಯಿತು. ನಯನಪಾಲನು ಬಹಳ ಸ್ವಕೀಯ ಪ್ರಾಣಸಂರಕ್ಷಣಾರ್ಥವಾಗಿ ತನ್ನ ಸೈನಿಕರನ್ನೇ ಅನುಸರಿಸಿದನು. ಆದರೆ ದುರ್ಗಾದಾಸನು ಬಂಧವಿಮುಕ್ತನಾದ ಸಂತಸದಿಂದ ನಯನಪಾಲನನ್ನು ಸ್ವಲ್ಪ ದೂರ ಹಿಂಬಾಲಿಸಿ ಅನೇಕ ಸೈನಿಕರನ್ನು ಕೊಂದು ಹಿಂತಿರುಗಿ ಬಂದನು.

ರಾಜಸಿಂಹನು [illegible] ಚಂದ್ರಾವತಿಯ ರಕ್ಷಣಾರ್ಥವಾಗಿ ಸೈನ್ಯವನ್ನು ಕಳುಹಿದನೆಂದು ಹೇಳಿ ಹೋದುದು ವಾಚಕರಿಗೆ ಜ್ಞಾಪಕವಿರಬಹುದು. ಶಿವಸಿಂಗನ ಸಹಾಯಕ್ಕಾಗಿ ಬಂದು ಆತನೊಡನೆ ಸೇರಿ ಯುದ್ಧಮಾಡಿದ ಸೈನ್ಯವೇ ಈತನು ಕಳುಹಿದ ಸೈನ್ಯವು.

ಆ ನಂತರ ಶಿವಸಿಂಗನೂ ದುರ್ಗಾದಾಸನೂ ರಾಜಸಿಂಹನ ಸೈನ್ಯವನ್ನು ತಮ್ಮ ಜತೆಯಲ್ಲಿಯೇ ಕರೆದುಕೊಂಡು ಪರಿವಾರ ಸಮೇತರಾಗಿ ಚಂದ್ರಾವತಿಯನ್ನು ನೋಡಲು ಹೊರಟರು.

ಹದಿಮೂರನೆ ಪ್ರಕರಣ.

(ತಾನೊಂದೆಣಿಸಿದರೆ ದೈವವೊಂದನ್ನು ನೆನೆಯುವುದು)

ನಯನಪಾಲನು ಸೋತಮೇಲೆ ಡಿಲ್ಲೀನಗರವನ್ನು ಕುರಿತು ಓಡಿಹೋದನು. ಅದಕ್ಕೆ ಮೊದಲೇ ಇಂದಿರೆಯನ್ನು ಕೆಲವು ಮಂದಿ ಭಟರೊಡನೆ ಡಿಲ್ಲೀನಗರಕ್ಕೆ ಕಳುಹಿದ್ದನಷ್ಟೆ! ಆದರೆ ಡಿಲ್ಲೀನಗರವನ್ನು ಕುರಿತು ಓಡಿಹೋಗುತ್ತ ಮಾರ್ಗಮಧ್ಯದಲ್ಲಿಯೇ ಇಂದಿರೆಯು ಕಾವಲಿನ ಸೈನ್ಯದೊಡನೆ ಕಲೆತನು. ಡಿಲ್ಲೀನಗರವನ್ನು ಪ್ರವೇಶಿಸಿದ ಮೇಲೆ ಇಂದಿರೆಯನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡನು. ಈತನು ಆವ ಮುಹೂರ್ತದಲ್ಲಿ ಡಿಲ್ಲಿಯನ್ನು ಬಿಟ್ಟು ಹೊರಟನೋ ಅಂದಿನಿಂದ ಈತನ ಪ್ರಯತ್ನಗಳೆಲ್ಲವೂ ಭಂಗವಾಗುತ್ತಲೇ ಬಂದವು; ಆಸೆಯೆಲ್ಲವೂ ನಿರಾಶೆಯಾಯಿತು. ಚಂದ್ರಾವತಿಯನ್ನು ಬಾದಷಹನಿಗೊಪ್ಪಿಸುವುದರಿಂದ ತನಗೆ ಅತ್ಯಂತ ಬಹುಮಾನವು ದೊರೆವುದೆಂದು ನಂಬಿದ್ದನು; ಈಗ ಅದಕ್ಕೆ ಬದಲಾಗಿ ಯಾವ ಶಿಕ್ಷೆಯನ್ನು ವಿಧಿಸುವನೋ ಎಂದು ಭಯಪಡುವಂತಾದನು. ಅಷ್ಟೇ ಅಲ್ಲ. ತನ್ನ ಸಮಾಚಾರವೆಲ್ಲವನ್ನೂ ಔರಂಗಜೇಬನು ಗೂಢಚಾರರ ಮೂಲಕ ತಿಳಿದಿರಬಹುದೇನೆಂಬ ಶಂಕೆಯೂ ಉಂಟಾಯಿತು. ಇದಕ್ಕೆ ಸರಿಯಾಗಿ ಔರಂಗಜೇಬನು ಚಂದ್ರಾವತಿಯನ್ನೂ ಅವಳ ಕುಮಾರನನ್ನೂ ದುರ್ಗಾದಾಸನು ಉಪಾಯದಿಂದ ಸಾಗಿಸಿದುದನ್ನೂ, ನಯನಪಾಲನು ಆಕೆಯನ್ನು ಹುಡುಕುತ್ತ ಹೊರಟುದನ್ನೂ ತಿಳಿದಿದ್ದನು. ಪೃಥಿವೀಸಿಂಗನ ಮರಣಾನಂತರ ತನ್ನ ಕಾರ್ಯಗಳೆಲ್ಲವೂ ನೆರವೇರುವುವೆಂದು ಈ ಬಾದಷಹನು ನಂಬಿದ್ದನು. ಯಶವಂತಸಿಂಗನನ್ನು ಕೂಡ ಮೋಸದಿಂದ ಕೊಲ್ಲಿಸಬೇಕೆಂದು ಇವನು ಬಹಳ ಪ್ರಯತ್ನಪಟ್ಟಿದ್ದರೂ ಸಮಯವು ಸಿಕ್ಕದೇ ಹೋಯಿತು. ಬಾದಷಹನ ಮನೋಗತವನ್ನು ತಾನು ಪೂರೈಸಲಿಲ್ಲವಾದುದರಿಂದ ತನಗಾಗುವ ಶಿಕ್ಷೆಯನ್ನು ಹೇಗೆ ತಪ್ಪಿಸಿಕೊಳ್ಳಬೇಕೆಂದು ಯೋಚಿಸುತ್ತ ಡಿಲ್ಲೀನಗರಕ್ಕೆ ಬಂದುದು ಮೊದಲು ಚಿಂತಿಸುತ್ತಲೇ ಇದ್ದನು. ಕಡೆಗೆ ಆತನು ಇಂದಿರೆಯನ್ನೇ ಚಂದ್ರಾವತಿಯೆಂದು ಹೇಳಿ ಬಾದಷಹನಿಗೊಪ್ಪಿಸಲು ಯೋಚಿಸಿದನು. ಆದರೆ, ತನಗೆ ಆಕೆಯ ಮೇಲಿದ್ದ ಮೋಹವು ಆತನನ್ನು ಹಾಗೆ ಮಾಡಗೊಡಲಿಲ್ಲ; ಬಾದಷಹನಿಗೆ ಮೋಸಮಾಡಿ ಇಂದಿರೆಯನ್ನು ತಾನೇ ವಿವಾಹ ಮಾಡಿಕೊಳ್ಳಬೇಕೆಂದು ಆತನಿಗೆ ಆಸೆ ಹುಟ್ಟಿತು. ಈ ಕಾರಣದಿಂದಲೇ ಈತನು ಡಿಲ್ಲಿಗೆ ಬಂದು ನಾಲ್ಕು ದಿನಗಳಾದರೂ ಚಕ್ರವರ್ತಿಯ ದರ್ಶನಕ್ಕೆ ಹೋಗಲಿಲ್ಲ. ಬಾದಷಹನು ತನ್ನನ್ನು ನೋಡಿದ ಕೂಡಲೇ "ನಯನಪಾಲಾ, ಚಂದ್ರಾವತಿಯನ್ನು ಜೋಪಾನವಾಗಿ ಕರೆದುತಂದೆಯಾ ?" ಎಂದು ಕೇಳಿದರೆ, ಉತ್ತರವೇನು ಕೊಡಬೇಕು,--ನಿಜಾಂಶವನ್ನು ತಿಳಿಸಿದರೆ ಆವ ಶಿಕ್ಷೆಗೆ ಗುರಿಯಾಗಬೇಕೋ— ಎಂಬ ವಿಚಾರವೇ ಇವನ ಮನಸ್ಸನ್ನು ಆಕ್ರಮಿಸಿದ್ದಿತು. ಒಂದು ವೇಳೆ, "ಇಂದಿರೆಯನ್ನು ತಾನು ಕರೆದುತಂದಿರುವೆನೆಂದು ಬಾದಷಹನಿಗೆ ತಿಳಿಸಿದರೆ ಆತನು ಇಂದಿರೆಯನ್ನು ಖಂಡಿತವಾಗಿಯೂ ಬಿಡಲಾರನು!" ಹೀಗೆಯೇ ಎಷ್ಟೋ ವಿಧವಾಗಿ ಚಿಂತಿಸಿದನಾದರೂ ಉಪಾಯವಾವುದೂ ತೋರದೇ ಹೋದುದರಿಂದ ಮನೆಯ

ಲ್ಲಿಯೇ ನಿಲ್ಲಬೇಕಾಯಿತು. ಹೀಗೆ ನಾಲ್ಕು ದಿನಗಳು ಕಳೆದ ಬಳಿಕ ಸಿಪಾಯಿಗಳಿಬ್ಬರು ನಯನಪಾಲನ ಮನೆಗೆ ಹೋಗಿ, 'ಬಾಗಿಲನ್ನು ತೆರೆ' ಎಂದು ಕೂಗಿದರು. ನಯನಪಾಲನು ಗಾಬರಿಯಿಂದ 'ಯಾರವರು?' ಎಂದು ಕೇಳಲು, "ನಾವು ಆಲಂಘೀರ್ ಬಾದಷಹನ ರಾಜಭಟರು. ತಮ್ಮನ್ನು ಕರೆತರುವಂತೆ ಅಪ್ಪಣೆಯಾಗಿದೆ. ಉಟ್ಟಬಟ್ಟೆಯಲ್ಲಿಯೇ ಹೊರಡಬೇಕು. ನಾವಕಾಶ ಮಾಡಕೂಡದು." ಎಂದು ಆ ತುರುಕ್ಕ ಭಟರಿಬ್ಬರೂ ಗಂಭೀರವಾಗಿ ಉತ್ತರ ಕೊಟ್ಟರು.

ಈ ಮಾತನ್ನು ಕೇಳಿದ ಕ್ಷಣದಲ್ಲಿ ನಯನಪಾಲನ ಎದೆಯು ಒಡೆದುಹೋಯಿತು. ಮೈಮೇಲೆ ಬೆವತು ಗಡಗಡನೆ ನಡುಗಲಾರಂಭಿಸಿತು. ಉಟ್ಟಬಟ್ಟೆಯಲ್ಲಿಯೇ ಬಂದು ಬಾಗಿಲನ್ನು ತೆರೆದು ಭಟರೊಡನೆ ಹೊರಟನು. ತನ್ನ ಗುಟ್ಟನ್ನು ಈ ಭಟರು ತಿಳಿದಿರುವರೇನೆಂಬ ಶಂಕೆಯಿಂದ ದಾರಿಯಲ್ಲಿ ಸಮಯೋಕ್ತಿ ಹೀಗೆ ಮಾತನಾಡತೊಡಗಿದನು.

"ಓಹೋ! ಆಲಂಘೀರ್ ಬಾದಷಹರು ಏನು ಮಾಡುತ್ತಿರುವರು?"

ಭಟರು — ಅವರು ನಿಮ್ಮ ಆಗಮನಪ್ರತೀಕ್ಷೆಯಲ್ಲಿಯೇ ಇರುವರು.

ನಯನ: - ನನ್ನನ್ನು ಕರೆಯಿಸಿದ ಕಾರಣವು ತಿಳಿದಿರುವುದೆ?

ಭಟರು: ತಿಳಿಯುದೇನು? ಪಟ್ಟಣದಲ್ಲಿದ್ದೂ ನೀವು ದರ್ಬಾರಿಗೆ ಬಾರದಿದ್ದುದರಿಂದ ಆಗ್ರಹಗೊಂಡು ಕರೆತರುವಂತೆ ನಮ್ಮನ್ನು ಕಳುಹಿಸಿರುವರು.

ಮೊದಲೇ ಭೀತಚಿತ್ತನಾಗಿದ್ದ ನಯನಪಾಲನು ಭಟರ ಮಾತುಗಳನ್ನು ಕೇಳಿ ಮತ್ತಷ್ಟು ಭಯಪಟ್ಟ ಬಾದಷಹನಿಗೆ ಯಾವ ಸಮಾಧಾನವನ್ನು ಹೇಳಬೇಕೆಂದು ಯೋಚಿಸುತ್ತ, ಬಲಿಗಾಗಿ ಒಪ್ಪಿಸಲ್ಪಡುವ ಕುರಿಯು ಕಟುಕನೊಡನೆ ಕಾಳಿಯಾಲಯಕ್ಕೆ ಹೋಗುವಂತೆಯೇ ನಯನಪಾಲನು ಆ ಭಟರಿಬ್ಬರೊಡನೆ ಭಯಗ್ರಸ್ತನಾಗಿ ಹೋಗುತ್ತಿದ್ದನು.

"ಉತ್ತಮ ಪ್ರಯತ್ನಸಂಪನ್ನನಾಗಿದ್ದರೂ ಈ ನನ್ನ ಅವಿವೇಕದಿಂದಲ್ಲವೆ ಈ ದುರವಸ್ಥೆಯು ಪ್ರಾಪ್ತವಾಯಿತು." ಎಂದು ಪಶ್ಚಾತ್ತಾಪಪಡುತ್ತ ಕೂಗಿ "ಹುಂ, ಆಗಲಿ; ವಿಚಾರಪಟ್ಟು ಫಲವಿಲ್ಲ. ಸಮಯೋಚಿತವಾಗಿ ಹೇಳಿ, ಅವನು ನಂಬುವಂತೆ ಮಾಡುವೆನು." ಎಂದು ತನ್ನಲ್ಲಿ ತಾನೇ ಧೈರ್ಯವನ್ನು ತಳೆದು, ಮಾರ್ಗವೆಲ್ಲವನ್ನೂ ಅತಿಕ್ರಮಿಸಿಬಂದು ಬಾದಷಹನ ಹತ್ತಿರ ನಮ್ರಭಾವದಿಂದ ಕೈಮುಗಿದು ಇದಿರಿಗೆ ನಿಂತನು. ಬಾದಷಹನು ನಯನಪಾಲನನ್ನು ಉಚಿತಾಸನದಲ್ಲಿ ಕುಳ್ಳಿರಿಸಿದ ಬಳಿಕ ಹೀಗೆ ಕೇಳಿದನು —

"ನಯನಪಾಲಾ! ಕ್ಷೇಮವೊ?

ನಯನ: — ಪ್ರಭುವೆ! ನಗರವನ್ನು ಬಿಟ್ಟು ಹೊರಟುದು ಮೊದಲು ನನಗೆ ಪ್ರಾಪ್ತವಾದ ಕಷ್ಟಗಳನ್ನು ದೇವರೇ ಬಲ್ಲ! ಆದರೂ ಆಲಂಘೀರ್ ಬಾದಷಹರ ದರ್ಶನವು ಲಭಿಸಿದ ತತ್ಕ್ಷಣವೇ ನನ್ನ ಆಯಾಸವೆಲ್ಲವೂ ಪರಿಹಾರವಾದಂತಾಯಿತು.

ಬಾದಷಹ: — ಅಯ್ಯೋಪಾಪ! ನೀನು ನನಗಾಗಿ ಎಷ್ಟೋ ಶ್ರಮಪಟ್ಟು ಕಡೆಗೆ ಜಯಶೀಲನಾಗಿ ನನ್ನ ಮನಸ್ಸಂತೋಷಪಡಿಸಿದುದಕ್ಕಾಗಿ ನಿನ್ನ ಋಣವನ್ನು ನಾನೆಂದಿಗೆ ತೀರಿಸಬಲ್ಲೆನು? ಶಹಬ್ಬಾಸ್! ಸೇನಾಧಿಪತಿಯೆಂದರೆ ನೀನೇ ಸೇನಾಧಿಪತಿ! ಸರಿಯೆ, ನಯನಪಾಲಾ! ಚಂದ್ರಾವತೀ ರಾಣಿಯನ್ನು ನಮ್ಮ ಜನಾನಾದೊಳಕ್ಕೆ ಕಳುಹಿಸಿರುವೆಯೋ, ನಿನ್ನ ಬಳಿಯಲ್ಲಿಯೇ ಇಟ್ಟುಕೊಂಡಿರುವೆಯೋ?"

ನಯನ: ಅಪ್ರಿಯವನ್ನು ಹೇಗೆ ಹೇಳಲಿ?

ಬಾದಷಹ — ಅಪ್ರಿಯವೆಂತಹದು? ಒಂದು ವೇಳೆ ನಿನ್ನ ಮನೆಯಲ್ಲಿಟ್ಟುಕೊಂಡಿದ್ದರೂ ತಪ್ಪೇನು? ಜೋಧಪುರಕ್ಕೆ ರಾಜನಾದ ನಿನ್ನ ಮನೆಯಲ್ಲಿ ಚಂದ್ರಾವತಿಯನ್ನಿರಿಸುವುದು ನನಗೆ ಸಮ್ಮತವೇ ಸರಿ! ಇಷ್ಟುಮಾತ್ರಕ್ಕೆ ಭಯವೇಕೆ?

ನಯನ: - (ಕಂಪಿತಸ್ವರದಿಂದ) ಕ್ಷಮಿಸಬೇಕು, ನನಗೀ ಕಾರ್ಯವು ಸಾಧ್ಯವಾಗದಲ್ಲ.

ಬಾದ — ಏನು? ಆಕೆಯನ್ನು ಜನಾನಾದೊಳಕ್ಕೆ ಕಳುಹುವುದು ಸಾಧ್ಯವಲ್ಲವೆ? ಆಕೆ, ಬರುವುದಿಲ್ಲವೆಂದಳೇನು? ಅಹುದು, ನಿಜ; — ಔರಂಗಜೇಬ ಬಾದಷಹನೆಂದರೆ ದೇಶವೆಲ್ಲವೂ ಭಯಪಡುತ್ತಿರುವಾಗ ಚಂದ್ರಾವತಿಯು ಭಯಪಡುವುದು ಆಶ್ಚರ್ಯವಲ್ಲ; ಅವ ಶಿಕ್ಷೆಗೆ ಗುರಿಯಾಗುವೆನೋ — ಎಂದು ಆಕೆ ಭಯಪಟ್ಟಿರಬಹುದೇ ಹೊರತು, ನಾನೇ ಕರಿಸಿರುವೆನೆಂದು ತಿಳಿದಿದ್ದರೆ ಬರುತ್ತಿದ್ದಳು ಹೋಗಲಿ, ಈಗಲೂ ನಯನಪಾಲ! ನನ್ನ ಉದ್ದೇಶವನ್ನು ನೀನೇ ಆಕೆಗೆ ತಿಳಿಸಿ, ಆಕೆಯ ಭಯವನ್ನು ಹೋಗಲಾಡಿಸಬಹುದಷ್ಟೆ?

ನಯನ — ಬಾದಷಹರ ಭಾವನೆಯು ತಪ್ಪು. ಚಂದ್ರಾವತಿಯು ನನಗೆ ಸಿಕ್ಕಲಿಲ್ಲ.

ಬಾದ — ಏನು? ಚಂದ್ರಾವತಿಯು ಸಿಕ್ಕಲಿಲ್ಲವೆ? ಹಾಗಾದರೆ, ನೀನು ಹೋಗಿ ಸಾಧಿಸಿಕೊಂಡು ಬಂದ ಕಾರ್ಯವೇನು?

ನಯನಪಾಲ: — ನನ್ನ ಪ್ರಯತ್ನದಲ್ಲಿ ಕೊರತೆಯಿರಲಿಲ್ಲ. ದುರ್ಗಾದಾಸನ ತಂಗಿಯಾದ ಇಂದಿರೆಯು ಮಹಾ ಚತುರಾಚತುರೆ! ನಾನು ಸುತ್ತಲೂ ಸೈನ್ಯವನ್ನು ಕಾವಲಿರಿಸಿದ್ದರೂ ಚಂದ್ರಾವತಿಯನ್ನು ಹೇಗೆಯೋ ಮೋಸದಿಂದ ತಪ್ಪಿಸಿರುವಳು.

ಬಾದ:—ನಯನಪಾಲಾ! ಹೆಂಗಸರ ಚಮತ್ಕಾರಗಳನ್ನು ತಿಳಿದುಕೊಳ್ಳದೆ ಹೋದೆಯಾ?

ನಯನ:— ಆಕೆ, ಸಾಮಾನ್ಯ ಸ್ತ್ರೀಯೆಂದು ಭಾವಿಸಬಾರದು. ಅವಳಾವ ಕೆಚ್ಚೆದೆಯ ವೀರಪುರುಷನಿಗೂ ಕಡಮೆಯಾದವಳಲ್ಲ. ಅವಳಿಂದಲೇ ನಾನು ಅನೇಕ ಕಷ್ಟಗಳನ್ನು ಅನುಭವಿಸಿದೆನು.

ಬಾದ:— ಹೋಗಲಿ, ಕಯ್ಗೆ ಸಿಕ್ಕಿದ್ದ ಇಂದಿರೆಯನ್ನಾದರೂ ಹಿಡಿದುಕೊಂಡು ಬಂದೆಯಾ?

ನಯನ:— ಆಕೆಯನ್ನು ಹಿಡಿದುಕೊಂಡು ಬರುತ್ತಿರುವಾಗ ಮಾರ್ಗಮಧ್ಯದಲ್ಲಿ ರಾಜಸಿಂಹನ ಸೈನ್ಯವು ನನ್ನನ್ನು ಸೋಲಿಸಿ ಓಡಿಸಿತು ಇಷ್ಟಕ್ಕೂ ಚಂದ್ರಾವತಿಯನ್ನು ಹಿಡಿದುತರುವುದಕ್ಕೆ ನನಗೆ ಸನ್ನಿಧಿಯಿಂದ ಸರ್ವಾಧಿಕಾರವು ಕೊಡಲ್ಪಟ್ಟಿರಲಿಲ್ಲ. ಅದೇ ಈ ಅಪಜಯಕ್ಕೆ ಕಾರಣವಾಯಿತು. ಇಲ್ಲದಿದ್ದರೆ ಚಂದ್ರಾವತಿಯನ್ನು ನಾಯಿಯಂತೆ ಹಿಂದೆ ಕರೆದುಕೊಂಡು ಬರುತ್ತಿದ್ದೆನು.

ಬಾದ:— ಎಲೈ, ನರಪಶುವೆ! ಇಷ್ಟು ಕಾರ್ಯಗಳನ್ನೂ ಹಾಳುಮಾಡಿ ಕಡೆಗೆ ನನ್ನ ಮೇಲೆಯೇ ತಪ್ಪನ್ನು ಹೊರಿಸುವೆಯಾ? ನಿನ್ನನ್ನು ಖಂಡಖಂಡವಾಗಿ ತುಂಡಿಸಿದರೂ ಪಾಪವಿಲ್ಲವು! ನಮ್ಮ ಮಹಮ್ಮದೀಯ ವಂಶಕ್ಕೇ ನೀನು ಅಪಕೀರ್ತಿಯನ್ನು ತಂದೆಯಲ್ಲಾ? ಆಲಂಘೀರ್ ಬಾದಷಹನು ಈ ವರೆಗೆ ನೆನೆದ ಕಾರ್ಯಗಳೊಂದೂ ಭಂಗವಾಗಿರಲಿಲ್ಲ; ಈ ದಿನ ನಿನ್ನಂತಹ ಅಪ್ರಯೋಜಕನು ಲಭಿಸಿದುದರಿಂದ ಇಂತಹ ಅಪಜಯವನ್ನು ಕೇಳಬೇಕಾಗಿದೆ. ಪಾಪಿ, ನೀನು ಹೊರಡುವಾಗ ಹೇಳಿದ ಜಂಭಗಳನ್ನು ಸ್ಮರಿಸು! ನಿನ್ನ ಯಾವದ್ವೃತ್ತಾಂತವನ್ನೂ ಗೂಢಚಾರರಿಂದ ಕೇಳಿ ತಿಳಿದಿರುವೆನು. ಚೋರನಾದ ನಿನ್ನನ್ನು ಬಿಡಲಾರೆನು!

ಹೀಗೆ ಹೇಳಿದ ಬಳಿಕ ಔರಂಗಜೇಬನು, ನಯನಪಾಲನ ಮನೆಯಲ್ಲಿ ಅವಳಾದರೂ ರಜಪೂತ ಸ್ತ್ರೀಯಿದ್ದರೆ ಕರೆತರಬೇಕೆಂದು ತನ್ನ ಭಟರಿಗೆ ಆಜ್ಞಾಪಿಸಿದನು. ತತ್‌ಕ್ಷಣವೇ ಸೇವಕರಿಬ್ಬರು ನಯನಪಾಲನ ಮನೆಗೆ ಹೋಗಿ ಅಲ್ಲಿದ್ದ ರಜಪೂತ ಸ್ತ್ರೀಯನ್ನು ಕರೆದುಕೊಂಡುಬಂದು ಆತನ ಮುಂದೆ ನಿಲ್ಲಿಸಿದರು. ಬಾದಷಹನು ಕಾಲರುದ್ರನಂತೆ ರೋಷಾತಾಮ್ರಾಕ್ಷನಾಗಿ ನಯನಪಾಲನನ್ನು ನೋಡಿದನು. ನಯನಪಾಲನು ತನ್ನ ಪ್ರಾಣದ ಮೇಲಿನ ಆಶೆಯನ್ನು ಬಿಟ್ಟು ತಲೆಯನ್ನು ತಗ್ಗಿಸಿಕೊಂಡನು. ತತ್‌ಕ್ಷಣವೇ ಬಾದಷಹನು ನಯನಪಾಲನನ್ನು ಕಾರಾಗ್ರಹಕ್ಕೆ ಕಳುಹಿಸಿಬಿಟ್ಟನು

ಔರಂಗಜೇಬನು ಮಹಾತಂತ್ರಿ! ನಯನಪಾಲನ ಚರಿತ್ರೆಯೆಲ್ಲವನ್ನೂ ಗೂಢಚಾರರಿಂದ ತಿಳಿದಿದ್ದರೂ ತಿಳಿಯದವನಂತೆ ನಟಿಸುತ್ತ ಇದ್ದನು. ಸಹಜಧೈರ್ಯಾಲಂಕೃತೆಯಾದ ಇಂದಿರೆಯು ತನ್ನ ಮುಂದೆ ನಿಲ್ಲಲು ಬಾದಷಹನು ಆಕೆಯ ಸೌಂದರ್ಯಕ್ಕೂ ಸಾಹಸಕ್ಕೂ ಆಶ್ಚರ್ಯಮಗ್ನನಾಗಿ ಹೀಗೆ ಪ್ರಶ್ನೋತ್ತರಗಳನ್ನು ಬೆಳಸಿದನು.—

“ಎಲೆ, ಧೂರ್ತೆ! ಚಂದ್ರಾವತಿಯನ್ನು ಎಲ್ಲಿಗೆ ಕಳುಹಿರುವೆ? ನಿಜವನ್ನು ಹೇಳು!”

ಇಂದಿರಾ.- ಈ ಮಾತುಗಳಿಗೆ ಭಯಪಡುವಳಾಗಿದ್ದರೆ ಅಂತಹ ಸಾಹಸಕಾರ್ಯವನ್ನು ನಾನು ಮಾಡುತ್ತಿರಲಿಲ್ಲ.

ಬಾದ:—ಛಿ, ದುಷ್ಟೆ! ನನಗೆ ದ್ರೋಹಮಾಡಿದ ನಿನ್ನನ್ನು ಶೂಲಕ್ಕೆ ಹಾಕಿಸಿದರೂ ಪಾಪವಿಲ್ಲವು.

ಇಂದಿರಾ.— ಪ್ರಾಣದ ಮೇಲಿನ ಆಶೆಯನ್ನು ಬಿಟ್ಟೇ ಈ ಕಾರ್ಯಕ್ಕೆ ಕೈಹಾಕಿದೆನು. ನೀನು ಏನು ಮಾಡಿದರೂ ಭಯವಿಲ್ಲ.

ಇಂದಿರೆಯು ಈ ರೀತಿಯಾಗಿ ಧೈರ್ಯ-ಸ್ಥೈರ್ಯ-ಗಾಂಭೀರ್ಯಗಳಿಂದ ಕೊಟ್ಟ ಉತ್ತರಗಳನ್ನು ಕೇಳಿ ಔರಂಗಜೇಬನು ಆಕೆಯ ಬುದ್ಧಿ ಚತುರತೆ-ಸಾಹಸ-ಪ್ರತಿಭಾಶಕ್ತಿಗಳಿಗೆ ಮೆಚ್ಚಿ, ಹತ್ತಿರದಲ್ಲಿದ್ದ ಸೇವಕರನ್ನು ಕರೆದು— “ಇವಳನ್ನು ಕರೆದೊಯ್ದು ದಾಸಿಯನ್ನಾಗಿ ಇಟ್ಟುಕೊಳ್ಳಬೇಕೆಂದು ಉದಯಪುರಿಗೆ ಹೇಳು.” ಎಂದು ಅಪ್ಪಣೆಮಾಡಿದನು. ಸೇವಕನು ಇಂದಿರೆಯನ್ನು ಕರೆದುಕೊಂಡು ಉದಯಪುರಿಯ ಅಂತಃಪುರವನ್ನು ಕುರಿತು ಹೊರಟುಹೋದನು.

ಹದಿನಾಲ್ಕನೆ ಪ್ರಕರಣ.

(ಇಂದಿರಾ)

ಔರಂಗಜೇಬನ ಪಟ್ಟಮಹಿಷಿಯಾದ ಉದಯಪುರಿಯು ವಿಶೇಷಸದ್ಗುಣಗಳಿಂದ ಕೂಡಿದವಳಲ್ಲವಾದರೂ ಕೇವಲ ಕ್ರೂರಾತ್ಮಳೆಂದು ಹೇಳಲಾಗದು. ತಾನು ಚಿಕ್ಕಂದಿನಿಂದಲೂ ರಾಜನ ಪಟ್ಟಮಹಿಷಿಯಾಗಬೇಕೆಂದು ಬಯಸುತ್ತಿದ್ದು ಕಡೆಗೆ ಔರಂಗಜೇಬನನ್ನು ಸೇರಿ ತನ್ನ ಕೋರಿಕೆಯನ್ನು ನೆರವೇರಿಸಿಕೊಂಡಳು ತನ್ನ ಮಾಯಾಜಾಲಗಳಿಂದ ಬಾದಷಹನು ತನ್ನ ಮಾತಿನಂತೆಯೇ ನಡೆಯುವ ರೀತಿಯಲ್ಲಿ ಆತನನ್ನು ವಶಪಡಿಸಿಕೊಂಡಿದ್ದಳು. ಜನಾನಾದಲ್ಲಿದ್ದ ಸೇವಕರೆಲ್ಲರೂ ಆಕೆಯಲ್ಲಿ ವಿಧೇಯರಾಗಿದ್ದರು. ಉದಯಪುರಿಯು, ಔರಂಗಜೇಬನು ತನ್ನ ಅಂತಃಪುರಕ್ಕೆ ಪ್ರವೇಶಿಸಿದ ಕೂಡಲೆ ಆತನು ಇತರ ವಿಷಯಗಳಿಂದ ಚಿಂತಾಕ್ರಾಂತನಾಗಿರುವನೆಂದು ತೋರಿದುದೇ ಆದರೆ ತನ್ನ ಮೃದುಮಧುರೋಕ್ತಿಗಳಿಂದ ಆತನ ಸಂತಾಪವನ್ನು ಹೋಗಲಾಡಿಸಿ, ಆತನಿಗೆ ಅತ್ಯಾನಂದ

ವನ್ನುಂಟುಮಾಡುತ್ತಿದ್ದಳು. ಈ ಕಾರಣದಿಂದ ಬಾದಷಹನಿಗೆ ಈಕೆಯಲ್ಲಿ ವಿಶೇಷವಾದ ಅನುರಾಗವಿದ್ದಿತು. ಉದಯಪುರಿಯು ಹಿಂದೂ ಸ್ತ್ರೀಯಾದುದರಿಂದ ತನ್ನ ಪತಿಯ ವಿಷಯದಲ್ಲಿ ತಾನು ಹೇಗೆ ವರ್ತಿಸಬೇಕೆಂಬುದನ್ನು ಆಕೆ ಚೆನ್ನಾಗಿಯೂ ತಿಳಿದುಕೊಂಡಿದ್ದಳು,ಆದರೇನು ಮುಹಮ್ಮದೀಯರೊಡನೆ ಸೇರಿದಮೇಲೆ ಅವರ ಗಾಳಿಯು ಸೋಂಕದಿರುವದೆ ? ವಿಮಲಾದೇವಿಯು ತನಗೆ ಬರೆದಕಾಗದವನ್ನು ನೋಡಿದಂದಿನಿಂದಲೂ ಆಕೆಯ ಮೇಲೆ ದ್ವೇಷವನ್ನು ಕಾರುತ್ತಿದ್ದಳು. ಮಾಯೆಯನ್ನು ಚೆನ್ನಾಗಿಬಲ್ಲ ಇವಳು ವಿಮಲೆಯನ್ನು ತಾನು ದ್ವೇಷಿಸುವುದಕ್ಕೆ ಆರಂಭವಾದುದು ಮೊದಲು ತನ್ನ ಪತಿಯಲ್ಲಿ ಒಂದುವಿಧವಾಗಿ ನಡೆದುಕೊಳ್ಳುತ್ತಿದ್ದಳು.

ಔರಂಗಜೇಬನು ತನ್ನ ಮಹಲನ್ನು ಪ್ರವೇಶಿಸಿದ ಕೂಡಲೆ ವಿಚಾರಮಗ್ನಳಾಗಿರುವಂತೆ ನಟಿಸುತ್ತಾ ಕಯ್ಯಲ್ಲಿ ಆ ಕಾಗದವನ್ನು ಹಿಡಿದುಕೊಂಡು ದೈನ್ಯವನ್ನು ತೋರ್ಪಡಿಸುತ್ತ ಯೋಚನೆ ಮಾಡುತ್ತಿದ್ದಳು. ಬಾದಷಹನು ಒಳಗೆ ಪ್ರವೇಶಿಸಿ ಆಕೆಯನ್ನು ನೋಡಿ, ಹೀಗೆ ಯೋಚಿಸಲು ಕಾರಣವೇನೆಂದು ಕೇಳಲು, ಅವ ಪ್ರತ್ಯುತ್ತರವನ್ನೂ ಕೊಡದೆ ಆತನ ಇದಿರಿಗೆ ಕಣ್ಣೀರು ಸುರಿಸುತ್ತಿದ್ದಳು. ಈ ರೀತಿಯಾಗಿ ಉದಯಪುರಿಯು ರೂಪನಗರದ ಮೇಲೆ ಔರಂಗಜೇಬನ ದ್ವೇಷವು ಹೆಚ್ಚುವಂತೆ ಮಾಡುತ್ತಿದ್ದಳು. “ ತಾನು ಮುಳುಗಿದುದೇ ಗಂಗೆ, ತಾನು ಮೆಚ್ಚಿದುದೇ ರಂಭೆ” ಎಂಬಂತೆ, ಭೋಗಚಕ್ರವರ್ತಿಯನ್ನು ಸೇರಿದ ತನ್ನ ಭಾಗ್ಯವೇ ಭಾಗ್ಯವೆಂದೂ, ತಾನೇ ರಜಪೂತ್ರ ರಾಣಿಯರಿಗೆಲ್ಲ ಮಹಾರಾಣಿಯೆಂದೂ ಗರ್ವಪಡುತ್ತಿದ್ದಳು. ಅಷ್ಟೇ ಅಲ್ಲ; ರಜಪೂತ ಕನ್ನಿಕೆಯರೆಲ್ಲರೂ ತನ್ನಂತೆಯೇ ಮುಹಮ್ಮದೀಯ ರಾಜರನ್ನು ಮದುವೆ ಮಾಡಿಕೊಳ್ಳಬೇಕೆಂದೂ ಅವಳು ಕೋರುತ್ತಿದ್ದಳು.

ಹೀಗಿರಲು, ಮುಬಾರಕನು ಬಾದಷಹನ ಅಪ್ಪಣೆಯಂತೆ ಇಂದಿರೆಯನ್ನು ಕರೆದುಕೊಂಡು ಬಂದು ಉದಯಪುರಿಯ ಇದಿರಿಗೆ ನಿಲ್ಲಿಸಿದನು. ಆಗ ಉದಯಪುರಿಯು ಕನಾಚೀ ಮಂಚದಮೇಲೆ ಶಯನಿಸಿ ತನ್ನೊಳಗೇ ಯೋಚಿಸುತ್ತಿದ್ದಳು. ಆಕೆಯು ಧರಿಸಿದ ವಸ್ತ್ರವು ಎಲೆಹಸರುಬಣ್ಣವುಳ್ಳದಾಗಿಯೂ ಜರತಾರಿಯ ಪುಷ್ಪಗಳಿಂದ ಕೂಡಿದುದಾಗಿಯೂ ಇದ್ದಿತು. ಮಲಗಿದ್ದ ಮುಕಮಲ್ ಹಾಸಿಗೆಯೂ ಹಸರುಬಣ್ಣವುಳ್ಳದಾಗಿ ವಿವಿಧ ಪುಷ್ಪಗಳಿಂದ ಅಲಂಕೃತವಾಗಿದಿತು. ಉದಯಪುರಿಯು ವಿಲಾಸಾರ್ಥವಾಗಿ ಪ್ರತಿದಿನವೂ ಒಂದೊಂದು ವಿಧವಾದ ಉಡುಪುಗಳನ್ನೂ ಒಡವೆಗಳನ್ನೂ ಧರಿಸುತ್ತಿದ್ದಳು. ಆ ದಿನ ಉದಯಪುರಿಯು ಎಲೆಹಸರುಬಣ್ಣದ ಉಡುಪುಗಳನ್ನೂ ಪಚ್ಚೆಗಳಿಂದ ಖಚಿತವಾದ ಆಭರಣಗಳನ್ನೂ ಧರಿಸಿದ್ದಳು. ಇಂದಿರೆಯು ಆಕೆಯನ್ನು ನೋಡಿದ ಕೂಡಲೆ ರಾಜಪುತ್ರಸ್ತ್ರೀಯಾಗಿ ಹುಟ್ಟಿ, ಧನಲೋಭದಿಂದ ಮುಹಮ್ಮದೀಯನನ್ನು ಮದುವೆಯಾಗಿರುವಳಲ್ಲಾ--ಎಂಬ ಕೋಪದಿಂದ ಆಕೆಯನ್ನು ತಿರಸ್ಕಾರಭಾವದಿಂದ ನೋಡುತ್ತಿದ್ದಳು. ಉದಯಪುರಿಯು ಕೂಡ ಇಂದಿರೆಯನ್ನು ನೋಡುತ್ತಿದ್ದರೂ ತನ್ನ ದೃಷ್ಟಿಯು ಆಕೆಯ ಮೇಲೆ ಇಲ್ಲದವಳಂತೆ ನಟಿಸುತ್ತಿದ್ದಳು. ಆವಾಗಲೂ ಮದೋನ್ಮತ್ತರಾಗಿ ಮಲಗಿರುವುದೇ ಮೊಗಲ್ ಸ್ತ್ರೀಯರಿಗೆ ಔದಾರ್ಯಸೂಚಕವಾದುದಂತೆ ! ಇಂದಿರಾದೇವಿಯು ಎಷ್ಟು ಹೊತ್ತು ನಿಂತಿದ್ದರೂ ಆಕೆಯನ್ನು ಆರೂ ಮಾತಾಡಿಸಲೇ ಇಲ್ಲ. ದಾಸದಾಸೀಜನಗಳೂ ಉದಯಪುರಿಯನ್ನು ನೋಡಿದಕೂಡಲೆ ದೂರದಿಂದಲೇ ಸಲಾಂಮಾಡುತ್ತ ಬರುವುದು ವಾಡಿಕೆಯಾಗಿದ್ದಿತು. ಆದರೆ, ಇಂದಿರೆಯು ಮಾತ್ರ ಹಾಗೆ ಮಾಡದೆ ಆಕೆಯನ್ನು ತಿರಸ್ಕಾರದಿಂದ ನೋಡುತ್ತ ಇದ್ದುದನ್ನು ಉದಯಪುರಿಯು ತಿಳಿಯದೆ ಇರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಉದಯಪುರಿಯು ಮೇಲಕ್ಕೆದ್ದು ಇದಿರಾಗಿದ್ದ ಮುಬಾರಕನನ್ನು ಕಂಡು “ ಈಕೆ ಯಾರು ? ” ಎಂದು ಕೇಳಿದಳು. ಅದಕ್ಕೆ ಮುಬಾರಕನು “ ಬೇಗಂ ಸಾಹೇಬಾ ! ತಮ್ಮ ಹತ್ತಿರ ದಾಸಿಯನ್ನಾಗಿಟ್ಟುಕೊಳ್ಳಬೇಕೆಂದು ಈಕೆಯನ್ನು ಬಾದಷಹಾರವರು ನನ್ನೊಡನೆ ಕಳುಹಿರುವರು. ” ಎಂದು ಉತ್ತರವಿತ್ತನು. ಇಂದಿರೆಯ ಸೌಂದರ್ಯಾತಿಶಯವನ್ನು ನೋಡಿ ಉದಯಪುರಿಯು ಒಳಗೊಳಗೆ ಸಂತೋಷಪಡುತ್ತಾ ಕುತೂಹಲದಿಂದ ಅವಳೊಡನೆ ಉತ್ತರಪ್ರತ್ಯುತ್ತರಕ್ಕೆ ಮೊದಲುಮಾಡಿದಳು.

ಉದಯಪುರಿ:— ಎಲೆ, ನೀನು ಯಾರು ? ಬಾದಷಹರಿಗೆ ನೀನು ಹೇಗೆ ಸಿಕ್ಕಿದೆ ?

ಇಂದಿರಾ:—ಅಮ್ಮಾ ! ನಾನು ಯಾರಾದರೇನು:—ಹೇಗೆ ಬಂದರೇನು ;--ನನ್ನ ವಿಧಿಯೇ ನನ್ನನ್ನು ಇಲ್ಲಿಗೆ ಕರೆತಂದಿರುವುದು

ಉದಯ:—ಓಹೋ ! ನೀನು ಸರ್ವಜ್ಞೆಯಂತೆ ಕಾಣುತ್ತಿರುವೆಯಲ್ಲಾ ! ಹಾಗಾದರೆ, ನೀನು ನಮ್ಮ ಬಳಿಯಲ್ಲಿ ಸರಿಯಾಗಿರುವೆಯಲ್ಲವೆ? ಬಾದಷಹರಿಗೆ ನೀನಾವ ದ್ರೋಹವನ್ನು ಮಾಡಿದೆಯೋ ಹೇಳಬಾರದೆ?

ಇಂದಿರಾ:—ಅಮ್ಮಾ ! ಸಮಾಚಾರಗಳೆಲ್ಲವನ್ನೂ ತಿಳಿದಿದ್ದರೂ ನನ್ನನ್ನು ಹೀಗೆ ಕೇಳುವುದರಿಂದ ಪ್ರಯೋಜನವೇನು? ಎಲ್ಲಿ ರಾಜಪುತ್ರ ಸುಂದರಿಯರು ಕಾಣಿಸಲಿ, ಬಾದಷಹಾರವರು ಅವರನ್ನು ಆ ಕ್ಷಣವೇ ತಮ್ಮ ಜನಾನಾದೊಳಕ್ಕೆ ಹಿಡಿದುಕೊಂಡು ಬರುವರಲ್ಲವೆ ?

ಉದಯ:--ಸರಿಯೆ, ನೀನಾವ ಜಾತಿ ?

ಇಂದಿರಾ:—ತುರುಷ್ಕರ ಸೇವೆಮಾಡಬೇಕಾಗಿ ಬಂದಾಗ ಆವ ಜಾತಿಯವಳಾದರೇನು ಲಾಭವು ?

ಉದಯ:—ಓಹೋ ! ನಿನಗೆ ಬರುತಬರುತ್ತ ಗರ್ವವು ಮೇರೆಮೀರುತ್ತಿದೆಯಲ್ಲಾ ! ನಿನ್ನ ಮಾತುಗಳನ್ನು ಕೇಳಿದರೆ ನೀನು ರಜಪೂತ್ರ ಸ್ತ್ರೀಯರಂತೆ ತೋರುವುದು”

ಹೀಗೆ ನಡೆದ ಪರಸ್ಪರ ಸಂಭಾಷಣೆಯಿಂದ, ಇಂದಿರೆಯನ್ನು ಮದುವೆಯಾಗಬೇಕೆಂಬ ಅಪೇಕ್ಷೆಯಿಂದ ಔರಂಗಜೇಬನು ಈಕೆಯನ್ನು ತನ್ನ ಜನಾನಾಕ್ಕೆ ಕಳುಹಿರುವನೆಂಬ ಸಂಶಯವು ಉದಯಪುರಿಯ ಮನಸ್ಸಿನಲ್ಲಿ ಹುಟ್ಟಿತು. ಬಾದಷಹನು ಇಂದಿರೆಯನ್ನು ಮದುವೆಯಾದರೆ, ತನಗಿರುವ ಸ್ವಾತಂತ್ರ್ಯವು ಕಡಿಮೆಯಾಗುವದಲ್ಲಾ -ಎಂಬ ವ್ಯಸನದಿಂದ ಆಕೆಯನ್ನು ಜನಾನಾದಿಂದ ಹೇಗಾದರೂ ಮಾಡಿ ಹೊರಡಿಸಬೇಕೆಂದು ನಿಶ್ಚಯಮಾಡಿದಳು. ಆದರೆ, ರಾಜಕೀಯ ವ್ಯವಹಾರ ನಿಮಿತ್ತವಾಗಿ ಇಂದಿರೆಯನ್ನು ಕರೆಯಿಸಿರುವನೇನೋ ಎಂದು ಸಂದೇಹಪಟ್ಟಳು. ಅನನ್ಯ ಸಾಧಾರಣ ಸೌಂದರ್ಯಾತಿಶಯವುಳ್ಳ ಇಂದಿರೆಯಲ್ಲಿ ಬಾದಷಹನು ಮೋಹಪಾಶಬದ್ಧನಾಗಿ ಯಾವ ಕ್ಷಣದಲ್ಲಿ ಇಂದಿರೆಯನ್ನು ಮದುವೆಮಾಡಿಕೊಳ್ಳುವನೋ ಎಂಬ ಶಂಕೆಯಲ್ಲಿಯೇ ಇದ್ದಳು.

ಆಹ ! ನಮ್ಮ ಇಂದಿರೆಯು ಎಂತಹ ಮಾಯವನ್ನು ತಿಳಿದಿರುವಳು ! ತನ್ನ ವಾಕ್ಚಾತುರ್ಯದಿಂದ ಉದಯಪುರಿಗೆ ದೊಡ್ಡ ಅನುಮಾನವನ್ನು ಹುಟ್ಟಿಸಿ, ತಾನು ಹೇಗಾದರೂ ಮಾಡಿ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಯತ್ನಿಸಿದಳು. ಇಂದಿರೆಯು ನೋಡುವದಕ್ಕೆ ಸಾಮಾನ್ಯ ಸ್ತ್ರೀಯಂತೆ ಇದ್ದರೂ ದೀರ್ಘಾಲೋಚನೆಯನ್ನು ಮಾಡಿ ಕಾರ್ಯೋಪಾಯಗಳನ್ನು ಯೋಜಿಸುವುದರಲ್ಲಿ ಅಸಮಾನಳಾಗಿದ್ದಳು. ಆಕೆಯ ಸಾಹಸವನ್ನೂ ರಾಜಭಕ್ತಿಯನ್ನೂ ಔರಂಗಜೇಬನು ಚನ್ನಾಗಿ ತಿಳಿದಿದ್ದನು. ಮಾಯಾಜಾಲಗಳಿಂದ ಶತ್ರುಗಳನ್ನು ಮೋಸಪಡಿಸುವದೆಂದರೆ ಅವಳಿಗೆ ಅದೊಂದು ಸ್ವಾಭಾವಿಕವಿದ್ಯೆಯಂತಾಗಿದ್ದಿತು. ಇದಕ್ಕೆ ಚಂದ್ರಾವತಿಯ ಸಂರಕ್ಷಣವೇ ವಾಚಕರಿಗೆ ನಿದರ್ಶನವಾಗಿರುವುದು. ಆದರೆ, ಭಗವಂತನು ಆಕೆಯ ಮೇಲೆ ಸ್ವಲ್ಪವಾದರೂ ವಿಶ್ವಾಸವಿಡದೆ ಅನೇಕ ವಿಧವಾದ ಕಷ್ಟಗಳಿಗೆ ಗುರಿಮಾಡಿದನು.

ಇಂದಿರೆಯನ್ನು ಹೇಗೆ ಹೊರಡಿಸಬೇಕೆಂದು ಉದಯಪುರಿಯು ಸ್ವಲ್ಪ ಯೋಚಿಸಿದಳಾದರೂ ಆಕೆಯನ್ನು ಹೊರಡಿಸುವದು ದುಸ್ತರವೆಂದು ಸುಮ್ಮನಾದಳು. ಆ ಸುಂದರೀಮಣಿಯು ಬಾದಷಹನ ಕಣ್ಣಿಗೆ ಬಿದ್ದರೆ ಆದರೆ, ಎಂದಾದರೂ ಆತನು ಮದುವೆ ಮಾಡಿಕೊಳ್ಳದಿರಲಾರನೆಂದು ತಿಳಿದು ಬಾದಷಹನಿಗೆ ಕಾಣಿಸದಂತೆ ಆಕೆಯನ್ನು ಜನಾನಾದಿಂದ ಹೊರಕ್ಕೆ ಬರಗೊಡಿಸದೆ ಆಕೆಗೆ ಸುಲಭವಾದ ಕೆಲಸಗಳನ್ನೇ ನೇಮಿಸುತ್ತ ತನ್ನ ಅಂತಃಪುರದಲ್ಲಿ ಒಂದು ಕರುವಾಸಿಯನ್ನು ಕೊಟ್ಟು ಆಕೆಯನ್ನು ಅಲ್ಲಿಯೇ ಇರಿಸಿಕೊಂಡಿದ್ದಳು. ಅಂದಿನಿಂದಲೂ ಇಂದಿರೆಯು ಅಂತಃಪುರದ ಒಳಭಾಗದಲ್ಲಿ ಸಂಚರಿಸಬೇಕಾಯಿತೇ ಹೊರತು, ಹೊರಗೆ ಬರಲು ಸ್ವಲ್ಪವಾದರೂ ಅವಕಾಶವಿಲ್ಲದೆ ಹೋಯಿತು. ಹೀಗೆ ಆವಾಗಲೂ ಅಂತಃಪುರದಲ್ಲಿಯೇ ಇದ್ದರೂ ಉದಯಪುರಿಯು ಮುಟ್ಟಿದ ಪದಾರ್ಥಗಳನ್ನು ಇಂದಿರೆಯು ಮುಟ್ಟುತ್ತಿರಲಿಲ್ಲ. ಉದಯಪುರಿಗೆ ಸೇವೆ ಮಾಡಿದ ಮೇಲೆ ತನ್ನ ಕರುಮನೆಗೆ ಹೋಗಿ ಸ್ನಾನ ಮಾಡಿಯೇ ಊಟ ಮಾಡುತ್ತಿದ್ದಳು. ಈ ಕಾರಣದಿಂದ ಉದಯಪುರಿಗೆ ಒಂದು ದಿನ ಇಂದಿರೆಯನ್ನು ಕುರಿತು,-“ಏನೇ, ನಾನು ಮುಟ್ಟಿದುದನ್ನು ನೀನು ತಿನ್ನುವುದಿಲ್ಲವಂತೆ: ಏಕೆ ? ನಾನನ್ನು ನೀಚಳೋ ? ”

ಇಂದಿರೆ; – ಅಮ್ಮಾ! ಉತ್ತಮ ರಜಪೂತ ಸ್ತ್ರೀಯರು ಅಪ್ರತ್ಯಕ್ಷವಾಗಿ ಜಾತಿಭ್ರಷ್ಟರ ಸಂಸರ್ಗವನ್ನು ಮಾಡಿದವರು ಮುಟ್ಟಿದುದನ್ನು ಕೂಡ ಮುಟ್ಟುವದಿಲ್ಲ.

ಉದಯ:—ಎಲೆ, ಇನ್ನು ಕೆಲವುದಿನಗಳಲ್ಲಿಯೇ ನಿನ್ನನ್ನು ಜಾತಿಗೆಟ್ಟನೊಬ್ಬ ತುರುಕ ಸೇವಕನಿಗೆ ಮದುವೆಮಾಡಿ ನಿನ್ನ ಅಹಂಕಾರವನ್ನು ಮುರಿಯದ್ದಿದರೆ ನಾನು ಉದಯ ಪುರಿಯೇ ಅಲ್ಲ! ಪವಿತ್ರವಾದ ಮಹಮ್ಮದೀಯ ವಂಶವನ್ನು ನಿಂದಿಸಿದ ನಿನಗೆ ಇದೇ ಶಿಕ್ಷೆಯೆಂದು ಹೇಳಿ, ಮನಾವದನ ಕಡೆಗೆ ತಿರುಗಿ ನೋಡಿ. ಏಲೋ, ಮನಾವದ್! ಈ ಇಂದಿರೆಯನ್ನು ಮದುವೆ ಮಾಡಿಕೊಳ್ಳುವೆಯಾ? ” ಎಂದು ನಗುತ್ತ ಪರಿಹಾಸ ಮಾಡಿದಳು. ಈ ಮಾತನ್ನು ಕೇಳಿ ಮನಾವದನು ತಲೆಬಗ್ಗಿಸಿಕೊಂಡು ಸುಮ್ಮನೆ ನಿಂತನು. ಅಂದಿನಿಂದಲೂ ಆತನು ಇಂದಿರೆಯನ್ನು ತನಗೆ ನಿಶ್ಚಯವಾಗಿ ಮದುವೆಮಾಡುವಳೆಂದು ಆಶೆಯನ್ನಿಟ್ಟುಕೊಂಡು ಉದಯಪುರಿಯಲ್ಲಿ ಮತ್ತಷ್ಟು ಭಕ್ತಿ ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದನು

ಹೀಗೆ ಮೋಹಪಿಶಾಚವು ಆವೇಶಿಸಿದಂದಿನಿಂದಲೂ ಮನಾವದನು ಉದಯಪುರಿಗೆ ಮುಖ್ಯಸೇವಕನಾಗಿ ಇಂದಿರೆಯನ್ನು ಎಡೆಬಿಡದೆ ಅನುವರ್ತಿಸುತ್ತಿದ್ದನು ಆವಾಗಲಾದರೂ ಮಾರ್ಗಮಧ್ಯದಲ್ಲಿ ಇಂದಿರೆಯು ಕಣ್ಣಿಗೆ ಬಿದ್ದರೆ ಅವಳ ಸೌಂದರ್ಯವನ್ನು ರೆಪ್ಪೆಬಡಿಯದೆ ನೋಡುತ್ತ ತನಗೆ ಇಂತಹ ಸೌಂದರ್ಯವತಿಯಾದ ಹೆಂಡತಿ ದೊರೆಯುವಳೆಂದು ತುಂಬ ಸಂತೋಷಪಡುತ್ತಿದ್ದನು.

ಉದಯಪುರಿಯು ಇಂದಿರೆಯನ್ನು ಸರ್ವದಾ ದ್ವೇಷಿಸುತ್ತ ಆಕೆಯನ್ನು ಹೊರಡಿಸುವ ಪ್ರಯತ್ನದಲ್ಲಿದ್ದರೂ ಆಗಾಗ ಆಕೆಯನ್ನು ಕರೆಯಿಸಿ ಆಕೆಯೊಡನೆ ಸಂಭಾಷಿಸುತ್ತ ಕಾಲವನ್ನು

ಕಳೆಯುತ್ತಿದ್ದಳು. ಆ ಸಮಯದಲ್ಲಿ ಇಂದಿರೆಯು ಸಂದರ್ಭಾನುಸಾರವಾಗಿ ಪೂರ್ವರಾಜರ ಚಿತ್ರ ಚರಿತ್ರೆಗಳನ್ನೂ ಶತ್ರುಗಳ ಮುತ್ತಿಗೆಯಿಂದ ತಾನು ಚಂದ್ರಾವತಿಯನ್ನು ತಪ್ಪಿಸಿದ ಅದ್ಭುತ ವಿಷಯವನ್ನೂ ಹೇಳುತ್ತ ಆಕೆಗೆ ಆಶ್ಚರ್ಯವನ್ನುಂಟುಮಾಡುತ್ತಿದ್ದಳು. ಈಕೆಯ ಅದ್ಭುತಕಾರ್ಯಗಳನ್ನೂ ಬುದ್ಧಿಚಾತುರ್ಯಗಳನ್ನೂ ತಿಳಿದುದು ಮೊದಲು ಉದಯಪುರಿಯು ಇಂದಿರೆಯಲ್ಲಿ ಸ್ವಲ್ಪ ಅಭಿಮಾನವನ್ನಿಟ್ಟು ಸ್ನೇಹ ಬಿಂದಿದಳು. ಈ ರೀತಿಯಾದ ಸಂಭಾಷಣೆಗಳಿಂದ ಕಾಲವನ್ನು ಕಳೆಯುತ್ತಿರಲು ಒಂದು ದಿನ ಉದಯಪುರಿಯು ಇಂದಿರೆಯೊಡನೆ ಮಾತನಾಡುತ್ತ "ಇಂದಿರಾ! ರೂಪನಗರಾಧೀಶನಂತೆ! ಆತನ ಹೆಸರು ವಿಜಯಸಿಂಹನಂತೆ! ಆತನಿಗೆ ವಿಮಲಾದೇವಿಯೆಂಬ ಮಗಳಿರುವಳಂತೆ, ಆಕೆಯನ್ನು ನೀನು ನೋಡಿರುವೆಯಾ? ಎಂದು ಕೇಳಿದಳು. ಆ ಮಾತಿಗೆ ಇಂದಿರೆಯು "ಓಹೋ! ವಿಮಲಾದೇವಿಯು ನನಗೆ ಗೊತ್ತಿಲ್ಲವೆ? ಸೌಂದರ್ಯ, ಸೌಕುಮಾರ್ಯ, ಗಾಂಭೀರ್ಯ, ವಿದ್ಯಾಬುದ್ಧಿ, ಜಾಣ್ಮೆ ಮೊದಲಾದವುಗಳಲ್ಲಿ ಆಕೆಗೆ ಸಮಾನರನ್ನು ನಾನು ನೋಡಿರಲಿಲ್ಲ. ಎಂದು ಉತ್ತರವನ್ನಿತ್ತಳು.

ಉದಯ:—ಅಕ್ಕ, ಅಷ್ಟು ಸುಂದರಿಯೆ? ಇಷ್ಟು ದಿನಗಳೂ ನನಗೆ ಹೇಳಲೇ ಇಲ್ಲವೇಕೆ?

ಇಂದಿರೆ:- ಅಮ್ಮಾ! ಆಕೆಯ ವಿಚಾರವು ನಿಮಗೆ ಗೊತ್ತಿಲ್ಲ. ಆಕೆಯ ಶೀಲಕಾಂತಿಯು ಒಂದೇಮಾತಿನಲ್ಲಿ ಹೇಳಬೇಕೆಂದರೆ ಆಕೆಯನ್ನು ನೋಡಿದವರೇ ಆದರೆ ನಿಮ್ಮ ಸಖಿಯರೂ ಸಹ ಮೋಹಾಂಧರಾಗಿ ಪರಿತಪಿಸುವರು"

ಇಂದಿರೆಯ ಈ ಉತ್ತರವನ್ನು ಕೇಳಿ ಉದಯಪುರಿಯ ಮನಸ್ಸಿಗೆ ಮತ್ತೊಂದು ಹೊಸ ವಿಚಾರವು ಹೊಳೆಯಿತು. ಬಾದಶಹನು ರೂಪನಗರವನ್ನು ಮುತ್ತಿ ವಿಮಲಾದೇವಿಯನ್ನು ಹಿಡಿದು ತಂದ ಕೂಡಲೆ ಅಂತಹ ಅನನ್ಯಸಾಮಾನ್ಯ ಲಾವಣ್ಯಾತಿಶಯದಿಂದ ಪ್ರಕಾಶಿಸುತ್ತಿರುವ ವಿಮಲಾದೇವಿಯನ್ನು ಆತನು ಮದುವೆಯಾಗದೆ ಬಿಡನೆಂದು ನಾನಾಸಾಮಾನ್ಯಸುಂದರಿಯರು ಆತನ ಕೈಗೆ ಸಿಕ್ಕಿದರೂ ಆತನು ಬಿಡಲಾರನೆಂದಮೇಲೆ ಅನನ್ಯಸುಂದರಿಯಾದ ರಾಜಕನ್ಯೆಯು ಸಿಕ್ಕಿದುದೇ ಆದರೆ ಬಾದಶಹನು ಬಿಡುವನೆ!" ಎಂದು ಹೀಗೆ ಉದಯಪುರಿಯ ಮನಸ್ಸು ನಿರಂತರವೂ ಚಿಂತಾಕ್ರಾಂತವಾಗಿದ್ದಿತು. ವಿಮಲೆಯು ಬರೆದ ಕಾಗದವೇ ತನ್ನ ಪ್ರಾಣವನ್ನು ತೆಗೆಯುವುದೆಂದೂ ಕಾಗದವನ್ನು ನೋಡಿದಮೇಲಾದರೂ ಸುಮ್ಮನಿರದೆ ಬಾದಷಹನಿಗೆ ಏಕೆ ತೋರಿಸಿದೆನೆಂದೂ, ತಿಳಿಸಿದರೂ ನಾನೇಕೆ ರೋಷವನ್ನು ವಹಿಸಿದೆನೆಂದೂ, ರೋಷವನ್ನು ವಹಿಸಿದರೂ ವಿಮಲೆಯನ್ನು ತರಲೇ ಬೇಕೆಂದು ಬಾದಷಹನಿಗೆ ನಾನೇಕೆ ಹೇಳಿದೆನೆಂದೂ, ಉದಯಪುರಿಯು ತಾನು ಮಾಡಿದ ಅವಿವೇಕಕಾರ್ಯಗಳನ್ನು ಸ್ಮರಿಸಿಕೊಳ್ಳುತ್ತ ದುಃಖಿತೆಯಾದಳು. ಆದರೂ ವಿಮಲೆಯನ್ನು ತನ್ನ ಪರಿಚಾರಕನಾದ ಮನಾವದನಿಗೆ ಮದುವೆಮಾಡಿ ಆಕೆಯನ್ನು ಅವಮಾನಪಡಿಸಬೇಕೆಂದು ಆಕೆಗೆ ಅಭಿಪ್ರಾಯವಿದ್ದುದರಿಂದ ಇನ್ನುಮೇಲೆ ವಿಮಲೆಯು ಬಂದುದೇ ಆದರೆ ತತ್ಕ್ಷಣವೇ ಮನಾವದನಿಗೆ ಆಕೆಯನ್ನು ಮದುವೆಮಾಡಿಬಿಟ್ಟರೆ ತನಗೆ ಆವ ಭಯವೂ ಉಂಟಾಗುವುದಿಲ್ಲ." ಹೀಗೆ ನಿರ್ಧರಿಸಿ, ತನ್ನ ಉಪಾಯಕ್ಕೆ ತಾನೇ ಸಂತೋಷಪಡುತ್ತ ಇಂದಿರೆಯೊಡನೆ ಮಾತನಾಡುತ್ತ ಕಾಲವನ್ನು ಕಳೆಯುತ್ತಿದ್ದಳು.

ಹದಿನೈದನೆ ಪ್ರಕರಣ.

(ಡಿಲ್ಲೀನಗರ)

ಡಿಲ್ಲೀನಗರವು ಪೂರ್ವದಲ್ಲಿ ಹಸ್ತಿನಾಪುರವೆಂದು ಕರೆಯಲ್ಪಡುತ್ತಿದ್ದಿತು. ಯುಧಿಷ್ಠಿರ ರಾಜನ ರಾಜ್ಯಾಭಿಷೇಕದಿಂದ ಮೊದಲ್ಗೊಂಡು ಮೊಗಲಾಯಿ ಪ್ರಭುತ್ವಾಂತದ ವರೆಗೂ ಈ ನಗರವು ನಮ್ಮ ಹಿಂದೂ ದೇಶಕ್ಕೆಲ್ಲ ರಾಜಧಾನಿಯಾಗಿದ್ದಿತು. ಈ ನಗರದ ಚರಿತ್ರೆಯು ಹಿಂದೂ ದೇಶದ ಚರಿತ್ರೆಯೊಡನೆ ಹೆಚ್ಚು ಸಂಬಂಧವುಳ್ಳುದಾಗಿದೆ. ಆವ ಪ್ರಸಿದ್ಧ ನಗರವು ಮಹಾಪರಾಕ್ರಮಶಾಲಿಗಳಾದ ರಾಜಾಧಿರಾಜರಿಗೆ ರಾಜಧಾನಿಯಾಗಿದ್ದಿತೊ, ಯಾವ ನಗರದಲ್ಲಿ ಜನರಿಗೆ ವಿಶೇಷ ಪ್ರೀತಿಯಿರುವುದೋ, ಯಾವ ನಗರವು ಭಾಗ್ಯಲಕ್ಷ್ಮಿಗೆ ಆವಾಸಸ್ಥಾನವಾಗಿರುವುದೋ ಅಂತಹ ಪಟ್ಟಣದಲ್ಲಿಯೇ ಎಲ್ಲಾ ಉತ್ಸವಗಳನ್ನು ನಡೆಯಿಸಬೇಕೆಂದು ಪಾಶ್ಚಿಮಾತ್ಯರಾದ ಆಂಗ್ಲಪ್ರಭುಗಳು ೧೮೭೭ನೆ ವರ್ಷದಲ್ಲಿ "ಚಕ್ರವರ್ತಿನಿ" ಎಂಬ ಬಿರುದಾಂಕಿತೆಯರಾದ ಶ್ರೀಮದ್ವಿಕ್ಟೋರಿಯಾ ಮಹಾರಾಣಿಯವರ ಪಟ್ಟಾಭಿಷೇಕ ಮಹೋತ್ಸವವನ್ನೂ, ೧೯೦೨ನೆ ಇಸವಿಯಲ್ಲಿ ಪ್ರಜಾಪರಿಪಾಲನಾನಿಪುಣರಾಗಿದ್ದ ಶ್ರೀ ಎಡ್ವರ್ಡ್ ಚಕ್ರವರ್ತಿಗಳವರ ಪಟ್ಟಾಭಿಷೇಕ ಮಹೋತ್ಸವವನ್ನೂ ಡಿಲ್ಲೀನಗರದಲ್ಲಿ ಅತ್ಯಂತ ಮಹೋತ್ಸವದಿಂದ ನಡೆಯಿಸಿದರು. ಮೊಗಲಾಯಿ ಪ್ರಭುತ್ವಾಂತದಿಂದ ಮೊದಲು ೧೯೧೧ನೆಯ ಇಸವಿಯ ವರೆಗೂ ಈ ನಗರವು ನಮ್ಮ ಹಿಂದೂದೇಶಕ್ಕೆ ರಾಜಧಾನಿಯಾಗಿರಲಿಲ್ಲ. ಈಗ ನಮ್ಮನ್ನು ಪಾಲಿಸುತ್ತಿರುವ ಶ್ರೀ ಜಾರ್ಜ ಮಹಾಚಕ್ರವರ್ತಿಗಳವರ ಪಟ್ಟಾಭಿಷೇಕಮಹೋತ್ಸವವು ೧೯೧೧ನೆ ಡಿಶೆಂಬರ ೧೨ನೆ ತಾ॥ನಲ್ಲಿ ಡಿಲ್ಲೀನಗರದಲ್ಲಿ ನಡೆಯಿಸಲ್ಪಟ್ಟು ಅಂದಿನಿಂದಲೂ ಈ ಮಹಾನಗರವು ನಮ್ಮ ಹಿಂದೂದೇಶಕ್ಕೆಲ್ಲ ರಾಜಧಾನಿಯಾಗಿ ಮಾಡಲ್ಪಟ್ಟಿತು.

ಈ ಡಿಲ್ಲೀನಗರವು ಸಮಸ್ತ ವಿದ್ಯೆಗಳಿಗೂ ನಿವಾಸಸ್ಥಾನವೆಂದು ಹೇಳಬಹುದು. ಅಲ್ಲಿಯ ಕೈಕೆಲಸಗಳನ್ನೂ ಚಿತ್ರ

ಕಾರರ ಚಾತುರ್ಯವನ್ನೂ ವರ್ಣಿಸಲು ಅಸಾಧ್ಯವು. ಎಂತಹ ದರಿದ್ರನಾದರೂ ಅವುದಾದರೊಂದು ವಿದ್ಯೆಯನ್ನು ಕಲಿತು ಡಿಲ್ಲಿನಗರವನ್ನು ಸೇರಿ ಅಲ್ಲಿ ಕೆಲವು ದಿನಗಳು ವಾಸಮಾಡಿದರೆ, ಆತನ ದಾರಿದ್ರ್ಯವು ಇಂಗಿಹೋಗುವುದರಲ್ಲಿ ಸಂದೇಹವಿಲ್ಲ. ಈ ನಗರದ ರಾಜಬೀದಿಗಳು ಅತಿ ದೀರ್ಘವಾಗಿಯೂ ತಕ್ಕಷ್ಟು ವಿಶಾಲವಾಗಿಯೂ ನಾನಾವಿಧವಾದ ಪ್ರತಿಮೆಗಳಿಂದ ಚಿತ್ರಿಸಲ್ಪಟ್ಟ ಹಲವು ಬಣ್ಣಗಳಿಂದ ಶೃಂಗರಿಸಲ್ಪಟ್ಟ ಸೌಧಗಳುಳ್ಳದಾಗಿ ನೋಟಕರಿಗೆ ನೇತ್ರಾನಂದಕರವಾಗಿಯೂ ಇರುವುವು. ಸಕಲ ಜೀವರಾಶಿಗಳನ್ನೂ ತಮ್ಮ ಗಾನವಿದ್ಯೆಯಿಂದ ಆನಂದಪಡಿಸುವ ಗಾನವಿದ್ಯಾವಿಶಾರದರಿಂದ ಈ ನಗರವು ಅಲಂಕರಿಸಲ್ಪಟ್ಟು ಗಂಧರ್ವ ಲೋಕವನ್ನು ಕೂಡ ತಿರಸ್ಕರಿಸುವಂತಿರುವುದು. [illegible] ಕಾಲದಲ್ಲಿ ಈ ನಗರವು ಮತ್ತೂ ವಿಶೇಷ ಶೃಂಗಾರದಿಂದಲೂ ಔದಾರ್ಯದಿಂದಲೂ ಕೂಡಿ ನೋಟಕಾರರಿಗೆ ಆನಂದದಾಯಕವಾಗಿ ಎಷ್ಟು ಸುತ್ತಿದರೂ ಸ್ವಲ್ಪವಾದರೂ ಆಯಾಸವನ್ನುಂಟುಮಾಡದೆ ಆಶ್ಚರ್ಯ-ಕೌತುಕ-ಉತ್ಸಾಹಗಳನ್ನು ಹೆಚ್ಚುಮಾಡುತ್ತಿದ್ದಿತು.

ಒಂದು ದಿನ ಸಾಯಂಕಾಲ ೪ ಘಂಟೆ ಸಮಯದಲ್ಲಿ ಒಬ್ಬ ಮಾರ್ಗಸ್ಥನು ಡಿಲ್ಲೀನಗರದ ಒಂದಾನೊಂದು ರಾಜವೀಥಿಯಲ್ಲಿ ಹೋಗುತ್ತಿದ್ದನು. ಆತನು ಯಾರೋ ಎಲ್ಲಿಂದ ಬಂದವನೋ ತಿಳಿದವರೊಬ್ಬರೂ ಇಲ್ಲವಾದರೂ, ಹರಿದುಹೋಗಿದ್ದ ವಸ್ತ್ರಗಳನ್ನುಟ್ಟುಕೊಂಡಿದ್ದುದರಿಂದ ಆತನನ್ನು ಬಡವನೆಂದು ಹೇಳಬಹುದು. ಶರೀರದಲ್ಲಿ ಬೆವತು ಉಟ್ಟಿದ್ದ ಬಟ್ಟೆಗಳು ನೆನೆದುಹೋಗಿದ್ದುದರಿಂದ ಆತನು ಬಹುದೂರದಿಂದ ಬಂದಿರುವನೆಂಬುದಾಗಿ ಗ್ರಹಿಸಬಹುದು. ಆ ಪಟ್ಟಣದ ಅನ ಚಿತ್ರನನ್ನೂ ನೋಡದೆ ತಲೆಯನ್ನು ಬಗ್ಗಿಸಿಕೊಂಡು ತನ್ನ ದಾರಿಯಲ್ಲಿಯೇ ಹೋಗುತ್ತಿದ್ದುದರಿಂದ ಆತನು ಡಿಲ್ಲೀನಗರಕ್ಕೆ ಹೊಸಬನಲ್ಲವೆಂದೂ ಚಿರಪರಿಚಿತನೆಂದೂ ಹೇಳಬಹುದು. ಆವಕಾಲದಿಂದಲೋ ಆ ಪಾಂಥನು ಮಾರ್ಗದಲ್ಲಿ ಹೋಗುವವರೊಬ್ಬರನ್ನೂ ನೋಡದೆ, ಒಬ್ಬರನ್ನೂ ಮಾತನಾಡಿಸದೆ ತನ್ನ ದಾರಿಯನ್ನೇ ಹಿಡಿದು ಸ್ವಲ್ಪ ವೇಗವಾಗಿಯೇ ಹೋಗುತ್ತಿದ್ದನು. ಆತನ ಮುಖಲಕ್ಷಣಗಳನ್ನು ನೋಡಿದವರು, ಆತನು ಮಾರವಾಡ ದೇಶಸ್ಥನೆಂದು ತಿಳಿದುಕೊಂಡರೂ ಆತನು ಧರಿಸಿದ್ದ ವಸ್ತ್ರಗಳುಮಾತ್ರ ಸ್ವಲ್ಪ ಸಂದೇಹವನ್ನುಂಟುಮಾಡುತ್ತಿದ್ದುವು. ಕ್ರಮಕ್ರಮವಾಗಿ ಆತನು ರಾಜವೀಥಿಗಳೆಲ್ಲವನ್ನೂ ದಾಟಿ, ಸಣ್ಣಬೀದಿಗಳಲ್ಲಿ ಹೋಗುತ್ತಿದ್ದನು. ಆತನು ಯಾರ ಮನೆಗೆ ಹೋಗಬೇಕೆಂದಿದ್ದನೆಂಬುದು ಒಬ್ಬರಿಗೂ ತಿಳಿಯದು. ಆರು ಘಂಟೆಯ ವರೆಗೂ ಆ ಪಾಂಥನು ನಡೆಯುತ್ತಲೇ ಇದ್ದನು. ಆತನು ದಾರಿಕೇಳದೆ ಹೋಗುತ್ತಿದ್ದುದರಿಂದ ತಾನು ಸೇರಬೇಕಾದ ಸ್ಥಳದ ಮಾರ್ಗವನ್ನು ತಪ್ಪಿ ಸುಮ್ಮನೆ ತಿರುಗುತ್ತಿದ್ದನೆಂದು ನಾವು ಊಹಿಸಬಹುದು. ಹೀಗೆ ಹೋಗುತ್ತಿದ್ದ ಪಾಂಥನು ಡಿಲ್ಲೀನಗರಕ್ಕೆ ಕಟ್ಟಕಡೆಯಲ್ಲಿದ್ದ ಒಂದು ಸಣ್ಣ ಕೇರಿಯನ್ನು ಪ್ರವೇಶಿಸಿದನು.

ಆವಕಾಲದಿಂದಲೋ ಆ ನಗರವಾಸಿಗಳು ಆ ಕೇರಿಯೊಳಕ್ಕೆ ವಿಶೇಷ ಹೋಗುತ್ತಿರಲಿಲ್ಲ. ಕೆಲವರು ಬಡವರು ಮಾತ್ರ ಆ ಕೇರಿಯ ೧-೨ ಮನೆಗಳಲ್ಲಿ ವಾಸಮಾಡಿಕೊಂಡಿದ್ದರು. ಉಳಿದ ಮನೆಗಳು ಜನಸಂಚಾರವಿಲ್ಲದೆ ಅತ್ಯಂತ ಶಿಥಿಲವಾಗಿ ಕ್ರೂರ ಸರ್ಪಗಳಿಗೂ, ಗಬ್ಬಿಲಗಳಿಗೂ, ವಾಸಸ್ಥಾನವಾಗಿದ್ದವು. ಸೂರ್ಯಚಂದ್ರರು ಪಕ್ಷಪಾತವಿಲ್ಲದೆ ತಾಂಡವಾಡುತ್ತಿದ್ದರು. ಮೇಘರಾಜನು ಕೂಡ. ಆ ಮನೆಗಳ ಮೇಲೆ ಅಧಿಕ ಅನುರಾಗವನ್ನಿಟ್ಟು ತನ್ನ ವರ್ಷಧಾರೆಗಳನ್ನು ಸುರಿಸುತ್ತಿದ್ದನು.

ನಮ್ಮ ಪಾಂಥನು ಬರುತ ಬರುತ್ತ ಆ ಕೇರಿಯ ಕೊನೆಯ ಭಾಗದಲ್ಲಿದ್ದ ಮನೆಯ ಮುಂದೆ ಬಂದು ನಿಂತನು. ಮನೆ ಬಾಗಿಲು ಮುಚ್ಚಲ್ಪಟ್ಟಿದ್ದುದರಿಂದ ಒಂದು ಸಲ ತಟ್ಟಿದನು. ಸ್ವಲ್ಪ ಹೊತ್ತಿಗೆ ಒಳಗಿನಿಂದ “ ಯಾರವರು? ” ಎಂಬ ವೃದ್ಧಸ್ತ್ರೀಕಂಠ ಧ್ವನಿಯು ಕೇಳಿಸಿತು. ಪಾಂಥನು ಯಾವಕಾರಣದಿಂದಲೋ ತಾನಾರೆಂಬುದನ್ನು ಹೇಳದೆ ಬಾಗಿಲನ್ನು ಮಾತ್ರ ಸುಮ್ಮನೆ ತಟ್ಟುತ್ತಿದ್ದನು. ಇಷ್ಟರಲ್ಲಿ ಒಬ್ಬ ವೃದ್ಧ ಸ್ತ್ರೀಯು ಬಾಗಿಲುಗಳನ್ನು ತೆರೆದು ಸ್ವಲ್ಪಹೊತ್ತು ಆತನ ಮುಖವನ್ನು ನೋಡುತ್ತಿದ್ದು ಅಬಳಿಕ, “ವಿಷ್ಣುದಾಸ! ಬಂದೆಯಾ? ಇದೇಕೆ ಇಷ್ಟು ಕೃಶನಾಗಿರುವೆ! ಒಂದು ಚಿಕ್ಕ ಚೀಟಿಯೂ ಇಲ್ಲದೆ ಹೋಯಿತೆ? ನನ್ನ ಹುಡುಗನ ಸಮಾಚಾರವೇನಾದರೂ ಗೊತ್ತಿದೆಯೋ? ನನ್ನ ಹುಡುಗಿಯು ಕ್ಷೇಮವಾಗಿರುವಳೋ? ಎಂಬುದಾಗಿ ನಗುತ್ತ ಅಭಿಮಾನಪೂರ್ವಕವಾಗಿ ಪ್ರಸಂಗಮಾಡಲಾರಂಭಿಸಿದಳು. “ ಅದಕ್ಕಾತನು “ಅಮ್ಮಾ! ನನ್ನ ಹೆಸರನ್ನು ಹಿಡಿದು ಕರೆಯಬೇಡ. ನಾನು ಈ ಪಟ್ಟಣಕ್ಕೆ ಬಂದಿರುವುದನ್ನು ಬಾದಷಹನು ತಿಳಿದುದಾದರೆ ನಾಶವಾಗುವುದು. ಎಲ್ಲಾ ಸಂಗತಿಗಳನ್ನೂ ಆಮೇಲೆ ತಿಳಿಸುವೆನು. ಇಂದಿನಿಂದಲಾದರೂ ನನ್ನನ್ನು ಶೋಟುಸಿಂಗನೆಂದು ಕರೆಯುತ್ತಿರಬೇಕು. ಎಂದು ಹೇಳುತ್ತ “ ಜ್ಯೇಷ್ಠಮಲ್ಲನು ಎಲ್ಲಿರುವನು? ”ಎಂದು ಕೇಳಿದನು. ” ಅದಕ್ಕಾಮುದುಕಿಯು “ ಬಾಬೂ ! ಈಗ ತಾನೆ ಪಟ್ಟಣದೊಳಕ್ಕೆ ಹೋದನು. ನೀನು ಎದ್ದು ಸ್ನಾನಮಾಡು, ಅಡಿಗೆಯಾಗಿದೆ. ಆತನಿಗಾಗಿ ನೀನು ನಿರೀಕ್ಷಿಸಬೇಡ. ಅಯ್ಯೋ ಪಾಪ! ಎಷ್ಟು ದೂರದಿಂದ ನಡೆದುಬಂದಿರುವೆಯೋ ತಿಳಿಯದು. ಏಳು, ಏಳು; ”ಎಂದು ತ್ವರೆಪಡಿಸಿದಳು

ಸಾಧಾರಣವಾಗಿ ಲೋಕದಲ್ಲಿ, ಸ್ತ್ರೀಯರ ಹೃದಯದಲ್ಲಿ ಎಂತಹ ರಹಸ್ಯವೂ ನಿಲ್ಲಲಾರದೆಂಬುದನ್ನು ನಮ್ಮ ಭೋಟುಸಿಂಗನು ತಿಳಿದಿದ್ದುದರಿಂದ ತನ್ನ ಅಜ್ಜಿಯೊಡನೆ ಯಾವ ರಹಸ್ಯವನ್ನೂ ಹೇಳದೆ ತನ್ನ ಮೂಟೆಯಲ್ಲಿದ್ದ ಅಂಗವಸ್ತ್ರವನ್ನು ತೆಗೆದುಕೊಂಡು ಸ್ನಾನಮಾಡಲು ಹೋದನು. ಅಷ್ಟರಲ್ಲಿ ಅಜ್ಜಿಯು ಅಡಿಗೆಯ ಮನೆಯಲ್ಲೊಂದು ಕಡೆ ಆತನಿಗೆ ಎಲೆ ಹಾಕಿ ಎಲ್ಲವನ್ನೂ ಬಡಿಸಿ ತುಪ್ಪದ ದೊನ್ನೆಯನ್ನು ಹಿಡಿದುಕೊಂಡು ಸಿದ್ಧವಾಗಿದ್ದಳು. ಭೋಟುಸಿಂಗನು ಸ್ನಾನಾಹ್ನಿಕಗಳನ್ನು ಪೂರೈಸಿಕೊಂಡು ಬಡಿಸಿದ್ದ ಎಲೆಯ ಮುಂದೆ ಕುಳಿತು ಊಟಮಾಡಲು ತೊಡಗಿದನು. ಮಾರ್ಗಾಯಾಸದಿಂದ ಬಳಲಿದ್ದ ನಮ್ಮ ಭೋಟುಸಿಂಗನಿಗೆ ಊಟವು ಮತ್ತಷ್ಟು ಪ್ರಯಾಸವಾಯಿತು. ಕನಿಕರಹೃದಯಳಾದ ಅಜ್ಜಿಯು ಬಾರಿಬಾರಿಗೂ ಉಪಚಾರದ ಮಾತುಗಳನ್ನಾಡುತ್ತ ಊಟ ಮಾಡೆಂದು ಹೇಳುತ್ತಿದ್ದಳು. ಬಹು ಪ್ರಯಾಸದಿಂದ ಊಟಮಾಡಿ ಚಾವಡಿಯಲ್ಲಿದ್ದ ಮಂಟಪದ ಮೇಲೆ ಕುಳಿತು ಮುದುಕಿಯನ್ನು ಕುರಿತು—"ಅಜ್ಜೀ! ನಾನು ಮಲಗುವೆನು, ಬೀದಿಯ ಬಾಗಿಲ ಕಡೆ ಸ್ವಲ್ಪ ದೃಷ್ಟಿಯಿರಲಿ; ಜ್ಯೇಷ್ಠಮಲ್ಲನು ಬಂದೊಡನೆಯೇ ನನ್ನನ್ನು ಎಬ್ಬಿಸು." ಎಂಬುದಾಗಿ ಹೇಳಿ, ಆಯಾಸಪರಿಹಾರಕ್ಕಾಗಿ ಮಲಗಿದನು.

ರಾತ್ರಿ ಒಂಭತ್ತು ಘಂಟೆಗೆ ಜ್ಯೇಷ್ಠಮಲ್ಲನು ಮನೆಗೆ ಬಂದನು. ತಕ್ಷಣವೇ ಮಂಚದ ಮೇಲೆ ಭೋಟುಸಿಂಗನನ್ನು ನೋಡಿ ಆನಂದಪಟ್ಟು— "ಈತನು ಆವಾಗ ಬಂದನು ?" ಎಂದು ಹತ್ತಿರದಲ್ಲಿದ್ದ ಮುದುಕಿಯನ್ನು ಕೇಳಿದನು. ಅದಕ್ಕಾಕೆ,— "ಅಪ್ಪಾ! ಈತನು ಬಂದು ಎರಡು ಘಳಿಗೆಯಾಗಿರಬಹುದು; ಈಗ ತಾನೆ ಊಟಮಾಡಿ ಮಲಗಿರುವನು. ಪಾಪ! ಸ್ವಲ್ಪ ಮಲಗಿರಲಿ, ಈಗಲೇ ಎಬ್ಬಿಸಬೇಡ; ಬೆಳಗಾದಮೇಲೆ ಮಾತನಾಡಿಕೊಳ್ಳಿರಿ." ಎಂದು ಹೇಳಿ ಜ್ಯೇಷ್ಠಮಲ್ಲನಿಗೆ ಊಟಕ್ಕೆ ಬಡಿಸಿ ತಾನೂ ಸ್ವಲ್ಪ ಫಲಾಹಾರವನ್ನು ಮಾಡಿದಳು. ಭೋಜನಾನಂತರ ಇಬ್ಬರೂ ಭೋಟುಸಿಂಗನ ಹತ್ತಿರ ಕುಳಿತುಕೊಂಡು ಆತನ ವಿಷಯವಾಗಿ ಮಾತನಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿಯೇ ಭೋಟುಸಿಂಗನೂ ಎಚ್ಚತ್ತು ಹತ್ತಿರದಲ್ಲಿದ್ದ ಜ್ಯೇಷ್ಠಮಲ್ಲನನ್ನು ನೋಡಿ ಕ್ಷೇಮಸಮಾಚಾರವನ್ನು ಕೇಳಿದನು. ಜ್ಯೇಷ್ಠಮಲ್ಲನು ಕೂಡ ಆತನ ಆಗಮನಕ್ಕೆ ಸಂತೋಷಪಟ್ಟು, ಅಭಿಮಾನಪೂರ್ವಕವಾಗಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಆ ಬಳಿಕ ರಹಸ್ಯವಿಷಯಗಳನ್ನು ತಿಳಿಸಲು ಇಬ್ಬರೂ ಅಲ್ಲಿಂದ ಹೊರಟು, ಪಟ್ಟಣವನ್ನು ಬಿಟ್ಟು ನಿಶಾಸಮಯದಲ್ಲಿ ನಿರ್ಜನವಾಗಿದ್ದ ಒಂದು ದೇವಾಲಯವನ್ನು ಸೇರಿ, ಅಲ್ಲಿ ಆಡಬೇಕಾಗಿದ್ದ ಮಾತುಗಳನ್ನಾಡಿ ಮನೆಗೆ ಬಂದು ಮಲಗಿದರು.

ಬೆಳಗಾದ ಮೇಲೆ ಇಬ್ಬರೂ ಎದ್ದು ಪ್ರಾತಃಕೃತ್ಯಗಳನ್ನು ಮುಗಿಸಿಕೊಂಡು ಹೊಸ ಉಡುಪನ್ನು ಧರಿಸಿ ಯಾವುದೋ ಆಗತ್ಯದ ಕೆಲಸದ ಮೇಲೆ ಹೋಗಿ ಬೇಗ ಬರುವೆವೆಂದು ಹೇಳಿ ಹೊರಟುಹೋದರು.

ಜ್ಯೇಷ್ಠಮಲ್ಲನು ತನಗೆ ಮಿತ್ರನಾದ ಒಬ್ಬ ಚಿತ್ರಗಾರನ ಅಂಗಡಿಗೆ ಹೋಗಿ ತನ್ನ ಬಳಿಯಲ್ಲಿದ್ದ ಭೋಟುಸಿಂಗನನ್ನು ತೋರಿಸಿ,— "ಅಯ್ಯಾ! ಈತನು ಚಿತ್ರಬರೆವುದರಲ್ಲಿಯೂ ಬಣ್ಣಹಾಕುವುದರಲ್ಲಿಯೂ ನಿರುಪಮಾನ ಪಾಂಡಿತ್ಯವುಳ್ಳವನಾಗಿರುವನು. ಬೇಕಾದರೆ ನೀನು ಈತನನ್ನು ನಿನ್ನ ಹತ್ತಿರ ಕೆಲಸಕ್ಕೆ ಇರಿಸಿಕೊಳ್ಳಬಹುದು." ಎಂದನು. ಚಿತ್ರಕಾರನು ಈ ಮಾತನ್ನು ಕೇಳಿ ಈತನನ್ನು ಪರೀಕ್ಷಿಸಬೇಕೆಂದು ಯೋಚಿಸಿ, ತಾನು ಅಂಗಡಿಯಲ್ಲಿ ಕುಳಿತುಕೊಂಡಿರುವಂತೆ ಒಂದು ಚಿತ್ರವನ್ನು ಬರೆ" ಎಂದು ಭೋಟುಸಿಂಗನಿಗೆ ಹೇಳಿದನು. ಕೂಡಲೇ ಭೋಟುಸಿಂಗನು ತನ್ನ ಚಮತ್ಕಾರವೆಲ್ಲವನ್ನೂ ತೋರಿಸಿ, ಒಂದು ಕಾಗದದ ಮೇಲೆ ಚಿತ್ರಗಾರನನ್ನೂ ಆತನ ಅಂಗಡಿಯನ್ನೂ ಬರೆದು ಬಣ್ಣವನ್ನು ಹಾಕಿ ವರ್ತಕನಿಗೆ ಕೊಟ್ಟನು. ಚಿತ್ರಕಾರನು ಆ ಚಿತ್ರವನ್ನು ನೋಡಿ ಆಶ್ಚರ್ಯಸ್ವಾಂತನಾಗಿ— "ನಿಜ, ಈತನ ಸಾಮರ್ಥ್ಯವು ಶ್ಲಾಘ್ಯವೇ ಸರಿ!" ಎಂದು ತನ್ನೊಳಗೇ ಹೇಳಿಕೊಳ್ಳುತ್ತ ತನ್ನ ಉತ್ಸಾಹವನ್ನು ಹೊರಪಡಿಸಿದರೆ ಹೆಚ್ಚು ಸಂಬಳವನ್ನು ಕೇಳುವನೆಂದು ಭಾವಿಸಿ, ಜ್ಯೇಷ್ಠಮಲ್ಲನಕಡೆ ನೋಡಿ,— "ಅಯ್ಯಾ! ಪ್ರತಿಮೆಗಳನ್ನು ಬರೆವುದರಲ್ಲಿ ಈತನಿಗೆ ಇನ್ನೂ ಅಭ್ಯಾಸವಿಲ್ಲದಿದ್ದರೂ ಇನ್ನು ಸ್ವಲ್ಪ ದಿನಗಳಲ್ಲಿಯೇ ಚೆನ್ನಾಗಿ ಕಲಿತುಕೊಳ್ಳುವನು. ಅಷ್ಟರ ವರೆಗೂ ಈತನಿಗೆ ತಿಂಗಳಿಗೆ ಒಂದು ರೂಪಾಯಿಯಂತೆ ಸಂಬಳವನ್ನು ಕೊಡುವೆನು. ನಿಮಗೆ ಇಷ್ಟವಿದ್ದರೆ ಈತನನ್ನು ನನ್ನ ಬಳಿಯಲ್ಲಿ ಬಿಡಬಹುದು." ಎಂದನು. ಯಾವ ಕಾರಣದಿಂದಲೋ ಭೋಟುಸಿಂಗನು ಅತ್ಯಲ್ಪವಾದ ಸಂಬಳಕ್ಕೇ ಒಪ್ಪಿ ಆತನ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದನು.

ಆ ಅಂಗಡಿಯ ಯಜಮಾನನು ತಾನು ಬರೆದ ಚಿತ್ರಗಳನ್ನು ಅರಮನೆಗೆ ಕಳುಹಿಸಿ ಅಲ್ಲಿ ಆಗಾಗ ಬಹುಮಾನವನ್ನು ಹೊಂದುತ್ತಿದ್ದನು. ಜನಾನಾದಲ್ಲಿದ್ದವರು ತಮಗೆ ಬೇಕಾದ ಪ್ರತಿಮೆಗಳನ್ನು ಚಿತ್ರಿಸಬೇಕೆಂದು ಸೇವಕರೊಡನೆ ಹೇಳಿಕಳುಹುತ್ತ ಈತನು ಬರೆದ ಚಿತ್ರಪ್ರತಿಮೆಗಳನ್ನು ಕ್ರಯಕ್ಕೆ ತೆಗೆದುಕೊಂಡು ಬಹುಮಾನವನ್ನೂ ಕೊಡುತ್ತಿದ್ದರು. ಈ ಕಾರಣದಿಂದ ಚಿತ್ರಕಾರನಿಗೂ ಬಾದಷಹನ ಜನಾನಾನಲ್ಲಿದ್ದವರಿಗೂ ಸ್ವಲ್ಪ ಪರಿಚಯವುಂಟಾಗಿದ್ದಿತು. ಈತನು ಭೋಟುಸಿಂಗನ ಚಿತ್ರಕೌಶಲವನ್ನು ಚೆನ್ನಾಗಿ ತಿಳಿದು, ಅಂದಿನಿಂದಲೂ ದೊಡ್ಡ ದೊಡ್ಡ ಪ್ರತಿಮೆಗಳನ್ನೂ ಜನಾನಾಕ್ಕೆ ಸೇರಿದ ಪ್ರತಿಮೆಗಳ

ನ್ನೂ ಆತನಿಂದಲೇ ಬರೆಯಿಸುತ್ತಿದ್ದನು. ಪಟ್ಟಣದಲ್ಲಿದ್ದ ಜನರೆಲ್ಲರೂ ಈತನ ಅಂಗಡಿಗೇ ಬಂದು ಚಿತ್ರಗಳನ್ನು ಬರೆಯಿಸಲು ಉಪಕ್ರಮಿಸಿದರು. ಕೆಲವು ದಿನಗಳಲ್ಲಿಯೇ ಈತನ ಜಸರು ಡಿಲ್ಲಿಯಲ್ಲೆಲ್ಲಾ ವ್ಯಾಪಿಸಿ, ಈತನ ವ್ಯಾಪಾರವು ಎಲ್ಲರಿಗೂ ಅಧಿಕವಾಯಿತು. ಡಿಲ್ಲೀನಗರದಲ್ಲಿದ್ದ ಚಿತ್ರಕಾರರೆಲ್ಲರೂ ತಮ್ಮ ಕುಲವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಅವಲಂಬಿಸಬೇಕಾಯಿತು.

ಭೋಟುಸಿಂಗನಿಗೆ ಕೊಡುತ್ತಿರುವ ಸಂಬಳವು ಅತ್ಯಲ್ಪವೆಂದು ಆಗಾಗ ವರ್ತಕನು ಯೋಚಿಸುತ್ತ ಇತರರು ಯಾರಾದರೂ ತನಗಿಂತಲೂ ಹೆಚ್ಚು ಸಂಬಳವನ್ನು ಕೊಡುವೆವೆಂದು ಹೇಳಿ ಭೋಟುಸಿಂಗನನ್ನು ಯಾವಾಗ ಕರೆದುಕೊಂಡು ಹೋಗುವರೋ ಎಂದು ಭಯಾಕುಲಚಿತ್ತನಾಗಿ ಒಂದುದಿನ ಭೋಟುಸಿಂಗನನ್ನು ಕುರಿತು ಹೀಗೆ ಹೇಳಿದನು:—

"ಭೋಟುಸಿಂಗ್! ಪ್ರತಿಮೆಗಳನ್ನು ಬರೆವುದು ನಿನಗೆ ಅಭ್ಯಾಸವಾಯಿತು. ನನ್ನ ಅಂಗಡಿಯಲ್ಲಿಯೇ ನೀನು ಚೆನ್ನಾಗಿ ಕೆಲಸವನ್ನು ಕಲಿತುಕೊಂಡೆಯಾದುದರಿಂದ ಇನ್ನು ಏಳು ವರ್ಷಗಳ ವರೆಗೂ ನನ್ನನ್ನು ಬಿಟ್ಟು ಮತ್ತೊಬ್ಬರ ಬಳಿಗೂ ಕೆಲಸಕ್ಕೆ ಹೋಗುವುದಿಲ್ಲವೆಂದು ಪತ್ರವನ್ನು ಬರೆದುಕೊಟ್ಟದ್ದೇ ಆದರೆ ನಿನಗೆ ಸಂಬಳವನ್ನು ಹೆಚ್ಚು ಮಾಡುವೆನು. ಈ ಅಂಗಡಿಗೆಲ್ಲ ನಿನ್ನನ್ನೇ ಯಜಮಾನನನ್ನಾಗಿಮಾಡಿ ಕ್ರಮಕ್ರಮವಾಗಿ ಸಂಬಳವನ್ನು ಹೆಚ್ಚಿಸುವೆನು."

ಭೋಟುಸಿಂಗ್:— ಅಯ್ಯಾ! ಹಾಗೆ ಪತ್ರವನ್ನು ಬರೆದುಕೊಡಲು, ಇದು ನನ್ನ ಸ್ವಂತಗ್ರಾಮವಲ್ಲ. ಕೆಲವು ಕಾರಣಗಳಿಂದ ನಾನು ಇಲ್ಲಿ ಬಂದಿರುವೆನು. ಇಲ್ಲಿ ನಾನು ಬಹಳ ದಿನಗಳೂ ಇರುವುದಿಲ್ಲ. ಆದರೆ, ನಾನು ಈ ಪಟ್ಟಣದಲ್ಲಿರುವ ವರೆಗೂ ನೀನು ಎಷ್ಟು ಸಂಬಳವನ್ನು ಕೊಟ್ಟರೂ ಸರಿಯೆ, ನಿನ್ನ ಅಂಗಡಿಯನ್ನು ಬಿಡುವವನಲ್ಲ. ನೀನು ಅನುಮಾನಿಸಬೇಡ."

ವರ್ತಕನು ಆತನ ಗಂಭೀರಭಾವ—ಸ್ಥಿರತೆ—ಉದಾರತನಗಳಿಗೂ ಆತನ ಕೃತಜ್ಞತೆಗೂ ತೃಪ್ತನಾಗಿ ತಿಂಗಳಿಗೆ ಎರಡು ರೂಪಾಯಿಯಂತೆ ಸಂಬಳವನ್ನು ಕೊಡುವೆನೆಂದು ಹೇಳಿದನು.

ಹದಿನಾರನೆ ಪ್ರಕರಣ.

(ಮೊಗಲಾಯಿ ಜನಾನಾ)

ಪೂರ್ವದಲ್ಲಿ ಮೊಗಲಾಯಿ ಜನಾನಾ ಚಿತ್ರವಿಚಿತ್ರವಾಗಿದ್ದಿತು. ಘೋಷಾ ಹೆಂಗಸರಿಗೆ ಯಾವ ಕೊರತೆಯೂ ಇಲ್ಲದಂತೆ ಉದ್ಯಾನವನಗಳೂ ಸರಸ್ಸುಗಳೂ ಜನಾನಾದಲ್ಲಿಯೆ ಮನೋಹರವಾಗಿದ್ದುವು. ಉದಯಪುರಿಯ ಜನಾನಾದಲ್ಲಿಯೂ ರಮ್ಯವಾದ ಉದ್ಯಾನವನಗಳೂ ಸರಸ್ಸುಗಳೂ ಇದ್ದುವು. ಈಕೆಯ ಮಹಲಿನ ಉತ್ತರಕ್ಕೆ ಔರಂಗಜೇಬನ ತಂಗಿಯಾದ "ರೋಷನ್ನಾರಾ ಬೇಗಂ" ಎಂಬಾಕೆಯ ಜನಾನಾವಿದ್ದಿತು. ಸಾಮಾನ್ಯವಾಗಿ ಜನಾನಾದಲ್ಲಿ ಪರಪುರುಷರ ಪ್ರವೇಶಕ್ಕೆ ಅವಕಾಶವೇ ಇರುವುದಿಲ್ಲ. ಉದಯಪುರಿಯ ಜನಾನಾಕ್ಕಿಂತಲೂ ರೋಷನ್ನಾರೆಯ ಜನಾನೆಯು ದುರ್ಗಮವೆನಿಸಿದ್ದಿತು.

ರೋಷನ್ನಾರೆಯು ಮಹಾಕ್ರೂರಸ್ವಭಾವದವಳು. ತಂದೆಯನ್ನೂ ಅಣ್ಣತಮ್ಮಂದಿರನ್ನೂ ಮೋಸಪಡಿಸಿ ರಾಜ್ಯವನ್ನು ಸಂಪಾದಿಸುವುದರಲ್ಲಿ ಔರಂಗಜೇಬನಿಗೆ ಬಹಳ ಸಹಾಯ ಮಾಡಿದಳು. ಈ ಕಾರಣದಿಂದ ಔರಂಗಜೇಬನು ಆಕೆಯ ಮೇಲೆ ತುಂಬ ಅಭಿಮಾನವಿಟ್ಟು, ಆಕೆಯ ಕೋರಿಕೆಗಳನ್ನೆಲ್ಲಾ ನೆರವೇರಿಸುತ್ತಿದ್ದನು. ಇಷ್ಟೇ ಅಲ್ಲ; ತಾನುಕೂಡ ಆಕೆಯ ಅಪ್ಪಣೆಯಂತೆ ನಡೆದುಕೊಳ್ಳುತ್ತಿದ್ದನು. ಆದರೆ, ಔರಂಗಜೇಬನು ಉದಯಪುರಿಯನ್ನು ಮದುವೆಯಾದಂದಿನಿಂದಲೂ ರೋಷನ್ನಾರಳ ಅಧಿಕಾರವು ಸ್ವಲ್ಪ ತಗ್ಗಿತು. ಆದುದರಿಂದ ಉದಯಪುರಿಯ ಮೇಲೆ ಈಕೆಗೆ ದ್ವೇಷವುಂಟಾಯಿತು. ಕ್ರಮಕ್ರಮವಾಗಿ ಈ ದ್ವೇಷವು ಬಲಿತು ಉದಯಪುರಿಯನ್ನು ಹೇಗಾದರೂ ಮೋಸಪಡಿಸಬೇಕೆಂದು ಸಮಯವನ್ನು ನೋಡುತ್ತಿದ್ದಳು. ಈ ವಿಚಾರವು ಉದಯಪುರಿಗೆ ತಿಳಿದಮೇಲೆ ಆಕೆಯೂ ರೋಷನ್ನಾರಳ ಮೇಲೆ ದ್ವೇಷವನ್ನು ಬೆಳಸಿ ಸಮಯನಿರೀಕ್ಷೆಯಲ್ಲಿದ್ದಳು. ಹೀಗೆ ಪರಸ್ಪರ ದ್ವೇಷವು ಹೆಚ್ಚಿ, ಒಬ್ಬರ ಮಹಲನ್ನೊಬ್ಬರು ಪ್ರವೇಶಿಸಕೂಡದೆಂದೂ, ಹಾಗೆ ಯಾರಾದರೂ ಸೇವಕರು ತಿಳಿಯದೆ ಪ್ರವೇಶಿಸಿದರೆ ಕಠಿಣಶಿಕ್ಷೆಗೆ ಗುರಿಯಾಗುವಂತೆಯೂ ನಿರ್ಬಂಧವಾಯಿತು. ಒಂದೊಂದುಸಲ ಇವರ ವಿವಾದವನ್ನು ಔರಂಗಜೇಬನೇ ತೀರ್ಮಾನಮಾಡುತ್ತಿದ್ದನು. ಕಾರ್ಯೋಪಾಯಗಳನ್ನು ಚೆನ್ನಾಗಿ ಬಲ್ಲವನಾಗಿದ್ದುದರಿಂದ, ಈತನು ಯಾರ ಮೇಲೆಯೂ ತಪ್ಪನ್ನು ಹೊರಿಸದೆ ಸರಿಯಾಗಿ ತೀರ್ಮಾನಿಸುತ್ತಿದ್ದನು. ಉದಯಪುರಿಯು ತನ್ನ ಪಟ್ಟಮಹಿಷಿಯಾದುದ

ರಿಂದಲೂ, ರೋಷನ್ನಾರಳು ತನ್ನ ತಂಗಿಯಾಗಿ ಅತ್ಯಂತ ಸಹಾಯಕಳಾಗಿದ್ದುದರಿಂದಲೂ ಇವರಿಬ್ಬರಲ್ಲಿ ಯಾರ ಪಕ್ಷವನ್ನೂ ವಹಿಸದೆ, ಉಪಾಯದಿಂದ ವಿವಾದವನ್ನು ಹೋಗಲಾಡಿಸುತ್ತಿದ್ದನು.

ಒಂದು ದಿನ ಭೋಟುಸಿಂಗನು ಉದಯಪುರಿಯ ಜನಾನಾ ಪ್ರವೇಶಿಸಬೇಕೆಂದು ನಿಶ್ಚಯಿಸಿಕೊಂಡನು. ವರ್ತಕನು ಸಂಬಳವನ್ನು ಹೆಚ್ಚುಮಾಡಿದಂದಿನಿಂದಲೂ ಈತನು ಕೆಲಸಗಳನ್ನೂ ಹೆಚ್ಚಾಗಿ ಮಾಡುತ್ತಿದ್ದನು. ವರ್ತಕನು ಮೊದಲಿಗಿಂತಲೂ ಪ್ರತಿಮೆಗಳ ಬೆಲೆಯನ್ನು ಹೆಚ್ಚಿಸಿ, ವಿಕ್ರಯಿಸುತ್ತ ಕೆಲವು ಕಾಲದಲ್ಲಿಯೇ ದೊಡ್ಡ ಹಣಗಾರನೆನ್ನಿಸಿಕೊಳ್ಳುವಂತಾದನು. ತನ್ನ ಜೀವನವು ಭೋಟುಸಿಂಗನಿಂದಲೇ ನಡೆಯುತ್ತಿದ್ದುದರಿಂದ, ಈತನು ಯಾವಾಗ ಕೈಬಿಡುವನೋ ಎಂದು ವರ್ತಕನು ಭಯಪಡುತ್ತ, ಒಂದುವೇಳೆ ಈತನು ಕೇಳಿದಷ್ಟು ಸಂಬಳವನ್ನಾದರೂ ಕೊಟ್ಟು ತನ್ನ ಹತ್ತಿರದಲ್ಲಿಯೇ ಉಳಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದನು. ವರ್ತಕನ ಈ ವಿಧವಾದ ಅಭಿಪ್ರಾಯವನ್ನು ತಿಳಿದು ಭೋಟುಸಿಂಗನು ಒಂದು ದಿನ ವರ್ತಕನನ್ನು ಕುರಿತು—“ಅಯ್ಯಾ! ದಂತದ ಹಲಗೆಯ ಮೇಲೆ ಈ ರೀತಿ ಚಿಕ್ಕ ಚಿಕ್ಕ ಪ್ರತಿಮೆಗಳನ್ನು ಕೆತ್ತಿ ಎಷ್ಟು ಮಾರಿದರೂ ನಮಗೆ ಲಾಭವು ಬರುವುದಿಲ್ಲ. ನೀನು ಅಪ್ಪಣೆಕೊಟ್ಟೆಯಾದರೆ ನನ್ನ ಚಾತುರ್ಯವನ್ನೆಲ್ಲ ವೆಚ್ಚಮಾಡಿ ಒಂದು ಸೊಗಸಾದ ದಂತದ ಬೀಸಣಿಕೆಯನ್ನು ಮಾಡಿ, ಔರಂಗಜೇಬ ಬಾದಷಹರಿಗೆ ಒಪ್ಪಿಸಿ, ಅವರಿಂದ ಸಮೃದ್ಧಿಯಾಗಿ ಬಹುಮಾನವನ್ನು ತೆಗೆದುಕೊಂಡುಬಂದು ನಿಮಗೆ ಕೊಡುವೆನು.” ಎಂದು ಹೇಳಿದನು.

ವರ್ತಕನು:—“ಅಯ್ಯಾ! ನಮ್ಮ ಬಾದಷಹರು ಇಂತಹ ಕೆಲಸಗಳಿಗೆಲ್ಲ ಸಂತೋಷಪಡುವವರಲ್ಲ. ಈಗ ಈ ಕೆಲಸವನ್ನು ಮಾಡಬೇಕೆಂದರೆ ಸಾವಿರಾರು ರೂಪಾಯಿಗಳ ಮೇಲೆ ವೆಚ್ಚವಾಗುವುದು, ಒಂದುವೇಳೆ ಖರ್ಚುಮಾಡಿದರೂ ಸರಿಯಾದ ಬಹುಮಾನವು ಬರುವುದೋ ಇಲ್ಲವೋ ಹೇಳುವಂತಿಲ್ಲ.”

ಭೋಟು:—ಅಯ್ಯಾ! ನೀವು ಈ ವಿಷಯದಲ್ಲಿ ಸ್ವಲ್ಪವೂ ಸಂದೇಹಪಡಬಾರದು. ಬಾದಷಹರಿಗೆ ಇಷ್ಟವಿಲ್ಲದಿದ್ದರೆ ಜನಾನಾದೊಳಕ್ಕೆ ತೆಗೆದುಕೊಂಡು ಹೋಗುವೆನು.

ಹೀಗೆ ಎಷ್ಟೋ ಬಗೆಯಾಗಿ ಹೇಳಿ ಆ ಬಳಿಕ ವರ್ತಕನ ಸಮ್ಮತಿಯನ್ನು ಪಡೆದು, ಕೆಲವು ದಿನಗಳಲ್ಲಿಯೇ ದಂತದ ಬೀಸಣಿಗೆಯನ್ನು ತಯಾರಿಸಿ ಅದರ ಸುತ್ತಲೂ ಪುಷ್ಪಗಳಿಂದಲೂ ಗಿಣಿಗಳಿಂದಲೂ ಕೂಡಿದ ಲತೆಯೊಂದನ್ನು ಕೆತ್ತಿ ರೇಷ್ಮೆಯ ಜಾಲರಿಯನ್ನು ಬೀಸಣಿಗೆಯ ಸುತ್ತಲೂ ಕಟ್ಟಿ, ಬೀಸಣಿಗೆಯ ಮಧ್ಯಭಾಗದಲ್ಲಿ ಔರಂಗಜೇಬನನ್ನೂ, ಆತನ ಪಕ್ಕದಲ್ಲಿ ಆತನನ್ನು ಆಲಿಂಗಿಸಿಕೊಂಡಿರುವಂತೆ ಉದಯಪುರಿಯನ್ನೂ ಬಹುಚಮತ್ಕಾರವಾಗಿ ಕೆತ್ತಿದನು. ಮತ್ತು ಬೀಸಣಿಗೆಯ ಹಿಡಿಯನ್ನು ಕೆಂಪು ವಜ್ರಗಳಿಂದಲೂ ಒಳ್ಳೆಯ ಮುತ್ತುಗಳಿಂದಲೂ ಅಲಂಕರಿಸಿ, ಒಂದು ಒಳ್ಳೆಯ ಶ್ರೀಗಂಧದ ಪೆಟ್ಟಿಗೆಯಲ್ಲಿ ಅದನ್ನು ಇರಿಸಿಕೊಂಡು, ಕೆಲವು ಕಾಗದಗಳನ್ನೂ ಬಣ್ಣಗಳನ್ನೂ ಜೊತೆಯಲ್ಲಿ ತೆಗೆದುಕೊಂಡು ಹೊರಟು ಸ್ವಲ್ಪ ಹೊತ್ತಿಗೆ ಉದಯಪುರಿಯ ಜನಾನಾದ ಬಳಿಗೆ ಬಂದನು. ಅಲ್ಲಿದ್ದ ದ್ವಾರಪಾಲಕರು ಅಡ್ಡಿಪಡಿಸಲು ವರ್ತಕನಿಂದ ತಂದಿದ್ದ ಪತ್ರವನ್ನು ತೋರಿಸಿ, ಅಲ್ಲಿಂದ ಹೊರಟು ೨—೩ ಬಾಗಿಲುಗಳನ್ನು ದಾಟಿಹೋದನು. ಆದರೆ, ನಾಲ್ಕನೆ ಬಾಗಿಲಲ್ಲಿದ್ದ ಭಟರು ಇವನನ್ನು ಮುಂದಕ್ಕೆ ಬಿಡದೆಹೋದರು. ಭೋಟುಸಿಂಗನು ಅವರೊಡನೆ ಮೃದುವಾಗಿ ಮಾತನಾಡುತ್ತ ಸ್ನೇಹಮಾಡಿಕೊಂಡು. ತನ್ನಲ್ಲಿದ್ದ ಕಾಗದಗಳಲ್ಲಿ ಅಲ್ಲಿದ್ದ ಭಟರನ್ನು ಸುಂದರವಾದ ಸ್ತ್ರೀಯರು ಆಲಿಂಗಿಸಿಕೊಂಡಿರುವಂತೆ ಚಿತ್ರವನ್ನು ಬರೆದು ದ್ವಾರಪಾಲಕರಿಗೆ ಬಹುಮಾನವಾಗಿ ಅದನ್ನು ಕೊಟ್ಟನು. ಆ ಚಿತ್ರಪಟವನ್ನು ನೋಡಿ ಭಟರು ಅಪರಿಮಿತಾನಂದವನ್ನು ಹೊಂದಿ,—“ಶಾಬಾಸ್! ಭಾಯೀ! ಶಾಬಾಸ್!!” ಎಂದು ಹೇಳಿ ಗಡ್ಡವನ್ನು ಸವರಿಕೊಳ್ಳುತ್ತ ಆತನನ್ನು ನಿರಾತಂಕವಾಗಿ ಒಳಗೆ ಹೋಗಗೊಡಿಸಿದರು. ಈ ಪ್ರಕಾರ ಭೋಟುಸಿಂಗನು ದ್ವಾರಪಾಲಕರೆಲ್ಲರಿಗೂ ಚಿತ್ರಪಟಗಳನ್ನು ಬರೆದುಕೊಟ್ಟು ದ್ವಾರಗಳನ್ನೆಲ್ಲ ದಾಟಿ ಉದಯಪುರಿಯ ಮಹಲನ್ನು ಪ್ರವೇಶಿಸಿದನು.

ಅಷ್ಟರಲ್ಲಿ ಮಸಾವದನು ಆವುದೋ ಕಾರ್ಯವಶಾತ್ ಆ ದಾರಿಯಲ್ಲಿಯೇ ಬರುತ್ತಿದ್ದು ಆತನನ್ನು ನೋಡಿ—“ಎಲೋ ನೀನಾರು? ಎಲ್ಲಿಗೆ ಹೋಗುತ್ತಿರುವೆ?” ಎಂದು ಕೇಳಲು, ಭೋಟುಸಿಂಗನು—“ಅಯ್ಯಾ! ನಾನೊಬ್ಬ ಚಿತ್ರಗಾರನು. ಉದಯಪುರೀ ಬೇಗಮುರವರ ಪ್ರತಿಮೆಯನ್ನು ಬರೆದು ಹೇಗಾದರೂ ನನ್ನ ದಾರಿದ್ರ್ಯವನ್ನು ಕಳೆದುಕೊಳ್ಳಬೇಕೆಂದು ಮಹಾರಾಣಿಯವರ ಸಮೀಪಕ್ಕೆ ಬರುತ್ತಿರುವೆನು. ಚಿತ್ರಪ್ರತಿಮೆಗಳನ್ನು ಬರೆಯುವುದರಲ್ಲಿ ನನಗೆ ಸಮಾನರಾರೂ ಇಲ್ಲ. ನನ್ನನ್ನು ಬೇಕಾದರೆ ಪರೀಕ್ಷಿಸಬಹುದು.” ಹೀಗೆ ಹೇಳಿ ಒಡನೆಯೇ ಬಣ್ಣವನ್ನೂ ಕಾಗದವನ್ನೂ ತೆಗೆದುಕೊಂಡು, ಮಸಾವದನ ಇಕ್ಕೆಡೆಗಳಲ್ಲಿಯೂ ಸುಂದರ ಸ್ತ್ರೀಯರು ಚಾಮರವನ್ನು ಬೀಸುತ್ತಿರುವಂತೆಯೂ ಒಬ್ಬ ಸುಂದರಿಯು ಮಸಾವದನನ್ನು ಅಪ್ಪಿಕೊಂಡಿರುವಂತೆಯೂ ಬರೆದು ಆತನ ಕಯ್ಯಲ್ಲಿತ್ತನು. ಮಸಾವದನು ಆ ಚಿತ್ರವನ್ನು ನೋಡಿ, ಅಪರಿಮಿತ

ಸಂತೋಷದಿಂದ ಆತನನ್ನು ತಬ್ಬಿಕೊಂಡು—"ಅರೆ, ಭಾಯಿ! ನಿನ್ನನ್ನು ನಮ್ಮ ಬೇಗಮ್ಮರವರ ಹತ್ತಿರಕ್ಕೆ ಖಂಡಿತವಾಗಿ ಕರೆದುಕೊಂಡು ಹೋಗುವೆನು. ಎಲ್ಲಿ, ನಿನ್ನ ಬಳಿಯಲ್ಲಿ ಮತ್ತಾವ ಚಿತ್ರಗಳಿವೆಯೋ ತೋರಿಸು?" ಎಂದನು. ಭೋಟುಸಿಂಗನು ತನ್ನ ಬಳಿಯಲ್ಲಿದ್ದ ಪ್ರತಿಮೆಗಳನ್ನೂ ಅಮೋಘವಾದ ಬೀಸಣಿಗೆಯನ್ನೂ ಆತನಿಗೆ ಒಂದೊಂದಾಗಿ ತೆಗೆದು ತೋರಿಸಿದನು. ಅದೇ ಸಮಯದಲ್ಲಿ ಅದೇ ಮಾರ್ಗವಾಗಿ ಹೋಗುತ್ತಿದ್ದ ದಾಸದಾಸೀಜನರೂ ಆತನನ್ನು ಸಮೀಪಿಸಿ, ಸುತ್ತಲೂ ಗುಂಪುಕಟ್ಟಿಕೊಂಡು ನಿಂತು ಆತನು ತೋರಿಸುತ್ತಿದ್ದ ಪ್ರತಿಮೆಗಳನ್ನು ನೋಡಿ ಆಶ್ಚರ್ಯಗೊಂಡು—"ಅಯ್ಯಾ! ನನ್ನ ಪ್ರತಿಮೆಯನ್ನು ಚಿತ್ರಿಸು; ತನ್ನ ಚಿತ್ರವನ್ನು ಬರೆ," ಎಂಬುದಾಗಿ ಆತನನ್ನು ನಿರ್ಬಂಧಪಡಿಸಿದರು. ಭೋಟುಸಿಂಗನು ಅವರೆಲ್ಲರಿಗೂ ಪ್ರತಿಮೆಗಳನ್ನು ಬರೆದುಕೊಟ್ಟು ಸಮಾಧಾನಪಡಿಸಿ, ಅವರೊಡನೆ ಸ್ನೇಹವನ್ನು ಬೆಳಸಿದನು. ಅಷ್ಟರಲ್ಲಿ ಮಸಾವದನು ಭೋಟುಸಿಂಗನನ್ನು ನೋಡಿ,—"ಅಯ್ಯಾ! ನಿನ್ನ ಸಮಾಚಾರವನ್ನು ನಮ್ಮ ಬೇಗಂಯವರಿಗೆ ತಿಳಿಸಿ, ಪುನಃ ನಿನ್ನನ್ನು ಕರೆದುಕೊಂಡುಹೋಗಲು ಬರುವೆನು. ಆ ವರೆಗೂ ನೀನು ಇಲ್ಲಿಯೇ ಇರು" ಎಂದು ಹೇಳಿ ಅಂತಃಪುರಕ್ಕೆ ಹೊರಟುಹೋದನು.

ಸ್ವಲ್ಪ ಹೊತ್ತಿನಮೇಲೆ ರೋಷನ್ನಾರಾಬೇಗಂಮಿನ ಮುಖ್ಯ ಸೇವಕನಾದ ಫರುಕ್‌ಶೈರನು ಕಯ್ಯಲ್ಲಿ ಒಂದು ವೀಣೆಯನ್ನು ಹಿಡಿದುಕೊಂಡು ಅದೇ ದಾರಿಯಲ್ಲಿ ಬರುತ್ತ ಆ ಜನಸಮೂಹವನ್ನು ನೋಡಿ ತಾನೂ ಅಲ್ಲಿಗೆ ಬಂದು ನಿಂತನು. ಕೂಡಲೆ ಭೋಟುಸಿಂಗನು ಆತನಿಗೆ ಸಲಾಂಮಾಡಿ ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡು ಆತನಿಗೂ ಚಿತ್ರ ಬರೆದು ಕೊಟ್ಟನು. ಅದನ್ನು ನೋಡಿ ಫರುಕ್‌ಶೈರನು ಸಂತೋಷಪಟ್ಟು,—"ಅಯ್ಯಾ! ನಿನ್ನನ್ನು ನಮ್ಮ ಬೇಗಮರವರ ಬಳಿಗೆ ಕರೆದೊಯ್ದು ನಿನಗೆ ದೊಡ್ಡ ಬಹುಮಾನವನ್ನು ಕೊಡಿಸುವೆನು." ಎಂದು ಪ್ರತಿಜ್ಞೆ ಮಾಡಿದನು. ಆದಕ್ಕೆ ಭೋಟುಸಿಂಗನು ಸಂತೋಷಿಸಿ—"ಅಯ್ಯಾ! ನಿಮ್ಮ ಅನುಗ್ರಹವಿದ್ದರೆ ನನಗೇನು ಕಡಿಮೆ? ನಿಮ್ಮಂತಹರ ದರ್ಶನಮಾಡಬೇಕೆಂದೇ ನಾನು ಇಲ್ಲಿಗೆ ಬಂದೆನು. ಒಳ್ಳೆಯದು, ಈ ವೀಣೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುವಿರಿ?" ಎಂದು ಕೇಳಲು, ಫರುಕ್‌ಶೈರನು—"ಅಯ್ಯಾ! ಇದು ನಮ್ಮ ಬೇಗಮರವರ ವೀಣೆ; ಸ್ವಲ್ಪ ಕೆಟ್ಟು ಹೋಗಿರುವುದು. ಸರಿಮಾಡಿಸುವುದಕ್ಕೆ ಹೋಗುತ್ತಿರುವೆನು. ಈಗಲೇ ಹಿಂತುರಿಗಿ ಬಂದು ನಿನ್ನನ್ನು ಕರೆದೊಯ್ಯುವೆನು. ಆ ವರೆಗೂ ನೀನು ಇಲ್ಲಿಯೇ ಇರು." ಎಂದು ಹೇಳಿ ಹೊರಡಲು ಸಿದ್ಧನಾದನು.

ಎಂತಹ ದುರ್ಮಾರ್ಗಿಗಳಿಗಾದರೂ ಒಂದೊಂದು ಸುಗುಣವಿದ್ದೇ ಇರುವುದು. ರೋಷನ್ನಾರಳು ಅತ್ಯಂತ ಕ್ರೂರಿಯಾಗಿದ್ದರೂ ಸಂಗೀತದಲ್ಲಿ ಆಸ್ಥೆಯುಳ್ಳವಳಾಗಿದ್ದಳು. ದೇಶದೇಶದಿಂದಲೂ ಗಾಯಕರನ್ನು ಕರೆಯಿಸಿ ತನ್ನ ಮನೆಯಲ್ಲಿರಿಸಿಕೊಂಡಿದ್ದಳು. ಆಗಾಗ ಡಿಲ್ಲೀನಗರದಲ್ಲಿರುವ ಗಾಯಕರೆಲ್ಲರನ್ನೂ ಅರಮನೆಗೆ ಕರೆಯಿಸಿ ಅವರನ್ನು ಪರೀಕ್ಷಿಸಿ ತಕ್ಕ ಬಹುಮಾನವಿತ್ತು ಕಳುಹುತ್ತಿದ್ದಳು. ಈಕೆಯ ಅಣ್ಣನಾದ ಔರಂಗಜೇಬನಿಗೆ ಸಂಗೀತವೆಂದರೆ ಆಗದು. ದೈವವಶಾತ್ ರೋಷನ್ನಾರಳಿಗೆ ಸಂಗೀತದಲ್ಲಿ ಆಶೆಯಿದ್ದುದರಿಂದಲೇ ಡಿಲ್ಲೀನಗರದಲ್ಲಿ ಅನೇಕ ಜನರು ಗಾಯಕರಿದ್ದರು; ಹಾಗಿಲ್ಲದಿದ್ದರೆ ಅವರೆಲ್ಲರೂ ಕಾರಾಗಾರದಲ್ಲಿರಬೇಕಾಗುತ್ತಿದ್ದಿತು.

ಫರುಕ್‌ಶೈರನ ಮಾತನ್ನು ಕೇಳಿ ಭೋಟೂಸಿಂಗನು—"ಅಯ್ಯಾ! ನನಗೂ ಗಾನವಿದ್ಯೆಯಲ್ಲಿ ಸ್ವಲ್ಪ ಪರಿಚಯವುಂಟು. ನಾನೇ ವೀಣೆಯನ್ನು ಸರಿಮಾಡಿಕೊಡುವೆನು" ಎಂದು ಹೇಳಲು, ಫರುಕ್‌ಶೈರನು—"ಅಯ್ಯಾ! ಇದು ಬಲುಬೆಲೆಯುಳ್ಳದು. ಇದನ್ನು ಕೆಡಿಸಿದುದೇ ಆದರೆ ಬೇಗಮರವರು ಸುಮ್ಮನೆ ಬಿಡಲಾರರು. ಎಚ್ಚರಿಕೆ!" ಎಂದು ಹೇಳಿ, ಚಿತ್ರವಿಚಿತ್ರವಾದ ಲತೆಗಳಿಂದ ಕೆತ್ತಲ್ಪಟ್ಟ ವಜ್ರ-ವೈಢೂರ್ಯನಿರ್ಮಿತವಾದ ವೀಣೆಯನ್ನು ಚೀಲದಿಂದ ತೆಗೆದು ಆತನ ಕಯ್ಗೆ ಕೊಟ್ಟನು. ಭೋಟುಸಿಂಗನು ಆ ವೀಣೆಯನ್ನು ತೆಗೆದುಕೊಂಡು ಒಂದು ಸಲ ತಂತಿಯನ್ನು ಉದ್ದಕ್ಕೂ ಸವರಿ ಒಂದೆರಡುಸಲ ತಂತಿಗಳನ್ನು ಮೀಟಿ ಪುನಃ ಆತನ ಕಯ್ಗೆ ಕೊಟ್ಟುಬಿಟ್ಟನು. ಅಲ್ಲಿ ಸುತ್ತುಗಟ್ಟಿದ್ದವರೆಲ್ಲರೂ ಆತನ ಚಾತುರ್ಯಕ್ಕೆ ಆಶ್ಚರ್ಯಪಟ್ಟು ಒಬ್ಬರಿಗೊಬ್ಬರು ಮಾತನಾಡಲಾರಂಭಿಸಿದರು. ಫರುಕ್‌ಶೈರನೂ ಆನಂದಪಟ್ಟು ವೀಣೆಯನ್ನು ಚೀಲದಲ್ಲಿರಿಸಿ, ಹೋಗಿಬರುವೆನೆಂದು ಹೇಳಿ ರೋಷನ್ನಾರಾಬೇಗಮಳ ಮಹಲಿನ ಕಡೆಗೆ ನಡೆದನು.

ಸ್ವಲ್ಪ ಹೊತ್ತಾದ ಬಳಿಕ ಮಸಾವದನು ಉದಯಪುರಿಯಿಂದ ಆಜ್ಞಾಪಿಸಲ್ಪಟ್ಟವನಾಗಿ ಭೋಟುಸಿಂಗನ ಹತ್ತಿರಕ್ಕೆ ಬಂದು ಆತನನ್ನು ಕರೆದುಕೊಂಡು ಜನಾನಾದೊಳಕ್ಕೆ ಹೋಗುತ್ತಿದ್ದನು. ನಮ್ಮ ಭೋಟುಸಿಂಗನು ಆತನ ಹಿಂದೆ ಹೋಗುತ್ತ ಅಂತಃಪುರವನ್ನು ಪ್ರವೇಶಿಸಿದ ಕೂಡಲೆ, ಸುತ್ತಲೂ ಗೋಡೆಗಳಲ್ಲಿ ಹಾಕಿದ್ದ ಚಿತ್ರಗಳನ್ನು ನೋಡುತ್ತ ಬಂದು ಉದಯಪುರಿಯ ಸಮ್ಮುಖವನ್ನೈದಿದನು. ಮಸಾವದನು ಭೋಟುಸಿಂಗನ ಸಾಮರ್ಥ್ಯವನ್ನು ಉದಯಪುರಿಯೊಡನೆ ಹೇಳಿ, ಬೇಕಾದರೆ ನೀವೂ ಪರೀಕ್ಷಿಸಬಹುದೆಂದು ಹೇಳಿ ತನ್ನ ಹಿಂದೆ ನಿಂತಿದ್ದ ಭೋಟುಸಿಂಗನನ್ನು ತೋರಿಸಿದನು. ಉದಯಪುರಿಯು ಆತನನ್ನು ನೋಡಿ,—"ಎಲೈ, ನೀನು ಬರೆದಿರುವ

ಚಿತ್ರಗಳನ್ನೆಲ್ಲ ತೋರಿಸು." ಎಂದು ಹೇಳಲು, ಛೋಟು ಸಿಂಗನು ತನ್ನಲ್ಲಿದ್ದ ಚಿತ್ರಪಠಗಳನ್ನೆಲ್ಲ ತೋರಿಸಿ, ಪೆಟ್ಟಿಗೆಯ ಬೀಗವನ್ನು ತೆಗೆದು ಬೇಗಮಳ ಕಯ್ಗೆ ಕೊಟ್ಟನು. ಆಕೆ, ಪೆಟ್ಟಿಗೆಯನ್ನು ತೆರೆದು ಬೀಸಣಿಗೆಯನ್ನು ಮೇಲಕ್ಕೆ ತೆಗೆದು ಚೆನ್ನಾಗಿನೋಡಿ ಆತನ ಕೌಶಲ್ಯಕ್ಕೆ ತಲೆದೂಗಿ ಅದರ ಮಧ್ಯ ಭಾಗದಲ್ಲಿದ್ದ ತನ್ನ ಮತ್ತು ಬಾದಷಹನ ಚಿತ್ರಗಳನ್ನು ನೋಡಿ ಮಿತಿಮೀರಿದ ಆನಂದದಿಂದ ಬೀಸಣಿಗೆಯನ್ನು ಅತ್ತಿತ್ತ ತಿರುಗಿಸಿ ನೋಡುತ್ತ ಅದರ ಕಸೂತಿಕೆಲಸಕ್ಕೂ ಹಿಡಿಯಲ್ಲಿದ್ದ ರತ್ನದ ಕೆಲಸಕ್ಕೂ ಆಶ್ಚರ್ಯಪಡುತ್ತಿರಲು ಛೋಟುಸಿಂಗನು ತನ್ನ ಸಾಮರ್ಥ್ಯವನ್ನು ತೋರಿಸಲು, ಉದಯಪುರಿಯು ಕಮಾಚೀಮಂಚದಮೇಲೆ ಕುಳಿತು ದಂತದ ಬೀಸಣಿಗೆಯನ್ನು ನೋಡುತ್ತಿರುವಂತೆ ಚಿತ್ರವನ್ನು ಬರೆದು ಆಕೆಗೆ ಕೊಟ್ಟನು. ಅದನ್ನು ನೋಡಿದ ಬಳಿಕಲಂತು ಉದ ಯಪುರಿಯು ಅತ್ಯಾಶ್ಚರ್ಯಗೊಂಡು ಮನಾವದನ ಕಡೆಗೆ ತಿರುಗಿ—"ಅಯ್ಯಾ! ನೀನು ನಮ್ಮ ಮನಾವದನ ಪಠವನ್ನು ಬರೆದಿರುವೆಯಾ ?" ಎಂದು ಮನಾವದನನ್ನು ಪರಿಹಾಸ ಮಾಡಿದಳು

ಸ್ವಲ್ಪ ಹೊತ್ತಾದ ಮೇಲೆ ಇಂದಿರೆಯು ಉದಯಪುರಿಯ ಬಳಿಗೆ ಬಂದು ನಿಂತಳು. ಇಂದಿರೆಯನ್ನು ನೋಡಿದ ಕೂಡಲೆ ಛೋಟುಸಿಂಗನ ಮುಖಲಕ್ಷಣವು ಬದಲಾಯಿಸಿತು. ಆತನು ಸ್ವಲ್ಪ ಹೊತ್ತು ಆಕೆಯನ್ನೇ ನೋಡುತ್ತಿದ್ದು, ತಲೆಯನ್ನು ತಗ್ಗಿಸಿ ನಿಂತುಕೊಂಡನು. ಉದಯಪುರಿಯು ಮನಾವದ ನನ್ನು ಕುರಿತು—"ಮನಾವದ್! ನೀನು ಇಂದಿರೆಯ ಪಕ್ಕ ದಲ್ಲಿ ನಿಲ್ಲು. ನಿಮ್ಮಿಬ್ಬರ ಚಿತ್ರವನ್ನೂ ಬರೆಯಿಸುವೆನು." ಎಂದು ಹೇಳಲು, ಮನಾವದನು ಉಬ್ಬಿನಿಂದ ಬಂದು ಇಂದಿ ರೆಯ ಪಕ್ಕದಲ್ಲಿ ನಿಲ್ಲಲು ಪ್ರಯತ್ನಪಟ್ಟನು. ಅಷ್ಟರಲ್ಲಿ ಛೋಟುಸಿಂಗನು ಆತನ ಕಯ್ಯನ್ನು ಹಿಡಿದು,—"ಅಯ್ಯಾ! ಮನಾವದ್! ನನಗೆ ಜ್ಯೋತಿಷ್ಯವು ಬರುವುದು. ಆಗಲೇ ನಿನ್ನೊಡನೆ ಹೇಳುವುದಕ್ಕೆ ಮರೆತು ಹೋದೆನು. ನೀನು ಈಕೆಯನ್ನು ಮದುವೆಯಾಗಬೇಕೆಂದಿರಬಹುದು! ಆದರೆ, ಈ ಜಾತಕವನ್ನು ನೋಡಿಸಿರುವೆಯಾ? ಸರಿಯಾಗಿರುವುದೊ? ಬೇಕಾದರೆ ಈಗಲೇ ನಾನು ನೋಡಿ ಹೇಳುವೆನು." ಎಂದು ಹೇಳಿ ಕಾಗದದ ಮೇಲೆ ನಾಲ್ಕು ಗೆರೆಗಳನ್ನು ಎಳೆದು ಸ್ವಲ್ಪ ಹೊತ್ತು ಆಲೋಚಿಸುತ್ತಿದ್ದು ಆಮೇಲೆ, "ಅಬ್ಬಾ! ಇದೆಂತಹ ಜಾತಕವಪ್ಪ! ಈಕೆಯ ಅನುಮತಿಯಿಲ್ಲದೆ ಬಲಾತ್ಕಾರದಿಂದ ಮದುವೆಯಾಗುವವರು ಹತ್ತುದಿನಗಳೊಳಗಾಗಿಯೇ ಸಾಯು ವರು. ಇಂತಹಳನ್ನು ಮದುವೆಯಾಗಬೇಕೆಂದಿರುವೆಯಲ್ಲಾ! ಈಕೆ, ಇರುವ ಕಡೆಯಲ್ಲೆಲ್ಲಾ ಜನರಿಗೆ ತೊಂದರೆಯುಂಟಾ ಗುವುದೇ ಹೊರತು, ಸ್ವಲ್ಪವೂ ಒಳ್ಳೆಯದಾಗುವುದಿಲ್ಲ; ಖಂಡಿತವಾಗಿಯೂ ಇವಳನ್ನು ಇಲ್ಲಿಂದ ಓಡಿಸಿ ಬಿಡಿರಿ." ಎಂದನು. ಈ ಮಾತನ್ನು ಕೇಳಿ ಉದಯಪುರಿಯು "ಮನಾ ವದ್! ಹೋಗಲಿ, ನೀನು ಇವಳನ್ನು ಮದುವೆಮಾಡಿಕೊಳ್ಳ ಬೇಡ. ಇನ್ನು ಸ್ವಲ್ಪ ದಿನಗಳಿಗೆ ರೂಪನಗರದಿಂದ ಒಬ್ಬ ರಾಜಕನ್ನೆಯು ಬರುವಳು. ಅವಳನ್ನು ಖಂಡಿತವಾಗಿಯೂ ಮದುವೆಮಾಡಿಕೊಡುವೆನು." ಎಂದು ಹೇಳಿದಳು.

ಇಷ್ಟರಲ್ಲಿ ಬಾದಷಹನು ಬರುವನೆಂಬ ವರ್ತಮಾನವನ್ನು ಕೇಳಿ ಉದಯಪುರಿಯು "ಅಯ್ಯಾ, ಛೋಟುಸಿಂಗ್! ನೀನು ನಾಳೆಯದಿನ ಇಲ್ಲಿಗೆ ಬಂದರೆ ನಿನಗೆ ತಕ್ಕ ಬಹುಮಾನವನ್ನು ಕೊಡುವೆನು." ಎಂದು ಹೇಳಿ, ಆತನಿಗೆ ಹೊರಡಲು ಅಪ್ಪಣೆ ಯನ್ನಿತ್ತಳು. ಅನಂತರ ಛೋಟುಸಿಂಗನು ಅಲ್ಲಿಂದ ಹೊರ ಬರುತ್ತ ನೆಲದಮೇಲೆ ಹಾಸಿದ್ದ ರತ್ನಗಂಬಳಿಯನ್ನು ನೋ ಡುತ್ತ ಅದರ ಮೇಲೆ ಮುಗ್ಗರಿಸಿ ಬಿದ್ದವನಂತೆ ನಟಿಸಿ, ಮೆಲ್ಲಗೆ ಜೇಬಿನಲ್ಲಿದ್ದ ಕಾಗದವನ್ನು ರತ್ನಗಂಬಳಿಯ ಕೆಳ ಗಡೆಯಲ್ಲಿಟ್ಟನು. ಕಿಟಕಿಯಲ್ಲಿ ಇದನ್ನು ನೋಡುತ್ತಿದ್ದ ಇಂದಿರೆಯು ಛೋಟುಸಿಂಗನು ಕೆಳಗೆ ಬಿದ್ದ ತಕ್ಷಣವೇ ಓಡಿ ಬಂದು ರಹಸ್ಯವನ್ನಾರೂ ತಿಳಿಯದಿರಬೇಕೆಂದು ಆತನನ್ನು ಕುರಿತು,—"ಅಯ್ಯಾ! ನಿನಗೆ ರಾಜಾಂತಃಪುರದಲ್ಲಿ ತಿರುಗಿ ಅಭ್ಯಾಸವಿಲ್ಲವೊ? ಹಾಸಿದ್ದ ರತ್ನಗಂಬಳಿಯನ್ನು ತುಳಿದು ಹಾಳು ಮಾಡಿದೆ. ಸಾಕು, ಸಾಕು, ಮೇಲಕ್ಕೇಳು." ಎಂದು ಗದರಿಸುತ್ತ ರತ್ನಗಂಬಳಿಯನ್ನು ಸರಿಮಾಡುವ ಹಾಗೆ ನಟಿ ಸುತ್ತ ಅದರ ಕೆಳಗಿದ್ದ ಕಾಗದವನ್ನು ತೆಗೆದುಕೊಂಡು ಹೊ ರಟುಹೋದಳು. ಅಷ್ಟರಲ್ಲಿ ಮನಾವದನು ಓಡಿಬಂದು—"ಅಯ್ಯಾ! ಬಾದಷಹರು ದಯಮಾಡುತ್ತಿರುವರು, ಅವರು ಒಳಗೆ ಹೋಗುವ ವರೆಗೂ ನೀನು ಈ ಕಿರುಮನೆಯಲ್ಲಿರು; ಎಂದು ಹೇಳಿ ಛೋಟುಸಿಂಗನನ್ನು ಒಂದು ಕಿರುಮನೆಯಲ್ಲಿ ಕೂಡಿ ತಾನು ಬಾಗಿಲನ್ನು ಹಾಕಿಕೊಂಡು ಬಾದಷಹನನ್ನು ಇದಿರ್ಗೊಳ್ಳಲು ಹೋದನು. ಇಂದಿರೆಯು ತೆಗೆದುಕೊಂಡ ಕಾಗದದಲ್ಲಿ ಸಮಾಚಾರವೇನಿತ್ತೆಂಬುದು ನಮಗೆ ತಿಳಿಯದಿ ದ್ದರೂ ಅದನ್ನು ನೋಡಿದ ಮೇಲೆ ಆಕೆಯು ಸಂತೋಷ ದಿಂದ ಉಬ್ಬಿದಳೆಂದು ಮಾತ್ರ ಹೇಳಬಲ್ಲೆವು.

ಇತ್ತ ಮನಾವದನು ಛೋಟುಸಿಂಗನನ್ನು ಕಿರುಮನೆ ಯಲ್ಲಿ ಕೂಡಿ ಹೋದವನು ಮತ್ತೆ ಬಾಗಿಲನ್ನು ತೆರೆಯಲು ಮರೆತನು. ಕ್ರಮಕ್ರಮವಾಗಿ ಸಾಯಂಕಾಲವಾಗಿ ರಾತ್ರಿ ಎಂಟು ಗಂಟೆಯಾದರೂ ಒಬ್ಬರೂ ಬಾಗಿಲನ್ನು ತೆರೆಯಲಿಲ್ಲ ವಾದುದರಿಂದ ಛೋಟುಸಿಂಗನು ತನಗಾವ ವಿಪತ್ತುಂಟಾಗು ವುದೋ ಎಂದು ವಿಚಾರಪಡುತ್ತಿದ್ದನು. ರಾತ್ರಿ ಎಂಟು

ಗಂಟೆಯು ಮೇಲೆ ಇಬ್ಬರು ತುರುಷ್ಕ ಭಟರು ಬಂದು ರಹಸ್ಯವಾಗಿ ಬಾಗಿಲನ್ನು ತೆರೆದು ಒಳಗಿದ್ದ ಭೋಟಸಿಂಗನನ್ನು ಹಿಡಿದು ಬಾಯಿಗೆ ಬಟ್ಟೆಯನ್ನು ತುರುಕಿ ಆತನನ್ನು ಕರೆದುಕೊಂಡುಹೋಗಿ ಕಾರಾಗೃಹದಲ್ಲಿಟ್ಟುಬಿಟ್ಟರು.

ಹದಿನೇಳನೆ ಪ್ರಕರಣ.

(ರೂಪನಗರದ ಮುತ್ತಿಗೆ)

ಔರಂಗಜೇಬನು ಉದಯಪುರಿಯೊಡನೆ ಮಾಡಿದ ಪ್ರತಿಜ್ಞೆಯೇನಾಯಿತೆಂದು ವಿಚಾರಮಾಡಬೇಕಲ್ಲವೆ? ಸೈನ್ಯಸಮೇತನಾಗಿ ರೂಪನಗರವನ್ನು ಮುತ್ತಿ ವಿಮಲೆಯನ್ನು ಕರೆತರಬೇಕೆಂದು ಬಾದಷಹನು ಒಂದು ಕಾಗದವನ್ನು ಬರೆದು ಮುಸಾವದನ ಮೂಲಕ ಸಾದತ್‌ಖಾನನ ಕಯ್ಯಲ್ಲಿ ಕೊಡುವಂತೆ ಹೇಳಿಕಳುಹಿದುದು ನಮ್ಮ ವಾಚಕರಿಗೆ ನೆನಪಿರಬಹುದು. ಸಾದತ್‌ಖಾನನು ಮುಸಾವದನು ಕೊಟ್ಟ ಪತ್ರವನ್ನು ನೋಡಿಕೊಂಡು, ಸ್ವಾಮಿಯ ಆಜ್ಞೆಯನ್ನು ಉಲ್ಲಂಘಿಸುವುದು ಯುಕ್ತವಲ್ಲೆಂದು ತಿಳಿದಿದ್ದರೂ ಅಕಾರಣ ಕಲಹವೇಕೆಂದು ಬಾದಷಹನನ್ನು ಸಮೀಪಿಸಿ, ಆತನ ಕೋಪವನ್ನು ನಿವಾರಿಸತೊಡಗಿದನು. ಆದರೆ, ಔರಂಗಜೇಬನು ಆತನ ಮಾತುಗಳನ್ನು ಲಕ್ಷಿಸದೆ,— “ಈ ವಿಚಾರವೆಲ್ಲಾ ನಿನಗೇಕೆ? ತ್ವರೆಯಾಗಿ ನನ್ನ ಆಜ್ಞೆಯನ್ನು ನಿರ್ವಹಿಸು. ನಾನು ಬರೆದು ಕೊಡುವ ಪತ್ರವನ್ನು ವಿಜಯಸಿಂಹನಿಗೆ ತೋರಿಸು.” ಎಂದು ಹೇಳಿ ಆಗಲೆ, ವಿಜಯಸಿಂಹನಿಗೆ ಕೆಲವು ಬುದ್ಧಿವಾದಗಳನ್ನು ಬರೆದು,—“ನಿನ್ನ ಮಗಳಾದ ವಿಮಲೆಯನ್ನು ಸಾದತ್‌ಖಾನನೊಡನೆ ಕಳುಹಬೇಕೆಂದೂ, ಇಲ್ಲವಾದರೆ ರಾಜಧಾನಿಯನ್ನು ಧ್ವಂಸಮಾಡಿ ನಿನ್ನ ಮಗಳನ್ನು ಕರದೊಯ್ಯುವೆನೆಂದೂ” ಸ್ಪಷ್ಟವಾಗಿ ಬರೆದು, ಪತ್ರವನ್ನು ಸಾದತ್‌ಖಾನನ ಕಯ್ಗೆ ಕೊಟ್ಟನು.

ರಾಜ್ಯಾಂಗವಿಷಯಗಳನ್ನು ಕುರಿತು ಬರೆಯುವ ಕಾಗದಪತ್ರಗಳೆಲ್ಲವನ್ನೂ ಔರಂಗಜೇಬನೇ ಬರೆಯುತ್ತಿದ್ದನು. ಆತನ ಅಕ್ಷರಗಳು ಮುತ್ತುಗಳಂತೆ ಆನಂದದಾಯಕಗಳಾಗಿದ್ದುವು. ಅವನು ಎಷ್ಟು ಕಾರ್ಯಚತುರನಾಗಿದ್ದನೋ ಆತನ ಬರೆವಣಿಗೆಯೂ ಅಂತಹದೇ ಆಗಿದ್ದಿತು.

ಸಾದತ್‌ಖಾನನು ಬಾದಷಹನು ಕೊಟ್ಟ ಉತ್ತರವನ್ನು ತೆಗೆದುಕೊಂಡು ಆತನ ಆಜ್ಞೆಯನ್ನು ಶಿರಸಾವಹಿಸಿ ಹೊರಟನು. ಈತನು ಬಾದಷಹನ ಸೇನಾನಾಯಕರಲ್ಲಿ ಒಬ್ಬನಾಗಿದ್ದನಷ್ಟೇ ಹೊರತು, ದುರಾಗ್ರಹಿಯೂ ಅಕಾರಣ ಕಲಹವನ್ನು ಹರಡುವವನೂ ಆಗದೆ ಸನ್ಮಾರ್ಗಗಾಮಿಯಾಗಿದ್ದನು. ಆದರೂ ಬಾದಷಹನ ಅಪ್ಪಣೆಯನ್ನು ನಿರ್ವಹಿಸದಿರುವುದು ಅಯುಕ್ತವೆಂದು ತಿಳಿದು, ಆತನ ಕಾರ್ಯವನ್ನು ನಿರ್ವಹಿಸಲು ಪ್ರಯತ್ನಿಸಿ, ರೂಪನಗರವು ಒಂದು ಚಿಕ್ಕರಾಜ್ಯವೆಂದು ಗ್ರಹಿಸಿ, ಸ್ವಲ್ಪ ಸೈನ್ಯವನ್ನೇ ತೆಗೆದುಕೊಂಡು ಹೊರಟು, ರೂಪನಗರವನ್ನು ಮುತ್ತಿದನು. ಅನಂತರ ಸಾದತ್‌ಖಾನನು ಬಾದಷಹನು ಕೊಟ್ಟ ಕಾಗದವನ್ನು ವಿಜಯಸಿಂಹನಿಗೆ ಕಳುಹಲು, ಆತನು ಅದನ್ನು ನೋಡಿ ಅತ್ಯಾಗ್ರಹದಿಂದ ಅದನ್ನು ತನ್ನ ಕಾಲುಗಳಿಂದ ತುಳಿದು ಹರಿದುಹಾಕಿ ಆ ಸೇವಕನ ಮುಖದ ಮೇಲೆ ಒಗೆದು,— “ಇದೇ ನಿನ್ನ ಉತ್ತರಕ್ಕೆ ಪ್ರತ್ಯುತ್ತರ”ವೆಂದು ನಿಮ್ಮ ಬಾದಷಹನಿಗೆ ತೋರಿಸು.” ಎಂದು ಹೇಳಿ ಅವನನ್ನು ಕಳುಹಿಬಿಟ್ಟನು

ಈ ಪರಾಭವವನ್ನು ತಿಳಿದ ಕೂಡಲೆ, ಸಾದತ್‌ಖಾನನು ತನ್ನ ಸೈನ್ಯವನ್ನು ಪಟ್ಟಣದ ಸುತ್ತಲೂ ನಿಲ್ಲಿಸಿ, ಒಳಗಿನವರು ಹೊರಗೆ ಬರದಂತೆ ಮಾಡಿದನು. ರೂಪನಗರವು ಎಷ್ಟು ಚಿಕ್ಕ ಸಂಸ್ಥಾನವಾದರೂ ಅದನ್ನು ಸಾಧಿಸುವುದು ಶತ್ರುವರ್ಗಕ್ಕೆ ಅಸಾಧ್ಯವೇ ಹೊರತು ಸುಲಭಸಾಧ್ಯವಲ್ಲ. ಆ ನಗರವು ಬೆಟ್ಟಗಳ ಮಧ್ಯೆ ಕಟ್ಟಲ್ಪಟ್ಟಿದ್ದುದರಿಂದ ತತ್ಪ್ರಾಕಾರಕುಡ್ಯವು ಪರ್ವತಗಳಿಂದಲೇ ಕೂಡಿದ್ದಿತು. ಒಳಭಾಗದಲ್ಲಿ ಇದನ್ನು ಅನುಸರಿಸಿ ಮತ್ತೊಂದು ಗೋಡೆಯು ಎತ್ತರವಾಗಿಯೂ ನಾಲ್ಕು ಗಜ ಅಗಲವುಳ್ಳುದಾಗಿಯೂ ಕಟ್ಟಲ್ಪಟ್ಟಿದ್ದಿತು. ಸಮರಸಮಯದಲ್ಲಿ ವಿಜಯಸಿಂಹನ ಸೈನಿಕರು ಈ ಗೋಡೆಯ ಮೇಲೆ ನಿಂತು ಯುದ್ಧಮಾಡುತ್ತಿದ್ದರು. ಆ ನಗರದ ಸುತ್ತಲೂ ಇರುವ ಬುರುಜುಗಳು ನಿರಂತರವೂ ವೀರಪುರುಷರಿಂದಲೂ ಯುದ್ಧಸಾಮಗ್ರಿಗಳಿಂದಲೂ ಸಿದ್ಧವಾಗಿಡಲ್ಪಟ್ಟಿದ್ದಿತು. ಮತ್ತು, ನಗರದ ಸುತ್ತಲೂ ಒಳಭಾಗದಲ್ಲಿ ಒಂದು ಕಂದಕವು ಕಟ್ಟಲ್ಪಟ್ಟಿದ್ದಿತು. ಆ ನಗರದ ಸಿಂಹದ್ವಾರವು ಕಬ್ಬಿಣದ ಬಾಗಿಲಾಗಿದ್ದುದರಿಂದ ಅದನ್ನು ಭೇದಿಸುವುದು ಪರರಿಗೆ ಕಷ್ಟವಾಗಿದ್ದಿತು. ಶತ್ರುಗಳು ಆಕಸ್ಮಿಕವಾಗಿ ಪ್ರವೇಶಿಸಿದರೂ ಆ ನಗರದಲ್ಲಿಯ ಸೇನಾಸಮೂಹವು ಯಾವ ಲೋಪವೂ ಇಲ್ಲದೆ ತಕ್ಷಣವೇ ಯುದ್ಧಮಾಡುವಂತೆ ಸಿದ್ಧವಾಗಿದ್ದಿತು. ಮುಹಮ್ಮದೀಯರು ಆವಾಗ ದಂಡೆತ್ತಿ ಬರುವರೋ -ಎಂದು ಸಂದೇಹದಿಂದ ವಿಜಯಸಿಂಹನು ಬೇಕಾದ ಯುದ್ಧಸಾಮಗ್ರಿಗಳನ್ನೂ ಆಹಾರಪದಾರ್ಥಗಳನ್ನೂ ಸಮೃದ್ಧಿಯಾಗಿ ಇಟ್ಟಿದ್ದನು. ಎಂತಹ ಪ್ರಬಲಶತ್ರುವಾದರೂ ಬಂದು ೨-೩ ವರ್ಷಗಳ ವರೆಗೆ ನಗರವನ್ನು ಮುತ್ತಿದರೂ ಅಲ್ಲಿಯ ಪ್ರಜೆಗಳಿಗಾಗಲಿ ಸೈನಿಕರಿಗಾಗಲಿ ಆಹಾರವಿಷಯದ

ಲ್ಲಲ್ಲದೆ ಮತ್ತಾವ ವಿಷಯದಲ್ಲಿಯೂ ಕೊರತೆಯಾಗುವಂತಿರಲಿಲ್ಲ.

ಶತ್ರುಗಳು ನಗರವನ್ನು ಮುತ್ತಿದ್ದರೂ ಸ್ವಲ್ಪವೂ ಭಯಪಡದೆ ವಿಜಯಸಿಂಹನು ತಕ್ಕ ಯುದ್ಧಸನ್ನಾಹಗಳನ್ನು ಮಾಡುತ್ತಲೇ ಇದ್ದನು. ತನ್ನ ಸೇನಾನಾಯಕರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಭಾಗವನ್ನು ಕೊಟ್ಟು ಪಟ್ಟಣದ ನಾಲ್ಕು ಕಡೆಯಲ್ಲಿಯೂ ಕಾವಲಿರಿಸಿದನು. ಅವರಲ್ಲಿ ಮದನಸಿಂಗನೆಂಬವನು ೩೦೦೦೦ ಸೈನ್ಯದಿಂದ ಕೂಡಿ ಉತ್ತರದಲ್ಲಿಯೂ, ಜಯಸೇನನು ೩೦,೦೦೦ ಸೈನ್ಯದಿಂದ ಪೂರ್ವದಲ್ಲಿಯೂ, ಉಳಿದವರು ಪಶ್ಚಿಮ ದಕ್ಷಿಣಭಾಗದಲ್ಲಿಯೂ ಕಾವಲಿದ್ದರು. ವಿಜಯಸಿಂಹನು, ಶತ್ರುಗಳು ಯಾರಾದರೂ ರಹಸ್ಯವಾಗಿ ಗೋಡೆಗಳನ್ನು ಹತ್ತಿ ಬರುವರೇನೆಂಬ ಶಂಕೆಯಿಂದ ತಾನೂ ಸಹ ಬುರುಜುಗಳಮೇಲೆ ಹತ್ತಿ ಸುತ್ತಲೂ ನೋಡುತ್ತಿದ್ದನು; ತನ್ನ ಆಜ್ಞಾನುಸಾರ ಸೈನಿಕರೆಲ್ಲರೂ ಜಾಗರೂಕರಾಗಿರುವರೋ ಇಲ್ಲವೋ ಎಂದು ಪ್ರತಿದಿನವೂ ಖಡ್ಗಪಾಣಿಯಾಗಿ ಹೊರಟು ಅರ್ಧರಾತ್ರಿಯಲ್ಲಿ ನಗರದಲ್ಲೆಲ್ಲ ಸಂಚರಿಸುತ್ತಿದ್ದನು. ಆವಾಗಲಾದರೂ ವಿಜಯಸಿಂಹನು ತಾನೊಬ್ಬನೇ ಕುಳಿತು ಕಾರ್ಯೋಪಾಯವನ್ನು ಯೋಚಿಸುತ್ತಿದ್ದರೆ ವಿಮಲೆಯು ತನ್ನ ತಂದೆಯ ಬಳಿಗೆ ಬಂದು ಆತನಿಗೆ ಧೈರ್ಯವನ್ನುಂಟುಮಾಡುತ್ತ—"ತಂದೆಯೇ! ಇಷ್ಟುಮಾತ್ರಕ್ಕೆ ಭಯಪಡುವುದೇಕೆ? ಎಂತಹ ಆಪತ್ತು ಸಂಭವಿಸಿದರೂ ನಮ್ಮ ಕ್ಷತ್ರಿಯ ಧರ್ಮವನ್ನು ಬಿಡದಂತಿರುವುದೇ ನಮಗೆ ಜಯಪ್ರದವು." ಎಂದಳು.

ವಿಜಯಸಿಂಹ.—"ಅಮ್ಮಾ! ಚೆನ್ನಾಗಿ ಹೇಳಿದೆ. ನಮ್ಮ ಸೇವಕರೆಲ್ಲರೂ ಅತ್ಯಂತ ಜಾಗರೂಕರಾಗಿ ಪಟ್ಟಣದ ನಾಲ್ಕು ಕಡೆಗಳಲ್ಲಿಯೂ ಕಾವಲಿರುವರು. ಇನ್ನು ಈ ಬಾದಶಹನು ನಮ್ಮನ್ನೇನು ಮಾಡಬಲ್ಲನು?" ಎಂದು ಮಗಳಿಗೆ ಧೈರ್ಯದಿಂದ ಉತ್ತರವಿತ್ತನು. ವಿಜಯಸಿಂಹನು ಸಹಜಧೈರ್ಯಾಲಂಕೃತನಾಗಿದ್ದರೂ ತಾನೊಬ್ಬನೇ ಮಹಮ್ಮದೀಯರೊಡನೆ ಹೋರಾಡುವುದು ಕಷ್ಟವೆಂದು ತಿಳಿದು ರಾಜಪುತ್ರಸ್ಥಾನದಲ್ಲಿರುವ ರಾಜರೆಲ್ಲರಿಗೂ ತನಗೆ ಸಹಾಯಕ್ಕಾಗಿ ಬರಬೇಕೆಂದು ಪ್ರಾರ್ಥಿಸಿ ಹೀಗೆ ಕಾಗದಗಳನ್ನು ಬರೆದನು.—

"ವಿಶ್ವಸನೀಯರಾದ ರಜಪೂತರಿರಾ!

ನನ್ನ ಮಗಳಾದ ವಿಮಲಾದೇವಿಯನ್ನು ಕರೆದುಕೊಂಡು ಹೋಗಬೇಕೆಂದು ಬಾದಶಹನು ತನ್ನ ಸೈನ್ಯವನ್ನು ಕಳುಹಿಸಿ ನನ್ನ ಪಟ್ಟಣವನ್ನು ಮುತ್ತಿರುವನು. ಇದಕ್ಕಿಂತಲೂ ದಾರುಣಕೃತ್ಯವು ಮತ್ತಾವುದಿರುವುದು? ರಜಪೂತರಕ್ತವು ನನ್ನ ಧಮನಿಗಳಲ್ಲಿ ಪ್ರವಹಿಸುತ್ತಿರುವ ವರೆಗೂ ನನ್ನ ಮಗಳನ್ನು ಯವನರಿಗೆ ಕೊಟ್ಟು ಮದುವೆ ಮಾಡಲು ಸಮ್ಮತಿಸುವೆನೆ? ಬಾದಶಹನ ಇಂತಹ ಕಾರ್ಯವನ್ನು ಮಾಡಲು ಯತ್ನಿಸಿರುವುದು ನನಗೊಬ್ಬನಿಗೇ ಅಲ್ಲ,—ರಜಪೂತ ವಂಶಕ್ಕೇ ಪರಾಭವವೆನಿಸುವುದಲ್ಲವೆ? ಆದುದರಿಂದ, ನೀವೆಲ್ಲರೂ ಈಗ ನನಗೆ ಸಹಾಯಕರಾಗಿ ಬರಬೇಕೆಂದು ನಾನು ಬರೆಯಬೇಕಾದುದೇ ಇಲ್ಲ. ಒಂದುವೇಳೆ ಸಹಾಯಕ್ಕೆ ಬರದಿದ್ದರೂ ನಾನು ಇದಕ್ಕೆ ಸ್ವಲ್ಪವೂ ಭಯಪಡುವವನಲ್ಲ. ಆದರೂ ನೀವೆಲ್ಲರೂ ನನಗೆ ಸಹಾಯಮಾಡುವುದು ಯುಕ್ತವಾದುದರಿಂದ ಈ ವಿಷಯವನ್ನು ನಿಮಗೆ ತಿಳಿಯಪಡಿಸಿರುವೆನು.

ಇತಿ,— ವಿಜಯಸಿಂಹ."

ಹೀಗೆ ಬರೆದ ಕಾಗದಗಳನ್ನು, ಮಾಯಾಮಾರ್ಗಗಳನ್ನು ಚೆನ್ನಾಗಿ ಬಲ್ಲ ಒಬ್ಬ ಸೇವಕನ ವಶಕ್ಕೊಪ್ಪಿಸಿ, ಶತ್ರುಗಳ ಕಯ್ಗೆ ಸಿಕ್ಕದಂತೆ ಮಾಯಾವೇಷವನ್ನು ಧರಿಸಿ ಈ ಕಾಗದವನ್ನು ತೆಗೆದುಕೊಂಡು ಹೋಗಿ ರಾಜಪುತ್ರರಾಜರೆಲ್ಲರಿಗೂ ತೋರಿಸೆಂದು ಹೇಳಿ ಕಳುಹಿದನು.

ಇತ್ತ ವಿಮಲಾದೇವಿಯು, ಶತ್ರುಗಳು ಪಟ್ಟಣವನ್ನಾಕ್ರಮಿಸಲು ಯಾವ ಉಪಾಯವನ್ನಾಲೋಚಿಸಿರುವರೋ ಎಂದು ಸಂದೇಹದಿಂದ ರಹಸ್ಯವಾಗಿ ತನ್ನ ಸೇವಕರನ್ನು ಕಳುಹಿ, ಮಹಮ್ಮದೀಯರ ಯುದ್ಧಸನ್ನಾಹಗಳನ್ನು ತಿಳಿಯುತ್ತಿದ್ದಳು. ಶತ್ರುಗಳು ಪಟ್ಟಣವನ್ನು ಮುತ್ತಿದಂದಿನಿಂದಲೂ ಆಕೆಗೆ ತನ್ನ ತಂದೆಯೊಡನೆ ಯುದ್ಧಸನ್ನಾಹದ ವಿಷಯವಾಗಿ ಆಲೋಚಿಸುವುದೇ ಕೆಲಸವಾಗಿದ್ದಿತು. ಅಷ್ಟೇ ಅಲ್ಲ; ಆಗಾಗ ಪುರುಷವೇಷವನ್ನು ಧರಿಸಿ ನಗರದಲ್ಲಿ ಸಂಚರಿಸುತ್ತ ಸೈನಿಕರನ್ನೂ ಪರೀಕ್ಷಿಸುತ್ತಿದ್ದಳು. ತನ್ನ ತಂದೆಗೂ ಮಂತ್ರಿಗಳಿಗೂ ಸೈನಿಕರಿಗೂ ಕಾಲೋಚಿತವಾದ ಸಲಹೆಗಳನ್ನು ಕೊಡುತ್ತ ಯುದ್ಧಸನ್ನಾಹದಲ್ಲಿ ನಿರತಳಾಗಿದ್ದಳು.

ಒಂದು ದಿನ ವಿಮಲಾದೇವಿಯು ತನ್ನ ಅಂತಃಪುರದಲ್ಲಿ ಕುಳಿತುಕೊಂಡು ಅತ್ಯಂತ ವ್ಯಸನಾಕ್ರಾಂತಳಾಗಿ ತನ್ನೋರ್ವಳಿಗಾಗಿ ಹೆತ್ತತಂದೆಯೂ ಸೈನಿಕರೂ ಪೌರರೂ ಮಂತ್ರಿಗಳೂ ಕೂಡ ಇಷ್ಟು ಕಷ್ಟಗಳನ್ನು ಅನುಭವಿಸಬೇಕಾಯಿತೆಂದು ಮನಸ್ಸಿನಲ್ಲಿ ನೊಂದು,—"ಅಯ್ಯೋ! ನಿರ್ಭಾಗ್ಯೆಯಾದ ನನ್ನಿಂದಲೇ ಅಲ್ಲವೆ ನನ್ನ ತಂದೆಗೆ ಇಷ್ಟು ಕಷ್ಟಗಳು ಪ್ರಾಪ್ತವಾಗಿರುವುವು. ಇಷ್ಟಕ್ಕೂ ನನ್ನನ್ನು ಕರೆದುಕೊಂಡು ಹೋಗಬೇಕೆಂಬ ಬುದ್ಧಿಯು ಬಾದಶಹನಿಗೇಕೆ ಹುಟ್ಟಿತು? ಆತನಿಗೆ ನಾನಾವ ದ್ರೋಹ ಮಾಡಿರುವೆನು? ಹಗಲೂ ರಾತ್ರಿಯೂ ಆಹಾರನಿದ್ರೆಗಳಿಲ್ಲದೆ ಕಷ್ಟಪಡುತ್ತಿರುವ ನನ್ನ ತಂದೆಯ ಕಷ್ಟಗಳನ್ನು ನೋಡಿ ಹೇಗೆ ಸಹಿಸಲಿ? ಅಥವಾ ಪ್ರಾಣಿಹಿಂಸೆಗೆ ಭೀತಳಾಗಿ ಪವಿತ್ರವಾದ ಕ್ಷತ್ರಿಯ ವಂಶಕ್ಕೇ ಲಾಂಛನವಾಗು

ವಂತೆ ಯವನನನ್ನು ಮದುವೆಯಾಗುವುದಾದರೂ ಹೇಗೆ?...." ಹೀಗೆ ಕೆಲವು ಹೊತ್ತು ದುಃಖಿಸುತ್ತಿದ್ದು, ಆ ಬಳಿಕ ಧೈರ್ಯವನ್ನವಲಂಬಿಸಿ,—

"ಬ್ರಹ್ಮಾಂಡಭಾಂಡವು ತಲೆಕೆಳಗಾದರೂ ನಾನು ಪವಿತ್ರವಾದ ರಜಪೂತ ಧರ್ಮವನ್ನು ಬಿಡಲಾರೆನು. ಅಷ್ಟೇಕೆ? ನನ್ನ ತಂದೆಯು ಬಳೆಯನ್ನು ತೊಡುವವನಾಗಿಲ್ಲ; ಬಲಹೀನನಲ್ಲ; ಅಚ್ಚ ರಜಪೂತ ರಕ್ತವು ಆತನ ಧಮನಿಯಲ್ಲಿರುವವರೆಗೂ ನನ್ನ ಧರ್ಮಕ್ಕೆ ಹಾನಿ ತಟ್ಟುವುದಿಲ್ಲ. ಈಗಿನ ಯುದ್ಧದಲ್ಲಿ ಜಯವು ನಮಗೇ ಲಭಿಸುವುದೆಂದು ನನಗೆ ಭರವಸೆಯುಂಟು. ಈ ನಮ್ಮ ಸ್ಥಿತಿಯನ್ನು ತಿಳಿದು, ಉದಯಪುರಾಧಿನಾಥನಾದ ರಾಜಸಿಂಹರಾಜನು ಕೂಡ ಖಂಡಿತ ನಮಗೆ ಸಹಾಯಕನಾಗಿ ಬರುವನು. ಆ ದಿನ ಅರಣ್ಯದಲ್ಲಿ ನನಗೆ ಆತನು ತನ್ನ ಉಂಗುರವನ್ನು ತೆಗೆದುಕೊಟ್ಟಾಗಲೇ ಆ ಸುಂದರಾಕಾರನ ಸದಯಹೃದಯವನ್ನು ತಿಳಿದುಕೊಂಡಿರುವೆನು."

ಎಂಬುದಾಗಿ ತನ್ನೊಳಗೆ ಆಲೋಚಿಸಿಕೊಳ್ಳುತ್ತಿರುವಷ್ಟರಲ್ಲಿಯೇ ಪದ್ಮೆಯು ಅಲ್ಲಿಗೆ ಬಂದು ಆಕೆಯನ್ನು ನೋಡಿ-- "ಅಮ್ಮಾ! ವಿಮಲಾ! ಒಬ್ಬಳೇ ಕುಳಿತು ಏನನ್ನು ಆಲೋಚಿಸುತ್ತಿರುವೆ? ಮಹಡಿಯಮೇಲೇರಿ ಹೋಗುವ-ಬಾ." ಎಂದು ಆಕೆಯ ಕೈಹಿಡಿದು ಮೇಲಕ್ಕೆ ಹೋಗಿ ಅಲ್ಲಿದ್ದ ಒಂದು ಮಂಚದಮೇಲೆ ಕುಳಿತು, ಸುತ್ತಲೂ ಇದ್ದ ಶತ್ರುಸೈನ್ಯವನ್ನು ನೋಡುತ್ತ ಪರಸ್ಪರ ಮಾತನಾಡುತ್ತಿದ್ದರು. ಸ್ವಲ್ಪಹೊತ್ತಾದಮೇಲೆ ಹಂಸಪಕ್ಷಿಯಂತೆ ಶುಭ್ರವಾದ ಒಂದು ಪಾರಿವಾಳವು ಮಹಡಿಯಮೇಲೆ ಅವರಿಗಿದಿರಾಗಿ ಹಾರಾಡುತ್ತಾ ಬಂದು ಒಂದು ಕಿಟಕಿಯಮೇಲೆ ಕುಳಿತುಕೊಂಡಿತು. ಅವರಿಬ್ಬರೂ ಆನಂದಿತರಾಗಿ ಆ ಕಪೋತರಾಜನನ್ನು ಹಿಡಿಯಬೇಕೆಂದು ನಿಶ್ಚಯಿಸಿದರು. ಪದ್ಮೆಯು ಪಾರಿವಾಳವನ್ನು ಹಿಡಿಯಲು ಮುಂದಾದಳು. ಅಷ್ಟರಲ್ಲಿ ವಿಮಲೆಯನ್ನು ಅವಳ ತಂದೆಯು ಕೂಗಿದುದನ್ನು ಕೇಳಿ ವಿಮಲೆಯು, ಪಾರಿವಾಳವನ್ನು ಹಿಡಿದಿರಬೇಕೆಂದೂ ತಾನು ತಂದೆಯು ಕೂಗಿದುದೇಕೆಂದು ಕೇಳಿ ಬರುವೆನೆಂದೂ ಹೇಳಿ, ಕೆಳಕ್ಕಿಳಿದು ಹೊರಟುಹೋದಳು. ಪದ್ಮೆಯು ತನ್ನನ್ನು ಹಿಡಿಯಲು ಬರುವುದನ್ನು ನೋಡಿ ಪಾರಿವಾಳವು ಹಾರಿಹೋಗದೆ ಅಲ್ಲಿಯೇ ಇದ್ದಿತು. ಪದ್ಮೆಯು ಮೆಲ್ಲಗೆ ಬಂದು ಅದನ್ನು ಹಿಡಿದುಕೊಂಡು ತನ್ನ ಕಯ್ಗಳಿಂದ ಅದನ್ನು ಸವರುತ್ತ ಪ್ರೀತಿಯಿಂದ ಮುದ್ದಿಸುತ್ತಿರಲು, ಅದರ ಕೊರಳಿಗೆ ಕಟ್ಟಿದ್ದ ಕಾಗದವನ್ನು ಕಂಡು ಕೌತುಕಗೊಂಡು ಅದನ್ನು ಓದಿಕೊಂಡಳು. ಆ ಕಾಗದವನ್ನು ನೋಡಿ ಪದ್ಮೆಯ ಮುಖವು ಪ್ರಫುಲ್ಲವಾಯಿತು; ಸಂತೋಷಾತಿಶಯದಿಂದ ಶರೀರವೆಲ್ಲ ರೋಮಾಂಚಿತವಾಯಿತು. ಕಿರುನಗೆನಗುತ್ತ ಸ್ವಲ್ಪ ಹೊತ್ತು ಯೋಚಿಸಿ, ಆ ಕಾಗದದ ಮೇಲೆ ತನ್ನ ಉಗುರಿನಿಂದ—"ಸರಿಯೆ" ಎಂದು, ಮೂರು ಅಕ್ಷರಗಳನ್ನು ಕೆತ್ತಿ ಎಂದಿನಂತೆ ಪಾರಿವಾಳದ ಕೊರಳಿಗೆ ಕಟ್ಟಿ ಅದನ್ನು ಬಿಟ್ಟಳು. ತಕ್ಷಣವೇ ಪಾರಿವಾಳವು ಹೊರಟುಹೋಯಿತು.

ಇಷ್ಟರಲ್ಲಿ ವಿಮಲೆಯು ಮೇಲಕ್ಕೆ ಬಂದು ಆತುರದಿಂದ– "ಪದ್ಮಾ! ಪಾರಿವಾಳವೆಲ್ಲಿ?" ಎಂದು ಕೇಳಿದಳು. ಪದ್ಮೆಯು ರಹಸ್ಯವನ್ನು ತಿಳಿಸಲು ಇಷ್ಟವಿಲ್ಲದೆ,-- "ಅದು ನನಗೆ ಸಿಕ್ಕಲಿಲ್ಲ. ನಾನು ಹಿಡಿಯುವಷ್ಟರಲ್ಲಿ ಹಾರಿಹೋಯಿತು. ನಾನೇನು ಮಾಡಲಿ?" ಎಂದು ಹೇಳಿದಳು. ಪಾರಿವಾಳವು ಸಿಕ್ಕದುದರಿಂದ ವಿಮಲೆಯು ಸ್ವಲ್ಪ ವ್ಯಸನಪಟ್ಟು ಪದ್ಮೆಯೊಡನೆ ಕೆಳಕ್ಕಿಳಿದು ಹೋದಳು. ಕಪೋತವನ್ನು ಬಿಟ್ಟಕ್ಷಣದಿಂದಲೂ ಪದ್ಮೆಯು ತನ್ನಲ್ಲಿ ಏನೇನೋ ಯೋಚಿಸತೊಡಗಿದಳು; ಬಾರಿಬಾರಿಗೂ ಎಷ್ಟು ಹೊತ್ತಿರುವುದೆಂದು ಆಕಾಶವನ್ನು ನೋಡುತ್ತ ಎಂದಿಗೆ ರಾತ್ರಿಯಾಗುವುದೆಂಬ ತವಕದಲ್ಲೇ ಇದ್ದಳು. ಅಂದು ರಾತ್ರಿ ಎಲ್ಲರೂ ಭೋಜನಾನಂತರದಲ್ಲಿ ಯಥಾಕ್ರಮವಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಮಲಗಿದರು. ಆದರೆ ಪದ್ಮೆಗೆ ಮಾತ್ರ ಆ ರಾತ್ರಿ ನಿದ್ರೆ ಬರಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಆಕೆಯು ಸುಮ್ಮನಿದ್ದು, ಆ ಮೇಲೆ ಮೆಲ್ಲನೆ ಮಹಡಿಯನ್ನು ಹತ್ತಿ ಬಾಗಿಲುಗಳನ್ನು ದಾಟಿ ಉತ್ತರದಿಕ್ಕಿನಲ್ಲಿದ್ದ ಕಿಟಕಿಯ ಬಳಿಗೆ ಬಂದು, ಕಿಟಕಿಯ ಸಲಾಕಿಗೆ ಒಂದು ಉದ್ದವೂ ಬಲವೂ ಆದ ಹಗ್ಗವನ್ನು ಕಟ್ಟಿ ಅದನ್ನು ಕೆಳಕ್ಕೆ ಇಳಿಬಿಟ್ಟಳು. ಬಾರಿಬಾರಿಗೂ ಕೆಳಗೆ ಬಗ್ಗಿ ನೋಡುತ್ತ ಪುನಃ ಹಿಂದೆ ಹೋಗುತ್ತ ಅಧಿಕಪ್ರಯಾಸದಿಂದ ರಾತ್ರಿ ೧೨ ಘಂಟೆಯ ವರೆಗೂ ಕಾಲವನ್ನು ಕಳೆದಳು. ಇಷ್ಟರಲ್ಲಿ ಒಬ್ಬ ರಾಜಪುತ್ರನು ಕಿಟಕಿಯಿಂದ ಜೋಲಾಡುತ್ತಿದ್ದ ಹಗ್ಗವನ್ನು ಹಿಡಿದುಕೊಂಡು ಮೇಲಕ್ಕೆ ಹತ್ತಿ ಮಹಡಿಯನ್ನು ಪ್ರವೇಶಿಸಿ ಕಿರುನಗೆಯಿಂದ ನಗುತ್ತಿದ್ದ ಪದ್ಮೆಯನ್ನು ನೋಡಿ ಪ್ರೇಮದಿಂದ ಆಲಿಂಗಿಸಿಕೊಂಡನು. ಪದ್ಮೆಯು ಲಜ್ಜೆಯಿಂದ ತಲೆತಗ್ಗಿಸಿ ನಿಂತಳು. ರಾಜಪುತ್ರನು ತನ್ನ ಪ್ರಿಯೆಯ ಮುಖವನ್ನು ಮೇಲಕ್ಕೆತ್ತಿ ನೋಡುತ್ತ ಹೀಗೆ ಸಂಭಾಷಿಸಿದನು.—

ರಾಜಪುತ್ರ:—ಪದ್ಮಾ! ಪಾರಿವಾಳಕ್ಕೆ ಕಟ್ಟಿದ್ದ ಕಾಗದವನ್ನು ನೋಡಿಕೊಂಡಿಯಾ?

ಪದ್ಮ:— ನೋಡಿದೆನು. ಇಷ್ಟು ಹೊತ್ತಿನಲ್ಲಿ ಇಲ್ಲಿಗೆ ಬರಲು ಕಾರಣವೇನು?

ರಾಜಪುತ್ರ:— ಕಾರಣವೇನೆಂಬುದನ್ನು ನೀನು ತಿಳಿದೇ ಇಲ್ಲವೊ? ನಿನಗಿಂತಲೂ ನನಗೆ ಮತ್ತಾವ ಕಾರಣವಿರುವುದು. ನಿನ್ನನ್ನು ನೋಡುವುದಕ್ಕಾಗಿಯೇ ಬಂದೆನು.

ಪದ್ಮ:—ತುರುಷ್ಕಸೈನ್ಯವು ನಗರವನ್ನು ಸುತ್ತಿರುವುದರಿಂದ ನಿಮ್ಮ ಕಾಗದವನ್ನು ನೋಡಿದು ಮೊದಲು ನನಗೆ ಭಯವಾಗುತ್ತಿದ್ದಿತು. ಅವರ ಕಣ್ಣಿಗೆ ಬಿದ್ದರೆ ಅಪಾಯುವ್ಹಾಗದೆ...

ರಾಜಪುತ್ರ:—ಪದ್ಮಾ! ಇದಕ್ಕೇಕೆ ಇಷ್ಟು ಭಯಪಡುವೆ? ಈ ದಾರಿಯು ನನಗೂ ನನ್ನ ಪರಿಚರರಾದ ಭಿಲ್ಲರಿಗೂ ಮಾತ್ರವೇ ತಿಳಿದಿರುವುದಲ್ಲದೆ ಮತ್ತಾರಿಗೂ ತಿಳಿಯದು.

ಪದ್ಮ:—ನಮ್ಮ ರಾಜಧಾನಿಗೆ ಎಂತಹ ಅವಸ್ಥೆಯು ಪ್ರಾಪ್ತವಾಯಿತೋ ನೋಡಿದಿರಾ?

ರಾಜಪುತ್ರ:— ನೀನು ಆ ಸಮಾಚಾರವನ್ನು ಹೇಳಬೇಕಾದುದೇ ಇಲ್ಲ; ನನಗೆ ಎಲ್ಲವೂ ಗೊತ್ತಾಗಿದೆ.

ಪದ್ಮ:— ತಿಳಿದಿದ್ದರೂ ನೀವು ಹೀಗೆ ಸುಮ್ಮನಿರುವುದು ಸರಿಯಲ್ಲ.

ರಾಜಪುತ್ರ:— (ನಗುತ್ತ) ಏನು? ಸುಮ್ಮನಿರುವೆನೆಂದೇ ತಿಳಿದಿರುವೆಯೊ? ಅದಕ್ಕೆಬೇಕಾದ ಪ್ರಯತ್ನವನ್ನೆಲ್ಲಾ ಮಾಡುತ್ತಲೇ ಇರುವೆನು. ಆತುರಪಟ್ಟರೆ ಕಾರ್ಯವಾದೀತೆ? ನಮ್ಮ ತಂದೆಯು ನನ್ನನ್ನು ಈ ಪಟ್ಟಣಕ್ಕೆ ಬರಗೊಡಿಸನಾದುದರಿಂದ ನಾನು ಯಾವ ಪ್ರಯತ್ನವನ್ನು ಮಾಡುವುದಕ್ಕೂ ಅನುಕೂಲವಿಲ್ಲದಿರುವುದು. ಆದರೂ ನಾನು ಸುಮ್ಮನೇ ಇಲ್ಲ.

ಪದ್ಮ:—ಇಂತಹ ಸಮಯದಲ್ಲಿ ಆತುರಪಡದಿದ್ದರೆ ಹೇಗೆ? ಕಾರ್ಯವು ಮಿಂಚಿಹೋದಮೇಲೆ ಮಾಡುವುದೇನು?

ರಾಜಪುತ್ರ:— ಪದ್ಮಾ! ನೀನಿನ್ನೂ ಚಿಕ್ಕವಳು, ನಿನಗೆ ಚೆನ್ನಾಗಿ ಗೊತ್ತಿಲ್ಲ; ಸುಮ್ಮನಿರು. ನಮ್ಮ ರಹಸ್ಯವು ಮತ್ತಾರಿಗಾದರೂ ತಿಳಿದರೆ ತೊಂದರೆಯುಂಟಾಗುವುದು. ಅರ್ಧರಾತ್ರಿಯಾಗಿ ಹೋಯಿತು. ಇನ್ನು ನಾನು ಹೊರಡುವೆನು. ಪ್ರತಿಶುಕ್ರವಾರವೂ ನಾನು ಇಲ್ಲಿಗೆ ನಿನ್ನನ್ನು ನೋಡಲು ಬರುವೆನು. ನಾನು ಬರುವ ಹೊತ್ತಿಗೆ ಸರಿಯಾಗಿ ನೀನು ಇಲ್ಲಿರಬೇಕು.

ಎಂದು ಹೇಳಿ ಕಿಟಕಿಗೆ ಕಟ್ಟಿದ್ದ ಹಗ್ಗವನ್ನು ಹಿಡಿದುಕೊಂಡು ತನಗಾಗಿ ಕಾದುಕೊಂಡಿದ್ದ ಭಿಲ್ಲರೊಡನೆ ಕೂಡಿ ಪರ್ವತಮಾರ್ಗದಲ್ಲಿ ಹೊರಟುಹೋದನು. ಆ ನಂತರ ಪದ್ಮೆಯೂ ಮಹಡಿಯಿಂದ ಕೆಳಗಿಳಿದು ತನ್ನ ಕಿರುಮನೆಗೆ ಹೋಗಿ ಮಲಗಿಕೊಂಡಳು. ಆ ರಾಜಪುತ್ರನು ಶಿವಸಿಂಗನೆಂಬುದನ್ನು ನಾವು ನಮ್ಮ ವಾಚಕರಿಗೆ ಹೇಳಬೇಕಾದುದೇ ಇಲ್ಲ.

ಹದಿನೆಂಟನೆ ಪ್ರಕರಣ.

(ರುಕ್ಮಿಣೀ ಕಲ್ಯಾಣ)

ಮಹಮ್ಮದೀಯರು ರೂಪನಗರವನ್ನು ಮುತ್ತಿ ಆರು ತಿಂಗಳಾಗುತ್ತ ಬಂದಿತು. ವಿಜಯಸಿಂಹನು ಬರೆದು ಕಳುಹಿದ ಉತ್ತರಪತ್ರವನ್ನು ರಾಜಪುತ್ರರಾಜರೆಲ್ಲರೂ ನೋಡಿದರೂ ಒಬ್ಬರೂ ಆತನಿಗೆ ಸಹಾಯಕರಾಗಿ ಬರಲಿಲ್ಲ. ಪ್ರತಿದಿನವೂ ಯುದ್ಧಪ್ರಯತ್ನದಲ್ಲಿ ಜಾಗರೂಕರಾಗಿ ವಿಜಯಸಿಂಹನ ಮಂತ್ರಿವರ್ಯರೂ ಸೇನಾನಾಯಕರೂ ಪಟ್ಟಣವನ್ನು ಕಾಪಾಡುತ್ತಿದ್ದರು. ಮುಹಮ್ಮದೀಯರು ರಜಪುತ್ರರೊಡನೆ ಹೋರಾಡುತ್ತಿದ್ದರೂ ಕಡೆಗೆ ಜಯಶಾಲಿಗಳಾಗಲಿಲ್ಲ. ನಡೆಯಬೇಕಾದ ಕಾರ್ಯಗಳನೇಕವಿರುವಾಗ ಕಲಹವು ಹೇಗೆ ತಾನೇ ನಿಲ್ಲುವುದು? ಈ ಆರು ತಿಂಗಳುಗಳಿಂದಲೂ ತನ್ನ ತಂದೆಯೊಡನೆ ಅನೇಕ ಕಷ್ಟಗಳನ್ನು ಅನುಭವಿಸುತ್ತಿದ್ದರೂ ಒಂದುದಿನ ವಿಮಲಾದೇವಿಯು ಪುರಾಣಶ್ರವಣದಿಂದಲಾದರೂ ತನ್ನ ಆಯಾಸವನ್ನು ಹೋಗಲಾಡಿಸಿಕೊಳ್ಳುವೆನೆಂದು ನಿಶ್ಚಯಿಸಿ, ತಮ್ಮ ಪುರೋಹಿತನಾದ ಶ್ಯಾಮಲಪಂಡಿತನನ್ನು ಕರೆಯಿಸಿ ಭಾಗವತವನ್ನು ಓದಬೇಕೆಂದು ಕೇಳಿಕೊಂಡಳು.

ಶ್ಯಾಮಲಪಂಡಿತನು ವಿಜಯಸಿಂಹನ ಆಸ್ಥಾನದಲ್ಲಿದ್ದ ಒಬ್ಬ ಬ್ರಾಹ್ಮಣೋತ್ತಮನು. ಆತನು ವಿದ್ವಾಂಸನಾದರೂ ಹಾಸ್ಯದಲ್ಲಿ ಅತಿಚತುರನಾಗಿದ್ದನು. ಭಕ್ಷ್ಯಭೋಜ್ಯಾದಿಗಳಲ್ಲಂತೂ ಆತನೊಡನೆ ಸಮವಾಗಿ ಊಟಮಾಡುವವರೇ ಇಲ್ಲ. ಅನೇಕ ವಿಧವಾದ ಭಕ್ಷ್ಯಗಳನ್ನು ನಿತ್ಯವೂ ಲೆಕ್ಕಿಮಾಡುತ್ತ ತನಗೆ ಇಷ್ಟವಾದುದನ್ನು ಮನೆಯಲ್ಲಿ ಮಾಡಿಸುತ್ತ ಅದರ ವಿಷಯವಾಗಿ ಚಿತ್ರಕಲಾಪಗಳನ್ನು ನಡೆಸುತ್ತ ಎಲ್ಲರನ್ನೂ ನಗುವಂತೆ ಮಾಡುವುದೇ ಆತನ ಕೆಲಸವಾಗಿದ್ದಿತು. ಪುರಾಣವನ್ನು ಹೇಳುವುದರಲ್ಲಿ ಆತನಿಗೆ ಸಮಾನರೇ ಇಲ್ಲವೆಂದು ಹೇಳಬಹುದು.

ಆ ದಿನ ಪುರಾಣಶ್ರವಣಕ್ಕಾಗಿ ವಿಮಲೆಯ ಸಖಿಯರೂ ಬಂಧು-ಮಿತ್ರರೂ ಬಂದು ಸೇರಿದರು. ವಿಮಲೆಯು ಬಂದ ಸ್ತ್ರೀಜನರನ್ನು ಉಚಿತಾಸನದಲ್ಲಿ ಕುಳ್ಳಿರಿಸಿದಳು. ನಮ್ಮ ಶ್ಯಾಮಲಪಂಡಿತನು ತನ್ನ ಆಸನದ ಮೇಲೆ ಕುಳಿತುಕೊಂಡು ಪಂಚಾಂಗದ ಕಟ್ಟನ್ನು ಬಿಚ್ಚಿ ಅದರಲ್ಲಿದ್ದ ಸುಲೋಚನವನ್ನು ತೆಗೆದುಕೊಂಡು ಕರವಸ್ತ್ರದಿಂದ ಅದನ್ನು ಒರಿಸಿ ಧರಿಸಿದನು. ಆದರೆ ಆತನು, ಭಾಗವತದಲ್ಲಿ ಈ ದಿನ ಯಾವ ಭಾಗವನ್ನು ಓದಬೇಕೆಂಬುದನ್ನು ನಿಶ್ಚಯಿಸಿರಲಿಲ್ಲ. ಅಲ್ಲಿದ್ದ

ಸ್ತ್ರೀಯರಲ್ಲಿ ಕೆಲವರು ಶ್ಯಾಮಲಪಂಡಿತನನ್ನು ಕುರಿತು,— "ಪುರೋಹಿತರೆ, ಶ್ರೀಕೃಷ್ಣಾವತಾರದ ಕಥೆಯನ್ನು ಓದಿರಿ!" "ಶ್ರೀಕೃಷ್ಣಾವತಾರದ ಕಥೆಗಿಂತಲೂ ಪ್ರಹ್ಲಾದ ಚರಿತೆಯು ಅತ್ಯಂತ ಭಕ್ತಿರಸವಾಗಿರುವುದಲ್ಲವೆ?" ಆಗ ಮತ್ತೆ ಕೆಲವರು "ಸರಿ, ಪ್ರಹ್ಲಾದ ಚರಿತೆಯನ್ನು ನಾವು ಇದುವರೆಗೆ ಕೇಳಿಲ್ಲವೆ? ಸತ್ಯಭಾಮೆಯು ನರಕಾಸುರನನ್ನು ಕೊಂದಕಥೆಯು ಇನ್ನೂ ಸ್ವಾರಸ್ಯವಾಗಿರುವುದು." ಎಂದು ತಮ್ಮ ತಮ್ಮ ಉದ್ದೇಶಗಳನ್ನು ಹೊರಪಡಿಸಿದರು. "ಇದೆಲ್ಲಕ್ಕಿಂತಲೂ ಶ್ರೀಕೃಷ್ಣನು ಗೋಪಬಾಲರೊಡನೆ ಕೂಡಿ, ಉಪ್ಪಿನಕಾಯನ್ನು ತಿನ್ನುತ್ತ ಜೊಲ್ಲು ಸುರಿಸುತ್ತ ಆಟವಾಡಿದ ಕಥಾಭಾಗವನ್ನು ಓದುವುದರಲ್ಲಿ ನನಗೆ ತುಂಬಾ ಇಷ್ಟವು" ಎಂದು ನಮ್ಮ ಶ್ಯಾಮಲ ಪಂಡಿತನು ಕೂಡ ಹೇಳಿದನು. ಕಡೆಗೆ ವಿಮಲೆಯು ಅದಾವುದೂ ಬೇಡವೆಂದೂ ರುಕ್ಮಿಣೀ ಕಲ್ಯಾಣವನ್ನು ಓದಬೇಕೆಂದೂ ಹೇಳಲು, ಎಲ್ಲರೂ ಅದನ್ನೇ ಅನುಮೋದಿಸಿದರು.

ಶ್ಯಾಮಲಪಂಡಿತನು ರಾಗವನ್ನೆಳೆಯುತ್ತ ಗಣೇಶಸ್ತುತಿಯನ್ನು ಮಾಡಿ ಭಾಗವತಪಂ ಮಂತ್ರಪುಷ್ಪಾಕ್ಷತೆಗಳಿಂದ ರ್ಚಿಸಿ, ಪುರಾಣಕ್ಕಾರಂಭಿಸಿದನು. ಪ್ರತಿಪದ್ಯವನ್ನೂ ಓದುತ್ತ ತಲೆಯನ್ನು ಆಗಾಗ ಮೇಲಕ್ಕೆತ್ತಿ ಎರಡು ಕೈಗಳಿಂದಲೂ ಅಭಿನಯ ಮಾಡುತ್ತ ಎಲ್ಲರಿಗೂ ತಿಳಿಯುವಂತೆ ಅರ್ಥವನ್ನು ಹೇಳಲು ತೊಡಗಲುಮಾಡಿದನು. ಪುರಾಣಿಕನು ಮಾಡಿದ ವಿಕಾರವಾದ ಚೇಷ್ಟೆಗಳನ್ನು ನೋಡಿ ಕೆಲವರು ಬಾಲೆಯರು ನಗಲಾರಂಭಿಸಿದರು. ಆದರೆ ಪಂಡಿತನಿಗೆ ಸಂಗೀತದಲ್ಲಿಯೂ ಸ್ವಲ್ಪಮಟ್ಟಿಗೆ ಜ್ಞಾನವಿದ್ದುದರಿಂದ ಪ್ರತಿಪದ್ಯವನ್ನೂ ರಾಗದಿಂದ ಓದುತ್ತಿದ್ದಾಗ ಸ್ತ್ರೀಯರೆಲ್ಲರೂ ಆನಂದದಿಂದ ಕೇಳುತ್ತಿದ್ದರು. ರುಕ್ಮಿಯು ತನ್ನ ತಂಗಿಯಾದ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆ ಮಾಡಬೇಕೆಂದುಹಠ ಹಿಡಿದಿರುವುದು, ಆತನನ್ನು ಮದುವೆಯಾಗಲು ಇಷ್ಟವಿಲ್ಲದೆ ರುಕ್ಮಿಣಿಯು ನಿರಂತರವೂ ಚಿಂತಿಸುತ್ತ ಶ್ರೀಕೃಷ್ಣನನ್ನೇ ವಿವಾಹವಾಗಬೇಕೆಂದು ನಿದ್ರಾಹಾರಗಳನ್ನೊಲ್ಲದೆ ಸಂತಪಿಸುತ್ತಿರುವುದು, ಇವೇ ಮೊದಲಾದ ಕಥಾಭಾಗಗಳ ಪದ್ಯಗಳನ್ನು ಓದಿ ಪಂಡಿತನು ಅರ್ಥವನ್ನು ವಿವರಿಸುತ್ತಿರುವಾಗ ಅಲ್ಲಿದ್ದ ಕಾಂತಾಮಣಿಯರೆಲ್ಲರೂ ಕಣ್ಣೀರು ಸುರಿಸುತ್ತ ರುಕ್ಮಿಣೀದೇವಿಗೆ ಸಂಭವಿಸಿದ ಆಪತ್ತನ್ನು ಕೇಳಿ ಕಳವಳಿಸುತ್ತಿದ್ದರು. ಕಡೆಗೆ ತನಗಾವ ಉಪಾಯವೂ ತಿಳಿಯದುದರಿಂದ ರುಕ್ಮಿಣೀದೇವಿಯು ನಾಚಿಕೆಯನ್ನು ಬಿಟ್ಟು ಒಬ್ಬ ಬ್ರಾಹ್ಮಣನ ಸಂಗಡ ಶ್ರೀಕೃಷ್ಣನಿಗೆ ತನ್ನ ಸಮಾಚಾರವನ್ನು ಹೇಳಿಕಳುಹುವುದನ್ನೂ, ಆ ಬ್ರಾಹ್ಮಣನು ಶ್ರೀಕೃಷ್ಣನ ಬಳಿಗೆ ಹೋಗಿ ವಿಚಾರಕರವಾದ ರುಕ್ಮಿಣೀದೇವಿಯ ಸಂದೇಶವನ್ನು ಆತನಿಗೆ ತಿಳಿಸಿದುದನ್ನೂ ಕೇಳಿ ಅಲ್ಲಿದ್ದ ಕಾಂತೆಯರ ಸಹಜಕೋಮಲ ಹೃದಯಗಳು ಕರಗಿ ನೀರಾಗಿ ಹೋದವು. ಅನಂತರ ನಮ್ಮ ಶ್ಯಾಮಲ ಪಂಡಿತನು ಶಿಶುಪಾಲನು ರುಕ್ಮಿಣೀದೇವಿಯನ್ನು ಕೊಂಡೊಯ್ಯಬೇಕೆಂದು ಅಟ್ಟಹಾಸದಿಂದ ಸಕಲಸೇನಾಸಮೇತನಾಗಿ ಬರುವ ವಿಷಯವಿವರಣದಿಂದಕೂಡಿದ ಪದ್ಯವನ್ನು ಓದಿ. "ಈ ಪ್ರಕಾರವಾಗಿ ಆ ರುಕ್ಮಿಣೀದೇವಿಯನ್ನು ಮದುವೆಮಾಡಿಕೊಳ್ಳಬೇಕೆಂಬುವಂಥ ಉದ್ದೇಶದಿಂದ ಕೂಡಿದಂಥವನಾಗಿ ಒಳ್ಳೆಯ ಶೂರರಾದ ಭಟರಿಂದಲೂ ದೊಡ್ಡ ದೊಡ್ಡ ರಥಗಳಿಂದಲೂ, ಗಾಂಭೋಜಾದಿಯಲ್ಲಿ ಓಡುವಂತಹ ಕುದುರೆಗಳಿಂದಲೂ ಕೂಡಿದಂಥವನಾಗಿ ತನ್ನ ಸಮಸ್ತನಾದ ಬಂಧುಮಿತ್ರರಿಂದ ಕೂಡಿದಂಥವನಾಗಿ ಮಿತಿಮೀರಿದ ಗರ್ವದೊಡನೆ ಆ ಶಿಶುಪಾಲನು ಕುಂಡಿನೀಪುರಕ್ಕೆ ಬಂದಂಥವನಾದನಂತೇ...... ಏ... ಏ... ಏ..."

ಎಂದು ಕಡೆಯಲ್ಲಿ ದೀರ್ಘವಾಗಿ ರಾಗವನ್ನೆಳೆಯುತ್ತ ಇದ್ದುದನ್ನು ಸ್ವಲ್ಪವೂ, ಇಲ್ಲದುದನ್ನು ಸ್ವಲ್ಪವೂ ಸೇರಿಸಿ ಅರ್ಥವನ್ನು ಹೇಳಿದನು. ಹೀಗೆ ಹೇಳುತ್ತ ಕ್ರಮಕ್ರಮವಾಗಿ ಕೃಷ್ಣನ ಆಗಮನವನ್ನೂ ರುಕ್ಮಿಣಿಯ ವಿವಾಹವನ್ನೂ ಮುಗಿಸಿ ನಮ್ಮ ಶ್ಯಾಮಲಪಂಡಿತನು ಮಂಗಳ ಶ್ಲೋಕವನ್ನು ಹೇಳಿ ಸುಮ್ಮನಾದನು. ವಿಮಲಾದೇವಿಯು ಮೇಲಕ್ಕೆದ್ದು ನಮಸ್ಕರಿಸಿ, ಮೊದಲು ಶ್ಯಾಮಲಪಂಡಿತನಿಗೆ ದಕ್ಷಿಣೆತಾಂಬೂಲಗಳನ್ನೊಪ್ಪಿಸಿ, ಆ ಬಳಿಕ ಅಲ್ಲಿದ್ದ ಕಾಂತಾಮಣಿಯರೆಲ್ಲರಿಗೂ ಪುಷ್ಪತಾಂಬೂಲಗಳನ್ನು ಕೊಟ್ಟು ಬೀಳ್ಕೊಟ್ಟಳು.

ಪುರಾಣಶ್ರವಣವಾದುದು ಮೊದಲು ವಿಮಲೆಯು ಏನೇನನ್ನೋ ಯೋಚಿಸುತ್ತಿದ್ದಳು. ಆಕೆಯ ದುಃಖಲಕ್ಷಣವನ್ನು ನೋಡಿ ಸಖಿಯರು—"ಯೋಚಿಸುತ್ತಿರುವುದೇನೆಂ"ದು ಕೇಳಿದರೂ ಆಕೆ ಪ್ರತ್ಯುತ್ತರವನ್ನು ಕೊಡುತ್ತಿರಲಿಲ್ಲ. ಆಕೆ, ಬಾರಿಬಾರಿಗೂ ರುಕ್ಮಿಣೀದೇವಿಯು ಬ್ರಾಹ್ಮಣನೊಡನೆ ಶ್ರೀಕೃಷ್ಣನಿಗೆ ಹೇಳಿಕಳುಹಿದ ಸಮಾಚಾರವನ್ನು ಸ್ಮರಿಸಿಕೊಳ್ಳುವುದರಲ್ಲಿಯೇ ಆ ದಿನವನ್ನು ಕಳೆದಳು. ಆ ರಾತ್ರಿ ಭೋಜನಾನಂತರ ಶಯ್ಯಾಗೃಹವನ್ನು ಪ್ರವೇಶಿಸಿ ಮಲಗಿದಳು. ಆದರೇನು? ಆವ ಕಾರಣದಿಂದಲೋ ನಿದ್ರೆ ಹತ್ತಲಿಲ್ಲ. ತನ್ನಲ್ಲಿ ತಾನೇ ದೀರ್ಘಾಲೋಚನೆ ಮಾಡುತ್ತ ಮಾತುಮಾತಿಗೂ ಹಾಸಿಗೆಯಿಂದೇಳುತ್ತ ಎರಡು ಜಾವಗಳ ವರೆಗೂ ಎಚ್ಚರವಾಗಿದ್ದು ಆ ಬಳಿಕ ನಿದ್ರೆಹೋದಳು. ಬೆಳಗಿನ ಜಾವದಲ್ಲಿ ಇನ್ನೂ ಕತ್ತಲೆಯಾಗಿರುವಾಗಲೇ ಎದ್ದು. ಪ್ರಾತಃಕೃತ್ಯಗಳನ್ನು ಮಾಡಿಕೊಂಡು ತನ್ನ ಸಖಿಯಾದ ಪದ್ಮೆಯು ಮಲಗಿದ್ದ ಮನೆಗೆ ಬಂದು ಅವಳನ್ನೂ ಎಬ್ಬಿಸಿದಳು. ಪದ್ಮೆಯು ಗಾಬ

ರಿಯಿಂದೆದ್ದು ವಿಮಲೆಯನ್ನು ನೋಡಿ— "ವಿಮಲಾ, ಇದೇ ನಿದು! ಇಷ್ಟು ಬೇಗ ಎದ್ದು ಬಂದೆ?"

ವಿಮಲಾ:— ಎಷ್ಟು ಹೊತ್ತಾಗಿದೆಯೋ ನೋಡಬಾರದೆ? ಇನ್ನಾದರೂ ಏಳು ಪದ್ಮಾ!

ಪದ್ಮೆ:— ಹೊತ್ತೇನಾಗಿರುವುದು? ಇನ್ನೂ ಕೋಳಿಯೂ ಕೂಗಿಲ್ಲ.

ವಿಮಲಾ:— ಹೇಗಾದರೂ ಆಗಲಿ, ಪದ್ಮಾ! ನಿನ್ನೊಡನೆ ಕೆಲವು ಮಾತುಗಳನ್ನಾಡಬೇಕಾಗಿರುವುದು; ಅತ್ಯಂತ ರಹಸ್ಯವಾದುದರಿಂದ ಮತ್ತಾರಾದರೂ ಕೇಳುವರೆಂದು ಶಂಕಿಸಿ ಈಗಲೇ ಬಂದೆನು.

ವಿಮಲೆಯ ಮಾತಿನಿಂದ ಪದ್ಮೆಯು ಕುತೂಹಲಗೊಂಡು ಥಟ್ಟನೆದ್ದು ಕುಳಿತು— "ವಿಮಲಾ! ಹಾಗಾದರೆ ರಹಸ್ಯವೇನಿರುವುದೋ ಹೇಳು; ಇದೇ ಸುಸಮಯವು.

ವಿಮಲಾ:— ಆದುದರಿಂದಲೇ ಈಗ ಬಂದುದು: ಇರಲಿ, ಪದ್ಮೆ! ನೀನ್ನೆ ರುಕ್ಮಿಣೀ ಕಲ್ಯಾಣ ವೃತ್ತಾಂತವನ್ನೆಲ್ಲ ಸಮಗ್ರವಾಗಿ ಕೇಳಿದೆಯಷ್ಟೆ?"

ಪದ್ಮೆ:— ಕೇಳಿದೆನು; ಈಗ ಅದರ ಮಾತೇಕೆ?

ವಿಮಲಾ.— ಏನೂ ಇಲ್ಲ, ರುಕ್ಮಿಣಿಯು ಕನ್ಯೆಯಾಗಿದ್ದು ತನಗೆ ಎಂತಹ ಆಪತ್ತು ಸಂಭವಿಸಿದರೂ ಪರಪುರುಷನಿಗೆ ಹಾಗೆ ಓಲೆಯನ್ನು ಬರೆದು ಕಳುಹಬಹುದೆ?

ಪದ್ಮೆ:— ಇದೇ ಒಂದು ದೊಡ್ಡ ರಹಸ್ಯವೊ? ರಹಸ್ಯವೆಂದರೆ, ತುಂಬಾ ಕುತೂಹಲಗೊಂಡಿದ್ದೆನು. ಚೆನ್ನಾಯಿತು. ಇಷ್ಟಕ್ಕೇ.........

ವಿಮಲೆ:— ಪದ್ಮೆ! ಅಷ್ಟರಲ್ಲೇ ಆತುರಪಡುವೆಯೇಕೆ? ಸಮಗ್ರವಾಗಿ ಕೇಳಬಾರದೇ?

ಪದ್ಮೆ:— ಹಾಗೂ ಆಗಲಿ, ಹೇಳು; ರುಕ್ಮಿಣಿಯು ಕೃಷ್ಣನಿಗೆ ಸಂದೇಶವನ್ನು ಕಳುಹಿದುದರಲ್ಲಿ ತಪ್ಪೇನಿದೆ?

ವಿಮಲಾ:— ತಪ್ಪೆಂದು ಹೇಳಲಿಲ್ಲ. ಸ್ವಲ್ಪವೂ ನಾಚಿಕೆಯಿಲ್ಲದೆ, ಶತ್ರುಗಳನ್ನೋಡಿಸಿ ತನ್ನನ್ನು ಮದುವೆಮಾಡಿಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿಕಳುಹುವುದಕ್ಕೆ ಆಕೆ, ಹೆಂಗಸಲ್ಲವೆ?

ಪದ್ಮೆ:— ಅದರಲ್ಲಿ ಬಾಧಕವೇನು? ತನ್ನ ಹೃದಯವು ಯಾರನ್ನು ಲಗ್ನವಾಗಿರುವುದೋ ಆತನೇ ತನಗೆ ನಾಥನಲ್ಲವೇ? ನಾಥನಿದಿರಿಗೆ ತನ್ನ ಕಷ್ಟವನ್ನು ಹೇಳಿ ತನ್ನನ್ನು ಕಾಪಾಡಬೇಕೆಂದು ಪ್ರಾರ್ಥಿಸದೆ ಮತ್ತೇನು ಮಾಡಬೇಕು? ಧರ್ಮಕ್ಕೆ ಹಾನಿಯುಂಟು ಮಾಡಿಕೊಳ್ಳಬೇಕೇ? ರುಕ್ಮಿಣಿಯೊಬ್ಬಳೇ ಹಾಗೆ ಮಾಡಲಿಲ್ಲ. ಪೂರ್ವದಲ್ಲಿ ಇನ್ನೂ ಎಷ್ಟೋ ಮಂದಿ ಕನ್ಯಕೆಯರು ತಾವು ವರಿಸಿದ ಪುರುಷರಿಗೆ ರಹಸ್ಯವಾಗಿ ಬರೆದಿರುವಂತೆ ನಮ್ಮ ಪುರಾಣಗಳಲ್ಲಿ ಎಷ್ಟೋ ಕಥೆಗಳಿವೆ. ಆದುದರಿಂದ ಇದು ಪೂರ್ವಾಚಾರವೇ ಹೊರತು ಹೊಸದಾಗಿ ಬಂದುದಲ್ಲ. ಇದು ಎಷ್ಟುಮಾತ್ರಕ್ಕೂ ದೋಷವೆನಿಸುವುದಿಲ್ಲ.

ಈ ಮಾತನ್ನು ಕೇಳಿ ವಿಮಲೆಯು ಪ್ರತಿಮಾತನಾಡದೆ ಅವನತಮುಖಿಯಾಗಿ ಏನನ್ನೋ ಯೋಚಿಸುತ್ತಿದ್ದಳು. ಪದ್ಮೆಯು ಇವಳ ಮನೋಗತವನ್ನು ಊಹಿಸಿ ತನ್ನಲ್ಲಿಯೇ ನಗುತ್ತ "ವಿಮಲಾ! ಏನನ್ನು ಚಿಂತಿಸುವೆ? ಹೇಳಬಾರದೆ"

ವಿಮಲಾ:— ಸಖಿ! ಚಿಂತಿಸುತ್ತಿರುವ ಕಾರ್ಯವು ನಿನ್ನಿಂದಲೇ ಆಗಬೇಕಾಗಿರುವಾಗ ನಿನಗ ಹೇಳದಿರಲಾದೀತೆ?

ಪದ್ಮೆ:— ಅದೇನು? ನನ್ನಿಂದ ಆಗುವಂತಹ ರಹಸ್ಯ ಕಾರ್ಯವು? ಅದನ್ನೂ ಹೇಳು ಕೇಳುವ!

ವಿಮಲಾ:— ಸಖಿ! ಇದೇಕೆ ಹೀಗೆ ಹೇಳುವೆ! ಈವರೆಗೆ ನಾನು ಯಾವ ಕಾರ್ಯವನ್ನು ಹೇಳಿದರೂ ತಪ್ಪದೆ ಮಾಡುತ್ತಿದ್ದೆ! ಇಂದು ಹೀಗೆ ಉತ್ತರವಿತ್ತರೆ ನಾನೇನು ಹೇಳಲಿ? ಚಂದ್ರಾವತಿದೇವಿ.."

ಪದ್ಮೆ:— ಸಾಕು, ಸಾಕು. ಪ್ರಿಯಸಖಿ! ಆ ಸ್ತುತಿವಚನವು ಈಗ ಬೇಕಾಗಿಲ್ಲ. ಹಿಂದಿನ-ಅಥವಾ ಎಂದಿನ ಪದ್ಮೆಯೇ ನಾನಾಗಿರುವೆನೆಂದೂ ಇಂದೇನೂ ಬದಲಾಯಿಸಿಲ್ಲವೆಂದೂ ನಂಬಿ ಆವ ರಹಸ್ಯವನ್ನಾದರೂ ಹೇಳು. ನಿರ್ವಂಚನೆಯಿಂದ ನಡೆಸುವೆನು.

ವಿಮಲಾ:— ಪದ್ಮೆ! ನಾನೊಂದು ಕಾಗದವನ್ನು ಬರೆದು ಕೊಡುವೆನು. ಅದನ್ನು ನೀನು ಆತನಿಗೆ ಮುಟ್ಟಿಸಬೇಕು.

ಪದ್ಮೆ:— ಆತನೆಂದರೆ ಯಾರು?

ವಿಮಲಾ:— ಈವರೆಗೆ ನಾವು ಯಾವಾತನ ವಿಷಯವಾಗಿ ಮಾತನಾಡುತ್ತಿದ್ದೆವೋ ಆತನೇ.

ಪದ್ಮೆ:— (ನಕ್ಕು) ನನಗೆ ಅರ್ಥವಾಗಲಿಲ್ಲ. ಸ್ಪಷ್ಟವಾಗಿ ಹೇಳು.

ವಿಮಲಾ:— ಯಾವ ರಾಜಪುಂಗವನ ಹೆಸರನ್ನು ಹೇಳಿ ನೀನು ನನ್ನನ್ನು ಪರಿಹಾಸ ಮಾಡುತ್ತಿರುವೆಯೋ ಆ ರಾಜಪುಂಗವನು—ಈಗಲಾದರೂ ಅರ್ಥವಾಯಿತೇ?

ಪದ್ಮೆ:— ನನಗೆ ಅರ್ಥಬೋಧೆಯಾಗಲಿಲ್ಲ. ಹೆಸರನ್ನು ಮರೆತಿರುವೆನು. ನಿನಗೆ ನೆನಪಿದ್ದರೆ ಹೇಳು.

ವಿಮಲಾ:— ಆತನ ಹೆಸರನ್ನು ನಾನು ಹೇಳಲಾರೆನು.? ಆದರೆ ಇಷ್ಟು ಹೇಳಬಲ್ಲೆ?

ಪದ್ಮೆ:— ಎಷ್ಟು?

ವಿಮಲಾ:— ಉದಯಪುರಾಧೀಶನೆಂದು ಮಾತ್ರ.

ಪದ್ಮೆ:— ಭಲೆ! ವಿಮಲಾ? ಈಗಲೇ ನಿನಗಿಷ್ಟು ಲಜ್ಜೆಯೇ

ಹೆಸರು ಹೇಳಿದ ಮಾತ್ರಕ್ಕೆ ಆಗುವುದೇನು? ಉದಯಪುರಾಧೀಶನಾದ ರಾಜಸಿಂಹನು ನಿನ್ನನ್ನು ಈಗಲೇ ಮದುವೆಯಾದನೇನು?

ವಿಮಲಾ:— (ಲಜ್ಜೆಯಿಂದ ಕೆಂಪೇರಿದ ಮುಖವನ್ನು ತಗ್ಗಿಸಿ) ಪದ್ಮೆ! ಸಾಕು, ಪರಿಹಾಸವನ್ನು ನಿಲ್ಲಿಸು. ನನ್ನ ಮಾತಿಗೆ ನಗುವ ಹಾಗಿದ್ದರೆ ಆಚೆಗೆ ಹೊರಟು ಹೋಗು.

ಪದ್ಮೆ:— (ಮತ್ತಷ್ಟು ನಕ್ಕು) ವಿಮಲಾ! ನಿನ್ನ ಕೋಪದ ಅಳವೆಷ್ಟೆಂಬುದನ್ನು ನಾನೂ ಬಲ್ಲೆ. ನಿಜವಾಗಿಯೂ ರಾಜಸಿಂಹನೇ ಬಂದು ನಿನ್ನ ಕೈಹಿಡಿದಾಗ ನಾನು ಹೇಗಾದರೂ ಹೊರಗೆ ಹೋಗಲೇ ಬೇಕು. ಈಗಲೇ ಹೋಗೆನ್ನುವಿಯೇಕೆ?

ವಿಮಲಾ:— ಪದ್ಮೆ! ದಯೆಯಿಟ್ಟು ಇನ್ನು ಹಾಸ್ಯವನ್ನು ನಿಲ್ಲಿಸಿ ನನ್ನ ಮಾತಿಗೆ ಉತ್ತರವನ್ನು ಕೊಡು.

ಪದ್ಮೆ:— ಕೋಪಗೊಳ್ಳಬೇಡ, ಹೇಳು. ಹಾಸ್ಯವನ್ನು ಬಿಟ್ಟೆನು.

ವಿಮಲಾ:— ಪದ್ಮಾ, ಇನ್ನು ಬಚ್ಚಿಡುವುದೇಕೆ? ಆದಿನ ಅರಣ್ಯದಲ್ಲಿ ಆತನನ್ನು ನೋಡಿದುದು ಮೊದಲು ನನ್ನ ಹೃದಯವು ಆತನನ್ನೇ ಸೇರಿ ಹೋಗಿರುವುದು. ಆ ನರಪುಂಗವನನ್ನು ಹೊರತು ಇತರರನ್ನು ಕೈಹಿಡಿಯುವುದಿಲ್ಲವೆಂದು ಅಂದೇ ನಾನು ನಿಶ್ಚಯಿಸಿರುವೆನು. ನಮ್ಮ ವೃತ್ತಾಂತವನ್ನು ಆತನು ತಿಳಿದರೆ ತಪ್ಪದೆ ನಮ್ಮ ತಂದೆಗೆ ಸಹಾಯಕನಾಗಿ ಬಂದು ಶತ್ರುಗಳನ್ನು ಓಡಿಸಿ ನಮ್ಮನ್ನು ಸಂರಕ್ಷಿಸುವನು. ಇದಕ್ಕೆ ನೀನೇನು ಹೇಳುವೆ?

ಪದ್ಮಾ:— ಹೇಳುವುದೇನು? ಬರೆಯುವುದೇನಿದ್ದರೂ ಬರೆ! ಹೇಗಾದರೂ ನಾನದನ್ನು ರಾಜಸಿಂಹನಿಗೆ ತಲಪಿಸುವೆನು.

ವಿಮಲಾ:— ತಲಪಿಸುವೆನೆಂದು ಸುಮ್ಮನೆ ಹೇಳಿದರಾಗದು ಶತ್ರುಗಳು ನಮ್ಮ ಪಟ್ಟಣವನ್ನು ಮುತ್ತಿರುವರು. ಆದುದರಿಂದ ನಮ್ಮ ಕಾಗದವು ಅವರಿಗೆ ಸಿಕ್ಕದಂತಿರಬೇಕು.

ಪದ್ಮಾ:- ಆ ಶಂಕೆ ನಿನಗೆ ಬೇಡ; ಸುಮ್ಮನೆ ಬರೆ! ಉಳಿದುದನ್ನು ನಾನು ನೋಡಿಕೊಳ್ಳುವೆನು.

ಇಬ್ಬರೂ ಹೀಗೆ ಸಂಭಾಷಿಸುತ್ತಿರಲು, ವಿಮಲಾದೇವಿಯ ಸಖಿಯರಲ್ಲಿ ಒಬ್ಬಳಾದ ಕುಂದೆಯೆಂಬವಳು ಅಲ್ಲಿಗೆ ಬಂದಳು. ಆಕೆಯಲ್ಲಿ ಎಂತಹ ರಹಸ್ಯವೂ ನಿಲ್ಲಲಾರದು. ತನಗೆ ತಿಳಿದ ಸಮಾಚಾರವನ್ನು ಎಲ್ಲರಿಗೂ ತಿಳಿಸಿದಹೊರತು ಆಕೆಗೆ ನಿದ್ರೆಯೇ ಬರುತ್ತಿರಲಿಲ್ಲ. ಪುರಾಣಗಳಲ್ಲಿ ಪ್ರಸಿದ್ಧನಾದ ನಾರದ ಮಹರ್ಷಿಗೆ ಆಕೆ ಶಿಷ್ಯಳೆಂದು ಹೇಳಲು ಸ್ವಲ್ಪವೂ ಸಂದೇಹಪಡಬೇಕಾಗಿಲ್ಲ. ಈ ಕಾರಣದಿಂದಲೇ ವಿಮಲೆಯೂ ಪದ್ಮೆಯೂ ಅವಳೊಡನೆ ಅವ ರಹಸ್ಯವನ್ನೂ ಹೇಳುತ್ತಿರಲಿಲ್ಲ. ಕುಂದೆಯು ಅಲ್ಲಿಗೆ ಬಂದ ಕೂಡಲೆ ಸ್ವೇಚ್ಛೆಯಾಗಿ ಮಾತನಾಡುತ್ತಿದ್ದ ಅವರಿಬ್ಬರೂ ತತ್ಕ್ಷಣವೇ ಸುಮ್ಮನಾದರು. ಆಗ ಕುಂದೆಯು ಕೋಪಗೊಂಡು,— “ವಿಮಲಾ! ನನ್ನೊಡನೆ ರಹಸ್ಯಗಳನ್ನು ಹೇಳಬೇಡಮ್ಮ; ನಿನ್ನೊಡನೆ ಸ್ನೇಹ ಮಾಡಿದುದಕ್ಕೆ ಚನ್ನಾಗಿ ಆದರಿಸಿದೆ. ಅದೇನು? ನಾನು ಬಂದ ಕೂಡಲೆ, ಮಾತನ್ನು ನಿಲ್ಲಿಸಬೇಕೋ? ಸಾಕು–ಸಾಕು?” ಎಂದು ಹೇಳಿ ಹೊರಟುಹೋದಳು. ಕುಂದೆ ಹೊರಟುಹೋದ ಮೇಲೆ ವಿಮಲೆ ಪದ್ಮೆಯರೂ ಹೊರಟುಹೋದರು.

ಆದಿನ ಮಧ್ಯಾಹ್ನ ಪದ್ಮೆಯು ಕಾಗದವನ್ನು ಬರೆಯುವಂತೆ ವಿಮಲೆಗೆ ಹೇಳಿದ್ದಳು. ವಿಮಲೆಯು ಕಾಗದವನ್ನೂ ಕಡ್ಡಿಯನ್ನೂ ಮಸಿಯನ್ನೂ ತೆಗೆದುಕೊಂಡು ಬರೆಯಲು ಉಪಕ್ರಮಿಸಿದಳು. ಯಾವ ರೀತಿಯಿಂದ ಬರೆಯಬೇಕೆಂದು ನಿರ್ಧರಿಸಲಾರದೆ ಆಗಾಗ ಬರೆದ ಕಾಗದಗಳನ್ನು ಹರಿದು ಹಾಕುತ್ತ ಪರ ಪುರುಷನಿಗೆ ಕಾಗದವನ್ನು ಹೇಗೆ ಬರೆಯಲಿ? ಎಂದು ಸಲ್ಪ ಹೊತ್ತು ಶಂಕಿಸುತ್ತ ಕಡೆಗೆ ದೃಢನಿಶ್ಚಯಳಾಗಿ ಈ ವಿಧವಾಗಿ ಬರೆದಳು—

“ಶ್ರೀಮನ್ಮಹಾರಾಜಾಧಿರಾಜಶ್ರೀ ಉದಯಪುರಾಧೀಶ ರಾಜಸಿಂಹ ಮಹಾರಾಜರವರ ಸನ್ನಿಧಿಯಲ್ಲಿ. ಅನಂತ ಪ್ರಣಾಮಪೂರ್ವಕ ವಿಜ್ಞಾಪನೆಗಳು.

ಪರಮತ ದ್ವೇಷಿಯಾದ ಔರಂಗಜೇಬನು ನನ್ನನ್ನು ಕರದೊಯ್ಯಲು ತನ್ನ ಸೈನ್ಯವನ್ನು ಕಳುಹಿರುವನು. ವಿಧರ್ಮಿಗಳಾದ ಯವನರು ನಮ್ಮ ರಾಜಧಾನಿಯನ್ನು ಮುತ್ತಿರುವರು. ಕ್ಷತ್ರಿಯ ರಾಜರನ್ನೆಲ್ಲಾ ಗೆದ್ದು ತನ್ನ ಸೇವಕರನ್ನಾಗಿ ಮಾಡಿ ಬಲಾತ್ಕಾರದಿಂದ ನನ್ನನ್ನು ಡಿಲ್ಲಿಗೆ ಕರೆದುಕೊಂಡು ಹೋಗುವಂತೆ ನಮ್ಮ ತಂದೆಗೆ ಆತನು ಬರೆದಿರುವನು. ಹಾ! ರಾಜಮಾರ್ತಾಂಡ! ಪವಿತ್ರ ರಜಪೂತ ವಂಶದಲ್ಲಿ ಹುಟ್ಟಿದ ವಿಮಲೆಯು ಓರ್ವ ಯವನನನ್ನು ಮದುವೆಯಾಗಬೇಕೆಂದರೆ ಇದಕ್ಕೂ ಹೆಚ್ಚಿದ ಅಪಮಾನ ಕ್ಲೇಶಗಳೂ ಇರುವುವೆ? ರಜಪುತ್ರಸ್ಥಾನದಲ್ಲಿ ಇಷ್ಟು ಮಂದಿ ವೀರಕ್ಷತ್ರಿಯರೆಂದು ಹೆಸರ್ಗೊಂಡವರಿದ್ದರೂ ಯವನನ ಬಾಧೆಯಿಂದ ಅಬಲೆಯನ್ನು ಉದ್ಧರಿಸುವವರೇ ಒಬ್ಬರೂ ಇರಲಾರರೇ?

ರಾಜಾಧಿರಾಜ! ಹೀಗೆ ಹೇಳಿದೆನೆಂದು ಆಗ್ರಹಿಸಬಾರದು. ವಿಪತ್ತಿನಲ್ಲಿ ಸಿಕ್ಕಿ ದುಃಖಾತಿಶಯದಿಂದ ಸ್ವಲ್ಪ ಕಠಿನವಾಗಿ ಬರೆದಿರುವೆನು. ಇದು ತಮಗೆ ಅನ್ವಯಿಸತಕ್ಕುದಲ್ಲ. ಸನ್ನಿಧಾನದಲ್ಲಿ ಈ ಅಬಲೆಯು ಪ್ರಾರ್ಥಿಸುವುದಿಷ್ಟೇ? ಅನನ್ಯಗತಿಕಳಾಗಿ ಶರಣು ಹೊಕ್ಕ ನಾರಿಯನ್ನು ಉದ್ಧರಿಸಲು ಸಕಾಲದಲ್ಲಿ ಸೈನ್ಯಸಮೇತನಾಗಿ ಬಂದು, ರಾಜರಾಜೇಶ್ವರನಾದ

ಶ್ರೀಕೃಷ್ಣದೇವನು ರುಕ್ಮಿಣೀದೇವಿಯ ಆಪತ್ತನ್ನು ಪರಿಹರಿಸಿ ಉದ್ಧರಿಸಿದಂತೆ ರಾಜಾಧಿರಾಜರಾದ ತಾವೂ ಈ ರೂಪನಗರದ ರಾಜಕನ್ಯೆಯ ಕಷ್ಟವನ್ನು ಪರಿಹರಿಸಿ ಉದ್ಧರಿಸಬೇಕು. ಇಲ್ಲವಾದರೆ ರಜಪೂತ ಮಾತೆಯ ಸಂತಾನವು ನಿರ್ವೀರ್ಯವಾಯಿತೆಂದೂ ನಾರೀ ಧರ್ಮವನ್ನು ಕಾಪಾಡಬಲ್ಲ ಧೀರ ವೀರರಾರೂ ಇಲ್ಲವೆಂದೂ ಭಾವಿಸಿ ಧ್ಯೇಯನಾದ ನಮ್ಮ ಅಂತಿಮ ಅಗ್ನಿದೇವನನ್ನೇ ಆಶ್ರಯಿಸಿ ನನ್ನ ಧರ್ಮವನ್ನು ಕಾಪಾಡಿಕೊಳ್ಳುವೆನು. ಇದಕ್ಕೂ ಹೆಚ್ಚಿಗೆ ಬರೆಯಲಾರೆನು.

ಇತಿ ವಿಮಲಾ "

ಹೀಗೆ ಬರೆದ ಪತ್ರಿಕೆಯನ್ನು ಪದ್ಮೆಯು ಕಯ್ಗೆ ಕೊಟ್ಟಳು.

ಕುಂದೆಯು, ಪದ್ಮೆಯೆನ್ನೂ ವಿಮಲೆಯನ್ನೂ ಬಿಟ್ಟು ತನಗೆ ರಹಸ್ಯವಾವುದೂ ತಿಳಿಯುವುದಿಲ್ಲವೆಂದು ಭಾವಿಸಿ, ಅಲ್ಲಿ ನಿಲ್ಲದೆ ಉಪ್ಪರಿಗೆಯ ಮೇಲೇರಿ ಒಂದು ಮಂಚದ ಮೇಲೆ ಕುಳಿತುಕೊಂಡು ಶತ್ರು ಸೈನ್ಯವನ್ನು ನೋಡುತ್ತಿದ್ದಳು. ಅಗ ಎಂದಿನಂತೆ ಪಾರಿವಾಳವು ಕಿಟಕಿಯಲ್ಲಿ ಕುಳಿತುಕೊಂಡಿತು. ಕುಂದೆಯು ಪಾರಿವಾಳವನ್ನು ನೋಡಿದ ಕೂಡಲೆ ಅದನ್ನು ಹಿಡಿದುಕೊಂಡು ಅದರ ಕೊರಳಿಗೆ ಕಟ್ಟಿದ ಕಾಗದವನ್ನು ಬಿಚ್ಚಿ ಓದಿಕೊಂಡು ಅದರಲ್ಲಿದ್ದ ರಹಸ್ಯವನ್ನೆಲ್ಲ ಗ್ರಹಿಸಿ, ಪದ್ಮೆಯನ್ನು ಮೋಸಪಡಿಸಬೇಕೆಂದು ನಿಶ್ಚಯಿಸಿ ಆ ಕಾಗದದಲ್ಲಿದ್ದ ವಿಷಯಗಳಿಗೆಲ್ಲಾ ಪ್ರತಿಕೂಲವಾಗಿ ಉತ್ತರವನ್ನು ಬರೆದು ಪುನಃ ಪಾರಿವಾಳವನ್ನು ಬಿಟ್ಟು ಬಿಟ್ಟಳು. ತನ್ನ ಅಭ್ಯಾಸದಂತೆ ಆ ಪಾರಿವಾಳವು ಗಗನಮಾರ್ಗದಲ್ಲಿ ಹಾರಿ ಹೋಯಿತು. ಕುಂದೆಯು ಮಹಡಿಯಿಂದ ಕೆಳಕ್ಕಿಳಿದು ಬಂದು ಪದ್ಮೆಯ ಮುಂದೆ ನಿಂತು, ತಲೆಯನ್ನು ಕೊಂಕಿಸುತ್ತ "ನೀವು ಹೇಳದಿದ್ದರೂ ನಿಮ್ಮ ರಹಸ್ಯಗಳೆಲ್ಲವೂ ತನಗೆ ತಾನೆ ನನಗೆ ತಿಳಿದುವು. ಈಗ ಏನು ಮಾಡುವಿರಿ? " ಎಂದಳು. ಅದಕ್ಕೆ ಪದ್ಮೆಯು ಆದರದಿಂದ, "ಕುಂದಾ! ನೀನು ಪ್ರಕಾರಾಂತವಾಗಿ ಭಾವಿಸಬಾರದು. ನಿನ್ನ ಮೇಲೆ ನಮಗೆ ಸಂಶಯವೆಳ್ಳಷ್ಟೂ ಇಲ್ಲ. ಈಗಲೇ ಹೇಳಿದರೆ ರಹಸ್ಯಗಳು ಭೇದಿಸಲ್ಪಡುವವೆಂದು ಹೇಳಲಿಲ್ಲ. ಕಾರ್ಯವು ಫಲಿಸಿದ ಮೇಲೆ ಎಲ್ಲವನ್ನೂ ನೀನೇ ತಿಳಿಯುವೆ. ಇಷ್ಟರಲ್ಲಿ ಅವಸರವೇನು? ಎಂದು ಹೇಳಿ ಹೊರಗೆ ಹೋದಳು.

ಆದಿನ ರಾತ್ರಿ ಮೂವರೂ ಎಂದಿನಂತೆ ಭೋಜನವನ್ನು ಮಾಡಿ ಶಯನಿಸಿದರು. ಆದರೆ ಕುಂದೆಯು ಮಾತ್ರ ನಿದ್ದೆ ಮಾಡುವವಳಂತೆ ನಟಿಸುತ್ತ ಸಮಾಚಾರವೇನಾದರೂ ತಿಳಿಯುವುದೇನೋ ಎಂದು ಎಚ್ಚರವಾಗಿದ್ದಳು. ಪದ್ಮೆಯು ಸಹ ಎಚ್ಚರವಾಗಿದ್ದು ಆದಿನ ಶುಕ್ರವಾರವಾದುದರಿಂದ ಶಿವಸಿಂಗನು ಬರುವನೆಂದು ಮೆಲ್ಲಗೆ ಮೇಲಕ್ಕೆದ್ದು ಕುಂದೆಗೆ ತಿಳಿಯದಂತೆ ಮಹಡಿಯ ಮೇಲಕ್ಕೆ ಹೋದಳು. ಅನಂತರ ಕುಂದೆಯು, ಪದ್ಮೆಯು ಅಲ್ಲಿ ಇಲ್ಲದಿದ್ದುದನ್ನು ನೋಡಿ, ತಾನೂ ಮಹಡಿಯನ್ನೇರಿ ರಹಸ್ಯವಾಗಿ ಒಂದು ಮೂಲೆಯಲ್ಲಿ ಕುಳಿತುಕೊಂಡಳು. ಅನಂತರ ಶಿವಸಿಂಗನು ಎಂದಿನಂತೆ ಬಂದು ಹಗ್ಗದಿಂದ ಮೇಲಕ್ಕೇರಿ ಹತ್ತಿರದಲ್ಲಿ ಕುಳಿತಿದ್ದ ಪದ್ಮೆಯ ಕೈಹಿಡಿದುಕೊಂಡನು. ಪದ್ಮೆಯು ಆತನನ್ನಾದರಿಸಿ ಆತನೊಡನೆ ಮಾತನಾಡಲು ಉಪಕ್ರಮಿಸಲು ಶಿವಸಿಂಗನು ಆಕೆಯನ್ನು ಕುರಿತು ಹೀಗೆ ಪ್ರಶ್ನೆ ಮಾಡಿದನು—

"ಪದ್ಮಾ! ಪಾರಿವಾಳವನ್ನು ನೋಡಿದೆಯಾ? "

ಪದ್ಮೆ:— ಹಾಗೆಂದರೇನು? ಪಾರಿವಾಳವು ಬರಲೇ ಇಲ್ಲವಲ್ಲ.

ಶಿವಸಿಂಗ:— ಇದೇನು, ಹೀಗೆನ್ನುವೆ? ಈ ದಿನ ಬರಲಾಗುವುದಿಲ್ಲವೆಂದೂ ಮುಂದಿನ ಶುಕ್ರವಾರ ಬರುವೆನೆಂದೂ ನನಗೋಸ್ಕರ ಕಾದಿರಬೇಡವೆಂದೂ ಕಾಗದವನ್ನು ಬರೆದು ಪಾರಿವಾಳದೊಡನೆ ಕಳುಹಿದೆನು. ಆದರೆ ಎಷ್ಟು ಹೊತ್ತು ಕಾದಿದ್ದರೂ ಪಾರಿವಾಳವು ಬರಲಿಲ್ಲವಾದುದರಿಂದ ಕಾಗದವು ನಿನಗೆ ಸೇರಿತೋ ಇಲ್ಲವೋ ಎಂದು ಸಂದೇಹದಿಂದ ಹೊರಟು ಬಂದೆನು. "

ಪದ್ಮೆ:— ಅಯ್ಯೋ ಪಾಪ! ಆ ಪಾರಿವಾಳವು ಎಲ್ಲಿ ಹೋಯಿತೋ ತಿಳಿಯುವುದೆಂತು?

ಶಿವಸಿಂಗ:— ಚಿಕ್ಕಂದಿನಿಂದಲೂ ಅತಿ ಪ್ರೀತಿಯಿಂದ ಸಾಕಿದ ಪಾರಿವಾಳವು ಹೋದುದು ನನ್ನ ಪ್ರಾಣವೇ ಹೋದಂತಿರುವುದು.

ಪದ್ಮೆ:— ಎಲ್ಲಿಯಾದರೂ ಹುಡುಕಿಸಿದರೆ ಸಿಕ್ಕುವುದು. ಇದೆಲ್ಲಾ ಹಾಗಿರಲಿ. ನೀವು ನನಗೊಂದು ಉಪಕಾರವನ್ನು ಮಾಡಬೇಕಲ್ಲಾ?

ಶಿವ:— ಪದ್ಮಾ! ಅದೇನೋ ಹೇಳು. ತಪ್ಪದೆ ಮಾಡುವೆನು.

ಪದ್ಮೆ:— ನಾನೊಂದು ಕಾಗದವನ್ನು ನಿಮ್ಮೊಡನೆ ಒಬ್ಬ ಬ್ರಾಹ್ಮಣನ ಕಯ್ಯಲ್ಲಿ ಕೊಟ್ಟು ಕಳುಹುವೆನು. ಆತನನ್ನು ಉದಯಪುರಕ್ಕೆ ಕರೆದುಕೊಂಡು ಹೋಗಿ ರಾಜಸಿಂಹನಿಗೆ ಒಪ್ಪಿಸಬೇಕು.

ಶಿವ:— ಹಾಗೆಯೇ ಆಗಲಿ. ಆದರೆ, ಪದ್ಮೆ! ಆ ಕಾಗದದ ಸಮಾಚಾರವನ್ನು ನನಗೆ ತಿಳಿಸಬಹುದೋ?

ಪದ್ಮೆ:— ಈಗ ನಾನು ಹೇಳಬೇಕೆ? ಕ್ರಮವಾಗಿ ನೀವೇ ತಿಳಿಯುವಿರಿ. ನೀವು ತಪ್ಪದೆ ನಾಳೆಯ ರಾತ್ರಿಯೂ ಬರಬೇಕು.

ಈ ಪ್ರಸಂಗವೆಲ್ಲವನ್ನೂ ಕೇಳಿ ಕುಂದೆ, ತನಗೇ ಪರಾಭವ

ವಾಯಿತೆಂದು ತಿಳಿದು ಮೆಲ್ಲನೆ ಕೆಳಕ್ಕಿಳಿದು ಹೋಗಿ ಮಲಗಿಕೊಂಡಳು. ಶಿವಸಿಂಗನು ಮಾತನಾಡುತ್ತಿದ್ದಾಗಲೇ "ಯಾರಲ್ಲಿ" ಎಂಬ ಶಬ್ದವು ಕೇಳಬರಲು ಪದ್ಮೆಯು ತತ್ತರಿಸುತ್ತ -" ಮಾವನವರು ಬರುತ್ತಿರುವರು. ನೀವು ಇಲ್ಲಿ ಇನ್ನು ನಿಲ್ಲಬಾರದು. ನಾಳೆಯ ದಿನ ತಪ್ಪದೆ ಬರಬೇಕು. ಮರೆಯಬಾರದು." ಎಂದು ಕೇಳಿಕೊಂಡಳು. ತಕ್ಷಣವೇ ಶಿವಸಿಂಗನು ಕಿಟಕಿಯಿಂದಿಳಿದು ಹೊರಟುಹೋದನು. ವಿಜಯಸಿಂಹನು ಪದ್ಮೆಯ ಬಳಿಗೆ ಬಂದು "ಯಾರವರು?" ಎಂದು ಕೇಳಿದ ಕೂಡಲೇ ಪದ್ಮೆಯನ್ನು ಗುರುತಿಸಿ ಚಕಿತನಾಗಿ ಹಾಗೆ ಕೇಳಿದನು.

" ಏಕೆ, ಪದ್ಮಾ! ಇಷ್ಟು ಹೊತ್ತಿನಲ್ಲಿ ಒಂಟಿಯಾಗಿ ಇಲ್ಲಿ ಏನು ಮಾಡುತ್ತಿರುವೆ? "

ಪದ್ಮೆ:— ನಿದ್ರೆ ಬಾರದೆ ಬೇಸರಿಕೆಯಾಗಿದ್ದಿತು. ಹಾಗೆಯೇ ತಿರುಗಾಡುತ್ತ ಇಲ್ಲಿ ನಿಂತಿದ್ದೆನು.

ವಿಜಯ:— ನಿಜ; ಹೃದಯವು ಸ್ಥಿಮಿತವಾಗಿಲ್ಲದಿರುವಾಗ ನಿದ್ರೆ ಬರುವುದು ಹೇಗೆ?

ಪದ್ಮೆ:— ಮಾವಾಜೀ! ಈ ರಾಜಪುತ್ರಸ್ಥಾನದಲ್ಲಿ ಸ್ವಧರ್ಮವನ್ನು ಕಾಪಾಡುವವರು ಯಾರೂ ಇಲ್ಲವೆ? ಒಬ್ಬರಾದರೂ ಸಹಾಯಕ್ಕೆ ಬರಲಿಲ್ಲವಲ್ಲಾ.

ವಿಜಯ:— ತಾಯಿ! ನಮ್ಮ ರಜಪುತ್ರಸ್ಥಾನದಲ್ಲಿ ಅಂತಹ ಪರೋಪಕಾರ ಬುದ್ಧಿಯು ಎಂದೋ ನಶಿಸಿಹೋಗಿರುವುದು. ನನ್ನ ಬಾಹುಬಲದಿಂದಲೇ ನಾನು ಜಯವನ್ನು ಸಂಪಾದಿಸಬೇಕಲ್ಲದೆ ಪರರ ಸಹಾಯವನ್ನು ನಿರೀಕ್ಷಿಸುವಂತಿಲ್ಲ.

ಹೀಗೆ ಸ್ವಾಭಿಮಾನದಿಂದ ಹೇಳಿದ ವಿಜಯಸಿಂಹನ ಮಾತನ್ನು ಕೇಳಿ ಪದ್ಮೆಯು ತನ್ನ ಅನುಮಾನವನ್ನು ಬಿಟ್ಟು ತನ್ನ ರಹಸ್ಯವು ತಿಳಿಯಲಿಲ್ಲವೆಂಬ ಸಂತೋಷದಿಂದ ಸುಮ್ಮನಾದಳು. ವಿಜಯಸಿಂಹನು ಪದ್ಮೆಯನ್ನು ಹೋಗಿ ಮಲಗುವಂತೆ ಹೇಳಿ ಕಳುಹಿಬಿಟ್ಟು, ತನ್ನ ಪದ್ಧತಿಯಂತೆ ಪಟ್ಟಣದ ನಾಲ್ಕು ಕಡೆಯನ್ನು ನೋಡಿ ಕಾವಲುಗಾರರಿಗೆ ಜಾಗ್ರತೆಯನ್ನು ಕೊಟ್ಟು ಹೋಗಿ ಮಲಗಿದನು. ಶತ್ರುಗಳು ರಹಸ್ಯವಾಗಿ ಅರ್ಧರಾತ್ರಿಯಲ್ಲಿ ಕೋಟೆಯನ್ನು ಹತ್ತಿ ಪಟ್ಟಣವನ್ನು ಪ್ರವೇಶಿಸುವರೆಂಬ ಭಯದಿಂದ ಆತನು ಪ್ರತಿ ದಿನವೂ ಹೀಗೆ ಜಾಗರೂಕನಾಗಿ ಪರೀಕ್ಷಿಸುತ್ತಿದ್ದನು.

ಆ ಮರುದಿನ ವಿಮಲೆಯು ಬರೆದ ಕಾಗದವನ್ನು ಶ್ಯಾಮಲ ಪಂಡಿತನ ಮೂಲಕ ರಾಜಸಿಂಹನಿಗೆ ತಲಪಿಸಬೇಕೆಂದು ಪದ್ಮೆಯು ತಕ್ಕ ಪ್ರಯತ್ನಮಾಡಿ, ರಹಸ್ಯವಾಗಿ ಪಂಡಿತನನ್ನು ಕಂಡು ಆತನೊಡನೆ ಮಾತನಾಡಿ ಸ್ವಲ್ಪ ಧನವನ್ನು ಕೊಟ್ಟು ಆತನನ್ನು ಒಡಂಬಡಿಸಿ ವಿಮಲೆಯು ಬರೆದುಕೊಟ್ಟಿದ್ದ ಪ್ರಾರ್ಥನಾ ಪತ್ರಿಕೆಯನ್ನು ಪಂಡಿತನ ಕಯ್ಗೆ ಕೊಟ್ಟು ಜಾಗ್ರತೆಯಾಗಿರೆಂದು ಹೇಳಿ ಆದಿನ ರಾತ್ರಿ ಆತನನ್ನು ಮಹಡಿಯ ಮೇಲಕ್ಕೆ ಕರೆದುಕೊಂಡು ಹೋದಳು. ಅಷ್ಟರಲ್ಲಿ ಪೂರ್ವದಂತೆ ಶಿವಸಿಂಗನು ಬಂದು ಪದ್ಮೆಯನ್ನು ಕಂಡು, ಜಾಗ್ರತೆಯಾಗಿ ಬ್ರಾಹ್ಮಣನನ್ನು ಕಳುಹಿಸು " ಎಂದನು. ಪದ್ಮೆಯು ಬ್ರಾಹ್ಮಣನನ್ನು ಶಿವಸಿಂಗನ ವಶಕ್ಕೊಪ್ಪಿಸಿ " ವಿಪ್ರೋತ್ತಮ ಜಾಗ್ರತೆ! ಜಾಗ್ರತೆ!! ಕಾಗದವನ್ನು ಎಲ್ಲಿಯೂ ಹಾಕಬೇಡ. ನೀನು ಮತ್ತೆ ಇಲ್ಲಿಗೆ ಬರಬೇಕಾದ ನಿರ್ಬಂಧವಿಲ್ಲ. ಹಾಗೆ ಹೊರಟು ಬಂದರೆ ಶತ್ರುಗಳ ಕೈಗೆ ಸಿಕ್ಕುವೆ. ನಾವು ಹೇಳಿ ಕಳುಹುವ ವರೆಗೂ ಉದಯಪುರದಲ್ಲಿಯೇ ಇರಬೇಕು. " ಎಂದು ಹೇಳಿದಳು. ಶ್ಯಾಮಲಪಂಡಿತನು, ಹಾಸ್ಯದಿಂದ— ಏನಮ್ಮ! ನಿನಗೇನಾದರೂ ಭ್ರಾಂತಿಯೊ? ಹಿಂದೆ ರುಕ್ಮಿಣೀದೇವಿಯ ಸಂದೇಶವನ್ನು ಕೃಷ್ಣದೇವನಲ್ಲಿಗೆ ತೆಗೆದುಕೊಂಡು ಹೋದಾಗ ಯಾವ ಪದ್ಮೆಯು ಬಂದು ನನಗೆ ಬುದ್ಧಿ ಹೇಳಿದಳು?" ಎಂದು ಕೇಳಿದನು. ಪದ್ಮೆಯು ಆತನನ್ನು ಅಷ್ಟಕ್ಕೇ ಸಮಾಧಾನಪಡಿಸಿ, "ಪಂಡಿತೋತ್ತಮನೇ! ಗಟ್ಟಿಯಾಗಿ ಮಾತನಾಡಬೇಡ. ನನ್ನಿಂದ ತಪ್ಪಾಯಿತು; ಕ್ಷಮಿಸು! ಈಗ ನೀನು ಶಬ್ದಮಾಡಿದರೆ ಮೋಸವು ಸಂಭವಿಸುವುದು. " ಎಂದು ಪ್ರಾರ್ಥಿಸಿಕೊಂಡಳು. ಶಿವಸಿಂಗನು ನಾವಕಾಶ ಮಾಡದೆ ಬ್ರಾಹ್ಮಣನೊಡನೆ ಕಿಟಕಿಯ ಬಳಿಗೆ ಬಂದನು. ಪದ್ಮೆಯು ಮಲಗಲು ಹೊರಟುಹೋದಳು

ಹತ್ತೊಂಭತ್ತನೆ ಪ್ರಕರಣ.

ಶಿವಸಿಂಗನು ಶ್ಯಾಮಲ ಪಂಡಿತನ ಕಯ್ಯನ್ನು ಹಿಡಿದುಕೊಂಡು ಮೆಲ್ಲನೆ ಕಿಟಕಿಯನ್ನು ದಾಟಿ ಕೆಳಗೆ ಜೋಲಾಡುತ್ತಿದ್ದ ಹಗ್ಗವನ್ನು ಆತನಿಗೆ ತೋರಿಸಿ, ಮೊದಲು ತಾನು ಕೆಳಕ್ಕಿಳಿದನು. ಪಂಡಿತನು ಮಾತುಮಾತಿಗೂ ಗುಣಗುಟ್ಟುತ್ತ ಮೆಲ್ಲಗೆ ಧ್ವನಿಮಾಡುತ್ತಿದ್ದುದರಿಂದ ಇತರರು ಯಾರಾದರೂ ಈ ಮಾತುಗಳನ್ನು ಕೇಳಿದರೆ ತೊಂದರೆ ಯಾಗುವುದೆಂದು ಭಯಪಟ್ಟು ಶಿವಸಿಂಗನು ಬಾರಿಬಾರಿಗೂ ಆತನನ್ನು ಮಾತನಾಡದಿರುವಂತೆ ಬೇಡಿಕೊಳ್ಳುತ್ತಿದ್ದನು. ಆದರೂ ಆ ವಿದೂಷಕನು ಆತನ ಮಾತನ್ನು ಲಕ್ಷ್ಯಮಾಡದೆ ಮೆಲ್ಲನೆ ರಾಗವನ್ನೆಳೆಯಲಾರಂಭಿಸಿದನು. ಎಷ್ಟು ಸಲ ಹೇಳಿದರೂ ಕೇಳದಿದ್ದುದರಿಂದ ಕಡೆಗೆ ಶಿವಸಿಂಗನು ಕೋಪಗೊಂಡು "ಎಲೊ, ಹುಚ್ಚು ಬ್ರಾಹ್ಮಣ! ನನ್ನ ಮಾತನ್ನು ಕೇಳುವೆಯೋ ಇಲ್ಲವೊ? ಬರುತ ಬರುತ್ತ ನಿನ್ನ ರಾಗಗಳು ಮಿತಿಮೀರುತ್ತಿವೆ. ಇತರರಾರಾದರೂ ನಮ್ಮ ರಹಸ್ಯವನ್ನು ತಿಳಿದುಕೊಂಡರೆ ನಿನ್ನ ಒಬ್ಬ

ನಿಂದ ಎಲ್ಲರಿಗೂ ಕಷ್ಟವುಂಟಾಗುವದು. ಎಚ್ಚರಿಕೆ! ಎಚ್ಚರಿಕೆ!! ಎಂದನು. ಅದಕ್ಕೆ ಶ್ಯಾಮಲಪಂಡಿತನು "ಸಿವಸಿಂಗ್! ಪೂರ್ವದಲ್ಲಿ ರುಕ್ಮಿಣಿದೇವಿಯ ಓಲೆಯನ್ನು ತೆಗೆದುಕೊಂಡು ಹೋಗುತ್ತಿರುವಾಗ ನನ್ನನ್ನು ಯಾರೂ ಶಿಕ್ಷಿಸಲಿಲ್ಲ. ದ್ವಾರಕಾಪಟ್ಟಣಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ನನ್ನ ಇಷ್ಟಬಂದಂತೆ ರಾಗಗಳನ್ನೂ ಹಾಡುಗಳನ್ನೂ ಹೇಳುತ್ತಿದ್ದೆನು. ಎಂದು ಹೇಳಲು ಶಿವಸಿಂಗನು ಆತನ ಮೂರ್ಖತನಕ್ಕೆ ಕೋಪಗೊಂಡು "ಎಲೊ, ಛಾಂದಸನೆ! ನಿನಗಿನ್ನೂ ಹುಚ್ಚು ಹೋಗಲಿಲ್ಲ. ನನ್ನ ಮಾತಿನಂತೆ ಶಬ್ದಮಾಡದೆ ಈ ಹಗ್ಗದಿಂದ ಕೆಳಗೆ ಇಳಿ. ನನ್ನ ರಹಸ್ಯಗಳನ್ನು ಶತ್ರುಗಳು ಕಂಡುಹಿಡಿದರೆ ನನ್ನ ಕಾರ್ಯಗಳೆಲ್ಲ ಭಂಗವಾಗುವವು. ನನ್ನ ಕಣ್ಣಿಗೆ ನೀನು ಯಮದೂತನಂತಿರುವೆ. ಪದ್ಮೆಯು ಹುಡುಕಿ ಹುಡುಕಿ ನಿನ್ನನ್ನು ಕಳುಹಿಸಿದವಳು ಎಂದನು. ಶ್ಯಾಮಲ ಪಂಡಿತನು ಏನೋ ಪ್ರತ್ಯುತ್ತರವನ್ನು ಕೊಡಲುದ್ಯುಕ್ತನಾಗಲು ಶಿವಸಿಂಗನು ಪುನಃ "ಬಾಯ್ಬಿಡಬೇಡ; ನಾನು ಹೇಳುವವರೆಗೂ ಮಾತನಾಡಬೇಡ ನನ್ನ ಮಾತನ್ನು ಕೇಳದಿದ್ದರೆ ಇಕೋ ಈ ಹಗ್ಗವನ್ನು ಕತ್ತರಿಸಿ ನಿನ್ನನ್ನು ಕೆಳಕ್ಕೆ ಕೆಡಹುವೆನು; ಎಚ್ಚರಿಕೆ! ಎಂದು ಮೆಲ್ಲನೆ ಹೇಳಲು ಶ್ಯಾಮಲ ಪಂಡಿತನು ಭಯದಿಂದ ಪ್ರತಿಮಾತನಾಡದೆ ಶಿವಸಿಂಗನ ಹಿಂದೆ ತಾನೂ ಕೆಳಗೆ ಇಳಿಯುತ್ತಿದ್ದನು. ಹೀಗೆ ಸ್ವಲ್ಪದೂರ ಇಳಿದಮೇಲೆ ಶ್ಯಾಮಲ ಪಂಡಿತನು ಶಿವಸಿಂಗ್! ಶಿವಸಿಂಗ್!! ಜಾಗ್ರತೆಯಾಗಿಬಾ. " ಎಂದು ಕರೆದನು. ಪಾಪ! ಬ್ರಾಹ್ಮಣನಿಗೆ ಯಾವ ಅಪಾಯವುಂಟಾಯಿತೋ ಎಂದು ಶಿವಸಿಂಗನು ಓಡಿಬಂದು ಏನೆಂದು ಕೇಳಲು, ಶ್ಯಾಮಲ ಪಂಡಿತನು ರಹಸ್ಯವಾಗಿ—"ಅಯ್ಯಾ! ನನಗೆ ಆವವಿಪತ್ತೂ ಬರಲಿಲ್ಲ. ಇನ್ನು ಮೇಲೆಯಾದರೂ ಮಾತನಾಡಬಹುದೇನೆಂದು ಕೇಳಲು ಕರೆದೆ" ನೆಂದನು ಹೀಗೆ ಯೇಪದೇ ಪದೇ ಕೇಳುತ್ತ ಸ್ವಲ್ಪಹೊತ್ತಿಗೆ ಕೆಳಗಿಳಿದನು. ಶಿವಸಿಂಗನು ಬ್ರಾಹ್ಮಣನನ್ನು ಜೊತೆಯಲ್ಲಿ ಕರೆದುಕೊಂಡು ತನಗಾಗಿ ಕಾದಿದ್ದ ಭಿಲ್ಲರೊಡನೆ ಕೂಡಿ ಕೋಟೆಕೊತ್ತಲಗಳನ್ನು ದಾಟಿ ಅರಣ್ಯಮಾರ್ಗದಲ್ಲಿ ಹೊರಟನು. ಆಗ ಶ್ಯಾಮಲಪಂಡಿತನು "ಈಗಲಾದರೂ ಬಾಯ್ದೆರೆಯಬಹುದೇ" ನೆಂದು ಕೇಳಿದನು. ತಾನು ಹೇಳುವ ವರೆಗೂ ಬಾಯ್ದೆರೆಯಕೂಡದೆಂದು ಶಿವಸಿಂಗನು ಪುನಃ ಪ್ರತ್ಯುತ್ತರವನ್ನಿತ್ತನು. ಪರ್ವತಪ್ರಾಂತ್ಯದ ಅರಣ್ಯದಲ್ಲಿ ಆ ಅರ್ಧರಾತ್ರಿಯ ಸಮಯದಲ್ಲಿ ಪಯಣಮಾಡುತ್ತ ಶಿವಸಿಂಗನು ಜಾಗ್ರತೆ ನಡೆಯಿರೆಂದು ಭಿಲ್ಲರಿಗೆ ಆಜ್ಞಾಪಿಸುತ್ತ ಸ್ವಲ್ಪ ದೂರ ನಡೆದಮೇಲೆ ಶ್ಯಾಮಲಪಂಡಿತನನ್ನು ನೋಡಿ—'ಪಂಡಿತಜೀ! ಇನ್ನು ನಿಮ್ಮ ಇಷ್ಟಬಂದಂತೆ ಮಾಡಿಕೊಳ್ಳಬಹುದು. ಪಟ್ಟಣವನ್ನು ದಾಟಿ ಬಂದುದು ಒಂದು ಗಂಡವನ್ನು ಕಳೆದಂತಾಯಿತು." ಎಂದು ಹೇಳಿದನು. ಪಂಡಿತನಿಗೆ ನಿರ್ಬಂಧವು ತಪ್ಪಿದಂತಾಗಲು ಶಕ್ತ್ಯುತ್ಸಾಹಗಳುಂಟಾದುವು. ತನ್ನ ಜೊತೆಯಲ್ಲಿ ಬರುತ್ತಿದ್ದವರನ್ನು ಹಿಂದೆ ಬಿಟ್ಟು ತಾನು ಸ್ವೇಚ್ಛೆಯಿಂದ ನಡೆಯುತ್ತ ತನಗೆ ತಾನೇ "ವಾಹವ್ವಾ! ಇಷ್ಟು ದಿನಗಳಿಗೆ ನನ್ನ ಅದೃಷ್ಟವು ಫಲಿಸಿದಂತಾಯಿತು. ವಿಮಲಾದೇವಿಯ ಅನುಗ್ರಹದಿಂದ ರಾಜಸಿಂಹನ ಬಳಿಯಲ್ಲಿ ಬೇಕಾದಷ್ಟು ದ್ರವ್ಯವನ್ನು ಸಂಪಾದಿಸುವೆನು ಆತನು ನನ್ನನ್ನು ನೋಡಿದ ಕೂಡಲೆ ನನ್ನನ್ನಾದರಿಸಿ ಕ್ಷೇಮಸಮಾಚಾರವನ್ನು ವಿಚಾರಿಸುವನು. ಆಗ ನನ್ನ ವಾಕ್ಚಾತುರ್ಯವನ್ನೆಲ್ಲ ತೋರಿಸಿ ವಿಮಲಾದೇವಿಯ ಸ್ಥಿತಿಯನ್ನು ವಿವರಿಸಿದೆನೆಂದರೆ ರಾಜಸಿಂಹನು ಮೆಚ್ಚಿ ನನಗೆ ತಕ್ಕ ಬಹುದಾನವನ್ನು ಮಾಡುವನು. ಅಷ್ಟೇ ಅಲ್ಲ; ರಾಜಸಿಂಹರಾಜನ ಸನ್ನಿಧಿಯಲ್ಲಿ ನನಗೆ ಸವಿಭೋಜನವೂ ಯಥೇಷ್ಟವಾಗಿ ಲಭಿಸುವುದು. ಆಗಲಲ್ಲವೇ ಭೋಜನದಲ್ಲಿ ನನ್ನ ಪ್ರತಾಪವು ಎಷ್ಟಿರುವುದೆಂಬುದು ಗೊತ್ತಾಗುವುದು" ಅಹಹಾ! ಈಗಲೇ ನಾಲಿಗೆಯಲ್ಲಿ ನೀರೂರುತ್ತಿರುವುದು........."

ಪಂಡಿತನ ಮಾತಿಗೆ ಎಲ್ಲರೂ ನಗುತ್ತಿದ್ದರು. ಸ್ವಲ್ಪದೂರ ನಡೆದಮೇಲೆ ಪಂಡಿತನು ಆಯಾಸದಿಂದ ನಡೆಯಲಾರದೆ ಹೋದನು. ಆಗ ಶಿವಸಿಂಗನು ಅವನನ್ನು ನೋಡಿ—"ಪಂಡಿತಜೀ! ನೀವು ಆಯಾಸಪಟ್ಟಂತೆ ಕಾಣುವಿರಿ. ಇನ್ನು ನಡೆಯಲಾಗುವುದಿಲ್ಲವೊ ? ಇಲ್ಲಿಗೆ ಸಮೀಪದಲ್ಲಿಯೇ ಒಂದು ಸರೋವರವಿರುವುದು. ಅಲ್ಲಿ ಈ ದಿನ ವಿಶ್ರಮಿಸಕೊಳ್ಳುವ. ಈಗ ನೀವು ಈ ಭಿಲ್ಲರಲ್ಲಿ ಯಾರ ಭುಜದ ಮೇಲಾದರೂ ಕುಳಿತುಕೊಳ್ಳಿರಿ. ಆಯಾಸವು ಕಡಿಮೆಯಾದೀತು." ಎಂದು ಹೇಳಲು,—

ಬ್ರಾಹ್ಮಣನು:— "ಏನಯ್ಯಾ! ನನ್ನ ಮೇಲಿನ ಕೋಪವನ್ನು ತೀರಿಸಿಕೊಳ್ಳಲು ನನ್ನನ್ನು ಹೊತ್ತುಕೊಂಡು ಹೋಗಿ ಸರೋವರದಲ್ಲಿ ಎತ್ತಿಹಾಕಬೇಕೆಂದೋ—ಇಷ್ಟೆಲ್ಲಾ ಪ್ರಯತ್ನವೊ? ಹಾಗೆ ಮಾತ್ರ ಮಾಡಬೇಡ ಕಂಡೆಯಾ ? ನನ್ನ ತಾಯಿಗೆ ನಾನು ಒಬ್ಬನೇ ಮಗನು. ನನ್ನ ಪತ್ನಿಯು ಮೊನ್ನೆ ತಾನೇ ಮನೆಗೆ ಬಂದಳು. ಇವರೆಲ್ಲರನ್ನೂ ಬಿಟ್ಟು ನಾನು ಹೇಗೆ ನಿಮ್ಮ ಮಾತಿಗೆ ಒಪ್ಪುವೆನು? ನನಗೆ ನಿಮ್ಮ ಉಪಾಯಗಳೆಲ್ಲವೂ ದಿವ್ಯದೃಷ್ಟಿಯಿಂದ ತಿಳಿದುಬಂದಿದೆ. ನಾನಾರೆಂದು ತಿಳಿದಿರುವಿರಿ? ಎಚ್ಚರಿಕೆ!" ಎಂದು ಗದರಿಸಿದನು.

ಪಂಡಿತನ ಮಾತಿಗೆ ಶಿವಸಿಂಗನು ನಕ್ಕು ಆತನೊಡನೆ ಪರಿಹಾಸಕ್ಕಾಗಿ ಹೀಗೆ ಮಾತಾಡಿದನು—

"ಪಂಡಿತರೇ! ನಿಮಗೆ ದಿವ್ಯದೃಷ್ಟಿಯೆಂದಿರಷ್ಟೆ? ಮುಂದೆ ಏನು ನಡೆಯುವುದೋ ಸ್ವಲ್ಪ ತಿಳಿಸುವಿರಾ?"

ಪಂಡಿತ:— ಓಹೋ, ಹೇಳದೆ ಏನು? ಇನ್ನು ಕೆಲವು ದಿನಗಳಲ್ಲಿಯೇ ಆ ರಾಜಸಿಂಹನು ರೂಪನಗರಕ್ಕೆ ಬಂದು ದುರ್ಮಾರ್ಗಿಯಾದ ಔರಂಗಜೇಬನನ್ನು ನಿಗ್ರಹಿಸಿ, ವಿಮಲಾದೇವಿಯನ್ನು ಕರೆದುಕೊಂಡೇ ಹೋಗುವನು. ಇದು ನಿಜವಾದ ಮಾತು!

ಶಿವಸಿಂಗ:— ಭಲೆ! ನಿಜವಾದ ಸಂಗತಿಯನ್ನೇ ಹೇಳಿದಿರಿ. ಸರಿಯೆ, ವಿಮಲಾದೇವಿಯ ವಿವಾಹಕ್ಕೆ ನೀವೇ ಪುರೋಹಿತರಾಗುವಿರೋ? ಅಥವಾ.........

ಶ್ಯಾಮಲ:— ಅದಕ್ಕೆ ಸಂದೇಹವೇನು ? ಪೂರ್ವದಲ್ಲಿ ಕೃಷ್ಣನಿಗೆ ಹೇಗೆ ವಿವಾಹ ಮಾಡಿದೆನೋ ರಾಜಸಿಂಹನಿಗೂ ಹಾಗೆಯೇ ಮಾಡುವೆನು.

ಶಿವ:— ರಾಜಸಿಂಹನು ನಿಮಗೇನು ಬಹುಮಾನವನ್ನು ಕೊಡುವನು?

ಶ್ಯಾಮಲ:—ಸಮಸ್ತವೂ ನನ್ನ ಕೈಯಲ್ಲಿಯೇ ಇರುವಾಗ ನನಗೆ ಬಹುಮಾನವನ್ನು ಕೊಡುವವರು ಬೇರೆ ಏಕೆ ಬೇಕು? ನಾನು ಕೈಹಾಕಿ ತೆಗೆದುಕೊಂಡುದನ್ನು ಅಡ್ಡಿಮಾಡುವವರಾರು?

ಹೀಗೆ ಮಾತನಾಡುತ್ತ ಎಲ್ಲರೂ ನಿಶಾಸಮಯದಲ್ಲಿ ಆ ಸರೋವರದ ಬಳಿಗೆ ಬಂದರು. ಶಿವಸಿಂಗನು ಆ ದಿನವೆಲ್ಲ ಅಲ್ಲಿಯೇ ಇದ್ದು, ಮುಂದೆ ಹೊರಡಬೇಕೆಂದು ಭಿಲ್ಲರಿಗೆ ತಿಳಿಸಿದನು. ಆಯಾಸಪರಿಹಾರಾರ್ಥವಾಗಿ ಭಿಲ್ಲರೆಲ್ಲರೂ ಸರಸ್ಸಿನಲ್ಲಿ ಸ್ನಾನಮಾಡಿ ವಿಶ್ರಮಿಸಿಕೊಂಡರು. ಸೂರ್ಯೋದಯವಾಯಿತು. ಬ್ರಾಹ್ಮಣನು ಪ್ರಾತಃಕೃತ್ಯಗಳನ್ನು ನಡೆಯಿಸಿಕೊಂಡು ತಾನು ತಂದಿದ್ದ ಬುತ್ತಿಯನ್ನು ಬಿಚ್ಚಿ, ಸ್ವಲ್ಪ ಆಹಾರವನ್ನು ಸ್ವೀಕರಿಸಿ, ಉಳಿದುದನ್ನು ಶಿವಸಿಂಗನಿಗೂ ಕೊಟ್ಟನು. ಅಷ್ಟರಲ್ಲಿ ಭಿಲ್ಲರೂ ತಮ್ಮ ತಮ್ಮ ಬುತ್ತಿಯನ್ನು ಬಿಚ್ಚಿ ಊಟಮಾಡಿ ಎಲ್ಲರೂ ಮರದ ನೆರಳಿನಲ್ಲಿ ಸ್ವಲ್ಪ ಹೊತ್ತು ಮಲಗಿದ್ದು ಆಬಳಿಕ ಪುನಃ ಪ್ರಯಾಣಮಾಡಿದರು.

ಇವರೆಲ್ಲರೂ ದಾರಿನಡೆಯುತ್ತಿರುವಾಗ ಮಾರ್ಗಮಧ್ಯದಲ್ಲಿ ಒಬ್ಬ ಪುರುಷನು ಮುಲುಗುತ್ತ ಕೈಕಾಲುಗಳನ್ನು ಮುದುರಿಕೊಂಡು ಮಲಗಿದ್ದನು. ಶಿವಸಿಂಗನು ಆತನನ್ನು ನೋಡಿ ಕನಿಕರದಿಂದ—“ ಅಯ್ಯಾ! ನೀನಾರು? ಈ ಮರದ ಕೆಳಗೆ ಮಲಗಿರುವುದೇಕೆ ? ” ಎಂದು ಕೇಳಲು, ಆತನು— “ ಅಯ್ಯಾ! ನೀವೇ ನನ್ನ ಪಾಲಿಗೆ ದೈವಸ್ವರೂಪರಾಗಿ ಬಂದಿರಿ! ನಾನು ಪಕ್ಕದಲ್ಲಿರುವ ಹಳ್ಳಿಗೆ ಹೋಗಿ ಪುನಃ ನನ್ನ ಗ್ರಾಮಕ್ಕೆ ಬರುತ್ತ ದಾರಿಯಲ್ಲಿ ಒಂದು ಕಲ್ಲನ್ನೆಡವಿ ಕೆಳಕ್ಕೆ ಬಿದ್ದೆನು. ಮೊಣಕಾಲಿಗೆ ತುಂಬ ಏಟು ಬಿದ್ದಿದೆ. ನಡೆಯಲಾರೆ. ರಾತ್ರಿಯಿಂದಲೂ ಆಹಾರವಿಲ್ಲದೆ ನರಳುತ್ತ ಬಿದ್ದಿರುವೆನು. ಸ್ವಲ್ಪ ಆಹಾರವನ್ನಿತ್ತು ಸ್ವಲ್ಪ ದೂರ ಕರೆದುಕೊಂಡು ಹೋದರೆ ನಿಮ್ಮ ಉಪಕಾರವನ್ನು ಎಂದಿಗೂ ಮರೆಯಲಾರೆನು.” ಎಂದು ಪ್ರಾರ್ಥಿಸಲು, ಶಿವಸಿಂಗನು ಆತನ ಮೇಲೆ ಪೂರ್ಣಾನುಗ್ರಹವನ್ನು ತೋರಿಸಿ, ತನ್ನ ಬಳಿಯಲ್ಲಿದ್ದ ಭಿಲ್ಲರಲ್ಲೊಬ್ಬನನ್ನು ಕರೆದು ಆತನನ್ನು ಹೊತ್ತುಕೊಂಡು ಬರುವಂತೆ ಆಜ್ಞಾಪಿಸಿದನು. ತಕ್ಷಣವೇ ಒಬ್ಬ ಭಿಲ್ಲನು ಆತನನ್ನು ಭುಜದಮೇಲೆ ಹೊತ್ತುಕೊಂಡು ಹೊರಟನು.

ಆ ಪುರುಷನು ಎಷ್ಟು ಬಾಧೆಯನ್ನು ಅನುಭವಿಸುತ್ತಿದ್ದನೊ ನಮಗೆ ತಿಳಿಯದಾದರೂ ಆತನ ಮುಲುಗುಶಬ್ದವು ಮಾತ್ರ ಕ್ಷಣಕ್ಷಣಕ್ಕೂ ಹೆಚ್ಚುತ್ತಿದ್ದಿತು. ಆದರೆ ಶಿವಸಿಂಗ ಮೊದಲಾದವರು ಯಾರಾದರೂ ಮಾತನಾಡುತ್ತಿರುವಾಗಮಾತ್ರ ಆತನು ಮುಲುಗುವಿಕೆಯನ್ನು ನಿಲ್ಲಿಸುತ್ತಿದ್ದನು. ಅವರು ಸುಮ್ಮನಿರುವಾಗ ಹೆಚ್ಚು ಮುಲುಗುತ್ತಿದ್ದನು. ಆದರೆ, ಈ ರಹಸ್ಯವನ್ನು ಭಿಲ್ಲರೊಬ್ಬರೂ ತಿಳಿದುಕೊಳ್ಳಲಿಲ್ಲ. ಶಿವಸಿಂಗನು ಮೊದಲಾದವರು ಯಾವ ವಿಷಯವನ್ನು ಮಾತನಾಡುತ್ತಿರುವರೋ ತಿಳಿಯಬೇಕೆಂದೇ ಆತನು ತನ್ನ ಶಬ್ದವನ್ನು ಆಗಾಗ ಕಡಮೆ ಮಾಡುತ್ತಿದ್ದನು. ಆದರೆ ಶ್ಯಾಮಲಪಂಡಿತನ ಪ್ರಲಾಪಗಳಿಂದ ಆತನಿಗೆ ಯಾವ ಸಂಗತಿಯೂ ಸರಿಯಾಗಿ ತಿಳಿಯಲಿಲ್ಲ. ಮಾತನಾಡದೆ ಒಂದು ಕ್ಷಣವಿರಬೇಕೆಂದರೆ ನಮ್ಮ ಶ್ಯಾಮಲಪಂಡಿತನಿಗೆ ಒಂದು ಯುಗವನ್ನು ಕಳೆಯುವಷ್ಟು ಕಷ್ಟವಾಗುತ್ತಿದ್ದಿತು. ರೋಗಿಯು, ಬ್ರಾಹ್ಮಣನನ್ನು ಮಾತನಾಡದೆ ಇರುವಂತೆ ಹೇಳಬೇಕೆಂಬುದಾಗಿಯೂ ತನಗೆ ತಲೆಶೂಲೆ ಹೆಚ್ಚುತ್ತಿರುವುದೆಂಬುದಾಗಿಯೂ ಶಿವಸಿಂಗನನ್ನು ಪ್ರಾರ್ಥಿಸಿದನು. ಶಿವಸಿಂಗನು ಅದನ್ನೇ ಬ್ರಾಹ್ಮಣನಿಗೆ ಹೇಳಲು, ಆದಕ್ಕಾ ಬ್ರಾಹ್ಮಣನು— ತನ್ನಿಂದ ಸುಮ್ಮನಿರಲಾಗುವುದಿಲ್ಲವೆಂದೂ ಮಾತನಾಡದಿದ್ದರೆ ತನಗೂ ಸಹ ತಲೆನೋಯುವುದೆಂದೂ ಹೇಳಿ ತನ್ನ ಇಷ್ಟಬಂದಂತೆ ಮಾತನಾಡುತ್ತಿದ್ದನು. ಹೀಗೆಯೇ ನಡೆದಮೇಲೆ ರಾತ್ರಿಯಾಗಲು ಆ ಅರಣ್ಯದಲ್ಲಿ ಒಂದು ಮರದ ಕೆಳಗೆ ಸ್ವಲ್ಪ ವಿಶ್ರಮಿಸಿಕೊಂಡರು. ಭಿಲ್ಲನು ತನ್ನ ಭುಜದ ಮೇಲಿದ್ದ ರೋಗಿಯನ್ನು ಇಳಿಸಿ, ಆತನನ್ನು ಒಂದು ಕಡೆ ಮಲಗಿಸಿದನು. ಆನಂತರ ಶಿವಸಿಂಗನೂ ಭಿಲ್ಲರೂ ನಮ್ಮ ಪಂಡಿತನೂ ಕಲೆತು ತಕ್ಕ ಉಪಾಯಗನ್ನು ಮಾಡಿಕೊಂಡು ಅಲ್ಲಿಯೇ ನಿದ್ರೆಹೋದರು.

ಸೂರ್ಯೋದಯವಾಗುತ್ತಲೆ ರೋಗಿಯು ಎಲ್ಲರಿಗಿಂತಲೂ ಮೊದಲೇ ಎದ್ದು ಕುಂಟುತ್ತ ಅತ್ತಿತ್ತ ನಡೆಯುತ್ತಿದ್ದನು. ಆಗ ಎಚ್ಚರದಲ್ಲಿದ್ದ ಕೆಲವರು ಭಿಲ್ಲರು ಆತನನ್ನು ನೋಡಿ ಈತನಾರೆಂದು ತಮ್ಮೊಳಗೆ ತಾವು ಮಾತನಾಡಿಕೊ

ಳ್ಳುತ್ತಿದ್ದರು. ಇಷ್ಟರಲ್ಲಿ ಶಿವಸಿಂಗನೂ ಎದ್ದು ಪಯಣಕ್ಕೆ ಸಿದ್ಧನಾದನು. ಆತನನ್ನು ನೋಡಿ ರೋಗಿಯು—“ಅಯ್ಯಾ! ನನ್ನ ದೇಹವು ಸ್ವಲ್ಪ ದಾರಿಗೆ ಬಂದಿದೆ. ಆಯಾಸವೆಲ್ಲಾ ಹೋಯಿತು. ಸ್ವಲ್ಪ ನಡೆಯುವಂತಾಗಿದೆ. ಇನ್ನು ನಾನೇ ಮೆಲ್ಲಗೆ ಹೋಗುವೆನು. ನಿಮಗೆ ಹೆಚ್ಚು ತೊಂದರೆ ಕೊಡಲಾರೆನು.” ಎಂದನು. ಶಿವಸಿಂಗನು ಹಾಗೆಯೇ ಆಗಲೆಂದು ತನ್ನ ಪರಿವಾರದೊಡನೆ ಹೊರಟು ತನ್ನ ದಾರಿಯನ್ನು ಹಿಡಿದನು. ಅವರು ಸ್ವಲ್ಪ ದೂರ ಹೋದಮೇಲೆ ರೋಗಿಯು ಯಾರಿಗೂ ತಿಳಿಯದಂತೆ ಎದ್ದು ಓಡಿಹೋದನು.

ಇಪ್ಪತ್ತನೆ ಪ್ರಕರಣ.

(ಪಾರಿವಾಳವೆಲ್ಲಿಗೆ ಹೋಯಿತು?)

ವೈದ್ಯನನ್ನು ಮೋಸಪಡಿಸಬೇಕೆಂದು ಕುಂದೆಯು ಪಾರಿವಾಳದ ಕೊರಳಲ್ಲಿದ್ದ ಕಾಗದವನ್ನು ಓದಿಕೊಂಡು ಅದಕ್ಕೆ ವ್ಯತಿರೇಕವಾಗಿ ಉತ್ತರವನ್ನು ಬರೆದು ಪಾರಿವಾಳದ ಕೊರಳಿಗ ಕಟ್ಟಿ ಕಳುಹಿದುದೂ ಸರಿಯಷ್ಟೆ? ಪಾರಿವಾಳವು ಅಂತರಿಕ್ಷದಲ್ಲಿ ಹಾರಿಬರುತ್ತಿರುವಾಗ ಮಧ್ಯಮಾರ್ಗದಲ್ಲಿಯೇ ಬಿಡಾರವನ್ನು ಹೊಡಿಸಿ ವಿಶ್ರಾಂತಿಗಾಗಿ ಬಿಡಾರದ ಹೊರಗೆ ಕುಳಿತು ಹುಕ್ಕಾ ಸೇದುತ್ತ ಮೇಲೆಯೇ ನೋಡುತ್ತಿದ್ದ ಸಾದತ ಖಾನನು ಅಂತರಿಕ್ಷದಲ್ಲಿ ಹಾರಿಬರುತ್ತಿದ್ದ ಪಾರಿವಾಳವನ್ನು ಕಂಡನು; ತತ್ಕ್ಷಣವೇ ತನ್ನ ಕೈಗುರಿಯನ್ನು ಪರೀಕ್ಷಿಸಲು ಬಳಿಯಲ್ಲಿಯೇ ಇದ್ದ ತುಪಾಕಿಯನ್ನು ತೆಗೆದುಕೊಂಡು ಪಾರಿವಾಳಕ್ಕೆ ಗುರಿಯಿಟ್ಟು ಹೊಡೆದು ಅದನ್ನು ಕೆಳಕ್ಕೆ ಕೆಡಹಿದನು.

ಪಾರಿವಾಳವು ನೆಲದ ಮೇಲೆ ಬಿದ್ದೊಡನೆಯೇ ಅದರ ಕಂಠದಲ್ಲಿದ್ದ ಕಾಗದವನ್ನು ಕಂಡು, ಕುತೂಹಲಗೊಂಡು, ಅದನ್ನು ಆತುರದಿಂದ ಬಿಚ್ಚಿ ತೆಗದು ಒಬ್ಬ ಹಿಂದೂಭಟನ ವಶಕ್ಕೊಪ್ಪಿಸಿ ಓದಿಸಿದನು. ಅದರಲ್ಲಿ— “ ನೀವು ಈಗ ಬರುವ ಅಗತ್ಯವಿಲ್ಲ. ಬರಬೇಕಾದ ಸಮಯಬಂದಾಗ ನಾನೇ ನಿಮಗೆ ತಿಳಿಸುವೆನು. ಆಗ ನೀವು ಬರಲು ಸಿದ್ಧರಾಗಿರಬೇಕು” ಎಂದು ಬರೆದಿದ್ದಿತು. ಆ ಸಮಾಚಾರವನ್ನು ಕೇಳಿದ ತತ್ಕ್ಷಣವೇ ಸಾದತ್‌ಖಾನನಿಗೆ ಅನೇಕ ಸಂದೇಹಗಳುಂಟಾದವು. ಕೋಟೆಯೊಳಗೆ ವಿಜಯಸಿಂಹನು ಯುದ್ಧಪ್ರಯತ್ನದಲ್ಲಿರುವನೆಂದೂ ಹೀಗೆ ಎಷ್ಟೋ ದಿನಗಳಿಂದ ಉತ್ತರಪ್ರತ್ಯುತ್ತರಗಳನ್ನು ನಡೆಯಿಸುತ್ತಿರುವನೆಂದೂ ಯೋಚಿಸಿ ಆತನು ಭೀತಚಿತ್ತನಾದನು. ಮತ್ತು “ ಈಗ ಬರುವ ಆಗತ್ಯವಿಲ್ಲ” ಎಂಬ ವಾಕ್ಯದಿಂದ ವಿಜಯಸಿಂಹನು ಮೊದಲು ರಜಪೂತರ ಸಹಾಯವನ್ನು ಅಪೇಕ್ಷಿಸದೆಯೇ ತನ್ನನ್ನು ಓಡಿಸುವ ಸನ್ನಾಹದಲ್ಲಿರಬಹುದೆಂದೂ ರಜಪೂತರೂ ಆತನ ಸಹಾಯಕ್ಕೆ ಬಂದರೆ ತನಗೆ ಜಯವು ದುರ್ಘಟವೆಂದೂ ಭಾವಿಸಿ ಹಲವು ಬಗೆಯಾಗಿ ಉಪಾಯಗಳನ್ನು ಕುರಿತು ಆಲೋಚಿಸಿದನು; ರಾಜಪುತ್ರರು ಸಹಾಯಾರ್ಥವಾಗಿ ಬರುತ್ತಿರುವರೇನೆಂಬ ವಿಚಾರವನ್ನು ತಿಳಿಯಲು ನಾಲ್ಕು ಕಡೆಗಳಿಗೂ ಚಾರರನ್ನು ಅಟ್ಟಿ, ಬಹು ಜಾಗರೂಕತೆಯಿಂದಿದ್ದನು.

ಶತ್ರುಗಳ ವರ್ತಮಾನವನ್ನು ತಿಳಿದುಬರಲು ಹೋಗಿದ್ದವರಲ್ಲಿ ಒಬ್ಬ ಚಾರನು ಹಿಂತಿರುಗಿ ಬಂದು ಸಾದತ್‌ಖಾನನಿಗೆ ಸಲಾಮುಗಳನ್ನು ಮಾಡಿ ಹೀಗ ಹೇಳಿದನು—

“ ಆಜ್ಞಾನುಸಾರ ನಾನು ಹೋಗುತ್ತಿದ್ದಾಗ ಒಬ್ಬ ರಜಪುತವೀರನು ಒಬ್ಬ ಬ್ರಾಹ್ಮಣನನ್ನು ಕರೆದುಕೊಂಡು ಕೆಲವರು ಭಿಲ್ಲರೊಡನೆ ಹೋಗುತ್ತಿದ್ದನು. ಆತನು ಉದಯಪುರಕ್ಕೆ ಹೋಗುತ್ತಿದ್ದಂತೆ ತಿಳಿದುಬಂದಿತು.”

ಸಾದತ್ —ಭಲೆ! ಇಷ್ಟು ಮಂದಿ ಭಟರಲ್ಲಿ ನೀನೇ ಸಮರ್ಥನು. ಸಮಾಚಾರವೇನು? ಎಲ್ಲಿಗೆ ಏತಕ್ಕಾಗಿ ಹೋಗುತ್ತಿದ್ದರು? ಯಾರ ಕಡೆಯವರು?

ಭಟ.— ಸ್ವಾಮೀ! ನಾನು ಮಾರ್ಗಮಧ್ಯದಲ್ಲಿ ರೋಗಿಯಂತೆ ಮಲುಗುತ್ತ ಮಲಗಿದ್ದು ಅವರು ನನ್ನನ್ನು ಸಮೀಪಿಸಿದ ಕೂಡಲೆ ಅವರನ್ನು ಕುರಿತು ನಾನು ನಡೆಯಲಾರೆನೆಂದೂ ಮೊಣಕಾಲಿಗ ಪೆಟ್ಟುಬಿದ್ದಿದೆಯೆಂದೂ ಸುಳ್ಳು ಹೇಳಿ ಅವರ ಸಹಾಯವನ್ನು ಬೇಡಿದೆನು. ರಜಪೂತನು ಕನಿಕರದಿಂದ ನನಗ ಉಪಚಾರಮಾಡಿ ಸ್ವಲ್ಪ ದೂರ ತನ್ನ ಸೇವಕನೊಬ್ಬನಿಗೆ ನನ್ನನ್ನು ಎತ್ತಿಕೊಂಡು ಬರುವಂತೆ ಕಟ್ಟುಮಾಡಿದನು; ಸೇವಕನು ಹಾಗೆಯೇ ಮಾಡಿದನು. ಅವರ ಪರಸ್ಪರ ಸಂಭಾಷಣೆಯು ನನಗ ಕೇಳಿಸಬಾರದೆಂದು ಅವರ ಹಿಂದೆ ಇದ್ದ ಬ್ರಾಹ್ಮಣನು ಗಲಭೆ ಮಾಡುತ್ತಿದ್ದನು. ಆದರೂ, ವಿಜಯಸಿಂಹನು ಆ ರಾಜಪುತ್ರನ ಮೂಲಕ ರಾಜಸಿಂಹನಿಗೆ ಅವುದೋ ರಹಸ್ಯವನ್ನು ಹೇಳಿ ಕಳುಹಿರುವನೆಂಬುದುಮಾತ್ರ ತಿಳಿದು ಸನ್ನಿಧಿಗೆ ವಿಜ್ಞಾಪಿಸಲು ಬಂದೆನು.

ಚಾರನ ಮಾತಿನಿಂದ ಸಾದತ್‌ಖಾನನು ಮತ್ತೂ ಭಯಪಟ್ಟವನಾಗಿ ಆಗಲೇ ಎರಡುಸಾವಿರ ಸೈನ್ಯವನ್ನು ಕರೆಯಿಸಿ ಅರಣ್ಯಮಾರ್ಗದಲ್ಲಿ ಹೋಗುತ್ತಿದ್ದ ರಾಜಪುತ್ರನನ್ನೂ ಭಿಲ್ಲರನ್ನೂ ಹಿಡಿದುತರಬೇಕೆಂದು ಆಜ್ಞಾಪಿಸಿ ಕಳುಹಿದನಲ್ಲದೆ, ಎರಡು ಕಡೆಗಳಿಂದಲೂ ರಾಜಪುತ್ರರು ತಮ್ಮ ಮೇಲೆ ಯುದ್ಧಕ್ಕೆ ಬರುತ್ತಿರುವರೆಂದೂ ತತ್ಕ್ಷಣವೇ ೪೦೦೦ ಸೈನ್ಯವನ್ನು ಸಹಾಯಕ್ಕಾಗಿ ಕಳುಹಬೇಕೆಂದೂ ಬಾದಷಹನಿಗೆ ಬರೆದು ಕಳುಹಿದನು.

ಸಾದತ್‌ಖಾನನು ಕಳುಹಿದ ಸೈನಿಕರು ಉದಯಪುರ ಮಾರ್ಗವಾಗಿ ಹೋಗುತ್ತಿದ್ದರು. ಶ್ಯಾಮಲಪಂಡಿತನೂ ಶಿವಸಿಂಗನೇ ಮೊದಲಾದವರೂ ಉದಯಪುರವನ್ನು ಸಮೀಪಿಸಿದ್ದರು. ಶ್ಯಾಮಲಪಂಡಿತನು ಶಿವಸಿಂಗನನ್ನು ನೋಡಿ—

“ಅಯ್ಯಾ! ಇನ್ನು ನೀವು ಹೋಗಬಹುದು. ನಾನು ಉದಯಪುರವನ್ನು ಸೇರುವೆನು. ಇನ್ನು ನನಗಾವ ಭಯವೂ ಇಲ್ಲ.” ಎಂದನು. ಅದಕ್ಕೆ ಶಿವಸಿಂಗನು ನಗುತ್ತಾ—

“ಪಂಡಿತಜೀ! ಮಾರ್ಗದಲ್ಲಿ ನಿಮ್ಮನ್ನು ಯಾರಾದರೂ ಪೀಡಿಸಿದರೋ?” ಎಂದು ಕೇಳಲು.

ಶ್ಯಾಮಲ:— (ಆಗ್ರಹದಿಂದ) ಓಹೋ! ನಾನು ಅಷ್ಟು ಪರಾಕ್ರಮಹೀನನೋ? ನನ್ನ ಪರಾಕ್ರಮವನ್ನು ನೀನೇನು ಬಲ್ಲೆ? ನೂರು ಹದ್ದುಗಳನ್ನೂ ನಾಲ್ಕುಸಾವಿರ ಮೂಷಕಗಳನ್ನೂ ಆರುಸಾವಿರ ಗ್ರಾಮಸಿಂಹಗಳನ್ನೂ ಯಮಲೋಕಕ್ಕೆ ಕಳುಹಿದ ಜಗದೇಕವೀರನಾರೆಂದು ಬಲ್ಲೆ?” ಎಂದು ತನ್ನ ಪರಾಕ್ರಮನ್ನು ಕೊಚ್ಚಿಕೊಂಡನು. ಶಿವಸಿಂಗನೂ ಭಿಲ್ಲರೂ ಆತನ ಪರಾಕ್ರಮಕ್ಕೆ ನಗುತ್ತಿದ್ದರು. ಇಷ್ಟರಲ್ಲಿ ಸಾದತ್‌ಖಾನನ ಸೈನ್ಯವು ರಾಜಪುತ್ರನನ್ನು ಸಮೀಪಿಸಿತು. ಶಿವಸಿಂಗನೂ ಭಿಲ್ಲರೂ ಶತ್ರುಗಳೊಡನೆ ಹೋರಾಹೋರಿಯಿಂದ ಯುದ್ಧಮಾಡತೊಡಗಿದರು. ಶ್ಯಾಮಲಪಂಡಿತನು ಇವರ ಹೊಡೆದಾಟವನ್ನು ನೋಡಿ ಗಡಗಡನೆ ನಡುಗಲಾರಂಭಿಸಿದನು. ಶಿವಸಿಂಗನು ತನ್ನ ಪರಾಕ್ರಮವನ್ನು ತೋರಿಸಿ, ಬಹಳ ಹೊತ್ತು ಯುದ್ಧಮಾಡಿ ಸಾದತ್‌ಖಾನನ ಸೈನ್ಯವನ್ನು ಸೋಲಿಸಿ ಓಡಿಸಿದನು.

ಶತ್ರುಸೈನ್ಯವನ್ನು ಸೋಲಿಸಿದ ಬಳಿಕ ಶಿವಸಿಂಗನು ತನ್ನ ಬಳಿಯಲ್ಲಿ ಶ್ಯಾಮಲಪಂಡಿತನು ಇಲ್ಲದಿದ್ದುದನ್ನು ನೋಡಿ ಶಂಕೆಗೊಂಡು ಭಿಲ್ಲರೊಡನೆ ಅತ್ತಿತ್ತ ಹುಡುಕಿ, ಒಂದು ಮರದ ಹಿಂದೆ ನಡುಗುತ್ತ ನಿಂತಿದ್ದ ಪಂಡಿತನನ್ನು ಕಂಡು ಆತನನ್ನು ಹಿಡಿದುಕೊಂಡು ನಗುತ್ತ—

“ಪಂಡಿತಜೀ, ನೀವು ತುಂಬಾ ಪರಾಕ್ರಮಿಗಳೇ ಸರಿ! ನಿಮ್ಮ ಪ್ರತಾಪವು ಈಗಲೀಗ ನಿದರ್ಶನಕ್ಕೆ ಬಂದಿತು” ಎಂದನು. ಪಂಡಿತನು ನಾಚಿಕೆಯಿಂದ ತಲೆಬಾಗಿ ನಿಂತನು. ಶಿವಸಿಂಗನು ಪಂಡಿತನನ್ನು ಇನ್ನು ಹೆಚ್ಚು ಹಾಸ್ಯಮಾಡಬಾರದೆಂದು ಭಾವಿಸಿ, ಇನ್ನು ಮುಂದೆ ಭಯವೇನೂ ಇಲ್ಲವೆಂದು ಧೈರ್ಯವನ್ನು ಹೇಳಿ ಕೆಲವರು ಭಿಲ್ಲರನ್ನು ಜೊತೆಗೊಳಿಸಿ ಉದಯಪುರಕ್ಕೆ ಹೊರಡಲು ಹೇಳಿ ತಾನು ತನ್ನ ದಾರಿಯನ್ನು ಹಿಡಿದನು. ಭಿಲ್ಲರು ಶ್ಯಾಮಲಪಂಡಿತನನ್ನು ಉದಯಪುರಕ್ಕೆ ಕರೆದುಕೊಂಡು ಹೋಗಿ ರಾಜಸಿಂಹನಿಗೊಪ್ಪಿಸಿ ಹಿಂತಿರುಗಿದರು. ರಾಜಸಿಂಹನು ಪಂಡಿತನನ್ನು ಆದರಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ, ಕ್ಷೇಮಸಮಾಚಾರವನ್ನು ಕೇಳಿದನು. ಶ್ಯಾಮಲಪಂಡಿತನು ಸಮಾಚಾರವೆಲ್ಲವನ್ನೂ ಆತನಿಗೆ ತಿಳುಹಿ ತನ್ನಲ್ಲಿದ್ದ ವಿಮಲಾದೇವಿಯ ಪತ್ರವನ್ನು ತೆಗೆದುಕೊಟ್ಟನು. ರಾಜಸಿಂಹನು ಆ ಪತ್ರವನ್ನು ಆಮೂಲಾಗ್ರವಾಗಿ ಸಾವಧಾನದಿಂದ ನೋಡಿಕೊಂಡು ಗಂಭೀರಭಾವದಿಂದ—

“ಆಗಲಿ, ಅಷ್ಟು ಸಾಹಸವಿದ್ದರೆ ಪ್ರಯತ್ನಮಾಡಿ ನೋಡಲಿ! ರಾಜಪುತ್ರರು ತಟಸ್ಥವೃತ್ತಿಯಲ್ಲಿರುವುದರಿಂದಲ್ಲವೆ ತನ್ನ ಅತ್ಯಾಚಾರವನ್ನು ತಡೆಯುವರೇ ರಜಪುತ್ರಸ್ಥಾನದಲ್ಲಿಲ್ಲವೆಂಬ ಅಹಂಕಾರವು ಬಾದಷಹನಿಗುಂಟಾಗಿದೆ? ಆಗಲಿ, ಔರಂಗಜೇಬನ ಸಾಹಸವನ್ನು ಈ ಸಲ ಚೆನ್ನಾಗಿ ನೋಡುವೆನು; ರಜಪುತ್ರಸ್ಥಾನವು ಇನ್ನೂ ದುರ್ಬಲವಾಗಿಲ್ಲವೆಂಬುದನ್ನೂ ರಾಜಪುತ್ರರು ಒಳೆತೊಟ್ಟು ಹೆಂಡಿರುಮಕ್ಕಳನ್ನು ಯವನರ ಪಾಲುಮಾಡಿ ನೋಡುವಷ್ಟು ಹೇಡಿಗಳಾಗಿಲ್ಲವೆಂಬುದನ್ನೂ ಔರಂಗಜೇಬನಿಗೆ ಗೊತ್ತುಮಾಡುವೆನು” ಎಂದು ಹೇಳಿ. ಮತ್ತೆ ಪತ್ರವನ್ನು ಸಮಗ್ರವಾಗಿ ಸಮಾಲೋಚಿಸಿ, ನಕ್ಕು, “ಎಲೆ ಭೀರು, ರಾಜಪುತ್ರಿ! ಈ ರಾಜಸಿಂಹನು ಜೀವಿಸಿರುವ ವರೆಗೂ ನಿನ್ನ ಮಾನ-ಪ್ರಾಣಗಳಿಗೆ ಬಾಧಕವಾಗದು. ಔರಂಗಜೇಬನಿಗೆ ಈ ಬಾರಿ ಚೆನ್ನಾಗಿ ಬುದ್ಧಿಗಲಿಸಿ ಮತ್ತೊಮ್ಮೆ ನಿನ್ನ ಮಾತೆತ್ತದಂತೆ ಮಾಡಿ ಕಳುಹುವೆನು.” ಎಂದು ಹೇಳಿಕೊಳ್ಳುತ್ತಿದ್ದನು. ಶ್ಯಾಮಲಪಂಡಿತನು ರಾಜಸಿಂಹನನ್ನು ನೋಡಿ— ‘ಮಹಾರಾಜ! ರಾಜಪುತ್ರಿಯನ್ನು ಉದ್ಧಾರಮಾಡುವ ಮನಸ್ಸಿದ್ದರೆ ಸಾವಕಾಶಮಾಡಲಾಗದು. ಜಾಗ್ರತೆಯಾಗಿ ಸೈನ್ಯವನ್ನು ಸಿದ್ಧಗೊಳಿಸುವ ಪ್ರಯತ್ನಮಾಡಬೇಕು” ಎಂದನು. ರಾಜಸಿಂಹನು ಪಂಡಿತನಿಗೆ ಧೈರ್ಯವನ್ನು ಹೇಳಿ, ಯುದ್ಧಸನ್ನಾಹಮಾಡಲು ಗಮನಿಸಿದನು.

ಇಪ್ಪತ್ತೊಂದನೆಯ ಪ್ರಕರಣ.

(ಮೋಹಪ್ರಭಾವವು)

ಮರುದಿನ ಭೋಟುಸಿಂಗನು ಬರುವನೇನೋ ಎಂದು ಇಂದಿರೆಯು ಮಾರ್ಗನಿರೀಕ್ಷೆ ಮಾಡಿಮಾಡಿ ಬೇಸತ್ತಳು. ಆದರೂ ಆತನು ಬರಲೇ ಇಲ್ಲ. ಕಾರಣವೇನೆಂಬುದನ್ನು ತಿಳಿಯಲು ಎಷ್ಟು ಪ್ರಯಾಸಪಟ್ಟರೂ ಫಲವಾಗಲಿಲ್ಲ. ಇಂದಿರೆಗೆ ಭೋಟುಸಿಂಗನ ವಿಷಯವಾಗಿ ಅನುಮಾನವೂ ಭಯವೂ ಉಂಟಾಯಿತು. ನಿದ್ರಾಹಾರಗಳನ್ನು ಬಿಟ್ಟು ಆತನ ಗುಣ-ಕೌಶಲ-ಮುಂದಾಲೋಚನೆ ಮೊದಲಾದುವುಗಳನ್ನು ನೆನೆನೆನೆದು ದುಃಖಿಸುತ್ತಿದ್ದಳು.

ಎಷ್ಟು ವಿಧವಾಗಿ ಚಿಂತಿಸಿದರೂ ಇಂದಿರೆಗೆ ಸಮಾಧಾನ

ವಾಗಲಿಲ್ಲ. ಕಡೆಗೆ ಮುಸಾವದನಿಂದಲೇ ತನ್ನ ಸಂಶಯ ನಿರಸನಮಾಡಿಕೊಳ್ಳಬೇಕೆಂದು ನಿರ್ಧರಿಸಿದಳು. ಮುಸಾವದನು ಮೊದಲೇ ಉದಯಪುರಿಯ /ಪ್ರೇರಣೆಯಿಂದ ಮೋಹಪಾಶಬದ್ಧನಾಗಿ ಇಂದಿರೆಯ ದಾಸಾನುದಾಸನಾಗಿದ್ದನು. ಇಂದಿರೆಯು ಸಮ್ಮತಿಸದೆ ಅವಳನ್ನು ಬಲಾತ್ಕಾರದಿಂದ ಮದುವೆ ಮಾಡಿಕೊಳ್ಳುವವನು ಜ್ಯೋತಿಷಶಾಸ್ತ್ರಪ್ರಕಾರವಾಗಿ ಹತ್ತು ದಿನಗಳೊಳಗಾಗಿ ಸತ್ತುಹೋಗುವನೆಂದು ಅಂದು ಛೋಟುಸಿಂಗನು ಹೇಳಿದ್ದುದರಿಂದ ಮುಸಾವದನು ಹೇಗಾದರೂ ಇಂದಿರೆಯ ಅನುಗ್ರಹವನ್ನು ಪಡೆದು ಅವಳನ್ನು ಮದುವೆಯಾಗಬೇಕೆಂದು ಅವಳು ಹೇಳಿದ ಕೆಲಸವನ್ನು ಎಷ್ಟು ಕಷ್ಟಪಟ್ಟಾದರೂ ಮಾಡುತ್ತಿದ್ದನು. ಕಾರ್ಯೋಪಾಯಜ್ಞಳಾದ ಇಂದಿರೆಯು, ಮುಸಾವದನ ಮೂರ್ಖತೆಯೇ ತನ್ನ ಕಾರ್ಯಸಾಧನೆಗೆ ಉಪಾಯವೆಂದು ಭಾವಿಸಿ ಸಮಯವನ್ನು ಸಾಧಿಸಿ, ತನ್ನ ಸಂದರ್ಶನಕ್ಕಾಗಿ ಬಂದ ಮುಸಾವದನನ್ನು ನೋಡಿ ನಗುತ್ತ—"ಯಾರು, ಮುಸಾವದ್! ನಿನ್ನ ದಾರಿಯನ್ನೇ ನೋಡುತ್ತಿದ್ದೆನು; ಮುಸಾವದ್......" ಎಂದಳು.

ಮುಸಾವದ್:—(ಹಿಗ್ಗಿ ಹಿಗ್ಗಿ) ಹಿ—ಹಿ - ನಾನೇ ಮುಸಾವದ್; ನಿಮ್ಮ ಅನುಗ್ರಹಕ್ಕೆ ಪಾತ್ರನಾದ ಮುಸಾವದ್ ನಾನೇ ಆಜ್ಞೆಮಾಡಿರಿ; ಏನು .....ಎಂದು ಕೈನೀಡಿ ನಿಂತು ಪ್ರಾರ್ಥಿಸಿದನು.

ಇಂದಿರಾ:—ಈಗ ನೀನು ಎಲ್ಲಿಗೆ ಹೋಗುತ್ತಿರುವೆ?

ಮುಸಾ:—ಎಲ್ಲಿಗಾದರೂ ಹೋಗಲು ನನಗೇನು ಕೆಲಸ? ನಿಮ್ಮನ್ನು ನೋಡಲೋಸುಗವೇ ಬಂದೆನು.

ಇಂದಿರಾ: -ಸುಳ್ಳಾಡಬೇಡ, ನಿಜವನ್ನು ಹೇಳು.

ಮುಸಾ: —ನಿಮ್ಮಲ್ಲಿಯೂ ಸುಳ್ಳಾಡುವೆನೆ? ಉದಯಪುರಿಬೇಗಂ ಸಾಹೇಬರವರ ಅನುಗ್ರಹವಿದ್ದರೆ ನನ್ನ ಜೀವನವೆಲ್ಲಾ ನಿಮ್ಮೊಡನೆಯೇ ಇದೆಯಲ್ಲವೆ?

ಇಂದಿರಾ: -ಮುಸಾವದ್, ಈಗ ನನ್ನ ಹೃದಯದಲ್ಲಿ ಒಂದು ಚಿಂತೆ ಹುಟ್ಟಿ ಬಾಧಿಸುತ್ತಿರುವುದು; ಏನು ಮಾಡಲಿ?

ಮುಸಾ:— ಹಾಗಾದರೆ ನನಗೇಕೆ ಹೇಳಲಿಲ್ಲ? ನಾನಿರುವಾಗ ನಿಮಗೆ ಆವ ಕೊರತೆಯನ್ನಾಗಲಿ ಬರಗೊಡುವೆನೆ? ಅಪ್ಪಣೆಯಾದರೆ ತಮ್ಮ ಆಜ್ಞೆಯನ್ನು ಶಿರಸಾವಹಿಸಿ ನಿಮಿಷಮಾತ್ರದಲ್ಲಿ ನೆರವೇರಿಸುವೆನು,

ಇಂದಿರಾ:— ಅಂದು ನೀನು ಕರೆದುಕೊಂಡು ಬಂದಿದ್ದ ಛೋಟುಸಿಂಗನೆಂಬ ಚಿತ್ರಗಾರನು ಮರುದಿನ ಬರುವುದಾಗಿ ಹೇಳಿಹೋದವನು ಬರಲಿಲ್ಲವೇಕೆ?

ಮುಸಾ:— ನಾನಿರುವಾಗ ಅವನಿಂದೇನು?

ಇಂದಿರಾ:—ನೀನು ಬೇರೆಯಾಗಿ ಭಾವಿಸಬೇಡ. ಅವನೂ ನಾನೂ ಇಬ್ಬರೂ ಒಂದೇ ಗ್ರಾಮದಲ್ಲಿ ಬೆಳೆದವರು. ಚಿಕ್ಕಂದಿನಿಂದಲೂ ಆತನು ನನಗೆ ಪರಿಚಿತನು. ಆದುದರಿಂದ ಆತನಲ್ಲಿ ನಮ್ಮ ತಾಯಿತಂದೆಗಳ ಸಮಾಚಾರವನ್ನು ಕೇಳಿ ತಿಳಿಯಬೇಕೆಂದು ಆಶಿಸಿದ್ದೆನು. ಆದರೇನು, ಆತನು ಪುನಃ ಬರಲೇ ಇಲ್ಲ. ಈ ಪಟ್ಟಣದಲ್ಲಿ ಧನಿಕನಾದ ಚಿತ್ರಗಾರನೊಬ್ಬನಿರುವನು ಆತನ ಬಳಿಗೆ ಹೋಗಿ ಕೇಳಿದರೆ ಛೋಟುಸಿಂಗನ ವೃತ್ತಾಂತವು ತಿಳಿಯುವುದು ನೀನು ಹೇಗಾದರೂ ಮಾಡಿ ಈ ಕಾರ್ಯವನ್ನು ನೆರವೇರಿಸಬೇಕು."

ಮುಸಾ.— ಸರಿ, ಈ ಕಾರ್ಯವು ನನಗೆ ದೊಡ್ಡದೊ? ಆದರೆ ಛೋಟುಸಿಂಗನ ವೃತ್ತಾಂತವು ನನಗೂ ಆಶ್ಚರ್ಯವೇ ಆಗುವುದು ಅಂದು ಬಾದಷಹರವರು ಬರುತ್ತಿರುವರೆಂದೂ ಅವರು ಹೋಗುವ ವರೆಗೆ ರಹಸ್ಯವಾಗಿರೆಂದೂ ಹೇಳಿ ಒಂದು ಕಿರುಮನೆಯಲ್ಲಿ ಕೂಡಿ, ನಾನು ಅವುದೋ ಕೆಲಸದ ಮೇಲೆ ಹೊರಟುಹೋದೆನು. ಮತ್ತೆ ಮರೆತು ಹೋಯಿತು. ಬಹಳ ಹೊತ್ತು ಕಳೆದ ಬಳಿಕ ಜ್ಞಾಪಕವು ಬಂದು, ಹೋಗಿ ನೋಡಲು ಆತನು ಅಲ್ಲಿರಲಿಲ್ಲ. ಒಂದುವೇಳೆ ತನಗಾವ ಆಪತ್ತುಗಳುಂಟಾಗುವವೋ ಎಂಬ ಭಯದಿಂದ ಓಡಿಹೋಗಿರಬಹುದು! ಹೇಗಾದರೂ ಈಗಲೇ ನಾನು ಹೋಗಿ ವರ್ತಮಾನವನ್ನು ತಿಳಿದು ಬರುವೆನು." ಎಂದು ಹೇಳಿ ಮುಸಾವದನು ಛೋಟುಸಿಂಗನನ್ನು ಹುಡುಕಲು ಹೊರಟನು.

ಪಾಪ, ಆತನು ಡಿಲ್ಲೀನಗರದಲ್ಲೆಲ್ಲಾ ಹುಡುಕಿ ಹುಡುಕಿ ಪ್ರಯಾಸಪಟ್ಟರೂ ಫಲವಾಗಲಿಲ್ಲ. ಕಡೆಗೆ ಚಿತ್ರಗಾರನ ಮನೆಗೆ ಹೋಗಿ ಆತನ ವೃತ್ತಾಂತವನ್ನು ಪ್ರಸ್ತಾಪಿಸಲು, ಚಿತ್ರಗಾರನು ದುಃಖದಿಂದ .. ತಾನು ಬೇಡವೆಂದು ಹೇಳಿದರೂ ಕೇಳದೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ನನ್ನ ವ್ಯಾಪಾರವನ್ನು ಕೂಡ ಮುಳುಗುವಂತೆಮಾಡಿ, ಜನಾನಾದೊಳಕ್ಕೆ ಹೋಗಿ ಬರುವೆನೆಂದು ಹೋದವನು ಈ ವರೆಗೂ ಬರಲಿಲ್ಲವೆಂದು ಹೇಳಿದನು.

ಪತ್ರಕನು ಕೊಟ್ಟ ಉತ್ತರದಿಂದ ಮುಸಾವದನು ನಿರಾಶನಾಗಿ ಇಂದಿರೆಗೆ ಈ ಸಮಾಚಾರವನ್ನು ಹೇಗೆ ಹೇಳಬೇಕೆಂದು ಬಹಳ ಹೊತ್ತು ಯೋಚಿಸಿ, ಕಡೆಗೆ ಛೋಟುಸಿಂಗನ ವೃತ್ತಾಂತವೇ ತನಗೆ ತಿಳಿಯಲಿಲ್ಲವೆಂದು ಹೇಳಿದನು. ಇಂದಿರೆಯು ದೈವಸಂಕಲ್ಪವೆಂತಿರುವುದೋ ಎಂದು ಚಿಂತಿಸತೊಡಗಿದಳು.

ಇಪ್ಪತ್ತೆರಡನೇ ಪ್ರಕರಣ.

(ಔರಂಗಜೇಬನ ಕಾಯಿಲೆ)

ಔರಂಗಜೇಬನ ತಂಗಿಯಾದ ರೋಷನ್ನಾರಳಿಗೂ ಉದಯಪುರಿಗೂ ದಿನದಿನಕ್ಕೂ ದ್ವೇಷವಧಿಕವಾಗುತ್ತಿದ್ದಿತು. ಇವರಿಬ್ಬರ ವಿವಾದಗಳನ್ನು ವಿಚಾರಿಸಲು ಬಾದಷಹನೊಬ್ಬನಲ್ಲದೆ ಮತ್ತಾರೂ ಇರಲಿಲ್ಲ. ಇಬ್ಬರ ಮಧ್ಯದಲ್ಲಿನ್ನೊಬ್ಬರು ಪ್ರವೇಶಿಸಲೇ ಕೂಡದು. ಸಮಯಬಂದಾಗ ದ್ವೇಷವನ್ನು ತೀರಿಸಲು ಕ್ರೂರ ಸರ್ಪಗಳಂತೆ ಕಾದಿದ್ದರು.

ಹೀಗಿರಲು ಸ್ವಲ್ಪ ಕಾಲದೊಳಗಾಗಿ ಬಾದಷಹನು ಜ್ವರದಲ್ಲಿ ಮಲಗಿದನು. ಅಂದಿನಿಂದಲೂ ಆತನು ದರ್ಬಾರಿಗೆ ಹೋಗದೆ ರಾಜ್ಯಾಂಗ ವಿಷಯವನ್ನೆಲ್ಲಾ ಮಂತ್ರಿಗಳಿಗೊಪ್ಪಿಸಿ ತಾನು ಔಷಧ ಸೇವನೆಯಲ್ಲಿದ್ದನು. ಬರಬರುತ್ತ ರೋಗವಧಿಕವಾಗುತ್ತ ಬಂದಿತು. ಉದಯಪುರಿಯು ಪ್ರಾಣಪ್ರಿಯನ ಆರೋಗ್ಯವನ್ನು ಕೇಳಿ ಚಿಂತಾಕ್ರಾಂತಳಾಗಿ ನಿದ್ರಾಹಾರಗಳನ್ನು ಬಿಟ್ಟು ಪರಿತಪಿಸುತ್ತಿದ್ದಳು.

ರೋಷನಾರೆಯು ತನ್ನ ಕೋರಿಕೆಯನ್ನು ಈಡೇರಿಸಲು ಇದೇ ಸಮಯವೆಂದು ಯೋಚಿಸಿ ಬಾದಷಹನ ಮಂದಿರದ ಸುತ್ತಲೂ ತನ್ನವರನ್ನು ಕಾವಲಿರಿಸಿದಳು. ವೈದ್ಯನು—ತಾನು ಇಬ್ಬರ ಹೊರತು ಮತ್ತಾರೂ ಬಾದಷಹನನ್ನು ನೋಡಕೂಡದೆಂದು ಅಡ್ಡಿ ಮಾಡಿದಳು. ಮಂತ್ರಿಗಳೂ ಸರದಾರರೂ ಸಾಮಂತರೂ ಬಾದಷಹನ ದರ್ಶನಾರ್ಥವಾಗಿ ಹೊರಟು ಬಂದು ನಿರಾಶರಾಗಿ ಹಿಂತಿರುಗುತ್ತಿದ್ದರು. ಪಾಪ! ಪಟ್ಟಮಹಿಷಿಯಾದ ಉದಯಪುರಿಗೆ ಕೂಡ ಆಸ್ಪದವಿಲ್ಲದೆ ಹೋಯಿತು. ಪತಿಯ ಅವಸ್ಥೆ ಹೇಗಿರುವುದೋ ಎಂದು ಯೋಚಿಸುತ್ತ ಅವಳು ದಿನದಿನಕ್ಕೂ ಕ್ಷೀಣವಾಗುತ್ತ ಬಂದಳು. ರೋಗಪೀಡಿತನಾದ ಬಾದಷಹನನ್ನು ನೋಡಬೇಕೆಂದು ಪಟ್ಟ ಪ್ರಯಾಸವು ಸಫಲವಾಗಲಿಲ್ಲ. ಬಾದಷಹನ ರೋಗವು ವೈದ್ಯರ ಚಿಕಿತ್ಸೆಗಳಿಗೂ ಔಷಧಕ್ಕೂ ಜಗ್ಗದೆ ಮೀರುತ್ತಿದ್ದಿತು. ಆತನ ದೇಹಸ್ಥಿತಿಯು ರೋಷನಾರೆಯೊಬ್ಬಳಿಗೆ ಹೊರತು ಮತ್ತಾರಿಗೂ ತಿಳಿಯುತ್ತಿರಲಿಲ್ಲ. ಇವಳು ಒಂದೊಂದು ಬಾರಿ ಒಂದೊಂದು ಬಗೆಯಾಗಿ ಹೇಳುತ್ತ ಸಂದೇಹವನ್ನು ಹೆಚ್ಚಿಸುತ್ತಿದ್ದಳು. ಉದಯಪುರಿಯ ಮನಃಸ್ಥಿತಿಯು ಹೇಳುವಂತೆಯೇ ಇರಲಿಲ್ಲ.

ಸ್ವಲ್ಪ ದಿನಗಳಲ್ಲಿಯೇ ಬಾದಷಹನು ಬದುಕುವುದು ದುರ್ಲಭವೆಂದು ತೋರಿತು. ರೋಷನಾರೆಗೆ ಅಣ್ಣನು ಸಾಯುವನೆಂದು ದುಃಖವಾಗುತ್ತಿದ್ದರೂ ರಾಜ್ಯಲೋಭವು ಇವಳನ್ನಾಕ್ರಮಿಸಿದುದರಿಂದ ರಾಜ್ಯವನ್ನು ತನ್ನ ಸ್ವಾಧೀನ ಮಾಡಿಕೊಳ್ಳಬೇಕೆಂಬ ದುರಾಶೆಯುಂಟಾಗಿ ಅದಕ್ಕಿದೇ ಕಾಲವೆಂದೆಣಿಸಿ ಸೇವಕರನ್ನೆಲ್ಲ ತನ್ನ ವಶಮಾಡಿಕೊಂಡಳು. ಔರಂಗಜೇಬನು ಸತ್ತ ಮೇಲೆ ರಾಜ್ಯವು ತನಗೆ ಸುಸಾಧ್ಯವಾಗಬೇಕೆಂದು ಸಾಮಂತ ರಾಜರೆಲ್ಲರನ್ನೂ ತನ್ನ ವಶದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದಳು. ಜಯಪುರದ ಜಯಸಿಂಗನು ಈ ಕಾರ್ಯದಲ್ಲಿ ತನಗೆ ಸಹಾಯವಾದರೆ ತನ್ನ ಕೋರಿಕೆಯು ಸುಲಭವಾಗಿ ನೆರವೇರುವುದೆಂದು ತಿಳಿದು ಆತನಿಗೆ ಕಾಗದವನ್ನು ಬರೆದಳು. ಆದರೆ ಜಯಸಿಂಗನು ಬಾದಷಹನ ಮರಣವಾರ್ತೆಯನ್ನು ನಂಬದೆ, ಅದಕ್ಕಾವ ಪ್ರತ್ಯುತ್ತರವನ್ನೂ ಕೊಡದೆ ಸುಮ್ಮನಿದ್ದನು. ಪಾಪ! ಬಾದಷಹನು ಇಹಲೋಕವ್ಯಾಪಾರ ಜ್ಞಾನವಿಲ್ಲದೆ ತನ್ನ ಮಂಚದಮೇಲೆ ಮಲಗಿರಲು ಇವಳು ಆತನ ಮುದ್ರೆಯುಂಗುರವನ್ನು ಅಪಹರಿಸಿ ಔರಂಗಜೇಬನೇ ಬರೆದಂತೆ ರಾಜಪುತ್ರರೆಲ್ಲರಿಗೂ ಹೀಗೆ ಪತ್ರಗಳನ್ನು ಬರೆದಳು—

“ವಿಶ್ವಸನೀಯರಾದ ರಾಜಪುತ್ರರೇ! ಸರದಾರರೇ!! ನಾನು ಇಹಲೋಕವನ್ನು ಬಿಡುತ್ತಿರುವೆನು. ನನಗಾಗಿ ವಿಚಾರಪಡಬೇಡಿರಿ! ಶರೀರವು ಕ್ಷಣಭಂಗುರವೇ ಹೊರತು ಸ್ಥಿರವಾದುದಲ್ಲ. ಮುಂದೆ ನನ್ನ ದೊಡ್ಡ ಮಗನಾದ “ಮುಅಜಮ್” ಬಹು ಕ್ರೂರನಾದುದರಿಂದ ಅವನಿಗೆ ರಾಜ್ಯವನ್ನು ಕೊಡದೆ ನನ್ನ ಎರಡನೆಯ ಮಗನಾದ ಅಜೀಮನಿಗೆ ಪಟ್ಟವನ್ನು ಕಟ್ಟಿ ನನ್ನನ್ನು ಸೇವಿಸಿದಂತೆಯೇ ಆತನನ್ನು ಸೇವಿಸುತ್ತ ಬರಬೇಕು. ಇದಕ್ಕೆ ನೀವು ಸ್ವಲ್ಪವೂ ಸಂದೇಹಪಡುವುದಿಲ್ಲವೆಂದು ನಂಬಿರುವೆನು

ಆಲಂಘೀರ್ ಬಾದಷಾ.

ಹೀಗೆ ವಿಲಿಖಿತವಾದ ಪತ್ರಗಳಿಗೆ ಔರಂಗಜೇಬನ ಮುದ್ರೆಯುಂಗುರದ ಮುದ್ರೆಯನ್ನೊತ್ತಿ ಕಳುಹಿದಳು. ಮುಅಜಮನು ವಯಸ್ಕನಾದುದರಿಂದ ಆತನಿಗೆ ರಾಜ್ಯವನ್ನು ಕೊಟ್ಟರೆ ತನ್ನ ಅಪ್ಪಣೆಯಂತೆ ನಡೆಯುವುದಿಲ್ಲವೆಂದೂ ವಯಸ್ಸಿನಲ್ಲಿ ಚಿಕ್ಕವನೂ ರಾಜ್ಯಭಾರವೆಂದರೇನೆಂಬುದನ್ನರಿಯದವನೂ ಆದ ಅಜೀಮನಿಗೆ ಪಟ್ಟವನ್ನು ಕಟ್ಟಿದರೆ ಆತನು ವಯಸ್ಕನಾಗುವವರೆಗೆ ತಾನೇ ರಾಜ್ಯವನ್ನಾಳಬಹುದೆಂದೂ ಯೋಚಿಸಿ, ರೋಷನಾರೆಯು ಈ ರೀತಿಯಾಗಿ ಬರೆದಳು.

ಸಾಮಂತರಾಜರೆಲ್ಲರೂ ಈ ಕಾಗದದಿಂದ ಅನುಮಾನಪಟ್ಟು ಆವ ಬಗೆಯಾಗಿಯೂ ಉತ್ತರವನ್ನೇ ಕೊಡದೆ ಸುಮ್ಮನಿದ್ದರು. ಸಾಮಂತರಾಜರಲ್ಲಿ ಕೆಲವರು ನಿಜಾಂಶವನ್ನರಿಯಲು ಡಿಲ್ಲಿಗೇ ಬಂದು ಅರಮನೆಯ ದ್ವಾರಪಾಲಕರಿಗೆ ಸಾವಿರಾರು ರೂಪಾಯಿಗಳ ಲಂಚವನ್ನು ಕೊಟ್ಟರೂ ನಿಜಾಂಶವು ತಿಳಿಯಲಿಲ್ಲ.

ಜೀವಸಹಿತನಾಗಿರುವಾಗ ಬಾದಷಹನ ದರ್ಶನಲಾಭವು ಒಂದು ಸಲವಾದರೂ ತನಗೆ ಲಭಿಸುವದೋ ಇಲ್ಲವೋ ಎಂಬದಾಗಿ ಉದಯಪುರಿಯು ವಿಷಣ್ಣಹೃದಯಳಾಗಿ ಅನವರತವೂ ಪರಿತಪಿಸುತ್ತಿದ್ದಳು ಇಂದಿರೆಯು ಮನವೊಲಿವಂತೆ ಮಾಡಿಕೊಂಡು ಅವಳಿಂದಲಾದರೂ ತನ್ನ ಅಭೀಷ್ಟವನ್ನು ಹೊಂದಬೇಕೆಂದು ಭಾವಿಸಿ, ಅವಳನ್ನು ಆದರದಿಂದ ಬಳಿಗೆ ಕರೆದು—"ಇಂದಿರಾ ಕಾರ್ಯೋಪಾಯಗಳನ್ನು ತಿಳಿದು ಸಾಧಿಸುವುದರಲ್ಲಿ ನಿನಗೆ ಸಮಾನರಾರೂ ಇಲ್ಲವೆಂದು ಸ್ವಯಂ ಬಾದಷಹರೇ ನನ್ನೊಡನೆ ಎಷ್ಟೋ ಸಲ ಹೇಳಿರುವರು. ಶತ್ರು ಸಮೂಹದಿಂದ ಚಂದ್ರಾವತಿಯನ್ನು ಎಷ್ಟೋ ಚಮತ್ಕಾರದಿಂದ ತಪ್ಪಿಸಿ ನಿನ್ನ ರಾಜಭಕ್ತಿಯನ್ನು ಲೋಕದಲ್ಲೆಲ್ಲ ಪ್ರಕಟಿಸಿದೆಯಂತೆ. ಆದುದರಿಂದ ಅಭಿಮಾನವತಿಯಾದ ನೀನು ನನಗೂ ಸಹಾಯಮಾಡಬೇಕೆಂದು ಕೋರುವೆನು. ಬಾದಷಹರು ರೋಗದಲ್ಲಿರುವುದು ನಿನಗೂ ತಿಳಿದೇ ಇರುವುದಷ್ಟೋ! ಪ್ರಾಣದಿಂದಿರುವಾಗ ಒಂದು ಸಲವಾದರೂ ಅವರನ್ನು ನೋಡಬೇಕೆಂದರೆ ರೋಷನಾರಳು ದೊಡ್ಡ ಹುಲಿಯಂತೆ ಅಡ್ಡಿಯಾಗಿರುವಳು. ನೀನು ಹೇಗಾದರೂ ಮಾಡಿ ನನ್ನನ್ನು ಅವರ ಸಮೀಪಕ್ಕೆ ಕರೆದುಕೊಂಡು ಹೋಗಬೇಕು. ನನಗೆ ಇದೊಂದು ಸಹಾಯ ಮಾಡಿದೆಯಾದರೆ ನಿನ್ನ ನಿರ್ಬಂಧವನ್ನು ತಪ್ಪಿಸಿ, ನಿನಗೆ ಬೇಕಾದಲ್ಲಿಗೆ ಹೋಗಲು ಅನುಕೂಲಪಡಿಸಿಕೊಡುವೆನು." ಎಂದು ಕಣ್ಣೀರು ಸುರಿಸಿದಳು.

ಸದಯಹೃದಯಳಾದ ಇಂದಿರೆಗೆ ಉದಯಪುರಿಯ ಈ ದೈನ್ಯಾವಸ್ಥೆಯು ತುಂಬ ಕನಿಕರವನ್ನುಂಟು ಮಾಡಿತು. ಕಾರ್ಯವನ್ನು ಸಾಧಿಸುವೆನೆಂದು ಅಭಯವಿತ್ತು ಉದಯಪುರಿಯಿಂದ ಸ್ವಲ್ಪ ದ್ರವ್ಯವನ್ನು ತೆಗೆದುಕೊಂಡು ಹೊರಟು ರೋಷನಾರೆಯ ಸೇವಕರನ್ನೆಲ್ಲ ಆದಿನವೇ ಧನಲೋಭದಿಂದ ವಶಪಡಿಸಿಕೊಂಡಳು. ಮರುದಿನದಲ್ಲಿ ಅವರಿಗೆ ಮತ್ತೂ ಲಂಚವನ್ನು ಕೊಟ್ಟು— "ಈ ದಿನ ರೋಷನಾರಾ ಬೇಗಂಯವರು ನಿದ್ರೆಹೋದ ಮೇಲೆ ಉದಯಪುರಿ ಬೇಗಂಯವರಿಗೆ ಬಾದಷಹರ ದರ್ಶನವನ್ನು ಮಾಡಿಸಬೇಕು." ಎಂದು ಹೇಳಿದಳು. ಧನಲೋಭದಿಂದವರು ಆಗಲೆಂದೊಪ್ಪಿಕೊಂಡರು. ಈ ಸಮಾಚಾರವನ್ನು ಉದಯಪುರಿಗೆ ತಿಳುಹಿ, ಆ ರಾತ್ರಿ ಅವಳನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಬಾದಷಹನ ಮಹಲಿನ ದ್ವಾರಪಾಲಕರಿಗೆಲ್ಲ ಮುತ್ತಿನಹಾರಗಳನ್ನು ಬಹುಮಾನ ಮಾಡಲು ಅವರೆಲ್ಲರೂ ಅತ್ಯಂತ ಸಂತೋಷದಿಂದ ಇಬ್ಬರನ್ನೂ ಕರೆದುಕೊಂಡು ಹೋಗಿ ಬಾದಷಹನು ಮಲಗಿದ್ದ ಸ್ಥಳದಲ್ಲಿ ಬಿಟ್ಟರು. ಉದಯಪುರಿಯು ಔರಂಗಜೇಬನ ಬಳಿಗೆ ಹೋಗಿ ಆತನ ಶರೀರವನ್ನು ಮುಟ್ಟಿನೋಡಿದಳು ಆಹಾರವಿಲ್ಲದಿದ್ದುದರಿಂದ ಆತನ ಶರೀರವು ಶುಷ್ಕವಾಗಿ ನರಗಳು ಕಾಣುತ್ತಿದ್ದುವು. ಅವಳು ಸ್ವಲ್ಪ ಹೊತ್ತು ಅವನ ಪಾದಗಳ ಸಮೀಪದಲ್ಲಿ ಕುಳಿತು ತನ್ನ ವಸ್ತ್ರದಿಂದ ಪಾದಗಳನ್ನು ಮೆತ್ತಗೆ ಒತ್ತುತ್ತಲಿರಲು ಸ್ವಲ್ಪಹೊತ್ತಿಗೆ ಬಾದಷಹನು ಕಣ್ತೆರೆದು ಉದಯಪುರಿಯನ್ನು ನೋಡಿ ಕಣ್ಣೀರನ್ನು ಸುರಿಸುತ್ತ "ಈವರೆಗೆ ಏಕೆ ಬರಲಿಲ್ಲ?" ಎಂದು ಸಂಜ್ಞೆಯಿಂದ ಕೇಳಿದನು. ಅದಕ್ಕೆ ಉದಯಪುರಿಯು— "ಮಹಾರಾಜ! ನಾನೇನು ಮಾಡಲಿ? ರೋಷನಾರೆಯು ನಿಮ್ಮ ದರ್ಶನಕ್ಕೆ ಅಡ್ಡಿ ಮಾಡಿರುವಳು." ಎಂದು ದೈನ್ಯದಿಂದ ಹೇಳುತ್ತಿರುವ ಸ್ವರಲ್ಲಿಯೇ ಪಕ್ಕದ ಕಿರುಮನೆಯಲ್ಲಿಯೇ ಮಲಗಿದ್ದ ರೋಷನಾರೆಗೆ ಅಕಸ್ಮಾತ್ತಾ ಉದಯಪುರಿಯ ಕಂಠಸ್ವರವು ಕೇಳಿಬರಲು, ಅಗಾಧ ಕಾರ್ಯಚಿಂತೆಯಲ್ಲಿದ್ದ ರೋಷನಾರೆಯು ಕೆಲಸ ಕೆಟ್ಟಿತೆಂದು ಕೆರಳಿ, ಧಟ್ಟನೆದ್ದು ಬಂದು ಉದಯಪುರಿಯ ಸೆರಗನ್ನು ಹಿಡಿದೆಳೆದು ಮಂಚದಿಂದ ಕೆಳಕ್ಕೆ ಕೆಡಹಿದಳು. ತತ್‌ಕ್ಷಣವೇ ಭೀತಿಚಿತ್ತಳಾಗಿದ್ದ ಉದಯಪುರಿಯು ರೋಷದಿಂದ ತಾನೂ ರೋಷನಾರೆಯ ಸೆರಗನ್ನು ಹಿಡಿದು ಸ್ವಲ್ಪ ದೂರ ಎಳೆದುಕೊಂಡು ಹೋದಳು. ಸ್ವಲ್ಪಹೊತ್ತಿನೊಳಗೆ ಇಬ್ಬರೂ ದುರಾಗ್ರಹಾಪರವಶರಾಗಿ ಮುಷ್ಟಿಯುದ್ಧಕ್ಕೆ ಮೊದಲು ಮಾಡಿದರು. ಈ ವಿಷಯವನ್ನು ತಿಳಿದು ರೋಷನಾರೆಯು ಏನು ಮಾಡುವಳೋ ಎಂಬ ಭೀತಿಯಿಂದ ಸೇವಕರೆಲ್ಲರೂ ಅತ್ತಿತ್ತ ಓಡಿಹೋದರು. ಸುಕುಮಾರಿಯಾದ ಉದಯಪುರಿಯು ಅವಳ ಮುಷ್ಟಿ ಪ್ರಹಾರಗಳನ್ನು ತಡೆಯಲಾರದೆ ಸ್ವಲ್ಪ ಹೊತ್ತಿನ ಒಳಗಾಗಿ ಕೆಳಗೆ ಬಿದ್ದು ಮೂರ್ಛಿತೆಯಾದಳು. ಬಿದ್ದವಳನ್ನು ಆಗಲೇ ರೋಷನಾರೆಯು ಎಳೆದು ದ್ವಾರದಿಂದಾಚೆ ಹಾಕಿದಳು. ಪಾಪ! ಸ್ಮೃತಿಯಿಲ್ಲದೆ ಬಿದ್ದಿದ್ದ ಔರಂಗಜೇಬನಿಗೆ ಇದಾವುದೂ ತಿಳಿಯುವಂತಿರಲಿಲ್ಲ! ಇದೆಲ್ಲವನ್ನೂ ನೋಡಿದ ಇಂದಿರೆಯು ಕನಿಕರಪಟ್ಟು ತತ್‌ಕ್ಷಣವೇ ಬಂದು ಉದಯಪುರಿಯನ್ನು ಉಪಚರಿಸಿ ಮೆಲ್ಲನೆ ಅಂತಃಪುರಕ್ಕೆ ಕರೆದೊಯ್ದಳು.

ಧನಲೋಭದಿಂದ ಉದಯಪುರಿಯನ್ನು ಒಳಗೆ ಬರಲು ಅವಕಾಶಕೊಟ್ಟ ಸೇವಕರು ರೋಷನಾರೆಯ ಘಾತುಕತನವನ್ನು ತಿಳಿದಿದ್ದುದರಿಂದ ತಮಗಾವ ದಂಡನೆಯಾಗುವುದೋ ಎಂದು ನಡುಗುತ್ತಿದ್ದರು. ಆದರೆ, ಆವ ಕಾರಣದಿಂದಲೋ ರೋಷನಾರೆಯು ಆವ ಮಾತನ್ನೂ ಆಡದೆ ತಲೆಬಗ್ಗಿಸಿಕೊಂಡು ಪುನಃ ತನ್ನ ಕಿರುಮನೆಗೆ ಹೋಗಿ ಮಲಗಿಕೊಂಡಳು.

ಅಂದಿನಿಂದಲೂ ದೈವಾನುಗ್ರಹದಿಂದ ಬಾದಷಹನಿಗೆ ಗುಣವಾಗುತ್ತ ಬಂದಿತು. ಕ್ರಮಕ್ರಮವಾಗಿ ಆಹಾರನಿದ್ರೆಗಳಲ್ಲಿ ಅಭಿರುಚಿಯುಂಟಾಗಿ ಎರಡು ವಾರಗಳೊಳಗಾಗಿ

ಅವನು ಹಾಸಿಗೆಯಿಂದೆದ್ದು ಅತ್ತಿತ್ತ ತಿರುಗಾಡಲಾರಂಭಿಸಿದನು. ಈ ಶುಭ ಸಮಾಚಾರವನ್ನು ತಿಳಿದ ಉದಯಪುರಿಯು ಅತ್ಯಾನಂದದಿಂದ ರೋಷನಾರೆಯು ತನಗೆ ಮಾಡಿದ ತೊಂದರೆಗಳಿಗಾಗಿ ಮುಯ್ಯನ್ನು ತೀರಿಸಿಕೊಳ್ಳುವೆನೆಂದು ಹಿಗ್ಗುತ್ತಿದ್ದಳು; ಮತ್ತು ಅಂದು ರಾತ್ರಿ ತನಗೆ ಮಾಡಿದ ಸಹಾಯಕ್ಕಾಗಿ ಇಂದಿರೆಯ ವಿಷಯದಲ್ಲಿ ಅತ್ಯಂತ ವಿಶ್ವಾಸವಿರಿಸಿ ಅಂದಿನಿಂದ ಅವಳನ್ನು ವಿಶೇಷವಾಗಿ ಗೌರವಿಸುತ್ತಿದ್ದಳು. ಕೆಲವು ದಿನಗಳಲ್ಲಿಯೇ ಇಂದಿರೆಯನ್ನು ಸಮೀಪಕ್ಕೆ ಕರೆದು "ಇಂದಿರಾ! ರಾಜಪುತ್ರಿಯಾದ ನೀನು ಸುಕುಮಾರಿಯು; ಕಷ್ಟಗಳನ್ನು ಸಹಿಸಲಾರೆಯಾದುದರಿಂದ ಇನ್ನು ಮುಂದೆ ನೀನ್ಯಾವ ಕೆಲಸಗಳನ್ನೂ ಮಾಡದೆ ನನ್ನಲ್ಲಿ ಪೂರ್ಣವಿಶ್ವಾಸವಿರಿಸಿ, ನನ್ನ ಬಳಿಯಲ್ಲಿಯೇ ಇರು. ಇನ್ನು ನಿನಗೆ ಯಾವ ಲೋಪವನ್ನೂ ಉಂಟು ಮಾಡುವುದಿಲ್ಲ. ಬಾದಷಹನಿಂದ ಇನ್ನು ನಿನಗಾವ ಭಯವೂ ಇಲ್ಲ" ಎಂದು ಅನೇಕ ವಿಧವಾಗಿ ಹೇಳಿ ತನಗಿರುವ ವಿಶ್ವಾಸವನ್ನು ಪ್ರಕಟಪಡಿಸಿದಳು.

ಔರಂಗಜೇಬನಿಗೆ ರೋಗವು ಸಂಪೂರ್ಣವಾಗಿಗುಣವಾಗಿ ಎಂದಿನಂತೆ ರಾಜ್ಯಕಾರ್ಯಗಳನ್ನೂ ಸ್ವತಃ ವಿಚಾರಿಸುವಷ್ಟರ ಶಕ್ತಿಯುಂಟಾಯಿತು. ಕ್ರಮವಾಗಿ ಎಲ್ಲವನ್ನೂ ವಿಚಾರಿಸುತ್ತ ಬಂದನು. ರೋಷನಾರೆಯ ದುರಾಲೋಚನೆಗಳನ್ನೂ ಅವಳು ರಾಜಪುತ್ರರಿಗೆ ಬರೆದಿದ್ದ ಕಾಗದಗಳನ್ನೂ ಇನ್ನೂ ಅದಕ್ಕೆ ಸಂಬಂಧಪಟ್ಟ ಕುಹಕಗಳನ್ನೂ ಉದಯಪುರಿ ಮೊದಲಾದವರಿಂದ ತಿಳಿದು ಅವಳ ಮೇಲೆ ಮಹದಾಗ್ರಹವನ್ನು ಹೊಂದಿದನು. ಆದರೆ ತನ್ನ ತಂಗಿಯಾಗಿದ್ದುದರಿಂದಲೂ ಮೊದಲು ಅವಳಿಂದ ತನಗೆ ತುಂಬ ಸಹಾಯವಾಗಿದ್ದುದರಿಂದಲೂ ತನ್ನ ಕೋಪವನ್ನು ಅವಳ ಮುಂದೆ ತೋರ್ಪಡಿಸಲಿಲ್ಲವಾದರೂ ಅಂದಿನಿಂದ ಅವಳ ಮಹಲಿಗೆ ಹೋಗಿ ಅವಳನ್ನು ನೋಡಿ ಸಂಭಾಷಿಸುವುದನ್ನು ಮಾತ್ರ ಬಿಟ್ಟನು. ಈ ವೃತ್ತಾಂತವೆಲ್ಲವನ್ನೂ ಗೂಢಚಾರರಿಂದ ತಿಳಿದ ರೋಷನಾರೆಯು ಅಗಾಧವಾದ ಚಿಂತೆಯಲ್ಲಿ ಮುಳುಗುವಂತಾದಳು. ತನ್ನ ಪ್ರಯತ್ನಗಳೆಲ್ಲವೂ ಭಂಗವಾದುದರಿಂದ ಅವಳಿಗೆ ದುಃಖವೂ ಆಗ್ರಹವೂ ಒಟ್ಟಿಗೆ ಉಂಟಾಯಿತು. ಉದಯಪುರಿಯೂ ಅವಳ ಮೇಲೆ ಕತ್ತಿಯನ್ನು ಕಟ್ಟಿ, ಅವಳ ಕ್ರೂರ ಕೃತ್ಯಗಳಿಗೆ ಭಯಪಡುತ್ತಿದ್ದರೂ ಕಾರ್ಯೋಪಾಯ ಚತುರೆಯಾದ ಇಂದಿರೆಯು ತನಗೆ ಸಹಾಯಕಳಾಗಿರುವಳೆಂದು ಧೈರ್ಯಹೊಂದ ರೋಷನಾರೆಗೆ ಪ್ರತೀಕಾರ ಮಾಡುವ ಯೋಚನೆಯನ್ನು ಮಾಡುತ್ತಿದ್ದಳು.

ಇಪ್ಪತ್ತ ಮೂರನೆ ಪ್ರಕರಣ.

(ಛೋಟುಸಿಂಗ್)

ಹಿಂದೆ ಛೋಟುಸಿಂಗನನ್ನು ಮನಾವದನು ಜನಾನಾ ಮಹಲಿನ ಒಂದು ಕಿರುಮನೆಯಲ್ಲಿ ಕೂಡಿದ್ದನೆಂದೂ ಆ ಮೇಲೆ ಅವನು ಬಂದು ನೋಡಲು ಇರಲಿಲ್ಲವೆಂದೂ ಹೇಳಿದ್ದೆವಷ್ಟೆ ? ಛೋಟುಸಿಂಗನು ಉದಯಪುರಿಯ ಜನಾನೆಯನ್ನು ಪ್ರವೇಶಿಸುತ್ತಿರುವಾಗ ರೋಷನಾರೆಯ ಮುಖ್ಯ ಸೇವಕನಾದ ಫರುಕ್‌ಫೈರನು ತನ್ನ ಕೈಯಲ್ಲಿ ವೀಣೆಯನ್ನು ಹಿಡಿದುಕೊಂಡು ಬಂದು ಆತನ ಬಳಿಯನ್ನು ಸೇರಿ ಆತನು ಬರೆದ ಚಿತ್ರಪ್ರತಿಮೆಗಳನ್ನು ನೋಡಿ ಸಂತೋಷಪಟ್ಟು ತನ್ನಲ್ಲಿದ್ದ ವೀಣೆಯನ್ನು ಆತನಿಂದ ಸರಿಮಾಡಿಸಿ ಈಗಲೇ ಬರುವೆನೆಂದು ಹೋದನಲ್ಲವೆ? ಫರುಕ್‌ಫೈರನು ವೀಣೆಯನ್ನು ತೆಗೆದುಕೊಂಡು ಜನಾನೆಯನ್ನು ಪ್ರವೇಶಿಸಿದ ಕೂಡಲೇ ರೋಷನಾರೆಯು ನೋಡಿ ಆಶ್ಚರ್ಯದಿಂದ "ಇಷ್ಟು ಬೇಗ ಸರಿಮಾಡಿಸಿದೆಯಾ? ಇಷ್ಟು ಜಾಗ್ರತೆಯಾಗಿ ಈ ವೀಣೆಯನ್ನು ಇಷ್ಟು ಚೆನ್ನಾಗಿ ಸರಿಮಾಡಿರುವರಾರು? " ಎಂದು ಕೇಳಲು, ಅದಕ್ಕೆ ಫರುಕ್‌ಫೈರನು, "ಬೇಗಮ್‌ಸಾಹೇಬಾ" ಛೋಟುಸಿಂಗನೆಂಬ ಚಿತ್ರಕಾರನೊಬ್ಬನು ಉದಯಪುರಿ ಬೇಗಮರ ಮಹಲಿಗೆ ಹೋಗುತ್ತಿದ್ದನು; ಆತನ ಸಮಾಚಾರವನ್ನು ವಿಚಾರಮಾಡಿದರೆ ಅವನೊಬ್ಬ ಅವತಾರಪುರುಷನಿರಬಹುದೆಂದು ತೋರುವುದು ಚಿತ್ರಪ್ರತಿಮೆಗಳನ್ನು ಬರೆಯುವುದರಲ್ಲಿ ಆತನಿಗೆ ಸಮಾನರಾರೂ ಈ ವರೆಗೆ ಹುಟ್ಟಿರಲಾರರು! ಆತನು ಒಂದು ದಂತದ ಬೀಸಣಿಗೆಯನ್ನು ಕೆತ್ತಿ ಅದರ ಮೇಲೆ ಉದಯಪುರಿಯನ್ನೂ ಬಾದಷಹರನ್ನೂ ಕೆತ್ತಿರುವನು. ಆತನಿಗೆ ಸಂಗೀತಶಾಸ್ತ್ರದಲ್ಲಿಯೂ ಪರಿಶ್ರಮವಿರುವಂತೆ ತೋರುವುದು. ಆತನೇ ಈ ವೀಣೆಯನ್ನು ಸರಿಮಾಡಿಕೊಟ್ಟನು. ಅವನು ಉದಯಪುರೀ ಬೇಗಮರವರಿಗೆ ಆ ದಂತದ ಬೀಸಣಿಗೆಯನ್ನೊಪ್ಪಿಸಿ, ಅವರಿಂದ ಏನಾದರೂ ಬಹುಮಾನವನ್ನು ಪಡೆಯಬೇಕೆಂದಿರುವನು. " ಎಂದನು. ಅದಕ್ಕಾ ರೋಷನಾರೆ,—"ಏನು! ಆ ಛೋಟುಸಿಂಗನಿಗೆ ಕಣ್ಣುಗಳು ನೆತ್ತಿಗೆ ಹತ್ತಿರುವುವೊ ಇಲ್ಲವೊ? ಮೊದಲು ನನ್ನ ದರ್ಶನವನ್ನು ಮಾಡಿ ನನ್ನಿಂದ ಬಹುಮಾನವನ್ನು ಹೊಂದದೆ ಅವಳ ಮಹಲಿಗೇಕೆ ಹೋದನು? ನನಗೆ ಇದು ಎಷ್ಟು ಅಪಮಾನಕರವು! "ಎಂದು ಆಗ್ರಹಮಾಡಿದಳು ಫರುಕ್‌ಫೈರನು ಛೋಟುಸಿಂಗನಮೇಲಿದ್ದ ಅಭಿಮಾನದಿಂದ ರೋಷನಾರೆಯನ್ನು ಕುರಿತು,—ಬೇಗಮ್‌ಸಾಹೇಬಾ! ತಾವು ಇಷ್ಟು ಆಗ್ರಹಮಾಡುವ ಕಾರಣವಿಲ್ಲ. ಅವನು ತಮ್ಮ ದರ್ಶನದಲ್ಲಿ ಅತ್ಯಂತ ಕುತೂಹಲವುಳ್ಳವನಾಗಿರುವನಲ್ಲದೆ, ನನ್ನನ್ನು ಇಲ್ಲಿಗೆ ಕರೆದು

ಕೊಂಡು ಹೋಗಬೇಕೆಂದು ಪ್ರಾರ್ಥಿಸಿದನು. ನಾನು ತಮ್ಮ ಅಪ್ಪಣೆ ಪಡೆದು ಬರುವೆನೆಂದು ಹೇಳಿಬಂದೆನು. ಇನ್ನೂ ಅವನು ನನ್ನ ಮಾರ್ಗಪ್ರತೀಕ್ಷೆಯಲ್ಲಿಯೇ ಇರಬಹುದು;" ಎಂದನು.

ಥೋಟುಸಿಂಗನನ್ನು ಕರೆತರುವಂತೆ ಆಜ್ಞೆಯಾಯಿತು. ಫರುಕ್‌ಷೈರನು ಬಂದು ನೋಡಿದನು. ಥೋಟುಸಿಂಗನು ಇರಲಿಲ್ಲ; ಭಯದಿಂದ ಪೆಲ್ಲಪೆಲ್ಲನೆ ಹೋಗಿ ರೋಷನಾರೆಗೆ ಥೋಟುಸಿಂಗನು ಸಿಕ್ಕಲಿಲ್ಲವೆಂದು ಹೇಳಿದನು. ರೋಷನಾರೆ ರೋಷದಿಂದ ತನ್ನ ಕಡೆಯ ಭಟರಿಬ್ಬರನ್ನು ಕರೆದು ಉದಯಪುರಿಯ ಅಂತಃಪುರದ್ವಾರದಲ್ಲಿ ಹೊಂಚಿದ್ದು ಅವನು ಹೊರಗೆ ಕಾಲಿಟ್ಟೊಡನೆಯೇ ಕರೆತರಬೇಕೆಂದು ಆಜ್ಞಾಪಿಸಿ ಕಳುಹಿದಳು. ಸೇವಕರು ಕಾದಿದ್ದು ಮುಸಾವದನು ಅವನನ್ನು ಕಿರುಮನೆಯಲ್ಲಿ ಕೂಡಿ ಹೋದುದನ್ನು ನೋಡಿ ಒಡನೆಯೇ ಬಂದು ಆತನ ಬಾಯ್ಗೆ ಒಟ್ಟೆಯನ್ನು ತುರುಕಿ, ಕೈಕಾಲುಗಳನ್ನು ಕಟ್ಟಿ ಹೊತ್ತುಕೊಂಡು ಹೋಗಿ ಕಾರಾಗ್ರಹದಲ್ಲಿಟ್ಟರು.

ಫರುಕ್‌ಷೈರನು ಆತನನ್ನು ಹೇಗಾದರೂ ಉಪಾಯವಾಗಿ ಕಾರಾಗ್ರಹದಿಂದ ತಪ್ಪಿಸಬೇಕೆಂದು ಯೋಚಿಸಿ ಪ್ರಯತ್ನಿಸಿದನಾದರೂ ಕಾರ್ಯಕಾರಿಯಾಗಲಿಲ್ಲ. ಆದರೂ ನಿರಾಶನಾಗದೆ ಥೋಟುಸಿಂಗನಿಗೆ ಅಟಗಡಿಗೆ ಧೈರ್ಯವನ್ನು ಹೇಳುತ್ತಲೂ ಆಹಾರಪದಾರ್ಥಗಳನ್ನು ಕೊಡುತ್ತಲೂ ತನ್ನ ಸ್ನೇಹವನ್ನು ವ್ಯಕ್ತಪಡಿಸುತ್ತಿದ್ದನು. ರೋಷನಾರೆಯು ಇತರ ಸೇವಕರೂ ಆತನಿಂದ ತಮಗೆ ಬೇಕಾದ ಚಿತ್ರಪ್ರತಿಮೆಗಳನ್ನು ಬರೆಯಿಸಿಕೊಂಡು ತಾವೂ ತಕ್ಕ ಉಪಕಾರವನ್ನು ಮಾಡುತ್ತಿದ್ದರು.

ಹೀಗೆಯೇ ಕೆಲವು ದಿನಗಳು ನಡೆದ ಮೇಲೆ ಒಂದು ದಿವಸ ರೋಷನಾರೆಯು ಥೋಟುಸಿಂಗನನ್ನು ಕಾರಾಗ್ರಹದಿಂದ ಕರೆಯಿಸಿಕೊಂಡು, ಆತನನ್ನು ಆಪಾದಮಸ್ತಕಪರ್ಯಂತ ನೋಡಿ, ಒಡನೆಯೇ ಆತನೊಬ್ಬ ರಾಜಪುತ್ರನಿರಬಹುದೆಂದೂ ಏನೋ ಕೆಲಸದಿಂದ ಹೀಗೆ ವೇಷಾಂತರವನ್ನು ತಳೆದು ಬಂದಿರುವನೆಂದೂ ನಿರ್ಧರಿಸಿ ಕ್ರೋಧದಿಂದ ಅವನನ್ನು ಸುಟ್ಟು ಹಾಕುವವಳಂತೆ ನೋಡಿದಳು. ಬಳಿಕ ಈ ರೀತಿ ಉತ್ತರಪ್ರತ್ಯುತ್ತರವನ್ನು ಬೆಳಸಿದಳು:---

"ಎಲಾ, ನೀನಾರು? ಉದಯಪುರಿಯ ಮಹಲನ್ನು ಕುರಿತು ನೀನೇಕೆ ಹೋಗಿದ್ದೆ?"

ಥೋಟು:—ಅಮ್ಮಾ! ನಾನೊಬ್ಬ ಚಿತ್ರಗಾರನು. ದಂತದ ಬೀಸಣಿಗೆ ಮೊದಲಾದುವುಗಳನ್ನು ಮಾಡಿ ನಿಮ್ಮಂಥವರಿಗೆ ಕೊಟ್ಟು ಬಹುಮಾನವನ್ನು ಪಡೆದು ಜೀವಿಸಬೇಕೆಂದು ಬಂದಿರುವೆನು.

ರೋಷ:— ಮೂರ್ಖ! ಸುಳ್ಳಾಡಬೇಡ! ಉದಯಪುರಿಯೊಡನೆ ನಿನಗೇನು ಸಂಬಂಧವಿರುವುದು? ನಿಜವನ್ನು ಹೇಳು.

ಥೋಟು:— ಈಗ ಹೇಳಿದೆನಲ್ಲವೆ? ಬೀಸಣಿಗೆಯನ್ನು ಬೇಗಮರಿಗೆ ಒಪ್ಪಿಸಿ, ಏನಾದರೂ ಬಹುಮಾನವನ್ನು ಪಡೆಯಲು ಹೋಗಿದ್ದೆನು. ಇದಕ್ಕಿಂತಲೂ ಇನ್ನು ನಿಜವನ್ನು ಹೇಳಲು ನನಗೆ ಶಕ್ತಿ ನಾಲದು.

ರೋಷ:— ಎಲಾ, ದುರ್ಮಾರ್ಗನೆ! ನಿನಗೆ ಪ್ರಾಣದ ಮೇಲೆ ಆಶೆಯಿದ್ದರೆ ನಿಜವನ್ನು ಹೇಳು. ನಿನ್ನ ವಿಚಾರವೆಲ್ಲವನ್ನೂ ಬಲ್ಲೆನು; ಹುಷಾರ್!

ಥೋಟು:— ತಿಳಿದಿದ್ದರೂ ತಿಳಿಯದಿದ್ದರೂ ಇದೇ ನಿಜ. ನಾನೊಬ್ಬ ಚಿತ್ರಗಾರನೇ ನಿಜ.

ರೋಷ:—ಎಲೆ—ಮೂರ್ಖನೆ! ಥಟ್ಟನೆ ನಿಜವನ್ನು ಹೇಳಿದ್ದರೆ ಶಿಕ್ಷೆಯನ್ನು ಕಡಮೆಮಾಡುತ್ತಿದ್ದೆನು. ಆದರೆ, ನಿನ್ನ ಅದೃಷ್ಟವು ಚೆನ್ನಾಗಿಲ್ಲವೆಂದು ತೋರುವುದು; ಅನುಭವಿಸು.

ಒಡನೆಯೇ ಥೋಟುಸಿಂಗನನ್ನು ಕಾರಾಗ್ರಹದಲ್ಲಿಡುವಂತೆ ಅಪ್ಪಣೆಯಿತ್ತಳು; ಸೇವಕರು ಆತನನ್ನು ಕರೆದುಕೊಂಡು ಹೊರಟುಹೋದರು. ರೋಷನಾರೆಯು ಸ್ವಲ್ಪ ಹೊತ್ತು ಯೋಚಿಸುತ್ತಿದ್ದು, ಥೋಟುಸಿಂಗನನ್ನೇ ಆಧಾರವಾಗಿರಿಸಿಕೊಂಡು, ಔರಂಗಜೇಬನು ಉದಯಪುರಿಯನ್ನು ತಿರಸ್ಕರಿಸುವಂತೆ ಮಾಡುವೆನೆಂದು, ನಿರ್ಧರಿಸಿಕೊಂಡು ಒಡನೆಯೇ ಫರುಕ್‌ಷೈರನನ್ನು ಕರೆದು ಬಾದಷಹನನ್ನು ಈಗಲೇ ಕರೆತರಬೇಕೆಂದು ಹೇಳಿದಳು. ಫರುಕ್‌ಷೈರನು ತತ್‌ಕ್ಷಣವೇ ಹೋಗಿ ಸ್ವಲ್ಪಹೊತ್ತಿನೊಳಗಾಗಿ ಬಂದು— "ಬಾದಷಹರು ಉದಯಪುರಿಬೇಗಮರ ಮಹಲಿನಲ್ಲಿರುವರು" ಎಂದು ಹೇಳಿದನು. ರೋಷನಾರೆಯು ಕೋಪವಿಮ್ಮಡಿಯಾಯಿತು; ಸಿಂಹದಂತೆ ಗರ್ಜಿಸಮಾನ, ಬಾದಷಹರು ಬರುವವರೆಗೂ ಕಾದಿದ್ದು ಕರೆದುಕೊಂಡು ಬರುವಂತೆ ಹೇಳಿ ಮತ್ತೆ ಕಳುಹಿದಳು. ಫರುಕ್‌ಷೈರನು ಪ್ರತಿಮಾತಾಡದೆ ಹೊರಟುಬಂದು ಉದಯಪುರಿಯ ಮಹಲಿನಲ್ಲಿಯೇ ಕಾದುಕೊಂಡಿದ್ದನು. ಆದಿನ ಔರಂಗಜೇಬನು ರಾತ್ರಿಯವರೆಗೂ ಹೊರಗೆ ಬರಲೇ ಇಲ್ಲ. ಫರುಕ್‌ಷೈರನು ಆ ವರೆಗ ಅಲ್ಲಿಯೇ ಕಾದಿದ್ದು ಆತನು ಬಂದ ಕೂಡಲೆ ಸಲಾಮುಮಾಡಿ ರೋಷನಾರೆಯ ಅಪ್ಪಣೆಯನ್ನು ನಿವೇದಿಸಿದನು. ಔರಂಗಜೇಬನು ತನಗೆ ಈಗ ಬರಲಾಗುವುದಿಲ್ಲವೆಂದೂ ರಾತ್ರಿ ಎಂಟುಘಂಟೆಯಾದಮೇಲೆ ಬರುವೆನೆಂದೂ ಹೇಳಿ ಕಳುಹಿದನು. ಫರುಕ್‌ಷೈರನು ರೋಷನಾರೆಗೆ ಈ ಸಂಗತಿಯನ್ನು ತಿಳುಹಲು, ಅವಳು ಆತ್ಯಾಗ್ರಹದಿಂದ ಅವನನ್ನು ಹೊರಗೆ ಕಳುಹಿಬಿಟ್ಟಳು.

ಇಪ್ಪತ್ತನಾಲ್ಕನೆಯ ಪ್ರಕರಣ.

(ತಲೆಗಂದಾಯ)

ಔರಂಗಜೇಬನಿಗೆ ಸಂಪೂರ್ಣವಾಗಿ ಆರೋಗ್ಯಲಾಭವಾಯಿತು. ಮೊದಲಿನಂತೆಯೇ ತನ್ನ ಕೆಲಸಗಳನ್ನು ನಿರ್ವಹಿಸುವಂತಾದನು. ರೂಪನಗರಕ್ಕೆ ಸೈನ್ಯವನ್ನು ಕಳುಹಲು ನಿಶ್ಚಯಿಸಿದನು; ಚೆನ್ನಾಗಿ ಆರೋಗ್ಯಲಾಭವಾದಮೇಲೆ ವೈದ್ಯರಿಗೆ ಅನೇಕ ಬಹುಮಾನಗಳನ್ನು ಕೊಟ್ಟನಲ್ಲದೆ ಫಕೀರರಿಗೆ ಸಂತೃಪ್ತಿಯಾಗಿ ಅನ್ನವನ್ನು ಹಾಕಿಸಿ ಹೊಸಮಸೀದಿಗಳನ್ನು ಕಟ್ಟಿಸಿದನು. ಇವೆಲ್ಲಕ್ಕೂ ವಿಶೇಷ ದ್ರವ್ಯ ವ್ಯಯವಾಯಿತು. ಔರಂಗಜೇಬನು ತನಗೆ ಇಂತಹ ರೋಗವು ಹಿಂದುಗಳ ದೃಷ್ಟಿದೋಷದಿಂದಲೇ ಪ್ರಾಪ್ತವಾಯಿತೆಂದೂ ತಾನು ಈ ವರೆಗೆ ವ್ಯಯಮಾಡಿರುವ ದ್ರವ್ಯವನ್ನೆಲ್ಲ ಹಿಂದುಗಳಿಂದ ಕಿತ್ತುಕೊಳ್ಳಬೇಕೆಂದೂ ಯೋಚಿಸಿ, "ಜಿಜಿಯಾ" ಎಂಬ ತಲೆಗಂದಾಯವನ್ನು ಏರ್ಪಡಿಸಿದನು. ಪ್ರತಿಯೊಬ್ಬ ಹಿಂದುವೂ ಬಡವನಾಗಲಿ ಹಣಗಾರನಾಗಲಿ, ತನಗೆ ಸ್ವಲ್ಪ ಹಣವನ್ನು ಈ ಕಂದಾಯದ ಮೂಲಕ ಕೊಡಬೇಕೆಂದು ಬಾದಶಹನು ಕಠಿಣವಾಗಿ ವಿಧಿಸಿದನು. ಕೆಲವರು ಬಡಹಿಂದುಗಳು ಕಂದಾಯವನ್ನು ಕೊಡಲು ಗತಿಯಿಲ್ಲದೆ ತಮ್ಮ ಮನೆ-ಮಠಗಳನ್ನು ಮಾರಿ ಬಾದಶಹನನ್ನು ತೃಪ್ತಿಪಡಿಸಿದರು. ತನ್ನ ಅಪ್ಪಣೆಯನ್ನು ಮೀರಿ ಕಂದಾಯವನ್ನು ಕೊಡದಿದ್ದವರ ಮನೆಗೆ ನುಗ್ಗಿ ಎಲ್ಲವನ್ನೂ ಸುಲಿದುಕೊಂಡು ಬರುವಂತೆ ತನ್ನ ಭಟರಿಗೆ ಅಜ್ಞಾಪಿಸಿ, ಹಿಂದುಗಳಿಗೆ ಅನೇಕ ವಿಧವಾಗಿ ಹಿಂಸೆಯನ್ನುಂಟುಮಾಡುತ್ತಿದ್ದನು. ಇಷ್ಟೇ ಅಲ್ಲದೆ, ಪ್ರತಿಗ್ರಾಮಗಳಿಗೂ ತನ್ನ ಭಟರನ್ನು ಕಳುಹಿಸಿ, ಹಿಂದುಗಳಿಂದ ತಲೆಗಂದಾಯವನ್ನು ತೆಗೆದುಕೊಳ್ಳುತ್ತಿದ್ದನು. ಡಿಲ್ಲೀನಗರದಲ್ಲಿ ಲಕ್ಷಾಂತರ ಹಿಂದುಗಳು ಇದು ಅನ್ಯಾಯವೆಂದು ಬಾದಶಹನಲ್ಲಿ ಮೊರೆಯಿಟ್ಟರು. ಪ್ರತಿಶುಕ್ರವಾರವೂ ಔರಂಗಜೇಬನು ಜುಮ್ಮಾಮಸೀದಿಗೆ ಹೋಗುವ ವಾಡಿಕೆಯಿದ್ದುದರಿಂದ ಆದಿನ ಹಿಂದುಗಳಲ್ಲಿ ಬ್ರಾಹ್ಮಣರು ಪಂಚಾಂಗದ ಕಟ್ಟುಗಳನ್ನು ಕಂಕುಳಲ್ಲಿಟ್ಟುಕೊಂಡು ಮಾರ್ಗದಲ್ಲಿ ಕಾದಿದ್ದು ಬಾದಶಹನು ಬಂದಕೂಡಲೆ "ದುರ್ಭರವಾದ ತಲೆಗಂದಾಯವನ್ನು ತೆಗೆದುಹಾಕಿ ಬಡಕುಟುಂಬಗಳನ್ನು ಹೇಗಾದರೂ ಮಾಡಿ ಕಾಪಾಡಬೇಕೆಂ"ದು ಆತನನ್ನು ಕುರಿತು ಮೊರೆಯಿಟ್ಟರು. ಬಾದಶಹನು ಅವರ ಮಾತುಗಳಿಂದ ಅಗ್ರಹವ್ಯಗ್ರನಾಗಿ ಅವರೆಲ್ಲರನ್ನೂ ಆನೆಯ ಕಾಲ್ಗಳಿಂದ ತುಳಿಸಿ ನಿರ್ಮೂಲಮಾಡಿಸಿದನು. ಈ ಕಾರಣದಿಂದ ಹಿಂದುಗಳಿಗೆಲ್ಲ ಅವನ ಮೇಲೆ ಮಹತ್ತರವಾದ ದ್ವೇಷವು ಅಂಕುರಿಸಿತು.

ಜಿಜಿಯಾ ಕಂದಾಯವನ್ನು ಕೊಡದೆ ಔರಂಗಜೇಬನೊಡನೆ ಅಕಾರಣವಾದ ಕಲಹವನ್ನು ಮಾಡಬಾರದೆಂದು ತಿಳಿದು ಅಲ್ವಾರ್, ಭರತಪುರ್, ಬುಂದಿ, ಜಯಪುರ ಮೊದಲಾದ ಸಂಸ್ಥಾನಾಧಿಪರು ಬಾದಶಹನಿಗೆ ಕಾಣಿಕೆಗಳನ್ನು ತಂದೊಪ್ಪಿಸಿದರು. ಆದರೆ, ಉದಯಪುರಾಧೀಶನಾದ ರಾಜಸಿಂಹನು ಮಾತ್ರ ಕಂದಾಯವನ್ನು ಕೇಳಲುಬಂದ ತುರುಷ್ಕರನ್ನು ಹೆದರಿಸಿ ಓಡಿಸಿದನು. ಈ ಸಮಾಚಾರವನ್ನು ಕೇಳಿ ಔರಂಗಜೇಬನು ಕ್ರೋಧವನ್ನು ಹೊಂದಿದನಾದರೂ ರಾಜಸಿಂಹನಿಗೆ ಸ್ವಲ್ಪ ಹೆದರಿದವನಾಗಿ ಸುಮ್ಮನಿದ್ದನು.

ಆನೆಗಳಿಂದ ಬ್ರಾಹ್ಮಣರನ್ನು ತುಳಿಸಿದುದನ್ನೂ ಬಡಕುಟುಂಬಗಳಿಂದ ಕಂದಾಯವನ್ನು ತೆಗೆದುಕೊಂಡುದನ್ನೂ ಇನ್ನೂ ಅನೇಕ ವಿಧವಾದ ಕ್ರೂರಕೃತ್ಯಗಳನ್ನೂ ಕೇಳಿ ರಾಜಸಿಂಹನು ಮಹದಾಗ್ರಹದಿಂದ ಹಿಂದುಗಳ ದುರವಸ್ಥೆಗೆ ವ್ಯಥೆಪಟ್ಟು ಔರಂಗಜೇಬನಿಗೆ ಧರ್ಮಮಾರ್ಗವನ್ನು ಬೋಧಿಸುವ ಒಂದು ವಿಸ್ತಾರ ಪತ್ರವನ್ನು ಬರೆದರೆ, ಅದನ್ನು ನೋಡಿಯಾದರೂ ಅವನು ಸನ್ಮಾರ್ಗವರ್ತಿಯಾಗುವನೆಂದು ನಂಬಿ ಈ ರೀತಿಯಾಗಿ ಬರೆದು ಕಳುಹಿದನು:—

"..................ನಾನು ನಿಮ್ಮ ರಾಜಸಭೆಗೆ ಬರದಿದ್ದರೂ ರಾಜಭಕ್ತಿಯುಳ್ಳವನಾಗಿ ನಿಮಗೆ ಸಹಾಯಕನಾಗಿರಬೇಕೆಂದಿರುವೆನು. ನಾನು ಮಾಡುವ ಸಹಾಯವು ಹಿಂದೂದೇಶದಲ್ಲಿರುವ ರಾಜಾಧಿರಾಜರಿಗೂ ಸರದಾರರಿಗೂ ಸಂಸ್ಥಾನಾಧಿಪತಿಗಳಿಗೂ ನವಾಬರಿಗೂ ಉಪಯೋಗಕರವಾಗಿ, ಊರ್ಜಿತಾವಸ್ಥೆಗೆ ಕಾರಣವಾಗಿರುವುದು. ಇಷ್ಟೇ ಅಲ್ಲ; ಇರಾಣ, ತುರಾಣ, ರೋಮ್, ಟರ್ಕಿ ಮೊದಲಾದ ಸಪ್ತದ್ವೀಪಗಳಿಗೂ, ಜಲಸ್ಥಲಮಾರ್ಗಗಳಲ್ಲಿ ಪ್ರಯಾಣಮಾಡುವ ಮಾರ್ಗಸ್ಥರಿಗೂ ಉಪಯೋಗಕರವಾಗಬೇಕೆಂಬುದು ನನ್ನ ಆಶೆ. ನಿಮ್ಮ ಪೂರ್ವಜನಾದ ಮಹಮ್ಮದ ಜಲಾಲುದ್ದೀನನ ಕೀರ್ತಿ ಲೋಕದಲ್ಲೆಲ್ಲಾ ಪ್ರಖ್ಯಾತಿಹೊಂದಿರುವುದಕ್ಕೆ ಕಾರಣವೇನೆಂದರೆ, ಆತನು ಸರ್ವಜನರಲ್ಲಿಯೂ ಸಮದೃಷ್ಟಿಯನ್ನಿರಿಸಿ ಐವತ್ತೆರಡು ವರ್ಷಗಳಕಾಲ ರಾಜ್ಯಭಾರಮಾಡಿ ಅಕ್ಷಯವಾದ ಕೀರ್ತಿ ಸುಖಗಳಿಗೆ ಅಧಿಕಾರಿಯಾದನು. ಈತನು ಹಿಂದು, ಈತನು ಮಹಮ್ಮದೀಯನು, ಈತನು ಕ್ರೈಸ್ತ ಎಂಬೀ ಭೇದವನ್ನಿಡದೆ ಸಕಲ ಮತಸ್ಥರಿಗೂ ಸೌಖ್ಯವನ್ನೀಯುತ್ತ ರಾಜ್ಯವನ್ನಾಳಿದನು. ಆತನಿಗೆ ಈ ಪಕ್ಷಪಾತಬುದ್ಧಿಯಿಲ್ಲದಿದ್ದುದರಿಂದಲೇ "ಜಗದ್ಗುರು" ಎಂಬ ಪದವಿಯು ಆತನಿಗೆ ಲಭಿಸಿತು..................

ನಿಮ್ಮ ರಾಜ್ಯವನ್ನು ನೋಡಿದರೆ, ನಿಮ್ಮ ಕ್ರೂರತನದಿಂದಲೇ ನಿಮ್ಮ ಪ್ರಜೆಗಳೂ ಮಿತ್ರರೂ ನಿಮಗೆ ಪ್ರತಿಕೂಲರಾಗಿ

ರುವರು. ಎಲ್ಲಿ ನೋಡಿದರೂ ಕೊಳ್ಳೆ, ಕೊಲೆ ಇವೇ ಮೊದಲಾದವುಗಳು ಕಾಣಬರುತ್ತಿವೆ; ದಾರಿದ್ರ್ಯಲಕ್ಷ್ಮಿ ತಾಂಡವಾಡುತ್ತಿರುವಳು; ಪರಾಕ್ರಮವು ಶೂನ್ಯವಾಗಿರುವುದು; ಕಲಾಕೌಶಲ, ವ್ಯಾಪಾರ ಮೊದಲಾದವುಗಳನ್ನು ಕುರಿತು ಹೇಳಬೇಕಾದುದೇ ಇಲ್ಲ. ನೀವು ಯಾರ ವಿಷಯದಲ್ಲಿ ಅತ್ಯಭಿಮಾನದಿಂದಿರುವಿರೋ ಅಂತಹ ಮಹಮ್ಮದೀಯರೇ ನಿಮಗೆ ಪ್ರತಿಕೂಲರಾಗಿರುವರು....................ನಿಮ್ಮ ರಾಜ್ಯದ ಪ್ರಜೆಗಳಾದ ಹಿಂದುಗಳಿಗೆ ನಿಮ್ಮಲ್ಲಿ ಪ್ರೀತಿಯೇ ಇಲ್ಲ. ಪ್ರಜಾಪೀಡನವಾದ ಇಂತಹ ಸ್ವೈರವರ್ತನದಿಂದ ನಿಮ್ಮ ರಾಜ್ಯವೂ ಸಾರ್ವಭೌಮಪದವಿಯೂ ಹೇಗೆತಾನೆ ನಿಲ್ಲುವುದು? ಬಡತನದಿಂದ ಹಲುಬುತ್ತಿರುವ ನಿಮ್ಮ ಪ್ರಜೆಗಳಿಂದಲೂ, ಸನ್ಯಾಸಿಗಳು ಬೈರಾಗಿಗಳು ಇವರೆಲ್ಲರಿಂದಲೂ ಕಂದಾಯವನ್ನು ಸುಲಿದು ನಿಮ್ಮ ಕೋಶವನ್ನು ತುಂಬಿಕೊಳ್ಳುವುದಲ್ಲದೆ, ಅವರನ್ನು ನಾನಾವಿಧವಾದ ದುಃಖಗಳಿಗೆ ಗುರಿಮಾಡುತ್ತಿರುವಿರಿ...................

ನೀವು ಯಾವ ಗ್ರಂಥವನ್ನು ಈಶ್ವರದತ್ತವಾದ ಧರ್ಮಗ್ರಂಥವೆಂದು ತಿಳಿದಿರುವಿರೋ ಅಂತಹ ಪುಸ್ತಕದಲ್ಲಿ ಕೂಡ ಈಶ್ವರನು ಮಹಮ್ಮದೀಯರಿಗೆ ಮಾತ್ರವೇ ದೇವರಲ್ಲ, ಸಮಸ್ತ ಮಾನವಕೋಟಿಗೂ ಒಡೆಯನೆಂದೇ ಹೇಳಿದೆ. ಈಶ್ವರನಿಗೆ ಮಹಮ್ಮದೀಯರೂ ಇತರರೂ ಸಮಾನರಾಗಿಯೇ ಇರುವರು. ಮಾನವಶರೀರದ ವರ್ಣದಲ್ಲಿಯೂ ಸ್ವರೂಪದಲ್ಲಿಯೂ ಭೇದವಿರುವುದು ಈಶ್ವರನ ಸೃಷ್ಟಿನಿಯಮವು. ನಿಮ್ಮ ಶೂನ್ಯಮಂದಿರದಲ್ಲಿ ನೀವು ಮಾಡುವ ಪ್ರಾರ್ಥನೆಯನ್ನೂ ಆತನು ಕೇಳುವನು. ವಿಗ್ರಹಗಳುಳ್ಳ ದೇವಸ್ಥಾನಗಳಲ್ಲಿ ಘಂಟಾನಾದಯುಕ್ತಗಳಾದ ಪೂಜೆಗಳನ್ನೂ ಗ್ರಹಿಸುವನು. ಇತರ ಧರ್ಮ, ಆಚಾರ, ವ್ಯವಹಾರಗಳನ್ನು ಕುರಿತು ದುರಾಗ್ರಹವನ್ನುಹೊಂದಿ ಅವರನ್ನು ಬಾಧಿಸುವುದು ಈಶ್ವರನಿಗೆ ಎಂದಿಗೂ ಸಮ್ಮತವಿಲ್ಲವು. ಚಿತ್ರಪಠಗಳನ್ನು ಬರೆದ ಚಿತ್ರಕಾರನ ಮುಂದೆ ಪಠಗಳನ್ನು ತುಳಿದು ಹರಿದು ಹಾಕಿದರೆ ಅವನಿಗೆ ಹೇಗೆ ಕೋಪವುಂಟಾಗುವುದೋ ಹಾಗೆಯೇ ಇತರ ಮತಗಳನ್ನು ದ್ವೇಷಿಸುವುದರಿಂದ ಈಶ್ವರನ ಮಹದಾಗ್ರಹಕ್ಕೆ ಕಾರಣವಾಗಬೇಕಾದೀತು. ಈಶ್ವರನು ಅದ್ವಿತಿಯನೂ ಅಪ್ರತಿಮನೂ ಅಪ್ರಮೇಯನೂ ಆದ ಒಬ್ಬ ಚಿತ್ರಗಾರನು. ಆತನು ಈ ಪ್ರಪಂಚವೆಂಬ ವಿಸ್ತೀರ್ಣಪಠದಮೇಲೆ, ನಾನಾ ಮತಾಚಾರಗಳನ್ನೂ ವಿವಿಧ ಮನುಷ್ಯಜಾತಿಗಳನ್ನೂ ಚಿತ್ರಿಸಿರುವನು. ಹೀಗಿರುವಾಗ ನೀವು ಹಿಂದೂ ಮತವನ್ನು ದ್ವೇಷಿಸುವುದು, ಆ ಸೃಷ್ಟಿಕರ್ತನನ್ನು ದ್ವೇಷಿಸಿದಂತಾಗುವುದೆಂದು ಸ್ಪಷ್ಟವಾಗಿ ತಿಳಿದಿರುವುದು. ನ್ಯಾಯದೃಷ್ಟಿಯಿಂದ ನೋಡಿದರೆ, ನೀವು ಹಿಂದುಗಳ ಮೇಲೆ ಹಾಕಿರುವ ತಲೆಗಂದಾಯವು ಕೇವಲ ಅನ್ಯಾಯವೂ ಹೇಯವೂ ಆದುದೆಂದು ತಿಳಿಯುವುದು. ನಿಜವಾದ ರಾಜ್ಯಕರ್ತೃತ್ವವೂ ನೀತಿಯೂ ನಿಮ್ಮಲ್ಲಿಲ್ಲದಿರುವುದಕ್ಕೆ ಇದು ನಿದರ್ಶನವಾಗಿರುವುದು...........................”

ಪತ್ರಸ್ಥವಿಚಾರಗಳನ್ನು ಆಮೂಲಾಗ್ರವಾಗಿ ಓದಿ ತಿಳಿದುಕೊಂಡ ಬಾದಷಹನು ರೋಷದಿಂದ ಹಲ್ಗಳನ್ನು ಕಡಿಯುತ್ತ ತನ್ನ ಎಡಗಾಲಿನಿಂದ ಭೂಮಿಯನ್ನು ಒಪ್ಪಿಸುತ್ತ ಕ್ರೋಧವನ್ನು ಪ್ರಕಟಿಸಿದನು. ರಾಜಸಿಂಹನು ಚಂಪ್ರಾವತೀರಾಣಿಯ ಸಂರಕ್ಷಣಾರ್ಥವಾಗಿ ಸೈನ್ಯವನ್ನು ಕಳುಹಿದುದೂ ವಿಜಯಸಿಂಹನ ಸಹಾಯಕ್ಕಾಗಿ ರೂಪನಗರಕ್ಕೆ ಬರಬೇಕೆಂದಿದ್ದುದೂ ಕಂದಾಯವನ್ನು ಕೊಡದೆ ತನ್ನ ದೂತರನ್ನು ಪರಾಭವಿಸಿದುದೂ ಇವೇ ಮೊದಲಾದ ವ್ಯಾಪಾರಗಳು ಇಂಧನಗಳಾಗಿ ಪರಿಣಮಿಸಿ, ಔರಂಪಜೇಬನ ರೋಷಾಗ್ನಿಯನ್ನು ನಾಲ್ಕು ಕಡೆಯಲ್ಲಿಯೂ ಪ್ರಜ್ವಲಿಸುವಂತೆ ಮಾಡಿದುವು. ರಾಜಸಿಂಹನ ಶೌರ್ಯವನ್ನು ಮುರಿಯದಿದ್ದರೆ ಮುಂದೆ ತಾನು ಮಾಡುವ ಕಾರ್ಯಗಳಿಗೆಲ್ಲ ವಿಘ್ನವನ್ನುಂಟುಮಾಡುವನೆಂದು ತಿಳಿದು ಬಾದಷಹನು ಅಂದಿನಿಂದಲೂ ಅತ್ಯಂತ ಶ್ರದ್ಧೆಯಿಂದ ಸೈನ್ಯಗಳನ್ನು ಸಿದ್ಧಪಡಿಸುತ್ತಿದ್ದನು. ಆತನ ಸನ್ನಾಹವೆಲ್ಲವೂ ಮುಖ್ಯವಾಗಿ ರಾಜಸಿಂಹನ ಮೇಲೆ ಹೊರಡಲು ಮಾಡಲ್ಪಟ್ಟಿದ್ದರೂ ತನ್ನ ಉದ್ದೇಶವನ್ನು ಮಾತ್ರ ಒಬ್ಬರಿಗೂ ತಿಳಿಸದೆ ರೂಪನಗರದ ಮೇಲೆ ದಂಡೆತ್ತಬೇಕೆಂದು ಹೇಳುತ್ತಿದ್ದನು.

ಇತ್ತ ರಾಜಸಿಂಹನುಕೂಡ, ಭಾದಷಹನ ಯುದ್ಧಸನ್ನಾಹಗಳನ್ನು ಗೂಢಚಾರರಿಂದ ತಿಳಿದುಕೊಂಡು ತಾನೂ ಸೈನ್ಯವನ್ನು ಸಿದ್ಧಪಡಿಸುತ್ತ ತನ್ನ ಸಹಾಯಕ್ಕಾಗಿ ಬರಬೇಕೆಂದು ರಾಜಪುತ್ರರೆಲ್ಲರಿಗೂ ಬರೆದು ಕಳುಹಿದನು. ಆತನ ಗೌರವವನ್ನೂ ಪರಾಕ್ರಮವನ್ನೂ ತಿಳಿದಿದ್ದ ರಾಜಪುತ್ರರೆಲ್ಲರೂ ಆತನಿಗೆ ಸಹಾಯಮಾಡಲೊಪ್ಪಿ ಸನ್ನದ್ಧರಾಗತೊಡಗಿದರು.

ಇಪ್ಪತ್ತೈದನೆಯ ಪ್ರಕರಣ.

(ಗೋಲಕೊಂಡ)

ಅರುಣೋದಯವಾಗಿ, ಪೂರ್ವದಿಕ್ಕಿನಲ್ಲಿ ಬಿಳುಪೇರುತ್ತಿದ್ದಿತು. ಶುಕ ಪಿಕ ಸಾರಿಕಾದಿ ಪಕ್ಷಿಗಳೆಲ್ಲವೂ ಅಸ್ಪಷ್ಟಮಧುರವಾಗಿ ಗಾನಮಾಡಲಾರಂಭಿಸಿದ್ದುವು. ಪೂರ್ವದಿಕ್ಕು ಚಿತ್ರವಿಚಿತ್ರ ವರ್ಣಗಳಿಂದ ಕೂಡಿ ನೋಡುವವರಿಗೆ ಅಮಿತ ಆಹ್ಲಾದವನ್ನುಂಟುಮಾಡುತ್ತಿದ್ದಿತು. ಈ ನಿಮಿಷಮಾತ್ರದಲ್ಲಿ

ನೀಲಬಣ್ಣವೂ ಉತ್ತರಕ್ಷಣದಲ್ಲಿ ಕೆಂಪುಬಣ್ಣವೂ ಮತ್ತೊಂದು ಗಳಿಗೆಯಲ್ಲಿ ಹಳದೀಬಣ್ಣವೂ-- ಹೀಗೆ ನಾನಾ ವಿಧಗಳಾದ ಬಣ್ಣಗಳಿಂದ ಆಕಾಶವು ನೇತ್ರಾನಂದಕರವಾಗಿ ಕಾಣುತ್ತಿದ್ದಿತು. ಹಸುರಾದ ಗರಿಕೆಹುಲ್ಲಿನಮೇಲೆ ಮುತ್ತುಗಳು ಚೆಲ್ಲಲ್ಪಟ್ಟಿರುವುವೋ ಎಂಬಂತೆ ಹಿಮಬಿಂದುಗಳು ಥಳಥಳನೆ ಪ್ರಕಾಶಿಸುತ್ತಿದ್ದುವು. ತೆರೆಯಮರೆಯನ್ನು ಪ್ರವೇಶಿಸುವ ನಾಟಕ ಪಾತ್ರಗಳಂತೆ ಒಂದಾದಮೇಲೊಂದು ನಕ್ಷತ್ರಗಳು ಮಾಯವಾಗುತಲಿದ್ದುವು. ರಾತ್ರಿಯೆಲ್ಲಾ ವಿಶ್ರಾಂತಿಯಿಲ್ಲದೆ ಕೆಲಸ ಮಾಡುವವರು ಆಯಾಸಪಡುವಂತೆ ಚಂದ್ರನು ಕಾಂತಿಹೀನನಾಗುತ್ತ ಕಣ್ಮರೆಯಾಗುತ್ತಿದ್ದನು. ಅಂಧಕಾರಾಕ್ಷಸ ಸೈನ್ಯವು, ಲೋಕಬಾಂಧವನ ಆಗಮನವನ್ನು ಆತನ ಸಾರಥಿಯಾದ ಅರುಣನಿಂದ ತಿಳಿದು ದಿಗಂತಗಳಿಗೆ ಓಡುತ್ತಿದ್ದುದರಿಂದ ಬೆಳಕು ಕ್ರಮೇಣ ಹೆಚ್ಚಾಗುತ್ತಿದ್ದಿತು. ತಂಪಾದ ಪೂರ್ವದಿಕ್ಕಿನ ಗಾಳಿಯು ಮೆಲ್ಲನೆ ಬೀಸುತ್ತ ಗಾಢನಿದ್ರೆಯಲ್ಲಿರುವವರನ್ನು ಎಬ್ಬಿಸುತ್ತಿದ್ದಿತು. ಹಿಂದೂ ದೇವಾಲಯಗಳಲ್ಲಿ ಘಂಟಾನಾದವೂ ಪ್ರಾಬೋಧಿಕ ಪ್ರಾರ್ಥನೆಗಳೂ, ತುರುಷ್ಕರ ಮಸೀದೆಗಳಲ್ಲಿ ನಮಾಜುಧ್ವನಿಯೂ ಕೇಳಬರುತ್ತಲಿದ್ದುವು

ಇಂತಹ ಪ್ರಾತಃಕಾಲ ಸಮಯದಲ್ಲಿ ಗೋಲಕೊಂಡ ಪಟ್ಟಣಕ್ಕೆ ಮೈಲುದೂರದಲ್ಲಿದ್ದ ತೋಟದೊಳಗಿನ ಪುಷ್ಕರಣಿಯಲ್ಲಿ ಒಬ್ಬ ಬ್ರಾಹ್ಮಣನು "ಜಯ--ಶಂಕರ! ಜಯ--ಮಹಾದೇವ!!" ಎಂದು ಈಶ್ವರನಾಮಸ್ಮರಣೆ ಮಾಡುತ್ತ ಸ್ನಾನಮಾಡುತ್ತಿದ್ದನು. ಸ್ವಚ್ಛವಾದ ಚಂದ್ರಕಾಂತಶಿಲೆಗಳಿಂದ ಕಟ್ಟಲ್ಪಟ್ಟ ಸೋಪಾನದ ಮೇಲೆ ಕುಳಿತು ಯಥೇಚ್ಛವಾಗಿ ಅಘಮರ್ಷಣಸ್ನಾನವನ್ನು ಮಾಡಿ ಮೇಲಕ್ಕೆ ಬಂದ ಕೂಡಲೆ ದಡದಲ್ಲಿ ಕುಳಿತುಕೊಂಡಿದ್ದ ಆತನ ಶಿಷ್ಯನು ಗುರುಗಳಿಗೆ ತನ್ನ ಬಳಿಯಲ್ಲಿದ್ದ ಮೂಟೆಯನ್ನು ಕೊಟ್ಟನು. ಆ ಬ್ರಾಹ್ಮಣನು ತನ್ನ ಮೈಯನ್ನು ಒರಸಿಕೊಂಡು ಶುಭ್ರವಸ್ತ್ರವನ್ನು ಧರಿಸಿ, ತನ್ನ ಮುಖವನ್ನೂ ದೇಹವನ್ನೂ ಭಸ್ಮದಿಂದ ಅಲಂಕರಿಸಿ, ರುದ್ರಾಕ್ಷಮಾಲೆಯನ್ನು ಕಂಠದಲ್ಲಿ ಧರಿಸಿ, ಜರತಾರೀ ಶಾಲೊಂದನ್ನು ತಲೆಗೆ ಸುತ್ತಿಕೊಂಡನು. ಇಷ್ಟರಲ್ಲಿ ಆತನ ಶಿಷ್ಯನು ಸ್ನಾನಮಾಡಿ ಭಸ್ಮಧಾರಣೆಮಾಡಿ ಗುರುಗಳ ಹಿಂದೆ ನಿಂತಿದ್ದನು. ಆಗ ಬ್ರಾಹ್ಮಣನು ಹಿಂದುಸ್ಥಾನಿಭಾಷೆಯಲ್ಲಿ "ನಾವು ಸೂರ್ಯೋದಯಕ್ಕೆ ಸರಿಯಾಗಿ ಪಟ್ಟಣವನ್ನು ಸೇರಬೇಕು" ಎಂದು ಹೇಳಿದನು. ಕೂಡಲೆ ಶಿಷ್ಯನು ಗುರುಗಳ ಜಪಸಾಮಗ್ರಿಗಳನ್ನು ಮೊದಲಿನಂತೆ ಮೂಟೆಕಟ್ಟಿ ಭುಜಕ್ಕೆ ತಗಲಿಸಿಕೊಂಡು ಗುರುಗಳನ್ನು ಹಿಂಬಾಲಿಸಿದನು. ಸ್ವಲ್ಪಹೊತ್ತಿನಮೇಲೆ ಅತ್ಯವಸರದಿಂದ ಹೋಗುತ್ತಿದ್ದ ಗುರುಶಿಷ್ಯರಿಗೆ ಈ ರೀತಿ ಸಂಭಾಷಣೆಗೆ ಮೊದಲಾಯಿತು:—

ಶಿಷ್ಯ:— ಗುರೂಜಿ! ಇದು "ಕುತುಬ್‌ಶಾಹಿ" ಎಂಬ ತುರುಷ್ಕರ ರಾಜ್ಯವು. ಇಲ್ಲಿ ತಾವು ಶುದ್ಧಶ್ರೋತ್ರಿಯ ಬ್ರಾಹ್ಮಣನಂತೆ ತಿರುಗುತ್ತಿದ್ದರೆ ತೊಂದರೆಯಾದರೂ ಆಗಬಹುದು.

ಗುರು,— ಗುಟ್ಟು! ಇಲ್ಲಿಯ ನವಾಬನಾದ "ತಾನಿಷಾ" ಎಂಬವನು ಮಹಮ್ಮದೀಯನಾದರೂ ಬ್ರಾಹ್ಮಣನಿಗೂ ಹೆಚ್ಚಾದ ಪವಿತ್ರಾಚರಣೆಯುಳ್ಳವನು. ಇವರು ಹಿಂದುಗಳು, ಇವರು ತುರುಷ್ಕರು ಎಂಬ ಭೇದಭಾವವಿವನಲ್ಲಿಲ್ಲ. ಪ್ರಜೆಗಳ ಕಷ್ಟವೇ ತನ್ನ ಕಷ್ಟವೆಂದೆಣಿಸಿ ಮೌಲ್ವಿಯರನ್ನೂ ಬ್ರಾಹ್ಮಣರನ್ನೂ ಫಕೀರರನ್ನೂ ಸನ್ಯಾಸಿಗಳನ್ನೂ ಸಮಾನಭಕ್ತಿಯಿಂದ ಆದರಿಸುತ್ತಿರುವ ಇಂತಹ ರಾಜನು ತುರುಷ್ಕನಾಗಿದ್ದರೇನು?

ಶಿಷ್ಯ:— ಮಹಮ್ಮದೀಯನಾಗಿದ್ದರೂ ಇವನಲ್ಲಿ ಇಂತಹ ಸತ್ವಗುಣಗಳಿರುವುದು ಆಶ್ಚರ್ಯ!

ಗುರು:--ಆಶ್ಚರ್ಯವೇನು? ಪೂರ್ವಪುಣ್ಯಸಂಚಯ ಪ್ರಭಾವವು. ದೊಡ್ಡವರು ಇವನವಿಷಯದಲ್ಲಿ ಒಂದು ಕಥೆಯನ್ನು ಹೇಳುವರು:— ಇವನು ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು. ಸರ್ವೇಶ್ವರನಾದ ಶಿವನನ್ನು ಕುರಿತು ಹನ್ನೆರಡು ವರ್ಷಗಳವರೆಗೆ ತಪಸ್ಸನ್ನು ಮಾಡಿದನು. ಕಡೆಗೂ ಈಶ್ವರನು ಪ್ರತ್ಯಕ್ಷವಾಗಲಿಲ್ಲವಾದುದರಿಂದ ಕೋಪಗೊಂಡು ಒಂದು ದಿನ ಅಭಿಷೇಕಕ್ಕಾಗಿ ತಂದಿದ್ದ ಕುಂಭವನ್ನು ಲಿಂಗಮೂರ್ತಿಯ ಮೇಲೆ ಎತ್ತಿಹಾಕಿದನು. ಆಗ ಶಿವನು ಪ್ರತ್ಯಕ್ಷನಾಗಿ ನಿನಗೇನುಬೇಕೆಂದು ಕೇಳಲು ನನಗೆ ರಾಜ್ಯವು ಬೇಕು. ಎಂದು ಕೇಳಿಕೊಂಡನು. ಆಗ ಪಾರ್ವತೀಶನು, ನೀನು ಇನ್ನು ಸಲ್ಪಕಾಲ ಶಾಂತಿಯನ್ನು ವಹಿಸಿ ನನ್ನನ್ನು ಆರಾಧಿಸಿದ್ದರೆ ನಿನಗೆ ನಾನು ಈಗಲೇ ಅಭೀಷ್ಟವನ್ನು ಸಲ್ಲಿಸುತ್ತಿದ್ದೆನು. ಸ್ವಲ್ಪದರಲ್ಲಿ ಅವಸರಪಟ್ಟೆ. ಆದುದರಿಂದ ಈ ಜನ್ಮದಲ್ಲಿ ನಿನ್ನ ಕೋರಿಕೆ ನೆರವೇರುವುದಿಲ್ಲ. ಮುಂದಿನ ಜನ್ಮದಲ್ಲಿ ನೀನು ತುರುಷ್ಕನಾಗಿ ಹುಟ್ಟಿ ರಾಜವೈಭವವನ್ನು ಅನುಭವಿಸುವೆ." ಎಂದು ಹೇಳಿ, ಅಂತರ್ಧಾನನಾದನು. ಆ ಬ್ರಾಹ್ಮಣನೇ ಈಗ "ತಾನೀಷಾ" ಸುಲ್ತಾನನಾಗಿರುವನು.

ಶಿಷ್ಯ:—(ಆಶ್ಚರ್ಯದಿಂದ) ಗುರುಜೀ! ಆ ಮಹಾನುಭಾವನನ್ನು ನೋಡುವುದಕ್ಕಲ್ಲವೇ ನಾವೀಗ ಹೋಗುತ್ತಿರುವುದು?

ಗುರು:—ಅಲ್ಲ; ಆತನಲ್ಲಿ ನಮಗೆ ಕೆಲಸವೇನೂ ಇಲ್ಲ. ಆತನ ಮುಖ್ಯಮಂತ್ರಿಯೂ ಹಿಂದೂಮತಾಭಿಮಾನಿಯೂ ರಾಜಕಾರ್ಯಧುರಂಧರನೂ ಆದ "ಮಾದನ್ನಪಂತುಲು" ಎಂಬಾತನನ್ನು ನೋಡಲು ಹೋಗುತ್ತಿರುವೆವು. ಹೀಗೆ ನಾವು ಮಾತನಾಡುತ್ತ ಹೋದರೆ ನಮ್ಮ ಕೆಲಸವು ನೆರವೇರು

ವೃದಿಲ್ಲ. ಸೂರ್ಯೋದಯದಿಂದ ಹಿಡಿದು ಒಂದು ಜಾವದ ವರೆಗೂ ಆತನು ಶಿವಪೂಜೆ, ಪಾರಾಯಣ, ಪುರಾಣಶ್ರವಣ ಮೊದಲಾದ ಮತವಿಷಯ ಕಾರ್ಯಗಳನ್ನು ಮಾಡುವನು. ಆ ಕಾಲದಲ್ಲಿ ಪಂಡಿತರೂ ವಿದ್ವಾಂಸರೂ ಗಾಯಕರೂ ನಿರಾತಂಕವಾಗಿ ಆತನ ಮನೆಗೆ ಹೋಗಬಹುದು; ಮತ್ತು ತಮ್ಮ ತಮ್ಮ ವಿದ್ಯಾಪ್ರಭಾವವನ್ನು ತೋರಿಸಿ ಬಹುಮಾನಗಳನ್ನು ಪಡೆಯಬಹುದು. ಆದುದರಿಂದ ಜಾಗ್ರತೆಯಾಗಿ ನಡೆ.

ಬ್ರಾಹ್ಮಣನು ತ್ವರೆಯಿಂದ ನಡೆಯಲಾರಂಭಿಸಿದನು; ಶಿಷ್ಯನು ಗುರುವಿನ ಜೊತೆಗೆ ನಡೆಯಲಾರದೆ ಆತನ ಹಿಂದೆಯೇ ಓಡಿ ಓಡಿ ಬರುತ್ತಿದ್ದನು. ಸ್ವಲ್ಪಹೊತ್ತಿಗೆ ಪಟ್ಟಣವನ್ನು ಪ್ರವೇಶಿಸಿ ಬರುತ್ತಿರುವಲ್ಲಿ, ಅಗಾಧವಾದ ಕಲ್ಲುಕಟ್ಟಡದ ಎತ್ತರವಾದ ಆವರಣದ ಗೋಡೆಯಿಂದ ಸುತ್ತುವರಿಯಲ್ಪಟ್ಟದಾಗಿಯೂ ಅಭೇದ್ಯವೂ ಎತ್ತರವೂ ಆದ ಹೆಬ್ಬಾಗಿಲಿನಿಂದ ಕೂಡಿದುದಾಗಿಯೂ ನಾನಾವಿಧದ ಬಣ್ಣಬಣ್ಣಗಳಿಂದ ಚಿತ್ರವಿಚಿತ್ರವಾಗಿ ಚಿತ್ರಿಸಲ್ಪಟ್ಟದಾಗಿಯೂ ಇದ್ದ ಒಂದು ಭವ್ಯ ಭವನವು ಗೋಚರವಾಯಿತು. ಭವನದ ಹೆಬ್ಬಾಗಿಲು ಭಯಂಕರಾಕಾರಗಳಾದ ಸಿಪಾಯೀಭಟರಿಂದ ಸುರಕ್ಷಿತವಾಗಿದ್ದಿತು. ಅತ್ಯವಸರದಿಂದ ಹೋಗುತ್ತಿದ್ದ ನಮ್ಮ ಶ್ರೋತ್ರಿಯ ಬ್ರಾಹ್ಮಣನು ಆ ಭವ್ಯಮಂದಿರವನ್ನಾಗಲಿ ಆ ಯಮಭಟರಂತಿರುವ ಕಾವಲಿನವರನ್ನಾಗಲಿ, ನೋಡದೆ ತನ್ನ ದಾರಿಯನ್ನೇ ನೋಡುತ್ತ ಹೋಗುತ್ತಿದ್ದನು. ಆಗ ಆ ಮಂದಿರದೊಳಗಿನಿಂದ ಹೀಗೆ ಗಾನವು ಕೇಳಬಂದಿತು:—

ಎಲ್ಲಾ ರಾಮಮಯಂ—ಜಗವೆಲ್ಲಾ ರಾಮಮಯಂ || ಪ||
ಅಂತರಂಗದೊಳಗಾತ್ಮಾರಾಮನ—
ನಂತರೂಪದೊಳಗಂದವತೋರಲು || ಎಲ್ಲಾ ||೧||
ಸೋಮಸೂರ್ಯರುಂ ಸುರರುಭಂಗಳುಂ ।
ಆಮಹಾಂಬುಧಿಯುವನೀಜಂಬುಗಳ್ || ೨ ||
ಅಂಡಾಂಡಂಗಳು–ಪಿಂಡಾಂಡಂಗಳು ।
ಬ್ರಹ್ಮಾಂಡಂಗಳು ಬ್ರಹ್ಮನಾದಿಯಿಂದೆಲ್ಲಾ || ೩ ||
ನದೀ-ವನಂಗಳ್ ನಾನಾಮೃಗಂಗಳ್ ।
ವಿದಿತ ಕರ್ಮಗಳ್-ವೇದಶಾಸ್ತ್ರಂಗಳ್ || ೪ ||
ಅಷ್ಟದಿಕ್ಕುಗಳಾದಿಶೇಷನುಂ ।
ಅಷ್ಟವಸುಗಳುಂ ಅರಿಷಡ್ವರ್ಗಮುಂ || ೫ ||

ಮೃದು ಮಧುರವಾಗಿಯೂ ಭಕ್ತಿರಸಭರಿತವಾಗಿಯೂ ಇರುವ ಈ ರಾಮನಾಮ ಸಂಕೀರ್ತನವು ಪಥಿಕನಾಗಿದ್ದ ಬ್ರಾಹ್ಮಣನ ಕಿವಿಯಲ್ಲಿ ಬಿದ್ದಿತು. ಬ್ರಾಹ್ಮಣನು ಕನ್ನಡದಲ್ಲಿ ಪರಿಶ್ರಮವಿಲ್ಲದವನಾದರೂ ಅದರಲ್ಲಿ ಸಂಸ್ಕೃತ ಬಾಹುಳ್ಯವಿದ್ದುದರಿಂದ ಅದರ ತಾತ್ಪರ್ಯವನ್ನು ಗ್ರಹಿಸಿ, ಭಕ್ತಾಗ್ರೇಸರನಾವನೋ ಒಳಗೆ ಕೀರ್ತಿಸುತ್ತಿರುವನೆಂದು ತಿಳಿದು ಭವನವನ್ನು ಸುತ್ತಲೂ ಚನ್ನಾಗಿ ನೋಡಿದನು; ಭವನದ ಲಕ್ಷಣಗಳಿಂದ ಅದೊಂದು ಕಾರಾಗ್ರುಹವಿರಬಹುದೆಂದು ಊಹೆಯುಂಟಾಯಿತು. ಅವನೋ ಓರ್ವ ವಿಷ್ಣುಭಕ್ತನು ಅಲ್ಲಿ ಸಿಕ್ಕು ಬಿದ್ದಿರುವನೆಂದೆಣಿಸಿ, ಸಮಾಚಾರವನ್ನು ಪೂರ್ಣವಾಗಿ ತಿಳಿಯಲು ಕಾವಲಿದ್ದ ಭಟರ ಬಳಿಗೆ ಬಂದು ಕಾರಾಗ್ರಹದೊಳಗಿರುವವನಾರೆಂದು ಕೇಳಿದನು. ಭಟರು ನಮ್ಮ ಪಥಿಕ ಬ್ರಾಹ್ಮಣನನ್ನು ಬೆದರಿಸಿ ಓಡಿಸಿದರು; ಆದರೂ ವ್ಯವಹಾರ ತಜ್ಞನಾದ ನಮ್ಮ ಬ್ರಾಹ್ಮಣನು ಕೂಡಲೆ ತನ್ನಲ್ಲಿದ್ದ ಒಂದು ರೂಪಾಯನ್ನು ತೆಗೆದು ಆ ಭಟರ ಕೈಗೆ ಕೊಟ್ಟನು ಆ ಶ್ವೇತದೇವತೆ ಕೈಗೆ ಬಿದ್ದ ಕೂಡಲೆ ಭಟರ ಕೋಪ-ತಾಪಗಳೆಲ್ಲವೂ ಹಾರಿಹೋದುವು. ಅವರು ವಿನೀತರಾಗಿ—"ಈಗ ಹಾಡುತ್ತಿರುವವನು "ಭದ್ರಾಚಲ ರಾಮದಾಸನು" ಎಂದು ಹೇಳಿ ಅವನು ಕಾರಾಗ್ರಹದಲ್ಲಿರಲು ಕಾರಣವನ್ನೂ ಸವಿಸ್ತರವಾಗಿ ತಿಳಿಸಿದರು. ರಾಮದಾಸನ ಜಗದ್ವಿಖ್ಯಾತವಾದ ಕೀರ್ತಿಯನ್ನು ಕೇಳಿದ್ದಾ ಪಥಿಕನು ಇಂಥಹ ಮಹಾನುಭಾವನ ದರ್ಶನವನ್ನು ಮಾಡದೆ ಹೋಗುವುದು ಪಾಪಕರವೆಂದು ಅಲ್ಲಿದ್ದ ಭಟರಿಗೆ ಮತ್ತೊಂದು ಸುವರ್ಣಪುಷ್ಪವನ್ನೊಪ್ಪಿಸಿ ಕಾರಾಗ್ರುಹವನ್ನು ಪ್ರವೇಶಿಸಿ, ಭಕ್ತಿಪರವಶನಾಗಿ ಗಾನ ಮಾಡುತ್ತಿದ್ದ ಗೋಪಣ್ಣನನ್ನು ನೋಡಿ ಭಕ್ತಿಯಿಂದ ನಮಸ್ಕರಿಸಿ, "ಮಹಾತ್ಮಾ! ನಿನ್ನಂತಹ ಭಗವದ್ಭಕ್ತನಿಗೂ ಸಹ ಕರ್ಮಫಲವನ್ನು ಅನುಭವಿಸದು ತಪ್ಪಲಿಲ್ಲವಲ್ಲಾ" ಎಂದು ವಿಷಣ್ಣಭಾವದಿಂದ ಹೇಳಿದನು. ಆದರೆ ರಾಮದಾಸನು ರಾಮಧ್ಯಾನದಲ್ಲಿಯೇ ನಿಮಗ್ನನಾಗಿದ್ದುದರಿಂದ ಈತನನ್ನು ನೋಡಲಿಲ್ಲ. ಕಡೆಗೆ ಬ್ರಾಹ್ಮಣನು ಸ್ವಲ್ಪ ಹೊತ್ತು ಆ ಭಕ್ತಶಿರೋಮಣಿಯನ್ನೇ ನೋಡುತ್ತಿದ್ದು ಬಳಿಕ ಅಲ್ಲಿಂದ ಹೊರಟು ಗೋಳಕೊಂಡ ಪಟ್ಟಣವನ್ನು ಪ್ರವೇಶಿಸಿದನು.

ಈ ಕಥಾಕಾಲದಲ್ಲಿ ಗೋಳಕೊಂಡ ಪಟ್ಟಣವೂ ಅಲ್ಲಿಯ ದುರ್ಗವೂ ಅತ್ಯಂತ ವೈಭವದೊಡನೆ ಕೂಡಿದ್ದಿತು. ಆ ಕಾಲದ ಆಂಧ್ರ ದೇಶಕ್ಕೆಲ್ಲ ಇದೇ ರಾಜಧಾನಿಯಾಗಿದ್ದಿತು. "ಪಟ್ಟಣ" ಎಂದರೆ ಗೋಳಕೊಂಡ ಪಟ್ಟಣವೆಂದೇ ಅರ್ಥವಾಗುತ್ತಿದ್ದಿತೇ ಹೊರತು ಚೆನ್ನಪಟ್ಟಣವೆಂದು ಅರ್ಥವಾಗುತ್ತಿರಲಿಲ್ಲ. ಆ ಕಾಲದಲ್ಲಿ ಚೆನ್ನಪಟ್ಟಣ (ಮದ್ರಾಸು) ವು ಒಂದು ಬೆಸ್ತರ ಹಳ್ಳಿಯಾಗಿದ್ದಿತು. ನಮ್ಮ ಬ್ರಾಹ್ಮಣನು ಹೋಗುತ್ತಿದ್ದ ರಾಜಮಾರ್ಗದ ಇಕ್ಕಡೆಗಳಲ್ಲಿಯೂ ಆಕಾಶವನ್ನು ಮುಟ್ಟುತ್ತಿರುವಂತಹ ಅಸಂಖ್ಯಾಕ ಸೌಧಗಳೂ

ಛತ್ರಗಳೂ ಮಸೀದಿಗಳೂ ದೇವಸ್ಥಾನಗಳೂ ಅತ್ಯಂತ ಆಶ್ಚರ್ಯವನ್ನುಂಟು ಮಾಡುತ್ತಿದ್ದರೂ ನಮ್ಮ ಪಥಿಕನು ಅದಾವುದನ್ನೂ ಕಣ್ಣೆತ್ತಿ ನೋಡದೆ "ಮಾದನ್ನನವರ ಮಂದಿರವಾವುದು" ಎಂದು ಕೇಳುತ್ತ ತ್ವರೆಯಾಗಿ ಹೋಗುತ್ತಿದ್ದನು.

ಆ ಕಾಲದಲ್ಲಿ ಗೋಲಕೊಂಡ ಪಟ್ಟಣದಲ್ಲಿ ಮಾದನ್ನ ಪಂತುಲುಯವರು ಮುಖ್ಯ ಮಂತ್ರಿಯಾಗಿಯೂ ಆತನ ಅಣ್ಣನಾದ ಅಕ್ಕನ್ನ ಪಂತುಲುಯವರು ಮುಖ್ಯ ಸೇನಾಪತಿಯಾಗಿಯೂ ಇದ್ದರು. ಈ ಮಂತ್ರಿಪುಂಗವರ ಬುದ್ಧಿ ವೈಭವವನ್ನೂ ರಾಜಕಾರ್ಯ ಕೌಶಲವನ್ನೂ ಸ್ವಧರ್ಮಶ್ರದ್ಧೆಯನ್ನೂ ದಾನಶೀಲತೆಯನ್ನೂ ಈಗಲೂ ಜನಗಳು ಹೇಳಿಕೊಳ್ಳುತ್ತಿರುವರು. ಇಂತಹ ಮಹಾನುಭಾವರು ಅಧಿಕಾರಿಗಳಾಗಿದ್ದುದರಿಂದಲೇ ಆ ರಾಜ್ಯವು ರಾಮರಾಜ್ಯವಾಗಿದ್ದಿತು.

(ಅಕ್ಕಣ್ಣನವರು ಅಣ್ಣನೆಂದೂ ಮಾದನ್ನನವರು ತಮ್ಮನೆಂದೂ ಸಾಮಾನ್ಯವಾಗಿ ಜನರು ಹೇಳಿಕೊಳ್ಳುವರು. ಆದರೆ ಅಕ್ಕಣ್ಣನವರು ನಿಜವಾಗಿ ಸಹೋದರರಲ್ಲವೆಂದು ಒಂದು ಕಥೆಯಿರುವುದು. ಮೊದಲು ಅಕ್ಕಣ್ಣನವರು ಒಬ್ಬ ಬಡ ಬ್ರಾಹ್ಮಣನಂತೆ, ಮಾದನ್ನನವರು ಗೋಲಕೊಂಡದಲ್ಲಿ ಮಂತ್ರಿತ್ವವನ್ನು ವಹಿಸಿದಾಗ ಒಂದು ದಿನ ಅವನ ಮನೆಗೆ ಬಂದರಂತೆ! ತನ್ನ ಭಾರ್ಯೆಯ ಬಂಧುವೆಂದು ಮಾದನ್ನನವರೂ ತನ್ನ ಭರ್ತನ ಬಂಧುವೆಂದು ಮಾದನ್ನನವರ ಭಾರ್ಯೆಯೂ ಇವರನ್ನು ಮರ್ಯಾದೆಯಿಂದ ಕಾಣುತ್ತಿದ್ದರು. ಅಕ್ಕಣ್ಣನವರು ಮುಸ್ಸಿನಲ್ಲಿ ದೊಡ್ಡವರಾಗಿದ್ದುದರಿಂದ ಅವರನ್ನು ಮಾದನ್ನನವರು ಅಣ್ಣನೆಂದು ಕರೆಯುತ್ತಿದ್ದರು. ಹೀಗೆ ಕೆಲವು ದಿನಗಳು ಕಳೆದ ತರುವಾಯ ಒಂದು ದಿನ ಮಾದನ್ನನವರು ತಮ್ಮ ಭಾರ್ಯೆಯೊಡನೆ ಅಕ್ಕಣ್ಣನವರ ವಿಷಯವಾಗಿ ಮಾತನಾಡಲು ಆತನು ಆಕೆಯ ಬಂಧುವಲ್ಲವೆಂದು ತಿಳಿಯಿತು. ಅನಂತರ ಮಾದನ್ನನವರು ಅಕ್ಕಣ್ಣನವರನ್ನು ಕುರಿತು—"ನಮ್ಮಿಬ್ಬರಿಗೂ ಇರುವ ಬಂಧುತ್ವವನ್ನು ತಿಳಿಸಿರಿ" ಎಂದು ಕೇಳಲು ಅಕ್ಕಣ್ಣನವರು—"ಅಯ್ಯಾ ನಾನು ದೊಡ್ಡಮ್ಮನ ಮಗನು; ನೀನು ಚಿಕ್ಕಮ್ಮನ ಮಗನು. ಅಕ್ಕತಂಗಿಯರ ಮಕ್ಕಳಾದುದರಿಂದ ಅಣ್ಣತಮ್ಮಂದಿರು, ಈ ರಹಸ್ಯವನ್ನು ಮನಸ್ಸಿನಲ್ಲಿಟ್ಟುಕೋ. ನಾವು ಎಂದಿನಂತೆ ಅಣ್ಣತಮ್ಮಂದಿರಂತೆಯೇ ಇರೋಣ" ಎಂದರಂತೆ! ಅಕ್ಕಣ್ಣನವರ ಬುದ್ಧಿ ಚಾತುರ್ಯಕ್ಕೆ ಮೆಚ್ಚಿ ಅಂದಿನಿಂದಲೂ ಮಾದನ್ನನವರು ಆತನಲ್ಲಿ ಅಣ್ಣನಂತೆಯೇ ವಿಶ್ವಾಸದಿಂದಿದ್ದರಂತೆ! ಈ ಕಥೆಯ ಸತ್ಯಾಸತ್ಯಗಳನ್ನು ನಿರ್ಣಯಿಸಲಾಗದಿದ್ದರೂ ಈ ಕಥೆಯು ಕೇಳುವವರಿಗೆ ಇಂಪಾಗಿರುವುದು. ಇರಲಿ! ಇನ್ನು ನಮ್ಮ ಬ್ರಾಹ್ಮಣನ ವಿಚಾರವೇನಾಯಿತೆಂದು ನೋಡುವ.

ಬ್ರಾಹ್ಮಣನು ಮಾದನ್ನನವರ ಮಂದಿರಕ್ಕೆ ದಾರಿಯನ್ನು ಕೇಳುತ್ತ ಹೋಗಿ ಸೂರ್ಯೋದಯವಾದ ಎರಡು ಗಳಿಗೆಯೊಳಗಾಗಿ ಮಂದಿರದ ಹೊರಬಾಗಿಲಿನ ಬಳಿಗೆ ಬಂದನು. ಮಂದಿರದ ಸುತ್ತಲೂ ಕೋಟೆಯು ಕಟ್ಟಲ್ಪಟ್ಟಿದ್ದಿತು. ಕೋಟೆಯೊಂದೇ ಆದರೂ ಮಂದಿರಕ್ಕೆ ಸೇರಬೇಕಾದಲ್ಲಿ ನಾಲ್ಕು ಬಾಗಿಲುಗಳನ್ನು ದಾಟಿ ಹೋಗಬೇಕು. ಪ್ರತಿಯೊಂದು ಬಾಗಿಲಿನಲ್ಲಿಯೂ ಆಯುಧಪಾಣಿಗಳಾಗಿದ್ದ ನಾಲ್ಕು ಮಂದಿ ಭಟರು ಕಾವಲಿದ್ದರು. ಇತರ ಸಮಯಗಳಲ್ಲಿ ಯಾರಿಗೂ ಪ್ರವೇಶವಿಲ್ಲದಿದ್ದರೂ ಪ್ರಾತಃಕಾಲದಲ್ಲಿ ಶಿವಪೂಜಾ ಸಮಯದಲ್ಲಿ ಮಾತ್ರ ಪಂಡಿತರಾದ ಬ್ರಾಹ್ಮಣೋತ್ತಮರಿಗೆ ಪ್ರವೇಶವಿತ್ತು. ಈ ಕಾರಣದಿಂದ ನಮ್ಮ ಶ್ರೋತ್ರಿಯ ಬ್ರಾಹ್ಮಣನೂ ಒಳಗೆ ಹೋಗಲು ಶ್ರಮವಾಗಲಿಲ್ಲ. ಬ್ರಾಹ್ಮಣ ವೇಷದಿಂದ ಮೋಸಗಾರರಾದ ಶತ್ರುಗಳು ಯಾರಾದರೂ ಒಳಗೆ ಪ್ರವೇಶಿಸುವರೇನೆಂಬ ಶಂಕೆಯಿಂದ ಅಲ್ಲಿಗೆ ಬಂದ ಬ್ರಾಹ್ಮಣರಿಗೆಲ್ಲಾ ಸಂಧ್ಯಾವಂದನಾದಿಗಳಲ್ಲಿ ಪರೀಕ್ಷೆಯು ನಡೆಯುತ್ತಿದ್ದಿತು. ಇದಕ್ಕಾಗಿ ಮಂದಿರದ ನಾಲ್ಕು ದ್ವಾರಗಳಲ್ಲಿಯೂ ನಾಲ್ವರು ಬ್ರಾಹ್ಮಣರು ಪರೀಕ್ಷಕರಾಗಿ ನೇಮಿಸಲ್ಪಟ್ಟಿದ್ದರು. ನಮ್ಮ ಶ್ರೋತ್ರಿಯ ಬ್ರಾಹ್ಮಣನೂ ಅವನ ಶಿಷ್ಯನೂ ಮೊದಲನೆಯ ದ್ವಾರದಲ್ಲಿ ಸಂಧ್ಯಾವಂದನವನ್ನೂ, ಎರಡನೆಯ ದ್ವಾರದಲ್ಲಿ ನಮಕ ಚಮಕಗಳನ್ನೂ ಮೂರನೆಯ ದ್ವಾರದಲ್ಲಿ ಬ್ರಹ್ಮಯಜ್ಞವನ್ನೂ ನಾಲ್ಕನೆಯ ದ್ವಾರದಲ್ಲಿ ಪಿತೃತರ್ಪಣ ಮಂತ್ರಗಳನ್ನೂ ಸುಸ್ವರವಾಗಿಯೂ ಘಂಟಾನಾದದಂತೆಯೂ ಹೇಳಿ ಒಳಗೆ ಪ್ರವೇಶಿಸಿದರು.

ಬ್ರಾಹ್ಮಣನು ಪೂಜಾಗೃಹವನ್ನು ಪ್ರವೇಶಿಸಿ, ಮರಕತ ಲಿಂಗವನ್ನು ಅಂಗೈಯಲ್ಲಿರಿಸಿಕೊಂಡು ಭಕ್ತಿ ಭಾವದಿಂದ ಪೂಜೆ ಮಾಡುತ್ತಿದ್ದ ಮಾದನ್ನ ಪಂತುಲುಯವರನ್ನೂ ಅವರ ಸುತ್ತಲೂ ಉಚಿತಾಸನಾಸೀನರಾಗಿದ್ದ ವಿವಿಧ ವಿದ್ಯಾಪಾಠೀಯರಾದ ಪಂಡಿತೋತ್ತಮರನ್ನೂ ನೋಡಿದನು. ಆ ಮಂತ್ರಿವರ್ಯನ ಬಲಭಾಗದಲ್ಲಿ ಜಟಾಪಾಠಿಗಳೂ ಘನಪಾಠಿಗಳೂ ಸಾಮಗಾಯಕರೂ ಎಡಭಾಗದಲ್ಲಿ ವೈಣಿಕರೂ ಸಂಗೀತ ಪಾಠಕರೂ ಮುಂಭಾಗದಲ್ಲಿ ಪೂರ್ವೋತ್ತರ ಮೀಮಾಂಸಕರೂ ಮಂಡಿಸಿದ್ದರು. ಮಂತ್ರಿವರ್ಯರ ಶಿವಪೂಜಾವಿಧಿಯು ಮುಗಿಯುತ್ತ ಬಂದಾಗ ಅಲ್ಲಿದ್ದ ವೇದಪಾಠಕರು ಪರಸ್ಪರ "ನೀವು ಉಪಕ್ರಮಿಸಿ–ನೀವು ಉಪಕ್ರಮಿಸಿ" ಎಂದು ಹೇಳಲಾರಂಭಿಸಿದರು. ಇದೇ ಸುಸಮಯವೆಂದು ನಮ್ಮ ಶ್ರೋತ್ರಿಯ ಬ್ರಾಹ್ಮಣನು ವೇದಪಾಠಕರ ಸಮೂಹವನ್ನು ಸೇರಿ, "ಸ್ವಾಮಿ, ನೀವು ಯಾರೂ ಉಪಕ್ರಮಿಸಬೇಕಿ.

ನಾನು ಉಪಕ್ರಮಿಸುವೆನು." ಎಂದು ಸಂಸ್ಕೃತದಲ್ಲಿ ಭಾಷೆಯು ಹೇಳಿ ಆಶೀರ್ವಚನಪೂರ್ವಕವಾದ ಒಂದು ಮಂತ್ರವನ್ನು ಸುಸ್ವರವಾದ ಗಂಭೀರ ಧ್ವನಿಯಿಂದ ಹೇಳಿ, ಆ ಮಂತ್ರಕ್ಕೆ ಜಟೆಯನ್ನೂ ಘನವನ್ನೂ ಹೇಳಿ ಆದಕ್ಕೆ ವಿದ್ಯಾರಣ್ಯಭಾಷ್ಯ ವನ್ನು ಅನುಸರಿಸಿ ಒಂದು ಅರ್ಥವನ್ನೂ ಮಹೀಧರನಭಾಷ್ಯ ವನ್ನು ಅನುಸರಿಸಿ ಒಂದು ಅರ್ಥವನ್ನೂ ಭಟ್ಟ ಭಾಸ್ಕರನ ಭಾಷ್ಯವನ್ನು ಅನುಸರಿಸಿ ಮೂರನೆಯ ಅರ್ಥವನ್ನೂ ಹೇಳಿ ಈ ಮೂರಕ್ಕೂ ಸಮನ್ವಯವನ್ನೂ ಹೇಳಿದನು. ಸಭಾಸದ ರೂ ಮಾದಣ್ಣ ಪಂತುಲುಯವರೂ ಆತನ ಪಾಂಡಿತ್ಯಕ್ಕೆ ಅತ್ಯಂತ ಸಂತೋಷಪಟ್ಟರು. ಅನಂತರ ಇತರ ಪಂಡಿತರೂ ತಮ್ಮ ತಮ್ಮ ವಿದ್ಯೆಯನ್ನು ತೋರ್ಪಡಿಸಿದರು. ಇಷ್ಟರಲ್ಲಿ ನಮ್ಮ ಬ್ರಾಹ್ಮಣನು ಸಂಗೀತ ಪಾಠಕರ ಗುಂಪನ್ನು ಸೇರಿ ವೀಣೆಯನ್ನು ಹಿಡಿದು ಒಂದು ವರ್ಣವನ್ನೂ ಒಂದು ಕೃತಿ ಯನ್ನೂ ಹಾಡಿ, ಮನೋಹರವಾದ ಒಂದು ರಾಮಕೀರ್ತನೆ ಯನ್ನೂ ಸುಸ್ವರವಾಗಿ ಹಾಡಿದನು. ಇಂತಹ ಸಂಗೀತ ವಿದ್ಯಾವಿಶಾರದನಾರೆಂದು ಮಾದಣ್ಣನವರು ತಿರುಗಿನೋಡಲು, ಈತನನ್ನು ಕಂಡು ಆಶ್ಚರ್ಯಪಟ್ಟರು. ಮತ್ತೆ ನಮ್ಮ ಬ್ರಾ ಹ್ಮಣನು ವಿದ್ವತ್ಸಮೂಹದ ಮಧ್ಯ ಸೇರಿ, ಬ್ರಹ್ಮಸೂತ್ರದಲ್ಲಿ ಮೊದಲನೆಯದಾದ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬು ದಕ್ಕೆ ಶಂಕರ, ರಾಮಾನುಜ, ಮಧ್ವಾಚಾರ್ಯರ ತ್ರಿವಿಧಭಾ ಷ್ಯಗಳನ್ನೂ ವಿವರಿಸಿ ತದನಂತರ ಎಲ್ಲವನ್ನೂ ಪೂರ್ವಪಕ್ಷ ಮಾಡಿ ಕಡೆಗೆ ಎಲ್ಲಕ್ಕೂ ಸಮನ್ವಯವನ್ನು ಮಾಡಿದನು. ಈ ರೀತಿಯಾಗಿ ಅಪಾರ ವಿದ್ಯಾಮಹಿಮೆಯನ್ನು ತೋರಿಸುತ್ತಿದ್ದ ಬ್ರಾಹ್ಮಣನನ್ನು ನೋಡಿ ಸಭಾಸದರೆಲ್ಲರೂ ಈತನನ್ನು ದ್ವಿ ತೀಯ ವೇದವ್ಯಾಸನೆಂದೇ ತಿಳಿದರು. ಮಾದಣ್ಣ ಪಂತುಲು ಯವರು ಬ್ರಾಹ್ಮಣನ ಅಪಾರಪಾಂಡಿತ್ಯಕ್ಕೆ ಸಂತೋಷಪಟ್ಟು ಆತನಿಗೆ ಸಾವಿರ ರೂಪಾಯಿಗಳನ್ನೂ ನೂರು ಹದಿನಾರು ರೂಪಾಯಿ ಬೆಲೆಯುಳ್ಳ ಉತ್ತಮವಾದ ಶಾಲು ಜೋಡಿಯ ನ್ನೂ ಬಹುಮಾನವಾಗಿ ಕೊಡಹೋದರು.

ಆಗ ಬ್ರಾಹ್ಮಣನು "ಮಂತ್ರಿಪುಂಗವ! ನಾನು ಈ ಬಹು ಮಾನಕ್ಕಾಗಿ ಬರಲಿಲ್ಲ. ಒಂದು ಲಘುಕಾರ್ಯಕ್ಕಾಗಿ ಬಂದಿ ರುವೆನು. ಅಪ್ಪಣೆಯಾದರೆ ಏಕಾಂತದಲ್ಲಿ ವಿಜ್ಞಾಪಿಸಿಕೊ ಳ್ಳುವೆನು." ಎಂದು ಸಂಸ್ಕೃತ ಭಾಷೆಯಲ್ಲಿ ಹೇಳಿದನು. ಅದಕ್ಕೆ ಮಂತ್ರಿಗಳೂ ಸಮ್ಮತಿಸಿ ಬ್ರಾಹ್ಮಣನನ್ನು ತಮ್ಮ ಮನೆ ಯಲ್ಲಿಯೇ ನಿಲ್ಲಿಸಿಕೊಂಡು ಉಳಿದ ಬ್ರಾಹ್ಮಣರಿಗೆಲ್ಲ ಯ ಥೋಚಿತವಾದ ಬಹು ಮಾನಗಳನ್ನಿತ್ತು ಕಳುಹಿ ಒಂಭತ್ತು ಘಂಟೆಗೆ ವಿದ್ವತ್ಸಭೆಯ ಕೆಲಸವನ್ನು ಪೂರೈಸಿ ತೆರಳಿದರು.

• ಭೋಜನಾನಂತರದಲ್ಲಿ ಅಕ್ಕಣ್ಣ ಮಾದಣ್ಣನಿಬ್ಬರೂ ಏ ಕಾಂತ ಸ್ಥಲದಲ್ಲಿ ಕುಳಿತುಕೊಂಡು ಶ್ರೋತ್ರಿಯ ಬ್ರಾಹ್ಮಣ ನನ್ನು ಕರಸಿದರು. ಅವರವರಿಗೆ ಹೀಗೆ ಸಂಭಾಷಣೆಗಳು ನಡೆದುವು.

ಮಾದಣ್ಣ:— ಪಂಡಿತವರ್ಯ! ಏಕಾಂತದಲ್ಲಿ ಹೇಳಬೇ ಕೆಂದಿರುವ ಸಮಾಚಾರವಾವುದು.

ಬ್ರಾಹ್ಮಣ:— ಮಂತ್ರಿವರ್ಯ! ನಾನು ಬಹುಮಾನಕ್ಕಾಗಿ ಬರಲಿಲ್ಲ. ನಿಮಗೊಂದು ವರ್ತಮಾನವನ್ನು ತಿಳಿಸಲು ಬಂದಿ ರುವೆನು. ಹಿಂದುಗಳಿಗೆ ಶತ್ರುವಾದ ಔರಂಗಜೇಬನು ಡಿಲ್ಲೀ ಪಟ್ಟಣದಲ್ಲಿ ದೊಡ್ಡ ಸೈನ್ಯವನ್ನು ಕೂಡಿಸುತ್ತಿರುವನು. ಆತ ನು ಯಾರ ಮೇಲೆ ದಂಡೆತ್ತಿ ಹೊರಡುವನೋ ತಿಳಿಯದು. ಕೆಲವರು ರಾಜಪುತ್ರವೀರನಾದ ರಾಜಸಿಂಹನಮೇಲೆ ದಂಡೆತ್ತಿ ಬರುವನೆಂದೂ, ಕೆಲವರು ಗೋಲಕೊಂಡದಮೇಲೆ ಹೊರ ಡುವನೆಂದೂ, ಕೆಲವರು ಮಹಾರಾಷ್ಟ್ರದಮೇಲೆ ದಂಡೆತ್ತಿ ಹೊರಡುವನೆಂದೂ ಹೇಳುತ್ತಿರುವರು. ಹೇಗೂ ಆತನು ಆವುದೋ ಒಂದು ಹಿಂದೂರಾಜ್ಯವನ್ನು ನಿರ್ಮೂಲವಮಾಡು ವುದಕ್ಕಾಗಿಯೇ ಯತ್ನಿಸಿರುವನು. ನಾನು ಹಿಂದೂ ರಾಜರಿ ಗೆಲ್ಲ ಈ ವರ್ತಮಾನವನ್ನು ತಿಳಿಸಬೇಕೆಂದು ಹೊರಟು ರಾಜಪುತ್ರರಾಜರೆಲ್ಲರಿಗೂ ತಿಳಿಸಿ, ಬುಂದಲ್ ಖಂಡದಲ್ಲಿರುವ ಛತ್ರಸಾಲ್ ಮಹಾರಾಜನಿಗೂ ಪನಹಾಳಾದುರ್ಗದಲ್ಲಿರುವ ಸಂಭಾಜೀ ಮಹಾರಾಜರಿಗೂ ತಿಳಿಸಿ ಇಲ್ಲಿಗೆ ಬಂದಿರುವೆನು. ಇಲ್ಲಿ ಬ್ರಾಹ್ಮಣರಾದ ನೀವು ಮಂತ್ರಿಗಳಾಗಿರುವುದರಿಂದಲೂ ನವಾಬನು ಯೋಗ್ಯನಾಗಿ ಹಿಂದುಗಳನ್ನೂ ಮಹಮ್ಮದೀಯ ರನ್ನೂ ಏಕರೀತಿಯಾಗಿ ನೋಡುತ್ತಿರುವುದರಿಂದಲೂ ಈ ರಾಜ್ಯವನ್ನು ಹಿಂದೂರಾಜ್ಯವೆಂಬದಾಗಿಯೇ ಭಾವಿಸಿ ಇಲ್ಲಿಗೆ ಬಂದಿರುವೆನು. ಸುಮ್ಮನೆ ನೋಡುವುದು ಅಸಾಧ್ಯವೆಂದು ತಿಳಿದು ನಿಮ್ಮ ಸಭೆಯಲ್ಲಿ ನನ್ನ ವಿದ್ಯಾಪ್ರತಾಪವನ್ನು ತೋ ರಿಸಿ ನಿಮ್ಮ ದೃಷ್ಟಿಯನ್ನು ಆಕರ್ಷಿಸಿದೆನು; ಇದಲ್ಲದೆ ಬೇರೆ ಕಾರ್ಯವಾವುದೂ ಇಲ್ಲ." ಎಂದನು.

ಮಂತ್ರಿಗಳಿಬ್ಬರೂ ಅದನ್ನು ಕೇಳಿ, ಈ ಬ್ರಾಹ್ಮಣನು ತಮ್ಮನ್ನು ಅನುಗ್ರಹಿಸುವುದಕ್ಕಾಗಿಯೇ ಬಂದಿರುವ ಸಮಾಚಾ ರವನ್ನು ತಿಳಿದು ಆಶ್ಚರ್ಯಾತಿರೇಕದಿಂದ ಸ್ವಲ್ಪಹೊತ್ತು ಆತನ ಮುಖವನ್ನೇ ನೋಡುತ್ತಿದ್ದು, ಆ ಬಳಿಕ ಹೀಗೆಂದರು:—

"ಬ್ರಾಹ್ಮಣೋತ್ತಮ! ನೀವು ಮನುಷ್ಯಮಾತ್ರರಲ್ಲವೆಂದೂ ನಮಗೆ ಸಹಾಯಮಾಡಬೇಕೆಂದು ಬಂದಿರುವ ಸಾಕ್ಷಾತ್ ಸುರಗುರುವೆಂದೂ ಭಾವಿಸುವೆವು. ನಿಮ್ಮ ನಾಮಧೇಯವ ನ್ನೂ ಸ್ಥಳವನ್ನೂ ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥಿ ಸುವೆವು"

ಬ್ರಾಹ್ಮಣ:— ಮಂತ್ರಿಶ್ರೇಷ್ಠರೆ! ನನ್ನ ಕುಲಗೋತ್ರಗಳಿಂ

ದಲೂ ಗ್ರಾಮನಾಮಗಳಿಂದಲೂ ನಿಮಗಾವ ಪ್ರಯೋಜನವೂ ಇಲ್ಲ. ನಾನು ನಿಮಗೆ ತಿಳಿಸಿರುವ ಕಾರ್ಯದಲ್ಲಿ ನೀವು ತಕ್ಕ ಪ್ರಯತ್ನವನ್ನು ಕೈಕೊಳ್ಳಿರಿ. ನಾನು ಬಂದಕೆಲಸವಾಯಿತು. ಇನ್ನು ಹೊರಡುವೆನು.

ಮಂತ್ರಿಗಳ ಉತ್ತರವನ್ನು ನಿರೀಕ್ಷಿಸದೆ ಶಿಷ್ಯನೊಡನೆ ಹೊರಡುತ್ತಿರುವ ಬ್ರಾಹ್ಮಣನನ್ನು ನೋಡಿ ಅವರು ಎಷ್ಟೋ ಬಗೆಯಿಂದ ಒಂದು ದಿನವಾದರೂ ಇದ್ದು ತಮ್ಮ ಆತಿಥ್ಯವನ್ನು ಸ್ವೀಕರಿಸಿ ತೆರಳಬೇಕೆಂದು ಪ್ರಾರ್ಥಿಸಿದರೂ ಆತನು ನಿಲ್ಲದೆ ಹೊರಟುಹೋದನು. ಅನಂತರ ಮಂತ್ರಿಗಳಿಬ್ಬರೂ ಹೀಗೆ ಆಲೋಚಿಸಿದರು:—

ಮಾದಣ್ಣ:—ಅಣ್ಣಾ! ಈ ಬ್ರಾಹ್ಮಣನ ಚರ್ಯೆಗಳು ಅತ್ಯದ್ಭುತವಾಗಿರುವುವು. ಹೆಸರನ್ನೂ ಹೇಳಲಾರನು, ಒಂದು ಕಾಸನ್ನೂ ಮುಟ್ಟಲಾರನು; ಒಂದು ದಿನವಿರೆಂದರೂ ಇರನು. ಇದರಲ್ಲಿ ಮೋಸವೇನೂ ಇರಲಾರದಷ್ಟೆ?

ಅಕ್ಕಣ್ಣ:— ನೀನು ಯಾವಾಗ್ಲೂ ನೋಡಿದರೂ ಸಂಶಯಗ್ರಸ್ತನೇ! ಈ ಬ್ರಾಹ್ಮಣನು ಹೇಳಿದ ಮಾತುಗಳಲ್ಲಿ ಸಂದೇಹಪಡುವ ಅಂಶವೇನೂ ಇಲ್ಲ. ಎಲ್ಲವೂ ನಮಗೆ ಶುಭಕರವೇ ಸರಿ.

ಮಾದಣ್ಣ:—ನನಗೂ ಹಾಗೆಯೇ ತೋರುವುದು. ಆದರೂ ರಾಜ್ಯಾಂಗವಿಚಾರಗಳನ್ನು ಕುರಿತು ಆಲೋಚಿಸುವಾಗ ಎಲ್ಲಾ ವಿಧವಾದ ವಿಕಲ್ಪಗಳನ್ನೂ ಚರ್ಚಿಸಬೇಕಲ್ಲವೆ?

ಅಕ್ಕಣ್ಣ—ಇನ್ನು ಸಂಶಯವನ್ನು ಬಿಟ್ಟು ಆತನ ಸೂಚನೆಯಂತೆ ಸೈನ್ಯವನ್ನು ಸಿದ್ಧಪಡಿಸುವುದು ಯುಕ್ತವು.

ಮಾದಣ್ಣ—ಹಾಗಲ್ಲ; ಗೋಲಕೊಂಡದ ಮೇಲೆ ಬಾದಷಹನು ದಂಡೆತ್ತಿಬರಲು ಕಾರಣವೇನೆಂಬುದನ್ನು ಯೋಚಿಸಬೇಕು!

ಅಕ್ಕಣ್ಣ— ಸರಿ; ಈ ಕಾಲದಲ್ಲಿ ಕಾರಣವುಬೇರೆ ಬೇಕೆ?

ಮಾದಣ್ಣ:— ಈ ಬ್ರಾಹ್ಮಣನು ಬಂದು ಹೀಗೆ ಅಸ್ತುಸಂತೆ ಹೇಳಿದಮಾತ್ರಕ್ಕೆ ನಂಬಿ ನಾವು ಸೈನ್ಯವನ್ನು ಕೂಡಿಸುವುದು ಸರಿಯಲ್ಲ. ಒಂದುವೇಳೆ ಬ್ರಾಹ್ಮಣನು ಹೇಳಿದುದು ಸುಳ್ಳಾಗಿದ್ದರೆ, ಯುದ್ಧಕ್ಕೆ ನಾವೇ ಮೊದಲು ಮಾಡಿದಂತಾಗುವುದಿಲ್ಲವೆ?

ಅಕ್ಕಣ್ಣ:— ನಿನ್ನ ಊಹೆ, ಒಂದುವೇಳೆ ನಿಜವಿರಬಹುದಾದರೂ ನಾವು ಯುದ್ಧಸನ್ನಾಹವನ್ನು ಮಾಡದಿರಕೂಡದು.

ಮಾದಣ್ಣ:— ಆಗಬಹುದು. ಆದರೆ, ಕೆಲವು ದಿನಗಳವರೆಗಾದರೂ ನಮ್ಮ ಸನ್ನಾಹವು ರಹಸ್ಯವಾಗಿರಬೇಕು. ಮತ್ತು ಈಗಲೇ ಒಬ್ಬ ಗೂಢಚಾರನನ್ನು ಅಲ್ಲಿಗೆ ಕಳುಹಿಸಿ, ಅಲ್ಲಿಯ ಸಮಾಚಾರವನ್ನು ತಿಳಿದು ಅನಂತರ ಸನ್ನಾಹವನ್ನು ಬಹಿರಂಗವಾಗಿ ಮಾಡಬಹುದು.

ಹೀಗೆ ಇವರು ಆಲೋಚಿಸಿ, ಡಿಲ್ಲೀನಗರಕ್ಕೆ ಕಳುಹಲು ತಕ್ಕ ಗೂಢಚಾರನನ್ನು ಹುಡುಕುತ್ತ ಕಡೆಗೆ ತಮ್ಮ ಬಳಿಯಲ್ಲಿ ಸರದಾರನಾಗಿದ್ದ ರೂಪಸಿಂಗನೆಂಬ ರಾಜಪುತ್ರನನ್ನು ಕಳುಹಲು ನಿಶ್ಚಯಿಸಿದರು.

ರೂಪಸಿಂಗನು ೩೨ ವರ್ಷಪ್ರಾಯದ ಒಬ್ಬ ರಜಪೂತ ವೀರನು. ೧೦-೧೨ ವರ್ಷಗಳ ಹಿಂದೆ ರಾಜಪುತ್ರಸಂಸ್ಥಾನದಿಂದ ಓಡಿಬಂದು ಗೋಲಕೊಂಡದುರ್ಗವನ್ನು ಸೇರಿ ಸೈನ್ಯದಲ್ಲಿ ಒಬ್ಬ ಸಿಪಾಯಿಯಾಗಿದ್ದು, ತನ್ನ ಅಪ್ರತಿಮ ಶೌರ್ಯಧೈರ್ಯಾತಿಶಯಗಳಿಂದ ಕ್ರಮಕ್ರಮವಾಗಿ ಅಭಿವೃದ್ಧಿಗೆ ಬಂದು ೪೦೦೦ ಸಿಪಾಯಿಗಳಿಗೂ ಸಾವಿರ ಕುದುರೆಗಳಿಗೂ ಅಧಿಪತಿಯಾದನು. ಅಷ್ಟೇ ಅಲ್ಲ; ಶತ್ರುಗಳಾರಾದರೂ ತಮ್ಮ ನಗರಕ್ಕೆ ವೇಷಧಾರಿಗಳಾಗಿ ಬಂದಲ್ಲಿ ಅವರನ್ನು ಕಂಡುಹಿಡಿದು ಕಾರಾಗ್ರಹದಲ್ಲಿಡುತ್ತಿದ್ದನು. ಈ ಕಾರಣದಿಂದ ನವಾಬನಿಗೂ ಅಕ್ಕಣ್ಣ ಮಾದಣ್ಣರಿಗೂ ಈತನಲ್ಲಿ ಅತ್ಯಂತ ವಿಶ್ವಾಸವಿತ್ತು. ರೂಪಸಿಂಗನು ಡಿಲ್ಲೀನಗರಲ್ಲಿಯೂ ಕೆಲವುಕಾಲ ಸರದಾರನಾಗಿ ಒಳಗುಟ್ಟುಗಳನ್ನೆಲ್ಲ ತಿಳಿದುಕೊಂಡಿದ್ದುದರಿಂದ ತಮ್ಮ ಉದ್ದೇಶವನ್ನು ನೆರವೇರಿಸಲು ಈತನೇ ಸಮರ್ಥನೆಂದು ಯೋಚಿಸಿ, ಅಕ್ಕಣ್ಣ ಮಾದಣ್ಣರಿಬ್ಬರೂ ಈತನನ್ನು ಡಿಲ್ಲಿಗೆ ಕಳುಹಿಸಿದರು. ರೂಪಸಿಂಗನು ಅವರ ಅಪ್ಪಣೆಯನ್ನು ಹೊಂದಿ ಸಂತೋಷದಿಂದ ಡಿಲ್ಲೀನಗರವನ್ನು ಕುರಿತು ಹೊರಟನು.

ಇಪ್ಪತ್ತೊಂಭತ್ತನೆಯ ಪ್ರಕರಣ.

(ಮೊಗಲರ ಕಾರಾಗ್ರಹ)

ಔರಂಗಜೇಬನು, ಅತ್ಯಲ್ಪವಾದ ತಪ್ಪುಮಾಡಿದವರನ್ನೂ ಕಾರಾಗ್ರಹಕ್ಕೆ ಕಳುಹಿದ್ದನು; ಎಷ್ಟು ವರ್ಷಗಳಾದರೂ ಅವರಿಗೆ ಕಾರಾಗ್ರಹವಿಮೋಚನೆಯಾಗುತ್ತಿರಲಿಲ್ಲ. ಇಂತಹ ಕಠಿನವಾದ ಕಾರಾಗ್ರಹದಲ್ಲಿ ಸಿಲ್ಕಿಬಿಟ್ಟ ನಯನಪಾಲನು, ತನ್ನ ತಪ್ಪನ್ನು ಕ್ಷಮಿಸಿ ತನ್ನನ್ನು ಎಂದಿಗಾದರೂ ಬಾದಷಹನು ಬಿಡುಗಡೆ ಮಾಡುವನೆಂದು ಅತ್ಯಾಶೆಯಿಂದ ನಿರೀಕ್ಷಿಸುತ್ತಿದ್ದನು. ಆದರೆ, ಎಷ್ಟು ದಿನಗಳು ಕಳೆದರೂ ವಿಮೋಚನವಾಗಲಿಲ್ಲ. ಕಡೆಗೆ ನಿರಾಶೆಯಿಂದ ಆತನು ಬಾದಷಹನು ತನಗೆ ಮಾಡಿದ ಮೋಸವನ್ನು ಸ್ಮರಿಸಿ, ತನ್ನ ಅವಿವೇಕವನ್ನು ನಿಂದಿಸುತ್ತ ಹೀಗೆ ಪಶ್ಚಾತ್ತಾಪಪಡುತ್ತಿದ್ದನು:—

“ಅಯ್ಯೋ! ನಾನೆಂತಹ ಬುದ್ಧಿಹೀನನಾದೆನು? ಉತ್ತಮ ರಜಪೂತವಂಶದಲ್ಲಿ ಜನ್ಮಸಿಯೂ ಸ್ವಧರ್ಮತ್ಯಾಗಿಯಾಗಿ

ಮಹಮ್ಮದೀಯರೊಡನೆ ಸ್ನೇಹವನ್ನು ಬೆಳಸಿದುದರಿಂದಲ್ಲವೆ ನನಗೀ ಕಷ್ಟಗಳು ಪ್ರಾಪ್ತವಾದುವು ? ಎಷ್ಟೋ ಮಂದಿ ಸೇನಾನಾಯಕರಿದ್ದರೂ ಚಂದ್ರಾವತಿಯನ್ನು ಕರೆತರಲು ಔರಂಗಜೇಬನು ನನ್ನನ್ನೇಕೆ ಕಳುಹಿದನು ? ನಾನೇಕೆ ಅದಕ್ಕೊಪ್ಪಿದೆನು ? ಸಾಧ್ವೀಮಣಿಯೂ ರಜಪೂತಕುಲಾಭಿಮಾನದೇವತೆಯೂ ಆದ ಆ ದೇವಿಯಲ್ಲಿ ದ್ರೋಹವನ್ನು ಚಿಂತಿಸಿದ ನನಗೆ ಇದು ತಕ್ಕ ಪ್ರಾಯಶ್ಚಿತ್ತವಲ್ಲವೆ? ಆಹಾ! ದುರ್ಗಾದಾಸನನ್ನು ವಂಚಿಸಲೆಣಿಸಿದ ನನ್ನ ಬುದ್ಧಿಗೇನೆನ್ನಬೇಕು ? ಆತನ ರಾಜಭಕ್ತಿಯನ್ನೂ ಪರಾಕ್ರಮವನ್ನೂ ಸ್ಮರಿಸಿದರೆ, ತೇಜಸ್ವಿಯಾದ ಆತನೇ ಪ್ರತ್ಯಕ್ಷನಾದಂತೆ ಕಾಣುತ್ತಿರುವುದು! ಪುಣ್ಯಪುರುಷನಾದ ಸ್ವಾಮಿಕಾರ್ಯಧುರಂಧರನಾದ ದುರ್ಗಾದಾಸ! ನಿನಗೆ ನಮಸ್ಕಾರವು. ಕ್ಷಮಿಸು. ನಿನ್ನ ಸಮಾನ ರಜಪೂತನಾಗಿದ್ದು ಈಗ ನಿನ್ನ ಹಗೆಗಳ ಸಂಚಾರದ ಅಧಮಾಧಮನಾದ ನನ್ನನ್ನು ನೀನು ಕ್ಷಮಿಸು, ಉದ್ಧರಿಸು! ಜಗನ್ಮೋಹಿನೀ, ಇಂದಿರಾದೇವಿ! ಅಸಮಾನವಾದ ನಿನ್ನ ಬುದ್ಧಿಚಾತುರ್ಯ, ರಾಜಭಕ್ತಿ, ಸ್ವಕುಲಾಭಿಮಾನಗಳಲ್ಲಿ ಅಣ್ಣನಾದ ದುರ್ಗಾದಾಸನನ್ನೇ ಮೀರಿಸುತ್ತಿರುವೆಯಲ್ಲವೇ! ನಿನ್ನೀ ದರ್ಪವನ್ನೂ ಅಭಿಮಾನವನ್ನೂ ನೋಡಿ ನನಗೇ ನಾಚಿಕೆಯಾಗುವುದಲ್ಲಾ! ತಾಯಿ! ಅನುಗ್ರಹಿಸು; ಈ ಅಧಮನಿಗೆ ನಿನ್ನಲ್ಲಿರುವ ಸದ್ಗುಣಾತಿಶಯಂಗಳ ಲವಲೇಶವನ್ನಾದರೂ ಅನುಗ್ರಹಿಸಿ, ಇನ್ನು ಮುಂದೆಯಾದರೂ ಇವನು ತನ್ನ ಕರ್ತವ್ಯವನ್ನು ನೆರವೇರಿಸಿ ಕೃತಾರ್ಥನಾಗುವಂತೆ ಮಾಡು. ಆಹಾ! ಯಾವ ರೋಹಿನೀಗಳು ಕಾವಲಿದ್ದರೂ ಲೀಲಾಜಾಲವಾಗಿ ಚಂದ್ರಾವತೀರಾಣಿಯನ್ನೂ ಅಜಿತಕುಮಾರನನ್ನೂ ಬಿಡಿಸಿದಳೋ ಅಂತಹ ಉಜ್ವಲಕ್ಷಾತ್ರತೇಜೋಮಯಮೂರ್ತಿಯನ್ನು ದುರಭಿಮಾನದಿಂದ ಕರೆತಂದು ಕ್ರೂರನಾದ ಔರಂಗಜೇಬನಿಗೆ ಒಪ್ಪಿಸಿದ ನನ್ನ ಪಾತಕಕ್ಕೆ ಎಣೆಯುಂಟೆ? ನನ್ನಂತಹ ಅಧಮನು ಪ್ರಪಂಚದಲ್ಲಿ ಹುಟ್ಟುವನೆ ? ರಾಜಪುತ್ರಸ್ತ್ರೀಯರನ್ನು ಕರೆತಂದು ಮಹಮ್ಮದೀಯರಿಗೆ ಒಪ್ಪಿಸಿದ ಚಂಡಾಲನೆಂದು ಚರಿತ್ರಕಾರರು ನನ್ನನ್ನು ಎಷ್ಟು ತಿರಸ್ಕರಿಸಬಹುದು? ಅಯ್ಯೋ! ಆ ಸಾಧ್ವಿಗೆ ಆ ಕಾಮುಕನಾದ ಬಾದಷಹನು ಯಾವ ತೊಂದರೆಯನ್ನುಂಟುಮಾಡಿರುವನೋ?...... ನನ್ನ ಈ ದುರ್ದಶೆಗೆ ಕಾರಣನಾದ ಔರಂಗಜೇಬನ ಮೇಲೆ ನನ್ನ ಹಗೆತನವನ್ನು ಹೇಗೆ ತೀರಿಸಲಿ ? ಸಪರಿವಾರನಾದ ಆ ಕ್ರೂರನಿಗೆ ಮಹಾಪರಾಭವವನ್ನುಂಟುಮಾಡಿದಲ್ಲದೆ ಕ್ಷಣಕ್ಷಣಕ್ಕೂ ಪ್ರಜ್ವಲಿಸುತ್ತಿರುವ ನನ್ನೀ ದ್ವೇಷಾಗ್ನಿ ತಣ್ಣಗಾಗಲಾರದು ! ಮೋಸಗಾರನಿಗೆ ಮೋಸದಿಂದಲೇ ಪರಾಭವವನ್ನುಂಟುಮಾಡಬೇಕು."

ಅಯ್ಯೋ! ನಾನೆಂತಹ ಅವಿವೇಕಿ? ಹಾವಿನ ಬಾಯಿಯಲ್ಲಿರುವ ಕಪ್ಪೆ, ಇದಿರಿಗಿರುವ ಹುಳುವನ್ನು ತಿನ್ನಲು ಪ್ರಯತ್ನಿಸಿದಂತೆ, ಗಾಢಾಂಧಕಾರವಾದ ಈ ಕಾರಾಗ್ರಹದಲ್ಲಿ ಸಿಕ್ಕಿಬಿದ್ದು ದಿಕ್ಕಿಲ್ಲದೆ ತೊಳಲುತ್ತಿರುವ ನಾನು ಆ ಪಾಪಿಯಾದ ಬಾದಷಹನಿಗೆ ಮೋಸಮಾಡಲೆಳಸಿರುವೆನಲ್ಲವೆ ? ದೈವಾನುಗ್ರಹವೇನಾದರೂ ಇದ್ದು ಇಲ್ಲಿಂದ ಮುಕ್ತನಾದಮೇಲಲ್ಲವೇ ನನ್ನ ಉದ್ದೇಶ ಸಿದ್ಧಿಯಾಗುವುದು ? ....

ಹೀಗೆ ಪರಿತಪಿಸುತ್ತಿದ್ದು ಕಡೆಗೆ ಧೈರ್ಯವನ್ನು ಹೊಂದಿ, ಆಹಾ! ಇಂದಿರಾದೇವಿಯ ಸ್ಮರಣಮಾತ್ರದಿಂದಲೇ ನನ್ನ ಅಜ್ಞಾನದ ನಿವಾರಣವಾಗಿ ಉಪಾಯವು ಸ್ಫೂರ್ತಿಯಾಯಿತು! ಕರ್ತವ್ಯತಾಮೂಢರಾದವರೆಲ್ಲರೂ ಇಂದಿರಾದೇವಿಯ ಸ್ಮರಣೆಯಿಂದ ಕರ್ತವ್ಯದಕ್ಷರಾಗುವುದರಲ್ಲಿ ಅಡ್ಡಿಯಿಲ್ಲ. ಇನ್ನು ನಾನು ಉಪಾಯದಿಂದ ಮುಕ್ತನಾಗಿ ಇಂದಿರೆಯನ್ನು ಬಾದಷಹನ ನಿರ್ಬಂಧದಿಂದ ಬಿಡಿಸಿ. ಅಣ್ಣನಾದ ದುರ್ಗಾದಾಸನಿಗೆ ಒಪ್ಪಿಸುವುದೇ ನನ್ನ ಅಪರಾಧಕ್ಕೆ ಪ್ರಾಯಶ್ಚಿತ್ತವು."

ಹೀಗೆ ನಿರ್ಧರಿಸಿ, ನಯನಪಾಲನು ಕಾರಾಗಾರದ ಅಧಿಕಾರಿಯೊಡನೆ ಸ್ನೇಹವನ್ನು ಬೆಳಸುತ್ತಬಂದನು. ಕೆಲವು ದಿನಗಳೊಳಗಾಗಿಯೇ ಆತನನ್ನು ತನ್ನವನನ್ನಾಗಿ ಮಾಡಿಕೊಂಡು ಆತನಿಗೆ ತನ್ನ ಉದ್ದೇಶವನ್ನು ತಿಳಿಸಿ, ತನ್ನನ್ನು ಬಂಧನದಿಂದ ಬಿಟ್ಟುಬಿಟ್ಟರೆ ವಿಪುಲದ್ರವ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿದನು. ಅಧಿಕಾರಿಯು ಔರಂಗಜೇಬನ ಭಯದಿಂದ ನಯನಪಾಲನ ಮಾತನ್ನು ಒಪ್ಪಲಾರದೆಯೂ, ವಿಪುಲದ್ರವ್ಯಲಾಭವಾಗುವುದನ್ನು ಬಿಟ್ಟುಬಿಡಲಾರದೆಯೂ ಉಭಯಸಂಕಟಕ್ಕೆ ಗುರಿಯಾಗಿ ತೊಡಕಾಡುತ್ತಿದ್ದು, ಕೆಲವು ದಿನಗಳ ಮೇಲೆ, ನಯನಪಾಲನನ್ನು ಕಾರಾಗ್ರಹದಲ್ಲಿರಿಸಿ ಆರು ತಿಂಗಳಾಗಿರುವುದರಿಂದ ಬಾದಷಹನಿಗೆ ಇವನ ಜ್ಞಾಪಕವಿರಲಾರದೆಂದೂ ಇವನನ್ನು ಬಿಟ್ಟುಬಿಟ್ಟರೆ ತನಗೆ ಯಾವ ತೊಂದರೆಯೂ ಉಂಟಾಗಲಾರದೆಂದೂ ಯಾವಜ್ಜೀವವೂ ಸುಖವಾಗಿರಬಹುದಾದ ಜೀವನವನ್ನು ಬಿಡುವುದೇಕೆಂದೂ ಯೋಚಿಸಿ, ನಯನಪಾಲನನ್ನು ಬಿಡುವಂತೆ ನಿಶ್ಚಯಿಸಿದನು. ಇಷ್ಟೇ ಅಲ್ಲ; ಜೈಲಲೆಕ್ಕದಲ್ಲಿ ನಯನಪಾಲನು ಸತ್ತುಹೋಗಿರುವನೆಂದು ಬರೆದರೆ ತನಗಾವ ತೊಂದರೆಯೂ ಇಲ್ಲವೆಂದೂ ನೆನೆದು ತನ್ನ ಮನೋಗತವನ್ನು ನಯನಪಾಲನಿಗೆ ತಿಳಿಸಿದನು. ನಯನಪಾಲನು ಅದಕ್ಕೆ ಸಮ್ಮತಿಸಿ ನಗರದಲ್ಲಿದ್ದ ತನ್ನ ಆಪ್ತರಿಂದ ಕಾರಾಗೃಹಾಧಿಕಾರಿಗೆ ಸ್ವಲ್ಪದ್ರವ್ಯವನ್ನು ಕೊಡಿಸಿ, ಉಳಿದುದನ್ನು ತಾನು ಮುಕ್ತನಾದ ಮೇಲೆ ಕೊಡುವೆನೆಂದು ಹೇಳಿದನು.

ಅಧಿಕಾರಿಯು ಅತ್ಯಂತಸಂತೋಷದಿಂದ ಆತನನ್ನು ಜಾಗ್ರ

ತೆಯಾಗಿ ಬಿಡುಗಡೆ ಮಾಡುವೆನೆಂದು ಹೇಳಿ ಸಮಯವನ್ನು ನಿರೀಕ್ಷಿಸುತ್ತಿದ್ದನು. ಒಂದು ದಿನರಾತ್ರಿ ವಿಶೇಷವಾಗಿ ಬಿರುಗಾಳಿ ಬೀಸುತ್ತ ಕೋಟೆಯೊಳಗಿದ್ದ ದೀಪವೆಲ್ಲವನ್ನೂ ಆರಿಸಲು, ಕಾರಾಗಾರದ ಕಾವಲುಗಾರರು ಗಾಢನಿದ್ರೆಯಲ್ಲಿದ್ದಾ ಸಮಯವನ್ನು ನೋಡಿ, ನಯನಪಾಲನನ್ನು ಬಿಡುಗಡೆಮಾಡಿದನು. ಅಷ್ಟರಲ್ಲಿಯೇ ನಯನಪಾಲನ ಅದೃಷ್ಟದೇವತೆಯ ಸಹಾನುಭೂತಿಯ ಫಲವೆಂಬಂತೆ ಜಡಿಮಳೆಯೂ ಸುರಿಯತೊಡಗಿತು. ನಯನಪಾಲನು ಬಹುಕಾಲ ಕೋಟೆಯಲ್ಲಿದ್ದು ಚೆನ್ನಾಗಿ ತಿಳಿದವನಾಗಿದ್ದುದರಿಂದ ಮಳೆ-ಗಾಳಿ-ಅಂಧಕಾರಗಳಾವುದನ್ನೂ ಲೆಕ್ಕಿಸದೆ, ಕರ್ತವ್ಯತತ್ಪರನಾಗಿ ತ್ವರೆಯಿಂದ ಹೊರಟು ತನ್ನ ಮನೆಗೆ ಒಂದುಸೇರಿ, ತನ್ನ ಹಿಂದೆಯೇ ಬಂದ ಅಧಿಕಾರಿಗೆ ವಾಗ್ದಾನಮಾಡಿದ್ದಂತೆ ದ್ರವ್ಯವನ್ನಿತ್ತು ಕಳುಹಿದನು.

ಇನ್ನು ನಯನಪಾಲನು ಪೂರ್ವದ ನಯನಪಾಲನಲ್ಲ! ಕಾರಾಗೃಹದಿಂದ ಮೊದಲು ಸ್ವಧರ್ಮಾಭಿಮಾನಿಯಾಗಿ ತಿರುಗಿದನು. ಇಂದಿರೆಯ ಬಿಡುಗಡೆಯ ಯೋಚನೆಯೇ ಯೋಚನೆಯಾಗಿದ್ದುದರಿಂದ ಅದುಮೊದಲು ಆತನು ವೇಷಧಾರಿಯಾಗಿ ಔರಂಗಜೇಬನ ರಾಣಿವಾಸವನ್ನು ಪ್ರವೇಶಿಸಿ,ಅಲ್ಲಿಯ ಸಮಾಚಾರಗಳನ್ನು ತಿಳಿದುಕೊಳ್ಳುತ್ತ ಬಂದನು. ವೇಷಧಾರಿಯಾಗಿ ತಿರುಗುತ್ತಿದ್ದುದರಿಂದ ಆತನನ್ನು ನಗರದವರಾರೂ ಗುರ್ತಿಸಲಾರದೇ ಹೋದರು.

ಇಪ್ಪತ್ತೇಳನೆಯ ಪ್ರಕರಣ.

(ಕಪಟ ನಾಟಕವು.)

ಔರಂಗಜೇಬನು ಹೇಳಿ ಕಳುಹಿದ ಉತ್ತರದಿಂದ ರೋಷನಾರೆಯ ರೋಷವು ಮಟ್ಟು ಮೀರಿತು. ಬರಹೇಳಿದುದೇ ತಡೆಯಾಗಿ ತನ್ನೆಡೆಗೆ ಓಡಿಬರುತ್ತಿದ್ದ ಬಾದಷಹನು, ಇಂದು ಹೀಗೆ ಹೇಳಿಕಳುಹಲು ಉದಯಪುರಿಯ ದುರ್ಬೋಧನೆಯೇ ಕಾರಣವೆಂದೆಣಿಸಿದಳು. ಉದಯಪುರಿಯ ಮೋಹಪಾಶಬದ್ಧನಾಗಿರುವುದರಿಂದಲೇ ತನ್ನ ಅಣ್ಣನು ತನ್ನನ್ನು ಉಪೇಕ್ಷಿಸಿದನೆಂದೂ ಅವನ ಮನಸ್ಸನ್ನು ಕೆಡಿಸಿದ ಉದಯಪುರಿಯ ಹೆಮ್ಮೆಯನ್ನು ಬಾದಷಹನು ತನ್ನ ಆಜ್ಞಾಧಾರಕನೆಂದು ಬೀಗಿ ಹೋಗಿರುವ ಅವಳ ಹೆಮ್ಮೆಯನ್ನು ಅವನಿಂದಲೇ ಮುರಿಸಬೇಕೆಂದೂ ಆಲೋಚಿಸಿದಳು. ತನ್ನ ಕಾರ್ಯಸಾಧನೆಗಾಗಿ ಬಾದಷಹನಿಗೆ ಉದಯಪುರಿಯ ಮೇಲೆ ಆಗ್ರಹವನ್ನುಂಟುಮಾಡಲು ಭೋಟುಸಿಂಗನನ್ನೇ ಆಧಾರವಾಗಿಟ್ಟು ಕಾರ್ಯಕ್ಕೆ ಪ್ರಯತ್ನಿಸಬೇಕೆಂದು ನಿರ್ಧರಿಸಿದಳು. ಇಷ್ಟೆಲ್ಲಕ್ಕೂ ತನ್ನೆಡೆಗೆ ತನ್ನ ಅಣ್ಣನು ಬರಬೇಕು. ಆದರೆ ಅವನನ್ನು ಬರಮಾಡಿಕೊಳ್ಳುವುದೆಂತು?

ರೋಷನಾರೆಯು ಹೀಗೆ ಚಿಂತೆ ಮಾಡುತ್ತಿರುವಾಗಲೇ ಔರಂಗಜೇಬನು ಪ್ರಾತಃಕಾಲದ ಭೋಜನವನ್ನು ತೀರಿಸಿಕೊಂಡು ತಂಗಿಯನ್ನು ನೋಡಲುಬಂದವನು ತಾನೇ ಒಂದು ಆಸನದ ಮೇಲೆ ಕುಳಿತು, ಚಿಂತಿಸುತ್ತಿದ್ದವಳನ್ನು ಕುರಿತು ಹೀಗೆ ಕೇಳಿದನು:—

"ತಂಗಿ, ನಿನ್ನ ಮುಖವನ್ನು ನೋಡಿದರೆ ಏನೋ ವಿಚಾರಪರಳಾಗಿರುವಂತೆ ಕಾಣುವುದು. ಕಾರಣವೇನು?

ರೋಷ:— ಕಾರಣವೇನಾದರೂ ಇರಲಿ, ಅಣ್ಣಾ, ಇನ್ನು ನಾನೀ ದಿಲ್ಲೀ ನಗರದಲ್ಲಿರಲಾರೆ, ಮಕ್ಕಾಕ್ಕೆ ಹೊರಡಲು ಅನುಮತಿಯನ್ನು ಕೊಡು.

ಔರಂಗ:— ನಾನೂ ಬರುವೆನು. ಇಬ್ಬರೂ ಜೊತೆಯಾಗಿಯೇ ಹೊರಡುವ.

ರೋಷ:— ನೀನೇಕೆ ಈಗ ಬರಬೇಕು, ಬರುವುದಕ್ಕೆ ನಿನಗೆ ಅವಕಾಶವೆಲ್ಲಿ?

ಔರಂಗ:— ಹೋಗಲಿ, ಈಗ ನೀನು ಹೊರಡಲು ಕಾರಣವೇನು?

ರೋಷ:— ಅಸ್ವತಂತ್ರವಾಗಿ ಪಟ್ಟಣದಲ್ಲಿ ಜೀವಿಸುವುದಕ್ಕಿಂತಲೂ ಸ್ವತಂತ್ರವಾಗಿ ಅಡವಿಯಲ್ಲಿರುವುದು ಸೌಖ್ಯವು.

ಔರಂಗ:— ಏನು, ಇಲ್ಲಿ ನಿನಗೆ ಸ್ವಾತಂತ್ರ್ಯವಿಲ್ಲವೆ? ಇಲ್ಲಿ ನಿನಗೆ ಸರ್ವತಂತ್ರಸ್ವಾತಂತ್ರ್ಯವಿದ್ದು, ಸ್ವಯಂ ಬಾದಷಹನಾದ ಅಣ್ಣನೇ ವಶವಾಗಿದ್ದು ಅಸ್ವತಂತ್ರವೆ?

ರೋಷ:—ಸರ್ವಸ್ವಾತಂತ್ರ್ಯವಿದ್ದ ಮೇಲೆ ಅದಕ್ಕೆ ಆತಂಕವಿರದಂತಿರಬೇಕಲ್ಲವೆ?

ಔರಂಗ:— ಆತಂಕಪಡಿಸಿದವರಾರು? ಬೇಗ ಹೇಳು, ಅವರನ್ನು ತಕ್ಕಂತೆ ದಂಡಿಸುವೆನು.

ರೋಷ:— ಅವರನ್ನು ದಂಡಿಸುವುದು ಸುಳ್ಳು, ನಿಜವನ್ನು ಹೇಳಿದರೆ ನಾನೇ ದಂಡಿಸಲ್ಪಡುವೆನು.

ಔರಂಗ:— ಇಷ್ಟು ಮಾತುಗಳೇಕೆ, ತಂಗಿ, ನಡೆದ ಸಮಾಚಾರವನ್ನು ವಿವರಿಸಿ ಹೇಳು.

ರೋಷ:— ಅಣ್ಣಾ, ಹೇಳಿದರೆ ನಮ್ಮ ಮಹಮ್ಮದೀಯ ವಂಶಕ್ಕೇ ಅಪಕೀರ್ತಿ ಬರುವುದೆಂಬ ಚಿಂತೆ.

ಔರಂಗ— ಏನು! ಪವಿತ್ರವಾದ ನಮ್ಮ ಮಹಮ್ಮದೀಯ ವಂಶಕ್ಕೇ ಅಪಕೀರ್ತಿ ತರುವಂತಹ ಕೃತ್ಯವಾರಿಂದಾಯಿತು!

ರೋಷ:— ಅದೆಲ್ಲಾ ನನಗೇಕೆ, ಬಿಡು, ಅಂತಃಪುರಕ್ಕೆ... ....ಹೋಗು, ನಾನು ಹೇಳಲಾರೆನು.

ಔರಂಗ:— ಸುಮ್ಮನೆ ಸಂಶಯದಲ್ಲಿ ನರಳಿಸಬೇಡ, ತಂಗಿ, ವೃತ್ತಾಂತವೇನು, ಬೇಗ ಹೇಳು.

ರೋಷ:— ಸಮಯವು ಸರಿಯಾಗಿಲ್ಲ. ರಾಜಪುತ್ರರು ವೇಷಾಂತರದಿಂದ ಅರಮನೆಯನ್ನು ಪ್ರವೇಶಿಸುತ್ತಿರುವರು.

ಔರಂಗ:— ಏನು? ರಾಜತ್ರರು ಅಂತಃಪುರಕ್ಕೆ ಪ್ರವೇಶಿಸುವರೆ? ಅವರಿಗೆ ಅಂತ್ಯಕಾಲವೊದಗಿರಬೇಕು! ತಿಳಿದೂ ನೀನೇಕೆ ಸುಮ್ಮನಿದ್ದೆ?

ರೋಷ:— ಒಬ್ಬರಿಗೆ ಸಮ್ಮತವಾದ ಕಾರ್ಯವನ್ನು ಮತ್ತೊಬ್ಬರು ಹೋಗಲಾಡಿಸಲಾದೀತೇ?

ಔರಂಗ:— ಹಾಗಾದರೆ ಈ ಕೆಲಸವಾರಿಗೆ ಸಮ್ಮತವು?

ರೋಷ:— ಅಣ್ಣಾ ನಿನಗೆ ಕೋಪವುಂಟಾದರೂ ಚಿಂತೆಯಿಲ್ಲ. ಉದಯಪುರಿಗೇ ಸಮ್ಮತ————

ಔರಂಗ:— ಉದಯಪುರಿಗೂ ರಾಜಪುತ್ರರಿಗೂ ಸಂಬಂಧವೇನಿರುವುದು?

ರೋಷ:— ಯಾವ ಸಂಬಂಧವಿರುವುದೋ ನೀನೇ ಗ್ರಹಿಸಬೇಕಲ್ಲದೆ ಹೆಂಗಸಾದ ನಾನು ಹೇಳಲಾಗದು. ಇದಕ್ಕೆ ನೀನೇ ಕಾರಣನಲ್ಲದೆ ಅವಳಲ್ಲ. ಇಷ್ಟುಮಂದಿ ಮಹಮ್ಮದೀಯ ಸ್ತ್ರೀಯರಿರುವಾಗ ನೀನೇಕೆ ರಜಪೂತ ಕನ್ಯೆಯನ್ನು ಮದುವೆ ಮಾಡಿಕೊಂಡೆ? ರಾಜಪುತ್ರ ಸ್ತ್ರೀಯಾದುದರಿಂದ ಸ್ವಜಾತ್ಯಭಿಮಾನವು ಸ್ವಲ್ಪವಾದರೂ ಇಲ್ಲದಿರುವುದೇ? ಇದಕ್ಕೆ ದೃಷ್ಟಾಂತವನ್ನು ತೋರಿಸುವೆನು, ನೋಡು.

ರೋಷನಾರೆಯು ಬೋಧನೆಯಿಂದ ಔರಂಗಜೀಬನು ಆಗಲೇ ಸಂಶಯಗ್ರಸ್ತನಾದನು. ಅಷ್ಟರಲ್ಲಿಯೇ ರೋಷನಾರೆಯು ಕಾರಾಗೃಹದಲ್ಲಿದ್ದ ಥೋಟುಸಿಂಗನನ್ನು ಅಲ್ಲಿಗೆ ಕರೆಸಿದಳು. ಔರಂಗಜೀಬ ಬಾದಷಹನು ಅವನನ್ನು ಚನ್ನಾಗಿ ನೋಡಿ ಅವನನ್ನು ಎಲ್ಲಿಯೋ ನೋಡಿದ್ದಂತೆ ಯೋಚಿಸಿ ಕ್ರೋಧದಿಂದ ಅವನನ್ನು ದುರದುರನೆ ನೋಡುತ್ತ ರೋಷನಾರೆಯನ್ನು ಕುರಿತು,— " ತಂಗೀ, ಈತನಾರು? " ಎಂದು ಕೇಳಿದನು. ರೋಷನಾರೆಯು ದ್ವೇಷಸಾಧನೆಗೆ ಇದೀಗ ತಕ್ಕ ಸಮಯವಾಗಿ ತೋರಿತು. ಅವಳು,— " ಅಣ್ಣಾ! ಇವನು ಉದಯಪುರಿಯ ಸ್ನೇಹಿತರಲ್ಲಿ ಒಬ್ಬನು. ವೇಷಧಾರಿಯಾದ ಈತನು ಉದಯಪುರಿಯ ಅಂತಃಪುರದಿಂದ ಬರುತ್ತಿರಲು ನಾನು ಈತನ ವೇಷವನ್ನು ತಿಳಿದು ಕಾರಾಗೃಹದಲ್ಲಿಟ್ಟಿರುವೆನು......? ಔರಂಗಜೀಬನು ಮುಂದೆ ಕೇಳುವ ತಾಳ್ಮೆಯಿಲ್ಲದವನಾಗಿ ಥೋಟುಸಿಂಗನನ್ನು ಹಿಂದೆ ಕರೆದುಕೊಂಡು ಉದಯಪುರಿಯ ಅಂತಃಪುರವನ್ನು ಪ್ರವೇಶಿಸಿದನು.

ಆಗ ಉದಯಪುರಿಯು ಇಂದಿರೆಯೊಡನೆ ಸಂಭಾಷಿಸುತ್ತಿದ್ದಳು. ಬಾದಷಹನನ್ನು ನೋಡಿದೊಡನೆಯೇ ಅವರಿಬ್ಬರೂ ಎದ್ದುನಿಂತರು. ಇಂದಿರೆಯು ಬಾಗಿಲ ಹಿಂದೆ ಹೋಗಿ ಥೋಟುಸಿಂಗನನ್ನೇ ನೋಡುತ್ತ ನಿಂತಳು. ಇಂದಿರೆಯನ್ನು ನೋಡಿ ಥೋಟುಸಿಂಗನು ಮುಖವನ್ನು ತಗ್ಗಿಸಿದನು. ಉದಯಪುರಿಯು ಎಂದಿನಂತೆ ಬಾದಷಹರಿಗೆ ಮರ್ಯಾದೆಯನ್ನು ಮಾಡಿದಳು. ಆದರೆ ರೋಷನಾರೆಯ ದುರ್ಬೋಧನೆಯಿಂದ ಕಲುಷಿತವಾದ ಅವನ ಮನಸ್ಸು ಸರಲ ಹೃದಯದ ಉದಯಪುರಿಯ ಅಕುಟಿಲವಾದ ಆದರವನ್ನು ಸಂಭಾವಿಸಲಿಲ್ಲ. ಸಂಶಯ ಕ್ರೋಧಗಳಿಂದ ಪರವಶನಾಗಿದ್ದ ಬಾದಶಹನು ಉದಯಪುರಿಯ ಉಪಚಾರಗಳನ್ನು ಅಪಚಾರದಂತೆ ತಿಳಿದು ಕ್ರೋಧದಿಂದ "ಎಲೆ, ನಿನ್ನೀ ಶುಶ್ರೂಷೋಪಚಾರಗಳನ್ನು ನಿಲ್ಲಿಸಿ, ಮೊದಲು ನನಗೆ ಸರಿಯಾದ ಉತ್ತರವನ್ನು ಕೊಡು. ' ಇವನಾರೆಂಬುದನ್ನು ಮೊದಲು ಹೇಳು?

ಉದಯ:— ಯಾವನೋ ದಾರಿಹೋಕನನ್ನು ಕರೆದುಕೊಂಡು ಬಂದು, ಈತನಾರೆಂದರೆ ನಾನು ಏನು ಹೇಳಲಿ?

ಬಾದ:— ನೀನು ಜಾಣೆಯೆಂದು ಬಲ್ಲೆನು. ಮಹಮ್ಮದೀಯ ವಂಶಕ್ಕೆ ಶನಿಗ್ರಹವಾಗಿ ನೀನು ಕೇಡುಂಟುಮಾಡಲು ಇಲ್ಲಿಗೆ ಬಂದೆಯಲ್ಲವೆ?

ಉದಯ:—ಮಹಾರಾಜಾ! ಈ ದಾಸಿಯು ಆವ ತಪ್ಪನ್ನೂ ಮಾಡಿಲ್ಲ. ಕಾರಣವಿಲ್ಲದೆ ಆಗ್ರಹಮಾಡಿದರೆ ನನಗಿನ್ನಾರು ದಿಕ್ಕು?

ಬಾದ:— ಈ ಥೋಟುಸಿಂಗನು ನಿನ್ನ ಅಂತಃಪುರಕ್ಕೆ ಬರಲು ಕಾರಣವೇನು?

ಉದಯ:— ಥೋಟುಸಿಂಗನೆಂಬುದರಿಂದ ಈಗ ಹೇಳಲಾಗುವುದು, ಕೇಳಬೇಕು. ಈತನು ತಾನೊಬ್ಬ ಚಿತ್ರಗಾರನೆಂದು ಹೇಳಿ ಒಂದು ದಂತದ ಬೀಸಣಿಗೆಯನ್ನು ಮಾಡಿ ನನಗೆ ತಂದುಕೊಟ್ಟಿರುವನು. ಮಾರನೆಯ ದಿನ ಬಂದರೆ ಬಹುಮಾನವನ್ನು ಕೊಡಿಸುವೆನೆಂದು ಹೇಳಿದೆನು. ಆದರೆ ಈತನು ಈವರೆಗೂ ಬಂದಿಲ್ಲ. ತಮಗೆ ಆ ಬೀಸಣಿಗೆಯನ್ನು ತೋರಿಸಲು ಮರೆತುಹೋದೆನು; ಕ್ಷಮಿಸಬೇಕು. " ಎಂದು ಹೇಳಿ ಎದ್ದು ಹೋಗಿ ಬೀಸಣಿಗೆಯನ್ನು ತಂದು ಆತನಿಗೆ ತೋರಿಸಿದಳು. ಆದರೆ ರಚನಾ ಕೌಶಲ್ಯಕ್ಕೂ ಚಿತ್ರಗಳ ಸೌಂದರ್ಯಕ್ಕೂ ಮೆಚ್ಚಿ ಬಾದಶಹನು ಆಶ್ಚರ್ಯಪಟ್ಟನಾದರೂ ಉತ್ತರಕ್ಷಣದಲ್ಲಿಯೇ ಬೀಸಣಿಗೆಯನ್ನು ಮಂಚದಮೇಲೆ ಹಾಕಿ, ಉದಯಪುರಿಯನ್ನು ಕುರಿತು,— "ಎಲೆ ದುಷ್ಟೆ! ರಾಜಪುತ್ರರನ್ನು ವೇಷಧಾರಿಗಳನ್ನಾಗಿ ಮಾಡಿ ನಮ್ಮ ಪಟ್ಟಣಕ್ಕೆ ಕರೆಸುವೆಯಾ? ನಿನ್ನಿಂದ ನಮ್ಮ ಪವಿತ್ರವಾದ ಮಹಮ್ಮದೀಯ ವಂಶಕ್ಕೇ ಕಲಂಕವುಂಟಾಗಿದೆಯಲ್ಲಾ.

ಉದಯಪುರಿಗೆ ಬಾದಷಹನ ವಾಕ್ಯಗಳು ಶಲ್ಯದಂತೆ ಮರ್ಮಸ್ಪರ್ಶಿಗಳಾಗಿ ಬಾಧಿಸಿದವು. ಗಡಗಡನೆ ನಡುಗುತ್ತ "ಬಾದಷಹರ ಅನುಮಾನವು ಈಗ ಗೊತ್ತಾಯಿತು. ಇಂತಹ

ದುರ್ನೀತಿಯನ್ನುಂಟು ಮಾಡಿದವರಾರೆಂಬುದು ನನಗೆ ತಿಳಿಯಿತು. ಇನ್ನು ವಿಳಂಬ ಮಾಡದೆ ಕರಖಡ್ಗದಿಂದ ನನ್ನನ್ನು ಛೇದಿಸಿ ಅವಳ ಕೋರಿಕೆಯನ್ನು ಈಡೇರಿಸಬಹುದು. ಇಲ್ಲವೆ, ನ್ಯಾಯಾನ್ಯಾಯಗಳನ್ನು ಸರಿಯಾಗಿ ವಿಚಾರಿಸಿ, ಯುಕ್ತಾಯುಕ್ತಗಳನ್ನು ತಿಳಿಯಬೇಕು. ಇದಕ್ಕೂ ಹೆಚ್ಚಾಗಿ ನಾನು ಈ ಭೋಟಸಿಂಗನ ವಿಷಯವನ್ನು ತಿಳಿದವಳಾಗಿಲ್ಲ. ಇದರಲ್ಲಿಯೂ ಅನುಮಾನವಿದ್ದರೆ ಜಸಾವದನನ್ನು ಕೇಳಬಹುದು." ಎಂದು ಹೇಳಿ ಕಣ್ಣೀರು ಸುರಿಸುತ್ತ ಸುಮ್ಮನಾದಳು. ಬಾದಷಹನು ಉದಯಪುರಿಯ ಮಾತನ್ನು ಕೇಳಲಿಲ್ಲ. ಕ್ರೋಧಪರವಶನಾಗಿ ಖಡ್ಗವನ್ನೆತ್ತಿ – “ನಿಲ್ಲು, ಬಾಯಿಗೆ ಬಂದಂತೆ ಮಾತನಾಡಬೇಡ. ನಾನಿನ್ನು ನಿನ್ನನ್ನು ಕ್ಷಮಿಸುವಂತಿಲ್ಲ.” ಎಂದವಳ ಶಿರಚ್ಛೇದವನ್ನು ಮಾಡಲುದ್ಯುಕ್ತನಾದನು. ತತ್‌ಕ್ಷಣವೇ ಉದಯಪುರಿಯು ಬಾದಷಹನ ಭೀಕರಾಕಾರವನ್ನು ನೋಡಿ ಭಯಪಟ್ಟು ಮೂರ್ಛಿತೆಯಾಗಿ ನೆಲದ ಮೇಲೆ ಬಿದ್ದುಬಿಟ್ಟಳು. ಈವರೆಗೂ ಬಾಗಿಲ ಮರೆಯಲ್ಲಿ ನಿಂತು ನೋಡುತ್ತಿದ್ದ ಇಂದಿರೆಯು ನಿರ್ದೋಷಿಯಾದ ಉದಯಪುರಿಯು ಅನಿಮಿತ್ತವಾಗಿ ಅವಹೇಳನಕ್ಕೂ ಅಕಾಲಮರಣಕ್ಕೂ ಗುರಿಯಾಗುತ್ತಿರುವುದನ್ನು ಸಹಿಸಲಾರದೆ, ಧೈರ್ಯವನ್ನು ಹೊಂದಿ ಮುಂದೆ ಬಂದು ಉದಯಪುರಿಗೆ ಮರೆಯಾಗಿ ನಿಂತು ಬಾದಶಹನನ್ನು ಕುರಿತು, “ ಆಲಂಘೀರ ಬಾದಶಹನು ತಾಳ್ಮೆಯನ್ನು ವಹಿಸಬೇಕು. ನನ್ನ ವಾಕ್ಯವು ಮುಗಿವ ವರೆಗೆ ಸಾವಧಾನದಿಂದಿದ್ದು, ಆಮೇಲೆ ಉಚಿತ ತೋರಿದಂತೆ ಮಾಡಬಹುದು. ಯಾವ ವೀರನು ತನ್ನ ನಿರುಪಮ ಪರಾಕ್ರಮದಿಂದ ಶತ್ರುಭಯಂಕರನೆಂಬ ಬಿರುದನ್ನು ಪಡೆದಿರುವನೋ ಯಾವ ಮಹಾತ್ಮನು ಮಹಾರಾಜಾ ಯಶವಂತಸಿಂಹನ ವಂಶವೃಕ್ಷವನ್ನು ಕಾಪಾಡುವೆನೆಂದು ಕಂಕಣವನ್ನು ಕಟ್ಟಿಕೊಂಡಿರುವನೋ, ಯಾವ ಧೀರನು ಕಾಬೂಲ್ ದೇಶದಲ್ಲಿ ಸಮಸ್ತ ಶತ್ರುವರ್ಗವನ್ನೂ ನಿವಾರಿಸಿ ದುರ್ಭರವಾದ ಪ್ರಜಾಕಲಹವನ್ನು ನಿಲ್ಲಿಸಿದನೋ ಯಾವ ರಾಜಪುತ್ರನು ತನ್ನನ್ನು ಮೋಸಪಡಿಸಲು ಬಂದ ಮುಸಲ್ಮಾನನಿಗೆ ಪ್ರತಿಕ್ರಿಯೆಯನ್ನು ಮಾಡಿದನೋ ಯಾವ ಪುರುಷಸಿಂಹನು ಆಬೂಪರ್ವತ ಪ್ರಾಂತ್ಯದಲ್ಲಿ ತಮ್ಮ ಸೈನ್ಯವನ್ನೆಲ್ಲಾ ಯಮಾಲಯಕ್ಕೆ ಕಳುಹಿದನೋ ಆ ಜಗದೇಕವೀರನಾದ ದುರ್ಗಾದಾಸನೇ ಈಗ ನಿಮ್ಮೆದುರಿಗಿರುವವನು! ಇನ್ನು ಮರ್ಮವೇಕೆ? ಇಲ್ಲಿಂದ ನನ್ನನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದೇ ನನ್ನ ಅಣ್ಣನು ಮಾರುವೇಷದಿಂದ ಭೋಟಸಿಂಗನೆಂಬ ಹೆಸರನ್ನಿಟ್ಟುಕೊಂಡು ಬಂದಿರುವನು. ಉದಯಪುರಿಯು ನಿರ್ದೋಷಿ! ಅನ್ಯಾಯವಾಗಿ ಅವಳು ಮರಣಹೊಂದುವಳೆಂದು ವ್ಯಥೆಪಟ್ಟು ನಮ್ಮ ರಹಸ್ಯವನ್ನೆಲ್ಲ ಹೇಳಿರುವೆನು. ನಾವು ಎಂತಹ ಕಷ್ಟಗಳನ್ನಾದರೂ ಸಹಿಸಬಲ್ಲೆವು; ಆದರೆ ಅನ್ಯರಿಗಾಗುವ ತೊಂದರೆಗಳನ್ನು ಮಾತ್ರ ನೋಡಿ ಸಹಿಸಲಾರೆವು. ಇನ್ನು ಉದಯಪುರಿಯನ್ನು ಶಿಕ್ಷಿಸಬಾರದು. ನಾವಿಬ್ಬರೂ ಈಗ ನಿಮ್ಮ ಕೈಸೇರಿರುವೆವು. ಸೂಕ್ತ ತೋರಿದಂತೆ ಮಾಡಬಹುದು. ” ಎಂದು ಹೇಳಿದಳು

ಬಾದಷಹನು ಇಂದಿರೆಯ ಧೈರ್ಯ, ಗಂಭೀರಯುಕ್ತವಾದ ವಾಕ್ಯಗಳಿಂದ ಸ್ತಬ್ಧನಾಗಿ ಸ್ವಲ್ಪಹೊತ್ತು ಅವಳನ್ನೇ ನೋಡಿ ಅವಳ ಅನಿಂದಿತವಾದ ತೇಜಸ್ಸಿನಿಂದ ಉದಯಪುರಿಯು ನಿಜವಾಗಿಯೂ ನಿರ್ದೋಷಿಯೆಂದು ನಿರ್ಧರಿಸಿ ಅವಳ ವಿಷಯದಲ್ಲಿ ತನಗಿದ್ದ ಅನುಮಾನವೆಲ್ಲವನ್ನೂ ಬಿಟ್ಟುಬಿಟ್ಟನು. ತನ್ನ ಎದುರಿಗಿದ್ದ ಭೋಟಸಿಂಗನು ಮಾಯಾ ವೇಷಧಾರಿಯಾದ ದುರ್ಗಾದಾಸನೆಂದು ತಿಳಿದ ಕೂಡಲೆ, ಆತನ ಪರಾಕ್ರಮ ಶೌರ್ಯ ಧೈರ್ಯಾದಿಗಳನ್ನು ಹಿಂದೆ ತಾನು ಎಷ್ಟೋ ಬಾರಿ ಕೇಳಿದ್ದುದರಿಂದಲೂ ಅನೇಕ ಯುದ್ಧಗಳಲ್ಲಿ ಎಂದರೆ ಮುಖ್ಯವಾಗಿ ಕಾಬೂಲ್ ದೇಶದಲ್ಲಿ ಈತನು ತೋರಿಸಿದ ಪರಾಕ್ರಮದಿಂದಲೂ ಬಾದಷಹನ ಶರೀರವು ಭಯದಿಂದ ನಡುಗಿತು; ಇಷ್ಟೇ ಅಲ್ಲ, ವೇಷಧಾರಿಯಾಗಿ ಜನಾನವನ್ನು ಪ್ರವೇಶಿಸಿ ತೋರಿಸಿದ ಪ್ರತ್ಯಕ್ಷ ಸಾಹಸ ಕೃತ್ಯವನ್ನು ನೋಡಿ ಆತನಿಗೆ ಶಂಕೆಯುಂಟಾಯಿತು. ಬಾದಷಹನು ಸೂಕ್ಷ್ಮಬುದ್ಧಿಯುಳ್ಳವನಾದುದರಿಂದಲೂ ಕಾರ್ಯಾಕಾರ್ಯ ಚತುರೋಪಾಯ ವಿಚಕ್ಷಣನಾದುದರಿಂದಲೂ ದುರ್ಗಾದಾಸನಿಗೆ ಯಾವ ಶಿಕ್ಷೆಯನ್ನೂ ವಿಧಿಸದೆ, ಅಂತಹ ಅಪ್ರತಿಮ ವೀರನು ತನ್ನ ಹತ್ತಿರದಲ್ಲಿದ್ದರೆ ತನ್ನ ಕೋರಿಕೆಗಳೆಲ್ಲವೂ ನಿಃಸಂದೇಹವಾಗಿ ನೆರವೇರುವುವೆಂದು ಯೋಚಿಸಿ ದುರ್ಗಾದಾಸನನ್ನು ಕುರಿತು ಮೃದುವಾಕ್ಯಗಳಿಂದ “ ಅಯ್ಯಾ ದುರ್ಗಾದಾಸ! ನಿನ್ನ ಅಸಮಾನ ಪರಾಕ್ರಮವನ್ನೂ ಚಾತುರ್ಯವನ್ನೂ ನಾನು ಹಿಂದೆ ಎಷ್ಟೋ ಸಲ ಕೇಳಿದ್ದೆನು. ಇಷ್ಟೇ ಅಲ್ಲದೆ ಯಶವಂತಸಿಂಹನ ಸೈನ್ಯದಲ್ಲಿ ನಾನು ನಿನ್ನನ್ನು ನೋಡಿದಂತೆ ಜ್ಞಾಪಕವಿರುವುದು. ನನ್ನ ಸ್ನೇಹಿತನಾದ ಯಶವಂತಸಿಂಹನೊಡನೆ ಹೊರಟು ಅನೇಕ ಯುದ್ಧಗಳಲ್ಲಿ ಜಯಶಾಲಿಯಾಗಿ ನನಗೆ ಕೀರ್ತಿಯನ್ನೂ ತಂದಿರುವೆ. ನಿನ್ನ ರಾಜಭಕ್ತಿಯನ್ನು ನೋಡಿ ನಾನು ಬಹು ಸಂತೋಷಪಟ್ಟೆನು. ಇಂದಿನಿಂದಲೂ ನೀನು ನನ್ನ ಸಮ್ಮುಖದಲ್ಲಿ ಸುಖದಿಂದಿರಬಹುದು. ನಿನಗೆ ಎಷ್ಟು ಮಾತ್ರವೂ ಕೊರತೆಯಿಲ್ಲದಂತೆ ‘‘ ಪಂಚ ಹಜಾರಿ ಮುನ್ಸಿಬ್‌ದಾರ್ ” ಪದವಿಯನ್ನು ಕೊಡುವೆನು ಎಂದು ಹೇಳಲು, ದುರ್ಗಾದಾಸನು ಗಂಭೀರಭಾವದಿಂದ “ ಕ್ಷಮಿಸಬೇಕು, ಯಶವಂತಸಿಂಹನು ಗತಿಸಿದ ಮೇಲೆ ನಾನು ಇತರರನ್ನು ಸೇವಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವೆನು. ಯಶವಂತಸಿಂ

ಹನೊಡನೆ ದುರ್ಗಾಸಿಂಹನ ಪ್ರಾಣವು ಕೂಡ ಹೋಗಿರುವುದೆಂದು ತಿಳಿದು ಮನ್ನಿಸಬೇಕು." ಎಂದು ಉತ್ತರವಿತ್ತನು. ಅದಕ್ಕೆ ಬಾದಶಹನು ನಗುತ್ತ— ಸರಿಯೆ, ಅವಸರವೇನೂ ಇಲ್ಲ. ನೀನೂ ನಿನ್ನ ತಂಗಿಯೂ ಸೇರಿ ಈ ವಿಷಯದಲ್ಲಿ ಚನ್ನಾಗಿ ಆಲೋಚಿಸಿರಿ. ಯುಕ್ತಾಯುಕ್ತಗಳನ್ನು ಆಲೋಚಿಸಿ, ಆಬಳಿಕ ನಿಮ್ಮ ಅಭಿಪ್ರಾಯಗಳನ್ನು ನನಗೆ ತಿಳಿಸಿರಿ." ಎಂದು ಹೇಳಿ ದುರ್ಗಾದಾಸನನ್ನು ಪ್ರತ್ಯೇಕ ಬಿಡಾರದಲ್ಲಿರಿಸಿ, ಬಿಡಾರದ ಸುತ್ತಲೂ ತನ್ನ ಭಟರನ್ನು ಕಾವಲಿರಿಸಿದನು.

ರೋಷನಾರಾ ಮಾಡಿದ ಮೋಸವನ್ನು ತಿಳಿದ ಮೇಲೆ, ಉದಯಪುರಿಯ ವಿಷಯವಾಗಿ ತಾನು ಪಟ್ಟ ಅನುಮಾನವನ್ನು, ದುಡುಕಿ, ಅವಳಿಗೆ ತಾನು ಮಾಡಿದ ಅವಮಾನವನ್ನು ಕುರಿತು ಬಾದಷಹನು ಪಶ್ಚಾತ್ತಾಪಪಟ್ಟು, ಉದಯಪುರಿಯನ್ನು ಅನೇಕ ವಿಧವಾಗಿ ಸಮಾಧಾನಪಡಿಸಿ, ತನ್ನ ಅಪರಾಧವನ್ನು ಕ್ಷಮಿಸೆಂದು ಕೇಳಿಕೊಂಡನು. ಸರಳಹೃದಯದ ಉದಯಪುರಿಯು ಬಾದಷಹನ ವಾಕ್ಯಗಳಿಂದ ಸಮಾಧಾನ ಹೊಂದಿ ಮನಸ್ಸಿನ ಉದ್ವೇಗವನ್ನು ಬಿಟ್ಟಳು. ರೋಷನಾರೆಯು ಉದಯಪುರಿಯ ಜನಾನೆಯಲ್ಲಿ ತನಗಾದ ಪರಾಭವಕ್ಕೆ ಇಂದಿರೆಯೇ ಕಾರಣಳೆಂದೂ ತನ್ನ ಕಪಟವ್ಯೂಹವು ಇಂದಿರೆಯಿಂದಲೇ ಭೇದಿಸಲ್ಪಟ್ಟಿತೆಂದೂ ತಿಳಿದು ಇಂದಿರೆ ಉದಯಪುರಿ ಇವರಿಬ್ಬರ ಮೇಲೆಯೂ ದ್ವೇಷವನ್ನು ಸಾಧಿಸಲು ಸ್ಥಿರಸಂಕಲ್ಪಳಾದಳು.

ಇಪ್ಪತ್ತೆಂಟನೆಯ ಪ್ರಕರಣ.

(ಫಕೀರನು)

ರೋಷನಾರೆಯು, ಇಂದಿರೆಯೇ ತನ್ನ ಕಪಟವ್ಯೂಹವನ್ನು ಭೇದಿಸಿದಳೆಂದು ತಿಳಿದುದುಮೊದಲು ಅವಳನ್ನು ಹೇಗಾದರೂ ಮಾಡಿ ಸಂಹರಿಸಿ ತನ್ನ ಮನೋಭೀಷ್ಟವನ್ನು ನೆರವೇರಿಸಿಕೊಳ್ಳಬೇಕೆಂದು ಸಂಕಲ್ಪಿಸಿ ಎಷ್ಟೋ ಉಪಾಯಗಳನ್ನು ಮಾಡಿದಳು; ಆದರೆ ಅದಾವುದೂ ಫಲಕಾರಿಯಾಗದೆ ಇವಳ ದುಃಖವನ್ನು ಮತ್ತಷ್ಟು ಹೆಚ್ಚಿಸುತ್ತ ಬಂದವು. ಹೀಗಿರಲು ಒಂದುದಿನ ಒಬ್ಬ ಫಕೀರನು ಕೋಟೆಯೊಳಗೆ ಪ್ರವೇಶಿಸಿ ಜನಾನಾಕ್ಕೆ ಹೋಗುತ್ತಿದ್ದನು. ರಾಣೀವಾಸವನ್ನು ಪ್ರವೇಶಿಸಲು ಸರ್ವರಿಗೂ ಅನುಮತಿಯಿಲ್ಲವಾದರೂ ಸ್ವಮತಪ್ರಸಾರಕನಾದ ಔರಂಗಜೇಬನು ಫಕೀರರನ್ನು ಮಾತ್ರ ಒಳಗೆ ಬಿಡಬಹುದೆಂದುಆಜ್ಞೆಮಾಡಿದ್ದನು. ಈ ಕಾರಣದಿಂದ ಪಟ್ಟಣದಲ್ಲಿದ್ದ ಫಕೀರರು ನಿರಾತಂಕವಾಗಿ ಅಂತಃಪುರಕ್ಕೆ ಹೋಗಿ ಬರುತ್ತಿದ್ದರು. ಹಾಗೆಯೇ ನಮ್ಮ ಫಕೀರನು ದ್ವಾರಪಾಲಕರ ಅಪ್ಪಣೆಯಿಲ್ಲದೆ ಸ್ವೇಚ್ಛೆಯಾಗಿ ಒಳಹೊಕ್ಕು ಜನಾನೆಯಲ್ಲಿ ತಿರುಗಾಡುತ್ತಿದ್ದನು. ಕಾಷಾಯಾಂಬರಧಾರಿಯಾಗಿ ಹಲವು ಬಣ್ಣದ ಮರಳುಗಳುಳ್ಳ ಹಾರವನ್ನು ಕಂಠದಲ್ಲಿ ಧರಿಸಿ ಸದಾ ಅಲ್ಲಾಧ್ಯಾನಪರನಾಗಿರುವಂತೆ ನಟಿಸುತ್ತಿದ್ದ ಆ ನಮ್ಮ ಫಕೀರನನ್ನು ನೋಡಿ ಅಲ್ಲಿದ್ದ ಮಹಮ್ಮದೀಯರು ಪ್ರತಿದಿನವೂ ಸ್ವಲ್ಪ ಅಕ್ಕಿಯನ್ನೂ ಕೆಲವು ಕಾಸುಗಳನ್ನೂ ಕೊಡುತ್ತಿದ್ದರು. ಆತನು ಆಗಾಗ ಅರಬ್ಬೀ ಫಾರಸೀ ಪದ್ಯಗಳನ್ನು ಹೇಳುತ್ತ, ಮಹಮ್ಮದೀಯರೆಲ್ಲರೂ ಪ್ರತಿದಿನವೂ ಕುರಾನನ್ನೋದಬೇಕೆಂದೂ ಸಾಯಂಕಾಲ ಅಲ್ಲಾಪ್ರಾರ್ಥನೆಮಾಡಬೇಕೆಂದೂ ಬಂದ ಫಕೀರರೆಲ್ಲರನ್ನೂ ಆದರಿಸಬೇಕೆಂದೂ ಉಪದೇಶಿಸುತ್ತಿದ್ದನು. ಆತನ ಉಪದೇಶವನ್ನು ಕೇಳಿದ ಮಹಮ್ಮದೀಯರೆಲ್ಲರೂ ಈತನು ಇತರ ಫಕೀರರಂತಲ್ಲದೆ ದಿವ್ಯಜ್ಞಾನವುಳ್ಳವನೆಂದು ತಿಳಿದು ಅತ್ಯಂತಗೌರವವನ್ನು ತೋರಿಸುತ್ತಿದ್ದರು. ಫಕೀರನು ಸ್ವಲ್ಪ ಹೊತ್ತು ಅತ್ತಿತ್ತ ತಿರುಗಾಡಿ ಕ್ರಮಕ್ರಮವಾಗಿ ಉದಯಪುರಿಯ ಜನಾನಾವನ್ನು ಸಮೀಪಿಸಿ ಅರಬ್ಬಿ, ಫಾರಸಿ ಪದ್ಯಗಳನ್ನು ಹಾಡತೊಡಗಿದನು. ಉಪ್ಪರಿಗೆಯಲ್ಲಿದ್ದ ಉದಯಪುರಿಯು ಇಂದಿರೆಯೊಡನೆ ಇಳಿದು ಬರುತ್ತ ಫಕೀರನ ಹಾಡುಗಳಿಗೂ ಪದ್ಯಗಳಿಗೂ ಸಂತೋಷಪಟ್ಟು ಇಂದಿರೆಯ ಕೈಗೆ ಒಂದು ಮೊಹರಿಯನ್ನು ಕೊಟ್ಟು ಫಕೀರನಿಗೆ ಕೊಡುವಂತೆ ಕಳುಹಿದಳು. ಇಂದಿರೆಯು ಕೂಡಲೆ ಫಕೀರನ ಬಳಿಗೆ ಬಂದು 'ಫಕೀರಜೀ, ನಮ್ಮ ಉದಯಪುರಿ ಮಹಾರಾಣಿಯವರು ನಿಮಗೆ ಈ ಬಹುಮಾನವನ್ನು ಕೊಟ್ಟುಬಾರೆಂದು ಕಳುಹಿರುವರು. ತೆಗೆದುಕೊಳ್ಳಿರಿ" ಎಂದು ಹೇಳಿ ಆ ಮೊಹರಿಯನ್ನು ಆತನಿಗೆ ಕೊಟ್ಟಳು. ಫಕೀರನು ಅತ್ಯಂತ ಸಂತೋಷದಿಂದ ಇಂದಿರೆಯು ಕೊಟ್ಟ ಬಹುಮಾನವನ್ನು ಸ್ವೀಕರಿಸಿ ವಂದಿಸಲು ಅವಳ ಮುಖಕಮಲವನ್ನು ನೋಡಿದನು. ಈ ವರೆಗೂ ಪರಬ್ರಹ್ಮನನ್ನು ತಿಳಿಯಬೇಕೆಂದಿದ್ದ ಆತನ ಅಂತರ್ದೃಷ್ಟಿಯು ಇಂದಿರೆಯನ್ನು ನೋಡಿದೊಡನೆಯೇ ವಿಕಾಸಹೊಂದಿತು. ಆತನು ಸ್ವಲ್ಪಹೊತ್ತು ಯೋಚಿಸಿ ಬಳಿಕ "ಶುಭಾಂಗಿ, ನೀನು ಯಾರು!" ಎಂದು ಸಾಹಸದಿಂದ ಕೇಳಿದನು.

ಇಂದಿರಾ— "ನಾನು ಉದಯಪುರಿಬೇಗಮರವರ ದಾಸಿ"

ಫಕೀರ:— ನೀನು ಮುಸಲ್ಮಾನಬಾಲೆಯೊ! ಹಿಂದೂ ಬಾಲೆಯೊ?

ಇಂದಿರಾ:— ನಾನು ಹಿಂದೂಬಾಲೆಯೇ

ಫಕೀರ:— ಹಾಗಾದರೆ ನೀನು ಇಲ್ಲಿಗೆ ಬರಲು ಕಾರಣ?

ಇಂದಿರಾ:— ನನ್ನ ಗ್ರಹಚಾರವು ನನ್ನಲ್ಲಿಗೆ ಕರೆತಂದಿರುವುದು.

ಫಕೀರನು ಇನ್ನೂ ಸ್ವಲ್ಪಹೊತ್ತು ಅವಳೊಡನೆ ಮಾತನಾಡಬೇಕೆಂದು ಪ್ರಯತ್ನಪಡುತ್ತಿದ್ದಂತೆಯೇ ಇಂದಿರೆಯು ಅಲ್ಲಿ ನಿಲ್ಲದೆ ಹೊರಟು ಹೋದಳು. ಫಕೀರನು ಅವಳ ಕಡೆಯೇ ದೃಷ್ಟಿಯಿಟ್ಟನು. ನೋಡುನೋಡುತ್ತಿದ್ದಂತೆಯೇ ಆತನ ಮುಖವು ಯೋಚನೆಗೆ ಗುರಿಯಾದಂತೆ ತೋರುತ್ತ ಬಂದಿತು. ಫಕೀರನು ಸ್ವಲ್ಪಹೊತ್ತು ಅಲ್ಲಿದ್ದು ಆ ಬಳಿಕ ಅಲ್ಲಿಂದ ಹೊರಟು ಹೋಗಿ ಅಂದಿನಿಂದ ದಿನವೂ ತಪ್ಪದೆ ಉದಯಪುರಿಯ ಜನಾನಾವನ್ನು ಸಮೀಪಿಸಿ ಭಿಕ್ಷಾಟನೆಯನ್ನು ಮಾಡುತ್ತಿದ್ದನು. ಅಲ್ಲಿದ್ದ ಸೇವಕರೂ ದ್ವಾರಪಾಲಕರೂ ಫಕೀರನಲ್ಲಿ ಅತ್ಯಂತ ಭಕ್ತಿವಿಶ್ವಾಸಗಳುಳ್ಳವರಾಗಿದ್ದರು. ಆದುದರಿಂದ ಫಕೀರನು ಆಗಾಗ ತನ್ನ ವಾಕ್ಚಾತುರ್ಯದಿಂದ ಇಂದಿರೆಯ ಪ್ರಸ್ತಾಪವನ್ನೆತ್ತಿ ಅವರಿಗೆ ಯಾವವಿಧವಾದ ಅನುಮಾನವೂ ಉಂಟಾಗದರೀತಿ ಉಪಾಯದಿಂದ ಅವಳ ಆಚಾರ, ವಿಚಾರಗಳನ್ನೂ ದಾಸೀವೃತ್ತಿಯಲ್ಲಿದ್ದರೂ ಅವಳ ಸ್ವಮತಾಭಿಮಾನ, ಗೌರವಬುದ್ಧಿ, ಧರ್ಮಚಿಂತನೆ, ಧೈರ್ಯ, ಸ್ಥೈರ್ಯಾದಿ ಸೌಶೀಲ್ಯಗಳನ್ನೂ ಕೇಳಿ ಅತ್ಯಂತ ಸಂತೋಷಪಟ್ಟನು. ಹಾಗೆಯೇ ದುರ್ಗಾದಾಸನ ವಿಚಾರವನ್ನೂ ತಿಳಿದನು. ಇಂದಿರಾ ದುರ್ಗಾದಾಸರನ್ನು ಹೇಗಾದರೂ ಮಾಡಿ ಕಾರಾಗೃಹದಿಂದ ಬಿಡುಗಡೆ ಮಾಡಬೇಕೆಂದು ದೃಢಸಂಕಲ್ಪಮಾಡಿದನು. ಕಾರ್ಯಸಾಧನೆಗೆ ಉಪಾಯವನ್ನು ಚಿಂತಿಸುತ್ತ ರಾಣಿವಾಸದ ವಿಚಾರವನ್ನು ಅತ್ಯಂತ ಶ್ರದ್ಧೆಯಿಂದ ತಿಳಿಯುತ್ತಬಂದನು. ಉದಯಪುರಿ-ರೋಷನಾರೆಯರಿಗೆ ಪರಸ್ಪರ ದ್ವೇಷವುಂಟಾಗಿರುವುದನ್ನೂ ಮಸಾಮುದನ ಸ್ವಭಾವವನ್ನೂ ಫರುಕ್‌ಷೈರನ ವೃತ್ತಾಂತವನ್ನೂ ಸುಲಭವಾಗಿ ತಿಳಿದನು. ತನ್ನ ವಾಕ್ಚಾತುರ್ಯದಿಂದಲೂ ನಡತೆಯಿಂದಲೂ ತಾನು ಅದ್ವಿತೀಯ ಪಂಡಿತನೂ ತ್ರಿಕಾಲಜ್ಞನೂ ಮಹಾನುಭಾವನೂ ಆಗಿರುವಂತೆ ಸೇವಕರಿಗೆ ದೃಢವಾದ ನಂಬಿಕೆಯನ್ನುಂಟುಮಾಡಿ ಅವರೆಲ್ಲರನ್ನೂ ತನ್ನ ವಶವರ್ತಿಗಳಾಗಿ ಮಾಡಿಕೊಂಡನು. ಹೀಗೆ ಅವನು ಸೇವಕರೊಡನೆ ಮಾತನಾಡುತ್ತಿದ್ದಾಗಲೆಲ್ಲಾ ಫಕೀರನು ತನ್ನ ಅಂಗಿಯಿಂದ ಒಂದು ಕಾಗದವನ್ನು ತೆಗೆದುಕೊಂಡು ಅದರ ಮೇಲೆ ಆಗಾಗ ಏನೇನನ್ನೋ ಗುರುಮಾಡುತ್ತಿದ್ದನು

ಈ ರೀತಿ ಕಪಟದಿಂದ ಸಂಚರಿಸುತ್ತಿದ್ದ ಫಕೀರನು ಎಂದಿನಂತೆ ಒಂದುದಿನ ಉದಯಪುರಿಯ ಅಂತಃಪುರವನ್ನು ಪ್ರವೇಶಿಸಿದನು. ಅಂದು ಅಲ್ಲಿ ಅಲ್ಲೋಲಕಲ್ಲೋಲವಾಗಿದ್ದಿತು. ಸೇವಕರೆಲ್ಲರೂ ಭಯಚಿತ್ತರಾಗಿ ದಿಕ್ಕುದಿಕ್ಕುಗಳಿಗೂ ಓಡಿಹೋಗುತ್ತಿದ್ದರು. ಉದಯಪುರಿಯು ವಿಚಾರಸಮುದ್ರಳಾಗಿ ಕುಳಿತು ಕಣ್ಣೀರು ಸುರಿಸುತ್ತಿದ್ದಳು. ಆಗ ಕಾರ್ಯಾಂತರವಾಗಿ ಹೋಗಿದ್ದ ಮಸಾವದನು ಅಲ್ಲಿಗೆ ಬಂದು ಕುತೂಹಲದಿಂದ ಇಷ್ಟು ಗಲಭೆಗೆ ಕಾರಣವೇನೆಂದು ಕೇಳಿದನು, "ಇಂದಿರೆಯು ಅಗೋಚರವಾಗಿರುವಳು. ಮಹಾರಾಣಿಯವರು ದುಃಖದಿಂದ ಊಟವನ್ನುಬಿಟ್ಟು ಕುಳಿತಿರುವರೆಂದು" ಉತ್ತರವು ಬಂದಿತು. ಮಸಾವದನು ಸಿಡಿಲುಬಡಿದಂತೆ ನೆಲದಮೇಲೆ ಕುಕ್ಕುರಿಸಿ ಬಿದ್ದು ಮಕ್ಕಳಂತೆ ರೋದಿಸತೊಡಗಿದನು.

ಈ ವಿದ್ಯಮಾನವೆಲ್ಲವೂ ಫಕೀರನಿಗೆ ತಿಳಿಯಲು ಅವನು ಭಯಪಟ್ಟು, ಇಂದಿರೆಯೆಲ್ಲಿ ಹೋಗಿರಬಹುದೆಂದು ತನ್ನಲ್ಲಿಯೇ ತರ್ಕಿಸಲಾರಂಭಿಸಿದನು. " ಓಡಿಹೋದರೆ ಎಲ್ಲಿ ಹೋಗಿರಬೇಕು; ಹಾಗೆ ಓಡಿಹೋಗಲು ಕಾರಣವಿಲ್ಲ. ಉದಯಪುರಿಯು ಅತ್ಯಂತ ಆದರದಿಂದ ಪಾಲಿಸುತ್ತಿರುವಳು. ಒಂದುವೇಳೆ ಓಡಿಹೋಗಿರುವಳೆಂದೇ ಊಹಿಸಿದರೂ ಬುದ್ಧಿಶಾಲಿಯಾದ ಇಂದಿರೆಯು ತನ್ನ ಅಣ್ಣನನ್ನು ಬಿಡುಗಡೆ ಮಾಡದೆ ತಾನು ಹೀಗೆ ಅದೃಶ್ಯಳಾಗುವಳಲ್ಲ. ಇದೇನೋಮೋಸವಾಗಿದೆ, ಯಾರೋ ದ್ವೇಷಿಗಳಿರುವರು; ಇಂದಿರೆಗೆ ಇಲ್ಲಿ ದ್ವೇಷಿಗಳಿರಲು ಕಾರಣವೇನು? ಓಹೋ ತಿಳಿಯಿತು. ಉದಯಪುರಿಯಲ್ಲಿ ಶತ್ರುತ್ವವನ್ನು ಸಾಧಿಸುತ್ತಿರುವ ರೋಷನಾರೆಯೇ ಈ ಕಾರ್ಯವನ್ನು ಮಾಡಿರುವುದರಲ್ಲಿ ಸಂಶಯವಿಲ್ಲ. ಈಗ್ಗೆ ೨-೩ ದಿನಗಳಿಂದ ಫರುಕ್‌ಷೈರನು ಅಂತಃಪುರದಲ್ಲಿ ಅಲ್ಲಲ್ಲಿ ಹೊಂಚಿ ತಿರುಗುತ್ತಿದ್ದುದಕ್ಕೆ ಈಗ ಕಾರಣವು ತಿಳಿಯಿತು. ಇರಲಿ, ಅವನನ್ನು ದಾರಿಗೆತಂದು ವಿಚಾರವನ್ನು ಚೆನ್ನಾಗಿ ತಿಳಿಯುವೆನು. "ಎಂದು ನಿರ್ಧರಿಸಿ, ಉದಯಪುರಿಯ ಜನಾನಾದಿಂದ ಹೊರಟು ಅರಬ್ಬಿ ಪಾರಸಿಹಾಡುಗಳನ್ನು ಹಾಡುತ್ತ ಅಡಿಗಡಿಗೆ ಅಲ್ಲಾ ಸ್ಮರಣೆಮಾಡುತ್ತ ರೋಷನಾರೆಯ ಅಂತಃಪುರವನ್ನು ಪ್ರವೇಶಿಸಿದನು. ಕೂಡಲೇ ಫರುಕ್‌ಷೈರನು ಬಂದು ಆತನನ್ನು ಇದಿರ್ಗೊಂಡು ಭಯಭಕ್ತಿಯಿಂದ ಸಲಾಮನ್ನು ಮಾಡಿ ಕೈಕಟ್ಟಿ ನಿಂತನು.

ಫಕೀರ;—ನಸುನಗುತ್ತ—"ಫರುಕ್‌ಷೈರ್! ನೀನು ಬಳ್ಳೇ ಅದೃಷ್ಟವಂತನು, ಕಾರ್ಯದಕ್ಷನೂ ಅಹುದು. ನಿನ್ನ ಮೇಲೆ ನಿನ್ನ ಸ್ವಾಮಿನಿಗೆ ಪೂರ್ಣಾನುಗ್ರಹವಿರುವುದು. ನಾನು ಅಮಲ್ ಲೆಕ್ಕದನ್ನು ನೋಡಿ ಹೇಳಿರುವೆನು. ನಿನ್ನ ಮನಸ್ಸಿನಲ್ಲಿ ಬಹುದಿನಗಳಿಂದಿರುವ ಕೋರಿಕೆಯು ಇಷ್ಟರಲ್ಲಿಯೇ ನೆರವೇರುವುದು."

(ಫರುಕ್‌ಷೈರನು ನಗುತ್ತ ತಲೆಯನ್ನು ತಗ್ಗಿಸಿಕೊಂಡು ನಿಂತನು.)

ಫಕೀರ:— “ ಇದೇಕೆ ನಗುವೆ? ನಾನು ಸುಳ್ಳು ಹೇಳಿಲ್ಲ. ನಿನ್ನ ಮುಖವನ್ನು ನೋಡಿಯೇ ನಿನ್ನ ಮನೋಗತವನ್ನು ತಿಳಿದೆನು. ಬೇಕಾದರೆ ಹೇಳುವೆನು, ಕೇಳು ” ಎಂದು ಆತನ ಕಿವಿಯಲ್ಲಿ ಏನೋ ರಹಸ್ಯವಾಗಿ ಹೇಳಿದನು.

ಫರುಕ್‌ಷೈರನು ವಿಸ್ಮಿತನಾಗಿ, “ ಅರೆ, ಇವನು ಸಾಮಾನ್ಯನಾಗಿಲ್ಲ, ನಾನು ಎಷ್ಟೋ ಫಕೀರರನ್ನು ನೋಡಿರುವೆನು; ಆದರೆ ಇವನಂತೆ ಸರ್ವಜ್ಞನಾದವನನ್ನು ನಾನು ಎಲ್ಲಿಯೂ ಕಂಡುದಿಲ್ಲ. ಇವನ ಪ್ರಸನ್ನತೆಗೆ ಪಾತ್ರನಾದರೆ ನನ್ನ ಅಭೀಷ್ಟಸಿದ್ಧಿಯಾಗಲು ಸಂದೇಹವಿರದು.” ಎಂದು ಯೋಚಿಸುತ್ತ ಆತನನ್ನು ಕುರಿತು—“ ಫಕೀರಜೀ, ತಾವು ಇನ್ನೆಷ್ಟು ದಿನಗಳು ಈ ಪಟ್ಟಣದಲ್ಲಿರುವಿರಿ? ಎಂದು ಕೇಳಿದನು

ಫಕೀರ:— ಇಷ್ಟು ದಿನಗಳೆಂಬುವುದು ನಮಗೇನುಗೊತ್ತು! ಯಾವಾಗ ಬುದ್ಧಿಹುಟ್ಟಿದರೆ ಆಗ ಮತ್ತೊಂದು ಗ್ರಾಮಕ್ಕೆ ಹೋಗುವೆವು. ಎಲ್ಲೆಲ್ಲಿ ಭಕ್ತರಿರುವರೋ ಅಲ್ಲಿಗೆ ಹೋಗಿ ಅವರ ಕೋರಿಕೆಗಳನ್ನು ನೆರವೇರಿಸಬೇಕೆಂದು ನಮಗೆ ನಮ್ಮ ಗುರುಗಳು ಅಪ್ಪಣೆ ಮಾಡಿರುವರು. ಆದುದರಿಂದ ಭಕ್ತರ ಮನೋಭಿಪ್ರಾಯವನ್ನು ದಿವ್ಯದೃಷ್ಟಿಯಿಂದ ಗ್ರಹಿಸಿ ಅವರ ಕೋರಿಕೆಗಳನ್ನು ನೆರವೇರಿಸಿ, ಅವರಿಗೆ ಸಂತೋಷಪಡಿಸುವುದೇ ನಮ್ಮ ಕೆಲಸವು. ಹಾಗೆಯೇ ಅಲ್ಲಾಭಕ್ತನಾದ ನಿನ್ನ ಮುಖವನ್ನು ನೋಡಿದೊಡನೆಯೇ ನಿನ್ನ ಅಭಿಮತವು ವಿದಿತವಾಯಿತು. ಈ ಜನಾನಾದಲ್ಲಿರುವ ಸೇವಕರಲ್ಲೆಲ್ಲಾ ನೀನೇ ಬುದ್ಧಿವಂತನು.

ಫರುಕ್‌ಷೈರನು ಫಕೀರನ ಮಾತಿಗೆ ಮರುಳಾಗಿ, ಆತನೊಡನೆ ರಹಸ್ಯವನ್ನು ಹೇಳಬೇಕೆಂದು ಆತನನ್ನು ತನ್ನ ಮನೆಗೆ ಕರೆದುಕೊಂಡುಹೋಗಿ, ಗುಪ್ತಸ್ಥಾನದಲ್ಲಿ ಕುಳಿತು ಹೀಗೆ ಸಂಭಾಷಿಸಿದನು:—

“ ಫಕೀರಜೀ, ತಾವು ಸಾಕ್ಷಾತ್ ಅಲ್ಲಾ ಎಂದೇ ನಾನು ನಂಬಿ ನಿಮ್ಮನ್ನು ಆಶ್ರಯಿಸಿರುವೆನು. ನೀವೂ ನನ್ನನ್ನು ನಿಮ್ಮ ಮಗನಂತೆ ಭಾವಿಸಿ ನನ್ನ ಅಭಿಮತವನ್ನು ಸಿದ್ಧಿಗೊಳಿಸಿ ಅನುಗ್ರಹಬುದ್ಧಿಯಿಂದ ಕಾಪಾಡಬೇಕು. ಕಾರ್ಯಸಾಧನೆಯಾದ ಬಳಿಕ ನಾನು ತಮಗೆ ಬಹುಮಾನವನ್ನು ಕೊಡುವೆನು.”

ಫಕೀರ:— ಹುಚ್ಚ! ಮತ್ತೊಂದಾವರ್ತಿ ಹಾಗೆ ಹೇಳಬೇಡ. ನಾನು ಲಂಚವನ್ನು ತೆಗೆದುಕೊಳ್ಳುವವನಲ್ಲ. ಭಕ್ತರ ಕೋರಿಕೆಗಳನ್ನು ನೆರವೇರಿಸುವುದು ನನಗೆ ವಿಧಿ! ಲಂಚವನ್ನು ಮುಟ್ಟದೆ ಪರೋಪಕಾರವನ್ನು ಮಾಡಬೇಕೆಂದು ನನಗೆ ಗುರುಗಳ ಆಜ್ಞೆಯಾಗಿರುವುದು. ನನಗೆ ನೀನೇನೂ ಲಂಚವನ್ನು ಕೊಡಬೇಕಾಗಿಲ್ಲ. ನನ್ನ ಮಾತಿನಂತೆ ನೀನು ನಡೆಯುವುದಾದರೆ ನಿನಗೆ ಗುರುದತ್ತವಾದ ಉಂಗುರವೊಂದನ್ನು ಕೊಡುವೆನು. ಅದನ್ನು ಕೈಯಲ್ಲಿಟ್ಟುಕೊಂಡ ಬಳಿಕ ನೀನು ಯಾವಾಗಲೂ ಅನೃತವನ್ನಾಡಬಾರದು. ಹಾಗಿರುವುದಾದರೆ ನಿನ್ನ ಕೋರಿಕೆಯೀಡೇರುವುದು. ಅದರದು ನಿನಗೆ ದುಸ್ಸಾಧ್ಯವು!

ಫರುಕ್:— ಫಕೀರ್ಜೀ, ತಾವು ಸ್ವಲ್ಪವೂ ಸಂದೇಹಪಡಬೇಕಾಗಿಲ್ಲ. ನಾನು ಸ್ವಪ್ನದಲ್ಲಿಯೂ ಸುಳ್ಳು ಹೇಳುವುದಿಲ್ಲವೆಂದು ಪ್ರಮಾಣಮಾಡುವೆನು. ಉಂಗುರವನ್ನು ಅನುಗ್ರಹಿಸಿ.

ಫಕೀರ:—ಆ ಉಂಗುರವು ಸಾಮಾನ್ಯವಾದುದಲ್ಲ. ಅದರ ಪ್ರಭಾವವು ಅದ್ಭುತವಾದುದು. ಅದನ್ನು ಧರಿಸಿ ನೀನು ನಿನ್ನ ಬೇಗಮಳ ಬಳಿಗೆಹೋದರೆ, ಆಕೆಗೆ ನೀನೊಬ್ಬ ದಿವ್ಯಸುಂದರ ಪುರುಷನಂತೆ ಕಾಣುವೆ. ಒಡನೆಯೇ ಅವಳು ನಿನ್ನಲ್ಲಿ ಮೋಹಗೊಳ್ಳುವಳು. ಇಂತಹ ಮಾಹಾತ್ಮ್ಯವುಳ್ಳ ಉಂಗುರವನ್ನು ಕೈಯಲ್ಲಿಟ್ಟಮಾತ್ರದಿಂದ ಸಂತೋಷವಲ್ಲ. ಅದಕ್ಕೆ ವ್ಯತಿರೇಕವಾಗಿ ನೀನು ನಡೆದುದೇ ಆದರೆ ನೀನು ಖಂಡಿತವಾಗಿ ಮೃತ್ಯುವಿಗೆ ತುತ್ತಾಗುವೆ. ಒಂದುವೇಳೆ ಈ ಸಂಗತಿ ನಮ್ಮ ಗುರುಗಳಿಗೆ ತಿಳಿದುದೇ ಆದರೆ ಅಂತಹ ನೀಚನಿಗೆ ಉಂಗುರವನ್ನೇಕೆ ಕೊಟ್ಟೆಯೆಂದು ನನ್ನ ಮೇಲೆ ಆಗ್ರಹಿಸುವರು. ಆದುದರಿಂದ ಎಂತಹ ಸಮಯದಲ್ಲಿಯಾದರೂ ಸುಳ್ಳನ್ನಾಡದಿರುವವರಿಗೇ ಕೊಡಬೇಕು.

ಫರುಕ್:—ಫಕೀರ್ಜೀ, ನಿಮಗೆ ಯಾವರೀತಿಯಿಂದ ನಂಬಿಕೆಯನ್ನುಂಟುಮಾಡಲಿ ? ನಾನು ಯಾವಾಗಲೂ ಸುಳ್ಳು ಹೇಳುವುದಿಲ್ಲ. ಎಷ್ಟುಬೇಕಾದರೂ ಪರೀಕ್ಷಿಸಬಹುದು.

ಫಕೀರ್:— ಹಾಗಾದರೆ, ನನ್ನ ಪ್ರಶ್ನೆಗಳಿಗೆ ನಿಜವಾದ ಉತ್ತರಗಳನ್ನು ಕೊಡು. ಆ ಬಳಿಕ ವಿಚಾರಮಾಡುವೆನು. ಆ ದಿನ ನಿಮ್ಮ ಬೇಗಂರವರ ಚಂದ್ರಹಾರವನ್ನು ನೀನೇನು ಮಾಡಿದೆಯೋ ಹೇಳು?

ಫರುಕ್:— (ತನ್ನ ಕಳ್ಳತನವನ್ನು ಈತನು ಹೇಗೆ ತಿಳಿದನೆಂದು ವಿಸ್ಮಿತನಾಗಿ) ಸ್ವಾಮೀ! ಅದು ಚಂದ್ರಹಾರವಲ್ಲ, ಸೂರ್ಯಹಾರ, ಅದನ್ನು ಒಬ್ಬ ವರ್ತಕನಿಗೆ ಮಾರಿದೆನು.

ಫಕೀರ್:— ಶಹಬಾಸ್! ನಿಜವನ್ನು ಹೇಳಿದೆ. ನನಗೆ ತಿಳಿದಿದ್ದರೂ ನಿನ್ನನ್ನು ಪರೀಕ್ಷಿಸಲುಹಾಗೆ ಕೇಳಿದೆ. ಆಗಲಿ, ನಿಮ್ಮ ಬೇಗಂ ಎಷ್ಟು ಮಂದಿಯನ್ನು ಸೆರೆಯಲ್ಲಿಟ್ಟಿರುವಳೋ ಹೇಳು?

ಫರುಕ್:— ಇಪ್ಪತ್ತುಮೂರು ಜನರು ಸೆರೆಯಲ್ಲಿರುತ್ತಾರೆ.

ಫಕೀರನು ತನ್ನ ಜೇಬಿನಲ್ಲಿದ್ದ ಕಾಗದವನ್ನು ಹೊರಗೆ ತೆಗೆದು ಅದರಲ್ಲಿ ಉಳಿದ ಸಾಲುಗಳನ್ನು ಮುಚ್ಚಿ ಫರುಕ್ ಷೈರನು ಹೇಳಿದ ಸಂಖ್ಯೆಯನ್ನು ಮಾತ್ರ ತೋರಿಸಿ, ತನಗೆ

ಎಲ್ಲವೂ ತಿಳಿದಿರುವುದೆಂಬುದಕ್ಕೆ ಇದೇ ನಿದರ್ಶನವೆಂದನು.

ಫರುಕ್‌ಷೈರನು ಮತ್ತೂ ವಿಸ್ಮಿತನಾಗಿ ಫಕೀರನನ್ನೇ ನೋಡುತ್ತ ನಿಂತನು.

ಫಕೀರ: -ಫರುಕ್‌ಷೈರ್! ನಿನ್ನಿನ ರಾತ್ರಿ ನಿನ್ನ ಬೇಗಮಿನ ಅಪ್ಪಣೆಯಂತೆ ನೀನೇನು ಮಾಡಿರುವೆಯೋ ಹೇಳು. ಹಿಂತೆಗೆಯುತ್ತಿರುವೆಯೇಕೆ? ನಾನೆಲ್ಲವನ್ನೂ ದಿವ್ಯದೃಷ್ಟಿಯಿಂದ ತಿಳಿದಿರುವೆನು. ನಿನ್ನ ಸತ್ಯಸಂಧತೆಯ ಪರೀಕ್ಷಾರ್ಥವಾಗಿ ಕೇಳಿರುವೆನು. ನಿಜವನ್ನು ಹೇಳು.

ಫರುಕ್‌ಷೈರ್— ಫಕೀರ್ಜೀ! ನನ್ನಲ್ಲಿ ನೀವು ಇನ್ನಾದರೂ ನಂಬಿಕೆಯುಳ್ಳವರಾಗಬೇಕು. ನಮ್ಮ ಬೇಗಮರು ಉದಯಪುರಿಬೇಗಮರ ದಾಸಿಯಾದ ಹಿಂದುಬಾಲೆಯೊಬ್ಬಳನ್ನು ಕೊಲ್ಲಿಸಬೇಕೆಂದು ಯೋಚಿಸಿ, ಅವಳನ್ನು ಹಿಡಿದು ತರಬೇಕೆಂದು ನನಗಾಜ್ಞಾಪಿಸಿದರು. ೨-೩ ದಿನಗಳಿಂದಲೂ ಆಕೆಯನ್ನು ಹಿಡಿಯಲು ಪ್ರಯತ್ನಿಸಿದರೂ ಸಮಯವು ಸಾಧಿಸಲಿಲ್ಲ. ನಿನ್ನಿನ ರಾತ್ರಿ ಹಿಡಿದುಕೊಂಡು ಬಂದು ಕಾರಾಗೃಹದಲ್ಲಿಟ್ಟೆನು. ಯಾರೊಡನೆಯೂ ಹೇಳಕೂಡದೆಂದು ನಮ್ಮ ಬೇಗಮರ ಅಪ್ಪಣೆಯಾಗಿರುವುದರಿಂದ ಹೇಳಲು ಹಿಂದೆಗೆದೆನು.

ಫಕೀರ:--ಸಂತೋಷವಾಯಿತು, ಫರುಕ್‌ಷೈರ್! ನಿನಗೆ ಯಜಮಾನಿಯಲ್ಲಿರುವ ಭಕ್ತಿ ಸ್ತುತ್ಯವಾದುದೇಸರಿ. ಕಾಫರರು ಅತಿದುರ್ಮಾರ್ಗಿಗಳು. ಅವರನ್ನೇನು ಮಾಡಿದರೂ ತೀರದು. ಇನ್ನು ನಿನ್ನಲ್ಲಿ ಸಂಶಯಪಡುವುದಿಲ್ಲ. ನಿನ್ನ ಅದೃಷ್ಟವು ಚೆನ್ನಾಗಿರುವುದರಿಂದ ಹಿಂದೆ ಎಷ್ಟೋ ಜನರು ಪ್ರಾರ್ಥಿಸಿದರೂ ಅಲಭ್ಯವಾದ ಉಂಗುರವು ಈಗ ನಿನಗೆ ಲಭಿಸಿರುವುದು. ಇದರಿಂದ ನಿನ್ನ ಕೋರಿಕೆಯನ್ನು ನೆರವೇರಿಸಿಕೊಳ್ಳಬಹುದು.

ಹೀಗೆ ಹೇಳಿ ತನ್ನ ಚೀಲದಲ್ಲಿದ್ದ ಉಂಗುರವೊಂದನ್ನು ತೆಗೆದು ಆತನ ಕೈಬೆರಳಿಗೆ ತಾನೇ ಹಾಕಿ-- "ಅಯ್ಯಾ, ಫರುಕ್‌ಷೈರ್! ಹೀಗೆಯೇ ನಿಜವನ್ನು ಹೇಳುತ್ತಿರಬೇಕು; ಎಚ್ಚರಿಕೆಯಿರಲಿ!" ಎಂದು ಎಚ್ಚರಿಸಿದನು. ಸ್ವಹಸ್ತದಿಂದ ಮಾಡಲ್ಪಟ್ಟ ಉಂಗುರಗಳು ಸಾಮಾನ್ಯವಾಗಿ ಫಕೀರರಲ್ಲಿರುವುವು. ಫಕೀರರು ಆ ಉಂಗುರಗಳನ್ನು ತಮ್ಮ ಕೈಯಿಂದಲೇ ತೆಗೆದು ಕೊಟ್ಟರೆ ಅವು ಅತ್ಯಂತ ಮಹತ್ವವುಳ್ಳವೆಂದು ಮಹಮ್ಮದೀಯರ ನಂಬಿಕೆ. ಇದಲ್ಲದೆ ಅವರಿಗೆ ಜ್ಯೋತಿಷದಲ್ಲಿಯೂ ನಂಬಿಕೆಯಿರುವುದು. ಈ ಕಾರಣದಿಂದ ಫರುಕ್‌ಷೈರನು ಫಕೀರನ ಮಾತಿನಲ್ಲಿ ಪೂರ್ಣವಿಶ್ವಾಸವಿಟ್ಟು ಆತನನ್ನು ಕುರಿತು ನಮ್ರಭಾವದಿಂದ— "ಫಕೀರ್ಜೀ, ಇನ್ನು ನನಗೆ ಅಪ್ಪಣೆಯಾಗಬೇಕು. ನಮ್ಮ ಬೇಗಮರು ಉದಯಕ್ಕೆ ಸರಿಯಾಗಿ ಬರಹೇಳಿದ್ದರು. ಇಷ್ಟು ಹೊತ್ತಾಯಿತು. ಇನ್ನು ಹೋದರೆ.........ಯಾವ ಶಿಕ್ಷೆಯಾದೀತೋ ತಿಳಿಯದು."

ಎಂದು ಹೇಳಿದನು. ಅದಕ್ಕೆ ಫಕೀರನು— "ನಿನಗಿಷ್ಟು ಭಯಕ್ಕೆ ಕಾರಣವಿಲ್ಲ. ನಿನ್ನ ಉಂಗುರದ ಮಹಿಮೆಯನ್ನು ಪರೀಕ್ಷಿಸಲು ನೀನು ಒಂದುಸಲ ನಿಮ್ಮ ಬೇಗಮಿನ ಬಳಿಗೆ ಹೋಗಿ ಬಾ. ನೀನು ಬರುವವರೆಗೂ ನಾನಿಲ್ಲಿಯೇ ಇರುವೆನು. ಉಳಿದ ಮಾತು ಆಮೇಲಾಗಲಿ" ಎಂದನು. ಕೂಡಲೆ ಫರುಕ್‌ಷೈರನು ರೋಷನಾರೆಯನ್ನು ಕಾಣಲು ಹೊರಟನು.

ರೋಷನಾರೆಯು ತನ್ನ ಅಂತಃಪುರದಲ್ಲಿ ಒಬ್ಬಳೇ ಕುಳಿತು ಇಂದಿರೆಯನ್ನು ಕೊಂದು ತನ್ನ ಇಷ್ಟವನ್ನು ಈಡೇರಿಸಿಕೊಳ್ಳುವ ಆಲೋಚನೆಯಲ್ಲಿಯೂ ಅದಕ್ಕೆ ಕಾರಣಭೂತನಾದ ಫರುಕ್‌ಷೈರನನ್ನು ಇನ್ನೂ ಹೆಚ್ಚಾಗಿ ಮನ್ನಿಸಿ ಉಬ್ಬಿಸಬೇಕೆಂಬ ಆಲೋಚನೆಯಲ್ಲಿಯೂ ಇದ್ದಳು. ಅದೇ ಸಮಯದಲ್ಲಿಯೇ ಫರುಕ್‌ಷೈರನು ಅವಳ ಮುಂದೆ ಬಂದು ನಿಲ್ಲಲು, ಅವಳು ಸಂತೋಷದಿಂದ— "ಶಾಬಾಸ್! ಫರುಕ್‌ಷೈರ್! ನಿನ್ನ ಚಾತುರ್ಯಕ್ಕೂ ಸ್ವಾಮಿಭಕ್ತಿಗೂ ಮೆಚ್ಚಿದೆ. ನಿನ್ನ ಸಾಹಸಕ್ಕೆ ಸಂತೋಷಪಟ್ಟು ಈ ಕಾಸಿನಸರವನ್ನು ಬಹುಮಾನವಾಗಿ ಕೊಡುವೆನು, ತೆಗೆದುಕೊ. ಇನ್ನು ಮುಂದೆ ನಿನಗಾವ ಕೊರತೆಯೂ ಉಂಟಾಗದಂತೆ ನೋಡಿಕೊಳ್ಳುವೆನು. ಧೈರ್ಯವಾಗಿರು; ನಿನ್ನಿಷ್ಟವು ನೆರವೇರುವುದು."

ರೋಷನಾರೆಯ ಸ್ತುತಿವಚನವನ್ನು ಕೇಳಿ ಫರುಕ್‌ಷೈರನು ಇದೆಲ್ಲವೂ ತನ್ನ ಬೆರಳಿನಲ್ಲಿರುವ ಉಂಗುರದ ಪ್ರಭಾವವೆಂದೆಣಿಸಿ ಮನಸ್ಸಿನಲ್ಲಿ ಹಿಗ್ಗುತ್ತಿದ್ದನು. ರೋಷನಾರೆಯು ಸ್ವಲ್ಪ ಹೊತ್ತು ಅವನೊಡನೆ ಆಲೋಚಿಸಿ, ಇಂದಿರೆಯನ್ನು ಕೊಲ್ಲುವ ವಿಷಯದಲ್ಲಿ ಸೂಚನೆಗಳನ್ನು ಕೊಟ್ಟು ಕಳುಹಿದಳು. ಫರುಕ್‌ಷೈರನು ಅವಳ ಅಪ್ಪಣೆಯನ್ನು ಹೊಂದಿ ಅಲ್ಲಿಂದ ಹೊರಟು ತನಗಾಗಿ ಕಾದಿದ್ದ ಫಕೀರನ ಬಳಿಗೆ ಬಂದು ಕೈಮುಗಿದುಕೊಂಡು ನಿಂತನು.

ಫಕೀರನು ದೂರದಿಂದಲೇ ಅವನ ಕೊರಳಲ್ಲಿದ್ದ ಕಾಸಿನ ಸರವನ್ನೂ ಅವನ ಮುಖದಲ್ಲಿದ್ದ ಉತ್ಸಾಹವನ್ನೂ ನೋಡಿ ಬಳಿಗೆ ಬಂದ ಬಳಿಕ "ನೋಡಿದೆಯಾ ಫರುಕ್‌ಷೈರ್! ಉಂಗುರದ ಮಹಿಮೆ ಈಗ ಗೊತ್ತಾಯಿತೆ? ನಿನ್ನನ್ನು ನಿನ್ನ ಯಜಮಾನಿ ಎಷ್ಟು ಉಪಚರಿಸಿದಳು? ಈ ಕಾಸಿನಸರದಿಂದ ನೀನು ಹೊಸಮದವಣಿಗನಂತೆಯೇ ಕಾಣುತ್ತಿರುವೆ. ನಿನ್ನ ಅದೃಷ್ಟವು ಚೆನ್ನಾಗಿದೆಯೆಂದು ನಂಬು" ಎಂದನು. ಫರುಕ್‌ಷೈರನು ತಾನು ಹೇಳದೆಯೇ ಫಕೀರನು ಎಲ್ಲವನ್ನೂ ತಿಳಿದವನಂತೆ ಆಡುತ್ತಿರುವುದನ್ನು ಕೇಳಿ ಆಶ್ಚರ್ಯದಿಂದ ಸುಮ್ಮನೆ ನಿಂತನು.

ಫಕೀರ:— ಏಕೆ, ಮಾತನಾಡುವುದಿಲ್ಲ? ಆಶ್ಚರ್ಯವೇಕೆ? ಅವಳು ನಿನ್ನಲ್ಲಿ ಕೆಲವು ರಹಸ್ಯಗಳನ್ನು ಕೂಡ ಹೇಳಿಲ್ಲವೆ?

ನನಗೆ ಅದುಕೂಡ ಗೊತ್ತಾಗಿದೆ.

ಫರುಕ್:— ಫಕೀರ್ಜೀ, ಅನುಗ್ರಹಿಸಬೇಕು. ನೀವು ಸಾಕ್ಷಾತ್ ಅಲ್ಲಾ ಅವತಾರವೇ ಆಗಿರುವಿರಿ. ನಿಮ್ಮ ಉಂಗುರವು ನನಗೆ ಬಹಳ ಸಹಾಯ ಮಾಡಿತು. ನಮ್ಮ ಬೇಗಮರು ನನ್ನನ್ನು ನೋಡಿದೊಡನೆಯೇ ಈ ಶಾಸನಪತ್ರವನ್ನು ಕೊಟ್ಟರು.

ಫಕೀರ:— ಅಷ್ಟೇ ಅಲ್ಲ; ಈ ಉಂಗುರದ ಪ್ರಭಾವವು ನಿನ್ನ ಶರೀರದಲ್ಲಿ ವ್ಯಾಪಿಸಿತೆಂದರೆ ನಿಮ್ಮ ಬೇಗಮುಳು ನಿನ್ನನ್ನು ನಿಜವಾಗಿಯೂ ಪ್ರೇಮಭರದಿಂದ ಆಲಿಂಗಿಸಿಕೊಳ್ಳುವಳು.

ಫರುಕ್:— ಫಕೀರ್ಜೀ! ಅಷ್ಟಾದರೆ ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲ!

ಫಕೀರ:— ಇರಲಿ. ನಿನ್ನನ್ನು ಇನ್ನೂ ಕೆಲವು ದಿನಗಳವರೆಗೆ ಪರೀಕ್ಷಿಸಬೇಕೆಂದಿರುವೆನು. ಇದಕ್ಕಿಂತಲೂ ಉತ್ತಮವೂ ಅಧಿಕ ಮಹತ್ವವುಳ್ಳವೂ ಆಗಿರುವ ಉಂಗುರಗಳು ನನ್ನಲ್ಲಿರುವುವು. ಅವನ್ನು ಧರಿಸುವುದರಿಂದ ಸಮ್ರಾಟನ ಅರ್ಧಾಸನದಲ್ಲಿ ಕುಳಿತುಕೊಳ್ಳುವಷ್ಟು ಸನ್ಮಾನವನ್ನೂ ಜಗನ್ಮೋಹಕ ಸ್ವರೂಪವನ್ನೂ ಹೊಂದಬಹುದು. ಆದರೆ, ನಿನ್ನಲ್ಲಿ ನಿಜವಾದ ಧರ್ಮಾಭಿಮಾನವೂ ಸ್ವಾಮಿಭಕ್ತಿಯೂ ಸತ್ಯಸಂಧತೆಯೂ ದೃಢವಾಗುವವರೆಗೆ ಕೊಡಲಾಗುವುದಿಲ್ಲ.

ಫರುಕ್:— ಫಕೀರ್ಜೀ! ದಾಸನ ಮೇಲೆ ಅನುಗ್ರಹವಿಟ್ಟು ಇನ್ನೂ ಪರೀಕ್ಷಿಸಿ, ಪರೀಕ್ಷಾನಂತರದಲ್ಲಿಯಾದರೂ ಅವುಗಳನ್ನು ಇವನಿಗೇ ಕೊಟ್ಟು ಉದ್ಧರಿಸಿರಿ.

ಫಕೀರ:— ಆಗಲಿ, ನಿನ್ನೊಡನೆ ನಿಮ್ಮ ಯಜಮಾನಿಯು ಹೇಳಿದ ರಹಸ್ಯವನ್ನು ಬಾಯ್ಬಿರೆದು ಹೇಳು. ನಿಜವಾಡುವೆಯೋ —ಸುಳ್ಳಾಡುವೆಯೋ ನಿರ್ಧರಿಸುವೆನು.

ಫರುಕ್:— ಇನ್ನು ಸ್ವಪ್ನದಲ್ಲಿಯೂ ಸುಳ್ಳಾಡುವವನು ನಾನಲ್ಲ. ಹಿಂದೂಬಾಲೆಯನ್ನು ಚಿತ್ರಹಿಂಸೆಯಿಂದ ಕೊಲ್ಲಬೇಕೆಂದು ಕಟ್ಟುಮಾಡಿದರು; ನಾನು ಕತ್ತನ್ನು ಮಾತ್ರ ಕತ್ತರಿಸಿ ಬಿಡುವೆನೆಂದು ಹೇಳಿದುದಕ್ಕೆ ಅವರು ಒಪ್ಪಲಿಲ್ಲ.

ಫಕೀರ:— ಅದೇನೋ ಸರಿ; ಅವಳು ಮತ್ತಾವುದಕ್ಕೆ ಒಪ್ಪಿದಳೋ ಹೇಳು.

ಫರುಕ್:— ಒಂದುವೇಳೆ ಉದಯಪುರಿಬೇಗಮರು ತನ್ನ ಸಖಿಯಾದ ಇಂದಿರೆಯು ಕಾಣಲಿಲ್ಲವೆಂದು ಬಾದಷಹರೊಡನೆ ಹೇಳಿದುದೇ ಆದರೆ ಅವರು ತನ್ನ ಸೇವಕರಿಂದ ಅವಳನ್ನು ಹುಡುಕಿಸುವರೆಂದೂ, ಎಲ್ಲಿಯೂ ಸಿಕ್ಕದಿದ್ದರೆ, ಯಾರಾದರೂ ಕೊಂದುಹಾಕಿ ನೆಲದಲ್ಲಿ ಹೂಳಿರಬಹುದೆಂದೂ ಹಿಸಿ ನೆಲವನ್ನೆಲ್ಲಾ ಅಗಿಸುವರೆಂದೂ ಯೋಚಿಸಿ, ಭೂಮಿಯಲ್ಲಿ ಹೂಳಲು ಸಮ್ಮತಿಸದೆ ಒಂದು ಹಗ್ಗಕ್ಕೆ ಇಂದಿರೆಯನ್ನು ಕಟ್ಟಿ ಯಮುನಾನದಿಯಲ್ಲಿ ಬಿಟ್ಟುಬಿಡಬೇಕೆಂದು ಹೇಳಿರುವರು.

ಫಕೀರ್:— ಕಾಫರಳನ್ನು ಹಾಗೆಯೇ ಮಾಡಬೇಕು. ಆದರೆ, ರಾತ್ರಿ ಎರಡು ಜಾವದ ಮೇಲೆಯೇ ನದಿಯಲ್ಲಿ ಬಿಡಬೇಕಾದುದೇಕೆ? ದಕ್ಷಿಣ ದಿಕ್ಕಿನ ಬುರುಜಿನ ಮೇಲಿನಿಂದಲೇ ಬಿಡಬೇಕೆಂದೇಕೆ ನಿಯಮಿಸಿದ್ದಾರೆ?

ಫರುಕ್:— ಫಕೀರಜೀ! ತಿಳಿದೂ ಹೀಗೆ ಕೇಳುವುದನ್ನು ನೋಡಿದರೆ ಇನ್ನೂ ನನ್ನ ಮೇಲೆ ನಂಬಿಕೆಯಾಗಿಲ್ಲವೆಂದು ಊಹಿಸಬೇಕಾಗಿದೆ. ರಾತ್ರಿ ಎರಡು ಜಾಮವಾದರೆ ಎಲ್ಲರೂ ನಿದ್ರೆಯಲ್ಲಿರುವರು; ಯಾರಿಗೂ ತಿಳಿಯುವುದಿಲ್ಲ. ಅದಲ್ಲದೆ ದಕ್ಷಿಣಬುರುಜು ಒಂದು ಮೂಲೆಯಲ್ಲಿದೆ. ಅಲ್ಲಿ ವಿಶೇಷ ಜನಸಂಚಾರವೂ ಇಲ್ಲ. ಅದೆಲ್ಲವೂ ಹಾಗಿರಲಿ!

ಫಕೀರ - ಅದೇನು. ಹೇಳು— ಅನುಮಾನವೇಕೆ?

ಫರುಕ್:— ನಾನು ಈ ಕ್ರೂರ ಕಾರ್ಯವನ್ನು ಮಾಡುವೆನಲ್ಲಾ, ಇದರಿಂದ ನನಗೆ ಪಾಪಸಂಘಟನೆಯಾಗುವುದಿಲ್ಲವೆ?

ಫಕೀರ.— ನಿನಗೇಕೆ ಪಾಪವಾಗುವುದು? ಸ್ವಾಮಿವಾಕ್ಯವನ್ನು ಮೀರಿದರೆ ಮಾತ್ರ ಪಾಪಕ್ಕೆ ಗುರಿಯಾಗಬೇಕಾದೀತು! ಸ್ವಾಮಿವಾಕ್ಯದಂತೆ ಎಂತಹ ಕಾರ್ಯವನ್ನು ಮಾಡಿದರೂ ಪುಣ್ಯವೇ ಬರುವುದೆಂದು ಖುರಾನದಲ್ಲಿದೆ. ನಮ್ಮ ಪೈಗಂಬರರೂ ಹೀಗೆಯೇ ಹೇಳಿರುವರು. ಇದಲ್ಲದೆ, ಅತ್ಯಂತ ಮಹತ್ವವುಳ್ಳ ಉಂಗುರವು ನಿನ್ನ ಕೈಯಲ್ಲಿರುವವರೆಗೂ ನಿನಗೆ ಪಾಪಭೀತಿಯು ಬರುವುದಿಲ್ಲ. ನಿರ್ಭಯವಾಗಿ ನಿಮ್ಮ ಬೇಗಮುಳ ಮಾತನ್ನು ನಡೆಯಿಸು.

ಫರುಕ್:— ಇನ್ನು ಅಪ್ಪಣೆಯಾಗಲಿ, ನಾನು ಈ ರಾತ್ರಿಯೇ ಬೇಗಮರ ಆಜ್ಞೆಯನ್ನು ನಡೆಯಿಸಬೇಕಾಗಿದೆ.

ಫಕೀರನು ಫರುಕ್‌ಸೈರನಿಂದ ರಹಸ್ಯವನ್ನೆಲ್ಲ ತಿಳಿದು ಅವನನ್ನು ಉಬ್ಬಿಸಿ, ಮತ್ತೆ ನಾಳೆ ತನ್ನನ್ನು ನೋಡುವಂತೆ ಹೇಳಿ ಅವನನ್ನು ಕಳುಹಿ ತಾನೂ ತನ್ನ ದಾರಿಯನ್ನು ಹಿಡಿದನು.

——:——

ಇಪ್ಪತ್ತೊಂಭತ್ತನೆಯ ಪ್ರಕರಣ.

(ಅಬೂಪರ್ವತದ ಮೇಲೆ)

ವಿಮಲೆಯು ವಿಜ್ಞಾಪನಪತ್ರಿಕೆಯನ್ನು ನೋಡಿದುದು ಮೊದಲು ರಾಜಸಿಂಹನು ಅವಳ ಸಂರಕ್ಷಣೋಪಾಯಚಿಂತನದಲ್ಲಿಯೇ ನಿರತನಾಗಿ, ವಿಮಲೆಗೆ ಅಭಯವಾಗ್ದಾನಪತ್ರಿಕೆ

ಯನ್ನು ಬರೆದು ತನ್ನ ಸೇವಕನೊಬ್ಬನ ಮೂಲಕ ಕೊಟ್ಟು ಕಳುಹಿದನು. ಶಿವಸಿಂಗನು ಶ್ಯಾಮಲ ಪಂಡಿತನೊಡನೆ ಪ್ರಯಾಣಮಾಡುತ್ತಿರುವಾಗ ಆತನನ್ನು ಪ್ರತಿಭಟಿಸಿದ ಭಟರಲ್ಲಿ ಇಬ್ಬರು ತಲೆತಪ್ಪಿಸಿಕೊಂಡು ಹೋಗಿ ಪುನಃ ಆತನೇ ಹಿಂತಿರುಗಿ ಬರಬಹುದೆಂಬ ನಿರೀಕ್ಷೆಯಿಂದ ದಾರಿಯಲ್ಲಿ ಹೊಂಚುಕಾದಿದ್ದವರು, ರಾಜಸಿಂಹನಿಂದ ಪತ್ರವನ್ನು ತೆಗೆದುಕೊಂಡು ಬರುತ್ತಿದ್ದವನನ್ನು ಹಿಡಿದು ಅವನಿಂದ ಪತ್ರವನ್ನು ತೆಗೆದುಕೊಂಡು ಸಾದತ್‌ಖಾನನಿಗೆ ಒಪ್ಪಿಸಿದರು. ಸಾದತ್ ಖಾನನು ಅದರ ಅಭಿಪ್ರಾಯವನ್ನು ಗ್ರಹಿಸಿ, ರಾಜಸಿಂಹನೇ ವಿಜಯಸಿಂಹನಿಗೆ ಸಹಾಯಕನಾಗಿ ಬರುವುದರಿಂದ ತನ್ನ ಸಹಾಯಕ್ಕೆ ಅಧಿಕಸೈನ್ಯವನ್ನು ಕಳುಹಬೇಕೆಂದು ಬಾದಷಹನಿಗೆ ಬರೆದುಕೊಂಡಿದ್ದನು. ರಾಜಸಿಂಹನ ಸೈನ್ಯವು ಯಾವ ಕ್ಷಣದಲ್ಲಿ ಮೇಲೆ ಬೀಳುವುದೋ—ಎಂಬ ಭೀತಿಯಿಂದ ಅತ್ಯಂತ ಜಾಗರೂಕನಾಗಿ ಸೈನ್ಯವನ್ನು ರಹಸ್ಯವಾಗಿರಿಸಿದ್ದನು.

ಇತ್ತ ಉದಯಪುರದಲ್ಲಿಯೂ ಸಮರಸನ್ನಾಹವು ನಡೆಯುತ್ತಿದ್ದಿತು. ರಾಜಸಿಂಹನು ಕ್ಷಾತ್ರತೇಜಸ್ಸಿನಿಂದಲೂ ಧರ್ಮದಮೇಲಿನ ಅಭಿಮಾನದಿಂದಲೂ ಅಬಲೆಯ ಮಾನಸಂರಕ್ಷಣೆಯನ್ನು ಮಾಡಬೇಕಾದ ಅವಶ್ಯಕರ್ತವ್ಯಪ್ರೇರಣೆಯಿಂದಲೂ ಮದೋನ್ಮತ್ತನೂ ಕ್ರೂರಿಯೂ ಆದ ಔರಂಗಜೇಬನ ಗರ್ವವನ್ನು ಮುರಿದು ಲೋಕಹಿತವನ್ನು ಸಾಧಿಸಬೇಕೆಂಬ ಭಾವನೆಯಿಂದಲೂ ಸಮಯದಲ್ಲಿ ಸಹಾಯಮಾಡಬೇಕಾದೀತೆಂದು ಸಕಲ ರಾಜಪುತ್ರರನ್ನೂ ಕೋರಿದನು. ರಾಜಪುತ್ರರೂ ಸಂಭ್ರಮದಿಂದ ರಾಜಸಿಂಹನಿಗೆ ಸಹಾಯಮಾಡಲು ಸೈನ್ಯವನ್ನು ಸಿದ್ಧಮಾಡುತ್ತಿದ್ದರು. ಈ ಮಧ್ಯದಲ್ಲಿ ಯಾವ ಕಾರ್ಯವನ್ನು ಮಾಡಬೇಕಾದರೂ ವೈಕುಂಠಯೋಗಿಗೆ ತಿಳಿಸಿಯೇ ಮಾಡುತ್ತಿದ್ದ ರಾಜಸಿಂಹರಾಜನು ಯುದ್ಧವಿಚಾರವಾಗಿ ಪ್ರಸ್ತಾಪಿಸಲು ಅಚಲೇಶ್ವರಾಲಯಕ್ಕೆ ಹೋದನು. ಆತನು ಅಲ್ಲಿಗೆ ಬಂದಾಗ ಯೋಗಿಯು ಧ್ಯಾನದಲ್ಲಿದ್ದುದರಿಂದ ರಾಜಸಿಂಹನು ಆ ದೇವಾಲಯದಲ್ಲಿದ್ದ ಒಂದು ಮಂಟಪದಲ್ಲಿ ಕುಳಿತು ಯೋಗಿಯ ದರ್ಶಿಸಲು ಸಮಯನಿರೀಕ್ಷೆಯಲ್ಲಿದ್ದನು. ಅಷ್ಟರಲ್ಲಿ ಅಲ್ಲಿಗೆ ಒಬ್ಬ ಬಾಲಕನನ್ನೆತ್ತಿಕೊಂಡು ಒಬ್ಬ ಭಿಲ್ಲಾಂಗನೆಯು ಬಾರಿಬಾರಿಗೂ ಬಾಲನನ್ನು ಮುದ್ದಿಸುತ್ತ ಹಾಡುಗಳನ್ನು ಹೇಳುತ್ತ ಗಗನದಲ್ಲಿ ಸಂಚರಿಸುವ ಪಕ್ಷಿಗಳನ್ನು ತೋರಿಸುತ್ತ ಆಲಯದ ಬಳಿಗೆ ಬಂದಳು. ರಾಜಸಿಂಹನು ಆ ಬಾಲನನ್ನು ನೋಡಿ ಯಾರಿರಬಹುದೆಂಬುದನ್ನು ಯೋಗಿಯಿಂದ ತಿಳಿಯಬೇಕೆಂದು ಎಣಿಸಿದನು.

ಸ್ವಲ್ಪ ಹೊತ್ತಿನೊಳಗಾಗಿ ಧ್ಯಾನವನ್ನು ಮುಗಿಸಿಕೊಂಡು ಯೋಗಿಯು ಹೊರಗೆ ಬಂದನು. ತತ್‌ಕ್ಷಣವೇ ರಾಜಸಿಂಹನು ಯೋಗಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಕೈಮುಗಿದು ನಿಂತನು. ಯೋಗಿಯು ರಾಜಸಿಂಹನಿಗೆ ಆಶೀರ್ವಾದವನ್ನು ಮಾಡಿ, ಆತನೊಡನೆ ಆಲಯದ ಹಿಂದುಗಡೆಯಲ್ಲಿದ್ದ ಮಂಟಪಕ್ಕೆ ಹೋಗಿ ಅಲ್ಲಿ ಕುಳಿತು ರಾಜಸಿಂಹನನ್ನು ಕುರಿತು ಕುಶಲಪ್ರಶ್ನೆ ಮಾಡಿದನು. ಆ ಬಳಿಕ ಅವರಿಬ್ಬರಿಗೂ ಹೀಗೆ ಸಂಭಾಷಣೆಗಳಾದವು:—

ರಾಜ:—ದೇವಾ! ನಾನು ಆಲಯಕ್ಕೆ ಬಂದಬಳಿಕ ಓರ್ವ ಭಿಲ್ಲಾಂಗನೆಯು ಒಬ್ಬ ಬಾಲನನ್ನೆತ್ತಿಕೊಂಡು ಬಂದಳು, ಆ ಬಾಲನಾರು?

ಯೋಗಿ:— ನಿನಗೆ ಗೊತ್ತಿಲ್ಲವೆ? ಆ ಬಾಲನೇ ಜೋಧಪುರಾಧೀಶನು!

ರಾಜ:—ಏನು? ಆ ಬಾಲನೇ ಚಂದ್ರಾವತೀ ಕುಮಾರನೇ? ಅಜಿತಸಿಂಗನೆ?

ರಾಜಸಿಂಹನ ಆತುರತೆಯನ್ನು ನೋಡಿ ಆತನಿಗೆ, ನಯನಪಾಲನು ಚಂದ್ರಾವತಿಗೆ ಮಾಡಿದ ಮೋಸವನ್ನೂ ಇಂದಿರಾ ದುರ್ಗಾದಾಸರ ರಾಜಭಕ್ತಿ—ಶೌರ್ಯ—ಧೈರ್ಯಗಳನ್ನೂ ಪದ್ಮೆಯ ಚಮತ್ಕಾರವನ್ನೂ ಸವಿಸ್ತರವಾಗಿ ಹೇಳಿ, ಇನ್ನೂ ಸ್ವಲ್ಪ ಕಾಲದವರೆಗೆ ಈ ಬಾಲನನ್ನು ಇಲ್ಲಿಯೇ ಕಾಪಾಡಬೇಕಾಗಿರುವುದೆಂದೂ ಹೇಳಿದನು. ರಾಜಸಿಂಹನು ಅದನ್ನೆಲ್ಲಾ ಕೇಳಿ ಔರಂಗಜೇಬನ ದುರ್ನಡತೆಗೆ ಖತಿಗೊಂಡು ಆತನನ್ನು ತನ್ನಲ್ಲಿಯೇ ಧಿಃಕ್ಕರಿಸುತ್ತಿದ್ದನು.

ವೈಕುಂಠಯೋಗಿ:— ರಾಜಸಿಂಹ! ನೀನು ಬಂದ ಉದ್ದೇಶವೇನು?

ರಾಜ:—ಪರಾಭಿಪ್ರಾಯತತ್ವಜ್ಞರಲ್ಲಿ ವಿಜ್ಞಾಪಿಸಬೇಕೇ! ಬಾದಷಹನು ಇನ್ನು ಎರಡು ಮೂರು ದಿನಗಳಲ್ಲಿಯೇ ಯುದ್ಧಕ್ಕೆ ಬರುವನಂತೆ!

ಯೋಗಿ:—ಕಾರಣವೇನು?

ರಾಜ:— ರೂಪನಗರಾಧೀಶನಾದ ವಿಜಯಸಿಂಹನ ಮಗಳಾದ ವಿಮಲಾದೇವಿಯನ್ನು ತಾನು ಪರಿಗ್ರಹಿಸಬೇಕೆಂದು ಬಾದಷಹನು ತನ್ನ ಸೈನ್ಯವನ್ನು ರೂಪನಗರಕ್ಕೆ ಕಳುಹಲು ಸೈನ್ಯವು ಬಂದು ಆ ಪಟ್ಟಣವನ್ನು ಮುತ್ತಿರುವುದು. ಕ್ಷಾತ್ರತೇಜೋವಿರಾಜಮಾನನಾದ ವಿಜಯಸಿಂಹನು ಹೆದರದೆ ಪ್ರಾಣವಿರುವವರೆಗೆ ಕ್ಷಾತ್ರಧರ್ಮವನ್ನು ಕಾಪಾಡುವೆನೆಂದು ಶಪಥ ಮಾಡಿರುವನು. ರಾಜಪುತ್ರರೆಲ್ಲರಿಗೂ ಈ ವೇಳೆಯಲ್ಲಿ ಸಹಾಯಮಾಡುವುದು ಅಗತ್ಯವೆಂದು ಬರೆದು ಕಳುಹಿರುವನು. ಸುಕುಮಾರಿಯಾದ ವಿಮಲಾದೇವಿಯೂ ತನ್ನ ಅವಸ್ಥೆಯನ್ನು ಹೃದಯದ್ರಾವಕರೀತಿಯಲ್ಲಿ ವರ್ಣಿಸಿ, ಯುವ

ನರಪಾಲುಮಾಡದೆ ತನ್ನ ಸತೀಧರ್ಮವನ್ನೂ ಅದರೊಡನೆಯೇ ಕ್ಷಾತ್ರತೇಜಸ್ಸನ್ನೂ ಕಾಪಾಡಬೇಕೆಂದು ಪ್ರಾರ್ಥಿಸಿರುವಳು. ಹಾಗೆ ಸಂರಕ್ಷಿಸದಿದ್ದರೆ ಯಜ್ಞೇಶ್ವರನಿಗೆ ಆಹುತಿಯಾಗುವುದಾಗಿಯೂ ಸಂಕಲ್ಪಿಸಿರುವಳು. ಆದುದರಿಂದ ನಾನು ಅವಳ ರಕ್ಷಣಾರ್ಥವಾಗಿ ನಮ್ಮ ಸಾಮಂತರಲ್ಲಿಯೂ ಮಿತ್ರವರ್ಗದವರಲ್ಲಿಯೂ ಪತ್ರಮುಖದಿಂದ ಸಹಾಯವನ್ನು ಕೋರಿರುವೆನು. ಯುದ್ಧಕ್ಕೆ ಹೊರಡುವ ಮೊದಲು ತಮ್ಮ ಸಂದರ್ಶನ ಲಾಭವನ್ನು ಹೊಂದಿ ಹೋಗಲು ಬಂದಿರುವೆನು.

ಯೋಗಿ:—ಬರುತಬರುತ್ತ ಬಾದಷಹನ ಕ್ರೂರಸ್ವಭಾವವು ಮೇರೆಮೀರುತ್ತಿರುವುದು.

ರಾಜ.— ತಮ್ಮ ಚರಣಾನುಗ್ರಹವಿರುವವರೆಗೂ ಈ ರಾಜಸಿಂಹನು ಇಂತಹ ನೂರುಮಂದಿ ಆಲಂಘೀರ ಬಾದಷಹರಿಗಾದರೂ ಭಯಪಡುವಂತಿಲ್ಲ. ಕಂದಾಯವನ್ನು ಕೇಳಲು ಬಂದ ಯವನದೂತರನ್ನು ಹೆದರಿಸಿ ಓಡಿಸಿ ಬಾದಷಹನಿಗೆ ನಾಚಿಕೆಯಾಗುವಂತೆ ಒಂದುಕಾಗದವನ್ನು ಬರೆದಿರುವೆನು.

ಯೋಗಿ: — ಇರಲಿ, ಅವನಿಗೆ ವಿವೇಕವನ್ನು ಬರೆದು ಕಳುಹಿದುದೂ ವಿಮಲಾದೇವಿಯ ಮಾನರಕ್ಷಣೆಗಾಗಿ ಬದ್ಧಕಂಕಣನಾಗಿರುವುದೂ ಶ್ಲಾಘನೀಯವೇ ಸರಿ. ಆದರೆ, ವಿಮಲಾದೇವಿಯ ಪಾಣಿಗ್ರಹಣದಲ್ಲಿ ನಿನ್ನ ಇಷ್ಟವು ಹೇಗಿದೆ! ಅವಳನ್ನು ನೀನೆಂದಾದರೂ ನೋಡಿರುವಿಯಾ?

ರಾಜ: — ಹತ್ತು ವರ್ಷದವಳಾಗಿದ್ದಾಗ ಅವಳನ್ನು ನಾನೊಮ್ಮೆ ನೋಡಿದ್ದೆನು. ಈಗ ತಮ್ಮ ಅಪ್ಪಣೆಯಾದರೆ ಪಾಣಿಗ್ರಹಣ ಮಾಡುವೆನು.

ಯೋಗಿ:— ಮತ್ತೆಂದಾದರೂ ಅವಳನ್ನು ನೋಡಿದ್ದೆಯೋ ನೆನಪುಮಾಡಿಕೊ?

ರಾಜ:— ಇಲ್ಲ, ನೋಡಿಲ್ಲವೆಂದೇ ತೋರುವುದು.

ಯೋಗಿ:— ಹೋಗಲಿ, ನಿನ್ನ ಉಂಗುರವನ್ನಾದರೂ ಕೊಟ್ಟ ನೆನಪಿರುವುದೊ?

ರಾಜ:— ನಾನು ಒಂದು ದಿನ ಮೃಗಯಾವಿನೋದಕ್ಕಾಗಿ ಅರಣ್ಯಕ್ಕೆ ಹೋಗಿದ್ದಾಗ ಕೆಲವರು ಮಹಮ್ಮದೀಯ ಭಟರು ನನ್ನನ್ನು ಪ್ರತಿಭಟಿಸಲು ನಾನು ಅವರೊಡನೆ ಹೋರಾಡುತ್ತಿದ್ದೆನು. ಆ ಸಮಯದಲ್ಲಿ ತುರಗಾರೂಢರಾಗಿ ಬಂದು ನನಗೆ ತುಂಬ ಸಹಾಯಮಾಡಿ ಶತ್ರುಗಳನ್ನು ಓಡಿಸಿದ ರಾಜಪುತ್ರರಿಬ್ಬರಲ್ಲಿ ಪ್ರಮುಖನಾದವನೊಬ್ಬನಿಗೆ ನನ್ನ ಕೃತಜ್ಞತಾಪ್ರದರ್ಶನಕ್ಕಾಗಿ ನನ್ನ ಉಂಗುರವನ್ನಿತ್ತೆನು.

ಯೋಗಿ:— ಹಾಗಾದರೆ ನೀನು ವಿಮಲೆಯನ್ನು ನೋಡಲಿಲ್ಲವೆಂದು ಹೇಗೆ ಹೇಳುವೆ?

ರಾಜ:— ನಾನೆಲ್ಲಿ ನೋಡಿದೆ?

ಯೋಗಿ:—ನಿನ್ನ ಸಹಾಯಕ್ಕೆ ಬಂದಿದ್ದ ಆ ವೀರರಿಬ್ಬರೂ ಪುರುಷವೇಷಧಾರಿಗಳಾದ ವಿಮಲಾ—ಪದ್ಮಾದೇವಿಯರೆಂದು ತಿಳಿ.

ರಾಜ:— ಏನು? ಅವರು ರೂಪನಗರದ ರಾಜಪುತ್ರಿಯರೆ? ಉಂಗುರವನ್ನು ಪಡೆದವಳು ವಿಮಲೆಯೇ? ನನಗೆ ಗುರುತು ಸಿಕ್ಕಲಿಲ್ಲವೇಕೆ?

ಯೋಗಿ: - ಹೇಗಾದರೂ ಆಗಲಿ, ನೀನು ವಿಮಲಾದೇವಿಯನ್ನು ಗ್ರಹಿಸಿದಂತಾಯಿತು.

ರಾಜಸಿಂಹನು ತಲೆತಗ್ಗಿಸಿದನು. ರಾಜಸಿಂಹನಿಂದ ಉಂಗುರವನ್ನು ಪಡೆದ ಮೇಲೆ ಒಂದು ದಿನ ವಿಮಲಾ ಪದ್ಮೆಯರಿಬ್ಬರೂ ಅಚಲೇಶ್ವರಾಲಯಕ್ಕೆ ಬಂದಿದ್ದಾಗ ಯೋಗೀಶ್ವರನಿಗೆ ಸಂಘರ್ಷವಶದಿಂದ ಸಂಗತಿಯನ್ನು ತಿಳಿಯಪಡಿಸಿದ್ದರು. ಇದಾವುದನ್ನೂ ಯೋಗಿಯು ತಿಳಿಸಲಿಲ್ಲವಾದುದರಿಂದ ರಾಜಸಿಂಹನು ಯೋಗಿಯು ಇದನ್ನು ಜ್ಞಾನಚಕ್ಷುಸ್ಸಿನಿಂದಲೇ ತಿಳಿದಿರಬೇಕೆಂದೂ ಈತನು ಜ್ಞಾನದಲ್ಲಿ ಸಾಕ್ಷಾತ್ ವಸಿಷ್ಠರ ಅವತಾರನೇ ಸರಿಯೆಂದೂ ಭಾವಿಸಿ ಮನಸ್ಸಿನಲ್ಲಿಯೇ ಯೋಗಿಯನ್ನು ಸ್ತುತಿಸುತ್ತಿದ್ದನು. ಸ್ವಲ್ಪ ಹೊತ್ತಾದಬಳಿಕ ಯೋಗಿಯು ರಾಜಸಿಂಹನನ್ನು ಕುರಿತು ಹೀಗೆ ಹೇಳಿದನು. ‘ ರಾಜಸಿಂಹ! ನೀನು ಯೋಚಿಸುತ್ತಿರುವುದೇನು? ಸಕಲ ಸಾಮಂತರಾಜರ ಸಹಾಯವನ್ನು ಹೊಂದಿ ರೂಪನಗರಕ್ಕೆ ಒದಗಿರುವ ವಿಪತ್ತನ್ನು ಪರಿಹಾರಮಾಡು; ಮರೆಹೊಕ್ಕ ಮಾನಿನಿಯಾದ ವಿಮಲಾದೇವಿಯ ಮಾನಸಂರಕ್ಷಣೆಮಾಡಿ, ಅವಳ ಪಾಣಿಗ್ರಹಣದಿಂದ ಕೀರ್ತಿ-ವೈಭವಗಳನ್ನು ಹೊಂದುವವನಾಗು. ರಾಜಪುತ್ರ ವಂಶೋದ್ಧಾರಕನು ನೀನಲ್ಲದೆ ಮತ್ತಾರು? ಇತರ ಭೀತಚಿತ್ತರಾದ ರಾಜಪುತ್ರರು ಸುಮ್ಮನಿದ್ದುದರಿಂದಲೇ ಘಾತುಕನಾದ ಔರಂಗಜೇಬನು ಇಷ್ಟು ಕೊಬ್ಬಿ ಹೋಗಿರುವನು.

ರಾಜ.— ಯೋಗಿಪುಂಗವ! ಇನ್ನು ಆತನ ಪುಂಡಾಟಗಳನ್ನು ತಡೆಯುವಂತಿಲ್ಲ. ಕಾರಣವಿಲ್ಲದೆ ನಾನಾಗಿ ಯುದ್ಧಕ್ಕೆ ಹೊರಡುವದು ಹೇಗೆಂದು ಈವರೆಗೆ ತಡೆದಿದ್ದೆನು. ಈಗ ಕಾರಣವುಂಟಾಗಿರುವುದರಿಂದ ಇನ್ನು ತಮ್ಮ ಆಶೀರ್ವಾದವನ್ನು ಹೊಂದಿ ರಾಜಪುತ್ರರ ಶೌರ್ಯವನ್ನು ಪ್ರಕಾಶಕ್ಕೆ ತಂದು ಆ ಯವನನಿಗೆ ಚೆನ್ನಾಗಿ ಬುದ್ಧಿಗಲಿಸುವೆನು.

ಇವರು ಮಾತನಾಡುವಷ್ಟರಲ್ಲಿಯೇ ಒಬ್ಬ ರಾಜಭಟನು ಅಲ್ಲಿಗೆ ಬಂದು ಯೋಗಿಗೆ ಕೈಮುಗಿದು “ಸ್ವಾಮಿ! ಜೋಧಪುರದಿಂದ ಮಹಾರಾಣಿ ಚಂದ್ರಾವತೀದೇವಿಯವರು ಬಂದಿರುವರು.” ಎಂದು ನಿವೇದಿಸಿದನು. ಅದನ್ನು ಕೇಳಿ ಯೋಗಿಯು ಸಂತೋಷದಿಂದ “ಎಲ್ಲಿರುವರು?” ಎಂದು ಕೇಳಲು ಭಟನು “ಹತ್ತಿರದಲ್ಲಿರುವ ಗುಡಾರದಲ್ಲಿ ಕುಮಾರನೊಡನೆ

ಇರುವರು.” ಎಂದು ಹೇಳಿದನು. ಯೋಗಿಯು ರಾಜಸಿಂಹನನ್ನೂ ಜೊತೆಗೊಂಡು ಭಟನೊಡನೆ ಚಂದ್ರಾವತಿಯಿದ್ದೆಡೆಗೆ ಹೊರಟನು.

ಚಂದ್ರಾವತಿಯು ತನ್ನ ತೊಡೆಯಮೇಲೆ ಕುಮಾರ ಅಜಿತಸಿಂಗನನ್ನು ಮಲಗಿಸಿಕೊಂಡು ಬಾಲನ ನಿಮಿತ್ತವಾಗಿ ಹೊಂದಿದ ಕಷ್ಟಗಳನ್ನು ಸ್ಮರಿಸಿಕೊಳ್ಳುತ್ತ ಗದ್ಗದ ಸ್ವರದಿಂದ “ಅಯ್ಯೋ, ಸುಕುಮಾರ; ವೀರಾಗ್ರಣಿಯಾದ ಜೋಧಪುರಾಧೀಶನಿಗೆ ಕುಮಾರನಾಗಿ, ಸ್ವರ್ಣಖಚಿತವಾದ ತೊಟ್ಟಿಲೊಳು ಮಲಗುವುದಕ್ಕೆ ಯೋಗ್ಯನಾದ ನಿನಗೆ ಈ ತರಗೆಲೆಯ ಹಾಸಿಗೆಯಲ್ಲಿ ಮಲಗುವಂತೆ ವಿಧಿಯು ಬರೆದನೆ? ಈ ತಾಳೆಯ ಗರಿಯ ಗುಡಿಸಲೇ ನಿನಗೆ ರಾಜಭವನವಾಯಿತೇ? ಬಾಲಾ! ನಿನ್ನ ತಂದೆ ಬದುಕಿದ್ದರೆ ನಿನಗೀ ಅವಸ್ಥೆಯುಂಟಾಗುತ್ತಿದ್ದಿತೇ? ಅಯ್ಯೋ ನಮಗೆ ಅಂತಹ ಭಾಗ್ಯವಿಶೇಷವಿಲ್ಲದೆ? ಘಾತಕನಾದ ಔರಂಗಜೇಬನು ನಮ್ಮ ಪಾಲಿಗೆ ಯಮನೇ ಆಗಿ, ನಿನ್ನ ಅಣ್ಣನನ್ನೂ ನಿನ್ನ ತಂದೆಯನ್ನೂ ಬಲಿ ತೆಗೆದುಕೊಂಡನು. ಅಷ್ಟಕ್ಕೂ ತೃಪ್ತನಾಗದೆ ನಿನ್ನನ್ನೂ ಕೊನೆಗಾಣಿಸಬೇಕೆಂದು ಪ್ರಯತ್ನಿಸಿದನು. ಮತ್ತೆ ನಿನ್ನನ್ನು ನೋಡುವ ಭಾಗ್ಯವು ನನಗಿರುವುದೆಂದು ನಾನು ನಂಬಿರಲಿಲ್ಲ. ಇಂದಿರೆಯು ನಮಗೊದಗಿದ್ದ ಆಪತ್ತುಗಳನ್ನು ಪರಿಹರಿಸಿ ನಿನ್ನನ್ನು ಸಂರಕ್ಷಿಸದಿದ್ದರೆ ನಮಗೆ ಈ ವೇಳೆಗೆ ಯಾವಗತಿಯಾಗುತ್ತಿದ್ದಿತೋ .... ಎಂದು ಹೇಳುತ್ತ ಕಣ್ಣೀರು ಸುರಿಸುತ್ತಿದ್ದಳು. ಅಷ್ಟರಲ್ಲಿ ರಾಜಸಿಂಹನೊಡನೆ ಬಂದ ಯೋಗಿಯು ಚಂದ್ರಾವತಿಯನ್ನು ಸಮಾಧಾನಪಡಿಸಿದನು. ರಾಜಸಿಂಹನು ಬಾಲನನ್ನೆತ್ತಿ ಆಡಿಸುತ್ತ ಕುಳಿತನು. ಯೋಗಿಯು ಚಂದ್ರಾವತಿಯನ್ನು ನೋಡಿ— “ಅಮ್ಮ, ನಿನ್ನ ಬಂಧುವಾದ ಈ ರಾಜಸಿಂಹನು ಯವನರ ಮೇಲೆ ಯುದ್ಧಕ್ಕೆ ಇನ್ನು ೨ ೩ ದಿನಗಳಲ್ಲಿ ಹೊರಡುವನು. ಅವನಿಗೆ ರಾಜಪುತ್ರರೆಲ್ಲರೂ ಸಹಾಯ ಮಾಡುವುದು ಅವಶ್ಯ ಕರ್ತವ್ಯವಾಗಿದೆಯಾದುದರಿಂದ ನಿನ್ನ ಸೈನ್ಯವನ್ನು ಕಳುಹಿಸು” ಎಂದನು. ಚಂದ್ರಾವತಿಯು “ಯೋಗೀಂದ್ರಾ! ಉದಯಪುರದ ರಾಜರಲ್ಲದೆ ಯವನರ ಪುಂಡನ್ನಣಗಿಸಲು ಮುಂದೆನಿಲ್ಲುವ ಸಾಹಸಿಗಳಾರಿರುವರು? ಆಪದ್ರಕ್ಷಕನಾದ ರಾಜಸಿಂಹನಿಗೆ ಸಹಾಯಕ್ಕಾಗಿ ಸೈನ್ಯವನ್ನು ಕಳುಹಲು ನನನೆ ಹೇಳಬೇಕೆ? ನಮ್ಮೆಲ್ಲರಿಗೂ ಈತನೇ ಆಪದ್ಬಂಧುವೆಂದು ನಾನು ನಂಬಿರುವೆನು” ಎಂದಳು.

ರಾಜಸಿಂಹನು ಚಂದ್ರಾವತಿಯನ್ನು ಸಂತೈಸಿ, ಯೋಗಿಯಿಂದ ಅಪ್ಪಣೆಹೊಂದಿ, ಚಂದ್ರಾವತಿಯನ್ನು ಕುರಿತು, “ತಾಯಿ, ಇನ್ನೂ ಕೆಲವು ಕಾಲದಮಟ್ಟಿಗೆ ಕುಮಾರನು ನನ್ನಲ್ಲಿರಲಿ, ನೀನು ಹೀಗೆ ಸಾಹಸ ಮಾಡಬಾರದು. ಮಾರ್ಗದಲ್ಲಿ ಶತ್ರುಪಕ್ಷದವರ ಕಣ್ಣಿಗೆ ಬಿದ್ದರೆ ಪ್ರಮಾದವಾದೀತು. ಕುಮಾರನ ಚಿಂತೆಯನ್ನು ಬಿಟ್ಟು ಧೈರ್ಯವಾಗಿರು.” ಎಂದು ಹೇಳಿ ಅವಳನ್ನೂ ಸುಕುಮಾರನನ್ನೂ ಕರೆದುಕೊಂಡು ಹೊರಟು ಜೋಧಪುರದಲ್ಲಿ ಚಂದ್ರಾವತಿಯನ್ನು ಬಿಟ್ಟು, ಅಜಿತಸಿಂಹನನ್ನು ತನ್ನೊಡನೆ ಕರೆದುಕೊಂಡು ಹೊರಟು ಹೋದನು.

ಮೂವತ್ತನೆಯ ಪ್ರಕರಣ.

ವಿಜಯಸಿಂಗನ ಸಹಾಯಕ್ಕಾಗಿ ರಾಜಪುತ್ರರೆಲ್ಲರೂ ಬರುವರೆಂಬುದನ್ನು ತಿಳಿದು ಸಾದತ್‌ಖಾನನು ಭೀತನಾಗಿ ತನಗೆ ಸಹಾಯಕ್ಕಾಗಿ ಸೈನ್ಯವನ್ನು ಕಳುಹಿಸಬೇಕೆಂದು ದಿನವೂ ಬಾದಷಹನಿಗೆ ಬರೆಯುತ್ತಿದ್ದನು. ಹೀಗೆ ದಿನವೂ ಬರೆದು ಕಳುಹುತ್ತಿದ್ದುದನ್ನು ನೋಡಿ ಬಾದಶಹನು, ರಾಜಪುತ್ರರೆಲ್ಲರೂ ಐಕ್ಯಮತದಿಂದ ತನ್ನ ಮೇಲೆ ದಂಡೆತ್ತಿ ಬರುವುದಲ್ಲದೆ ಅವರೆಲ್ಲರಿಗೂ ರಾಜಸಿಂಹನೇ ಮುಖಂಡನಾಗಿ ನಿಲ್ಲುವುದರಿಂದ ತಾನೂ ಬಲವತ್ಪ್ರಯತ್ನವನ್ನೇ ಮಾಡಬೇಕೆಂದೂ ಈ ಯುದ್ಧದಲ್ಲಿ ರಾಜಪುತ್ರರೂ ರಾಜಸಿಂಹನೂ ತನಗೆ ಕೈಸೆರೆ ಸಿಕ್ಕಿದುದೇ ಆದರೆ ಮುಂದೆ ತಾನು ನಿರಾತಂಕವಾಗಿರಬಹುದೆಂದೂ ಯೋಚಿಸಿ, ತನ್ನ ಸೈನ್ಯವೆಲ್ಲವನ್ನೂ ಒಟ್ಟುಗೂಡಿಸಿ ಯುದ್ಧಕ್ಕೆ ಹೊರಡಬೇಕೆಂದಿದ್ದನು. ಇಷ್ಟರಲ್ಲಿ ಮತ್ತೊಂದು ಕಾಗದವು ಸಾದತ್‌ಖಾನನಿಂದ ಕಳುಹಲ್ಪಟ್ಟಿತು. ಅದನ್ನು ಓದಿಕೊಂಡ ಕ್ಷಣವೇ ಬಾದಷಹನು ತನ್ನ ಸೇನಾನಾಯಕರಲ್ಲೊಬ್ಬನನ್ನು ಕರೆಯಿಸಿ ರೂಪನಗರದ ಮೇಲೆ ಇಂದಿನ ದಿನವೇ ದಂಡೆತ್ತಿ ಹೊರಡಬೇಕೆಂದೂ ತಾನು ನಾಳೆಯೇ ಹೊರಟು ಬರುವೆನೆಂದೂ ಹೇಳಿಕಳುಹಿದನು.

ಇಷ್ಟು ಮಾಡಿದ ಬಳಿಕ ಬಾದಷಹನು ಈ ಸಂಗತಿಯನ್ನು ತನ್ನ ಪಟ್ಟಮಹಿಷಿಯಾದ ಉದಯಪುರಿಗೆ ಹೇಳಬೇಕೆಂದು ಅಂತಃಪುರಕ್ಕೆ ಹೊರಟು ಬಂದನು. ಉದಯಪುರಿಯು ಇಂದಿರೆಯನ್ನು ಕಾಣದಂದಿನಿಂದ ಅತ್ಯಂತ ಪರಿತಾಪಪಡುತ್ತ ತನಗೆ ಸಾಧ್ಯವಾದ ಮಟ್ಟಿಗೂ ಡಿಲ್ಲಿ ನಗರದಲ್ಲೆಲ್ಲಾ ಹುಡುಕಿಸಿ ತನ್ನ ಪ್ರಾಣವನ್ನು ಕಾಪಾಡಿದುದಕ್ಕಾಗಿ ಆಕೆಗೆ ಬಹುಮಾನವನ್ನು ಕೂಡ ಕೊಡಲಿಲ್ಲವಲ್ಲಾ ಎಂದು ವಿಚಾರಗ್ರಸ್ತಳಾಗಿದ್ದಳು; ತನ್ನ ಮೇಲಿನ ದ್ವೇಷದಿಂದ ರೋಷನಾರೆಯು ಇಂದಿರೆಯನ್ನು ಅಪಹರಿಸಿರಬಹುದೆಂದೂ ಅವಳಿಂದ ಇಂದಿರೆಗೆ ಅಪಾಯವು ತಪ್ಪದೆಂದೂ ಚಿಂತಿಸಿ ಕಳವಳಿಸುತ್ತ ಕುಳಿತಿದ್ದುದರಿಂದ ಬಾದಷಹನು ಬಂದುದನ್ನು ಅವಳು ತಿಳಿಯಲಿಲ್ಲ. ಬಾದಷಹನು ಅವಳನ್ನು ನೋಡಿ ವ್ಯಾಕುಲದಿಂದ ಅವಳ ಬಳಿಯಲ್ಲಿ ಕುಳಿತು ತನ್ನ ಕೈಯನ್ನು ಅವಳ ಭುಜದ ಮೇಲೆ

ರಿಸಿ ಪ್ರೀತಿಯಿಂದ ಹೀಗೆ ಸಂಭಾಷಿಸಿದನು—

"ಪ್ಯಾರೀ! ಇದೇನೀ ಅಗಾಧ ಚಿಂತೆ!"

ಉದಯ:— ಮಹಾರಾಜ! ರೋಷನಾರೆಯು ಕೋಪವಿನ್ನೂ ಶಾಂತವಾಗಿಲ್ಲ.

ಬಾದ:— ಪುನಃ ಏನಾದರೂ ತೊಂದರೆಯನ್ನು ಮಾಡಿದಳೋ?

ಉದಯ:— ನಿನ್ನೆಯ ರಾತ್ರಿಯಿಂದಲೂ ಇಂದಿರೆಯ ಸುದ್ದಿಯೇ ಇಲ್ಲ. ಪಟ್ಟಣದಲ್ಲೆಲ್ಲಾ ಹುಡುಕಿಸಿದೆನು. ಎಲ್ಲಿಯೂ ಕಾಣಲಿಲ್ಲ.

ಬಾದ:— ಎಲ್ಲಿಗೋ ಓಡಿಹೋಗಿರಬಹುದು. ಇಷ್ಟು ಮಾತ್ರಕ್ಕೇ ವಿಚಾರವೇಕೆ?

ಉದಯ:— ಹಾಗೆ ಓಡಿಹೋಗುವವಳಾಗಿರಲಿಲ್ಲ. ಈ ಪಟ್ಟಣದಲ್ಲಿಯೇ ಇರುವಳು.

ಬಾದ:— ಪಟ್ಟಣದಲ್ಲೆಲ್ಲೆಲ್ಲಿಯೂ ಹುಡುಕಿಸಿದೆನೆಂದು ಹೇಳಿದೆಯಲ್ಲವೆ? ಮತ್ತೆ ಇಲ್ಲಿಯೇ ಇರುವಳೆನ್ನುವೆ. ಹೇಗೆ?

ಉದಯ:— ನನಗೆ ಸಾಧ್ಯವಾದ ಸ್ಥಳಗಳಲ್ಲೆಲ್ಲ ಹುಡುಕಿಸಿದೆನು.

ಬಾದ:— ನಿನಗೆ ಅಸಾಧ್ಯವಾದ ಸ್ಥಳಗಳೂ ಈ ಪಟ್ಟಣದಲ್ಲಿರುವುವೋ?

ಉದಯ:— ಇದೆ, ಆದರೆ ಅದು ತಮ್ಮ ಅನುಗ್ರಹದಿಂದಲೇ ಆದುದು.

ಬಾದ:— ಅದಾವುದೋ ಹೇಳಬಾರದೇ?

ಉದಯ:— ಹೇಳುವೆನು. ಆದರೂ ತಮಗೆ ಕೂಡ ಆ ಸ್ಥಳವು ಅಸಾಧ್ಯವೆಂದೇ ತೋರುವುದು.

ಬಾದ:— ನೋಡುವ, ಬೇಗ ಹೇಳಬಾರದೇ! ಸುಮ್ಮನೆ ಕಾಲ ಕಳೆಯುತ್ತಿರುವುದೇಕೆ?

ಉದಯ:— ಎಲ್ಲ ಸ್ಥಳಗಳಲ್ಲಿಯೂ ಹುಡುಕಿಸಿದೆನು. ಆದರೆ ರೋಷನಾರೆಯ ಮಂದಿರದಲ್ಲಿ ಮಾತ್ರ ಹುಡುಕಿಸಲಾಗಲಿಲ್ಲ. ನೀವೇನಾದರೂ ಹುಡುಕಿಸಬಲ್ಲಿರೊ?

ಬಾದ:— ಪ್ಯಾರಿ! ಆ ಇಂದಿರೆಗಾಗಿ ನೀನೇಕೆ ಇಷ್ಟು ಯೋಚಿಸುವೆ? ಇನ್ನು ಸ್ವಲ್ಪ ದಿನಗಳಲ್ಲಿಯೇ ಇಂದಿರೆಗಿಂತಲೂ ಜಾಣೆಯಾದ ರಾಜಕನ್ಯೆಯನ್ನು ನಿನ್ನ ದಾಸಿಯನ್ನಾಗಿ ನಿಯಮಿಸುವೆನು. ಈಗ ನಾನು ಒಂದು ಮಾತನ್ನು ಹೇಳಲು ಇಲ್ಲಿಗೆ ಬಂದಿರುವೆನು. ಅದೇನೆನ್ನುವಿಯೋ? ನಿನಗೂ ವಿಮಲೆಯ ಮೇಲಿನ ಕೋಪವನ್ನೆಂದಾದರೂ ತೀರಿಸಿಕೊಳ್ಳಬೇಕೆಂಬ ಅಪೇಕ್ಷೆಯಿದೆಯಲ್ಲವೆ? ನಿನ್ನ ಕೋರಿಕೆಯನ್ನು ನೆರವೇರಿಸಲು ನಾಳೆಯೇ ರೂಪನಗರದ ಮೇಲೆ ದಂಡೆತ್ತಿಹೊರಡಲು ಸಿದ್ಧನಾಗಿರುವೆನು. ನೀನೂ ನನ್ನೊಡನೆ ಬರುವೆಯಾ?

ಉದಯ:— ಸ್ವತಃ ನೀವೇ ಹೋಗಬೇಕೇ? ಸೈನ್ಯವನ್ನು ಕಳುಹಿದರೆ ಆಗದೆ?

ಬಾದ:— ಹಾಗಲ್ಲ! ರಾಜಪುತ್ರರೆಲ್ಲರೂ ವಿಜಯಸಿಂಹನ ಸಹಾಯಕ್ಕಾಗಿ ಬರುವರು. ರಾಜಸಿಂಹನು ಅವರೆಲ್ಲರಿಗೂ ಮುಂದಾಗಿ ಬರುವನಂತೆ! ಹೀಗಿರುವದರಿಂದ ನಾನು ಹೋಗದಿದ್ದರೆ ಹೇಗಾಗುವುದು? ಸಮಯವು ಹೇಗಿರುವುದೋ? ನೀನೂ ಜೊತೆಯಲ್ಲಿ ಹೊರಡುವೆಯೋ?

ಉದಯ:— ಹೊರಡುವುದೇನು? ನಾನು ಬದುಕಿರಬೇಕೆಂಬ ಆಶೆ ನಿಮಗಿದ್ದರೆ ನನ್ನನ್ನು ನಿಮ್ಮೊಡನೆಯೇ ಕರೆದುಕೊಂಡು ಹೋಗುವಿರಿ!

ಬಾದ:— ಕರೆದುಕೊಂಡು ಹೋಗಬೇಕೆಂದೇ ಕೇಳಿದೆನು. ನಾಳೆ ಹೊರಡಲು ಸಿದ್ಧವಾಗಿರು.

ಹೀಗೆ ಇವರು ಮಾತನಾಡುವಷ್ಟರಲ್ಲಿಯೇ ಮನಾವದನು ಬಂದು "ಸೈನ್ಯವು ರೂಪನಗರಕ್ಕೆ ಹೊರಡುತ್ತಿದೆ. ಸಮಾಚಾರವನ್ನು ಪಾದಸನ್ನಿಧಾನಕ್ಕೆ ಮುಟ್ಟಿಸಲು ಬಂದೆನು." ಎಂದು ಬಾದಷಹನಿಗೆ ನಿವೇದಿಸಿದನು. ಬಾದಷಹನು "ಸಂತೋಷ, ಇಪ್ಪತ್ತು ಗಾವುದಗಳ ದೂರ ಹೋಗಬೇಕಾಗಿರುವುದರಿಂದ ದಾರಿಯಲ್ಲಿ ಒಂದು ಮಜಲಿಯನ್ನು ಮಾತ್ರ ಮಾಡಿ ಜಾಗ್ರತೆಯಾಗಿ ಹೋಗಬೇಕೆಂದು ಸೇನಾಪತಿಗೆ ಹೇಳು." ಎಂದು ಹೇಳಿ ಕಳುಹಿಸಿ, ಉದಯಪುರಿಯೊಡನೆ ಸೈನ್ಯವನ್ನು ನೋಡಲು ಬುರುಜಿನ ಹತ್ತಿರ ಹೋಗಿ ನೋಡಲು ಹೊರಟನು. ಸಪ್ತಸಮುದ್ರಗಳು ಸೇರಿ ಪ್ರವಹಿಸುವುವೋ ಎಂಬಂತೆ ಆ ಸೇನಾಸಮೂಹವು ಪ್ರಯಾಣ ಮಾಡುತ್ತಿದ್ದುದನ್ನು ನೋಡಿ ಬಾದಷಹನೂ ಉದಯಪುರಿಯೂ ತಮಗೇ ಖಂಡಿತವಾಗಿ ಜಯವಾಗುವುದೆಂದು ಸಂತೋಷಪಟ್ಟರು. ಅನಂತರ ಬಾದಷಹನು ಅಲ್ಲಿಯೇ ಸ್ವಲ್ಪಹೊತ್ತು ನಿಂತಿದ್ದು ಅಲ್ಲಿಯೇ ನಮಾಜು ಮಾಡಿ ತಮ್ಮ ಮಹಲಿಗೆ ಹೊರಟು ಹೋದರು. ಇತ್ತ ಸಕಲ ಸೇನಾಸಮೂಹವು ಸ್ವಲ್ಪ ದೂರ ಹೋದ ಮೇಲೆ ಒಬ್ಬ ಫಕೀರನು ಎಲ್ಲಿಂದಲೋ ಬಂದು ಸೇನೆಯೊಡನೆ ಕಲೆತು ಹೋಗುತ್ತಿದ್ದನು. ಆದರೆ ಯಾವ ಕಾರಣದಿಂದಲೋ ಆ ಫಕೀರನು ಯಾರೊಡನೆಯೂ ಮಾತನಾಡದೆ ಸುಮ್ಮನೆ ಹೋಗುತ್ತಿದ್ದನು.

ಮೂವತ್ತೊಂದನೆಯ ಪ್ರಕರಣ.

(ರಾಜಸಿಂಹನ ಪ್ರತಿಜ್ಞೆ)

ರಾಜಸಿಂಹನ ಕೋರಿಕೆಯಂತೆ ಆತನ ಸಾಮಂತ-ಮಿತ್ರ ಮಂಡಲಿಯ ರಾಜರೆಲ್ಲರೂ ಸೈನ್ಯದೊಡನೆ ಸಹಾಯಕ್ಕೆ ಬಂ

ದರು. ಜಯಪುರ, ಜ್ಯೋತಿಪುರ ಮೊದಲಾದ ಕೆಲವರು ಮಾತ್ರ ಬರಲಿಲ್ಲವಾದರೂ ಬಂದವರನ್ನು ತುಂಬ ಗೌರವ ದಿಂದ ಬರಮಾಡಿಕೊಂಡು ಅವರವರ ಮರ್ಯಾದೆಗೆ ತಕ್ಕಂತೆ ಸತ್ಕರಿಸಿ ಎಲ್ಲರಿಗೂ ಪ್ರತ್ಯೇಕ ಪ್ರತ್ಯೇಕ ಬಿಡಾರಗಳನ್ನು ಹಾಕಿಸಿದನು. ಉದಯಪುರದಲ್ಲಿ ಎಲ್ಲೆಲ್ಲಿ ನೋಡಿದರೂ ಸೈನಿಕರ ಕೋಲಾಹಲವೂ ರಾಜಪುತ್ರರ ಸಮರೋತ್ಸಾಹವೂ ತುಂಬಿ ತುಳುಕುತ್ತಿದ್ದುವು. ಪ್ರತಿ ದಿನವೂ ರಾಜಸಿಂಹನು ಅಶ್ವಾರೂಢನಾಗಿ ಬಂದು, ಸಹಾಯಕ್ಕಾಗಿ ಬಂದಿರುವ ರಾಜಪುತ್ರರೆಲ್ಲರಿಗೂ ಸರಿಯಾಗಿ ಉಪಚಾರಗಳು ನಡೆಯುವುವೋ ಹೇಗೆಂಬುದನ್ನು ರಹಸ್ಯವಾಗಿ ತಿಳಿದುಕೊಳ್ಳುತ್ತಲೂ ಸಮಕ್ಷ ಸಂಭಾಷಣೆಯಿಂದವರನ್ನು ಸಂಭಾವಿಸುತ್ತಲೂ ಬರುತ್ತಿದ್ದನು. ಸೈನಿಕರು ಯವನರ ಗರ್ವಭಂಗ ಮಾಡುವ ಸುಯೋಗವು ಪ್ರಾಪ್ತವಾಯಿತೆಂಬ ಸಂತೋಷದಿಂದ ಪರಮಾತ್ಮನ ಭಜನ ಸಂಕೀರ್ತನಗಳನ್ನು ಮಾಡುತ್ತಲೂ ಪರಸ್ಪರ ಅಭಿಮಾನದಿಂದ ಸಂಭಾಷಿಸುತ್ತಲೂ ಸಂಗೀತ ವಾದ್ಯಗಳಿಂದ ಮನಸ್ಸನ್ನು ಉಲ್ಲಾಸಗೊಳಿಸುತ್ತಲೂ ಬಗೆಬಗೆಯಾಗಿ ತಮ್ಮ ಸಂತೋಷೋತ್ಸಾಹಗಳನ್ನು ಪ್ರದರ್ಶಿಸುತ್ತಿದ್ದರು. ಪುರಜನರು ಸಹಾಯಕರಾಗಿ ಬಂದಿರುವ ಸೇನಾಸಮೂಹವನ್ನು ನೋಡುವ ಕುತೂಹಲದಿಂದ ಗುಂಪು ಗುಂಪಾಗಿ ಬಂದು ಬುರುಜುಗಳ ಮೇಲೆಯೂ ಗುಡ್ಡದ ಮೇಲೆಯೂ ನಿಂತು ನೋಡುತ್ತ ಬಂದಿರುವ ಸೇನೆಗಳಲ್ಲಿ "ಬುಂದೀರಾಜನ ಸೇನೆ ಇದು, ಭರತಪುರಾಧೀಶನ ಸೇನೆ ಇದು, ಜೋಧಪುರದ ಚಂದ್ರಾವತೀ ರಾಣಿಯ ಸೇನೆ ಇದು, ಅಲ್ವಾರ ರಾಜನ ಸೇನೆ ಇದು" ಎಂದು ಹೇಳಿಕೊಳ್ಳುತ್ತ ತಮ್ಮ ರಾಜನಿಗೇ ಜಯಲಕ್ಷ್ಮಿಯು ಒಲಿವಳೆಂದು ನಿರ್ಧರಿಸಿ ಸಂತೋಷಪಡುತ್ತಿದ್ದರು.

ರಾಜಸಿಂಹನ ವಿಶ್ವಾಸಗೌರವಕ್ಕೆ ಪಾತ್ರನಾಗಿದ್ದ ದುರ್ಗಾಚರಣ ಜೋಯಿಸನೆಂಬವನೊಬ್ಬ ಜ್ಯೋತಿಷಶಾಸ್ತ್ರಜ್ಞನು ಉದಯಪುರದಲ್ಲಿಯೇ ಇದ್ದನು. ಈತನೂ ಸೈನ್ಯವನ್ನು ನೋಡಬಂದವನು ತಾನು ಎಲ್ಲರಂತೆಯೂ ಸುಮ್ಮನಿರದೆ ತನ್ನ ಜ್ಯೋತಿಷಶಾಸ್ತ್ರ ಪಾಂಡಿತ್ಯವನ್ನು ಇವರಲ್ಲಿ ಪ್ರದರ್ಶಿಸುವೆನೆಂದು ಆಲೋಚಿಸಿ, ಒಂದೆಡೆ ಗುಂಪಾಗಿ ನಿಂತಿದ್ದ ರಾಜಪುತ್ರರ ಮಧ್ಯೇ ನುಗ್ಗಿ— "ಎಲೈ, ವೀರರೇ! ನಿಮಗೆ ಜಯವಾಗುವುದು, ನಿಮಗೆ ಜಯಲಕ್ಷ್ಮೀ ಪ್ರಸನ್ನಳಾಗುವಳು. ನಾನು ಜ್ಯೋತಿಷವನ್ನು ನೋಡಿ ಹೇಳುವವನು. ನನ್ನ ಮಾತು ಸುಳ್ಳಾಗುವುದಿಲ್ಲ." ಎಂದು ಹೇಳುತ್ತಿದ್ದನು. ಇದನ್ನು ಕೇಳಿ ಭಟರಲ್ಲಿ ಕೆಲವರು ತಮಗೆ ಮದುವೆಯಾವಾಗಲಾಗುವುದೆಂದೂ ಇನ್ನು ಕೆಲವರು ತಮ್ಮ ಸಂಸಾರವು ತಮ್ಮೊಡನೆ ಸೇರುವುದಾಗಾಗಲೆಂದೂ ಇನ್ನು ಕೆಲವರು ಯುದ್ಧದಲ್ಲಿ ಯಾರಿಗೆ ಜಯವಾಗುವುದೆಂದೂ ಹೀಗೆ ಬಗೆ ಬಗೆಯಾಗಿ ಕೇಳುತ್ತ ಆ ಜೋಯಿಸನನ್ನು ಪೀಡಿಸಲಾರಂಭಿಸಿದರು. ಜೋಯಿಸನು ತಾಳ್ಮೆಯಿಂದ ಅವರವರ ಪ್ರಶ್ನೆಗಳಿಗೆ ಪ್ರಕೃತೋಚಿತಗಳಿಂದ ಉತ್ತರಗಳನ್ನು ಕೊಡುತ್ತ ಬಂದನು.

ಇಷ್ಟರಲ್ಲಿ ಶ್ಯಾಮಲಪಂಡಿತನೂ ಅಲ್ಲಿಗೆ ಬಂದನು. ಈತನು ರಾಜಸಿಂಹನ ಅರಮನೆಯನ್ನು ಪ್ರವೇಶಿಸಿದಂದಿನಿಂದಲೂ ಜೋಯಿಸರಿಗೆ ಅತ್ಯಂತ ಸ್ನೇಹವುಳ್ಳವನಾಗಿದ್ದನು. ಜೋಯಿಸನೂ ಆತನ ಹಾಸ್ಯೋಕ್ತಿಗಳಿಗೆ ಆನಂದಿಸುತ್ತ ಆತನೊಡನೆಯೇ ಕಾಲವನ್ನು ಕಳೆಯುತ್ತಿದ್ದನು. ಅವರಿಬ್ಬರೂ ಅಣ್ಣತಮ್ಮಂದಿರಂತೆ ಎಲ್ಲಿಗೆ ಹೋದರೂ ಜೊತೆಯಲ್ಲಿಯೇ ಹೋಗುತ್ತಿದ್ದರು. ಆದರೆ ಈದಿನ ಮಾತ್ರ ಜೋಯಿಸನು ಹೇಳದೆ ಹೊರಟು ಬಂದುದರಿಂದ ಅವನನ್ನು ಎಲ್ಲೆಲ್ಲಿಯೋ ಹುಡುಕಿ ಕಡೆಗೆ ಈ ಗುಂಪಿನಲ್ಲಿದ್ದವನನ್ನು ಕಂಡು ಬಹುಪ್ರಯಾಸದಿಂದ ಜನರ ಗುಂಪನ್ನು ಭೇದಿಸಿಕೊಂಡು ಬಂದು ಜೋಯಿಸನನ್ನು ಸೇರಿದನು. ಜೋಯಿಸನು ಆತನನ್ನು ಆದರಿಸಿ ತನ್ನ ಪಕ್ಕದಲ್ಲಿದ್ದ ಬಂಡೆಯಮೇಲೆ ಕುಳ್ಳಿರಿಸಿಕೊಂಡನು. ಶ್ಯಾಮಲಪಂಡಿತನು ಜೋಯಿಸನನ್ನು ನೋಡಿ—

"ಜೋಯಿಸರೇ! ಎಲ್ಲರಿಗೂ ಜೋತಿಷ್ಯವನ್ನು ಹೇಳುವಿರಿ; ನನಗೆ ಮಾತ್ರ ಹೇಳಬೇಡವೊ? ಎಲ್ಲಿ ಹೇಳಿರಿ, ನಾನೊಂದು ಕಾರ್ಯವನ್ನು ಈಗ ಮನಸ್ಸಿನಲ್ಲಿ ನೆನಸಿಕೊಂಡಿರುವೆನು. ಅದಕ್ಕೆ ಫಲವನ್ನು ಹೇಳಬೇಕು.

ಜೋಯಿಸ:— ನೀವು ಸ್ಮರಿಸಿದ ಕಾರ್ಯವು ಸಿದ್ಧಿಸುವುದು. ಯುದ್ಧದಲ್ಲಿ ನಿಮಗೇ ಜಯವಾಗುವುದು.

ಶಾಮಲ:— ಸರಿ, ಸರಿ. ಬಹು ಚೆನ್ನಾಗಿದೆ. ನಾನು ಸ್ಮರಿಸಿದೊಂದು ಹೇಳುವುದೊಂದು. ನಾನಿಲ್ಲಿಗೆ ರೂಪನಗರದಿಂದ ಬರುವಾಗ ನಮ್ಮ ಮನೆಯ ಹಸು ಗರ್ಭವಾಗಿತ್ತು. ಅದು ಈಗ ಕರುವನ್ನು ಹಾಕಿರುವುದೇನೆಂದು ಸ್ಮರಿಸಿದೆನು. ನೀವು ಯುದ್ಧದ ವಿಚಾರತೆಗೆದಿರಿ. ಒಳ್ಳೆಯ ಜೋತಿಷ್ಯ! ಫಲವೆಂದರೆ ಇದೇ ಫಲ; ಹೋಗಲಿ ಆ ಹಸುವಿನ ರೂಪನ್ನಾದರೂ ಹೇಳುವಿರೊ?

ಜೋಯಿಸ:— ಸರಿಯೆ, ಆ ಹಸು ಕಪ್ಪುಬಣ್ಣ. ಮುಖದ ಮೇಲೆ ಬಿಳಿಯ ಮಚ್ಚೆಗಳಿರುವವು. ಕೊಂಬುಗಳು ಗಿಡ್ಡ... ಏನು-ನಿಜವೊ?

ಶಾಮಲ:—ಓಹೋ! ನೀವು ಹೇಳುವಂತಹ ಹಸುಗಳು ಲೋಕದಲ್ಲೆಷ್ಟೋ ಇರುವುವು; ನಾನೂ ನೋಡಿರುವೆನು. ನಮ್ಮ ಮನೆಯಲ್ಲಿ ಮಾತ್ರ ಹಸುವೇ ಇಲ್ಲ.

ಹೀಗೆ ಸಾಮಲಪಂಡಿತನು ವಿನೋದವಾಡಲು ಜೋಯಿ

ಸನು ಸುಮ್ಮನಾದನು. ಪಂಡಿತನ ಹಾಸ್ಯೋಕ್ತಿಗಳಿಗೆ ಸುತ್ತಲಿದ್ದ ಭಟರು ಸಂತೋಷಿಸಿ, ಫಲಾದಿಗಳನ್ನಿತ್ತು ಸತ್ಕರಿಸಿದರು, ಪಂಡಿತನು ಅವನ್ನು ಸ್ವೀಕರಿಸಿ ಜೋಯಿಸನೊಡಗೊಂಡು ಅರಮನೆಗೆ ಹೊರಟು ಹೋದನು.

ಅಂದು ಸಾಯಂಕಾಲ ರಾಜಸಿಂಹನು ಸಹಾಯಕ್ಕಾಗಿ ಬಂದಿದ್ದ ರಾಜಪುತ್ರರೊಡನೆ ತನ್ನ ಮಹಲಿನ ಮಾಳಿಗೆಯ ಮೇಲೆ ಕುಳಿತು ಯುದ್ಧಸಂಬಂಧವಾಗಿ ಆಲೋಚಿಸುತ್ತ ಕುಳಿತಿದ್ದನು. ಕುಳಿತಿದ್ದವನ ದೃಷ್ಟಿ, ದೂರದಲ್ಲಿ ಅಶ್ವಾರೂಢನಾಗಿ ಉದಯಪುರಾಭಿಮುಖನಾಗಿ ಬರುತ್ತಿದ್ದ ಸರದಾರನ ಕಡೆ ಬಿದ್ದಿತು. ರಾಜಸಿಂಹನು ಕುತೂಹಲದಿಂದ ಆತನನ್ನೇ ನಿರೀಕ್ಷಿಸುತ್ತಿದ್ದನು. ಬಳಿಯಲ್ಲಿದ್ದ ರಾಜಪುತ್ರರೂ ಆತನಾರಿರಬಹುದೆಂದು ಯೋಚಿಸುತ್ತ ಆತನನ್ನೇ ನೋಡುತ್ತಿದ್ದರು. ಸ್ವಲ್ಪ ಹೊತ್ತಿನೊಳಗಾಗಿ ಆ ಸರದಾರನು ಪಟ್ಟಣ ಪ್ರವೇಶ ಮಾಡಿ ರಾಜಮಾರ್ಗಗಳನ್ನು ದಾಟಿ ಅರಮನೆಯ ಮುಂದೆ ಕುದುರೆಯಿಂದಿಳಿದು ದ್ವಾರಪಾಲಕನನ್ನು ಕುರಿತು—" ಮಹಾರಾಜರ ಸಮಯವೇನೆಂದು " ಕೇಳಲು ಸೇವಕನೊಬ್ಬನು ಬಂದು ರಾಜಾಜ್ಞೆಯಿಂದ ಆತನನ್ನು ಕರೆದುಕೊಂಡು ಬಂದು ರಾಜಸಮ್ಮುಖದಲ್ಲಿ ನಿಲ್ಲಿಸಿದನು. ಸರದಾರನು ರಾಜಸಿಂಹನಿಗೆ ವಿನಯದಿಂದ ಕೈಮುಗಿದುನಿಲ್ಲಲು, ರಾಜಸಿಂಹನು ವಿಚಾರವೇನೆಂದು ಪ್ರಶ್ನೆ ಮಾಡಿದನು. ಅದಕ್ಕಾತನು, "ಮಹಾರಾಜಾ! ಡಿಲ್ಲಿಯಿಂದ ಯುದ್ಧದ ವಿಷಯಗಳನ್ನೆಲ್ಲ ತಿಳಿದುಬಂದಿರುವೆನು ಆಲಂಘೀರನು ನಾಳಿನ ದಿನವೇ ಅಲ್ಲಿಂದ ಹೊರಡುವನು. ಸೈನ್ಯವನ್ನೆಲ್ಲ ಮೊದಲೇ ಕಳುಹಿರುವನು. ಆತನು ಮೊದಲು ರೂಪನಗರವನ್ನು ಸ್ವಾಧೀನಪಡಿಸಿಕೊಂಡು ಅನಂತರ ಇಲ್ಲಿಗೆ ಬರುವನೆಂಬ ವರ್ತಮಾನವಿರುವುದು. ನಾವೂ ಶೀಘ್ರವಾಗಿಯೇ ಹೊರಡಬೇಕು. " ಎಂದು ನಿವೇದಿಸಿದನು. ರಾಜಸಿಂಹನು ಸ್ವಲ್ಪ ಹೊತ್ತು ಯೋಚಿಸಿ, ಮೊಗಲ್ ಸೈನ್ಯವು ರೂಪನಗರವನ್ನು ಸೇರುವುದಕ್ಕೆ ಮೊದಲೇ ತಾನು ಹೋಗಿ ಸಾದತ್‌ಖಾನನನ್ನು ಓಡಿಸಿ, ವಿಮಲಾದೇವಿಯನ್ನು ಕರೆದುಕೊಂಡು ಬಂದು ಉದಯಪುರದಲ್ಲಿಟ್ಟು ಅನಂತರ ಯುದ್ಧಕ್ಕೆ ಹೊರಡಬೇಕೆಂದು ನಿಶ್ಚಯಿಸಿ, ತನ್ನ ಸಾಮಂತರೊಡನೆ ತನ್ನ ಅಭಿಪ್ರಾಯವನ್ನು ಹೇಳಿದನು. ಅನಂತರ ಅವರ ಮುಂದೆ ವೀರಾವೇಶದಿಂದೆದ್ದು " ಶತ್ರುಗಳನ್ನು ಜಯಿಸಿದ ಹೊರತು ಉದಯಪುರವನ್ನು ನೋಡುವುದಿಲ್ಲ " ವೆಂದು ಶಪಥಮಾಡಿ ಒಡನೆಯೇ ಮಂತ್ರಿ ಸೇನಾನಾಯಕರನ್ನು ಕರೆಯಿಸಿ, ಅವರೆಲ್ಲರನ್ನೂ ಕುರಿತು— ಉದಯಪುರ ಸಂರಕ್ಷಣೆಗಾಗಿ ನಿಯಮಿಸಲ್ಪಟ್ಟಿರುವ ನಾಲ್ಕು ಸಾವಿರ ಸರದಾರರ ಹೊರತು ಮಿಕ್ಕವರೆಲ್ಲರೂ ಯುದ್ಧಸನ್ನದ್ಧರಾಗಿ ಈ ದಿನ ರಾತ್ರಿಯೇ ಹೊರಡಬೇಕು. " ಎಂದು ಆಜ್ಞಾಪಿಸಿದನು.

ಆ ದಿನ ಸಾಯಂಕಾಲ, ರಾಜಸಿಂಹನು ಈ ರೀತಿ ಪ್ರತಿಜ್ಞೆಯನ್ನು ಮಾಡಿ ಎಲ್ಲರನ್ನೂ ಯುದ್ಧಕ್ಕೆ ಹೊರಡಲು ಹುರುಪಿಸಿದ ಬಳಿಕ ದುರ್ಗಾಚರಣ ಜೋಯಿಸನನ್ನು ಕರೆಯಿಸಿ ಆತನೊಡನೆ ಸ್ವಲ್ಪ ಹೊತ್ತು ಆಲೋಚಿಸಿ, ಶುಭಕರವಾದ ಫಲವನ್ನು ಕೇಳಿ ಅತ್ಯಂತ ಸಂತೋಷಪಟ್ಟು ಉಚಿತವಾದ ಉಡಿಗೆಯನ್ನುಟ್ಟು ಪ್ರಯಾಣಕ್ಕೆ ಸನ್ನದ್ಧನಾದನು. ಇತ್ತ ಸೈನ್ಯಾಧಿಕಾರಿಗಳು ಎರಡು ಗಂಟೆಯೊಳಗಾಗಿ ಪ್ರಯಾಣಕ್ಕೆ ಸಿದ್ಧರಾಗಿ ಅರಮನೆಯ ಬಳಿ ಕಾದಿದ್ದರು. ರಾಜಸಿಂಹನು ಆನೆಯ ಮೇಲೆ ಕಟ್ಟಿದ್ದ ಒಂದು ಅಂಬಾರಿಯಲ್ಲಿ ಏರಿ ಕುಳಿತನು. ತತ್‌ಕ್ಷಣವೆ ಸುತ್ತುವರಿದಿದ್ದವರಿಂದ ಮಾಡಲ್ಪಟ್ಟ " ಜಯ ಜಯಕಾರ " ವೂ ವಾದ್ಯಗಳ ರವಗಳೂ ಅಶ್ವಗಜಾದಿಗಳ ಸಂತೋಷಸೂಚಕಗಳಾದ ಧ್ವನಿಗಳೂ ಒಟ್ಟುಗೂಡಿ ಭೂನಭೋಂತರಾಳಗಳನ್ನು ಭೇದಿಸುವಂತಾದುವು.

ಹೀಗೆ ಸಂಭ್ರಮದಿಂದ ರಾಜಸಿಂಹನು ಹೊರಟಕೂಡಲೆ ಮುಂದೆ ಕೆಲವು ಸೈನ್ಯವೂ ಆತನ ಹಿಂದೆ ಕೆಲವು ಸೈನ್ಯವೂ ಹೊರಟವು. ಸಾಮಂತರಾಜರು ಗಜಾರೂಢರಾಗಿಯೂ ರಥಾರೂಢರಾಗಿಯೂ ಹೊರಟರು. ಈ ಸಂಭ್ರಮವನ್ನು ನೋಡಲು ಪೌರರೆಲ್ಲರೂ ಉಪ್ಪರಿಗೆಗಳ ಮೇಲೆಯೂ ಬುರುಜುಗಳ ಮೇಲೆಯೂ ಹತ್ತಿ ನಿಂತಿದ್ದರು. ಸೂರ್ಯೋದಯವಾಗುವ ವೇಳೆಗೆ ಸೈನಿಕರಲ್ಲಿ ಒಬ್ಬರೂ ನಿಲ್ಲದೆ, ಎಲ್ಲರೂ ಉದಯಪುರವನ್ನು ಬಿಟ್ಟು ಯುದ್ಧರಂಗಕ್ಕೆ ಹೊರಟು ಹೋಗಿದ್ದರು.

ಮೂವತ್ತೆರಡನೆಯ ಪ್ರಕರಣ.

(ಯಮುನಾ ನದಿ)

ಫರುಕ್‌ಷೈರನನ್ನು ತನ್ನ ಮಾಯಾ ಜಾಲದಲ್ಲಿ ಸಿಲುಕಿಸಿಕೊಂಡು ರೋಷನಾರೆಯು ಇಂದಿರೆಗೆ ಮಾಡಬೇಕೆಂದಿದ್ದ ಮೋಸಗಳನ್ನು ನಮ್ಮ ಫಕೀರನು ಉಪಾಯದಿಂದ ತಿಳಿದುಕೊಂಡನು. ನದಿಯಲ್ಲಿ ಬೀಳದಂತೆ ಇಂದಿರೆಯನ್ನು ಆರಾತ್ರಿ ಹೇಗಾದರೂ ಮಾಡಿ ತಪ್ಪಿಸಬೇಕೆಂದು ತಕ್ಕ ಉಪಾಯವನ್ನು ಯೋಚಿಸುತ್ತಿದ್ದನು. ಕಾಲಾತೀತವಾಗುವ ಮೊದಲೇ ತನ್ನ ಉಪಾಯವನ್ನಾಲೋಚಿಸಲು ಫರುಕ್‌ಷೈರನನ್ನು ಕಳುಹಿಸಿಬಿಟ್ಟು ತನ್ನಲ್ಲಿಯೇ ಆಲೋಚಿಸುತ್ತ ರಾಣಿವಾಸದ ಬಳಿಗೆ ಬರುವಷ್ಟರಲ್ಲಿಯೇ ನಯನಪಾಲನು ಫಕೀರನಂತೆ ವೇಷವನ್ನು ಹಾಕಿಕೊಂಡು ರಾಣಿವಾಸದ ದ್ವಾರದಲ್ಲಿ ನಮ್ಮ ಫಕೀರನನ್ನು ಇದಿರ್ಗೊಂಡನು. ಇವನು ಕಾರಾಗೃಹದಿಂದ ತಪ್ಪಿಸಿಕೊಂಡು ಬಂದಂದಿನಿಂದಲೂ ಹೇಗಾದರೂ ಮಾಡಿ ಇಂದಿರೆ

ಯನ್ನು ಕಾಪಾಡಬೇಕೆಂದು ಅನೇಕ ವೇಷಗಳನ್ನು ಧರಿಸಿ ಪ್ರತಿದಿನವೂ ಅಂತಃಪುರವನ್ನು ಪ್ರವೇಶಿಸುತ್ತ ನಯನಪಾಲನು ಅಲ್ಲಿಯ ರಹಸ್ಯಗಳೆಲ್ಲವನ್ನೂ ತಿಳಿದುಕೊಂಡಿದ್ದನು. ಅನೇಕ ವೇಳೆ ನಮ್ಮ ಫಕೀರನೂ ನಯನಪಾಲನೂ ಪರಸ್ಪರ ನೋಡುತ್ತಿದ್ದರೂ ಒಬ್ಬರಲ್ಲೊಬ್ಬರು ಎಂದೂ ಮಾತನಾಡಿರಲಿಲ್ಲ. ನಮ್ಮ ಫಕೀರನು ಕೆಲವು ದಿನಗಳ ವರೆಗೆ ನಯನಪಾಲನನ್ನು ಗುರುತಿಸದಿದ್ದರೂ ಕ್ರಮಕ್ರಮವಾಗಿ ಆತನು ನಯನಪಾಲನೆಂದೂ ಇಂದಿರೆಯನ್ನು ರಕ್ಷಿಸುವುದಕ್ಕಾಗಿ ಪ್ರಯತ್ನಿಸುತ್ತಿರುವನೆಂದೂ ತಿಳಿದುಕೊಂಡನು. ಸಮಯ ಬಂದಾಗ ಆತನನ್ನು ಮಾತನಾಡಿಸಿ ಆತನ ಸಹಾಯವನ್ನು ಹೊಂದಬೇಕೆಂದಿದ್ದುದರಿಂದ ಫಕೀರ ವೇಷದಿಂದ ಬಂದ ನಯನಪಾಲನನ್ನು ಮಾತನಾಡಿಸಲು ಇದೇ ಸಮಯವೆಂದು ಭಾವಿಸಿ ಆತನೊಡನೆ ಸಂಭಾಷಣೆಗೆ ಪ್ರಾರಂಭಿಸಿದರು.

ಫಕೀರ:— ಹೋ ಫಕೀರ್ಜೀ! ಸಲಾಂ. ಎಲ್ಲಿಗೆ ಹೋಗುತ್ತಿರುವಿರಿ?

ನಯನ:— ಜನಾನಾದೊಳಗೆ ಭಿಕ್ಷೆಗಾಗಿ ಹೋಗುತ್ತಿರುವೆನು.

ಫಕೀರ:— ನೀವು ಫಕೀರ್ ದೀಕ್ಷೆಯಾಗಿ ಎಷ್ಟು ದಿನಗಳಾದುವು ?

ನಯನ:— ಆ ಸಂಗತಿಗಳೆಲ್ಲಾ ಏಕೆ?

ಫಕೀರ:— ಅಯ್ಯಾ! ನಿನ್ನ ಪೂರ್ವ ವೃತ್ತಾಂತವನ್ನೂ ಈಗ ನೀನು ವೇಷಧರನಾಗಿ ರಾಣಿವಾಸದೊಳಗೆ ಪ್ರವೇಶಿಸಿ ಮಾಡಬೇಕೆಂದಿರುವ ಕಾರ್ಯವಾವುದೆಂಬುದನ್ನೂ ನಾನು ಚನ್ನಾಗಿ ಬಲ್ಲೆನು. ನಾನು ಕೂಡ ಈ ವಿಷಯದಲ್ಲಿ ನಿನಗೆ ಗುರುವೇ ಸರಿ: ನಿಜಾಂಶವನ್ನು ಹೇಳು.

ಈ ಮಾತುಗಳಿಂದ ನಯನಪಾಲನು ಶಂಕೆಗೊಂಡು ಸುಮ್ಮನೇ ನಿಲ್ಲಲು, ನಮ್ಮ ಫಕೀರನು ಅವನನ್ನು ಕುರಿತು,— ಅಯ್ಯಾ! ಇನ್ನೂ ಅನುಮಾನವೇ? ನಿನ್ನ ಸಮಾಚಾರವನ್ನೆಲ್ಲವನ್ನೂ ನಾನು ಬಲ್ಲೆನು. ನೀನು ನಯನಪಾಲನಲ್ಲವೇ ” ಎಂದನು.

ಪಾಪ! ನಯನಪಾಲನು ಅತ್ಯಂತ ಭೀತಚಿತ್ತನಾಗಿ ಫಕೀರನ ಕೈಗಳನ್ನು ಹಿಡಿದುಕೊಂಡು ದೈನ್ಯವಾಣಿಯಿಂದ— “ಸ್ವಾಮಿ, ದಯೆಯಿಟ್ಟು ನನ್ನ ರಹಸ್ಯವನ್ನು ಒಬ್ಬರಿಗೂ ತಿಳಿಸಬೇಡಿ; ಈ ದಿನ ನನ್ನನ್ನು ಹೇಗಾದರೂ ಮಾಡಿ ಕಾಪಾಡಿರಿ! ನಿಮಗೆ ಬೇಕಾದ ಬಹುಮಾನಗಳನ್ನು ಕೊಡುವೆನು.” ಎಂದು ಅಭಯವನ್ನಿತ್ತು ನಯನಪಾಲನು ಫಕೀರನನ್ನೊಡಗೊಂಡುಹೋಗಿ ರಹಸ್ಯವಾದೆಡೆಗೆ ಕರೆದೊಯ್ದು ಹೀಗೆ ಕೇಳಿದನು. “ಸ್ವಾಮಿ! ತಮ್ಮ ವಾಸಸ್ಥಾನವಾವುದು ?

ಫಕೀರ:— ಅಯ್ಯಾ! ಫಕೀರರಿಗೆ ಒಂದೇ ಕಡೆ ವಾಸವುಂಟೇ? ಭಕ್ತರ ಕೋರಿಕೆಗಳನ್ನು ನೆರವೇರಿಸುವುದೇ ನಮ್ಮ ಕೆಲಸ. ನಿನ್ನ ಮುಖವನ್ನು ನೋಡಿದ ಕೂಡಲೆ ನೀನೊಬ್ಬ ರಾಜಪುತ್ರನೆಂದು ತಿಳಿದುಕೊಂಡೆನು. ಇಷ್ಟೇ ಅಲ್ಲ, ಇಂದಿರೆಯನ್ನು ಈ ನರಕವಾಸದಿಂದ ಬಿಡಿಸಿ ಕಾಪಾಡಬೇಕೆಂದು ನೀನು ಅಂತಃಪುರವನ್ನು ಪ್ರತಿನಿತ್ಯವೂ ಪ್ರವೇಶಿಸುತ್ತಿರುವುದನ್ನು ಕೂಡ ತಿಳಿದಿರುವೆನು. ಒಳ್ಳೆಯದು, ಇಂದಿರೆ ಎಲ್ಲಿರುವಳೆಂಬುದನ್ನೇನಾದರೂ ಬಲ್ಲೆಯೋ?

ನಯನ:—ನಿಮ್ಮ ಮಾತಿನಿಂದ ಆಕೆ ತಪ್ಪಿಸಿಕೊಂಡು ಓಡಿಹೋಗಿರುವಳೆಂದು ತಿಳಿಯುತ್ತದೆ. ಹಾಗಾಗಿದ್ದರೆ ನಾನು ಧನ್ಯನಾದೆನು.

ಫಕೀರ:— ಓಡಿಹೋಗಲಿಲ್ಲ. ರೋಷನಾರೆಯ ಸಮೀಪದಲ್ಲಿರುವಳು.

ನಯನ:— ಉದಯಪುರಿಯ ಸೇನೆಯನ್ನು ಬಿಟ್ಟು, ಕ್ರೂರಳಾದ ರೋಷನಾರೆಯಲ್ಲಿರಲು ಕಾರಣವೇನು? ಎಲ್ಲಿರುವಳು?

ಫಕೀರ:— ಅವಳ ಆಗ್ರಹಕ್ಕೆ ಕಾರಣಳಾದುದರಿಂದ ಕಾರಾಗ್ರಹದಲ್ಲಿಡಲ್ಪಟ್ಟಿರುವಳು.

ನಯನ:— ಹಾ! ಕಷ್ಟ, ಕಷ್ಟ ! ಆಪತ್ತಿನಲ್ಲಿ ಸಿಕ್ಕಿರುವ ಇಂದಿರೆಗೆ ದಿಕ್ಕಾರು?

ಫಕೀರ:— ಮತ್ತಾರು ಬೇಕು! ಯಮುನಾ ನದಿಯೇ !

ನಯನ:— ಹಾಗೆಂದರೇನು? ವಿಚಾರವೇನು?

ಫಕೀರ:— ಅಯ್ಯಾ! ವಿಚಾರವನ್ನೆಲ್ಲ ಆನಂತರ ತಿಳಿಸುವೆನು. ಮುಖ್ಯವಾದ ವಿಷಯವನ್ನು ಕೇಳು. ಈ ದಿನ ರಾತ್ರಿ ರೋಷನಾರೆಯು ಇಂದಿರೆಯನ್ನು ಯಮುನಾ ನದಿಯಲ್ಲಿ ಎತ್ತಿ ಹಾಕುವಳು. ಈ ರಹಸ್ಯವನ್ನು ನಾನು ಇದೇ ತಿಳಿದು ಬಂದೆನು. ಈ ಪಟ್ಟಣದಲ್ಲಿ ನನಗೆ ಪರಿಚಿತರಾರೂ ಇಲ್ಲ. ನಾವು ಹೀಗೆ ಕಾಲಯಾಪನೆ ಮಾಡಿದರೆ ಪ್ರಯೋಜನವಿಲ್ಲ. ಆದುದರಿಂದ ನೀನು ಈ ದಿನ ಹೇಗಾದರೂ ಮಾಡಿ ಒಂದು ದೋಣಿಯನ್ನು ಸಂಪಾದಿಸಬೇಕು. ನಾವಿಬ್ಬರೂ ದೋಣಿಯನ್ನು ಹತ್ತಿ ಈ ರಾತ್ರಿ ಯಮುನಾ ನದಿಯಲ್ಲಿ, ರಹಸ್ಯವಾಗಿದ್ದು ಆಕೆಯ ಪ್ರಾಣವನ್ನು ರಕ್ಷಿಸಬೇಕು. ”

ನಯನ:— ದೋಣಿಯನ್ನು ಈಗಲೇ ಸಂಪಾದಿಸುವೆನು ಅದಕ್ಕೇನೂ ಚಿಂತಿಸಬೇಕಾಗಿಲ್ಲ.

ಫಕೀರ:— ಹಾಗಾದರೆ ಜಾಗ್ರತೆಯಾಗಿ ಹೋಗುವ ಬಾ.

ಎಂದು ಹೇಳಿ ಇಬ್ಬರೂ ಅಲ್ಲಿಂದ ಹೊರಟುಹೋದರು. ಇಷ್ಟರಲ್ಲಿ ಕ್ರಮಕ್ರಮವಾಗಿ ಸೂರ್ಯನು ಪಶ್ಚಿಮಾದ್ರಿಯನ್ನು ಅಲಂಕರಿಸಿದನು. ಪಕ್ಷಿಸಂಕುಲಗಳು ಕಲಕಲರವವನ್ನು

ಮಾಡುತ್ತ ಗಗನಮಾರ್ಗದಲ್ಲಿ ಹಾರಾಡುತ್ತಿದ್ದುವು. ನೋಡುತ್ತಲಿದ್ದಂತೆಯೇ ಎಂತಹ ಕಲ್ಲೆದೆಯನ್ನಾದರೂ ಕದಲಿಸುವಂತಹ ಗಾಢಾಂಧಕಾರವು ಆಕ್ರಮಿಸಿ ಒಬ್ಬರ ಮುಖವಿನ್ನೊಬ್ಬರಿಗೆ ಕಾಣದಂತಾಯಿತು. ಈ ಮಹಾಂಧಕಾರದಲ್ಲಿ ನೀಲವರ್ಣವಾದ ಜಲದಿಂದ ಪೂರ್ಣವಾಹಿನಿಯಾಗಿದ್ದ ಯಮುನಾ ನದಿಯು ನೋಡಲು ಅತ್ಯಂತ ಭಯಂಕರವಾಗಿದ್ದಿತು. ನದಿಯ ತರಂಗಗಳು ಮಹಾರಭಸದಿಂದ ಅಲ್ಲಕಲ್ಲೋಲವಾಗಿ ಉಬ್ಬಿ ಹೊರಳಾಡುತ್ತಿದ್ದುವು. ಎತ್ತ ನೋಡಿದರೂ ಎಲೆಗಳ ಶಬ್ದವೇ ಹೊರತು ನೀಲವರ್ಣದ ಜಲಪ್ರದೇಶವಾಗಲಿ ನದಿಯ ದಡಪ್ರದೇಶವಾಗಲಿ ಯಾವುದೂ ಕಾಣುತ್ತಿರಲಿಲ್ಲ. ಆದರೆ, ನದಿಯ ಒಂದು ಪಕ್ಕದಲ್ಲಿ ರೋಷನಾರೆಯ ಜನಾನವಿದ್ದಿತು. ಆಕೆಯಿದ್ದ ಸೌಧವು ಬಹು ಎತ್ತರವಾಗಿದ್ದುದರಿಂದ ಕೆಲವು ದೀಪಗಳು ಮಾತ್ರ ಕಾಣುತ್ತಿದ್ದುವು. ಈ ಸೌಧದ ಕೋಟೆಯ ಬುರುಜಿನ ಸಮೀಪದಲ್ಲಿಯೇ ನದಿಯು ಅತಿವೇಗದಿಂದ ಹರಿಯುತ್ತಿದ್ದಿತು.

ಆ ದಿನ ರಾತ್ರಿ ರೋಷನಾರೆಯು ತನ್ನ ಮುಖ್ಯ ಸೇವಕನಾದ ಫರುಕ್‌ಖೈರನನ್ನು ಹೊರತು ಮಿಕ್ಕವರೆಲ್ಲರನ್ನೂ ಆವಾವುದೋ ಕೆಲಸದ ನೆವ ಮಾಡಿ ಹೊರಗೆ ಕಳುಹಿದ್ದಳು. ರಾತ್ರಿ ಒಂದೂರೆ ಜಾವವಾಯಿತು; ಪಟ್ಟಣದವರೆಲ್ಲರೂ ನಿದ್ರಿಸುತ್ತಿದ್ದುದರಿಂದ ಡಿಲ್ಲೀನಗರವೇ ನಿಶ್ಶಬ್ದವಾಗಿ ನಿದ್ರಿಸುವಂತಿದ್ದಿತು. ಎತ್ತ ನೋಡಿದರೂ ಮನುಷ್ಯಸಂಚಾರವಿರಲಿಲ್ಲ. ಆ ಸಮಯದಲ್ಲಿ ಪುರುಷರಿಬ್ಬರು ಒಂದು ದೋಣಿಯಲ್ಲಿ ಕುಳಿತು ಯಮುನಾ ನದಿಯಲ್ಲಿ ಒಂದು ಕಡೆಯಿಂದ ಬರುತ್ತಿದ್ದರು. ಅಲೆಗಳ ಹೊಡೆತದಿಂದ ಬಾರಿಬಾರಿಗೂ ಆ ದೋಣಿ ಅತ್ತಿತ್ತ ಹೊರಳುತ್ತಿದ್ದುದರಿಂದ ಆ ಪುರುಷರಿರ್ವರೂ ತಮ್ಮ ಪ್ರಾಣಗಳನ್ನು ಕೈಯಲ್ಲಿ ಹಿಡಿದುಕೊಂಡು ಅತಿ ಪ್ರಯಾಸದಿಂದ ಬರುತ್ತಿದ್ದರು. ಪ್ರವಾಹವೇಗದಿಂದ ಆ ದೋಣಿಯು ಯಾವ ಮೂಲೆಗೆ ಹೊರಟುಹೋಗುವುದೋ ಎಂದು, ಪಾಪ, ಆ ಪುರುಷರಿಬ್ಬರೂ ಭಯಾಕುಲಚಿತ್ತರಾಗಿ ಕಷ್ಟವನ್ನು ಗಣಿಸದೆ ಬಹುಪ್ರಯಾಸದಿಂದ ದೋಣಿಯನ್ನು ಎಳೆದುಕೊಂಡು ಬರುತ್ತಿದ್ದುದನ್ನು ನೋಡಿದರೆ ಇದೇ ಅವರಿಗೆ ಪ್ರಥಮಪ್ರಯತ್ನವೆಂದು ಹೇಳಬೇಕಾಗಿರುವುದು. ಸ್ವಲ್ಪ ಹೊತ್ತಿಗೆ ಆ ದೋಣಿಯು ರೋಷನಾರೆಯ ಸೌಧದ ದಕ್ಷಿಣ ಬುರುಜಿನ ಗೋಡೆಗೆ ಸಮೀಪವಾಗಿ ನಿಂತಿತು. ಆಗ ಅವರು ತಮ್ಮ ದೋಣಿಯನ್ನು ನಿಲ್ಲಿಸಿದರೂ ಪ್ರವಾಹವೇಗದಂತೆ ಒಂದು ಕಡೆಗೆ ಎಳೆಯುತ್ತಲೇ ಇದ್ದಿತು. ಇಷ್ಟರಲ್ಲಿ ಆ ಬುರುಜಿನ ಮೇಲೆ ಆವುದೋ ಶಬ್ದವಾಗಿ ಯಾರೋ ಮಾತಾಡುತ್ತಿರುವಂತೆ ದೋಣಿಯಲ್ಲಿದ್ದವರಿಗೆ ತಿಳಿದಿತು. ಆದರೆ, ಕತ್ತಲೆಯು ಅತ್ಯಂತ ದಟ್ಟವಾಗಿದ್ದುದರಿಂದ ಕೆಳಗಿದ್ದವರು ಮೇಲಿದ್ದವರಿಗಾಗಲಿ, ಮೇಲಿದ್ದವರು ಕೆಳಗಿನವರಿಗಾಗಲಿ ಕಾಣಿಸಲು ಅವಕಾಶವಿಲ್ಲದೆ ಹೋಯಿತು. ಆದರೂ ದೋಣಿಯಲ್ಲಿದ್ದ ಪುರುಷರಿಬ್ಬರೂ ಮೇಲೆಯೇ ದೃಷ್ಟಿಯನ್ನು ಇಟ್ಟಿದ್ದರು. ಆಗ ಆ ಬುರುಜಿನ ಮೇಲಿನಿಂದ ಆವುದೋ ವಸ್ತುವೊಂದು ಮೆಲ್ಲಗೆ ಕೆಳಗೆ ಬರುತ್ತಿದ್ದಂತೆ ಕಾಣಬಂದಿತು. ತತ್‌ಕ್ಷಣವೇ ಅವರಿಬ್ಬರೂ ಮೆಲ್ಲನೆ ಮಾತನಾಡಿಕೊಳ್ಳುತ್ತ ತಮ್ಮ ದೋಣಿಯನ್ನು ಬುರುಜಿನ ಗೋಡೆಗೆ ಸಮೀಪವಾಗಿ ನಿಲ್ಲಿಸಿದರು. ಕ್ರಮಕ್ರಮವಾಗಿ ಆ ವಸ್ತು ಕೆಳಗೆ ಬಂದು ನೀರಿಗೆ ತಗಲಿದ ಕೂಡಲೆ ಅದಕ್ಕೆ ಕಟ್ಟಿದ್ದ ಹಗ್ಗವೂ ಸಹ ತೊಪ್ಪನೆ ನೀರಿನ ಮೇಲೆ ಬಿದ್ದಿತು. ಆಗ ನದಿಯಲ್ಲಿದ್ದ ಪುರುಷರಿಬ್ಬರೂ ತತ್‌ಕ್ಷಣವೇ ಆ ವಸ್ತುವನ್ನು ಹಿಡಿದುಕೊಂಡು ತಮ್ಮ ದೋಣಿಯಲ್ಲಿರಿಸಿ ಕೈಗಳಿಂದ ಮುಟ್ಟಿನೋಡಿ ಕುತೂಹಲದಿಂದ—"ಏನಿದು, ಧರಿಸಿರುವ ವಸ್ತ್ರಾದಿಗಳನ್ನು ನೋಡಿದರೆ ಪುರುಷನಂತಿರುವುದು." ಎಂದು ಮಾತನಾಡುತ್ತ ಆ ಮನುಷ್ಯನ ನೆನೆದುಹೋಗಿದ್ದ ಬಟ್ಟೆಗಳನ್ನು ತೆಗೆದು ಬೇರೆ ಬಟ್ಟೆಗಳನ್ನುಡಿಸಿ ದೋಣಿಯ ಒಂದು ಮೂಲೆಯಲ್ಲಿ ಮಲಗಿಸಿ ಜೀವದಿಂದಿರುವನೋ ಇಲ್ಲವೋ ಎಂಬ ಶಂಕೆಯಿಂದ ಆತನ ಎದೆಯ ಮೇಲೆ ಕೈಯನ್ನಿಟ್ಟು ನೋಡಲು ಎದೆಯು ದಡದಡನೆ ಹೊಡೆದುಕೊಳ್ಳುತ್ತಿದ್ದುದರಿಂದ ಮೂರ್ಛಿತನಾಗಿರುವನೆಂದು ತಿಳಿದು ಸ್ವಲ್ಪ ಸಮಾಧಾನಪಟ್ಟರು. ಅಷ್ಟರಲ್ಲಿ ನೋಡಲನಂತೆಯೇ ಬುರುಜಿನ ಮೇಲಿನಿಂದ ಪುನಃ ಮತ್ತೆ ಯಾವುದೋ ಒಂದು ವಿಗ್ರಹವು ಕೆಳಗಿಳಿಸಲ್ಪಡುತ್ತಿದ್ದುದನ್ನು ಕಂಡು ಇಬ್ಬರೂ ಸಂತೋಷದಿಂದ—"ನಮಗೆ ಬೇಕಾದ ವಸ್ತುವೇ ಇದಾಗಿರಬಹುದು" ಎಂದು ಹೇಳುತ್ತ ನೀರಿನ ಹತ್ತಿರಕ್ಕೆ ಬರುತ್ತಿದ್ದ ಆ ವಿಗ್ರಹವನ್ನು ತಮ್ಮ ಕೈಗಳಿಂದ ಹಿಡಿದುಕೊಂಡು ಆನಂದದಿಂದುಬ್ಬಿ ದೋಣಿಯ ಮತ್ತೊಂದು ಮೂಲೆಯಲ್ಲಿ ಮಲಗಿಸಿ ಮತ್ತಾರಾದರೂ ಬರುವರೇನೋ ಎಂದು ಸ್ವಲ್ಪ ಹೊತ್ತು ನಿರೀಕ್ಷಿಸಿ, ಬುರುಜಿನ ಮೇಲೆ ಮನುಷ್ಯರ ಕಂಠಸ್ವರವು ಪೂರ್ಣವಾಗಿ ನಿಂತುಹೋದ ಕೂಡಲೆ ತಮ್ಮ ದೋಣಿಯನ್ನು ಅಲ್ಲಿಂದ ನಡೆಯಿಸುತ್ತ ಹೊರಟರು.

ದೋಣಿಯಲ್ಲಿ ಮಲಗಿದ್ದ ಇಂದಿರೆಗೂ ಪುರುಷನಿಗೂ ಒಬ್ಬನು ಉಪಚರಿಸುತ್ತಲಿದ್ದನು. ಮತ್ತೊಬ್ಬನು ದೋಣಿಯನ್ನು ನಡೆಯಿಸುತ್ತಿದ್ದನು. ಹೀಗೆ ಆ ರಾತ್ರಿ ನದಿಯಲ್ಲಿ ಸ್ವಲ್ಪ ದೂರ ಪ್ರಯಾಣಮಾಡಿದ ಬಳಿಕ ತಮ್ಮ ಬಳಿಯಲ್ಲಿದ್ದ ಚಕಮುಕಿ ಕಲ್ಲನ್ನು ತೆಗೆದು ಅಗ್ನಿಯನ್ನುಂಟುಮಾಡಿ ಮೂರ್ಛೆ ಬಿದ್ದಿದ್ದ ಎರಡು ವಿಗ್ರಹಗಳನ್ನೂ ನೋಡಿ ಇಂದಿರಾ ದುರ್ಗಾದಾಸರೆಂದು ತಿಳಿದು ತಾವು ಕೋರಿದುದಕಿಕ್ಕ

ಅಧಿಕಲಾಭವಾಯಿತೆಂದು ಸಂತೋಷಿಸಿ ಮುಂದೆ ಹೊರಟರು. ಆನಂತರ ಉಪಚಾರ ಮಾಡುತ್ತಿದ್ದ ಪುರುಷನು ದೋಣಿಯನ್ನು ನಡೆಯಿಸುತ್ತಿದ್ದವನನ್ನು ಕುರಿತು,—“ಅಯ್ಯಾ! ನಾನು ಮಾಡುವ ಕಾರ್ಯಗಳು ಇನ್ನೂ ಅನೇಕವಾಗಿರುವುವು. ಇನ್ನು ನಾನು ನಿನ್ನೊಡನೆ ಬರಲಾರೆನು. ನಾವು ಡಿಲ್ಲೀ ನಗರವನ್ನು ದಾಟಿ ಬಹು ದೂರ ಬಂದಿರುವೆವು. ನೀನಿರುವ ಗ್ರಾಮವು ಇಲ್ಲಿಗೆ ಸಮೀಪವಾಗಿಯೇ ಇರುವುದು. ಇನ್ನು ನೀನು ಇಬ್ಬರನ್ನೂ ಕರೆದುಕೊಂಡು ಹೋಗಿ ಕಾಪಾಡುತ್ತಿರು” ಎನ್ನಲಾತನು, ಅತ್ಯಂತ ಕೃತಜ್ಞತೆಯಿಂದ ಆತನನ್ನು ವಂದಿಸಿ ಹೊರಡಲನುಮತಿಸಲು, ಆತನು ದೋಣಿಯಿಂದಿಳಿದು ಪಕ್ಕದಲ್ಲಿದ್ದ ಗುಡ್ಡವನ್ನು ಹತ್ತಿ ಎಲ್ಲಿಗೋ ಹೊರಟು ಹೋದನು. ದೋಣಿಯನ್ನು ನಡೆಯಿಸುತ್ತಿದ್ದವನು ಬಹು ಜಾಗರೂಕತೆಯಿಂದ ನಡೆಯಿಸುತ್ತಿದ್ದನು. ಸ್ವಲ್ಪ ಹೊತ್ತಿನೊಳಗಾಗಿ ಇಂದಿರಾ ದುರ್ಗಾದಾಸರು ಮೂರ್ಛೆಯಿಂದೆಚ್ಚೆತ್ತು ನಾಲ್ಕು ಕಡೆಯನ್ನೂ ನೋಡುತ್ತ ತಾವು ನೀರಿನ ಮೇಲೆ ಹೋಗುತ್ತಿರುವುದನ್ನು ತಿಳಿದು ದಿಗ್ಭ್ರಮೆ ಹೊಂದಿ ಸುಮ್ಮನೆ ನೋಡುತ್ತಿರಲು, ಅವರ ಆಂದೋಳನವನ್ನು ನೋಡಿ ದೋಣಿಯನ್ನು ನಡೆಯಿಸುತಿದ್ದಾತನು— “ನೀವು ವಿಚಾರಪಡಬೇಕಾಗಿಲ್ಲ. ನಿಮ್ಮ ಪ್ರಾಣಗಳನ್ನು ಈ ದಿನ ನಾನು ಕಾಪಾಡಿದೆನು. ಇಲ್ಲದಿದ್ದಲ್ಲಿ ಆ ಕ್ರೂರಾತ್ಮಳಾದ ರೋಷನಾರೆಯು ನಿಮ್ಮನ್ನು ಕೊಲ್ಲಿಸುತ್ತಿದ್ದಳು.” ಎಂದು ಧೈರ್ಯವನ್ನು ಹೇಳಿದನು. ಅದನ್ನು ಕೇಳಿದ ಕೂಡಲೆ ದುರ್ಗಾದಾಸನು ಧಿಗ್ಗನೆದ್ದು ಮುಂದೆ ಬಂದು ಆತನ ಬಳಿಯಲ್ಲಿ ಕುಳಿತು ಕೃತಜ್ಞತೆಯಿಂದ—

“ಅಯ್ಯಾ! ನಮ್ಮನ್ನು ಕಾಪಾಡಿದ ನೀನಾರು? ನೀನು ಮಾಡಿರುವ ಉಪಕಾರಕ್ಕೆ ನಾವು ಹೇಗೆ ಪ್ರತ್ಯುಪಕಾರ ಮಾಡಬೇಕು?

ನಯನ:— ಅಯ್ಯಾ! ನಾನು ಯಾರಾದರೇನು? ನಿಮಗೆ ಅಪಕಾರ ಮಾಡಿದವನೇ ಹೊರತು ಉಪಕಾರಿಯಲ್ಲ. ನಾನು ನಿಮಗೆ ಮಾಡಿರುವ ಅಪಕಾರಕ್ಕಾಗಿ ನಿಮ್ಮ ಸೇವೆಯನ್ನೆಷ್ಟು ದಿನ ಮಾಡಿದರೂ ನಿಮ್ಮ ಅನುಗ್ರಹಕ್ಕೆ ಪಾತ್ರನಾಗುವಂತಿಲ್ಲ. ಪಾಪ, ಭೂಯಿಷ್ಠವಾದೀ ದೇಹವನ್ನಿರಿಸಿಕೊಂಡಿರಬೇಕೆಂಬ ಅಭಿಲಾಷೆ ನನಗೆ ಸ್ವಲ್ಪವೂ ಇಲ್ಲ. ಇನ್ನು ನೀವಿಬ್ಬರೂ ಎಲ್ಲಿಗಾದರೂ ಹೋಗಿ ಜೀವದಿಂದಿದ್ದು ಸುಖವಾಗಿರುವಿರಾದರೆ, ನಾನು ಧನ್ಯನಾದೆನೆಂದೇ ತಿಳಿದು ನನ್ನೀ ಜನ್ಮವನ್ನು ಕೊನೆಗಾಣಿಸಿಕೊಳ್ಳುವೆನು.

ದುರ್ಗಾ:—ಅಯ್ಯಾ! ನಿನ್ನೀ ಸಾಹಸಕ್ಕೆ ಕಾರಣವೇನು? ನೀನಾರು? ನಿನ್ನ ಕಂಠಧ್ವನಿಯನ್ನು ಕೇಳಿದರೆ ಎಲ್ಲಿಯೋ ಕೇಳಿರುವಂತೆ ತೋರುವುದು. ಆ ನಯನಪಾಲನೊಬ್ಬನು ಹೊರತು ನಮ್ಮನ್ನು ಮೋಸಪಡಿಸಿದವನು ಮತ್ತಾವನೂ ಇಲ್ಲ.

ನಯನ:— ಅಯ್ಯಾ! ನಿಮ್ಮಲ್ಲಿ ನಿಮ್ಮಲ್ಲಿ ದ್ರೋಹಿಯಾಗಿರುವ ನಯನಪಾಲನೆಂಬ ನೀಚನೇ ನಾನು,—ಎಂದರೆ, ನೀನು ಪ್ರಕಾರಾಂತರವಾಗಿ ಭಾವಿಸಬೇಕಾಗಿಲ್ಲ. ಈಗ ನಾನು ಮೊದಲಿನ ನಯನಪಾಲನಾಗಿಲ್ಲ. ನನ್ನ ವೃತ್ತಾಂತವನ್ನು ಸಮಗ್ರವಾಗಿ ಹೇಳುವೆನು, ಕೇಳು.” ಎಂದು ಚಂದ್ರಾವತಿಯನ್ನು ಕರೆತರಲು ಬಂದುದುಮೊದಲು, ಫಕೀರನ ಸಹಾಯವನ್ನು ಪಡೆದು ಇಂದಿರಾ ದುರ್ಗಾದಾಸರ ಪ್ರಾಣಗಳನ್ನು ಕಾಪಾಡಿ ಕರೆತಂದ ವರೆಗೂ ವಿವರಿಸಿದನು. ಅದನ್ನು ಕೇಳಿ ದುರ್ಗಾದಾಸನು ವಿಸ್ಮಯಕುತೂಹಲಗಳಿಂದ—“ನಯನಪಾಲ! ಆಪದ್ಬಂಧುವಾದ ಆ ಫಕೀರನು ಈಗಳೆಲ್ಲಿರುವನು?” ಎಂದನು.

ನಯನ:— ನಿಮ್ಮಿಬ್ಬರನ್ನೂ ನನಗೊಪ್ಪಿಸಿ ಆತನು ಈಗಲೇ ದೋಣಿಯಿಂದಿಳಿದು ಹೊರಟು ಹೋದನು.

ದುರ್ಗಾ:— “ಅಯ್ಯೋ! ನಮಗಿಷ್ಟು ಉಪಕಾರಮಾಡಿದ ಆ ಪುಣ್ಯಾತ್ಮನನ್ನು ನೋಡುವ ಭಾಗ್ಯವು ನಮಗಿಲ್ಲವಾಯಿತೇ ?” ಎಂದು ತುಂಬ ವ್ಯಥೆಪಟ್ಟನು.

ಇಂದಿರೆಯನ್ನು ನದಿಯಲ್ಲಿ ಹಾಕಿಸಿ ಕೊಲ್ಲಿಸಿದ ವರ್ತಮಾನವು ದುರ್ಗಾದಾಸನಿಗೆ ತಿಳಿದರೆ ಆತನಿಂದ ಪ್ರತೀಕಾರವಾಗದಿರಲಾರದೆಂದು ಶಂಕಿಸಿ, ಧೂರ್ತೆಯಾದ ರೋಷನಾರೆಯು ಫರುಕ್‌ಷೈರನ ಮೂಲಕ ಕಾರಾಗೃಹದಲ್ಲಿ ನಿದ್ರಿತನಾಗಿದ್ದ ದುರ್ಗಾದಾಸನನ್ನೂ ಹಿಡತರಿಸಿ, ಆತನ ಕಣ್ಣುಗಳನ್ನು ಕಟ್ಟಿಸಿ, ಇಬ್ಬರೂ ಸಾಯಲೆಂದಿಬ್ಬರನ್ನೂ ಒಟ್ಟಿಗೆ ನದಿಯಲಿ ಬಿಟ್ಟಳು. ಇಬ್ಬರೂ ಏಕಕಾಲದಲ್ಲಿ ನದಿಗೆ ಕೆಡುಹಲ್ಪಟ್ಟುದು ಕೂಡ ಶುಭಪ್ರದವೇ ಆಯಿತು. ಇರಲಿ, ನಯನಪಾಲನು ಪೂರ್ವದ ದುಸ್ವಭಾವವನ್ನು ಬಿಟ್ಟು ಪಶ್ಚಾತ್ತಾಪಪಡುತ್ತಿರುವುದನ್ನೂ ತಮ್ಮ ವಿಷಯದಲ್ಲಿ ಆತನು ತೋರಿಸುತ್ತಿದ ಗೌರವವನ್ನೂ ನೋಡಿ ದುರ್ಗಾದಾಸನು ಪರಮಾನಂದದಿಂದ ಆತನನ್ನು ಬಹುವಿಧವಾಗಿ ಅಭಿನಂದಿಸಿದನು. ಆ ಬಳಿಕ ನಯನಪಾಲನು ಶ್ರಾಂತರಾಗಿದ್ದಾ ಅಣ್ಣತಂಗಿಯರಿಬ್ಬರನ್ನೂ ಆ ರಾತ್ರಿ ತನ್ನ ಗ್ರಾಮಕ್ಕೆ ಕರೆದೊಯ್ದು ಆದರದಿಂದ ಉಪಚರಿಸಿ ಮರುದಿನವೇ ಆಬೂಪರ್ವತವನ್ನು ಕುರಿತು ಪ್ರಯಾಣ ಮಾಡಿದರು.

ಮೂವತ್ತ ಮೂರನೆಯ ಪ್ರಕರಣ.

(ಜೋಹರ್)

ರೂಪನಗರವನ್ನು ಮುತ್ತಿದ್ದ ಸಾದತ್‍ಖಾನನು, ವಿಜಯಸಿಂಹನ ಸಹಾಯಕ್ಕಾಗಿ ರಾಜಪುತ್ರರಾರಾದರೂ ಬರುವರೇನೆಂದು ಕ್ಷಣಕ್ಷಣದಲ್ಲಿಯೂ ಭಯಪಡುತ್ತಿದ್ದನು. ಈ ಕಾರಣದಿಂದ ಆತನು ತನ್ನ ಭಟರನ್ನು ನಾಲ್ಕು ದಿಕ್ಕುಗಳಿಗೂ ಕಳುಹಿಸಿ, ಹೊಸ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದನೆಂಬುದು ಈವರೆಗೆ ನಮಗೆ ತಿಳಿದೇ ಇರುವುದು. ಬಾದಶಹನು ಸೇನಾಸಮೇತನಾಗಿ ಎಂದಿಗೆ ಬರುವನೆಂದು ಇದಿರು ನೋಡುತ್ತ ಒಂದು ಕ್ಷಣವನ್ನು ಯುಗದಂತೆ ಕಳೆಯುತ್ತಿದ್ದನು. ಒಂದು ದಿನ ಆತನು,- "ಔರಂಗಜೇಬನು ಸೇನಾಸಮೇತನಾಗಿ ಬರುತ್ತಿರುವನು. ಇನ್ನು ಮೇಲೆ ನಿನ್ನ ಪ್ರಾಣಗಳು ನಿಲ್ಲಲಾರವು, ಈಗಲೇ ವಿಮಲಾದೇವಿಯನ್ನೊಪ್ಪಿಸಿ ಸಂಧಿ ಮಾಡಿಕೊಳ್ಳಬೇಕು." ಎಂದು ವಿಜಯಸಿಂಹನಿಗೆ ವರ್ತಮಾನವನ್ನು ಹೇಳಿ ಕಳುಹಿದನು. ಆಗ ಆ ರಾಜಶ್ರೇಷ್ಠನು ಆ ವಾರ್ತೆಯನ್ನು ತನ್ನ ಸೈನಿಕರಿಗೆ ತಿಳಿಸಿ, "ವಿಶ್ವಸನೀಯರೇ! ನೀವು ನಿಜವಾದ ರಜಪೂತವೀರಪುರುಷರಾಗಿದ್ದಲ್ಲಿ ಪೌರುಷವನ್ನು ವಹಿಸಿ ಪ್ರಾಣಗಳ ಮೇಲೆ ಆಶೆಯನ್ನು ತೊರೆದು ಮಹಮ್ಮದೀಯರೊಡನೆ ಹೋರಾಡಿರಿ." ಎಂದನು. ಸೈನಿಕರು ಆತನ ಆಜ್ಞೆಯನ್ನು ಶಿರಸಾವಹಿಸಿ ನೂತನೋತ್ಸಾಹದಿಂದ ಉಬ್ಬಿದವರಾಗಿ ಕೋಟೆಯ ಬುರುಜುಗಳನ್ನು ಹತ್ತಿ ಕತ್ತಿ, ಪಿರಂಗಿ, ತುಪಾಕಿ ಮೊದಲಾದವುಗಳಿಂದ ಸಾದತ್‍ಖಾನನು ಕಳುಹಿದ ಸೈನ್ಯಕ್ಕೆ ಪ್ರತ್ಯುತ್ತರವನ್ನು ಕೊಡಲಾರಂಭಿಸಿದರು. ಅಂದು ಮೊಗಲರು ರಾಜಪುತ್ರರ ಕೋಲಾಹಲವನ್ನು ತಾಳದೆ ಹೋದರು. ಮೊದಲೇ ಸಾದತ್‍ಖಾನನ ಸೈನ್ಯವು ಸ್ವಲ್ಪ; ಅದರಲ್ಲಿಯೂ ನಿದ್ರಾಹಾರಗಳಿಲ್ಲದೆ, ಆರು ತಿಂಗಳಿಂದಲೂ ಕೋಟೆಯನ್ನು ಮುತ್ತಿ ಬಲಹೀನರಾಗಿದ್ದರು. ಆದುದರಿಂದ ಅಂದು ಮಹಮ್ಮದೀಯರು ಸಂಪೂರ್ಣವಾಗಿ ಅಪಜಯವನ್ನು ಹೊಂದಿದರು. ಸಾದತ್‍ಖಾನನು ಅತಿಚತುರನಾಗಿದ್ದುದರಿಂದ ತಕ್ಷಣವೇ ಯುದ್ಧವನ್ನು ನಿಲ್ಲಿಸಬೇಕೆಂದು ತನ್ನ ಸೇನಾಪತಿಗೆ ಅಪ್ಪಣೆಯನ್ನಿತ್ತನು.

ತನ್ನ ಸೇನೆಯು ಪೂರ್ಣವಾಗಿ ಸೋತು ಹೋದುದರಿಂದಲೂ ಬಾದಷಹನು ಸೇನಾಸಮೇತನಾಗಿ ಬಾರದೆ ಹೋದುದರಿಂದಲೂ ರಾಜಪುತ್ರರು ಯಾವಕ್ಷಣದಲ್ಲಿ ಬಂದು ತನ್ನಮೇಲೆ ಬೀಳುವರೋ ಎಂಬ ಭೀತಿಯಿಂದಲೂ ಆತನ ಹೃದಯವು ಅಲ್ಲಕಲ್ಲೋಲವಾಗಿದ್ದಿತು. ಆದರೂ ಬುದ್ಧಿಶಾಲಿಯಾದ ಸಾದತ್‍ಖಾನನು ಉಪಾಯದಿಂದಲೇ ಗೆಲ್ಲಬೇಕೆಂದು ಯೋಚಿಸಿ ಬಾದಷಹನು ಸೇನಾಸಮೇತನಾಗಿ ಬರುತ್ತಿರುವನೆಂದೂ ವಿಜಯಸಿಂಹನೂ ಆತನ ಸೈನ್ಯವೂ ಹೆದರಿರುವರೆಂದೂ ವದಂತಿಯನ್ನು ಹುಟ್ಟಿಸಿದನು. ಇದನ್ನು ತಿಳಿದು ತಿಳಿದು ವಿಜಯಸಿಂಹನು ತನ್ನ ಸೈನ್ಯಕ್ಕೆ ಮತ್ತಷ್ಟು ಧೈರ್ಯವನ್ನು ಕೊಡುತ್ತ ಅತ್ಯಂತ ಜಾಗರೂಕನಾಗಿದ್ದನು. ಇಷ್ಟರಲ್ಲಿ ಸೂರ್ಯನು ಅಸ್ತಮಿಸಿದುದರಿಂದ ಜಗತ್ತೇ ಅಂಧಕಾರಮಯವಾಯಿತು.

ಆ ರಾತ್ರಿ, ಸಾದತ್‍ಖಾನನು ಸೈನ್ಯವನ್ನು ಕೆಲವು ಭಾಗಗಳನ್ನು ಮಾಡಿ ಮೂರು ನಾಲ್ಕು ಮೈಲಿಗಳು ವಿಸ್ತಾರವುಳ್ಳ ಪ್ರದೇಶದಲ್ಲಿ ಅಲ್ಲಲ್ಲಿ ಗುಂಪು ಗುಂಪಾಗಿರಿಸಿ, ತಾನು ಮಾತ್ರ ಕೆಲವು ಸೈನ್ಯದೊಡನೆ ಪಟ್ಟಣದ ಸಮೀಪದಲ್ಲಿಯೇ ಕಾದಿದ್ದನು. ಸಹಾಯಾರ್ಥವಾಗಿ ರಾಜಪುತ್ರರು ಯಾವ ದಿಕ್ಕಿನಿಂದ ಬಂದರೂ ಅವರ ಸಹಾಯವು ಸಕಾಲದಲ್ಲಿ ವಿಜಯಸಿಂಹನಿಗೆ ದೊರೆಯದಂತೆ ತಡೆಯಬಹುದೆಂದೂ ಸೈನ್ಯವೆಲ್ಲವೂ ಒಂದೇ ಕಡೆಯಲ್ಲಿದ್ದರೆ ತನ್ನ ರಹಸ್ಯವು ಹೊರಬೀಳಬಹುದೆಂದೂ ಈ ಉಪಾಯವನ್ನು ತೆಗೆದನು. ಮತ್ತು, ಅಡಿಗಡಿಗೆ ರಣದುಂದುಭಿಗಳನ್ನೂ ಜಯಭೇರಿಗಳನ್ನೂ ಹೊಡೆಯಿಸುತ್ತ ಅತ್ಯಂತ ಅಟ್ಟಹಾಸಗೈಯುತ್ತಿದ್ದನು. ಆತನ ಉದ್ದೇಶಕ್ಕೆ ಅನುಸಾರವಾಗಿ ರೂಪನಗರದ ಸೈನಿಕರು ಬಾದಶಹನು ಬಲವಾದ ಸೈನ್ಯದೊಡನೆ ಬಂದಿರುವನೆಂದೇ ತಿಳಿದರು; ಆದರೂ ಪ್ರಾಣದ ಮೇಲಿನ ಆಶೆಯನ್ನು ತೊರೆದು ಶತ್ರುಗಳೊಡನೆ ಪ್ರಚಂಡಯುದ್ಧ ಮಾಡಬೇಕೆಂದೇ ದೃಢ ಸಂಕಲ್ಪಮಾಡಿಕೊಂಡು ರಣೋನ್ಮತ್ತರಾಗಿದ್ದರು.

ವಿಜಯಸಿಂಹನು ಬಾದಷಹನು ಬಂದಿರುವನೆಂಬ ಸಂಗತಿಯನ್ನು ಕೇಳಿ ತನ್ನ ಸೈನ್ಯವು ಅಪರಿಮಿತವಾದ ಮೊಗಲ್‍ಸೇನೆಯೊಡನೆ ಹೇಗೆ ಪ್ರತಿಭಟಿಸುವುದೆಂದೂ ರಾಜಪುತ್ರರು ಈ ಸಮಯದಲ್ಲಿ ತನಗೆ ಸಹಾಯ ಮಾಡುವವರಾಗಿಲ್ಲವೆಂದೂ ಶಂಕಿಸಿದನು. ಆದರೂ ತ್ರಾಣಗುಂದಲಿಲ್ಲ, ಮನಸ್ಸಿನ ದೃಢವನ್ನು ಸಡಲಿಸಲಿಲ್ಲ; ಶತ್ರುಸೈನ್ಯವೆಷ್ಟಾದರೂ ಬರಲಿ, ಪ್ರಾಣವಿರುವವರೆಗೂ ಹೋರಾಡುವುದೇ ಸರಿಯೆಂದು ನಿಶ್ಚಯಿಸಿದನು. ಶತ್ರುಗಳನ್ನು ಉಪಾಯದಿಂದ ಹೊರಡಿಸಬಹುದೇನೆಂದು ಮತ್ತೆ ಯೋಚಿಸಿದನು; ಘೋರಯುದ್ಧವೊಂದಲ್ಲದೆ ಮತ್ತೇತರಿಂದಲೂ ಶತ್ರುಗಳನ್ನು ಚದರಿಸುವಂತಿಲ್ಲವೆಂದೂ ರೂಪನಗರವನ್ನು ಹಾಳುಮಾಡಿ, ರಾಜಪುತ್ರವಂಶವನ್ನು ನಿ—ರ್ಮೂಲಗೈದು ವಿಮಲೆಯನ್ನು ಹಿಡಿದೊಯ್ಯಬೇಕೆಂದಿರುವ ಶತ್ರುಗಳನ್ನು ಹೊರಡಿಸುವುದು ಸುಲಭವಲ್ಲವೆಂದೂ, ಜಗತ್ತೇ ತನ್ನ ಮೇಲೆ ಮುರಿದುಬಿದ್ದರೂ ತಾನು ತನ್ನ ಮಗಳನ್ನು ಯವನ ಸಮ್ರಾಟನಿಗೆ ಕೊಡುವುದಿಲ್ಲವೆಂದೂ ನಿರ್ಧ

ರಿಸಿ, ಸೈನಿಕರಿಗೆ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಿ ಯುದ್ಧಕ್ಕಾಗಿ ಹುರುಡಿಸುತ್ತಿದ್ದನು.

ತಂದೆಯ ಸಾಹಸ, ಪ್ರಯಾಸಗಳನ್ನು ನೋಡಿದ ವಿಮಲೆಯು ತಾನೂ ಸೈನಿಕರ ಉತ್ಸಾಹಶಕ್ತಿ ಇಮ್ಮಡಿಯಾಗುವಂತೆ ಹುರಿದುಂಬಿಸುತ್ತ ತನ್ನ ತಂದೆಗೆ ಅತ್ಯಂತ ಸಹಾಯಕಳಾಗಿದ್ದಳು. ಆದರೂ ಈ ರಾತ್ರಿಯಲ್ಲಿ ಇವಳ ಮುಖ ವಿಕಾಸವು ಕುಂದ ತನ್ನಿಂದ ತನ್ನ ತಂದೆಗೂ ತನ್ನ ಮಾತೃಭೂಮಿಗೂ ತನ್ನ ಪ್ರಜೆಗಳಿಗೂ ಎಂತೆಂತಹ ಅನರ್ಥಗಳುಂಟಾಗುವುವೋ ಎಂಬ ವ್ಯಾಕುಲವೂ, ರಾಜಸಿಂಹನೇ ತನಗೆ ರಕ್ಷಕನೆಂದೂ ಸಕಾಲದಲ್ಲಿ ಆತನು ಬಂದು ತನ್ನನ್ನು ವಿಪತ್ತಿನಿಂದ ಕಾಪಾಡುವನೆಂದೂ ನಂಬಿದ್ದ ತನಗೆ ಆತನ ಆಗಮನವೇ ಕಾಣಬರಲಿಲ್ಲವಾದುದರಿಂದ ಇನ್ನಾತನ ಸಹಾಯವಾಗುವಂತಿಲ್ಲವೆಂಬ ನಿರಾಶೆಯೂ ವ್ಯಕ್ತವಾಗುವಂತಿದ್ದಿತು. ತನ್ನ ಮನಸ್ಸಿನ ಉದ್ವೇಗವನ್ನು ಸಹಿಸಲಾರದೆ ರಜಪೂತರನ್ನು ಧಿಕ್ಕರಿಸುತ್ತಿದ್ದಳು; ಪದ್ಮೆಯು ವಿಮಲೆಯನ್ನು ಅನವರತವೂ ಎಡೆಬಿಡದೆ ಅನೇಕ ವಿಧದಿಂದ ಸಮಾಧಾನಪಡಿಸುತ್ತಿದ್ದಳು. ಆ ರಾತ್ರಿಯೆಲ್ಲ ಇಬ್ಬರೂ ನಿದ್ರೆಯಿಲ್ಲದೆ ಭೀತಿಯಿಂದಲೂ ಶೋಕದಿಂದಲೂ ಕಳವಳದಿಂದಲೂ ಮುಂದಿನ ತಮ್ಮ ಪರಿಣಾಮವೇನೆಂದು ವಿಚಾರಮಾಡುತ್ತಿದ್ದರು.

ಬರುತ ಬರುತ್ತ ಬೆಳಗಿನ ಜಾವವಾಯಿತು. ಆದರೆ ಇನ್ನೂ ಕತ್ತಲೆಯು ಪೂರ್ಣವಾಗಿ ಹೋಗಿರಲಿಲ್ಲ. ಆ ಸಮಯದಲ್ಲಿ ಉತ್ತರ ಭಾಗದಿಂದ ಕೆಲವು ಸೈನ್ಯವು ಅಸಂಖ್ಯಾತವಾದ ದೀಪಗಳಿಂದ ಕೂಡಿ ರೂಪನಗರದ ಕಡೆಗೆ ಬರುತ್ತಿದ್ದಿತು. ಸೈನಿಕರ ಸಂಖ್ಯೆ ಮಿತಿಮೀರಿದ್ದಿತು. ವಿಜಯಸಿಂಹನೂ ವಿಮಲೆಯೂ ಪದ್ಮೆಯೂ ಆ ಸೈನ್ಯವನ್ನು ನೋಡಿ ಡಿಲ್ಲಿನಗರದಿಂದ ಸೈನ್ಯವು ಬರುತ್ತಿರುವುದೆಂದು ನಿಶ್ಚಯಿಸಿದರು. ಶತ್ರುಸೈನ್ಯವು ಅಸಂಖ್ಯಾತವಾಗಿರುವುದೆಂದೂ ತಮ್ಮ ಸೈನ್ಯವು ಶತ್ರುಸೈನ್ಯವನ್ನು ತಡೆಯಲಾರದೆಂದೂ ಈ ಸಾರಿ ತಮಗೆ ಅಪಜಯವಾಗುವುದರಲ್ಲಿ ಸಂದೇಹವಿಲ್ಲವೆಂದೂ ನಿರ್ಧರಿಸಿದರು. ಮೊಗಲರ ಸೇನೆಯು ದುರ್ಗವನ್ನು ಪ್ರವೇಶಿಸುವುದಕ್ಕಿಂತ ಮೊದಲೇ ಸ್ತ್ರೀಯರ ಮಾನವನ್ನು ಕಾಪಾಡುವ ಪ್ರಯತ್ನಗಳನ್ನು ಮಾಡಬೇಕೆಂದು ವಿಜಯಸಿಂಹನು ವಿಮಲೆಯನ್ನು ಸಮೀಪಿಸಿ ಧೈರ್ಯದಿಂದ— “ ಅಮ್ಮಾ ವಿಮಲಾ! ಇಂದಿಗೆ ನಮಗೂ ರೂಪನಗರಕ್ಕೂ ಋಣವು ತೀರಿತು. ಬಾದಷಹನು ಪ್ರಬಲ ಸೇನಾಸಮೇತನಾಗಿ ಬಂದಿರುವನು ಇನ್ನೂ ಡಿಲ್ಲೀ ನಗರದಿಂದ ಸಾವಿರಾರು ಸೈನಿಕರು ಬರುತ್ತಲೇ ಇರುವರು. ಇಷ್ಟು ದಿನಗಳಿಂದಲೂ ಶತ್ರುಗಳೊಡನೆ ಹೋರಾಡಿ ಶ್ರಾಂತರಾಗಿರುವ ನಮ್ಮ ಸೈನಿಕರು ಆ ದೊಡ್ಡ ಸೈನ್ಯವನ್ನೆದುರಿಸುವುದು ಅಸಾಧ್ಯವು. ನಮಗೆ ಜಯವೆಂಬುದು ಇನ್ನು ಸ್ವಪ್ನಪ್ರಾಯವೇ ಸರಿ. ರಾಜಪುತ್ರರಲ್ಲಿ ಯಾರಾದರೂ ಸಹಾಯಕ್ಕಾಗಿ ಬರುವರೆಂದು ಈವರೆಗೂ ನಿರೀಕ್ಷಿಸಿದೆನು; ನಿಷ್ಫಲವಾಯಿತು. ಇನ್ನು ನಾನಾ ವಿಚಾರವಾಗಿ ಸ್ವಲ್ಪವೂ ಯೋಚಿಸುವಂತಿಲ್ಲ.

ವಿಮಲೆಯು ಸ್ಥಿರಭಾವದಿಂದ ತಂದೆಯನ್ನು ಕುರಿತು,— “ಪ್ರಿಯ ಜನಕಾ! ನೀವು ಹೇಳಬೇಕೆಂದಿರುವ ಸಂಗತಿಗಳನ್ನೆಲ್ಲ ನಾನೂ ಗ್ರಹಿಸಿದೆನು. ಇದಕ್ಕಾಗಿ ನೀವು ಸ್ವಲ್ಪವೂ ವಿಚಾರಪಡಬೇಕಾಗಿಲ್ಲ. ಮಹಮ್ಮದೀಯರು ನಮ್ಮನ್ನು ಸೋಲಿಸಿ ಕೋಟೆಯನ್ನು ಪ್ರವೇಶಿಸಿ ನಮ್ಮ ಮಾನಧನವನ್ನೂ ಅಪಹರಿಸಲು ಬರುವಷ್ಟರಲ್ಲಿಯೇ ನಾವೆಲ್ಲರೂ ಹುತವಾಹನ ಆಶ್ರಯವನ್ನು ಹೊಂದಿ ನಮ್ಮ ಮಾನ, ಅಭಿಮಾನ, ಸತೀಧರ್ಮವನ್ನು ಕಾಪಾಡಿಕೊಳ್ಳುವೆವು. ಕಾಮುಕನಾದ ಆಲಂಘೀರ್ ಬಾದಷಹನು ಕೋಟೆಯನ್ನು ಪ್ರವೇಶಿಸಿದರೆ ಆತನಿಗೆ ಭಸ್ಮರಾಶಿ ಹೊರತು ಒಬ್ಬ ರಾಜಪುತ್ರಸ್ತ್ರೀಯಾದರೂ ಕಾಣುವುದಿಲ್ಲ. ಮಹಮ್ಮದಘೋರಿಯ ಕಾಲದಲ್ಲಿ ಸಂಯುಕ್ತಾದೇವಿಯೂ, ಅಲ್ಲಾವುದ್ದೀನನ ಕಾಲದಲ್ಲಿ ಪದ್ಮಿನೀದೇವಿಯೂ ಅಕಬರನ ಕಾಲದಲ್ಲಿ ಮೀರಾಬಾಯಿಯೂ ಶತ್ರುಗಳಿಂದ ಭಂಗವನ್ನು ಹೊಂದದೆ ತಮ್ಮ ತಮ್ಮ ದೇಹಗಳನ್ನು ಅಗ್ನಿನಾರಾಯಣನಿಗೆ ಸಮರ್ಪಿಸಿ ಮಾನಸಂರಕ್ಷಣೆ ಮಾಡಿಕೊಂಡು ಜಗತ್ತಿನಲ್ಲೆಲ್ಲಾ ಅಜರಾಮರವಾದ ಸತ್ಕೀರ್ತಿಶರೀರಗಳಾಗಿ ಪ್ರಕಾಶಿಸುತ್ತಿಲ್ಲವೇ? ಆ ಮಹಾ ಸಾಧ್ವಿಮಣಿಯರ ದಾಸಾನುದಾಸಿಯಾದೀ ವಿಮಲೆಯೂ ಆ ತಾಯಿಯರು ತೋರಿರುವ ಮಾರ್ಗವನ್ನೇ ಹಿಡಿದು ತನ್ನ ಮಾನವನ್ನು ಕಾಪಾಡಿಕೊಳ್ಳುವಳು. ಅಪ್ಪಾಜೀ! ಇನ್ನು ಪುತ್ರಿಕಾವ್ಯಾಮೋಹದಿಂದ ಆಲಸ್ಯ ಮಾಡಬೇಡಿರಿ, ನನಗಾಗಿಯಾಗಲಿ, ನಮ್ಮ ದೇಶದ ನಾರೀಮಣಿಯರಿಗಾಗಲಿ ಚಿಂತಿಸಬೇಕಾಗಿಲ್ಲ. ನಮ್ಮ ಮುಂದಿನ ದಾರಿಯನ್ನು ನಾವು ಸಿದ್ಧಮಾಡಿಕೊಂಡೇ ಇರುವೆವು. ನೀವಿನ್ನು ನಿಸ್ಸಂಶಯದಿಂದ ರಣರಂಗವನ್ನು ಪ್ರವೇಶಿಸಿ ಶತ್ರುಗಳನ್ನು ಸದೆದು ವೀರಸ್ವರ್ಗವನ್ನು ಪಡೆಯಬಹುದು. ಇದೋ ನಮ್ಮೆಲ್ಲರಿಗೂ ಇಹದಲ್ಲಿ ಇದೇ ಕಡೆಯ ಸಂದರ್ಶನವು. ಇನ್ನು ಸ್ವರ್ಗದಲ್ಲಿಯೇ ನಾವೆಲ್ಲರೂ ಒಬ್ಬರನ್ನೊಬ್ಬರು ನೋಡಬಹುದು. ” ಎಂದು ಸ್ಥಿರಗಂಭೀರ ಸ್ವರದಿಂದ ಹೇಳಿ ತಂದೆಗೆ ನಮಸ್ಕರಿಸಿದಳು. ಮಗಳ ಮನೋದಾರ್ಢ್ಯಕ್ಕೆ ವಿಜಯಸಿಂಹನು ಅತ್ಯಂತ ಸಂತುಷ್ಟನಾಗಿ ಮಗಳ ತಲೆಯನ್ನು ಸವರಿ,—“ತಾಯಿ, ವಿಮಲಾ! ನಿನ್ನ ಸತ್ಯಸಂಕಲ್ಪಕ್ಕೆ ಭಗವಂತನು ಸತ್ಫಲವನ್ನು ದಯಪಾಲಿಸಲಿ. ಇನ್ನು ವಿಲಂಬವಿಲ್ಲ. ಈಗಲೇ ರಂಗಭೂಮಿಗೆ ಹೋಗುವೆನು. ನೀನೂ ಜಾಗ್ರತೆಯಾಗಿಯೇ ಜೋಹರ್ ಪದ್ಧತಿಯನ್ನು ಅವಲಂಬಿಸಿ,

ರಜಪೂತ ರಮಣಿಯರ ಧರ್ಮವನ್ನು ಕಾಪಾಡು." ಎಂದು ಹೇಳಿ ಉತ್ತರಾಪೇಕ್ಷೆಯಿಲ್ಲದೆ ಹೊರಟುಹೋದನು.

ಜೋಹರ್-ಎಂದರೆ ರಣರಂಗದಲ್ಲಿ ತಮಗೆ ನಿಶ್ಚಯವಾಗಿ ಪರಾಜಯವಾಗುವುದೆಂದು ತಿಳಿದಾಗ ರಜಪೂತ ರಮಣಿಯರು ತಮ್ಮತಮ್ಮ ಪುರುಷರು ಯುದ್ಧಭೂಮಿಯಲ್ಲಿ ಹಿಮ್ಮೆಟ್ಟದೆ ಹೋರಾಡಿ ವೀರಸ್ವರ್ಗವನ್ನು ಹೊಂದುವಂತೆ ಹುರುಡಿಸಿ, ತಾವೆಲ್ಲರೂ ಸಂತೋಷದಿಂದ ಅಗ್ನಿದೇವನನ್ನು ಆರಾಧಿಸಿ ಒಟ್ಟಾಗಿ ಅಗ್ನಿಗೆ ತಮ್ಮ ದೇಹವನ್ನೊಪ್ಪಿಸುವುದೇ ಜೋಹರ್ ಎನ್ನಿಸುವುದು. ರಜಪೂತ ರಮಣಿಯರಿಗೆ ಇದ್ದ ಕಡೆಯ ಉಪಾಯವು. ಇದಲ್ಲದೆ ರಜಪೂತ ವೀರರು ತಮಗೆ ಪರಾಜಯವೇ ನಿಶ್ಚಯವೆಂದು ನಿರ್ಧರವಾದಾಗ ತಮ್ಮ ಸ್ತ್ರೀಯರು ಶತ್ರುಗಳಿಗೆ ವಶರಾಗಿ ಮಾನವನ್ನು ಕಳೆದುಕೊಳ್ಳಬಾರದೆಂದು ತಾವೇ ಸಂಹರಿಸಿ ಆಬಳಿಕ ನಿರಾತಂಕದಿಂದ ಯುದ್ಧಕ್ಕೆ ಹೋಗುವುದೂ ಉಂಟು. ಈ ಪದ್ಧತಿ, ಆಂಧ್ರದೇಶದಲ್ಲಿಯೂ ಇದ್ದಿತು; ಇದಕ್ಕೆ ಫ್ರೆಂಚರು ಬೊಬ್ಬಿಲಿ ಕೋಟೆಯನ್ನು ಮುತ್ತಿದಾಗ ರಣಧೀರನಾದ ರಂಗರಾಯನು ರಾಣಿವಾಸದವರೆಲ್ಲರನ್ನೂ ಸಂಹರಿಸಿ ಯುದ್ಧಕ್ಕೆ ಬಂದುದೇ ನಿದರ್ಶನವು.

ವಿಜಯಸಿಂಹನು ಯುದ್ಧಭೂಮಿಯನ್ನು ಕುರಿತು ಹೊರಟುಹೋಗಲು, ವಿಮಲಾದೇವಿಯು ಜಾಗ್ರತೆಯಾಗಿ ಅಗ್ನಿಯನ್ನು ಸೇರಿಸಬೇಕೆಂದು ಸಮ್ಮಗೆ ಅಪ್ಪಣೆಯನ್ನಿತ್ತಳು. ತತ್ಕ್ಷಣವೇ ಪಟ್ಟಣದ ವಿಶಾಲವಾದ ಪ್ರದೇಶದಲ್ಲಿ ಇಂಧನಗಳನ್ನೂ ಗಂಧದ ಚಕ್ಕೆಗಳನ್ನೂ ಕರ್ಪೂರದ ರಾಶಿಯನ್ನೂ ಅಸಂಖ್ಯಾತವಾದ ತುಪ್ಪದ ಕೊಡಗಳನ್ನೂ ತರಿಸಿ ಅಗ್ನಿದೇವನಿಗೆ ಸಮರ್ಪಿಸಿದಳು. ತತ್ಕ್ಷಣವೇ ರಜಪೂತ ಕಾಂತೆಯರ ಮಾನವನ್ನು ಕಾಪಾಡುವುದಕ್ಕೋ ಎಂಬಂತೆ ಅಗ್ನಿದೇವನು ಮೇಘಮಂಡಲದವರೆಗೂ ಭಯಂಕರನಾಗಿ ಪ್ರಜ್ವಲಿಸತೊಡಗಿದನು. ಆಗ ಅಂತಃಪುರದ ನಾರಿಯರೆಲ್ಲರೂ ತಮಗೆ ಇಷ್ಟವಾದ ಆಭರಣಗಳನ್ನು ಧರಿಸಿ, ಹರಿದ್ರಾ ಕುಂಕುಮಗಳನ್ನು ಪೂಜಾದ್ರವ್ಯಗಳೊಡನೆ ತಟ್ಟೆಗಳಲ್ಲಿರಿಸಿಕೊಂಡು ಒಂದು ಅಗ್ನಿಯ ಸುತ್ತಲೂ ನಿಂತರು. ವಿಮಲಾದೇವಿಯು ಮುಂದಾಗಿ ವೀತಿಹೋತ್ರನ ಬಳಿಯಲ್ಲಿ ನಿಂತು ರಜಪೂತರಮಣಿಯರೆಲ್ಲರೂ ಕೇಳುವಂತೆ ಹೀಗೆ ಹೇಳಿದಳು—

"ಓ ನನ್ನ ಪ್ರಿಯ ಸೋದರಿಯರೇ !

ನೀವೆಲ್ಲರೂ ನನ್ನ ದೆಸೆಯಿಂದ ಅತ್ಯಂತ ಕ್ಲೇಶಗಳನ್ನು ಸಹಿಸಬೇಕಾಯಿತು; ಆದರೂ ನೀವು ನನ್ನನ್ನು ತಿರಸ್ಕರಿಸದೆ ನನಗುಂಟಾಗಿರುವ ಆಪತ್ತಿಗಾಗಿ ನೀವೆಲ್ಲರೂ ಸಮದುಃಖಿನಿಯರಾಗಿ ನಿಮ್ಮ ಅನುಕಂಪನದಿಂದ ನನ್ನನ್ನು ಎಷ್ಟೋ ಸಮಾಧಾನಪಡಿಸಿರುವಿರಲ್ಲದೆ, ಇಂದು ನಮ್ಮ ಅಂತಿಮಧ್ಯೇಯವಾದ ಅಗ್ನಿ ಪ್ರವೇಶಕ್ಕೆ ಕೂಡ ಸಂತೋಷದಿಂದ ಬಂದಿರುವಿರಿ. ಈಗ ನಿಮಗೆ ನಾನೇನು ಹೇಳಬೇಕೋ ತಿಳಿಯೆನು. ಇಷ್ಟು ಹೇಳಬಲ್ಲೆ, ಈಗ ನಮ್ಮೀ ರೂಪನಗರಕ್ಕೆ ಬಂದಿರುವ ಆಪತ್ತಿನಂತೆ ಹಿಂದೆಯೂ ನಮ್ಮ ರಜಪೂತಸಾಧ್ವಿಯರ ಮಾನಹರಣಕ್ಕೆಂದು ಎಷ್ಟೋ ಆಪತ್ತುಗಳು ಬಂದಿದ್ದುವು. ಆದರೂ ನಮ್ಮ ಪೂರ್ವಜರಾದ ಆ ಮಹಾ ತಾಯಿಯರು ತಮ್ಮ ಮಾನಧನಗಳನ್ನು ಕಳೆದುಕೊಳ್ಳದೆ ಪರಮ ಪವಿತ್ರ ಮೂರ್ತಿಯಾದ ಅಗ್ನಿಭಗವಾನನ ಸಹಾಯದಿಂದ ನಮಗೆಲ್ಲರಿಗೂ ಅತ್ಯುತ್ತಮವಾದ ಕರ್ತವ್ಯವನ್ನು ಬೋಧಿಸಿ ಕೀರ್ತಿಶೇಷರಾಗಿರುವರು. ಈಗ ನಾವು ಕೂಡ ಅವರ ಅನುಗಾಮಿಗಳಾಗಿ ಅನನ್ಯಶರಣ್ಯಭಾವದಿಂದ ನಮ್ಮೀ ನಶ್ವರದೇಹಗಳನ್ನು ಅಗ್ನಿಪುರುಷನಿಗೊಪ್ಪಿಸಿ, ನಮ್ಮ ಮಾನಧನಗಳನ್ನು ಕಾಪಾಡಿಕೊಳ್ಳಬೇಕಾದುದರಿಂದ ಈ ಸಮಯದಲ್ಲಿ ನಮ್ಮ ಮನಸ್ಸು ಆನಂದದಿಂದಿರುವಂತೆ ನಾವು ನಮ್ಮ ಪತಿದೈವವನ್ನೂ ಪರಮಾತ್ಮನನ್ನೂ ಜಗದಂಬೆಯನ್ನೂ ಸ್ಮರಿಸುತ್ತ ಅಗ್ನಿಯಲ್ಲಿ ಪ್ರವೇಶಿಸುವ."

ವಿಮಲಾದೇವಿಯ ಪ್ರಾರ್ಥನೆಯಿಂದ ರಾಜಪುತ್ರ ಸ್ತ್ರೀಯರೆಲ್ಲರೂ ಅತ್ಯಂತ ಉತ್ಸಾಹಿತರಾಗಿ ಅಗ್ನಿದೇವನನ್ನು ಸ್ತುತಿಸಿ ಅಗ್ನಿಪ್ರವೇಶಕ್ಕೆ ಸಿದ್ಧರಾದರು. ಅಷ್ಟರಲ್ಲಿಯೇ ಅಶ್ವಾರೂಢನಾಗಿ ವಿಜಯೋತ್ಸಾಹದಿಂದ ತೇಜಃಪುಂಜನಾಗಿ ಪ್ರಕಾಶಿಸುತ್ತ ಆತುರಗಮನದಿಂದ ರಜಪೂತರಮಣಿಯರ ಅಗ್ನಿಪ್ರವೇಶವನ್ನು ತಡೆಯಲು ಬಂದ ರಾಜಸಿಂಹನು, ಅಗ್ನಿಪ್ರವೇಶಕ್ಕೆ ಮುಂದಾಗಿ ನಿಂತಿರುವ ವಿಮಲೆಯನ್ನೂ ಅವಳ ಮಾರ್ಗವನ್ನೇ ಅನುಸರಿಸುತ್ತಿರುವ ರಜಪೂತರಮಣಿಯರನ್ನೂ ನೋಡಿ ಘಟ್ಟಿಯಾಗಿ ಕೂಗಿ ಹೇಳಿದನು— "ಸಾಹಸವನ್ನು ನಿಲ್ಲಿಸಿರಿ, ರಜಪೂತರೇ ವಿಜಯಿಗಳಾದರು. ಮೊಗಲರು ಪರಾಜಿತರಾದರು. ವಿಜಯಸಿಂಹರಾಜನು ವಿಜಯೋತ್ಸಾಹದಿಂದ ಬರುತ್ತಿರುವನು. ನೋಡಿರಿ, ರಜಪೂತ ಸೈನ್ಯದ ಆನಂದ ಕೋಲಾಹಲಗಳನ್ನು."

ಅಮೃತೋಪಮಯವಾದೀ ವಾಕ್ಯದಿಂದ ವಿಮಲಾದೇವಿಯೂ ಇತರ ರಜಪೂತ ರಮಣಿಯರೂ ವಿಸ್ಮಿತರಾಗಿ ತಲೆಯೆತ್ತಿ ತಿರುಗಿ ನೋಡಿದರು; ರಾಜಸಿಂಹನು ಅಶ್ವಾರೋಹಿಯಾಗಿ ನಿಂತು, ಅಗ್ನಿಯನ್ನು ಆರಿಸಲು ಆಜ್ಞೆಮಾಡುತ್ತಿದ್ದುದನ್ನೂ ವಿಜಯಸಿಂಹನು ರಾಜಸಿಂಹನ ಬಳಿಗೆ ಆನಂದದಿಂದ ಬರುತ್ತಿದ್ದುದನ್ನೂ ಕಂಡರು; ಮನಸ್ಸಿನಲ್ಲಿಯೇ ಭಗವಂತನನ್ನು ಬಹುಪರಿಯಾಗಿ ಸ್ತುತಿಸಿ, ರಾಜಸಿಂಹನಿಗೆ ಧನ್ಯವಾದವನ್ನೊಪ್ಪಿಸಿದರು. ವಿಮಲೆಯ ಆನಂದಕ್ಕೆ ಪರಿಮಿತಿಯೇ

ಇಲ್ಲವಾಯಿತು. ಪದ್ಮೆಯು ಸಮಾಧಾನಪಟ್ಟು ರಾಜಸಿಂಹನಿಗೆ ರಜಪೂತ ರಮಣಿಯರ ಕೃತಜ್ಞತೆಯನ್ನು ಸಲ್ಲಿಸಿದಳು. ಅಷ್ಟರಲ್ಲಿ ಅಲ್ಲಿಗೆ ವಿಜಸಿಂಹನೂ ಬಂದು ಸೇರಿದನು. ರಾಜಸಿಂಹನು ಸಕಾಲದಲ್ಲಿ ಬಂದು ತನಗೆ ಸಹಾಯಮಾಡಿ ಮೊಗಲರನ್ನು ಪರಾಜಿತರನ್ನಾಗಿ ಮಾಡಿದ ರೀತಿಯನ್ನು ವಿವರಿಸಿದನು. ರಜಪೂತ ರಮಣಿಯರೆಲ್ಲರೂ ರಾಜಸಿಂಹನನ್ನು ಕೊಂಡಾಡಿದರು. ಉತ್ತರಕ್ಷಣದಲ್ಲಿಯೇ ಅಗ್ನಿಯು ಆರಿಸಲ್ಪಟ್ಟಿತು. ರಜಪೂತ ರಮಣಿಯರು ಸ್ವಸ್ಥಾನವನ್ನು ಸೇರಿದರು. ವಿಜಯಸಿಂಹನು ವಿಮಲೆಯ ಸಂರಕ್ಷಣೆಯ ಭಾರವನ್ನು ರಾಜಸಿಂಹನಿಗೇ ವಹಿಸಿದುದರಿಂದ, ರಾಜಸಿಂಹನು ವಿಜಯಸಿಂಹನ ಅಭಿಮತದಂತೆ ವಿಮಲೆಯನ್ನೂ ಪದ್ಮೆಯನ್ನೂ ತನ್ನ ರಾಜಧಾನಿಗೆ ಕರೆದೊಯ್ದನು.

ಮೂವತ್ತನಾಲ್ಕನೆಯ ಪ್ರಕರಣ.

(ಮೂವರು ಪ್ರಯಾಣಿಕರು.)

ತಮಸ್ತೋಮ ವಿಧ್ವಂಸಕಾರಣನಾದ ಸೂರ್ಯನಾರಾಯಣನು ಇದೇ ಉದಯಾದ್ರಿಯನ್ನಲಂಕರಿಸಿದ್ದನು. ಸೂರ್ಯದೇವನ ಸಂದರ್ಶನದಿಂದುಂಟಾದ ಆನಂದಾತಿಶಯದಿಂದ ಶುಕಪಿಕಾದಿಪಕ್ಷಿನಿಕರಗಳು ತಮ್ಮ ಗೂಡುಗಳಿಂದ ಹೊರಗೆ ಬಂದು ಅಚಲೇಶ್ವರಾಲಯದ ಸುತ್ತಲೂ ಸೇರಿ ಆ ಸ್ವಾಮಿಯ ಸ್ತುತಿಪಾಠ ಮಾಡುತ್ತಿರುವುವೋ ಎಂಬಂತೆ ಧ್ವನಿಮಾಡುತ್ತಿದ್ದುವು. ಮಯೂರಗಳು ತಮ್ಮ ಗರಿಗಳನ್ನು ಪಸರಿಸಿ ಸಂತೋಷದಿಂದ ಅಲ್ಲಲ್ಲಿ ನಾಟ್ಯವಾಡುತ್ತಿದ್ದುವು.

ಇಂತಹ ಸುಖಕರವಾದ ಪ್ರಭಾತದಲ್ಲಿ ಮೂವರು ಪುರುಷರು ಅಶ್ವಾರೂಢರಾಗಿ ಸಂಭಾಷಿಸುತ್ತ ಆ ಪರ್ವತದಮೇಲೆ ಒಂದು ಕಡೆಯಿಂದ ಬರುತ್ತಿದ್ದರು. ಮೂವರಲ್ಲಿ ಇಬ್ಬರು ಸ್ವಲ್ಪ ಹೆಚ್ಚು ಕಡಮೆ ಒಂದೇ ರೂಪವುಳ್ಳವರಾಗಿ ಸಹೋದರರೆಂಬಂತೆ ಕಾಣಿಸುತ್ತಿದ್ದರು. ಮೂರನೆಯ ಪುರುಷನು ಆ ಇಬ್ಬರಲ್ಲಿ ಕಿರಿಯನ ಬಳಿಯಲ್ಲಿಯೇ ಕುದುರೆಯನ್ನು ನಡೆಯಿಸುತ್ತ ಮಾತುಮಾತಿಗೂ ಆತನ ಕಡೆಯೇ ನೋಡುತ್ತಿದ್ದನು. ಮೂವರೂ ಬರುತ್ತಿದ್ದ ರೀತಿಯನ್ನು ನೋಡಿದರೆ, ೨-೩ ದಿನಗಳಿಂದ ಮಾರ್ಗಪ್ರಯಾಣದಲ್ಲಿಯೇ ಶ್ರಾಂತರಾಗಿರುವಂತೆ ತೋರುತ್ತಿದ್ದಿತು. ಅವರಲ್ಲಿಯೂ ಕಿರಿಯನು ಅತ್ಯಂತ ಶ್ರಾಂತನಾಗಿದ್ದನು. ಆಯಾಸವನ್ನು ತಡೆಯಲಾರದೆ ನಿಟ್ಟುಸಿರಿಡುತ್ತ ತುದಿನಾಲಿಗೆಯಿಂದ ತುಟಿಗಳನ್ನು ಸವರಿಕೊಳ್ಳುತ್ತಿದ್ದನು. ಉಳಿದೀರ್ವರೂ ಆತನಿಗೆ ಧೈರ್ಯವನ್ನು ಹೇಳುತ್ತ "ಇದೋ ಇದೇ ಅಬೂಪರ್ವತವು, ಅಚಲೇಶ್ವರಾಲಯವು ಸಮೀಪದಲ್ಲಿಯೇ ಇರುವುದು. ಸ್ವಲ್ಪ ಸಹಿಸಿಕೊಂಡರೆ ಜಾಗ್ರತೆಯಾಗಿಯೇ ಸೇರಬಹುದು." ಎಂದು ಆ ತರುಣನೊಡನೆ ಮಾತನಾಡುತ್ತ ಬರುತ್ತಿದ್ದರು. ಸ್ವಲ್ಪ ಹೊತ್ತಿನೊಳಗಾಗಿ ಮೂವರೂ ಪರ್ವತವನ್ನು ಸಮೀಪಿಸಿ ಅಲ್ಲಿ ತಮ್ಮ ಕುದುರೆಗಳಿಂದಿಳಿದು ಅವುಗಳನ್ನು ಒಂದು ಮರಕ್ಕೆ ಕಟ್ಟಿ ತಾವು ಪರ್ವತದ ಮೇಲಕ್ಕೆ ಹತ್ತಲಾರಂಭಿಸಿದರು.

ಪರ್ವತವು ಅತ್ಯಂತ ಕಡಿದಾಗಿಯೂ ಕಂಟಕಸಂಕೀರ್ಣವಾಗಿಯೂ ಕ್ರೂರಜಂತುಗಳಿಗೆ ಆವಾಸವಾದ ಪೊದರುಗಳನ್ನೂ ಗವಿಗಳನ್ನೂ ಹೊಂದಿಯೂ ಭಯಂಕರವಾಗಿದ್ದಿತು. ನಮ್ಮ ಮಾರ್ಗಸ್ಥರು ಅನೇಕ ಕಷ್ಟಗಳನ್ನನುಭವಿಸುತ್ತ ಬಹು ಪ್ರಯಾಸದಿಂದ ಪರ್ವತಶಿಖರವನ್ನೇರಿ ಅಚಲೇಶ್ವರಾಲಯವನ್ನು ಸಮೀಪಿಸಿದರು. ಅಷ್ಟುಹೊತ್ತಿಗೆ ಸರಿಯಾಗಿ ಯೋಗಿರಾಜನು ಜಪವನ್ನು ಮುಗಿಸಿಕೊಂಡು ಆಲಯದಿಂದ ಹೊರಗೆ ಬರುತ್ತಿದ್ದನು. ಆತನನ್ನು ನೋಡಿದ ಕೂಡಲೆ ಮೂವರೂ ಭಕ್ತಿಯಿಂದ ನಮಸ್ಕರಿಸಿ ಕೈಮುಗಿದು ನಿಂತರು. ಯೋಗಿಯು ಆ ತರುಣನನ್ನು ಗುರ್ತಿಸದಿದ್ದರೂ ಎರಡನೆಯವನನ್ನು ಗುರ್ತಿಸಿ ಸಂತೋಷದಿಂದ "ದುರ್ಗಾದಾಸ, ಕ್ಷೇಮವಾಗಿರುವೆಯಷ್ಟೆ? ಡಿಲ್ಲಿಯಿಂದ ಹೇಗೆ ತಪ್ಪಿಸಿಕೊಂಡು ಬಂದೆ? ಇಂದಿರೆಯೆಲ್ಲಿ? ಇವರಾರು?" ಎಂದು ಕೇಳಿದನು. ದುರ್ಗಾದಾಸನು ಅತ್ಯಂತ ಗಂಭೀರದಿಂದ ಡಿಲ್ಲಿಗೆ ಹೋದುದು ಮೊದಲು ಇಂದಿರಾ ನಯನಪಾಲರೊಡನೆ ಹೊರಟು ಬರುವ ವರೆಗೆ ಎಲ್ಲಾ ಸಂಗತಿಗಳನ್ನೂ ಸವಿಸ್ತರವಾಗಿ ತಿಳಿಸಿದನು. ಅದನ್ನು ಕೇಳಿದ ಯೋಗಿಯು ಅತ್ಯಾನಂದದಿಂದ "ಅಯ್ಯಾ! ದುರ್ಗಾದಾಸ! ರೋಷನಾರೆಯ ಕ್ರೂರಸ್ವಭಾವವನ್ನು ನಾನು ಇದಕ್ಕೆ ಮೊದಲೆ ತಿಳಿದಿದ್ದೆನು. ನಯನಪಾಲನ ಸಹಾಯದಿಂದ ನೀವು ಹೇಗೆಯೋ ಗಂಡಾಂತರವನ್ನು ದಾಟಿಬಂದಿರಿ." ಎಂದು ಹೇಳಿ ನಯನಪಾಲನ ಕಡೆಗೆ ತಿರುಗಿ ಆತನ ಕೈಹಿಡಿದು, "ಅಯ್ಯಾ! ಮೊದಲು ನೀನೂ ದುರ್ಮಾರ್ಗದಲ್ಲಿದ್ದು ಕಡೆಗೆ ಪಶ್ಚಾತ್ತಾಪ ಹೊಂದಿ ಸನ್ಮಾರ್ಗಪ್ರವರ್ತಕವಾದ ಸಂಗತಿಯನ್ನು ತಿಳಿದೆನು. ಸಂತೋಷ! ಇನ್ನು ಮೇಲೆ ನೀನು ಕ್ಷತ್ರಿಯರ ಧರ್ಮಕ್ಕೆ ಕೀರ್ತಿಯನ್ನು ತರಬೇಕು." ಎಂದು ಅಭಿಮಾನಪೂರ್ವಕವಾಗಿ ಹೇಳಲು ನಯನಪಾಲನು ನಾಚಿಕೆಯಿಂದ ಮುಖವನ್ನು ತಗ್ಗಿಸಿಕೊಂಡು ಪುನಃ ಆ ಯೋಗಿಪುಂಗವನ ಪಾದಗಳಿಗೆ ನಮಸ್ಕರಿಸಿದನು. ಅನಂತರ ಯೋಗಿಯು ದುರ್ಗಾದಾಸನೊಡನೆ ರಾಜಸಿಂಹನ ಸಮಾಚಾರವನ್ನೆಲ್ಲಾ ತಿಳಿಸಿ, ಈ ಮರುದಿನದ ಪ್ರಾತಃಕಾಲಕ್ಕೆ ಆತನು ವಿಮಲೆಯೊಡನೆ ತನ್ನ ದರ್ಶನಕ್ಕೆ ಬರುವನೆಂದೂ ಬೇಕಾದಲ್ಲಿ ರಾಜಸಿಂಹನೊಡನೆ ಯುದ್ಧಕ್ಕೆ ಹೋಗಬಹುದೆಂದೂ ಹೇಳಲು ದುರ್ಗಾದಾಸನು ಸಮ್ಮ

ತಿಸಿದನು. ನಯನಪಾಲನು ಮಾತ್ರ ವಿನಯದಿಂದ ಕೈಜೋಡಿಸಿ, "ಸ್ವಾಮಿೂ, ಕ್ಷಮಿಸಬೇಕು, ನಾನು ಮಾಡಬೇಕಾದ ಕೆಲಸಗಳು ಬಹಳವಾಗಿರುವುವು. ಔರಂಗಜೇಬನನ್ನು ಮೋಸಗೊಳಿಸಬೇಕೆಂದು ನಾನು ನಿಶ್ಚಯಿಸಿರುವೆನಾದುದರಿಂದ ಮೊದಲೇ ಹೋಗಿ ರಾಜಪುತ್ರರನ್ನು ಸೇರಿ ಆ ಪ್ರಯತ್ನದಲ್ಲಿರುವೆನು." ಎಂದು ಹೇಳಿ ಯೋಗಿಯಿಂದಲೂ ದುರ್ಗಾದಾಸನಿಂದಲೂ ಅನುಮತಿಯನ್ನು ಪಡೆದು ಹೊರಟನು.

ಇಂದಿರೆಯು, ಮೊದಲು ಯೋಗಿಯೂ ದುರ್ಗಾದಾಸನೂ ಸಂಭಾಷಿಸುತ್ತಿರುವಾಗಲೇ ಆಲಯವನ್ನು ಪ್ರವೇಶಿಸಿ ಪುರುಷವೇಷವನ್ನು ತೆಗೆದುಹಾಕಿ ನಿಜರೂಪವನ್ನು ಧರಿಸಿ ಅಲ್ಲಿ ಬಬ್ಬ ಭಿಲ್ಲಾಂಗನೆಯ ತೊಡೆಯಮೇಲೆ ಕುಳಿತು ಆಟವಾಡುತ್ತಿದ್ದ ಕುಮಾರ ಅಜಿತಸಿಂಹನನ್ನು ಎತ್ತಿಕೊಂಡು ಮುದ್ದಾಡುತ್ತಿದ್ದಳು. ತಾನು ಅತ್ಯಂತ ಕಷ್ಟನಷ್ಟಗಳಿಗೆ ಗುರಿಯಾಗಿ ಕಾಪಾಡಿದ ಬಾಲನನ್ನು ಕಂಡಕೂಡಲೇ ಅವಳ ಹೃದಯವು ಎಷ್ಟುಮಟ್ಟಿಗೆ ಆನಂದಪಟ್ಟಿರಬಹುದೆಂಬದನ್ನು ಹೇಳಬೇಕೆ? ತನ್ನ ಶ್ರಮವು ಸಾರ್ಥಕವಾಗುವಂತೆ ಮಾಡಿದ ರಮಾತ್ಮನನ್ನು ಸ್ತುತಿಸುತ್ತ ರಾಜಕುಮಾರನನ್ನು ನಿಸರ್ಗ ಪುತ್ರವಾತ್ಸಲ್ಯದಿಂದ ಮುದ್ದಿಟ್ಟು ಆಲಿಂಗಿಸಿಕೊಳ್ಳುತ್ತ "ಸುಕುಮಾರ! ಜೋಧಪುರ ವಂಶಸಂರಕ್ಷಣಾರ್ಥವಾಗಿ ಕಾಬೂಲ್‌ದೇಶದಲ್ಲಿ ನಯನಪಾಲನ ದೆಸೆಯಿಂದುಂಟಾದ ಕಷ್ಟಗಳೆಲ್ಲವನ್ನೂ ಸಹಿಸಿದುದು ಇಂದಿಗೆ ಸಾರ್ಥಕವೆನಿಸಿತು. ನಿನ್ನ ಪ್ರಾಣಸಂರಕ್ಷಣಕ್ಕಾಗಿ ಗೊಲ್ಲರ ಹಳ್ಳಿಯನ್ನು ಪ್ರವೇಶಿಸಿ ಗೊಲ್ಲತಿಯ ವೇಷವನ್ನು ಧರಿಸಿದುದು ಈಗಲೀಗ ಸಾಫಲ್ಯವೆನಿಸಿತು! ದಯಾಮಯನಾದ ಭಗವಂತನು ನಮ್ಮ ಮನೋರಥವನ್ನು ನಡೆಯಿಸಿಕೊಟ್ಟನು; ನಾವು ನಮ್ಮ ರಾಜನನ್ನು ನೋಡಿ ಈಗಲೀಗ ಕೃತಸಂಕಲ್ಪರಾದೆವು. ಇನ್ನು ಜೋಧಪುರಕ್ಕೆ ನೀನೇ ಅಧೀಶನು.........ಎಂದು ಬಗೆ ಬಗೆಯಾಗಿ ಬಣ್ಣಿಸಿ ಬಣ್ಣಿಸಿ ಬಾಲನನ್ನು ಮುದ್ದಿಡುತ್ತಿದ್ದಳು. ಬಾಲನು ಇಂದಿರೆಯ ವಾಕ್ಯದ ಅರ್ಥವನ್ನು ತಿಳಿಯಲಸಮರ್ಥನಾಗಿದ್ದರೂ ಅವಳಾ ಪುತ್ರನಿರ್ವಿಶೇಷಪ್ರೇಮದಿಂದ ಅತ್ಯಂತ ಆಪ್ಯಾಯಿತನಾಗಿ ಅವಳ ಲಾಲನೆಗಳಿಂದ ಕಿಲಕಿಲನೆ ನಗುತ್ತ ನಲಿದಾಡುತ್ತಿದ್ದನು. ಅಷ್ಟರಲ್ಲಿ ದುರ್ಗಾದಾಸನೊಡನೆ ಯೋಗಿಯೂ ಆಲಯದೊಳಗೆ ಪ್ರವೇಶಿಸಿದನು. ಇಂದಿರೆಯು ಬಾಲನನ್ನು ಕುಳ್ಳಿರಿಸಿ, ಯೋಗಿಗೆ ನಮಸ್ಕರಿಸಿದಳು. ಯೋಗಿಯು ಅತ್ಯಂತ ಆದರದಿಂದ, "ತಾಯಿ, ನಿನ್ನ ಅನುಗ್ರಹದಿಂದ ಜೋಧಪುರವಂಶವು ನಿಂತಿರುವುದು. ನಿನ್ನ ಪವಿತ್ರ ಚರಿತ್ರೆಯನ್ನು ನಾನು ಕೇಳಿ ಅತ್ಯಾನಂದ ಪಟ್ಟೆನು. ಕುಸುಮಕೋಮಲೆಯಾದ ನೀನು ರಾಜವಂಶವನ್ನುಳಿಸುವುದಕ್ಕಾಗಿ ಪಟ್ಟ ಕಷ್ಟವೂ ಆ ಮೂಲಕ ಪ್ರದರ್ಶಿತವಾದ ನಿನ್ನ ಮನೋದಾರ್ಢ್ಯ, ರಾಜಭಕ್ತಿ, ಕರ್ತವ್ಯನಿಷ್ಠೆಗಳೂ ವರ್ಣನಾತೀತವಾಗಿರುವುವು." ಎಂದು ಶ್ಲಾಘಿಸಿದನು.

ಆ ಮಾತನ್ನು ಕೇಳಿ ಇಂದಿರೆಯು ವಿನೀತ ಭಾವದಿಂದ— "ಇದೆಲ್ಲವೂ ಯೋಗಿರಾಜರ ಕೃಪೆಯಿಂದಲೇ ಆದುದಲ್ಲದೆ ನನ್ನ ಕರ್ತೃತ್ವಶಕ್ತಿಯಿಂದಾಯಿತೆಂದು ಹೇಳಲಾರೆನು. ರಾಣಿ ಚಂದ್ರಾವತೀ ದೇವಿಯ ಪಾತಿವ್ರತ್ಯಪ್ರಭಾವದಿಂದಲೂ ಕುಮಾರನ ಅದೃಷ್ಟಬಲದಿಂದಲೂ, ಜೋಧಪುರದ ಪ್ರಜೆಗಳ ಸೌಭಾಗ್ಯದಿಂದಲೂ ಸ್ವರ್ಗವಾಸಿಯಾಗಿರುವ ಮಹಾರಾಜರ ಪುಣ್ಯಪ್ರಭಾವದಿಂದಲೂ ನಮ್ಮ ಅಣ್ಣನ ಪ್ರಯಾಸದಿಂದಲೂ ಈ ಕಾರ್ಯಗಳು ಫಲಿಸಿರುವುವೇ ಹೊರತು ಅನ್ಯಥಾ ಇಲ್ಲ" ಎಂದು ನುಡಿದಳು. ಇಂದಿರೆಯ ಮಾತಿಗೆ ಯೋಗಿಯು ಸಂತೋಷಪಟ್ಟು ಅಣ್ಣತಂಗಿಯರು ರಾಜಸಿಂಹನು ಬರುವವರೆಗೂ ವಿಶ್ರಮಿಸಿಕೊಂಡಿರುವಂತೆ ಹೇಳಿದನು.

ಇತ್ತ ನಯನಪಾಲನು ಯೋಗಿಯಿಂದ ಅಪ್ಪಣೆಹೊಂದಿ ಪರ್ವತವನ್ನಿಳಿದು ಬರುತ್ತ, ದೂರದಲ್ಲಿ ಕಾಲೂರಿ ನಿಂತಿದ್ದ ಬಾದಷಹನ ಸೈನ್ಯವನ್ನು ಕಂಡನು. ಒಡನೆ ಒಂದು ಎತ್ತರವಾಗಿದ್ದ ಮರವನ್ನೇರಿ, ಶತ್ರುವಿನ ಮಹಾಸೈನ್ಯವನ್ನು ನೋಡುತ್ತ ಹೀಗೆ ಆಲೋಚಿಸಲು ಆರಂಭಿಸಿದನು.

"ಈಗ ನಾನು ಮಾಡಬೇಕಾದುದೇನು? ಸಕಲಸೇನಾಸಮೇತನಾಗಿ ಬಂದಿರುವ ಬಾದಷಹನೂ, ಇಂದಿರಾ ದುರ್ಗಾದಾಸ ಅಜಿತಸಿಂಹಕುಮಾರ ಮೊದಲಾದವರೂ ಈಗ ನನ್ನ ಕೈಯಲ್ಲಿ ಸಿಕ್ಕಿರುವರು. ಈಗ ನಾನು ಯಾರಿಗೆ ಬೇಕಾದರೂ ಮೋಸ ಮಾಡಬಹುದು; ಯಾವ ಕಡೆಗೆ ಹೊರಳಬೇಕು?" ಹಾ, ಇದೇನನರ್ಥಚಿಂತೆ! ನನ್ನನ್ನು ಬಲಾತ್ಕಾರವಾಗಿ ಕಾರಾಗ್ರಹದಲ್ಲಿರಿಸಿದ ಔರಂಗಜೇಬನನ್ನು ಮೋಸಪಡಿಸಬೇಕೆಂದು ಬಂದ ನಾನು ಈಗ ಯೋಚಿಸುವುದೇನು? ಆದರೆ, ಔರಂಗಜೇಬನು ನನಗೆ ದ್ರೋಹಮಾಡಿದನೆ? ಆತನ ಆಜ್ಞಾನವರ್ತಿಯಾಗಿ ನಡೆಯಬೇಕಾಗಿದ್ದ ನಾನು ನಿಯಮಿತ ಕಾರ್ಯವನ್ನು ಮಾಡದೆಹೋದುದಕ್ಕೂ ಆತನಲ್ಲಿ ಸುಳ್ಳು ಹೇಳಿದುದಕ್ಕೂ ನನಗೆ ಶಿಕ್ಷೆಯಾಗುವುದು ನ್ಯಾಯವೇ ಸರಿ. ಜೋಧಪುರ ರಾಜ್ಯಸಂಪಾದನಕ್ಕಾಗಿಯೇ ನಾನು ಮೊದಲಿಂದಲೂ ಶ್ರಮಪಡುತ್ತಿದ್ದೆನು; ಈಗ ನನ್ನ ಉದ್ದೇಶಸಿದ್ಧಿಯಾಗುವ ಸಮಯ ಮೊದಗಿದಂತೆ ಅವರೆಲ್ಲರೂ ಅಚಲೇಶ್ವರಾಲಯದಲ್ಲಿರುವ ಸಂಗತಿ ತಿಳಿದೇ ಇರುವುದು; ಇಷ್ಟೇ ಅಲ್ಲ, ಇಂದೋ ನಾಳೆಯೊ ರಾಜಸಿಂಹನೂ ವಿಮಲೆಯೂ ನನ್ನ ತಂತ್ರಜಾಲಕ್ಕೆ ಸಿಕ್ಕಿ ಬೀಳಬಹುದು. ಇವರೆಲ್ಲರನ್ನೂ ಹಿಡಿದು ಬಾದಷಹನಿಗೆ ಒಪ್ಪಿಸಿದರೆ ನನಗೆ ನಿಃಸಂದೇಹವಾಗಿ ಜೋಧಪುರರಾಜ್ಯವು

ಲಭಿಸಬಹುದಲ್ಲವೆ ? ಈಗೇನು ಮಾಡಲಿ ? ರಾಜ್ಯಲೋಭದಿಂದ ರಾಜಪುತ್ರರನ್ನು ಮೋಸಪಡಿಸಬೇಕೋ ? ಅಥವಾ ಸ್ವಮತಾಭಿಮಾನಿಯಾಗಿ ಧೂರ್ತ ಆಲಂಘೀರ್ ಬಾದಷಹನನ್ನು ಮೋಸಪಡಿಸಬೇಕೋ?..............."

ನಯನಪಾಲನು ಬಹುದೂರ ಆಲೋಚಿಸಿದನು; ಬಗೆಹರಿಯಲಿಲ್ಲ. ಕಡೆಗೆ ಪರ್ವತವನ್ನಿಳಿದು ಮೊದಲು ತಾನು ಕುದುರೆಯನ್ನು ಕಟ್ಟಿದ್ದ ಮರದ ಬಳಿಗೆಬಂದು ನೋಡಿದನು ಕುದುರೆಯಿರಲಿಲ್ಲ; ಸುತ್ತಮುತ್ತಲೂ ಹುಡುಕಿದನು, ಕಾಣಲಿಲ್ಲ. ಶಂಕಿತನಾಗಿ ಹುಡುಕುತ್ತ ಮುಂದೆ ಹೊರಟನು; ಸ್ವಲ್ಪದೂರದಲ್ಲಿ ರಾಜಪುತ್ರನೋರ್ವನು ಅಶ್ವಾರೂಢನಾಗಿ ಬರುತ್ತಿದ್ದುದನ್ನು ಕಂಡು ತತ್‌ಕ್ಷಣವೇ ಒಂದು ಕಡೆಯಲ್ಲಿ ಮರೆಯಾಗಿದ್ದು, ಅಶ್ವಾರೋಹಿಯು ಸಮೀಪಿಸಿದ ಕೂಡಲೆ ಅವನನ್ನು ಅಡ್ಡಗಟ್ಟಿ,— "ಎಲಾ, ನೀನಾರು? ಕಳ್ಳನಂತೆ ಕಾಣುವೆ, ನನ್ನ ಕುದುರೆಯನ್ನೇರಲು ಕಾರಣವೇನು ? ನಿಜವನ್ನು ಹೇಳಿದರೆ ಬದುಕುವೆ; ಇಲ್ಲವಾದರೆ......"

ಅಶ್ವಾರೋಹಿಯುದಕ್ಕೆ ನಕ್ಕು— ಅಯ್ಯಾ! ಅವಸರಪಡಬೇಡ. ಶಿವಸಿಂಗನು ಎಂದಿಗೂ ಕಳ್ಳನೆನ್ನಿಸುವವನಲ್ಲ. ಇರಲಿ, ನಿನ್ನನ್ನು ಹಿಂದೆ ನೋಡಿರುವ ನೆನಪಿದೆ. ನೀನಾರು ಹೇಳು" ಎಂದನು.

ನಯನ:— ನೀನೇ ಶಿವಸಿಂಗನಾಗಿದ್ದರೆ ಸಂತೋಷ! ನನ್ನ ವೃತ್ತಾಂತವನ್ನು ತಿಳಿಯಬೇಕಾದರೆ, ಪರ್ವತದ ಮೇಲಿರುವ ದುರ್ಗಾದಾಸ ಇಂದಿರಾದೇವಿಯರ ಬಳಿಯನ್ನು ಸೇರಿ, ತತ್‌ಕ್ಷಣವೇ ದುರ್ಗಾದಾಸನನ್ನು ಇಲ್ಲಿಗೆ ಕರೆದುಕೊಂಡು ಬಾ."

ನಯನಪಾಲನ ಮಾತನ್ನು ಕೇಳಿ, ಇಂದಿರಾ ದುರ್ಗಾದಾಸರು ಬಂದಿರುವರೆಂಬ ಶುಭವರ್ತಮಾನವನ್ನು ತಿಳಿದು, ಸಂತೋಷದಿಂದ, ಕೂಡಲೇ ಕುದುರೆಯಿಂದಿಳಿದು, ಕ್ಷಣವೂ ವಿಳಂಬಿಸದೆ ಅವಸರದಿಂದ ಪರ್ವತವನ್ನೇರಿ ಹೋದನು. ಶಿವಸಿಂಗನು ಬಂದುದನ್ನು ನೋಡಿ ಯೋಗಿಯೂ ದುರ್ಗಾದಾಸನೂ ಆನಂದದಿಂದ ಅವನನ್ನು ಆದರಿಸಿದರು. ಶಿವಸಿಂಗನು ದುರ್ಗಾದಾಸನಿಂದ ನಯನಪಾಲನ ವೃತ್ತಾಂತವನ್ನು ಸಮಗ್ರವಾಗಿ ತಿಳಿದು ವಿಸ್ಮಿತನಾಗಿ, ಆತನ ಅಭಿಪ್ರಾಯದಂತೆ ದುರ್ಗಾದಾಸನನ್ನು ಜೊತೆಗೊಂಡು ಪರ್ವತವನ್ನು ಇಳಿದು ಬಂದು ನಯನಪಾಲನನ್ನು ಸೇರಿದನು.

ಅಷ್ಟರವರೆಗೂ ನಯನಪಾಲನು ತಾನು ಮುಂದೆ ವಹಿಸಬೇಕಾದ ಪಕ್ಷವಾವುದೆಂಬುದನ್ನು ನಿರ್ಧರಿಸಲರಿಯದೆ ಒಮ್ಮೆ ರಾಜ್ಯಲೋಭದಿಂದ ಔರಂಗಜೇಬನ ಕಡೆಗೂ, ಒಮ್ಮೆ ಸ್ವಮತಾಭಿಮಾನಸ್ಫೂರ್ತಿಯಿಂದ ಅಚಲೇಶ್ವರಾಲಯದ ಕಡೆಗೂ ನೋಡುತ್ತ ಡೋಲಾಯಮಾನನಾಗಿ ಕುಳಿತಿದ್ದನು. ಶಿವಸಿಂಗನೊಡನೆ ದುರ್ಗಾದಾಸನು ಮುಂದೆ ಬಂದು ನಿಂತುದನ್ನು ನೋಡಿ ನಯನಪಾಲನ ಮನಸ್ಸು ಸ್ಥಿರವಾಗಿ ಸ್ವಮತಾಭಿಮಾನದಿಂದ ಉಬ್ಬಿತು. ಥಟ್ಟನೆದ್ದು ದುರ್ಗಾದಾಸನ ಕೈ ಹಿಡಿದು ಆತನನ್ನು ಸ್ವಲ್ಪದೂರ ಕರೆದುಕೊಂಡು ಹೋಗಿ ಅವ್ಯದೋ ಒಂದು ರಹಸ್ಯವನ್ನು ಆತನ ಕಿವಿಯಲ್ಲಿ ಹೇಳಿದನು. ಅದನ್ನು ಕೇಳಿ ದುರ್ಗಾದಾಸನು "ನಯನಪಾಲಾ! ಇದು ಒಳ್ಳೆಯ ಯುಕ್ತಿ!" ಎಂದು ಹೇಳಿದನು. ಅನಂತರ ನಯನಪಾಲನು ಶಿವಸಿಂಗನು ಏರಿದ್ದ ಕುದುರೆಯನ್ನೇರಿ ಕ್ಷಣಮಾತ್ರದಲ್ಲಿ ಅದೃಶ್ಯನಾದನು. ಶಿವಸಿಂಗನೂ ದುರ್ಗಾದಾಸನೂ ಅಚಲೇಶ್ವರಾಲಯವನ್ನು ಕುರಿತು ಹೊರಟು ಹೋದರು.

ಮೂವತ್ತೈದನೆಯ ಪ್ರಕರಣ

(ಹಾವನ್ನು ಹಾವೇ ಕಚ್ಚಿತು)

ಔರಂಗಜೇಬನು ಸೇನಾಸಮೇತನಾಗಿ ರೂಪನಗರದ ಸಮೀಪದಲ್ಲಿರುವುದನ್ನು ನೋಡಿ ನಯನಪಾಲನು ಆತನ ಬಳಿಗೆ ಜಾಗ್ರತೆಯಾಗಿ ಸೇರಬೇಕೆಂದು ಅತ್ಯಂತ ವೇಗವಾಗಿ ಅಶ್ವವನ್ನೋಡಿಸಿಕೊಂಡು ಬಂದು ಬಾದಷಹನ ಶಿಬಿರವನ್ನು ಸಮೀಪಿಸಿ ದಾರಿಯಲ್ಲಿದ್ದ ಮರಕ್ಕೆ ಕುದುರೆಯನ್ನು ಕಟ್ಟಿ ಶಿಬಿರವನ್ನು ಪ್ರವೇಶಿಸಲು ಬರುತ್ತಿದ್ದನು. ಇವನು ದೂರದಲ್ಲಿ ಬರುತ್ತಿರುವಾಗಲೇ ಮಹಮ್ಮದೀಯ ಭಟರು ಶತ್ರುಪಕ್ಷದವನು ಬರುತ್ತಿರುವನೆಂದು ತಮ್ಮತಮ್ಮ ಆಯುಧಗಳನ್ನು ಹಿಡಿದುಕೊಂಡು ಸಿದ್ಧರಾಗಿದ್ದರು. ಆದರೆ, ಇವನು ಸಮೀಪಿಸಿದ ಮೇಲೆ ಇವನನ್ನು ಗುರುತಿಸಿ ಆಯುಧಗಳನ್ನು ಕೆಳಗಿರಿಸಿ ಗಹಗಹಿಸಿ ನಕ್ಕರು.

ಬಾದಷಹನ ಶಿಬಿರವು ಅತ್ಯಂತ ವಿಸ್ತಾರವೂ ನೋಡಲು ಅತ್ಯಂತ ಭಯಂಕರವೂ ಆಗಿದ್ದಿತು. ಸುತ್ತಮುತ್ತಲೂ ದೊಡ್ಡ ದೊಡ್ಡ ಗುಡಾರಗಳೂ ಆಯುಧಪಾಣಿಗಳಾಗಿದ್ದ ಭಟರ ಸಮೂಹವೂ ಕಾಣಬರುತ್ತಿದ್ದಿತು. ನಯನಪಾಲನು ಶಿಬಿರವನ್ನು ಪ್ರವೇಶಿಸಿ ಹೋಗುತ್ತಿರಲು ಅಲ್ಲಿದ್ದ ಸರದಾರರೂ ಸೈನ್ಯಾಧಿಕಾರಿಗಳೂ ಆತನ ಆಗಮನವನ್ನು ನೋಡಿ ಆಶ್ಚರ್ಯಪಟ್ಟರು. ಬಾದಷಹನ ಸೈನ್ಯದಲ್ಲಿವನು ಅನೇಕ ವರ್ಷಕಾಲ ಇದ್ದುದರಿಂದ ಎಲ್ಲರಿಗೂ ಇವನು ಚಿರಪರಿಚಿತನಾಗಿದ್ದನು. ಆದರೂ ಇವನು ಅವರಾರನ್ನೂ ಮಾತನಾಡಿಸದೆ ಹೋಗುತ್ತಿರಲು ಅವರಲ್ಲಿ ಕೆಲವರು—" ಸೆರೆಯಲ್ಲಿದ್ದವನು ಮತ್ತೆ ಹೇಗೆ ತಪ್ಪಿಸಿಕೊಂಡು ಬಂದೆ" ಯೆಂದೂ,

ಮತ್ತೆ ಕೆಲವರು "ತಪ್ಪಿಸಿಕೊಂಡು ಬಂದವನು ಮತ್ತೆಲ್ಲಿಗಾದರೂ ಹೋಗದೆ ಪುನಃ ಬಾದಷಹರ ಬಳಿಗೇಕೆ ಹೋಗುವ" ಎಂದೂ, ಇನ್ನೂ ಕೆಲವರು "ಈಸಲ ಬಾದಷಹನು ನಿನ್ನನ್ನು ಕಠಿಣವಾಗಿ ಶಿಕ್ಷಿಸುವ"ನೆಂದೂ ಹೇಳುತ್ತಿದ್ದರು. ನಯನಪಾಲನು ಅದಾವುದಕ್ಕೂ ಉತ್ತರವನ್ನು ಕೊಡದೆ "ಬಾದಷಹರೆಲ್ಲಿರುವರು?" ಎಂದು ಕೇಳುತ್ತ ಮುಂಬರಿದು ಹೋಗುತ್ತಿದ್ದನು. ಸೈನಿಕರು ಬಹುಕಾಲ ಈತನ ಅಧಿಕಾರದಲ್ಲಿದ್ದುದರಿಂದಲೂ ಅನೇಕರು ಈತನಿಂದ ಉಪಕೃತರಾಗಿದ್ದುದರಿಂದಲೂ ಇವನನ್ನಾರೂ ತಡೆಯದೆ ಬಿಟ್ಟುಬಿಟ್ಟರು. ನಯನಪಾಲನು ಗುಡಾರಗಳೆಲ್ಲವನ್ನೂ ದಾಟಿ, ಬಾದಷಹನ ಶಿಬಿರವನ್ನು ಸಮೀಪಿಸಿ, ದ್ವಾರಪಾಲಕರಿಂದ ತಡೆಯಲ್ಪಟ್ಟ ಅವರೊಡನೆ "ನಾನು ಈಗ ಅತ್ಯಂತ ರಹಸ್ಯವೂ ಅವಸರವೂ ಆದ ರಾಜಕೀಯ ವಿಷಯವನ್ನು ಕುರಿತು ಬಾದಷಹರಲ್ಲಿ ಹೇಳಲು ಬಂದಿರುವೆನು. ವಿಳಂಬವಾದರೆ ಅಪಾಯವು ತಪ್ಪದು. ಈಗ ನೀವು ತಡೆದುದಕ್ಕೆ ಮುಂದೆ ನೀವೇ ಪಶ್ಚಾತ್ತಾಪ ಪಡಬೇಕಾಗುವುದು." ಎಂದು ಹೇಳಲು, ದ್ವಾರರಕ್ಷಕರು ಸ್ವಲ್ಪ ಭಯಪಟ್ಟು ಆತನನ್ನು ಒಳಗೆ ಹೋಗಲು ಬಿಟ್ಟರು.

ನಯನಪಾಲನು, ಅತ್ಯಂತ ಮನೋಹರವಾಗಿ ಅಲಂಕೃತವಾಗಿದ್ದ ಶಿಬಿರವನ್ನೊಳಹೊಕ್ಕು ಬಂದನು. ಅಲ್ಲಲ್ಲಿ ಸೇವಕರು ನಿಯಮಿತ ಕಾರ್ಯಗಳಲ್ಲಿ ಆಸಕ್ತರಾಗಿದ್ದರು, ಒಂದೆಡೆ ಸಭಾಸ್ಥಾನದಂತೆ ಕಟ್ಟಲ್ಪಟ್ಟು ಸುತ್ತಲೂ ಆಸನಗಳಿರಿಸಲ್ಪಟ್ಟಿದ್ದುವು. ಅನೇಕ ಪ್ರಮುಖ ಉದ್ಯೋಗಸ್ಥರು ಆಸನಾಸೀನರಾಗಿ ಪ್ರಕಾಶಿಸುತ್ತಿದ್ದರು. ಆ ಸಭಾಸ್ಥಾನದ ಮಧ್ಯಪ್ರದೇಶದಲ್ಲಿ ಕನಕಸಿಂಹಾಸನಾಧಿಷ್ಠಿತನಾಗಿದ್ದ ಔರಂಗಜೇಬನು ವಿನೋದಕ್ಕಾಗಿ ಗುಡಿಗುಡಿಯನ್ನು ಸೇದುತ್ತ ಸಭಾಸದರೊಡನೆ ಪ್ರಸಂಗ ಮಾಡುತ್ತಿದ್ದನು. ನಯನಪಾಲನು ದೂರದಿಂದಲೇ ಬಾದಷಹನಿಗೆ ಸಲಾಮುಗಳನ್ನೊಪ್ಪಿಸಿ ವಿನೀತನಾಗಿ ಮುಂದೆ ಬಂದು ನಿಂತನು. ಆತನನ್ನು ನೋಡಿ ವಿಸ್ಮಿತನಾಗಿ, "ಎಲಾ, ನಯನಪಾಲಾ! ನಿನ್ನನ್ನು ಕಾರಾಗ್ರಹದಲ್ಲಿಟ್ಟಿದ್ದೆನಲ್ಲಾ! ಹೇಗೆ ಬಂದೆ?" ಎಂದು ಔರಂಗಜೇಬನು ಕೇಳಿದನು.

ನಯನ:—ಕ್ಷಮಿಸಬೇಕು! ಆಗ್ರಹಕ್ಕೆ ಪಾತ್ರನಾಗಿ ಕಾರಾಗ್ರಹಕ್ಕೊಯ್ಯಲ್ಪಟ್ಟ ನಾನು ಅಲ್ಲಿಂದ ತಪ್ಪಿಸಿಕೊಂಡು, ನಿಂತಲ್ಲಿ ನಿಲ್ಲದೆ ಅಲೆದು ರಾಜಪುತ್ರರ ರಹಸ್ಯಗಳೆಲ್ಲವನ್ನೂ ತಿಳಿದುಕೊಂಡು ತಮ್ಮ ಅನುಗ್ರಹಕ್ಕೆ ಪಾತ್ರನಾಗಲು ಬಂದಿರುವೆನು. ಈ ಬಾರಿ ಈ ಸೇವಕನ ಬಿನ್ನಪವನ್ನು ಅವಧರಿಸಿ ಇವನನ್ನು ಸೈನ್ಯದಲ್ಲಿ ಸೇರಿಸಿಕೊಂಡರೆ, ಇವನು ತನ್ನ ವೈರಿಗಳಾದ ರಜಪೂತರ ಮೇಲೆ ಬಿದ್ದು, ಅವರನ್ನು ನಾಶಪಡಿಸಿ, ಪ್ರಭುಚಿತ್ತಕ್ಕೆ ಆನಂದವನ್ನುಂಟು ಮಾಡಬೇಕೆಂದು ಸಂಕಲ್ಪಿಸಿರುವೆನು. ನನ್ನ ಮಾತುಗಳನ್ನು ಉಪೇಕ್ಷಿಸಬಾರದು. ಈಗ ಜಾಗರೂಕರಾಗದಿದ್ದರೆ ಅಪಾಯ ಸಂಭವಿಸದಿರದು.

ಔರಂಗ:— ನಯನಪಾಲಾ! ನಿನ್ನ ಪರಾಕ್ರಮ, ಶಪಥ, ಸ್ವಾಮಿಭಕ್ತಿಗಳೆಲ್ಲವೂ ಚಂಪಾವತಿಯನ್ನು ಕರೆತರುವುದಾಗಿ ಹೇಳಿ ಹೋದಾಗಲೇ ವ್ಯಕ್ತವಾಗಿವೆ. ಮತ್ತೇಕೆ?

ನಯನ:— ಪ್ರಭುಗಳು ಹೀಗೆ ಹೇಳುವುದು ಶುಭಕರವಲ್ಲ. ಹಿಂದೆ ನಾನು ಪ್ರಭುಗಳ ಅನ್ನವನ್ನು ತಿಂದು ಜೀವಿಸಿರುವೆನಾದುದರಿಂದ ಆ ಋಣವನ್ನು ತೀರಿಸಲು ಈಗ ಸನ್ನಿಧಿಯಲ್ಲಿ ಕೆಲವು ರಹಸ್ಯವನ್ನು ತಿಳಿಸಲು ಬಂದಿರುವೆನು. ಇನ್ನು ತಮ್ಮ ಚಿತ್ತ!

ಬಾದಷಹನ ಇಂಗಿತವನ್ನು ತಿಳಿದು ಪರಿವಾರದವರು ದೂರ ಸಾರಿದರು. ಆ ಬಳಿಕ ನಯನಪಾಲನು ಬಾದಷಹನ ಆಜ್ಞೆಯಂತೆ ಸಮೀಪಕ್ಕೆ ಬಂದು ರಹಸ್ಯವಾಗಿ— "ರಾಜಾಧಿರಾಜಾ! ನಾನು ರಾಜಪುತ್ರರೊಡನೆ ಕಪಟಸ್ನೇಹದಿಂದಿದ್ದು ಅಲ್ಲಿ ತಮಗೆ ವಿರುದ್ಧವಾದ ಮಾತನಾಡಿ ದುರ್ಗಾದಾಸನೇ ಮೊದಲಾದವರ ಆಲೋಚನೆಗಳೆಲ್ಲವನ್ನೂ ತಿಳಿದುಕೊಂಡೆನು. ಆತನು ಸೆರೆಯಿಂದ ತಪ್ಪಿಸಿಕೊಂಡುಬಂದು ತನ್ನ ತಂಗಿಯಾದ ಇಂದಿರೆಯೊಡನೆ ಈಗ ಅಬೂಪರ್ವತದ ಮೇಲೆ ವಸಿಸುತ್ತಿರುವನು. ಚಂಪಾವತಿಯ ಕುಮಾರನೂ ಯೋಗಿಯ ಬಳಿಯಲ್ಲಿರುವನು. ನಾಳಿನ ಪ್ರಾತಃಕಾಲಕ್ಕೆ ವಿಮಲಾದೇವಿಯೊಡನೆ ರಾಜಸಿಂಹನು ಯೋಗಿಯ ಸಂದರ್ಶನಕ್ಕಾಗಿ ಅಬೂಪರ್ವತದ ಮೇಲಕ್ಕೆ ಬರುವನಂತೆ! ಈಗ ನಾವು ಸ್ವಲ್ಪ ಯುಕ್ತಿ ಮಾಡಿದರೆ, ಅವರೆಲ್ಲರೂ ನಿರಾಯಾಸವಾಗಿ ನಮ್ಮ ಕೈಗೆ ಸಿಕ್ಕಿಬೀಳುವರು."

ಔರಂಗ:— ಶಾಬಾಸ್, ನಯನಪಾಲಾ! ನಿನ್ನ ಬುದ್ಧಿಗೆ ಮೆಚ್ಚಿದೆನು. ಒಳ್ಳೆಯ ರಹಸ್ಯವನ್ನು ತಿಳಿಸಿದೆ. ಸಂತೋಷ ಈಗಲೇ ನಮ್ಮ ಸೈನ್ಯವನ್ನು ಕಳುಹಿಸಿ ಅವರನ್ನು ಹಿಡಿಸುವೆನು.

ನಯನ:— ದೇವಾ! ಹಾಗೆ ಹೇಳಿದರೆ ಕಾರ್ಯಸಾಧನೆಯಾದಂತಲ್ಲ. ನಾವು ಬರುತ್ತಿರುವ ಸಮಾಚಾರವು ಅವರಿಗೆ ತಿಳಿದುದೇ ಆದರೆ ತಕ್ಷಣವೇ ಅವರು ಓಡಿಹೋಗುವರು. ಆಗ ಅವರನ್ನು ಹಿಡಿಯುವುದು ಅಸಾಧ್ಯವು. ಆದುದರಿಂದ ನಾವು ರಹಸ್ಯವಾಗಿ ಹೋಗಿ ಅವರನ್ನು ಹಿಡಿದುಕೊಳ್ಳಬೇಕು.

ಔರಂಗ:— ನಿನಗೆ ಹುಚ್ಚು ಹಿಡಿಯಿತೇನು! ಪರ್ವತದ ಸುತ್ತಲೂ ನಾವು ಮುತ್ತಿಗೆ ಹಾಕಿದರೆ ಅವರೆಲ್ಲಿಗೆ ಹೋಗುವರು;

ನಯನ:— ನನಗೆ ಹುಚ್ಚು ಹಿಡಿದಿಲ್ಲ. ಅಚಲಯೋಗಿ ಮಹಾಮಾಯಾವಿಯೆಂಬುದು ಪ್ರಭುಚಿತ್ತಕ್ಕೆ ಗೊತ್ತಿಲ್ಲವೆಂದು ಭಾವಿಸಬೇಕಾಗಿದೆ. ಇಂದಿರಾ ದುರ್ಗಾದಾಸರ ಚಾತುರ್ಯವು ಅನುಭವಕ್ಕೆ ಬಂದೇ ಇರಬಹುದು.

ಔರಂಗ:-ಹಾಗಾದರೆ ಈಗ ನೀನು ಹೇಳುವ ಉಪಾಯವೇನು?

ನಯನ:— ನಾಳಿನ ಪ್ರಾತಃಕಾಲ ರಾಜಸಿಂಹನು ವಿಮಲೆಯೊಡನೆ ಆ ಪರ್ವತಕ್ಕೆ ಬರುವನು. ಆದುದರಿಂದ ನಾವು ನಾಳಿನ ದಿನ ಮಧ್ಯಾಹ್ನವೇ ಆ ಪರ್ವತಕ್ಕೆ ಮುತ್ತಿಗೆಯನ್ನು ಹಾಕಬೇಕು. ಇಷ್ಟೇ ಅಲ್ಲದೆ ಆ ಪರ್ವತ ಪ್ರಾಂತ್ಯವು ಅರಣ್ಯಮಯವಾಗಿಯೂ ಕಣಿವೆಗಳಿಂದ ಕೂಡಿದುದಾಗಿಯೂ ಇರುವುದರಿಂದ ನಮ್ಮ ಸೈನ್ಯವನ್ನು ಚಿಕ್ಕಚಿಕ್ಕ ಭಾಗಗಳನ್ನಾಗಿ ಮಾಡಿ ಪರ್ವತವನ್ನು ಸಮೀಪಿಸಿ ಮರಗಳ ಮರೆಯಲ್ಲಿಯೂ ಕಣಿವೆಗಳಲ್ಲಿಯೂ ಸೈನ್ಯವನ್ನು ರಹಸ್ಯವಾಗಿರಿಸಿ, ಪರ್ವತವನ್ನು ಮುತ್ತಬೇಕು. ಆ ಅರಣ್ಯಮಾರ್ಗಗಳನ್ನೂ ಕಣಿವೆಯದಾರಿಗಳನ್ನೂ ನಾನು ಚನ್ನಾಗಿ ತಿಳಿದಿರುವೆನು. ಈ ದಾರಿಯಲ್ಲಿ ನಾನು ಸೈನ್ಯವನ್ನು ರಹಸ್ಯವಾಗಿ ತೆಗೆದುಕೊಂಡು ಹೋಗಬಲ್ಲೆನು. ಇದರಮೇಲೆ ತಮ್ಮ ಚಿತ್ತ! ಇದರ ಪ್ರತಿಫಲವಾಗಿ ಜೋಧಪುರವನ್ನು ಮಾತ್ರ ನನಗೆ ದಯೆಪಾಲಿಸಬೇಕು. ”

ಔರಂಗಜೇಬನು ಸಮ್ಮತಿಸಿದುದಲ್ಲದೆ ಶುಭವರ್ತಮಾನವನ್ನು ಹೇಳಿದುದಕ್ಕಾಗಿ ಮುತ್ತಿನಹಾರವನ್ನು ನಯನಪಾಲನಿಗೆ ಬಹುಮಾನವಾಗಿ ಕೊಟ್ಟನು. ಅನಂತರ ಬಾದಷಹನು ತನ್ನ ಸೇನಾನಾಯಕನನ್ನು ಕರೆಯಿಸಿ ಒಂದು ಗಂಟೆಯೊಳಗಾಗಿ ಸೇನೆಯನ್ನು ಪ್ರಯಾಣಕ್ಕೆ ಸಿದ್ಧಮಾಡಿಸಬೇಕೆಂದು ಆಜ್ಞಾಪಿಸಿದನು; ಮೊಗಲ್‌ಸೇನೆ ಮೂರುದಿನಗಳ ಅವಧಿಯಲ್ಲಿಯೂ ಸಿದ್ಧವಾಗಲಾರದ ಸ್ಥಿತಿಯಲ್ಲಿದ್ದಿತು. ಆದರೂ ಔರಂಗಜೇಬನ ಆಜ್ಞೆಯನ್ನು ಉಪೇಕ್ಷಿಸುವ ಅಥವಾ ಪ್ರತಿಭಟಿಸುವ ಧೈರ್ಯವಿಲ್ಲದೆ ಅತಿ ಪ್ರಯಾಸದಿಂದ ಸಿದ್ಧವಾಗಬೇಕಾಯಿತು. ಇಷ್ಟು ಆಕಸ್ಮಿಕವಾಗಿ ಹೊರಡುವ ಕಾರಣವೇನೆಂಬ ಶಂಕೆಯು, ಪ್ರತಿಯೊಬ್ಬ ಸೈನಿಕನನ್ನೂ ಬಾಧಿಸುತ್ತಿದ್ದರೂ ಬಾದಷಹನಲ್ಲಿ ಪ್ರಸ್ತಾಪಿಸುವಷ್ಟು ಸಾಹಸವು ಯಾರಿಗೂ ಉಂಟಾಗಲಿಲ್ಲ. ಸಾದತ್‌ಖಾನನು ಮಾತ್ರ ಧೈರ್ಯದಿಂದ ಮುಂದೆ ಬಂದು ಬಾದಷಹನಿಗೆ ಕೈಮುಗಿದು, “ಪ್ರಭುಗಳು ನಿರೂಪಿಸಬೇಕು. ಈಗ ನಾವು ಎಲ್ಲಿಗೆ ಹೊರಡಬೇಕು? ಆಕಸ್ಮಿಕವಾಗಿ ಹೊರಡುವ ಕಾರಣವೇನು! ಸೈನ್ಯಾಧಿಪತಿಯಾಗಿರುವುದರಿಂದ ಕೇಳಬೇಕಾಯಿತು. ” ಎಂದು ಬಿನ್ನವಿಸಿದನು. ಅಷ್ಟರಿಂದಲೇ ಬಾದಷಹನು ಕ್ರೋಧಾನ್ವಿತನಾಗಿ—“ಅಸಂಗತಿಗಳೆಲ್ಲಾ ನಿನಗೇಕೆ? ಈಗ ನಾನೇ ಸೇನಾನಾಯಕನು. ನಾನು ಹೋದಕಡೆಗೆ ನೀವು ಬರಬೇಕು. ” ಎಂದು ನುಡಿಯಲು ಸಾದತ್‌ಖಾನನು ಮರುಮಾತಿಲ್ಲದೆ ಸೈನಿಕರೊಡನೆ ಹೊರಡಲು ಸಿದ್ಧವಾದನು.

ಔರಂಗಜೇಬನ ಆಜ್ಞೆಯಂತೆ ನಯನಪಾಲನು ತುರುಗಾರೂಢನಾಗಿ ಮುಂದೆ ಹೊರಟನು. ಆತನ ಹಿಂದೆ ಫಾರಸೀಕ ತುರಗವನ್ನೇರಿ ಬಾದಷಹನೂ ಆತನ ಹಿಂದೆ ಸೇನಾಪಾರವೂ ಅದರಹಿಂದೆ ಜನಾನಾಸಮೂಹವೂ ಭೋಜನಸಾಮಗ್ರಿಗಳೂ ಯುದ್ಧದ ಸಾಹಿತ್ಯಗಳೂ ಕೆಲವರು ಭಟರೂ ಹೊರಟರು. ನಯನಪಾಲನು ಬಾದಷಹನೊಡನೆ ಪ್ರಸಂಗಿಸುತ್ತ ಹೋಗುತ್ತ ಆ ಪ್ರದೇಶದಲ್ಲಿ ಅರಣ್ಯಮಾರ್ಗಗಳನ್ನೂ ಕಣಿವೆಯ ದಾರಿಗಳನ್ನೂ ಆತನಿಗೆ ತೋರಿಸುತ್ತ — “ದೇವಾ! ನಾನು ಪಾದಸೇವೆಗೆ ಬಂದು ಸೇರುವಮೊದಲು ಈ ಅರಣ್ಯಪ್ರದೇಶದಲ್ಲಿಯೇ ಸಂಚರಿಸುತ್ತಿದ್ದೆನು. ಈ ಕಣಿವೆದಾರಿಗಳೆಲ್ಲವೂ ನನಗೆ ಚನ್ನಾಗಿ ಗೊತ್ತಿರುವುವು. ನನಗೆ ತಿಳಿಯದ ದಾರಿಯೇ ಇಲ್ಲಿರುವುದಿಲ್ಲ.” ಎಂದು ಹೇಳುತ್ತಿದ್ದನು.

ನಯನಪಾಲನು ಕ್ರಮಕ್ರಮವಾಗಿ ತನ್ನ ಮಾತಿನಲ್ಲಿ ಪೂರ್ಣಭರವಸೆಯಿಟ್ಟ ಔರಂಗಜೇಬನನ್ನು ಸ್ವಲ್ಪದೂರ ಪರ್ವತದ ಅರಣ್ಯಮಾರ್ಗದಲ್ಲಿ ಕರೆದೊಯ್ಯುತಿದ್ದನು. ಆ ಬಳಿಕ ಒಂದು ಇಕ್ಕಟ್ಟಾದ ಕಣಿವೆಯಲ್ಲಿ ಪ್ರವೇಶಿಸಿದನು. ಔರಂಗಜೇಬನು ಕಣಿವೆಯ ದಾರಿಯು ಇಕ್ಕಟ್ಟಾಗಿ, ದಾರಿಯುದ್ದಕ್ಕೂ ಸೂಜಿಯಂತಿರುವ ಕಲ್ಲುಗಳು ಅಮರಿದ್ದುದನ್ನು ನೋಡಿ, “ನಯನಪಾಲಾ! ಇದೇನು? ಈ ಮಾರ್ಗವು ಇಷ್ಟು ದುರ್ಗಮವಾಗಿರುವುದು? ಈ ಮಾರ್ಗದಲ್ಲಿ ಪ್ರಯಾಣಮಾಡುವುದು ಹೇಗೆ?” ಎಂದು ಕೇಳಲು, ನಯನಪಾಲನು “ದೇವಾ! ಶಂಕೆಗೆ ಕಾರಣವಿಲ್ಲ. ಸ್ವಲ್ಪದೂರ ಮಾತ್ರ ಹೀಗಿರುವುದು ಆಮೇಲೆ ಸುಲಭವಾಗಿ ಪ್ರಯಾಣಮಾಡಬಹುದು. ನನ್ನ ಮಾತಿನಲ್ಲಿ ಭರವಸೆಯಿರಿಸಬೇಕು. ” ಎಂದನು. ನಯನಪಾಲನೂ ಆತನ ಹಿಂದೆ ಬಾದಷಹನೂ ಆತನ ಹಿಂದೆ ಸೈನ್ಯಸಮೂಹವೂ ಅತ್ಯಂತ ಪ್ರಯಾಸದಿಂದ ಆ ಕಣಿವೆಯಲ್ಲಿ ಪ್ರವೇಶಿಸಿ ಹೋಗುತ್ತಿದ್ದುವು. ಭೋಜನಸಾಮಗ್ರಿ—ಯುದ್ಧಸಾಮಗ್ರಿಗಳೂ ಜನಾನಾ ಸಮೂಹವೂ ಇನ್ನೂ ಕಣಿವೆಯ ಹೊರಗಡೆಯಲ್ಲಿಯೇ ಇದ್ದುವು. ಅಷ್ಟರಲ್ಲಿಯೇ ಆಕಸ್ಮಿಕವಾಗಿ ಎಲ್ಲಿಂದಲೋ ಕೆಲವರು ರಾಜಪುತ್ರರು ನಾಗಾಲೋಟದಿಂದ ಬಂದು ಕಣಿವೆಯ ಬಾಗಿಲಲ್ಲಿ ಅಡ್ಡಗಟ್ಟಿದರು. ಪಾಪ! ಅವರೆಲ್ಲರೂ ದಿಗ್ಭ್ರಮೆಯಿಂದ ನಿಂತುಬಿಟ್ಟರು.

ಮೂವತ್ತಆರನೆಯ ಪ್ರಕರಣ.

(ರಾಜಪುತ್ರರ ಯುದ್ಧ)

ಮೊಗಲರು ಪ್ರವೇಶಿಸಿದ್ದ ಪರ್ವತಮಾರ್ಗವು ಒಂದು ಕಣಿವೆಯಂತೆ ಸುಮಾರು ಹತ್ತು ಹನ್ನೆರಡು ಮೈಲಿಗಳವರೆಗೂ ವ್ಯಾಪಿಸಿದ್ದಿತು. ಆ ಕಣಿವೆಯ ಇಕ್ಕಡೆಗಳಲ್ಲಿಯೂ ಮಹೋನ್ನತವಾದ ಪರ್ವತ ಪಂಕ್ತಿಗಳಿದ್ದವು. ಕಣಿವೆದಾರಿಯ ದ್ವಾರವು ಅತ್ಯಂತ ಸಂಕೋಚವಾಗಿ ಒಮ್ಮೆ ನಾಲ್ಕು ಜನರು ಮಾತ್ರ ಹೋಗಬಹುದಾಗಿದ್ದಿತು. ಭಯಂಕರವಾದ ಆ ಮಾರ್ಗದ ಎರಡು ಕಡೆಗಳಲ್ಲಿದ್ದ ಪರ್ವತ ಪಂಕ್ತಿಗಳೆರಡೂ ಕ್ರಮ ಕ್ರಮವಾಗಿ ಸ್ವಲ್ಪ ದೂರ ಹೋದಮೇಲೆ ಒಂದನ್ನೊಂದು ಸೇರಿಕೊಂಡಿದ್ದುವು. ಪ್ರಾರಂಭದಿಂದ ಪರ್ವತಸಂಧಿಯವರೆಗೂ ಆ ಕಣಿವೆಯ ಮಾರ್ಗವು ಕಲ್ಲುಗಳಿಂದಲೂ ಕಂಟಕದಿಂದಲೂ ಕೂಡಿ, ಜನ ಸಂಚಾರಕ್ಕೆ ಅಸಾಧ್ಯವಾಗಿದ್ದಿತು.

ಇಂತಹ ಕಣಿವೆಯಲ್ಲಿ ಸೈನಿಕರೆಲ್ಲರೂ ಸಿಕ್ಕಿರುವಾಗ ಕೆಲವರು ರಾಜಪುತ್ರರು ಅಕಸ್ಮಾತ್ತಾಗಿ ಬಂದು ಕಣಿವೆಯ ದ್ವಾರದಲ್ಲಿ ಅಡ್ಡವಾಗಿ ನಿಂತುಕೊಂಡು ಒಳಗಿರುವವರನ್ನು ಹೊರಕ್ಕೆ ಬರದಂತೆ ಮಾಡಿರುವುದನ್ನು ಕುರಿತು ನಮ್ಮ ವಾಚಕರು ವಿಸ್ಮಿತರಾಗಬಹುದು; ಆದಿನ ನಯನಪಾಲನು ದುರ್ಗಾದಾಸನೊಡನೆ ಹೇಳಿಬಂದ ರಹಸ್ಯವೇನಿರಬಹುದೆಂಬುದು ಈಗ ಅವರ ವಿಚಾರಕ್ಕೆ ಬಂದರೆ, ವಿಸ್ಮಿತರಾಗುವಂತಿಲ್ಲ. ಏಕೆಂದರೆ ಅವನು, ದುರ್ಗಾದಾಸನೊಡನೆ ತಾನು ಈಗಲೇ ಹೋಗಿ ಔರಂಗಜೇಬನನ್ನು ಅನೇಕಯುಕ್ತಿಗಳಿಂದ ಮೋಸಪಡಿಸಿ ಸೈನ್ಯಸಮೇತನಾಬಾತನನ್ನು ಈ ಕಣಿವೆಯ ಮಾರ್ಗವಾಗಿ ಕರೆತರುವುದಾಗಿಯೂ ಅಷ್ಟರಲ್ಲಿ ದುರ್ಗಾದಾಸನು ಓಡಿಹೋಗಿ ರಾಜಸಿಂಹನಿಗೆ ವರ್ತಮಾನವನ್ನು ಹೇಳಿ ಆತನು ಉದಯಪುರಕ್ಕೆ ಹೋಗುವುದನ್ನು ಬಿಟ್ಟು ರಾಜಪುತ್ರರೊಡನೆ ಸೇನಾಪರಿವೃತನಾಗಿ ಬಂದು, ಬಾದಷಹನು ಕಣಿವೆಯೊಳಹೊಕ್ಕ ಕೂಡಲೆ ಕಣಿವೆಯ ದ್ವಾರವನ್ನು ಅಡ್ಡಗಟ್ಟುವಂತೆ ಮಾಡಿ, ಪರ್ವತದ ಮೇಲ್ಗಡೆಯಿಂದ ಯುದ್ಧಮಾಡುವಂತೆ ತಿಳಿಸಬೇಕೆಂಬುದಾಗಿಯೂ ರಹಸ್ಯವನ್ನು ಸೂಚಿಸಿರಬೇಕೆಂದೂ ದುರ್ಗಾದಾಸನು ಯೋಗಿಯ ಪರಾಮರ್ಶವನ್ನು ಪಡೆದು ರಾಜಸಿಂಹನಿಗೆ ವಿಚಾರವನ್ನು ತಿಳಿಸಲು, ರಾಜಸಿಂಹನು ಅದನ್ನು ಅನುಮೋದಿಸಿ ಪರ್ವತದ ಮೇಲೆ ತನ್ನ ಸೈನ್ಯವನ್ನು ಮರೆಯಾಗಿ ನಿಲ್ಲಿಸಿ, ಕೆಲವರು ಮಾತ್ರ ಕಣಿವೆಯ ದ್ವಾರವನ್ನು ಕಟ್ಟುವಂತೆ ಏರ್ಪಡಿಸಿರಬೇಕೆಂದೂ ನಾವು ಊಹಿಸಬಹುದಾಗಿದೆ.

ಹೇಗೂ ಮೊಗಲರು ಕಣಿವೆಯನ್ನು ಪ್ರವೇಶಿಸಿದ ಕೂಡಲೆ ಸಮೀಪದ ಗುಹೆಯಲ್ಲಿದ್ದ ರಾಜಪುತ್ರರು ಅಕಸ್ಮಾತ್ತಾಗಿ ಬಂದು ದ್ವಾರದಲ್ಲಿ ನಿಂತು ಅವರೊಡನೆ ಯುದ್ಧಮಾಡತೊಡಗಿದರು. ಬಾದಷಹನು ಮೊದಲೇ ನಯನಪಾಲನೊಡನೆ ಬಹುದೂರ ಮುಂದೆ ಹೊರಟು ಹೋಗಿದ್ದುದರಿಂದ ಆತನಿಗೆ ಈ ಸಂಗತಿಯು ತಿಳಿಯಲಿಲ್ಲ. ಕ್ರಮಕ್ರಮವಾಗಿ ಯುದ್ಧವು ಘೋರವಾಗಲು, ಬಾದಷಹನು ದ್ವಾರದಲ್ಲೇನೋ ತೊಂದರೆಯಾಗಿರುವುದೆಂದು ಭಾವಿಸಿ ಆತನು ನಯನಪಾಲನನ್ನು ನೋಡಿ,—"ನಯನಪಾಲಾ! ಇದೇನು? ದ್ವಾರದಲ್ಲೇನೋ ಅಲ್ಲಕಲ್ಲೋಲವಾಗಿರುವಂತೆ ಕಾಣುತ್ತಿದೆ." ಎಂದನು. ಆಗ ನಯನಪಾಲನು "ಸರ್ಕಾರ್, ಅಪ್ಪಣೆಯಾದರೆ ಈಗಲೇ ಹೋಗಿ ಸಮಾಚಾರವನ್ನು ತಿಳಿದುಕೊಂಡು ಬರುವೆನು. ಇಷ್ಟುಮಾತ್ರಕ್ಕೇ ತಾವು ಭಯಪಡುವುದೇಕೆ? ನಾನಿರುವಾಗ ತಮಗೆ ಆವ ವಿಧವಾದ ಶಂಕೆಗೂ ಅವಕಾಶವಿರಲಾರದು." ಎಂದು ಹಿಂದಕ್ಕೆ ಬಂದು "ಇದೇನೀ ಅಲ್ಲಕಲ್ಲೋಲವು?" ಎಂದು ಸೈನಿಕರನ್ನು ವಿಚಾರಿಸುತ್ತ ಅತ್ಯಂತ ರೋಷಹೊಂದಿದವನಂತೆ ಕತ್ತಿಯನ್ನು ಗರಗರನೆ ತಿರುಗಿಸುತ್ತಾ ದ್ವಾರದ ಬಳಿಗೆ ಬಂದು ರಾಜಪುತ್ರರಿಗೆ ರಹಸ್ಯವಾಗಿ ಸನ್ನೆಯನ್ನು ಮಾಡಲು, ಕೂಡಲೆ ರಾಜಪುತ್ರರು ಯುದ್ಧವನ್ನು ನಿಲ್ಲಿಸಿ ದ್ವಾರದಲ್ಲಿ ಸ್ವಲ್ಪ ಸ್ಥಳವನ್ನು ಬಿಟ್ಟರು. ಕೂಡಲೆ ನಯನಪಾಲನು ಚಮತ್ಕಾರದಿಂದ ದ್ವಾರದಲ್ಲಿ ಹೊಕ್ಕು ರಾಜಪುತ್ರರನ್ನು ಸೇರಿದನು. ಉತ್ತರಕ್ಷಣದಲ್ಲಿಯೇ ರಾಜಪುತ್ರರು ಸೇರಿ ಪುನಃ ಯುದ್ಧಮಾಡತೊಡಗಿದರು. ಇತ್ತ ಬಾದಷಹನು ನಯನಪಾಲನ ಆಗಮನವನ್ನು ಎದುರು ನೋಡುತ್ತಿದ್ದನು. ಸ್ವಲ್ಪ ಹೊತ್ತಿನೊಳಗಾಗಿಯೇ ಯುದ್ಧವು ಪ್ರಬಲವಾಗಿ ಬಾದಷಹನವರೆಗೂ ವ್ಯಾಪಿಸಿತು. ಆಗ ಬಾದಷಹನು ತನಗಾವುದೋ ವಿಪತ್ತು ಸಂಭವಿಸಿತೆಂದುತಿಳಿದು ತನ್ನ ಸೈನ್ಯಾಧಿಪತಿಯೊಡನೆ ಆಲೋಚಿಸತೊಡಗಿದನು.

ಇಷ್ಟರಲ್ಲಿ ಇಕ್ಕಡೆಗಳಲ್ಲಿ ಪರ್ವತಗಳಮೇಲಿನಿಂದ ಭಿಲ್ಲರೂ ರಾಜಪುತ್ರರೂ ಬಂದು ಮೊಗಲರೊಡನೆ ಹೋರಾಡತೊಡಗಿದರು. ಬಾದಷಹನು ಈ ಸಮಾಚಾರವನ್ನು ತಿಳಿದು ಇದೆಲ್ಲವೂ ನಯನಪಾಲನು ಮಾಡಿದ ಮೋಸವೇ ಸರಿ. ಎಂದು ನಿಶ್ಚಯಿಸಿ ತತ್ತರ ಪಡುತ್ತ ಹುಚ್ಚುಹಿಡಿದವನಂತೆ ಅರೆ ಸಾದತ್‌ಖಾ, ಅರೆ ಮಹಮ್ಮದ್‌ಖಾ, ಅರೆ ಮಹಮ್ಮದ್ ಆಲಿ, ಎಂದು ಕೂಗುತ್ತ ನಯನಪಾಲನನ್ನು ಮನಬಂದಂತೆ ಬಯ್ಯುತ್ತ, ಮೇಲ್ಗಡೆಯಿಂದ ಭಿಲ್ಲರು ಕಲ್ಲುಗಳನ್ನೂ ಬಾಣಗಳನ್ನೂ ಮಳೆಯಂತೆ ಪ್ರಯೋಗಿಸುತ್ತಿದ್ದುದನ್ನು ತಡೆಯಲಾರದೆ ತನ್ನವರಿಗೆ, 'ಪರ್ವತವನ್ನು ಹತ್ತಿರಿ, ಜಾಗ್ರತೆ-ಜಾಗ್ರತೆ!'

ಎಂದು ಆಜ್ಞಾಪಿಸಿದನು. ಸಾಧಾರಣವಾಗಿ ಆ ಪರ್ವತವನ್ನು ಹತ್ತುವುದಕ್ಕೆ ಯಾರಿಂದಲೂ ಅಸಾಧ್ಯ. ಅದರಲ್ಲಿಯೂ ಮೇಲಿಂದ ಭಿಲ್ಲರು ಶಿಲಾವೃಷ್ಟಿಯನ್ನೂ ಬಾಣವೃಷ್ಟಿಯನ್ನೂ ಕರೆಯುತ್ತಿದ್ದರು. ಹೀಗಿರುವಾಗ ಅವರ ಪ್ರಯತ್ನವು ಹೇಗೆ ಸಾಗುವುದು? ಸೈನಿಕರ ದುರವಸ್ಥೆಯನ್ನು ನೋಡಿ ಮತ್ತೆಲ್ಲಿ ಯಾದರೂ ಮಾರ್ಗವಿರುವುದೇನೆಂದು ಬಾದಷಹನೇ ಹುಡುಕಿ ನೋಡಿದನು. ಆ ಪರ್ವತಸಂಧಿಯಲ್ಲದೆ ಮತ್ತಾವುದೂ ಅವನಿಗೆ ಕಾಣಲಿಲ್ಲ, ಒಂದುಕಡೆಯ ಪರ್ವತದ ಮೇಲೆ ಸಕಲ ಸೇನಾಸಮೇತನಾಗಿ ದುರ್ಗಾದಾಸನೂ ಮತ್ತೊಂದು ಪರ್ವತದಮೇಲೆ ಭಿಲ್ಲರೊಡನೆ ಶಿವಸಿಂಗನೂ ನಯನಪಾಲನೂ, ದ್ವಾರದಲ್ಲಿ ರಾಜಸಿಂಹನೂ ರಜಪೂತ ಸೇನೆಯೂ ಪುರುಷ ವೇಷಧಾರಿಣಿಯರಾಗಿದ್ದ ವಿಮಲೆ ಪದ್ಮೆಯರೂ ಕ್ಷಣವಿರಾಮ ವಿಲ್ಲದಂತೆ ಆಯುಧಗಳನ್ನು ಪ್ರಯೋಗಿಸುತ್ತಿದ್ದರು. ಸಾವಿರಾರು ಮೊಗಲರು ಶತ್ರುಗಳಿಗೆ ತಮ್ಮ ಪ್ರಾಣಗಳನ್ನೊಪ್ಪಿಸುತ್ತಿದ್ದರು. ಎತ್ತನೋಡಿದರೂ ಸ್ವಲ್ಪವೂ ವಿರಾಮವಿಲ್ಲದೆ ಶತ್ರುಗಳು ಯುದ್ಧಮಾಡುತ್ತಿದ್ದುದರಿಂದ ಎಲ್ಲಿ ಹೋಗುವುದಕ್ಕೂ ದಾರಿತೋರದೆ ಇಂದಿಗೆ ತಮ್ಮ ಆಯುಸ್ಸು ಮುಗಿಯಿತೆಂದು ಪರಿತಪಿಸುತ್ತಿದ್ದರು. ಕೈಗಳಲ್ಲಿ ಮಹತ್ತರವಾದ ಆಯುಧಗಳಿದ್ದರೂ ಅವರು ನಿರಾಯುಧರಂತೆ ನಿಲ್ಲಬೇಕಾಯಿತು. ಅಂತ್ಯಕಾಲದ ಅಲ್ಲಾಪ್ರಾರ್ಥನೆ ಮಾಡತೊಡಗಿದರು. ಯಾವಕಡೆಯಲ್ಲಿ ನೋಡಿದರೂ ರಾಜಪುತ್ರರೆ! ಎಷ್ಟುದೂರನೋಡಿದರೂ ಭಿಲ್ಲರೆ! ಪರ್ವತಗಳೆರಡೂ ಆದಿನ ರಾಜಪುತ್ರರಿಂದಲೂ ಭಿಲ್ಲರಿಂದಲೂ ತುಂಬಿದ್ದುವು. ಬಾದಷಹನಿಗೆ ಉದಯಪುರಿಯೇನಾದಳೋ-ಎಂಬ ಚಿಂತೆ ಬಹುವಾಯಿತು. ಚಿಂತೆಯು ಬಲವಾಗುತ್ತ ಬಂದಂತೆಲ್ಲಾ ತನ್ನ ಸೈನ್ಯವು ಶತ್ರುಗಳ ಪರಾಕ್ರಮವನ್ನು ಸಹಿಸದೆ ನೆಲಕ್ಕುರುಳುತ್ತಿದ್ದುದನ್ನೂ ಕ್ಷಣಕ್ಷಣಕ್ಕೂ ಶತ್ರುಪಕ್ಷದವರ ಅಟ್ಟಹಾಸವು ಹೆಚ್ಚುತ್ತಿದ್ದುದನ್ನೂ ನೋಡಿ ಕ್ರೋಧಮೂರ್ಛಿತನಾದನು.

ಕಣಿವೆಯ ದ್ವಾರದಲ್ಲಿ ರಾಜಪುತ್ರರೊಡನೆ ವಿಮಲೆ ಪದ್ಮೆಯರೂ ಸೇರಿ ಮೊಗಲರೊಡನೆ ಘೋರವಾಗಿ ಯುದ್ಧ ಮಾಡುತ್ತಿರುವಾಗ ದೂರದಿಂದ ಸ್ತ್ರೀಯರ ಆರ್ತನಾದವು ಕೇಳಬಂದಿತು. ಆಗ ಅವರಿಬ್ಬರೂ ತಕ್ಷಣವೇ ಯುದ್ಧವನ್ನು ಬಿಟ್ಟು ಸ್ವಲ್ಪ ದೂರ ಹೋಗಿ ನೋಡಲು, ಕೆಲವು ಮಂದಿ ರಾಜಭಟರು ಮೊಗಲಾಯಿ ಜನಾನಾವನ್ನು ಮುತ್ತಿ ಎಲ್ಲಿಗೋ ಕರೆದುಕೊಂಡು ಹೋಗುತ್ತಿದ್ದರು. ಈ ಮಹತ್ತರವಾದ ಯುದ್ಧಕ್ಕೆ ಕಾರಣಭೂತಳಾದವಳು ಉದಯಪುರಿಯೆಂದು ತಿಳಿದಿದ್ದರೂ ಆಕೆಗೆ ಅವಮಾನವುಂಟುಮಾಡುವುದು ಯೋಗ್ಯವಲ್ಲೆಂದು ಭಾವಿಸಿ ಸದಯಹೃದಯೆಯಾದ ವಿಮಲೆಯು ರಾಜಪುತ್ರರ ಕೈಸೆರೆ ಸಿಕ್ಕಿ ಪರಿತಪಿಸುತ್ತಿದ್ದ ಉದಯಪುರಿಯ ಬಳಿಗೆ ಬಂದಳು. ಉದಯಪುರಿಯು ಪಶ್ಚಾತ್ತಾಪಪಡುತ್ತಾ ತನ್ನಲ್ಲಿ ತಾನೇ—“ಅಯ್ಯೋ! ನಿಷ್ಕಾರಣವಾಗಿ ರಾಜಪುತ್ರರ ಮೇಲೆ ಯುದ್ಧಕ್ಕೆ ಪ್ರೇರಿಸಿದೆನೇಕೆ? ವಿಮಲಾದೇವಿಯ ಪತ್ರವನ್ನು ನೋಡಿ ನಾನು ಸುಮ್ಮನಿರದೆ ರೋಷವನ್ನು ವಹಿಸಿ ಬಾದಷಹರನ್ನು ಕೆರಳಿಸಿದುದರಿಂದಲ್ಲವೇ ನನಗೀ ಶಿಕ್ಷೆಯಾಯಿತು?” ಎಂದು ಹಲುಬುತ್ತಿದ್ದಳು.

ವಿಮಲೆಯು ಉದಯಪುರಿಯ ದುರವಸ್ಥೆಯನ್ನು ನೋಡಿ ಕನಿಕರಪಟ್ಟು ರಾಜಪುತ್ರರನ್ನು ಧಿಕ್ಕರಿಸಿ, ಸ್ತ್ರೀಯರನ್ನು ಹಿಂಸಿಸುವುದು ಪರಾಕ್ರಮವೆಂದು ಭಾವಿಸುವವರು ಕ್ರೂರರೆಂದೂ ನಿಜವಾದ ಶೂರರೆನಿಸದೆ ಹೇಡಿಗಳೆನಿಸುವರೆಂದೂ ಶತ್ರುಪಕ್ಷದ ಸ್ತ್ರೀಯರನ್ನು ಕೂಡ ಗೌರವಬುದ್ಧಿಯಿಂದ ನೋಡುವುದೂ ಸಮಾನಸ್ಕಂಧರಾದ ಶತ್ರುಗಳೊಡನೆ ಪ್ರತ್ಯಕ್ಷವಾಗಿ ಹೋರಾಡುವುದೂ ನಿಜವಾದ ಪರಾಕ್ರಮವೆಂದೂ ಔರಂಗಜೇಬನಲ್ಲಿ ಪರಾಕ್ರಮವನ್ನು ತೋರಿಸಬೇಕೇ ಹೊರತು,ಅವನ ರಾಣಿವಾಸವನ್ನು ಹಿಂಸಿಸುವುದು ಸರಿಯಲ್ಲವೆಂದೂ ಸೈನಿಕರಿಗೆ ಬೋಧಿಸಿ, ದಾಸೀಜನರೊಡಗೂಡಿದ್ದ ಬಾದಷಹನ ಜನಾನಾವನ್ನು ಸಮೀಪದ ಗುಡಾರದಲ್ಲಿರಿಸಿ ಸುತ್ತಲೂ ಕಾವಲಿರಿಸಿ, ಅವರಿಗೆ ಬೇಕಾದ ಆಹಾರ ಸಾಮಗ್ರಿಗಳನ್ನೊದಗಿಸುವಂತೆ ಏರ್ಪಡಿಸಿದಳು.

ಜನಾನಾದವರು ರಾಜಪುತ್ರರಸೆರೆಯಿಂದ ತಮ್ಮನ್ನು ಬಿಡಿಸಿದುದಲ್ಲದೆ ತಮಗಿಷ್ಟು ಉಪಕಾರಮಾಡಿದವರಾರೋ ಎಂಬ ಕುತೂಹಲದಿಂದ ವಿಚಾರಿಸಲು, ಮಹಾರಾಣಿ ವಿಮಲಾದೇವಿಯೆಂದು ತಿಳಿದು, ಅಂತಹ ಅನುಕಂಪನಶೀಲಳಾದ ವಿಮಲಾದೇವಿಯಲ್ಲಿ ತಾನು ಚಿಂತಿಸಿದ ದ್ರೋಹಕ್ಕಾಗಿ ತನ್ನನ್ನು ತಾನೇ ಧಿಕ್ಕರಿಸಿಕೊಂಡಳು. ಉದಯಪುರಿಯ ದಾಸೀಜನರು ವಿಮಲೆಯ ಔದಾರ್ಯಗುಣವನ್ನು ಕೊಂಡಾಡಿದರು.

ಇತ್ತ ರಾಜಸಿಂಹನು ಮೊಗಲ್‌ಸೇನೆಯ ದೈನ್ಯಾವಸ್ಥೆಯನ್ನು ನೋಡಿ ಕನಿಕರಪಟ್ಟನಾದರೂ ಔರಂಗಜೇಬನನ್ನು ಪೂರ್ಣವಾಗಿ ಸೋಲಿಸಿದ ಹೊರತು ಆತನಲ್ಲಿ ದಯೆಯನ್ನು ತೋರಬಾರದೆಂದು ನಿಶ್ಚಯಿಸಿದನು. ಅದುದರಿಂದ ಬಾದಷಹನಿಗೆ ಹೀಗೆಂದು ಬರೆದು ಕಳುಹಿದನು.—

“ತಮ್ಮ ಇಷ್ಟಬಂದಂತೆ ಕ್ರೂರಕೃತ್ಯಗಳನ್ನು ಮಾಡುವುದು ಅತ್ಯಂತ ಶೋಚನೀಯವು. ನೀವು ಚಕ್ರವರ್ತಿಗಳಾದರೂ ರಾಜಪುತ್ರರು ಬಲಹೀನರೆಂದು ಭಾವಿಸಬಾರದು. ಹೇಯವಾದ ಜಿಜಿಯಾ ಕಂದಾಯವನ್ನು ಹಾಕಿ, ಪ್ರಜೆಗಳಿಗೆ ಅತ್ಯಂತ ಕಷ್ಟಗಳನ್ನುಂಟುಮಾಡಿರುವಿರೆಂದು ಕೇಳಿರುವೆನು. ಈ ಕುತ್ಸಿತಭಾವನೆಯೊಂದಿಗಾದರೂ ನಾಶವಾಗಬಹುದೆಂದು

ಈ ವರೆಗೆ ನಿರೀಕ್ಷಿಸಿದೆನು. ಆದರೂ ತಮಗೆ ಸನ್ಮಾರ್ಗವೆಂಬುದು ಗೋಚರವಾಗಲಿಲ್ಲ. ಪೃಥವೀಸಿಂಗನನ್ನು ಕೊಂದ ಮಾತ್ರದಿಂದ ಜೋಧಪುರವು ಕೈವಶವಾಗುವುದೆಂದೂ ಉಳಿದ ರಾಜಪುತ್ರರೆಲ್ಲರೂ ಹೀನಸತ್ವರಾಗಿ ಬಳೆತೊಟ್ಟುಕೊಂಡಿರುವರೆಂದೂ ಭಾವಿಸಿದ್ದಿರಲ್ಲವೇ? ಆಗಲಿ, ಜೋಧಪುರವಂಶಕ್ಕೇ ನೀವು ಮಾಡಿದ ಅಪಕಾರಗಳನ್ನು ಈಗಲಾದರೂ ಸ್ಮರಿಸಿಕೊಂಡು ಅದಕ್ಕಾದ ಪ್ರಾಯಶ್ಚಿತ್ತವಿದೆಂದು ತಿಳಿದು ಇನ್ನಾದರೂ ಬುದ್ಧಿ ಕಲಿತುಕೊಳ್ಳುವಿರೋ ಹೇಗೆ? ಒಡಬ್ರಾಹ್ಮಣರನ್ನು ಹಿಂಸಿಸಿ, ಜಿಜಿಯಾ ಕಂದಾಯವನ್ನು ಪಡೆಯುತ್ತಿದ್ದುದಕ್ಕೆ ಈಗ ಇಲ್ಲಿ ಸೈನ್ಯದೊಡನೆ ಆಹಾರವಿಲ್ಲದೆ ನರಳುವುದೇ ಪ್ರತಿಫಲವೆಂದು ತಿಳಿಯಬಲ್ಲಿರಾ? ಈಗಲೂ ನಿಮಗೆ ನಿಮ್ಮ ಡಿಲ್ಲೀ ನಗರದ ಮೇಲೆ ಆಶೆಯಿದ್ದರೆ ಈ ಮುಂದೆ ಹೇಳುವ ಕರಾರುಗಳಿಗೆ ಒಪ್ಪಬೇಕಾಗಿದೆ.—

೧. ಈಗ ನಿಮ್ಮ ಸ್ವಾಧೀನದಲ್ಲಿರುವ ರಜಪುತ್ರಸ್ಥಾನಗಳನ್ನು ಅವರವರ ಸ್ವಾಧೀನಕ್ಕೆ ಒಪ್ಪಿಸಿಬಿಡಬೇಕು.

೨. ಮಹಮ್ಮದೀಯಮತಕ್ಕೆ ಸೇರಬೇಕೆಂದು ಹಿಂದುಗಳನ್ನು ಬಾಧೆಪಡಿಸಬಾರದು.

೩. ಜಿಜಿಯಾ ಕಂದಾಯವನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು.

೪. ಕ್ಷತ್ರಿಯ ಕನ್ಯೆಯರನ್ನು ಬಲವಂತವಾಗಿ ವಿವಾಹಮಾಡಿಕೊಳ್ಳಕೂಡದು.

ಈ ನಿಬಂಧನೆಗಳಿಗೆ ಸಮ್ಮತಿಸಿದ ಪಕ್ಷದಲ್ಲಿ ನಿಮ್ಮನ್ನು ನಿಮ್ಮ ಬೇಗಮರೊಡನೆ ಡಿಲ್ಲೀನಗರಕ್ಕೆ ಹೋಗಗೊಡುವೆವು. ಇಲ್ಲದಿದ್ದರೆ, ನಿಮಗೆ ಈ ಕಣಿವೆಯೇ ಶಾಶ್ವತವಾದ ನಿವಾಸಸ್ಥಾನವೆಂಬುದು ಖಚಿತವಾಗಿರಲಿ!"

ಈ ರೀತಿಯಾಗಿ ಬರೆದು ಆ ಪತ್ರವನ್ನು ಒಬ್ಬ ಮಹಮ್ಮದೀಯ ಭಟನ ಕೈಯಲ್ಲಿ ಕೊಟ್ಟು ಕಳುಹಿದನು. ಅವನು ಅದನ್ನು ಒಡನೆಯೇ ಬಾದಷಹನಿಗೆ ಮುಟ್ಟಿಸಿದನು. ಪತ್ರವನ್ನು ನೋಡಿದ ಮಹಮ್ಮದೀಯ ಸೈನಿಕರು ತಮ್ಮ ಕಷ್ಟವು ನಿವಾರಣವಾದೀತೆಂದು ಹರ್ಷಪಟ್ಟರು. ಆದರೇನು? ಅದನ್ನು ನೋಡಿದ ಕೂಡಲೇ ಔರಂಗಜೇಬನು ಆಗ್ರಹವ್ಯಗ್ರನಾಗಿ ಅದನ್ನು ತಂದಿತ್ತ ಭಟನ ತಲೆಯನ್ನು ಕಡಿದುಹಾಕಿದನು. ಇವನ ಈ ಕ್ರೂರಕೃತ್ಯವನ್ನು ಕೇಳಿ ರಾಜಸಿಂಹನು ಕನಿಕರವನ್ನು ತೊರೆದು ಮತ್ತೆ ಮೊಗಲರೊಡನೆ ಯುದ್ಧಮಾಡಲು ಅಪ್ಪಣೆಯಿತ್ತನು. ರಾಜಪುತ್ರರೆಲ್ಲರೂ ಸಮರಕೋಲಾಹಲವನ್ನು ಮಾಡುತ್ತ ಶತ್ರುಗಳ ಮೇಲೆ ಶರವರ್ಷವನ್ನು ಸುರಿಸಿದರು.

ಅತ್ತ ನಯನಪಾಲನು ಶಿವಸಿಂಗನೊಡನೆಯೂ ಭಿಲ್ಲರೊಡನೆಯೂ ಸೇರಿ ಯುದ್ಧ ಮಾಡುತ್ತಿರಲು, ಒಬ್ಬ ಫಕೀರನು ಎಲ್ಲಿಂದಲೋ ಬಂದು ಅವರನ್ನು ಸೇರಿದನು. ಆತನನ್ನು ನೋಡಿ ನಯನಪಾಲನು ಆಶ್ಚರ್ಯದಿಂದ— "ಮಹಾತ್ಮಾ! ನೀನು ಯಾವಾಗ ಬಂದೆ?" ಎಂದು ಕೇಳಿ ಶಿವಸಿಂಗನನ್ನು ಕುರಿತು—"ಮಿತ್ರನೆ! ಈ ಮಹಾನುಭಾವನೇ ದುರ್ಗಾದಾಸ ಇಂದಿರಾ ದೇವಿಯರಿಗೆ ಪ್ರಾಣದಾನ ಮಾಡಿದ ಪುಣ್ಯಪುರುಷನು!" ಎಂದು ಹೇಳಿದನು. ಶಿವಸಿಂಗನು ಅತ್ಯಾನಂದ ಹೊಂದಿ ಆತನನ್ನು ಬಹುವಿಧವಾಗಿ ಶ್ಲಾಘಿಸಿದನು. ಅನಂತರ ನಯನಪಾಲನು ಶಿವಸಿಂಗನೊಡನೆ ಫಕೀರನನ್ನು ಜೊತೆಗೊಂಡು ಸ್ವಲ್ಪದೂರಹೋಗಿ ಆತನನ್ನು ಕುರಿತು ಹೀಗೆ ಸಂಭಾಷಿಸಿದನು:—

ನಯನ:— ಮಹಾತ್ಮಾ! ನೀನು ಇಲ್ಲಿಗೆ ಬಂದಕಾರಣವೇನು?

ಫಕೀರ:—ರಾಜಪುತ್ರರಿಗೆ ಸಹಾಯನಾಗಿ ಯುದ್ಧ ಮಾಡಬೇಕೆಂದು ಬಂದೆನು.

ನಯನ:—ನಾವೆಲ್ಲರೂ ಇರುವಾಗ ನಿನಗೇಕೆ ಪ್ರಯಾಸ? ನಿನಗೆ ಯುದ್ಧಮಾಡುವುದಕ್ಕೆ ಬರುವುದೇ?

ಫಕೀರ:— ಅಯ್ಯಾ! ಪ್ರಯಾಸವೇನಿದೆ? ನಮ್ಮಂಥವರಿಗೆ ಪರೋಪಕಾರವೇ ವ್ರತವು. ಇಷ್ಟೇ ಅಲ್ಲ. ಲೋಕದಲ್ಲಿರುವ ಸರ್ವವಿಧಸೌಖ್ಯವನ್ನೂ ನಾನು ಅನುಭವಿಸಿ ತೃಪ್ತನಾಗಿರುವುದರಿಂದ ಪ್ರಾಣದ ಮೇಲೆ ನನಗೀಗ ಆಸೆಯೆಯುಂಟಾಗಿರುವುದು. ಯುದ್ಧದಲ್ಲಿ ಸತ್ತವರಿಗೆ ವೀರಸ್ವರ್ಗವು ಪ್ರಾಪ್ತವಾಗುವುದರಿಂದ ನಾನು ಈಗ ಶತ್ರುಗಳೊಡನೆ ಹೋರಾಡಿ ಪ್ರಾಣಬಿಡುವ ಅಪೇಕ್ಷೆಯಿಂದ ಬಂದಿರುವೆನು.

ಶಿವಸಿಂಗ:—ಫಕೀರರಾದ ತಾವು ಯುದ್ಧ ಮಾಡುವ ಆಗತ್ಯವಿಲ್ಲವಷ್ಟೆ?

ಫಕೀರ.— ಹಾಗೆಂದು ಸುಮ್ಮನಿರುವಂತಿಲ್ಲ. ವಿಧರ್ಮಿಗಳೊಡನೆ ಹೋರಾಹೋರಿಯಿಂದ ಯುದ್ಧಮಾಡಿ ನನ್ನ ಭುಜಬಲ ಪರಾಕ್ರಮಗಳನ್ನು ಲೋಕಕ್ಕೆ ಪ್ರಕಟಗೊಳಿಸುವೆನೆಂದು ಪ್ರತಿಜ್ಞೆ ಮಾಡಿರುವೆನು. ಅದರಂತೆ ನಡೆಯದಿದ್ದರೆ ಗತಿಯಿಲ್ಲ. ಈ ಸಮಯದಲ್ಲಿ ಯುದ್ಧಮಾಡುವುದಕ್ಕೆ ನನಗಾರೂ ಅಡ್ಡಿಯಾಗುವಂತಿಲ್ಲ.

ಎಂದು ಹೇಳಿ ಫಕೀರನು ಆಗಲೇ ತನ್ನ ಫಕೀರನ ವೇಷವನ್ನು ತೊರೆದು ರಾಜಪುತ್ರ ವೀರನಂತೆ ಉಡುಪನ್ನು ಧರಿಸಿ ಪ್ರಚಂಡ ಮಾರ್ತಾಂಡನಂತೆ ಪ್ರಕಾಶಿಸುತ್ತ ಯುದ್ಧರಂಗವನ್ನು ಸೇರಿ ಅಸಹಾಯಶೂರನಾಗಿ ಮೊಗಲರ ಸೈನ್ಯವನ್ನು ಚದರಿಸಿ ಶತ್ರುಪಕ್ಷದವರೂ ತಲೆದೂಗುವಂತೆ ಪರಾಕ್ರಮದಿಂದ ಯುದ್ಧಮಾಡುತ್ತಿರಲು ರಾಜಪುತ್ರರೂ ಭಿಲ್ಲರೂ ಈತನನ್ನು ನೋಡಿ ಆಶ್ಚರ್ಯಪಟ್ಟರು. ಈತನಾರೋ—ಎಲ್ಲಿಂದ

ಬಂದನೋ—ಅದನ್ನಾರೂ ತಿಳಿಯಲಾರದೆ ಕುತೂಹಲದಲ್ಲಿದ್ದರು. ಇಂದಿರಾ ದುರ್ಗಾದಾಸ ಇವರಿಬ್ಬರು ಮಾತ್ರ ಪೂರ್ವವೃತ್ತಾಂತವನ್ನು ಸ್ಮರಿಸಿ, ಅವನಾರಾಗಿರಬಹುದೆಂದು ಸಂದೇಹಪಟ್ಟರು.

ಮೂವತ್ತೇಳನೆಯ ಪ್ರಕರಣ.

ಆ ಮರುದಿನ ರಾಜಪುತ್ರರಿಗೂ ಮೊಗಲರಿಗೂ ಘೋರವಾದ ಯುದ್ಧವು ನಡೆಯಿತು. ನಯನಪಾಲನು ಆಗ್ರಹದಿಂದ ಬಾದಷಹನ ಮೇಲಿನ ಹಗೆಯನ್ನು ತೀರಿಸಿಕೊಳ್ಳಲು, ಅವಿಶ್ರಾಂತನಾಗಿ ಭಿಲ್ಲರಿಗೆ ಪ್ರೋತ್ಸಾಹವನ್ನುಂಟುಮಾಡುತ್ತ ಅದ್ವಿತೀಯ ಶೌರ್ಯದಿಂದ ಶತ್ರುಸೈನ್ಯವನ್ನು ನಿಗ್ರಹಿಸುತ್ತಿದ್ದನು. ಕಣಿವೆಯೊಳಗಿದ್ದ ಮೊಗಲರು ರಾಜಪುತ್ರರಿಗೂ ಭಿಲ್ಲರಿಗೂ ಪ್ರಯೋಗಿಸುತ್ತಿದ್ದ ಆಯುಧಗಳನ್ನು ಅವರು ಸುಲಭವಾಗಿಯೇ ತಡೆಯುತ್ತಿದ್ದುದರಿಂದ ಇಂತಹ ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದೆವೆಂಬ ರೋಷದಿಂದ ಪರವಶರಾದ ಮೊಗಲರು ಹಿಂದುಮುಂದೆ ನೋಡದೆ ರಾಜಪುತ್ರರನ್ನು ಕಡಿದುಹಾಕುತ್ತ ಬಂದರು. ಮಹಮ್ಮದೀಯರ ರೋಷಾಗ್ನಿಗೆ ಅನೇಕ ರಾಜಪುತ್ರರೂ ಭಿಲ್ಲರೂ ಆಹುತಿಯಾದರು. ಅವರ ತೀಕ್ಷ್ಣವಾದ ಖಡ್ಗಹತಿಯಿಂದ ನಯನಪಾಲನು ವೀರಸ್ವರ್ಗವನ್ನು ಹೊಂದಿದನು. ತತ್‌ಕ್ಷಣವೇ ಶಿವಸಿಂಗನು ಕೆಲವು ಮಂದಿ ಭಿಲ್ಲರೊಡನೆ ಬಂದು ಆ ಕಳೇಬರವನ್ನು ನೋಡಿ, ಮೊದಲು ರಾಜಪುತ್ರರಿಗೆ ಅನೇಕ ವಿಧವಾಗಿ ದ್ರೋಹವನ್ನೆಣಿಸಿದವನಾಗಿದ್ದರೂ ಪಶ್ಚಾತ್ತಾಪಪ್ರಾಯಶ್ಚಿತ್ತದಿಂದ ಪರಿಶುದ್ಧನಾಗಿ ಇಂದಿನ ವಿಜಯಕ್ಕೆ ಕಾರಣನಾಗಿ ವೀರಸ್ವರ್ಗವನ್ನು ಹೊಂದಿದನೆಂದು ಶ್ಲಾಘಿಸಿ, ಆತನ ಕಳೇಬರವನ್ನು ರಾಜಪುತ್ರರ ಕೈಯಿಂದಲೇ ತೆಗೆಯಿಸಿ, ರಾಜಗೌರವದಿಂದ ಸಂಸ್ಕಾರವಾಗುವಂತೆ ಏರ್ಪಡಿಸಿದನು.

ಆ ದಿನದ ಮಹಮ್ಮದೀಯರ ದುಃಸ್ಥಿತಿಯನ್ನು ಹೇಳಲಾಗುವಂತಿಲ್ಲ. ರಾಜಸಿಂಹನಿಗೆ ಕನಿಕರವುಂಟಾದರೂ ಬಾದಷಹನ ಮೂರ್ಖತೆಯಿಂದ ಅದು ಹಾಗೆಯೇ ಅಡಗಿತು. ಮೂರ್ಖನಾದ ಬಾದಷಹನು ಮುಂದಾಲೋಚನೆಯಿಲ್ಲದೆ ಸಂಧಿಯನ್ನು ನಿರಾಕರಿಸಿದನು; ಸೈನಿಕರೊಡನೆ ಕಣಿವೆಯ ದಾರಿಯಲ್ಲಿ ಸೆರೆಯಾಗಿ ಸಿಕ್ಕಿ ನಿದ್ರಾಹಾರಗಳಿಗೆ ಅವಕಾಶವಿಲ್ಲದೆ ಪ್ರಾಣಬಿಡುವ ದುರ್ಗತಿಗೆ ಗುರಿಯಾದನು. ಒಂದೆಡೆ ಹಸಿವು, ಬಾಯಾರಿಕೆ, ಚಳಿಗಳ ಬಾಧೆ; ಮತ್ತೊಂದೆಡೆ, ಜನಾನಾದವರ ಅವಸ್ಥೆಯೇನಾಗಿರುವುದೋ, ಉದಯಪುರಿ ಯಾವ ದುಃಖಕ್ಕೀಡಾಗಿರುವಳೋ—ಎಂಬ ಚಿಂತೆ; ಇನ್ನೊಂದೆಡೆ ಹೊಟ್ಟೆಗಿಲ್ಲದೆಯೂ ಚಳಿಯನ್ನು ತಡೆಯಲಾರದೆಯೂ ಸಂಕಟಪಡುತ್ತಿದ್ದ ಸೈನಿಕರ ಬೈಗುಳಗಳೂ; ಮತ್ತೊಂದು ಕಡೆ ಇಕ್ಕಟ್ಟಾದಾ ಕಣಿವೆಯಲ್ಲಿ ರಾಶಿರಾಶಿಯಾಗಿ ಬಿದ್ದಿರುವ ಹೆಣಗಳ ದುರ್ಗಂಧವು—ಹೀಗೆ ನರಕಯಾತನೆಯನ್ನು ಅನುಭವಿಸುತ್ತ ಬಹುಕಷ್ಟದಿಂದ ಎರಡು ರಾತ್ರಿ, ಎರಡು ಹಗಲುಗಳನ್ನು ಕಳೆದನು.

ಮೂರನೆಯ ದಿನವೂ ರಾಜಪುತ್ರರು ಯುದ್ಧಕ್ಕೆ ಪ್ರಾರಂಭಿಸಿದರು. ಮೊಗಲರು ತಮ್ಮ ಶಕ್ತಿಮೀರಿ ತುಪಾಕಿಗಳನ್ನೂ ಕತ್ತಿಗಳನ್ನೂ ಪ್ರಯೋಗಿಸುತ್ತಿದ್ದರು. ಮೊದಲನೆಯ ದಿನ ಯುದ್ಧಕ್ಕೆ ಬಂದಿದ್ದ ಫಕೀರನು ಇಂದು ಶತ್ರುಗಳೊಡನೆ ಮಾಡುತ್ತಿದ್ದ ಯುದ್ಧವನ್ನು ನೋಡಿ ರಾಜಪುತ್ರರೂ ಭಿಲ್ಲರೂ ಆಶ್ಚರ್ಯಮಗ್ನರಾದರು. ರಾಜಪುತ್ರರಿಗೆ ಸಹಾಯಮಾಡಬೇಕೆಂದು ದೇವಸೇನಾಪತಿಯಾದ ಕುಮಾರಸ್ವಾಮಿಯೇ ಈ ರೂಪದಿಂದ ಬಂದಿರಬೇಕೆಂದು ಭಾವಿಸಿ ಆತನನ್ನೇ ನೋಡುತ್ತಿದ್ದರು. ಶತ್ರುಗಳ ಏಟುಗಳಿಂದ ಶರೀರವೆಲ್ಲ ರಕ್ತಪ್ರವಾಹದಿಂದ ಕೂಡಿದ್ದರೂ ಅದನ್ನು ಗಣಿಸದೆ ಅಸಮಾನ ಪರಾಕ್ರಮದಿಂದ ಯುದ್ಧ ಮಾಡುತ್ತಿದ್ದ ಆತನಿಗೆ ಹಿಂದಿನಿಂದ ಹೊಡೆಯಲ್ಪಟ್ಟ ಒಂದು ಕತ್ತಿಯ ಏಟು ಕುತ್ತಿಗೆಯ ಎಡಗಡೆಗೆ ತಗುಲಿತು. ತತ್‌ಕ್ಷಣವೇ ಆತನು ಆಯುಧಸಹಿತನಾಗಿ ಕೆಳಗೆ ಬಿದ್ದು ಮೂರ್ಛಿತನಾದನು. ಆತನ ಬಳಿಯಲ್ಲಿಯೇ ನಿಂತು ಯುದ್ಧ ಮಾಡುತ್ತಿದ್ದ ಶಿವಸಿಂಗನು ಆಕ್ಷಣದಲ್ಲಿಯೇ ಬಂದು ಉಪಚರಿಸಿ ನೋಡಿದನು; ಫಕೀರನ ಜೀವವು ಸಂಶಯವನ್ನೇ ಹುಟ್ಟಿಸಿತು. ಆದರೂ ಅಚಲೇಶ್ವರನಲ್ಲಿ ಭರವಸೆಯಿಟ್ಟು ಕೆಲವು ಮಂದಿ ಭಿಲ್ಲರಿಂದ ಆತನನ್ನು ಮೆಲ್ಲನೊಯ್ದು ಒಂದು ಮರದ ನೆರಳಿನಲ್ಲಿ ಮಲಗಿಸಿ ಒಬ್ಬ ಭಿಲ್ಲನನ್ನು ನೋಡಿಕೊಳ್ಳುತ್ತಿರುವಂತೆ ನೇಮಿಸಿ ತಾನು ಯುದ್ಧಕ್ಕೆ ಹೊರಟುಹೋದನು.

ಇಷ್ಟರಲ್ಲಿ ಮಾರ್ತಾಂಡನು ನಭೋಮಂಡಲ ಮಧ್ಯವರ್ತಿಯಾಗಿ ಅತ್ಯಂತ ತೀಕ್ಷ್ಣಕಿರಣಗಳಿಂದ ಜಗತ್ತನ್ನೇ ತಪಿಸುತ್ತಿದ್ದನು. ಸೂರ್ಯಕಿರಣಗಳಿಂದ ಆ ಕಣಿವೆಯ ಕಲ್ಲುಗಳೆಲ್ಲವೂ ಕಾದು ಅಗ್ನಿಕಣದಂತೆ ಸುಡುತ್ತಿದ್ದುವು. ಇತ್ತ ರಾಜಪುತ್ರರ ತೀಕ್ಷ್ಣಶರಪರಂಪರೆಗಳ ಘಾತದಿಂದಲೂ ಅತ್ತ ಸೂರ್ಯಕಿರಣದ ತೀಕ್ಷ್ಣತೆಯಿಂದಲೂ ತಪಿಸಿ ಕಡೆಗೆ ಬಾದಷಹನ ಭಯವನ್ನೂ ಬಿಟ್ಟು—"ಸರ್ಕಾರ್, ಹೀಗೆಯೇ ಇನ್ನೂ ಎರಡು ಗಂಟೆಯಕಾಲ ಯುದ್ಧ ಮಾಡಿದರೆ ನಮ್ಮಲ್ಲಿ ಒಬ್ಬರಾದರೂ ಉಳಿಯಲಾರರು. ಇನ್ನು ನಮ್ಮಿಂದ ಯುದ್ಧ ಮಾಡುವುದಕ್ಕಾಗದು" ಎಂದು ಹೇಳಿದರು. ಬಾದಷಹನ ಆಗ್ರಹಕ್ಕೆ ಮೇರೆಯೇ ಇಲ್ಲವಾಯಿತು. ಆದರೂ ಏನು ಮಾಡಬಹುದು? ರೋಷವನ್ನು ತಾನೇ ಸಂವರಿಸಿಕೊಂಡನು;

ಜೀವಿಸಿದ್ದರೆ ಎಂದಾದರೂ ರಾಜಪುತ್ರರ ಮೇಲಿನ ಹಗೆತನವನ್ನು ತೀರಿಸಿಕೊಳ್ಳುವೆನೆಂದು ನಿರ್ಧರಿಸಿ, ಸೈನಿಕರ ದುರ್ಬಲತೆಯನ್ನು ನೋಡಿ ಕನಿಕರಪಟ್ಟು ರಾಜಸಿಂಹನಿಗೆ ಸಂಧಿ ಮಾಡಿಕೊಳ್ಳಲು ಒಡಂಬಟ್ಟಿರುವುದಾಗಿ ಹೇಳಿ ಕಳುಹಿದನು. ರಾಜಸಿಂಹನು ಸಂತೋಷದಿಂದ ಮೊಗಲರೆಲ್ಲರೂ ತಮ್ಮ ತಮ್ಮ ಆಯುಧಗಳನ್ನೆಲ್ಲಾ ಕಣಿವೆಯಲ್ಲಿಯೇ ಬಿಟ್ಟು ನಿರಾಯುಧರಾಗಿ ಹೊರಗೆ ಬರಬೇಕೆಂದೂ ಡಿಲ್ಲೀನಗರಕ್ಕೆ ಹೋಗುವಾಗ ಮಾರ್ಗಮಧ್ಯದಲ್ಲಿ ಅರಣ್ಯಜಂತುಗಳನ್ನು ಅಕಾರಣವಾಗಿ ಹಿಂಸೆಮಾಡಕೂಡದೆಂದೂ ಬಾದಷಹನಿಗೆ ಹೇಳಿ ಕಳುಹಲು ಅದಕ್ಕೂ ಆತನು ಸಮ್ಮತಿಸಬೇಕಾಯಿತು. ಹೀಗೆ ಒಪ್ಪಂದವು ನಡೆದಮೇಲೆ ರಾಜಸಿಂಹನು ಕಣಿವೆಯ ದ್ವಾರದಲ್ಲಿ ನಿಂತು ಯುದ್ಧಮಾಡುತ್ತಿದ್ದ ಭಿಲ್ಲರನ್ನು ಸರಿದು ನಿಲ್ಲುವಂತೆ ಕಟ್ಟುಮಾಡಿ ಮೊಗಲರು ಒಬ್ಬೊಬ್ಬರಾಗಿ ಹೊರಗೆ ಬರುವಂತೆ ಸೂಚಿಸಿದನು. ಅನ್ನಾಹಾರಗಳಿಲ್ಲದೆ, ಬಾಡಿ ಬೆಂಡಾಗಿದ್ದ ಮೊಗಲರು ಒಣಗಿದ ಮೋರೆಯನ್ನು ತಗ್ಗಿಸಿಕೊಂಡು ಬರಿಗೈಯಿಂದ ಒಬ್ಬೊಬ್ಬರಾಗಿ ಬರುತ್ತಿದ್ದುದನ್ನು ರಾಜಪುತ್ರರೂ ಭಿಲ್ಲರೂ ದುರ್ಗಾದಾಸ ಶಿವಸಿಂಗರೂ ನೋಡಿ ಅವರ ಕ್ರೂರಕರ್ಮಕ್ಕೆ ಫಲವೆಂದು ಹೇಳುತ್ತಿದ್ದರು. ಶ್ಯಾಮಲಪಂಡಿತನ ವಿನೋದಕ್ಕೆ ತಡೆಯೇ ಇಲ್ಲವಾಯಿತು. "ಹೆಬ್ಬುಲಿ, ಬೋನಿಗೆ ಸಿಕ್ಕಿ, ಇಲಿಯಂತಾಯಿತು. ಬಲೆ, ವಿನೋದ!" ಎಂದು ಹಾಡಿ ಹಾಡಿ ಕುಣಿಯುತ್ತ ಸುತ್ತಲಿದ್ದವರನ್ನು ನಗಿಸುತ್ತಿದ್ದನು,

ಸೈನಿಕರೆಲ್ಲರೂ ಹೊರಗೆ ಬಂದ ಬಳಿಕ ಬಾದಷಹನು ಆ ಪ್ರದೇಶದಲ್ಲಿಯೇ ಬಿಡಾರವನ್ನು ಹಾಕಿಸಿ, ಎಲ್ಲರೂ ಆ ದಿನ ಅಲ್ಲಿಯೇ ವಿಶ್ರಮಿಸಿಕೊಳ್ಳಬೇಕೆಂದು ಅಜ್ಞಾಪಿಸಿದನು. ಬಾದಷಹನು ವಿಶ್ರಾಂತಿ ಹೊಂದುತ್ತಿರುವಷ್ಟರಲ್ಲಿ ರಾಜಸಿಂಹನು ಬಾದಷಹನ ಜನಾನಾವನ್ನು ಕೆಲವರು ಭಿಲ್ಲರ ಕಾವಲಿನೊಡನೆ ಅಲ್ಲಿಗೆ ಕಳುಹಿಕೊಟ್ಟನಲ್ಲದೆ ಸೈನ್ಯದವರಿಗೂ ಬಾದಷಹನಿಗೂ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಕಳುಹಿದನು. ರಾಜಸಿಂಹನು ತನ್ನ ಶತ್ರುಗಳಲ್ಲಿ ಕೂಡ ತೋರಿಸಿದ ಔದಾರ್ಯವನ್ನು ನೋಡಿ ಆತನ ಸದ್ಗುಣವನ್ನು ಶತ್ರುಪಕ್ಷದವರೂ ಕೊಂಡಾಡಿದರು. ಔರಂಗಜೇಬನಿಗೆ ಮಾತ್ರ ಮನಸ್ಸಮಾಧಾನವಿರಲಿಲ್ಲ. ಆದರೂ ಆ ವೇಳೆಯಲ್ಲಿ ಏನು ಮಾಡುವುದಕ್ಕೂ ಅವನಿಗೆ ಸಾಧ್ಯವಿರಲಿಲ್ಲ. ಪಾಪ, ದ್ವೇಷವನ್ನು ತನ್ನ ಹೃತ್ಕೋಶದಲ್ಲಿಯೇ ಅಡಗಿಸಿಕೊಂಡು ಮಾರನೆಯ ದಿನವೇ ಸೈನ್ಯಸಮೇತನಾಗಿ ಡಿಲ್ಲೀನಗರಕ್ಕೆ ಹೊರಟನು. ಕುಟಿಲನಾದ ಔರಂಗಜೇಬನು ಹೊರಟುಹೋಗುವ ವರೆಗೂ ರಾಜಸಿಂಹನು ಸೈನ್ಯದೊಡನೆ ಜಾಗರೂಕನಾಗಿದ್ದು, ಅವನು ಹೊರಟುಹೋದಬಳಿಕ ಸೈನ್ಯಗಳಿಗೆ ವಿಶ್ರಾಂತಿಹೊಂದಲು ಅಪ್ಪಣೆಯಿತ್ತನು.

ಮೂವತ್ತೆಂಟನೆಯ ಪ್ರಕರಣ.

(ಸುಖಾಗಮನ)

ಅಚಲೇಶ್ವರಾಲಯದಲ್ಲಿ ವೈಕುಂಠಯೋಗಿಯನ್ನು ನೋಡಿದುದು ಮೊದಲು, ಇಂದಿರೆಯು ವೈಕುಂಠಯೋಗಿಯ ಬಳಿಯಲ್ಲಿ ಗೌರವಬುದ್ಧಿಯನ್ನಿರಿಸಿ, ಪ್ರತಿದಿನವೂ ಅಚಲೇಶ್ವರಾಲಯದಲ್ಲಿ ಯೋಗಿಯ ಈಶ್ವರಾರಾಧನೆಗೆ ಫತ್ರ ಫಲ ಪುಷ್ಪಗಳನ್ನೊದಗಿಸುವುದೇ ಮೊದಲಾದ ಸೇವಾಕಾರ್ಯಗಳಿಂದ ಕಾಲಕ್ಷೇಪಮಾಡುತ್ತ ಯೋಗಿಯ ಉಪದೇಶಪ್ರಭಾವದಿಂದ ತನ್ನ ಮನಃಕ್ಲೇಶವನ್ನು ಪರಿತ್ಯಜಿಸಿ ಪರಮಾರ್ಥತತ್ವವನ್ನು ಚಿಂತನ ಮಾಡುತ್ತಿದ್ದಳು. ಯುದ್ಧವು ಸಮಾಪ್ತಿಯಾದ ದಿನದ ಸಾಯಂಕಾಲದಲ್ಲಿ, ಎಂದಿನಂತೆ ಇಂದಿರೆಯು ಅಜಿತಸಿಂಹನನ್ನೆತ್ತಿಕೊಂಡು ಅಚಲೇಶ್ವರಾಲಯಕ್ಕೆ ಬಂದು ನೋಡಿದಳು. ಯೋಗಿಯು ಅಲ್ಲಿ ಕಾಣಲಿಲ್ಲ ಆತನು ಬರುವವರೆಗೂ ಅಜಿತಕುಮಾರನೊಡನೆ ಅತ್ತಿತ್ತ ತಿರುಗಾಡಿ ಬರುವೆನೆಂದು ನಡೆತರುತ್ತ, "ಯುದ್ಧದಲ್ಲಿ ರಾಜಪುತ್ರರಿಗೆ ಸಹಾಯಕನಾಗಿ ಬಂದು ಅಪ್ರತಿಮ ಶೌರ್ಯಪರಾಕ್ರಮದಿಂದ ಶತ್ರುಗಳನ್ನು ನಿಪಾತ ಮಾಡಿದ ಆ ಧೀರನಾರು? ಅವನು ನಿಜವಾಗಿಯೂ ಫಕೀರನೆ? ಫಕೀರನ ಭುಜಗಳಲ್ಲಿ ಅಷ್ಟು ಶೌರ್ಯವೂ, ಹೃದಯದಲ್ಲಿ ಅಂತಹ ಧೈರ್ಯೋತ್ಸಾಹಗಳೂ, ಆ ದಿವ್ಯ ತೇಜಸ್ಸೂ ಹೇಗೆ ಬರಬೇಕು?" ಎಂದು ಆಲೋಚಿಸುತ್ತಲೂ ಉತ್ತಮ ರಾಜಪುತ್ರವಂಶದಲ್ಲಿ ಜನ್ಮವೆತ್ತಿ, ಅಸಹಾಯಶೂರನಾದ ರಜಪೂತ ವೀರನ ಪತ್ನಿಯಾಗಿ ವೀರಮಹಿಷಿಯೆನಿಸಿದ ತಾನು ಅನುಭವಿಸಿದ ಕಷ್ಟಕ್ಲೇಶಗಳನ್ನು ನೆನೆನೆನೆದು ಕ್ಲೇಶಪಡುತ್ತಲೂ ಪತಿಯ ತೇಜೋವಧೆಮಾಡಿದ ಪಾಪಕ್ಕೆ ಇದೇ ನನಗೆ ಪ್ರಾಯಶ್ಚಿತ್ತವಲ್ಲವೇ? ಜಯಪರಾಜಯಗಳು ದೈವಾಧೀನವೆಂದು ತಿಳಿದಿದ್ದರೂ, ಅಭಿಮಾನದಿಂದ ಬೀಗಿದ ನಾನು ಅಂದು ನಿರ್ವಂಚನೆಯಿಂದ ಶತ್ರುಗಳೊಡನೆ ಹೋರಾಡಿ, ಕಡೆಗೆ ನಿರ್ವಾಹವಿಲ್ಲದೆ ಹಿಂತಿರುಗಿ ಬಂದ ಪತಿಯನ್ನು,—ಯುದ್ಧದಲ್ಲಿ ಶ್ರಾಂತನಾಗಿ ಬಂದಿದ್ದಾತನನ್ನು—ಗೌರವಿಸುವ ಮಾತು ಹಾಗಿರಲಿ, ರಾಣಿ, ಚಂದ್ರಾವತಿಯು ಯಶವಂತಸಿಂಹ ಮಹಾರಾಜನನ್ನು ಧಿಕ್ಕರಿಸಿದಂತೆ ನಾನೂ ಧಿಕ್ಕರಿಸಿದುದರ ಫಲವಲ್ಲವೇ ನನಗೀ ಗತಿ ಪ್ರಾಪ್ತವಾಯಿತು? ನನ್ನ ತಿರಸ್ಕಾರ ವಾಕ್ಯಗಳಿಂದ ತಪ್ತನಾದಾ ಮಹಾತ್ಮನು ನನ್ನನ್ನು ಹೇಗೆ

ಕ್ಷಮಿಸುವನು? ಆ ಕ್ಷಣವೇ ನನ್ನ ಮೇಲಿನ ವ್ಯಾಮೋಹವನ್ನು ತೊರೆದು ಹೊರಟುಹೋದಾತನನ್ನು ಸಂದರ್ಶಿಸಲು ನಾನು ಪಟ್ಟ ಶ್ರಮವು ಇಂದಿಗಾದರೂ ಸಾಫಲ್ಯವೆನಿಸಿತೆ ? ಸ್ವಪ್ನದಲ್ಲಿ ಕೂಡ ಆತನ ಸುಕ್ಷೇಮವಾರ್ತೆಯನ್ನು ಕೇಳುವ ಭಾಗ್ಯವು ನನಗೆ ಲಭಿಸಿರುವುದೆ? ಪತಿಭಾಗ್ಯವು ನನ್ನ ಅದೃಷ್ಟದಲ್ಲಿನ್ನು ಬರೆದಿರುವುದೆ? ಪತಿವಿಯೋಗವನ್ನು ಹೊಂದಿ ವ್ಯಥೆಪಡುತ್ತಿರುವ ನಾರೀಜನ್ಮಕ್ಕೆ ಧಿಕ್ಕಾರವು. ನನ್ನಂತಹ ಸಾಹಸಗಾರ್ತಿಯರ ದುರ್ಜೀವನಕ್ಕೆ ಧಿಕ್ಕಾರವು. ನಿಸ್ಸಾರವಾದೀ ಜನ್ಮಕ್ಕೆ ಮುಂದೆ ಗತಿಯೇನು? ಅನಾಥೆಯರಾದ ಮಹಿಳೆಯರಿಗೆ ಜಗನ್ನಾಥನ ಭಜನೆಯೇ ಗತಿ!" ಹೀಗೆ ಹೇಳುತ್ತ, ಮಂದಗತಿಯಿಂದ ಬರುತ್ತಿರುವಾಗ, ಸ್ವಲ್ಪ ದೂರದಲ್ಲಿ "ಊ...... ಊ......ಊ......" ಎಂದು ಒಂದು ವಿಧವಾದ ಯಾತನಾಸ್ವರವು ಕೇಳಿಸಿತು. ಇಂದಿರೆಯು ಕುತೂಹಲದಿಂದ ಸ್ವರವು ಕೇಳಬಂದ ಕಡೆಗೆ ಹೊರಟುಬಂದು, ಒಂದು ಮರದ ಕೆಳಗೆ ತಳಿರುಹಾಸಿಗೆಯಮೇಲೆ ಮಲಗಿ, ಶರೀರದಲ್ಲೆಲ್ಲ ಶಸ್ತ್ರಘಾಯಗಳಿಂದ ರಕ್ತವು ಸುರಿಯುತ್ತಿರಲು, ಪ್ರಣದ ಯಾತನೆಯಿಂದಲೂ ಬಾಯಾರಿಕೆಯಿಂದಲೂ ಬಾಯ್ಬಿಡುತ್ತ ನರಳುತ್ತಿರುವ ವೀರಪುರುಷನೋರ್ವನನ್ನೂ ಆತನ ಬಳಿಯಲ್ಲಿ ಕುಳಿತು ಗಾಳೀಬೀಸುತ್ತಿದ್ದ ಭಿಲ್ಲನನ್ನೂ ಕಂಡು ಸಮಾಚಾರವೇನೆಂದು ಕೇಳಿದಳು. ಭಿಲ್ಲನು,— "ತಾಯೀ! ಈತನೊಬ್ಬ ರಾಜಪುತ್ರನಂತಿರುವನು. ಈತನ ಚರಿತ್ರೆ ಅತ್ಯದ್ಭುತವಾಗಿರುವುದು. ಫಕೀರನ ವೇಷದಿಂದ ರಾಜಪುತ್ರರಿಗೆ ಸಹಾಯವಾಗಿ ಮೊಗಲರೊಡನೆ ಘೋರವಾದ ಯುದ್ಧ ಮಾಡಿದನು. ಶತ್ರುಗಳ ಶಸ್ತ್ರಘಾತಗಳಿಂದ ಶರೀರವೆಲ್ಲಾ ಘಾಯವಾಗಿ ಮೂರ್ಛೆಬೀಳಲು, ನಮ್ಮ ಪ್ರಭು ಶಿವಸಿಂಗ ಮಹಾರಾಜನು ಈತನನ್ನು ಎತ್ತಿಕೊಂಡು ಬಂದು ಇಲ್ಲಿ ಮಲಗಿಸಿ, ನನ್ನನ್ನು ಕಾವಲಿರಿಸಿ ಹೋಗಿರುವನು." ಎಂದು ಉತ್ತರವಿತ್ತನು.

ಇಂದಿರೆಯು ಕುತೂಹಲಾಧಿಕ್ಯದಿಂದ ಬಂದು ಮಲಗಿದ್ದಾತನನ್ನು ದೃಷ್ಟಿಸಿ ನೋಡಿ ಪೂರ್ವವೃತ್ತಾಂತವಾವುದನ್ನೋ ನೆನಪಿಗೆ ತಂದು—"ನಾನಷ್ಟು ಭಾಗ್ಯವಂತಳೆ? ಇದು ಕೇವಲ ನನ್ನ ಭ್ರಾಂತಿ!" ಎಂದು ತನ್ನಲ್ಲಿ ತಾನೇ ಆಲೋಚಿಸುತ್ತಿರುವಾಗ ಮಲಗಿದ್ದಾತನು ಬಾಯಾರಿಕೆಯೆಂದು ನಾಲಿಗೆಯನ್ನು ನೀಡಿ ನೀರು-ನೀರೆಂದು ಮೆಲ್ಲನೆ ಹೇಳುತ್ತಿದ್ದುದನ್ನು ಕೇಳಿ ತತ್ಕ್ಷಣವೇ ಕಂಕುಳಲ್ಲಿದ್ದ ಅಜಿತಕುಮಾರನನ್ನು ಕೆಳಗೆ ಕುಳ್ಳಿರಿಸಿ, ಬಾಲನ ಮುಂದೆ ಒಂದು ಹಣ್ಣನ್ನಿರಿಸಿ, ಭಿಲ್ಲನಿಗೆ ಹೇಳಿ ನೀರನ್ನು ತರಲು ಹೊರಟುಹೋದಳು.

ಅಷ್ಟರಲ್ಲಿ ಮುಹಮ್ಮದೀಯ ಭಟನೊಬ್ಬನು ಖಡ್ಗಪಾಣಿಯಾಗಿ ರೋಷಾವೇಷದಿಂದ ಪ್ರಮತ್ತನಂತಾಗಿ ಘರ್ಜಿಸುತ್ತ ಅಲ್ಲಿಗೆ ಬಂದು ಅಟ್ಟಹಾಸದಿಂದ—"ಎಲಾ, ನನ್ನ ತಮ್ಮನನ್ನು ಕೊಂದುದಕ್ಕೆ ನಿನಗೆ ತಕ್ಕ ಶಿಕ್ಷೆಯಾಯಿತಲ್ಲವೆ? ಅಗಲಿ, ನಿನ್ನ ಪ್ರಾಣವನ್ನೂ ಈ ಬಾಲನ ಪ್ರಾಣವನ್ನೂ ನನ್ನ ದ್ವೇಷಕ್ಕೆ ಬಲಿ ತೆಗೆದುಕೊಳ್ಳುವೆನು." ಎಂದು ಕರಖಡ್ಗವನ್ನು ತಿರುಗಿಸುತ್ತ ಬಂದನು. ಅಷ್ಟರಲ್ಲಿ ಭಿಲ್ಲನು ಆಗ್ರಹದಿಂದೆದ್ದು ಬಲವಾದ ದಂಡವನ್ನು ಹಿಡಿದುಕೊಂಡು ಬಂದು ಆತನನ್ನು ಅಡ್ಡಗಟ್ಟಿ ದೃಢಮುಷ್ಟಿಯಿಂದ ಆತನ ಕೈಗಳನ್ನು ಹಿಡಿದು ಸ್ವಲ್ಪ ದೂರ ಎಳೆದುಕೊಂಡು ಅವನೊಡನೆ ದ್ವಂದ್ವಯುದ್ಧಕ್ಕೆ ನಿಂತನು. ಭಿಲ್ಲನು ಎಷ್ಟು ಹೋರಾಡಿದರೂ ಕಡೆಗೆ ಮುಹಮ್ಮದೀಯನ ಖಡ್ಗಕ್ಕೆ ತುತ್ತಾಗಿ ಕೆಳಗೆ ಬಿದ್ದನು. ಮುಹಮ್ಮದೀಯನು ಮತ್ತೂ ರಭಸದಿಂದ ಮಲಗಿದ್ದ ರಾಜಪುತ್ರನ ಬಳಿಗೆ ಬಂದನು. ಯಾತನೆಯನ್ನು ಸಹಿಸಲಾರದೆ ನರಳುತ್ತಿದ್ದ ರಜಪೂತವೀರನು ಶತ್ರುವಿನ ಅಟ್ಟಹಾಸವನ್ನು ಕೇಳಿ ಕಣ್ದೆರೆದು ನೋಡಿ ರೋಷದಿಂದ ಪರವಶನಾಗಿ ಧಿಗ್ಗನೆದ್ದು ಕಟಿಯಲ್ಲಿದ್ದ ಖಡ್ಗವನ್ನು ಹಿರಿದು ರಭಸದಿಂದ ಮೇಲೆಮೇಲೆ ಬೀಳಲು ಬರುತ್ತಿದ್ದ ಮುಹಮ್ಮದೀಯನ ಕೊರಳಿಗೆ ಸರಿಯಾಗಿ ಹೊಡೆದನು. ಮುಹಮ್ಮದೀಯನು ಗತಪ್ರಾಣನಾಗಿ ಕೆಳಗೆ ಬಿದ್ದನು. ರಾಜಪುತ್ರನು ಮತ್ತೆ ಆಯಾಸದಿಂದ ಮೂರ್ಛಿತನಾಗಿ ಬಿದ್ದುಬಿಟ್ಟನು.

ನೀರನ್ನು ತರಲು ಹೋಗಿದ್ದ ಇಂದಿರೆಯು ಎಲೆಗಳಿಂದ ಪಾತ್ರವನ್ನು ಮಾಡಿ ಅದರಲ್ಲಿಯೇ ನೀರನ್ನು ತುಂಬಿಕೊಂಡು ಅವಸರದಿಂದ ಬರುತ್ತಾ ಅಲ್ಲೆಲ್ಲಾ ರಕ್ತವು ಸುರಿದಿದ್ದುದನ್ನೂ ಅಲ್ಲಿ ಸತ್ತುಬಿದ್ದಿದ್ದ ಭಿಲ್ಲನ ಮತ್ತೂ ಮುಹಮ್ಮದೀಯನ ದೇಹಗಳನ್ನೂ ಕಂಡು ತನ್ನ ಬಾಲಕನ ಗತಿಯೇನಾಗಿರುವುದೋ ಎಂಬ ಭಯದಿಂದ ಜಾಗ್ರತೆಯಾಗಿ ಬಂದು ನೋಡಿ ಆಡುತಲಿದ್ದ ಅಜಿತಕುಮಾರನನ್ನು ಕಂಡು ಸಂತೋಷಪಟ್ಟು, ರಾಜಪುತ್ರನ ಬಳಿಗೆ ಬಂದು ಆತನ ಮುಖದ ಮೇಲೆ ನೀರನ್ನು ತಳಿದು ಮೊದಲು ತುಟಿಗಳನ್ನು ನೆನಿಸಿ ಸ್ವಲ್ಪಸ್ವಲ್ಪವಾಗಿ ನೀರನ್ನು ಕುಡಿಸಿದಳು.

ಇಂದಿರೆಯ ಈ ಆದರೋಪಚಾರದಿಂದ ರಾಜಪುತ್ರನು ಚೇತರಿಸಿಕೊಂಡು ತನಗೆ ಚೈತನ್ಯವನ್ನುಂಟು ಮಾಡಿದವರಾರೆಂದು ಕಣ್ದೆರೆದು ಇಂದಿರೆಯನ್ನು ಎವೆಮುಚ್ಚದೆ ನೋಡಿ ಪ್ರೇಮಾತಿಶಯದಿಂದಲೂ ಆತುರದಿಂದಲೂ ಅವಳ ಕೊರಳ ಮೇಲೆ ತನ್ನ ಬಲಗೈಯಿರಿಸಿ,— "ಪ್ರಾಣೇಶ್ವರೀ! ಇಂದಿರಾ! ಇಂದಿರಾ? ಇನ್ನೂ ಗುರ್ತಿಸಲಿಲ್ಲವೆ? ನನ್ನನ್ನು ಮರೆತೇ ಬಿಟ್ಟೆಯಾ? ಎಂದು ಕೂಗುತ್ತ ಮತ್ತೆ ಮೂರ್ಛಿತನಾದನು.

ಇಂದಿರೆಯ ಅಂತಸ್ಥವಾಗಿದ್ದ ದುಃಖವು ಹೊರಹೊಮ್ಮಿತು; ಕಣ್ಗಳಲ್ಲಿ ಸಂತತ ಧಾರೆಯಾಗಿ ನೀರು ಸುರಿದುಹೋ

ಯಿತು. ಪತಿಯು ಶಿರವನ್ನು ತನ್ನ ತೊಡೆಯ ಮೇಲಿರಿಸಿ ಶೈತ್ಯೋಪಚಾರ ಮಾಡಿದಳು. ಬಹಳ ಹೊತ್ತಿನ ಮೇಲೆ ರೂಪಸಿಂಗನು ಎಚ್ಚತ್ತು,— "ಇಂದಿರಾ! ಈಗಲಾದರೂ ನಿನ್ನ ಪತಿಯು ವೀರಪುರುಷನೆಂದು ಸಂಭಾವಿಸುವೆಯಾ ? ಹಿಂದಿನ ತಪ್ಪನ್ನು ಮನ್ನಿಸುವೆಯಾ?" ಎಂದು ಪ್ರಾರ್ಥಿಸಿದನು.

ಇಂದಿರೆ:— "ನಾಥಾ ! ಅನೇಕ ನಿಷ್ಠುರೋಕ್ತಿಗಳಿಂದ ದೇಶತ್ಯಾಗಿಗಳನ್ನಾಗಿ ಮಾಡಿದ ಈ ದಾಸಿಯ ಅಪರಾಧವನ್ನು ತಾವು ಕ್ಷಮಿಸಬೇಕಲ್ಲದೆ, ತಾವು ಕ್ಷಮೆಯನ್ನು ಕೋರುವುದೇಕೆ?"

ರೂಪಸಿಂಗ:— ಪ್ರಾಣೇಶ್ವರಿ! ಇನ್ನು ಚಿಂತೆಯನ್ನು ಬಿಟ್ಟುಬಿಡು. ಅಚಲೇಶ್ವರನ ಅನುಗ್ರಹದಿಂದ ಇಷ್ಟುಮಟ್ಟಿಗಾಯಿತು. ನಿನ್ನನ್ನು ನೋಡುವ ಭಾಗ್ಯವಿಲ್ಲವೆಂದು ಹತಾಶನಾಗಿದ್ದ ನನಗೆ ಮತ್ತೆ ನಿನ್ನ ಸಂದರ್ಶನವಾಯಿತು. ಜಗದ್ವಿಖ್ಯಾತವಾದ ನಿನ್ನ ಕೀರ್ತಿಯನ್ನು ಕುರಿತು ನಾನು ಅತ್ಯಂತ ಹೆಮ್ಮೆಪಡುತ್ತಿರುವೆನು. ಇದಕ್ಕೂ ಹೆಚ್ಚಾಗಿ ನಾನೇನನ್ನು ಹೇಳಲಿ ?

ಇಂದಿರೆಗೆ ಪತಿಯ ಮಾತುಗಳಿಂದ ಆನಂದವೂ ಆತನ ಶರೀರದ ಘಾಯಗಳನ್ನು ನೋಡಿ ಬದುಕುವನೋ ಇಲ್ಲವೋ ಎಂಬ ಸಂಶಯವೂ ಏಕಕಾಲದಲ್ಲಿ ಉಂಟಾಗಲು ಮಾತಿಲ್ಲದೆ ನೋಡುತ್ತಿದ್ದಳು. ಪತ್ನಿಯ ಸಂದೇಹವನ್ನು ನೋಡಿ ರೂಪಸಿಂಗನು,— "ಇಂದಿರಾ! ಭಯಪಡಬೇಕಾಗಿಲ್ಲ. ಅಂದು ನೀನು ಕೋಟೆಯ ಬಾಗಿಲನ್ನು ಭದ್ರಪಡಿಸಿ ನನ್ನನ್ನು ಹಿಂದಕ್ಕೆ ಕಳುಹಿದುದುಮೊದಲು, ನಾನು ನನ್ನ ಶೌರ್ಯವನ್ನು ನಿನಗೆ ಪ್ರಕಟಿಸಿದಲ್ಲದೆ ನಿನ್ನ ಮುಖಾವಲೋಕನವನ್ನು ಮಾಡುವುದಿಲ್ಲವೆಂದು ನಿರ್ಧರಿಸಿ, ಗೋಲಕೊಂಡಕ್ಕೆ ಹೋಗಿ ಅಲ್ಲಿ ಸರದಾರನಾಗಿದ್ದೆನು. ಅಲ್ಲಿಯ ನವಾಬನು ನನ್ನನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದನು. ಔರಂಗಜೇಬನು ಸೇನೆಯನ್ನು ಸಿದ್ಧಪಡಿಸುತ್ತಿರುವನೆಂದು ಕೆಲವು ದಿನಗಳ ಕೆಳಗೆ ಒಬ್ಬ ಶ್ರೋತ್ರಿಯ ಬ್ರಾಹ್ಮಣನು ಒಂದು ಮಾದಣ್ಣ ಪಂತರಿಗೆ ತಿಳಿಸಲು ಮಂತ್ರಿ ಮಾದಣ್ಣಪಂತರು, ಸಮಾಚಾರವನ್ನು ತಿಳಿದು ಬರಬೇಕೆಂದು ನನ್ನನ್ನು ದಿಲ್ಲಿಗೆ ಕಳುಹಿದರು. ನಾನು ವೇಷಾಂತರದಿಂದ ದಿಲ್ಲಿಯಲ್ಲೆಲ್ಲಾ ಸಂಚರಿಸಿ, "ಔರಂಗಜೇಬನಿಂದ ನಮಗಾವ ಅಪಾಯವೂ ಇಲ್ಲವೆಂದೂ ನಾವು ಭಯಪಡಬೇಕಾಗಿಲ್ಲವೆಂದೂ" ಗೋಲಕೊಂಡಕ್ಕೆ ಬರೆದು ಕಳುಹಿ, ಫಕೀರನ ವೇಷವನ್ನು ಧರಿಸಿ ಜನಾನಾದಲ್ಲಿ ಸಂಚರಿಸುತ್ತಾ ಬರುತ್ತಿದ್ದಾಗ ನಿನ್ನನ್ನು ಕಂಡೆನು. ಆಬಳಿಕ ರೋಷನಾರೆಯ ಕ್ರೂರಕೃತ್ಯದಿಂದ ಯಮುನೆಯ ಪಾಲಾಗುತ್ತಿದ್ದ ನಿನ್ನನ್ನೂ ನಿನ್ನ ಅಣ್ಣನನ್ನೂ ನಾನೇ ನಯನಪಾಲನ ಸಹಾಯದಿಂದ ಕಾಪಾಡಿದೆನು. ಈ ಯುದ್ಧದಲ್ಲಿ ನನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಬೇಕೆಂದು ನನ್ನ ಪರಾಕ್ರಮವೆಲ್ಲವನ್ನೂ ತೋರಿಸಿದೆನು. ನನ್ನ ಶೌರ್ಯ-ಮನಸ್ಥೈರ್ಯ-ಸಾಹಸಗಳೆಲ್ಲವೂ ನಿನಗೆ ವಿದಿತವಾಗಿರುವುದರಿಂದ ಇನ್ನು ನಾನು ಬದುಕಿದರೂ ಸರಿಯೇ ಸತ್ತರೂ ಸರಿಯೇ" ಎಂದು ಹೇಳಿದನು.

ಇಷ್ಟರಲ್ಲಿ ವೈಕುಂಠಯೋಗಿಯೂ ಅದೇ ದಾರಿಯಲ್ಲಿಯೇ ಬರುತ್ತಾ ಇಂದಿರಾ ರೂಪಸಿಂಗರ ಸ್ಥಿತಿಯನ್ನು ನೋಡಿ, ಕೌತುಕದಿಂದ ಅಲ್ಲಿಯೇ ಬಂದು ನೋಡಿ ಆಬಳಿಕ ಸಂತೋಷದಿಂದ, "ಧನ್ಯ ! ರೂಪಸಿಂಗ ! ನೀನೇ ಧನ್ಯ ! ತಾಯಿ ! ಇಂದಿರಾ ! ನೀನು ಭಾಗ್ಯವತಿ ! ಭಯಪಡಬೇಡ. ರೂಪಸಿಂಗನು ಬದುಕುವನು." ಎಂದು ಹೇಳಿ ವನಸ್ಪತಿಗಳನ್ನು ತಂದು ಗಾಯಗಳಿಗೆಲ್ಲ ಲೇಪವನ್ನು ಹಾಕಿ ಕುಡಿವುದಕ್ಕೂ ಕೊಟ್ಟನು. ವನಸ್ಪತಿಗಳ ಶಕ್ತಿಯಿಂದಲೂ ಯೋಗಿಯ ತಪಃಪ್ರಭಾವದಿಂದಲೂ ರೂಪಸಿಂಗನಿಗೆ ಬಾಧೆ ಕಡಿಮೆಯಾಗುತ್ತ ಬಂದವು.

ಇಷ್ಟರಲ್ಲಿ ಶಿವಸಿಂಗನೂ ದುರ್ಗಾದಾಸನೂ ಅಲ್ಲಿಗೆ ಬಂದರು. ದುರ್ಗಾದಾಸನು, ತನ್ನ ತಂಗಿ, ತನ್ನ ತೊಡೆಯಮೇಲೆ ಪುರುಷನೋರ್ವನ ತಲೆಯನ್ನಿಟ್ಟುಕೊಂಡು ಕುಳಿತಿರುವುದನ್ನು ನೋಡಿ ಮಂತ್ರಮುಗ್ಧನಂತೆ ನಿಂತನು. ದುರ್ಗಾದಾಸನ ಸ್ಥಿತಿಯನ್ನು ನೋಡಿ ಸ್ಮಿತವದನನಾಗಿ ಯೋಗಿಯು "ಅಯ್ಯಾ! ದುರ್ಗಾದಾಸ! ನೀನು ಅನ್ಯಥಾ ಭಾವಿಸಬೇಡ. ನಿನ್ನ ತಂಗಿಯ ಪತಿಯಾದ ರೂಪಸಿಂಗನೇ ಈತನು. ಫಕೀರನ ವೇಷದಿಂದ ನಿಮ್ಮಿಬ್ಬರ ಪ್ರಾಣವನ್ನು ಉಳಿಸಿದವನೂ, ಯುದ್ಧದಲ್ಲಿ ನಿಮಗೆ ಜಯವಾಗುವಂತೆ ಶತ್ರುಗಳೊಡನೆ ಹೋರಾಡಿದವನೂ ಈತನೇ!" ಎಂದು ಶ್ಲಾಘಿಸಿದನು.

ದುರ್ಗಾದಾಸನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಅನೇಕಬಗೆಯಿಂದ ರೂಪಸಿಂಗನನ್ನು ಅಭಿನಂದಿಸಿದನು. ಶಿವಸಿಂಗನು ನಯನಪಾಲನೊಡನೆ ಈತನು ಸಂಭಾಷಿಸಿದುದು ಮೊದಲು ಯುದ್ಧದಲ್ಲಿ ಶ್ರಾಂತನಾಗಿ ಕೆಳಗೆ ಬೀಳುವವರೆಗೂ ಶತ್ರುಗಳಿಗೆ ತೋರಿಸಿದ ಪರಾಕ್ರಮಾದಿಗಳನ್ನು ವರ್ಣಿಸಿದನು. ಈ ಮಾತುಗಳಿಂದ ಇಂದಿರೆಗಾದ ಆನಂದಾತಿಶಯವನ್ನು ವರ್ಣಿಸಲಳವಲ್ಲದಂತಾಯಿತು. ರೂಪಸಿಂಗನು ತನ್ನ ಬಾಲರಾಜನಾದ ಅಜಿತಕುಮಾರನನ್ನು ಅಪ್ಪಿ ಮುದ್ದಾಡುತ್ತ ತನ್ನ ಆಯಾಸವನ್ನೆಲ್ಲ ಮರೆತನು.

ಪರಿಸಮಾಪ್ತಿ.

ಇಲ್ಲಿಗೆ ಕಥೆ ಸಮಾಪ್ತವಾಯಿತು. ವಿಜಯಸಿಂಹನು ಶಿವಸಿಂಗನು ಮಾಡಿದ ಸಾಹಸಕೃತ್ಯಗಳಿಗೆ ಸಂತುಷ್ಟನಾಗಿ ಮಗನನ್ನು ಆದರದಿಂದ ರೂಪನಗರಕ್ಕೆ ವೈಭವಪೂರ್ವಕವಾಗಿ ಕರೆಯಿಸಿಕೊಂಡನು. ಸುಮುಹೂರ್ತದಲ್ಲಿ ವಿಮಲೆಯನ್ನು ರಾಜಸಿಂಹನಿಗೂ, ಪದ್ಮೆಯನ್ನು ಶಿವಸಿಂಗನಿಗೂ ಕೊಟ್ಟು ಅತ್ಯಂತ ವೈಭವದಿಂದ ವಿವಾಹವನ್ನು ಮಾಡಿದನು. ಚಂದ್ರಾವತಿಯು ವೈಕುಂಠಯೋಗಿಯ ಅನುಗ್ರಹವನ್ನು ಹೊಂದಿ ಅಜಿತಕುಮಾರನನ್ನು ಕರೆದುಕೊಂಡು ಬಂದು ಜೋಧಪುರದ ಪಟ್ಟವನ್ನು ಕಟ್ಟಿದಳು. ರೂಪಸಿಂಗ-ಇಂದಿರೆಯರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪಟ್ಟಣದಲ್ಲಿ ಮಹೋತ್ಸಾಹದಿಂದ ಮೆರವಣಿಗೆಯನ್ನು ಮಾಡಿಸಿ ಬಹುವಾಗಿ ಸನ್ಮಾನಿಸಿದಳು.

ವಾಚಕರು ತಿಳಿಯಬೇಕಾದ ವಿಷಯವು ಮತ್ತೊಂದಿರುವುದು. ಏನೆಂದರೆ, ಮೊದಲನೆಯ ಪ್ರಕರಣದಲ್ಲಿ ಕಾಬೂಲ್ ದೇಶಕ್ಕೆ ಉತ್ತರಪತ್ರವನ್ನು ತೆಗೆದುಕೊಂಡು ಹೋಗುತ್ತಿದ್ದ ಮಹಮ್ಮದೀಯನೂ ಯಶವಂತಸಿಂಹನ ಮರಣಸಮಯದಲ್ಲಿ ದುರ್ಗಾದಾಸನಿಗೆ ಒಂದು ಕಾಗದವನ್ನು ತಂದುಕೊಟ್ಟ ಮಹಮ್ಮದೀಯನೂ ಔರಂಗಜೇಬನು ಸೈನ್ಯವನ್ನು ಸಿದ್ಧಪಡಿಸುತ್ತಿರುವನೆಂದು ಗೋಲಕೊಂಡದಲ್ಲಿ ಮಾದಣ್ಣಪಂತರಿಗೆ ವರ್ತಮಾನವನ್ನು ಕೊಟ್ಟುಹೋದ ಶ್ರೋತ್ರಿಯ ಬ್ರಾಹ್ಮಣನೂ ಯಾರಾಗಿರಬಹುದೆಂದು ಶಂಕಿಸಬಹುದು. ಆ ಮೂರೂ ಕಾರ್ಯಗಳನ್ನು ನಿರ್ವಹಿಸಿದವನೂ ಒಬ್ಬನೇ! ಅತನೇ ನಮ್ಮ ವೈಕುಂಠಯೋಗಿ. ಅತನು ಆಗಾಗ ನಾಲ್ಕೈದು ದಿನಗಳವರೆಗೆ ಯಾರಿಗೂ ಕಾಣದಂತೆ ಇರುತ್ತಿದ್ದುದರಿಂದ ಅಲ್ಲಿದ್ದ ಭಿಲ್ಲರು ಸ್ವಾಮಿಗಳು ಅಂತರ್ಧಾನರಾಗಿರುವರೆಂದು ಭಾವಿಸುತ್ತಿದ್ದರು. ವಾಸ್ತವಿಕಾಂಶವು ಹಾಗಲ್ಲ. ರಾಜಪುತ್ರರಿಗೆ ಸಂಭವಿಸಬಹುದಾಗಿರುವ ಕಷ್ಟಗಳನ್ನು ಮುಂಚಿತವಾಗಿ ತಿಳಿದುಕೊಳ್ಳುವುದಕ್ಕಾಗಿ ವೇಷಾಂತರಗಳಿಂದ ದೇಶದಲ್ಲೆಲ್ಲಾ ಸಂಚರಿಸುತ್ತ ರಹಸ್ಯ ವೃತ್ತಾಂತವನ್ನು ಸಂಗ್ರಹಿಸಿ ಉತ್ತರಪ್ರತ್ಯುತ್ತರ ಪತ್ರಗಳನ್ನು ತಂದಿತ್ತು ಉಪಾಯಗಳನ್ನು ಸೂಚಿಸುತ್ತ ರಾಜಪುತ್ರರಿಗೆ ಅತ್ಯಂತ ಸಹಾಯಕನಾಗಿದ್ದನು. ಈ ಯೋಗಿವರ್ಯನು ಈಗಲೂ ಆಬೂಪರ್ವತದ ಮೇಲೆ ಗುಹೆಯಲ್ಲಿ ತಪಸ್ಸು ಮಾಡುತ್ತಿರುವನೆಂದೂ ರಾಜಪುತ್ರ ರಾಜರಿಗೆ ಕಷ್ಟಗಳು ಸಂಭವಿಸಿದಾಗ ದಿವ್ಯದೃಷ್ಟಿಯಿಂದ ತಿಳಿದು ರೂಪಾಂತರದಿಂದ ಬಂದು ಅವರಿಗೆ ಸಹಾಯ ಮಾಡುವನೆಂದೂ ಆ ಪರ್ವತದಲ್ಲಿರುವ ಭಿಲ್ಲರು ಈಗಲೂ ನಂಬಿರುವರು.

ಸಮಾಪ್ತ.

ಇದನ್ನು—ಬಿಂದೂ ನಾರಾಯಣ ಮುತಾಲಿಕ-ದೇಸಾಯಿ, ಇವರು ಹುಬ್ಬಳ್ಳಿಯ "ಶ್ರೀಕೃಷ್ಣ ಮುದ್ರಾಲಯ"ದಲ್ಲಿ ಮುದ್ರಿಸಿದರು, ಹಾಗೂ ಶ್ರೀಮತೀ ತಿರುಮಲಾಂಬಾ ಇವರು, ನಂಜನಗೂಡ, ಕರ್ನಾಟಕ ನಂದಿನಿ ಆಫೀಸಿನಲ್ಲಿ ಪ್ರಸಿದ್ಧಪಡಿಸಿದರು.

کتب خانہ

جامعہ عثمانیہ

۱- اراکین مجلس اعلیٰ، مجلس [illegible]، مجلس انتظامی، [illegible] صاحب [illegible]، صدور [illegible] اور [illegible] کو ایک وقت میں پانچ کتابیں ایک ماہ کے لیے مل سکتی ہیں۔

۲- اساتذہ جامعہ [illegible] کو ایک وقت میں تین کتابیں ایک ماہ کے لیے [illegible] اور [illegible] مل سکتی ہیں۔

۳- [illegible] کو ایک وقت میں دو کتابیں ایک ماہ کے لیے [illegible] مل سکتی ہیں۔

۴- مدت مقررہ پر کتابیں واپس نہ کرنے پر ایک آنہ یومیہ فی کتاب [illegible] لیا جائے گا۔

۵- نیز [illegible] کتاب کے گم یا خراب ہونے پر [illegible] قیمت [illegible] ہوگی۔

۶- کتابیں [illegible] کسی دوسرے کو نہ دی جائیں۔

۷- کتابوں پر کسی قسم کا نشان نہ لگایا جائے۔

۸- قیمتی نسخے اور حوالے کی کتابیں جاری نہیں کی جاتیں۔